ಶ್ರೀಮದ್‌ಭಗವತ್ಕುಂದಕುಂದಾಚಾರ್ಯದೇವವಿರಚಿತ

# ಅಷ್ಟಪಾಹುಡ

ಮೂಲ ಪ್ರಾಕೃತ ಗಾಥೆಗಳು, ಸಂಸ್ಕೃತಛಾಯೆ, ಕನ್ನಡ ಪದ್ಯಾನುವಾದ


ಭಾಷಾವಚನಿಕಾಕಾರರು :

ಪಂಡಿತಪ್ರವರ ಶ್ರೀ ಜಯಚಂದ ಛಾಬಡಾ, ಜಯಪುರ

ಕನ್ನಡ ಅನುವಾದಕರು :

ಶ್ರೀ ಎಂ. ಬಿ. ಪಾಟೀಲ, ಸೇಡಬಾಳ

'ಶುದ್ಧಾತ್ಮಸದನ', ಶಹಾಪುರ - ಬೆಳಗಾವಿ.



ಪ್ರಕಾಶಕರು :

ಶ್ರೀ ದಿಗಂಬರ ಜೈನ ಸ್ವಾಧ್ಯಾಯ ಮಂಡಲ ಟ್ರಸ್ಟ,

ಬೆಂಗಳೂರು.

ಮೊದಲನೆಯ ಆವೃತ್ತಿ : ಒಂದು ಸಾವಿರ ಪ್ರತಿಗಳು, (೧೦೦೦) ಏಪ್ರಿಲ್ ೧೯೯೦
ಎರಡನೆಯ ಆವೃತ್ತಿ : ಐನೂರು ಪ್ರತಿಗಳು, (೫೦೦) ನವ್ಹಂಬರ ೩೦, ೨೦೧೦
ಬೆಳಗಾವಿ ಶಿಬಿರದ ಶುಭಸಂದರ್ಭದಲ್ಲಿ.


ಎಲ್ಲ ಹಕ್ಕುಗಳು ಸುರಕ್ಷಿತ

ಬೆಲೆ : ಐವತ್ತು ರೂಪಾಯಿ ೫೦/-
(ಮೂಲ ಬೆಲೆ : ೧೫೦ ರೂ.)

ದೊರಕುವ ಸ್ಥಳ :
ದಿಗಂಬರ ಜೈನ ಸ್ವಾಧ್ಯಾಯ ಮಂಡಲ ಟ್ರಸ್ಟ,
೧೪೧, ರಂಗಸ್ವಾಮಿ ಗುಡಿ ಬೀದಿ,
ಬೆಂಗಳೂರು - ೫೬೦ ೦೫೩.

''ಶ್ರುತ ಭಂಡಾರ'',
೩೬, ಶುದ್ಧಾತ್ಮ ಸದನ, ಹುಲಬತ್ತಿ ಕಾಲೋನಿ,
ಶಹಾಪುರ-ಬೆಳಗಾವಿ.
ಫೋನ : ೨೪೬೬೯೧

ಮುದ್ರಕರು :
ಇಮೇಜ ಪ್ರಿಂಟ್ಸ,
೨೩೯೩, ಕಚೇರಿ ಗಲ್ಲಿ, ಶಹಾಪುರ, ಬೆಳಗಾವಿ.
ಫೋನ : ೨೪೨೬೧೩೭



# ಸಮರ್ಪಣೆ

ಯಾರು ಈ ಇಪ್ಪತ್ತನೆಯ ಶತಮಾನದಲ್ಲಿ ಆಧ್ಯಾತ್ಮಲೋಕದ ಆಚಾರ್ಯಪುರುಷರಾಗಿದ್ದರು,
ಯಾರು ಸಮಸ್ತ ಪ್ರಾಣಿಕೋಟಿಗೆ ನಿರಂತರವಾಗಿ ಕಲ್ಯಾಣದ ಮಾರ್ಗವನ್ನೇ
ಬೋಧಿಸುತ್ತಿದ್ದರು,ಯಾರು ಮೋಕ್ಷಮಾರ್ಗದ ಸ್ವರೂಪವನ್ನು
ಪುನರುಜ್ಜೀವನಗೊಳಿಸಿದರು ಮತ್ತು ಸ್ವಯಂ ಆ
ಮಾರ್ಗದಲ್ಲಿ ಆರೂಢರಾದರು
ಅಂಥ ಆ ಸ್ವರ್ಗೀಯ
ಪೂಜ್ಯ ಶ್ರೀ
ಸದ್ಗುರುದೇವರಿಗೆ
ಈ ಅನುವಾದ ಕೃತಿಯನ್ನು ಭಕ್ತಿಗೌರವಗಳೊಂದಿಗೆ
ಸಮರ್ಪಿಸುತ್ತೇನೆ.

– ಅನುವಾದಕ

# ಶಾಸ್ತ್ರಾಭ್ಯಾಸದ ಮಹಿಮೆ

ಶಾಸ್ತ್ರಾಭ್ಯಾಸದ ಮಹತ್ವವನ್ನು ನೋಡಿರಿ ! ಶಾಸ್ತ್ರಗಳ ಅಧ್ಯಯನ ಮಾಡುವುದರಿಂದ ಜೀವನಿಗೆ ಆತ್ಮಾನುಭವದ ದಶೆಯು ಪ್ರಾಪ್ತವಾಗುತ್ತದೆ, ಮೋಕ್ಷರೂಪದ ಫಲವು ದೊರಕುತ್ತದೆ. ಅಷ್ಟೇ ಏಕೆ ಶಾಸ್ತ್ರಾಭ್ಯಾಸ ಮಾಡುವುದರಿಂದ ಕೂಡಲೆ ನಮ್ಮ ವರ್ತಮಾನ ಜೀವನದಲ್ಲಿ ಅದೆಷ್ಟು ಲಾಭವಾಗುತ್ತದೆ ಎಂಬುದನ್ನು ಒಂದಿಷ್ಟು ನೋಡೋಣ ಬನ್ನಿ !

೧) ಕ್ರೋಧ ಮೊದಲಾದ ಕಷಾಯಗಳು ಮಂದವಾಗಿ ಬಿಡುತ್ತವೆ.

೨) ಪಂಚೇಂದ್ರಿಯ ವಿಷಯಗಳಲ್ಲಿ ಪ್ರವೃತ್ತಿಯಾಗುವುದಿಲ್ಲ ಎಂದರೆ ಭೋಗಗಳ ಆಸೆಯು ಕ್ರಮದಿಂದ ಕಡಿಮೆಯಾಗುತ್ತ ಹೋಗುತ್ತದೆ.

೩) ಅತ್ಯಂತ ಚಂಚಲವಾದ ಮನಸ್ಸು ಕೂಡ ಏಕಾಗ್ರವಾಗುತ್ತದೆ.

೪) ಹಿಂಸೆ ಮೊದಲಾದ ಪಾಪಗಳು ತಾವಾಗಿಯೇ ಕಡಿಮೆಯಾಗಿ ಬಿಡುತ್ತವೆ.

೫) ಜ್ಞಾನವು ಅಲ್ಪವಾಗಿದ್ದರೂ ಕೂಡ ಮೂರು ಲೋಕ ಮತ್ತು ಮೂರು ಕಾಲಾತೀತವಾದ ಜಡ-ಚೇತನ ವಸ್ತುಗಳೆಲ್ಲದರ ಯಥಾರ್ಥ ಜ್ಞಾನವಾಗಿ ಹೋಗುತ್ತದೆ.

೬) ಹೇಯ ಎಂದರೆ ತ್ಯಾಗಮಾಡಲು ಯೋಗ್ಯ ಮತ್ತು ಉಪಾದೇಯ ಎಂದರೆ ಗ್ರಹಣಮಾಡಲು ಯೋಗ್ಯವಾದವುಗಳ ಸಂಬಂಧದಲ್ಲಿ ನಿಶ್ಚಿತ ನಿರ್ಣಯವಾಗುತ್ತದೆ.

೭) ಪ್ರಾಪ್ತವಾದ ಜ್ಞಾನವು ಅಲ್ಪವಾಗಿದ್ದರೂ ಕೂಡ ಅದು ಆತ್ಮಸನ್ಮುಖವಾಗುತ್ತದೆ.

೮) ಶಾಸ್ತ್ರಗಳ ಅಧ್ಯಯನದಿಂದ ಜ್ಞಾನವು ಕ್ರಮ-ಕ್ರಮದಿಂದ ಹೆಚ್ಚುತ್ತ ಹೋಗುವುದರಿಂದ ಮನಸ್ಸಿಗೆ ಒಂದು ರೀತಿಯ ಆನಂದವಾಗುತ್ತದೆ, ತೃಪ್ತಿಯೆನಿಸುತ್ತದೆ.

೯) ಜಗತ್ತಿನ ತುಂಬೆಲ್ಲ ಯಶಸ್ಸು ಮತ್ತು ಕೀರ್ತಿಯು ಹರಡುತ್ತದೆ.

೧೦) ಸಾತಿಶಯ ಪುಣ್ಯದ ಬಂಧವಾಗುತ್ತದೆ.

ಈ ಮನುಷ್ಯಭವದಲ್ಲಿ ಸುರಕ್ಷಿತವಾದ ಆವಾಸ, ಉಚ್ಚಕುಲ, ಪೂರ್ಣ ಆಯುಷ್ಯ, ಇಂದ್ರಿಯಗಳ ಸಾಮರ್ಥ್ಯ, ನಿರೋಗವಾದ ಅವಸ್ಥೆ, ಒಳ್ಳೆಯ ಸಂಗತಿ, ಧರ್ಮರೂಪವಾದ ಅಭಿಪ್ರಾಯ, ಬುದ್ಧಿಯ ಪ್ರಾಬಲ್ಯತೆ ಇತ್ಯಾದಿ ವಿಷಯಗಳ ಪ್ರಾಪ್ತಿಯಾಗುವುದು ಅತ್ಯಂತ ದುರ್ಲಭವಿದೆ, ಇವೆಲ್ಲವನ್ನು ನಾವು ಪ್ರತ್ಯಕ್ಷವಾಗಿ ಅನುಭವಿಸುತ್ತಿದ್ದೇವೆ. ಈ ಎಲ್ಲ ಸಾಮಗ್ರಿಗಳು ದೊರಕಿದ ನಂತರವೇ ಶಾಸ್ತ್ರಾಭ್ಯಾಸವು ಆಗುವ ಸಾಧ್ಯತೆಯಿದೆ. ಆದರೆ ಇವೆಲ್ಲ ಅನುಕೂಲತೆಗಳು ಪೂರ್ವ ಪುಣ್ಯೋದಯದಿಂದ ತಮಗೆ ಪ್ರಾಪ್ತವಾಗಿವೆ, ಆದುದರಿಂದ ನಾವು ಕೇವಲ ತಮ್ಮಗಳ ಹಿತದ ಸಲುವಾಗಿಯೇ ಶಾಸ್ತ್ರಾಭ್ಯಾಸ ಮಾಡುವ ಈ ಪ್ರೇರಣೆಯನ್ನು ಕೊಡುತ್ತಿದ್ದೇವೆ. ತಾವು ನಮ್ಮ ಅಭಿಪ್ರಾಯ ತಿಳಿದುಕೊಳ್ಳಬೇಕು.

ಪಂ. ಟೋಡರಮಲ್ಲ
ಸಮ್ಯಗ್ಜ್ಞಾನ ಚಂದ್ರಿಕೆಯ ಪೀಠಿಕೆಯಿಂದ

# ಪ್ರಕಾಶಕೀಯ

ಶ್ರಮಣಕುಲತಿಲಕರೂ ಕಲಿಕಾಲಸರ್ವಜ್ಞರೂ ಆದ ಭ. ಕುಂದಕುಂದಾಚಾರ್ಯದೇವರ ಈ ದ್ವಿಸಹಸ್ರಾಬ್ದಿ ಸಮಾರಂಭ ವರ್ಷವು ಮುಗಿಯುವ ಮೊದಲೇ ಈ ಕೊನೆಯದಾದ 'ಅಷ್ಟಪಾಹುಡ' ಗ್ರಂಥವನ್ನು ಹೊರತರಲು ನಮಗೆ ತುಂಬ ಸಂತೋಷವಾಗುತ್ತಿದೆ. ಏಕೆಂದರೆ ಈ ಮೊದಲು ನಾವು ಅವರ ನಾಲ್ಕು ಗ್ರಂಥಗಳನ್ನು ಹೊರತಂದಿದ್ದೇವೆ, ಆದರಿಂದ ಇಡೀ ಕನ್ನಡಿಗರ ಪ್ರೀತಿ-ವಿಶ್ವಾಸಗಳಿಗೆ ಪಾತ್ರರಾಗಿದ್ದೇವೆ. ಜನರ ಸಹಕಾರ-ಸಹಾಯಗಳಿಲ್ಲದಿದ್ದರೆ ಎಂಥ ಸಂಸ್ಥೆಯೂ ಯಾವ ಕಾರ್ಯವನ್ನು ಪೂರ್ಣಮಾಡುವ ಸಾಧ್ಯತೆಯಿಲ್ಲ, ಆದಕ್ಕಾಗಿ ಇಡೀ ನಾಡಿನ ಜನರು ನಮ್ಮ ಕಾರ್ಯವನ್ನು ಮೆಚ್ಚಿಕೊಂಡು ನಮಗೆ ಸರ್ವವಿಧದ ಸಹಕಾರ-ಸಹಾಯ ನೀಡಿದುದಕ್ಕಾಗಿ ನಾವು ಇಡೀ ಕನ್ನಡ ನಾಡಿನ ನಮ್ಮ ಆತ್ಮೀಯ ಸೋದರ-ಸೋದರಿಯರನ್ನು ಹಾರ್ದಿಕವಾಗಿ ಅಭಿನಂದಿಸುತ್ತೇವೆ, ಭವಿಷ್ಯದಲ್ಲೂ ಅವರುಗಳಿಂದ ಇದೇ ರೀತಿಯ ಸಹಕಾರ ಬಯಸುತ್ತೇವೆ.

ನವೀನವಾಗಿ ಜನ್ಮ ತಾಳಿದ ಈ ನಮ್ಮ ಸಂಸ್ಥೆಯು ಇಷ್ಟು ಅಲ್ಪಾವಧಿಯಲ್ಲಿ ಇಂಥ ಮಹತ್ತರವಾದ ಕಾರ್ಯವನ್ನು ಪೂರ್ತಿ ಮಾಡಬಹುದೆಂದು ನಮಗೆ ಎನಿಸಿರಲಿಲ್ಲ. ನಾವು ಭ. ಕುಂದಕುಂದರ ಪಂಚಪರಮಾಗಮಗಳನ್ನೇ ಅಲ್ಲದೆ ಶ್ರೀ ಪೂಜ್ಯಪಾದಾಚಾರ್ಯದೇವರ ಸಮಾಧಿತಂತ್ರ, ಶ್ರೀ ಮಾನತುಂಗಾಚಾರ್ಯದೇವರ ಭಕ್ತಾಮರ ಮೊದಲಾಗಿ ಅನೇಕ ಗ್ರಂಥಗಳನ್ನು ಹೊರತಂದಿದ್ದೇವೆ ; ಅವೆಲ್ಲವೂ ಜನರ ಕೈ ಸೇರಿವೆ. ಈ ಎಲ್ಲ ಕಾರ್ಯದಲ್ಲಿ ಪ್ರಮುಖವಾಗಿ ವಿದ್ವಾಂಸರ ಪಾತ್ರವು ಮಹತ್ತರವಾಗಿದೆ ಅವರು ಅತ್ಯಂತ ಭಕ್ತಿ-ಶ್ರದ್ಧೆಯಿಂದ ಲೇಖನ ಕಾರ್ಯವನ್ನು ಮಾಡಿಕೊಟ್ಟುದುದಕ್ಕಾಗಿ ಪ್ರಾರಂಭದಲ್ಲಿ ಅವರಿಗೆ ಅನಂತ ಕೃತಜ್ಞತೆಗಳನ್ನು ಸಲ್ಲಿಸುತ್ತೇವೆ.

ಈ ಅಷ್ಟಪಾಹುಡದ ಅನುವಾದ ಕಾರ್ಯವನ್ನು ಶ್ರೀ ಎಂ. ಬಿ. ಪಾಟೀಲರೇ ಮಾಡಿದ್ದು ಅನುವಾದ ಪರಿಶೀಲನವನ್ನು ಶ್ರೀ ಬ್ರ. ಯಶಪಾಲ ಜೈನರು ಮಾಡಿದ್ದಾರೆ. ಇವರೀರ್ವರ ಉಪಕಾರವನ್ನು ಸಂಸ್ಥೆಯು ಸದಾ ಸ್ಮರಿಸುತ್ತದೆ ಮತ್ತು ಭವಿಷ್ಯದಲ್ಲೂ ಇವರ ಹಾರ್ದಿಕ ಸಹಕಾರವನ್ನು ಬಯಸುತ್ತದೆ.

ಅನಂತರ ಧರ್ಮಶ್ರದ್ಧೆಯುಳ್ಳ ಧನಿಕರು ನಮ್ಮ ಬೇಡಿಕೆಯಿಲ್ಲದೆ ನಮ್ಮ ಕಾರ್ಯವನ್ನು ಮೆಚ್ಚಿಕೊಂಡು ತಾವೇ ಮುಂದಾಗಿ ಬಂದು ಈ ಗ್ರಂಥ ಪ್ರಕಟನೆಯ ಕಾರ್ಯಕ್ಕಾಗಿ ಅಪಾರ ಧನಸಹಾಯ ಮಾಡಿದ್ದಾರೆ, ಅವರುಗಳ ಉದಾರತೆಯನ್ನು ಅತ್ಯಂತ ಮೆಚ್ಚಿಕೆಯೊಡನೆ ಸ್ಮರಿಸುತ್ತೇವೆ. ಧನಿಕರು ಧನಸಹಾಯ ಮಾಡಿರದಿದ್ದರೆ ಇಷ್ಟೊಂದು ಬೆಲೆಯುಳ್ಳ ಗ್ರಂಥಗಳನ್ನು ತೀರ ಕಡಿಮೆ ಬೆಲೆಯಲ್ಲಿ ಕೊಡಲು ನಮಗೆ ಹೇಗೆ ಸಾಧ್ಯವಾಗುತ್ತಿತ್ತು.

ಇನ್ನು ಲೇಖನ ಮತ್ತು ಹಣದ ಕಾರ್ಯವಾದ ನಂತರ ಮೂರನೆಯ ಸ್ಥಾನದಲ್ಲಿ ಮುದ್ರಣ ಮಂದಿರದವರು ಬರುತ್ತಾರೆ ಆ ಪಾತ್ರವನ್ನು ಅತ್ಯಂತ ಶ್ರದ್ಧೆಯಿಂದ ಸಮಯಕ್ಕೆ ಸರಿಯಾಗಿ ಸಮರ್ಪಕವಾಗಿ ನಿರ್ವಹಿಸಿ ಕೊಟ್ಟ ಶ್ರೀ ರವಿ ಟ್ರೇಡರ್ಸದ ಒಡೆಯರುಗಳಿಗೂ ಮತ್ತು ಅಲ್ಲಿನ ಕುಶಲ ಕರ್ಮಚಾರಿಗಳಿಗೂ ನಾವು ಎಷ್ಟೇ ಧನ್ಯವಾದಗಳನ್ನರ್ಪಿಸಿದರೂ ಕೂಡ ಕಡಿಮೆಯೇ ಇದೆ ಸಾಮಾನ್ಯವಾಗಿ ನಮ್ಮ ಎಲ್ಲ ಕೆಲಸಗಳನ್ನು ಮುಖ್ಯವಾಗಿ ಇವರೇ ಮಾಡುತ್ತ ಬಂದಿದ್ದಾರೆ. ಈ 'ಅಷ್ಟಪಾಹುಡ'ವನ್ನು ಕೂಡ ಇಷ್ಟೊಂದು ಸುಂದರವಾಗಿ ಕೇವಲ ೩೦ ದಿವಸಗಳಲ್ಲಿ ಮುಗಿಸಿಕೊಟ್ಟಿದ್ದು ಇವರ ಅದ್ಭುತ ಶಕ್ತಿಯನ್ನು, ಇವರ ಕಾರ್ಯನಿಷ್ಠೆಯನ್ನು ಪ್ರದರ್ಶಿಸುತ್ತದೆ.

ಕೊನೆಯದಾಗಿ ನಮ್ಮ ಸಂಸ್ಥೆಯು ಕೈಕೊಂಡ ಎಲ್ಲ ಕಾರ್ಯಗಳಲ್ಲಿ ಪ್ರತ್ಯಕ್ಷ-ಪರೋಕ್ಷವಾಗಿ ಎಲ್ಲ ರೀತಿಯಿಂದ ನೆರವಾಗುತ್ತ ಬಂದವರು ಅನೇಕ ಮಹಾನುಭಾವರಿದ್ದಾರೆ. ಆ ಎಲ್ಲ ಮಹನೀಯರಿಗೆ ಅನಂತ ಧನ್ಯವಾದಗಳನ್ನರ್ಪಿಸುತ್ತೇವೆ, ಮತ್ತು ಕುಂದಕುಂದ ಸಾಹಿತ್ಯದ ಪೂರ್ಣಾಹುತಿ ಸ್ವರೂಪದಲ್ಲಿ ಈ 'ಅಷ್ಟಪಾಹುಡ' ಗ್ರಂಥವನ್ನು ಭ. ಕುಂದಕುಂದರ ಪರಂಪರೆಯವರಾದ ತಮ್ಮ ಕರಕಮಲಗಳಿಗರ್ಪಿಸುತ್ತೇವೆ. ಮತ್ತು ಭವಿಷ್ಯದಲ್ಲೂ ಇದೇ ರೀತಿಯ ಸಹಾಯ-ಸಹಕಾರಗಳನ್ನು ತಮ್ಮಿಂದ ಬಯಸುತ್ತೇವೆ.

ಬೆಂಗಳೂರು.

ಶ್ರೀ ಸಿ. ಬಿ. ಭಂಡಾರಿ
ಅಧ್ಯಕ್ಷರು, ದಿಗಂಬರ ಜೈನ ಸ್ವಾಧ್ಯಾಯ ಮಂಡಲ ಟ್ರಸ್ಟ, ಬೆಂಗಳೂರು.

# ಎರಡನೆಯ ಆವೃತ್ತಿಯ ಪ್ರಕಾಶಕೀಯ

ಪಂಚಮ ಕಾಲದ ಪ್ರಥಮ ಮಂಗಲಸ್ವರೂಪರೂ, ಅದ್ಭುತ ತಪಸ್ಸಾಮರ್ಥ್ಯದ ಪ್ರತಿರೂಪರೂ, ಪಾತ್ರ ಜೀವರುಗಳಿಗೆಪ್ರಾತಃಸ್ಮರಣೀಯರೂ ಆದ ಭ. ಕುಂದಕುಂದಾಚಾರ್ಯದೇವ ವಿರಚಿತ 'ಅಷ್ಟಪಾಹುಡ' ಗ್ರಂಥವು ನಮ್ಮ ಸಂಸ್ಥೆಯ ಮುಖಾಂತರ ಕನ್ನಡಿಗರ ಭಾಗ್ಯದ ಬಲದಿಂದ ೧೯೯೦ ರಲ್ಲಿ ಪ್ರಥಮ ಬಾರಿ ಮುದ್ರಣವಾಗಿತ್ತು. ಆಗಿನ ಪ್ರತಿಗಳೆಲ್ಲ ಮುಗಿದುಹೋಗಿ ಹತ್ತಾರು ವರುಷಗಳೇ ಕಳೆದು ಹೋಗಿದ್ದರೂ ಪುನರ್ಮುದ್ರಣದ ಕಾರ್ಯವು ಕೇವಲ ವಿಚಾರರೂಪವಾಗಿ ಉಳಿದಿತ್ತು. ಇಂದು ನಮ್ಮೆಲ್ಲರ ಭಾಗ್ಯದಿಂದ ಅದು ಪುನಃ ಪ್ರಗಟವಾಗುತ್ತಿರುವುದು ಅತ್ಯಂತ ಸಂತೋಷದ ಹಾಗೂ ಹೆಮ್ಮೆಯ ಮಾತಾಗಿದೆ.

ಇಂಥ ನಿಕೃಷ್ಟ ಕಾಲದಲ್ಲಿ ಕೂಡ ಜೀವರುಗಳ ಭಾಗ್ಯವು ಕಾರ್ಯ ಮಾಡುತ್ತಿದೆ ಮತ್ತು ಜಿನವಾಣಿಯ ಪ್ರಕಾಶನವು ನಮ್ಮ ಸಂಸ್ಥೆಯಿಂದ ಅವ್ಯಾಹತವಾಗಿ ನಡೆಯುತ್ತಿದೆ. ಇದು ವಸ್ತುವಿನ ಸ್ವತಂತ್ರತೆಯನ್ನೂ, ಪಂಚಮ ಕಾಲದ ಕೊನೆಯವರೆಗೆ ವೀತರಾಗ ಧರ್ಮವು ನಡೆದುಕೊಂಡು ಹೋಗುವುದೆಂಬ ಸರ್ವಜ್ಞರ ವಾಣಿಯನ್ನೂ ಮತ್ತು ಆತ್ಮಾರ್ಥಿ ಜೀವರುಗಳ ಉಪಾದಾನದ ಯೋಗ್ಯತೆಯನ್ನೂ ದಿಗ್ದರ್ಶಿಸುವಂಥದ್ದಿದೆ.

ಭ. ಕುಂದಕುಂದದೇವರ ಪಂಚ ಪರಮಾಗಮಗಳ ಕನ್ನಡ ಅನುವಾದವನ್ನು ಶ್ರೀ ಎಂ. ಬಿ. ಪಾಟೀಲರು ಮಾಡಿದ್ದು ಪ್ರಾಕೃತ ಗಾಥೆಗಳನ್ನು ಕೂಡ ಕನ್ನಡ ಪದ್ಯಾನುವಾದ ಮಾಡಿಕೊಟ್ಟಿರುವ ಆ ಚೇತನಾತ್ಮನ ಪವಿತ್ರ ಪ್ರತಿಭೆಗೆ ಸಮಸ್ತ ಕನ್ನಡಿಗರು ಹಾಗೂ ನಮ್ಮ ಸಂಸ್ಥೆಯು ಚಿರಋಣಿಯಾಗಿದೆ.

ಮರ್ಯಾದಿತ ಕ್ಷೇತ್ರಕ್ಕೇ ಸೀಮಿತವಾದ ಕನ್ನಡ ಭಾಷೆಯಲ್ಲಿ 'ಸಮಯಸಾರ'ದಂಥ ಬೃಹತ್ ಕೃತಿಯು ಮೂರು ಸಲ ಪ್ರಕಾಶಿತವಾಯಿತು, 'ಪಂಚಾಸ್ತಿಕಾಯ'ದಂಥ ಜ್ಞಾನವೈಭವವು ಮೂರು ಸಲ ಪ್ರಕಾಶಿತವಾಗಿದೆ, ಸಾಕ್ಷಾತ್ ಸೀಮಂಧರ ಪ್ರಭುಗಳ ದಿವ್ಯಧ್ವನಿಯ ಸಾರವಾದ 'ಪ್ರವಚನಸಾರ'ವು ಎರಡು ಬಾರಿ ಪ್ರಕಾಶಿತವಾಗಿದೆ ಭಾವ ಪ್ರಧಾನವಾದ ನಿಯಮಸಾರವು ಕೂಡ ಎರಡು ಬಾರಿ ಪ್ರಕಾಶಿತವಾಗಿದೆ ಮತ್ತು ಇಂದು ಆಚರಣೆಯ ಶಿಥಿಲತೆಯು ತಾಂಡವವಾಡುತ್ತಿದ್ದರೂ 'ಅಷ್ಟಪಾಹುಡ'ವು ಎರಡನೆಯ ಬಾರಿ ಪ್ರಕಾಶಿತವಾಗುತ್ತಿರುವುದನ್ನು ಕಂಡು ಜಿನವಾಣಿಯ ಮಹತೋ ಮಹಿಮೆಯನ್ನು ಹೇಳಲು ನಮ್ಮಲ್ಲಿ ಶಬ್ದಗಳೇ ಇಲ್ಲದಾಗಿವೆ.

ಇನ್ನು ತಮ್ಮ ತಂದೆಯ ಹಾಗೆಯೇ ಜಿನವಾಣಿಯ ಕಾರ್ಯದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿರುವ ಧವಲಶ್ರೀಯವರು ಕರಡು ದೋಷ ತಿದ್ದುಪಡಿ ಮಾಡಿಕೊಡುತ್ತ ಸಂಸ್ಥೆಯ ಹೆಮ್ಮೆಗೆ ಪಾತ್ರರಾಗಿದ್ದಾರೆ. ಅವರು ಬೇಗನೆ ತಮ್ಮ ಆಂತರ್ಯದ ಆತ್ಮನನ್ನು ಸಂದರ್ಶಿಸಲೆಂದು ಬಯಸುತ್ತೇವೆ.

ಕೊನೆಯದಾಗಿ ದ್ರವ್ಯಶ್ರುತ ಮುದ್ರಣದ ಕಾರ್ಯದಲ್ಲಿ ಸದಾಭಕ್ತಿ-ಶ್ರದ್ಧೆಯಿಂದ ತಮ್ಮ ಪ್ರಗಟಜ್ಞಾನ ಮತ್ತು ಪ್ರಾಪ್ತ ಸಮಯದ ಸದುಪಯೋಗ ಮಾಡುತ್ತಿರುವ ಶ್ರೀ ಅಜಿತ ಪಾಟೀಲರು (ಇಮೇಜ ಪ್ರಿಂಟ್ಸ, ಬೆಳಗಾವಿ) ನಮ್ಮ ಸಂಸ್ಥೆಗೆ ಭಾಗ್ಯದ ಕೊಡುಗೆಯಾಗಿದ್ದಾರೆ. ಅವರಿಗೆ ನಾವು ಅನಂತ ಧನ್ಯವಾದಗಳನ್ನು ಅರ್ಪಿಸುತ್ತೇವೆ. ನಮ್ಮ ಸಂಸ್ಥೆಗೆ ಸದಾ ಇವರುಗಳ ಸಹಯೋಗವು ದೊರಕಲೆಂದು ಹಾರೈಸುತ್ತೇವೆ.

ಬೆಂಗಳೂರು.
**ಕಾರ್ತಿಕ ಅಷ್ಟಾಹ್ನಿಕ**

ಶ್ರೀ ಸಿ. ಬಿ. ಭಂಡಾರಿ
ಅಧ್ಯಕ್ಷರು,
ದಿಗಂಬರ ಜೈನ ಸ್ವಾಧ್ಯಾಯ ಮಂಡಲ ಟ್ರಸ್ಟ, ಬೆಂಗಳೂರು.

# ಭೂಮಿಕೆ

ಅನೇಕ ಆನಂದಗಳ ಆಲಯವೂ ಅತ್ಯಂತ ರಮಣೀಯವೂ ಆದ ಈ ಪವಿತ್ರ ಭಾರತ ಭೂಮಿಯಲ್ಲಿಸ್ವಯಂ ಅಹಿಂಸಾತ್ಮಕ ಹಾಗೂ ಸಮಭಾವದಿಂದ ರಾಗ-ದ್ವೇಷಗಳ ಪರಿಣತಿಯನ್ನು ಜಯಿಸಿ ಧರ್ಮಾಮೃತ ಪೋಷಕರಾದ ಅಗಣಿತ ಋಷಿ ಗಣನೀಯ ಭಗವಾನ ಕುಂದಕುಂದಾಚಾರ್ಯದೇವರ ಶಾಸನವು ಸಾಕ್ಷಾತ್ ತೀರ್ಥಂಕರರಾದ ಪೂಜ್ಯ ಶ್ರೀ ೧೦೦೮ ಭಗವಾನ ವರ್ಧಮಾನ ಪ್ರಭುಗಳ ಸಮಾನವಾಗಿಯೇ ಇಂದು ಈ ಕಲಿಕಾಲನಾಮದ ಪಂಚಮ ಕಾಲದಲ್ಲಿ ಮನ್ನಣೆಯರೂಪದಿಂದ ಪರಿಣಮಿಸುತ್ತಲಿದೆ ಮತ್ತು ಅವರ ವಾಣಿಯು ಪ್ರತ್ಯಕ್ಷ ತೀರ್ಥಂಕರರ ಸಮಾನವಾಗಿಯೇ ನಮ್ಮ ಸಲುವಾಗಿ ಹಿತಕರವಿದೆ. ಇವರ ವಿಷಯದಲ್ಲಿ ಹಾಗೂ ಇವರ ಸರ್ವಜ್ಞ ಪರಂಪರಾಗತಕೃತಿಗಳ ವಿಷಯದಲ್ಲಿ ಯಾರಿಗಾದರೂ ಆಕ್ಷೇಪ ವಿಕ್ಷೇಪಗಳಿದ್ದರೆ ಅದು ಕೇವಲ ಅಗಾಧಜಲ-ಆಭಾತ್ಮಕವಾದ ಮೃಗತೃಷ್ಣೆಯ ಸಮಾನವಾಗಿಯೇ ಅವರ ಸಲುವಾಗಿ ಆಗುವುದು. ಭ. ಕುಂದಕುಂದದೇವರಂಥ ಗ್ರಂಥಕಾರರಲ್ಲಿ ಹಾಗೂ ಅವರಗ್ರಂಥಗಳಲ್ಲಿ ಎಲ್ಲಿಯೂ ಯಾವುದೇ ಆಕ್ಷೇಪ ವಿಕ್ಷೇಪಗಳ ಅಂಶವೇ ಇಲ್ಲ ಎಲ್ಲೆಡೆಗೆ ಯಾವುದೇ ಪ್ರತಿಪಕ್ಷಿ ಹಾಗೂ ಪರೀಕ್ಷಕನಿಗೆ ಆದಿಯಿಂದ ಅಂತ್ಯದವರೆಗೆ ಎಲ್ಲಿಯೂ ಆಕ್ಷೇಪ ವಿಕ್ಷೇಪಕ್ಕೆ ಎಡೆಮಾಡಿ ಕೊಡುವಂಥ ಅಂಶವು ದೊರಕಲಾರದಂಥ ಗುಂಫನವಿದೆ. ಆದುದರಿಂದ ಇವರನ್ನು ಮುಖ್ಯ ಹಾಗೂ ಪೂಜ್ಯ ಪ್ರಮಾಣ ಕೋಟಿಯಲ್ಲಿ ಭಗವಾನ ಮಹಾವೀರ ಹಾಗೂ ಭ. ಗೌತಮಗಣಧರರ ತುಲ್ಯವಾಗಿ ಮನ್ನಿಸಲಾಗಿದೆ ಏಕೆಂದರೆ ಶಾಸ್ತ್ರ-ಸ್ವಾಧ್ಯಾಯದ ಪ್ರಾರಂಭದಲ್ಲಿ ಮಂಗಲಾಚರಣೆಯ ರೂಪದಲ್ಲಿ 'ಮಂಗಲಂ ಭಗವಾನ ವೀರೋ ಮಂಗಲಂ ಗೌತಮೋ ಗಣೀ, ಮಂಗಲಂ ಕುಂದಕುಂದಾದ್ಯೋ ಜೈನಧರ್ಮೋಽಸ್ತು ಮಂಗಲಂ'ವೆಂಬ ಪಾಠವನ್ನು ನಿತ್ಯ ಪಠಿಸುತ್ತೇವೆ.

ಇದರಿಂದ ಭ.ಕುಂದಕುಂದಾಚಾರ್ಯದೇವರ ಸ್ಥಾನವು ಈ ದಿಗಂಬರ ಜೈನ ಸಮಾಜದಲ್ಲಿ ಎಷ್ಟು ಎತ್ತರವಾಗಿದೆಯೆಂಬುದರ ಅರಿವಾಗುತ್ತದೆ. ಇವರನ್ನು ಮೂಲ ಸಂಘದ ಅತ್ಯಂತ ಪ್ರಭಾವಿಕ ಆಚಾರ್ಯರೆಂದು ಮನ್ನಿಸಲಾಗಿದೆ. ಆದುದರಿಂದ ಇಂದು ಕೂಡ ನಮ್ಮ ಪ್ರಮುಖವರ್ಗವು ಮೂಲಸಂಘದ ಜತೆ ಕುಂದಕುಂದಾಮ್ನಾಯದಲ್ಲಿ ತಮ್ಮನ್ನು ಪ್ರಕಟಪಡಿಸಿ ಧನ್ಯರೆಂದು ಮನ್ನಿಸುತ್ತಾರೆ. ನಿಜವಾಗಿ ನೋಡಹೋದರೆ ಆ ಕುಂದಕುಂದಾಮ್ನಾಯವೇ ಮೂಲಸಂಘವಿದೆ, ಆದಾಗ್ಯೂ ಮೂಲಸಂಘದ ಸತ್ಯತೆಯು ಎಲ್ಲಿದೆಯೆಂಬುದನ್ನು ಪ್ರಕಟ ಪಡಿಸುವ ಸಲುವಾಗಿ ಕುಂದಕುಂದಾಮ್ನಾಯವನ್ನು ಮುಖ್ಯವೆಂದು ಮನ್ನಿಸಿದೆ ಮತ್ತು ಇದೇ ಉದ್ದೇಶದಿಂದ ಮೂಲಸಂಘದ ಜತೆ ಆ ಕುಂದಕುಂದಾಮ್ನಾಯವನ್ನು ಬರೆಯುವ ಹೇಳುವ ಶೈಲಿಯು ಯೋಗ್ಯವೇ ಇದೆ ಏಕೆಂದರೆ ಮೂಲಸಂಘವನ್ನು ಮುಖ್ಯವಾಗಿ ಕುಂದಕುಂದಾಮ್ನಾಯದಲ್ಲಿಯೇ ಮನ್ನಿಸಲಾಗುತ್ತದೆ ಮತ್ತು ಇದರ ಪ್ರಸಿದ್ಧಿಯು ದಿಗಂಬರ ಪ್ರಮುಖ ಸಮಾಜದಲ್ಲಿ ಎಲ್ಲೆಡೆಗೆ ಇದೆ. ಆದುದರಿಂದ ವಿವಾದ ಮತ್ತು ಸಂದೇಹಕ್ಕೆ ಯಾರಿಗೂ ಇಲ್ಲಿ ಆಸ್ಪದವಿಲ್ಲ.

ಶ್ರೀ ಶ್ರುತಸಾಗರಸೂರಿಯು ಇವರ ಷಟ್‌ಪಾಹುಡ ಗ್ರಂಥದ ಸಂಸ್ಕೃತ ಟೀಕೆಯ ಪ್ರತಿಯೊಂದು ಪಾಹುಡದ ಕೊನೆಯಲ್ಲಿ 'ಶ್ರೀ ಪದ್ಮನಂದಿಕುಂದಕುಂದಾಚಾರ್ಯವಕ್ರಗ್ರೀವಾಚಾರ್ಯೇಲಾಚಾರ್ಯಗೃದ್ಧಪೃಚ್ಛಾಚಾರ್ಯ-

ನಾಮಪಂಚಕವಿರಾಜಿತೇನ'ವೆಂದು ಐದು [೧]ಹೆಸರುಗಳನ್ನು ಬರೆದಿದ್ದಾರೆ. ಇದರಿಂದ ತತ್ತ್ವಾರ್ಥಸೂತ್ರದ ಕರ್ತೃ ಶ್ರೀ ಉಮಾಸ್ವಾಮಿ ಮತ್ತು ಇವರು ಒಬ್ಬರೇ ಆಗಿರಬೇಕೆಂದು ತಿಳಿದು ಬರುತ್ತದೆ. ಏಕೆಂದರೆ ತತ್ತ್ವಾರ್ಥಸೂತ್ರ–ಮೋಕ್ಷಶಾಸ್ತ್ರದ ದಶಾಧ್ಯಾಯದ ಕೊನೆಯಲ್ಲಿ ಕೂಡ ತತ್ತ್ವಾರ್ಥಸೂತ್ರಕರ್ತಾರಂ ಗೃದ್ಧಪಿಚ್ಛೋಪಲಕ್ಷಿತಂ । ವಂದೇ ಗಣೀಂದ್ರ–ಸಂಜ್ಞಾತಮುಮಾಸ್ವಾಮಿಮುನೀಶ್ವರಂ' ಈ ಶ್ಲೋಕದಲ್ಲಿಕೂಡಗೃದ್ಧಪಿಚ್ಛವೆಂದು ಉಮಾಸ್ವಾಮಿಯ ವಿಶೇಷಣ ಕೊಡಲಾಗಿದೆ ಇದರಿಂದ ಹಾಗೂ ವಿದೇಹಕ್ಷೇತ್ರದಲ್ಲಿ ಭಗವಾನ ೧೦೦೮ ಸೀಮಂಧರಸ್ವಾಮಿಯಿಂದ ಸಂಬೋಧಿತವಾಗುವ ಕಥೆಯಲ್ಲಿ ಕೂಡ ಗೃದ್ಧಪಿಚ್ಛರ ವಿಷಯ ಬರುತ್ತದೆ ಮತ್ತು ಕೆಲವು ವಿದ್ವಾಂಸರಿಂದ ಉಮಾಸ್ವಾಮಿಯ ಕಥೆ ಕೂಡ ಗೃದ್ಧಪಿಚ್ಛರ ವಿಷಯದಲ್ಲಿ ಕುಂದಕುಂದಾಚಾರ್ಯರದೇ ಕೇಳಿ ಬರುತ್ತದೆ. ಇನ್ನು ಕುಂದಕುಂದಾಚಾರ್ಯರು ಸೀಮಂಧರ ಸ್ವಾಮಿಗಳಿಂದ ಸಂಬೋಧಿತವಾಗಿರುವ ವಿಷಯದಲ್ಲಿ ಕೂಡ ಶ್ರೀ ಶ್ರುತಸಾಗರಸೂರಿಯ 'ಸೀಮಂಧರಸ್ವಾಮಿಜ್ಞಾನಸಂಬೋಧಿತಭವ್ಯಜನೇನ' ವೆಂದು ಬರೆದಿದ್ದಾರೆ. ಇದರಿಂದ ನಾವು ಇಬ್ಬರೂ ವ್ಯಕ್ತಿಗಳು ಒಬ್ಬರೇ ಆಗಿರಬೇಕೆಂದು ಸಂದೇಹಗೊಳ್ಳುತ್ತೇವೆ, ಆದರೆ ಯಾವುದೇ ಪುಷ್ಟ ಪ್ರಮಾಣ ದೊರಕದವರೆಗೆ ಸಂದೇಹಾವಸ್ಥೆಯಲ್ಲಿ ಇರುವುದಕ್ಕೆ ಪ್ರತಿಯಾಗಿ ಮತ್ತೇನು ಮಾಡಬಲ್ಲೆವು. ಒಂದು ವೇಳೆ ಎಲ್ಲಿಯಾದರೂ ಕುಂದಕುಂದರ ಹೆಸರುಗಳಲ್ಲಿ ಉಮಾಸ್ವಾಮಿನಾಮವೂ ಇರುತ್ತಿದ್ದರೆ ಮತ್ತೆ ಸಂದೇಹಕ್ಕೆ ಸ್ಥಾನವೇ ಇರುತ್ತಿರಲಿಲ್ಲ, ಆದಾಗ್ಯೂ ಅವರ ಒಂದಿಲ್ಲೊಂದು ಗುರು ಶಿಷ್ಯತ್ವದ ಸಂಬಂಧವು ಅವಶ್ಯವಾಗಿ ಇರಬೇಕು.

ಗೃದ್ಧಪಿಚ್ಛರು ಕುಂದಕುಂದರಿರಲಿ ಅಥವಾ ಉಮಾಸ್ವಾಮಿಗಳಿರಲಿ ಈರ್ವರ ಯಶೋಗಾನವು ಈ ದಿಗಂಬರ ಜೈನಸಮಾಜದಲ್ಲಿ ಪೂರ್ಣರೀತಿಯಿಂದ ಅತ್ಯಂತ ಭಕ್ತಿ ಹಾಗೂ ಶ್ರದ್ಧೆಯಿಂದ ಬೇರೆ ಬೇರೆ ನಾಮಗಳಿಂದ ಹಾಡಲಾಗುತ್ತಿದೆ ಮತ್ತು ಗೃದ್ಧಪೃಚ್ಛ ನಾಮದಿಂದ ಕೂಡ ಕೆಲವು ಗ್ರಂಥಕರ್ತೃಗಳು ತಮ್ಮ ಆಂತರಿಕ ಭಕ್ತಿಯನ್ನು ಪ್ರದರ್ಶಿಸಿದ್ದಾರೆ. ಶ್ರೀ ವಾದಿರಾಜಸೂರಿಗಳು ತಮ್ಮ ಪಾರ್ಶ್ವಚರಿತ್ರ ಗ್ರಂಥದಲ್ಲಿ ಎಲ್ಲ ಆಚಾರ್ಯರುಗಳಿಗಿಂತ ಮೊದಲು ಗೃದ್ಧಪೃಚ್ಛಸ್ವಾಮಿಯ ಗುಣಾನುವಾದವನ್ನು ಅಪೂರ್ವ ಶಬ್ದಗಳಲ್ಲಿ ಮಾಡಿ ಅಪೂರ್ವ ನಮಸ್ಕಾರ ಮಾಡಿದ್ದಾರೆ, –

ಅತುಚ್ಛಗುಣಸಂಪಾತಂ ಗೃದ್ಧಪಿಚ್ಛಂನತೋಽಸ್ಮಿ ತಂ ।
ಪಕ್ಷೀಕುರ್ವಂತಿ ಯಂ ಭವ್ಯಾ ನಿರ್ವಾಣಾಯೋತ್ಪತಿಷ್ಣವಃ ॥೧॥

ಯಾರು ಮುಖ್ಯ ಮುಖ್ಯ ಗುಣಗಳ ಆಶ್ರಯದಾತರಿದ್ದಾರೆ ಮತ್ತು ಮೋಕ್ಷಕ್ಕೆ ಹೋಗಲಿಚ್ಛಿಸುವವರು ಹಾರುವಂಥ ಪಕ್ಷಿಗಳ ರೆಕ್ಕೆಯ ಹಾಗೆ ಯಾರ ಆಶ್ರಯ ಪಡೆಯುತ್ತಾರೆ ಆ ಗೃದ್ಧಪೃಚ್ಛರಿಗೆ ನಾನು ನಮಸ್ಕಾರ ಮಾಡುತ್ತೇನೆ.

---

೧ ದಿಗಂಬರ ಜೈನ ನಾಮದ ಪತ್ರಿಕೆ ವರ್ಷ ೧೪, ವೀ. ಸಂ.೨೪೪೭, ವಿ.ಸಂ. ೧೯೭೭, ಇಸ್ವಿ ೧೯೨೧ ಪಂ. ನಂದನಲಾಲ ಈಡರ (ಚಾವಲೀ ಆಗರಾ) ದಿಂದ ಕಳಿಸಿದ 'ಆಚಾರ್ಯರ ಪಟ್ಟಾವಲಿ ಮತ್ತು ಇತಿಹಾಸ' ನಾಮದ ಲೇಖದ ಟಿಪ್ಪಣಿಯಲ್ಲಿ ನಂ. ಗ ದ ಈಡರ ಭಂಡಾರದ ಪಟ್ಟಾವಲಿಯಲ್ಲಿ ಕೂಡ ಕುಂದಕುಂದರ ಐದು ಹೆಸರುಗಳ ಶ್ಲೋಕವು ಹೀಗಿದೆ–

ಪಟ್ಟಾವಲಿ ಗ
ಆಚಾರ್ಯಕುಂದಕುಂದಾಖ್ಯೋ ವಕ್ರಗ್ರೀವೋ ಮಹಾಮುನಿಃ
ಏಲಾಚಾರ್ಯೋ ಗೃದ್ಧಪೃಚ್ಛಃ ಪದ್ಮನಂದೀತಿ ತನ್ನುತಿಃ ॥

ಭ. ಕುಂದಕುಂದೇವರ ವಿಷಯದಲ್ಲಿ ಭಾಷಾಟೀಕಾಕಾರರಾದ ಪಂ. ಜಯಚಂದ ಛಾಬಡಾ ಹಾಗೂ ಪಂ. ವೃಂದಾವನದಾಸ[೧] ಮೊದಲಾದ ಅನೇಕ ವಿದ್ವಾಂಸರು ಕೂಡ ಅತ್ಯಂತ ಅಭ್ಯರ್ಥನೀಯ ವಾಕ್ಯಗಳಿಂದ ಸ್ತುತಿಗಾನ ಮಾಡಿದ್ದಾರೆ ಅದು ಇದುವರೆಗೆ ಅದೇ ರೂಪದಲ್ಲಿ ಪ್ರವಾಹಿತವಾಗಿ ನಡೆದುಬರುತ್ತಿದೆ. ಅದು ಭ. ಕುಂದಕುಂದದೇವರ ಅಲೌಕಿಕ ಪಾಂಡಿತ್ಯ ಹಾಗೂ ಅವರ ಪವಿತ್ರ ಆತ್ಮಪರಿಣತಿಯದೇ ಪ್ರಭಾವವಿದೆ. ಭ. ಕುಂದಕುಂದಾಚಾರ್ಯದೇವರು ಅವತರಿಸಿ ಈ ಭಾರತಭೂಮಿಯನ್ನು ಯಾವ ಸಮಯದಲ್ಲಿ ಭೂಷಿತ ಹಾಗೂ ಪವಿತ್ರಗೊಳಿಸಿರುವ ವಿಷಯದ ನಿರ್ಣಯವನ್ನು ಇದುವರೆಗೆ ಯಾವ ವಿದ್ವಾಂಸರು ನಿಶ್ಚಿತರೂಪದಿಂದ ಮಾಡಲಿಲ್ಲ, ಏಕೆಂದರೆ ಕೆಲವು ವಿದ್ವಾಂಸರು ಇವರನ್ನು ಕೇವಲ ಅನುಮಾನದಿಂದ ವಿಕ್ರಮದ ಐದನೆಯ ಮತ್ತೆ ಕೆಲವು ವಿದ್ವಾಂಸರು ಮೂರನೆಯ ಶತಾಬ್ದಿಯಲ್ಲಿರಬೇಕೆಂದು ಹೇಳಿದ್ದಾರೆ ಇನ್ನು ಬಹಳಷ್ಟು ವಿದ್ವಾಂಸರು ಇವರನ್ನು ಪ್ರಥಮ ಶತಾಬ್ದಿಯವರೆಂದು ನಿಶ್ಚಯ ಮಾಡಿದ್ದಾರೆ ಮತ್ತು ಇದೇ ಅಭಿಪ್ರಾಯದ ಮೇಲೆ ಪ್ರಾಯಃ ಪ್ರಮುಖ ವಿದ್ವಾಂಸರ ಒಲವಿದೆ. ಇದೇ ನಿಶ್ಚಿತರೂಪದಲ್ಲಿ ಪರಿಣಮಿಸುವ ಸಂಭವವಿದೆ. ಆದರೆ ನನ್ನ ಹೃದಯವು ಇವರನ್ನು ವಿಕ್ರಮದ ಮೊದಲನೇ ಶತಾಬ್ದಿಯಿಂದ ಬಹಳಷ್ಟು ಮೊದಲಿನವರೆಂದು ಸ್ವೀಕಾರ ಮಾಡುತ್ತದೆ. ಏಕೆಂದರೆ ಭ. ಕುಂದಕುಂದಾಚಾರ್ಯದೇವರು ಎಷ್ಟು ಗ್ರಂಥಗಳನ್ನು ರಚಿಸಿದ್ದಾರೆ ಅವುಗಳಲ್ಲಿ ಯಾವುದರಲ್ಲಿಯೂ ದ್ವಾದಶಾನುಪ್ರೇಕ್ಷೆಯ ಕೊನೆಯಲ್ಲಿ ನಾಮಮಾತ್ರದ ಹೊರತಾಗಿ ತಮ್ಮ ಪರಿಚಯ ಕೊಟ್ಟಿಲ್ಲ, ಆದರೆ ಬೋಧಪಾಹುಡದ ಕೊನೆಯಲ್ಲಿ ಈ ಗಾಥೆ ಬರುತ್ತದೆ.

ಸದ್ದವಿಯಾರೋ ಭೂಓ ಭಾಸಾಸುತ್ತೇಸು ಜಂ ಜಿಣೇ ಕಹಿಯಂ ।
ಸೋ ತಹ ಕಹಿಯಂ ಣಾಯಂ ಸೀಸೇಣ ಯ ಭದ್ದಬಾಹುಸ್ಸ ॥೬೧॥

ನನಗೆ ಈ ಗಾಥೆಯ ಅರ್ಥವು ಗಾಥೆಯ ಶಬ್ದ ರಚನೆಯಿಂದ ಹೀಗೆ ಕೂಡ ಪ್ರತೀತವಾಗುತ್ತದೆ.

ಜಂ-ಯತ್ ಜಿಣೇ-ಜಿನೇನ, ಕಹಿಯಂ-ಕಥಿತಂ, ಸೋ-ತತ್, ಭಾಸಾಸುತ್ತೇಸು-ಭಾಷಾಸೂತ್ರೇಷು (ಭಾಷಾರೂಪಪರಿಣತ, ದ್ವಾದಶಾಂಗಶಾಸ್ತ್ರೇಷು), ಸದ್ದವಿಯಾರೋ ಭೂಓ-ಶಬ್ದ ವಿಕಾರೋ ಭೂತಃ (ಶಬ್ದ ವಿಕಾರರೂಪ ಪರಿಣತಃ) ಭದ್ದಬಾಹುಸ್ಸ-ಭದ್ರಬಾಹೋಃ ಸೀಸೇಣ ಯ-ಶಿಷ್ಯೇನಾಪಿ । ತಹ-ತಥಾ, ಣಾಯಂ-ಜ್ಞಾತಂ, ಕಹಿಯಂ-ಕಥಿತಂ ॥

ಆ ಜಿನೇಂದ್ರದೇವರು ಹೇಳಿರುವುದು ದ್ವಾದಶಾಂಗದಲ್ಲಿ ಶಬ್ದವಿಕಾರದಿಂದ ಪರಿಣತವಾಗಿದೆ ಮತ್ತು ಭದ್ರಬಾಹುವಿನ ಶಿಷ್ಯನು ಅದೇ ಪ್ರಕಾರ ತಿಳಿದಿದ್ದಾನೆ ಮತ್ತು ಹೇಳಿದ್ದಾನೆ.

ಈ ಗಾಥೆಯಲ್ಲಿ ಯಾವ ಭದ್ರಬಾಹುವಿನ ಕಥನ ಬಂದಿದೆ ಆ ಭದ್ರಬಾಹುಗಳು ಯಾರಿದ್ದಾರೆಂಬುದನ್ನು ನಿಶ್ಚಯ ಮಾಡುವ ಸಲುವಾಗಿ ಅವರ ಮುಂದಿನ ೬೨ನೆಯ ಗಾಥೆಯು ಹೀಗಿದೆ-

ಬಾರಸ ಅಂಗವಿಯಾಣಂ ಚಉದಸ ಪುವಂಗ ವಿಉಲ ವಿತ್ಥರಣಂ ।
ಸುಯಣಾಣಿ ಭದ್ದಬಾಹೂ ಗಮಯಗುರೂ ಭಯವಓ ಜಯಓ ॥೬೨॥

ಬೋಧಪಾಹುಡ-೬೨

---

೧ ಜಾಸಕೆ ಮುಖಾರವಿಂದತೇ ಪ್ರಕಾಶ ಭಾಸವೃಂದ ಸ್ಯಾದವಾದ ಜೈನವೈನ ಇಂದು ಕುಂದಕುಂದಸೆ ।
ತಾಸಕೆ ಅಭ್ಯಾಸತೇ ವಿಕಾಸ ಭೇದಜ್ಞಾನ ಹೋತ ಮೂಢ ಸೋ ಲಖೇ ನಹೀ ಕುಬುದ್ಧಿ ಕುಂದಕುಂದಸೆ ॥
ದೇತ ಹೈ ಅಶೀಸ ಶೀಸ ನಾಯ ಇಂದು ಚಂದ ಜಾಹಿ ಮೋಹ-ಮಾರ-ಖಂಡ ಮಾರತಂಡ ಕುಂದಕುಂದಸೆ ।
ವಿಶುದ್ಧಿ ಬುದ್ಧಿ ವೃದ್ಧಿ ದಾ ಪ್ರಸಿದ್ಧ ಋದ್ಧಿ ಸಿದ್ಧಿ ದಾ ಹುಏ ನ ಹೈ ನ ಹೋಹಿಂಗೆ ಮುನಿಂದ ಕುಂದಕುಂದಸೆ ॥

-ಕವಿವರ ವೃಂದಾವನದಾಸ

ದ್ವಾದಶಾಂಗದ ಜ್ಞಾನವುಳ್ಳವರು ಹಾಗೂ ಹದಿನಾಲ್ಕು ಪೂರ್ವಗಳನ್ನು ವಿಸ್ತಾರರೂಪದಲ್ಲಿ ಪ್ರಸಾರ ಮಾಡುವಂಥ ಗಮಕಗುರು ಶ್ರುತಜ್ಞಾನಿ ಭಗವಾನ ಭದ್ರಬಾಹುಗಳು ಜಯವಂತರಾಗಿರಲಿ !

ಇವೆರಡೂ ಗಾಥೆಗಳನ್ನು ಓದಿದನಂತರ ಈ ಬೋಧಪಾಹುಡದ ಗಾಥೆಗಳು ಶ್ರುತಕೇವಲಿ ಭದ್ರಬಾಹುವಿನ ಶಿಷ್ಯನ ಕೃತಿಯಿವೆಯೆಂಬುದು ಪಾಠಕರಿಗೆ ಸರಿಯಾಗಿ ತಿಳಿದುಬರುತ್ತದೆ. ಮತ್ತು ಈ ಅಷ್ಟಪಾಹುಡ ಗ್ರಂಥವನ್ನು ನಿರ್ವಿವಾದ ಅವಸ್ಥೆಯಲ್ಲಿ ಭ. ಕುಂದಕುಂದಾಚಾರ್ಯದೇವರು ರಚಿಸಿರುವುದರಿಂದ ಭ. ಕುಂದಕುಂದಾಚಾರ್ಯ ದೇವರು ಶ್ರುತಕೇವಲಿ ಭದ್ರಬಾಹುವಿನ ಶಿಷ್ಯರಿದ್ದರೆಂಬುದು ಸಿದ್ಧವಾಗುತ್ತದೆ. ಇಂಥ ಅವಸ್ಥೆಯಲ್ಲಿ ಭ. ಕುಂದಕುಂದಾ-ಚಾರ್ಯದೇವರ ಸಮಯವು ವಿಕ್ರಮ ಶತಾಬ್ದಿಯಿಂದ ಬಹಳಷ್ಟು ಮೊದಲಿನದಾಗುತ್ತದೆ.

ಆದರೆ ಈ ಗಾಥೆಯ ಅರ್ಥವನ್ನು ಶ್ರೀ ಶ್ರುತಸಾಗರ ಸೂರಿಗಳು ಬೇರೆ ಪ್ರಕಾರವಾಗಿ ಮಾಡಿದ್ದಾರೆ ಮತ್ತು ಅದರ ಆಧಾರದ ಮೇಲೆ ಜಯಪುರ ನಿವಾಸಿ ಪಂ. ಜಯಚಂದ ಛಾಬಡಾ ಕೂಡ ಮಾಡಿದ್ದಾರೆ ಇದರಿಂದ ಭ. ಕುಂದಕುಂದಾಚಾರ್ಯದೇವರ ಸಮಯವು ವಿಕ್ರಮ ಶತಾಬ್ದಿಯಿಂದ ಮೊದಲಿನದಿದೆಯೆಂದು ನಾವು ಪೂರ್ಣ ರೂಪದಲ್ಲಿ ನಿಶ್ಚಿತ ಮಾಡುವ ಸಾಧ್ಯತೆಯಿಲ್ಲ. ಏಕೆಂದರೆ ಶ್ರೀ ಶ್ರುತಸಾಗರ ಸೂರಿಗಳು ಮಾಡಿರುವ ಅರ್ಥವನ್ನು ಅವರು ಯಾವುದೇ ವಿಶೇಷ ಪಟ್ಟಾವಲಿ ಮೊದಲಾದವುಗಳ ಆಧಾರದಿಂದ ಮಾಡಿರಬೇಕು. ಮತ್ತೆ ಅವರೊಬ್ಬ ಪ್ರಾಮಾಣಿಕ ಹಾಗೂ ಪ್ರತಿಭಾಶಾಲಿ ವಿದ್ವಾಂಸರಿರುವ ಕಾರಣ ಅವರ ಅರ್ಥವನ್ನು ಅಮಾನ್ಯ ಮಾಡುವುದು ಈ ತುಚ್ಛ ಲೇಖಕನ ಶಕ್ತಿಯಿಂದ ಹೊರತಾಗಿದೆ. ಆದಾಗ್ಯೂ ನನಗೆ ಹೊಳೆದಂತೆ ಈ ಗಾಥೆಯ ಅರ್ಥವನ್ನು ಸ್ಪಷ್ಟ ರೂಪದಿಂದ ಮೇಲೆ ಕೊಡಲಾಗಿದೆ. ವಿದ್ವಾಂಸರಾದ ಪಾಠಕರು ಇದರ ಸರಿಯಾದ ವಿಚಾರ ಮಾಡಿ ಭ. ಕುಂದಕುಂದಾಚಾರ್ಯದೇವರ ಸಮಯ ನಿರ್ಣಯದ ಆಳವಾದ ಅನ್ವೇಷಣೆಗಳಿಂದ ಸಮಾಜದ ಈ ಒಂದು ಕೊರತೆಯನ್ನು ಪೂರ್ಣಮಾಡಬೇಕು.

ಭಗವತ್ಕುಂದಕುಂದಾಚಾರ್ಯದೇವರು ರಚಿಸಿರುವ ಗ್ರಂಥಗಳಲ್ಲಿ ಸಮಯಸಾರ, ನಿಯಮಸಾರ, ಪ್ರವಚನಸಾರ, ಪಂಚಾಸ್ತಿಕಾಯ, ಅಷ್ಟಪಾಹುಡ, ದ್ವಾದಶಾನುಪ್ರೇಕ್ಷೆ ಮತ್ತು ದಶಭಕ್ತಿ ಗ್ರಂಥಗಳು ಕಂಡುಬರುತ್ತಿದ್ದು ಇವೆಲ್ಲ ಗ್ರಂಥಗಳು ಮುದ್ರಣವಾಗಿ ಹೋಗಿವೆ. ಅಷ್ಟಪಾಹುಡದಲ್ಲಿ ಷಟ್‌ಪಾಹುಡದ ಮೇಲೆ ಶ್ರೀ ಶ್ರುತಸಾಗರ ಸೂರಿಗಳ ಸಂಸ್ಕೃತ ಟೀಕೆಯಿದೆ, ಅದು ಮಾಣಿಕಚಂದ ದಿಗಂಬರ ಜೈನ ಗ್ರಂಥಾಲಯದಲ್ಲಿ ಷಟ್ ಪ್ರಾಭೃತಾದಿ ಸಂಗ್ರಹದಲ್ಲಿ ಪ್ರಕಾಶಿತವಾಗಿದೆ. ಈ ಅಷ್ಟಪಾಹುಡ ಗ್ರಂಥದ ಮೇಲೆ ಪಂ. ಜಯಚಂದ ಛಾಬಡಾಕೃತ ಇನ್ನೊಂದು ದೇಶಭಾಷಾಮಯ ವಚನಿಕೆಯಿದ್ದು ಅದರಲ್ಲಿ ಅವರು ಷಟ್‌ಪಾಹುಡದವರೆಗೆ ಶ್ರೀ ಶ್ರುತಸಾಗರಸೂರಿಗಳ ಟೀಕೆಯ ಆಶ್ರಯ ಪಡೆದಿದ್ದಾರೆ ಮತ್ತು ಎರಡು ಪಾಹುಡಗಳ ಮೇಲೆ ಅವರು ಸ್ವಯಂ ಬರೆದಿದ್ದಾರೆ, ಅದರ ವರ್ಣನೆಯನ್ನು ಅವರು ತಮ್ಮ ಪ್ರಶಸ್ತಿಯಲ್ಲಿ ಹೇಳಿಕೊಂಡಿದ್ದಾರೆ. ಆ ಪ್ರಶಸ್ತಿಯನ್ನು ಈ ಗ್ರಂಥದ ಕೊನೆಯಲ್ಲಿ ಕೊಡಲಾಗಿದೆ, ಈ ವಿಷಯದಲ್ಲಿ ಪಾಠಕರು ಅದರಿಂದ ವಿಶೇಷ ಲಾಭ ಪಡೆಯಬೇಕು. ಪಂ.ಶ್ರೀ ಜಯಚಂದ ಛಾಬಡಾರವರ ವಿಷಯದಲ್ಲಿ ನಾವು ಈ ಸಂಸ್ಥೆಯಿಂದ ಪ್ರಕಾಶಿತವಾದ ಪ್ರಮೇಯರತ್ನಮಾಲೆ ಹಾಗೂ ಆಪ್ತಮೀಮಾಂಸೆಯ ಭೂಮಿಕೆಯಲ್ಲಿ ಈ ಮೊದಲೇ ಬರೆಯಲಾಗಿದೆ ಪಾಠಕರು ಅವರ ಸಂಬಂಧವಾಗಿ ವಿಶೇಷ ಪರಿಚಯವನ್ನು ಅಲ್ಲಿಂದ ಮಾಡಿಕೊಳ್ಳಬೇಕು. ಅವರು ೧೯ನೇ ಶತಮಾನದ ಓರ್ವ ಪ್ರತಿಭಾಶಾಲಿ ವಿದ್ವಾಂಸರಿದ್ದು ಇವರಿಗೆ ಪ್ರಸಿದ್ಧ ವಿದ್ವಾಂಸರಾದ ಪಂ. ಟೋಡರಮಲ್ಲರಿಗಾಗುವಂಥ ಆದರವು ದಿಗಂಬರ ಜೈನ ಸಮಾಜದಲ್ಲಿ ಇಂದೂ ಆಗುತ್ತಲಿದೆ. ಪಂ.ಟೋಡರಮಲ್ಲರು ಅಲ್ಪ ಸಮಯದಲ್ಲಿ ಪ್ರತಿಭಾಶಾಲಿ ಅಲೌಕಿಕ ಬುದ್ಧಿಯಿಂದ ಈ ದಿಗಂಬರ ಜೈನ ಸಮಾಜದ ಮೇಲೆ ಅವರು ಮಾಡಿರುವ ಉಪಕಾರದ ಫಲಸ್ವರೂಪವಾಗಿ ಅವರ ಯಶೋಗಾನವನ್ನು ಜೈನ ಸಮಾಜವು ಈಗಲೂ

ಹಾಡುತ್ತಲಿದೆ, ಅದೇ ಪ್ರಕಾರ ಪಂ. ಜಯಚಂದರದು ಕೂಡಸಮಾಜದ ಮೇಲೆ ಅಂಥದೇ ಉಪಕಾರವಿದೆ, ಇದರಿಂದ ಸಮಾಜದ ದೃಷ್ಟಿಯಲ್ಲಿ ಇವರು ಕೂಡಮಾನ್ಯರಿದ್ದಾರೆ. ಪಂ. ಜಯಚಂದರ ಪಾಂಡಿತ್ಯವು ಪ್ರತಿಯೊಂದು ವಿಷಯದಲ್ಲಿ ಅಪೂರ್ವವಿತ್ತೆಂಬುದರ ಅರಿವು ಅವರ ಗ್ರಂಥರೂಪ ಕೃತಿಯಿಂದ ಪಾಠಕರಿಗೆ ತಾನಾಗಿಯೇ ಆಗುವಂತಿದೆ. ಮತ್ತು ಅವರು ನಿರಪೇಕ್ಷ ಪರೋಪಕಾರಮಗ್ನರಾದ ವಿದ್ವಾಂಸರಾಗಿದ್ದರು ಆ ಸಮಯದಲ್ಲಿ ಇವರ ಸರಿಸಮಾನರಾದ ವಿದ್ವಾಂಸರು ಬೇರೆ ಯಾವುದೇ ಧರ್ಮದಲ್ಲಿರಲಿಲ್ಲ. ಇನ್ನು ಭಾಷಾ ಸರ್ವಾರ್ಥಸಿದ್ಧಿಯ ಪ್ರಶಸ್ತಿ ಓದುವುದರಿಂದ ಇವರ ಮಗನಾದ ಶ್ರೀ ನಂದಲಾಲರು ಕೂಡ ದೊಡ್ಡ ವಿದ್ವಾಂಸರಿದ್ದರೆಂಬುದು ತಿಳಿದು ಬರುತ್ತದೆ. ಅವರ ಪ್ರೇರಣೆಯಿಂದ ಹಾಗೂ ಭವ್ಯಜನರ ವಿಶೇಷ ಪ್ರೇರಣೆಯಿಂದ ಅವರು ಸರ್ವಾರ್ಥಸಿದ್ಧಿ ಮೊದಲಾದ ಗ್ರಂಥಗಳ ದೇಶಭಾಷಾಮಯ ವಚನಿಕೆ ಬರೆದಿದ್ದಾರೆ.ಅವರ ವಿಷಯದಲ್ಲಿ ವೃದ್ಧ ಪುರುಷರಿಂದ ಇಂದಿನವರೆಗೆ ಒಂದು ಪ್ರಸಿದ್ಧ ಘಟನೆಯು ಕೇಳಿಬರುತ್ತದೆ. ಒಂದುಸಲ ಜಯಪುರದ ವಿದ್ವಾಂಸರನ್ನು ಶಾಸ್ತ್ರಾರ್ಥದಲ್ಲಿ ಜಯಿಸುವ ಇಚ್ಛೆಯಿಂದಅನ್ಯಧರ್ಮದ ಒಬ್ಬ ದೊಡ್ಡ ವಿದ್ವಾಂಸನು ಜಯಪುರಕ್ಕೆ ಬಂದಿದ್ದನು. ಆಗ ಆ ವಿದ್ವಾಂಸನೊಡನೆ ಶಾಸ್ತ್ರಾರ್ಥ ಮಾಡುವ ಸಲುವಾಗಿಜಯಪುರದ ಯಾವ ವಿದ್ವಾಂಸನು ಅವನ ಸನ್ಮುಖ ಹೋಗಲಿಲ್ಲ. ಇಂಥ ಸ್ಥಿತಿಯಲ್ಲಿ ನಗರದ ವಿದ್ವಾಂಸರ ಹಾಗೂ ರಾಜ್ಯದ ಅಪಕೀರ್ತಿಯಾಗಬಾರದೆಂಬ ಉದ್ದೇಶದಿಂದ ನಗರದ ಕೀರ್ತಿವಾಂಛಕರು ವಿದ್ವಾನ ಪಂಚರು ಹಾಗೂ ರಾಜ್ಯಕರ್ಮಚಾರಿ ವರ್ಗದವರು ಪಂ. ಜಯಚಂದ ಛಾಬಡಾರವರ ಹತ್ತಿರ ಹೋಗಿ ಅತ್ಯಂತ ವಿನಯದಿಂದ ಇಂದು ನಮ್ಮ ನಗರಕ್ಕೆ ಬಂದಿರುವ ವಿದ್ವಾಂಸರನ್ನು ಶಾಸ್ತ್ರಾರ್ಥದಲ್ಲಿ ತಾವು ಮಾತ್ರಜಯಿಸುವ ಸಾಧ್ಯತೆಯಿದೆ, ಆದುದರಿಂದ ಇಡೀ ನಗರದ ಪ್ರತಿಷ್ಠೆಯು ತಮ್ಮ ಮೇಲೆಯೇ ನಿರ್ಭರಿಸಿದೆ ಅದಕ್ಕಾಗಿ ತಾವುಗಳು ಶಾಸ್ತ್ರಾರ್ಥಮಾಡುವ ಸಲುವಾಗಿ ದಯಮಾಡಿಸಬೇಕು ಇಲ್ಲದಿದ್ದರೆ ದೊಡ್ಡ ದೊಡ್ಡ ಪಂಡಿತರುಗಳ ಗಣಿಯೆನಿಸಿದಂಥ ಈ ವಿಶಾಲ ನಗರವನ್ನು ಓರ್ವ ವಿದೇಶಿ ವಿದ್ವಾಂಸನು ಜಯಿಸಿದನೆಂಬ ಕಲಂಕ ಬಂದುಬಿಡುವುದೆಂದು ನಿವೇದಿಸಿಕೊಂಡರು. ಆ ಮಾತುಗಳನ್ನು ಕೇಳಿ ಪಂ. ಜಯಚಂದ ಛಾಬಡಾರವರು ನಾನಂತೂ ಜಯಾಪಜಯದ ಅಪೇಕ್ಷೆಯಿಂದ ಎಲ್ಲಿಯೂ ಯಾರೊಡನೆಯೂ ಶಾಸ್ತ್ರಾರ್ಥ ಮಾಡುವುದಕ್ಕೆ ಹೋಗುವುದಿಲ್ಲ, ಆದಾಗ್ಯೂ ತಮ್ಮೆಲ್ಲರದು ಅದೇ ಆಗ್ರಹವಿದ್ದರೆ ಈ ನನ್ನ ಮಗನಾದ ನಂದಲಾಲರನ್ನು ಕರೆದುಕೊಂಡು ಹೋಗಬಹುದೆಂದು ಅಷ್ಟೇ ವಿನಯದಿಂದ ಉತ್ತರವಿತ್ತರು. ಅವರ ಮಾತಿಗೆ ಒಪ್ಪಿಕೊಂಡು ಅವರೆಲ್ಲರೂ ಪಂ. ನಂದಲಾಲರನ್ನು ಕರೆದುಕೊಂಡು ಹೋದರು. ಮತ್ತು ಪಂ. ನಂದಲಾಲರು ಶಾಸ್ತ್ರಾರ್ಥಮಾಡಿ ಆ ವಿದೇಶಿ ವಿದ್ವಾಂಸನನ್ನು ಪರಾಜಿತಗೊಳಿಸಿದರು. ಅದರ ಪ್ರತಿಫಲವಾಗಿ ರಾಜ್ಯ ಹಾಗೂ ನಗರ ಪಂಚಕಮೀಟಿಯ ವತಿಯಿಂದ ಪಂ. ನಂದಲಾಲರಿಗೆ ಕೆಲವು ಉಪಾಧಿಗಳು ದೊರಕಿದವು. ಈ ವಿಷಯವು ಪಂ. ಜಯಚಂದರಿಗೆ ತಿಳಿದಕೂಡಲೇ ಅವರು ಅವಶ್ಯ ಕರ್ತವ್ಯದಲ್ಲಿ ಉಪಕಾರ ಮನ್ನಿಸಿ ಅದರ ಪ್ರತಿಫಲದ ಸ್ವರೂಪವಾಗಿ ಸ್ವೀಕರಿಸುವುದೆಂದರೆ ಅವಶ್ಯಕರ್ತವ್ಯ ಹಾಗೂ ಉಪಕಾರವನ್ನು ಅವಮಾನಗೊಳಿಸಿದಂತಿದೆಯೆಂದು ತಿಳಿಸಿದರು. ಇದನ್ನು ಕೇಳಿ ಪಂ. ನಂದಲಾಲರು ಆ ಪದವಿಗಳನ್ನು ಮರಳಿ ಒಪ್ಪಿಸಿ ಬಂದರು.

ಈ ಕಥಾನಕದಿಂದ ಪಂ. ಜಯಚಂದ ಛಾಬಡಾ ಹಾಗೂ ಅವರ ಪುತ್ರ ನಂದಲಾಲರು ಎಂಥ ಘನ ವಿದ್ವಾಂಸರಿದ್ದರು ಮತ್ತು ಐಹಿಕ ಆಕಾಂಕ್ಷೆಯಿಂದ ಅದೆಷ್ಟು ನಿರಪೇಕ್ಷರಿದ್ದರೆಂಬುದು ಸ್ಪಷ್ಟವಾಗಿ ತಿಳಿದು ಬರುತ್ತದೆ. ಇವರ ತಂದೆಯ ಹೆಸರು ಮೋತೀರಾಮರಿದ್ದು ಖಂಡೇಲವಾಲ ಜಾತಿಯ ಶ್ರಾವಕರಿದ್ದರು ಹಾಗೂ ಛಾಬಡಾ ಗೋತ್ರದಲ್ಲಿ ಇವರ ಜನ್ಮವಾಗಿತ್ತು. ಇವರು ತಮ್ಮ ವಯಸ್ಸಿನ ಹನ್ನೊಂದನೆಯ ವರ್ಷದಲ್ಲಿಯೇ ಜೈನ ಧರ್ಮದ ಕಡೆಗೆ ವಿಶೇಷವಾಗಿ ಆಕರ್ಷಿತರಾದರು. ಇವರು ತೇರಹಪಂಥದ ಅನುಯಾಯಿಗಳಿದ್ದು ಪರಕೃತ ಉಪಕಾರವನ್ನು ವಿಶೇಷವಾಗಿ ಮನ್ನಿಸುತ್ತಿರುವುದರಿಂದ ಕೃತಜ್ಞತೆಯ ಭಾವವು ಪರಿಪೂರ್ಣವಾಗಿತ್ತು. ಏಕೆಂದರೆ ಪಂ. ವಂಶೀಧರ, ಪಂ. ಟೋಡರಮಲ್ಲ,

ಪಂ. ದೌಲತರಾಮ, ತ್ಯಾಗಿರಾಜಮಲ್ಲ, ವ್ರತಿ ಮಾಯಾರಾಮ ಮೊದಲಾದವರ ಕೃತಿ ಹಾಗೂ ಉಪಕಾರರೂಪವಾದ ವರ್ಣನೆಯನ್ನು ಅತ್ಯಂತ ಮನೋಜ್ಞ ಶಬ್ದಗಳಲ್ಲಿ ಮಾಡಿದ್ದಾರೆ. ಇವರು ಗೊಮ್ಮಟಸಾರ, ಲಬ್ಧಿಸಾರ, ಕ್ಷಪಣಾಸಾರ, ಸಮಯಸಾರ, ಅಧ್ಯಾತ್ಮಸಾರ, ಪ್ರವಚನಸಾರ, ಪಂಚಾಸ್ತಿಕಾಯ, ರಾಜವಾರ್ತಿಕ, ಶ್ಲೋಕವಾರ್ತಿಕ, ಅಷ್ಟಸಹಸ್ರಿ, ಪರೀಕ್ಷಾಮುಖ ಮೊದಲಾದ ಅನೇಕ ಪ್ರಮುಖ ಗ್ರಂಥಗಳ ಪಠನ ಹಾಗೂ ಮನನ ಮಾಡಿದ್ದರೆಂಬುದರ ಸ್ಪಷ್ಟತೆಯು ಭಾಷಾ ಸರ್ವಾರ್ಥಸಿದ್ಧಿ ಮೊದಲಾದವುಗಳ ಪ್ರಶಸ್ತಿಗಳನ್ನು ಓದುವುದರಿಂದ ಆಗಿ ಬಿಡುತ್ತದೆ.

ಇವರು ಅನುವಾದ ರೂಪವಾಗಿ ಯಾವ ಯಾವ ಗ್ರಂಥಗಳ ರಚನೆ ಮಾಡಿದ್ದಾರೆಂಬುದರ ಸ್ಪಷ್ಟತೆಯನ್ನು ನಾವು ಪ್ರಮೇಯ ರತ್ನಮಾಲೆಯ ಭೂಮಿಕೆಯಲ್ಲಿ ಮಾಡಿದ್ದೇವೆ. ಭಾಷಾ ಸರ್ವಾರ್ಥಸಿದ್ಧಿ ವಚನಿಕೆ ಮೊದಲಾದವುಗಳ ಸಮಾನವಾಗಿಯೇ ಇವರು ಅಷ್ಟಪಾಹುಡದಲ್ಲಿ ಕೂಡ ತುಂಬ ಭವ್ಯ ಪ್ರಯಾಸ ಮಾಡಿದ್ದಾರೆ. ಇವರು ಅತ್ಯಂತ ಕಠಿಣ ಗ್ರಂಥಗಳನ್ನು ತೀರ ಸುಲಭ ಹೃದಯಗ್ರಾಹಿ ಭಾಷೆಯಲ್ಲಿ ಅನುವಾದ ಮಾಡಿ ಸಮಾಜದ ಒಂದು ತೀರ ದೊಡ್ಡ ಕೊರತೆಯನ್ನು ಪೂರ್ಣಮಾಡಿರುವುದರಿಂದ ಸಮಾಜವು ಇವರ ವಿಷಯದಲ್ಲಿ ಚಿರಋಣಿಯಾಗಿರಬೇಕಾದುದು ಅತ್ಯಂತ ಯೋಗ್ಯ ಕರ್ತವ್ಯವಾಗಿದೆ.

ಈ ಪಾಹುಡ ಗ್ರಂಥವು ತನ್ನ ಹೆಸರಿನ ಹಾಗೆ ವಿಷಯದಿಂದ ಎಂಟು ಅಂಶಗಳಲ್ಲಿ ವಿಭಕ್ತವಿದೆ ಹೇಗೆಂದರೆ ದರ್ಶನ ಪಾಹುಡದಲ್ಲಿ - ದರ್ಶನ ವಿಷಯದ ಕಥನ, ಸೂತ್ರಪಾಹುಡದಲ್ಲಿ -ಸೂತ್ರ (ಶಾಸ್ತ್ರ) ಸಂಬಂಧದ ಕಥನ ಇತ್ಯಾದಿ. ಪಂ. ಜಯಚಂದ ಛಾಬಡಾರವರು ಈ ಗ್ರಂಥದ ಟೀಕೆಯ ಸಮಾಪ್ತಿಯನ್ನು ವಿಕ್ರಮ ಸಂವತ ೧೮೬೭ ಭಾದ್ರಪದ ಶುದ್ಧ ತ್ರಯೋದಶಿಯಂದು ಮಾಡಿದ್ದಾರೆ. ಈ ಗ್ರಂಥದ ಪ್ರಶಸ್ತಿಯಲ್ಲಿ ಅವರೇ ಬರೆದಿದ್ದಾರೆ -

ಸಂವತ್ಸರ ದಶ ಆಠ ಸತ ಸತಸಠಿ ವಿಕ್ರಮರಾಯ ।
ಮಾಸ ಭಾದ್ರಪದ ಶುಕ್ಲ ತಿಥಿ ತೇರಸಿ ಪೂರನ ಥಾಯ ॥

ಪಂ. ಛಾಬಡಾರವರ ಗ್ರಂಥಗಳಲ್ಲಿನ ಆದಿ ಹಾಗೂ ಅಂತ್ಯದಲ್ಲಿನ ಮಂಗಲಾಚರಣೆಗಳಿಂದ ಇವರು ಅತ್ಯಂತ ಆಸ್ತಿಕ ಹಾಗೂ ದೇವ-ಗುರು-ಶಾಸ್ತ್ರಗಳಲ್ಲಿ ಪೂರ್ಣ ಭಕ್ತಿಯಿಡುತ್ತಿದ್ದರೆಂಬುದು ತಿಳಿದು ಬರುತ್ತದೆ. ಸತ್ಯವಂತೂ ಎಲ್ಲಿ ಆಸ್ತಿಕತೆ ಹಾಗೂ ಭಕ್ತಿಯಿದೆ ಅಲ್ಲಿ ಎಲ್ಲರ ಉಪಕಾರ ಕರ್ತೃತ್ವ ಬುದ್ಧಿಯಿರುತ್ತದೆ ಇದೇ ಮಾತು ಛಾಬಡಾರವರಲ್ಲಿರುವುದರಿಂದ ಅವರಲ್ಲಿ ಕೂಡ ಇಂಥ ಬುದ್ಧಿ ಹಾಗೂ ಇತರ ಮಾನ್ಯ ಗುಣಗಳಿದ್ದವು. ಇದರಿಂದಲೇ ಅವರು ನಮಗೆ ಹಾಗೂ ಸಮಸ್ತ ಸಮಾಜಕ್ಕೆ ಮಾನ್ಯರಿದ್ದಾರೆ. ಪಂ. ಛಾಬಡಾರವರು ಆದಷ್ಟು ಬೇಗ ಅನಂತ ಹಾಗೂ ಅಕ್ಷಯ ಸುಖವನ್ನು ಅನಂತಕಾಲದವರೆಗೆ ಅನುಭವಿಸಲೆಂದು ನಾವು ಈಗ ಅಪೇಕ್ಷೆ ಮಾಡುತ್ತೇವೆ. ಇನ್ನು ನಮ್ಮ ಅಂತಿಮ ನಿವೇದನೆಯೇನೆಂದರೆ ನಮ್ಮ ಅಲ್ಪಜ್ಞತೆಯ ಕಾರಣದಿಂದ ಭೂಮಿಕೆ ಹಾಗೂ ಗ್ರಂಥ ಸಂಶೋಧನೆಯಲ್ಲಿ ಬಹಳಷ್ಟು ನ್ಯೂನತೆಗಳು ಉಳಿದುಕೊಂಡಿರಬೇಕು ಅವನ್ನು ಸೂಜ್ಞರಾದ ತಾವು ಮಾರ್ಜನ ಮಾಡಿ ನಮ್ಮನ್ನು ಕ್ಷಮಿಸಬೇಕೆಂದು ಕೇಳಿಕೊಳ್ಳುತ್ತೇವೆ.

ಮಾರ್ಗಶೀರ್ಷ ಶುದ್ಧ ೮<br>ವಿಕ್ರಮ ಸಂವತ ೧೯೮೦<br>ದಿನಾಂಕ ೧೫-೧೨-೧೯೨೩

ವಿನೀತ<br>ರಾಮಪ್ರಸಾದ ಜೈನ<br>ಮುಂಬಯಿ

# ಅನುವಾದಕರ ನಿವೇದನೆ

ಪರಮಶ್ರೀಪ್ರಿಯಕಾಂತನಾಗಿ ಚಿರಸೌಖ್ಯಾನಂದಮಂ ಪೊರ್ದಲುಂ
ದೊರೆತೀ ದರ್ಶನ ಸೂತ್ರಚಾರುಚರಿತಂ ಸದ್ಬೋಧ ಮೇಣ್ಭಾವಮಂ ।
ಪಿರಿದಾಮೋಕ್ಷ ಸುಲಿಂಗ ಶೀಲ ವಿಮಲೆಂಬೀ ಪಾಹುಡೆಂಟಂಗಳಂ
ಸ್ಮರಿಸುಂ ಧ್ಯಾನಿಸು ಚಿಂತಿಸೋದು ಎಲೆ ಜೀವಂ ನೀನುಮಾವಾಗಲುಂ ॥

ಪ್ರಾತಃಸ್ಮರಣೀಯರೂ, ಧರ್ಮತೀರ್ಥದ ಸಂವರ್ಧಕರೂ ಮತ್ತು ಶ್ರಮಣಕುಲತಿಲಕರೂ ಆದ ಭಗವಾನ ಕುಂದಕುಂದಾಚಾರ್ಯದೇವರ ಶಾಸನವು ಈ ಪಂಚಮಕಾಲದಲ್ಲಿ ಪ್ರತ್ಯಕ್ಷ ತೀರ್ಥಂಕರ ಪ್ರಭುಗಳ ಸಮಾನವಾಗಿಯೂ ಮತ್ತು ಅವರ ವಾಣಿಯು ಕೇವಲೀ ಪ್ರಭುಗಳ ಸಮಾನವಾಗಿಯೂ ನಮಗೆ ಮಂಗಲದಾಯಕವಾಗಿದೆ. ಅಧ್ಯಾತ್ಮ ಮತ್ತು ಆಗಮ, ನಿಶ್ಚಯ ಮತ್ತು ವ್ಯವಹಾರ, ದ್ರವ್ಯಾನುಯೋಗ ಮತ್ತು ಚರಣಾನುಯೋಗದ ಸಮ-ಸೇತು ನಿರ್ಮಿತ ಸಮಷ್ಟಿ-ಸಿದ್ಧಾಂತ ಪ್ರತಿಪಾದಕ ಗ್ರಂಥ ಶೈಲಿಯ ಕಾರಣದಿಂದಾಗಿ ಅವರಿಗೆ ಪ್ರಧಾನ ಪೂಜ್ಯ ಭಗವಾನ ಮಹಾವೀರ ಮತ್ತು ಭಗವಾನ ಗೌತಮ ಗಣಧರರ ನಂತರ ಕೂಡಲೆ ಪ್ರಥಮ ಸ್ಥಾನವು ಪ್ರಾಪ್ತವಾಗಿದೆ. ಭ. ಕುಂದಕುಂದಾಚಾರ್ಯದೇವರು ಭಗವಾನ ಮಹಾವೀರ ಪ್ರಭುಗಳ ಉಪದೇಶವನ್ನು ಯಥಾಸೂತ್ರ ಲೋಕ ಜೀವನದಲ್ಲಿ ಚರಿತಾರ್ಥ ಮಾಡುವ ಸಲುವಾಗಿ ಆಗಿನ ಜನರ ಆಡುಭಾಷೆಯಾದ ಪ್ರಾಕೃತದಲ್ಲಿ ಎಂಭತ್ತಾನ್ಲುಕ್ಕು ಪಾಹುಡ ಗ್ರಂಥಗಳ ನಿರ್ಮಾಣ ಮಾಡಿದ್ದಾರೆ, ಅವುಗಳಲ್ಲಿ ಎಂಟು ಪಾಹುಡಗಳ ಸಂಗ್ರಹವಾದ ಇದು 'ಅಷ್ಟಪಾಹುಡ'ವೆಂಬ ಗ್ರಂಥವಿದೆ.

ಪ್ರಸ್ತುತ 'ಅಷ್ಟಪಾಹುಡ'ದಲ್ಲಿ ಪ್ರತಿಯೊಂದು ಪಾಹುಡದ ಮಂಗಲಾಚರಣೆಯು ಬೇರೆ-ಬೇರೆಯಿದೆ. ಇದರಲ್ಲಿ ದರ್ಶನಪಾಹುಡದ ೩೬ ಗಾಥೆಗಳು, ಸೂತ್ರಪಾಹುಡದ ೨೭ ಗಾಥೆಗಳು, ಚಾರಿತ್ರಪಾಹುಡದ ೪೫ ಗಾಥೆಗಳು, ಬೋಧಪಾಹುಡದ ೬೨ ಗಾಥೆಗಳು, ಭಾವಪಾಹುಡದ ೧೬೫ ಗಾಥೆಗಳು, ಮೋಕ್ಷಪಾಹುಡದ ೧೦೬ ಗಾಥೆಗಳು, ಲಿಂಗಪಾಹುಡದ ೨೨ ಗಾಥೆಗಳು ಮತ್ತು ಶೀಲಪಾಹುಡದ ೪೦ ಗಾಥೆಗಳು ಹೀಗೆ ಒಟ್ಟು ೫೦೩ ಗಾಥೆಗಳಿವೆ.

ಆ ಸಮಯದ ದೇಶ-ಕಾಲ-ಪರಿಸ್ಥಿತಿಯೇ ಈ ಪಾಹುಡ ಗ್ರಂಥಗಳನ್ನು ಬರೆಯಲು ಆಚಾರ್ಯದೇವರನ್ನು ಪ್ರೇರಿತಗೊಳಿಸಿರಬೇಕೆಂಬುದು ಇವುಗಳ ವಿಷಯ ವಸ್ತುವಿನಿಂದಲೇ ಸ್ಪಷ್ಟವಾಗಿ ತಿಳಿದುಬರುತ್ತದೆ. ಈ ಹುಂಡಾವ ಸರ್ಪಿಣಿಯನಿಕೃಷ್ಟಕಾಲದಲ್ಲಿ ಮೋಕ್ಷಮಾರ್ಗದ ಅನ್ಯಥಾ ನಿರೂಪಣೆ ಮಾಡುವಂಥ ಅನೇಕ ಮತ-ಸಂಪ್ರದಾಯಗಳು ಪ್ರವರ್ತಮಾನವಿವೆ. ಅವುಗಳಲ್ಲೂ ಈ ವಿಷಮವಾದ ಪಂಚಮಕಾಲದಲ್ಲಿ ಸರ್ವಜ್ಞ ಪ್ರಭುಗಳ ವ್ಯುಚ್ಛೇದವಾಗುವುದರಿಂದ ಜಿನಮತದಲ್ಲಿ ಕೂಡ ಅಜ್ಞಾನಿ ಹಾಗೂ ಶಿಥಿಲಾಚಾರಿ ಜೀವರುಗಳ ನಿಮಿತ್ತದಿಂದ ಪರಂಪರಾಮಾರ್ಗದ ಉಲ್ಲಂಘನೆ ಮಾಡಿ ಶ್ವೇತಾಂಬರ ಮೊದಲಾದ ಬುದ್ಧಿ ಕಲ್ಪಿತ ಮತಗಳು ಹುಟ್ಟಿಕೊಂಡಿವೆ. ಅವುಗಳ ನಿರಾಕರಣೆ ಮಾಡುವುದು ಹಾಗೂ ಯಥಾರ್ಥ ಮೂಲ ಪರಂಪರೆಗೆ ಅನುಸರಿಸಿ ವಸ್ತುಸ್ವರೂಪದ ಸ್ಥಾಪನೆ ಮಾಡುವುದು ಆಚಾರ್ಯದೇವರಿಗೆ ಅತ್ಯಂತ ಆವಶ್ಯಕವೆನಿಸಿದುದರಿಂದ ಈ ಪಾಹುಡ ಗ್ರಂಥಗಳ ಮೂಲಕ ಆಚಾರ ಸಂಹಿತೆಯ ಹಾಗೂ ಜ್ಞಾನ ಸಾಧನೆಯ ಲುಪ್ತವಾಗುತ್ತಿರುವ ಶಾಶ್ವತ ಮೌಲ್ಯಗಳ ಪುನರ್ಸ್ಥಾಪನೆ ಮಾಡಿದ್ದಾರೆ. ಜತೆಯಲ್ಲೇ ಆಚಾರ ಮತ್ತು ಆತ್ಮಬೋಧ ಸಾಧನೆಯಿಂದ ವಿಹೀನವಾದ ಕೇವಲ ದೈಹಿಕ ಆಚರಣೆಯ ವ್ಯರ್ಥತೆಯನ್ನು ತಿಳಿಸಿಕೊಡುವ ಸಲುವಾಗಿ ಸಮ್ಯಕ್ ಮೋಕ್ಷಮಾರ್ಗದ ಪ್ರಕಾಶನ ಮಾಡಿದ್ದಾರೆ-ಸಚೇಲ ಪರಂಪರೆಯನ್ನು ನಿಗ್ರಹಿಸಿದ್ದಾರೆ.

ಮೊಟ್ಟ ಮೊದಲನೆಯ 'ದರ್ಶನಪಾಹುಡ'ದಲ್ಲಿ ದರ್ಶನವೇ ಧರ್ಮದ ಆಧಾರವಿದ್ದು ದರ್ಶನಹೀನನು ವಂದ್ಯನಿಲ್ಲ ಮತ್ತು ಸಮ್ಯಗ್ದರ್ಶನವು ಮೂರೂ ರತ್ನಗಳಲ್ಲಿ ಸಾರಭೂತವಿದ್ದು ಅದು ಮೋಕ್ಷಮಂದಿರದ ಮೊದಲ ಮೆಟ್ಟಿಲಿದೆ ಆದಕ್ಕಾಗಿ ಅದನ್ನು ಅಂತರಂಗದ ಭಾವನೆಯಿಂದ ಧಾರಣ ಮಾಡಿರೆಂದು ಜಿನೇಶ್ವರ ದೇವರು ತಮ್ಮ ಶಿಷ್ಯರಿಗೆ ಉಪದೇಶ ಮಾಡಿದ್ದಾರೆಂದು ಹೇಳಿದ್ದಾರೆ. ಸಮ್ಯಗ್ದರ್ಶನವು ಅಮೂಲ್ಯವಿದ್ದು ಅದು ದೇವ-ದಾನವರಿಂದ ಪೂಜ್ಯವಿದೆ, ಪರಂಪರೆಯಿಂದ ಕಲ್ಯಾಣಕರವಿದೆ ಎಂದರೆ ಮೋಕ್ಷದಾಯಕವಿದೆಯೆಂದು ಹೇಳಿ ಮುಕ್ತಾಯ ಮಾಡಿದ್ದಾರೆ.

'ಸೂತ್ರಪಾಹುಡ'ದಲ್ಲಿ ಸೂತ್ರ (ಶಾಸ್ತ್ರ) ಸಹಿತನು ಭವನಾಶಮಾಡಿದರೆ ಸೂತ್ರರಹಿತನು ಭವಭ್ರಮಣ ಮಾಡುತ್ತಾನೆಂದು ಸುಂದರವಾಗಿ ನಿರೂಪಣೆ ಮಾಡಿದ್ದಾರೆ. ಮತ್ತು ಜಿನೇಂದ್ರಪರಮಾತ್ಮರ ಮಾರ್ಗದಲ್ಲಿ ಚಲಿಸುವಂಥವನು ಸೂತ್ರಸಹಿತವಾದ ಸೂಜಿಯಂತೆ ನಾಶವಾಗುವುದಿಲ್ಲವೆಂದು ತಿಳಿ ಹೇಳಿದ್ದಾರೆ. 'ಚಾರಿತ್ರಪಾಹುಡ'ದಲ್ಲಿ ಸಮ್ಯಗ್ದೃಷ್ಟಿಯ ಸ್ವರೂಪಾಚರಣಚಾರಿತ್ರ ಮೂರು ಕಷಾಯ ಚೌಕಡಿಗಳ ಅಭಾವ ಮಾಡುವಂಥ ಪ್ರಚುರ ಸ್ವಸಂವೇದನಶೀಲ ಸಂಯಮಾಚರಣದ ವ್ಯಾಖ್ಯೆಮಾಡುತ್ತ ಸಮ್ಯಕ್ತ್ವಾಚರಣಚಾರಿತ್ರವಿಲ್ಲದೆ ಸಂಯಮಾಚರಣಚಾರಿತ್ರವು ಸಂಭವವಿಲ್ಲವೆಂದು ಹೇಳಿದ್ದಾರೆ. 'ಬೋಧಪಾಹುಡ'ದಲ್ಲಿ ಧರ್ಮಾಯತನ ಮೊದಲಾದ ಹನ್ನೊಂದು ಸ್ಥಳಗಳನ್ನು ಹೇಳಿದ್ದಾರೆ. ಕಾಲದೋಷದಿಂದ ಧರ್ಮ ಮಾರ್ಗದಲ್ಲಿ ಅನೇಕ ಮತಗಳಾಗಿದ್ದು ಜೈನ ಮತದಲ್ಲೂ ಭೇದಗಳಾಗಿವೆ. ಅವುಗಳಲ್ಲಿ ಆಯತನ ಮೊದಲಾದವುಗಳಲ್ಲಿ ವಿಪರೀತತೆಗಳಾಗಿವೆ, ಅವುಗಳ ನಿಜವಾದ ಸ್ವರೂಪವನ್ನು ತಿಳಿಸಿಕೊಡುವುದರ ಸಲುವಾಗಿ ಈ ಬೋಧಪಾಹುಡದ ರಚನೆಯಾಗಿದೆ.

ಈ ಅಷ್ಟಪಾಹುಡದಲ್ಲಿ 'ಭಾವಪಾಹುಡ'ವು ಎಲ್ಲಕ್ಕಿಂತ ಹೆಚ್ಚು ಮಹತ್ವಪೂರ್ಣವಿದೆ. ಏಕೆಂದರೆ ಈ ಕಾಲದಲ್ಲಿ ಶಿಥಿಲಾಚರಣದ ಕಾರಣ ಆಗಮಶಾಸ್ತ್ರಗಳ ಆಧಾರದ ಮೇಲೆ 'ಗುರು'ಗಳ ಸ್ವರೂಪದ ವಿಷಯದಲ್ಲಿ ಅನೇಕ ಭ್ರಾಂತಿಗಳ ಪೋಷಣೆಮಾಡಲಾಗುತ್ತಿದೆ ಮತ್ತು ಲಿಂಗದ ಹೆಸರಿನಲ್ಲಿ ದ್ರವ್ಯಲಿಂಗವೊಂದೇ ಮುನಿಯ ಸ್ವರೂಪವಾಗಿ ಉಳಿದುಕೊಂಡಿದೆ. ಆದರೆ ಸ್ವರ್ಗ-ಮೋಕ್ಷಗಳಾಗುವುದರ ಮತ್ತು ನರಕಾದಿ ಸಂಸಾರವಾಗುವುದರ ಕಾರಣವು ಭಾವವೆಂದು ಭಗವಂತರು ಹೇಳಿದ್ದಾರೆ ; ಆದುದರಿಂದ ದ್ರವ್ಯಲಿಂಗದ ಮೊದಲು ಭಾವಲಿಂಗ ಎಂದರೆ ಸಮ್ಯಗ್ದರ್ಶನ ಮೊದಲಾದ ನಿರ್ಮಲ ಭಾವಗಳಿದ್ದರೆ ನಿಜವಾದ ಮುನಿ-ಶ್ರಾವಕತನಗಳಾಗುತ್ತವೆ. ಭಾವಲಿಂಗವು ಮುಖ್ಯವಿದೆ, ಮುಖ್ಯವಿದ್ದುದೇ ಪರಮಾರ್ಥವಿದೆ. ಆತ್ಮಾಶ್ರಿತವಾದ ಶುದ್ಧೋಪಯೋಗ ದಶೆಯಿಂದಲೇ ಕರ್ಮಬಂಧನವು ಕತ್ತರಿಸುತ್ತದೆ. ಕೇವಲ  ಶರೀರದ ನಗ್ನತೆಯು ಯಾವ ಕಾರ್ಯಕಾರಿಯಿಲ್ಲ ಆದಕ್ಕಾಗಿ ಮೊದಲು ಮಿಥ್ಯಾತ್ವಾದಿ ದೋಷಗಳನ್ನು ನಿವಾರಿಸಿ ಭಾವದಿಂದ ಅಂತರಂಗದಿಂದ ನಗ್ನವಾಗಬೇಕು, ಅನಂತರ ಜಿನಾಜ್ಞೆಯ ಪ್ರಕಾರ ದ್ರವ್ಯದಿಂದ ಬಾಹ್ಯಲಿಂಗವನ್ನು ಪ್ರಕಟಮಾಡಬೇಕೆಂದು ಹೇಳಿದ್ದಾರೆ.

'ಬೋಧಪಾಹುಡ'ದಲ್ಲಿ ವ್ಯವಹಾರದಲ್ಲಿ ನಿದ್ರಿಸುವ ಯೋಗಿಯು ತನ್ನ ಸ್ವರೂಪದ ಕಾರ್ಯದಲ್ಲಿ ಜಾಗೃತನಿರುತ್ತಾನೆ ಮತ್ತು ವ್ಯವಹಾರದಲ್ಲಿ ಜಾಗೃತನಿರುವವನು ತನ್ನ ಆತ್ಮಕಾರ್ಯದಲ್ಲಿ ನಿದ್ರಿಸುತ್ತಾನೆಂದು ಹೇಳಿದ್ದಾರೆ. 'ಲಿಂಗಪಾಹುಡ'ದಲ್ಲಿ ರತ್ನತ್ರಯರೂಪವಾದ ಧರ್ಮದಿಂದಲೇ ಲಿಂಗವಾಗುತ್ತದೆ ಎಂದರೆ ಲಿಂಗದ ಸಾರ್ಥಕತೆಯು ರತ್ನತ್ರಯರೂಪವಾದ ಧರ್ಮದಲ್ಲಿಯೇ ಇದೆ, ಆದರೆ ಕೇವಲ ಲಿಂಗಧಾರಣ ಮಾಡುವುದರಿಂದ ಧರ್ಮವಾಗುವುದಿಲ್ಲವೆಂದು ಹೇಳಿದ್ದಾರೆ ಇನ್ನು ಶೀಲಪಾಹುಡದಲ್ಲಿ ವಿಷಯ-ಭೋಗಗಳನ್ನಂತೂ ವಿಷವೆಂದು ಹೇಳಿದ್ದಾರೆ ; ಆದರೆ ಪುಣ್ಯ ಹಾಗೂ ರಾಗದ ಬುದ್ಧಿಯನ್ನು ಕೂಡ ವಿಷವೆಂದು ಹೇಳಿದ್ದಾರೆ ವಿಷದಿಂದ ಒಂದುಬಾರಿ ಮರಣವಾದರೆ ವಿಷಯ-ವಿಷದಿಂದಂತೂ ಅನಂತಬಾರಿ ಮರಣವಾಗುತ್ತದೆಯೆಂದು ಹೇಳಿದ್ದಾರೆ. ಈ ಪ್ರಕಾರ

ಆಚಾರ್ಯ ಭಗವಂತರು ಪ್ರತ್ಯಕ್ಷ ಸೀಮಂಧರ ಪ್ರಭುಗಳ ದಿವ್ಯಧ್ವನಿಯಿಂದ ಕೇಳಿದ ವಸ್ತುಸ್ವರೂಪವನ್ನು ಸ್ವಾತ್ಮಾನುಭವ ಮತ್ತು ಸಂಯಮದಿಂದ ಸಿದ್ಧಮಾಡಿ ಈ 'ಅಷ್ಟಪಾಹುಡ' ಶಾಸ್ತ್ರದಲ್ಲಿ ಸಂಗ್ರಹಿಸಿ ಹೇಳಿದ್ದಾರೆ. ಹೀಗೆ ಸಂಪೂರ್ಣ ಅಷ್ಟಪಾಹುಡವು ಒಂದು ರೀತಿಯ ಆಚಾರಸಂಹಿತೆಯಾಗಿದ್ದು ಇದರಲ್ಲಿ ಮುನಿಗಳ ಆಚಾರ-ವಿಚಾರಗಳ ಚಿಂತನವಿದೆ, ವಿಶ್ಲೇಷಣವಿದೆ, ವಿಮರ್ಶೆಯಿದೆ.

ಆತ್ಮನಿಷ್ಠರಾದ ಆಚಾರ್ಯ ಭಗವಂತರು ದ್ರವ್ಯದೊಡನೆ ಪರ್ಯಾಯದ ಏಕತೆಯನ್ನು ಸಾಧಿಸುತ್ತ ಸ್ವಯಂ ಅನುಭವಿಸಿದ ಸುಖ-ಸ್ವಾದವನ್ನು ಇತರ ಭವ್ಯಜೀವರುಗಳೂ ಕಂಡುಉಂಡು ತೃಪ್ತಿ ಪಡೆಯಲೆಂದು ಕರುಣಾಬುದ್ಧಿಯಿಂದ ಈ ಪಾಹುಡ ಗ್ರಂಥಗಳ ರಚನೆಮಾಡಿದ್ದಾರೆ. ಇದರಲ್ಲಿ ಧರ್ಮದ ಹೆಸರಿನ ಮೇಲೆ ನಡೆಯುತ್ತಿರುವ ಓರೆ-ಕೋರೆಗಳನ್ನು ತಿದ್ದಿದ್ದಾರೆ, ಶಿಥಿಲಾಚಾರವನ್ನು ಕಠೋರವಾಗಿ ಖಂಡಿಸಿದ್ದಾರೆ ಕೊನೆಗೆ ಅಧ್ಯಾತ್ಮದ ಅಂತರ್ಭಾವವನ್ನು ಮೆರೆಸಿದ್ದಾರೆ. ಇಂಥ ಅನುಪಮ ಕೃತಿರತ್ನವನ್ನು ಒಂದು ಭಾಷೆಯಿಂದ ಇನ್ನೊಂದು ಭಾಷೆಯಲ್ಲಿ ಸಂಪೂರ್ಣವಾಗಿ ಸಪ್ರಮಾಣವಾಗಿ ಇಳಿಸಿ ತರುವುದು ಕಠಿಣವಾದ ಕಾರ್ಯವಾಗಿದ್ದರೂ ನನಗೆ ಪೂ. ಗುರುದೇವರ ಸಾನಿಧ್ಯದಿಂದ ಲಭಿಸಿದ ಜ್ಞಾನಾನುಭೂತಿಯಿಂದ ಈ ಕಾರ್ಯ ಮಾಡಲು ಮನಸ್ಸು ಮಾಡಿದ್ದೇನೆ. ಅತ್ಯಂತ ಜಾಗರೂಕನಾಗಿ ಪ್ರತಿಯೊಂದು ಶಬ್ದದ ಮೇಲೆ ದೃಷ್ಟಿಯಿಟ್ಟು ಮೂಲಭಾವಕ್ಕೆ ಚ್ಯುತಿಬಾರದಂತೆ ನೋಡಿಕೊಂಡಿದ್ದೇನೆ. ಗಾಥೆಗಳನ್ನು ಕನ್ನಡ ಪದ್ಯದಲ್ಲಿ ಇಳಿಸಿಕೊಳ್ಳುವಾಗಂತೂ ಮೈಯೆಲ್ಲ ಕಣ್ಣಾಗಿ ಕಾರ್ಯ ಮಾಡಿದ್ದೇನೆ, ಇಷ್ಟಾದರೂ ನನ್ನ ಬುದ್ಧಿಯ ಅಲ್ಪತೆಯಿಂದಾಗಿ ಎಲ್ಲಾದರೂ ದೋಷಗಳು ಉಳಿದುಕೊಂಡಿದ್ದರೆ ಅದರ ಸಲುವಾಗಿ ಆ ಆಚಾರ್ಯ ಭಗವಂತರಲ್ಲಿ ಅತ್ಯಂತ ವಿನಮ್ರತೆಯಿಂದ ತಲೆಬಾಗಿ ಕ್ಷಮೆ ಕೋರುತ್ತೇನೆ. ಅದರಂತೆ ಅಧ್ಯಾತ್ಮರಸಿಕರು ಈ ಕಾರ್ಯದಲ್ಲಿನ ಲೋಪ-ದೋಷಗಳನ್ನು ತಿಳಿಸಿಕೊಟ್ಟರೆ ಅವನ್ನು ಗೌರವದಿಂದ ಸ್ವೀಕರಿಸಿ ಮುಂದಿನ ಆವೃತ್ತಿಯಲ್ಲಿ ತಿದ್ದುಪಡಿ ಮಾಡುವ ಭರವಸೆ ಕೊಡುತ್ತೇನೆ.

ಇನ್ನು ಈ ಅನುಪಮ ಗ್ರಂಥದ ಅನುವಾದ ಮಾಡುವ ಪ್ರೇರಣೆನೀಡಿ, ಅನುವಾದವನ್ನು ಆದ್ಯಂತವಾಗಿ ಪರಿಶೀಲಿಸಿ ಗ್ರಂಥವು ನಿರ್ದೋಷವಾಗುವಲ್ಲಿ ಸಹಕರಿಸಿದ ಆತ್ಮೀಯ ಬ್ರ. ಶ್ರೀ ಯಶಪಾಲ ಜೈನ, ಎಂ.ಎ. ಅವರನ್ನು ನಾನು ಪ್ರಥಮವಾಗಿ ಸ್ಮರಿಸಿ ಕೃತಜ್ಞತೆ ಸಲ್ಲಿಸುತ್ತೇನೆ.ಅದರಂತೆ ಈ ಗ್ರಂಥದ ಅನುವಾದ ಮಾಡುವ ಸುಯೋಗವನ್ನು ತಂದುಕೊಟ್ಟು ಗ್ರಂಥ ಪ್ರಕಟಣೆಯ ಭಾರಹೊತ್ತ ಬೆಂಗಳೂರಿನ ದಿಗಂಬರ ಜೈನ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಸಿ. ಬಿ. ಭಂಡಾರಿಯವರಿಗೆ ಹಾಗೂ ಈ ಕಾರ್ಯದಲ್ಲಿ ಪ್ರತ್ಯಕ್ಷ-ಪರೋಕ್ಷ ಸಹಕರಿಸಿದ ಆತ್ಮೀಯರೆಲ್ಲರಿಗೂ ಅನೇಕ ಧನ್ಯವಾದಗಳನ್ನರ್ಪಿಸಿ, ಎಲ್ಲರೂ ಈ ಉಪಯುಕ್ತ ಮಹಾಗ್ರಂಥದ ಅಧ್ಯಯನವನ್ನು ಆತ್ಮ ಕಲ್ಯಾಣದ ಅಪೇಕ್ಷೆಯಿಂದ ಮಾಡಿ ಜೀವನದ ಮೇಲ್ಮೆಯನ್ನು ಸಾರ್ಥಕತೆಯನ್ನು ಸಾಧಿಸಿಕೊಳ್ಳಬೇಕೆಂದು ಕೇಳಿಕೊಂಡು ಈ ಪರಮ ಪವತ್ರವಾದ ಪುಷ್ಪವನ್ನು ಸಾಧರ್ಮಿಗಳಾದ ಪಾಠಕರ ಕರಕಮಲಗಳಲ್ಲಿ ಸಮರ್ಪಿಸುತ್ತೇನೆ.

ಬೆಂಗಳೂರು — ಶ್ರೀ ಎಂ. ಬಿ. ಪಾಟೀಲ

ದಿ. ೭-೫-೧೯೯೦ — ಸೇಡಬಾಳ.

# ವಿಷಯಾನುಕ್ರಮಣಿಕೆ


| ವಿಷಯ | | ಗಾಥೆ | ಪುಟ |
|---|---|---|---|
| 1. | ದರ್ಶನಪಾಹುಡ | 36 | 1–36 |
| 2. | ಸೂತ್ರಪಾಹುಡ | 27 | 37–63 |
| 3. | ಚಾರಿತ್ರಪಾಹುಡ | 45 | 64–94 |
| 4. | ಬೋಧಪಾಹುಡ | 62 | 95–139 |
| 5. | ಭಾವಪಾಹುಡ | 165 | 140–256 |
| 6. | ಮೋಕ್ಷಪಾಹುಡ | 106 | 257–329 |
| 7. | ಲಿಂಗಪಾಹುಡ | 22 | 330–344 |
| 8. | ಶೀಲಪಾಹುಡ | 40 | 345–372 |
| 9. | ವಚನಿಕಾಕಾರನ ಪ್ರಶಸ್ತಿ | | 373 |
| 10. | ಶಾಸ್ತ್ರಗಳ ಅರ್ಥಮಾಡುವ ಪದ್ಧತಿ | | 374 |
| 11. | ಗಾಥೆಗಳ ವರ್ಣಾನುಕ್ರಮಸೂಚಿ | | 375–383 |



ಪ್ರಸ್ತುತ ಗ್ರಂಥದ ಬೆಲೆ ಕಡಿಮೆ ಮಾಡಲು ಪ್ರಾಪ್ತ ಧನರಾಶಿ

ರೂ. 33,333 – ಗುಪ್ತದಾನ – ಹೆಸರಿನ ಲೋಭದಿಂದ ದೂರ.

ರೂ. 11,000 – ಮಹಿಳಾ ಸ್ವಾಧ್ಯಾಯ ಮಂಡಲ, ಹುಬ್ಬಳ್ಳಿ

ರೂ. 10,000 – ತಂದೆಯ ಸ್ಮರಣಾರ್ಥ ಚಿ. ಸುಪ್ರಜಿತ ಹಾಗೂ ಚಿ. ಪ್ರತೀಕ<br>ಮತ್ತು ಸೋದರಮಾವನ ಸ್ಮರಣಾರ್ಥ<br>ಕು. ತನ್ಮಯಿ, ದಾವಣಗೆರೆ

ರೂ. 05,555 – ಸೌ. ಪರಮಶ್ರೀ ಚಂದ್ರನಾಥ ಪಾಟೀಲ

ರೂ. 05,555 – ಹೆಸರಿನ ಲೋಭದಿಂದ ದೂರ – ಗುಪ್ತದಾನ.

ರೂ. 05,000 – ಸೌ. ಶೈಲಾ ಆದಿನಾಥ, ದಾವಣಗೆರೆ

ರೂ. 05,000 – ಸೌ. ಐರಾದೇವಿ ಭರತರಾಜ, ಮಂಡ್ಯ

ರೂ. 05,000 – ಶ್ರೀಮತಿ ರಜನಿ ಶಹಾ, ಹುಬ್ಬಳ್ಳಿ

ರೂ. 05,000 – ಶ್ರೀಮತಿ ಲತಾ ತಿಪ್ಪಣ್ಣವರ

## ಭಗವಾನ ಕುಂದಕುಂದಾಚಾರ್ಯದೇವರ ಸಂಬಂಧದಲ್ಲಿ ಉಲ್ಲೇಖ

ವಂದ್ಯೋ ವಿಭುರ್ಭುವಿ ನ ಕೈರಿಹ ಕೊಂಡಕುಂದಃ
ಕುಂದ-ಪ್ರಭಾ-ಪ್ರಣಯಿ-ಕೀರ್ತಿ-ವಿಭೂಷಿತಾಶಃ ।
ಯಶ್ಚಾರು-ಚಾರಣ-ಕರಾಂಬುಜಚಂಚರೀಕ-
ಶ್ಚಕ್ರೇ ಶ್ರುತಶ್ಯ ಭರತೇ ಪ್ರಯತಃ ಪ್ರತಿಷ್ಠಾಮ್ ॥

[- ಚಂದ್ರಗಿರಿ ಪರ್ವತದ ಶಿಲಾಲೇಖ]

ಅರ್ಥ :- ಕುಂದಪುಷ್ಪದ ಪ್ರಭೆಯನ್ನು ಧಾರಣೆ ಮಾಡುವಂಥ ಯಾರ ಕೀರ್ತಿಯ ಮುಖಾಂತರ ದಶ ದಿಕ್ಕುಗಳು ವಿಭೂಷಿತವಾಗಿವೆ, ಯಾರು ಚಾರಣರ-ಚಾರಣಋದ್ಧಿಸಂಪನ್ನರಾದ ಮಹಾಮುನಿಗಳ ಸುಂದರ ಹಸ್ತ-ಕಮಲಗಳ ಭ್ರಮರವಿದ್ದರು ಮತ್ತು ಯಾವ ಪವಿತ್ರಾತ್ಮರು ಭರತಕ್ಷೇತ್ರದಲ್ಲಿ ಶ್ರುತದ ಪ್ರತಿಷ್ಠೆ ಮಾಡಿದ್ದಾರೆ. ಆ ಕುಂದಕುಂದವಿಭುಗಳು ಈ ಭೂಮಂಡಲದಲ್ಲಿ ಯಾರಿಂದ ವಂದ್ಯರಾಗಿಲ್ಲ ?

............ ಕೊಂಡಕುಂದೋ ಯತೀಂದ್ರಃ ॥
ರಜೋಭಿರಸ್ಪೃಷ್ಟತಮತ್ವಮಂತ-
ರ್ಬಾಹ್ಯೇಪಿ ಸಂವ್ಯಂಜಯಿತುಂ ಯತೀಶಃ ।
ರಜಃಪದಂ ಭೂಮಿತಲಂ ವಿಹಾಯ
ಚಚಾರ ಮನ್ಯೇ ಚತುರಂಗುಲಂ ಸಃ ॥

[-ವಿಂಧ್ಯಗಿರಿ-ಶಿಲಾಲೇಖ]

ಅರ್ಥ :- ಯತೀಶ್ವರರು (ಶ್ರೀ ಕುಂದಕುಂದಸ್ವಾಮಿಗಳು) ರಜಃಸ್ಥಾನವನ್ನು-ಭೂಮಿತಲವನ್ನು-ಬಿಟ್ಟುಕೊಟ್ಟು, ನಾಲ್ಕು ಅಂಗುಲಮೇಲೆ ಆಕಾಶದಲ್ಲಿ ಗಮನಮಾಡುತ್ತಿದ್ದರು. ಅದರಿಂದ ಅವರು ಅಂತರ್ಯದಲ್ಲಿ ಹಾಗೂ ಬಾಹ್ಯದಲ್ಲಿ ರಜದಿಂದ (ತಮ್ಮ) ಅತ್ಯಂತ ಅಸ್ಪೃಷ್ಟತೆಯನ್ನು ವ್ಯಕ್ತಪಡಿಸುತ್ತಿದ್ದರೆಂದು ನಾನು ತಿಳಿದು ಕೊಳ್ಳುತ್ತೇನೆ. (ಅವರು ಅಂತರ್ಯದಲ್ಲಿ ರಾಗ ಮೊದಲಾದ ಮಲದಿಂದ ಅಸ್ಪೃಷ್ಟರಿದ್ದರು ಮತ್ತು ಬಾಹ್ಯದಲ್ಲಿ ಧೂಳಿನಿಂದ ಅಸ್ಪೃಷ್ಟರಿದ್ದರು.)

ಜಇ ಪಉಮಣಂದಿಣಾಹೋ ಸೀಮಂಧರಸಾಮಿದಿವ್ವಣಾಣೇಣ ।
ಣ ವಿದೋಹಇ ತೋ ಸಮಣಾ ಕಹಂ ಸಮಗ್ಗಂ ಪಯಾಣಂತಿ ॥

–ದರ್ಶನಸಾರ

ಅರ್ಥ ಃ– (ಮಹಾವಿದೇಹಕ್ಷೇತ್ರದ ವರ್ತಮಾನ ತೀರ್ಥಂಕರದೇವರಾದ) ಶ್ರೀ ಸೀಮಂಧರ ಪ್ರಭುಗಳಿಂದ ಪ್ರಾಪ್ತವಾದ ದಿವ್ಯಜ್ಞಾನದ ಮುಖಾಂತರ ಶ್ರೀ ಪದ್ಮನಂದಿನಾಥರು (ಶ್ರೀ ಕುಂದಕುಂದಾಚಾರ್ಯದೇವರು) ಬೋಧನೆ ಮಾಡದೆ ಹೋಗಿದ್ದರೆ ಮುನಿಜನರು ನಿಜವಾದ ಮಾರ್ಗವನ್ನು ಹೇಗೆ ತಿಳಿಯುತ್ತಿದ್ದರು ?

ಓ ಕುಂದಕುಂದದೇವ ಮೊದಲಾದ ಆಚಾರ್ಯರುಗಳೇ ! ಸ್ವರೂಪಾನು ಸಂಧಾನದಲ್ಲಿ ತಮ್ಮ ವಚನಗಳೇ ಈ ಪಾಮರನಿಗೆ ಪರಮೋಪಕಾರಭೂತವಾಗಿವೆ ಆದಕ್ಕಾಗಿ ನಾನು ತಮ್ಮಗಳಿಗೆ ಅತ್ಯಂತ ಭಕ್ತಿಭಾವದಿಂದ ನಮಸ್ಕಾರ ಮಾಡುತ್ತೇನೆ.

–ಶ್ರೀಮದ್ ರಾಜಚಂದ್ರ

ಶ್ರೀ ಭಗವಾನ ಕುಂದಕುಂದಾಚಾರ್ಯದೇವರು ಮಹಾವಿದೇಹಕ್ಷೇತ್ರದಲ್ಲಿ ವಿರಾಜಮಾನರಾದ ಶ್ರೀ ಸೀಮಂಧರ ಭಗವಂತರ ಸಮವಸರಣಕ್ಕೆ ಹೋಗಿದ್ದರು ಮತ್ತು ಅಲ್ಲಿ ಅವರು ಎಂಟು ದಿವಸಗಳವರೆಗೆ ಇದ್ದರೆಂಬ ಮಾತು ಯಥಾತಥ್ಯವಿದೆ, ಅಕ್ಷರಶಃ ಸತ್ಯವಿದೆ, ಪ್ರಮಾಣಸಿದ್ಧವಿದೆ, ಅದರಲ್ಲಿ ತಿಲಮಾತ್ರವೂ ಸಂದೇಹಕ್ಕೆ ಆಸ್ಪದವಿಲ್ಲ. ಪರಮೋಪಕಾರಿಗಳಾದ ಆ ಆಚಾರ್ಯಭಗವಂತರು ರಚಿಸಿದ ಈ ಸಮಯಸಾರದಲ್ಲಿ ತೀರ್ಥಂಕರದೇವರ ನಿರಕ್ಷರವಾದ ಓಂಕಾರ ಧ್ವನಿಯೊಳಗಿಂದ ಹೊರ ಹೊರಟಂಥ ಉಪದೇಶವೇ ಇದೆ.

–ಪೂಜ್ಯ ಶ್ರೀ ಕಾನಜಿಸ್ವಾಮಿ

# ಅಷ್ಟಪಾಹುಡ

ಭ. ಕುಂದಕುಂದದೇವ

॥ ಶ್ರೀ ಸರ್ವಜ್ಞವೀತರಾಗಾಯ ನಮಃ ॥

# ಶಾಸ್ತ್ರ-ಸ್ವಾಧ್ಯಾಯದ ಪ್ರಾರಂಭದ ಮಂಗಲಾಚರಣೆ

ಓಂಕಾರಂ ಬಿಂದುಸಂಯುಕ್ತಂ ನಿತ್ಯಂ ಧ್ಯಾಯಂತಿ ಯೋಗಿನಃ ।
ಕಾಮದಂ ಮೋಕ್ಷದಂ ಚೈವ ಓಂಕಾರಾಯ ನಮೋನಮಃ ॥೧॥

ಅವಿರಲಶಬ್ದಘನೌಘಪ್ರಕ್ಷಾಲಿತಸಕಲಭೂತಲಕಲಂಕಾ ।
ಮುನಿಭಿರುಪಾಸಿತತೀರ್ಥಾ ಸರಸ್ವತೀ ಹರತು ನೋ ದುರಿತಾನ್ ॥೨॥

ಅಜ್ಞಾನತಿಮಿರಾಂಧಾನಾಂ ಜ್ಞಾನಾಂಜನಶಲಾಕಯಾ ।
ಚಕ್ಷುರುನ್ಮೀಲಿತಂ ಯೇನ ತಸ್ಮೈ ಶ್ರೀ ಗುರುವೇ ನಮಃ ॥೩॥

## ॥ಶ್ರೀ ಪರಮಗುರುವೇನಮಃ । ಪರಂಪರಾಚಾರ್ಯಗುರುವೇನಮಃ ॥

ಸಕಲಕಲುಷವಿಧ್ವಂಸಕಂ, ಶ್ರೇಯಸಾಂ ಪರಿವರ್ಧಕಂ, ಧರ್ಮಸಂಬಂಧಕಂ, ಭವ್ಯಜೀವಮನಃ ಪ್ರತಿಬೋಧಕಾರಕಂ, ಪುಣ್ಯಪ್ರಕಾಶಕಂ, ಪಾಪಪ್ರಣಾಶಕಮಿದಂ ಶಾಸ್ತ್ರಂ ಶ್ರೀ ಅಷ್ಟಪಾಹುಡ ನಾಮಧೇಯಂ, ಅಸ್ಯ ಮೂಲಗ್ರಂಥಕರ್ತಾರಃ ಶ್ರೀ ಸರ್ವಜ್ಞದೇವಾಸ್ತದುತ್ತರ ಗ್ರಂಥಕರ್ತಾರಃ ಶ್ರೀ ಗಣಧರದೇವಾಃ ಪ್ರತಿಗಣಧರದೇವಾಸ್ತೇಷಾಂ ವಚನಾನುಸಾರಮಾಸಾದ್ಯ ಆಚಾರ್ಯ ಶ್ರೀ ಕುಂದಕುಂದಾಚಾರ್ಯದೇವ- ವಿರಚಿತಂ, ಶ್ರೋತಾರಃ ಸಾವಧಾನತಯಾ ಶ್ರುಣ್ವಂತು ॥

ಮಂಗಲಂ ಭಗವಾನ ವೀರೋ ಮಂಗಲಂ ಗೌತಮೋ ಗಣೀ ।
ಮಂಗಲಂ ಕುಂದಕುಂದಾರ್ಯೋ ಜೈನಧರ್ಮೋऽಸ್ತು ಮಂಗಲಂ ॥೧॥

ಸರ್ವಮಂಗಲಮಾಂಗಲ್ಯಂ ಸರ್ವಕಲ್ಯಾಣಕಾರಕಂ ।
ಪ್ರಧಾನಂ ಸರ್ವಧರ್ಮಾಣಾಂ ಜೈನಂ ಜಯತು ಶಾಸನಮ್ ॥೨॥

ಓಂ

ನಮಃ ಸಿದ್ಧೇಭ್ಯಃ

ಶ್ರೀಮದ್ಭಗವತ್ಕುಂದಕುಂದಾಚಾರ್ಯದೇವವಿರಚಿತ

ಶ್ರೀ

# ಅಷ್ಟಪಾಹುಡ

ಭಾಷಾ-ವಚನಿಕೆ

೧

## ದರ್ಶನ ಪಾಹುಡ

ಮಿಥ್ಯಾತಮ ಕಿಡಿಸುವ ದಿನಕರ ಶ್ರೀ ವೀರಜಿನೇಶನಿಗೆ ।
ವಂದಿಪೆ ವಿಘ್ನಹರಣ ಮಂಗಲಕರಣ ಧರ್ಮಕರ್ತೃವಿಗೆ ॥೧॥

ಹಿತಕರವಾಣಿಗೊಂದಿಸುವೆ ಜಿನಮುಖನಭದಿಂದಿಳಿದ ।
ಗಣಧರಗಣಶ್ರುತ ಭುವಿಗುದುರಿದ ವರ್ಣಪದಬಿಂದು ॥೨॥

ಸುವಿಧಿಸಂಯಮತಪಧರಗುರುಗೌತಮಗೆರಗುವೆನು ।
ಪಂಚಮಕಾಲದಲಿವರು ವರ್ತಿಸಿದರು ಜಿನಮತವನು ॥೩॥

ಕುಮತಧ್ವಾಂತಹರ ಕುಂದಕುಂದಮುನಿರವಿಗೆರಗುವೆನು ।
ಪಾಹುಡಗ್ರಂಥ ರಚಿಸಿದರು ಮಹಾಪ್ರಾಕೃತ ವಚನವನು ॥೪॥

ನಾನದನು ಸುಗಮ ಸುವಿಚಾರದಿಂದಪ್ರಸಿದ್ಧ ಪಡಿಸುವೆನು ।
ಭವ್ಯ ಜೀವಹಿತಕರ ದೇಶವಚನಿಕೆಯ ಬರೆಯುವೆನು ॥೫॥

ಈ ಪ್ರಕಾರ ಮಂಗಲಾಚರಣೆಯೊಡನೆ ಪ್ರತಿಜ್ಞೆ ಮಾಡಿ ಭಗವತ್ಕುಂದಕುಂದಾಚಾರ್ಯದೇವಕೃತ ಪ್ರಾಕೃತ ಗಾಥಾಬದ್ಧ ಪಾಹುಡ ಗ್ರಂಥಗಳಲ್ಲಿ ಕೆಲವುಗಳ ದೇಶಭಾಷಾಮಯವಾದ ವಚನಿಕೆಯನ್ನು ಬರೆಯುತ್ತೇವೆ.

ಈ ಹುಂಡಾವಸರ್ಪಿಣೀ ಕಾಲದಲ್ಲಿ ಮೋಕ್ಷಮಾರ್ಗದ ಅನ್ಯಥಾ ಪ್ರರೂಪಣೆ ಮಾಡುವಂಥ ಅನೇಕ ಮತಗಳು ಪ್ರವರ್ತಮಾನವಿವೆ. ಅದರಲ್ಲೂ ಈ ಪಂಚಮಕಾಲದಲ್ಲಿ ಕೇವಲಿ-ಶ್ರುತಕೇವಲಿಗಳ ವ್ಯಚ್ಛೇದವಾಗುವುದರಿಂದ ಜಿನಮತದಲ್ಲಿ ಕೂಡ ಜಡ ವಕ್ರ ಜೀವರುಗಳ ನಿಮಿತ್ತದಿಂದ ಪರಂಪರಾಮಾರ್ಗದ ಉಲ್ಲಂಘನೆ ಮಾಡಿ ಶ್ವೇತಾಂಬರ ಮೊದಲಾದ ಬುದ್ಧಿ ಕಲ್ಪಿತ ಮತಗಳು ಹುಟ್ಟಿಕೊಂಡಿವೆ. ಅವುಗಳ ನಿರಾಕರಣೆ ಮಾಡಿ ಯಥಾರ್ಥ ಸ್ವರೂಪದ ಸ್ಥಾಪನೆಯ ಕಾರಣ ದಿಗಂಬರ ಪರಂಪರೆಯ ಮೂಲಸಂಘದಲ್ಲಿ ಆಚಾರ್ಯರಾದರು ಮತ್ತು ಅವರು ಸರ್ವಜ್ಞ ಪರಂಪರೆಯ ಅವ್ಯುಚ್ಛೇದರೂಪ ಪ್ರರೂಪಣೆ ಮಾಡುವ ಅನೇಕ ಗ್ರಂಥಗಳ ರಚನೆ ಮಾಡಿದ್ದಾರೆ; ಅವರಲ್ಲಿ ದಿಗಂಬರ ಸಂಪ್ರದಾಯದ ಮೂಲಸಂಘ ನಂದಿಪರಂಪರೆಯ ಸರಸ್ವತಿಗಚ್ಛದಲ್ಲಿ ಭ. ಕುಂದಕುಂದ ಮುನಿಗಳಾದರು. ಮತ್ತು ಅವರು ಪಾಹುಡ ಗ್ರಂಥಗಳ ರಚನೆ ಮಾಡಿದರು. ಆ ಪಾಹುಡಗಳನ್ನು ಸಂಸ್ಕೃತ ಭಾಷೆಯಲ್ಲಿ ಪ್ರಾಭೃತವೆಂದು ಹೇಳುತ್ತಾರೆ ಮತ್ತು ಅವು ಪ್ರಾಕೃತಗಾಥಾಬದ್ಧವಿವೆ. ಕಾಲದೋಷದಿಂದ ಜೀವರುಗಳ ಬುದ್ಧಿಯು ಮಂದವಾಗುವುದರಿಂದ ಅವರು ಅರ್ಥ ತಿಳಿಯುವ ಸಾಧ್ಯತೆಯಿಲ್ಲ ; ಆದುದರಿಂದ ದೇಶಭಾಷಾಮಯ ವಚನಿಕೆಯಾದರೆ ಎಲ್ಲರೂ ಓದಬಹುದು ಮತ್ತು ಅರ್ಥ ತಿಳಿದುಕೊಂಡು ಅವರ ಶ್ರದ್ಧೆಯು ದೃಢವಾಗಬಹುದೆಂಬ ಪ್ರಯೋಜನದ ವಿಚಾರ ಮಾಡಿ ಈ ವಚನಿಕೆಯನ್ನು ಬರೆಯಲಾಗುತ್ತಿದೆ, ಅಲ್ಲದೆ ಬೇರೆ ಯಾವ ಖ್ಯಾತಿ, ದೊಡ್ಡಸ್ತಿಕೆ ಅಥವಾ ಲಾಭದ ಪ್ರಯೋಜನವಿಲ್ಲ. ಆದುದರಿಂದ ಎಲೈ ಭವ್ಯ ಜೀವರುಗಳೇ ! ಇದನ್ನು ಓದಿ ಅರ್ಥ ತಿಳಿದುಕೊಂಡು, ಚಿತ್ತದಲ್ಲಿ ಧಾರಣ ಮಾಡಿ ಯಥಾರ್ಥ ಮತದ ಬಾಹ್ಯಲಿಂಗ ಹಾಗೂ ತತ್ತ್ವಾರ್ಥದ ಶ್ರದ್ಧೆ ದೃಢಮಾಡಿಕೊಳ್ಳಬೇಕು. ಇದರಲ್ಲಿ ಒಂದಿಷ್ಟು ಬುದ್ಧಿಯ ಮಂದತೆಯಿಂದ ಹಾಗೂ ಪ್ರಮಾದವಶದಿಂದ ಅನ್ಯಥಾ ಅರ್ಥ ಬರೆದಿದ್ದರೆ ಅಧಿಕ ಬುದ್ಧಿವಂತರು ಮೂಲಗ್ರಂಥವನ್ನು ನೋಡಿ ಶುದ್ಧಮಾಡಿ ಓದಬೇಕು ಮತ್ತು ನನ್ನನ್ನು ಅಲ್ಪಬುದ್ಧಿಯವನೆಂದು ತಿಳಿದು ಕ್ಷಮಿಸಿಬಿಡಬೇಕು.

ಈಗ ಇಲ್ಲಿ ಮೊದಲು ದರ್ಶನಪಾಹುಡದ ವಚನಿಕೆಯನ್ನು ಬರೆಯಲಾಗುತ್ತದೆ.

ಮಿಥ್ಯಾಭಾವ ನಿವಾರಿಸಿ ಸಮ್ಯಗ್ದರ್ಶನ ಜ್ಞಾನ ಮಾಡಿಸುವ ।
ಅರಹಂತರಿಗೆ ಮನ ವಚನ ಕಾಯಗಳಿಂದ ನಮಿಸುವೆ ॥

ಈಗ ಗ್ರಂಥಕರ್ತೃಗಳಾದ ಭ. ಕುಂದಕುಂದಾಚಾರ್ಯದೇವರು ಗ್ರಂಥದ ಆರಂಭದಲ್ಲಿ ಗ್ರಂಥದ ಉತ್ಪತ್ತಿ ಮತ್ತು ಅದಕ್ಕೆ ಜ್ಞಾನದ ಕಾರಣರಾದ ಆ ಪರಂಪರೆಯ ಗುರುಪ್ರವಾಹಕ್ಕೆ ಮಂಗಲದ ಕಾರಣ ನಮಸ್ಕಾರ ಮಾಡುತ್ತಾರೆ, –

**ಕಾಊಣ ಣಮುಕ್ಕಾರಂ ಜಿಣವರವಸಹಸ್ಸ ವಡ್ಢಮಾಣಸ್ಸ ।**
**ದಂಸಣಮಗ್ಗಂ ವೋಚ್ಛಾಮಿ ಜಹಾಕಮ್ಮಂ ಸಮಾಸೇಣ ॥೧॥**

**ಕೃತ್ವಾ ನಮಸ್ಕಾರಂ ಜಿನವರವೃಷಭಸ್ಯ ವರ್ಧಮಾನಸ್ಯ ।**
**ದರ್ಶನಮಾರ್ಗಂ ವಕ್ಷ್ಯಾಮಿ ಯಥಾಕ್ರಮಂ ಸಮಾಸೇನ ॥೧॥**

ಅರ್ಥ :- ನಾನು ಜಿನವರ ವೃಷಭರಾದಂಥ ಆ ಪ್ರಥಮ ತೀರ್ಥಂಕರ ಶ್ರೀ ವೃಷಭದೇವ ಹಾಗೂ ಅಂತಿಮ ತೀರ್ಥಂಕರ ಶ್ರೀ ವರ್ಧಮಾನರಿಗೆ ನಮಸ್ಕಾರ ಮಾಡಿ ದರ್ಶನ ಎಂದರೆ ಮತದ ಯಾವ ಮಾರ್ಗವಿದೆ ಅದನ್ನು ಯಥಾನುಕ್ರಮದಿಂದ ಸಂಕ್ಷೇಪದಲ್ಲಿ ಹೇಳುವೆನು.

---

**ಪ್ರಥಮದಲಿ ನಮಿಸಿ ಜಿನವರ ಋಷಭನಿಗೆ ಶ್ರೀ ವರ್ಧಮಾನನಿಗೆ ।**
**ಯಥಾಕ್ರಮದಿ ಸಂಕ್ಷೇಪದಲಿ ಪೇಳುವೆನು ಆ ದರ್ಶನಮಾರ್ಗವನು ನಾನು ॥೧॥**

ಭಾವಾರ್ಥ :- ಇಲ್ಲಿ 'ಜಿನವರ ವೃಷಭ'ವೆಂಬ ವಿಶೇಷಣವಿದೆ ; ಅದರಲ್ಲಿರುವ ಜಿನ ಶಬ್ದದ ಅರ್ಥವು ಯಾವನು ಕರ್ಮಶತ್ರುವನ್ನು ಜಯಿಸಿದ್ದಾನೆ ಅವನು ಜಿನನಿದ್ದಾನೆ - ಎಂಬುದಾಗಿದೆ, ಅಲ್ಲಿ ಅವ್ರತಿ ಸಮ್ಯಗ್ದೃಷ್ಟಿಯಿಂದ ಹಿಡಿದು ಕರ್ಮದ ಗುಣಶ್ರೇಣಿರೂಪ ನಿರ್ಜರೆ ಮಾಡುವಂಥವರೆಲ್ಲರೂ ಜಿನರಿದ್ದಾರೆ, ಅವರಲ್ಲಿ ವರ ಎಂದರೆ ಶ್ರೇಷ್ಠರು. ಈ ಪ್ರಕಾರ ಗಣಧರ ಮೊದಲಾದ ಮುನಿಗಳನ್ನು ಜಿನವರರೆಂದು ಹೇಳಲಾಗುತ್ತದೆ ; ಅವರಲ್ಲಿ ವೃಷಭ ಎಂದರೆ ಮುಖ್ಯರಾದಂಥವರು ಭಗವಾನ ತೀರ್ಥಂಕರ ಪರಮದೇವರಿದ್ದಾರೆ. ಅವರುಗಳಲ್ಲಿ ಪ್ರಥಮರಂತೂ ಶ್ರೀ ಋಷಭದೇವರಾದರು ಮತ್ತು ಈ ಪಂಚಮಕಾಲದ ಪ್ರಾರಂಭ ಹಾಗೂ ಚತುರ್ಥಕಾಲದ ಕೊನೆಯಲ್ಲಿ ಅಂತಿಮ ತೀರ್ಥಂಕರರು ಶ್ರೀ ವರ್ಧಮಾನಸ್ವಾಮಿಗಳಾಗಿದ್ದಾರೆ. ಆ ಸಮಸ್ತ ತೀರ್ಥಂಕರರು ಜಿನವರ ವೃಷಭರಾಗಿದ್ದಾರೆ ಅವರಿಗೆ ನಮಸ್ಕಾರವಾಯಿತು. ಅಲ್ಲಿ 'ವರ್ಧಮಾನ'ವೆಂಬ ವಿಶೇಷಣವನ್ನು ಎಲ್ಲರಿಗಾಗಿ ಇದೆಯೆಂದು ತಿಳಿಯಬೇಕು ; ಏಕೆಂದರೆ ಎಲ್ಲರೂ ಅಂತರಂಗ ಹಾಗೂ ಬಾಹ್ಯಲಕ್ಷ್ಮಿಯಿಂದ ವರ್ಧಮಾನರಿದ್ದಾರೆ. ಅಥವಾ ಜಿನವರ ವೃಷಭ ಶಬ್ದದಿಂದಂತೂ ಆದಿ ತೀರ್ಥಂಕರ ಶ್ರೀ ಋಷಭದೇವರನ್ನು ಮತ್ತು ವರ್ಧಮಾನ ಶಬ್ದದಿಂದ ಅಂತಿಮ ತೀರ್ಥಂಕರರನ್ನು ತಿಳಿಯಬೇಕು. ಈ ಪ್ರಕಾರ ಆದಿ ಮತ್ತು ಅಂತಿಮ ತೀರ್ಥಂಕರರಿಗೆ ನಮಸ್ಕಾರ ಮಾಡುವುದರಿಂದ ಮಧ್ಯದ ತೀರ್ಥಂಕರರುಗಳಿಗೆ ಕೂಡ ಸಾಮರ್ಥ್ಯದಿಂದ ನಮಸ್ಕಾರವಾಯಿತೆಂದು ತಿಳಿಯಬೇಕು. ತೀರ್ಥಂಕರ ಸರ್ವಜ್ಞ ವೀತರಾಗರನ್ನಂತೂ ಪರಮಗುರುಗಳೆಂದು ಹೇಳುತ್ತಾರೆ ಮತ್ತು ಅವರುಗಳ ಪರಿಪಾಟಿಯಲ್ಲಿ ನಡೆದುಬರುತ್ತಿರುವ ಗೌತಮ ಮೊದಲಾದ ಮುನಿಗಳಿಗೆ ಜಿನವರವೆಂಬ ವಿಶೇಷಣವನ್ನಿತ್ತು ಅವರನ್ನು ಅಪರ ಗುರುಗಳೆಂದು ಹೇಳುತ್ತಾರೆ. ಈ ಪ್ರಕಾರ ಪರಾಪರ ಗುರುಗಳ ಪ್ರವಾಹವಿದೆಯೆಂದು ತಿಳಿಯಬೇಕು. ಅವರು ಶಾಸ್ತ್ರದ ಉತ್ಪತ್ತಿ ಹಾಗೂ ಜ್ಞಾನದ ಕಾರಣರಿದ್ದಾರೆ. ಅವರಿಗೆ ಗ್ರಂಥದ ಪ್ರಾರಂಭದಲ್ಲಿ ನಮಸ್ಕಾರ ಮಾಡಿದೆ.

ಧರ್ಮದ ಮೂಲವು ದರ್ಶನವಿರುವುದರಿಂದ ಆ ದರ್ಶನದಿಂದ ರಹಿತವಿರುವವರಿಗೆ ವಂದನೆ ಮಾಡಬಾರದೆಂದು ಈಗ ಹೇಳುತ್ತಾರೆ, -

**ದಂಸಣಮೂಲೋ ಧಮ್ಮೋ ಉವಇಟ್ಠೋ ಜಿಣವರೇಹಿಂ ಸಿಸ್ಸಾಣಂ ।**
**ತಂ ಸೋಊಣ ಸಕಣ್ಣೇ ದಂಸಣಹೀಣೋ ಣ ವಂದಿವ್ವೋ ॥೨॥**

**ದರ್ಶನಮೂಲೋ ಧರ್ಮಃ ಉಪದಿಷ್ಟಃ ಜಿನವರೈಃ ಶಿಷ್ಯಾಣಾಮ್ ।**
**ತಂ ಶ್ರುತ್ವಾ ಸ್ವಕರ್ಣೇ ದರ್ಶನಹೀನೋ ನ ವಂದಿತವ್ಯಃ ॥೨॥**

ಅರ್ಥ :- ಆ ಜಿನವರರುಗಳಾದ ಸರ್ವಜ್ಞ ದೇವರು ಆ ಗಣಧರ ಮೊದಲಾದ ಶಿಷ್ಯರಿಗೆ ದರ್ಶನವು ಮೂಲವಿರುವಂಥ ಧರ್ಮದ ಉಪದೇಶ ಕೊಟ್ಟಿದ್ದಾರೆ. ಯಾವ ಪ್ರಕಾರ ಮಂದಿರದ ಅಡಿಪಾಯ ಮತ್ತು ವೃಕ್ಷದ ತಳಹದಿಯು ಮೂಲವಿರುತ್ತದೆ, ಅದೇ ಪ್ರಕಾರ ಧರ್ಮದ ಮೂಲವು ದರ್ಶನವಿದೆ. ಆದುದರಿಂದ ಸಕರ್ಣ ಎಂದರೆ ಸತ್ಪುರುಷರೇ ! ಸರ್ವಜ್ಞರು ಹೇಳಿರುವ ಆ ದರ್ಶನಮೂಲರೂಪವಾದ ಧರ್ಮವನ್ನು ತಮ್ಮ ಕಿವಿಗಳಿಂದ ಕೇಳಿ ದರ್ಶನದಿಂದ ರಹಿತವಿರುವವರು ವಂದನೆಗೆಯೋಗ್ಯರಿಲ್ಲದಿರುವುದರಿಂದ ದರ್ಶನಹೀನರಿಗೆ ವಂದನೆ ಮಾಡಬೇಡಿರಿ. ದರ್ಶನವಿಲ್ಲದವರಿಗೆ ಧರ್ಮವು ಕೂಡ ಇಲ್ಲ ; ಏಕೆಂದರೆ ಮೂಲವಿಲ್ಲದ ವೃಕ್ಷಕ್ಕೆ ಸ್ಕಂಧ, ಶಾಖೆ, ಫಲ-ಪುಷ್ಪಾದಿಗಳು

---

**ಆ ಧರ್ಮ ದರ್ಶನಮೂಲೆಂದು ಉಪದೇಶಿಸಿಹರು ಶಿಷ್ಯರಿಗೆ ಜಿನವರರು ।**
**ಆ ಧರ್ಮ ನಿಜಕರ್ಣದಿಂಕೇಳ್ದು ದರ್ಶನಹೀನಂಗೆ ವಂದಿಪುದು ಯೋಗ್ಯವಿಲ್ಲ॥೨॥**

ಎಲ್ಲಿಂದ ಇರುವವು ? ಆದುದರಿಂದ ಧರ್ಮವಿಲ್ಲದವನಿಂದ ಧರ್ಮದ ಪ್ರಾಪ್ತಿಯಾಗುವ ಸಾಧ್ಯತೆಯಿಲ್ಲ. ಎಂದಮೇಲೆ ಧರ್ಮದ ನಿಮಿತ್ತದಿಂದ ಅವನ ವಂದನೆಯನ್ನು ಏತಕ್ಕಾಗಿ ಮಾಡುವುದು ?

ಈಗ ಇಲ್ಲಿ ಧರ್ಮದ ಹಾಗೂ ದರ್ಶನದ ಸ್ವರೂಪವನ್ನು ತಿಳಿಯಬೇಕು. ಆತ್ಮನ ಸ್ವರೂಪವನ್ನಂತೂ ಗ್ರಂಥಕಾರರೇ ಸಂಕ್ಷೇಪದಲ್ಲಿ ಮುಂದೆ ಹೇಳುವರು, ಆದಾಗ್ಯೂ ಕೆಲವು ಅನ್ಯ ಗ್ರಂಥಗಳ ಅನುಸಾರವಾಗಿ ಇಲ್ಲಿಯೂ ಕೊಡುತ್ತಲಿದ್ದೇವೆ. ಯಾವುದು ಆತ್ಮನನ್ನು ಸಂಸಾರದಿಂದ ಬಿಡುಗಡೆ ಮಾಡಿ ಸುಖಸ್ಥಾನದಲ್ಲಿ ಸ್ಥಾಪನೆ ಮಾಡುತ್ತದೆ ಅದು ಧರ್ಮವಿದೆ. ಮತ್ತು ದರ್ಶನ ಎಂದರೆ ನೋಡುವುದು. ಈ ಪ್ರಕಾರ ಧರ್ಮದ ಮೂರ್ತಿಯು ಗೋಚರಿಸುವುದು ಅದು ದರ್ಶನವಿದೆ; ಮತ್ತು ಪ್ರಸಿದ್ಧಿಯಲ್ಲಿ ಧರ್ಮದ ಗ್ರಹಣವಿರುವಂಥ ಮತವನ್ನು 'ದರ್ಶನ'ವೆಂದು ಹೇಳಿದೆ. ಲೋಕದಲ್ಲಿ ಧರ್ಮದ ಹಾಗೂ ದರ್ಶನದ ಮನ್ನಣೆಯು ಸಾಮಾನ್ಯ ರೂಪದಿಂದಂತೂ ಎಲ್ಲರಿಗೆ ಇದೆ, ಆದರೆ ಸರ್ವಜ್ಞರ ಹೊರತಾಗಿ ಯಥಾರ್ಥ ಸ್ವರೂಪವನ್ನು ತಿಳಿಯುವ ಸಾಧ್ಯತೆಯಿಲ್ಲ; ಆದಾಗ್ಯೂ ಛದ್ಮಸ್ಥ ಪ್ರಾಣಿಯು ತನ್ನ ಬುದ್ಧಿಯಿಂದ ಅನೇಕ ಸ್ವರೂಪಗಳ ಕಲ್ಪನೆ ಮಾಡಿ, ಅನ್ಯಥಾ ಸ್ವರೂಪ ಸ್ಥಾಪನೆ ಮಾಡಿ ಅವುಗಳ ಪ್ರವೃತ್ತಿ ಮಾಡುತ್ತಾರೆ. ಮತ್ತು ಜಿನಮತವು ಸರ್ವಜ್ಞರ ಪರಂಪರೆಯಿಂದ ಪ್ರವರ್ತಮಾನವಿರುವುದರಿಂದ ಇದರಲ್ಲಿ ಯಥಾರ್ಥ ಸ್ವರೂಪದ ಪ್ರರೂಪಣೆಯಿದೆ.

ಅಲ್ಲಿ ಧರ್ಮವನ್ನು ನಿಶ್ಚಯ ಮತ್ತು ವ್ಯವಹಾರವೆಂದು ಎರಡು ಪ್ರಕಾರದಿಂದ ಸಾಧಿಸಲಾಗಿದೆ. ಅದರ ಪ್ರರೂಪಣೆಯು ವಸ್ತುಸ್ವಭಾವ, ಉತ್ತಮ ಕ್ಷಮೆ ಮೊದಲಾದ ಹತ್ತು ಪ್ರಕಾರ, ಸಮ್ಯಗ್ದರ್ಶನ-ಜ್ಞಾನ-ಚಾರಿತ್ರರೂಪ ಮತ್ತು ಜೀವಗಳ ರಕ್ಷಾರೂಪವೆಂದು ನಾಲ್ಕು ಪ್ರಕಾರದಿಂದಿದೆ. ಅವನ್ನು ನಿಶ್ಚಯದಿಂದ ಸಿದ್ಧಮಾಡಹೋದರೆ ಎಲ್ಲವುಗಳಲ್ಲಿ ಒಂದೇ ರೂಪವಿದೆ. ಆದುದರಿಂದ ವಸ್ತುಸ್ವಭಾವದ ತಾತ್ಪರ್ಯವಂತೂ ಜೀವನಾಮಕ ವಸ್ತುವಿನ ಪರಮಾರ್ಥರೂಪ ದರ್ಶನ-ಜ್ಞಾನ-ಪರಿಣಾಮಮಯವಾದ ಚೇತನವಿದೆ, ಮತ್ತು ಆ ಚೇತನವು ಸಮಸ್ತ ವಿಕಾರಗಳಿಂದ ರಹಿತವಾಗಿ ಶುದ್ಧಸ್ವಭಾವರೂಪದಿಂದ ಪರಿಣಮಿತವಿರುವುದೇ ಜೀವದ ಧರ್ಮವಿದೆ. ಇನ್ನು ಉತ್ತಮಕ್ಷಮೆ ಮೊದಲಾದ ಹತ್ತುಪ್ರಕಾರ ಹೇಳುವ ತಾತ್ಪರ್ಯವು ಕೂಡ ಆತ್ಮನು ಕ್ರೋಧಾದಿ ಕಷಾಯಗಳ ರೂಪನಾಗದೆ ತನ್ನ ಸ್ವಭಾವದಲ್ಲಿ ಸ್ಥಿರವಿರುವುದೇ ಧರ್ಮವಿದೆ, ಇದು ಕೂಡ ಶುದ್ಧ ಚೇತನಾರೂಪವೇ ಆಯಿತು.

ದರ್ಶನ-ಜ್ಞಾನ-ಚಾರಿತ್ರವೆಂದು ಹೇಳುವ ತಾತ್ಪರ್ಯವು ಕೂಡ ಇವು ಮೂರು ಒಂದು ಜ್ಞಾನ ಚೇತನಾದ ಪರಿಣಾಮಗಳೇ ಇವೆ, ಅದೇ ಜ್ಞಾನಸ್ವಭಾವರೂಪ ಧರ್ಮವಿದೆ. ಇನ್ನು ಜೀವಗಳ ರಕ್ಷಣೆಯ ತಾತ್ಪರ್ಯವೆಂದರೆ ಜೀವವು ಕ್ರೋಧಾದಿ ಕಷಾಯಗಳ ವಶವಾಗಿ ತನ್ನ ಅಥವಾ ಪರದ ಪರ್ಯಾಯದ ವಿನಾಶ ರೂಪವಾದ ಮರಣ ಹಾಗೂ ದುಃಖ ಸಂಕ್ಲೇಶ ಪರಿಣಾಮಮಾಡದಂಥ ತನ್ನ ಸ್ವಭಾವವೇ ಧರ್ಮವಿದೆ. ಹೀಗೆ ಶುದ್ಧ ದ್ರವ್ಯಾರ್ಥಿಕರೂಪವಾದ ನಿಶ್ಚಯನಯದಿಂದ ಸಾಧಿಸಲಾದ ಧರ್ಮವು ಒಂದೇ ಪ್ರಕಾರದ್ದಿದೆ.

ವ್ಯವಹಾರನಯವು ಪರ್ಯಾಯಾಶ್ರಿತವಿರುವುದರಿಂದ ಭೇದರೂಪವಿದೆ, ವ್ಯವಹಾರನಯದಿಂದ ವಿಚಾರ ಮಾಡಿದರೆ ಜೀವದ ಪರ್ಯಾಯರೂಪವಾದ ಪರಿಣಾಮಗಳು ಅನೇಕ ಪ್ರಕಾರವಿರುವುದರಿಂದ ಧರ್ಮದ ವರ್ಣನೆಯನ್ನು ಕೂಡ ಅನೇಕ ಪ್ರಕಾರದಿಂದ ಮಾಡಿದೆ. ಅಲ್ಲಿ ೧) ಪ್ರಯೋಜನವಶದಿಂದ ಏಕದೇಶದ ಕಥನವನ್ನು ಸರ್ವದೇಶದಿಂದ ಮಾಡಹೋದರೆ ಅದು ವ್ಯವಹಾರವಿದೆ. ೨) ಅನ್ಯವಸ್ತುವಿನಲ್ಲಿ ಅನ್ಯದ ಆರೋಪವನ್ನು ಅನ್ಯದ ನಿಮಿತ್ತದಿಂದ ಮತ್ತು ಪ್ರಯೋಜನವಶದಿಂದ ಮಾಡಹೋದರೆ ಅದು ಕೂಡ ವ್ಯವಹಾರವಿದೆ, ಅಲ್ಲಿ ವಸ್ತು ಸ್ವಭಾವವೆಂದು ಹೇಳುವ ತಾತ್ಪರ್ಯವು ನಿರ್ವಿಕಾರ ಚೇತನಾದ ಶುದ್ಧ ಪರಿಣಾಮದ ಸಾಧಕರೂಪವಿದೆ. ೩) ಮಂದಕಷಾಯರೂಪವಾದ ಶುಭ-ಪರಿಣಾಮಗಳನ್ನು ಮತ್ತು ಆ ಬಾಹ್ಯ ಕ್ರಿಯೆಗಳೆಲ್ಲವುಗಳನ್ನು ವ್ಯವಹಾರಧರ್ಮದಲ್ಲಿ ಹೇಳಲಾಗುತ್ತದೆ. ಅದೇ

ಪ್ರಕಾರ ರತ್ನತ್ರಯದ ತಾತ್ಪರ್ಯಸ್ವರೂಪದ ಭೇದಗಳಾದ ದರ್ಶನ-ಜ್ಞಾನ-ಚಾರಿತ್ರ ಹಾಗೂ ಅವುಗಳ ಕಾರಣವಾದ ಬಾಹ್ಯ ಕ್ರಿಯಾದಿಗಳೆಲ್ಲವನ್ನು ವ್ಯವಹಾರಧರ್ಮವೆಂದು ಹೇಳಲಾಗುತ್ತದೆ. ೪) ಅದೇ ಪ್ರಕಾರ ಜೀವಗಳ ದಯೆಯೆಂದು ಹೇಳುವ ತಾತ್ಪರ್ಯವೇನೆಂದರೆ ಕ್ರೋಧಾದಿ ಮಂದಕಷಾಯವಿರುವುದರಿಂದ ತಮ್ಮ-ಪರದ ಮರಣ, ದುಃಖ, ಕ್ಲೇಶ ಮೊದಲಾದವುಗಳನ್ನು ಮಾಡದಿರುವುದು, [೧]ಅದರ ಸಾಧಕವಾದ ಸಮಸ್ತ ಬಾಹ್ಯ ಕ್ರಿಯಾದಿಗಳನ್ನು ಧರ್ಮವೆಂದು ಹೇಳಲಾಗುತ್ತದೆ. ಈ ಪ್ರಕಾರ ಜಿನಮತದಲ್ಲಿ ನಿಶ್ಚಯ-ವ್ಯವಹಾರನಯದಿಂದ ಸಾಧಿಸಲಾದ ಧರ್ಮವನ್ನು ಹೇಳಿದೆ.

ಅಲ್ಲಿ ಏಕಸ್ವರೂಪ ಅನೇಕಸ್ವರೂಪವೆಂದು ಹೇಳುವಲ್ಲಿ ಸ್ಯಾದ್ವಾದದಿಂದ ವಿರೋಧ ಬರುವುದಿಲ್ಲ, ಕಥಂಚಿತ್ ವಿವಕ್ಷೆಯಿಂದ ಎಲ್ಲವು ಪ್ರಮಾಣಸಿದ್ಧವಿದೆ. ಇಂಥ ಧರ್ಮದ ಮೂಲವನ್ನು ದರ್ಶನವೆಂದು ಹೇಳಿದೆ, ಆದುದರಿಂದ ಇಂಥ ಧರ್ಮದ ಶ್ರದ್ಧೆ, ಪ್ರತೀತಿ, ಅಭಿರುಚಿಯೊಡನೆ ಆಚರಣೆ ಮಾಡುವುದೇ ದರ್ಶನವಿದೆ, ಇದು ಧರ್ಮದ ಮೂರ್ತಿಯಿದೆ, ಇದನ್ನು ಮತ (ದರ್ಶನ)ವೆಂದು ಹೇಳುತ್ತಾರೆ ಮತ್ತು ಇದೇ ಧರ್ಮದ ಮೂಲವಿದೆ ಮೊದಲು ಇಂಥ ಧರ್ಮದ ಶ್ರದ್ಧೆ, ಪ್ರತೀತಿ, ಅಭಿರುಚಿಯಿಲ್ಲದಿದ್ದರೆ ಧರ್ಮದ ಆಚರಣೆಯು ಕೂಡ ಆಗುವುದಿಲ್ಲ. ಹೇಗೆಂದರೆ ವೃಕ್ಷಕ್ಕೆ ಮೂಲವಿಲ್ಲದಿದ್ದರೆ ಸ್ಕಂಧ ಮೊದಲಾದವುಗಳಿರುವುದಿಲ್ಲ. ಈ ಪ್ರಕಾರ ದರ್ಶನವನ್ನು ಧರ್ಮದ ಮೂಲವೆಂದು ಹೇಳುವುದು ಯುಕ್ತವಿದೆ. ಸಿದ್ಧಾಂತಗಳಲ್ಲಿ ಇಂಥ ದರ್ಶನದ ವರ್ಣನೆಯು ಹೇಗಿದೆ ಅದಕ್ಕನುಸಾರವಾಗಿ ಒಂದಿಷ್ಟು ಬರೆಯುತ್ತೇವೆ.

ಅಂತರಂಗದ ಸಮ್ಯಗ್ದರ್ಶನವಂತೂ ಜೀವದ ಭಾವವಿದ್ದು ಅದು ನಿಶ್ಚಯದಿಂದ ಉಪಾಧಿರಹಿತ ಶುದ್ಧ ಜೀವದ ಪ್ರತ್ಯಕ್ಷ ಅನುಭವವಾಗುವುದೆಂದು ಒಂದು ಪ್ರಕಾರವಿದೆ, ಆ ಇಂಥ ಅನುಭವವು ಅನಾದಿಕಾಲದಿಂದ ಮಿಥ್ಯಾದರ್ಶನ ನಾಮದ ಕರ್ಮದ ಉದಯದಿಂದ ಅನ್ಯಥಾ ಆಗುತ್ತಲಿದೆ. ಸಾದಿಮಿಥ್ಯಾದೃಷ್ಟಿಗೆ ಆ ಮಿಥ್ಯಾತ್ವದ ಮೂರು ಪ್ರಕೃತಿಗಳು ಎಂದರೆ ಮಿಥ್ಯಾತ್ವ, ಸಮ್ಯಗ್ಮಿಥ್ಯಾತ್ವ ಮತ್ತು ಸಮ್ಯಕ್‌ಪ್ರಕೃತಿ ಇವು ಸತ್ತಾದಲ್ಲಿ ಇರುತ್ತವೆ. ಮತ್ತು ಅವುಗಳ ಸಹಕಾರಿಗಳಾದ ಅನಂತಾನುಬಂಧಿಕ್ರೋಧ, ಮಾನ, ಮಾಯೆ, ಲೋಭದ ಭೇದದಿಂದ ನಾಲ್ಕು ಕಷಾಯ ನಾಮದ ಪ್ರಕೃತಿಗಳಿವೆ. ಈ ಪ್ರಕಾರ ಈ ಏಳು ಪ್ರಕೃತಿಗಳೇ ಸಮ್ಯಗ್ದರ್ಶನದ ಘಾತಮಾಡುವಂಥವುಗಳಿವೆ ; ಆದುದರಿಂದ ಈ ಏಳು ಉಪಶಮ-ವಾಗುವುದರಿಂದ ಮೊದಲು ಈ ಜೀವನಿಗೆ ಉಪಶಮಸಮ್ಯಕ್ತ್ವವಾಗುತ್ತದೆ. ಈ ಏಳು ಪ್ರಕೃತಿಗಳ ಉಪಶಮವಾಗುವ ಬಾಹ್ಯ ಕಾರಣಗಳೆಂದರೆ ಸಾಮಾನ್ಯವಾಗಿ ದ್ರವ್ಯ , ಕ್ಷೇತ್ರ , ಕಾಲ, ಭಾವಗಳಿವೆ, ಅವುಗಳಲ್ಲಿ ದ್ರವ್ಯದೊಳಗಂತೂ ಪ್ರತ್ಯಕ್ಷ ತೀರ್ಥಂಕರರನ್ನು ನೋಡುವುದು ಮೊದಲಾದವು ಮುಖ್ಯವಿವೆ, ಕ್ಷೇತ್ರದಲ್ಲಿ ಸಮವಸರಣಾದಿಗಳು ಮುಖ್ಯವಿವೆ, ಕಾಲದಲ್ಲಿ ಸಂಸಾರ ಭ್ರಮಣವು ಅರ್ಧಪುದ್ಗಲಪರಾವರ್ತನವು ಶೇಷ ಉಳಿದಿರುವುದಿದೆ ಮತ್ತು ಭಾವದಲ್ಲಿ ಅಧಃಪ್ರವೃತ್ತಿಕರಣ ಮೊದಲಾದವುಗಳಿವೆ.

ವಿಶೇಷರೂಪದಿಂದಂತೂ (ಸಮ್ಯಕ್ತ್ವದ ಬಾಹ್ಯ ಕಾರಣಗಳು) ಅನೇಕವಿವೆ. ಅವುಗಳಲ್ಲಿ ಕೆಲವರಿಗಂತೂ ಅರಹಂತರಬಿಂಬವನ್ನು ನೋಡುವುದು, ಕೆಲವರಿಗೆ ಜಿನೇಂದ್ರರ ಕಲ್ಯಾಣಿಕ ಮೊದಲಾದ ಮಹಿಮೆ ನೋಡುವುದು, ಕೆಲವರಿಗೆ ಜಾತಿಸ್ಮರಣ, ಕೆಲವರಿಗೆ ವೇದನದ ಅನುಭವ, ಕೆಲವರಿಗೆ ಧರ್ಮಶ್ರವಣ ಮತ್ತು ಕೆಲವರಿಗೆ ದೇವಗಳ ಋದ್ಧಿಯನ್ನು ನೋಡುವುದು ಇವೇ ಮೊದಲಾದ ಬಾಹ್ಯ ಕಾರಣಗಳಿಂದ ಮಿಥ್ಯಾತ್ವಕರ್ಮದ ಉಪಶಮವಾಗುವುದರಿಂದ ಉಪಶಮ ಸಮ್ಯಕ್ತ್ವವಾಗುತ್ತದೆ. ಇನ್ನು ಈ ಏಳು ಪ್ರಕೃತಿಗಳೊಳಗಿಂದ ಆರರ ಉಪಶಮ ಅಥವಾ ಕ್ಷಯವಾಗುವುದು ಮತ್ತು ಒಂದು ಸಮ್ಯಕ್ತ್ವಪ್ರಕೃತಿಯ ಉದಯವಿದ್ದಾಗ ಕ್ಷಯೋಪಶಮ ಸಮ್ಯಕ್ತ್ವವಾಗುತ್ತದೆ. ಈ ಪ್ರಕೃತಿಯ ಉದಯದಿಂದ ಕಿಂಚಿತ್

೧ ಸಾಧಕರೂಪ-ಸಹಚರ ಹೇತುರೂಪ ನಿಮಿತ್ತ ಮಾತ್ರ ; ಅಂತರಂಗದಲ್ಲಿ ಕಾರ್ಯವಾದರೆ ಬಾಹ್ಯದಲ್ಲಿನ ಈ ಪ್ರಕಾರಗಳನ್ನು ನಿಮಿತ್ತ ಕಾರಣವೆಂದು ಹೇಳಲಾಗುತ್ತದೆ.

ಅತಿಚಾರವು ತಗಲುತ್ತದೆ. ಮತ್ತು ಈ ಏಳು ಪ್ರಕೃತಿಗಳು ಸತ್ತಾದೊಳಗಿಂದ ನಾಶವಾದಾಗ ಕ್ಷಾಯಿಕಸಮ್ಯಕ್ತ್ವವಾಗುತ್ತದೆ.

ಈ ಪ್ರಕಾರ ಉಪಶಮಾದಿಗಳಾದ ಮೇಲೆ ಜೀವದ ಪರಿಣಾಮಭೇದದಿಂದ ಮೂರು ಪ್ರಕಾರಗಳಾಗುತ್ತವೆ; ಆ ಪರಿಣಾಮಗಳು ಅತ್ಯಂತ ಸೂಕ್ಷ್ಮವಿವೆ, ಕೇವಲಜ್ಞಾನಗಮ್ಯವಿವೆ, ಆದುದರಿಂದ ಈ ಪ್ರಕೃತಿಗಳ ದ್ರವ್ಯ-ಪುದ್ಗಲ ಪರಮಾಣುಗಳ ಸ್ಕಂಧಗಳಿವೆ ಅವು ಅತ್ಯಂತ ಸೂಕ್ಷ್ಮವಿವೆ ಮತ್ತು ಅವುಗಳಲ್ಲಿ ಫಲ ಕೊಡುವ ಶಕ್ತಿರೂಪವಾದ ಅನುಭಾಗವಿದೆ ಅದು ಅತಿಸೂಕ್ಷ್ಮವಿದೆ, ಅದು ಛದ್ಮಸ್ಥನ ಜ್ಞಾನಗಮ್ಯವಿಲ್ಲ ಮತ್ತು ಅವುಗಳ ಉಪಶಮಾದಿಗಳಾಗುವುದರಿಂದ ಜೀವದ ಪರಿಣಾಮಗಳು ಕೂಡ ಸಮ್ಯಕ್ತ್ವರೂಪವಾಗುತ್ತವೆ ಅವೂ ಅತಿ ಸೂಕ್ಷ್ಮವಿದ್ದು ಅವು ಕೂಡ ಕೇವಲಜ್ಞಾನಗಮ್ಯವಿವೆ. ಆದಾಗ್ಯೂ ಜೀವದ ಕೆಲವು ಪರಿಣಾಮಗಳು ಛದ್ಮಸ್ಥನ ಜ್ಞಾನದಲ್ಲಿ ಬರಲು ಯೋಗ್ಯವಿರುತ್ತವೆ, ಅವು ಅವನನ್ನು ಗುರುತಿಸುವುದಕ್ಕೆ ಬಾಹ್ಯ-ಚಿಹ್ನಗಳಿವೆ, ಅವುಗಳ ಪರೀಕ್ಷೆ ಮಾಡಿ ನಿಶ್ಚಯ ಮಾಡುವ ವ್ಯವಹಾರವಿದೆ; ಹೀಗಿಲ್ಲದಿದ್ದರೆ ಛದ್ಮಸ್ಥ ವ್ಯವಹಾರಿ ಜೀವಕ್ಕೆ ಸಮ್ಯಕ್ತ್ವದ ನಿಶ್ಚಯವಾಗಲಾರದು ಮತ್ತು ಆಗ ಅಸ್ತಿತ್ವದ ಅಭಾವವು ಸಿದ್ಧವಾಗುವುದು, ವ್ಯವಹಾರದ ಲೋಪವಾಗುವುದು – ಈ ಮಹಾನ್ ದೋಷವು ಬರುವುದು. ಆದುದರಿಂದ ಬಾಹ್ಯ ಚಿಹ್ನಗಳನ್ನು ಆಗಮ, ಅನುಮಾನ ಹಾಗೂ ಸ್ವಾನುಭವದಿಂದ ಪರೀಕ್ಷೆ ಮಾಡಿ ನಿಶ್ಚಯ ಮಾಡಬೇಕಾಗುವುದು.

ಆ ಚಿಹ್ನೆಗಳು ಯಾವವಿವೆ ಅವನ್ನು ಹೇಳುತ್ತಾರೆ. ಮುಖ್ಯ ಚಿಹ್ನವಂತೂ ಉಪಾಧಿರಹಿತ ಶುದ್ಧಜ್ಞಾನ ಚೇತನಾಸ್ವರೂಪನಾದ ಆತ್ಮನ ಅನುಭೂತಿಯಿದೆ. ಈ ಅನುಭೂತಿಯು ಜ್ಞಾನದ ವಿಶೇಷವಿದ್ದರೂ ಅದು ಸಮ್ಯಕ್ತ್ವವಾದಮೇಲೆ ಇರುವುದರಿಂದ ಅದನ್ನು ಬಾಹ್ಯ ಚಿಹ್ನವೆಂದು ಹೇಳುತ್ತಾರೆ. ಜ್ಞಾನವಂತೂ ತನ್ನಿಂದ ತನಗೆ ಸ್ವಸಂವೇದನರೂಪವಿದೆ. 'ಯಾವ ಈ ಶುದ್ಧ ಜ್ಞಾನವಿದೆ ಅದು ನಾನಿದ್ದೇನೆ ಮತ್ತು ಜ್ಞಾನದಲ್ಲಿ ಯಾವ ರಾಗಾದಿ ವಿಕಾರಗಳಿವೆ ಅವು ಕರ್ಮದ ನಿಮಿತ್ತದಿಂದ ಉತ್ಪನ್ನವಾಗುತ್ತವೆ, ಅದು ನನ್ನ ಸ್ವರೂಪವಿಲ್ಲ' ವೆಂದು ಅದರ-ರಾಗಾದಿ ವಿಕಾರಗಳಿಲ್ಲದ ಶುದ್ಧ ಜ್ಞಾನಮಾತ್ರದ ಆಸ್ವಾದವು ತನಗೆ ಆಗುತ್ತದೆ. ಈ ಪ್ರಕಾರ ಭೇದಜ್ಞಾನದಿಂದ ಜ್ಞಾನಮಾತ್ರದ ಆಸ್ವಾದನವನ್ನು ಜ್ಞಾನದ ಅನುಭೂತಿಯೆಂದು ಹೇಳುತ್ತಾರೆ, ಅದೇ ಆತ್ಮನ ಅನುಭೂತಿಯಿದೆ, ಮತ್ತು ಅದೇ ಶುದ್ಧನಯದ ವಿಷಯವಿದೆ. ಇಂಥ ಅನುಭೂತಿಯಿಂದ ಶುದ್ಧನಯದ ಮುಖಾಂತರ ಸರ್ವ ಕರ್ಮಜನಿತ ರಾಗಾದಿ ಭಾವಗಳಿಂದ ರಹಿತವಾದ ಅನಂತಚತುಷ್ಟಯವು ನನ್ನ ಸ್ವರೂಪವಿದೆ, ಉಳಿದೆಲ್ಲ ಭಾವಗಳು ಸಂಯೋಗಜನ್ಯ-ವಿವೆಯೆಂಬ ಶ್ರದ್ಧೆಯಾಗುತ್ತದೆ ; ಇಂಥ ಆತ್ಮನ ಅನುಭೂತಿಯು ಅದು ಸಮ್ಯಕ್ತ್ವದ ಮುಖ್ಯ ಚಿಹ್ನವಿದೆ. ಮಿಥ್ಯಾತ್ವ ಅನಂತಾನುಬಂಧಿಯ ಅಭಾವದಿಂದ ಸಮ್ಯಕ್ತ್ವವಾಗುತ್ತದೆ ಇದು ಅದರ ಚಿಹ್ನವಿದೆ ; ಆ ಚಿಹ್ನವನ್ನೇ ಸಮ್ಯಕ್ತ್ವವೆಂದು ಹೇಳುವುದು ಅದು ವ್ಯವಹಾರವಿದೆ.

ಅದರ ಪರೀಕ್ಷೆಯನ್ನು ಸರ್ವಜ್ಞರ ಆಗಮ, ಅನುಮಾನ ಹಾಗೂ ಸ್ವಾನುಭವ ಪ್ರತ್ಯಕ್ಷ ಪ್ರಮಾಣ ಈ ಪ್ರಮಾಣಗಳಿಂದ ಮಾಡಲಾಗುತ್ತದೆ. ಇದನ್ನು ನಿಶ್ಚಯ ತತ್ತ್ವಾರ್ಥಶ್ರದ್ಧಾನವೆಂದೂ ಹೇಳುತ್ತಾರೆ. ಅಲ್ಲಿ ತನ್ನ ಪರೀಕ್ಷೆಯಂತೂ ತನ್ನ ಸ್ವಸಂವೇದನದ ಮುಖ್ಯತೆಯಿಂದ ಆಗುತ್ತದೆ. ಮತ್ತು ಪರರ ಪರೀಕ್ಷೆಯಂತೂ ಪರರ ಅಂತರಂಗದಲ್ಲಿ ಆಗುವ ಪರೀಕ್ಷೆ ಪರರ ವಚನ, ಕಾಯದ ಕ್ರಿಯೆಯ ಪರೀಕ್ಷೆಯಿಂದ ಆಗುತ್ತದೆ ಇದು ವ್ಯವಹಾರವಿದೆ, ಪರಮಾರ್ಥವನ್ನು ಸರ್ವಜ್ಞರು ತಿಳಿಯುತ್ತಾರೆ. ವ್ಯವಹಾರೀ ಜೀವನಿಗೆ ಸರ್ವಜ್ಞರು ಕೂಡ ವ್ಯವಹಾರದ ಆಶ್ರಯದ್ದೇ ಉಪದೇಶ ಕೊಟ್ಟಿದ್ದಾರೆ.

[ಅನುಭೂತಿಯು ಜ್ಞಾನಗುಣದ ಪರ್ಯಾಯವಿದ್ದು ಅದು ಶ್ರದ್ಧಾಗುಣದಿಂದ ಭಿನ್ನವಿದೆ. ಆದುದರಿಂದ ಜ್ಞಾನದ ಮುಖಾಂತರ ಶ್ರದ್ಧೆಯ ನಿರ್ಣಯ ಮಾಡುವುದು ವ್ಯವಹಾರವಿದೆ, ಅದರ ಹೆಸರು ವ್ಯವಹಾರೀ ಜೀವನಿಗೆ ವ್ಯವಹಾರದ್ದೇ ಶರಣ ಎಂದರೆ ಅವಲಂಬನವೆಂದು ತಿಳಿಯುವುದು.]

ಸಮ್ಯಕ್ತ್ವವಂತೂ ಕೇವಲೀಗಮ್ಯವಿದೆ, ಆದುದರಿಂದ ತಮಗೆ ಸಮ್ಯಕ್ತ್ವವಿರುವುದರ ನಿಶ್ಚಯವಾಗುವುದಿಲ್ಲ, ಅದಕ್ಕಾಗಿ ತಮ್ಮನ್ನು ಸಮ್ಯಗ್ದೃಷ್ಟಿಯೆಂದು ಮನ್ನಿಸಿಕೊಳ್ಳುವ ಸಾಧ್ಯತೆಯಿಲ್ಲವೆಂದು ಅನೇಕ ಜನರು ಹೇಳುತ್ತಾರೆ. ಆದರೆ ಹೀಗೆ ಸರ್ವಥಾ ಏಕಾಂತದಿಂದ ಹೇಳುವುದಂತೂ ಮಿಥ್ಯಾದೃಷ್ಟಿಯಿದೆ; ಸರ್ವಥಾ ಹೀಗೆ ಹೇಳುವುದರಿಂದ ವ್ಯವಹಾರದ ಲೋಪವಾಗುವುದು, ಸಮಸ್ತ ಮುನಿ–ಶ್ರಾವಕರುಗಳ ಪ್ರವೃತ್ತಿಯು ಮಿಥ್ಯಾತ್ವರೂಪವಾಗಿ ಸಿದ್ಧವಾಗುವುದು, ಮತ್ತು ಎಲ್ಲರೂ ತಮ್ಮನ್ನು ಮಿಥ್ಯಾದೃಷ್ಟಿಗಳೆಂದು ಮನ್ನಿಸಿಕೊಂಡರೆ ವ್ಯವಹಾರವು ಎಲ್ಲಿ ಉಳಿಯುವುದು ? ಆದುದರಿಂದ ಪರೀಕ್ಷೆಯಾದ ನಂತರ ನಾನು ಮಿಥ್ಯಾದೃಷ್ಟಿಯೇ ಇದ್ದೇನೆಂಬ ಶ್ರದ್ಧೆಯನ್ನು ಇಡಬಾರದು. ಮಿಥ್ಯಾದೃಷ್ಟಿಯಂತೂ ಅನ್ಯಮತಿಗೆ ಹೇಳುತ್ತಾರೆ ಮತ್ತು ತಾವೂ ಅವನ ಸಮಾನವಾಗುವುದರಿಂದ ಸರ್ವಥಾ ಏಕಾಂತ ಪಕ್ಷವನ್ನು ಗ್ರಹಣ ಮಾಡಬಾರದು. ಮತ್ತು ತತ್ತ್ವಾರ್ಥ ಶ್ರದ್ಧೆಯಂತೂ ಬಾಹ್ಯಚಿಹ್ನವಿದೆ. ಜೀವ, ಅಜೀವ, ಆಸ್ರವ, ಬಂಧ, ಸಂವರ, ನಿರ್ಜರೆ ಮತ್ತು ಮೋಕ್ಷವೆಂದು ಏಳು ತತ್ತ್ವಾರ್ಥಗಳಿವೆ ; ಅವುಗಳಲ್ಲಿ ಪುಣ್ಯ ಮತ್ತು ಪಾಪವನ್ನು ಸೇರಿಸುವುದರಿಂದ ನವಪದಾರ್ಥಗಳಾಗುತ್ತವೆ, ಅವುಗಳ ಶ್ರದ್ಧೆ ಎಂದರೆ ಸನ್ಮುಖತೆಯು, ರುಚಿ ಎಂದರೆ ತದ್ರೂಪಭಾವ ಮಾಡುವುದು ಮತ್ತು ಪ್ರತೀತಿ ಎಂದರೆ ಸರ್ವಜ್ಞರು ಹೇಳಿರುವ ಹಾಗೆಯೇ ಅಂಗೀಕಾರ ಮಾಡುವುದು ಹಾಗೂ ಅವುಗಳ ಆಚರಣೆಯ ರೂಪವಾದ ಕ್ರಿಯೆಯಾಗುವುದು ಹೀಗೆ ಶ್ರದ್ಧಾದಿಗಳಾಗುವುದು ಅದು ಸಮ್ಯಕ್ತ್ವದ ಬಾಹ್ಯ ಚಿಹ್ನವಿದೆ.

ಅದರಂತೆ ಪ್ರಶಮ, ಸಂವೇಗ, ಅನುಕಂಪೆ, ಆಸ್ತಿಕ್ಯಗಳೂ ಸಮ್ಯಕ್ತ್ವದ ಬಾಹ್ಯ ಚಿಹ್ನಗಳಿವೆ.

೧) ಪ್ರಶಮ :– ಅನಂತಾನುಬಂಧಿ ಕ್ರೋಧಾದಿ ಕಷಾಯಗಳ ಉದಯದ ಅಭಾವವು ಅದು ಪ್ರಶಮವಿದೆ. ಅದರ ಬಾಹ್ಯ ಚಿಹ್ನವೆಂದರೆ ಸರ್ವಥಾ ಏಕಾಂತ ತತ್ತ್ವಾರ್ಥದ ಕಥನ ಮಾಡುವಂಥ ಅನ್ಯ ಮತಗಳ ಶ್ರದ್ಧೆ, ಬಾಹ್ಯವೇಷದಲ್ಲಿ ಸತ್ಯಾರ್ಥತನದ ಅಭಿಮಾನ ಮಾಡುವುದು, ಏಕಾಂತದ ಕಾರಣ ಪರ್ಯಾಯಗಳಲ್ಲಿ ಆತ್ಮ ಬುದ್ಧಿಯಿಂದ ಅಭಿಮಾನ ಹಾಗೂ ಪ್ರೀತಿ ಮಾಡುವುದು ಅದು ಅನಂತಾನುಬಂಧಿಯ ಕಾರ್ಯವಿದೆ ಅದು ಇಲ್ಲದವನು, ಮತ್ತು ಯಾವನೋ ತನಗೆ ಕೆಡಕು ಮಾಡಿದ್ದರೆ ಅವನ ಘಾತ ಮಾಡುವುದು ಮೊದಲಾದ ವಿಕಾರ ಬುದ್ಧಿಯು ಮಿಥ್ಯಾದೃಷ್ಟಿಯ ಹಾಗೆ ತಮಗೆ ಉತ್ಪನ್ನವಾಗದವನು, ಹಾಗೂ ನಾನು ನನ್ನ ಪರಿಣಾಮಗಳಿಂದ ಕಟ್ಟಲ್ಪಟ್ಟಂಥ ಕರ್ಮಗಳೇ ನನಗೆ ಕೆಡಕು ಮಾಡುವಂಥವುಗಳಿವೆ ಅನ್ಯರಂತೂ ನಿಮಿತ್ತ ಮಾತ್ರರಿದ್ದಾರೆಂಬ ಬುದ್ಧಿಯು ತಮಗೆ ಉತ್ಪನ್ನವಾಗಿರುವಂಥ ಮಂದಕಷಾಯಿಯಿದ್ದಾನೆ ಮತ್ತು ಅನಂತಾನುಬಂಧಿಯ ಹೊರತಾಗಿ ಅನ್ಯ ಚಾರಿತ್ರಮೋಹದ ಪ್ರಕೃತಿಗಳ ಉದಯದಿಂದ ಆರಂಭಾದಿ ಕ್ರಿಯೆಗಳಲ್ಲಿ ಹಿಂಸಾದಿಗಳಾಗುತ್ತವೆ ಅವನ್ನು ಕೂಡ ಒಳ್ಳೆಯವೆಂದು ತಿಳಿಯುವುದಿಲ್ಲ, ಅದಕ್ಕಾಗಿ ಅವನಿಂದ ಪ್ರಶಮದ ಅಭಾವವನ್ನು ಹೇಳುವುದಿಲ್ಲ.

೨) ಸಂವೇಗ :– ಧರ್ಮದಲ್ಲಿ ಮತ್ತು ಧರ್ಮದ ಫಲದಲ್ಲಿ ಪರಮ ಉತ್ಸಾಹವಿರುವುದು ಅದು ಸಂವೇಗವಿದೆ. ಮತ್ತು ಸಾಧರ್ಮಿಗಳಲ್ಲಿ ಅನುರಾಗ ಹಾಗೂ ಪರಮೇಷ್ಠಿಗಳಲ್ಲಿ ಪ್ರೀತಿಯು ಅದು ಕೂಡ ಸಂವೇಗವೇ ಇದೆ. ಈ ಧರ್ಮದಲ್ಲಿ ಹಾಗೂ ಧರ್ಮದ ಫಲದಲ್ಲಿ ಅನುರಾಗದ ಅಭಿಲಾಷೆಯನ್ನು ಮಾಡಬಾರದು, ಏಕೆಂದರೆ ಇಂದ್ರಿಯ ವಿಷಯಗಳ ಇಚ್ಛೆಯಿರುವುದಕ್ಕೆ ಅಭಿಲಾಷೆಯೆಂದು ಹೇಳುತ್ತಾರೆ. ತಮ್ಮ ಸ್ವಭಾವದ ಪ್ರಾಪ್ತಿಯಲ್ಲಿರುವ ಅನುರಾಗವನ್ನು ಅಭಿಲಾಷೆಯೆಂದು ಹೇಳುವುದಿಲ್ಲ.

೩) ನಿರ್ವೇದ :- ಈ ಸಂವೇಗದಲ್ಲಿಯೇ ನಿರ್ವೇದ ಕೂಡ ಆಯಿತೆಂದು ತಿಳಿಯಬೇಕು. ಏಕೆಂದರೆ ತಮ್ಮ ಸ್ವಸ್ವರೂಪ ಧರ್ಮದ ಪ್ರಾಪ್ತಿಯಲ್ಲಿ ಅನುರಾಗವಾದಾಗ ಇತರೆಡೆಯ ಎಲ್ಲ ಅಭಿಲಾಷೆಯ ತ್ಯಾಗವಾಗುವುದು, ಎಲ್ಲ ಪರದ್ರವ್ಯಗಳಿಂದ ವೈರಾಗ್ಯವಾಗುವುದು, ಅದೇ ನಿರ್ವೇದವಿದೆ.

೪) ಅನುಕಂಪೆ :- ಸಮಸ್ತ ಪ್ರಾಣಿಗಳಲ್ಲಿ ಉಪಕಾರದ ಬುದ್ಧಿ ಮತ್ತು ಮೈತ್ರೀಭಾವವು ಅದು ಅನುಕಂಪೆಯಿದೆ. ಮತ್ತು ಮಧ್ಯಸ್ಥಭಾವವಿರುವುದರಿಂದ ಸಮ್ಯಗ್ದೃಷ್ಟಿಗೆ ಶಲ್ಯವಿರುವುದಿಲ್ಲ, ಯಾರೊಡನೆ ವೈರಭಾವವಿರುವುದಿಲ್ಲ, ಸುಖ-ದುಃಖ, ಜೀವನ-ಮರಣಗಳನ್ನು ತನ್ನದು ಪರರಿಂದ ಮತ್ತು ಪರರದು ತನ್ನಿಂದೆಂದು ಮನ್ನಿಸುವುದಿಲ್ಲ. ಮತ್ತು ಪರರಲ್ಲಿ ಯಾವ ಅನುಕಂಪೆಯಿದೆ ಅದು ತನ್ನಲ್ಲಿಯೂ ಇರುವುದರಿಂದ ಪರರ ಕೆಡಕು ಮಾಡುವ ವಿಚಾರ ಮಾಡಿದರೆ ತನ್ನ ಕಷಾಯಭಾವದಿಂದ ಸ್ವಯಂ ತನ್ನದೇ ಕೆಡಕಾಗುವುದು; ಪರರ ಕೆಡಕು ವಿಚಾರಿಸದಿದ್ದಾಗ ತನಗೆ ಕಷಾಯಭಾವವಾಗದಿರುವುದರಿಂದ ತನಗೆ ಅನುಕಂಪೆಯೇ ಉಳಿಯಿತು.

೫) ಆಸ್ತಿಕ್ಯ :- ಜೀವ ಮೊದಲಾದ ಪದಾರ್ಥಗಳಲ್ಲಿ ಅಸ್ತಿತ್ವಭಾವವು ಅದು ಆಸ್ತಿಕ್ಯಭಾವವಿದೆ. ಜೀವಾದಿ ಪದಾರ್ಥಗಳ ಸ್ವರೂಪವನ್ನು ಸರ್ವಜ್ಞರ ಆಗಮದಿಂದ ತಿಳಿದುಕೊಂಡು ಅವುಗಳಲ್ಲಿ ಸರ್ವಜ್ಞರು ಹೇಳಿರುವಂತೆಯೇ ಇವು ಇವೆ ಅನ್ಯಥಾ ಇಲ್ಲವೆಂಬ ಬುದ್ಧಿಯಿರುವುದು ಅದು ಆಸ್ತಿಕ್ಯಭಾವವಿದೆ. ಈ ಪ್ರಕಾರವಾಗಿ ಇವು ಸಮ್ಯಕ್ತ್ವದ ಬಾಹ್ಯ ಚಿಹ್ನಗಳಿವೆ.

ಸಂವೇಗ, ನಿರ್ವೇದ, ನಿಂದೆ, ಗರ್ಹೆ, ಉಪಶಮ, ಭಕ್ತಿ, ವಾತ್ಸಲ್ಯ ಮತ್ತು ಅನುಕಂಪೆ ಇವು ಸಮ್ಯಕ್ತ್ವದ ಎಂಟು ಗುಣಗಳಿವೆ. ಇವೆಲ್ಲವು ಪ್ರಶಮ ಮೊದಲಾದ ನಾಲ್ಕರಲ್ಲಿಯೇ ಬಂದುಬಿಡುತ್ತವೆ. ಸಂವೇಗದಲ್ಲಿ ನಿರ್ವೇದ, ವಾತ್ಸಲ್ಯ ಮತ್ತು ಭಕ್ತಿ ಇವು ಬಂದು ಬಿಟ್ಟವು ಇನ್ನು ಪ್ರಶಮದಲ್ಲಿ ನಿಂದೆ, ಗರ್ಹೆ ಬಂದುಬಿಟ್ಟವು.

ಸಮ್ಯಗ್ದರ್ಶನದ ಎಂಟು ಅಂಗಗಳನ್ನು ಹೇಳಿದ್ದಾರೆ. ಅವನ್ನು ಲಕ್ಷಣವೆಂದೂ ಹೇಳುತ್ತಾರೆ ಮತ್ತು ಗುಣವೆಂದೂ ಹೇಳುತ್ತಾರೆ. ಅವುಗಳ ಹೆಸರು ನಿಃಶಂಕಿತ, ನಿಃಕಾಂಕ್ಷಿತ, ನಿರ್ವಿಚಿಕಿತ್ಸೆ, ಅಮೂಢದೃಷ್ಟಿ, ಉಪಗೂಹನ, ಸ್ಥಿತಿಕರಣ, ವಾತ್ಸಲ್ಯ ಮತ್ತು ಪ್ರಭಾವನೆಯೆಂದಿವೆ.

ಅಲ್ಲಿ ಶಂಕೆಯೆಂಬ ಹೆಸರು ಸಂಶಯದ್ದೂ ಇದೆ ಮತ್ತು ಭಯದ್ದು ಕೂಡ ಇದೆ. ಧರ್ಮದ್ರವ್ಯ, ಅಧರ್ಮ ದ್ರವ್ಯ, ಕಾಲದ್ರವ್ಯ, ಪರಮಾಣು ಇತ್ಯಾದಿಗಳಂತೂ ಸೂಕ್ಷ್ಮ ವಸ್ತುಗಳಿವೆ, ಅದರಂತೆ ದ್ವೀಪ, ಸಮುದ್ರ, ಮೇರುಪರ್ವತ ಮೊದಲಾದವು ದೂರವರ್ತಿಯಾದ ಪದಾರ್ಥಗಳಿವೆ, ಮತ್ತು ತೀರ್ಥಂಕರ, ಚಕ್ರವರ್ತಿ ಮೊದಲಾದವರು ಅಂತರಿತ ಪದಾರ್ಥಗಳಿದ್ದಾರೆ; ಅವರು ಸರ್ವಜ್ಞರ ಆಗಮದಲ್ಲಿ ಹೇಗೆ ಹೇಳಿದ್ದಾರೆ ಹಾಗೆ ಇದ್ದಾರೆಯೋ ಅಥವಾ ಇಲ್ಲವೋ? ಇಲ್ಲವೆ ಸರ್ವಜ್ಞದೇವರು ವಸ್ತುವಿನ ಸ್ವರೂಪವನ್ನು ಅನೇಕಾಂತಾತ್ಮಕವೆಂದು ಹೇಳಿದ್ದಾರೆ ಅದು ಸತ್ಯವಿದೆಯೋ ಅಥವಾ ಅಸತ್ಯವಿದೆಯೋ ? – ಎಂಬ ಸಂದೇಹವನ್ನು ಶಂಕೆಯೆಂದು ಹೇಳುತ್ತಾರೆ. ಯಾವನಿಗೆ ಇದು ಇರುವುದಿಲ್ಲ ಅದನ್ನು ನಿಃಶಂಕಿತ ಅಂಗವೆಂದು ಹೇಳುತ್ತಾರೆ. ಮತ್ತು ಯಾವ ಈ ಶಂಕೆ ಇರುತ್ತದೆ ಅದು ಮಿಥ್ಯಾತ್ವಕರ್ಮದ ಉದಯದಿಂದ (ಉದಯದಲ್ಲಿ ಯುಕ್ತವಿರುವುದರಿಂದ) ಇರುತ್ತದೆ ; ಪರದಲ್ಲಿ ಆತ್ಮಬುದ್ಧಿಯಾಗುವುದು ಅದು ಅದರ ಕಾರ್ಯವಿದೆ. ಪರದಲ್ಲಿ ಆತ್ಮಬುದ್ಧಿಯಿರುವುದು ಅದು ಪರ್ಯಾಯಬುದ್ಧಿಯಿದೆ ಮತ್ತು ಪರ್ಯಾಯಬುದ್ಧಿಯು ಭಯವನ್ನೂ ಉತ್ಪನ್ನ ಮಾಡುತ್ತದೆ. ಭಯವನ್ನೇ ಶಂಕೆಯೆಂದು ಹೇಳುತ್ತಾರೆ. ಇದರಲ್ಲಿ ಇಹಲೋಕಭಯ, ಪರಲೋಕಭಯ, ಮರಣಭಯ, ಅರಕ್ಷಾಭಯ, ಅಗುಪ್ತಿಯಭಯ, ವೇದನಾಭಯ ಮತ್ತು ಆಕಸ್ಮಾತ್ ಭಯವೆಂದು ಏಳು ಭೇದಗಳಿವೆ. ಯಾವನಿಗೆ ಈ ಭಯಗಳಿವೆ ಅವನಿಗೆ ಮಿಥ್ಯಾತ್ವಕರ್ಮದ ಉದಯವಿದೆಯೆಂದು ತಿಳಿಯಬೇಕು ; ಸಮ್ಯಗ್ದೃಷ್ಟಿಯಾದ ಮೇಲೆ ಈ ಭಯಗಳಿರುವುದಿಲ್ಲ.

ಪ್ರಶ್ನೆ ಃ- ಭಯ ಪ್ರಕೃತಿಯ ಉದಯವಂತೂ ಎಂಟನೆಯ ಗುಣಸ್ಥಾನದವರೆಗಿದೆ; ಅದರ ನಿಮಿತ್ತದಿಂದ ಸಮ್ಯಗ್ದೃಷ್ಟಿಗೆ ಭಯವಿದ್ದೇ ಇರುತ್ತದೆ, ಎಂದಮೇಲೆ ಭಯದ ಅಭಾವ ಹೇಗೆ ?

ಉತ್ತರ ಃ- ಸಮ್ಯಗ್ದೃಷ್ಟಿಗೆ ಚಾರಿತ್ರಮೋಹದ ಭೇದರೂಪವಾದ ಭಯ ಪ್ರಕೃತಿಯ ಉದಯದಿಂದ ಭಯವಾಗುತ್ತಿದ್ದರೂ ಅವನನ್ನು ನಿರ್ಭಯನೆಂದೇ ಹೇಳುತ್ತಾರೆ, ಏಕೆಂದರೆ ಅವನಿಗೆ ಕರ್ಮದ ಉದಯದ ಸ್ವಾಮಿತ್ವವಿರುವುದಿಲ್ಲ ಮತ್ತು ಪರದ್ರವ್ಯದ ಕಾರಣದಿಂದ ತನ್ನ ಸ್ವದ್ರವ್ಯದ ಸ್ವಭಾವದ ನಾಶವನ್ನು ಮನ್ನಿಸುವುದಿಲ್ಲ. ಪರ್ಯಾಯದ ಸ್ವಭಾವವನ್ನು ವಿನಾಶಶೀಲವೆಂದು ಮನ್ನಿಸುತ್ತಿರುವುದರಿಂದ ಭಯವಿದ್ದರೂ ಕೂಡ ಅದನ್ನು ನಿರ್ಭಯವೆಂದೇ ಹೇಳುತ್ತಾರೆ. ಭಯವಿದ್ದಮೇಲೆ ಅದರ ಉಪಚಾರವೆಂದು ಓಡಿಹೋಗುವುದು ಇತ್ಯಾದಿಗಳನ್ನು ಮಾಡುತ್ತಾನೆ; ಅಲ್ಲಿ ವರ್ತಮಾನದ ಪೀಡೆಯು ಸಹನವಾಗದಿರುವುದರಿಂದ ಅವನು ಉಪಚಾರ ಮಾಡುತ್ತಾನೆ ಅದು ನಿರ್ಬಲತೆಯ ದೋಷವಿದೆ. ಈ ಪ್ರಕಾರ ಸಮ್ಯಗ್ದೃಷ್ಟಿಯು ಸಂದೇಹ ಹಾಗೂ ಭಯರಹಿತನಿರುವುದರಿಂದ ಅವನಿಗೆ ನಿಃಶಂಕಿತ ಅಂಗವಿರುತ್ತದೆ.

ಕಾಂಕ್ಷೆ ಎಂದರೆ ಭೋಗಗಳ ಇಚ್ಛೆ ಅಥವಾ ಅಭಿಲಾಷೆಯು, ಪೂರ್ವಕಾಲದಲ್ಲಿ ಭೋಗಿಸಿದ ಭೋಗಗಳ ಇಚ್ಛೆ ಹಾಗೂ ಆ ಭೋಗಗಳ ಮುಖ್ಯ ಕ್ರಿಯೆಯಲ್ಲಿ ಇಚ್ಛೆ ಮತ್ತು ಕರ್ಮ ಹಾಗೂ ಕರ್ಮದ ಫಲದ ಇಚ್ಛೆ ಮತ್ತು ಮಿಥ್ಯಾ ದೃಷ್ಟಿಗಳಿಗೆ ಭೋಗಗಳ ಪ್ರಾಪ್ತಿಯಾಗಿರುವುದನ್ನು ನೋಡಿ ಅವನ್ನು ತಮ್ಮ ಮನಸ್ಸಿನೊಳಗೆ ಒಳ್ಳೆಯವೆಂದು ತಿಳಿಯುವುದು ಅಥವಾ ಇಂದ್ರಿಯಗಳಿಗೆ ರುಚಿಸದಂಥ ವಿಷಯಗಳಲ್ಲಿ ಉದ್ವೇಗಗೊಳ್ಳುವುದು ಇವು ಭೋಗಾಭಿಲಾಷೆಯ ಚಿಹ್ನಗಳಿವೆ. ಈ ಭೋಗಾಭಿಲಾಷೆಯು ಮಿಥ್ಯಾತ್ವಕರ್ಮದ ಉದಯದಿಂದ ಆಗುತ್ತದೆ, ಮತ್ತು ಇದು ಇಲ್ಲದವನು ನಿಃಕಾಂಕ್ಷಿತ ಅಂಗಯುಕ್ತನಾದ ಸಮ್ಯಗ್ದೃಷ್ಟಿಯಿರುತ್ತಾನೆ. ಆ ಸಮ್ಯಗ್ದೃಷ್ಟಿಯು ಶುಭಕ್ರಿಯೆ-ವ್ರತಾದಿಗಳ ಆಚರಣೆ ಮಾಡುತ್ತಾನೆ ಮತ್ತು ಅದರ ಫಲವು ಶುಭಕರ್ಮ ಬಂಧವಿದೆ, ಆದರೆ ಅವನಿಗೆ ಅದರ ಇಚ್ಛೆಯಿರುವುದಿಲ್ಲ. ವ್ರತಾದಿಗಳನ್ನು ಸ್ವರೂಪದ ಸಾಧನವೆಂದು ತಿಳಿದುಕೊಂಡು ಅವುಗಳ ಆಚರಣೆ ಮಾಡುತ್ತಾನೆ. ಕರ್ಮದ ಫಲದ ಇಚ್ಛೆ ಮಾಡುವುದಿಲ್ಲ, ಹೀಗೆ ನಿಃಕಾಂಕ್ಷಿತ ಅಂಗವಿದೆ.

ತಮ್ಮಲ್ಲಿ ತಮ್ಮ ಗುಣದ ದೊಡ್ಡಸ್ತಿಕೆಯ ಬುದ್ಧಿಯಿಂದ ತಮ್ಮನ್ನು ಶ್ರೇಷ್ಠವೆಂದು ಮನ್ನಿಸಿ ಪರದಲ್ಲಿ ಹೀನತೆಯ ಬುದ್ಧಿಯಿರುವುದು ಅದನ್ನು ವಿಚಿಕಿತ್ಸೆಯೆಂದು ಹೇಳುತ್ತಾರೆ; ಅದು ಯಾವನಿಗೆ ಇರುವುದಿಲ್ಲ ಅವನು ನಿರ್ವಿಚಿಕಿತ್ಸೆ ಅಂಗಯುಕ್ತನಾದ ಸಮ್ಯಗ್ದೃಷ್ಟಿಯಿರುತ್ತಾನೆ. ಅವನ ಚಿಹ್ನಗಳು ಹೇಗಿರುತ್ತವೆಯೆಂದರೆ ಯಾವನೋ ಓರ್ವ ಪುರುಷನು ಪಾಪದ ಉದಯದಿಂದ ದುಃಖಿಯಾಗಿರುವುದು, ಅಸಾತಾದ ಉದಯದಿಂದ ಗ್ಲಾನಿಯುಕ್ತವಾದ ಶರೀರವಾಗಿದ್ದರೆ ಅದರಲ್ಲಿ ಗ್ಲಾನಿಯ ಬುದ್ಧಿ ಮಾಡುವುದಿಲ್ಲ. ನಾನು ಸಂಪತ್ತುಳ್ಳವನಿದ್ದೇನೆ, ಸುಂದರ ಶರೀರವುಳ್ಳವನಿದ್ದೇನೆ, ಇವನು ದೀನನಿದ್ದಾನೆ, ದರಿದ್ರನಿದ್ದಾನೆ ನನ್ನ ಸರಿದೊರೆಯಾಗಿ ಮಾಡುವ ಸಾಧ್ಯತೆಯಿಲ್ಲವೆಂಬ ಬುದ್ಧಿ ಮಾಡುವುದಿಲ್ಲ, ಪ್ರತಿಯಾಗಿ ಪ್ರಾಣಿಗಳಿಗೆ ಕರ್ಮೋದಯದಿಂದ ಅನೇಕ ವಿಚಿತ್ರ ಅವಸ್ಥೆಗಳಾಗುತ್ತವೆ ; ಒಂದುವೇಳೆ ನನಗೇ ಇಂಥ ಕರ್ಮದ ಉದಯವು ಬಂದುಬಿಟ್ಟರೆ ನಾನು ಕೂಡ ಹೀಗೇ ಆಗಿಹೋಗುವೆನೆಂಬ ವಿಚಾರ ಮಾಡುತ್ತಾನೆ, ಇಂಥ ವಿಚಾರದಿಂದ ನಿರ್ವಿಚಿಕಿತ್ಸೆ ಅಂಗವಿರುತ್ತದೆ.

ಅತತ್ತ್ವದಲ್ಲಿ ತತ್ತ್ವತನದ ಶ್ರದ್ಧೆಯು ಅದು ಮೂಢದೃಷ್ಟಿಯಿದೆ. ಇಂಥ ಮೂಢದೃಷ್ಟಿಯು ಯಾವನಿಗೆ ಇರುವುದಿಲ್ಲ ಅವನು ಅಮೂಢದೃಷ್ಟಿಯಿದ್ದಾನೆ, ಮಿಥ್ಯಾದೃಷ್ಟಿಗಳ ಮುಖಾಂತರ ಮಿಥ್ಯಾಹೇತು ಹಾಗೂ ಮಿಥ್ಯಾದೃಷ್ಟಾಂತಗಳಿಂದ ಸಾಧಿಸಲ್ಪಟ್ಟ ಪದಾರ್ಥಗಳಿವೆ ಅವು ಸಮ್ಯಗ್ದೃಷ್ಟಿಗೆ ಪ್ರೀತಿಯನ್ನು ಉತ್ಪನ್ನ ಮಾಡಿಸುವುದಿಲ್ಲ ಮತ್ತು ಲೌಕಿಕ ರೂಢಿಗಳು ಅನೇಕ ಪ್ರಕಾರದವುಗಳಿದ್ದು ಅವು ನಿಃಸಾರವಿವೆ, ನಿಃಸಾರ ಪುರುಷರಿಂದಲೇ ಅವುಗಳ

ಆಚರಣೆಯಾಗುತ್ತದೆ, ಯಾವವು ಅನಿಷ್ಟ ಫಲ ಕೊಡುವಂಥವುಗಳಿವೆ ಹಾಗೂ ನಿಷ್ಫಲವಿವೆ ಅವುಗಳ ಫಲವು ಕೆಡಕೇ ಇದೆ ಮತ್ತು ಅವುಗಳದ್ದು ಯಾವ ಹೇತುವಿಲ್ಲ, ಯಾವ ಅರ್ಥವಿಲ್ಲ; ಯಾವ ಕೆಲವು ಲೋಕರೂಢಿಗಳು ನಡೆದುಬರುತ್ತವೆ ಅವನ್ನು ಜನರು ಸ್ವೀಕಾರ ಮಾಡುತ್ತಾರೆ ಮತ್ತೆ ಪುನಃ ಅವನ್ನು ಬಿಟ್ಟುಕೊಡುವುದು ಕಠಿಣವಾಗಿ ಹೋಗುತ್ತದೆ. ಇವೇ ಮೊದಲಾದ ಲೋಕರೂಢಿಗಳಿವೆ.

ಅದೇವರಲ್ಲಿ ದೇವಬುದ್ಧಿ, ಅಧರ್ಮದಲ್ಲಿ ಧರ್ಮಬುದ್ಧಿ ಅಗುರುವಿನಲ್ಲಿ ಗುರುಬುದ್ಧಿ ಇತ್ಯಾದಿಗಳು ದೇವ ಮೂಢತೆಯಿದ್ದು ಅವು ಕಲ್ಯಾಣಕಾರಿಯಾಗಿಲ್ಲ. ಸದೋಷ ದೇವರನ್ನು ದೇವರೆಂದು ಮನ್ನಿಸುವುದು ಹಾಗೂ ಅವರ ನಿಮಿತ್ತವಾಗಿ ಹಿಂಸಾದಿಗಳಿಂದ ಅಧರ್ಮವನ್ನು ಧರ್ಮವೆಂದು ಮನ್ನಿಸುವುದು ಮತ್ತು ಮಿಥ್ಯಾ ಆಚಾರವುಳ್ಳ, ಶಲ್ಯವುಳ್ಳ, ಪರಿಗ್ರಹವುಳ್ಳ ಸಮ್ಯಕ್ತ್ವ ವ್ರತರಹಿತರನ್ನು ಗುರುವೆಂದು ಮನ್ನಿಸುವುದು ಇತ್ಯಾದಿಗಳು ಮೂಢದೃಷ್ಟಿಯ ಚಿಹ್ನಗಳಿವೆ. ಹಾಗಾದರೆ ದೇವ-ಧರ್ಮ-ಗುರುಗಳು ಹೇಗಿರುತ್ತಾರೆ ಅವರುಗಳ ಸ್ವರೂಪವನ್ನು ತಿಳಿದುಕೊಳ್ಳಬೇಕು. ಈಗ ಅದನ್ನು ಹೇಳುತ್ತಾರೆ.

ರಾಗ ಮೊದಲಾದ ದೋಷಗಳು ಮತ್ತು ಜ್ಞಾನಾವರಣ ಮೊದಲಾದ ಕರ್ಮಗಳೇ ಆವರಣವಿದ್ದು ಅವು ಎರಡೂ ಯಾರಿಗೆ ಇಲ್ಲ ಅವರು ದೇವರಿದ್ದಾರೆ. ಅವರಿಗೆ ಕೇವಲಜ್ಞಾನ, ಕೇವಲದರ್ಶನ, ಅನಂತಸುಖ, ಅನಂತ ವೀರ್ಯಗಳೆಂಬ ಅನಂತಚತುಷ್ಟಯಗಳಿರುತ್ತವೆ. ಸಾಮಾನ್ಯರೂಪದಿಂದಂತೂ ದೇವರು ಒಬ್ಬರೇ ಇದ್ದು ವಿಶೇಷ ರೂಪದಿಂದ ಅರಹಂತ, ಸಿದ್ಧರೆಂದು ಎರಡು ಭೇದಗಳಿವೆ, ಮತ್ತು ಇವರ ನಾಮಭೇದದ ಭೇದದಿಂದ ಭೇದ ಮಾಡಿದರೆ ಸಾವಿರಾರು ಹೆಸರುಗಳಾಗುತ್ತವೆ. ಮತ್ತು ಗುಣಭೇದ ಮಾಡಹೋದರೆ ಅನಂತಗುಣಗಳಿವೆ. ಪರಮೌದಾರಿಕ ದೇಹದಲ್ಲಿ ವಿರಾಜಮಾನರು ಘಾತಿಕರ್ಮಗಳಿಂದ ರಹಿತರು ಅನಂತಚತುಷ್ಟಯ ಸಹಿತರು ಧರ್ಮದ ಉಪದೇಶ ಮಾಡುವಂಥವರು ಅರಹಂತ ದೇವರಿದ್ದಾರೆ. ಮತ್ತು ಪುದ್ಗಲಮಯವಾದ ದೇಹದಿಂದ ರಹಿತರು ಲೋಕದ ಶಿಖರದ ಮೇಲೆ ವಿರಾಜಮಾನರು ಸಮ್ಯಕ್ತ್ವ ಮೊದಲಾದ ಅಷ್ಟಗುಣ ಮಂಡಿತರು ಅಷ್ಟಕರ್ಮರಹಿತರಾದಂಥವರು ಸಿದ್ಧದೇವರಿದ್ದಾರೆ. ಇವರಿಗೆ ಅರಹಂತ, ಜಿನ, ಸಿದ್ಧ, ಪರಮಾತ್ಮ, ಮಹಾದೇವ, ಶಂಕರ, ವಿಷ್ಣು, ಬ್ರಹ್ಮ, ಹರಿ, ಬುದ್ಧ, ಸರ್ವಜ್ಞ, ವೀತರಾಗ ಪರಮಾತ್ಮ ಮೊದಲಾಗಿ ಅರ್ಥ ಸಹಿತ ಅನೇಕ ಹೆಸರುಗಳಿವೆ, ಹೀಗೆ ದೇವರ ಸ್ವರೂಪವಿದೆಯೆಂದು ತಿಳಿಯಬೇಕು.

ಗುರುವಿನದೂ ಅರ್ಥದಿಂದ ವಿಚಾರ ಮಾಡಿದರೆ ಅರಹಂತ ದೇವರೇ ಇದ್ದಾರೆ, ಏಕೆಂದರೆ ಮೋಕ್ಷಮಾರ್ಗದ ಉಪದೇಶ ಮಾಡುವಂಥವರು ಅರಹಂತರೇ ಇದ್ದಾರೆ, ಅವರೇ ಪ್ರತ್ಯಕ್ಷ ಮೋಕ್ಷಮಾರ್ಗದ ಪ್ರವರ್ತನೆ ಮಾಡಿಸುತ್ತಾರೆ; ಮತ್ತು ಅರಹಂತದೇವರ ನಂತರ ಛದ್ಮಸ್ಥ ಜ್ಞಾನದ ಧಾರಕರು ಅವರದೇ ನಿರ್ಗ್ರಂಥ ದಿಗಂಬರ ರೂಪಧಾರಣ ಮಾಡುವಂಥವರು ಮುನಿಗಳಿದ್ದಾರೆ, ಅವರು ಗುರುಗಳಿದ್ದಾರೆ ; ಏಕೆಂದರೆ ಅರಹಂತರ ಸಮ್ಯಗ್ದರ್ಶನ-ಜ್ಞಾನ-ಚಾರಿತ್ರದ ಏಕದೇಶ ಶುದ್ಧತೆಯು ಅವರಲ್ಲಿ ಕಂಡು ಬರುತ್ತದೆ ಮತ್ತು ಅವರೇ ಸಂವರ-ನಿರ್ಜರೆ-ಮೋಕ್ಷದ ಕಾರಣರಿದ್ದಾರೆ, ಆದುದರಿಂದ ಅರಹಂತರ ಹಾಗೆ ಏಕದೇಶರೂಪದಿಂದ ನಿರ್ದೋಷರಿದ್ದಾರೆ. ಆ ಮುನಿಗಳೂ ಗುರುಗಳಿದ್ದಾರೆ, ಮೋಕ್ಷಮಾರ್ಗದ ಉಪದೇಶ ಮಾಡುವಂಥವರಿದ್ದಾರೆ.

ಹೀಗೆ ಸಾಮಾನ್ಯರೂಪದಿಂದ ಮುನಿತನವು ಒಂದು ಪ್ರಕಾರದಿದ್ದರೆ ವಿಶೇಷರೂಪದಿಂದ ಆಚಾರ್ಯ ಉಪಾಧ್ಯಾಯ, ಸಾಧುಗಳೆಂದು ಮೂರು ಪ್ರಕಾರದಿಂದಿದ್ದಾರೆ. ಹೀಗೆ ಇದು ಪದವಿಯ ವಿಶೇಷತೆಯಿದ್ದರೂ ಕೂಡ ಅವರ ಮುನಿತನದ ಕ್ರಿಯೆಗಳು ಸಮಾನವೇ ಇವೆ ; ಬಾಹ್ಯಲಿಂಗ ಕೂಡ ಸಮಾನವೇ ಇದೆ, ಪಂಚ ಮಹಾವ್ರತ, ಪಂಚ ಸಮಿತಿ, ಮೂರು ಗುಪ್ತಿಗಳೆಂಬ ಹದಿಮೂರು ಪ್ರಕಾರದ ಚಾರಿತ್ರವೂ ಸಮಾನವೇ ಇದೆ, ತಪಸ್ಸು ಕೂಡ ಶಕ್ತಿಗೆ ಅನುಸರಿಸಿ ಸಮಾನವೇ ಇದೆ, ಸಾಮ್ಯಭಾವವೂ ಸಮಾನವಿದೆ, ಮೂಲಗುಣ-ಉತ್ತರ ಗುಣಗಳು ಕೂಡ ಸಮಾನವಿವೆ,

ಪರೀಷಹ ಉಪಸರ್ಗಗಳ ಸಹನೆಯೂ ಸಮಾನವಿದೆ, ಆಹಾರಾದಿಗಳ ವಿಧಿಯೂ ಸಮಾನವಿದೆ, ಚರ್ಯೆ, ಸ್ಥಾನ, ಆಸನ ಮೊದಲಾದವೂ ಸಮಾನವಿವೆ, ಮೋಕ್ಷಮಾರ್ಗದ ಸಾಧನೆ ಸಮ್ಯಕ್ತ್ವ, ಜ್ಞಾನ, ಚಾರಿತ್ರಗಳೂ ಸಮಾನವಿವೆ, ಧ್ಯಾತಾ, ಧ್ಯಾನ, ಧ್ಯೇಯತನವೂ ಸಮಾನವಿದೆ, ಜ್ಞಾತಾ-ಜ್ಞಾನ, ಜ್ಞೇಯತನಗಳೂ ಸಮಾನವಿವೆ, ನಾಲ್ಕು ಆರಾಧನೆಯ ಆರಾಧನೆ, ಕ್ರೋಧಾದಿ ಕಷಾಯಗಳ ವಿಜಯ ಇತ್ಯಾದಿಗಳು ಮುನಿಗಳ ಪ್ರವೃತ್ತಿಯಿದ್ದು ಅದೆಲ್ಲವು ಸಮಾನವಿದೆ.

ವಿಶೇಷವೆಂದರೆ ಆಚಾರ್ಯರುಗಳು ಅನ್ಯರಿಗೆ ಪಂಚಾಚಾರಗಳ ಗ್ರಹಣ ಮಾಡಿಸುತ್ತಾರೆ ಮತ್ತು ಅನ್ಯರಿಗೆ ದೋಷ ತಗಲಿದರೆ ಅವರಿಗೆ ಪ್ರಾಯಶ್ಚಿತ್ತದ ವಿಧಿಯನ್ನು ತಿಳಿಸಿಕೊಡುತ್ತಾರೆ ; ಧರ್ಮೋಪದೇಶ, ದೀಕ್ಷೆ, ಶಿಕ್ಷೆ ಕೊಡುತ್ತಾರೆ. ಇಂಥ ಆಚಾರ್ಯ ಗುರುಗಳು ವಂದನೆ ಮಾಡಲು ಯೋಗ್ಯರಿದ್ದಾರೆ.

ಉಪಾಧ್ಯಾಯರುಗಳು ವಾದಿತ್ವ, ವಾಗ್ಮಿತ್ವ, ಕವಿತ್ವ, ಗಮಕತ್ವವೆಂದು ಈ ನಾಲ್ಕು ವಿದ್ಯೆಗಳಲ್ಲಿ ಪ್ರವೀಣರಿರುತ್ತಾರೆ; ಅದರಲ್ಲಿ ಶಾಸ್ತ್ರದ ಅಭ್ಯಾಸವು ಮುಖ್ಯ ಕಾರಣವಿದೆ. ಯಾರು ಸ್ವಯಂ ಶಾಸ್ತ್ರ ಓದುತ್ತಾರೆ ಮತ್ತು ಅನ್ಯರಿಗೆ ಓದಿಸುತ್ತಾರೆ ಅಂಥ ಉಪಾಧ್ಯಾಯ ಗುರುಗಳು ವಂದನೆಗೆ ಯೋಗ್ಯರಿದ್ದಾರೆ ; ಅವರಿಗೆ ಉಳಿದ ಮುನಿವ್ರತ, ಮೂಲಗುಣ-ಉತ್ತರಗುಣಗಳ ಕ್ರಿಯೆಗಳು ಆಚಾರ್ಯರ ಸಮಾನವೇ ಇರುತ್ತವೆ. ಇನ್ನು ರತ್ನತ್ರಯಾತ್ಮಕವಾದ ಮೋಕ್ಷಮಾರ್ಗದ ಸಾಧನೆ ಮಾಡುವವರು ಅವರು ಸಾಧುಗಳಿದ್ದಾರೆ ; ಅವರಿಗೆ ದೀಕ್ಷೆ, ಶಿಕ್ಷೆ, ಉಪದೇಶ ಮೊದಲಾದುವನ್ನು ಕೊಡುವ ಮುಖ್ಯತೆಯಿಲ್ಲ, ಅವರಂತೂ ತಮ್ಮ ಸ್ವರೂಪದ ಸಾಧನೆಯಲ್ಲಿಯೇ ತತ್ಪರರಿರುತ್ತಾರೆ ; ಜಿನಾಗಮದಲ್ಲಿ ನಿರ್ಗ್ರಂಥ ದಿಗಂಬರ ಮುನಿಯ ಪ್ರವೃತ್ತಿಯನ್ನು ಹೇಗೆ ಹೇಳಿದೆ ಹಾಗೆ ಎಲ್ಲ ಪ್ರವೃತ್ತಿಯು ಅವರಿಗೆ ಇರುತ್ತದೆ, ಇಂಥ ಸಾಧುಗಳು ವಂದನೆಗೆ ಯೋಗ್ಯರಿದ್ದಾರೆ. ಅನ್ಯ ಲಿಂಗಿಗಳುವೇಷಧಾರಿಗಳು ವ್ರತಾದಿಗಳಿಂದ ರಹಿತರು, ಪರಿಗ್ರಹವುಳ್ಳವರು, ವಿಷಯಗಳಲ್ಲಿ ಆಸಕ್ತರು ಗುರುನಾಮಧಾರಣ ಮಾಡುತ್ತಾರೆ, ಆದರೆ ಅವರು ವಂದನೆಗೆ ಯೋಗ್ಯರಾಗಿಲ್ಲ.

ಈ ಪಂಚಮಕಾಲದಲ್ಲಿ ಜಿನಮತದಲ್ಲಿ ಕೂಡ ವೇಷಧಾರಿಗಳಾಗಿದ್ದಾರೆ. ಅವರು ಶ್ವೇತಾಂಬರ, ಯಾಪನೀಯ ಸಂಘ, ಗೋಪುಚ್ಛಪಿಚ್ಛಸಂಘ, ನಿಃಪಿಚ್ಛಸಂಘ, ದ್ರಾವಿಡಸಂಘ ಮೊದಲಾಗಿ ಅನೇಕರಾಗಿದ್ದಾರೆ; ಇವರೆಲ್ಲರುಗಳು ವಂದನೆಗೆ ಯೋಗ್ಯರಿಲ್ಲ. ಮೂಲಸಂಘ, ನಗ್ನದಿಗಂಬರ, ಇಪ್ಪತ್ತೆಂಟು ಮೂಲಗುಣಗಳ ಧಾರಕರು ದಯೆಯ ಮತ್ತು ಶೌಚದ ಉಪಕರಣವೆಂದು ಮಯೂರ ಪಿಂಛ, ಕಮಂಡಲು ಧಾರಣ ಮಾಡುವಂಥವರು, ಯಥೋಕ್ತವಿಧಿಯಿಂದ ಆಹಾರ ಮಾಡುವಂಥ ಗುರುಗಳು ವಂದನೆಗೆ ಯೋಗ್ಯರಿದ್ದಾರೆ, ಏಕೆಂದರೆ ತೀರ್ಥಂಕರ ದೇವರುಗಳು ದೀಕ್ಷೆ ತೆಗೆದುಕೊಳ್ಳುವಾಗ ಇಂಥದೇ ರೂಪಧಾರಣ ಮಾಡುತ್ತಾರೆ, ಅನ್ಯವೇಷಧಾರಣ ಮಾಡುವುದಿಲ್ಲ. ಇದನ್ನು ಜಿನದರ್ಶನವೆಂದು ಹೇಳುತ್ತಾರೆ.

ಯಾವುದು ಜೀವವನ್ನು ಸಂಸಾರದ ದುಃಖರೂಪವಾದ ನೀಚ ಪದದಿಂದ ಮೋಕ್ಷದ ಸುಖರೂಪವಾದ ಉಚ್ಚಪದದಲ್ಲಿ ಧಾರಣ ಮಾಡುತ್ತದೆ ಅದನ್ನು ಧರ್ಮವೆಂದು ಹೇಳುತ್ತಾರೆ. ಇಂಥ ಧರ್ಮವು ಮುನಿ-ಶ್ರಾವಕರ ಭೇದದಿಂದ, ದರ್ಶನ-ಜ್ಞಾನ-ಚಾರಿತ್ರಾತ್ಮಕವಾಗಿ ಏಕದೇಶ-ಸರ್ವದೇಶರೂಪ ನಿಶ್ಚಯ-ವ್ಯವಹಾರದ ಮುಖಾಂತರ ಎರಡು ಪ್ರಕಾರವೆಂದು ಹೇಳಿದೆ ; ಅದರ ಮೂಲವು ಸಮ್ಯಗ್ದರ್ಶನವಿದ್ದು ಅದು ಇಲ್ಲದೆ ಧರ್ಮದ ಉತ್ಪತ್ತಿಯಾಗುವುದಿಲ್ಲ. ಈ ಪ್ರಕಾರ ದೇವ-ಗುರು-ಧರ್ಮದಲ್ಲಿ ಹಾಗೂ ಲೋಕದಲ್ಲಿ ಯಥಾರ್ಥ ದೃಷ್ಟಿಯಿದ್ದರೆ ಮತ್ತು ಮೂಢತೆಯಿಲ್ಲದಿದ್ದರೆ ಅದು ಅಮೂಢದೃಷ್ಟಿ ಅಂಗವಿದೆ.

ತಮ್ಮ ಆತ್ಮನ ಶಕ್ತಿಯನ್ನು ಹೆಚ್ಚಿಸುವುದು ಅದು ಉಪಬೃಂಹಣ ಅಂಗವಿದೆ. ಸಮ್ಯಗ್ದರ್ಶನ-ಜ್ಞಾನ-ಚಾರಿತ್ರಗಳನ್ನು ತಮ್ಮ ಪುರುಷಾರ್ಥದಿಂದ ಹೆಚ್ಚಿಸುವುದೇ ಉಪಬೃಂಹಣವಿದೆ. ಇದನ್ನು ಉಪಗೂಹನವೆಂದೂ ಹೇಳುತ್ತಾರೆ. ಜಿನಮಾರ್ಗವು ಸ್ವಯಂ ಸಿದ್ಧವಿದ್ದು ಅದರಲ್ಲಿ ಬಾಲಕರ ಹಾಗೂ ಅಸಮರ್ಥ ಜನರ ಆಶ್ರಯದಿಂದ ಯಾವ

ನ್ಯೂನತೆಯಿರುವುದು ಅದನ್ನು ತಮ್ಮ ಬುದ್ಧಿಯಿಂದ ಗುಪ್ತವಿಟ್ಟು ದೂರ ಮಾಡುವುದು ಅದು ಉಪಗೂಹನ ಅಂಗವಿದೆ ಯೆಂದು ತಿಳಿದುಕೊಳ್ಳಬೇಕು.

ಧರ್ಮದಿಂದ ಚ್ಯುತವಾಗುತ್ತಿರುವವನನ್ನು ಪುನಃ ಧರ್ಮದಲ್ಲಿ ದೃಢ ಮಾಡುವುದು ಅದು ಸ್ಥಿತಿಕರಣ ಅಂಗವಿದೆ. ಸ್ವಯಂ ಕರ್ಮೋದಯದ ವಶವಾಗಿ ಕಥಂಚಿತ್ ಶ್ರದ್ಧೆಯಿಂದ ಹಾಗೂ ಕ್ರಿಯೆ-ಆಚಾರಗಳಿಂದ ಚ್ಯುತವಾಗುತ್ತಿದ್ದರೆ ತನ್ನನ್ನು ಪುರುಷಾರ್ಥಪೂರ್ವಕವಾಗಿ ಪುನಃ ಶ್ರದ್ಧೆಯಲ್ಲಿ ದೃಢ ಮಾಡುವುದು, ಅದೇ ಪ್ರಕಾರ ಬೇರೆ ಯಾವನಾದರೂ ಧರ್ಮಾತ್ಮನು ಧರ್ಮದಿಂದ ಚ್ಯುತನಾಗುತ್ತಿದ್ದರೆ ಅವನನ್ನು ಉಪದೇಶಾದಿಗಳಿಂದ ಧರ್ಮದಲ್ಲಿ ಸ್ಥಾಪನೆ ಮಾಡುವುದು ಅದು ಸ್ಥಿತಿಕರಣ ಅಂಗವಿದೆ.

ಅರಹಂತ, ಸಿದ್ಧ, ಅವರುಗಳ ಬಿಂಬ, ಚೈತ್ಯಾಲಯ, ಚತುರ್ವಿಧಸಂಘ ಮತ್ತು ಶಾಸ್ತ್ರದಲ್ಲಿ ದಾಸತ್ವವಿದ್ದರೆ – ಹೇಗೆ ಒಡೆಯನ ಭೃತ್ಯನು ದಾಸನಿರುತ್ತಾನೆ ಹಾಗೆ-ಅದು ವಾತ್ಸಲ್ಯಅಂಗವಿದೆ, ಧರ್ಮದ ಸ್ಥಾನಗಳಲ್ಲಿ ಉಪಸರ್ಗ ಮೊದಲಾದುವಾದರೆ ಅವನ್ನು ತಮ್ಮ ಶಕ್ತಿಗೆ ಅನುಸರಿಸಿ ಎಂದರೆ ತನ್ನ ಶಕ್ತಿಯನ್ನು ಬಚ್ಚಿಡದೆ ದೂರ ಮಾಡುವುದೆಲ್ಲವು ಧರ್ಮದಲ್ಲಿ ಅತ್ಯಂತ ಪ್ರೀತಿಯಿದ್ದರೆ ಮಾತ್ರ ಆಗುತ್ತದೆ.

ಧರ್ಮದ ಉದ್ಯೋತ ಮಾಡುವುದು ಅದು ಪ್ರಭಾವನಾ ಅಂಗವಿದೆ. ರತ್ನತ್ರಯದಿಂದ ತನ್ನ ಆತ್ಮನ ಉದ್ಯೋತ ಮಾಡುವುದು ಮತ್ತು ದಾನ, ತಪಸ್ಸು, ಪೂಜೆ-ವಿಧಾನಗಳಿಂದ ಹಾಗೂ ವಿದ್ಯೆ, ಅತಿಶಯ-ಚಮತ್ಕಾರಾದಿಗಳಿಂದ ಜಿನಧರ್ಮದ ಉದ್ಯೋತ ಮಾಡುವುದು ಅದು ಪ್ರಭಾವನಾ ಅಂಗವಿದೆ.

ಈ ಪ್ರಕಾರ ಇವು ಸಮ್ಯಕ್ತ್ವದ ಎಂಟು ಅಂಗಗಳಿವೆ ; ಯಾವನಿಗೆ ಇವು ಪ್ರಕಟವಾಗಿವೆ ಅವನು ಸಮ್ಯಕ್ತ್ವಿಯಿದ್ದಾನೆಂದು ತಿಳಿಯಬೇಕು.

ಪ್ರಶ್ನೆ :- ಒಂದುವೇಳೆ ಈ ಸಮ್ಯಕ್ತ್ವದ ಚಿಹ್ನಗಳು ಮಿಥ್ಯಾದೃಷ್ಟಿಯಲ್ಲೂ ಕಂಡುಬಂದರೆ ಸಮ್ಯಕ್ತ್ವ ಮಿಥ್ಯಾತ್ವದ ವಿಭಾಗವು ಹೇಗೆ ಆಗುವುದು ?

ಉತ್ತರ :- ಸಮ್ಯಕ್ತ್ವಿಗೆ ಇರುವ ಹಾಗೆ ಮಿಥ್ಯಾತ್ವಿಗಂತೂ ಎಂದೂ ಇರುವುದಿಲ್ಲ, ಆದಾಗ್ಯೂ ಅಪರೀಕ್ಷಕನಿಗೆ ಸಮಾನವಾಗಿ ಕಂಡುಬಂದರೆ ಪರೀಕ್ಷೆಮಾಡಿ ಭೇದವನ್ನು ತಿಳಿದುಕೊಳ್ಳುವ ಸಾಧ್ಯತೆಯಿದೆ. ಪರೀಕ್ಷೆಯಲ್ಲಿ ತಮ್ಮ ಸ್ವಾನುಭವವು ಮುಖ್ಯವಿದೆ. ಸರ್ವಜ್ಞರ ಆಗಮದಲ್ಲಿ ಆತ್ಮನ ಅನುಭವವು ಹೇಗಾಗುವುದನ್ನು ಹೇಳಿದೆ ಅಂಥ ಅನುಭವವು ತನಗೆ ಇದ್ದರೆ ಅದರ ಇರುವಿಕೆಯಿಂದ ತನ್ನ ವಚನ, ಕಾಯದ ಪ್ರವೃತ್ತಿ ಕೂಡ ಅದಕ್ಕನುಸರಿಸಿಯೇ ಇರುತ್ತದೆ, ಆ ಪ್ರವೃತ್ತಿಗೆ ಅನುಸರಿಸಿ ಇತರರ ವಚನ ಕಾಯದ ಪ್ರವೃತ್ತಿ ಕೂಡ ತಿಳಿದು ಬರುತ್ತದೆ. ಈ ಪ್ರಕಾರ ಪರೀಕ್ಷೆ ಮಾಡುವುದರಿಂದ ವಿಭಾಗಗಳಾಗುತ್ತವೆ, ಮತ್ತು ಇದು ವ್ಯವಹಾರ ಮಾರ್ಗವಿರುವುದರಿಂದ ವ್ಯವಹಾರೀ ಛದ್ಮಸ್ಥ ಜೀವರುಗಳ ಪ್ರವೃತ್ತಿಯು ತಮ್ಮ ಜ್ಞಾನದ ಅನುಸಾರ ಇರುತ್ತದೆ ; ಯಥಾರ್ಥವನ್ನು ಸರ್ವಜ್ಞದೇವರು ತಿಳಿಯುತ್ತಾರೆ. ವ್ಯವಹಾರಿಗಳಿಗೆ ಸರ್ವಜ್ಞದೇವರು ವ್ಯವಹಾರದ ಆಶ್ರಯವನ್ನೇ ತಿಳಿಸಿದ್ದಾರೆ.[೧] ಈ ಅಂತರಂಗ ಸಮ್ಯಕ್ತ್ವಭಾವರೂಪವಾದ ಸಮ್ಯಕ್ತ್ವವಿದೆ ಅದೇ ಸಮ್ಯಗ್ದರ್ಶನವಿದೆ; ಬಾಹ್ಯದರ್ಶನ, ವ್ರತ, ಸಮಿತಿ, ಗುಪ್ತಿರೂಪದ ಚಾರಿತ್ರ ಮತ್ತು ತಪಸಹಿತ ಇಪ್ಪತ್ತೆಂಟು

೧ ಸ್ವಾತ್ಮಾನುಭೂತಿಯು ಜ್ಞಾನಗುಣದ ಪರ್ಯಾಯವಿದೆ, ಜ್ಞಾನದಿಂದ ಸಮ್ಯಕ್ತ್ವದ ನಿರ್ಣಯ ಮಾಡುವುದರ ಹೆಸರು ವ್ಯವಹಾರಿಗೆ ವ್ಯವಹಾರದ ಆಶ್ರಯವೆಂದು ತಿಳಿಯುವುದು, ಆದರೆ ಭೇದರೂಪ ವ್ಯವಹಾರದ ಆಶ್ರಯದಿಂದ ವೀತರಾಗ ಅಂಶರೂಪದ ಧರ್ಮವಾಗುವುದೆಂಬ ಅರ್ಥವನ್ನು ಎಲ್ಲಿಯೂ ತಿಳಿಯಬಾರದು.

ಮೂಲ ಗುಣಸಹಿತ ನಗ್ನದಿಗಂಬರ ಮುದ್ರೆಯ ಮೂರ್ತಿಯನ್ನು ಜಿನದರ್ಶನವೆಂದು ಹೇಳುತ್ತಾರೆ. ಈ ಪ್ರಕಾರ ಧರ್ಮದ ಮೂಲವು ಸಮ್ಯಗ್ದರ್ಶನವಿದೆಯೆಂದು ತಿಳಿದುಕೊಂಡು ಯಾರು ಸಮ್ಯಗ್ದರ್ಶನರಹಿತರಿದ್ದಾರೆ ಅವರ ವಂದನೆ- ಪೂಜೆಯ ನಿಷೇಧ ಮಾಡಿದೆ. ಇಂಥ ಉಪದೇಶವು ಭವ್ಯಜೀವರುಗಳಿಗೆ ಅಂಗೀಕಾರ ಮಾಡಲು ಯೋಗ್ಯವಿದೆ. ।।೨।।

ಈಗ ಅಂತರಂಗ ಸಮ್ಯಗ್ದರ್ಶನವಿಲ್ಲದೆ ಬಾಹ್ಯಚಾರಿತ್ರದಿಂದ ನಿರ್ವಾಣವಾಗುವುದಿಲ್ಲವೆಂದು ಹೇಳುತ್ತಾರೆ,-

ದಂಸಣಭಟ್ಠಾ ಭಟ್ಠಾ ದಂಸಣಭಟ್ಠಸ್ಸ ಣತ್ಥಿ ಣಿವ್ವಾಣಂ ।
ಸಿಜ್ಝಂತಿ ಚರಿಯಭಟ್ಠಾ ದಂಸಣಭಟ್ಠಾ ಣ ಸಿಜ್ಝಂತಿ ।।೩।।

ದರ್ಶನಭ್ರಷ್ಟಾಃ ಭ್ರಷ್ಟಾಃ ದರ್ಶನಭ್ರಷ್ಟಸ್ಯ ನಾಸ್ತಿ ನಿರ್ವಾಣಮ್ ।
ಸಿಧ್ಯಂತಿ ಚಾರಿತ್ರಭ್ರಷ್ಟಾಃ ದರ್ಶನಭ್ರಷ್ಟಾಃನ ಸಿಧ್ಯಂತಿ ।।೩।।

ಅರ್ಥ ಃ- ಯಾವ ಪುರುಷರು ದರ್ಶನದಿಂದ ಭ್ರಷ್ಟರಿದ್ದಾರೆ ಅವರು ಭ್ರಷ್ಟರಿದ್ದಾರೆ ; ಯಾರು ದರ್ಶನದಿಂದ ಭ್ರಷ್ಟರಿದ್ದಾರೆ ಅವರಿಗೆ ನಿರ್ವಾಣವಾಗುವುದಿಲ್ಲ ; ಏಕೆಂದರೆ ಯಾರು ಚಾರಿತ್ರದಿಂದ ಭ್ರಷ್ಟರಿದ್ದಾರೆ ಅವರಂತೂ ಸಿದ್ಧಿಗೆ ಪ್ರಾಪ್ತರಾಗುತ್ತಾರೆ, ಆದರೆ ಯಾರು ದರ್ಶನದಿಂದ ಭ್ರಷ್ಟರಿದ್ದಾರೆ ಅವರು ಸಿದ್ಧಿಯನ್ನು ಪಡೆಯುವುದಿಲ್ಲವೆಂಬುದು ಪ್ರಸಿದ್ಧವಿದೆ.

ಭಾವಾರ್ಥ ಃ- ಯಾರು ಜಿನಮತದ ಶ್ರದ್ಧೆಯಿಂದ ಭ್ರಷ್ಟರಿದ್ದಾರೆ ಅವರನ್ನು ಭ್ರಷ್ಟರೆಂದು ಹೇಳುತ್ತಾರೆ ; ಮತ್ತು ಯಾರು ಶ್ರದ್ಧೆಯಿಂದ ಭ್ರಷ್ಟರಿಲ್ಲ, ಆದರೆ ಕಥಂಚಿತ್ ಕರ್ಮದ ಉದಯದಿಂದ ಚಾರಿತ್ರಭ್ರಷ್ಟರಾಗಿದ್ದಾರೆ ಅವರನ್ನು ಭ್ರಷ್ಟರೆಂದು ಹೇಳುವುದಿಲ್ಲ ; ಏಕೆಂದರೆ ಯಾರು ದರ್ಶನದಿಂದ ಭ್ರಷ್ಟರಿದ್ದಾರೆ ಅವರಿಗೆ ನಿರ್ವಾಣದ ಪ್ರಾಪ್ತಿಯಾಗುವುದಿಲ್ಲ; ಯಾರು ಚಾರಿತ್ರದಿಂದ ಭ್ರಷ್ಟರಾಗುತ್ತಾರೆ ಮತ್ತು ಶ್ರದ್ಧೆಯು ದೃಢವಿರುತ್ತದೆ ಅವರಿಗಂತೂ ಬೇಗನೇ ಮತ್ತೆ ಚಾರಿತ್ರದ ಗ್ರಹಣವಾಗುತ್ತದೆ ಹಾಗೂ ಮೋಕ್ಷವಾಗುತ್ತದೆ. ಇನ್ನು ದರ್ಶನ ಶ್ರದ್ಧೆಯಿಂದ ಭ್ರಷ್ಟರಿರುವವರಿಗೆ ಪುನಃ ಚಾರಿತ್ರದ ಗ್ರಹಣವು ಕಠಿಣವಾಗುತ್ತದೆ, ಆದುದರಿಂದ ನಿರ್ವಾಣದ ಪ್ರಾಪ್ತಿಯು ದುರ್ಲಭವಾಗುತ್ತದೆ. ಯಾವ ಪ್ರಕಾರ ವೃಕ್ಷದ ಶಾಖೆ ಮೊದಲಾದವು ಕತ್ತರಿಸಿ ಹೋದರೆ ಮತ್ತು ಮೂಲವು ಜೀವಂತವಾಗಿ ಉಳಿದರೆ ಶಾಖೆ ಮೊದಲಾದವು ಪುನಃ ಶೀಘ್ರವಾಗಿ ಉದಿಸಿ ಬರುವವು ಮತ್ತು ಫಲ-ಪುಷ್ಪಗಳೂ ಆಗುತ್ತದೆ ; ಆದರೆ ಮೂಲವೇ ಕಿತ್ತುಹೋದರೆ ಶಾಖೆ ಮೊದಲಾದವು ಹೇಗೆ ಆಗುವವು ? ಅದೇ ಪ್ರಕಾರ ಧರ್ಮದ ಮೂಲವು ದರ್ಶನವಿದೆಯೆಂದು ತಿಳಿಯಬೇಕು.

ಯಾರು ಸಮ್ಯಗ್ದರ್ಶನದಿಂದ ಭ್ರಷ್ಟರಿದ್ದಾರೆ ಮತ್ತು ಶಾಸ್ತ್ರಗಳನ್ನು ಅನೇಕ ಪ್ರಕಾರದಿಂದ ತಿಳಿಯುತ್ತಾರೆ, ಆದರೂ ಸಂಸಾರದಲ್ಲಿ ಭ್ರಮಿಸುತ್ತಾರೆ ; ಆದುದರಿಂದ ಇಂಥ ಜ್ಞಾನಕ್ಕಿಂತಲೂ ದರ್ಶನವನ್ನು ಅಧಿಕವೆಂದು ಈಗ ಹೇಳುತ್ತಾರೆ,-

---

ದರಶನಭ್ರಷ್ಟರು ಭ್ರಷ್ಟರಿದ್ದಾ ದರ್ಶನಭ್ರಷ್ಟರಿಗೆ ನಿರ್ವಾಣವಿಲ್ಲ ।
ಚಾರಿತ್ರಭ್ರಷ್ಟರಿಗೆ ಸಿದ್ಧಿಯಿದ್ದರೆ ದರ್ಶನಭ್ರಷ್ಟರಿಗೆ ಸಿದ್ಧಿಯಿಲ್ಲ ।।೩।।

ಸಮ್ಮತ್ತರಯಣಭಟ್ಠಾ ಜಾಣಂತಾ ಬಹುವಿಹಾಇಂ ಸತ್ಥಾಇಂ ।
ಆರಾಹಣಾವಿರಹಿಯಾ ಭಮಂತಿ ತತ್ಥೇವ ತತ್ಥೇವ ॥೪॥

ಸಮ್ಯಕ್ತ್ವರತ್ನಭ್ರಷ್ಟಾಃ ಜಾನಂತೋ ಬಹುವಿಧಾನಿ ಶಾಸ್ತ್ರಾಣಿ ।
ಆರಾಧನಾ ವಿರಹಿತಾಃ ಭ್ರಮಂತಿ ತತ್ರೈವ ತತ್ರೈವ ॥೪॥

ಅರ್ಥ ಃ- ಯಾವ ಪುರುಷರು ಸಮ್ಯಕ್ತ್ವರೂಪ ರತ್ನದಿಂದ ಭ್ರಷ್ಟರಿದ್ದಾರೆ, ಮತ್ತು ಅನೇಕ ಪ್ರಕಾರದ ಶಾಸ್ತ್ರಗಳನ್ನು ತಿಳಿಯುತ್ತಾರೆ, ಆದಾಗ್ಯೂ ಅವರು ಆರಾಧನೆಯಿಂದ ರಹಿತರಾಗುತ್ತ ಸಂಸಾರದಲ್ಲಿಯೇ ಭ್ರಮಣ ಮಾಡುತ್ತಾರೆ, ಎರಡು ಬಾರಿ ಹೇಳಿ ಅಧಿಕ ಪರಿಭ್ರಮಣವನ್ನು ತಿಳಿಸಿದ್ದಾರೆ.

ಭಾವಾರ್ಥ ಃ- ಯಾರು ಜಿನಮತದ ಶ್ರದ್ಧೆಯಿಂದ ಭ್ರಷ್ಟರಿದ್ದಾರೆ ಮತ್ತು ಶಬ್ದ, ನ್ಯಾಯ, ಛಂದಸ್ಸು, ಅಲಂಕಾರ ಮೊದಲಾದ ಅನೇಕ ಪ್ರಕಾರದ ಶಾಸ್ತ್ರಗಳನ್ನು ತಿಳಿಯುತ್ತಿದ್ದರೂ ಕೂಡ ಅವರಿಗೆ ಸಮ್ಯಗ್ದರ್ಶನ, ಜ್ಞಾನ, ಚಾರಿತ್ರ, ತಪರೂಪದ ಆರಾಧನೆಯಾಗುವುದಿಲ್ಲ; ಆದುದರಿಂದ ಕುಮರಣದಿಂದ ಚತುರ್ಗತಿರೂಪವಾದ ಸಂಸಾರದಲ್ಲಿಯೇ ಭ್ರಮಣ ಮಾಡುತ್ತಾರೆ ; ಅವರು ಮೋಕ್ಷ ಪ್ರಾಪ್ತಮಾಡಿಕೊಳ್ಳುವುದಿಲ್ಲ; ಆದುದರಿಂದ ಸಮ್ಯಕ್ತ್ವರಹಿತವಾದ ಜ್ಞಾನಕ್ಕೆ ಆರಾಧನೆಯೆಂಬ ಹೆಸರನ್ನು ಕೊಡುವುದಿಲ್ಲ.

ಯಾರು ತಪಸ್ಸನ್ನು ಮಾಡುತ್ತಾರೆ ಮತ್ತು ಸಮ್ಯಕ್ತ್ವರಹಿತರಿರುತ್ತಾರೆ ಅವರಿಗೆ ಸ್ವರೂಪದ ಲಾಭವಾಗುವುದಿಲ್ಲ-ವೆಂದು ಈಗ ಹೇಳುತ್ತಾರೆ,-

ಸಮ್ಮತ್ತವಿರಹಿಯಾ ಣಂ ಸುಟ್ಠು ವಿ ಉಗ್ಗಂ ತವಂ ಚರಂತಾ ಣಂ ।
ಣ ಲಹಂತಿ ಬೋಹಿಲಾಹಂ ಅವಿ ವಾಸಸಹಸ್ಸಕೋಡೀಹಿಂ ॥೫॥

ಸಮ್ಯಕ್ತ್ವವಿರಹಿತಾ ಣಂ ಸುಷ್ಠು ಅಪಿ ಉಗ್ರಂ ತಪಃ ಚರಂತೋ ಣಂ ।
ನ ಲಭಂತೇ ಬೋಧಿಲಾಭಂ ಅಪಿ ವರ್ಷಸಹಸ್ರಕೋಟಿಭಿಃ ॥೫॥

ಅರ್ಥ ಃ- ಯಾವ ಪುರುಷರು ಸಮ್ಯಕ್ತ್ವದಿಂದ ರಹಿತರಿದ್ದಾರೆ ಅವರು ಸುಷ್ಠು ಎಂದರೆ ಅತಿಯಾಗಿ ಉಗ್ರತಪದ ಆಚರಣೆ ಮಾಡುತ್ತಿದ್ದರೂ ಅವರು ಬೋಧಿ ಎಂದರೆ ಸಮ್ಯಗ್ದರ್ಶನ-ಜ್ಞಾನ-ಚಾರಿತ್ರಮಯವಾದ ಯಾವ ತಮ್ಮ ಸ್ವರೂಪವಿದೆ ಅದರ ಲಾಭ ಪ್ರಾಪ್ತಮಾಡಿಕೊಳ್ಳುವುದಿಲ್ಲ ; ಒಂದು ವೇಳೆ ಸಾವಿರ ಕೋಟಿ ವರ್ಷಗಳವರೆಗೆ ತಪಸ್ಸು ಮಾಡುತ್ತಿದ್ದರೂ ಕೂಡ ಸ್ವರೂಪದ ಪ್ರಾಪ್ತಿಯಾಗುವುದಿಲ್ಲ. ಈ ಗಾಥೆಯಲ್ಲಿ ಎರಡು ಸ್ಥಾನದ ಮೇಲೆ 'ಣ' ಶಬ್ದವಿದೆ ಅದು ಪ್ರಾಕೃತದಲ್ಲಿ ಅವ್ಯಯವಿದೆ, ಅದರ ಅರ್ಥವು ವಾಕ್ಯದ ಅಲಂಕಾರವಿದೆ.

---

ಜೀವ ಸಮ್ಯಕ್ತ್ವರತ್ನದಿಂದ ಭ್ರಷ್ಟನಾಗಿ ತಿಳಿದರು ಬಹುವಿಧ ಶಾಸ್ತ್ರಗಳ ।
ಅವನಾರಾಧನಾರಹಿತನಾಗಿ ಪರಿಭ್ರಮಿಸುವನು ಅದದರಲ್ಲಿಯೆ ॥೪॥

ಜೀವ ಸಮ್ಯಕ್ತ್ವವಿಲ್ಲದೆ ಉಗ್ರತಪಸ್ಸನ್ನಧಿಕ ಆಚರಿಸಿದರು ಕೂಡ ।
ಅವನಿಗೆ ಬೋಧಿಲಾಭವಿಲ್ಲ ವರ್ಷ ಸಹಸ್ರಕೋಟಿಗಳವರೆಗೆ ಕೂಡ ॥೫॥

ಭಾವಾರ್ಥ :- ಸಮ್ಯಕ್ತ್ವವಿಲ್ಲದೆ ಸಾವಿರ ಕೋಟಿ ವರ್ಷಗಳವರೆಗೆ ತಪಸ್ಸು ಮಾಡಿದರೂ ಕೂಡ ಮೋಕ್ಷ ಮಾರ್ಗದ ಪ್ರಾಪ್ತಿಯಾಗುವುದಿಲ್ಲ. ಇಲ್ಲಿ ಸಾವಿರ ಕೋಟಿಯೆಂದು ಹೇಳಿರುವ ತಾತ್ಪರ್ಯವು ಅಷ್ಟೇ ವರ್ಷಗಳೆಂದು ತಿಳಿಯಬಾರದು, ಆದರೆ ಕಾಲದ ಅಧಿಕತೆಯನ್ನು ತಿಳಿಸಲಾಗಿದೆ. ತಪಸ್ಸು ಮನುಷ್ಯ ಪರ್ಯಾಯದಲ್ಲಿಯೇ ಆಗುತ್ತದೆ, ಆದುದರಿಂದ ಮನುಷ್ಯಕಾಲವು ಕೂಡ ಅಲ್ಪವಿದೆ, ಆದುದರಿಂದ ತಪಸ್ಸಿನ ತಾತ್ಪರ್ಯವೆಂದು ಈ ವರ್ಷಗಳನ್ನೂ ಅಧಿಕವಾಗಿ ಹೇಳಿದ್ದಾರೆ.

ಹೀಗೆ ಪೂರ್ವೋಕ್ತ ಪ್ರಕಾರ ಸಮ್ಯಕ್ತ್ವವಿಲ್ಲದ ಚಾರಿತ್ರ , ತಪಗಳನ್ನು ನಿಷ್ಫಲವೆಂದು ಹೇಳಿದೆ. ಈಗ ಸಮ್ಯಕ್ತ್ವ ಸಹಿತವಾದ ಪ್ರವೃತ್ತಿಗಳೆಲ್ಲವೂ ಸಫಲವಿವೆಯೆಂದು ಹೇಳುತ್ತಾರೆ,-

ಸಮ್ಮತ್ತಣಾಣದಂಸಣಬಲವೀರಿಯವಡ್ಢಮಾಣ ಜೇ ಸವ್ವೇ ।
ಕಲಿಕಲುಸಪಾವರಹಿಯಾ ವರಣಾಣೀ ಹೋಂತಿ ಅಇರೇಣ ॥೬॥

ಸಮ್ಯಕ್ತ್ವಜ್ಞಾನದರ್ಶನಬಲವೀರ್ಯವರ್ಧಮಾನಾಃ ಯೇ ಸರ್ವೇ ।
ಕಲಿಕಲುಷಪಾಪರಹಿತಾಃ ವರಜ್ಞಾನಿನಃ ಭವಂತಿ ಅಚಿರೇಣ ॥೬॥

ಅರ್ಥ :- ಯಾವ ಪುರುಷರು ಸಮ್ಯಕ್ತ್ವ, ಜ್ಞಾನ, ದರ್ಶನ, ಬಲ, ವೀರ್ಯಗಳಿಂದ ವರ್ಧಮಾನರಿದ್ದಾರೆ ಮತ್ತು ಕಲಿಕಲುಷ-ಪಾಪ ಎಂದರೆ ಈ ಪಂಚಮಕಾಲದ ಮಲಿನ ಪಾಪದಿಂದ ರಹಿತರಿದ್ದಾರೆ ಅವರೆಲ್ಲರೂ ಅಲ್ಪಕಾಲದಲ್ಲಿ ವರಜ್ಞಾನೀ ಎಂದರೆ ಕೇವಲಜ್ಞಾನಿಗಳಾಗುತ್ತಾರೆ.

ಭಾವಾರ್ಥ :- ಈ ಪಂಚಮಕಾಲದಲ್ಲಿ ಜಡ-ವಕ್ರ ಜೀವರುಗಳ ನಿಮಿತ್ತದಿಂದ ಯಥಾರ್ಥ ಮಾರ್ಗವು ಅಪಭ್ರಂಶವಾಗಿದೆ. ಅದರ ವಾಸನೆಯಿಂದ ಯಾವ ಜೀವರುಗಳು ರಹಿತರಿದ್ದಾರೆ ಅವರು ಯಥಾರ್ಥ ಜಿನ ಮಾರ್ಗದ ಶ್ರದ್ಧಾರೂಪವಾದ ಸಮ್ಯಕ್ತ್ವದೊಡನೆ ಜ್ಞಾನ-ದರ್ಶನದ ತಮ್ಮ ಪರಾಕ್ರಮವನ್ನು-ಬಲವನ್ನು ಬಚ್ಚಿಡದೆ ಮತ್ತು ತಮ್ಮ ವೀರ್ಯ ಎಂದರೆ ಶಕ್ತಿಯಿಂದ ಪ್ರವರ್ಧಮಾನರಾಗುತ್ತ ಪ್ರವರ್ತಿಸುತ್ತಾರೆ, ಅವರು ಅಲ್ಪಕಾಲದಲ್ಲಿಯೇ ಕೇವಲಜ್ಞಾನಿಗಳಾಗಿ ಮೋಕ್ಷವನ್ನು ಪ್ರಾಪ್ತಮಾಡಿಕೊಳ್ಳುತ್ತಾರೆ.

ಸಮ್ಯಕ್ತ್ವರೂಪದ ಜಲ ಪ್ರವಾಹವು ಆತ್ಮನಿಗೆ ಕರ್ಮರಜವನ್ನು ತಗಲಿಸಗೊಡುವುದಿಲ್ಲವೆಂದು ಈಗ ಹೇಳುತ್ತಾರೆ,-

ಸಮ್ಮತ್ತಸಲಿಲಪವಹೋ ಣಿಚ್ಚಂ ಹಿಯಏ ಪವಟ್ಟಏ ಜಸ್ಸ ।
ಕಮ್ಮಂ ವಾಲುಯವರಣಂ ಬಂಧುಚ್ಚಿಯ ಣಾಸಏ ತಸ್ಸ ॥೭॥

ಸಮ್ಯಕ್ತ್ವಸಲಿಲಪ್ರವಾಹಃ ನಿತ್ಯಂ ಹೃದಯೇ ಪ್ರವರ್ತತೇ ಯಸ್ಯ ।
ಕರ್ಮ ವಾಲುಕಾವರಣಂ ಬದ್ಧಮಪಿ ನಶ್ಯತಿ ತಸ್ಯ ॥೭॥

---

ಜೀವ ಸಮ್ಯಕ್ತ್ವ-ದರ್ಶನ-ಜ್ಞಾನ-ಬಲ-ವೀರ್ಯಗಳಿಂದ ವರ್ಧಮಾನನಿರೆ ।
ಅವನು ಕಲಿಮಲರಹಿತನಾಗಿ ವರಜ್ಞಾನಪಡೆವನಲ್ಪಕಾಲದಲಿ ॥೬॥

ಯಾವನ ಹೃದಯದಲಿ ಸಮ್ಯಕ್ತ್ವನೀರಪ್ರವಾಹ ನಿತ್ಯಪ್ರವಹಿಸುವುದು ।
ಅವನಿಗೆ ಬದ್ಧಕರ್ಮಗಳು ವಾಲುಕಾವರಣದಂತೆ ನಾಶವಾಗುವವು ॥೭॥

ಅರ್ಥ :- ಯಾವ ಪುರುಷನ ಹೃದಯದಲ್ಲಿ ಸಮ್ಯಕ್ತ್ವರೂಪ ಜಲದ ಪ್ರವಾಹವು ನಿರಂತರವಾಗಿ ಪ್ರವರ್ತಮಾನವಿದೆ ಅವನಿಗೆ ಕರ್ಮರೂಪದ ರಜವು ಎಂದರೆ ಧೂಳದ ಆವರಣವು ತಗಲುವುದಿಲ್ಲ, ಮತ್ತು ಪೂರ್ವಕಾಲದಲ್ಲಿ ಯಾವ ಕರ್ಮಬಂಧವಾಗಿದೆ ಅದುಕೂಡ ನಾಶಕ್ಕೆ ಪ್ರಾಪ್ತವಾಗುತ್ತದೆ.

ಭಾವಾರ್ಥ :- ಸಮ್ಯಕ್ತ್ವಸಹಿತನಾದ ಪುರುಷನಿಗೆ (ನಿರಂತರ ಜ್ಞಾನಚೇತನಾದ ಸ್ವಾಮಿತ್ವರೂಪವಾದ ಪರಿಣಮನವಿರುವುದರಿಂದ) ಕರ್ಮದ ಉದಯದಿಂದಾದ ರಾಗಾದಿ ಭಾವಗಳ ಸ್ವಾಮಿತ್ವವಿರುವುದಿಲ್ಲ, ಆದುದರಿಂದ ಕಷಾಯಗಳ ತೀವ್ರ ಕಲುಷತೆಯಿಂದ ರಹಿತವಾದ ಪರಿಣಾಮಗಳು ಉಜ್ವಲವಿರುತ್ತವೆ ; ಅದಕ್ಕೆ ಜಲದ ಉಪಮೆಯಿದೆ. ಯಾವ ಪ್ರಕಾರ ನಿರಂತರವಾಗಿ ಜಲದ ಪ್ರವಾಹವು ಪ್ರವಹಿಸುತ್ತಿರುವಲ್ಲಿ ಉಸುಕು-ಮಳಲು-ರಜವು ತಗಲುವುದಿಲ್ಲ; ಅದೇ ಪ್ರಕಾರ ಸಮ್ಯಕ್ತ್ವವುಳ್ಳ ಜೀವನು ಕರ್ಮದ ಉದಯವನ್ನು ಭೋಗಿಸುತ್ತಿದ್ದರೂ ಕೂಡ ಕರ್ಮದಿಂದ ಲಿಪ್ತನಾಗುವುದಿಲ್ಲ. ಮತ್ತು ಬಾಹ್ಯ ವ್ಯವಹಾರದ ಅಪೇಕ್ಷೆಯಿಂದ ಯಾವನ ಹೃದಯದಲ್ಲಿ ನಿರಂತರ ಸಮ್ಯಕ್ತ್ವರೂಪಜಲದ ಪ್ರವಾಹವು ಪ್ರವಹಿಸುತ್ತದೆ ಆ ಸಮ್ಯಕ್ತ್ವೀ ಪುರುಷನು ಈ ಕಲಿಕಾಲ ಸಂಬಂಧದ ವಾಸನೆ ಎಂದರೆ ಕುದೇವ-ಕುಶಾಸ್ತ್ರ-ಕುಗುರುಗಳಿಗೆ ನಮಸ್ಕರಿಸುವ ಮೊದಲಾದ ಅತಿಚಾರರೂಪದ ರಜವು ಕೂಡ ತಗಲುವುದಿಲ್ಲ, ಮತ್ತು ಅವನಿಗೆ ಮಿಥ್ಯಾತ್ವಸಂಬಂಧವಾದ ಪ್ರಕೃತಿಗಳ ಭವಿಷ್ಯಬಂಧವೂ ಆಗುವುದಿಲ್ಲವೆಂಬ ತಾತ್ಪರ್ಯವನ್ನು ತಿಳಿದುಕೊಳ್ಳಬೇಕು. ॥೭॥

ಯಾರು ದರ್ಶನದಿಂದ ಭ್ರಷ್ಟರಿದ್ದಾರೆ ಮತ್ತು ಜ್ಞಾನ-ಚಾರಿತ್ರದಿಂದ ಭ್ರಷ್ಟರಿದ್ದಾರೆ ಅವರು ತಾವಂತೂ ಭ್ರಷ್ಟರೇ ಇದ್ದಾರೆ, ಆದರೆ ಇತರರನ್ನು ಕೂಡ ಭ್ರಷ್ಟ ಮಾಡುತ್ತಾರೆ, ಇದು ಅನರ್ಥಕಾರಿಯಿದೆಯೆಂದು ಈಗ ಹೇಳುತ್ತಾರೆ, -

**ಜೇ ದಂಸಣೇಸು ಭಟ್ಠಾ ಣಾಣೇ ಭಟ್ಠಾ ಚರಿತ್ತಭಟ್ಠಾಯ ।**
**ಏದೇ ಭಟ್ಠ ವಿ ಭಟ್ಠಾ ಸೇಸಂ ಪಿ ಜಣಂ ವಿಣಾಸಂತಿ ॥೮॥**

**ಯೇ ದರ್ಶನೇಷು ಭ್ರಷ್ಟಾಃ ಜ್ಞಾನೇ ಭ್ರಷ್ಟಾಃ ಚಾರಿತ್ರ ಭ್ರಷ್ಟಾಃ ಚ ।**
**ಏತೇ ಭ್ರಷ್ಟಾತ್ ಅಪಿ ಭ್ರಷ್ಟಾಃ ಶೇಷಂ ಅಪಿ ಜನಂ ವಿನಾಶಯಂತಿ ॥೮॥**

ಅರ್ಥ :- ಯಾವ ಪುರುಷರು ದರ್ಶನದಲ್ಲಿ ಭ್ರಷ್ಟರಿದ್ದಾರೆ ಮತ್ತು ಜ್ಞಾನ-ಚಾರಿತ್ರದಲ್ಲಿ ಕೂಡ ಭ್ರಷ್ಟರಿದ್ದಾರೆ ಆ ಪುರುಷರು ಭ್ರಷ್ಟರುಗಳಲ್ಲಿ ಕೂಡ ವಿಶೇಷ ಭ್ರಷ್ಟರಿದ್ದಾರೆ. ಕೆಲವರಂತೂ ದರ್ಶನ ಸಹಿತರಿದ್ದಾರೆ, ಆದರೆ ಅವರಿಗೆ ಜ್ಞಾನ-ಚಾರಿತ್ರಗಳಿಲ್ಲ, ಇನ್ನು ಕೆಲವರು ಅಂತರಂಗ ದರ್ಶನದಿಂದ ಭ್ರಷ್ಟರಿದ್ದರೂ ಕೂಡ ಜ್ಞಾನ-ಚಾರಿತ್ರದ ಪಾಲನೆಯನ್ನು ಚೆನ್ನಾಗಿ ಮಾಡುತ್ತಾರೆ; ಮತ್ತು ಯಾರು ದರ್ಶನ-ಜ್ಞಾನ-ಚಾರಿತ್ರ ಈ ಮೂರರಿಂದ ಭ್ರಷ್ಟರಿದ್ದಾರೆ ಅವರಂತೂ ಅತ್ಯಂತ ಭ್ರಷ್ಟರಿದ್ದಾರೆ ; ಅವರು ತಾವಂತೂ ಭ್ರಷ್ಟರೇ ಇದ್ದಾರೆ, ಆದರೆ ಉಳಿದ ಎಂದರೆ ತಮ್ಮನ್ನು ಹೊರತುಪಡಿಸಿ ಇತರ ಜನರನ್ನು ಕೂಡ ನಷ್ಟ ಮಾಡುತ್ತಾರೆ.

ಭಾವಾರ್ಥ :- ಇಲ್ಲಿ ಸಾಮಾನ್ಯ ವಚನವಿರುವುದರಿಂದ ಸತ್ಯಾರ್ಥ ಶ್ರದ್ಧೆ, ಜ್ಞಾನ, ಚಾರಿತ್ರಗಳಂತೂ ದೂರವೇ ಉಳಿದವು, ಆದರೆ ತಮ್ಮ ಮತದ ಶ್ರದ್ಧೆ, ಜ್ಞಾನ, ಆಚರಣೆಯಿಂದ ಕೂಡ ಭ್ರಷ್ಟರಿರುವವರಂತೂ ನಿರರ್ಗಲ

---

**ಯಾವ ಜನ ದರ್ಶನದಿಂ ಭ್ರಷ್ಟ ಜ್ಞಾನದಿಂ ಭ್ರಷ್ಟ ಚಾರಿತ್ರದಿಂ ಭ್ರಷ್ಟರಿಹರು ।**
**ಅವರು ಭ್ರಷ್ಟರಲಿ ಕೂಡ ಪ್ರಭ್ರಷ್ಟರಿದ್ದುಳಿದ ಜನರ ನಷ್ಟ ಮಾಡುವರು ॥೮॥**

ಸ್ವೇಚ್ಛಾಚಾರಿಗಳಿದ್ದಾರೆಂಬ ಆಶಯವನ್ನು ಕೂಡ ಸೂಚಿತಗೊಳಿಸುತ್ತದೆ, ಅವರು ಸ್ವಯಂ ಭ್ರಷ್ಟರಿದ್ದಾರೆ ಅದೇ ಪ್ರಕಾರ ಅನ್ಯ ಜನರನ್ನು ಉಪದೇಶಾದಿಗಳ ಮುಖಾಂತರ ಭ್ರಷ್ಟ ಮಾಡುತ್ತಾರೆ, ಮತ್ತು ಅವರ ಪ್ರವೃತ್ತಿಯನ್ನು ನೋಡಿ ಜನರು ತಾವಾಗಿಯೇ ಭ್ರಷ್ಟರಾಗುತ್ತಾರೆ, ಆದುದರಿಂದ ಇಂಥ ತೀವ್ರ ಕಷಾಯವುಳ್ಳವರು ನಿಷಿದ್ಧರಿದ್ದಾರೆ ; ಅವರ ಸಂಗತಿ ಮಾಡುವುದು ಕೂಡ ಉಚಿತವಿಲ್ಲ. ॥೮॥

ಇಂಥ ಭ್ರಷ್ಟ ಪುರುಷರು ಸ್ವಯಂ ಭ್ರಷ್ಟರಿದ್ದಾರೆ, ಅವರು ಧರ್ಮಾತ್ಮ ಪುರುಷರಿಗೆ ದೋಷ ತಗಲಿಸಿ ಅವರನ್ನು ಭ್ರಷ್ಟರೆಂದು ತಿಳಿಸುತ್ತಾರೆಂಬುದನ್ನು ಈಗ ಹೇಳುತ್ತಾರೆ, –

ಜೋ ಕೋವಿ ಧಮ್ಮಶೀಲೋ ಸಂಜಮತವಣಿಯಮಜೋಗಗುಣಧಾರೀ ।
ತಸ್ಸ ಯ ದೋಸ ಕಹಂತಾ ಭಗ್ಗಾ ಭಗ್ಗತ್ತಣಂ ದಿಂತಿ ॥೯॥

ಯಃ ಕೋಽಪಿ ಧರ್ಮಶೀಲಃ ಸಂಯಮತಪೋನಿಯಮಯೋಗಗುಣಧಾರೀ ।
ತಸ್ಯ ಚ ದೋಷಾನ್ ಕಥಯಂತಃ ಭಗ್ನಾ ಭಗ್ನತ್ವಂ ದದತಿ ॥೯॥

ಅರ್ಥ :– ಯಾವ ಪುರುಷನು ಧರ್ಮಶೀಲ ಎಂದರೆ ತನ್ನ ಸ್ವಸ್ವರೂಪವಾದ ಧರ್ಮವನ್ನು ಸಾಧಿಸುವುದು ಅವನ ಸ್ವಭಾವವಿದೆ, ಮತ್ತು ಸಂಯಮ ಎಂದರೆ ಇಂದ್ರಿಯ–ಮನಸ್ಸಿನ ನಿಗ್ರಹ ಹಾಗೂ ಷಟ್‌ಕಾಯ ಜೀವಗಳ ರಕ್ಷಣೆ, ತಪಸ್ಸು ಎಂದರೆ ಬಾಹ್ಯಾಭ್ಯಂತರ ಭೇದದ ಅಪೇಕ್ಷೆಯಿಂದ ಹನ್ನೆರಡು ಪ್ರಕಾರದ ತಪಸ್ಸು, ನಿಯಮ ಎಂದರೆ ಆವಶ್ಯಕ ಮೊದಲಾದ ನಿತ್ಯಕರ್ಮ, ಯೋಗ ಎಂದರೆ ಸಮಾಧಿ, ಧ್ಯಾನ ಹಾಗೂ ವರ್ಷಾಕಾಲ ಮೊದಲಾದ ಕಾಲಯೋಗ, ಗುಣ ಎಂದರೆ ಮೂಲ ಗುಣ–ಉತ್ತರ ಗುಣಗಳನ್ನು ಧಾರಣ ಮಾಡುವಂಥವನಿದ್ದಾನೆ ಅವನಿಗೆ ಕೆಲವರು ಮತಭ್ರಷ್ಟರಾದ ಜೀವರುಗಳು ದೋಷಗಳ ಆರೋಪಣೆ ಮಾಡಿ ಇವನು ಭ್ರಷ್ಟನಿದ್ದಾನೆ, ದೋಷಯುಕ್ತನಿದ್ದಾನೆಂದು ಹೇಳುತ್ತಾರೆ, ಆದರೆ ಆ ಪಾಪಾತ್ಮರಾದ ಜೀವರುಗಳು ಸ್ವಯಂ ಭ್ರಷ್ಟರಿರುವುದರಿಂದ ತಮ್ಮ ಅಭಿಮಾನದ ಪುಷ್ಟಿಯ ಸಲುವಾಗಿ ಅನ್ಯ ಧರ್ಮಾತ್ಮ ಪುರುಷರಿಗೆ ಭ್ರಷ್ಟತನವನ್ನು ತಗಲಿಸುತ್ತಾರೆ.

ಭಾವಾರ್ಥ :– ಸ್ವಯಂ ಪಾಪಿಯಾಗಿರುವವರು ಧರ್ಮಾತ್ಮನಲ್ಲಿ ದೋಷ ಹೇಳಿ ಅವನನ್ನು ತಮ್ಮ ಸಮಾನ ಮಾಡಲಪೇಕ್ಷಿಸುವುದು ಇದು ಪಾಪಿಗಳ ಸ್ವಭಾವವೇ ಇರುತ್ತದೆ. ಇಂಥ ಪಾಪಿಗಳ ಸಂಗತಿಯನ್ನು ಮಾಡಬಾರದು. ॥೯॥

ಯಾವನು ದರ್ಶನ ಭ್ರಷ್ಟನಿದ್ದಾನೆ ಅವನು ಮೂಲದಿಂದ ಭ್ರಷ್ಟನಿದ್ದಾನೆ, ಅವನಿಗೆ ಫಲದ ಪ್ರಾಪ್ತಿಯಾಗುವುದಿಲ್ಲ–ವೆಂಬುದನ್ನು ಈಗ ಹೇಳುತ್ತಾರೆ, –

ಜಹ ಮೂಲಮ್ಮಿ ವಿಣಟ್ಠೇ ದುಮಸ್ಸ ಪರಿವಾರ ಣತ್ಥಿ ಪರವಡ್ಢೀ ।
ತಹ ಜಿಣದಂಸಣಭಟ್ಠಾ ಮೂಲವಿಣಟ್ಠಾ ಣ ಸಿಜ್ಝಂತಿ ॥೧೦॥

---

ಯಾವ ಧರ್ಮಶೀಲನು ಸಂಯಮತಪನಿಯಮಯೋಗಗುಣ ಧರಿಪನು ।
ಅವನನು ಭ್ರಷ್ಟದೋಷಯುಕ್ತನೆಂದು ಪೇಳ್ವನು ಸ್ವಯಂಭ್ರಷ್ಟನಿರುವವನು ॥೯॥

ಹೇಗೆ ವೃಕ್ಷದ ಮೂಲನಾಶದಿಂದದರ ಪರಿವಾರದ ವೃದ್ಧಿಯಾಗುವುದಿಲ್ಲ ।
ಹಾಗೆ ಜಿನದರ್ಶನದಿಂ ಭ್ರಷ್ಟರ್ಮೂಲದಿಂದ ವಿನಷ್ಟರಿದ್ದವರ್ಗೆಸಿದ್ಧಿಯಿಲ್ಲ ॥೧೦॥

**ಯಥಾ ಮೂಲೇ ವಿನಷ್ಟೇ ದ್ರುಮಸ್ಯ ಪರಿವಾರಸ್ಯ ನಾಸ್ತಿ ಪರಿವೃದ್ಧಿಃ ।**
**ತಥಾ ಜಿನದರ್ಶನಭ್ರಷ್ಟಾಃ ಮೂಲವಿನಷ್ಟಾಃ ನ ಸಿದ್ಧ್ಯಂತಿ ॥೧೦॥**

ಅರ್ಥ ಃ- ಯಾವ ಪ್ರಕಾರ ವೃಕ್ಷದ ಮೂಲವು ವಿನಷ್ಟವಾದ ಮೇಲೆ ಅದರ ಪರಿವಾರ ಎಂದರೆ ಸ್ಕಂಧ, ಶಾಖೆ, ಪತ್ರ, ಪುಷ್ಪ, ಫಲದ ವೃದ್ಧಿಯಾಗುವುದಿಲ್ಲ, ಅದೇ ಪ್ರಕಾರ ಯಾರು ಜಿನದರ್ಶನದಿಂದ ಭ್ರಷ್ಟರಿದ್ದಾರೆ ಎಂದರೆ ಬಾಹ್ಯದಲ್ಲಂತೂ ನಗ್ನ-ದಿಗಂಬರ ಯಥಾಜಾತರೂಪ ನಿರ್ಗ್ರಂಥ ಲಿಂಗ, ಮೂಲಗುಣಗಳ ಧಾರಣ, ಮಯೂರಗರಿಯ ಪಿಂಛಿ ಹಾಗೂ ಕಮಂಡಲು ಧಾರಣ ಮಾಡುವುದು, ಯಥಾವಿಧಿ ದೋಷ ನಿವಾರಿಸಿ ಎದ್ದು ನಿಂತು ಶುದ್ಧ ಆಹಾರ ತೆಗೆದುಕೊಳ್ಳುವುದು ಇವೇ ಮೊದಲಾದ ಬಾಹ್ಯ ಶುದ್ಧ ವೇಷ ಧಾರಣ ಮಾಡುತ್ತಾರೆ, ಮತ್ತು ಅಂತರಂಗದಲ್ಲಿ ಜೀವ ಮೊದಲಾದ ಆರು ದ್ರವ್ಯಗಳು, ನವಪದಾರ್ಥಗಳು, ಸಪ್ತತತ್ತ್ವಗಳ ಯಥಾರ್ಥ ಶ್ರದ್ಧೆ ಹಾಗೂ ಭೇದವಿಜ್ಞಾನದಿಂದ ಆತ್ಮಸ್ವರೂಪದ ಅನುಭವದಂಥ ದರ್ಶನ-ಮತದಿಂದ ಬಾಹ್ಯರಿದ್ದಾರೆ ಅವರು ಮೂಲವಿನಷ್ಟರಿದ್ದಾರೆ, ಅವರಿಗೆ ಸಿದ್ಧಿಯಾಗುವುದಿಲ್ಲ, ಅವರು ಮೋಕ್ಷಫಲವನ್ನು ಪ್ರಾಪ್ತಮಾಡಿಕೊಳ್ಳುವುದಿಲ್ಲ.

ಜಿನದರ್ಶನವೇ ಮೂಲ ಮೋಕ್ಷಮಾರ್ಗವಿದೆಯೆಂಬುದನ್ನು ಈಗ ಹೇಳುತ್ತಾರೆ, -

**ಜಹ ಮೂಲಾಓ ಖಂಧೋ ಸಾಹಾಪರಿವಾರ ಬಹುಗುಣೋ ಹೋಇ ।**
**ತಹ ಜಿಣದಂಸಣ ಮೂಲೋ ಣಿದ್ದಿಟ್ಠೋ ಮೋಕ್ಖಮಗ್ಗಸ್ಸ ॥೧೧॥**

**ಯಥಾ ಮೂಲಾತ್ ಸ್ಕಂಧಃ ಶಾಖಾಪರಿವಾರಃ ಬಹುಗುಣಃ ಭವತಿ ।**
**ತಥಾ ಜಿನದರ್ಶನಂ ಮೂಲಂ ನಿರ್ದಿಷ್ಟಂ ಮೋಕ್ಷಮಾರ್ಗಸ್ಯ ॥೧೧॥**

ಅರ್ಥ ಃ- ಯಾವ ಪ್ರಕಾರ ವೃಕ್ಷದ ಮೂಲದಿಂದ ಸ್ಕಂಧಗಳಾಗುತ್ತವೆ ; ಆ ಸ್ಕಂಧಗಳು ಹೇಗಾಗುತ್ತವೆಂದರೆ ಇದರ ಶಾಖೆ ಮೊದಲಾದ ಪರಿವಾರ ಗುಣಗಳು ಅಧಿಕವಿವೆ. ಇಲ್ಲಿ ಗುಣ ಶಬ್ದವು ಅಧಿಕದ ವಾಚಕವಿದೆ ; ಅದೇ ಪ್ರಕಾರ ಗಣಧರ ದೇವಾದಿಕರು ಜಿನದರ್ಶನವನ್ನು ಮೋಕ್ಷಮಾರ್ಗದ ಮೂಲವೆಂದು ಹೇಳಿದ್ದಾರೆ.

ಭಾವಾರ್ಥ ಃ- ಇಲ್ಲಿ ಜಿನದರ್ಶನ ಎಂದರೆ ತೀರ್ಥಂಕರ ಪರಮದೇವರು ಯಾವ ದರ್ಶನದ ಗ್ರಹಣ ಮಾಡಿದರು ಅದರದೇ ಉಪದೇಶ ಕೊಟ್ಟಿದ್ದಾರೆ ಅದು ಮೂಲಸಂಘವಿದೆ ; ಅದನ್ನು ಇಪ್ಪತ್ತೆಂಟು ಮೂಲಗುಣ ಸಹಿತವೆಂದು ಹೇಳಿದೆ. ಐದು ಮಹಾವ್ರತ, ಐದು ಸಮಿತಿ, ಆರು ಆವಶ್ಯಕ, ಪಂಚೇಂದ್ರಿಯಗಳನ್ನು ವಶದಲ್ಲಿಡುವುದು, ಸ್ನಾನ ಮಾಡದಿರುವುದು, ಭೂಮಿಶಯನ, ವಸ್ತ್ರಾದಿಗಳ ತ್ಯಾಗ ಎಂದರೆ ದಿಗಂಬರ ಮುದ್ರೆ, ಕೇಶಲೋಚಮಾಡುವುದು, ಒಂದು ಬಾರಿ ಭೋಜನ ಮಾಡುವುದು, ಎದ್ದು ನಿಂತು ಆಹಾರ ತೆಗೆದುಕೊಳ್ಳುವುದು, ದಂತಧಾವನ ಮಾಡದಿರುವುದು ಇವು ಇಪ್ಪತ್ತೆಂಟು ಮೂಲಗುಣಗಳಿವೆ. ಮತ್ತು ನಲವತ್ತಾರು ದೋಷಗಳನ್ನು ನಿವಾರಿಸಿ ಆಹಾರ ಮಾಡುವುದು ಅದು ಏಷಣಾ ಸಮಿತಿಯಲ್ಲಿ ಬರುವುದು. ಈರ್ಯಾಪಥ ನೋಡಿ ನಡೆಯುವುದು ಅದು ಈರ್ಯಾ ಸಮಿತಿಯಲ್ಲಿ ಬರುವುದು.

---

**ಹೇಗೆ ಮೂಲನಾಶದಿಂದ ವೃಕ್ಷದ ಸ್ಕಂಧ ಶಾಖಾ ಪರಿವಾರದ ವೃದ್ಧಿಯಿಲ್ಲ ।**
**ಹಾಗೆ ಜಿನದರ್ಶನಾತ್ಮಕ ಮೂಲವಿನಷ್ಟದಿಂ ಮೋಕ್ಷಮಾರ್ಗದ ಸಿದ್ಧಿಯಿಲ್ಲ ॥೧೧॥**

ಮತ್ತು ದಯೆಯ ಉಪಕರಣವಾದ ನವಿಲುಗರಿಯ ಪಿಂಛಿ ಹಾಗೂ ಶೌಚದ ಉಪಕರಣವಾದ ಕಮಂಡಲವನ್ನು ಧಾರಣ ಮಾಡುವಂಥ ಬಾಹ್ಯ ವೇಷವಿದೆ. ಅಲ್ಲದೆ ಅಂತರಂಗದಲ್ಲಿ ಜೀವ ಮೊದಲಾದ ಷಡ್‌ದ್ರವ್ಯ , ಪಂಚಾಸ್ತಿಕಾಯ, ಸಪ್ತತತ್ತ್ವ, ನವಪದಾರ್ಥಗಳನ್ನು ಯಥೋಕ್ತ ತಿಳಿದುಕೊಂಡು ಶ್ರದ್ಧೆ ಮಾಡುವುದು ಮತ್ತು ಭೇದವಿಜ್ಞಾನದ ಮುಖಾಂತರ ತಮ್ಮ ಆತ್ಮ ಸ್ವರೂಪದ ಚಿಂತನೆ ಮಾಡುವುದು, ಅನುಭವ ಮಾಡುವಂಥ ದರ್ಶನ ಎಂದರೆ ಮತವು ಅದು ಮೂಲಸಂಘದ್ದಿದೆ. ಇಂಥ ಜಿನ ದರ್ಶನವಿದೆ ಅದು ಮೋಕ್ಷ ಮಾರ್ಗದ ಮೂಲವಿದೆ ; ಈ ಮೂಲದಿಂದ ಮೋಕ್ಷಮಾರ್ಗದ ಸಮಸ್ತ ಪ್ರವೃತ್ತಿಗಳು ಸಫಲವಾಗುತ್ತವೆ. ಮತ್ತು ಯಾರು ಇದರಿಂದ ಭ್ರಷ್ಟರಾಗಿದ್ದಾರೆ ಅವರು ಈ ಪಂಚಮಕಾಲದ ದೋಷದಿಂದ ಜೈನಾಭಾಸಿಗಳಾಗಿದ್ದಾರೆ. ಅವರಲ್ಲಿ ಶ್ವೇತಾಂಬರ, ದ್ರಾವಿಡ, ಯಾಪನೀಯ, ಗೋಪುಚ್ಛಪಿಚ್ಛ, ನಿಪಿಚ್ಛವೆಂಬ ಐದು ಸಂಘಗಳಾಗಿವೆ ; ಅವರು ಸೂತ್ರ ಸಿದ್ಧಾಂತಗಳನ್ನು ಅಪಭ್ರಂಶ ಮಾಡಿದ್ದಾರೆ. ಯಾರು ಬಾಹ್ಯ ವೇಷವನ್ನು ಬದಲಿಸಿ ಆಚರಣವನ್ನು ಕೆಡಿಸಿದ್ದಾರೆ. ಅವರು ಜಿನಮತದ ಮೂಲಸಂಘದಿಂದ ಭ್ರಷ್ಟರಿದ್ದಾರೆ, ಅವರಿಗೆ ಮೋಕ್ಷಮಾರ್ಗದ ಪ್ರಾಪ್ತಿಯಾಗುವುದಿಲ್ಲ. ಮೋಕ್ಷಮಾರ್ಗದ ಪ್ರಾಪ್ತಿಯು ಮೂಲಸಂಘದ ಶ್ರದ್ಧೆ-ಜ್ಞಾನ-ಆಚರಣದಿಂದಲೇ ಇದೆಯೆಂಬ ನಿಯಮವಿದೆಯೆಂದು ತಿಳಿಯಬೇಕು.

ಯಾರು ಯಥಾರ್ಥ ದರ್ಶನದಿಂದ ಭ್ರಷ್ಟರಿದ್ದಾರೆ ಮತ್ತು ದರ್ಶನದ ಧಾರಕರಿಂದ ತಮ್ಮ ವಿನಯ ಮಾಡಿಸಿಕೊಳ್ಳಲಪೇಕ್ಷಿಸುತ್ತಾರೆ ಅವರು ದುರ್ಗತಿಗೆ ಪ್ರಾಪ್ತರಾಗುತ್ತಾರೆಂಬುದನ್ನು ಈಗ ಹೇಳುತ್ತಾರೆ,-

[೧]ಜೇ ದಂಸಣೇಸು ಭಟ್ಠಾ ಪಾಏ ಪಾಡಂತಿ ದಂಸಣಧರಾಣಂ ।
ತೇ ಹೋಂತಿ ಲಲ್ಲಮೂಆ ಬೋಹೀ ಪುಣ ದುಲ್ಲಹಾ ತೇಸಿಂ ॥೧೨॥

ಯೇ ದರ್ಶನೇಷು ಭ್ರಷ್ಟಾಃ ಪಾದಯೋಃ ಪಾತಯಂತಿ ದರ್ಶನಧರಾನ್ ।
ತೇ ಭವಂತಿ ಲಲ್ಲಮೂಕಾಃ ಬೋಧಿಃ ಪುನಃ ದುರ್ಲಭಾ ತೇಷಾಮ್ ॥೧೨॥

ಅರ್ಥ :- ಯಾವ ಪುರುಷರು ದರ್ಶನದಲ್ಲಿ ಭ್ರಷ್ಟರಿದ್ದಾರೆ ಮತ್ತು ಅನ್ಯ ಯಾರು ದರ್ಶನದ ಧಾರಕರಿದ್ದಾರೆ ಅವರನ್ನು ತಮ್ಮ ಕಾಲಿಗೆ ಬೀಳಿಸಿಕೊಳ್ಳುತ್ತಾರೆ, ನಮಸ್ಕಾರಾದಿಗಳನ್ನು ಮಾಡಿಸಿಕೊಳ್ಳುತ್ತಾರೆ ಅವರು ಪರಭವದಲ್ಲಿ ಹೆಳವ, ಮೂಗರಾಗುತ್ತಾರೆ, ಮತ್ತು ಅವರಿಗೆ ಬೋಧಿ ಎಂದರೆ ಸಮ್ಯಗ್ದರ್ಶನ-ಜ್ಞಾನ-ಚಾರಿತ್ರದ ಪ್ರಾಪ್ತಿಯು ದುರ್ಲಭವಾಗುತ್ತದೆ.

ಭಾವಾರ್ಥ :- ಯಾರು ದರ್ಶನದಿಂದ ಭ್ರಷ್ಟರಿದ್ದಾರೆ ಅವರು ಮಿಥ್ಯಾದೃಷ್ಟಿಗಳಿದ್ದಾರೆ ಮತ್ತು ದರ್ಶನದ ಧಾರಕರಿದ್ದಾರೆ ಅವರು ಸಮ್ಯಗ್ದೃಷ್ಟಿಗಳಿದ್ದಾರೆ ; ಯಾರು ಮಿಥ್ಯಾದೃಷ್ಟಿಗಳಾಗಿ ಸಮ್ಯಗ್ದೃಷ್ಟಿಗಳಿಂದ ನಮಸ್ಕಾರವನ್ನು ಅಪೇಕ್ಷಿಸುತ್ತಾರೆ ಅವರು ತೀವ್ರ ಮಿಥ್ಯಾತ್ವದ ಉದಯ ಸಹಿತರಿದ್ದಾರೆ ಅವರು ಮರುಭವದಲ್ಲಿ ಹೆಳವ, ಮೂಗರಾಗುತ್ತಾರೆ

---

ತಾವು ದರ್ಶನ ಭ್ರಷ್ಟರಿದ್ದಾದರ್ಶನಧಾರಕರಿಂ ಪೂಜಿಸಿಕೊಳುವವರು ।
ಅವರು ಮುಂದೆ ಹೆಳವಮೂಗರಪ್ಪರವರ್ಗೆ ಬೋಧಿದುರ್ಲಭವಾಗುವುದು ॥೧೨॥

---

೧ ''ಜೇ ದಂಸಣೇಷು ಭಟ್ಟಾ ಪಾಏ ನ ಪಡಂತಿ ದಂಸಣಧರಾಣಂ'' ಮುದ್ರಿತ ಸಂಸ್ಕೃತ ಸಟೀಕ ಪ್ರತಿಯಲ್ಲಿ ಈ ಗಾಥೆಯ ಪೂರ್ವಾರ್ಧವು ಹೀಗಿದ್ದು ಉತ್ತರಾರ್ಧವು ಸಮಾನವಿದೆ. ಇದರ ಅರ್ಥವು-ದರ್ಶನಭ್ರಷ್ಟರಾದ ಪುರುಷರು ದರ್ಶನಧಾರಿಗಳ ಚರಣಗಳಲ್ಲಿ ಮಣೆಯುವುದಿಲ್ಲ,

ಎಂದರೆ ಏಕೇಂದ್ರಿಯರಾಗುತ್ತಾರೆ, ಅವರಿಗೆ ಕಾಲುಗಳಿರುವುದಿಲ್ಲ, ಅವರು ನಿಜವಾಗಿ ಹೆಳವ ಮೂಗರಿದ್ದಾರೆ ; ಈ ಪ್ರಕಾರ ಏಕೇಂದ್ರಿಯ-ಸ್ಥಾವರವಾಗಿ ನಿಗೋದದಲ್ಲಿ ವಾಸಮಾಡುತ್ತಾರೆ, ಅಲ್ಲಿ ಅನಂತ ಕಾಲದವರೆಗೆ ಇರುತ್ತಾರೆ ; ಅವರಿಗೆ ದರ್ಶನ-ಜ್ಞಾನ ಚಾರಿತ್ರದ ಪ್ರಾಪ್ತಿಯು ದುರ್ಲಭವಾಗುತ್ತದೆ ; ಮಿಥ್ಯಾತ್ವದ ಫಲವನ್ನು ನಿಗೋದವೆಂದೇ ಹೇಳಿದೆ. ಈ ಪಂಚಮಕಾಲದಲ್ಲಿ ಮಿಥ್ಯಾಮತದ ಆಚಾರ್ಯರುಗಳಾಗಿ ಜನರಿಂದ ವಿನಯ, ಪೂಜಾದಿಗಳನ್ನು ಅಪೇಕ್ಷಿಸುತ್ತಾರೆ ಅವರ ಸಲುವಾಗಿ ತ್ರಸರಾಶಿಯಕಾಲವು ಪೂರ್ಣವಾಗಿ, ಈಗ ಏಕೇಂದ್ರಿಯವಾಗಿ ನಿಗೋದದಲ್ಲಿ ವಾಸಮಾಡುವರೆಂಬುದಾಗಿ ತಿಳಿದುಬರುತ್ತದೆ.

ಯಾರು ದರ್ಶನಭ್ರಷ್ಟರಿದ್ದಾರೆ ಅವರಿಗೆ ಲಜ್ಜೆ ಮೊದಲಾದುವಿಂದ ಕೂಡ ನಮಸ್ಕಾರ ಮಾಡುತ್ತಾರೆ ಅವರೂ ಅವರ ಹಾಗೆಯೇ ಇದ್ದಾರೆಂದು ಈಗ ಹೇಳುತ್ತಾರೆ, –

**ಜೇ ವಿ ಪಡಂತಿ ಯ ತೇಸಿಂ ಜಾಣಂತಾ ಲಜ್ಜಾಗಾರವಭಯೇಣ ।**
**ತೇಸಿಂ ಪಿ ಣತ್ಥಿ ಬೋಹೀ ಪಾವಂ ಅಣುಮೋಯಮಾಣಾಣಂ ॥೧೩॥**

**ಯೇಽಪಿ ಪತಂತಿ ಚ ತೇಷಾಂ ಜಾನಂತಃ ಲಜ್ಜಾಗಾರವಭಯೇನ ।**
**ತೇಷಾಮಪಿ ನಾಸ್ತಿ ಬೋಧಃ ಪಾಪಂ ಅನುಮನ್ಯಮಾನಾನಾಮ್ ॥೧೩॥**

ಅರ್ಥ :- ಯಾವ ಪುರುಷರು ದರ್ಶನ ಸಹಿತರಿದ್ದಾರೆ ಅವರು ಕೂಡ, ಯಾರು ದರ್ಶನ ಭ್ರಷ್ಟರಿದ್ದಾರೆ ಅವರನ್ನು ಮಿಥ್ಯಾದೃಷ್ಟಿಗಳೆಂದು ತಿಳಿಯುತ್ತಿದ್ದರೂ ಕೂಡ ಅವರ ಕಾಲಿಗೆ ಬೀಳುತ್ತಾರೆ, ಅವರಿಗೆ ಲಜ್ಜೆ ಭಯ, ದೊಡ್ಡಸ್ತಿಕೆಯಿಂದ ವಿನಯಾದಿಗಳನ್ನು ಮಾಡುತ್ತಾರೆ ಅವರಿಗೆ ಕೂಡ ಬೋಧಿ ಎಂದರೆ ದರ್ಶನ-ಜ್ಞಾನ-ಚಾರಿತ್ರದ ಪ್ರಾಪ್ತಿಯಾಗುವುದಿಲ್ಲ, ಏಕೆಂದರೆ ಅವರು ಕೂಡ ಮಿಥ್ಯಾತ್ವದ-ಪಾಪದ ಅನುಮೋದನೆ ಮಾಡುತ್ತಾರೆ. ಮಾಡುವುದು, ಮಾಡಿಸುವುದು, ಅನುಮೋದನೆ ಕೊಡುವುದನ್ನು ಸಮಾನವಾಗಿ ಹೇಳಿದ್ದಾರೆ. ಇಲ್ಲಿ ಲಜ್ಜೆಯು ಹೇಗಿದೆಯೆಂದರೆ ನಾವು ಯಾರಿಗೋ ವಿನಯ ಮಾಡದಿದ್ದರೆ ನಮ್ಮನ್ನು ಜನರು ಉದ್ಧತ ಅಭಿಮಾನಿಯೆಂದು ಹೇಳುವರು, ಆದುದರಿಂದ ನಮಗಂತೂ ಎಲ್ಲರ ಅನುಸರಣೆ ಮಾಡುವುದಿದೆಯೆಂಬ ಲಜ್ಜೆಯಿಂದ ದರ್ಶನ ಭ್ರಷ್ಟರಿಗೆ ಕೂಡ ವಿನಯಾದಿಗಳನ್ನು ಮಾಡುತ್ತಾರೆ. ಮತ್ತು ಭಯವು ಹೇಗಿದೆಯೆಂದರೆ ಇವನು ರಾಜಮಾನ್ಯನಿದ್ದಾನೆ ಹಾಗೂ ಮಂತ್ರ-ವಿದ್ಯೆ ಮೊದಲಾದ ಸಾಮರ್ಥ್ಯದಿಂದ ಯುಕ್ತನಿದ್ದಾನೆ, ಇವನಿಗೆ ವಿನಯ ಮಾಡದಿದ್ದರೆ ನಮ್ಮ ಮೇಲೆ ಏನಾದರೂ ಉಪಟಳ ಮಾಡಬಹುದೆಂಬ ಭಯದಿಂದ ವಿನಯ ಮಾಡುತ್ತಾರೆ. ಮತ್ತು ಗಾರವವನ್ನು ರಸಗಾರವ, ಋದ್ಧಿಗಾರವ, ಸಾತಗಾರವವೆಂದು ಮೂರು ಪ್ರಕಾರವಾಗಿ ಹೇಳಿದೆ. ಅಲ್ಲಿ ರಸಗಾರವವಂತೂ ಮಿಷ್ಟ, ಇಷ್ಟ, ಪುಷ್ಟ ಭೋಜನಾದಿಗಳು ದೊರೆಯುತ್ತಿರುವಾಗ ಅದರಿಂದ ಪ್ರಮಾದಿಯಿರುತ್ತಾನೆ ; ಹಾಗೂ ಋದ್ಧಿಗಾರವವು ಒಂದಿಷ್ಟು ತಪದ ಪ್ರಭಾವ ಮೊದಲಾದವುಗಳಿಂದ ಋದ್ಧಿಯ ಪ್ರಾಪ್ತಿಯಾದಾಗ ಅದರ ಗೌರವವು ಬಂದುಬಿಡುತ್ತದೆ, ಆದರಿಂದ ಉದ್ಧತ, ಪ್ರಮಾದಿಯಿರುತ್ತಾನೆ. ಇನ್ನು ಸಾತಗಾರವವು ಶರೀರವು ನಿರೋಗವಿದ್ದು ಒಂದಿಷ್ಟು ಕ್ಲೇಶದ ಕಾರಣವು ಬಾರದಿರುವಾಗ ಸುಖೀತನವು ಬಂದುಬಿಡುತ್ತದೆ ಅದರಿಂದ ಮಗ್ನರಿರುತ್ತಾರೆ. ಹೀಗೆ ಗಾರವ ಭಾವದ ಮದದಿಂದ ಯಾವ ಒಳಿತು-ಕೇಡುಗಳ ವಿಚಾರ ಮಾಡದಿರುವಾಗ ದರ್ಶನ

---

**ಅವರು ಪತಿತವೆಂದರಿದವರಿಗೆ ನಿಂದೆ ಲಜ್ಜೆ ಭಯದಿಂದ ನಮಿಪರು ।**
**ಅವರ್ಗೆಸಹ ಬೋಧಿಯಿಲ್ಲ ಪಾಪಾನುಮೋದನಮಾಡುತಿರುವುದರಿಂದ ॥೧೩॥**

ಭ್ರಷ್ಟರಿಗೆ ಕೂಡ ವಿನಯ ಮಾಡತೊಡಗುತ್ತಾರೆ. ಇವೇ ಮೊದಲಾದ ನಿಮಿತ್ತದಿಂದ ದರ್ಶನ ಭ್ರಷ್ಟರಿಗೆ ವಿನಯ ಮಾಡಿದರೆ ಅದರಲ್ಲಿ ಮಿಥ್ಯಾತ್ವದ ಅನುಮೋದನೆ ಬರುತ್ತದೆ. ಅವನನ್ನು ಒಳ್ಳೆಯವನೆಂದು ತಿಳಿದುಕೊಂಡರೆ ತಾನು ಕೂಡ ಅವನ ಸಮಾನವೇ ಆದನು, ಆಗ ಅವನಿಗೆ ಬೋಧಿಯನ್ನು ಹೇಗೆ ಹೇಳಲಾಗುವುದು ? - ಎಂಬುದಾಗಿ ತಿಳಿಯುವುದು.

ದುವಿಹಂ ಪಿ ಗಂಥಚಾಯಂ ತೀಸು ವಿ ಜೋಏಸು ಸಂಜಮೋ ಠಾದಿ ।
ಣಾಣಮ್ಮಿ ಕರಣಸುದ್ಧೇ ಉಬ್ಭಸಣೇ ದಂಸಣಂ ಹೋದಿ ॥೧೪॥

ದ್ವಿವಿಧಃ ಅಪಿ ಗ್ರಂಥತ್ಯಾಗಃ ತ್ರಿಷು ಅಪಿ ಯೋಗೇಷು ಸಂಯಮಃ ತಿಷ್ಠತಿ ।
ಜ್ಞಾನೇ ಕರಣಶುದ್ಧೇ ಉದ್ಭೋಜನೇ ದರ್ಶನಂ ಭವತಿ ॥೧೪॥

ಅರ್ಥ :- ಎಲ್ಲಿ ಬಾಹ್ಯಾಭ್ಯಂತರ ಭೇದದಿಂದ ಎರಡೂ ಪ್ರಕಾರದ ಪರಿಗ್ರಹದ ತ್ಯಾಗವಿದೆ ಮತ್ತು ಮನ-ವಚನ-ಕಾಯವೆಂದು ಮೂರು ಯೋಗಗಳಲ್ಲಿ ಸಂಯಮವಿದೆ ಹಾಗೂ ಕೃತ-ಕಾರಿತ-ಅನುಮೋದನವೆಂದು ಮೂರು ಕರಣಗಳು ಯಾವುದರಲ್ಲಿ ಶುದ್ಧವಿವೆ ಅದು ಜ್ಞಾನವಿದೆ, ಇನ್ನು ನಿರ್ದೋಷ ಎಂದರೆ ಕೃತ-ಕಾರಿತ-ಅನುಮೋದನವು ತಮಗೆ ತಗಲದಂತೆ ಎದ್ದುನಿಂತು ಪಾಣಿಪಾತ್ರದಲ್ಲಿ ಆಹಾರ ಮಾಡುವುದು. ಹೀಗೆ ಮೂರ್ತಿಮಂತ ದರ್ಶನವಿರುತ್ತದೆ.

ಭಾವಾರ್ಥ :- ಇಲ್ಲಿ ದರ್ಶನ ಎಂದರೆ ಮತವಿದೆ ; ಅಲ್ಲಿ ಬಾಹ್ಯ ವೇಷವು ಶುದ್ಧವಾಗಿ ಕಂಡುಬರುವುದು ಅದು ದರ್ಶನವಿದೆ ; ಅದೇ ಅದರ ಅಂತರಂಗ ಭಾವವನ್ನು ತಿಳಿಸಿಕೊಡುತ್ತದೆ, ಅಲ್ಲಿ ಬಾಹ್ಯ ಪರಿಗ್ರಹ ಎಂದರೆ ಧನ-ಧಾನ್ಯಾದಿಗಳು ಮತ್ತು ಅಂತರಂಗ ಪರಿಗ್ರಹವೆಂದರೆ ಮಿಥ್ಯಾತ್ವ-ಕಷಾಯಗಳು, ಅವು ಎಲ್ಲಿ ಇರುವುದಿಲ್ಲ, ಯಥಾಜಾತ ದಿಗಂಬರ ಮೂರ್ತಿಯಿರುವುದು, ಹಾಗೂ ಇಂದ್ರಿಯ-ಮನಸ್ಸುಗಳನ್ನು ವಶದಲ್ಲಿಡುವುದು, ತ್ರಸ-ಸ್ಥಾವರ ಜೀವಗಳ ಮೇಲೆ ದಯೆ ಮಾಡುವುದು, ಹೀಗೆ ಮನ-ವಚನ-ಕಾಯಗಳಿಂದ ಸಂಯಮದ ಶುದ್ಧ ಪಾಲನ ಮಾಡುವುದು, ಮತ್ತು ಜ್ಞಾನದಲ್ಲಿ ವಿಕಾರ ಮಾಡುವುದು, ಮಾಡಿಸುವುದು, ಅನುಮೋದನ ಕೊಡುವುದು ಹೀಗೆ ಮೂರು ಕರಣಗಳಿಂದ ವಿಕಾರವಿಲ್ಲದಿರುವುದು, ಇನ್ನು ನಿರ್ದೋಷವಾಗಿ ಪಾಣಿಪಾತ್ರದಲ್ಲಿ ಎದ್ದು ನಿಂತು ಆಹಾರ ಸ್ವೀಕರಿಸುವುದು-ಹೀಗೆ ದರ್ಶನದ ಮೂರ್ತಿಯಿದೆ ಅದು ಜಿನದೇವರ ಮತವಿದೆ, ಅದೇ ವಂದನೆಗೆ ಪೂಜೆಗೆ ಯೋಗ್ಯವಿದೆ. ಅನ್ಯ ಪಾಖಂಡ ವೇಷಗಳು ವಂದನೆಗೆ-ಪೂಜೆಗೆ ಯೋಗ್ಯವಿಲ್ಲ.

ಈ ಸಮ್ಯಗ್ದರ್ಶನದಿಂದಲೇ ಕಲ್ಯಾಣ-ಅಕಲ್ಯಾಣದ ನಿಶ್ಚಯವಾಗುತ್ತದೆಂಬುದನ್ನು ಮುಂದೆ ಹೇಳುತ್ತಾರೆ,-

ಸಮ್ಮತ್ತಾದೋ ಣಾಣಂ ಣಾಣಾದೋ ಸವ್ವಭಾವಉವಲದ್ಧೀ ।
ಉವಲದ್ಧಪಯತ್ಥೇ ಪುಣ ಸೇಯಾಸೇಯಂ ವಿಯಾಣೇದಿ ॥೧೫॥

---

ಎರಡು ವಿಧದ ಪರಿಗ್ರಹ ತ್ಯಾಗ ಮೂರು ಯೋಗಗಳಲ್ಲಿ ಸಂಯಮವಿದೆ ।
ಕರಣಶುದ್ಧ ಜ್ಞಾನ ನಿರ್ದೋಷ ಸ್ಥಿತಿಭೋಜನದಾಶ್ರಿತವಿದೆ ದರ್ಶನವು ॥೧೪॥

ಸಮ್ಯಕ್ತ್ವದಿಂದ ಜ್ಞಾನ ಜ್ಞಾನದಿಂದೆಲ್ಲ ಭಾವಗಳ ಉಪಲಬ್ಧಿಯಾಗುವುದು ।
ಗಮ್ಯ ಪದಾರ್ಥಗಳಿಂದ ಮತ್ತೆ ಶ್ರೇಯ-ಅಶ್ರೇಯಗಳು ತಿಳಿದುಬರುವವು ॥೧೫॥

ಸಮ್ಯಕ್ತ್ವಾತ್ ಜ್ಞಾನಂ ಜ್ಞಾನಾತ್ ಸರ್ವಭಾವೋಪಲಬ್ಧಿಃ ।
ಉಪಲಬ್ಧಪದಾರ್ಥೇ ಪುನಃ ಶ್ರೇಯೋಽಶ್ರೇಯೋ ವಿಜಾನಾತಿ ॥೧೫॥

ಅರ್ಥ ಃ– ಸಮ್ಯಕ್ತ್ವದಿಂದಂತೂ ಜ್ಞಾನವು ಸಮ್ಯಕ್ ಆಗುತ್ತದೆ ಮತ್ತು ಸಮ್ಯಗ್ಜ್ಞಾನದಿಂದ ಸಮಸ್ತ ಪದಾರ್ಥಗಳ ಉಪಲಬ್ಧಿ ಎಂದರೆ ಪ್ರಾಪ್ತಿ ಎಂದರೆ ತಿಳಿಯುವುದಾಗುತ್ತದೆ ; ಹಾಗೂ ಪದಾರ್ಥಗಳ ಉಪಲಬ್ಧಿಯಾಗುವುದರಿಂದ ಶ್ರೇಯ ಎಂದರೆ ಕಲ್ಯಾಣ ಅಶ್ರೇಯ ಎಂದರೆ ಅಕಲ್ಯಾಣ ಇವೆರಡನ್ನು ತಿಳಿದುಕೊಳ್ಳಲಾಗುತ್ತದೆ.

ಭಾವಾರ್ಥ ಃ– ಸಮ್ಯಗ್ದರ್ಶನವಿಲ್ಲದ ಜ್ಞಾನವನ್ನು ಮಿಥ್ಯಾಜ್ಞಾನವೆಂದು ಹೇಳಿದೆ, ಆದುದರಿಂದ ಸಮ್ಯಗ್ದರ್ಶನವಾದ ಮೇಲೆಯೇ ಸಮ್ಯಗ್ಜ್ಞಾನವಾಗುತ್ತದೆ. ಮತ್ತು ಸಮ್ಯಗ್ಜ್ಞಾನದಿಂದ ಜೀವಾದಿ ಪದಾರ್ಥಗಳ ಯಥಾರ್ಥ ಸ್ವರೂಪವು ತಿಳಿದುಬರುತ್ತದೆ. ಮತ್ತು ಪದಾರ್ಥಗಳ ಯಥಾರ್ಥ ಸ್ವರೂಪವು ತಿಳಿದು ಬಂದಾಗಲೇ ಒಳಿತು–ಕೆಡಕು ಮಾರ್ಗಗಳು ತಿಳಿದುಬರುತ್ತದೆ. ಈ ಪ್ರಕಾರ ಮಾರ್ಗವನ್ನು ತಿಳಿದುಕೊಳ್ಳುವಲ್ಲಿ ಕೂಡ ಸಮ್ಯಗ್ದರ್ಶನವೇ ಮುಖ್ಯವಿದೆ ॥೧೫॥

ಇನ್ನು ಮುಂದೆ ಕಲ್ಯಾಣ–ಅಕಲ್ಯಾಣಗಳನ್ನು ತಿಳಿಯುವುದರಿಂದ ಏನಾಗುತ್ತದೆಂಬುದನ್ನು ಹೇಳುತ್ತಾರೆ,–

ಸೇಯಾಸೇಯವಿದಣ್ಹೂ ಉದ್ಧುದದುಸ್ಸೀಲ ಸೀಲವಂತೋ ವಿ ।
ಸೀಲಫಲೇಣಬ್ಭುದಯಂ ತತ್ತೋ ಪುಣ ಲಹಇ ಣಿವ್ವಾಣಂ ॥೧೬॥

ಶ್ರೇಯೋಽಶ್ರೇಯವೇತ್ತಾ ಉದ್ಧೃತದುಃಶೀಲಃ ಶೀಲವಾನಾಪಿ ।
ಶೀಲಫಲೇನಾಭ್ಯುದಯಂ ತತಃ ಪುನಃ ಲಭತೇ ನಿರ್ವಾಣಮ್ ॥೧೬॥

ಅರ್ಥ ಃ– ಕಲ್ಯಾಣ ಮತ್ತು ಅಕಲ್ಯಾಣಮಾರ್ಗವನ್ನು ತಿಳಿಯುವಂಥ ಪುರುಷನು 'ಉದ್ಧುದದುಸ್ಸೀಲ' ಎಂದರೆ ಅವನು ಮಿಥ್ಯಾತ್ವಸ್ವಭಾವವನ್ನು ಹಾರಿಸಿಬಿಟ್ಟಂಥವನಿರುತ್ತಾನೆ ; ಮತ್ತು 'ಸೀಲವಂತೋ ವಿ' ಎಂದರೆ ಸಮ್ಯಕ್‌ಸ್ವಭಾವಯುಕ್ತನು ಕೂಡ ಇರುತ್ತಾನೆ, ಇನ್ನು ಆ ಸಮ್ಯಕ್‌ಸ್ವಭಾವದ ಫಲದಿಂದ ಅಭ್ಯುದಯಕ್ಕೆ ಪ್ರಾಪ್ತನಾಗುತ್ತಾನೆ, ತೀರ್ಥಂಕರ ಮೊದಲಾದ ಪದಗಳನ್ನು ಪ್ರಾಪ್ತಮಾಡಿಕೊಳ್ಳುತ್ತಾನೆ, ಮತ್ತು ಅಭ್ಯುದಯವಾದ ನಂತರ ನಿರ್ವಾಣಕ್ಕೆ ಪ್ರಾಪ್ತನಾಗುತ್ತಾನೆ.

ಭಾವಾರ್ಥ ಃ– ಒಳಿತು–ಕೆಡಕು ಮಾರ್ಗಗಳನ್ನು ತಿಳಿಯುತ್ತಾನೆ ಆಗ ಅನಾದಿ ಸಂಸಾರದಿಂದ ಹಿಡಿದು ಯಾವ ಮಿಥ್ಯಾಭಾವರೂಪದ ಪ್ರಕೃತಿಯಿದೆ ಅದು ಪರಿವರ್ತಿಸಿ ಸಮ್ಯಕ್‌ಸ್ವಭಾವಸ್ವರೂಪದ ಪ್ರಕೃತಿಯಾಗುತ್ತದೆ ; ಆ ಪ್ರಕೃತಿಯಿಂದ ವಿಶಿಷ್ಟತರವಾದ ಪುಣ್ಯದ ಬಂಧವಾದಾಗ ಅಭ್ಯುದಯರೂಪವಾದ ತೀರ್ಥಂಕರ ಮೊದಲಾದ ಪದವಿಗಳನ್ನು ಪಡೆದುಕೊಂಡು ನಿರ್ವಾಣಕ್ಕೆ ಪ್ರಾಪ್ತನಾಗುತ್ತಾನೆ. ॥೧೬॥

ಇಂಥ ಸಮ್ಯಕ್ತ್ವವು ಜಿನವಚನಗಳಿಂದ ಪ್ರಾಪ್ತವಾಗುತ್ತಿರುವುದರಿಂದ ಅವರೇ ಎಲ್ಲ ದುಃಖಗಳನ್ನು ನಾಶಮಾಡುವಂಥವರೆಂಬುದನ್ನು ಈಗ ಹೇಳುತ್ತಾರೆ, –

---

ಕುಶೀಲ ತ್ಯಜಿಸಿ ಶೀಲ ಧರಿಸುವನು ಶ್ರೇಯ–ಅಶ್ರೇಯ ತಿಳಿದಬಳಿಕ ।
ಆ ಶೀಲ ಫಲದಿಂದ ಅಭ್ಯುದಯವಾಗಿನಂತರ ಮುಕ್ತಿ ಲಭಿಸುವುದು ॥೧೬॥

ಜಿಣವಯಣಮೋಸಹಮಿಣಂ ವಿಸಯಸುಹವಿರೇಯಣಂ ಅಮಿದಭೂದಂ ।
ಜರಮರಣವಾಹಿಹರಣಂ ಖಯಕರಣಂ ಸವ್ವದುಕ್ಖಾಣಂ ।।೧೭।।

ಜಿನವಚನಮೌಷಧಮಿದಂ ವಿಷಯಸುಖವಿರೇಚನಮಮೃತಭೂತಮ್ ।
ಜರಾಮರಣವ್ಯಾಧಿಹರಣಂ ಕ್ಷಯಕರಣಂ ಸರ್ವದುಃಖಾನಾಮ್ ।।೧೭।।

ಅರ್ಥ ಃ- ಈ ಜಿನವಚನವಿದೆ ಅದು ಔಷಧವಿದೆ. ಅದು ಎಂಥ ಔಷಧವಿದೆಯೆಂದರೆ ಆ ಇಂದ್ರಿಯ ವಿಷಯಗಳಲ್ಲಿ ಯಾವ ಸುಖವನ್ನು ಮನ್ನಿಸಲಾಗಿದೆ ಅದರ ವಿರೇಚನ ಎಂದರೆ ದೂರ ಮಾಡುವಂಥದ್ದಿದೆ. ಮತ್ತೆ ಹೇಗಿದೆಯೆಂದರೆ ಅಮೃತಭೂತ ಎಂದರೆ ಅಮೃತ ಸಮಾನವಿರುವುದರಿಂದ ಅದು ಜರಾಮರಣರೂಪದ ರೋಗಗಳನ್ನು ನಿವಾರಿಸುವಂಥದ್ದಿದೆ, ಮತ್ತು ಸಮಸ್ತ ದುಃಖಗಳನ್ನು ಕ್ಷಯಮಾಡುವಂಥದ್ದಿದೆ.

ಭಾವಾರ್ಥ ಃ- ಈ ಸಂಸಾರದಲ್ಲಿ ಜೀವರುಗಳು ವಿಷಯಸುಖಗಳ ಸೇವನೆ ಮಾಡುತ್ತಾರೆ ಅದರಿಂದ ಕರ್ಮಗಳು ಕಟ್ಟುತ್ತವೆ ಮತ್ತು ಅದರಿಂದ ಜನ್ಮ-ಜರಾ-ಮರಣರೂಪದ ರೋಗಗಳಿಂದ ಪೀಡಿತರಾಗುತ್ತಾರೆ. ಅಲ್ಲಿ ಜಿನವಚನರೂಪದ ಔಷಧವು ಅದು ವಿಷಯ-ಸುಖಗಳಲ್ಲಿ ಅರುಚಿಯನ್ನು ಉತ್ಪನ್ನ ಮಾಡಿ ಅವುಗಳ ವಿರೇಚನ ಮಾಡುತ್ತದೆ. ಯಾವ ಪ್ರಕಾರ ಗರಿಷ್ಠ ಆಹಾರದಿಂದ ಮಲವು ವೃದ್ಧಿಸಿದಾಗ ಜ್ವರ ಮೊದಲಾದ ರೋಗಗಳು ಉತ್ಪನ್ನವಾಗುತ್ತವೆ ಮತ್ತು ಆಗ ಅದರ ವಿರೇಚನಕ್ಕೆ ಅಳಲೆಕಾಯಿ ಮೊದಲಾದ ಔಷಧಿಯು ಉಪಕಾರಿಯಾಗುತ್ತದೆ ಅದೇ ಪ್ರಕಾರ ಉಪಕಾರಿಯಿದೆ. ಆ ವಿಷಯಗಳಿಂದ ವೈರಾಗ್ಯವಾದ ನಂತರ ಕರ್ಮ ಬಂಧವಾಗುವುದಿಲ್ಲ ಮತ್ತು ಆಗ ಜನ್ಮ-ಜರಾ-ಮರಣಗಳಂಥ ರೋಗಗಳು ಆಗುವುದಿಲ್ಲ ಅಲ್ಲದೆ ಸಂಸಾರದ ದುಃಖದ ಅಭಾವವಾಗುತ್ತದೆ ಈ ಪ್ರಕಾರ ಜಿನವಚನಗಳನ್ನು ಅಮೃತ ಸಮಾನವಾಗಿ ಮನ್ನಿಸಿ ಅಂಗೀಕಾರ ಮಾಡಬೇಕು.

ಜಿನವಚನದಲ್ಲಿ ದರ್ಶನದ ಲಿಂಗ ಎಂದರೆ ವೇಷಗಳನ್ನು ಎಷ್ಟು ಪ್ರಕಾರದ್ದಾಗಿ ಹೇಳಿದೆಯೆಂಬುದನ್ನು ಈಗ ಹೇಳುತ್ತಾರೆ,-

ಏಗಂ ಜಿಣಸ್ಸ ರೂವಂ ಬಿದಿಯಂ ಉಕ್ಕಿಟ್ಠಸಾವಯಾಣಂ ತು ।
ಅವರಟ್ಠಿಯಾಣ ತಇಯಂ ಚಉತ್ಥ ಪುಣ ಲಿಂಗದಂಸಣಂ ಣತ್ಥಿ ।।೧೮।।

ಏಕಂ ಜಿನಸ್ಯ ರೂಪಂ ದ್ವಿತೀಯಂ ಉತ್ಕೃಷ್ಟ ಶ್ರಾವಕಾಣಾಂ ತು ।
ಅವರಸ್ಥಿತಾನಾಂ ತೃತೀಯಂ ಚತುರ್ಥಂ ಪುನಃ ಲಿಂಗದರ್ಶನಂ ನಾಸ್ತಿ ।।೧೮।।

---

ಜಿನವಚನಮೌಷಧ ವಿಷಯಸುಖ ನಿವಾರಿಸಲಮೃತಮಯವಿದೆ ।
ಬೇನೆ ಜರಾಮರಣಗಳ ಕ್ಷಯಕರಣ ಸರ್ವದುಃಖವಿನಾಶಿನಿಯಿದೆ ।।೧೭।।
ಜಿನರರೂಪೊಂದು ಎರಡನೇಲಿಂಗ ಶ್ರಾವಕೋತ್ತಮನದಿದ್ದು ಮೂರನೆಯ ।
ಕನಿಷ್ಠಪದಸ್ಥಿತ ಆರ್ಯಿಕೆಯದಿದ್ದು ದರ್ಶನದಿ ನಾಲ್ಕನೇ ಲಿಂಗವಿಲ್ಲ ।।೧೮।।

ಅರ್ಥ :- ದರ್ಶನದಲ್ಲಿ ಒಂದಂತೂ ಜಿನರ ಸ್ವರೂಪವಿದೆ ; ಅಲ್ಲಿ ಜಿನದೇವರು ಎಂಥ ಲಿಂಗವನ್ನು ಧಾರಣ ಮಾಡಿದ್ದಾರೆ, ಅದೇ ಲಿಂಗವಿದೆ, ಮತ್ತು ಎರಡನೆಯದು ಉತ್ಕೃಷ್ಟ ಶ್ರಾವಕರ ಲಿಂಗವಿದೆ ಮತ್ತು ಮೂರನೆಯದು 'ಅವರಟ್ಠಿಯ' ಎಂದರೆ ಜಘನ್ಯ ಪದದಲ್ಲಿ ಸ್ಥಿರರಾದಂಥ ಆರ್ಯಿಕೆಯರ ಲಿಂಗವಿದೆ ; ಇನ್ನು ನಾಲ್ಕನೆಯ ಲಿಂಗವು ದರ್ಶನದಲ್ಲಿ ಇಲ್ಲ.

ಭಾವಾರ್ಥ :- ಜಿನಮತದಲ್ಲಿ ಮೂರೂ ಲಿಂಗಗಳನ್ನು ಎಂದರೆ ವೇಷಗಳನ್ನು ಹೇಳುತ್ತಾರೆ. ಒಂದಂತೂ ಜಿನದೇವರು ಧಾರಣ ಮಾಡಿರುವ ಯಥಾಜಾತರೂಪವಿದೆ ; ಇನ್ನು ಎರಡನೆಯದು ಹನ್ನೊಂದನೆಯ ಪ್ರತಿಮಾ ಧಾರಿಯಾದ ಉತ್ಕೃಷ್ಟ ಶ್ರಾವಕನದಿದೆ ಮತ್ತು ಮೂರನೆಯದು ಸ್ತ್ರೀ ಆರ್ಯಿಕೆಯರದಿದೆ. ಇವನ್ನು ಹೊರತುಪಡಿಸಿ ನಾಲ್ಕನೆಯ ಅನ್ಯ ಪ್ರಕಾರದ ವೇಷವು ಜಿನಮತದಲ್ಲಿ ಇಲ್ಲ. ಯಾರು ಮನ್ನಿಸುತ್ತಾರೆ ಅವರು ಮೂಲ ಸಂಘದಿಂದ ಬಾಹಿರರಿದ್ದಾರೆ. ||೧೮||

ಹೀಗೆ ಬಾಹ್ಯಲಿಂಗವಿದ್ದು ಅವನ ಅಂತರಂಗ ಶ್ರದ್ಧೆಯೂ ಹೀಗಿರುತ್ತದೆ ಮತ್ತು ಅವನು ಸಮ್ಯಗ್ದೃಷ್ಟಿ-ಯಿರುತ್ತಾನೆಂಬುದನ್ನು ಈಗ ಹೇಳುತ್ತಾರೆ, -

ಛಹ ದವ್ವ ಣವ ಪಯತ್ಥಾ ಪಂಚತ್ಥೀ ಸತ್ತ ತಚ್ಚ ಣಿದ್ದಿಟ್ಠಾ ।
ಸದ್ದಹಇ ತಾಣ ರೂವಂ ಸೋ ಸದ್ದಿಟ್ಠೀ ಮುಣೇಯವ್ವೋ ||೧೯||

ಷಟ್ ದ್ರವ್ಯಾಣಿ ನವಪದಾರ್ಥಾಃ ಪಂಚಾಸ್ತಿಕಾಯಾಃ ಸಪ್ತತತ್ತ್ವಾನಿ ನಿರ್ದಿಷ್ಟಾನಿ ।
ಶ್ರದ್ದಧಾತಿ ತೇಷಾಂ ರೂಪಂ ಸಃ ಸದ್ದೃಷ್ಟಿಃ ಜ್ಞಾತವ್ಯಃ ||೧೯||

ಅರ್ಥ :- ಆರು ದ್ರವ್ಯ , ಒಂಭತ್ತು ಪದಾರ್ಥ, ಐದು ಅಸ್ತಿಕಾಯ ಮತ್ತು ಏಳು ತತ್ತ್ವಗಳನ್ನು ಜಿನವಚನದಲ್ಲಿ ಹೇಳಿದ್ದಾರೆ. ಯಾವನು ಅವುಗಳ ಸ್ವರೂಪದ ಶ್ರದ್ಧೆ ಮಾಡುತ್ತಾನೆ ಅವನನ್ನು ಸಮ್ಯಗ್ದೃಷ್ಟಿಯೆಂದು ತಿಳಿಯಬೇಕು.

ಭಾವಾರ್ಥ :- (ಆರು ದ್ರವ್ಯಗಳ ಹೆಸರು ಜಾತಿ ಅಪೇಕ್ಷೆಯಿಂದ) ಜೀವ, ಪುದ್ಗಲ, ಧರ್ಮ, ಅಧರ್ಮ, ಆಕಾಶ ಮತ್ತು ಕಾಲವೆಂದು ಆರು ದ್ರವ್ಯಗಳಿವೆ ; ಮತ್ತು ಜೀವ, ಅಜೀವ, ಆಸ್ರವ, ಬಂಧ, ಸಂವರ, ನಿರ್ಜರೆ, ಮೋಕ್ಷ ಮತ್ತು ಪುಣ್ಯ-ಪಾಪಗಳೆಂದು ಒಂಭತ್ತು ತತ್ತ್ವಗಳು ಎಂದರೆ ಒಂಭತ್ತು ಪದಾರ್ಥಗಳಿವೆ ; ಆರು ದ್ರವ್ಯಗಳಲ್ಲಿ ಕಾಲವನ್ನು ಹೊರತುಪಡಿಸಿ ಐದು ಅಸ್ತಿಕಾಯಗಳಿವೆ. ಪುಣ್ಯ-ಪಾಪಗಳನ್ನು ಹೊರತುಪಡಿಸಿ ನವಪದಾರ್ಥಗಳು ಸಪ್ತತತ್ತ್ವಗಳಿವೆ. ಇವುಗಳ ಸಂಕ್ಷೇಪ ಸ್ವರೂಪವು ಹೀಗಿದೆ – ಜೀವವಂತೂ ಚೇತನಾ ಸ್ವರೂಪವಿದ್ದು ಆ ಚೇತನಾವು ದರ್ಶನಜ್ಞಾನಮಯವಿದೆ; ಪುದ್ಗಲವು ಸ್ಪರ್ಶ, ರಸ, ಗಂಧ, ವರ್ಣಗುಣ ಸಹಿತವಿದ್ದು ಮೂರ್ತಿಕವಿದೆ, ಅದರಲ್ಲಿ ಪರಮಾಣು ಮತ್ತು ಸ್ಕಂಧವೆಂದು ಎರಡು ಭೇದಗಳಿವೆ ; ಸ್ಕಂಧದ ಭೇದಗಳು ಶಬ್ದ, ಬಂಧ, ಸೂಕ್ಷ್ಮ, ಸ್ಥೂಲ, ಸಂಸ್ಥಾನ, ಭೇದ, ತಮ, ಛಾಯೆ, ಆತಪ, ಉದ್ಯೋತ ಮೊದಲಾಗಿ ಅನೇಕ ಪ್ರಕಾರಗಳಿವೆ ; ಧರ್ಮದ್ರವ್ಯ , ಅಧರ್ಮದ್ರವ್ಯ , ಆಕಾಶದ್ರವ್ಯ ಇವು ಒಂದೊಂದು ಇದ್ದು ಅಮೂರ್ತಿಕವಿವೆ, ನಿಷ್ಕ್ರಿಯವಿವೆ, ಕಾಲಾಣು ಅಸಂಖ್ಯಾತ ದ್ರವ್ಯವಿದೆ. ಕಾಲವನ್ನು ಹೊರತುಪಡಿಸಿ ಐದು ದ್ರವ್ಯಗಳು

---

ನವಪದಾರ್ಥ ಷಟ್‌ದ್ರವ್ಯ ಪಂಚಅಸ್ತಿಕಾಯ ಸಪ್ತತತ್ತ್ವಗಳ ಪೇಳಿದೆ ।
ಅವುಗಳ ಸ್ವರೂಪದ ಶ್ರದ್ಧೆಮಾಡುವವನು ಸಮ್ಯಗ್ದೃಷ್ಟಿಯೆಂದರಿವುದು ||೧೯||

ಬಹು ಪ್ರದೇಶಿಯಿರುವುದರಿಂದ ಅಸ್ತಿಕಾಯಗಳು ಐದು ಇವೆ. ಕಾಲದ್ರವ್ಯವು ಬಹು ಪ್ರದೇಶಿಯಿಲ್ಲದಿರುವುದರಿಂದ ಅದು ಅಸ್ತಿಕಾಯವಿಲ್ಲ; ಈ ರೀತಿಯಾಗಿರುವ ಅವುಗಳ ಸ್ವರೂಪವನ್ನು ತತ್ತ್ವಾರ್ಥಸೂತ್ರದ ಟೀಕೆಯಿಂದ ತಿಳಿದುಕೊಳ್ಳಬೇಕು. ಜೀವ ಪದಾರ್ಥವು ಒಂದು ಇದೆ ಮತ್ತು ಅಜೀವ ಪದಾರ್ಥಗಳು ಐದು ಇವೆ, ಜೀವಕ್ಕೆ ಕರ್ಮಬಂಧ ಯೋಗ್ಯವಾದ ಪುದ್ಗಲಗಳ ಬರುವಿಕೆಯು ಆಸ್ರವವಿದೆ, ಕರ್ಮಗಳ ಕಟ್ಟುವಿಕೆಯು ಬಂಧವಿದೆ, ಆಸ್ರವದ ನಿಲ್ಲುವಿಕೆಯು ಸಂವರವಿದೆ, ಕರ್ಮಬಂಧದ ಉದುರುವಿಕೆಯು ನಿರ್ಜರೆಯಿದೆ, ಸಂಪೂರ್ಣ ಕರ್ಮಗಳ ನಾಶವಾಗುವಿಕೆಯು ಮೋಕ್ಷವಿದೆ, ಜೀವರುಗಳಿಗೆ ಸುಖದ ನಿಮಿತ್ತವು ಪುಣ್ಯವಿದೆ ಮತ್ತು ದುಃಖದ ನಿಮಿತ್ತವು ಪಾಪವಿದೆ ; ಹೀಗೆ ಸಪ್ತತತ್ತ್ವ ಮತ್ತು ನವಪದಾರ್ಥಗಳಿವೆ. ಇವುಗಳ ಸ್ವರೂಪವನ್ನು ಆಗಮದ ಅನುಸಾರ ತಿಳಿದುಕೊಂಡು ಶ್ರದ್ಧೆ ಮಾಡುವಂಥವರು ಸಮ್ಯಗ್ದೃಷ್ಟಿಗಳಾಗುತ್ತಾರೆ. ॥೧೯॥

ಈಗ ವ್ಯವಹಾರ-ನಿಶ್ಚಯದ ಭೇದದಿಂದ ಎರಡು ಪ್ರಕಾರದ ಸಮ್ಯಕ್ತ್ವವನ್ನು ಹೇಳುತ್ತಾರೆ,-

**ಜೀವಾದೀಸದ್ದಹಣಂ ಸಮ್ಮತ್ತಂ ಜಿಣವರೇಹಿಂ ಪಣ್ಣತ್ತಂ ।**
**ವವಹಾರಾ ಣಿಚ್ಛಯದೋ ಅಪ್ಪಾಣಂ ಹವಇ ಸಮ್ಮತ್ತಂ ॥೨೦॥**

**ಜೀವಾದೀನಾಂ ಶ್ರದ್ಧಾನಂ ಸಮ್ಯಕ್ತ್ವಂ ಜಿನವರೈಃ ಪ್ರಜ್ಞಪ್ತಮ್ ।**
**ವ್ಯವಹಾರಾತ್ ನಿಶ್ಚಯತಃ ಆತ್ಮೈವ ಭವತಿ ಸಮ್ಯಕ್ತ್ವಮ್ ॥೨೦॥**

ಅರ್ಥ :- ಜಿನೇಂದ್ರ ಭಗವಂತರು ಜೀವ ಮೊದಲಾದ ಪದಾರ್ಥಗಳ ಶ್ರದ್ಧೆಯನ್ನು ವ್ಯವಹಾರ ಸಮ್ಯಕ್ತ್ವವೆಂದು ಹೇಳಿದ್ದಾರೆ ಮತ್ತು ತನ್ನ ಆತ್ಮನ ಶ್ರದ್ಧೆಯನ್ನೇ ನಿಶ್ಚಯ ಸಮ್ಯಕ್ತ್ವವೆಂದು ಹೇಳಿದ್ದಾರೆ.

ಭಾವಾರ್ಥ :- ತತ್ತ್ವಾರ್ಥದ ಶ್ರದ್ಧೆಯು ವ್ಯವಹಾರದಿಂದ ಸಮ್ಯಕ್ತ್ವವಿದೆ ಮತ್ತು ತಮ್ಮ ಆತ್ಮಸ್ವರೂಪದ ಅನುಭವ ಮುಖಾಂತರ ಅದರ ಶ್ರದ್ಧೆ, ಪ್ರತೀತಿ, ಅಭಿರುಚಿ, ಆಚರಣೆಯು ಅದು ನಿಶ್ಚಯದಿಂದ ಸಮ್ಯಕ್ತ್ವವಿದೆ, ಈ ಸಮ್ಯಕ್ತ್ವವು ಆತ್ಮನಿಂದ ಭಿನ್ನವಾದ ವಸ್ತುವೇನಲ್ಲ ಅದು ಆತ್ಮನದೇ ಪರಿಣಾಮವಿದೆ, ಅದು ಆತ್ಮವೇ ಇದೆ. ಹೀಗೆ ಸಮ್ಯಕ್ತ್ವ ಮತ್ತು ಆತ್ಮ ಒಂದೇ ವಸ್ತುವಿದೆ, ಇದು ನಿಶ್ಚಯದ ಆಶಯವೆಂದು ತಿಳಿಯಬೇಕು ॥೨೦॥

ಈ ಸಮ್ಯಗ್ದರ್ಶನವೇ ಎಲ್ಲ ಗುಣಗಳಲ್ಲಿ ಸಾರವಿದ್ದು ಅದನ್ನು ಧಾರಣ ಮಾಡಿರೆಂದು ಈಗ ಹೇಳುತ್ತಾರೆ, -

**ಏವಂ ಜಿಣಪಣ್ಣತ್ತಂ ದಂಸಣರಯಣಂ ಧರೇಹ ಭಾವೇಣ ।**
**ಸಾರಂ ಗುಣರಯಣತ್ತಯ ಸೋವಾಣಂ ಪಢಮ ಮೋಕ್ಖಸ್ಸ ॥೨೧॥**

---

**ಜೀವಾದಿಗಳ ಶ್ರದ್ಧೆಯನು ಸಮ್ಯಕ್ತ್ವವೆಂದಿರುವರು ಶ್ರೀಜಿನವರೇಂದ್ರರು ।**
**ವ್ಯವಹಾರದಿಂದಾದರೆ ನಿಶ್ಚಯದಿ ನಿಜಾತ್ಮನೇ ಸಮ್ಯಕ್ತ್ವವಾಗಿರುವನು ॥೨೦॥**

**ಈ ರೀತಿ ಜಿನಕಥಿತದರ್ಶನರತ್ನವನು ಭಾವದಿಂದ ಧರಿಸುವುದು ।**
**ಸಾರವಿದೆ ಗುಣರತ್ನತ್ರಯಗಳಲಿ ಮೋಕ್ಷದ ಮೊದಲ ಮೆಟ್ಟಿಲಿದೆ ॥೨೧॥**

ಏವಂ ಜಿನಪ್ರಣೀತಂ ದರ್ಶನರತ್ನಂ ಧರತ ಭಾವೇನ ।
ಸಾರಂ ಗುಣರತ್ನತ್ರಯೇ ಸೋಪಾನಂ ಪ್ರಥಮ ಮೋಕ್ಷಸ್ಯ ॥೨೧॥

ಅರ್ಥ ः- ಹೀಗೆ ಪೂರ್ವೋಕ್ತ ಪ್ರಕಾರ ಜಿನೇಶ್ವರದೇವರು ಹೇಳಿರುವ ದರ್ಶನವಿದೆ ಅದು ಗುಣಗಳಲ್ಲಿ ಮತ್ತು ದರ್ಶನ-ಜ್ಞಾನ-ಚಾರಿತ್ರವೆಂಬ ಈ ಮೂರು ರತ್ನಗಳಲ್ಲಿ ಸಾರವಿದೆ-ಉತ್ತಮವಿದೆ ಮತ್ತು ಮೋಕ್ಷ ಮಂದಿರವನ್ನು ಹತ್ತುವ ಸಲುವಾಗಿ ಮೊದಲನೆಯ ಮೆಟ್ಟಿಲಿರುವುದರಿಂದ ಆಚಾರ್ಯದೇವರು ಎಲೈ ಭವ್ಯ ಜೀವರುಗಳೇ ! ನೀವುಗಳು ಇದನ್ನು ಅಂತರಂಗಭಾವದಿಂದ ಧಾರಣ ಮಾಡಿರಿ, ಬಾಹ್ಯ ಕ್ರಿಯೆ ಮೊದಲಾದವುಗಳಿಂದ ಧಾರಣ ಮಾಡುವುದಂತೂ ಪರಮಾರ್ಥವಿಲ್ಲ, ಅಂತರಂಗದ ರುಚಿಯಿಂದ ಧಾರಣ ಮಾಡುವುದು ಅದು ಮೋಕ್ಷದ ಕಾರಣವಿದೆಯೆಂದು ಹೇಳುತ್ತಾರೆ. ॥೨೧॥

ಶ್ರದ್ಧೆ ಮಾಡುವವನಿಗೇ ಸಮ್ಯಕ್ತ್ವವಾಗುತ್ತದೆಯೆಂದು ಈಗ ಹೇಳುತ್ತಾರೆ, -

[೧]ಜಂ ಸಕ್ಕಇ ತಂ ಕೀರಇ ಜಂ ಚ ಣ ಸಕ್ಕೇಇ ತಂ ಚ ಸದ್ದಹಣಂ ।
ಕೇವಲಿಜಿಣೇಹಿಂ ಭಣಿಯಂ ಸದ್ದಹಮಾಣಸ್ಸ ಸಮ್ಮತ್ತಂ ॥೨೨॥

ಯತ್ ಶಕ್ನೋತಿ ತತ್ ಕ್ರಿಯತೇ ಯತ್ ಚ ನ ಶಕ್ನುಯಾತ್ ತಸ್ಯ ಚ ಶ್ರದ್ಧಾನಮ್ ।
ಕೇವಲಿಜಿನೈಃ ಭಣಿತಂ ಶ್ರದ್ಧಧಾನಸ್ಯ ಸಮ್ಯಕ್ತ್ವಮ್ ॥೨೨॥

ಅರ್ಥ ः- ಯಾವುದು ಮಾಡುವುದಕ್ಕೆ ಸಾಧ್ಯವಿದೆ ಅದನ್ನಂತೂ ಮಾಡಬೇಕು ಮತ್ತು ಯಾವುದು ಮಾಡುವುದಕ್ಕೆ ಸಾಧ್ಯವಿಲ್ಲ ಅದರ ಶ್ರದ್ಧೆ ಮಾಡಬೇಕು ; ಏಕೆಂದರೆ ಕೇವಲೀ ಭಗವಂತರು ಶ್ರದ್ಧೆ ಮಾಡುವವನನ್ನು ಸಮ್ಯಕ್ತ್ವಿಯೆಂದು ಹೇಳಿದ್ದಾರೆ.

ಭಾವಾರ್ಥ ः- ಸಮ್ಯಕ್ತ್ವವಾದ ನಂತರವಂತೂ ಸಮಸ್ತ ಪರದ್ರವ್ಯಗಳನ್ನು-ಸಂಸಾರವನ್ನು ಹೇಯವೆಂದು ತಿಳಿಯುತ್ತಾರೆ. ಯಾವುದನ್ನು ಹೇಯವಾಗಿ ತಿಳಿಯುತ್ತಾರೆ ಅದನ್ನು ಬಿಟ್ಟುಕೊಟ್ಟು ಮುನಿಯಾಗಿ ಚಾರಿತ್ರದ ಪಾಲನೆ ಮಾಡುವರು ಆಗ ಸಮ್ಯಕ್ತ್ವಿಯೆಂದು ಮನ್ನಿಸಲಾಗುವುದು. ಇದರ ಸಮಾಧಾನರೂಪವಾಗಿ ಈ ಗಾಥೆಯಿದೆ. ಯಾವನು ಸಮಸ್ತ ಪರದ್ರವ್ಯಗಳನ್ನು ಹೇಯವೆಂದು ತಿಳಿದುಕೊಂಡು ನಿಜಸ್ವರೂಪವನ್ನು ಉಪಾದೇಯವೆಂದು ತಿಳಿಯುವನು, ಶ್ರದ್ಧೆ ಮಾಡುವನು ಆಗ ಮಿಥ್ಯಾಭಾವವಂತೂ ದೂರವಾಗುವುದು, ಆದರೆ ಎಲ್ಲಿಯವರೆಗೆ (ಚಾರಿತ್ರದಲ್ಲಿ ಪ್ರಬಲ ದೋಷವಿದೆ ಅಲ್ಲಿಯವರೆಗೆ) ಚಾರಿತ್ರಮೋಹಕರ್ಮದ ಉದಯವು ಪ್ರಬಲವಾಗುತ್ತದೆ (ಮತ್ತು) ಅಲ್ಲಿಯವರೆಗೆ ಚಾರಿತ್ರವನ್ನು ಅಂಗೀಕಾರ ಮಾಡುವ ಸಾಮರ್ಥ್ಯವಿರುವುದಿಲ್ಲ. ಎಷ್ಟು ಸಾಮರ್ಥ್ಯವಿದೆ ಅಷ್ಟನ್ನಂತೂ ಮಾಡಬೇಕು ಮತ್ತು ಉಳಿದುದರ ಶ್ರದ್ಧೆ ಮಾಡಬೇಕು. ಈ ಪ್ರಕಾರ ಶ್ರದ್ಧೆ ಮಾಡುವುದಕ್ಕೆ ಕೂಡ ಭಗವಂತರು ಸಮ್ಯಕ್ತ್ವವೆಂದು ಹೇಳುತ್ತಾರೆ. ॥೨೨॥

---

ಯಾವುದು ಸಾಧ್ಯವಿದೆಯದನುಮಾಡು ಮೇಣಸಾಧ್ಯವಿಲ್ಲದುದರ ಶ್ರದ್ಧೆಮಾಡು ।
ಕೇವಲೀ ಜಿನರು ಶ್ರದ್ಧೆಮಾಡುವವನಿಗೆ ಸಮ್ಯಕ್ತ್ವವೆಂದು ಪೇಳಿರುವರು ॥೨೨॥

---

೧ ನಿಯಮಸಾರ ಗಾಥೆ - ೧೫೪.

ಯಾರು ಇಂಥ ದರ್ಶನ, ಜ್ಞಾನ, ಚಾರಿತ್ರದಲ್ಲಿ ಸ್ಥಿರರಿದ್ದಾರೆ ಅವರು ವಂದನೆ ಮಾಡಲು ಯೋಗ್ಯರಿದ್ದಾರೆಂದು ಈಗ ಹೇಳುತ್ತಾರೆ, -

ದಂಸಣಣಾಣಚರಿತ್ತೇ ತವವಿಣಯೇ [೧]ಣಿಚ್ಚಕಾಲಸುಪಸತ್ಥಾ ।
ಏದೇ ದು ವಂದಣೀಯಾ ಜೇ ಗುಣವಾದೀ ಗುಣಧರಾಣಂ ॥೨೩॥

ದರ್ಶನಜ್ಞಾನಚಾರಿತ್ರೇ ತಪೋವಿನಯೇ ನಿತ್ಯಕಾಲಸುಪ್ರಸ್ವಸ್ಥಾಃ ।
ಏತೇ ತು ವಂದನೀಯಾ ಯೇ ಗುಣವಾದಿನಃ ಗುಣಧರಾಣಾಮ್ ॥೨೩॥

ಅರ್ಥ ಃ- ದರ್ಶನ, ಜ್ಞಾನ, ಚಾರಿತ್ರ, ತಪಸ್ಸು ಹಾಗೂ ವಿನಯಗಳಲ್ಲಿ ಯಾರು ಒಳ್ಳೆಯ ಪ್ರಕಾರದಿಂದ ಸ್ಥಿರರಿದ್ದಾರೆ ಅವರು ಪ್ರಶಸ್ತರಿದ್ದಾರೆ, ಹೊಗಳಿಕೆಗೆ ಯೋಗ್ಯರಿದ್ದಾರೆ ಅಥವಾ ಒಳ್ಳೆಯ ಪ್ರಕಾರದಿಂದ ಸ್ವಸ್ಥರಿದ್ದಾರೆ, ಲೀನರಿದ್ದಾರೆ ಮತ್ತು ಗಣಧರ ಆಚಾರ್ಯರುಗಳು ಕೂಡ ಅವರ ಗುಣಾನುವಾದ ಮಾಡುತ್ತಾರೆ, ಆದುದರಿಂದ ಅವರು ವಂದನೆಗೆ ಯೋಗ್ಯರಿದ್ದಾರೆ. ಉಳಿದ ಯಾರು ದರ್ಶನಾದಿಗಳಿಂದ ಭ್ರಷ್ಟರಿದ್ದಾರೆ ಮತ್ತು ಗುಣವಂತರೊಡನೆ ಮತ್ಸರ-ಭಾವವನ್ನಿಟ್ಟುಕೊಂಡು ವಿನಯರೂಪವಾಗಿ ಪ್ರವರ್ತಿಸುವುದಿಲ್ಲ ಅವರು ವಂದನೆಗೆ ಯೋಗ್ಯರಾಗಿಲ್ಲ ॥೨೩॥

ಆ ಯಥಾಜಾತರೂಪವನ್ನು ನೋಡಿ ಮತ್ಸರಭಾವದಿಂದ ವಂದನೆ ಮಾಡದವರು ಅವರು ಮಿಥ್ಯಾದೃಷ್ಟಿಗಳೇ ಇದ್ದಾರೆಂಬುದನ್ನು ಈಗ ಹೇಳುತ್ತಾರೆ, -

ಸಹಜುಪ್ಪಣ್ಣಂ ರೂವಂ ದಟ್ಠುಂ ಜೋ ಮಣ್ಣಏ ಣ ಮಚ್ಛರಿಓ ।
ಸೋ ಸಂಜಮಪಡಿವಣ್ಣೋ ಮಿಚ್ಛಾಇಟ್ಠೀ ಹವಇ ಏಸೋ ॥೨೪॥

ಸಹಜೋತ್ಪನ್ನಂ ರೂಪಂ ದೃಷ್ಟ್ವಾ ಯಃ ಮನ್ಯತೇ ನ ಮತ್ಸರೀ ।
ಸಃ ಸಂಯಮಪ್ರತಿಪನ್ನಃ ಮಿಥ್ಯಾದೃಷ್ಟಿಃ ಭವತಿ ಏಷಃ ॥೨೪॥

ಅರ್ಥ ಃ- ಯಾರು ಸಹಜೋತ್ಪನ್ನವಾದ ಯಥಾಜಾತರೂಪವನ್ನು ನೋಡಿ ಮನ್ನಿಸುವುದಿಲ್ಲ, ಅವರ ವಿನಯ, ಸತ್ಕಾರ, ಪ್ರೀತಿ ಮಾಡುವುದಿಲ್ಲ ಮತ್ತು ಮತ್ಸರಭಾವ ಮಾಡುತ್ತಾರೆ ಅವರು ಸಂಯಮಪ್ರತಿಪನ್ನರಿದ್ದಾರೆ, ದೀಕ್ಷೆ ಗ್ರಹಣ ಮಾಡಿದ್ದರೂ ಕೂಡ ಪ್ರತ್ಯಕ್ಷ ಮಿಥ್ಯಾದೃಷ್ಟಿಗಳಿದ್ದಾರೆ.

---

ಏವ ದೃಗ ಜ್ಞಾನ ಚಾರಿತ್ರ ತಪ ವಿನಯದಲಿ ನಿತ್ಯಸ್ಥಿರನಿರುವನು ।
ಅವನು ವಂದನೆಯೋಗ್ಯನಿದ್ದು ಗುಣಧರರು ಗುಣಕಥನ ಮಾಡುವರು ॥೨೩॥

ಯಾವನು ಸಹಜೋತ್ಪನ್ನರೂಪವನು ನೋಡಿ ಆದರಿಸನು ಮತ್ಸರದಿಂದ ।
ಅವನು ಸಂಯಮ ಪ್ರತಿಪನ್ನನಿದ್ದರು ಪ್ರತ್ಯಕ್ಷ ಮಿಥ್ಯಾದೃಷ್ಟಿಯಿರುವನು ॥೨೪॥

---

೧ ಪಾಠಾಂತರ-ಣಿಚ್ಚಕಾಲಸುಪಸತ್ಥಾ ।

ಭಾವಾರ್ಥ ः- ಯಾರು ಯಥಾಜಾತರೂಪವನ್ನು ನೋಡಿ ಮತ್ಸರಭಾವದಿಂದ ಅದರ ವಿನಯ ಮಾಡದಿದ್ದರೆ ಇವರಿಗೆ ಈ ರೂಪದ ಶ್ರದ್ಧೆ-ರುಚಿಯಿಲ್ಲ, ಇಂಥ ಶ್ರದ್ಧೆ ರುಚಿಗಳಿಲ್ಲದಿದ್ದರೆ ಮಿಥ್ಯಾದೃಷ್ಟಿಗಳೇ ಇದ್ದಾರೆಂದು ತಿಳಿದುಬರುತ್ತದೆ. ಯಾವ ಶ್ವೇತಾಂಬರ ಮೊದಲಾದವರು ಆಗಿದ್ದಾರೆ ಅವರು ದಿಗಂಬರರೂಪದ ಕುರಿತು ಮತ್ಸರಭಾವವಿಡುತ್ತಾರೆ ಮತ್ತು ಅದರ ವಿನಯ ಮಾಡುವುದಿಲ್ಲ ಇಲ್ಲಿ ಅವರ ನಿಷೇಧದ ಆಶಯವಿದೆಯೆಂದು ತಿಳಿಯಬೇಕು. ॥೨೪॥

ಈಗ ಮತ್ತೆ ಇದನ್ನೇ ದೃಢ ಮಾಡುತ್ತಾರೆ, –

**ಅಮರಾಣ ವಂದಿಯಾಣಂ ರೂವಂ ದಟ್ಠೂಣ ಸೀಲಸಹಿಯಾಣಂ ।**
**ಜೇ ಗಾರವಂ ಕರಂತಿ ಯ ಸಮ್ಮತ್ತವಿವಜ್ಜಿಯಾ ಹೋಂತಿ ॥೨೫॥**

**ಅಮರ್ತ್ಯೈಃ ವಂದಿತಾನಾಂ ರೂಪಂ ದೃಷ್ಟ್ವಾ ಶೀಲಸಹಿತಾನಾಮ್ ।**
**ಯೇ ಗೌರವಂ ಕುರ್ವಂತಿ ಚ ಸಮ್ಯಕ್ತ್ವವಿವರ್ಜಿತಾಃ ಭವಂತಿ ॥೨೫॥**

ಅರ್ಥ ः- ದೇವಗಳಿಂದ ವಂದನೆಗೆ ಯೋಗ್ಯ ಶೀಲಸಹಿತವಾದ ಜಿನೇಶ್ವರದೇವರ ಯಥಾಜಾತರೂಪವನ್ನು ನೋಡಿ ಯಾರು ಗೌರವ ಮಾಡುವುದಿಲ್ಲ, ವಿನಯ ಮೊದಲಾದುವನ್ನು ಮಾಡುವುದಿಲ್ಲ ಅವರು ಸಮ್ಯಕ್ತ್ವದಿಂದ ರಹಿತರಿದ್ದಾರೆ.

ಭಾವಾರ್ಥ ः- ಯಾವ ಯಥಾಜಾತರೂಪವನ್ನು ನೋಡಿ ಅಣಿಮಾ ಮೊದಲಾದ ಋದ್ಧಿಗಳ ಧಾರಕರಾದ ದೇವತೆಗಳು ಕೂಡ ಚರಣಗಳಲ್ಲಿ ಮಣಿಯುತ್ತಾರೆ ಅದನ್ನು ನೋಡಿ ಮತ್ಸರ ಭಾವದಿಂದ ನಮಸ್ಕಾರ ಮಾಡುವುದಿಲ್ಲ ಅವರಿಗೆ ಸಮ್ಯಕ್ತ್ವ ಹೇಗಿರುವುದು ? ಅವರು ಸಮ್ಯಕ್ತ್ವದಿಂದ ರಹಿತರಾಗೇ ಇದ್ದಾರೆ. ॥೨೫॥

ಈಗ ಅಸಂಯಮಿಯು ವಂದನೆಗೆ ಯೋಗ್ಯನಿಲ್ಲವೆಂಬುದನ್ನು ಹೇಳುತ್ತಾರೆ, –

**ಅಸ್ಸಂಜದಂ ಣ ವಂದೇ ವತ್ಥವಿಹೀಣೋವಿ ತೋ ಣ ವಂದಿಜ್ಜ ।**
**ದೋಣ್ಣಿ ವಿ ಹೋಂತಿ ಸಮಾಣಾ ಏಗೋ ವಿ ಣ ಸಂಜದೋ ಹೋದಿ ॥೨೬॥**

**ಅಸಂಯತಂ ನ ವಂದೇತ ವಸ್ತ್ರವಿಹೀನೋಽಪಿ ಸ ನ ವಂದ್ಯೇತ ।**
**ದ್ವೌ ಅಪಿ ಭವತಃ ಸಮಾನೌ ಏಕಃ ಅಪಿ ನ ಸಂಯತಃ ಭವತಿ ॥೨೬॥**

ಅರ್ಥ ः- ಅಸಂಯಮಿಗೆ ನಮಸ್ಕಾರವನ್ನು ಮಾಡಬಾರದು. ಭಾವಸಂಯಮವು ಇಲ್ಲದಿದ್ದರೆ ಮತ್ತು ಬಾಹ್ಯದಲ್ಲಿ ವಸ್ತ್ರರಹಿತವಿದ್ದರೆ ಅವನು ಕೂಡ ವಂದನೆಗೆ ಯೋಗ್ಯನಾಗಿಲ್ಲ, ಏಕೆಂದರೆ ಸಂಯಮರಹಿತರಾದ ಇವರೀರ್ವರು ಸಮಾನರಿದ್ದಾರೆ ; ಇವರಲ್ಲಿ ಒಬ್ಬನುಕೂಡ ಸಂಯಮಿವಿಲ್ಲ.

---

ದೇವಗಳಿಂದ ವಂದನೆಯೋಗ್ಯ ಶೀಲಸಹಿತ ಯಥಾಜಾತರೂಪವ ನೋಡಿ ।
ಯಾವ ಜೀವ ಮಿಥ್ಯಾಭಿಮಾನ ಮಾಡುವರವರು ಸಮ್ಯಕ್ತ್ವರಹಿತರಿಹರು ॥೨೫॥

ಅಸಂಯಮಿಗೆ ನಮಿಸಬಾರದಾತ ವಸ್ತ್ರವಿಹೀನನಿದ್ದರು ವಂದ್ಯನಿಲ್ಲ ।
ಆ ಸಂಯಮರಹಿತರೀರ್ವರು ಸಮಾನರಿದ್ದೊಬ್ಬನು ಸಹ ಸಂಯಮಿಯಿಲ್ಲ ॥೨೬॥

ಭಾವಾರ್ಥ :- ಯಾವನು ಗೃಹಸ್ಥನ ವೇಷವನ್ನು ಧಾರಣ ಮಾಡಿದ್ದಾನೆ ಅವನಂತೂ ಅಸಂಯಮಿ ಇದ್ದೇ ಇದ್ದಾನೆ, ಆದರೆ ಯಾವನು ಬಾಹ್ಯದಲ್ಲಿ ನಗ್ನ ರೂಪವನ್ನು ಧಾರಣ ಮಾಡಿದ್ದಾನೆ ಮತ್ತು ಅಂತರಂಗದಲ್ಲಿ ಭಾವಸಂಯಮವಿಲ್ಲದಿದ್ದರೆ ಅವನು ಕೂಡ ಅಸಂಯಮಿಯೇ ಇದ್ದಾನೆ, ಆದುದರಿಂದ ಇವರೀರ್ವರುಗಳೂ ಅಸಂಯಮಿಗಳಿದ್ದಾರೆ, ಅದಕ್ಕಾಗಿ ಈರ್ವರು ವಂದನೆಗೆ ಯೋಗ್ಯರಾಗಿಲ್ಲ. ಇಲ್ಲಿ ಆಚಾರ್ಯರು ಯಾವ ಯಥಾಜಾತ ರೂಪಕ್ಕೆ ದರ್ಶನವೆಂದು ಹೇಳುತ್ತ ಬಂದಿದ್ದಾರೆ ಅದು ಕೇವಲ ನಗ್ನರೂಪವೇ ಯಥಾಜಾತರೂಪವಿರಬಹುದೆಂದು ತಿಳಿಯಬಾರದು, ಏಕೆಂದರೆ ಆಚಾರ್ಯರಂತೂ ಸಮಸ್ತ ಬಾಹ್ಯಾಭ್ಯಂತರ ಪರಿಗ್ರಹದಿಂದ ರಹಿತವಾಗಿರುವುದಕ್ಕೆ ಯಥಾಜಾತರೂಪವೆಂದು ಹೇಳುತ್ತಾರೆ ಅಭ್ಯಂತರದಲ್ಲಿ ಭಾವಸಂಯಮವಿಲ್ಲದೆ ಬಾಹ್ಯದಲ್ಲಿ ನಗ್ನವಾಗುವುದರಿಂದೇನು ಸಂಯಮಿಯಾಗುವುದಿಲ್ಲವೆಂದು ತಿಳಿಯಬೇಕು.

ಪ್ರಶ್ನೆ :- ಬಾಹ್ಯವೇಷವು ಶುದ್ಧವಿದ್ದು, ನಿರ್ದೋಷ ಆಚಾರ ಪಾಲನೆ ಮಾಡುವವನ ಅಭ್ಯಂತರ ಭಾವದಲ್ಲಿ ಕಪಟವಿದ್ದರೆ ಅದು ನಿಶ್ಚಯ ಹೇಗಾಗುವುದು, ಮತ್ತು ಸೂಕ್ಷ್ಮ ಭಾವಗಳು ಕೇವಲೀ ಗಮ್ಯವಿದೆ, ಮಿಥ್ಯಾತ್ವವಿದ್ದರೆ ಅದರ ನಿಶ್ಚಯ ಹೇಗಾಗುವುದು, ನಿಶ್ಚಯವಿಲ್ಲದೆ ವಂದನೆಯ ರೀತಿಯೇನು ?

ಉತ್ತರ :- ಎಲ್ಲಿಯವರೆಗೆ ಇಂಥ ಕಪಟ ನಿಶ್ಚಯವಾಗುವುದಿಲ್ಲ ಅಲ್ಲಿಯವರೆಗೆ ಶುದ್ಧ ಆಚಾರ ನೋಡಿ ವಂದನೆ ಮಾಡಬೇಕು, ಅದರಲ್ಲಿ ದೋಷವಿಲ್ಲ, ಮತ್ತು ಯಾವುದೇ ಕಾರಣದಿಂದ ಕಪಟದ ನಿಶ್ಚಯವಾಗಿ ಹೋದರೆ ಆಗ ವಂದನೆ ಮಾಡಬಾರದು. ವ್ಯವಹಾರದಲ್ಲಿ ಕೇವಲೀಗಮ್ಯ ಮಿಥ್ಯಾತ್ವದ ಚರ್ಚೆಯಿಲ್ಲ, ಛದ್ಮಸ್ಥನ ಜ್ಞಾನ ಗಮ್ಯದ ಚರ್ಚೆಯಿದೆ. ಯಾವುದು ತನ್ನ ಜ್ಞಾನದ ವಿಷಯವೇ ಇಲ್ಲ ಅದರ ಬಾಧೆ ನಿರ್ಬಾಧೆ ಮಾಡುವ ವ್ಯವಹಾರವಿಲ್ಲ, ಸರ್ವಜ್ಞ ಭಗವಂತರದು ಕೂಡ ಇದೇ ಆಜ್ಞೆಯಿದೆ. ಸಂಸಾರಿ ಜೀವನಿಗೆ ವ್ಯವಹಾರವೇ ಶರಣವಿದೆ. ॥೨೬॥

(ನೋಟ ಒಂದು ಗುಣವನ್ನು ಇನ್ನೊಂದು ಆನುಷಂಗಿಕ ಗುಣದಿಂದ ನಿಶ್ಚಯ ಮಾಡುವುದು ವ್ಯವಹಾರವಿದೆ ಅದರ ಹೆಸರೇ ವ್ಯವಹಾರೀ ಜೀವನಿಗೆ ವ್ಯವಹಾರದ ಆಶ್ರಯವಿದೆ.)

ಇನ್ನು ಮುಂದೆ ಇದೇ ಅರ್ಥವನ್ನು ದೃಢಪಡಿಸುತ್ತ ಹೀಗೆ ಹೇಳುತ್ತಾರೆ,-

**ಣ ವಿ ದೇಹೋ ವಂದಿಜ್ಜ ಇ ಣ ವಿ ಯ ಕುಲೋ ಣ ವಿ ಯ ಜಾಇಸಂಜುತ್ತೋ ।**
**ಕೋ ವಂದಮಿ ಗುಣಹೀಣೋ ಣ ಹು ಸವಣೋ ಣೇವ ಸಾವಓ ಹೋಇ ॥೨೭॥**

ನಾಪಿ ದೇಹೋ ವಂದ್ಯತೇ ನಾಪಿ ಚ ಕುಲಂ ನಾಪಿ ಚ ಜಾತಿಸಂಯುಕ್ತಃ ।
ಕಃ[೧] ವಂದ್ಯತೇ ಗುಣಹೀನಃ ನ ಖಲು ಶ್ರಮಣಃ ನೈವ ಶ್ರಾವಕಃ ಭವತಿ ॥೨೭॥

---

ದೇಹ ವಂದ್ಯವಿಲ್ಲ ಕುಲವಂದ್ಯವಿಲ್ಲ ಜಾತಿಸಂಯುಕ್ತತೆ ಸಹ ವಂದ್ಯವಿಲ್ಲ ।
ಆ ಹೀನಗುಣರಿಗಾರು ವಂದಿಪರವರು ಸಾಧುವಿಲ್ಲ ಶ್ರಾವಕ ಸಹ ಇಲ್ಲ ॥೨೭॥

---

೧ 'ಕಂ ವಂದೇಗುಣಹೀನಂ' - ಎಂದು ಷಟ್‌ಪಾಹುಡದಲ್ಲಿ ಪಾಠವಿದೆ.

ಅರ್ಥ ಃ- ದೇಹಕ್ಕೂ ವಂದಿಸುವುದಿಲ್ಲ ಮತ್ತು ಕುಲಕ್ಕೂ ವಂದಿಸುವುದಿಲ್ಲ ಅದರಂತೆ ಜಾತಿ ಸಂಯುಕ್ತತೆಗೆ ಕೂಡ ವಂದಿಸುವುದಿಲ್ಲ, ಏಕೆಂದರೆ ಗುಣರಹಿತವಿರುವವನಿಗೆ ಯಾರು ವಂದಿಸುವರು? ಗುಣಗಳಿಲ್ಲದೆ ಸ್ಪಷ್ಟವಾಗಿ ಮುನಿಯಿಲ್ಲ, ಶ್ರಾವಕನು ಕೂಡ ಇಲ್ಲ.

ಭಾವಾರ್ಥ ಃ- ಯಾವನು ಗುಣಹೀನನಿದ್ದಾನೆ ಅವನನ್ನು ಯಾರೂ ಶ್ರೇಷ್ಠನೆಂದು ಮನ್ನಿಸುವುದಿಲ್ಲ, ಹೀಗೆ ಲೋಕದಲ್ಲಿ ಕೂಡ ನ್ಯಾಯವಿದೆ, ದೇಹವು ರೂಪವಂತವಿದ್ದರೇನಾಯಿತು, ಕುಲವು ದೊಡ್ಡದಿದ್ದರೇನಾಯಿತು, ಜಾತಿಯು ದೊಡ್ಡದಿದ್ದರೇನಾಯಿತು, ಏಕೆಂದರೆ ಮೋಕ್ಷಮಾರ್ಗದಲ್ಲಂತೂ ದರ್ಶನ-ಜ್ಞಾನ-ಚಾರಿತ್ರಗಳು ಗುಣಗಳಿದ್ದು, ಇವುಗಳಿಲ್ಲದೆ ಜಾತಿ-ಕುಲ-ರೂಪು ಮೊದಲಾದವು ವಂದನೀಯವಿಲ್ಲ, ಇವುಗಳಿಂದ ಮುನಿತನವಾಗಲಿ-ಶ್ರಾವಕತನವಾಗಲಿ ಬರುವುದಿಲ್ಲ. ಮುನಿತನ-ಶ್ರಾವಕತನಗಳಂತೂ ಸಮ್ಯಗ್ದರ್ಶನ-ಜ್ಞಾನ-ಚಾರಿತ್ರದಿಂದ ಬರುತ್ತವೆ, ಆದುದರಿಂದ ಇವುಗಳನ್ನು ಧಾರಣ ಮಾಡುವವರೇ ವಂದನೆಗೆ ಯೋಗ್ಯರಿದ್ದಾರೆ, ಜಾತಿ-ಕುಲ ಮೊದಲಾದವು ವಂದನೆಗೆ ಯೋಗ್ಯವಿಲ್ಲ. ॥೨೭॥

ತಪ ಮೊದಲಾದವುಗಳಿಂದ ಸಂಯುಕ್ತರಿರುವವರಿಗೆ ನಮಸ್ಕಾರ ಮಾಡುತ್ತೇನೆಂದು ಈಗ ಹೇಳುತ್ತಾರೆ, -

**ವಂದಮಿ [1]ತವಸಾವಣ್ಣಾ ಸೀಲಂ ಚ ಗುಣಂ ಚ ಬಂಭಚೇರಂ ಚ ।**
**ಸಿದ್ಧಿಗಮಣಂ ಚ ತೇಸಿಂ[2]ಸಮ್ಮತ್ತೇಣ ಸುದ್ಧಭಾವೇಣ ॥೨೮॥**

**ವಂದೇ ತಪಃ ಶ್ರಮಣಾನ್ ಶೀಲಂ ಚ ಗುಣಂ ಚ ಬ್ರಹ್ಮಚರ್ಯಂ ಚ ।**
**ಸಿದ್ಧಿಗಮನಂ ಚ ತೇಷಾಂ ಸಮ್ಯಕ್ತ್ವೇನ ಶುದ್ಧಭಾವೇನ ॥೨೮॥**

ಅರ್ಥ ಃ- ಯಾರು ತಪಸಹಿತವಾಗಿ ಶ್ರಮಣತೆಯನ್ನು ಧಾರಣ ಮಾಡುತ್ತಾರೆ ಅವರಿಗೆ ಹಾಗೂ ಅವರ ಶೀಲಕ್ಕೆ, ಅವರ ಗುಣಕ್ಕೆ ಮತ್ತು ಬ್ರಹ್ಮಚರ್ಯಕ್ಕೆ ನಾನು ಸಮ್ಯಕ್ತ್ವ ಸಹಿತವಾಗಿ ಶುದ್ಧ ಭಾವದಿಂದ ನಮಸ್ಕಾರ ಮಾಡುತ್ತೇನೆಂದು ಆಚಾರ್ಯದೇವರು ಹೇಳುತ್ತಾರೆ, ಏಕೆಂದರೆ ಅವರ ಆ ಗುಣಗಳಿಂದ ಸಮ್ಯಕ್ತ್ವ ಸಹಿತವಾದ ಶುದ್ಧಭಾವದಿಂದ ಸಿದ್ಧಿ ಎಂದರೆ ಮೋಕ್ಷದ ಕುರಿತು ಗಮನವಾಗುತ್ತದೆ.

ಭಾವಾರ್ಥ ಃ- ದೇಹ ಮೊದಲಾದವು ವಂದನೆಗೆ ಯೋಗ್ಯವಾಗಿಲ್ಲ, ಆದರೆ ಗುಣಗಳು ವಂದನೆಗೆ ಯೋಗ್ಯವಿವೆಯೆಂದು ಮೊದಲು ಹೇಳಿದೆ. ಈಗ ಇಲ್ಲಿ ಗುಣಸಹಿತನಿಗೆ ವಂದನೆ ಮಾಡಿದೆ. ಅಲ್ಲಿ ಯಾರು ತಪಸ್ಸು ಧಾರಣ ಮಾಡಿ ಗೃಹಸ್ಥಾವಸ್ಥೆಯನ್ನು ಬಿಟ್ಟುಕೊಟ್ಟು ಮುನಿಯಾಗಿ ಹೋಗಿದ್ದಾರೆ. ಅವರಿಗೆ ಹಾಗೂ ಅವರ ಶೀಲಗುಣ

---

**ಶುದ್ಧಭಾವದಿಂದ ವಂದಿಸುವೆ ಸಮ್ಯಕ್ತ್ವಸಂಯುತ ಶ್ರಮಣಶಿರೋಮಣಿಗೆ ।**
**ಸಿದ್ಧಿಗಮನನಿಗೆ ಸುಶೀಲನಿಗೆ ಬ್ರಹ್ಮಚರ್ಯ ಮೇಣ್ ಗುಣಯುತನಿಗೆ ॥೨೮॥**

---

೧ 'ತವ ಸಮಣ್ಣಾ' ಛಾಯಾ - (ತಪಃಸಮಾಪನ್ನಾತ್) 'ತವಸಉಣ್ಣಾ' 'ತವಸಮಾಣಂ' ಈ ಮೂರು ಪಾಠಗಳು ಮುದ್ರಿತ ಷಟ್‌ಪ್ರಾಭೃತದ ಪುಸ್ತಕ ಹಾಗೂ ಅದರ ಟಿಪ್ಪಣಿಯಲ್ಲಿವೆ.

೨ 'ಸಮ್ಮತ್ತೇಣೇವ' ಎಂದು ಪಾಠವಿರುವುದರಿಂದ ಪಾದ ಭಂಗವಾಗುವುದಿಲ್ಲ.

ಬ್ರಹ್ಮಚರ್ಯ ಸಮ್ಯಕ್ತ್ವಸಹಿತ ಶುದ್ಧಭಾವದಿಂದ ಸಂಯುಕ್ತವಿರುವವರ ವಂದನೆ ಮಾಡಿದೆ. ಇಲ್ಲಿ ಶೀಲಶಬ್ದದಿಂದ ಉತ್ತರ ಗುಣಗಳನ್ನು ಮತ್ತು ಗುಣಶಬ್ದದಿಂದ ಮೂಲಗುಣಗಳನ್ನು ಅದರಂತೆ ಬ್ರಹ್ಮಚರ್ಯ ಶಬ್ದದಿಂದ ಆತ್ಮಸ್ವರೂಪದಲ್ಲಿ ಮಗ್ನತೆಯಾಗುವುದನ್ನು ತಿಳಿದುಕೊಳ್ಳಬೇಕು. ॥೨೮॥

ಪ್ರಶ್ನೆ :– ಸಂಯಮವನ್ನು ವಂದನೆ ಯೋಗ್ಯವೆಂದು ಹೇಳಿದರೆ ಸಮವಸರಣ ಮೊದಲಾದ ವಿಭೂತಿ ಸಹಿತವಾದ ತೀರ್ಥಂಕರರಿದ್ದಾರೆ ಅವರು ವಂದನೆಗೆ ಯೋಗ್ಯರಿದ್ದಾರವೋ ಅಥವಾ ಇಲ್ಲವೋ ?

ಉತ್ತರ :– ತೀರ್ಥಂಕರ ಪರಮದೇವರುಗಳು ಸಮ್ಯಕ್ತ್ವಸಹಿತ ತಪದ ಮಾಹಾತ್ಮ್ಯದಿಂದ ತೀರ್ಥಂಕರ ಪದವಿ ಪಡೆಯುತ್ತಾರೆ ಅವರೂ ವಂದನೆ ಯೋಗ್ಯರಿದ್ದಾರೆಂಬುದನ್ನು ಗಾಥೆಯ ಮುಖಾಂತರ ಹೇಳುತ್ತಾರೆ, –

**ಚಉಸಟ್ಠಿ ಚಮರಸಹಿಓ ಚಉತೀಸಹಿ ಅಇಸವಿಹಿಂ ಸಂಜುತ್ತೋ ।**
**ಅಣವರಬಹುಸತ್ತಹಿಓ ಕಮ್ಮಕ್ಖಯಕಾರಣಣಿಮಿತ್ತೋ ॥೨೯॥**

ಚತುಃಷಷ್ಟಿಚಮರಸಹಿತಃ ಚತುಸ್ತ್ರಿಂಶದ್ಭಿರತಿಶಯೈಃ ಸಂಯುಕ್ತಃ ।
[೧]ಅನವರತಬಹುಸತ್ತ್ವಹಿತಃ ಕರ್ಮಕ್ಷಯಕಾರಣನಿಮಿತ್ತಃ[೨] ॥೨೯॥

ಅರ್ಥ :– ಯಾರು ಅರವತ್ತನಾಲ್ಕು ಚಾಮರಗಳಿಂದ ಸಹಿತರಿದ್ದಾರೆ, ಮೂವತ್ತನಾಲ್ಕು ಅತಿಶಯಗಳಿಂದಸಹಿತರಿದ್ದಾರೆ, ಯಾರು ನಿರಂತರವಾಗಿ ಅಧಿಕ ಪ್ರಾಣಿಗಳಿಗೆ ಹಿತವಾಗುವಂಥ ಉಪದೇಶ ಕೊಡುತ್ತಾರೆ ಮತ್ತು ಕರ್ಮದ ಕ್ಷಯಕ್ಕೆ ಕಾರಣರಿರುವಂಥ ತೀರ್ಥಂಕರ ಪರಮದೇವರುಗಳು ವಂದನೆಗೆ ಯೋಗ್ಯರಿದ್ದಾರೆ.

ಭಾವಾರ್ಥ :– ಇಲ್ಲಿ ಅರವತ್ತನಾಲ್ಕು ಚಾಮರ ಮೂವತ್ತನಾಲ್ಕು ಅತಿಶಯ ಸಹಿತವಾದ ವಿಶೇಷಣಗಳಿಂದಲೂ ತೀರ್ಥಂಕರರ ಪ್ರಭುತ್ವವನ್ನು ತಿಳಿಸಿದ್ದಾರೆ ಮತ್ತು ಪ್ರಾಣಿಗಳಿಗೆ ಹಿತಮಾಡುವ ಅದರಂತೆ ಕರ್ಮ ಕ್ಷಯದ ಕಾರಣ ವಿಶೇಷಣದಿಂದ ಎರಡನೆಯವರಿಗೆ ಉಪಕಾರ ಮಾಡುವಿಕೆಯನ್ನು ತಿಳಿಸಿದ್ದಾರೆ, ಈ ಎರಡೂ ಕಾರಣಗಳಿಂದ ಜಗತ್ತಿನಲ್ಲಿ ವಂದನೆಗೆ ಪೂಜೆಗೆ ಯೋಗ್ಯರಿದ್ದಾರೆ. ಆದುದರಿಂದ ತೀರ್ಥಂಕರರು ಹೇಗೆ ಪೂಜ್ಯರಿದ್ದಾರೆಂಬ ಭ್ರಮೆಯನ್ನು ಮಾಡಬಾರದು, ಈ ತೀರ್ಥಂಕರರು ಸರ್ವಜ್ಞ ವೀತರಾಗರಿದ್ದಾರೆ, ಅವರ ಸಮವಸರಣ ಮೊದಲಾದ ವಿಭೂತಿಗಳನ್ನು ರಚಿಸಿ ಇಂದ್ರ ಮೊದಲಾದ ಭಕ್ತ ಜನರು ಮಹಿಮೆ ಮಾಡುತ್ತಾರೆ. ಇವರಿಗೆ ಅದರಿಂದ ಯಾವ ಪ್ರಯೋಜನವಿಲ್ಲ, ಸ್ವಯಂ ದಿಗಂಬರತ್ವವನ್ನು ಧಾರಣ ಮಾಡುತ್ತ ಅಂತರಿಕ್ಷದಲ್ಲಿರುತ್ತಾರೆಂದು ತಿಳಿಯಬೇಕು.

ಈಗ ಮೋಕ್ಷವು ಯಾವುದರಿಂದಾಗುತ್ತದೆಂಬುದನ್ನು ಹೇಳುತ್ತಾರೆ, –

---

**ಅರವತ್ತನಾಲ್ಕು ಚಾಮರಯುಕ್ತ ಮೂವತ್ತನಾಲ್ಕು ಅತಿಶಯಸಹಿತನಾಗಿದ್ದು ।**
**ನಿರಂತರ ಬಹುಸತ್ವಹಿತ ಕರ್ಮಕ್ಷಯಕಾರಣ ನಿಮಿತ್ತನಿರ್ಪವನು ॥೨೯॥**

---

೧ 'ಅಣುಚರಬಹುಸತ್ತಹಿಓ' (ಅನುಚರಬಹುಸತ್ತ್ವಹಿತಃ) ಮುದ್ರಿತ ಷಟ್‌ಪ್ರಾಭೃತದಲ್ಲಿ ಈ ಪಾಠವಿದೆ.

೨. 'ನಿಮಿತ್ತೇ' ಎಂದು ಮುದ್ರಿತ ಷಟ್‌ಪ್ರಾಭೃತದಲ್ಲಿ ಪಾಠವಿದೆ.

ಣಾಣೇಣ ದಂಸಣೇಣ ಯ ತವೇಣ ಚರಿಯೇಣ ಸಂಜಮಗುಣೇಣ ।
ಚಉಹಿಂ ಪಿ ಸಮಾಜೋಗೇ ಮೋಕ್ಖೋ ಜಿಣಸಾಸಣೇ ದಿಟ್ಠೋ ॥೩೦॥

ಜ್ಞಾನೇನ ದರ್ಶನೇನ ಚ ತಪಸಾ ಚಾರಿತ್ರೇಣ ಸಂಯಮಗುಣೇನ ।
ಚತುರ್ಣಾಮಪಿ ಸಮಾಯೋಗೇ ಮೋಕ್ಷಃ ಜಿನಶಾಸನೇ ದೃಷ್ಟಃ ॥೩೦॥

ಅರ್ಥ :- ಜ್ಞಾನ, ದರ್ಶನ, ತಪ ಮತ್ತು ಚಾರಿತ್ರದಿಂದ ಈ ನಾಲ್ಕರ ಸಮಾಯೋಗವಾದಮೇಲೆ ಯಾವ ಸಂಯಮಗುಣವಾಗುವುದು ಅದರಿಂದ ಮೋಕ್ಷವಾಗುತ್ತದೆಯೆಂದು ಜಿನಶಾಸನದಲ್ಲಿ ಹೇಳಿದೆ. ॥೩೦॥

ಈಗ ಈ ಜ್ಞಾನ ಮೊದಲಾದವುಗಳ ಉತ್ತರೋತ್ತರ ಸಾರತನವನ್ನು ಹೇಳುತ್ತಾರೆ, -

ಣಾಣಂ ಣರಸ್ಸ ಸಾರೋ ಸಾರೋ ವಿ ಣರಸ್ಸ ಹೋಇ ಸಮ್ಮತ್ತಂ ।
ಸಮ್ಮತ್ತಾಓ ಚರಣಂ ಚರಣಾಓ ಹೋಇ ಣಿವ್ವಾಣಂ ॥೩೧॥

ಜ್ಞಾನಂ ನರಸ್ಯ ಸಾರಃ ಸಾರಃ ಅಪಿ ನರಸ್ಯ ಭವತಿ ಸಮ್ಯಕ್ತ್ವಮ್ ।
ಸಮ್ಯಕ್ತ್ವಾತ್ ಚರಣಂ ಚರಣಾತ್ ಭವತಿ ನಿರ್ವಾಣಮ್ ॥೩೧॥

ಅರ್ಥ :- ಮೊದಲಂತೂ ಈ ಪುರುಷನ ಸಲುವಾಗಿ ಜ್ಞಾನವು ಸಾರವಿದೆ, ಏಕೆಂದರೆ ಜ್ಞಾನದಿಂದ ಎಲ್ಲ ಹೇಯ-ಉಪಾದೇಯಗಳು ತಿಳಿದುಬರುತ್ತವೆ. ಪುನಃ ಆ ಪುರುಷನ ಸಲುವಾಗಿ ಸಮ್ಯಕ್ತ್ವವು ನಿಶ್ಚಯದಿಂದ ಸಾರವಿದೆ, ಏಕೆಂದರೆ ಸಮ್ಯಕ್ತ್ವವಿಲ್ಲದೆ ಜ್ಞಾನವು ಮಿಥ್ಯೆಯೆಂಬ ಹೆಸರು ಪಡೆಯುತ್ತದೆ, ಸಮ್ಯಕ್ತ್ವದಿಂದ ಚಾರಿತ್ರವಾಗುತ್ತದೆ, ಏಕೆಂದರೆ ಸಮ್ಯಕ್ತ್ವವಿಲ್ಲದ ಚಾರಿತ್ರವು ಕೂಡ ಮಿಥ್ಯೆಯೇ ಇದೆ, ಚಾರಿತ್ರದಿಂದ ನಿರ್ವಾಣವಾಗುತ್ತದೆ.

ಭಾವಾರ್ಥ :- ಚಾರಿತ್ರದಿಂದ ನಿರ್ವಾಣವಾಗುತ್ತದೆ ಮತ್ತು ಚಾರಿತ್ರವು ಜ್ಞಾನಪೂರ್ವಕವಾಗಿ ಸತ್ಯಾರ್ಥವಾಗುತ್ತದೆ ಅದರಂತೆ ಜ್ಞಾನವು ಸಮ್ಯಕ್ತ್ವಪೂರ್ವಕವಾಗಿ ಸತ್ಯಾರ್ಥವಾಗುತ್ತದೆ. ಹೀಗೆ ವಿಚಾರ ಮಾಡುವುದರಿಂದ ಸಮ್ಯಕ್ತ್ವಕ್ಕೆ ಸಾರತನವು ಬರುವುದು. ಆದುದರಿಂದ ಮೊದಲಂತೂ ಸಮ್ಯಕ್ತ್ವವು ಸಾರವಿದೆ ಅನಂತರ ಜ್ಞಾನ-ಚಾರಿತ್ರಗಳು ಸಾರವಿವೆ. ಮೊದಲು ಜ್ಞಾನದಿಂದ ಪದಾರ್ಥಗಳನ್ನು ತಿಳಿಯುತ್ತಾರೆ ಆದುದರಿಂದ ಮೊದಲು ಜ್ಞಾನವು ಸಾರವಿದೆ, ಆದಾಗ್ಯೂ ಸಮ್ಯಕ್ತ್ವವಿಲ್ಲದೆ ಅದರದು ಕೂಡ ಸಾರತನವಿಲ್ಲವೆಂದು ತಿಳಿಯಬೇಕು ॥೩೧॥

ಮುಂದೆ ಇದೇ ಅರ್ಥವನ್ನು ದೃಢ ಮಾಡುತ್ತಾರೆ, -

---

ಜ್ಞಾನದರ್ಶನತಪಮತ್ತದರಂತೆ ಚಾರಿತ್ರದಿಂ ಸಂಯಮಗುಣಮಪ್ಪುದು ।
ಈ ನಾಲ್ಕರಸಮಾಯೋಗದಿಂ ಮೋಕ್ಷಮಪ್ಪುದೆಂದು ಜಿನಶಾಸನದಿಪೇಳಿದೆ ॥೩೦॥

ಜ್ಞಾನವು ಮನುಷ್ಯನ ಸಾರವಿದ್ದು ಸಮ್ಯಕ್ತ್ವ ಕೂಡ ಮನುಷ್ಯನ ಸಾರವಿದೆ ।
ತೇನ ಸಮ್ಯಕ್ತ್ವದಿಂದ ಚಾರಿತ್ರಮಪ್ಪುದಾಚಾರಿತ್ರದಿಂದ ಮುಕ್ತಿಯಾಗುವುದು ॥೩೧॥

**ಣಾಣಮ್ಮಿ ದಂಸಣಮ್ಮಿ ಯ ತವೇಣ ಚರಿಏಣ ಸಮ್ಮಸಹಿಏಣ ।**
**[೧]ಚಉಣ್ಹಂ ಪಿ ಸಮಾಜೋಗೇ ಸಿದ್ಧಾ ಜೀವಾ ಣ ಸಂದೇಹೋ ॥೩೨॥**

**ಜ್ಞಾನೇ ದರ್ಶನೇ ಚ ತಪಸಾ ಚಾರಿತ್ರೇಣ ಸಮ್ಯಕ್ತ್ವಸಹಿತೇನ ।**
**ಚತುರ್ಣಾಮಪಿ ಸಮಾಯೋಗೇ ಸಿದ್ಧಾ ಜೀವಾ ನ ಸಂದೇಹಃ ॥೩೨॥**

ಅರ್ಥ ः– ಜ್ಞಾನ ಮತ್ತು ದರ್ಶನವು ಆದಮೇಲೆ ಸಮ್ಯಕ್ತ್ವಸಹಿತ ತಪಸ್ಸು ಮಾಡಿ ಚಾರಿತ್ರಪೂರ್ವಕ ಈ ನಾಲ್ಕರ ಸಮಾಯೋಗವಾಗುವುದರಿಂದ ಜೀವರುಗಳು ಸಿದ್ಧರಾಗುತ್ತಾರೆ, ಇದರಲ್ಲಿ ಸಂದೇಹವಿಲ್ಲ.

ಭಾವಾರ್ಥ ः– ಮೊದಲು ಯಾರು ಸಿದ್ಧರಾಗಿದ್ದಾರೆ ಅವರು ಸಮ್ಯಗ್ದರ್ಶನ, ಜ್ಞಾನ, ಚಾರಿತ್ರ ಮತ್ತು ತಪಸ್ಸು ಈ ನಾಲ್ಕರ ಸಂಯೋಗದಿಂದಲೇ ಆಗಿದ್ದಾರೆಂಬುದು ಇದು ಜಿನವಚನವಿದೆ. ಇದರಲ್ಲಿ ಯಾವ ಸಂದೇಹವಿಲ್ಲ. ॥೩೨॥

ಈ ಲೋಕದಲ್ಲಿ ಸಮ್ಯಗ್ದರ್ಶನರೂಪದ ರತ್ನವು ಅಮೌಲ್ಯವಿದೆ, ಅದು ದೇವ ದಾನವರುಗಳಿಂದ ಪೂಜ್ಯವಿದೆ ಯೆಂಬುದನ್ನು ಈಗ ಹೇಳುತ್ತಾರೆ, –

**ಕಲ್ಲಾಣಪರಂಪರಯಾ ಲಹಂತಿ ಜೀವ ವಿಸುದ್ಧಸಮ್ಮತ್ತಂ ।**
**ಸಮ್ಮದ್ದಂಸಣರಯಣಂ ಅಗ್ಘೇದಿ ಸುರಾಸುರೇ ಲೋಏ ॥೩೩॥**

**ಕಲ್ಯಾಣಪರಂಪರಯಾ ಲಭಂತೇ ಜೀವಾಃ ವಿಶುದ್ಧಸಮ್ಯಕ್ತ್ವಮ್ ।**
**ಸಮ್ಯಗ್ದರ್ಶನರತ್ನಂ ಅರ್ಘ್ಯತೇ ಸುರಾಸುರೇ ಲೋಕೇ ॥೩೩॥**

ಅರ್ಥ ः– ಜೀವರುಗಳು ವಿಶುದ್ಧ ಸಮ್ಯಕ್ತ್ವವನ್ನು ಕಲ್ಯಾಣದ ಪರಂಪರೆಯೊಡನೆ ಪಡೆಯುತ್ತಿರುವುದರಿಂದ ಸಮ್ಯಗ್ದರ್ಶನವು ರತ್ನವಿದೆ, ಅದು ಈ ಸುರಾಸುರರುಗಳಿಂದ ತುಂಬಿ ಹೋಗಿರುವ ಲೋಕದಲ್ಲಿ ಪೂಜ್ಯವಿದೆ.

ಭಾವಾರ್ಥ ः– ವಿಶುದ್ಧ ಎಂದರೆ ಇಪ್ಪತ್ತೈದು ಮಲದೋಷಗಳಿಂದ ರಹಿತವಾದ ನಿರತಿಚಾರ ಸಮ್ಯಕ್ತ್ವದಿಂದ ಕಲ್ಯಾಣದ ಪರಂಪರೆಯನ್ನು ಎಂದರೆ ತೀರ್ಥಂಕರ ಪದವನ್ನು ಪಡೆಯುತ್ತಿರುವುದರಿಂದ ಈ ಸಮ್ಯಕ್ತ್ವರತ್ನವು ಲೋಕದಲ್ಲಿ ಸಮಸ್ತ ದೇವ, ದಾನವ ಮತ್ತು ಮನುಷ್ಯರುಗಳಿಂದ ಪೂಜ್ಯವಿರುತ್ತದೆ. ತೀರ್ಥಂಕರ ಪ್ರಕೃತಿಯ ಬಂಧದ ಕಾರಣವಾಗಿ

---

**ಜ್ಞಾನದರ್ಶನದಿಂದ ಸಮ್ಯಕ್ತ್ವಯುತಚಾರಿತ್ರದಿಂದ ತಪಸು ಮಾಡಿದರೆ ।**
**ಈ ನಾಲ್ಕರ ಸಮಾಯೋಗದಿಂ ಜೀವ ಸಿದ್ಧಮಪ್ಪುದಿದರಲಿಸಂದೇಹವಿಲ್ಲ ॥೩೨॥**
**ಜೀವ ಕಲ್ಯಾಣಪರಂಪರೆಯೊಡನೆ ವಿಶುದ್ಧಸಮ್ಯಕ್ತ್ವಮಂ ಪಡೆಯುವನು ।**
**ದೇವ-ಅಸುರರಿಂ ತುಂಬಿದ ಲೋಕದೊಳು ಸಮ್ಯಕ್ತ್ವರತ್ನವದು ಪೂಜ್ಯವಿದೆ ॥೩೩॥**

---

೧ 'ಚೋಣ್ಹಂ' ಎಂದು ಪಾಠಾಂತರವಿದೆ.

ಸೋಲಹಕಾರಣ ಭಾವನೆಗಳನ್ನು ಹೇಳಿದ್ದಾರೆ, ಅವುಗಳಲ್ಲಿ ಮೊದಲನೆಯದು ದರ್ಶನವಿಶುದ್ಧಿಯಿದ್ದು ಅದೇ ಮುಖ್ಯವಿದೆ, ಇದೇ ವಿನಯ ಮೊದಲಾದ ಹದಿನೈದು ಭಾವನೆಗಳಿಗೆ ಕಾರಣವಿರುವುದರಿಂದ ಸಮ್ಯಗ್ದರ್ಶನಕ್ಕೆ ಮುಖ್ಯತೆಯಿದೆ. ||೩೩||

ಯಾರು ಉತ್ತಮ ಗೋತ್ರದೊಡನೆ ಮನುಷ್ಯತ್ವವನ್ನು ಪಡೆದು ಸಮ್ಯಕ್ತ್ವದ ಪ್ರಾಪ್ತಿಯಿಂದ ಮೋಕ್ಷ ಪಡೆಯುತ್ತಾರೆ ಅದು ಸಮ್ಯಕ್ತ್ವದ ಮಾಹಾತ್ಮ್ಯವಿದೆಯೆಂದು ಈಗ ಹೇಳುತ್ತಾರೆ,–

[1]ಲದ್ಧೂಣ ಯ ಮಣುಯತ್ತಂ ಸಹಿಯಂ ತಹ ಉತ್ತಮೇಣ ಗೋತ್ತೇಣ |
ಲದ್ಧೂಣ ಯ ಸಮ್ಮತ್ತಂ [2]ಅಕ್ಖಯಸೋಕ್ಖಂ ಚ ಮೋಕ್ಖಂ ಚ ||೩೪||

ಲಬ್ಧ್ವಾ ಚ ಮನುಷ್ಯತ್ವಂ ಸಹಿತಂ ತಥಾ ಉತ್ತಮೇನ ಗೋತ್ರೇಣ |
ಲಬ್ಧ್ವಾ ಚ ಸಮ್ಯಕ್ತ್ವಂ ಅಕ್ಷಯಸುಖಂ ಚ ಮೋಕ್ಷಂ ಚ ||೩೪||

ಅರ್ಥ ಃ– ಉತ್ತಮ ಗೋತ್ರದೊಡನೆ ಮನುಷ್ಯತ್ವವನ್ನು ಪ್ರತ್ಯಕ್ಷವಾಗಿ ಪ್ರಾಪ್ತಮಾಡಿಕೊಂಡು ಪುನಃ ಅಲ್ಲಿ ಸಮ್ಯಕ್ತ್ವ ಪ್ರಾಪ್ತಮಾಡಿಕೊಂಡು ಅವಿನಾಶ ಸುಖರೂಪವಾದ ಕೇವಲಜ್ಞಾನವನ್ನು ಪಡೆಯುತ್ತಾರೆ, ಮತ್ತು ಆ ಸುಖಸಹಿತವಾಗಿ ಮೋಕ್ಷವನ್ನು ಪ್ರಾಪ್ತಮಾಡಿಕೊಳ್ಳುತ್ತಾರೆ.

ಭಾವಾರ್ಥ ಃ– ಇದೆಲ್ಲವೂ ಸಮ್ಯಕ್ತ್ವದ ಮಾಹಾತ್ಮ್ಯವಿದೆ. ||೩೪||

ಯಾರು ಸಮ್ಯಕ್ತ್ವದ ಪ್ರಭಾವದಿಂದ ಮೋಕ್ಷ ಪಡೆಯುತ್ತಾರೆ ಅವರು ಕೂಡಲೆ ಪಡೆಯುತ್ತಾರೆಯೋ ಅಥವಾ ಸ್ವಲ್ಪ ಅವಸ್ಥಾನವೂ ಇರುತ್ತದೆಯೋ ? – ಎಂಬ ಪ್ರಶ್ನೆಯು ಉತ್ಪನ್ನವಾಗುವುದರಿಂದ ಅದರ ಉತ್ತರ ರೂಪವಾಗಿ ಈಗ ಗಾಥಾಸೂತ್ರವನ್ನು ಹೇಳುತ್ತಾರೆ, –

ವಿಹರದಿ ಜಾವ ಜಿಣಿಂದೋ ಸಹಸಟ್ಠಸುಲಕ್ಖಣೇಹಿಂ ಸಂಜುತ್ತೋ |
ಚಉತೀಸಅಇಸಯಜುದೋ ಸಾ ಪಡಿಮಾ ಥಾವರಾ ಭಣಿಯಾ ||೩೫||

ವಿಹರತಿ ಯಾವತ್ ಜಿನೇಂದ್ರಃ ಸಹಸ್ರಾಷ್ಟಲಕ್ಷಣೈಃ ಸಂಯುಕ್ತಃ |
ಚತುಸ್ತ್ರಿಂಶದತಿಶಯಯುತಃ ಸಾ ಪ್ರತಿಮಾ ಸ್ಥಾವರಾ ಭಣಿತಾ ||೩೫||

---

ಪಡೆದು ಪ್ರತ್ಯಕ್ಷ ಮನುಷ್ಯತ್ವವನು ಉತ್ತಮಗೋತ್ರ ಸಹಿತವಾಗಿ ಜೀವ |
ಪಡೆದು ಸಮ್ಯಕ್ತ್ವವನು ಅಕ್ಷಯ ಸುಖರೂಪವನದರಂತೆ ಮೋಕ್ಷವನು ||೩೪||

ಸಹಸ್ರಾಷ್ಟಲಕ್ಷಣಸಂಯುಕ್ತ ಚತುಸ್ತ್ರಿಂಶದತಿಶಯಯುತ ಜಿನೇಂದ್ರರು |
ವಿಹರಿಸುವರೆನ್ನೆವರೆಗವರನು ಸ್ಥಾವರ ಪ್ರತಿಮೆಯೆಂದೆನ್ನುವರು ||೩೫||

---

೧ 'ದಟ್ಠೂಣ'ವೆಂಬ ಪಾಠಾಂತರವಿದೆ. ೨. 'ಅಕ್ಖಯಸೋಕ್ಖಂ ಲಹದಿಮೋಕ್ಖಂ ಚ'ವೆಂಬ ಪಾಠಾಂತರವಿದೆ.

ಅರ್ಥ ಃ- ಕೇವಲಜ್ಞಾನವಾದ ನಂತರ ಜಿನೇಂದ್ರ ಭಗವಂತರು ಎಲ್ಲಿಯವರೆಗೆ ಈ ಲೋಕದಲ್ಲಿ ಆರ್ಯಖಂಡದಲ್ಲಿ ವಿಹಾರ ಮಾಡುತ್ತಾರೆ ಅಲ್ಲಿಯವರೆಗೆ ಅವರ ಆ ಪ್ರತಿಮೆಯು ಎಂದರೆ ಶರೀರ ಸಹಿತವಾದ ಪ್ರತಿಬಿಂಬವನ್ನು 'ಥಾವರ ಪಡಿಮಾ' ಎಂಬ ಹೆಸರಿನಿಂದ ಕರೆಯುತ್ತಾರೆ. ಆ ಜಿನೇಂದ್ರ ಭಗವಂತರು ಒಂದು ಸಾವಿರದೆಂಟು ಲಕ್ಷಣಗಳಿಂದ ಸಂಯುಕ್ತರಿದ್ದಾರೆ. ಅಲ್ಲಿ ಶ್ರೀವೃಕ್ಷವನ್ನು ಮೊದಲು ಮಾಡಿಕೊಂಡು ನೂರೆಂಟು ಲಕ್ಷಣಗಳಂತೂ ಇರುತ್ತವೆ ತಿಲ, ಕಸ್ತೂರಿ ಮೊದಲು ಮಾಡಿಕೊಂಡು ಒಂಭೈನೂರು ವ್ಯಂಜನಗಳಿರುತ್ತವೆ. ಮೂವತ್ತಾ ನ್ಲುಕ್ಕು ಅತಿಶಯಗಳಲ್ಲಿ ಹತ್ತಂತೂ ಜನ್ಮದಿಂದಲೇ ಉತ್ಪನ್ನವಾಗಿರುತ್ತವೆ. ೧) ನಿಸ್ವೇದತೆ, ೨) ನಿರ್ಮಲತೆ, ೩) ಶ್ವೇತರುಧಿರತೆ, ೪) ಸಮಚತುರಸ್ರಸಂಸ್ಥಾನ, ೫) ವಜ್ರವೃಷಭನಾರಾಚ ಸಂಹನನ, ೬) ಸುರೂಪತೆ, ೭) ಸುಗಂಧತೆ, ೮) ಸುಲಕ್ಷಣತೆ, ೯) ಅತುಲವೀರ್ಯ, ೧೦) ಹಿತಮಿತವಚನವೆಂದು ಹತ್ತು ಇರುತ್ತವೆ. ಘಾತಿಕರ್ಮಗಳು ಕ್ಷಯವಾದ ನಂತರ ೧) ಶತಯೋಜನ ಸುಭಿಕ್ಷತೆ, ೨) ಆಕಾಶಗಮನ, ೩) ಪ್ರಾಣಿವಧೆಯ ಅಭಾವ, ೪) ಕವಲಾಹಾರದ ಅಭಾವ, ೫) ಉಪಸರ್ಗದ ಅಭಾವ, ೬) ಚತುರ್ಮುಖತೆ, ೭) ಸರ್ವವಿದ್ಯಾಪ್ರಭುತ್ವ, ೮) ಛಾಯಾರಹಿತತೆ, ೯) ಲೋಚನನಿಸ್ಪಂದರಹಿತತೆ, ೧೦) ಕೇಶನಖವೃದ್ಧಿರಹಿತತೆಯೆಂದು ಹತ್ತು ಆಗುತ್ತವೆ. ದೇವಗಳಿಂದ ಮಾಡಿದವುಗಳು ೧) ಸಕಲಾರ್ಧಮಾಗಧೀ ಭಾಷೆ, ೨) ಸರ್ವಜೀವಮೈತ್ರೀಭಾವ, ೩)ಸರ್ವಋತುಫಲಪುಷ್ಪಪ್ರಾದುರ್ಭಾವ, ೪) ಕನ್ನಡಿಯ ಹಾಗೆ ಪೃಥ್ವಿಯಾಗುವುದು, ೫) ಮಂದ ಸುಗುಂಧ ಮಾರುತದ ಸಂಚಾರ, ೬) ಸಂಪೂರ್ಣ ಜಗತ್ತಿನಲ್ಲಿ ಆನಂದವಿರುವುದು, ೭) ಭೂಮಿಯು ಕಂಟಕದಿಂದರಹಿತವಿರುವುದು, ೮) ದೇವತೆಗಳಿಂದ ಗಂಧೋದಕದ ವೃಷ್ಟಿಯಾಗುವುದು, ೯) ವಿಹಾರ ಸಮಯದಲ್ಲಿ ಚರಣಕಮಲದ ಕೆಳಗೆ ದೇವಗಳಿಂದ ಸುವರ್ಣಮಯ ಕಮಲಗಳ ರಚನೆಯಾಗುವುದು, ೧೦) ಭೂಮಿಯು ಧನಧಾನ್ಯಗಳಿಂದ ಪರಿಪೂರ್ಣವಿರುವುದು, ೧೧) ದಿಶೆ ಆಕಾಶಗಳು ನಿರ್ಮಲವಿರುವುದು, ೧೨) ದೇವತೆಗಳ ಆಹ್ವಾನ ಶಬ್ದವಾಗುವುದು, ೧೩) ಮುಂದೆ ಮುಂದೆ ಧರ್ಮಚಕ್ರದ ಚಲನೆ, ೧೪) ಅಷ್ಟಮಂಗಲ ದ್ರವ್ಯಗಳಿರುವುದು ಹೀಗೆ ಹದಿನಾಲ್ಕು ಇರುತ್ತವೆ. ಎಲ್ಲ ಸೇರಿ ಮೂವತ್ತಾ ನ್ಲುಕ್ಕು ಆಗುವವು. ಅದರಂತೆ ೧) ಅಶೋಕ ವೃಕ್ಷ, ೨) ಪುಷ್ಪವೃಷ್ಟಿ, ೩) ದಿವ್ಯಧ್ವನಿ, ೪) ಚಾಮರ, ೫) ಸಿಂಹಾಸನ, ೬) ಛತ್ರ, ೭) ಭಾಮಂಡಲ, ೮) ದುಂದುಭಿವಾದನವೆಂದು ಎಂಟು ಪ್ರಾತಿಹಾರ್ಯಗಳಿರುತ್ತವೆ. ಇಂಥ ಅತಿಶಯದೊಡನೆ ಅನಂತಜ್ಞಾನ, ಅನಂತದರ್ಶನ, ಅನಂತಸುಖ, ಅನಂತವೀರ್ಯಸಹಿತ ತೀರ್ಥಂಕರ ಪರಮದೇವರು ಎಲ್ಲಿಯವರೆಗೆ ಜೀವರುಗಳಿಗೆ ಸಂಬೋಧನ ನಿಮಿತ್ತವಾಗಿ ವಿಹಾರ ಮಾಡುತ್ತ ವಿರಾಜಿಸುತ್ತಾರೆ ಅಲ್ಲಿಯವರೆಗೆ ಸ್ಥಾವರ ಪ್ರತಿಮೆಯೆಂದು ಕರೆಯಿಸಿಕೊಳ್ಳುತ್ತಾರೆ. ಹೀಗೆ ಸ್ಥಾವರ ಪ್ರತಿಮೆಯೆಂದು ಹೇಳುವುದರಿಂದ ತೀರ್ಥಂಕರರದು ಕೇವಲಜ್ಞಾನವಾದ ಬಳಿಕ ಅವಸ್ಥಾನ ತಿಳಿಸಲಾಗಿದೆ ಮತ್ತು ಧಾತು ಪಾಷಾಣದ ಪ್ರತಿಮೆ ಮಾಡಿ ಸ್ಥಾಪನೆ ಮಾಡುತ್ತಾರೆ ಅದು ಇದರದೇ ವ್ಯವಹಾರವಿದೆ. ।।೩೫।।

ಮುಂದೆ ಕರ್ಮಗಳ ನಾಶಮಾಡಿ ಮೋಕ್ಷ ಪ್ರಾಪ್ತಮಾಡಿಕೊಳ್ಳುತ್ತಾರೆಂದು ಹೇಳುತ್ತಾರೆ, -

**ಬಾರಸವಿಹತವಜುತ್ತಾ ಕಮ್ಮಂ ಖವಿಊಣ ವಿಹಿಬಲೇಣ ಸಂ ।**
**ವೋಸಟ್ಟಚತ್ತದೇಹಾ ಣಿವ್ವಾಣಮಣುತ್ತರಂ ಪತ್ತಾ ।।೩೬।।**

---

ದ್ವಾದಶವಿಧತಪಯುಕ್ತನಾಗಿ ವಿಧಿಬಲದಿ ತನ್ನ ಕರ್ಮವ ಕೆಡಿಸಿ ।
ಆ ದೇಹವನು ವ್ಯುತ್ಸರ್ಗದಿಂತ್ಯಜಿಸಿ ಅನುತ್ತರ ನಿರ್ವಾಣಪಡೆಯುವನು ।।೩೬।।

ದ್ವಾದಶವಿಧತಪೋಯುಕ್ತಾಃ ಕರ್ಮಕ್ಷಪಯಿತ್ವಾ ವಿಧಿಬಲೇನ ಸ್ವೀಯಮ್ ।
ವ್ಯುತ್ಸರ್ಗತ್ಯಕ್ತದೇಹಾ ನಿರ್ವಾಣಮನುತ್ತರಂ ಪ್ರಾಪ್ತಾಃ ॥೩೬॥

ಅರ್ಥ ಃ- ಯಾರು ಹನ್ನೆರಡು ಪ್ರಕಾರದ ತಪದಿಂದ ಸಂಯುಕ್ತರಾಗುತ್ತ ವಿಧಿಯ ಬಲದಿಂದ ತಮ್ಮ ಕರ್ಮವನ್ನು ನಷ್ಟಮಾಡಿ 'ವೋಸಟ್ಟಚತ್ತದೇಹಾ' ಎಂದರೆ ಯಾರು ದೇಹವನ್ನು ಭಿನ್ನಮಾಡಿ ಬಿಟ್ಟು ಕೊಟ್ಟಿದ್ದಾರೆ ಅವರು ಅನುತ್ತರ ಎಂದರೆ ಅದರಿಂದ ಮುಂದೆ ಅನ್ಯ ಅವಸ್ಥೆಯಿಲ್ಲದಂಥ ನಿರ್ವಾಣ ಅವಸ್ಥೆಯನ್ನು ಪ್ರಾಪ್ತಮಾಡಿಕೊಳ್ಳುತ್ತಾರೆ.

ಭಾವಾರ್ಥ ಃ- ಯಾರು ತಪದ ಮುಖಾಂತರ ಕೇವಲಜ್ಞಾನ ಪ್ರಾಪ್ತಮಾಡಿಕೊಂಡು ಎಲ್ಲಿಯವರೆಗೆ ವಿಹಾರ ಮಾಡುವರು ಅಲ್ಲಿಯವರೆಗೆ ಅವಸ್ಥಾನವಿರುವುದು. ಅನಂತರ ದ್ರವ್ಯ , ಕ್ಷೇತ್ರ,ಕಾಲ, ಭಾವದ ಸಾಮಗ್ರಿರೂಪವಾದ ವಿಧಿಯ ಬಲದಿಂದ ಕರ್ಮ ನಷ್ಟಮಾಡಿ ವ್ಯುತ್ಸರ್ಗ ಮುಖಾಂತರ ಶರೀರವನ್ನು ಬಿಟ್ಟು ಕೊಟ್ಟು ನಿರ್ವಾಣವನ್ನು ಪ್ರಾಪ್ತಮಾಡಿಕೊಳ್ಳುತ್ತಾರೆ. ಆಗ ಲೋಕ ಶಿಖರದ ಮೇಲೆ ಹೋಗಿ ವಿರಾಜಿಸುತ್ತಾರೆ, ಆ ಗಮನದಲ್ಲಿ ಒಂದು ಸಮಯ ತಗಲುತ್ತದೆ, ಆ ಸಮಯದಲ್ಲಿ ಜಂಗಮ ಪ್ರತಿಮೆಯೆಂದು ಹೇಳುತ್ತಾರೆ ಹೀಗೆ ಸಮ್ಯಗ್ದರ್ಶನ-ಜ್ಞಾನ-ಚಾರಿತ್ರದಿಂದ ಮೋಕ್ಷದ ಪ್ರಾಪ್ತಿಯಾಗುತ್ತದೆ ಅದರಲ್ಲಿ ಸಮ್ಯಗ್ದರ್ಶನವು ಮುಖ್ಯವಿದೆ. ಈ ಪಾಹುಡದಲ್ಲಿ ಸಮ್ಯಗ್ದರ್ಶನದ ಮುಖ್ಯತೆಯಿಂದ ವ್ಯಾಖ್ಯಾನ ಮಾಡಲಾಗಿದೆ.

ಜಿನರಾಜ ಮೋಕ್ಷೋಪಾಯ ಪೇಳಿಹರು ಸಮ್ಯಗ್ದರ್ಶನ ಜ್ಞಾನ ಚಾರಿತ್ರ
ಅದರೊಳ್ಸಮ್ಯಗ್ದರ್ಶನ ಮುಖ್ಯವಿದ್ದು ನಿಜ ಬೋಧೆ ಫಲಿಸೆ ಚಾರಿತ್ರ
ಯಾವನು ಆಗಮ ತಿಳಿದು ನಿಜವಾಗಿ ಪರಿಚಯಿಪನು ಪವಿತ್ರ
ಘಾತಿಕೆಡಿಸಿಕೇವಲಪಡೆದಘಾತಿನಂದೆ ಮೋಕ್ಷಮಪ್ಪುದು ಪವಿತ್ರ
ನಮಿಸಿ ದೇವ ಗುರು ಧರ್ಮಗಳ ಮನ್ನಿಸಿ ಜಿನಾಗಮವನು
ಅದರ ಪ್ರಸಾದದಿಂದಮಲ ಸಮ್ಯಗ್ದರ್ಶನವ ಪಡೆವನು

ಈ ಪ್ರಕಾರ ಭ. ಕುಂದಕುಂದಾಚಾರ್ಯದೇವ ವಿರಚಿತ ಅಷ್ಟಪಾಹುಡದಲ್ಲಿ
ಮೊದಲನೆಯ ದರ್ಶನಪಾಹುಡ ಮತ್ತು ಅದರ ಜಯಚಂದ
ಛಾಬಡಾಕೃತ ದೇಶಭಾಷಾಮಯ ವಚನಿಕೆಯ
ಕನ್ನಡ ಭಾಷಾನುವಾದವು
ಸಮಾಪ್ತವಾಯಿತು.

೨

# ಸೂತ್ರ ಪಾಹುಡ

ವೀರಜಿನರಿಗೆ ನಮಿಪೆ ಗೌತಮ ಗಣಧರರಗೆ ನಂತರ ।
ಪಂಚಮಕಾಲದ ಆದಿಯಲಿ ಸಂದಿಹರು ಸೂತ್ರ ಕರತಾರ ॥

ಈ ಪ್ರಕಾರ ಮಂಗಲಮಾಡಿ ಭ. ಕುಂದಕುಂದಾಚಾರ್ಯದೇವಕೃತ ಪ್ರಾಕೃತ ಗಾಥಾಬಂಧ ಸೂತ್ರ ಪಾಹುಡದ ದೇಶಭಾಷಾಮಯವಾದ ವಚನಿಕೆಯನ್ನು ಬರೆಯುತ್ತೇವೆ.

ಪ್ರಾರಂಭದಲ್ಲಿಯೇ ಭ. ಕುಂದಕುಂದಾಚಾರ್ಯದೇವರು ಸೂತ್ರದ ಮಹಿಮೆಯನ್ನೊಳಗೊಂಡ ಸೂತ್ರದ ಸ್ವರೂಪವನ್ನು ತಿಳಿಸಿಕೊಡುತ್ತಾರೆ, –

ಅರಹಂತಭಾಸಿಯತ್ಥಂ ಗಣಹರದೇವೇಹಿಂ ಗಂಥಿಯಂ ಸಮ್ಮಂ ।
ಸುತ್ತತ್ಥಮಗ್ಗಣತ್ಥಂ ಸವಣಾ ಸಾಹಂತಿ ಪರಮತ್ಥಂ ॥೧॥

ಅರ್ಹದ್ಭಾಷಿತಾರ್ಥಂ ಗಣಧರದೇವೈಃ ಗ್ರಥಿತಂ ಸಮ್ಯಕ್ ।
ಸೂತ್ರಾರ್ಥಮಾರ್ಗಣಾರ್ಥಂ ಶ್ರಮಣಾಃ ಸಾಧಯಂತಿ ಪರಮಾರ್ಥಮ್ ॥೧॥

ಅರ್ಥ ಃ– ಆ ಗಣಧರದೇವರು ಸಮ್ಯಕ್ ಪ್ರಕಾರದಿಂದ ಪೂರ್ವಾಪರ ವಿರೋಧವಿಲ್ಲದೆ ರಚಿಸಿದ್ದಾರೆ ಅದು ಸೂತ್ರವಿದೆ. ಸೂತ್ರದ ಯಾವ ಸ್ವಲ್ಪ ಅರ್ಥವಿದೆ ಅದನ್ನು ಮಾರ್ಗಣ ಎಂದರೆ ಅದರಲ್ಲಿ ಶೋಧಿಸುವ ತಿಳಿಯುವ ಪ್ರಯೋಜನವಿದೆ ಮತ್ತು ಇಂಥದೇ ಸೂತ್ರದ ಮುಖಾಂತರ ಶ್ರಮಣರು ಪರಮಾರ್ಥ ಎಂದರೆ ಉತ್ಕೃಷ್ಟ ಅರ್ಥ ಪ್ರಯೋಜನವಾದ ಆ ಅವಿನಾಶಿ ಮೋಕ್ಷವನ್ನು ಸಾಧಿಸುತ್ತಾರೆ. ಇಲ್ಲಿ ಗಾಥೆಯಲ್ಲಿ 'ಸೂತ್ರ'ವೆಂಬ ವಿಶೇಷ್ಯ ಪದವನ್ನು ಹೇಳಿರದಿದ್ದರೂ ಕೂಡ ವಿಶೇಷಣಗಳ ಸಾಮರ್ಥ್ಯದಿಂದ ತೆಗೆದುಕೊಳ್ಳಲಾಗಿದೆ.

ಭಾವಾರ್ಥ ಃ– ಯಾವುದು ಅರಹಂತ ಸರ್ವಜ್ಞರಿಂದ ಹೇಳಿದುದಿದೆ ಹಾಗೂ ಗಣಧರದೇವರು ಅಕ್ಷರ ಪದವಾಕ್ಯಮಯವಾಗಿ ರಚಿಸಿದ್ದಾರೆ ಮತ್ತು ಸೂತ್ರದ ಅರ್ಥವನ್ನು ತಿಳಿಯುವುದರದೇ ಯಾವುದರಲ್ಲಿ ಅರ್ಥ– ಪ್ರಯೋಜನವಿದೆ ಅಂಥ ಸೂತ್ರದಿಂದ ಮುನಿಗಳು ಆ ಪರಮಾರ್ಥವಾದ ಮೋಕ್ಷವನ್ನು ಸಾಧಿಸುತ್ತಾರೆ. ಇತರ ಯಾವ

---

ಅರಹಂತ ಭಾಷಿತಾರ್ಥಮಯ ಗಣಧರದೇವ ಸುವಿರಚಿತಸಮ್ಯಕ್ಕಿದೆ ।
ಪರಮಾರ್ಥವನು ಸಾಧಿಪರಾಸೂತ್ರಾರ್ಥದ ಪರಿಶೀಲನದಿ ಶ್ರಮಣರು ॥೧॥

ಅಕ್ಷಪಾದ, ಜೈಮಿನಿ, ಕಪಿಲ, ಸುಗತ ಮೊದಲಾದ ಛದ್ಮಸ್ಥರುಗಳಿಂದ ರಚಿಸಲ್ಪಟ್ಟ ಕಲ್ಪಿತ ಸೂತ್ರಗಳಿವೆ ಅವುಗಳಿಂದ ಪರಮಾರ್ಥದ ಸಿದ್ಧಿಯಾಗುವುದಿಲ್ಲ, ಈ ಪ್ರಕಾರದ ಆಶಯವನ್ನು ತಿಳಿಯಬೇಕು. ॥೧॥

ಈ ಪ್ರಕಾರ ಆ ಸೂತ್ರದ ಅರ್ಥವು ಆಚಾರ್ಯರುಗಳ ಪರಂಪರೆಯಿಂದ ವರ್ತಿಸುತ್ತಿದೆ, ಅದನ್ನು ತಿಳಿದುಕೊಂಡು ಮೋಕ್ಷಮಾರ್ಗವನ್ನು ಸಾಧಿಸುವವರು ಭವ್ಯರಿದ್ದಾರೆಂದು ಈಗ ಹೇಳುತ್ತಾರೆ,–

**ಸುತ್ತಮ್ಮಿ ಜಂ ಸುದಿಟ್ಠಂ ಆಇರಿಯಪರಂಪೂರೇಣ ಮಗ್ಗೇಣ ।**
**ಣಾಊಣ ದುವಿಹ ಸುತ್ತಂ ವಟ್ಟದಿ ಸಿವಮಗ್ಗ ಜೋ ಭವ್ವೋ ॥೨॥**

**ಸೂತ್ರೇ ಯತ್ ಸುದೃಷ್ಟಂ ಆಚಾರ್ಯಪರಂಪರೇಣ ಮಾರ್ಗೇಣ ।**
**ಜ್ಞಾತ್ವಾ ದ್ವಿವಿಧಂ ಸೂತ್ರಂ ವರ್ತತೇ ಶಿವಮಾರ್ಗೇ ಯಃ ಭವ್ಯಃ ॥೨॥**

ಅರ್ಥ ಃ– ಸರ್ವಜ್ಞರು ಹೇಳಿದ ಸೂತ್ರದಲ್ಲಿ ಯಾವುದನ್ನು ಒಳ್ಳೆಯ ಪ್ರಕಾರದಿಂದ ಹೇಳಿದೆ ಅದನ್ನು ಆಚಾರ್ಯರುಗಳ ಪರಂಪರಾರೂಪವಾದ ಮಾರ್ಗದಿಂದ ಶಬ್ದಮಯ ಮತ್ತು ಅರ್ಥಮಯವೆಂಬ ಎರಡು ಪ್ರಕಾರದ ಸೂತ್ರಗಳನ್ನು ತಿಳಿದುಕೊಂಡು ಮೋಕ್ಷಮಾರ್ಗದಲ್ಲಿ ಪ್ರವರ್ತಿಸುವವನು ಭವ್ಯಜೀವನಿದ್ದಾನೆ, ಮೋಕ್ಷ ಪಡೆದುಕೊಳ್ಳುವಲ್ಲಿ ಯೋಗ್ಯನಿದ್ದಾನೆ.

ಭಾವಾರ್ಥ ಃ– ಅರಹಂತ ದೇವರಿಂದ ಭಾಷಿತ ಮತ್ತು ಗಣಧರದೇವರಿಂದ ರಚಿಸಿದ ಸೂತ್ರಗಳಂತೂ ದ್ವಾದಶಾಂಗರೂಪವಿದ್ದು ಅವಂತೂ ಈ ಕಾಲದಲ್ಲಿ ಕಾಣಬರುವುದಿಲ್ಲವೆಂದಮೇಲೆ ಪರಮಾರ್ಥರೂಪವಾದ ಮೋಕ್ಷ ಮಾರ್ಗವನ್ನು ಹೇಗೆ ಸಾಧಿಸಿಕೊಳ್ಳುವುದೆಂಬ ಪ್ರಶ್ನೆಯು ಇಲ್ಲಿ ಉಪಸ್ಥಿತವಾಗುತ್ತದೆ. ಇದರ ಉತ್ತರ ರೂಪವಾಗಿ ಈ ಗಾಥೆಯಿದೆ – ಅರಹಂತ ಭಾಷಿತ ಗಣಧರರಚಿತ ಸೂತ್ರದಲ್ಲಿ ಯಾವ ಉಪದೇಶವಿದೆ ಅದನ್ನು ಆಚಾರ್ಯರುಗಳ ಪರಂಪರೆಯಿಂದ ತಿಳಿಯುತ್ತಾರೆ, ಅದನ್ನು ಶಬ್ದ ಮತ್ತು ಅರ್ಥದ ಮುಖಾಂತರ ತಿಳಿದುಕೊಂಡು ಯಾವನು ಮೋಕ್ಷಮಾರ್ಗವನ್ನು ಸಾಧಿಸುತ್ತಾನೆ ಅವನು ಮೋಕ್ಷವಾಗಲು ಯೋಗ್ಯನಾದ ಭವ್ಯನಿದ್ದಾನೆ ಇಲ್ಲಿ ಪುನಃ ಆಚಾರ್ಯರುಗಳ ಪರಂಪರೆಯನ್ನು ಕೇಳುವುದರಿಂದ ಅವರಿಗೆ ಉತ್ತರವಾಗಿ ಅನ್ಯ ಗ್ರಂಥಗಳಲ್ಲಿ ಹೇಳಿರುವ ಆಚಾರ್ಯರುಗಳ ಪರಂಪರೆಯನ್ನು ಈ ಕೆಳಗೆ ಕೊಡಲಾಗುವುದು.

ಭ. ವರ್ಧಮಾನ ತೀರ್ಥಂಕರ ಸರ್ವಜ್ಞದೇವರ ನಂತರ ಗೌತಮ, ಸುಧರ್ಮ, ಜಂಬೂಸ್ವಾಮಿಯೆಂದು ಮೂವರು ಕೇವಲಜ್ಞಾನಿಗಳಾದರು. ಇವರ ನಂತರ, ೧) ವಿಷ್ಣು, ೨) ನಂದಿಮಿತ್ರ, ೩) ಅಪರಾಜಿತ, ೪) ಗೋವರ್ಧನ ೫) ಭದ್ರಬಾಹು ಎಂದು ಐವರು ಶ್ರುತಕೇವಲಿಗಳಾದರು, ಇವರಿಗೆ ದ್ವಾದಶಾಂಗ ಸೂತ್ರದ ಜ್ಞಾನವಿತ್ತು. ಇವರ ನಂತರ ೧) ವಿಶಾಖ, ೨)ಪ್ರೌಷ್ಠಿಲ, ೩) ಕ್ಷತ್ರಿಯ, ೪) ಜಯಸೇನ, ೫) ನಾಗಸೇನ, ೬)ಸಿದ್ಧಾರ್ಥ, ೭) ಧೃತಿಷೇಣ, ೮) ವಿಜಯ, ೯) ಬುದ್ಧಿಲ, ೧೦) ಗಂಗದೇವ, ೧೧) ಧರ್ಮಸೇನರೆಂದು ದಶಪೂರ್ವಧಾರಿಗಳು ಹನ್ನೊಂದು ಜನರಾದರು. ಇವರ ನಂತರ ೧) ನಕ್ಷತ್ರ, ೨) ಜಯಪಾಲ, ೩) ಪಾಂಡು, ೪) ಧ್ರುವಸೇನ, ೫) ಕಂಸರೆಂಬ ಐವರು ಹನ್ನೊಂದು ಅಂಗಗಳ ಧಾರಕರಾದರು. ಇವರ ನಂತರ ೧) ಸುಭದ್ರ, ೨) ಯಶೋಭದ್ರ, ೩) ಭದ್ರಬಾಹು, ೪)

---

**ಸೂತ್ರದಲಿ ಸುದರ್ಶಿಸಿದಂತೆ ಆಚಾರ್ಯಪರಂಪರೆಯ ಮಾರ್ಗದಿಂ ತಿಳಿದು ।**
**ಸೂತ್ರವನೆರಡು ಪ್ರಕಾರದಿಂ ಶಿವಮಾರ್ಗದೊಳ್ವರ್ತಿಪನು ಭವ್ಯನಿಹನು ॥೨॥**

ಲೋಹಾಚಾರ್ಯರೆಂಬ ನಾಲ್ವರು ಒಂದು ಅಂಗದ ಧಾರಕರಾದರು. ಇವರ ನಂತರ ಒಂದು ಅಂಗದ ಪೂರ್ಣ ಜ್ಞಾನಿಗಳ ವ್ಯುಚ್ಛಿತ್ತಿಯಾಯಿತು ಮತ್ತು ಅಂಗದ ಏಕದೇಶ ಅರ್ಥದ ಜ್ಞಾತಾ ಆಚಾರ್ಯರುಗಳಾದರು. ಅವರಲ್ಲಿ ಕೆಲವರ ಹೆಸರುಗಳು ಹೀಗಿವೆ-ಅರ್ಹದ್ಬಲಿ, ಮಾಘನಂದಿ,ಧರಸೇನ, ಪುಷ್ಪದಂತ, ಭೂತಬಲಿ, ಜಿನಚಂದ್ರ, ಕುಂದಕುಂದ, ಉಮಾಸ್ವಾಮಿ, ಸಮಂತಭದ್ರ, ಶಿವಕೋಟಿ, ಶಿವಾಯನ, ಪೂಜ್ಯಪಾದ, ವೀರಸೇನ, ನೇಮಿಚಂದ್ರ ಮೊದಲಾದವರು.

ಇವರ ನಂತರ ಇವರ ಪರಂಪರೆಯಲ್ಲಿ ಆಚಾರ್ಯರಾದರು, ಇವರಿಂದ ಅರ್ಥದ ವ್ಯುಚ್ಛೇದವಾಗಲಿಲ್ಲ, ಹೀಗೆ ದಿಗಂಬರ ಸಂಪ್ರದಾಯದಲ್ಲಿ ಪ್ರರೂಪಣೆಯು ಯಥಾರ್ಥವಿದೆ. ಇತರ ಶ್ವೇತಾಂಬರ ಮೊದಲಾದವರು ವರ್ಧಮಾನ ಸ್ವಾಮಿಯಿಂದ ಪರಂಪರೆಯನ್ನು ಜೋಡಿಸುತ್ತಾರೆ ಅದು ಕಾಲ್ಪನಿಕವಿದೆ. ಏಕೆಂದರೆ ಭದ್ರಬಾಹು ಸ್ವಾಮಿಗಳ ನಂತರ ಕೆಲವರು ಮುನಿ ಅವಸ್ಥೆಯಲ್ಲಿ ಭ್ರಷ್ಟರಾದರು, ಅವರು ಅರ್ಧಫಾಲಕರೆನಿಸಿಕೊಂಡರು. ಇವರ ಸಂಪ್ರದಾಯದಲ್ಲಿ ಶ್ವೇತಾಂಬರರಾದರು, ಇವರಲ್ಲಿ 'ದೇವರ್ಧಿಗಣಿ' ನಾಮದ ಸಾಧುವು ಇವರ ಸಂಪ್ರದಾಯದಲ್ಲಿ ಆದರು, ಇವರು ಸೂತ್ರಗಳನ್ನು ರಚಿಸಿದ್ದು ಇವುಗಳಲ್ಲಿ ಶಿಥಿಲಾಚಾರಕ್ಕೆ ಪುಷ್ಟಿ ಮಾಡುವ ಸಲುವಾಗಿ ಕಾಲ್ಪನಿಕ ಕಥೆ ಹಾಗೂ ಕಾಲ್ಪನಿಕ ಆಚರಣೆಯ ಕಥನ ಮಾಡಿದೆ ಅದು ಪ್ರಮಾಣಭೂತವಿಲ್ಲ. ಪಂಚಮ ಕಾಲದಲ್ಲಿ ಜೈನಾಭಾಸಿಗಳ ಶಿಥಿಲಾಚಾರದ ಅಧಿಕತೆಯಿದೆ ಅದು ಯುಕ್ತವಿದೆ, ಈ ಕಾಲದಲ್ಲಿ ನಿಜವಾದ ಮೋಕ್ಷ ಮಾರ್ಗದ ವಿರಳತೆಯಿರುವುದರಿಂದ ಶಿಥಿಲಾಚಾರಿಗಳಿಗೆ ನಿಜವಾದ ಮೋಕ್ಷಮಾರ್ಗವು ಎಲ್ಲಿಂದ ಇರುವುದೆಂದು ತಿಳಿಯಬೇಕು.

ಈಗ ಇಲ್ಲಿ ಸ್ವಲ್ಪ ದ್ವಾದಶಾಂಗಸೂತ್ರ ಹಾಗೂ ಅಂಗಬಾಹ್ಯಸೂತ್ರದ ವರ್ಣನೆ ಮಾಡಲಾಗುವುದು, ತೀರ್ಥಂಕರರ ಮುಖದಿಂದ ಉತ್ಪನ್ನವಾದ ಸರ್ವ ಭಾಷಾಮಯವಾದ ದಿವ್ಯಧ್ವನಿಯನ್ನು ಕೇಳಿ ನಾಲ್ಕು ಜ್ಞಾನ, ಸಪ್ತಋದ್ಧಿಯ ಧಾರಕರಾದ ಗಣಧರದೇವರು ಅಕ್ಷರ ಪದಮಯವಾದ ಸೂತ್ರಗಳ ರಚನೆ ಮಾಡಿದರು. ಅಂಗ ಮತ್ತು ಅಂಗಬಾಹ್ಯವೆಂದು ಸೂತ್ರಗಳಲ್ಲಿ ಎರಡು ಪ್ರಕಾರಗಳಿವೆ. ಇವುಗಳ ಅಪುನರುಕ್ತ ಅಕ್ಷರಗಳ ಸಂಖ್ಯೆಯು ಇಪ್ಪತ್ತು ಅಂಕ ಪ್ರಮಾಣವಿದೆ. ಈ ಅಂಕವು ಒಂದು ಕಣಿವೆ ತುಂಬ ಪ್ರಮಾಣದಷ್ಟಿದೆ. ಈ ಅಂಕ - ೧೮೪೪೬೭೪೪೦೭೩೭೦೯೫೫೧೬೧೫ ಅಷ್ಟು ಅಕ್ಷರಗಳಿವೆ. ಇವುಗಳ ಪದ ಮಾಡಿದಾಗ ಒಂದು ಮಧ್ಯ ಪದದ ಅಕ್ಷರಗಳು ಹದಿನಾರು ನೂರಾಮೂವತ್ತಾನ್ಲುಕ್ಕು ಕೋಟಿ ಎಂಭತ್ತೂಮ್ರು ಲಕ್ಷ ಏಳು ಸಾವಿರದಾ ಎಂಟನೂರಾ ಎಂಭತ್ತೆಂಟೆಂದು ಹೇಳಿದ್ದಾರೆ. ಇದಕ್ಕೆ ಭಾಗ ಕೊಟ್ಟಮೇಲೆ ಒಂದು ನೂರಾ ಹನ್ನೆರಡು ಕೋಟಿ ಎಂಭತ್ತೂಮ್ರು ಲಕ್ಷ ಐವತ್ತೆಂಟು ಸಾವಿರದಾ ಐದು ಆಗುವವು, ಈ ಪದಗಳು ಹನ್ನೆರಡು ಅಂಗರೂಪ ಸೂತ್ರದ ಪದಗಳಿವೆ ಮತ್ತು ಅವಶೇಷ ಇಪ್ಪತ್ತು ಅಂಕಗಳಲ್ಲಿ ಅಕ್ಷರಗಳುಳಿದವು ಇವು ಅಂಗಬಾಹ್ಯ ಸೂತ್ರಗಳೆಂದು ಕರೆಸಿಕೊಳ್ಳುತ್ತವೆ, ಇವು ಎಂಟುಕೋಟಿ ಒಂದು ಲಕ್ಷ ಎಂಟು ಸಾವಿರದಾ ನೂರೆಪ್ಪತ್ತೈದು ಅಕ್ಷರಗಳಿವೆ. ಈ ಅಕ್ಷರಗಳಲ್ಲಿ ಹದಿನಾಲ್ಕು ಪ್ರಕೀರ್ಣಕರೂಪದ ಸೂತ್ರ ರಚನೆಯಿದೆ.

ಈಗ ಈ ದ್ವಾದಶಾಂಗರೂಪ ಸೂತ್ರ ರಚನೆಯ ಹೆಸರು ಮತ್ತು ಪದಸಂಖ್ಯೆಯನ್ನು ಹೇಳುತ್ತಾರೆ. ಮೊದಲನೆಯ ಅಂಗವು ಆಚಾರಾಂಗವಿದೆ, ಇದರಲ್ಲಿ ಮುನೀಶ್ವರರುಗಳ ಆಚಾರದ ನಿರೂಪಣೆಯಿದೆ, ಇದರ ಪದಗಳು ಹದಿನೆಂಟು ಸಾವಿರವಿವೆ. ಎರಡನೆಯದು ಸೂತ್ರಕೃತಾಂಗವಿದೆ, ಇದರಲ್ಲಿ ಜ್ಞಾನದ ವಿಷಯ ಮೊದಲಾದ ಅಥವಾ ಧರ್ಮ ಕ್ರಿಯೆಯಲ್ಲಿ ಸ್ವಮತ-ಪರಮತದ ಕ್ರಿಯಾ ವಿಶೇಷಗಳ ನಿರೂಪಣೆಯಿದೆ. ಇದರ ಪದಗಳು ಮೂವತ್ತಾರು ಸಾವಿರ ಇವೆ. ಮೂರನೆಯದು ಸ್ಥಾನಾಂಗವಿದೆ. ಇದರಲ್ಲಿ ಪದಾರ್ಥಗಳ ಒಂದು ಮೊದಲಾದ ಸ್ಥಾನಗಳ ನಿರೂಪಣೆಯಿದೆ, ಹೇಗೆಂದರೆ ಜೀವವು ಸಾಮಾನ್ಯರೂಪದಿಂದ ಒಂದು ಪ್ರಕಾರ ವಿಶೇಷ ರೂಪದಿಂದ ಎರಡು ಪ್ರಕಾರ, ಮೂರು ಪ್ರಕಾರ ಇತ್ಯಾದಿ ಹೀಗೆ ಸ್ಥಾನಗಳನ್ನು ಹೇಳಿದ್ದಾರೆ, ಇದರ ಪದಗಳು ನಲವತ್ತೆರಡು ಸಾವಿರ ಇವೆ. ನಾಲ್ಕನೆಯದು ಸಮವಾಯಾಂಗವಿದೆ, ಇದರಲ್ಲಿ

ಜೀವ ಮೊದಲಾದ ಆರು ದ್ರವ್ಯಗಳ ವರ್ಣನೆಯು ದ್ರವ್ಯ, ಕ್ಷೇತ್ರ, ಕಾಲ ಮೊದಲಾದವುಗಳಿಂದ ಇದೆ, ಇದರ ಪದಗಳು ಒಂದು ಲಕ್ಷ ಅರವತ್ತಾ ನ್ಲುಕ್ಕು ಸಾವಿರ ಇವೆ.

ಐದನೆಯದು ವ್ಯಾಖ್ಯಾಪ್ರಜ್ಞಪ್ತಿ ಅಂಗವಿದೆ, ಇದರಲ್ಲಿ ಗಣಧರದೇವರು ತೀರ್ಥಂಕರರ ಸಾನಿಧ್ಯದಲ್ಲಿ ಜೀವದ ಅಸ್ತಿ ನಾಸ್ತಿ ಮೊದಲಾದ ಅರವತ್ತು ಸಾವಿರ ಪ್ರಶ್ನೆ ಮಾಡಿದ್ದರು ಅವುಗಳ ವರ್ಣನೆಯಿದೆ, ಇದರ ಪದಗಳು ಎರಡು ಲಕ್ಷ ಇಪ್ಪತ್ತೆಂಟು ಸಾವಿರ ಇವೆ. ಆರನೆಯದು ಜ್ಞಾತೃಧರ್ಮಕಥಾನಾಮದ ಅಂಗವಿದೆ, ಇದರಲ್ಲಿ ತೀರ್ಥಂಕರರುಗಳ ಧರ್ಮದ ಕಥೆ, ಜೀವ ಮೊದಲಾದ ಪದಾರ್ಥಗಳ ಸ್ವಭಾವದ ವರ್ಣನೆ ಹಾಗೂ ಗಣಧರರ ಪ್ರಶ್ನೆಗಳಿಗೆ ಉತ್ತರದ ವರ್ಣನೆಯಿದೆ, ಇದರ ಪದಗಳು ಐದು ಲಕ್ಷ ಐವತ್ತಾರು ಸಾವಿರ ಇವೆ. ಏಳನೆಯದು ಉಪಾಸಕಾಧ್ಯಯನ ನಾಮದ ಅಂಗವಿದೆ, ಇದರಲ್ಲಿ ಹನ್ನೊಂದು ನೆಲೆ (ಪ್ರತಿಮೆ) ಮೊದಲಾಗಿ ಶ್ರಾವಕರ ಆಚಾರದ ವರ್ಣನೆಯಿದೆ, ಇದರ ಪದಗಳು ಹನ್ನೊಂದು ಲಕ್ಷ ಎಪ್ಪತ್ತು ಸಾವಿರ ಇವೆ, ಎಂಟನೆಯದು ಅಂತಕೃತದಶಾಂಗನಾಮದ ಅಂಗವಿದೆ, ಇದರಲ್ಲಿ ಒಬ್ಬೊಬ್ಬ ತೀರ್ಥಂಕರರ ಕಾಲದಲ್ಲಿ ಹತ್ತು ಹತ್ತು ಅಂತಕೃತ ಕೇವಲಿಗಳಾಗುವರು ಅವರ ವರ್ಣನೆಯಿದೆ, ಇದರ ಪದಗಳು ಇಪ್ಪತ್ತ್ಮೂರು ಲಕ್ಷ ಇಪ್ಪತ್ತೆಂಟು ಸಾವಿರ ಇವೆ.

ಒಂಭತ್ತನೆಯದು ಅನುತ್ತರೋಪಪಾದಕ ನಾಮದ ಅಂಗವಿದೆ, ಇದರಲ್ಲಿ ಒಬ್ಬೊಬ್ಬ ತೀರ್ಥಂಕರರ ಕಾಲದಲ್ಲಿ ಹತ್ತು ಹತ್ತು ಮಹಾಮುನಿಗಳು ಘೋರ ಉಪಸರ್ಗ ಸಹಿಸಿ ಅನುತ್ತರ ವಿಮಾನಗಳಲ್ಲಿ ಉತ್ಪನ್ನರಾಗುವರು ಅವರ ವರ್ಣನೆಯಿದೆ, ಇದರ ಪದಗಳು ತೊಂಭತ್ತೆರಡು ಲಕ್ಷ ನಲವತ್ತಾ ನ್ಲುಕ್ಕು ಸಾವಿರ ಇವೆ. ಹತ್ತನೆಯದು ಪ್ರಶ್ನವ್ಯಾಕರಣ ನಾಮದ ಅಂಗವಿದೆ, ಇದರಲ್ಲಿ ಭೂತ-ಭವಿಷ್ಯಕಾಲ ಸಂಬಂಧದ ಶುಭಾಶುಭದ ಪ್ರಶ್ನೆ ಯಾರಾದರೂ ಮಾಡಿದರೆ ಅದರ ಯಥಾರ್ಥ ಉತ್ತರ ಹೇಳುವುದರ ಉಪಾಯದ ವರ್ಣನೆಯಿದೆ, ಅದರಂತೆ ಆಕ್ಷೇಪಣೀ, ವಿಕ್ಷೇಪಣೀ, ಸಂವೇದನೀ, ನಿರ್ವೇದನಿಯೆಂಬ ಈ ನಾಲ್ಕು ಕಥೆಗಳದ್ದೂ ಈ ಅಂಗದಲ್ಲಿ ವರ್ಣನೆಯಿದೆ, ಇದರ ಪದಗಳು ತೊಂಭತ್ತ್ಮೂರು ಲಕ್ಷ ಹದಿನಾರು ಸಾವಿರ ಇವೆ. ಹನ್ನೊಂದನೆಯದು ವಿಪಾಕಸೂತ್ರ ನಾಮದ ಅಂಗವಿದೆ, ಇದರಲ್ಲಿ ಕರ್ಮದ ಉದಯದ ತೀವ್ರ-ಮಂದ ಅನುಭಾಗದ ದ್ರವ್ಯ, ಕ್ಷೇತ್ರ, ಕಾಲ, ಭಾವದ ಅಪೇಕ್ಷೆ ತೆಗೆದುಕೊಂಡ ವರ್ಣನೆಯಿದೆ, ಇದರ ಪದಗಳು ಒಂದು ಕೋಟಿ ಎಂಭತ್ತಾ ನ್ಲುಕ್ಕು ಲಕ್ಷ ಇವೆ. ಈ ಪ್ರಕಾರ ಹನ್ನೊಂದು ಅಂಗಗಳಿವೆ. ಇವುಗಳ ಪದಗಳು ಒಂದು ಕೋಟಿ ಎಂಭತ್ತಾ ನ್ಲುಕ್ಕು ಲಕ್ಷ ಇವೆ. ಈ ಪ್ರಕಾರ ಹನ್ನೊಂದು ಅಂಗಗಳಿವೆ. ಇವುಗಳ ಪದಗಳ ಸಂಖ್ಯೆಯನ್ನು ಒಂದುಗೂಡಿಸಿದ ಮೇಲೆ ನಾಲ್ಕು ಕೋಟಿ ಹದಿನೈದು ಲಕ್ಷ ಎರಡು ಸಾವಿರ ಪದಗಳಾಗುತ್ತವೆ.

ಹನ್ನೆರಡನೆಯದು ದೃಷ್ಟಿವಾದ ನಾಮದ ಅಂಗವಿದೆ, ಇದರಲ್ಲಿ ಮಿಥ್ಯಾದರ್ಶನ ಸಂಬಂಧದ ಮುನ್ನೂರಾ ಅರವತ್ತ್ಮೂರು ಕುದೇವಗಳ ವರ್ಣನೆಯಿದೆ, ಇದರ ಪದಗಳು ಒಂದುನೂರಾ ಎಂಟುಕೋಟಿ ಅರವತ್ತೆಂಟು ಲಕ್ಷ ಐವತ್ತಾರು ಸಾವಿರ ಐದು ಪದಗಳಿವೆ. ಈ ಹನ್ನೆರಡನೆಯ ಅಂಗದಲ್ಲಿ ೧) ಪರಿಕರ್ಮ, ೨) ಸೂತ್ರ, ೩) ಪ್ರಥಮಾನುಯೋಗ, ೪) ಪೂರ್ವಗತ, ೫) ಚೂಲಿಕೆಯೆಂದು ಐದು ಅಧಿಕಾರಗಳಿವೆ. ಪರಿಕರ್ಮದಲ್ಲಿ ಗಣಿತದ ಕರಣಸೂತ್ರಗಳಿವೆ; ಇದರಲ್ಲಿ ಐದು ಭೇದಗಳಿದ್ದು ಮೊದಲನೆಯದು ಚಂದ್ರಪ್ರಜ್ಞಪ್ತಿಯಿದೆ, ಇದರಲ್ಲಿ ಚಂದ್ರನ ಗಮನಾದಿಯ ಪರಿವಾರ ವೃದ್ಧಿ-ಹಾನಿ-ಗ್ರಹ ಮೊದಲಾದವುಗಳ ವರ್ಣನೆಯಿದೆ, ಇದರ ಪದಗಳು ಮೂವತ್ತಾರು ಲಕ್ಷ ಐದು ಸಾವಿರ ಇವೆ. ಎರಡನೆಯದು ಸೂರ್ಯಪ್ರಜ್ಞಪ್ತಿಯಿದೆ, ಇದರಲ್ಲಿ ಸೂರ್ಯನ ಋದ್ಧಿ, ಪರಿವಾರ, ಗಮನ ಮೊದಲಾದವುಗಳ ವರ್ಣನೆಯಿದೆ, ಇದರ ಪದಗಳು ಐದು ಲಕ್ಷ ಮೂರು ಸಾವಿರ ಇವೆ. ಮೂರನೆಯದು ಜಂಬೂದ್ವೀಪ ಪ್ರಜ್ಞಪ್ತಿಯಿದೆ, ಇದರಲ್ಲಿ ಜಂಬೂದ್ವೀಪ ಸಂಬಂಧದ ಮೇರುಗಿರಿ ಕ್ಷೇತ್ರ ಕುಲಾಚಲ ಮೊದಲಾದವುಗಳ ವರ್ಣನೆಯಿದೆ, ಇದರ ಪದಗಳು

ಮೂರು ಲಕ್ಷ ಇಪ್ಪತ್ತೈದುಸಾವಿರ ಇವೆ. ನಾಲ್ಕನೆಯದು ದ್ವೀಪಸಾಗರ ಪ್ರಜ್ಞಪ್ತಿಯಿದೆ, ಇದರಲ್ಲಿ ದ್ವೀಪಸಾಗರದ ಸ್ವರೂಪ ಹಾಗೂ ಅಲ್ಲಿರುವ ಜ್ಯೋತಿಷ, ವ್ಯಂತರ, ಭವನವಾಸಿ ದೇವಗಳ ಆವಾಸ ಹಾಗೂ ಅಲ್ಲಿರುವ ಜಿನಮಂದಿರಗಳ ವರ್ಣನೆಯಿದೆ, ಇದರ ಪದಗಳು ಐವತ್ತೆರಡು ಲಕ್ಷ ಮೂವತ್ತಾರು ಸಾವಿರ ಇವೆ. ಐದನೆಯದು ವ್ಯಾಖ್ಯಾಪ್ರಜ್ಞಪ್ತಿಯಿದೆ, ಇದರಲ್ಲಿ ಜೀವ-ಅಜೀವ ಪದಾರ್ಥಗಳ ಪ್ರಮಾಣದ ವರ್ಣನೆಯಿದೆ, ಇದರ ಪದಗಳು ಎಂಭತ್ತಾ ಲ್ಕು ಲಕ್ಷ ಮೂವತ್ತಾರು ಸಾವಿರ ಇವೆ. ಈ ಪ್ರಕಾರ ಪರಿಕರ್ಮದ ಐದು ಭೇದಗಳ ಪದಗಳನ್ನು ಒಂದುಗೂಡಿಸಿದಮೇಲೆ ಒಂದು ಕೋಟಿ ಎಂಭತ್ತೊಂದು ಲಕ್ಷ ಐದು ಸಾವಿರ ಆಗುತ್ತವೆ.

ಹನ್ನೆರಡನೆಯ ಅಂಗದ ಎರಡನೆಯ ಭೇದವು ಸೂತ್ರನಾಮದ್ದಿದೆ, ಇದರಲ್ಲಿ ಮಿಥ್ಯಾದರ್ಶನ ಸಂಬಂಧದ ಮುನ್ನೂರಾ ಅರವತ್ತ್ಮೂರು ಕುದೇವಗಳ ಪೂರ್ವಪಕ್ಷ ಸ್ವೀಕರಿಸಿ ಅವರನ್ನು ಜೀವ ಪದಾರ್ಥದ ಮೇಲೆ ತಗಲಿಸುವ ಮೊದಲಾದವುಗಳ ವರ್ಣನೆಯಿದೆ, ಇದರ ಪದಗಳು ಎಂಭತ್ತೆಂಟು ಲಕ್ಷ ಇವೆ. ಹನ್ನೆರಡನೆಯ ಅಂಗದ ಮೂರನೆಯ ಭೇದವು ಪ್ರಥಮಾನುಯೋಗವಿದೆ, ಇದರಲ್ಲಿ ಮೊದಲು ಜೀವನಿಗೆ ಉಪದೇಶ ಯೋಗ್ಯವಾದ ತೀರ್ಥಂಕರ ಮೊದಲಾದ ಅರವತ್ತ್ಮೂರು ಶಲಾಕಾ ಪುರುಷರ ವರ್ಣನೆಯಿದೆ, ಇದರ ಪದಗಳು ಐದು ಸಾವಿರ ಇವೆ. ಹನ್ನೆರಡನೆಯ ಅಂಗದ ನಾಲ್ಕನೆಯ ಭೇದವು ಪೂರ್ವಗತವಿದೆ, ಇದರಲ್ಲಿ ಹದಿನಾಲ್ಕು ಭೇದಗಳಿವೆ, ಮೊದಲನೆಯದು ಉತ್ಪಾದ ನಾಮದ್ದಿದೆ, ಇದರಲ್ಲಿ ಜೀವ ಮೊದಲಾದ  ವಸ್ತುಗಳ ಉತ್ಪಾದ-ವ್ಯಯ-ಧ್ರೌವ್ಯ ಮೊದಲಾದ ಅನೇಕ ಧರ್ಮಗಳ ಅಪೇಕ್ಷೆಯಿಂದ ಭೇದವರ್ಣನೆಯಿದೆ, ಇದರ ಪದಗಳು ಒಂದು ಕೋಟಿ ಇವೆ. ಎರಡನೆಯದು ಅಗ್ರಾಯಣೀನಾಮದ ಪೂರ್ವವಿದೆ, ಇದರಲ್ಲಿ ಏಳುನೂರು ಸುನಯ-ದುರ್ನಯದ ಮತ್ತು ಷಟ್‌ದ್ರವ್ಯ, ಸಪ್ತತತ್ತ್ವ, ನವಪದಾರ್ಥಗಳ ವರ್ಣನೆಯಿದೆ, ಇದರ ಪದಗಳು ತೊಂಭತ್ತಾರು ಲಕ್ಷ ಇವೆ.

ಮೂರನೆಯದು ವೀರ್ಯಾನುವಾದನಾಮದ ಪೂರ್ವವಿದೆ, ಇದರಲ್ಲಿ ಆರು ದ್ರವ್ಯಗಳ ಶಕ್ತಿರೂಪವೀರ್ಯದ ವರ್ಣನೆಯಿದೆ, ಇದರ ಪದಗಳು ಎಪ್ಪತ್ತು ಲಕ್ಷ ಇವೆ. ನಾಲ್ಕನೆಯದು ಅಸ್ತಿನಾಸ್ತಿಪ್ರವಾದ ನಾಮದ ಪೂರ್ವವಿದೆ, ಇದರಲ್ಲಿ ಜೀವ ಮೊದಲಾದ ವಸ್ತುವಿನ ಸ್ವರೂಪವನ್ನು ದ್ರವ್ಯ, ಕ್ಷೇತ್ರ,ಕಾಲ, ಭಾವದ ಅಪೇಕ್ಷೆಯಿಂದ ಅಸ್ತಿ, ಪರರೂಪ ದ್ರವ್ಯ, ಕ್ಷೇತ್ರ, ಕಾಲ, ಭಾವದ ಅಪೇಕ್ಷೆಯಿಂದ ನಾಸ್ತಿ ಮೊದಲಾದ ಅನೇಕ ಧರ್ಮಗಳಲ್ಲಿ ವಿಧಿ-ನಿಷೇಧ ಮಾಡಿ ಸಪ್ತಭಂಗದ ಮುಖಾಂತರ ಕಥಂಚಿತ್ ವಿರೋಧ ನಿವಾರಿಸುವ ರೂಪದಿಂದ ಮುಖ್ಯ ಗೌಣಮಾಡಿ ವರ್ಣನೆಯಿದೆ, ಇದರ ಪದಗಳು ಅರವತ್ತು ಲಕ್ಷ ಇವೆ. ಐದನೆಯದು ಜ್ಞಾನಪ್ರವಾದ ನಾಮದ ಪೂರ್ವವಿದೆ, ಇದರಲ್ಲಿ ಜ್ಞಾನದ ಭೇದಗಳ ಸ್ವರೂಪ, ಸಂಖ್ಯೆ, ವಿಷಯ, ಫಲ ಮೊದಲಾದವುಗಳ ವರ್ಣನೆಯಿದೆ, ಇದರ ಪದಗಳು ಒಂದು ಕಡಿಮೆ ಒಂದು ಕೋಟಿ ಇವೆ. ಆರನೆಯದು ಸತ್ಯಪ್ರವಾದ ನಾಮದ ಪೂರ್ವವಿದೆ, ಇದರಲ್ಲಿ ಸತ್ಯ, ಅಸತ್ಯ ಮೊದಲಾದ ವಚನಗಳ ಅನೇಕ ಪ್ರಕಾರದ ಪ್ರವೃತ್ತಿಯ ವರ್ಣನೆಯಿದೆ, ಇದರ ಪದಗಳು ಒಂದು ಕೋಟಿ ಆರು ಇವೆ. ಏಳನೆಯದು ಆತ್ಮಪ್ರವಾದ ನಾಮದ ಪೂರ್ವವಿದೆ, ಇದರಲ್ಲಿ ಆತ್ಮ ಪದಾರ್ಥದ ಕರ್ತೃ, ಭೋಕ್ತೃ ಮೊದಲಾದ ಅನೇಕ ಧರ್ಮಗಳದ್ದು ನಿಶ್ಚಯ-ವ್ಯವಹಾರ ನಯದ ಅಪೇಕ್ಷೆಯಿಂದ ವರ್ಣನೆಯಿದೆ, ಇದರ ಪದಗಳು ಇಪ್ಪತ್ತಾರು ಕೋಟಿ ಇವೆ.

ಎಂಟನೆಯದು ಕರ್ಮಪ್ರವಾದನಾಮದ ಪೂರ್ವವಿದೆ, ಇದರಲ್ಲಿ ಜ್ಞಾನಾವರಣ ಮೊದಲಾದ ಎಂಟು ಕರ್ಮಗಳ ಬಂಧ ಸತ್ವ, ಉದಯ, ಉದೀರಣಾ ಮೊದಲಾದವುಗಳ ಮತ್ತು ಕ್ರಿಯಾರೂಪ ಕರ್ಮಗಳ ವರ್ಣನೆಯಿದೆ ಇದರ ಪದಗಳು ಒಂದು ಕೋಟಿ ಎಂಭತ್ತುಲಕ್ಷ ಇವೆ. ಒಂಭತ್ತನೆಯದು ಪ್ರತ್ಯಾಖ್ಯಾನನಾಮದ ಪೂರ್ವವಿದೆ, ಇದರಲ್ಲಿ ಅನೇಕ ಪ್ರಕಾರದಿಂದ ಪಾಪದ ತ್ಯಾಗದ ವರ್ಣನೆಯಿದೆ, ಇದರ ಪದಗಳು ಎಂಭತ್ತಾ ಲ್ಕು ಲಕ್ಷ ಇವೆ. ಹತ್ತನೆಯದು ವಿದ್ಯಾನುವಾದ

ನಾಮದ ಪೂರ್ವವಿದೆ. ಇದರಲ್ಲಿ ಏಳುನೂರು ಕ್ಷುದ್ರವಿದ್ಯೆ ಮತ್ತು ಐನೂರು ಮಹಾವಿದ್ಯೆಗಳ ಸ್ವರೂಪ, ಸಾಧನ, ಮಂತ್ರಾದಿಗಳ ಮತ್ತು ಸಿದ್ಧವಾದ ಇವುಗಳ ಫಲದ ವರ್ಣನೆಯಿದೆ ಅದರಂತೆ ಅಷ್ಟಾಂಗನಿಮಿತ್ತಜ್ಞಾನದ ವರ್ಣನೆಯಿದೆ, ಇದರ ಪದಗಳು ಒಂದು ಕೋಟಿ ಹತ್ತು ಲಕ್ಷ ಇವೆ. ಹನ್ನೊಂದನೆಯದು ಕಲ್ಯಾಣವಾದ ನಾಮದ ಪೂರ್ವವಿದೆ, ಇದರಲ್ಲಿ ತೀರ್ಥಂಕರ, ಚಕ್ರವರ್ತಿ ಮೊದಲಾದವರ ಗರ್ಭ ಮೊದಲಾದ ಕಲ್ಯಾಣಿಕದ ಉತ್ಸವ ಹಾಗೂ ಅದರ ಕಾರಣ ಷೋಡಶಭಾವನಾದಿಗಳ ತಪಶ್ಚರಣಾದಿಗಳು ಮತ್ತು ಚಂದ್ರ-ಸೂರ್ಯಾದಿಗಳ ಗಮನ ವಿಶೇಷ ಮೊದಲಾದವುಗಳ ವರ್ಣನೆಯಿದೆ, ಇದರ ಪದಗಳು ಇಪ್ಪತ್ತಾರು ಕೋಟಿ ಇವೆ.

ಹನ್ನೆರಡನೆಯದು ಪ್ರಾಣವಾದ ನಾಮದ ಪೂರ್ವವಿದೆ, ಇದರಲ್ಲಿ ಎಂಟು ಪ್ರಕಾರದ ವೈದ್ಯಕ ಹಾಗೂ ಭೂತಾದಿಗಳ ವ್ಯಾಧಿಯನ್ನು ದೂರಮಾಡುವ ಮಂತ್ರಾದಿಗಳು ಮತ್ತು ವಿಷದೂರ ಮಾಡುವ ಉಪಾಯ ಹಾಗೂ ಸ್ವರೋದಯ ಮೊದಲಾದವುಗಳ ವರ್ಣನೆಯಿದೆ, ಇದರ ಪದಗಳು ಹದಿಮೂರುಕೋಟಿ ಇವೆ. ಹದಿಮೂರನೆಯದು ಕ್ರಿಯಾವಿಶಾಲನಾಮದ ಪೂರ್ವವಿದೆ, ಇದರಲ್ಲಿ ಸಂಗೀತಶಾಸ್ತ್ರ, ಛಂದಸ್ಸು, ಅಲಂಕಾರಾದಿಗಳ ಮತ್ತು ಅರವತ್ನಾಲ್ಕು ಕಲೆ, ಗರ್ಭಾಧಾನಾದಿ ಎಂಭತ್ನಾಲ್ಕು ಕ್ರಿಯೆ, ಸಮ್ಯಗ್ದರ್ಶನ ಮೊದಲಾದ ನೂರೆಂಟು ಕ್ರಿಯೆ, ದೇವವಂದನೆ ಮೊದಲಾದ ಇಪ್ಪತ್ತೈದು ಕ್ರಿಯೆ, ನಿತ್ಯ ನೈಮಿತ್ತಿಕ ಕ್ರಿಯೆ ಇತ್ಯಾದಿಗಳ ವರ್ಣನೆಯಿದೆ, ಇದರ ಪದಗಳು ಒಂಭತ್ತು ಕೋಟಿ ಇವೆ. ಹದಿನಾಲ್ಕನೆಯದು ತ್ರಿಲೋಕಬಿಂದುಸಾರ ನಾಮದ ಪೂರ್ವವಿದೆ, ಇದರಲ್ಲಿ ಮೂರುಲೋಕದ ಸ್ವರೂಪ ಮತ್ತು ಬೀಜಗಣಿತದ ಸ್ವರೂಪ ಹಾಗೂ ಮೋಕ್ಷದ ಸ್ವರೂಪ ಮತ್ತು ಮೋಕ್ಷದ ಕಾರಣಭೂತಕ್ರಿಯೆಯ ಸ್ವರೂಪ ಇತ್ಯಾದಿಗಳ ವರ್ಣನೆಯಿದೆ, ಇದರ ಪದಗಳು ಹನ್ನೆರಡು ಕೋಟಿ ಐವತ್ತು ಲಕ್ಷ ಇವೆ. ಹೀಗೆ ಹದಿನಾಲ್ಕು ಪೂರ್ವಗಳಿದ್ದು ಇವುಗಳ ಎಲ್ಲ ಪದಗಳನ್ನು ಒಂದುಗೂಡಿಸಿದರೆ ತೊಂಭತ್ತೈದು ಕೋಟಿ ಐವತ್ತು ಲಕ್ಷ ಆಗುವವು.

ಹನ್ನೆರಡನೆಯ ಅಂಗದ ಐದನೆಯ ಭೇದವು ಚೂಲಿಕೆಯಿದೆ, ಇದರಲ್ಲಿ ಐದು ಭೇದಗಳಿದ್ದು ಇದರ ಪದಗಳು ಎರಡು ಕೋಟಿ ಒಂಭತ್ತು ಲಕ್ಷ ಎಂಭತ್ತೊಂಭತ್ತು ಸಾವಿರ ಇನ್ನೂರು ಇವೆ. ಇದರ ಮೊದಲನೆಯ ಭೇದವಾದ ಜಲಗತ ಚೂಲಿಕೆಯಲ್ಲಿ ಜಲಸ್ತಂಭನ ಮಾಡುವುದು, ಜಲದಲ್ಲಿ ಗಮನಮಾಡುವುದಿದೆ, ಅಗ್ನಿಗತ ಚೂಲಿಕೆಯಲ್ಲಿ ಅಗ್ನಿ ಸ್ತಂಭನ ಮಾಡುವುದು,ಅಗ್ನಿಯಲ್ಲಿ ಪ್ರವೇಶ ಮಾಡುವುದು, ಅಗ್ನಿಯ ಭಕ್ಷಣ ಮಾಡುವುದು ಇತ್ಯಾದಿಗಳಿಗೆ ಕಾರಣಭೂತವಾದ ಮಂತ್ರ ತಂತ್ರಾದಿಗಳ ಪ್ರರೂಪಣೆಯಿದೆ, ಇದರ ಪದಗಳು ಎರಡು ಕೋಟಿ ಒಂಭತ್ತು ಲಕ್ಷ ಎಂಭತ್ತೊಂಭತ್ತು ಸಾವಿರದಾ ಇನ್ನೂರು ಇವೆ. ಇಷ್ಟಿಷ್ಟೇ ಪದಗಳು ಇತರ ನಾಲ್ಕು ಚೂಲಿಕೆಗಳಿಗಿವೆಯೆಂದು ತಿಳಿಯಬೇಕು. ಎರಡನೆಯ ಭೇದವು ಸ್ಥಲಗತ ಚೂಲಿಕೆಯಿದೆ, ಇದರಲ್ಲಿ ಮೇರು ಪರ್ವತ ಭೂಮಿ ಇತ್ಯಾದಿಗಳಲ್ಲಿ ಪ್ರವೇಶ ಮಾಡುವ ಶೀಘ್ರಗಮನಮಾಡುವ ಇತ್ಯಾದಿ ಕ್ರಿಯೆಗಳಿಗೆ ಕಾರಣವಾಗುವ ಮಂತ್ರ-ತಂತ್ರ-ತಪಶ್ಚರಣ ಮೊದಲಾದವುಗಳ ಪ್ರರೂಪಣೆಯಿದೆ.

ಮೂರನೆಯ ಭೇದವು ಮಾಯಾಗತ ಚೂಲಿಕೆಯಿದೆ, ಇದರಲ್ಲಿ ಮಾಯಾಮಯಿ ಇಂದ್ರಜಾಲ ವಿಕ್ರಿಯಕ್ಕೆ ಕಾರಣಭೂತವಾದ ಮಂತ್ರ-ತಂತ್ರ-ತಪಶ್ಚರಣಾದಿಗಳ ಪ್ರರೂಪಣೆಯಿದೆ. ನಾಲ್ಕನೆಯ ಭೇದವು ರೂಪಗತ ಚೂಲಿಕೆಯಿದೆ, ಇದರಲ್ಲಿ ಸಿಂಹ, ಆನೆ, ಕುದುರೆ, ಎತ್ತು, ಜಿಂಕೆ ಇತ್ಯಾದಿ ಅನೇಕ ಪ್ರಕಾರದ ರೂಪಗಳನ್ನು ಧಾರಣ ಮಾಡುವುದಕ್ಕೆ ಕಾರಣಭೂತವಾದ ಮಂತ್ರ-ತಂತ್ರ-ತಪಶ್ಚರಣಾದಿಗಳ ಪ್ರರೂಪಣೆಯಿದೆ ಅದರಂತೆ ಚಿತ್ರಾಮ, ಕಾಷ್ಟಲೇಪನಾದಿಗಳ ಲಕ್ಷಣದ ವರ್ಣನೆಯಿದೆ ಮತ್ತು ಧಾತುರಸಾಯನದ ನಿರೂಪಣೆಯಿದೆ. ಐದನೆಯ ಭೇದವು ಆಕಾಶಗತ ಚೂಲಿಕೆಯಿದೆ, ಇದರಲ್ಲಿ ಆಕಾಶದಲ್ಲಿ ಗಮನಾದಿಗಳಿಗೆ ಕಾರಣಭೂತವಾದ ಮಂತ್ರ-ಯಂತ್ರ-ತಂತ್ರಾದಿಗಳ ನಿರೂಪಣೆಯಿದೆ. ಹೀಗೆ ಹನ್ನೆರಡನೆಯ ಅಂಗವಿದೆ; ಈ ಪ್ರಕಾರದಿಂದ ಹನ್ನೆರಡು ಅಂಗಗಳ ಸೂತ್ರಗಳಿವೆ.

ಅಂಗಬಾಹ್ಯ ಶ್ರುತದಲ್ಲಿ ಹದಿನಾಲ್ಕು ಪ್ರಕೀರ್ಣಕಗಳಿವೆ. ಮೊದಲನೆಯ ಪ್ರಕೀರ್ಣಕವು ಸಾಮಾಯಿಕ ಹೆಸರಿನದಿದೆ, ಇದರಲ್ಲಿ ನಾಮ, ಸ್ಥಾಪನೆ, ದ್ರವ್ಯ, ಕ್ಷೇತ್ರ, ಕಾಲ, ಭಾವದಿಂದ ಆರು ಪ್ರಕಾರ ಸಾಮಾಯಿಕದ ವರ್ಣನೆಯು ವಿಶೇಷ ರೂಪದಿಂದಿದೆ. ಎರಡನೆಯದು ಚತುರ್ವಿಂಶತಿ ಸ್ತವನ ನಾಮದ ಪ್ರಕೀರ್ಣಕವಿದೆ, ಇದರಲ್ಲಿ ಇಪ್ಪತ್ತಾನ್ಲ್ಕು ತೀರ್ಥಂಕರರ ಮಹಿಮೆಯ ವರ್ಣನೆಯಿದೆ. ಮೂರನೆಯದು ವಂದನಾ ನಾಮದ ಪ್ರಕೀರ್ಣಕವಿದೆ, ಇದರಲ್ಲಿ ಒಬ್ಬ ತೀರ್ಥಂಕರರ ಆಶ್ರಯ ವಂದನೆ ಸ್ತುತಿಯ ವರ್ಣನೆಯಿದೆ. ಐದನೆಯದು ವೈನಯಿಕ ನಾಮದ ಪ್ರಕೀರ್ಣಕಿದೆ, ಇದರಲ್ಲಿ ಐದು ಪ್ರಕಾರದ ವಿನಯದ ವರ್ಣನೆಯಿದೆ. ಆರನೆಯದು ಕೃತಿಕರ್ಮ ನಾಮದ ಪ್ರಕೀರ್ಣಕವಿದೆ, ಇದರಲ್ಲಿ ಅರಹಂತ ಮೊದಲಾದವರ ವಂದನೆಯ ಕ್ರಿಯೆಯ ವರ್ಣನೆಯಿದೆ. ಏಳನೆಯದು ದಶವೈತಾಲಿಕ ನಾಮದ ಪ್ರಕೀರ್ಣಕವಿದೆ, ಇದರಲ್ಲಿ ಮುನಿಯ ಆಚಾರ, ಆಹಾರದ ಶುದ್ಧತೆ ಮೊದಲಾದವುಗಳ ವರ್ಣನೆಯಿದೆ. ಎಂಟನೆಯದು ಉತ್ತರಾಧ್ಯಯನನಾಮದ ಪ್ರಕೀರ್ಣಕವಿದೆ, ಇದರಲ್ಲಿ ಪರೀಷಹ ಉಪಸರ್ಗಗಳನ್ನು ಸಹಿಸುವ ವಿಧಾನದ ವರ್ಣನೆಯಿದೆ.

ಒಂಭತ್ತನೆಯದು ಕಲ್ಪವ್ಯವಹಾರನಾಮದ ಪ್ರಕೀರ್ಣಕವಿದೆ, ಇದರಲ್ಲಿ ಮುನಿಯ ಯೋಗ್ಯ ಆಚರಣ ಮತ್ತು ಅಯೋಗ್ಯ ಸೇವನೆಯ ಪ್ರಾಯಶ್ಚಿತ್ತಗಳ ವರ್ಣನೆಯಿದೆ. ಹತ್ತನೆಯದು ಕಲ್ಪಾಕಲ್ಪನಾಮದ ಪ್ರಕೀರ್ಣಕವಿದೆ, ಇದರಲ್ಲಿ ಮುನಿಗೆ ಇದು ಯೋಗ್ಯವಿದೆ-ಇದು ಅಯೋಗ್ಯವಿದೆಯೆಂದು ದ್ರವ್ಯ, ಕ್ಷೇತ್ರ, ಕಾಲ, ಭಾವದ ಅಪೇಕ್ಷೆಯಿಂದ ವರ್ಣನೆಯಿದೆ. ಹನ್ನೊಂದನೆಯದು ಮಹಾಕಲ್ಪನಾಮದ ಪ್ರಕೀರ್ಣಕವಿದೆ, ಇದರಲ್ಲಿ ಜಿನಕಲ್ಪಿಮುನಿಯ ಪ್ರತಿಮಾಯೋಗ, ತ್ರಿಕಾಲಯೋಗದ ಪ್ರರೂಪಣೆಯಿದೆ ಮತ್ತು ಸ್ಥವಿರಕಲ್ಪಿ ಮುನಿಗಳ ಪ್ರವೃತ್ತಿಯ ವರ್ಣನೆಯಿದೆ. ಹನ್ನೆರಡನೆಯದು ಪುಂಡರೀಕನಾಮದ ಪ್ರಕೀರ್ಣಕವಿದೆ, ಇದರಲ್ಲಿ ಇಂದ್ರ ಮೊದಲಾದ ದೊಡ್ಡ ಋದ್ಧಿಧಾರಕ ದೇವಗಳಲ್ಲಿ ಉತ್ಪನ್ನವಾಗುವ ಕಾರಣಗಳ ಪ್ರರೂಪಣೆಯಿದೆ. ಹದಿನಾಲ್ಕನೆಯದು ನಿಷಿದ್ಧಿಕಾನಾಮದ ಪ್ರಕೀರ್ಣಕವಿದೆ, ಇದರಲ್ಲಿ ಅನೇಕ ಪ್ರಕಾರದ ದೋಷಗಳ ಶುದ್ಧತೆಯ ನಿಮಿತ್ತ ಪ್ರಾಯಶ್ಚಿತ್ತಗಳ ಪ್ರರೂಪಣೆಯಿದೆ, ಇದು ಪ್ರಾಯಶ್ಚಿತ್ತ ಶಾಸ್ತ್ರವಿದೆ, ಇದರ ಹೆಸರು ನಿಸಿತಿಕೆಯೆಂದೂ ಇದೆ. ಈ ಪ್ರಕಾರ ಅಂಗಬಾಹ್ಯ ಶ್ರುತಗಳು ಹದಿನಾಲ್ಕು ಪ್ರಕಾರದ್ದಿವೆ.

ಪೂರ್ವಗಳ ಉತ್ಪತ್ತಿ ಪರ್ಯಾಯಸಮಾಸ ಜ್ಞಾನದಿಂದ ಹಿಡಿದು ಪೂರ್ವಜ್ಞಾನ ಪರ್ಯಾಯದವರೆಗೆ ಇಪ್ಪತ್ತು ಭೇದಗಳಿವೆ ಇವುಗಳ ವಿಶೇಷ ವರ್ಣನೆ, ಶ್ರುತಜ್ಞಾನದ ವರ್ಣನೆಯು ಗೊಮ್ಮಟಸಾರನಾಮದ ಗ್ರಂಥದಲ್ಲಿ ವಿಸ್ತಾರಪೂರ್ವಕವಿದೆ ಅಲ್ಲಿಂದ ತಿಳಿದುಕೊಳ್ಳಬೇಕು. ॥೨॥

ಸೂತ್ರದಲ್ಲಿ ಪ್ರವೀಣರಿರುವವರೂ ಸಂಸಾರದ ನಾಶಮಾಡುತ್ತಾರೆಂದು ಈಗ ಹೇಳುತ್ತಾರೆ, -

[೧]ಸುತ್ತಂ ಹಿ ಜಾಣಮಾಣೋ ಭವಸ್ಸ ಭವಣಾಸಣಂ ಚ ಸೋ ಕುಣದಿ ।
ಸೂಈ ಜಹಾ ಅಸುತ್ತಾ ಣಾಸದಿ ಸುತ್ತೇ ಸಹಾ ಣೋ ವಿ ॥೩॥

ಸೂತ್ರೇ ಜ್ಞಾಯಮಾನಃ ಭವಸ್ಯ ಭವನಾಶನಂ ಚ ಸಃ ಕರೋತಿ ।
ಸೂಚೀ ಯಥಾ ಅಸೂತ್ರಾ, ನಶ್ಯತಿ ಸೂತ್ರೇಣ ಸಹ ನಾಪಿ ॥೩॥

---

ಆ ಸೂತ್ರಜ್ಞಜೀವನು ಭವದಲುತ್ಪನ್ನವಾಗುವುದರ ನಾಶಮಾಡುವನು ।
ಅಸೂತ್ರಸೂಜಿ ಕಳೆಯುವುದು ಮೇಣಸೂತ್ರ ಸೂಜಿ ತಾಕಳೆಯಲಾರದು ॥೩॥

---

೧ 'ಸುತ್ತಮ್ಮಿ' ಎಂಬ ಪಾಠಾಂತರವಿದೆ. ೨. 'ಸೂತ್ರಹಿ' ಎಂಬ ಪಾಠಾಂತರವಿದೆ. ಷಟ್‌ಪಾಹುಡದಲ್ಲಿ.

ಅರ್ಥ ಃ- ಯಾವ ಪುರುಷನು ಸೂತ್ರವನ್ನು ತಿಳಿಯುವಂಥವನಿದ್ದಾನೆ, ಪ್ರವೀಣನಿದ್ದಾನೆ ಅವನು ಸಂಸಾರದಲ್ಲಿ ಜನ್ಮವಾಗುವುದರ ನಾಶಮಾಡುತ್ತಾನೆ ಹೇಗೆಂದರೆ ಲೋಹದ ಸೂಜಿಯು ಸೂತ್ರ (ದಾರ)ವಿಲ್ಲದೆ ಇದ್ದರೆ ನಷ್ಟವಾಗಿ ಹೋಗುವುದು ಮತ್ತು ದಾರ ಸಹಿತವಾಗಿದ್ದರೆ ನಷ್ಟವಾಗುವುದಿಲ್ಲ, ಇದು ದೃಷ್ಟಾಂತವಿದೆ.

ಭಾವಾರ್ಥ ಃ- ಸೂತ್ರದ ಜ್ಞಾತಾನಿರುವವನು ಸಂಸಾರದ ನಾಶ ಮಾಡುತ್ತಾನೆ. ಹೇಗೆಂದರೆ ಸೂಜಿಯು ದಾರಸಹಿತವಾಗಿದ್ದರೆ ಅದು ದೃಷ್ಟಿ ಗೋಚರವಾಗಿ ದೊರಕುತ್ತದೆ, ಎಂದೂ ನಷ್ಟವಾಗುವುದಿಲ್ಲ ಮತ್ತು ದಾರ ರಹಿತವಾಗಿದ್ದರೆ ಗೋಚರಿಸುವುದಿಲ್ಲ ನಷ್ಟವಾಗಿ ಹೋಗುವುದೆಂದು ತಿಳಿಯಬೇಕು. ||೩||

ಇನ್ನು ಮುಂದೆ ಸೂಜಿಯ ದೃಷ್ಟಾಂತದ ದಾರ್ಷ್ಟಾಂತ ಹೇಳುತ್ತಾರೆ,-

**ಪುರಿಸೋ ವಿ ಜೋ ಸಸುತ್ತೋ ಣ ವಿಣಾಸಇ ಸೋ ಗಓ ವಿ ಸಂಸಾರೇ ।**
**ಸಚ್ಚೇದಣ ಪಚ್ಚಕ್ಖಂ ಣಾಸದಿ ತಂ ಸೋ ಅದಿಸ್ಸಮಾಣೋ ವಿ ||೪||**

**ಪುರುಷೋಽಪಿ ಯಃ ಸಸೂತ್ರಃ ನ ವಿನಶ್ಯತಿ ಸ ಗತೋಽಪಿ ಸಂಸಾರೇ ।**
**ಸಚ್ಚೇತನಪ್ರತ್ಯಕ್ಷೇಣ ನಾಶಯತಿ ತಂ ಸಃ ಅದೃಶ್ಯಮಾನೋಽಪಿ ||೪||**

ಅರ್ಥ ಃ- ಯಾವ ಪ್ರಕಾರ ಸೂತ್ರಸಹಿತವಾದ ಸೂಜಿಯು ನಷ್ಟವಾಗುವುದಿಲ್ಲ ಅದೇ ಪ್ರಕಾರ ಪುರುಷನು ಕೂಡ ಸಂಸಾರದಲ್ಲಿ ಸತ್ತು ಹೋಗುತ್ತಲಿದ್ದಾನೆ ತನ್ನ ರೂಪು ತನಗೆ ದೃಷ್ಟಿಗೋಚರವಿಲ್ಲದಿದ್ದರೂ ಕೂಡ ಸೂತ್ರ ಸಹಿತನಿದ್ದರೆ (ಸೂತ್ರದ ಜ್ಞಾತಾನಿದ್ದರೆ) ಅವನ ಆತ್ಮನು ಸತ್ತಾರೂಪ ಚೈತನ್ಯ ಚಮತ್ಕಾರಮಯ ಸ್ವಸಂವೇದನದಿಂದ ಪ್ರತ್ಯಕ್ಷ ಅನುಭವದಲ್ಲಿ ಬರುವುದರಿಂದ ಗತನಿಲ್ಲ ನಷ್ಟವಾಗಿಲ್ಲ, ಅವನು ಯಾವ ಸಂಸಾರದಲ್ಲಿ ಗತನಿದ್ದಾನೆ ಆ ಸಂಸಾರದ ನಾಶ ಮಾಡುತ್ತಾನೆ.

ಭಾವಾರ್ಥ ಃ- ಒಂದು ವೇಳೆ ಆತ್ಮನು ಇಂದ್ರಿಯಗೋಚರನಿಲ್ಲದಿದ್ದರೂ ಕೂಡ ಸೂತ್ರದ ಜ್ಞಾತಾನಿಗೆ ಸ್ವಸಂವೇದನ ಪ್ರತ್ಯಕ್ಷದಿಂದ ಅನುಭವಗೋಚರನಿದ್ದಾನೆ, ಆ ಸೂತ್ರದ ಜ್ಞಾತಾನು ಸಂಸಾರದ ನಾಶ ಮಾಡುತ್ತಾನೆ, ಸ್ವಯಂ ಪ್ರಕಟನಾಗುವುದರಿಂದ ಸೂಜಿಯ ದೃಷ್ಟಾಂತವು ಯುಕ್ತವಿದೆ.

ಸೂತ್ರದಲ್ಲಿ ಯಾವ ಅರ್ಥವಿದೆಯೆಂಬುದನ್ನು ಈಗ ಹೇಳುತ್ತಾರೆ, -

**ಸುತ್ತತ್ಥಂ ಜಿಣಭಣಿಯಂ ಜೀವಾಜೀವಾದಿಬಹುವಿಹಂ ಅತ್ಥಂ ।**
**ಹೇಯಾಹೇಯಂ ಚ ತಹಾ ಜೋ ಜಾಣಇ ಸೋ ಹು ಸದ್ದಿಟ್ಠೀ ||೫||**

---

**ಸಸೂತ್ರಪುರುಷ ಭವದೊಳ್ಗತ ಮೇಣ್ಸ್ವರೂಪದಿಂದದೃಷ್ಟನಿದ್ದರು ಕೂಡ ।**
**ಆ ಸಚ್ಚೇತನಪ್ರತ್ಯಕ್ಷದಿಂದವನು ದುಷ್ಟಸಂಸಾರವ ನಷ್ಟಮಾಡುವನು ||೪||**

**ಜಿನಸೂತ್ರದಲಿ ಪೇಳಿರುವ ಜೀವ-ಅಜೀವ ಮೊದಲಾದ ಪದಾರ್ಥಗಳ ।**
**ತೇನ ಹೇಯಾಹೇಯಗಳ ತಿಳಿವವನು ಪ್ರಕಟಸಮ್ಯಗ್ದೃಷ್ಟಿಯಿರುವನು ||೫||**

**ಸೂತ್ರಾರ್ಥಂ ಜಿನಭಣಿತಂ ಜೀವಾಜೀವಾದಿಬಹುವಿಧಮರ್ಥಮ್ ।**
**ಹೇಯಾಹೇಯಂ ಚ ತಥಾ ಯೋ ಜಾನತಿ ಸ ಹಿ ಸದ್ದೃಷ್ಟಿಃ ॥೫॥**

ಅರ್ಥ :- ಸೂತ್ರದ ಅರ್ಥವನ್ನು ಸರ್ವಜ್ಞ ಜಿನೇಂದ್ರದೇವರು ಹೇಳಿದ್ದಾರೆ ಮತ್ತು ಸೂತ್ರದ ಅರ್ಥವು ಜೀವ-ಅಜೀವ ಮೊದಲಾಗಿ ಹಲವು ಪ್ರಕಾರವಿದೆ ಅಲ್ಲದೆ ಹೇಯ ಎಂದರೆ ತ್ಯಾಗ ಮಾಡಲು ಯೋಗ್ಯವಾದ ಪುದ್ಗಲ ಮೊದಲಾದವುಗಳು ಮತ್ತು ಅಹೇಯ ಎಂದರೆ ತ್ಯಾಗ ಮಾಡಲು ಯೋಗ್ಯವಿಲ್ಲದ ಆತ್ಮನನ್ನು ಯಾವನು ತಿಳಿಯುತ್ತಾನೆ ಅವನು ಸ್ಪಷ್ಟ ಸಮ್ಯಗ್ದೃಷ್ಟಿಯಿದ್ದಾನೆ.

ಭಾವಾರ್ಥ :- ಸರ್ವಜ್ಞಭಾಷಿತ ಸೂತ್ರದಲ್ಲಿ ಜೀವ ಮೊದಲಾದ ನವಪದಾರ್ಥಗಳು ಮತ್ತು ಇವುಗಳಲ್ಲಿ ಹೇಯ-ಉಪಾದೇಯವೆಂದು ಹಲವು ಪ್ರಕಾರದಿಂದ ವ್ಯಾಖ್ಯಾನವಿದೆ, ಅದನ್ನು ತಿಳಿದುಕೊಳ್ಳುವವನು ಶ್ರದ್ಧೆಯುಳ್ಳ ಸಮ್ಯಗ್ದೃಷ್ಟಿಯಿರುತ್ತಾನೆ.

ಜಿನಭಾಷಿತ ಸೂತ್ರವು ವ್ಯವಹಾರ-ಪರಮಾರ್ಥರೂಪವೆಂದು ಎರಡು ಪ್ರಕಾರವಿದ್ದು ಅದನ್ನು ತಿಳಿದುಕೊಂಡು ಯೋಗೀಶ್ವರರು ಶುದ್ಧಭಾವ ಮಾಡಿ ಸುಖವನ್ನು ಪಡೆಯುತ್ತಾರೆಂದು ಈಗ ಹೇಳುತ್ತಾರೆ,-

**ಜಂ ಸುತ್ತಂ ಜಿಣಉತ್ತಂ ವವಹಾರೋ ತಹ ಯ ಜಾಣ ಪರಮತ್ಥೋ ।**
**ತಂ ಜಾಣಿಊಣ ಜೋಈ ಲಹಇ ಸುಹಂ ಖವಇ ಮಲಪುಂಜಂ ॥೬॥**

**ಯತ್ಸೂತ್ರಂ ಜಿನೋಕ್ತಂ ವ್ಯವಹಾರಂ ತಥಾ ಚ ಜ್ಞಾನೀಹಿ ಪರಮಾರ್ಥಮ್ ।**
**ತಂ ಜ್ಞಾತ್ವಾ ಯೋಗೀ ಲಭತೇ ಸುಖಂ ಕ್ಷಿಪತೇ ಮಲಪುಂಜಂ ॥೬॥**

ಅರ್ಥ :- ಆ ಜಿನಭಾಷಿತ ಸೂತ್ರವು ವ್ಯವಹಾರರೂಪ ಮತ್ತು ಪರಮಾರ್ಥರೂಪವಿದ್ದು ಅದನ್ನು ಯೋಗೀಶ್ವರರುಗಳು ತಿಳಿದುಕೊಂಡು ಸುಖವನ್ನು ಪಡೆಯುತ್ತಾರೆ ಮತ್ತು ಮಲಪುಂಜ ಎಂದರೆ ದ್ರವ್ಯಕರ್ಮ, ಭಾವಕರ್ಮ, ನೋಕರ್ಮಗಳ ಕ್ಷೇಪಣ ಮಾಡುತ್ತಾರೆ.

ಭಾವಾರ್ಥ :- ಜಿನಸೂತ್ರವನ್ನು ವ್ಯವಹಾರ-ಪರಮಾರ್ಥರೂಪದಿಂದ ಯಥಾರ್ಥವಾಗಿ ತಿಳಿದುಕೊಂಡು ಯೋಗೀಶ್ವರರು (ಮುನಿಗಳು) ಕರ್ಮಗಳ ನಾಶಮಾಡಿ ಅವಿನಾಶಿ ಸುಖರೂಪವಾದ ಮೋಕ್ಷವನ್ನು ಪಡೆಯುತ್ತಾರೆ. ಪರಮಾರ್ಥ (ನಿಶ್ಚಯ)-ವ್ಯವಹಾರ ಇವುಗಳ ಸಂಕ್ಷಿಪ್ತ ಸ್ವರೂಪವು ಹೀಗಿದೆ- ಜಿನಾಗಮದ ವ್ಯಾಖ್ಯೆಯು ನಾಲ್ಕು ಅನುಯೋಗರೂಪವಾದ ಶಾಸ್ತ್ರಗಳಲ್ಲಿ ಒಂದು ಆಗಮರೂಪ ಮತ್ತು ಇನ್ನೊಂದು ಅಧ್ಯಾತ್ಮರೂಪವೆಂದು ಎರಡು ಪ್ರಕಾರದಿಂದ ಸಿದ್ಧವಿದೆ. ಅಲ್ಲಿ ಸಾಮಾನ್ಯ ವಿಶೇಷರೂಪದಿಂದ ಎಲ್ಲ ಪದಾರ್ಥಗಳ ಪ್ರರೂಪಣೆ ಮಾಡುತ್ತಾರೆ ಅದು ಆಗಮರೂಪವಿದೆ, ಆದರೆ ಎಲ್ಲಿ ಒಬ್ಬ ಆತ್ಮನ ಆಶ್ರಯದಿಂದಲೇ ನಿರೂಪಣೆ ಮಾಡುತ್ತಾರೆ ಅದು ಅಧ್ಯಾತ್ಮವಿದೆ. ಅಹೇತುಮತ್ ಮತ್ತು ಹೇತುಮತ್‌ವೆಂದೂ ಎರಡೂ ಪ್ರಕಾರವಿವೆ, ಅಲ್ಲಿ ಸರ್ವಜ್ಞರ ಆಜ್ಞೆಯಿಂದಲೇ ಕೇವಲ ಪ್ರಮಾಣತೆಯನ್ನು ಮನ್ನಿಸುವುದು ಅದು ಅಹೇತುಮತ್ ಇದೆ ಮತ್ತು ಪ್ರಮಾಣನಯದಿಂದ ವಸ್ತುವಿನ ನಿರ್ಬಾಧ ಸಿದ್ಧಿ

---

**ಜಿನೋಕ್ತ ಸೂತ್ರವದು ವ್ಯವಹರರೂಪ ಮೇಣ್ಪರಮಾರ್ಥರೂಪವಿದ್ದದನು ।**
**ಜಿನಮುನಿಗಳು ತಿಳಿದು ಸುಖಪಡೆವರು ಮೇಣ್ಮಲಪುಂಜ ತೊರೆವರು ॥೬॥**

ಮಾಡಿ ಮನ್ನಿಸುವುದು ಅದು ಹೇತಮತ್ ಇದೆ, ಹೀಗೆ ಆಗಮದಲ್ಲಿ ನಿಶ್ಚಯ-ವ್ಯವಹಾರವೆಂದು ಎರಡು ಪ್ರಕಾರದಿಂದ ವ್ಯಾಖ್ಯಾನವಿದೆ. ಅದನ್ನು ಇಲ್ಲಿ ಒಂದಿಷ್ಟು ಹೇಳಲಾಗವುದು.

ಯಾವಾಗ ಎಲ್ಲ ಪದಾರ್ಥಗಳನ್ನು ಆಗಮರೂಪ ವ್ಯಾಖ್ಯಾನದ ಮೇಲೆ ತೊಡಗಿಸುತ್ತದೆ ಆಗಂತೂ ವಸ್ತುವಿನ ಸ್ವರೂಪವು ಸಾಮಾನ್ಯ ವಿಶೇಷ ರೂಪವಾಗಿ ಅನಂತಧರ್ಮಸ್ವರೂಪವಿದೆ ಅದು ಜ್ಞಾನಗಮ್ಯವಿದೆ, ಇವುಗಳಲ್ಲಿ ಸಾಮಾನ್ಯರೂಪವಂತೂ ನಿಶ್ಚಯನಯದ ವಿಷಯವಿದೆ ಮತ್ತು ಎಷ್ಟು ವಿಶೇಷರೂಪಗಳಿವೆ ಅವನ್ನು ಭೇದರೂಪ ಮಾಡಿ ಭಿನ್ನ-ಭಿನ್ನವಾಗಿ ಹೇಳುವುದು ಅದು ವ್ಯವಹಾರನಯದ ವಿಷಯವಿದೆ, ಅದನ್ನು ದ್ರವ್ಯ-ಪರ್ಯಾಯ ಸ್ವರೂಪವೆಂದು ಹೇಳುತ್ತಾರೆ. ಯಾವ ವಸ್ತುವನ್ನು ವಿವಕ್ಷಿತ ಮಾಡಿ ಸಿದ್ಧಮಾಡುವುದಿದೆ ಅದರ ದ್ರವ್ಯ, ಕ್ಷೇತ್ರ, ಕಾಲ, ಭಾವದಿಂದ ಅದು ಒಂದಿಷ್ಟು ಸಾಮಾನ್ಯ ವಿಶೇಷರೂಪ ವಸ್ತುವಿನ ಸರ್ವಸ್ವವಿದ್ದರೆ ನಿಶ್ಚಯ ವ್ಯವಹಾರದಿಂದ ಹೇಳಿದೆಯೆಂದು ಸಿದ್ಧವಾಗುತ್ತದೆ ಮತ್ತು ಆ ವಸ್ತುವಿಗೆ ಒಂದಿಷ್ಟು ಅನ್ಯ ವಸ್ತುವಿನ ಸಂಯೋಗ ರೂಪ ಅವಸ್ಥೆಯಿದ್ದರೆ ಅದನ್ನು ಆ ವಸ್ತುರೂಪವೆಂದು ಹೇಳುವುದೂ ವ್ಯವಹಾರವಿದೆ, ಇದನ್ನು ಉಪಚಾರವೆಂದೂ ಹೇಳುತ್ತಾರೆ. ಇದರ ಉದಾಹರಣೆ ಹೀಗಿದೆ – ಹೇಗೆ ಒಂದು ವಿವಕ್ಷಿತ ಘಟನಾಮದ ವಸ್ತುವಿನ ಮೇಲೆ ತೊಡಗಿಸಿದಾಗ ಆ ಘಟದ ದ್ರವ್ಯ, ಕ್ಷೇತ್ರ, ಕಾಲ ಭಾವರೂಪ ಎಷ್ಟು ಸಾಮಾನ್ಯ ವಿಶೇಷರೂಪ ಸರ್ವಸ್ವವಿದೆ ಅಷ್ಟು ಹೇಳಿದೆಯೆಂದು ನಿಶ್ಚಯ ವ್ಯವಹಾರದಿಂದ ಹೇಳುವುದಂತೂ ನಿಶ್ಚಯ ವ್ಯವಹಾರವಿದೆ ಮತ್ತು ಘಟಕ್ಕೆ ಒಂದಿಷ್ಟು ಅನ್ಯವಸ್ತುವಿನ ಲೇಪಮಾಡಿ ಆ ಘಟವನ್ನು ಆ ಹೆಸರಿನಿಂದ ಹೇಳುವುದು ಅದರಂತೆ ಅನ್ಯ ಪಟಾದಿಗಳಲ್ಲಿ ಘಟದ ಆರೋಪಣೆ ಮಾಡಿ ಘಟವೆಂದು ಹೇಳುವುದು ಕೂಡ ವ್ಯವಹಾರವಿದೆ.

ವ್ಯವಹಾರಕ್ಕೆ ಒಂದು ಪ್ರಯೋಜನ ಇನ್ನೊಂದು ನಿಮಿತ್ತವೆಂದು ಎರಡು ಆಶ್ರಯಗಳಿವೆ. ಪ್ರಯೋಜನ ಸಾಧಿಸುವುದಕ್ಕೆ ಯಾವುದೇ ವಸ್ತುವನ್ನು ಘಟವೆಂದು ಹೇಳುವುದು ಅದಂತೂ ಪ್ರಯೋಜನಾಶ್ರಿತವಿದೆ ಮತ್ತು ಯಾವುದೇ ಅನ್ಯ ವಸ್ತುವಿನ ನಿಮಿತ್ತದಿಂದ ಘಟದಲ್ಲಿ ಅವಸ್ಥೆಯಾಗಿರುವುದನ್ನು ಘಟರೂಪವೆಂದು ಹೇಳುವುದು ಅದು ನಿಮಿತ್ತಾಶ್ರಿತವಿದೆ. ಈ ಪ್ರಕಾರ ವಿವಕ್ಷಿತ ಸಮಸ್ತ ಜೀವ ಅಜೀವ ವಸ್ತುಗಳ ಮೇಲೆ ತಗಲಿಸುವುದು. ಒಬ್ಬ ಆತ್ಮನನ್ನೇ ಮುಖ್ಯಮಾಡಿ ತಗಲಿಸುವುದು ಅಧ್ಯಾತ್ಮವಿದೆ. ಜೀವ ಸಾಮಾನ್ಯವನ್ನು ಕೂಡ ಆತ್ಮನೆಂದು ಹೇಳುತ್ತಾರೆ. ಆ ಜೀವನು ತನ್ನನ್ನು ಸಮಸ್ತ ಜೀವಗಳಿಂದ ಭಿನ್ನವಾಗಿ ಅನುಭವ ಮಾಡಿದರೆ ಅವನನ್ನು ಆತ್ಮನೆಂದು ಹೇಳುತ್ತಾರೆ, ಯಾವಾಗ ತನ್ನನ್ನು ಸಮಸ್ತದಿಂದ ಭಿನ್ನವಾಗಿ ಅನುಭವ ಮಾಡಿ, ತನ್ನ ಮೇಲೆ ನಿಶ್ಚಯ ತಗಲಿಸಿದಾಗ ಈ ಪ್ರಕಾರ ಆ ತನ್ನ ಅನಾದಿ ಅನಂತ ಅವಿನಾಶಿ ಸಮಸ್ತ ಅನ್ಯ ದ್ರವ್ಯಗಳಿಂದ ಭಿನ್ನ ಏಕ ಸಾಮಾನ್ಯ ವಿಶೇಷರೂಪ ಅನಂತಧರ್ಮಾತ್ಮಕ ದ್ರವ್ಯ-ಪರ್ಯಾಯಾ-ತ್ಮಕವಾದ ಜೀವನಾಮದ ಶುದ್ಧವಸ್ತುವಿದೆ ಅದು ಹೇಗಿದೆ-

ಶುದ್ಧ ದರ್ಶನ ಜ್ಞಾನಮಯ ಚೇತನಾಸ್ವರೂಪ ಅಸಾಧಾರಣ ಧರ್ಮವನ್ನು ಗ್ರಹಣ ಮಾಡಿರುವ ಅನಂತ ಶಕ್ತಿಯ ಧಾರಕನಿದ್ದು, ಅದರಲ್ಲಿ ಸಾಮಾನ್ಯ ಭೇದ ಚೇತನಾ ಅನಂತಶಕ್ತಿಯ ಸಮೂಹ ದ್ರವ್ಯವಿದೆ. ಅನಂತ ಜ್ಞಾನ ದರ್ಶನ ಸುಖ ವೀರ್ಯಗಳು ಚೇತನಾದ ವಿಶೇಷಗಳಿವೆ ಅವಂತೂ ಗುಣಗಳಿವೆ ಮತ್ತು ಅಗುರುಲಘು ಗುಣದಿಂದ ಷಟ್‌ಸ್ಥಾನಪತಿತ ಹಾನಿವೃದ್ಧಿರೂಪ ಪರಿಣಮನ ಮಾಡುತ್ತ ಜೀವಕ್ಕೆ ತ್ರಿಕಾಲಾತ್ಮಕವಾದ ಅನಂತ ಪರ್ಯಾಯಗಳಿವೆ. ಹೀಗೆ ಶುದ್ಧ ಜೀವ ನಾಮಕ ವಸ್ತುವನ್ನು ಸರ್ವಜ್ಞರು ನೋಡಿರುವ ಹಾಗೆ ಆಗಮದಲ್ಲಿ ಪ್ರಸಿದ್ಧವಿದೆ ಅದಂತೂ ಒಂದು ಅಭೇದರೂಪ ಶುದ್ಧ ನಿಶ್ಚಯನಯದ ವಿಷಯಭೂತವಾದ ಜೀವವಿದೆ. ಈ ದೃಷ್ಟಿಯಿಂದ ಅನುಭವ ಮಾಡಿದಾಗಂತೂ ಹೀಗೆ ಇದೆ ಮತ್ತು ಅನಂತ ಧರ್ಮಗಳಲ್ಲಿ ಭೇದರೂಪವಾದ ಯಾವುದೇ ಒಂದು ಧರ್ಮವನ್ನು ಸ್ವೀಕರಿಸಿ ಹೇಳುವುದು ವ್ಯವಹಾರವಿದೆ.

ಆತ್ಮವಸ್ತುವಿಗೆ ಅನಾದಿಯಿಂದಲೇ ಪುದ್ಗಲಕರ್ಮದ ಸಂಯೋಗವಿದ್ದು ಇದರ ನಿಮಿತ್ತದಿಂದ ರಾಗ-ದ್ವೇಷ ರೂಪ ವಿಕಾರದ ಉತ್ಪತ್ತಿಯಾಗುತ್ತದೆ ಅದನ್ನು ವಿಭಾವ ಪರಿಣತಿಯೆಂದು ಹೇಳುತ್ತಾರೆ, ಇದರಿಂದ ಪುನಃ ಭವಿಷ್ಯಕರ್ಮದ ಬಂಧವಾಗುತ್ತದೆ. ಈ ಪ್ರಕಾರ ಅನಾದಿ ನಿಮಿತ್ತ-ನೈಮಿತ್ತಿಕ ಭಾವದ ಮುಖಾಂತರ ಚತುರ್ಗತಿರೂಪ ಸಂಸಾರ ಪರಿಭ್ರಮಣದ ಪ್ರವೃತ್ತಿಯಾಗುತ್ತದೆ. ಜೀವನು ಯಾವ ಗತಿಗೆ ಪ್ರಾಪ್ತನಾಗುತ್ತಾನೆ ಅಂಥ ಹೆಸರಿನಿಂದಲೇ ಕರೆಯಿಸಿಕೊಳ್ಳುತ್ತಾನೆ ಮತ್ತು ಎಂಥ ರಾಗಾದಿಭಾವಗಳಾಗುವವು ಅಂಥ ಹೆಸರಿನಿಂದ ಕರೆಸಿಕೊಳ್ಳುತ್ತಾನೆ. ಯಾವಾಗ ದ್ರವ್ಯ, ಕ್ಷೇತ್ರ, ಕಾಲ, ಭಾವದ ಬಾಹ್ಯ ಅಂತರಂಗ ಸಾಮಗ್ರಿಯ ನಿಮಿತ್ತ ದಿಂದ ತನ್ನ ಶುದ್ಧ ಸ್ವರೂಪ ಶುದ್ಧ ನಿಶ್ಚಯನಯದ ವಿಷಯಸ್ವರೂಪನಾದ ತನ್ನನ್ನು ತಿಳಿದುಕೊಂಡು ಶ್ರದ್ಧೆ ಮಾಡುವನು ಮತ್ತು ಕರ್ಮಸಂಯೋಗವನ್ನು ಹಾಗೂ ಅದರ ನಿಮಿತ್ತದಿಂದ ತನ್ನ ಭಾವಗಳಾಗುತ್ತವೆ ಅವುಗಳ ಯಥಾರ್ಥ ಸ್ವರೂಪ ತಿಳಿದುಕೊಂಡಾಗ ಭೇದಜ್ಞಾನವಾಗುತ್ತದೆ, ಆಗಲೇ ಪರಭಾವಗಳಿಂದ ವಿರಕ್ತಿಯಾಗುತ್ತದೆ. ಪುನಃ ಅವನ್ನು ದೂರಮಾಡುವ ಉಪಾಯವನ್ನು ಸರ್ವಜ್ಞರ ಆಗಮದಿಂದ ಯಥಾರ್ಥ ತಿಳಿದುಕೊಂಡು ಅವನ್ನು ಅಂಗೀಕಾರ ಮಾಡಿದಾಗ ತನ್ನ ಸ್ವಭಾವದಲ್ಲಿ ಸ್ಥಿರವಾದರೆ ಅನಂತ ಚತುಷ್ಟಯಗಳು ಪ್ರಕಟವಾಗುತ್ತವೆ. ಸಮಸ್ತ ಕರ್ಮಗಳ ಕ್ಷಯಮಾಡಿ ಲೋಕಶಿಖರದ ಮೇಲೆ ಹೋಗಿ ವಿರಾಜಮಾನನಾಗಿ ಬಿಡುತ್ತಾನೆ, ಆಗ ಮುಕ್ತ ಅಥವಾ ಸಿದ್ಧನೆಂದು ಕರೆಸಿಕೊಳ್ಳುತ್ತಾನೆ.

ಈ ಪ್ರಕಾರ ಎಷ್ಟು ಸಂಸಾರದ ಅವಸ್ಥೆ ಮತ್ತು ಈ ಮುಕ್ತ ಅವಸ್ಥೆ ಹೀಗೆ ಭೇದರೂಪ ಆತ್ಮನ ನಿರೂಪಣೆಯಿದೆ ಅದು ಕೂಡ ವ್ಯವಹಾರನಯದ ವಿಷಯವಿದೆ, ಇದನ್ನು ಅಧ್ಯಾತ್ಮ ಶಾಸ್ತ್ರದಲ್ಲಿ ಅಭೂತಾರ್ಥ ಅಸತ್ಯಾರ್ಥವೆಂಬ ಹೆಸರಿನಿಂದ ಹೇಳಿ ವರ್ಣನೆ ಮಾಡಿದೆ, ಏಕೆಂದರೆ ಶುದ್ಧ ಆತ್ಮನಲ್ಲಿ ಸಂಯೋಗಜನ್ಯ ಅವಸ್ಥೆಯಿರುವುದಂತೂ ಅಸತ್ಯಾರ್ಥವೇ ಇದೆ, ಶುದ್ಧ ವಸ್ತುವಿನದಂತೂ ಇದು ಸ್ವಭಾವವಿಲ್ಲದಿರುವುದರಿಂದ ಅಸತ್ಯವೇ ಇದೆ, ಯಾವುದು ನಿಮಿತ್ತದಿಂದ ಅವಸ್ಥೆಯಾಗಿದೆ ಅದು ಕೂಡ ಆತ್ಮನದೇ ಪರಿಣಾಮವಿದೆ, ಯಾವುದು ಆತ್ಮನ ಪರಿಣಾಮವಿದೆ ಅದು ಆತ್ಮನಲ್ಲಿಯೇ ಇರುವುದರಿಂದ ಇದನ್ನು ಕಥಂಚಿತ್ ಸತ್ಯವೆಂದೂ ಹೇಳುತ್ತಾರೆ, ಆದರೆ ಎಲ್ಲಿಯವರೆಗೆ ಭೇದಜ್ಞಾನವಿರುವುದಿಲ್ಲ ಅಲ್ಲಿಯವರೆಗೆ ಆ ದೃಷ್ಟಿಯಿದೆ, ಭೇದಜ್ಞಾನವಾದ ಮೇಲೆ ಹೇಗಿದೆ ಹಾಗೆಯೇ ತಿಳಿಯುತ್ತಾನೆ.

ಯಾವ ದ್ರವ್ಯರೂಪ ಪುದ್ಗಲ ಕರ್ಮಗಳಿವೆ ಅವು ಆತ್ಮನಿಂದ ಭಿನ್ನವೇ ಇವೆ, ಅವುಗಳಿಂದ ಶರೀರ ಮೊದಲಾದವುಗಳ ಸಂಯೋಗವಿದೆ ಅದು ಆತ್ಮನಿಂದ ಸ್ಪಷ್ಟ ಭಿನ್ನವೇ ಇದೆ, ಇವನ್ನು ಆತ್ಮನವೆಂದು ಹೇಳುತ್ತಾರೆ ಅದು ಈ ಪ್ರಸಿದ್ಧ ವ್ಯವಹಾರವೇ ಇದೆ, ಇದನ್ನೂ ಅಸತ್ಯಾರ್ಥ ಅಥವಾ ಉಪಚಾರವೆಂದು ಹೇಳುತ್ತಾರೆ. ಇಲ್ಲಿ ಕರ್ಮದ ಸಂಯೋಗಜನ್ಯಭಾವಗಳಿವೆ ಅವು ಎಲ್ಲವು ನಿಮಿತ್ತಾಶ್ರಿತವಾದ ವ್ಯವಹಾರದ ವಿಷಯಗಳಿವೆ ಮತ್ತು ಉಪದೇಶ ಅಪೇಕ್ಷೆಯಿಂದ ಇದನ್ನು ಪ್ರಯೋಜನಾಶ್ರಿತವೆಂದೂ ಹೇಳುತ್ತಾರೆ, ಈ ಪ್ರಕಾರ ನಿಶ್ಚಯ-ವ್ಯವಹಾರದ ಸಂಕ್ಷೇಪವಿದೆ, ಸಮ್ಯಗ್ದರ್ಶನ-ಜ್ಞಾನ-ಚಾರಿತ್ರವನ್ನು ಮೋಕ್ಷಮಾರ್ಗವೆಂದು ಹೇಳಿದೆ, ಇಲ್ಲಿ ಇವು ಮೂರು ಒಬ್ಬ ಆತ್ಮನ ಭಾವಗಳೇ ಇವೆಯೆಂದು ತಿಳಿಯಬೇಕು, ಹೀಗೆ ಇವುಗಳರೂಪ ಆತ್ಮನ ಅನುಭವವೇ ಆಗುವುದು ಅದು ನಿಶ್ಚಯ ಮೋಕ್ಷಮಾರ್ಗವಿದೆ. ಇದರಲ್ಲಿ ಕೂಡ ಎಲ್ಲಿಯವರೆಗೆ ಅನುಭವದ ಪ್ರತ್ಯಕ್ಷ ಪೂರ್ಣತೆಯಾಗುವುದಿಲ್ಲ ಅಲ್ಲಿಯವರೆಗೆ ಏಕದೇಶರೂಪವಿರುತ್ತದೆ ಅದನ್ನು ಕಥಂಚಿತ್ ಸರ್ವದೇಶರೂಪವೆಂದು ಹೇಳಿ ಕಥನ ಮಾಡುವುದು ವ್ಯವಹಾರವಿದೆ ಮತ್ತು ಏಕದೇಶನಾಮದಿಂದ ಹೇಳುವುದು ನಿಶ್ಚಯವಿದೆ.

ದರ್ಶನ, ಜ್ಞಾನ, ಚಾರಿತ್ರಗಳನ್ನು ಭೇದರೂಪವಾಗಿ ಹೇಳಿ ಮೋಕ್ಷಮಾರ್ಗವೆಂದು ಹೇಳುವುದು ಮತ್ತು ಇವಕ್ಕೆ ಬಾಹ್ಯ ಪರದ್ರವ್ಯ ಸ್ವರೂಪದ ದ್ರವ್ಯ, ಕ್ಷೇತ್ರ, ಕಾಲ, ಭಾವಗಳು ನಿಮಿತ್ತವಿವೆ ಅವನ್ನು ದರ್ಶನ-ಜ್ಞಾನ-ಚಾರಿತ್ರದ ಹೆಸರಿನಿಂದ

ಹೇಳುವುದು ಅದು ವ್ಯವಹಾರವಿದೆ. ದೇವ-ಗುರು-ಶಾಸ್ತ್ರಗಳ ಶ್ರದ್ಧೆಯನ್ನು ಸಮ್ಯಗ್ದರ್ಶನವೆಂದು ಹೇಳುತ್ತಾರೆ. ಶಾಸ್ತ್ರದ ಜ್ಞಾನ ಎಂದರೆ ಜೀವಾದಿ ತತ್ತ್ವಗಳ ಶ್ರದ್ಧೆಯನ್ನು ಸಮ್ಯಗ್ದರ್ಶನವೆಂದು ಹೇಳುತ್ತಾರೆ. ಶಾಸ್ತ್ರದ ಜ್ಞಾನ ಎಂದರೆ ಜೀವಾದಿ ಪದಾರ್ಥಗಳ ಜ್ಞಾನವನ್ನು ಜ್ಞಾನವೆಂದು ಹೇಳುತ್ತಾರೆ ಇತ್ಯಾದಿ. ಐದು ಮಹಾವ್ರತ, ಐದು ಸಮಿತಿ, ಮೂರು ಗುಪ್ತಿರೂಪದ ಪ್ರವೃತ್ತಿಯನ್ನು ಚಾರಿತ್ರವೆಂದು ಹೇಳುತ್ತಾರೆ. ಹನ್ನೆರಡು ಪ್ರಕಾರದ ತಪಸ್ಸನ್ನು ತಪವೆಂದು ಹೇಳುತ್ತಾರೆ. ಇಂಥ ಭೇದರೂಪ ಹಾಗೂ ಪರದ್ರವ್ಯದ ಅವಲಂಬನರೂಪವಾದ ಪ್ರವೃತ್ತಿಗಳೆಲ್ಲವನ್ನು ಅಧ್ಯಾತ್ಮ ಶಾಸ್ತ್ರದ ಅಪೇಕ್ಷೆಯಿಂದ ವ್ಯವಹಾರದ ಹೆಸರಿನಿಂದ ಕರೆಯಲಾಗುತ್ತದೆ, ಏಕೆಂದರೆ ವಸ್ತುವಿನ ಏಕದೇಶವನ್ನು ವಸ್ತುವೆಂದು ಹೇಳುವುದು ಕೂಡ ವ್ಯವಹಾರವಿದೆ ಮತ್ತು ಪರದ್ರವ್ಯದ ಅವಲಂಬನರೂಪವಾದ ಪ್ರವೃತ್ತಿಯನ್ನು ಆ ವಸ್ತುವಿನ ಹೆಸರಿನಿಂದ ಹೇಳುವುದು ಅದು ಕೂಡ ವ್ಯವಹಾರವಿದೆ.

ಅಧ್ಯಾತ್ಮ ಶಾಸ್ತ್ರದಲ್ಲಿ ವಸ್ತುವು ಅನಂತಧರ್ಮರೂಪವಿರುವುದರಿಂದ ಸಾಮಾನ್ಯ-ವಿಶೇಷರೂಪದಿಂದ ಹಾಗೂ ದ್ರವ್ಯ- ಪರ್ಯಾಯದಿಂದ ವರ್ಣನೆ ಮಾಡುತ್ತಾರೆಂಬ ವರ್ಣನೆಯು ಕೂಡ ಇದೆ. ದ್ರವ್ಯಮಾತ್ರವೆಂದು ಹೇಳುವುದು ಹಾಗೂ ಪರ್ಯಾಯ ಮಾತ್ರವೆಂದು ಹೇಳುವುದು ಅದು ವ್ಯವಹಾರದ ವಿಷಯವಿದೆ. ದ್ರವ್ಯದ್ದೂ ಮತ್ತು ಪರ್ಯಾಯದ್ದೂ ನಿಷೇಧಮಾಡಿ ವಚನ ಅಗೋಚರವೆಂದು ಹೇಳುವುದು ನಿಶ್ಚಯನಯದ ವಿಷಯವಿದೆ ದ್ರವ್ಯರೂಪವಿದೆ ಅದೇ ಪರ್ಯಾಯರೂಪವೆಂದು ಎರಡನ್ನೂ ಮುಖ್ಯ ಮಾಡಿ ಹೇಳುವುದು ಅದು ಪ್ರಮಾಣದ ವಿಷಯವಿದೆ. ಇದರ ಉದಾಹರಣೆಯು ಹೀಗಿದೆ – ಜೀವವನ್ನು ಚೈತನ್ಯರೂಪ, ನಿತ್ಯ , ಏಕ, ಅಸ್ತಿರೂಪ ಇತ್ಯಾದಿ ಅಭೇದ ಮಾತ್ರವೆಂದು ಹೇಳುವುದು ಅದಂತೂ ದ್ರವ್ಯಾರ್ಥಿಕನಯದ ವಿಷಯವಿದೆ, ಮತ್ತು ಜ್ಞಾನ-ದರ್ಶನ ರೂಪ, ಅನಿತ್ಯ , ಅನೇಕ, ನಾಸ್ತಿಸ್ವರೂಪ ಇತ್ಯಾದಿ ಭೇದರೂಪವಾಗಿ ಹೇಳುವುದು ಅದು ಪರ್ಯಾಯಾರ್ಥಿಕ ನಯದ ವಿಷಯವಿದೆ. ಎರಡೂ ಪ್ರಕಾರದ ಮುಖ್ಯತೆಯ ನಿಷೇಧಮಾತ್ರ ವಚನ ಅಗೋಚರವೆಂದು ಹೇಳುವುದು ಅದು ನಿಶ್ಚಯನಯದ ವಿಷಯವಿದೆ, ಎರಡೂ ಪ್ರಕಾರಗಳನ್ನು ಮುಖ್ಯ ಮಾಡಿ ಹೇಳುವುದು ಅದು ಪ್ರಮಾಣದ ವಿಷಯವಿದೆ.

ಹೀಗೆ ನಿಶ್ಚಯ-ವ್ಯವಹಾರದ ಸಾಮಾನ್ಯ ಎಂದರೆ ಸಂಕ್ಷೇಪ ಸ್ವರೂಪವಿದೆ, ಅದನ್ನು ತಿಳಿದುಕೊಂಡು ಹೇಗೆ ಆಗಮ-ಅಧ್ಯಾತ್ಮ ಶಾಸ್ತ್ರಗಳಲ್ಲಿ ವಿಶೇಷರೂಪದಿಂದ ವರ್ಣನೆಯಿದೆ ಅದನ್ನು ಸೂಕ್ಷ್ಮದೃಷ್ಟಿಯಿಂದ ತಿಳಿಯಬೇಕು. ಜಿನಮತವು ಅನೇಕಾಂತಸ್ವರೂಪ ಸ್ಯಾದ್ವಾದವಿದೆ ಮತ್ತು ನಯಗಳ ಆಶ್ರಿತ ಕಥನವಿದೆ. ನಯಗಳಪರಸ್ಪರ ವಿರೋಧವನ್ನು ಸ್ಯಾದ್ವಾದವು ದೂರಮಾಡುತ್ತದೆ, ಇದರ ವಿರೋಧದ ಹಾಗೂ ಅವಿರೋಧದ ಸ್ವರೂಪವನ್ನು ಒಳ್ಳೆಯ ರೀತಿಯಿಂದ ತಿಳಿಯಬೇಕು. ಯಥಾರ್ಥವಂತೂ ಗುರುಪರಂಪರೆಯಿಂದಲೇ ಆಗುತ್ತದೆ ಆದರೆ ಗುರುಗಳ ನಿಮಿತ್ತವು ಈ ಕಾಲದಲ್ಲಿ ವಿರಳವಾಗಿದೆ, ಆದುದರಿಂದ ತಮ್ಮ ಜ್ಞಾನದ ಬಲವು ನಡೆಯುವವರೆಗೆ ವಿಶೇಷ ರೂಪದಿಂದ ತಿಳಿದುಕೊಳ್ಳುತ್ತಲೇ ಇರಬೇಕು, ಯಾವುದೇ ಒಂದಿಷ್ಟು ಜ್ಞಾನಪಡೆದು ಉದ್ಧತರಾಗಬಾರದು, ವರ್ತಮಾನಕಾಲದಲ್ಲಿ ಅಲ್ಪಜ್ಞಾನಿಗಳು ಅಧಿಕರಿರುವುದರಿಂದ ಅವರಿಂದ ಒಂದಿಷ್ಟು ಅಭ್ಯಾಸಮಾಡಿ ಅವರುಗಳಲ್ಲಿ ಮಹಾನರಾಗಿ ಉದ್ಧತರಾದ ಮೇಲೆ ಮದವು ಬಂದುಬಿಡುತ್ತದೆ ಆಗ ಜ್ಞಾನವು ಸ್ಥಗಿತಗೊಳ್ಳುತ್ತದೆ ಮತ್ತು ವಿಶೇಷ ತಿಳಿದುಕೊಳ್ಳುವ ಅಭಿಲಾಷೆ ಉಳಿಯುವುದಿಲ್ಲ ಆಗ ವಿಪರೀತವಾಗಿ ಯದ್ವಾತದ್ವಾ-ಮನಸ್ಸಿಗೆ ಬಂದಹಾಗೆ ಹೇಳಲಾರಂಭಿಸುತ್ತಾನೆ ಅದರಿಂದ ಇತರ ಜೀವರುಗಳ ಶ್ರದ್ಧೆಯು ವಿಪರೀತವಾಗಿ ಹೋಗುತ್ತದೆ ಆಗ ತನ್ನ ಅಪರಾಧದ ಪ್ರಸಂಗ ಬರುತ್ತದೆ, ಆದುದರಿಂದ ಶಾಸ್ತ್ರವನ್ನು ಸಮುದ್ರವೆಂದು ತಿಳಿದುಕೊಂಡು ತನ್ನ ಭಾವವನ್ನು ಅಲ್ಪಜ್ಞರೂಪವಾಗಿಯೇ ಇಡುವುದರಿಂದ ವಿಶೇಷ ತಿಳಿದುಕೊಳ್ಳುವ ಅಭಿಲಾಷೆಯು ಅಖಂಡವಾಗಿರುತ್ತದೆ, ಇದರಿಂದ ಜ್ಞಾನದ ವೃದ್ಧಿಯಾಗುತ್ತದೆ.

ಅಲ್ಪಜ್ಞಾನಿಗಳ ಮಧ್ಯದಲ್ಲಿ ಕುಳಿತುಕೊಂಡು ಶ್ರೇಷ್ಠಬುದ್ಧಿಯನ್ನಿಟ್ಟುಕೊಂಡಾಗ ತಮ್ಮ ಪ್ರಾಪ್ತಜ್ಞಾನವೂ ನಷ್ಟವಾಗಿಬಿಡುತ್ತದೆಯೆಂದು ತಿಳಿದುಕೊಂಡು ನಿಶ್ಚಯ-ವ್ಯವಹಾರರೂಪ ಆಗಮದ ಕಥನ ಪದ್ಧತಿಯನ್ನು ತಿಳಿದುಕೊಂಡು ಅದರ ಶ್ರದ್ಧೆಮಾಡಿ ಯಥಾಶಕ್ತಿ ಆಚರಣೆಮಾಡಬೇಕು. ಈ ಕಾಲದಲ್ಲಿ ಗುರುಸಂಪ್ರದಾಯವಿಲ್ಲದೆ ಶ್ರೇಷ್ಠರಾಗಬಾರದು, ಜಿನಾಜ್ಞೆಯ ಲೋಪಮಾಡಬಾರದು. ನಾವಂತೂ ಪರೀಕ್ಷೆಮಾಡಿ ಜಿನಮತವನ್ನು ಮನ್ನಿಸುವೆವೆಂದು ಕೆಲವರು ಹೇಳುತ್ತಾರೆ, ಆದರೆ ಅವರು ವ್ಯರ್ಥ ಹರಟುತ್ತಾರೆ ಅಲ್ಪಬುದ್ಧಿಯ ಜ್ಞಾನವು ಪರೀಕ್ಷೆ ಮಾಡುವುದಕ್ಕೆ ಯೋಗ್ಯವಿಲ್ಲ. ಆಜ್ಞೆಯನ್ನು ಮುಖ್ಯವಾಗಿಟ್ಟುಕೊಂಡು ಸಾಧ್ಯವಾದಷ್ಟು ಪರೀಕ್ಷೆಮಾಡುವಲ್ಲಿ ದೋಷವಿಲ್ಲ, ಕೇವಲ ಪರೀಕ್ಷೆಯನ್ನೇ ಮುಖ್ಯವಾಗಿಡುವಲ್ಲಿ ಜಿನಮತದಿಂದ ಚ್ಯುತವಾಗಿ ಹೋದರೆ ದೊಡ್ಡ ದೋಷವು ಬರುವುದರಿಂದ ಯಾರದು ತಮ್ಮ ಹಿತ-ಅಹಿತದ ಮೇಲೆ ದೃಷ್ಟಿಯಿದೆ ಅವರಂತೂ ಈ ಪ್ರಕಾರವಾಗಿ ತಿಳಿಯಬೇಕು. ಮತ್ತು ಯಾರಿಗೆ ಅಲ್ಪಜ್ಞಾನಿಗಳಲ್ಲಿ ಶ್ರೇಷ್ಠವೆನಿಸಿಕೊಂಡು ತನ್ನ ಮಾನ, ಲೋಭ, ದೊಡ್ಡಸ್ತನ ಮತ್ತು ವಿಷಯ-ಕಷಾಯಗಳನ್ನೇ ಪುಷ್ಟಮಾಡಿಕೊಳ್ಳುವುದಿದೆ ಇಲ್ಲಿ ಅವರ ಮಾತಿಲ್ಲ, ಅವರಂತೂ ತಮ್ಮ ವಿಷಯ-ಕಷಾಯಗಳು ಹೇಗೆ ಪುಷ್ಟವಾಗುವವೋ ಹಾಗೆಯೇ ಮಾಡುವರು, ಅವರಿಗೆ ಮೋಕ್ಷಮಾರ್ಗದ ಉಪದೇಶವು ಅನ್ವಯಿಸುವುದಿಲ್ಲ, ವಿಪರೀತನಿಗೆ ಯಾವುದರ ಉಪದೇಶ ಮಾಡುವುದು ? ಎಂಬುದಾಗಿ ತಿಳಿದುಕೊಳ್ಳಬೇಕು. ।।೬।।

ಯಾವನು ಸೂತ್ರದ ಅರ್ಥ ಪದದಿಂದ ಭ್ರಷ್ಟನಿದ್ದಾನೆ ಅವನನ್ನು ಮಿಥ್ಯಾದೃಷ್ಟಿಯೆಂದು ತಿಳಿಯಬೇಕೆಂದು ಈಗ ಹೇಳುತ್ತಾರೆ, -

ಸುತ್ತತ್ಥಪಯವಿಣಟ್ಠೋ ಮಿಚ್ಛಾದಿಟ್ಠೀ ಹು ಸೋ ಮುಣೇಯವ್ವೋ ।
ಖೇಡೇ ವಿ ಣ ಕಾಯವ್ವಂ ಪಾಣಿಪ್ಪತ್ತಂ ಸಚೇಲಸ್ಸ ।।೭।।

ಸೂತ್ರಾರ್ಥಪದವಿನಷ್ಟಃ ಮಿಥ್ಯಾದೃಷ್ಟಿಃ ಹಿ ಸಃ ಜ್ಞಾತವ್ಯಃ ।
ಖೇಲೇಽಪಿ ನ ಕರ್ತವ್ಯಂ [೧]ಪಾಣಿಪಾತ್ರಂ ಸಚೇಲಸ್ಯ ।।೭।।

ಅರ್ಥ :- ಯಾವನಿಗೆ ಸೂತ್ರದ ಅರ್ಥ ಮತ್ತು ಪದವು ವಿನಷ್ಟವಿದೆ ಅವನು ಸ್ಪಷ್ಟ ಮಿಥ್ಯಾದೃಷ್ಟಿಯಿರುವುದರಿಂದ ಅವನು ಸಚೇಲನಿದ್ದಾನೆ, ವಸ್ತ್ರಸಹಿತನಿದ್ದಾನೆ ಅವನಿಗೆ 'ಖೇಡೇವಿ' ಎಂದರೆ ಹಾಸ್ಯ ಕುತೂಹಲದಲ್ಲಿ ಕೂಡ ಪಾಣಿಪಾತ್ರ ಎಂದರೆ ಹಸ್ತರೂಪ ಪಾತ್ರದಲ್ಲಿ ಆಹಾರದಾನ ಮಾಡಬಾರದು.

ಭಾವಾರ್ಥ :- ಸೂತ್ರದಲ್ಲಿ ಮುನಿಯರೂಪವನ್ನು ನಗ್ನ ದಿಗಂಬರವೆಂದು ಹೇಳಿದೆ. ಯಾವನಿಗೆ ಇಂಥ ಸೂತ್ರದ ಅರ್ಥ ಹಾಗೂ ಅಕ್ಷರರೂಪ ಪದವು ವಿನಷ್ಟವಿದೆ ಮತ್ತು ತಾನು ವಸ್ತ್ರಧಾರಣ ಮಾಡಿ ಮುನಿಯೆಂದು ಹೇಳಿಕೊಳ್ಳುತ್ತಾನೆ ಅವನು ಜಿನಾಜ್ಞೆಯಿಂದ ಭ್ರಷ್ಟವಾದ ಸ್ಪಷ್ಟ ಮಿಥ್ಯಾದೃಷ್ಟಿಯಿದ್ದಾನೆ, ಆದುದರಿಂದ ವಸ್ತ್ರಸಹಿತನಿಗೆ ಹಾಸ್ಯಕುತೂಹಲದಿಂದ

---

ಸೂತ್ರಾರ್ಥಪದದಿಂದ ಭ್ರಷ್ಟನಿರುವಾಜೀವ ಸ್ಪಷ್ಟಮಿಥ್ಯಾದೃಷ್ಟಿಯಿರುವನು ।
ಪಾತ್ರಕರ ಭೋಜನವೀವುದು ಯೋಗ್ಯವಿಲ್ಲಾ ಸಚೇಲನಿಗೆ ಹಾಸ್ಯದಿಂ ಕೂಡ ।।೭।।

---

೧ 'ಪಾಣಿಪಾತ್ರೇ' ಎಂದು ಪಾಠಾಂತರವಿದೆ.

ಕೂಡ ಪಾಣಿಪಾತ್ರ ಎಂದರೆ ಆಹಾರದಾನ ಮಾಡಬಾರದು ಮತ್ತು ಮಿಥ್ಯಾದೃಷ್ಟಿಯು ಹೀಗೆ ಪಾಣಿಪಾತ್ರದಲ್ಲಿ ಆಹಾರ ತೆಗೆದುಕೊಳ್ಳುವುದು ಯೋಗ್ಯವಿಲ್ಲವೆಂದೂ ಅರ್ಥವಾಗುತ್ತದೆ, ಇಂಥ ವೇಷವನ್ನು ಹಾಸ್ಯ ಕುತೂಹಲದಿಂದಕೂಡ ಧಾರಣ ಮಾಡುವುದು ಯೋಗ್ಯವಿಲ್ಲ, ಏಕೆಂದರೆ ವಸ್ತ್ರಸಹಿತವಿರುವುದು ಮತ್ತು ಪಾಣಿಪಾತ್ರದಲ್ಲಿ ಭೋಜನ ಮಾಡುವುದನ್ನಂತೂ ಕ್ರೀಡಾಮಾತ್ರವಾಗಿಯೂ ಮಾಡಬಾರದು. ॥೭॥

ಜಿನಸೂತ್ರದಲ್ಲಿ ಭ್ರಷ್ಟರಿದ್ದವರು ಹರಿ-ಹರಾದಿಕ ಸಮಾನವಾಗಿದ್ದರೂ ಕೂಡ ಅವರು ಮೋಕ್ಷ ಪಡೆಯುವುದಿಲ್ಲವೆಂಬುದನ್ನು ಈಗ ಹೇಳುತ್ತಾರೆ, -

**ಹರಿಹರತುಲ್ಲೋ ವಿ ಣರೋ ಸಗ್ಗಂ ಗಚ್ಛೇಇ ಏಇ ಭವಕೋಡೀ ।**
**ತಹ ವಿ ಣ ಪಾವಇ ಸಿದ್ಧಿಂ ಸಂಸಾರತ್ಥೋ ಪುಣೋ ಭಣಿದೋ ॥೮॥**

**ಹರಿಹರತುಲ್ಯೋऽಪಿ ನರಃ ಸ್ವರ್ಗಂ ಗಚ್ಛತಿ ಏತಿ ಭವಕೋಟಿಃ ।**
**ತಥಾಪಿ ನ ಪ್ರಾಪ್ನೋತಿ ಸಿದ್ಧಿಂ ಸಂಸಾರಸ್ಥಃ ಪುನಃ ಭಣಿತಃ ॥೮॥**

ಅರ್ಥ :- ಯಾವ ಮನುಷ್ಯನು ಸೂತ್ರದ ಅರ್ಥ ಪದದಿಂದ ಭ್ರಷ್ಟನಿದ್ದಾನೆ ಅವನು ಹರಿ ಎಂದರೆ ನಾರಾಯಣ ಹರ ಎಂದರೆ ರುದ್ರ ಇವರ ಸಮಾನನಿದ್ದರೂ ಕೂಡ, ಅನೇಕ ಋದ್ಧಿಸಂಯುಕ್ತನಿದ್ದರೂ ಕೂಡ, ಸಿದ್ಧಿ ಎಂದರೆ ಮೋಕ್ಷವನ್ನು ಪಡೆದುಕೊಳ್ಳಲಾರನು. ಒಂದುವೇಳೆ ಕಥಂಚಿತ್ ದಾನ ಪೂಜಾದಿಗಳನ್ನು ಮಾಡಿ ಪುಣ್ಯೋಪಾರ್ಜನೆ ಮಾಡಿಕೊಂಡು ಸ್ವರ್ಗಕ್ಕೆ ಹೊರಟು ಹೋಗಬಹುದು, ಆದಾಗ್ಯೂ ಅಲ್ಲಿಂದ ಚಲಿಸಿ ಕೋಟ್ಯಂತರ ಭವಗಳನ್ನು ತೆಗೆದುಕೊಂಡು ಸಂಸಾರದಲ್ಲಿಯೇ ಉಳಿಯುತ್ತಾನೆಂದು ಜಿನಾಗಮದಲ್ಲಿ ಹೇಳಿದೆ.

ಭಾವಾರ್ಥ :- ಗೃಹಸ್ಥ ಮೊದಲಾದ ವಸ್ತ್ರಸಹಿತರಿಗೂ ಮೋಕ್ಷವಾಗುತ್ತದೆಯೆಂದು ಸೂತ್ರದಲ್ಲಿ ಹೇಳಿದೆಯೆಂದು ಶ್ವೇತಾಂಬರಾದಿಗಳು ಹೇಳುತ್ತಾರೆ. ಈ ಗಾಥೆಯಲ್ಲಿ ಹರಿಹರ ಮೊದಲಾದ ದೊಡ್ಡ ಸಾಮರ್ಥ್ಯದ ಧಾರಕರಿದ್ದರೂ ವಸ್ತ್ರ ಸಹಿತರಿದ್ದರೆ ಅವರು ಮೋಕ್ಷ ಪಡೆಯುವುದಿಲ್ಲವೆಂದು ಹೇಳಿ ಅದರ ನಿಷೇಧ ಮಾಡಿದ್ದಾರೆ. ಶ್ವೇತಾಂಬರರು ಕಲ್ಪಿತ ಸೂತ್ರ ರಚಿಸಿದ್ದಾರೆ ಅವುಗಳಲ್ಲಿ ಬರೆದಿರುವುದು ಪ್ರಮಾಣಭೂತವಾಗಿಲ್ಲ, ಆ ಶ್ವೇತಾಂಬರರು ಜಿನಸೂತ್ರದ ಅರ್ಥಪದದಿಂದ ಚ್ಯುತರಾಗಿ ಹೋಗಿದ್ದಾರೆಂದು ತಿಳಿದುಕೊಳ್ಳಬೇಕು. ॥೮॥

ಯಾರು ಜಿನಸೂತ್ರದಿಂದ ಚ್ಯುತರಾಗಿ ಹೋಗಿದ್ದಾರೆ ಅವರು ಸ್ವಚ್ಛಂದರಾಗಿ ಪ್ರವರ್ತಿಸುತ್ತಾರೆ, ಅವರು ಮಿಥ್ಯಾದೃಷ್ಟಿಗಳಿದ್ದಾರೆಂದು ಈಗ ಹೇಳುತ್ತಾರೆ, -

**ಉಕ್ಕಿಟ್ಠಸೀಹಚರಿಯಂ ಬಹುಪರಿಯಮ್ಮೋ ಯ ಗರುಯಭಾರೋ ಯ ।**
**ಜೋ ವಿಹರಇ ಸಚ್ಛಂದಂ ಪಾವಂ ಗಚ್ಛಂದಿ ಹೋದಿ ಮಿಚ್ಛತ್ತಂ ॥೯॥**

---

**ಹರಿಹರತುಲ್ಯನಿದ್ದರು ಸ್ವರ್ಗ ಪಡೆವನು ಕೋಟಿ ಕೋಟಿ ಭವಗಳಲಿ ।**
**ತಿರುಗುವನು ಸಂಸಾರದಲಾದರೆ ಸಿದ್ಧಿಯಿಲ್ಲೆಂದು ಆಗಮ ಹೇಳುವುದು ॥೮॥**

**ಬಹುಪರಿಕರ್ಮ ಉತ್ಕೃಷ್ಟಸಿಂಹಚಾರಿತ್ರ ಮೇಣ್ಗುರು ಭಾರಧಾರಕನಿದ್ದು ।**
**ವಿಹರಿಸಿದರವನು ಸ್ವಚ್ಛಂದ ಪಾಪಮೇಣ್ಮಿಥ್ಯಾತ್ವವನೇ ಪಡೆಯುವನು ॥೯॥**

**ಉತ್ಕೃಷ್ಟ ಸಿಂಹಚರಿತಃ ಬಹುಪರಿಕರ್ಮಾ ಚ ಗುರುಭಾರಶ್ಚ ।**
**ಯಃ ವಿಹರತಿ ಸ್ವಚ್ಛಂದಂ ಪಾಪಂ ಗಚ್ಛತಿ ಭವತಿ ಮಿಥ್ಯಾತ್ವಮ್ ॥೯॥**

ಅರ್ಥ ಃ- ಯಾವನು ಮುನಿಯಾಗಿ ಉತ್ಕೃಷ್ಟ ಸಿಂಹದ ಸಮಾನ ನಿರ್ಭಯನಾಗಿ ಆಚರಣೆ ಮಾಡುತ್ತಾನೆ ಮತ್ತು ಅಧಿಕ ಪರಿಕರ್ಮ ಎಂದರೆ ತಪಶ್ಚರಣ ಮೊದಲಾದ ಕ್ರಿಯಾ ವಿಶೇಷಗಳಿಂದ ಯುಕ್ತನಿದ್ದಾನೆ ಹಾಗೂ ಗುರುವಿನ ಭಾರ ಎಂದರೆ ದೊಡ್ಡ ಪದಸ್ಥರೂಪನಿದ್ದಾನೆ, ಸಂಘದ ನಾಯಕನೆನಿಸಿಕೊಳ್ಳುತ್ತಾನೆ, ಆದರೆ ಜಿನ ಸೂತ್ರದಿಂದ ಚ್ಯುತನಾಗಿ ಸ್ವಚ್ಛಂದವಾಗಿ ಪ್ರವರ್ತಿಸುತ್ತಿದ್ದರೆ ಅವನು ಪಾಪಕ್ಕೇನೇ ಪ್ರಾಪ್ತನಾಗುತ್ತಾನೆ ಮತ್ತು ಮಿಥ್ಯಾತ್ವಕ್ಕೆ ಪ್ರಾಪ್ತನಾಗುತ್ತಾನೆ.

ಭಾವಾರ್ಥ ಃ- ಯಾವನು ಧರ್ಮದ ನಾಯಕತನವನ್ನು ಸ್ವೀಕರಿಸಿ-ಗುರುವಾಗಿ ನಿರ್ಭಯನಿರುವನು ತಪಶ್ಚರಣ ಮೊದಲಾದವುಗಳಿಂದ ದೊಡ್ಡವನೆನಿಸಿಕೊಂಡು ತನ್ನ ಸಂಪ್ರದಾಯವನ್ನು ನಡೆಸುತ್ತಾನೆ, ಜಿನ ಸೂತ್ರದಿಂದ ಚ್ಯುತನಾಗಿ ಸ್ವಚ್ಛಂದವಾಗಿ ಪ್ರವರ್ತಿಸುತ್ತಿದ್ದರೆ ಆ ಪಾಪಿಯು ಮಿಥ್ಯಾದೃಷ್ಟಿಯೇ ಇದ್ದಾನೆ ಅವನ ಸಂಬಂಧ ಕೂಡ ಶ್ರೇಷ್ಠವಿಲ್ಲ, ಒಳ್ಳೆಯದಲ್ಲ. ॥೯॥

ಜಿನಸೂತ್ರದಲ್ಲಿ ಹೀಗೆ ಮೋಕ್ಷ ಮಾರ್ಗ ಹೇಳಿದೆಯೆಂದು ಈಗ ಹೇಳುತ್ತಾರೆ, -

**ಣಿಚ್ಚೇಲಪಾಣಿಪತ್ತಂ ಉವಇಟ್ಠಂ ಪರಮಜಿಣವರಿಂದೇಹಿಂ ।**
**ಏಕ್ಕೋ ವಿ ಮೋಕ್ಖಮಗ್ಗೋ ಸೇಸಾ ಯ ಅಮಗ್ಗಯಾ ಸವ್ವೇ ॥೧೦॥**

**ನಿಶ್ಚೇಲಪಾಣಿಪಾತ್ರಂ ಉಪದಿಷ್ಟಂ ಪರಮಜಿನವರೇಂದ್ರೈಃ ।**
**ಏಕೋಽಪಿ ಮೋಕ್ಷಮಾರ್ಗಃ ಶೇಷಾಶ್ಚ ಅಮಾರ್ಗಾಃ ಸರ್ವೇ ॥೧೦॥**

ಅರ್ಥ ಃ- ಆ ನಿಶ್ಚೇಲ ಎಂದರೆ ವಸ್ತ್ರರಹಿತ ದಿಗಂಬರ ಮುದ್ರಾಸ್ವರೂಪ ಮತ್ತು ಪಾಣಿಪಾತ್ರ ಎಂದರೆ ಹಸ್ತರೂಪದ ಪಾತ್ರೆಯಲ್ಲಿ ಎದ್ದು ನಿಂತುಕೊಂಡು ಆಹಾರ ಮಾಡುವುದು ಈ ಪ್ರಕಾರ ಒಂದು ಅದ್ವಿತೀಯ ಮೋಕ್ಷಮಾರ್ಗವನ್ನು ತೀರ್ಥಂಕರ ಪರಮದೇವರಾದ ಜಿನೇಂದ್ರರು ಉಪದೇಶ ಮಾಡಿದ್ದಾರೆ ಇದರ ಹೊರತಾಗಿ ಅನ್ಯ ರೀತಿಯ ಮಾರ್ಗಗಳೆಲ್ಲವು ಅಮಾರ್ಗವಿವೆ.

ಭಾವಾರ್ಥ ಃ- ಯಾರು ಮೃಗಚರ್ಮ, ವೃಕ್ಷದ ವಲ್ಕಲ, ನೂಲಿನ ಬಟ್ಟೆ, ದುಕೂಲ, ರೋಮವಸ್ತ್ರ, ನಾರಿನಬಟ್ಟೆ ಮತ್ತು ಹುಲ್ಲಿನಬಟ್ಟೆ ಇತ್ಯಾದಿಗಳನ್ನು ಇಟ್ಟುಕೊಂಡು ತಮ್ಮನ್ನು ಮೋಕ್ಷಮಾರ್ಗಿಗಳೆಂದು ಮನ್ನಿಸುತ್ತಾರೆ ಮತ್ತು ಈ ಕಾಲದಲ್ಲಿ ಜಿನಸೂತ್ರದಿಂದ ಚ್ಯುತರಾಗಿದ್ದಾರೆ, ಅವರು ತಮ್ಮ ಇಚ್ಛೆಯಿಂದ ಅನೇಕ ವೇಷ ಬಳಸಿದ್ದಾರೆ, ಕೆಲವರು ಶ್ವೇತವಸ್ತ್ರವನ್ನಿಟ್ಟುಕೊಳ್ಳುತ್ತಾರೆ, ಕೆಲವರು ರಕ್ತ ವಸ್ತ್ರ, ಕೆಲವರು ಹಳದಿ ವಸ್ತ್ರ, ಕೆಲವರು ನಾರುಬಟ್ಟೆ, ಕೆಲವರು ಹುಲ್ಲುಬಟ್ಟೆ ಮತ್ತು ಕೆಲವರು ರೋಮ ವಸ್ತ್ರಾದಿಗಳನ್ನು ಇಟ್ಟುಕೊಳ್ಳುತ್ತಾರೆ ಅವರಿಗೆ ಮೋಕ್ಷಮಾರ್ಗವಿಲ್ಲ, ಏಕೆಂದರೆ ಜಿನಸೂತ್ರದಲ್ಲಂತೂ

---

**ಕರಪಾತ್ರತ್ವಮೇಣ್ನಿಶ್ಚೇಲವಾದೊಂದು ಮುಕ್ತಿಮಾರ್ಗವನುಪದೇಶಿಸಿಹರು ।**
**ಪರಮಜಿನವರೇಂದ್ರರು ಇದನುಳಿದೆಲ್ಲವು ಅಮಾರ್ಗಗಳಿರುವವು ॥೧೦॥**

ಒಂದು ನಗ್ನ ದಿಗಂಬರ ಸ್ವರೂಪ, ಪಾಣಿಪಾತ್ರದಲ್ಲಿ ಭೋಜನ ಮಾಡುವುದನ್ನು ಮೋಕ್ಷಮಾರ್ಗದಲ್ಲಿ ಹೇಳಿದೆ, ಇತರ ಯಾವ ವೇಷಗಳು ಮೋಕ್ಷಮಾರ್ಗವಿಲ್ಲ ಮತ್ತು ಅವನ್ನು ಯಾರು ಮನ್ನಿಸುತ್ತಾರೆ ಅವರು ಮಿಥ್ಯಾದೃಷ್ಟಿಯಿದ್ದಾರೆ. ||೧೦||

ಈಗ ದಿಗಂಬರ ಮೋಕ್ಷಮಾರ್ಗದ ಪ್ರವೃತ್ತಿಯನ್ನು ಹೇಳುತ್ತಾರೆ, –

**ಜೋ ಸಂಜಮೇಸು ಸಹಿಓ ಆರಂಭಪರಿಗ್ಗಹೇಸು ವಿರಓ ವಿ ।**
**ಸೋ ಹೋಇ ವಂದಣೀಓ ಸಸುರಾಸುರಮಾಣುಸೇ ಲೋಏ ||೧೧||**

**ಯಃ ಸಂಯಮೇಷು ಸಹಿತಃ ಆರಂಭಪರಿಗ್ರಹೇಷು ವಿರತಃ ಅಪಿ ।**
**ಸಃ ಭವತಿ ವಂದನೀಯಃ ಸಸುರಾಸುರಮಾನುಷೇ ಲೋಕೇ ||೧೧||**

ಅರ್ಥ ಃ– ಆ ದಿಗಂಬರ ಮುದ್ರೆಯನ್ನು ಧರಿಸಿದ ಮುನಿಯು ಇಂದ್ರಿಯ–ಮನಸ್ಸುಗಳನ್ನು ವಶದಲ್ಲಿಟ್ಟು ಕೊಳ್ಳುವುದು, ಷಟ್‌ಕಾಯ ಜೀವಗಳ ಮೇಲೆ ದಯೆದೋರುವುದು, ಸಂಯಮ ಸಹಿತವಿರುವುದು ಮತ್ತು ಆರಂಭ ಎಂದರೆ ಗೃಹಸ್ಥರ ಎಲ್ಲ ಆರಂಭಗಳಿಂದ ಹಾಗೂ ಬಾಹ್ಯಾಭ್ಯಂತರ ಪರಿಗ್ರಹಗಳಿಂದ ವಿರಕ್ತವಿದ್ದು ಅವುಗಳಲ್ಲಿ ಪ್ರವರ್ತಿಸದಿರುವುದು ಮತ್ತು ಆದಿ ಶಬ್ದದಿಂದ ಬ್ರಹ್ಮಚರ್ಯ ಮೊದಲಾದ ಗುಣಗಳಿಂದ ಯುಕ್ತನಿದ್ದರೆ ಅವನು ದೇವ–ದಾನವ ಸಹಿತವಾದ ಮನುಷ್ಯ ಲೋಕದಲ್ಲಿ ವಂದನೆಯೋಗ್ಯನಿದ್ದಾನೆ, ಅನ್ಯವೇಷಧಾರಿಗಳು ಪರಿಗ್ರಹ ಆರಂಭಾದಿಗಳಿಂದ ಯುಕ್ತರಾದ ಪಾಖಂಡಿಗಳು (ಕಪಟಿಗಳು) ವಂದನೆಗೆ ಯೋಗ್ಯರಾಗಿಲ್ಲ. ||೧೧||

ಪುನಃ ಅವರ ಪ್ರವೃತ್ತಿಯ ವಿಶೇಷತೆಯನ್ನು ಹೇಳುತ್ತಾರೆ, –

**ಜೇ ಬಾವೀಸಪರೀಸಹ ಸಹಂತಿ ಸತ್ತೀಸಏಹಿಂ ಸಂಜುತ್ತಾ ।**
**ತೇ [೧]ಹೋಂತಿ ವಂದಣೀಯಾ ಕಮ್ಮಕ್ಖಯಣಿಜ್ಜರಾಸಾಹೂ ||೧೨||**

**ಯೇ ದ್ವಾವಿಂಶತಿಪರೀಷಹಾನ್ ಸಹಂತೇ ಶಕ್ತಿ ಶತೈಃ ಸಂಯುಕ್ತಾಃ ।**
**ತೇ ಭವಂತಿ ವಂದನೀಯಾಃ ಕರ್ಮಕ್ಷಯನಿರ್ಜರಾಸಾಧವಃ ||೧೨||**

ಅರ್ಥ ಃ– ಯಾವ ಸಾಧು ಮುನಿಗಳು ತಮ್ಮ ನೂರಾರು ಶಕ್ತಿಗಳಿಂದ ಯುಕ್ತರಾಗುತ್ತ ಕ್ಷುಧೆ, ತೃಷೆ ಮೊದಲಾದ ಇಪ್ಪತ್ತೆರಡು ಪರೀಷಹಗಳನ್ನು ಸಹನೆ ಮಾಡುತ್ತಾರೆ ಮತ್ತು ಕರ್ಮಗಳ ಕ್ಷಯರೂಪವಾದ ನಿರ್ಜರೆಯನ್ನು ಮಾಡುವಲ್ಲಿ ಪ್ರವೀಣರಿದ್ದಾರೆ ಆ ಸಾಧುಗಳು ವಂದನೆಗೆ ಯೋಗ್ಯರಿದ್ದಾರೆ.

---

**ಯಾವನು ಸಂಯಮಯುಕ್ತ ಮೇಣಾರಂಭ ಪರಿಗ್ರಹದಿ ವಿರಕ್ತನಿರುವನು ।**
**ಅವನು ದೇವದಾನವ ಸಹಿತ ಮನುಷ್ಯ ಲೋಕದಲಿ ವಂದ್ಯನಿರುವನು ||೧೧||**

**ದ್ವಾವಿಂಶತಿ ಪರೀಷಹ ಸಹಿಸುವನು ಶಕ್ತಿಶತಸಂಯುಕ್ತನಿರುವನು ।**
**ತವೆ ಕರ್ಮಕ್ಷಯ ಮೇಣ್ನಿರ್ಜರೆಯಲಿ ನಿಪುಣನಾದಾಮುನಿವಂದ್ಯನಿಹನು ||೧೨||**

---

೧ 'ಹೋಂದಿ' – ಎಂದು ಪಾಠಾಂತರವಿದೆ.

ಭಾವಾರ್ಥ ಃ- ಯಾರು ಅಧಿಕ ಶಕ್ತಿಯ ಧಾರಕರಾದ ಸಾಧುಗಳಿದ್ದಾರೆ ಅವರು ಪರೀಷಹಗಳನ್ನು ಸಹಿಸುತ್ತಾರೆ, ಪರೀಷಹಗಳು ಬಂದಮೇಲೆ ತಮ್ಮ ಪದದಿಂದ ಚ್ಯುತರಾಗುವುದಿಲ್ಲ ಅವರಿಗೆ ಕರ್ಮಗಳ ನಿರ್ಜರೆಯಾಗುತ್ತದೆ, ಅವರು ವಂದನೆಗೆ ಯೋಗ್ಯರಿದ್ದಾರೆ. ||೧೨||

ಆ ದಿಗಂಬರ ಮುದ್ರೆಯ ಹೊರತಾಗಿ ಯಾರು ವಸ್ತ್ರಧಾರಣ ಮಾಡುತ್ತಾರೆ, ಸಮ್ಯಗ್ದರ್ಶನ-ಜ್ಞಾನಗಳಿಂದ ಯುಕ್ತರಿದ್ದಾರೆ ಅವರು ಇಚ್ಛಾಕಾರ ಮಾಡಲು ಯೋಗ್ಯರಿದ್ದಾರೆಂದು ಈಗ ಹೇಳುತ್ತಾರೆ, -

ಅವಸೇಸಾ ಜೇ ಲಿಂಗೀ ದಂಸಣಣಾಣೇಣ ಸಮ್ಮ ಸಂಜುತ್ತಾ |
ಚೇಲೇಣ ಯ ಪರಿಗಹಿಯಾ ತೇ ಭಣಿಯಾ ಇಚ್ಛಣಿಜ್ಜಾ ಯ ||೧೩||

ಅವಶೇಷಾ ಯೇ ಲಿಂಗಿನಃ ದರ್ಶನಜ್ಞಾನೇನ ಸಮ್ಯಕ್ ಸಂಯುಕ್ತಾ |
ಚೇಲೇನ ಚ ಪರಿಗೃಹೀತಾಃ ತೇ ಭಣಿತಾ ಇಚ್ಛಾಕಾರಯೋಗ್ಯಾಃ ||೧೩||

ಅರ್ಥ ಃ- ದಿಗಂಬರ ಮುದ್ರೆಯ ಹೊರತಾಗಿ ಆ ಉಳಿದ ಲಿಂಗ ವೇಷ ಸಂಯುಕ್ತರಿದ್ದಾರೆ ಮತ್ತು ಸಮ್ಯಕ್ತ್ವ ಸಹಿತ ದರ್ಶನ ಜ್ಞಾನ ಸಂಯುಕ್ತರಿದ್ದಾರೆ ಮತ್ತು ವಸ್ತ್ರದಿಂದ ಪರಿಗ್ರಹೀತರಿದ್ದಾರೆ, ವಸ್ತ್ರಧಾರಣ ಮಾಡುತ್ತಾರೆ ಅವರು ಇಚ್ಛಾಕಾರಮಾಡಲು ಯೋಗ್ಯರಿದ್ದಾರೆ.

ಭಾವಾರ್ಥ ಃ- ಯಾರು ಸಮ್ಯಗ್ದರ್ಶನ ಜ್ಞಾನ ಸಂಯುಕ್ತರಿದ್ದಾರೆ ಮತ್ತು ಉತ್ಕೃಷ್ಟ ಶ್ರಾವಕರ ವೇಷ ಧಾರಣ ಮಾಡುತ್ತಾರೆ, ಒಂದು ವಸ್ತ್ರ ಮಾತ್ರ ಪರಿಗ್ರಹವಿಟ್ಟುಕೊಳ್ಳುತ್ತಾರೆ ಅವರು ಇಚ್ಛಾಕಾರ ಮಾಡಲು ಯೋಗ್ಯರಿರುವುದರಿಂದ 'ಇಚ್ಛಾಮಿ' ಎಂದು ಹೇಳುತ್ತಾರೆ. ನಾನು ತಮ್ಮನ್ನು ಇಚ್ಛಿಸುತ್ತೇನೆ, ಅಪೇಕ್ಷಿಸುತ್ತೇನೆಂದು 'ಇಚ್ಛಾಮಿ' ಶಬ್ದದ ಅರ್ಥವಿದೆ. ಈ ಪ್ರಕಾರದಿಂದ ಇಚ್ಛಾಕಾರ ಮಾಡಬೇಕೆಂದು ಜಿನಸೂತ್ರದಲ್ಲಿ ಹೇಳಿದೆ. ||೧೩||

ಈಗ ಇಚ್ಛಾಕಾರಕ್ಕೆ ಯೋಗ್ಯನಾದ ಶ್ರಾವಕನ ಸ್ವರೂಪವನ್ನು ಹೇಳುತ್ತಾರೆ, -

ಇಚ್ಛಾಯಾರಮಹತ್ಥಂ ಸುತ್ತಠಿಓ ಜೋ ಹು ಛಂಡಏ ಕಮ್ಮಂ |
ಠಾಣೇ ಟ್ಠಿಯಸಮ್ಮತ್ತಂ ಪರಲೋಯಸುಹಂಕರೋ ಹೋದಿ ||೧೪||

ಇಚ್ಛಾಕಾರಮಹಾರ್ಥಂ ಸೂತ್ರಸ್ಥಿತಃ ಯಃ ಸ್ಫುಟಂ ತ್ಯಜತಿ ಕರ್ಮ |
ಸ್ಥಾನೇ ಸ್ಥಿತಸಮ್ಯಕ್ತ್ವಃ ಪರಲೋಕಸುಖಂಕರಃ ಭವತಿ ||೧೪||

---

ಅವಶೇಷ ಲಿಂಗಿಗಳವರು ಸಮ್ಯಕ್‌ದರ್ಶನ ಜ್ಞಾನದಿಂ ಸಂಯುಕ್ತರಿದ್ದು |
ಆ ವಸ್ತ್ರದಿಂ ಪರಿಗ್ರಹೀತರಿದ್ದವರು ಇಚ್ಛಾಕಾರಕೆ ಯೋಗ್ಯರಿರುವರು ||೧೩||

ಯಾವನು ಸೂತ್ರಸ್ಥಿತ ಸಮ್ಯಕ್ತ್ವ ಸಹಿತನಿದ್ದು ಕರ್ಮಗಳ ತ್ಯಜಿಸುವನು |
ಅವನು 'ಇಚ್ಛಾಮಿ' ಯೋಗ್ಯನಿದ್ದು ಪರಲೋಕದಲಿ ಸುಖವ ಪಡೆಯುವನು ||೧೪||

ಅರ್ಥ ಃ- ಯಾವ ಪುರುಷನು ಜಿನಸೂತ್ರದಲ್ಲಿ ಸ್ಥಿರಗೊಳ್ಳುತ್ತ ಇಚ್ಛಾಕಾರ ಶಬ್ದದ ಮಹಾನ ಮುಖ್ಯ ಅರ್ಥವನ್ನು ತಿಳಿಯುತ್ತಾನೆ ಮತ್ತು ಸ್ಥಾನ ಎಂದರೆ ಶ್ರಾವಕನ ಭೇದರೂಪವಾದ ಪ್ರತಿಮೆಗಳಲ್ಲಿ ಸ್ಥಿರಗೊಳ್ಳುತ್ತ ಸಮ್ಯಕ್ತ್ವ ಸಹಿತವಾಗಿ ವರ್ತಿಸುತ್ತಾನೆ, ಆರಂಭ ಮೊದಲಾದ ಕರ್ಮಗಳನ್ನು ಬಿಟ್ಟುಕೊಡುತ್ತಾನೆ ಅವನು ಪರಲೋಕದಲ್ಲಿ ಸುಖಮಾಡಿ-ಕೊಳ್ಳುವಂಥವನಾಗುತ್ತಾನೆ.

ಭಾವಾರ್ಥ ಃ- ಉತ್ಕೃಷ್ಟ ಶ್ರಾವಕನಿಗೆ ಇಚ್ಛಾಕಾರ ಮಾಡುತ್ತಾನೆ, ಆದರೆ ಯಾವನು ಇಚ್ಛಾಕಾರದ ಮುಖ್ಯ ಅರ್ಥವನ್ನು ತಿಳಿಯುತ್ತಾನೆ ಮತ್ತು ಸೂತ್ರದ ಅನುಸಾರ ಸಮ್ಯಕ್ತ್ವ ಸಹಿತನಿದ್ದು ಆರಂಭ ಮೊದಲಾದವುಗಳನ್ನು ಬಿಟ್ಟುಕೊಟ್ಟು ಉತ್ಕೃಷ್ಟ ಶ್ರಾವಕನಾಗುತ್ತಾನೆ ಅವನು ಪರಲೋಕದಲ್ಲಿ ಸ್ವರ್ಗದ ಸುಖವನ್ನು ಪಡೆಯುತ್ತಾನೆ. ।।೧೪।।

ಯಾವನು ಇಚ್ಛಾಕಾರದ ಮುಖ್ಯ ಅರ್ಥವನ್ನು ತಿಳಿಯುವುದಿಲ್ಲ ಮತ್ತು ಅನ್ಯ ಧರ್ಮದ ಆಚರಣೆ ಮಾಡುತ್ತಾನೆ ಅವನು ಸಿದ್ಧಿಯನ್ನು ಪಡೆಯುವುದಿಲ್ಲವೆಂದು ಈಗ ಹೇಳುತ್ತಾರೆ, -

**ಅಹ ಪುಣ ಅಪ್ಪಾ ಣಿಚ್ಛದಿ ಧಮ್ಮಾಇಂ ಕರೇಇ ಣಿರವಸೇಸಾಇಂ ।**
**ತಹ ವಿ ಣ ಪಾವದಿ ಸಿದ್ಧಿಂ ಸಂಸಾರತ್ಥೋ ಪುಣೋ ಭಣಿದೋ ।।೧೫।।**

**ಅಥ ಪುನಃ ಆತ್ಮಾನಂ ನೇಚ್ಛತಿ ಧರ್ಮಾನ್ ಕರೋತಿ ನಿರವಶೇಷಾನ್ ।**
**ತಥಾಪಿ ನ ಪ್ರಾಪ್ನೋತಿ ಸಿದ್ಧಿಂ ಸಂಸಾರಸ್ಥಃ ಪುನಃ ಭಣಿತಃ ।।೧೫।।**

ಅರ್ಥ ಃ- 'ಅಥ ಪುನಃ' ಶಬ್ದದ ಅರ್ಥವು ಹೀಗಿದೆ - ಯಾವನು ಇಚ್ಛಾಕಾರದ ಮುಖ್ಯ ಅರ್ಥವನ್ನು ತಿಳಿಯುತ್ತಾನೆ ಅವನು ಆಚರಣೆ ಮಾಡಿ ಸ್ವರ್ಗಸುಖ ಪಡೆಯುತ್ತಾನೆಂದು ಮೊದಲನೇ ಗಾಥೆಯಲ್ಲಿ ಹೇಳಿತ್ತು, ಅದನ್ನೇ ಈಗ ಮತ್ತೆ ಹೇಳುತ್ತಾರೆ. ಇಚ್ಛಾಕಾರದ ಮುಖ್ಯ ಅರ್ಥವು ಆತ್ಮನನ್ನು ಅಪೇಕ್ಷಿಸುವುದಿದೆ, ತನ್ನ ಸ್ವರೂಪದಲ್ಲಿ ರುಚಿಮಾಡುವುದಿದೆ ಯಾವನು ಇದನ್ನು ಇಷ್ಟಮಾಡುವುದಿಲ್ಲ ಮತ್ತು ಅನ್ಯಧರ್ಮದ ಸಮಸ್ತ ಆಚರಣೆ ಮಾಡುತ್ತಿದ್ದರೂ ಕೂಡ ಸಿದ್ಧಿ ಎಂದರೆ ಮೋಕ್ಷವನ್ನು ಪಡೆಯುವುದಿಲ್ಲ ಮತ್ತು ಅವನನ್ನು ಸಂಸಾರದಲ್ಲಿಯೇ ಇರುವವನೆಂದು ಹೇಳಿದೆ.

ಭಾವಾರ್ಥ ಃ- ಇಚ್ಛಾಕಾರದ ಮುಖ್ಯ ಅರ್ಥವು ತನ್ನನ್ನು ಅಪೇಕ್ಷಿಸುವುದಿದೆ, ಆದರೆ ಯಾವನಿಗೆ ತನ್ನ ಸ್ವರೂಪದ ರುಚಿರೂಪವಾದ ಸಮ್ಯಕ್ತ್ವವಿಲ್ಲ ಅವನ ಸಮಸ್ತ ಮುನಿ-ಶ್ರಾವಕರ ಆಚರಣರೂಪವಾದ ಪ್ರವೃತ್ತಿಗಳು ಮೋಕ್ಷದ ಕಾರಣವಾಗಿಲ್ಲ. ।।೧೫।।

ಈಗ ಇದರದೇ ಅರ್ಥವನ್ನು ದೃಢಮಾಡಿ ಉಪದೇಶ ಮಾಡುತ್ತಾರೆ, -

**ಏಏಣ ಕಾರಣೇಣ ಯ ತಂ ಅಪ್ಪಾ ಸದ್ದಹೇಹ ತಿವಿಹೇಣ ।**
**ಜೇಣ ಯ ಲಹೇಹ ಮೋಕ್ಖಂ ತಂ ಜಾಣಿಜ್ಜಹ ಪಯತ್ತೇಣ ।।೧೬।।**

---

ಆದರೆ ಆತ್ಮನನು ಇಚ್ಛಿಸದೆ ಬೇಕಾದರಶೇಷ ಧರ್ಮಗಳ ಮಾಡಲಿ ।
ಆದರವನು ಸಿದ್ಧಿಯನು ಪಡೆಯದೆ ಮತ್ತೆ ಸಂಸಾರದೊಳು ಸುತ್ತುವನು ।।೧೫।।

ಈ ಕಾರಣದಿ ನೀವು ಆತ್ಮನ ಶ್ರದ್ಧೆ ಮಾಡಿರಿ ಮನವಚನಕಾಯದಿಂದ ।
ಈ ಕಾರಣದಿ ಮೋಕ್ಷ ಪಡೆಯಿರಿ, ತಿಳಿಯಿರಿ ಆತ್ಮನನು ಪ್ರಯತ್ನದಿಂದ ।।೧೬।।

**ಏತೇನ ಕಾರಣೇನ ಚ ತಂ ಆತ್ಮಾನಂ ಶ್ರದ್ಧತ್ತ ತ್ರಿವಿಧೇನ ।**
**ಯೇನ ಚ ಲಭಧ್ವಂ ಮೋಕ್ಷಂ ತಂ ಜಾನೀತ ಪ್ರಯತ್ನೇನ ।।೧೬।।**

ಅರ್ಥ :- ಯಾವನು ಆತ್ಮನನ್ನು ಇಷ್ಟಮಾಡುವುದಿಲ್ಲ ಅವನಿಗೆ ಸಿದ್ಧಿಯಿಲ್ಲವೆಂದು ಮೊದಲು ಹೇಳಿದೆ ; ಇದೇ ಕಾರಣದಿಂದ ಎಲೈ ಭವ್ಯ ಜೀವರುಗಳೇ ! ತಾವು ಆ ಆತ್ಮನ ಶ್ರದ್ಧೆ ಮಾಡಿರಿ, ಅವನ ನಂಬುಗೆ ಮಾಡಿರಿ, ಮನ-ವಚನ-ಕಾಯದಿಂದ ಸ್ವರೂಪದಲ್ಲಿ ರುಚಿಮಾಡಿರಿ, ಈ ಕಾರಣದಿಂದ ಮೋಕ್ಷವನ್ನು ಪಡೆಯಿರಿ, ಮತ್ತು ಯಾವುದರಿಂದ ಮೋಕ್ಷ ಪಡೆಯುತ್ತಾರೆ ಅದನ್ನು ಪ್ರಯತ್ನಪೂರ್ವಕವಾಗಿ ಎಲ್ಲ ಪ್ರಕಾರ ಉದ್ಯಮಮಾಡಿ ತಿಳಿದುಕೊಳ್ಳಿರಿ. (ಭಾವ ಪಾಹುಡದ ೮೬ನೇ ಗಾಥೆಯಲ್ಲೂ ಈ ಮಾತಿದೆ)

ಭಾವಾರ್ಥ :- ಯಾವುದರಿಂದ ಮೋಕ್ಷ ಪಡೆಯುತ್ತಾರೆ ಅದನ್ನೇ ತಿಳಿದುಕೊಳ್ಳಬೇಕು, ಶ್ರದ್ಧೆ ಮಾಡಬೇಕೆಂಬುದು ಮುಖ್ಯ ಉಪದೇಶವಿದೆ. ಇತರ ಆಡಂಬರಗಳಿಂದ ಪ್ರಯೋಜನವೇನಿದೆ ?-ಎಂಬುದಾಗಿ ತಿಳಿದುಕೊಳ್ಳಬೇಕು. ।।೧೬।।

ಜಿನಸೂತ್ರವನ್ನು ತಿಳಿದುಕೊಳ್ಳುವಂಥ ಮುನಿಗಳಿದ್ದಾರೆ ಅವರ ಸ್ವರೂಪವನ್ನು ಪುನಃ ದೃಢಪಡಿಸುವುದಕ್ಕಾಗಿ ಈಗ ಹೇಳುತ್ತಾರೆ, -

**ಬಾಲಗ್ಗಕೋಡಿಮೇತ್ತಂ ಪರಿಗಹಗಹಣಂ ಣ ಹೋಇ ಸಾಹೂಣಂ ।**
**ಭುಂಜೇಇ ಪಾಣಿಪತ್ತೇ ದಿಣ್ಣಣ್ಣಂ ಇಕ್ಕಠಾಣಮ್ಮಿ ।।೧೭।।**

**ಬಾಲಾಗ್ರಕೋಟಿಮಾತ್ರಂ ಪರಿಗ್ರಹಗ್ರಹಣಂ ನ ಭವತಿ ಸಾಧೂನಾಮ್ ।**
**ಭುಂಜೀತ ಪಾಣಿಪಾತ್ರೇ ದತ್ತಮನ್ಯೇನ ಏಕಸ್ಥಾನೇ ।।೧೭।।**

ಅರ್ಥ :- ಸಾಧುವಿಗೆ ಕೇಶದ ಅಗ್ರಭಾಗದ ಕೋಟಿ ಎಂದರೆ ಅಣುಮಾತ್ರವೂ ಪರಿಗ್ರಹದ ಗ್ರಹಣವು ಇರುವುದಿಲ್ಲ, ಒಂದುವೇಳೆ ಸ್ವಲ್ಪವೂ ಪರಿಗ್ರಹವಿಲ್ಲದಿದ್ದರೆ ಆಹಾರ ಹೇಗೆ ಮಾಡುತ್ತಾರೆಂಬ ಶಂಕೆಯು ಇಲ್ಲಿ ಉತ್ಪನ್ನವಾಗುತ್ತದೆ, ಅದರ ಸಮಾಧಾನ ಮಾಡುತ್ತಾರೆ-ಆಹಾರ ಮಾಡುತ್ತಾರೆ ಅದು ಪಾಣಿಪಾತ್ರ (ಕರಪಾತ್ರ) ತಮ್ಮ ಕೈಗಳಲ್ಲಿಯೇ ಭೋಜನ ಮಾಡುತ್ತಾರೆ, ಅದು ಕೂಡ ಇತರರು ಕೊಡಲ್ಪಟ್ಟ ಕೇವಲ ಪ್ರಾಸುಕ ಅನ್ನವನ್ನೇ ತೆಗೆದುಕೊಳ್ಳುತ್ತಾರೆ, ಅದೂ ಒಂದು ಸ್ಥಾನದಲ್ಲಿಯೇ ತೆಗೆದುಕೊಳ್ಳುತ್ತಾರೆ ಪುನಃ ಪುನಃ ತೆಗೆದುಕೊಳ್ಳುವುದಿಲ್ಲ, ಮತ್ತು ಬೇರೆ ಬೇರೆ ಸ್ಥಾನಗಳಲ್ಲೂ ತೆಗೆದುಕೊಳ್ಳುವುದಲ್ಲ.

ಭಾವಾರ್ಥ :- ಆ ಮುನಿಗಳು ಆಹಾರವನ್ನೇ ಇತರರು ಕೊಡಲ್ಪಟ್ಟ ಪ್ರಾಸುಕ ಯೋಗ್ಯ ನಿರ್ದೋಷ ಅನ್ನ ಮಾತ್ರವನ್ನು ಒಂದುಬಾರಿ ಹಗಲುಹೊತ್ತಿನಲ್ಲಿ ತಮ್ಮ ಕೈಗಳಲ್ಲಿ ತೆಗೆದುಕೊಳ್ಳುತ್ತಾರೆಂದಮೇಲೆ ಅವರು ಅನ್ಯ ಪರಿಗ್ರಹವನ್ನು ಏತಕ್ಕಾಗಿ ಗ್ರಹಣ ಮಾಡುವರು ? ಎಂದರೆ ಗ್ರಹಣ ಮಾಡುವುದಿಲ್ಲ, ಜಿನಸೂತ್ರದಲ್ಲಿ ಈ ಪ್ರಕಾರದ ಮುನಿಗಳನ್ನು ಹೇಳಿದ್ದಾರೆ. ।।೧೭।।

ಅಲ್ಪ ಪರಿಗ್ರಹವನ್ನು ಗ್ರಹಣಮಾಡಿದರೆ ಅದರಲ್ಲಿ ದೋಷವೇನಿದೆಯೆಂಬುದನ್ನು ಈಗ ತಿಳಿಸಿಕೊಡುತ್ತಾರೆ,-

---

**ಪರಿಗ್ರಹದ ಗ್ರಹಣವಿರುವುದಿಲ್ಲಸಾಧುವಿಗೆ ಬಾಲಾಗ್ರಕೋಟಿಮಾತ್ರ ।**
**ಕರಪಾತ್ರದಲಿ ಪರರಿತ್ತ ಭೋಜನವನೊಂದೆ ಸ್ಥಾನದಲಿ ಮಾಡುವರು ।।೧೭।।**

**ಜಹಜಾಯರೂವಸರಿಸೋ ತಿಲತುಸಮೇತ್ತಂ ಣ ಗಿಹದಿ ಹತ್ಥೇಸು ।**
**ಜಇ ಲೇಇ ಅಪ್ಪಬಹುಯಂ ತತ್ತೋ ಪುಣ ಜಾಇ ಣಿಗ್ಗೋದಮ್ ॥೧೮॥**

**ಯಥಾಜಾತರೂಪಸದೃಶಃ ತಿಲತುಷಮಾತ್ರಂ ನ ಗೃಹ್ಣಾತಿ ಹಸ್ತಯೋಃ ।**
**ಯದಿ ಲಾತಿ ಅಲ್ಪಬಹುಕಂ ತತಃ ಪುನಃ ಯಾತಿ ನಿಗೋದಮ್ ॥೧೮॥**

ಅರ್ಥ ಃ- ಮುನಿಯು ಯಥಾಜಾತರೂಪನಿದ್ದಾನೆ ಹೇಗೆ ಬಾಲಕನು ಜನ್ಮದಿಂದಲೇ ನಗ್ನರೂಪನಿರುತ್ತಾನೆ ಹಾಗೆಯೇ ನಗ್ನರೂಪ ದಿಗಂಬರ ಮುದ್ರೆಯ ಧಾರಕನಿದ್ದಾನೆ, ಅವನು ತನ್ನ ಕೈಗಳಿಂದ ಎಳ್ಳಿನ ತವಡಿನಷ್ಟು ಕೂಡ ಏನನ್ನೂ ಗ್ರಹಣ ಮಾಡುವುದಿಲ್ಲ ಮತ್ತು ಒಂದುವೇಳೆ ಏನನ್ನಾದರೂ ಅಲ್ಪಸ್ವಲ್ಪ ತೆಗೆದುಕೊಂಡರೆ ಗ್ರಹಣ ಮಾಡಿದರೆ ಆ ಮುನಿಯು ಗ್ರಹಣ ಮಾಡುವುದರಿಂದ ನಿಗೋದದಲ್ಲಿ ಹೋಗುತ್ತಾನೆ.

ಭಾವಾರ್ಥ ಃ- ಯಥಾಜಾತರೂಪನಾದ ದಿಗಂಬರ ನಿರ್ಗ್ರಂಥನಿಗೆ ಮುನಿಯೆಂದು ಹೇಳುತ್ತಾರೆ. ಅವನು ಈ ಪ್ರಕಾರ ಆಗಿಯೂ ಕೂಡ ಏನನ್ನಾದರೂ ಪರಿಗ್ರಹವನ್ನು ಇಟ್ಟುಕೊಂಡರೆ ಇವನಿಗೆ ಜಿನಸೂತ್ರದ ಶ್ರದ್ಧೆಯಿಲ್ಲ, ಮಿಥ್ಯಾದೃಷ್ಟಿಯಿರುವುದರಿಂದ ಮಿಥ್ಯಾತ್ವದ ಫಲವು ನಿಗೋದವೇ ಇದೆಯೆಂದು ತಿಳಿಯಬೇಕು, ಕಥಂಚಿತ್ ಒಂದಿಷ್ಟು ತಪಶ್ಚರಣಾದಿಗಳನ್ನು ಮಾಡಿದರೆ ಅದರಿಂದ ಶುಭಕರ್ಮವು ಕಟ್ಟಿ ಸ್ವರ್ಗಾದಿಗಳನ್ನು ಪಡೆದರೂ ಕೂಡ ಪುನಃ ಏಕೇಂದ್ರಿಯನಾಗಿ ಸಂಸಾರದಲ್ಲಿಯೇ ಭ್ರಮಣ ಮಾಡುತ್ತಾನೆ.

ಪ್ರಶ್ನೆ ಃ- ಮುನಿಗೆ ಶರೀರವಿದೆ, ಆಹಾರ ಮಾಡುತ್ತಾನೆ, ಕಮಂಡಲು-ಪಿಂಛಿ-ಪುಸ್ತಕಗಳನ್ನು ಇಟ್ಟುಕೊಳ್ಳುತ್ತಾನೆ, ಆದರೆ ಇಲ್ಲಿ ತಿಲತುಷ ಮಾತ್ರದಷ್ಟೂ ಇಡಕೂಡದೆಂದು ಹೇಳಿದೆ, ಅದು ಹೇಗೆ ?

ಉತ್ತರ ಃ- ಮಿಥ್ಯಾತ್ವಸಹಿತವಾಗಿ ರಾಗಭಾವದಿಂದ ಸ್ವೀಕರಿಸಿ ತನ್ನ ವಿಷಯ ಕಷಾಯದ ಪುಷ್ಟಿಮಾಡಿ ಕೊಳ್ಳುವ ಸಲುವಾಗಿ ಇಟ್ಟುಕೊಂಡರೆ ಅದನ್ನು ಪರಿಗ್ರಹವೆಂದು ಹೇಳುತ್ತಾರೆ, ಈ ನಿಮಿತ್ತದಿಂದ ಯಾವುದನ್ನೂ ಅಲ್ಪ-ಸ್ವಲ್ಪ ಇಟ್ಟುಕೊಳ್ಳುವುದರ ನಿಷೇಧ ಮಾಡಿದೆ ಮತ್ತು ಕೇವಲ ಸಂಯಮದ ನಿಮಿತ್ತದ್ದಂತೂ ಸರ್ವಥಾ ನಿಷೇಧವಿಲ್ಲ. ಶರೀರವಂತೂ ಆಯುಷ್ಯವಿರುವವರೆಗೆ ಬಿಟ್ಟರೂ ಕೂಡ ಬಿಡುವುದಿಲ್ಲ, ಇದರದಂತೂ ಮಮತ್ವವೇ ಬಿಡುತ್ತದೆ ಆದುದರಿಂದ ಅದರ ನಿಷೇಧವನ್ನೇ ಮಾಡಿದೆ. ಎಲ್ಲಿಯವರೆಗೆ ಶರೀರವಿದೆ ಅಲ್ಲಿಯವರೆಗೆ ಆಹಾರ ಮಾಡದಿದ್ದರೆ ಸಾಮರ್ಥ್ಯವೇ ಉಳಿಯುವುದಿಲ್ಲ, ಆಗ ಸಂಯಮವು ಸಾಧಿಸುವುದಿಲ್ಲ, ಆದುದರಿಂದ ಸ್ವಲ್ಪ ಯೋಗ್ಯ ಆಹಾರವನ್ನು ವಿಧಿಪೂರ್ವಕವಾಗಿ ಶರೀರದಿಂದ ರಾಗರಹಿತರಾಗುತ್ತ ಸ್ವೀಕರಿಸಿ ಶರೀರವನ್ನು ನಿಲ್ಲಿಸಿಕೊಂಡು ಸಂಯಮ ಸಾಧಿಸುತ್ತಾರೆ.

ಕಮಂಡಲು ಇದು ಬಾಹ್ಯಶೌಚದ ಉಪಕರಣವಿದೆ, ಒಂದುವೇಳೆ ಇಟ್ಟುಕೊಳ್ಳದಿದ್ದರೆ ಮಲಮೂತ್ರಗಳ ಅಶುಚಿತ್ವದಿಂದ ಪಂಚಪರಮೇಷ್ಠಿಗಳ ಭಕ್ತಿ ವಂದನೆಗಳನ್ನು ಹೇಗೆ ಮಾಡುವರು ಮತ್ತು ಅದು ಲೋಕನಿಂದ್ಯವಿದೆ. ಪಿಂಛಿಯು ದಯೆಯ ಉಪಕರಣವಿದೆ, ಒಂದುವೇಳೆ ಅದನ್ನು ಇಟ್ಟುಕೊಳ್ಳದಿದ್ದರೆ ಜೀವಸಹಿತವಾದ ಭೂಮಿ

---

**ಇಂದೇ ಜನಿಸಿದಂಥರೂಪ ತಿಲತುಷಮಾತ್ರ ಗ್ರಹಿಸುವುದಿಲ್ಲ ಕೈಯೊಳು ।**
**ಒಂದು ವೇಳೆ ಅಲ್ಪ-ಸ್ವಲ್ಪ ಗ್ರಹಿಸಿದರವನು ನಿಗೋದದಲಿ ಹೋಗುವನು ॥೧೮॥**

ಮೊದಲಾದವುಗಳ ಪ್ರತಿಲೇಖನವನ್ನು ಯಾವುದರಿಂದ ಮಾಡುವರು. ಪುಸ್ತಕವು ಜ್ಞಾನದ ಉಪಕರಣವಿದೆ, ಒಂದುವೇಳೆ ಇಟ್ಟುಕೊಳ್ಳದಿದ್ದರೆ ಪಠನ-ಪಾಠನಗಳು ಹೇಗಾಗುವವು. ಈ ಉಪಕರಣಗಳನ್ನು ಇಟ್ಟುಕೊಳ್ಳುವುದು ಕೂಡ ಮಮತ್ವಪೂರ್ವಕವಾಗಿರುವುದಿಲ್ಲ ಇವುಗಳಲ್ಲಿ ರಾಗಭಾವವಿರುವುದಿಲ್ಲ. ಆಹಾರ-ವಿಹಾರ ಪಠಣ-ಪಾಠಣದ ಕ್ರಿಯಾಯುಕ್ತತೆಯು ಎಲ್ಲಿಯವರೆಗೆ ಇರುವುದು ಅಲ್ಲಿಯವರೆಗೆ ಕೇವಲಜ್ಞಾನವು ಉತ್ಪನ್ನವಾಗುವುದಿಲ್ಲ, ಈ ಎಲ್ಲ ಕ್ರಿಯೆಗಳನ್ನು ಬಿಟ್ಟುಕೊಟ್ಟು ಶರೀರದ್ದೂ ಸರ್ವಥಾ ಮಮತ್ವ ಬಿಟ್ಟು ಧ್ಯಾನಾವಸ್ಥೆಯನ್ನು ಸ್ವೀಕರಿಸಿ ನಿಂತುಕೊಂಡರೆ, ತಮ್ಮ ಸ್ವರೂಪದಲ್ಲಿ ಮಗ್ನವಾದರೆ ಆಗ ಪರಮ ನಿರ್ಗ್ರಂಥ ಅವಸ್ಥೆಯಾಗುತ್ತದೆ, ಆಗ ಶ್ರೇಣಿಯನ್ನು ಆರೋಹಣ ಮಾಡಿದ ಮುನಿರಾಜನಿಗೆ ಕೇವಲಜ್ಞಾನವು ಉತ್ಪನ್ನವಾಗುತ್ತದೆ, ಅನ್ಯ ಕ್ರಿಯಾಸಹಿತವಿರುವವರೆಗೆ ಕೇವಲಜ್ಞಾನವು ಉತ್ಪನ್ನವಾಗುವುದಿಲ್ಲ. ಈ ಪ್ರಕಾರದ ನಿರ್ಗ್ರಂಥತೆಯು ಮೋಕ್ಷಮಾರ್ಗವೆಂದು ಜಿನಸೂತ್ರದಲ್ಲಿ ಹೇಳಿದೆ.

ಭವಸ್ಥಿತಿಯು ಪೂರ್ಣವಾದಮೇಲೆ ಎಲ್ಲ ಅವಸ್ಥೆಗಳಲ್ಲಿ ಕೇವಲಜ್ಞಾನವಾಗುತ್ತದೆಯೆಂದು ಶ್ವೇತಾಂಬರರು ಹೇಳುತ್ತಾರೆ ಆದರೆ ಈ ಹೇಳುವಿಕೆಯು ಮಿಥ್ಯೆಯಿದೆ, ಇದು ಜಿನಸೂತ್ರದ ವಚನವಿಲ್ಲ, ಶ್ವೇತಾಂಬರರು ಕಾಲ್ಪನಿಕ ಸೂತ್ರಗಳನ್ನು ರಚಿಸಿದ್ದಾರೆ, ಅದರಲ್ಲಿ ಬರೆದಿರಬೇಕು. ನೀವು ಹೇಳಿರುವುದಂತೂ ಉತ್ಸರ್ಗ ಮಾರ್ಗವಿದೆ, ಅಪವಾದ ಮಾರ್ಗದಲ್ಲಿ ವಸ್ತ್ರಾದಿ ಉಪಕರಣಗಳನ್ನು ಇಟ್ಟುಕೊಳ್ಳಲು ಹೇಳಿದೆಯೆಂದು ಪುನಃ ಶ್ವೇತಾಂಬರರು ಹೇಳುತ್ತಾರೆ. ನೀವು ಹೇಗೆ ಧರ್ಮೋಪಕರಣ ಹೇಳಿದ್ದೀರಿ ಹಾಗೆ ವಸ್ತ್ರಾದಿಗಳೂ ಧರ್ಮೋಪಕರಣವಿವೆ. ಹೇಗೆ ಕ್ಷುಧೆಯ ಬಾಧೆಯನ್ನು ಆಹಾರದಿಂದ ದೂರಮಾಡಿ ಸಂಯಮ ಸಾಧಿಸುತ್ತಾರೆ, ಹಾಗೆಯೇ ಶೀತ ಮೊದಲಾದವುಗಳ ಬಾಧೆಯನ್ನು ವಸ್ತ್ರಾದಿಗಳಿಂದ ದೂರಮಾಡಿ ಸಂಯಮ ಸಾಧಿಸುತ್ತಾರೆ ; ಇದರಲ್ಲಿ ವಿಶೇಷವೇನಿದೆ ? ಇದರಲ್ಲಂತೂ ದೊಡ್ಡ ದೋಷ ಬರುತ್ತದೆ. ಕಾಮವಿಕಾರವು ಉತ್ಪನ್ನವಾದಮೇಲೆ ಸ್ತ್ರೀ ಸೇವನೆ ಮಾಡಿದರೆ ಇದರಲ್ಲೇನು ದೋಷವಿದೆಯೆಂದು ಕೇಳಿದಂತಿದೆ, ಆದುದರಿಂದ ಹೀಗೆ ಹೇಳುವುದು ಯುಕ್ತವಲ್ಲ.

ಕ್ಷುಧೆಯ ಬಾಧೆಯನ್ನಂತೂ ಆಹಾರದಿಂದ ದೂರ ಮಾಡುವುದು ಯುಕ್ತವಿದೆ, ಆಹಾರವಿಲ್ಲದೆ ದೇಹವು ಅಶಕ್ತವಾಗಿ ಹೋಗುತ್ತದೆ ಮತ್ತು ಬಿಟ್ಟುಹೋದರೆ ಅಪಘಾತದ ದೋಷ ಬರುತ್ತದೆ, ಆದರೆ ಶೀತಾದಿ ಬಾಧೆಗಳಂತೂ ಅಲ್ಪವಿದ್ದು ಇವಂತೂ ಜ್ಞಾನಾಭ್ಯಾಸ ಮೊದಲಾದ ಸಾಧನದಿಂದಲೇ ದೂರವಾಗುತ್ತವೆ. ಅಪವಾದ ಮಾರ್ಗ ಹೇಳಿದೆ ಅದಂತೂ ಅದರಲ್ಲಿ ಮುನಿಪದವು ಉಳಿಯುವಂಥ ಕ್ರಿಯೆ ಮಾಡುವುದು ಅಪವಾದ ಮಾರ್ಗವಿದೆ, ಆದರೆ ಯಾವ ಪರಿಗ್ರಹದಿಂದ ಹಾಗೂ ಯಾವ ಕ್ರಿಯೆಯಿಂದ ಮುನಿಪದವು ಭ್ರಷ್ಟವಾಗಿ ಗೃಹಸ್ಥರ ಸಮಾನವಾಗಿ ಹೋಗುವುದು ಅದಂತೂ ಅಪವಾದ ಮಾರ್ಗವಲ್ಲ, ದಿಗಂಬರಮುದ್ರೆ ಧಾರಣ ಮಾಡಿ ಕಮಂಡಲು, ಪಿಂಛದೊಡನೆ ಆಹಾರ-ವಿಹಾರ ಉಪದೇಶ ಮೊದಲಾದವುಗಳಲ್ಲಿ ಪ್ರವರ್ತಿಸುವುದು ಅದು ಅಪವಾದ ಮಾರ್ಗವಿದೆ ಮತ್ತು ಎಲ್ಲ ಪ್ರವೃತ್ತಿಗಳನ್ನು ಬಿಟ್ಟುಕೊಟ್ಟು ಧ್ಯಾನಸ್ಥವಿದ್ದು ಶುದ್ಧೋಪಯೋಗದಲ್ಲಿ ಮಗ್ನವಾಗಿ ಹೋಗುವುದನ್ನು ಉತ್ಸರ್ಗಮಾರ್ಗವೆಂದು ಹೇಳಿದೆ ; ಈ ಪ್ರಕಾರದ ಮುನಿಪದವು ತಮ್ಮಿಂದ ಸಾಧಿಸುವುದಿಲ್ಲವೆಂದು ತಿಳಿದುಕೊಂಡು ಏತಕ್ಕಾಗಿ ಶಿಥಿಲಾಚಾರದ ಪೋಷಣೆ ಮಾಡುವುದು ? ಮುನಿಪದದ ಸಾಮರ್ಥ್ಯವಿಲ್ಲದಿದ್ದರೆ ಶ್ರಾವಕಧರ್ಮದ್ದೇ ಪಾಲನೆ ಮಾಡಬೇಕು, ಇದರಿಂದಲೇ ಪರಂಪರೆಯಿಂದ ಸಿದ್ಧಿಯಾಗಿ ಹೋಗುವುದು. ಜಿನಸೂತ್ರದಮೇಲೆ ಯಥಾರ್ಥ ಶ್ರದ್ಧೆಯಿಡುವುದರಿಂದ ಸಿದ್ಧಿಯಿದೆ, ಇದನ್ನು ಹೊರತುಪಡಿಸಿ ಉಳಿದೆಲ್ಲ ಕ್ರಿಯೆಗಳು ಸಂಸಾರ ಮಾರ್ಗವಿದ್ದು ಮೋಕ್ಷಮಾರ್ಗವಿಲ್ಲವೆಂದು ತಿಳಿಯಬೇಕು. ||೧೮||

ಇನ್ನು ಮುಂದೆ ಇದರದೇ ಸಮರ್ಥನೆ ಮಾಡುತ್ತಾರೆ, –

**ಜಸ್ಸ ಪರಿಗ್ಗಹಗಹಣಂ ಅಪ್ಪಂ ಬಹುಯಂ ಚ ಹವಇ ಲಿಂಗಸ್ಸ।**
**ಸೋ ಗರಹಿಉ ಜಿಣವಯಣೇ ಪರಿಗಹರಹಿಓ ಣಿರಾಯಾರೋ ॥೧೯॥**

**ಯಸ್ಯ ಪರಿಗ್ರಹಗ್ರಹಣಂ ಅಲ್ಪಂ ಬಹುಕಂ ಚ ಭವತಿ ಲಿಂಗಸ್ಯ ।**
**ಸ ಗರ್ಹ್ಯಃ ಜಿನವಚನೇ ಪರಿಗ್ರಹರಹಿತಃ ನಿರಾಗಾರಃ ॥೧೯॥**

ಅರ್ಥ ಃ- ಯಾವ ಮತದಲ್ಲಿ ಲಿಂಗದ ಆ ವೇಷದ ಪರಿಗ್ರಹವನ್ನು ಅಲ್ಪ ಹಾಗೂ ಅಧಿಕ ಗ್ರಹಣ ಮಾಡುವುದನ್ನು ಹೇಳಿದೆ ಆ ಮತವು ಮತ್ತು ಅದರ ಶ್ರದ್ಧೆಯುಳ್ಳ ಪುರುಷನು ಗರ್ಹಿತನಿದ್ದಾನೆ, ನಿಂದಾ ಯೋಗ್ಯನಿದ್ದಾನೆ, ಏಕೆಂದರೆ ಜಿನಮತದಲ್ಲಿ ಪರಿಗ್ರಹ ರಹಿತನೇ ನಿರಾಗಾರನಿದ್ದಾನೆ, ನಿರ್ದೋಷ ಮುನಿಯಿದ್ದಾನೆಂದು ಹೇಳಿದೆ.

ಭಾವಾರ್ಥ ಃ- ಶ್ವೇತಾಂಬರ ಮೊದಲಾದವರ ಕಲ್ಪಿತ ಸೂತ್ರಗಳಲ್ಲಿ ವೇಷದೊಳಗೆ ಅಲ್ಪ-ಅಧಿಕ ಪರಿಗ್ರಹದ ಗ್ರಹಣ ಹೇಳಿದೆ, ಆ ಸಿದ್ಧಾಂತ ಮತ್ತು ಅದರ ಶ್ರದ್ಧೆಯುಳ್ಳವರು ನಿಂದ್ಯರಿದ್ದಾರೆ. ಜಿನವಚನದಲ್ಲಿ ಪರಿಗ್ರಹ ರಹಿತನಿಗೇ ನಿರ್ದೋಷ ಮುನಿಯೆಂದು ಹೇಳಿದೆ. ॥೧೯॥

ಜಿನವಚನದಲ್ಲಿ ಇಂಥ ಮುನಿಯು ವಂದನೆಗೆ ಯೋಗ್ಯನಿದ್ದಾನೆಂಬುದನ್ನು ಈಗ ಹೇಳುತ್ತಾರೆ, -

**ಪಂಚಮಹವ್ವಯಜುತ್ತೋ ತಿಹಿಂ ಗುತ್ತಿಹಿಂ ಜೋ ಸ ಸಂಜದೋ ಹೋಇ ।**
**ಣಿಗ್ಗಂಥಮೋಕ್ಖಮಗ್ಗೋ ಸೋ ಹೋದಿ ಹು ವಂದಣಿಜ್ಜೋ ಯ ॥೨೦॥**

**ಪಂಚಮಹಾವ್ರತಯುಕ್ತಃ ತಿಸೃಭಿಃ ಗುಪ್ತಿಭಿಃ ಯಃ ಸ ಸಂಯತೋ ಭವತಿ ।**
**ನಿರ್ಗ್ರಂಥಮೋಕ್ಷಮಾರ್ಗಃ ಸ ಭವತಿ ಹಿ ವಂದನೀಯಃ ಚ ॥೨೦॥**

ಅರ್ಥ ಃ- ಯಾವ ಮುನಿಯು ಪಂಚಮಹಾವ್ರತಗಳಿಂದ ಯುಕ್ತನಿರುವನು ಮತ್ತು ಮೂರು ಗುಪ್ತಿಗಳಿಂದ ಸಂಯುಕ್ತನಿರುವನು ಅವನು ಸಂಯಮಿಯಿದ್ದಾನೆ ಸಂಯಮವಂತನಿದ್ದಾನೆ ಮತ್ತು ನಿರ್ಗ್ರಂಥ ಮೋಕ್ಷಮಾರ್ಗನಿದ್ದಾನೆ ಅಲ್ಲದೆ ಅವನೇ ಸ್ಪಷ್ಟವಾಗಿ ನಿಶ್ಚಯದಿಂದ ವಂದಿಸಲು ಯೋಗ್ಯನಿದ್ದಾನೆ.

ಭಾವಾರ್ಥ ಃ- ಅಹಿಂಸೆ, ಸತ್ಯ , ಅಸ್ತೇಯ, ಬ್ರಹ್ಮಚರ್ಯ ಮತ್ತು ಅಪರಿಗ್ರಹ ಈ ಐದು ಮಹಾವ್ರತಗಳಿಂದ ಸಹಿತನಿದ್ದಾನೆ, ಮತ್ತು ಮನ, ವಚನ,ಕಾಯರೂಪದ ಮೂರು ಗುಪ್ತಿಗಳಿಂದ ಸಹಿತನಿದ್ದಾನೆ ಅವನು ಸಂಯಮಿಯಿದ್ದಾನೆ, ಅವನು ನಿರ್ಗ್ರಂಥ ಸ್ವರೂಪನಿದ್ದಾನೆ, ಅವನೇ ವಂದನೆಗೆ ಯೋಗ್ಯನಿದ್ದಾನೆ. ಯಾವನು ಅಲ್ಪ ಸ್ವಲ್ಪ ಪರಿಗ್ರಹವನ್ನು

---

ಏ ಮತದಿ ಪರಿಗ್ರಹದ ಗ್ರಹಣವಲ್ಪಸ್ವಲ್ಪ ಇರುವುದು ಸಾಧುವಿಗೆ।
ಆ ಮತನಿಂದ್ಯವಿದೆ ಜಿನವಚನದಿ ಮುನಿನಿಷ್ಪರಿಗ್ರಹಿಯಿರುವನು ॥೧೯॥

ಐದು ಮಹಾವ್ರತಯುಕ್ತ ತ್ರಿಗುಪ್ತಿಸಹಿತವಿದ್ದುದೆ ಸಂಯತವಿರುವುದು ।
ಅದುವೆ ನಿರ್ಗ್ರಂಥಮೋಕ್ಷಮಾರ್ಗವಿದ್ದದುವೆ ನಿಜದಿ ವಂದನೆ ಯೋಗ್ಯವಿದೆ ॥೨೦॥

ಇಟ್ಟುಕೊಳ್ಳುತ್ತಾನೆ ಅವನು ಮಹಾವ್ರತಿಯಿಲ್ಲ, ಸಂಯಮಿಯಿಲ್ಲ, ಇವನು ಮೋಕ್ಷಮಾರ್ಗನಿಲ್ಲ ಮತ್ತು ಗೃಹಸ್ಥನ ಸಮಾನ ಕೂಡ ಅಲ್ಲ. ।।೨೦।।

ಪೂರ್ವೋಕ್ತ ಒಂದು ವೇಷವನ್ನಂತೂ ಮುನಿಯದು ಹೇಳಿತು, ಇನ್ನು ಎರಡನೆಯ ವೇಷವು ಉತ್ಕೃಷ್ಟ ಶ್ರಾವಕನದು ಅದು ಹೀಗಿದೆಯೆಂದು ಈಗ ಹೇಳುತ್ತಾರೆ, –

**ದುಇಯಂ ಚ ಉತ್ತ ಲಿಂಗಂ ಉಕ್ಕಿಟ್ಠಂ ಅವರಸಾವಯಾಣಂ ಚ ।**
**ಭಿಕ್ಖಂ ಭಮೇಇ ಪತ್ತೇ ಸಮಿದೀಭಾಸೇಣ ಮೋಣೇಣ ।।೨೧।।**

**ದ್ವಿತೀಯಂ ಚೋಕ್ತಂ ಲಿಂಗಂ ಉತ್ಕೃಷ್ಟಂ ಅವರಶ್ರಾವಕಾಣಾಂ ಚ ।**
**ಭಿಕ್ಷಾಂ ಭ್ರಮತಿ ಪಾತ್ರೇ ಸಮಿತಿಭಾಷಯಾ ಮೌನೇನ ।।೨೧।।**

ಅರ್ಥ ಃ– ಎರಡನೆಯ ಲಿಂಗವು ಎಂದರೆ ಎರಡನೆಯ ವೇಷವು ಉತ್ಕೃಷ್ಟ ಶ್ರಾವಕನದು, ಅವನು ಗೃಹಸ್ಥನಲ್ಲ ಈ ಪ್ರಕಾರ ಉತ್ಕೃಷ್ಟ ಶ್ರಾವಕನದು ಹೇಳಿದೆ, ಆ ಉತ್ಕೃಷ್ಟ ಶ್ರಾವಕನು ಹನ್ನೊಂದನೇ ಪ್ರತಿಮೆಯ ಧಾರಕನಿದ್ದಾನೆ. ಅವನು ಭ್ರಮಣ ಮಾಡಿ ಭಿಕ್ಷೆಯ ಮುಖಾಂತರ ಭೋಜನ ಮಾಡುವವನು ಮತ್ತು ಪತ್ತೇ ಎಂದರೆ ಪಾತ್ರೆಯಲ್ಲಿ ಭೋಜನ ಮಾಡುವವನು ಹಾಗೂ ಕೈಯಲ್ಲಿ ಭೋಜನ ಮಾಡುವವನು ಮತ್ತು ಸಮಿತಿರೂಪವಾಗಿ ಪ್ರವರ್ತಿಸುತ್ತ ಭಾಷಾಸಮಿತಿ ರೂಪವಾಗಿ ಮಾತನಾಡುವವನು ಅಥವಾ ಮೌನದಿಂದ ಇರುವವನು.

ಭಾವಾರ್ಥ ಃ– ಒಂದಂತೂ ಮುನಿಯ ಯಥಾಜಾತರೂಪವನ್ನು ಹೇಳಿದೆ ಮತ್ತು ಎರಡನೆಯದು ಈ ಉತ್ಕೃಷ್ಟ ಶ್ರಾವಕನದು ಹೇಳಿದೆ, ಅವನು ಹನ್ನೊಂದನೆಯ ಪ್ರತಿಮೆಯ ಧಾರಕನಾದ ಉತ್ಕೃಷ್ಟ ಶ್ರಾವಕನಿದ್ದಾನೆ, ಅವನು ಒಂದು ವಸ್ತ್ರ ಹಾಗೂ ಕೌಪೀನ ಮಾತ್ರ ಧಾರಣ ಮಾಡುತ್ತಾನೆ ಮತ್ತು ಭಿಕ್ಷೆಯಿಂದ ಭೋಜನ ಮಾಡುತ್ತಾನೆ, ಪಾತ್ರೆಯಲ್ಲಿ ಕೂಡ ಭೋಜನ ಅದರಂತೆ ಕರಪಾತ್ರದಲ್ಲಿಕೂಡ ಭೋಜನ ಮಾಡುತ್ತಾನೆ, ಸಮಿತಿರೂಪ ವಚನವನ್ನು ಹೇಳುತ್ತಾನೆ ಅಥವಾ ಮೌನ ಕೂಡ ಇರುತ್ತಾನೆ, ಈ ಪ್ರಕಾರ ಇದು ಎರಡನೆಯ ವೇಷವಿದೆ. ।।೨೧।।

ಈಗ ಮೂರನೆಯದಾದ ಸ್ತ್ರೀಲಿಂಗವನ್ನು ಹೇಳುತ್ತಾರೆ, –

**ಲಿಂಗಂ ಇತ್ಥೀಣ ಹವದಿ ಭುಂಜಇ ಪಿಂಡಂ ಸುಏಯಕಾಲಮ್ಮಿ ।**
**ಅಜ್ಜಿಯ ವಿ ಏಕ್ಕವತ್ಥಾ ವತ್ಥಾವರಣೇಣ ಭುಂಜೇದಿ ।।೨೨।।**

---

ಎರಡನೆಯಲಿಂಗವನು ಉತ್ಕೃಷ್ಟ ಶ್ರಾವಕನದೆಂದು ಪೇಳಿದೆ ಶಾಸನದಿ ।
ತಿರುಗಿ ಸಪಾತ್ರಭಿಕ್ಷೆಮಾಡುವನು ಮೌನಯುಕ್ತವಿಲ್ಲವೆ ವಾಕ್ಸಮಿತಿಯಿಂ ।।೨೧।

ಸ್ತ್ರೀಯರ ಲಿಂಗವೊಂದಿದ್ದು ಅವರು ದಿನಕೊಂದುಬಾರಿ ಭೋಜನ ಮಾಡುವರು ।
ಆರ್ಯಿಕೆಯಿದ್ದರೊಂದು ವಸ್ತ್ರಧರಿಸುವರು ವಸ್ತ್ರಾವ್ರತ ಊಟ ಮಾಡುವರು ।।೨೨।।

ಲಿಂಗಂ ಸ್ತ್ರೀಣಾಂ ಭವತಿ ಭುಂಕ್ತೇ ಪಿಂಡಂ ಸ್ವೇಕ ಕಾಲೇ ।
ಆರ್ಯಾ ಅಪಿ ಏಕವಸ್ತ್ರಾ ವಸ್ತ್ರಾವರಣೇನ ಭುಂಕ್ತೇ ।।೨೨।।

ಅರ್ಥ ಃ- ಏಕಕಾಲದಲ್ಲಿ ಭೋಜನ ಮಾಡುವುದು, ಮತ್ತೆ ಮತ್ತೆ ಭೋಜನ ಮಾಡದಿರುವುದು, ಆರ್ಯಿಕೆಯಿದ್ದರೂ ಕೂಡ ಒಂದು ವಸ್ತ್ರಧಾರಣ ಮಾಡುವುದು ಮತ್ತು ಭೋಜನ ಮಾಡುವ ಸಮಯದಲ್ಲಿ ಕೂಡ ವಸ್ತ್ರದ ಆವರಣಸಹಿತ ಮಾಡುವುದು, ನಗ್ನವಾಗದಿರುವುದು. ಹೀಗೆ ಸ್ತ್ರೀಯರ ಲಿಂಗವಿರುತ್ತದೆ.

ಭಾವಾರ್ಥ ಃ- ಸ್ತ್ರೀಯು ಆರ್ಯಿಕೆಯೂ ಇರುವಳು ಮತ್ತು ಕ್ಷುಲ್ಲಿಕೆಯೂ ಇರುವಳು, ಆದರೆ ಅವರೀರ್ವರು ಭೋಜನವನ್ನಂತೂ ದಿವಸದಲ್ಲಿ ಒಂದೇ ಬಾರಿ ಮಾಡುವರು, ಆರ್ಯಿಕೆಯಿದ್ದರೂ ಅವಳು ಒಂದು ವಸ್ತ್ರವನ್ನು ಧಾರಣ ಮಾಡಿಯೇ ಭೋಜನ ಮಾಡುವುದು, ನಗ್ನವಾಗದಿರುವದು. ಈ ಪ್ರಕಾರ ಮೂರನೆಯದು ಸ್ತ್ರೀಯರ ಲಿಂಗವಿದೆ. ।।೨೨।।

ವಸ್ತ್ರಧಾರಕನಿಗೆ ಮೋಕ್ಷವಿಲ್ಲ, ನಗ್ನತೆಯೇ ಮೋಕ್ಷಮಾರ್ಗವಿದೆಯೆಂಬುದನ್ನು ಈಗ ಹೇಳುತ್ತಾರೆ, -

ಣ ವಿ ಸಿಜ್ಝದಿ ವತ್ಥಧರೋ ಜಿಣಸಾಸಣೇ ಜಇ ವಿ ಹೋಇ ತಿತ್ಥಯರೋ ।
ಣಗ್ಗೋ ವಿಮೋಕ್ಖಮಗ್ಗೋ ಸೇಸಾ ಉಮ್ಮಗ್ಗಯಾ ಸವ್ವೇ ।।೨೩।।

ನಾಪಿ ಸಿಧ್ಯತಿ ವಸ್ತ್ರಧರಃ ಜಿನಶಾಸನೇ ಯದ್ಯಪಿ ಭವತಿ ತೀರ್ಥಕರಃ ।
ನಗ್ನಃ ವಿಮೋಕ್ಷಮಾರ್ಗಃ ಶೇಷಾ ಉನ್ಮಾರ್ಗಕಾಃ ಸರ್ವೇ ।।೨೩।।

ಅರ್ಥ ಃ- ವಸ್ತ್ರವನ್ನು ಧಾರಣ ಮಾಡುವಂಥವನು ಪಕ್ವನಾಗುವುದಿಲ್ಲ, ಮೋಕ್ಷ ಪಡೆಯುವುದಿಲ್ಲ, ಒಂದುವೇಳೆ ತೀರ್ಥಂಕರನಿದ್ದರೂ ಕೂಡ ಎಲ್ಲಿಯವರೆಗೆ ಗೃಹಸ್ಥನಾಗಿ ಉಳಿಯುವನು ಅಲ್ಲಿಯವರೆಗೆ ಮೋಕ್ಷ ಪಡೆಯುವುದಿಲ್ಲ, ದೀಕ್ಷೆ ಸ್ವೀಕರಿಸಿ ದಿಗಂಬರರೂಪ ಧಾರಣ ಮಾಡಿದಾಗ ಮೋಕ್ಷ ಪಡೆಯುವನು. ಏಕೆಂದರೆ ನಗ್ನತೆಯೇ ಮೋಕ್ಷಮಾರ್ಗವಿದೆ, ಉಳಿದೆಲ್ಲ ಲಿಂಗಗಳು ಉನ್ಮಾರ್ಗವಿವೆಯೆಂದು ಜಿನಶಾಸನದಲ್ಲಿ ಹೇಳಿದೆ.

ಭಾವಾರ್ಥ ಃ- ಶ್ವೇತಾಂಬರ ಮೊದಲಾದವರು ವಸ್ತ್ರಧಾರಕನಿಗೂ ಕೂಡ ಮೋಕ್ಷವಾಗುವುದನ್ನು ಹೇಳುತ್ತಾರೆ ಅದು ಮಿಥ್ಯೆಯಿದೆ, ಇದು ಜಿನಮತವಲ್ಲ. ।।೨೩।।

ಸ್ತ್ರೀಯರಿಗೆ ದೀಕ್ಷೆಯಿಲ್ಲವೆಂಬುದರ ಕಾರಣವನ್ನು ಈಗ ಹೇಳುತ್ತಾರೆ.

ಲಿಂಗಮ್ಮಿ ಯ ಇತ್ಥೀಣಂ ಥಣಂತರೇ ಣಾಹಿಕಕ್ಖದೇಸೇಸು ।
ಭಣಿಓ ಸುಹುಮೋ ಕಾಓ ತಾಸಿಂ ಕಹ ಹೋಇ ಪವ್ವಜ್ಜಾ ।।೨೪।।

---

ಜಿನಶಾಸನದಿ ತೀರ್ಥಂಕರನಿದ್ದರೂ ವಸ್ತ್ರಧಾರಕನಿಗೆ ಸಿದ್ಧಿಯಿಲ್ಲ ।
ಆ ನಗ್ನತೆಯೆ ಮೋಕ್ಷಮಾರ್ಗವಿದ್ದು ಉಳಿದೆಲ್ಲವು ಉನ್ಮಾರ್ಗಗಳಿರುವವು ।।೨೩।।

ಸ್ತ್ರೀಯ ಯೋನಿಯೊಳು ಸ್ತನಾಂತರದಿ ನಾಭಿಯಲಿ ಕಕ್ಷಪ್ರದೇಶದಲಿ ಸೂಕ್ಷ್ಮ ।
ಕಾಯ ಜೀವಗಳನು ಹೇಳಿರುವುದರಿಂದಿವರಿಗೆ ದೀಕ್ಷೆ ಹೇಗಾಗುವುದು ।।೨೪।।

ಲಿಂಗೇ ಚ ಸ್ತ್ರೀಣಾಂ ಸ್ತನಾಂತರೇ ನಾಭಿಕಕ್ಷದೇಶೇಷು ।
ಭಣಿತಃ ಸೂಕ್ಷ್ಮಃ ಕಾಯಃ ತಾಸಾಂ ಕಥಂ ಭವತಿ ಪ್ರವ್ರಜ್ಯಾ ॥೨೪॥

ಅರ್ಥ ಃ- ಸ್ತ್ರೀಯರಿಗೆ ಲಿಂಗ ಎಂದರೆ ಯೋನಿಯಲ್ಲಿ, ಸ್ತನಾಂತರ ಎಂದರೆ ಎರಡೂ ಮೊಲೆಗಳ ಮಧ್ಯ ಪ್ರದೇಶದಲ್ಲಿ ಮತ್ತು ಕಕ್ಷ ಎಂದರೆ ಎರಡೂ ಕಂಕುಳಗಳಲ್ಲಿ, ನಾಭಿಯಲ್ಲಿ ಸೂಕ್ಷ್ಮ ಕಾಯ ಎಂದರೆ ದೃಷ್ಟಿಗೆ ಅಗೋಚರವಾದ ಜೀವಗಳಿರುತ್ತವೆಂದು ಹೇಳಿದ್ದಾರೆ, ಆದುದರಿಂದ ಈ ಪ್ರಕಾರವಾಗಿರುವ ಸ್ತ್ರೀಯರಿಗೆ [1]ಪ್ರವ್ರಜ್ಯೆ ಎಂದರೆ ದೀಕ್ಷೆಯು ಹೇಗಾಗುವುದು. ?

ಭಾವಾರ್ಥ ಃ- ಸ್ತ್ರೀಯರಿಗೆ ಯೋನಿ, ಸ್ತನ, ಕಂಕುಳ ಮತ್ತು ನಾಭಿಯಲ್ಲಿ ಪಂಚೇಂದ್ರಿಯ ಜೀವಗಳ ಉತ್ಪತ್ತಿಯು ನಿರಂತರವೆಂದು ಹೇಳಿದೆ, ಇವರಿಗೆ ಮಹಾವ್ರತರೂಪದ ದೀಕ್ಷೆಯು ಹೇಗಾಗುವುದು ? ಮಹಾವ್ರತ ಹೇಳಿದ್ದಾರೆ ಆದು ಉಪಚಾರದಿಂದ ಹೇಳಿದ್ದಾರೆ, ಪರಮಾರ್ಥದಿಂದ ಹೇಳಿಲ್ಲ. ಸ್ತ್ರೀಯು ತನ್ನ ಸಾಮರ್ಥ್ಯದ ಸೀಮೆಯನ್ನು ತಲುಪಿ ವ್ರತಧಾರಣ ಮಾಡುತ್ತಾಳೆ, ಈ ಅಪೇಕ್ಷೆಯಿಂದ ಉಪಚಾರದಿಂದ ಮಹಾವ್ರತ ಹೇಳಿದ್ದಾರೆ. ॥೨೪॥

ಒಂದು ವೇಳೆ ಸ್ತ್ರೀಯು ಕೂಡ ದರ್ಶನದಿಂದ ಶುದ್ಧಳಿದ್ದರೆ ಪಾಪರಹಿತಳಿದ್ದಾಳೆ, ಒಳ್ಳೆಯವಳಿದ್ದಾಳೆಂದು ಈಗ ಹೇಳುತ್ತಾರೆ, -

ಜಇ ದಂಸಣೇಣ ಸುದ್ಧಾ ಉತ್ತಾ ಮಗ್ಗೇಣ ಸಾವಿ ಸಂಜುತ್ತಾ ।
ಘೋರಂ ಚರಿಯ ಚರಿತ್ತಂ ಇತ್ಥೀಸು ಣ [2]ಪವ್ವಯಾ ಭಣಿಯಾ ॥೨೫॥

ಯದಿ ದರ್ಶನೇನ ಶುದ್ಧಾ ಉಕ್ತಾ ಮಾರ್ಗೇಣ ಸಾಪಿ ಸಂಯುಕ್ತಾ ।
ಘೋರಂ ಚರಿತ್ವಾ ಚಾರಿತ್ರಂ ಸ್ತ್ರೀಷು ನ ಪಾಪಕಾ ಭಣಿತಾ ॥೨೫॥

ಅರ್ಥ ಃ- ಸ್ತ್ರೀಯರಲ್ಲಿ ಯಾವ ಸ್ತ್ರೀಯು ದರ್ಶನ ಎಂದರೆ ಯಥಾರ್ಥ ಜಿನಮತದ ಶ್ರದ್ಧೆಯಿಂದ ಶುದ್ಧಳಿದ್ದಾಳೆ ಅವಳೇ ಮಾರ್ಗದಿಂದ ಸಂಯುಕ್ತಳೆಂದು ಹೇಳಲಾಗಿದೆ. ಯಾವಳು ಘೋರ ಚಾರಿತ್ರ ತೀವ್ರ ತಪಶ್ಚರಣ ಮೊದಲಾದವುಗಳ ಆಚರಣದಿಂದ ಪಾಪರಹಿತಳಾಗುತ್ತಿರುವುದರಿಂದ ಅವಳನ್ನು ಪಾಪಯುಕ್ತಳೆಂದು ಹೇಳುವುದಿಲ್ಲ.

ಭಾವಾರ್ಥ ಃ- ಸ್ತ್ರೀಯರಲ್ಲಿ ಯಾವ ಸ್ತ್ರೀಯು ಸಮ್ಯಕ್ತ್ವ ಸಹಿತಳಿದ್ದಾಳೆ ಮತ್ತು ತಪಶ್ಚರಣ ಮಾಡಿದರೆ ಪಾಪರಹಿತಳಾಗಿ ಸ್ವರ್ಗವನ್ನು ಪಡೆದುಕೊಳ್ಳುತ್ತಿರುವುದರಿಂದ ಪ್ರಶಂಸಾಯೋಗ್ಯಳಿದ್ದಾಳೆ, ಆದರೆ ಸ್ತ್ರೀಯ ಪರ್ಯಾಯದಿಂದ ಮೋಕ್ಷವಾಗುವುದಿಲ್ಲ. ॥೨೫॥

---

ದರಶನದಿಂದ ಶುದ್ಧವಿದ್ದವರನು ಮಾರ್ಗದಿಂ ಸಂಯುಕ್ತರೆಂದು ಹೇಳಿದೆ ।
ಘೋರ ಚಾರಿತ್ರ ತೀವ್ರ ಆಚರಣದಿಂದ ಕೂಡ ಸ್ತ್ರೀಗೆ ದೀಕ್ಷೆಯನು ಹೇಳಿಲ್ಲ ॥೨೫॥

---

೧ 'ಪ್ರವಜ್ಯೆ'ಯೆಂಬ ಪಾಠಾಂತರವಿದೆ.

೨ 'ಪಾವಯಾ' ಎಂಬ ಪಾಠಾಂತರವಿದೆ.

ಸ್ತ್ರೀಯರಿಗೆ ಧ್ಯಾನದ ಸಿದ್ಧಿ ಕೂಡ ಇಲ್ಲವೆಂದು ಈಗ ಹೇಳುತ್ತಾರೆ, –

**ಚಿತ್ತಾಸೋಹಿ ಣ ತೇಸಿಂ ಢಿಲ್ಲಂ ಭಾವಂ ತಹಾ ಸಹಾವೇಣ ।**
**ವಿಜ್ಜದಿ ಮಾಸಾ ತೇಸಿಂ ಇತ್ಥೀಸು ಣ ಸಂಕಯಾ ಝಾಣಾ ॥೨೬॥**

**ಚಿತ್ತಾಶೋಧಿ ನ ತೇಷಾಂ ಶಿಥಿಲಃ ಭಾವಃ ತಥಾ ಸ್ವಭಾವೇನ ।**
**ವಿದ್ಯತೇ ಮಾಸಾ ತೇಷಾಂ ಸ್ತ್ರೀಷು ನ ಶಂಕಯಾ ಧ್ಯಾನಮ್ ॥೨೬॥**

ಅರ್ಥ :– ಆ ಸ್ತ್ರೀಯರಿಗೆ ಚಿತ್ತದ ಶುದ್ಧತೆಯಿಲ್ಲ, ಅಂತೆಯೇ ಅವರಿಗೆ ಸ್ವಭಾವದಿಂದಲೇ ಸಡಿಲು ಭಾವವಿದೆ ಶಿಥಿಲ ಪರಿಣಾಮವಿದೆ, ಮತ್ತು ಅವರಿಗೆ ಮಾಸಾ ಎಂದರೆ ತಿಂಗಳು ತಿಂಗಳಿಗೆ ರುಧಿರದ ಸ್ರಾವವು ವಿದ್ಯಮಾನವಿದೆ ಅದರ ಶಂಕೆಯಿರುತ್ತದೆ, ಅದರಿಂದ ಸ್ತ್ರೀಯರಿಗೆ ಧ್ಯಾನವಿಲ್ಲ.

ಭಾವಾರ್ಥ :– ಧ್ಯಾನವು ಅದು ಚಿತ್ತಶುದ್ಧವಿದ್ದಾಗ, ದೃಢ ಪರಿಣಾಮವಿದ್ದಾಗ, ಯಾವುದೇ ಪ್ರಕಾರದ ಶಂಕೆಯಿಲ್ಲದಾಗ ಆಗುತ್ತದೆ, ಆದರೆ ಸ್ತ್ರೀಯರಿಗೆ ಮೂರೂ ಕಾರಣಗಳಿಲ್ಲದಿರುವಾಗ ಧ್ಯಾನ ಹೇಗಾಗುವುದು ? ಧ್ಯಾನವಿಲ್ಲದೆ ಕೇವಲಜ್ಞಾನವು ಹೇಗೆ ಉತ್ಪನ್ನವಾಗುವುದು, ಮತ್ತು ಕೇವಲಜ್ಞಾನವಿಲ್ಲದೆ ಮೋಕ್ಷವಿಲ್ಲ, ಶ್ವೇತಾಂಬರ ಮೊದಲಾದವರು ಮೋಕ್ಷ ಹೇಳುತ್ತಾರೆ ಅದು ಮಿಥ್ಯೆಯಿದೆ. ॥೨೬॥

ಈಗ ಸಾಮಾನ್ಯ ರೂಪದಿಂದ ಸುಖದ ಕಾರಣ ಹೇಳುತ್ತ ಸೂತ್ರ ಪಾಹುಡವನ್ನು ಪೂರ್ಣ ಮಾಡುತ್ತಾರೆ, –

**ಗಾಹೇಣ ಅಪ್ಪಗಾಹಾ ಸಮುದ್ದಸಲಿಲೇ ಸಚೇಲಅತ್ಥೇಣ ।**
**ಇಚ್ಛಾ ಜಾಹು ಣಿಯತ್ತಾ ತಾಹ ಣಿಯತ್ತಾಇಂ ಸವ್ವದುಕ್ಖಾ ಇಂ ॥೨೭॥**

**ಗ್ರಾಹ್ಯೇಣ ಅಲ್ಪಗ್ರಾಹ್ಯಾಃ ಸಮುದ್ರಸಲಿಲೇ ಸ್ವಚೇಲಾರ್ಥೇನ ।**
**ಇಚ್ಛಾ ಯೇಭ್ಯಃ ನಿವೃತ್ತಾಃ ತೇಷಾಂ ನಿವೃತ್ತಾನಿ ಸರ್ವದುಃಖಾನಿ ॥೨೭॥**

ಅರ್ಥ :– ಆ ಮುನಿಗಳು ಗ್ರಾಹ್ಯ ಎಂದರೆ ಗ್ರಹಣ ಮಾಡಲು ಯೋಗ್ಯ ವಸ್ತು ಆಹಾರ ಮೊದಲಾದವುಗಳಿಂದಂತೂ ಅಲ್ಪ ಗ್ರಾಹ್ಯರಿದ್ದಾರೆ, ಸ್ವಲ್ಪ ಗ್ರಹಣ ಮಾಡುತ್ತಾರೆ, ಹೇಗೆಂದರೆ ಓರ್ವ ಪುರುಷನು ಅಧಿಕ ಜಲದಿಂದ ತುಂಬಿರುವ ಸಮುದ್ರದಿಂದ ತನ್ನ ಬಟ್ಟೆಯನ್ನು ತೊಳೆಯುವ ಸಲುವಾಗಿ ಬಟ್ಟೆ ತೊಳೆಯಲು ಮಾತ್ರ ಜಲವನ್ನು ಗ್ರಹಣ ಮಾಡುತ್ತಾನೆ ಮತ್ತು ಯಾವ ಮುನಿಗಳಿಗೆ ಇಚ್ಛೆಯು ನಿವೃತ್ತವಾಗಿದೆ ಅವರಿಗೆ ಎಲ್ಲ ದುಃಖಗಳು ನಿವೃತ್ತವಾಗಿ ಹೋಗಿವೆ.

---

ಸ್ತ್ರೀಗೆ ಚಿತ್ತಶುದ್ಧಿಯಿಲ್ಲ ಪರಿಣಾಮಶಿಥಿಲವಿರುವುದು ಸ್ವಭಾವದಿಂದ ।
ಸ್ತ್ರೀಗೆ ಮಾಸಿಕಧರ್ಮವಿದ್ದು ಶಂಕೆಯಿರುವುದರಿಂದವರಿಗೆ ಧ್ಯಾನವಿಲ್ಲ ॥೨೬॥

ಆ ವಸ್ತ್ರಶುದ್ಧ್ಯರ್ಥ ಜಲಭರಿತಸಮುದ್ರದಿಂದಲ್ಪ ಮಾತ್ರ ಗ್ರಹಿಸುವನು ।
ಯಾವನ ಇಚ್ಛೆನಿವೃತ್ತವಾಗಿದೆಯವನ ಸರ್ವ ದುಃಖ ನಿವೃತ್ತವಾಗಿವೆ ॥೨೭॥

ಭಾವಾರ್ಥ ಃ- ಯಾರಿಗೆ ಸಂತೋಷವಿದೆ ಅವರು ಸುಖಿಗಳಿದ್ದಾರೆಂಬುದು ಜಗತ್ತಿನಲ್ಲಿ ಪ್ರಸಿದ್ಧವಿದೆ, ಈ ನ್ಯಾಯದಿಂದ ಯಾವ ಮುನಿಗಳಿಗೆ ಇಚ್ಛೆಯ ನಿವೃತ್ತಿಯಾಗಿದೆ ಅವರಿಗೆ ಸಂಸಾರದ ವಿಷಯಸಂಬಂಧವಾದ ಇಚ್ಛೆಯು ಸ್ವಲ್ಪ ಮಾತ್ರವೂ ಇಲ್ಲ, ದೇಹದಿಂದಲೂ ವಿರಕ್ತರಿರುವುದರಿಂದ ಪರಮ ಸಂತೋಷಿಗಳಿದ್ದಾರೆಂಬುದು ಸಿದ್ಧವಾಯಿತು, ಮತ್ತು ಒಂದಿಷ್ಟು ಗ್ರಹಣ ಮಾಡಲು ಯೋಗ್ಯ ಆಹಾರಾದಿಗಳಿವೆ ಅವುಗಳಲ್ಲಿಯೂ ಅಲ್ಪವನ್ನು ಗ್ರಹಣ ಮಾಡುತ್ತಿರುವುದರಿಂದ ಅವರು ಪರಮ ಸಂತೋಷಿಗಳಿದ್ದಾರೆ, ಅವರು ಪರಮ ಸುಖಿಗಳಿದ್ದಾರೆ, ಇದು ಜಿನಸೂತ್ರದ ಶ್ರದ್ಧೆಯ ಫಲವಿದೆ, ಅನ್ಯಸೂತ್ರಗಳಲ್ಲಿ ಯಥಾರ್ಥ ನಿವೃತ್ತಿಯ ಪ್ರರೂಪಣೆಯಿಲ್ಲದಿರುವುದರಿಂದ ಕಲ್ಯಾಣದ ಸುಖವನ್ನು ಬಯಸುವವರಿಗೆ ಜಿನಸೂತ್ರದ ಸೇವನೆಯನ್ನು ನಿರಂತರ ಮಾಡುವುದು ಯೋಗ್ಯವಿದೆ. ॥೨೭॥

ಜಿನವರರ ಧ್ವನಿ ಮೇಘಧ್ವನಿಯಂತೆ ಸರ್ವಾಂಗ ಗರ್ಜಿಪುದು
ಗಣಧರರ ಶ್ರುತಿ ಅಕ್ಷರ ಪದರೂಪ ಭುವಿ ವೃಷ್ಟಿಪುದು
ಸಕಲತತ್ತ್ವ ಪ್ರಕಟಿಪುದು ಜಗದತಾಪ ನಿವಾರಿಪುದು
ಹೇಯ-ಅಹೇಯ ವಿಧಾನ ತಿಳಿದು ಜನಮನದಿ ಧರಿಪುದು
ಪಂಚಮಕಾಲದಿ ವರ್ಧಮಾನ ಜಿನರ ವಚನ ವರ್ತಿಪುದು
ಅವರ ಪದಕೆರಗಿ ಭವ್ಯರು ಶಿವಮಾರ್ಗ ಪಡೆಯುವುದು.

ಈ ಪ್ರಕಾರ ಭ. ಕುಂದಕುಂದಾಚಾರ್ಯದೇವವಿರಚಿತ ಅಷ್ಟಪಾಹುಡದಲ್ಲಿ
ಎರಡನೆಯ ಸೂತ್ರಪಾಹುಡ ಮತ್ತು ಅದರ ಜಯಚಂದ
ಛಾಬಡಾಕೃತ ದೇಶಭಾಷಾಮಯ ವಚನಿಕೆಯ
ಕನ್ನಡ ಭಾಷಾನುವಾದವು
ಸಮಾಪ್ತವಾಯಿತು.

೩

# ಚಾರಿತ್ರ ಪಾಹುಡ

ವೀತರಾಗ ಸರ್ವಜ್ಞ ಜಿನರಿಗೆ ವಂದಿಪೆ ಮನವಚಕಾಯ ।
ಚಾರಿತ್ರಧರ್ಮವನು ವರ್ಣಿಪೆ ನಿಜವಾದ ಮೋಕ್ಷಉಪಾಯ ॥
ಕುಂದಕುಂದ ಮುನಿರಾಜ ವಿರಚಿತ ಚಾರಿತ್ರಪಾಹುಡ ಗ್ರಂಥ ।
ಪ್ರಾಕೃತಗಾಥಾಬಂಧದಿಂ ಮಾಡುವೆನು ವಚನಿಕೆಯೊಳಾದ್ಯಂತ ॥

ಈ ಪ್ರಕಾರ ಮಂಗಲಪೂರ್ವಕ ಪ್ರತಿಜ್ಞೆಮಾಡಿ ಈಗ ಚಾರಿತ್ರಪಾಹುಡ ಪ್ರಾಕೃತ ಗಾಥಾಬಂಧದ ದೇಶ ಭಾಷಾಮಯ ವಚನಿಕೆಯ ಕನ್ನಡ ಅನುವಾದವನ್ನು ಬರೆಯಲಾಗುತ್ತಿದೆ. ಭ. ಕುಂದಕುಂದಾಚಾರ್ಯದೇವರು ಪ್ರಾರಂಭದಲ್ಲಿಯೇ ಮಂಗಲದ ಸಲುವಾಗಿ ಇಷ್ಟದೇವರಿಗೆ ನಮಸ್ಕಾರ ಮಾಡಿ ಚಾರಿತ್ರಪಾಹುಡವನ್ನು ಹೇಳುವ ಪ್ರತಿಜ್ಞೆ ಮಾಡುತ್ತಾರೆ, –

ಸವ್ವಣ್ಹು ಸವ್ವದಂಸೀ ಣಿಮ್ಮೋಹಾ ವೀಯರಾಯ ಪರಮೇಟ್ಠೀ ।
ವಂದಿತ್ತು ತಿಜಗವಂದಾ ಅರಹಂತಾ ಭವ್ವಜೀವೇಹಿಂ ॥೧॥

ಣಾಣಂ ದಂಸಣ ಸಮ್ಮಂ ಚಾರಿತ್ತಂ ಸೋಹಿಕಾರಣಂ ತೇಸಿಂ ।
ಮೋಕ್ಖಾರಾಹಣಹೇಉಂ ಚಾರಿತ್ತಂ ಪಾಹುಡಂ ವೋಚ್ಛೇ ॥೨॥

ಸರ್ವಜ್ಞಾನ್ ಸರ್ವದರ್ಶಿನಃ ನಿರ್ಮೋಹಾನ್ ವೀತರಾಗಾನ್ ಪರಮೇಷ್ಠಿನಃ ।
ವಂದಿತ್ವಾ ತ್ರಿಜಗದ್ವಂದಿತಾನ್ ಅರ್ಹತಃ ಭವ್ಯಜೀವೈಃ ॥೧॥

ಜ್ಞಾನಂ ದರ್ಶನಂ ಸಮ್ಯಕ್ ಚಾರಿತ್ರಂ ಶುದ್ಧಿ ಕಾರಣಂ ತೇಷಾಮ್ ।
ಮೋಕ್ಷಾರಾಧನಹೇತುಂ ಚಾರಿತ್ರಂ ಪ್ರಾಭೃತಂ ವಕ್ಷ್ಯೇ ॥೨॥

---

ಸರ್ವಜ್ಞ ಪರಮೇಷ್ಠಿ ಪರಮವೀತರಾಗ ವಿಗತಮೋಹ ಮತ್ತದರಂತೆ ।
ಸರ್ವದರ್ಶಿ ತ್ರಿಜಗವಂದಿತ ಭವ್ಯಪೂಜಿತ ಅರಹಂತರಿಗೆ ನಮಿಸಿ ॥೧॥

ಜ್ಞಾನದರ್ಶನ ಸಮ್ಯಕ್ಚಾರಿತ್ರಗಳ ಶುದ್ಧತೆಯ ಕಾರಣವಾಗಿರುವ ।
ತೇನ ಮೋಕ್ಷಾರಾಧನ ಹೇತುವಾದ ಚಾರಿತ್ರಪಾಹುಡವ ಪೇಳುವೆನು ನಾನು ॥೨॥

ಅರ್ಥ :- ನಾನು ಅರಹಂತ ಪರಮೇಷ್ಠಿಗಳಿಗೆ ನಮಸ್ಕಾರಮಾಡಿ ಚಾರಿತ್ರ ಪಾಹುಡವನ್ನು ಹೇಳುತ್ತೇನೆಂದು ಆಚಾರ್ಯದೇವರು ಹೇಳುತ್ತಾರೆ. ಅರಹಂತ ಪರಮೇಷ್ಠಿಗಳು ಹೇಗಿದ್ದಾರೆಂದರೆ ಅರಹಂತವೆಂಬ ಪ್ರಾಕೃತ ಅಕ್ಷರದ ಅಪೇಕ್ಷೆಯಿಂದಂತೂ ಹೀಗೆ ಅರ್ಥವಿದೆ - ಅಕಾರ ಮೊದಲಾದ ಅಕ್ಷರದಿಂದಂತೂ 'ಅರಿ' ಎಂದರೆ ಮೋಹಕರ್ಮ, ರಕಾರ ಮೊದಲಾದ ಅಕ್ಷರದ ಅಪೇಕ್ಷೆಯಿಂದ 'ರಜ' ಎಂದರೆ ಜ್ಞಾನಾವರಣ, ದರ್ಶನಾವರಣಕರ್ಮ, ಅದೇ ರಕಾರದಿಂದ ರಹಸ್ಯ ಎಂದರೆ ಅಂತರಾಯ ಕರ್ಮ ಹೀಗೆ ನಾಲ್ಕು ಘಾತಿಕರ್ಮಗಳನ್ನು ಯಾರು ಘಾತಮಾಡಿದ್ದಾರೆ ಅವರು ಅರಹಂತರಿದ್ದಾರೆ. ಸಂಸ್ಕೃತದ ಅಪೇಕ್ಷೆಯಿಂದ 'ಅರ್ಹ'ವೆಂದು ಪೂಜೆಯ ಅರ್ಥದಲ್ಲಿ ಧಾತುವಿದೆ ಅದರಿಂದ 'ಅರ್ಹನ್'ವೆಂದು ನಿಷ್ಪನ್ನವಾದಾಗ ಪೂಜಾಯೋಗ್ಯವಿರುವವರನ್ನು ಅರ್ಹತ್‌ರೆಂದು ಹೇಳುತ್ತಾರೆ. ಅವರು ಭವ್ಯಜೀವರುಗಳಿಂದ ಪೂಜ್ಯರಿದ್ದಾರೆ. ಪರಮೇಷ್ಠಿಯೆಂದು ಹೇಳುವುದರಿಂದ ಪರಮ ಇಷ್ಟ ಎಂದರೆ ಉತ್ಕೃಷ್ಟ ಪೂಜ್ಯರಿರುವವರನ್ನು ಪರಮೇಷ್ಠಿಗಳೆಂದು ಹೇಳುತ್ತಾರೆ ಅಥವಾ ಪರಮ ಆ ಉತ್ಕೃಷ್ಟಪದದಲ್ಲಿ ಸ್ಥಿರವಿರುವವರು ಪರಮೇಷ್ಠಿಗಳಿದ್ದಾರೆ. ಹೀಗೆ ಇಂದ್ರಾದಿಕರಿಂದ ಪೂಜ್ಯರಾದ ಅರಹಂತ ಪರಮೇಷ್ಠಿಗಳಿದ್ದಾರೆ.

ಸಮಸ್ತ ಲೋಕಾಲೋಕಸ್ವರೂಪ ಚರಾಚರ ಪದಾರ್ಥಗಳನ್ನು ಪ್ರತ್ಯಕ್ಷ ತಿಳಿಯುವವರು ಸರ್ವಜ್ಞರಿದ್ದಾರೆ. ಸರ್ವದರ್ಶಿ ಎಂದರೆ ಸಮಸ್ತ ಪದಾರ್ಥಗಳನ್ನು ನೋಡುವವರಿದ್ದಾರೆ. ಮೋಹನೀಯನಾಮದ ಕರ್ಮದ ಮುಖ್ಯ ಪ್ರಕೃತಿಯಾದ ಮಿಥ್ಯಾತ್ವದಿಂದ ರಹಿತರಿರುವವರು ನಿರ್ಮೋಹಿಗಳಿದ್ದಾರೆ. ವಿಶೇಷ ರೂಪದಿಂದ ರಾಗವು ದೂರವಾಗಿರುವವರು ಅವರು ವೀತರಾಗರಿದ್ದಾರೆ, ಅವರಿಗೆ ಚಾರಿತ್ರಮೋಹನೀಯ ಕರ್ಮದ ಉದಯದಿಂದ (ಉದಯವಶದಿಂದ) ಇರುವಂಥ ರಾಗದ್ವೇಷಗಳೂ ಇಲ್ಲ. ಮೂರು ಲೋಕದ ಪ್ರಾಣಿಗಳು ಹಾಗೂ ಅವರ ಅಧಿಪತಿಗಳಾದ ಇಂದ್ರ, ಧರಣೇಂದ್ರ, ಚಕ್ರವರ್ತಿಗಳಿಂದ ವಂದನೆಗೆ ಯೋಗ್ಯರಿರುವವರು ಅವರು ತ್ರಿಜಗವಂದ್ಯರಿದ್ದಾರೆ ಹೀಗೆ ಅರಹಂತ ಪದವನ್ನು ವಿಶೇಷ್ಯಮಾಡಿ ಮತ್ತು ಅನ್ಯಪದಗಳನ್ನು ವಿಶೇಷಣಮಾಡಿ ಅರ್ಥಮಾಡಿದೆ. ಸರ್ವಜ್ಞಪದವನ್ನು ವಿಶೇಷ್ಯಮಾಡಿ ಅನ್ಯಪದಗಳನ್ನು ವಿಶೇಷಣಮಾಡಿದ ಮೇಲೆ ಎಂದೂ ಅರ್ಥವಾಗುತ್ತದೆ, ಆದರೆ ಅಲ್ಲಿ ಅರಹಂತರು ಭವ್ಯ ಜೀವರುಗಳಿಂದ ಪೂಜ್ಯರಿರುವುದರಿಂದ ಈ ಪ್ರಕಾರ ವಿಶೇಷಣವಾಗುತ್ತದೆ.

ಸಮ್ಯಗ್ದರ್ಶನ ಸಮ್ಯಗ್ಜ್ಞಾನ, ಸಮ್ಯಕ್ಚಾರಿತ್ರ ಇವು ಮೂರು ಆತ್ಮನ ಪರಿಣಾಮಗಳಿವೆ, ಅವಕ್ಕೆ ಶುದ್ಧತೆಯ ಕಾರಣವಿದೆ,ಚಾರಿತ್ರ ಅಂಗೀಕಾರ ಮಾಡಿದ ಮೇಲೆ ಸಮ್ಯಗ್ದರ್ಶನ ಮೊದಲಾದ ಪರಿಣಾಮಗಳು ನಿರ್ದೋಷವಾಗುತ್ತವೆ. ಚಾರಿತ್ರವು ಮೋಕ್ಷದ ಆರಾಧನೆಯ ಕಾರಣವಿದೆ. ಈ ಪ್ರಕಾರ ಚಾರಿತ್ರ ಪಾಹುಡ (ಪ್ರಾಭೃತ)ಗ್ರಂಥವನ್ನು ಹೇಳುವೆನೆಂದು ಆಚಾರ್ಯರು ಮಂಗಲಪೂರ್ವಕ ಪ್ರತಿಜ್ಞೆ ಮಾಡಿದ್ದಾರೆ. ||೧-೨||

ಈಗ ಸಮ್ಯಗ್ದರ್ಶನ ಮೊದಲಾದ ಮೂರು ಭಾವಗಳ ಸ್ವರೂಪ ಹೇಳುತ್ತಾರೆ, -

**ಜಂ ಜಾಣಇ ತಂ ಣಾಣಂ ಜಂ ಪೇಚ್ಛಇ ತಂ ಚ ದಂಸಣಂ ಭಣಿಯಂ ।**
**ಣಾಣಸ್ಸ ಪಿಚ್ಛಿಯಸ್ಸ ಯ ಸಮವಣ್ಣಾ ಹೋಇ ಚಾರಿತ್ತಂ ||೩||**

---

ಯಾವುದು ತಿಳಿವುದದನು ಜ್ಞಾನ ನೋಡುವುದದನು ದರ್ಶನವೆಂದು ಪೇಳಿಹರು ।
ಭಾವಿಪುದು ಜ್ಞಾನದರ್ಶನಗಳ ಸಮಾಯೋಗದಿಂ ಚಾರಿತ್ರವಾಗುವುದು ||೩||

ಯಜ್ಞಾನಾತಿ ತತ್ ಜ್ಞಾನಂ ಯತ್ ಪಶ್ಯತಿ ತಚ್ಚ ದರ್ಶನಂ ಭಣಿತಮ್ ।
ಜ್ಞಾನಸ್ಯ ದರ್ಶನಸ್ಯ ಚ ಸಮಾಪನ್ನಾತ್ ಭವತಿ ಚಾರಿತ್ರಮ್ ॥೩॥

ಅರ್ಥ ಃ– ಯಾವುದು ತಿಳಿಯುತ್ತದೆ ಅದು ಜ್ಞಾನವಿದೆ, ಯಾವುದು ನೋಡುತ್ತದೆ ಅದು ದರ್ಶನವಿದೆಯೆಂದು ಹೇಳಿದೆ. ಜ್ಞಾನ ಮತ್ತು ದರ್ಶನದ ಸಮಾಯೋಗದಿಂದ ಚಾರಿತ್ರವಾಗುತ್ತದೆ.

ಭಾವಾರ್ಥ ಃ– ತಿಳಿಯುವುದಂತೂ ಜ್ಞಾನವಿದೆ ಮತ್ತು ನೋಡುವುದು, ಶ್ರದ್ಧೆ ಮಾಡುವುದು ಅದು ದರ್ಶನವಿದೆ ಇನ್ನು ಎರಡೂ ಏಕರೂಪವಾಗಿ ಸ್ಥಿರವಾಗುವುದು ಚಾರಿತ್ರವಿದೆ ॥೩॥?

ಜೀವದ ಯಾವ ಮೂರು ಭಾವಗಳಿವೆ ಅವುಗಳ ಶುದ್ಧತೆಯ ಸಲುವಾಗಿ ಎರಡು ಪ್ರಕಾರದ ಚಾರಿತ್ರವಿದೆ ಯೆಂದು ಈಗ ಹೇಳುತ್ತಾರೆ, –

ಏಏ ತಿಣ್ಣಿ ವಿ ಭಾವಾ ಹವಂತಿ ಜೀವಸ್ಸ ಅಕ್ಖಯಾಮೇಯಾ ।
ತಿಣ್ಹಂ ಪಿ ಸೋಹಣತ್ಥೇ ಜಿಣಭಣಿಯಂ ದುವಿಹ ಚಾರಿತ್ತಂ ॥೪॥

ಏತೇ ತ್ರಯೋಽಪಿ ಭಾವಾಃ ಭವಂತಿ ಜೀವಸ್ಯ ಅಕ್ಷಯಾಃ ಅಮೇಯಾಃ ।
ತ್ರಯಾಣಾಮಪಿ ಶೋಧನಾರ್ಥಂ ಜಿನಭಣಿತಂ ದ್ವಿವಿಧಂ ಚಾರಿತ್ರಂ ॥೪॥

ಅರ್ಥ ಃ– ಇವು ಜ್ಞಾನ ಮೊದಲಾದ ಮೂರು ಭಾವಗಳನ್ನು ಹೇಳಿದೆ, ಇವು ಅಕ್ಷಯ ಮತ್ತು ಅನಂತ ಜೀವಗಳ ಭಾವಗಳಿವೆ, ಇವುಗಳನ್ನು ಶೋಧಿಸುವ ಸಲುವಾಗಿ ಜಿನದೇವರು ಎರಡು ಪ್ರಕಾರದ ಚಾರಿತ್ರವನ್ನು ಹೇಳಿದ್ದಾರೆ.

ಭಾವಾರ್ಥ ಃ– ತಿಳಿಯುವುದು, ನೋಡುವುದು ಮತ್ತು ಆಚರಣೆ ಮಾಡುವುದು ಇವು ಮೂರು ಜೀವದ ಅಕ್ಷಯಾನಂತ ಭಾವಗಳಿವೆ, ಅಕ್ಷಯ ಎಂದರೆ ಅದರದು ನಾಶವಿಲ್ಲ, ಅಮೇಯ ಎಂದರೆ ಅನಂತ ಅದರದು ಪಾರವಿಲ್ಲ, ಸಮಸ್ತ ಲೋಕಾಲೋಕವನ್ನು ತಿಳಿಯುವಂಥದು ಜ್ಞಾನವಿದೆ, ಇದೇ ಪ್ರಕಾರ ದರ್ಶನವಿದೆ, ಇದೇ ಪ್ರಕಾರದ ಚಾರಿತ್ರವಿದ್ದರೂ ಕೂಡ ಘಾತಿಕರ್ಮಗಳ ನಿಮಿತ್ತದಿಂದ ಅಶುದ್ಧವಿವೆ ಅವು ಜ್ಞಾನ–ದರ್ಶನ–ಚಾರಿತ್ರ ರೂಪಗಳಿರುವುದರಿಂದ ಜಿನದೇವರು ಅವನ್ನು ಶುದ್ಧ ಮಾಡುವ ಸಲುವಾಗಿ ಇವುಗಳ ಚಾರಿತ್ರವನ್ನು (ಆಚರಣೆ ಮಾಡುವುದನ್ನು) ಎರಡು ಪ್ರಕಾರವಾಗಿ ಹೇಳಿದ್ದಾರೆ. ॥೪॥

ಎರಡು ಪ್ರಕಾರವಾಗಿಹೇಳಿರುವುದನ್ನು ಈಗ ಹೇಳುತ್ತಾರೆ, –

ಜಿಣಣಾಣದಿಟ್ಠಿಸುದ್ಧಂ ಪಢಮಂ ಸಮ್ಮತ್ತಚರಣಚಾರಿತ್ತಂ ।
ಬಿದಿಯಂ ಸಂಜಮಚರಣಂ ಜಿಣಣಾಣಸದೇಸಿಯಂ ತಂ ಪಿ ॥೫॥

---

ಈ ಮೂರು ಭಾವಗಳು ಜೀವನಿಗೆ ಅವಿನಾಶಿ ಮೇಣಮೇಯವಿರುವವು ।
ಈ ಮೂರು ಭಾವಗಳ ಶುದ್ಧ್ಯರ್ಥ ಜಿನದೇವ ದ್ವಿವಿಧ ಚಾರಿತ್ರ ಪೇಳಿಹರು ॥೪॥

ಜಿನಜ್ಞಾನದರ್ಶನ ಶುದ್ಧ ಪ್ರಥಮ ಸಮ್ಯಕ್ತ್ವಾಚರಣ ಚಾರಿತ್ರವಿದೆ ।
ಜಿನಜ್ಞಾನಭಾಷಿತದ್ವಿತೀಯ ಸಂಯಮಾಚರಣ ಚಾರಿತ್ರ ಕೂಡ ತಾನೆ ॥೫॥

**ಜಿನಜ್ಞಾನದೃಷ್ಟಿ ಶುದ್ಧಂ ಪ್ರಥಮಂ ಸಮ್ಯಕ್ತ್ವ ಚರಣಚಾರಿತ್ರಮ್ ।**
**ದ್ವಿತೀಯಂ ಸಂಯಮಚರಣಂ ಜಿನಜ್ಞಾನಸಂದೇಶಿತಂ ತದಪಿ ।।೫।।**

ಅರ್ಥ ः- ಮೊದಲಂತೂ ಸಮ್ಯಕ್ತ್ವದ ಆಚರಣಸ್ವರೂಪ ಚಾರಿತ್ರವಿದೆ, ಅದು ಜಿನದೇವರು ಜ್ಞಾನ ದರ್ಶನ ಶ್ರದ್ಧೆಯಿಂದ ಮಾಡಿರುವುದು ಶುದ್ಧವಿದೆ ಎರಡನೆಯದು ಸಂಯಮದ ಆಚರಣಸ್ವರೂಪವಾದ ಚಾರಿತ್ರವಿದೆ, ಅದು ಕೂಡ ಜಿನದೇವರ ಜ್ಞಾನದಿಂದ ತಿಳಿಸಿರುವುದು ಶುದ್ಧವಿದೆ.

ಭಾವಾರ್ಥ ः- ಎರಡು ಪ್ರಕಾರದ ಚಾರಿತ್ರವನ್ನು ಹೇಳಿದೆ. ಮೊದಲಂತೂ ಸಮ್ಯಕ್ತ್ವದ ಆಚರಣ ಹೇಳಿದೆ ಅದು ಆ ಸರ್ವಜ್ಞರ ಆಗಮದಲ್ಲಿ ತತ್ತ್ವಾರ್ಥದ ಸ್ವರೂಪ ಹೇಳಿದೆ ಅದನ್ನು ಯಥಾರ್ಥವಾಗಿ ತಿಳಿದುಕೊಂಡು ಶ್ರದ್ಧೆ ಮಾಡುವುದು ಮತ್ತು ಅದರ ಶಂಕೆ ಮೊದಲಾದ ಅತಿಚಾರ ಮಲದೋಷ ಹೇಳಿದೆ ಅವುಗಳ ಪರಿಹಾರ ಮಾಡಿ ಶುದ್ಧಮಾಡುವುದು ಹಾಗೂ ಅದರ ನಿಃಶಂಕಿತ ಮೊದಲಾದ ಗುಣಗಳು ಪ್ರಕಟವಾಗುವುದು ಅದು ಸಮ್ಯಕ್ತ್ವಚರಣ ಚಾರಿತ್ರವಿದೆ ಮತ್ತು ಆ ಮಹಾವ್ರತ ಮೊದಲಾದವುಗಳನ್ನು ಅಂಗೀಕಾರ ಮಾಡಿ ಸರ್ವಜ್ಞರ ಆಗಮದಲ್ಲಿ ಹೇಳಿರುವಂತೆ ಸಂಯಮದ ಆಚರಣೆ ಮಾಡುವುದು ಮತ್ತು ಅದರ ಅತಿಚಾರ ಮೊದಲಾದ ದೋಷಗಳನ್ನು ದೂರ ಮಾಡುವುದು ಅದು ಸಂಯಮಚರಣ ಚಾರಿತ್ರವಿದೆ, ಈ ಪ್ರಕಾರ ಸಂಕ್ಷೇಪದಿಂದ ಸ್ವರೂಪ ಹೇಳಿದೆ. ।।೫।।

ಈಗ ಸಮ್ಯಕ್ತ್ವಚರಣ ಚಾರಿತ್ರದ ಮಲ ದೋಷಗಳ ಪರಿಹಾರ ಮಾಡಿ ಆಚರಣ ಮಾಡುವುದನ್ನು ಹೇಳುತ್ತಾರೆ,-

**ಏವಂ ಚಿಯ ಣಾಊಣ ಯ ಸವ್ವೇ ಮಿಚ್ಛತ್ತದೋಸ ಸಂಕಾಇ ।**
**ಪರಿಹರ ಸಮ್ಮತ್ತಮಲಾ ಜಿಣಭಣಿಯಾ ತಿವಿಹಜೋಏಣ ।।೬।।**

**ಏವಂ ಚೈವ ಜ್ಞಾತ್ವಾ ಚ ಸರ್ವಾನ್ ಮಿಥ್ಯಾತ್ವದೋಷಾನ್ ಶಂಕಾದೀನ್ ।**
**ಪರಿಹರ ಸಮ್ಯಕ್ತ್ವಮಲಾನ್ ಜಿನಭಣಿತಾನ್ ತ್ರಿವಿಧಯೋಗೇನ ।।೬।।**

ಅರ್ಥ ः- ಹೀಗೆ ಪೂರ್ವೋಕ್ತ ಪ್ರಕಾರ ಸಮ್ಯಕ್ತ್ವಾಚರಣ ಚಾರಿತ್ರವನ್ನು ತಿಳಿದುಕೊಂಡು ಮಿಥ್ಯಾತ್ವಕರ್ಮದ ಉದಯದಿಂದಾದ ಶಂಕಾದಿ ದೋಷಗಳು ಸಮ್ಯಕ್ತ್ವವನ್ನು ಅಶುದ್ಧ ಮಾಡುವಂಥ ಮಲಗಳಿವೆಯೆಂದು ಜಿನದೇವರು ಹೇಳಿದ್ದಾರೆ. ಇವನ್ನು ಮನ-ವಚನ-ಕಾಯದ ಮೂರೂ ಯೋಗಗಳಿಂದ ಬಿಡಬೇಕು.

ಭಾವಾರ್ಥ ः- ಶಂಕಾದಿ ದೋಷಗಳು ಸಮ್ಯಕ್ತ್ವದ ಮಲಗಳಿದ್ದು ಅವನ್ನು ತ್ಯಾಗ ಮಾಡಿದ ಮೇಲೆ ಸಮ್ಯಕ್ತ್ವಾಚರಣ ಚಾರಿತ್ರವು ಶುದ್ಧವಾಗುವುದರಿಂದ ಜಿನದೇವರು ಇವನ್ನು ತ್ಯಾಗಮಾಡುವ ಉಪದೇಶ ಮಾಡಿದ್ದಾರೆ ಆ ದೋಷಗಳು ಏನಿವೆಯೆಂಬುದನ್ನು ಹೇಳುತ್ತಾರೆ. ಜಿನವಚನದಲ್ಲಿ ವಸ್ತುವಿನ ಸ್ವರೂಪ ಹೇಳಿದೆ ಅದರಲ್ಲಿ ಸಂಶಯ ಮಾಡುವುದು ಶಂಕಾದೋಷವಿದೆ, ಇದು ಇದ್ದ ಮೇಲೆ ಸಪ್ತಭಯದ ನಿಮಿತ್ತದಿಂದ ಸ್ವರೂಪದಿಂದ ದೂರವಾಗುವುದು

---

**ಈ ರೀತಿ ಎಲ್ಲವನು ತಿಳಿದು ಮಿಥ್ಯಾತ್ವಮಯದೋಷ ಶಂಕಾದಿಗಳನು ।**
**ಪರಿಹರಿಸು ತ್ರಿವಿಧಯೋಗದಿಂ ಜಿನದೇವಪೇಳ್ದ ಸಮ್ಯಕ್ತ್ವಮಲವ ।।೬।।**

ಅದುಕೂಡ ಶಂಕೆಯಿದೆ, ಭೋಗಗಳ ಅಭಿಲಾಷೆಯು ಅದು ಕಾಂಕ್ಷಾ ದೋಷವಿದೆ, ಇದು ಇದ್ದ ಮೇಲೆ ಭೋಗಗಳ ಸಲುವಾಗಿ ಸ್ವರೂಪದಿಂದ ಭ್ರಷ್ಟನಾಗಿ ಬಿಡುತ್ತಾನೆ. ವಸ್ತುವಿನ ಸ್ವರೂಪ ಎಂದರೆ ಧರ್ಮದಲ್ಲಿ ಗ್ಲಾನಿ ಮಾಡುವುದು ಅದು ಜುಗುಪ್ಸೆ ದೋಷವಿದೆ, ಇದು ಇದ್ದ ಮೇಲೆ ಧರ್ಮಾತ್ಮ ಪುರುಷನು ಪೂರ್ವಕರ್ಮದ ಉದಯದಿಂದ ಬಾಹ್ಯಮಲಿನತೆಯನ್ನು ನೋಡಿ ಮತದಿಂದ ದೂರ ಹೋಗುವುದಾಗುತ್ತದೆ.

ದೇವ-ಗುರು-ಧರ್ಮ ಹಾಗೂ ಲೌಕಿಕ ಕಾರ್ಯಗಳಲ್ಲಿ ಮೂಢತೆ ಎಂದರೆ ಯಥಾರ್ಥ ಸ್ವರೂಪವನ್ನು ತಿಳಿಯದಿರುವುದು ಅದು ಮೂಢ ದೃಷ್ಟಿ ದೋಷವಿದೆ, ಇದು ಇದ್ದ ಮೇಲೆ ಅನ್ಯ ಲೌಕಿಕ ಜನರಿಂದ ಮನ್ನಿಸಲ್ಪಟ್ಟ ಸರಾಗಿದೇವ, ಹಿಂಸಾಧರ್ಮ ಮತ್ತು ಸಗ್ರಂಥ ಗುರು ಹಾಗೂ ಜನರು ವಿಚಾರ ಮಾಡದೆಯೇ ಮನ್ನಿಸಲಾದ ಅನೇಕ ಕ್ರಿಯಾ ವಿಶೇಷಗಳಿಂದ ವಿಭವಾದಿಗಳ ಪ್ರಾಪ್ತಿಯ ಸಲುವಾಗಿ ಪ್ರವೃತ್ತಿ ಮಾಡುವುದರಿಂದ ಯಥಾರ್ಥ ಮತದಿಂದ ಭ್ರಷ್ಟನಾಗಿ ಬಿಡುತ್ತಾನೆ. ಧರ್ಮಾತ್ಮ ಪುರುಷರಲ್ಲಿ ಕರ್ಮದ ಉದಯದಿಂದ ಸ್ವಲ್ಪ ದೋಷವು ಉತ್ಪನ್ನವಾಗಿರುವುದನ್ನು ನೋಡಿ ಅವರನ್ನು ಅವಜ್ಞೆ ಮಾಡುವುದು ಅದು ಅನುಪಗೂಹನ ದೋಷವಿದೆ, ಇದು ಇದ್ದ ಮೇಲೆ ಧರ್ಮದಿಂದ ಬಿಟ್ಟುಹೋಗುವುದಾಗುತ್ತದೆ. ಧರ್ಮಾತ್ಮ ಪುರುಷರು ಕರ್ಮದ ಉದಯದ ವಶದಿಂದ ಧರ್ಮದಿಂದ ದೂರವಾಗುತ್ತಿರುವುದನ್ನು ನೋಡಿ ಅವರ ಸ್ಥಿರತೆ ಮಾಡದಿರುವುದು ಅದು ಅಸ್ಥಿತಿಕರಣ ದೋಷವಿದೆ, ಇದು ಇದ್ದ ಮೇಲೆ ಇವನಿಗೆ ಧರ್ಮದ ಅನುರಾಗವಿಲ್ಲವೆಂಬುದು ತಿಳಿದುಬರುತ್ತದೆ ಮತ್ತು ಅನುರಾಗವಿಲ್ಲದಿರುವುದು ಅದು ಸಮ್ಯಕ್ತ್ವದಲ್ಲಿ ದೋಷವಿದೆ.

ಧರ್ಮಾತ್ಮ ಪುರುಷರಲ್ಲಿ ವಿಶೇಷ ಪ್ರೀತಿ ಮಾಡದಿರುವುದು ಅದು ಅವಾತ್ಸಲ್ಯ ದೋಷವಿದೆ, ಇದು ಇದ್ದ ಮೇಲೆ ಸಮ್ಯಕ್ತ್ವದ ಅಭಾವವು ಸ್ಪಷ್ಟವಾಗಿ ಸೂಚಿತವಾಗುತ್ತದೆ. ಧರ್ಮದ ಮಾಹಾತ್ಮ್ಯವನ್ನು ಶಕ್ತಿಗೆ ಅನುಸರಿಸಿ ಪ್ರಕಟ ಮಾಡದಿರುವುದು ಅದು ಅಪ್ರಭಾವನಾ ದೋಷವಿದೆ, ಇದು ಇದ್ದ ಮೇಲೆ ಇವನಿಗೆ ಧರ್ಮದ ಮಾಹಾತ್ಮ್ಯದ ಶ್ರದ್ಧೆಯು ಪ್ರಕಟವಾಗಿಲ್ಲವೆಂಬುದು ತಿಳಿದು ಬರುತ್ತದೆ. ಈ ಪ್ರಕಾರ ಈ ಎಂಟು ಸಮ್ಯಕ್ತ್ವದ ದೋಷಗಳು ಮಿಥ್ಯಾತ್ವದ ಉದಯದಿಂದ (ಉದಯದ ವಶವಾಗುವುದರಿಂದ) ಆಗುತ್ತವೆ, ಎಲ್ಲಿ ಇವು ತೀವ್ರವಿರುವವು ಅಲ್ಲಿಯಂತೂ ಮಿಥ್ಯಾತ್ವ ಪ್ರಕೃತಿಯ ಉದಯ ಹೇಳುತ್ತಾರೆ, ಸಮ್ಯಕ್ತ್ವದ ಅಭಾವ ಹೇಳುತ್ತಾರೆ ಮತ್ತು ಎಲ್ಲಿ ಸ್ವಲ್ಪ ಮಂದ ಅತಿಚಾರರೂಪವಿದ್ದರೆ ಸಮ್ಯಕ್ತ್ವ ಪ್ರಕೃತಿ ನಾಮದ ಮಿಥ್ಯಾತ್ವದ ಪ್ರಕೃತಿಯ ಉದಯದಿಂದಿದ್ದರೆ ಅವನ್ನು ಅತಿಚಾರವೆಂದು ಹೇಳುತ್ತಾರೆ, ಅಲ್ಲಿ ಕ್ಷಾಯೋಪಶಮಿಕ ಸಮ್ಯಕ್ತ್ವದ ಸದ್ಭಾವವಿರುತ್ತದೆ, ಪರಮಾರ್ಥದಿಂದ ವಿಚಾರ ಮಾಡಿದರೆ ಅತಿಚಾರಗಳು ತ್ಯಾಗ ಮಾಡಲು ಯೋಗ್ಯವೇ ಆಗಿವೆ.

ಈ ದೋಷಗಳು ಇದ್ದಮೇಲೆ ಅನ್ಯ ಮಲಗಳೂ ಪ್ರಕಟವಾಗುತ್ತವೆ, ಅವು ದೇವಮೂಢತೆ, ಗುರುಮೂಢತೆ, ಲೋಕಮೂಢತೆಯೆಂದು ಮೂರು ಮೂಢತೆಗಳಿವೆ. ಯಾವುದೇ ವರದ ಇಚ್ಛೆಯಿಂದ ಸರಾಗೀ ದೇವಗಳ ಉಪಾಸನೆ ಮಾಡುವುದು ಪಾಷಾಣಾದಿಗಳಲ್ಲಿ ಅವರಸ್ಥಾಪನೆ ಮಾಡಿ ಪೂಜಿಸುವುದು ಅದು ದೇವಮೂಢತೆಯಿದೆ. ಕಪಟಿ ಗುರುಗಳಲ್ಲಿ ಮೂಢತೆ ಎಂದರೆ ಪರಿಗ್ರಹ, ಆರಂಭ, ಹಿಂಸಾದಿ ಸಹಿತರಾದ ಪಾಖಂಡಿ (ಕಪಟಿ) ವೇಷಧಾರಿಗಳ ಸತ್ಕಾರ-ಪುರಸ್ಕಾರ ಮಾಡುವುದು ಅದು ಪಾಖಂಡಮೂಢತೆಯಿದೆ. ಅನ್ಯ ಮತದವರ ಉಪದೇಶದಿಂದ ಹಾಗೂ ತಾನು ಕೂಡ ವಿಚಾರ ಮಾಡದೆ ಯಾವುದೇ ಪ್ರವೃತ್ತಿ ಮಾಡತೊಡಗುವುದು ಅದು ಲೋಕಮೂಢತೆಯಿದೆ. ಹೇಗೆಂದರೆ ಸೂರ್ಯನಿಗೆ ಅರ್ಘ್ಯ ಕೊಡುವುದು, ಗ್ರಹಣದಲ್ಲಿ ಸ್ನಾನಮಾಡುವುದು, ಸಂಕ್ರಾಂತಿಯಲ್ಲಿ ದಾನ ಮಾಡುವುದು, ಅಗ್ನಿಯ ಸತ್ಕಾರ ಮಾಡುವುದು, ಹೊಸ್ತಿಲು, ಮನೆ, ಭಾವಿ ಪೂಜಿಸುವುದು, ಹಸುವಿನ ಬಾಲಕ್ಕೆ ನಮಸ್ಕಾರ ಮಾಡುವುದು, ಹಸುವಿನ ಮೂತ್ರ

ಕುಡಿಯುವುದು, ರತ್ನ, ಕುದುರೆ ಮೊದಲಾದ ವಾಹನ, ಪೃಥ್ವೀ, ವೃಕ್ಷ, ಶಸ್ತ್ರ, ಪರ್ವತ ಮೊದಲಾದವುಗಳ ಸೇವೆ-ಪೂಜೆ ಮಾಡುವುದು, ನದೀ-ಸಮುದ್ರ ಮೊದಲಾದುವನ್ನು ತೀರ್ಥವೆಂದು ಮನ್ನಿಸಿ ಅವುಗಳಲ್ಲಿ ಸ್ನಾನ ಮಾಡುವುದು, ಪರ್ವತದಿಂದ ಉರುಳುವುದು, ಅಗ್ನಿಯಲ್ಲಿ ಪ್ರವೇಶ ಮಾಡುವುದು ಇತ್ಯಾದಿಗಳೆಂದು ತಿಳಿಯುವುದು.

ಕುದೇವ, ಕುಗುರು, ಕುಶಾಸ್ತ್ರ ಮತ್ತು ಇವುಗಳ ಭಕ್ತರೆಂದು ಹೀಗೆ ಆರು ಅನಾಯತನಗಳಿವೆ, ಇವನ್ನು ಧರ್ಮದ ಸ್ಥಾನಗಳೆಂದು ತಿಳಿದುಕೊಂಡು ಮನಸ್ಸಿನಿಂದ ಇವುಗಳ ಪ್ರಶಂಸೆ ಮಾಡುವುದು, ವಚನದಿಂದ ಪ್ರಶಂಸೆ ಮಾಡುವುದು, ಕಾಯದಿಂದ ವಂದನೆ ಮಾಡುವುದು,ಇವು ಧರ್ಮದ ಸ್ಥಾನಗಳಿಲ್ಲದಿರುವುದರಿಂದ ಇವನ್ನು ಅನಾಯತನವೆಂದು ಹೇಳುತ್ತಾರೆ, ಜಾತಿ, ಲಾಭ, ಕುಲ, ರೂಪ, ತಪ, ಬಲ, ವಿದ್ಯೆ, ಐಶ್ವರ್ಯ ಇವುಗಳ ಗರ್ವಮಾಡುವುದು ಇವು ಎಂಟು ಮದಗಳಿವೆ ಜಾತಿಯು ತಾಯಿಯ ಪಕ್ಷವಿದೆ, ಲಾಭವು ಧನಾದಿಗಳು ಕರ್ಮದ ಉದಯದ ಆಶ್ರಯವಿವೆ, ಕುಲವು ತಂದೆಯ ಪಕ್ಷವಿದೆ,ರೂಪವು ಕರ್ಮೋದಯದ ಆಶ್ರಯವಿದೆ, ತಪವು ತನ್ನ ಸ್ವರೂಪವನ್ನು ಸಾಧಿಸುವ ಸಾಧನವಿದೆ, ಬಲವು ಕರ್ಮೋದಯದ ಆಶ್ರಯವಿದೆ, ವಿದ್ಯೆಯು ಕರ್ಮದ ಕ್ಷಯೋಪಶಮದ ಆಶ್ರಯವಿದೆ, ಐಶ್ವರ್ಯವು ಕರ್ಮೋದಯದ ಆಶ್ರಯವಿದೆ, ಇವುಗಳ ಗರ್ವವನ್ನೇನು ಮಾಡುವುದು ? ಪರದ್ರವ್ಯದ ನಿಮಿತ್ತದಿಂದ ಆಗುವಂಥವುಗಳ ಗರ್ವ ಮಾಡುವುದು ಅದು ಸಮ್ಯಕ್ತ್ವದ ಅಭಾವವನ್ನು ತಿಳಿಸುತ್ತದೆ. ಅಥವಾ ಮಲಿನತೆ ಮಾಡುತ್ತದೆ, ಈ ಪ್ರಕಾರ ಇವು ಇಪ್ಪತ್ತೈದು ಸಮ್ಯಕ್ತ್ವದ ಮಲ ದೋಷಗಳಿವೆ, ಇವುಗಳ ತ್ಯಾಗ ಮಾಡಿದ ಮೇಲೆ ಸಮ್ಯಕ್ತ್ವವು ಶುದ್ಧವಾಗುತ್ತದೆ, ಅದೇ ಸಮ್ಯಕ್ತ್ವಾಚರಣ ಚಾರಿತ್ರದ ಅಂಗವಿದೆ. ।।೬।।

ಶಂಕಾದಿ ದೋಷಗಳು ದೂರವಾದ ನಂತರ ಸಮ್ಯಕ್ತ್ವದ ಎಂಟು ಅಂಗಗಳು ಪ್ರಕಟವಾಗುತ್ತವೆ ಈಗ ಅವನ್ನು ಹೇಳುತ್ತಾರೆ, -

**ಣಿಸ್ಸಂಕಿಯ ಣಿಕ್ಕಂಖಿಯ ಣಿವ್ವಿದಿಗಿಂಛಾ ಅಮೂಢದಿಟ್ಠೀ ಯ ।**
**ಉವಗೂಹಣ ಠಿದಿಕರಣಂ ವಚ್ಛಲ್ಲ ಪಹಾವಣಾ ಯ ತೇ ಅಟ್ಠ ।।೭।।**

**ನಿಃಶಂಕಿತ ನಿಃಕಾಂಕ್ಷಿತಂ ನಿರ್ವಿಚಿಕಿತ್ಸಾ ಅಮೂಢದೃಷ್ಟೀ ಚ ।**
**ಉಪಗೂಹನಂ ಸ್ಥಿತೀಕರಣಂ ವಾತ್ಸಲ್ಯಂ ಪ್ರಭಾವನಾ ಚ ತೇ ಅಷ್ಟೌ ।।೭।।**

ಅರ್ಥ :- ನಿಃಶಂಕಿತ, ನಿಃಕಾಂಕ್ಷಿತ, ನಿರ್ವಿಚಿಕಿತ್ಸೆ, ಅಮೂಢದೃಷ್ಟಿ, ಉಪಗೂಹನ, ಸ್ಥಿತಿಕರಣ, ವಾತ್ಸಲ್ಯ ಮತ್ತು ಪ್ರಭಾವನೆಯೆಂದು ಇವು ಎಂಟು ಅಂಗಗಳಿವೆ.

ಭಾವಾರ್ಥ :- ಈ ಎಂಟು ಅಂಗಗಳು ಮೊದಲು ಹೇಳಿರುವ ಶಂಕೆ ಮೊದಲಾದ ದೋಷಗಳ ಅಭಾವದಿಂದ ಪ್ರಕಟವಾಗುತ್ತವೆ, ಇವುಗಳ ಉದಾಹರಣೆಗಳು ಪುರಾಣಗಳಲ್ಲಿವೆ. ಅವುಗಳ ಕಥೆಯಿಂದ ತಿಳಿದುಕೊಳ್ಳಬೇಕು, ನಿಃಶಂಕಿತಕ್ಕೆ ಅಂಜನಚೋರನ ಉದಾಹರಣೆಯಿದೆ, ಅವನು ಜಿನವಚನದಲ್ಲಿ ಶಂಕೆ ಮಾಡಲಿಲ್ಲ, ನಿರ್ಭಯನಿದ್ದು ನೆಲುವಿನ ಎಳೆಗಳನ್ನು ಕತ್ತರಿಸಿ ಮಂತ್ರಸಿದ್ಧಿ ಮಾಡಿಕೊಂಡನು. ನಿಃಕಾಂಕ್ಷಿತಕ್ಕೆ ಸೀತೆ, ಅನಂತಮತಿ, ಸುತಾರೆ ಮೊದಲಾದವರ ಉದಾಹರಣೆಯಿದೆ, ಅವರು ಭೋಗಗಳ ಸಲುವಾಗಿ ಧರ್ಮವನ್ನು ಬಿಟ್ಟುಕೊಡಲಿಲ್ಲ. ನಿರ್ವಿಚಿಕಿತ್ಸಕ್ಕೆ ಉದ್ದಾಯನ ರಾಜನ ಉದಾಹರಣೆಯಿದೆ,

---

**ಉಪಯುಕ್ತ ನಿಃಶಂಕಿತ ನಿಃಕಾಂಕ್ಷಿತ ನಿರ್ವಿಚಿಕಿತ್ಸ ಅಮೂಢದೃಷ್ಟೀ ಮೇಣ್ ।**
**ಉಪಗೂಹನ ಸ್ಥಿತಿಕರಣ ವಾತ್ಸಲ್ಯ ಪ್ರಭಾವನೆಯೆಂದೆಂಟಂಗಗಳಿವೆ ।।೭।।**

ಅವನು ಮುನಿಯ ಶರೀರವು ಅಪವಿತ್ರವಿರುವುದನ್ನು ನೋಡಿ ಕೂಡ ಗ್ಲಾನಿ ಮಾಡಲಿಲ್ಲ. ಅಮೂಢದೃಷ್ಟಿಗೆ ರೇವತೀ ರಾಣಿಯ ಉದಾಹರಣೆಯಿದೆ, ಅವಳಿಗೆ ವಿದ್ಯಾಧರನು ಅನೇಕ ಮಹಿಮೆಯನ್ನು ತೋರಿಸಿದರೂ ಕೂಡ ಅವಳು ಶ್ರದ್ಧೆಯಿಂದ ಶಿಥಿಲಳಾಗಲಿಲ್ಲ.

ಉಪಗೂಹನಕ್ಕೆ ಜಿನೇಂದ್ರ ಭಕ್ತ ಶ್ರೇಷ್ಠಿಯ ಉದಾಹರಣೆಯಿದೆ, ಅವನು ಓರ್ವನು ಬ್ರಹ್ಮಚಾರಿಯ ವೇಷ ಹಾಕಿಕೊಂಡು ಬಂದು ಛತ್ರ ಕದ್ದಿದ್ದನು, ಅವನನ್ನು ಬ್ರಹ್ಮಚರ್ಯಪದದ ನಿಂದೆಯಾಗುತ್ತದೆಯೆಂದು ತಿಳಿದು ಕೊಂಡು ಅವನ ದೋಷವನ್ನು ಮರೆಮಾಡಿದನು. ಸ್ಥಿತಿಕರಣಕ್ಕೆ ವಾರಿಷೇಣನ ಉದಾಹರಣೆಯಿದೆ,ಅವನು ಪುಷ್ಪದಂತ ಬ್ರಾಹ್ಮಣನನ್ನು ಮುನಿಪದದಿಂದ ಶಿಥಿಲವಾಗುತ್ತಿರುವುದನ್ನು ತಿಳಿದುಕೊಂಡು ಪುನಃ ದೃಢ ಮಾಡಿದನು. ವಾತ್ಸಲ್ಯಕ್ಕೆ ವಿಷ್ಣುಕುಮಾರನ ಉದಾಹರಣೆಯಿದೆ, ಅವನು ಅಕಂಪನ ಮೊದಲಾದ ಮುನಿಗಳ ಉಪಸರ್ಗವನ್ನು ನಿವಾರಣೆ ಮಾಡಿದನು. ಪ್ರಭಾವನೆಯಲ್ಲಿ ವಜ್ರಕುಮಾರ ಮುನಿಯ ಉದಾಹರಣೆಯಿದೆ, ಅವನು ವಿದ್ಯಾಧರರಿಂದ ಸಹಾಯ ಪಡೆದು ಧರ್ಮದ ಪ್ರಭಾವನೆ ಮಾಡಿದನು. ಹೀಗೆ ಎಂಟು ಅಂಗಗಳು ಪ್ರಕಟವಾದಮೇಲೆ ಸಮ್ಯಕ್ತ್ವಚರಣ ಚಾರಿತ್ರವಾಗುತ್ತದೆ. ಹೇಗೆ ಶರೀರದಲ್ಲಿ ಕೈ ಕಾಲುಗಳಿರುತ್ತವೆ ಹಾಗೆಯೇ ಇವು ಸಮ್ಯಕ್ತ್ವದ ಎಂಟು ಅಂಗಗಳಿವೆ, ಇವು ಇಲ್ಲದಿದ್ದರೆ ವಿಕಲಾಂಗನಾಗುತ್ತಾನೆ. ||೭||

ಈ ಪ್ರಕಾರ ಮೊದಲು ಸಮ್ಯಕ್ತ್ವಾಚರಣ ಚಾರಿತ್ರವಾಗುತ್ತದೆಯೆಂದು ಈಗ ಹೇಳುತ್ತಾರೆ, –

ತಂ ಚೇವ ಗುಣವಿಸುದ್ಧಂ ಜಿಣಸಮ್ಮತ್ತಂ ಸುಮುಕ್ಖಠಾಣಾಏ |
ಜಂ ಚರಇ ಣಾಣಜುತ್ತಂ ಪಢಮಂ ಸಮ್ಮತ್ತಚರಣಚಾರಿತ್ತಂ ||೮||

ತಚ್ಚೈವ ಗುಣವಿಶುದ್ಧಂ ಜಿನಸಮ್ಯಕ್ತ್ವಂ ಸುಮೋಕ್ಷಸ್ಥಾನಾಯ |
ತತ್ ಚರತಿ ಜ್ಞಾನಯುಕ್ತಂ ಪ್ರಥಮಂ ಸಮ್ಯಕ್ತ್ವಚರಣಚಾರಿತ್ರಮ್ ||೮||

ಅರ್ಥ :– ಆ ಜಿನಸಮ್ಯಕ್ತ್ವವು ಎಂದರೆ ಅರಹಂತ ಜಿನದೇವರ ಶ್ರದ್ಧೆಯು ನಿಃಶಂಕಿತ ಮೊದಲಾದ ಗುಣಗಳಿಂದ ವಿಶುದ್ಧವಿರುವುದು ಯಥಾರ್ಥ ಜ್ಞಾನದ ಜತೆ ಅದರ ಆಚರಣೆ ಮಾಡಿದರೆ ಅದು ಪ್ರಥಮ ಸಮ್ಯಕ್ತ್ವಚರಣ ಚಾರಿತ್ರವಿದೆ, ಅದು ಮೋಕ್ಷಸ್ಥಾನದ ಸಲುವಾಗಿ ಇರುತ್ತದೆ.

ಭಾವಾರ್ಥ :– ಸರ್ವಜ್ಞ ಭಾಷಿತ ತತ್ತ್ವಾರ್ಥದ ಶ್ರದ್ಧೆ ನಿಃಶಂಕಿತ ಮೊದಲಾದ ಗುಣಗಳೊಡನೆ, ಇಪ್ಪತ್ತೈದು ಮಲದೋಷರಹಿತ, ಜ್ಞಾನವುಳ್ಳ ಆಚರಣೆ ಮಾಡಿದರೆ ಅದನ್ನು ಸಮ್ಯಕ್ತ್ವಚರಣ ಚಾರಿತ್ರವೆಂದು ಹೇಳುತ್ತಾರೆ. ಇದು ಮೋಕ್ಷದ ಪ್ರಾಪ್ತಿಯ ಸಲುವಾಗಿ ಇರುತ್ತದೆ, ಏಕೆಂದರೆ ಮೋಕ್ಷಮಾರ್ಗದಲ್ಲಿ ಮೊದಲು ಸಮ್ಯಗ್ದರ್ಶನ ಹೇಳಿರುವುದರಿಂದ ಮೋಕ್ಷಮಾರ್ಗದಲ್ಲಿ ಇದೇ ಮುಖ್ಯವಿದೆ. ||೮||

ಯಾರು ಈ ಪ್ರಕಾರ ಸಮ್ಯಕ್ತ್ವಚರಣ ಚಾರಿತ್ರವನ್ನು ಅಂಗೀಕಾರಮಾಡಿ, ಸಂಯಮಚರಣ ಚಾರಿತ್ರವನ್ನು ಅಂಗೀಕಾರ ಮಾಡುತ್ತಾರೆ ಅವರು ಶೀಘ್ರವಾಗಿಯೇ ನಿರ್ವಾಣಕ್ಕೆ ಪ್ರಾಪ್ತರಾಗುತ್ತಾರೆಂಬುದನ್ನು ಈಗ ಹೇಳುತ್ತಾರೆ, –

---

ಜಿನ ಸಮ್ಯಕ್ತ್ವವದು ಅಷ್ಟ ಗುಣಗಳಿಂ ವಿಶದ್ಧವಿದ್ದು ಸುಮೋಕ್ಷಸ್ಥಾನಕೆ |
ಜ್ಞಾನಯುಕ್ತ ಆಚರಣವಿರೆ ಪ್ರಥಮ ಸಮ್ಯಕ್ತ್ವಚರಣಚಾರಿತ್ರವಿದೆ ||೮||

**ಸಮ್ಮತ್ತಚರಣಸುದ್ಧಾ ಸಂಜಮಚರಣಸ್ಸ ಜಇ ವ ಸುಪಸಿದ್ಧಾ ।**
**ಣಾಣೀ ಅಮೂಢದಿಟ್ಠೀ ಅಚಿರೇ ಪಾವಂತಿ ಣಿವ್ವಾಣಂ ॥೯॥**

**ಸಮ್ಯಕ್ತ್ವಚರಣಶುದ್ಧಾಃ ಸಂಯಮಚರಣಸ್ಯ ಯದಿ ವಾ ಸುಪ್ರಸಿದ್ಧಾಃ ।**
**ಜ್ಞಾನಿನಃ ಅಮೂಢದೃಷ್ಟಯಃ ಅಚಿರಂ ಪ್ರಾಪ್ನುವಂತಿ ನಿರ್ವಾಣಮ್ ॥೯॥**

ಅರ್ಥ :- ಅವನು ಜ್ಞಾನಿಯಾಗುತ್ತ ಅಮೂಢದೃಷ್ಟಿಯಾಗಿ ಸಮ್ಯಕ್ತ್ವಚರಣ ಚಾರಿತ್ರದಿಂದ ಶುದ್ಧನಾಗುತ್ತಾನೆ ಮತ್ತು ಅವನು ಸಂಯಮಚರಣ ಚಾರಿತ್ರದಿಂದ ಸಮ್ಯಕ್ ಪ್ರಕಾರ ಶುದ್ಧನಾದರೆ ಶೀಘ್ರದಲ್ಲಿಯೇ ನಿರ್ವಾಣಕ್ಕೆ ಪ್ರಾಪ್ತನಾಗುತ್ತಾನೆ.

ಭಾವಾರ್ಥ :- ಅವನು ಪದಾರ್ಥಗಳ ಯಥಾರ್ಥಜ್ಞಾನದಿಂದ ಮೂಢದೃಷ್ಟಿಯಿಂದ ರಹಿತನಾಗಿ ವಿಶುದ್ಧ ಸಮ್ಯಗ್ದೃಷ್ಟಿಯಾಗಿ ಸಮ್ಯಕ್‌ಚಾರಿತ್ರ ಸ್ವರೂಪ ಸಂಯಮದ ಆಚರಣೆಮಾಡಿದರೆ ಶೀಘ್ರದಲ್ಲಿಯೇ ಮೋಕ್ಷವನ್ನು ಪಡೆಯುತ್ತಾನೆ, ಸಂಯಮ ಅಂಗೀಕಾರಮಾಡಿದ ನಂತರ ಸ್ವರೂಪದ ಸಾಧನರೂಪವಾದ ಏಕಾಗ್ರ ಧರ್ಮಧ್ಯಾನದ ಬಲದಿಂದ ಸಾತಿಶಯ ಅಪ್ರಮತ್ತ ಗುಣಸ್ಥಾನರೂಪದ ಶ್ರೇಣಿಯನ್ನು ಹತ್ತಿ ಅಂತರ್ಮುಹೂರ್ತದಲ್ಲಿ ಕೇವಲಜ್ಞಾನ ಉತ್ಪನ್ನಮಾಡಿ, ಅಘಾತಿಕರ್ಮಗಳನ್ನು ನಾಶಮಾಡಿ ಮೋಕ್ಷಪ್ರಾಪ್ತಮಾಡಿಕೊಳ್ಳುತ್ತಾನೆ. ಇದು ಸಮ್ಯಕ್ತ್ವಚರಣ ಚಾರಿತ್ರದ್ದೇ ಮಾಹಾತ್ಮ್ಯವಿದೆ. ॥೯॥

ಯಾರು ಸಮ್ಯಕ್ತ್ವದ ಆಚರಣೆಯಿಂದ ಭ್ರಷ್ಟರಾಗಿದ್ದಾರೆ ಮತ್ತು ಅವರು ಸಂಯಮದ ಆಚರಣೆಯನ್ನು ಮಾಡುತ್ತಿದ್ದರೂ ಕೂಡ ಮೋಕ್ಷ ಪಡೆಯುವುದಿಲ್ಲವೆಂಬುದನ್ನು ಈಗ ಹೇಳುತ್ತಾರೆ,-

**ಸಮ್ಮತ್ತಚರಣಭಟ್ಠಾ ಸಂಜಮಚರಣಂ ಚರಂತಿ ಜೇ ವಿ ಣರಾ ।**
**ಅಣ್ಣಾಣಣಾಣಮೂಢಾ ತಹ ವಿ ಣ ಪಾವಂತಿ ಣಿವ್ವಾಣಂ ॥೧೦॥**

**ಸಮ್ಯಕ್ತ್ವಚರಣಭ್ರಷ್ಟಾಃಸಂಯಮಚರಣಂ ಚರಂತಿ ಯೇಽಪಿ ನರಾಃ ।**
**ಅಜ್ಞಾನಜ್ಞಾನಮೂಢಾಃ ತಥಾಽಪಿ ನ ಪ್ರಾಪ್ನುವಂತಿ ನಿರ್ವಾಣಮ್ ॥೧೦॥**

ಅರ್ಥ :- ಯಾವ ಪುರುಷರು ಸಮ್ಯಕ್ತ್ವಚರಣ ಚಾರಿತ್ರದಿಂದ ಭ್ರಷ್ಟರಿದ್ದಾರೆ ಮತ್ತು ಸಂಯಮದ ಆಚರಣೆ ಮಾಡುತ್ತಾರೆ ಆದರೂ ಅವರು ಅಜ್ಞಾನದಿಂದ ಮೂಢದೃಷ್ಟಿಗಳಾಗುತ್ತ ನಿರ್ವಾಣವನ್ನು ಪಡೆಯುವುದಿಲ್ಲ.

---

ಜ್ಞಾನಿ ಸಮ್ಯಕ್ತ್ವಚರಣ ಶುದ್ಧ ಮೇಣ್ಸಂಯಮ ಚರಣದಿಂ ಸುವಿಶುದ್ಧರಾಗಿ ।
ಆ ನಿರ್ವಾಣವನು ಶೀಘ್ರದಲಿ ಪಡೆಯುವರು ಅವಿಮೂಢದೃಷ್ಟಿಗಳಾಗಿ ॥೯॥

ಏವ ಸಮ್ಯಕ್ತ್ವಚರಣ ಭ್ರಷ್ಟರಿದ್ದು ಸಂಯಮಚರಣ ಆಚರಿಸುವರು ।
ಅವರು ಅಜ್ಞಾನಜ್ಞಾನವಿಮೂಢರಾಗಿ ನಿರ್ವಾಣವನು ಪಡೆಯಲಾರರು ॥೧೦॥

ಭಾವಾರ್ಥ :- ಸಮ್ಯಕ್ತ್ವಚರಣ ಚಾರಿತ್ರದ ಹೊರತಾಗಿ ಸಂಯಮಚರಣ ಚಾರಿತ್ರವು ನಿರ್ವಾಣದ ಕಾರಣವಾಗುವುದಿಲ್ಲ, ಏಕೆಂದರೆ ಸಮ್ಯಗ್ಜ್ಞಾನವಿಲ್ಲದೆಯಂತೂ ಜ್ಞಾನವು ಮಿಥ್ಯೆಯೆಂದು ಕರೆಯಿಸಿಕೊಳ್ಳುತ್ತದೆ ಅದರಂತೆ ಸಮ್ಯಕ್ತ್ವವಿಲ್ಲದ ಚಾರಿತ್ರಕ್ಕೆ ಕೂಡ ಮಿಥ್ಯಾತನವು ಬರುತ್ತದೆ. ||೧೦||

ಅದನ್ನು ತಿಳಿದುಕೊಳ್ಳಬೇಕಾದರೆ ಆ ಸಮ್ಯಕ್ತ್ವಚರಣ ಚಾರಿತ್ರದ ಅಂಥ ಚಿಹ್ನಗಳು ಯಾವುವಿವೆಯೆಂಬ ಪ್ರಶ್ನೆಯು ಇಲ್ಲಿ ಉತ್ಪನ್ನವಾಗುತ್ತದೆ, ಇದರ ಉತ್ತರರೂಪವಾದ ಗಾಥೆಗಳಲ್ಲಿ ಈಗ ಸಮ್ಯಕ್ತ್ವದ ಚಿಹ್ನಗಳನ್ನು ಹೇಳುತ್ತಾರೆ, -

ವಚ್ಛಲ್ಲಂ ವಿಣಏಣ ಯ ಅಣುಕಂಪಾಏ ಸುದಾಣದಚ್ಛಾಏ ।
ಮಗ್ಗಗುಣಸಂಸಣಾಏ ಅವಗೂಹಣ ರಕ್ಖಣಾಏ ಯ ||೧೧||

ಏಏಹಿಂ ಲಕ್ಖಣೇಹಿಂ ಯ ಲಕ್ಖಿಜ್ಜಇ ಅಜ್ಜವೇಹಿಂ ಭಾವೇಹಿಂ ।
ಜೀವೋ ಆರಾಹಂತೋ ಜಿಣಸಮ್ಮತ್ತಂ ಅಮೋಹೇಣ ||೧೨||

ವಾತ್ಸಲ್ಯಂ ವಿನಯೇನ ಚ ಅನುಕಂಪಯಾ ಸುದಾನ ದಕ್ಷಯಾ ।
ಮಾರ್ಗಗುಣಶಂಸನಯಾ ಉಪಗೂಹನಂ ರಕ್ಷಣೇನ ಚ ||೧೧||

ಏತೈಃ ಲಕ್ಷಣೈಃ ಚ ಲಕ್ಷ್ಯತೇ ಆರ್ಜವೈಃ ಭಾವೈಃ ।
ಜೀವಃ ಆರಾಧಯನ್ ಜಿನಸಮ್ಯಕ್ತ್ವಂ ಅಮೋಹೇನ ||೧೨||

ಅರ್ಥ :- ಜಿನದೇವರ ಶ್ರದ್ಧೆಯು ಸಮ್ಯಕ್ತ್ವವನ್ನು ಮೋಹ ಎಂದರೆ ಮಿಥ್ಯಾತ್ವರಹಿತ ಆರಾಧನೆ ಮಾಡುತ್ತ ಜೀವನು ಈ ಲಕ್ಷಣಗಳಿಂದ ಎಂದರೆ ಚಿಹ್ನಗಳಿಂದ ತಿಳಿದು ಬರುತ್ತಾನೆ. ಯಾವ ಪ್ರಕಾರ ಇದೇ ಈಗ ಕರು ಹಾಕಿದ ಹಸುವು ತನ್ನ ಕರುವಿನ ಮೇಲೆ ಹೇಗೆ ಪ್ರೀತಿಮಾಡುತ್ತದೆ ಹಾಗೆಯೇ ಧರ್ಮಾತ್ಮನಲ್ಲಿ ಪ್ರೀತಿಯಿರುವುದು, ಇದು ಒಂದಂತೂ ಚಿಹ್ನವಿದೆ. ಸಮ್ಯಕ್ತ್ವ ಮೊದಲಾದ ಗುಣಗಳಿಂದ ಅಧಿಕವಿರುವವನ ವಿನಯ ಸತ್ಕಾರಾದಿಗಳನ್ನು ಅಧಿಕವಾಗಿ ಮಾಡುವಂಥ ವಿನಯವು ಒಂದು ಚಿಹ್ನವಿದೆ. ದುಃಖೀ ಪ್ರಾಣಿಗಳನ್ನು ನೋಡಿ ಕರುಣಾಭಾವಸ್ವರೂಪದ ಅನುಕಂಪೆಯಿರುವುದು ಒಂದು ಚಿಹ್ನವಿದೆ, ಆ ಅನುಕಂಪೆಯು ಒಳ್ಳೆಯ ಪ್ರಕಾರದ ದಾನದಿಂದ ಯೋಗ್ಯವಿರಬೇಕು. ನಿರ್ಗ್ರಂಥಸ್ವರೂಪವು ಮೋಕ್ಷಮಾರ್ಗದ ಪ್ರಶಂಸೆ ಸಹಿತವಾಗಿರಬೇಕು, ಇದು ಒಂದು ಚಿಹ್ನವಿದೆ, ಆ ಮಾರ್ಗದ ಪ್ರಶಂಸೆ ಮಾಡದಿದ್ದರೆ ಇವನಿಗೆ ಮಾರ್ಗದ ಕುರಿತು ದೃಢ ಶ್ರದ್ಧೆಯಿಲ್ಲವೆಂದು ತಿಳಿಯಬೇಕು. ಧರ್ಮಾತ್ಮ ಪುರುಷನಿಗೆ ಕರ್ಮದ ಉದಯದಿಂದ (ಉದಯವಶದಿಂದ) ದೋಷವು ಉತ್ಪನ್ನವಾಗುತ್ತಿದ್ದರೆ ಅದನ್ನು ಪ್ರಕಟಮಾಡದಿರುವಂಥ ಉಪಗೂಹನ ಭಾವವಿರುವುದು ಒಂದು ಚಿಹ್ನವಿದೆ.

---

ವಾತ್ಸಲ್ಯಭಾವದಿಂ ವಿನಯಗುಣದಿಂ ಸುದಾನ ಸಮರ್ಥಅನುಕಂಪೆಯಿಂದ ।
ಉತ್ಸಾಹಿತ ಮಾರ್ಗಗುಣಸ್ತವನದಿಂ ಉಪಗೂಹನ ಮೇಣ್ ಸ್ಥಿತಿಕರಣದಿಂದ ||೧೧||

ಇನಿತು ಲಕ್ಷಣಗಳಿಂದದರಂತೆ ಆರ್ಜವ ಭಾವದಿಂದ ತಿಳಿಯುವುದು ।
ಜಿನಸಮ್ಯಕ್ತ್ವವನು ಮೋಹವಿರಹಿತನಾಗಿ ಆರಾಧಿಸುವ ಜೀವವನು ||೧೨||

ಧರ್ಮಾತ್ಮನು ಮಾರ್ಗದಿಂದ ಚ್ಯುತನಾಗುತ್ತಿರುವುದನ್ನು ನೋಡಿ ಅವನ ಸ್ಥಿರತೆ ಮಾಡುವಂಥ ರಕ್ಷಣೆನಾಮದ ಚಿಹ್ನವಿದೆ, ಅದನ್ನು ಸ್ಥಿತಿಕರಣವೆಂದೂ ಹೇಳುತ್ತಾರೆ. ಈ ಎಲ್ಲ ಚಿಹ್ನಗಳನ್ನು ಸತ್ಯಾರ್ಥ ಮಾಡುವಂಥದು ಒಂದು ಆರ್ಜವಭಾವವಿದೆ, ಏಕೆಂದರೆ ನಿಷ್ಕಪಟ ಭಾವದಿಂದಲೇ ಇವೆಲ್ಲ ಚಿಹ್ನಗಳು ಪ್ರಕಟವಾಗುತ್ತವೆ, ಸತ್ಯಾರ್ಥವಾಗುತ್ತವೆ, ಇವಿಷ್ಟು ಲಕ್ಷಣಗಳಿಂದ ಸಮ್ಯಗ್ದೃಷ್ಟಿಯನ್ನು ತಿಳಿಯುವ ಸಾಧ್ಯತೆಯಿದೆ.

ಭಾವಾರ್ಥ :- ಮಿಥ್ಯಾತ್ವಕರ್ಮದ ಅಭಾವದಿಂದ ಜೀವಗಳ ನಿಜಭಾವವಾದ ಸಮ್ಯಕ್ತ್ವಭಾವವು ಪ್ರಕಟವಾಗುತ್ತದೆ, ಆದರೆ ಆ ಭಾವವು ಸೂಕ್ಷ್ಮವಿದ್ದು ಛದ್ಮಸ್ಥನ ಜ್ಞಾನಗೋಚರವಿಲ್ಲ, ಮತ್ತು ಅದರ ಬಾಹ್ಯ ಚಿಹ್ನಗಳು ಸಮ್ಯಗ್ದೃಷ್ಟಿಗೆ ಪ್ರಕಟವಾಗುತ್ತವೆ, ಅವುಗಳಿಂದ ಸಮ್ಯಕ್ತ್ವವಾಗಿದೆಯೆಂದು ತಿಳಿದುಬರುತ್ತದೆ. ಆ ವಾತ್ಸಲ್ಯ ಮೊದಲಾದ ಭಾವಗಳನ್ನು ಹೇಳಿದೆ ಅವು ತಮಗಂತೂ ತಮ್ಮ ಅನುಭವಗೋಚರವಿರುತ್ತವೆ ಮತ್ತು ಇತರರದು ಅವರ ವಚನ ಕಾಯದ ಕ್ರಿಯೆಯಿಂದ ತಿಳಿದುಬರುತ್ತವೆ, ಅವುಗಳ ಪರೀಕ್ಷೆಯು ಹೇಗೆ ತಮ್ಮ ಕ್ರಿಯಾ ವಿಶೇಷದಿಂದ ಆಗುತ್ತದೆ ಹಾಗೆ ಅನ್ಯರದೂ ಕ್ರಿಯಾ ವಿಶೇಷದಿಂದ ಪರೀಕ್ಷೆಯಾಗುತ್ತದೆ, ಈ ಪ್ರಕಾರ ವ್ಯವಹಾರವಿದೆ, ಒಂದು ವೇಳೆ ಹೀಗಿರದಿದ್ದರೆ ಸಮ್ಯಕ್ತ್ವ ವ್ಯವಹಾರ ಮಾರ್ಗದ ಲೋಪವಾಗುವುದರಿಂದ ವ್ಯವಹಾರೀ ಪ್ರಾಣಿಗಳಿಗೆ ವ್ಯವಹಾರದ ಆಶ್ರಯವನ್ನೇ ಹೇಳಿದೆ, ಪರಮಾರ್ಥವನ್ನು ಸರ್ವಜ್ಞರು ತಿಳಿಯುತ್ತಾರೆ. ||೧೧-೧೨||

ಇಂಥ ಕಾರಣ ಸಹಿತವಿದ್ದರೆ ಸಮ್ಯಕ್ತ್ವವು ಬಿಡುತ್ತದೆಯೆಂದು ಈಗ ಹೇಳುತ್ತಾರೆ, -

**ಉಚ್ಛಾಹಭಾವಣಾಸಂಪಸಂಸಸೇವಾ ಕುದಂಸಣೇ ಸದ್ಧಾ |**
**ಅಣ್ಣಾಣಮೋಹಮಗ್ಗೇ ಕುವ್ವಂತೋ ಜಹದಿ ಜಿಣಸಮ್ಮಂ ||೧೩||**

**ಉತ್ಸಾಹಭಾವನಾ ಶಂಪ್ರಶಂಸಾಸೇವಾ ಕುದರ್ಶನೇ ಶ್ರದ್ಧಾ |**
**ಅಜ್ಞಾನಮೋಹಮಾರ್ಗೇ ಕುರ್ವನ್ ಜಹಾತಿ ಜಿನಸಮ್ಯಕ್ತ್ವಮ್ ||೧೩||**

ಅರ್ಥ :- ಕುದರ್ಶನ ಎಂದರೆ ನೈಯಾಯಿಕ, ವೈಶೇಷಿಕ, ಸಾಂಖ್ಯಮತ, ಮೀಮಾಂಸಕಮತ, ವೇದಾಂತಮತ, ಬೌದ್ಧಮತ, ಚಾರ್ವಾಕಮತ, ಶೂನ್ಯವಾದದಮತ ಇವುಗಳ ವೇಷ ಹಾಗೂ ಇವುಗಳ ಭಾಷಿತ ಪದಾರ್ಥ ಮತ್ತು ಶ್ವೇತಾಂಬರ ಮೊದಲಾದ ಜೈನಾಭಾಸಗಳಲ್ಲಿ ಶ್ರದ್ಧೆ, ಉತ್ಸಾಹ, ಭಾವನೆ, ಪ್ರಶಂಸೆ ಮತ್ತು ಇವುಗಳ ಉಪಾಸನೆ ಹಾಗೂ ಸೇವೆಯನ್ನು ಯಾವ ಪುರುಷನು ಮಾಡುತ್ತಾನೆ ಅವನು ಜಿನಮತದ ಶ್ರದ್ಧಾ ರೂಪವಾದ ಸಮ್ಯಕ್ತ್ವವನ್ನು ಬಿಡುತ್ತಾನೆ, ಅದು ಕುದರ್ಶನ, ಅಜ್ಞಾನ ಮತ್ತು ಮಿಥ್ಯಾತ್ವದ ಮಾರ್ಗವಿದೆ.

ಭಾವಾರ್ಥ :- ಅನಾದಿಕಾಲದಿಂದ ಮಿಥ್ಯಾತ್ವಕರ್ಮದ ಉದಯದಿಂದ (ಉದಯವಶದಿಂದ)ಈ ಜೀವನು ಸಂಸಾರದಲ್ಲಿ ಭ್ರಮಣ ಮಾಡುತ್ತಾನೆ, ಆದರೆ ಯಾವುದೇ ಒಂದು ಭಾಗ್ಯದ ಉದಯದಿಂದ ಜಿನಮಾರ್ಗದ ಶ್ರದ್ಧೆಯಾಗಿರುವುದು ಮತ್ತು ಪ್ರಸಂಗವಶದಿಂದ ಮಿಥ್ಯಾಮತದಲ್ಲಿ ಸ್ವಲ್ಪ ಕಾರಣದಿಂದ ಉತ್ಸಾಹ, ಭಾವನೆ, ಪ್ರಶಂಸೆ,

---

**ಯಾವನು ಅಜ್ಞಾನಮೋಹಮಾರ್ಗದಿಂ ಕುಮತದಲಿ ಭಾವನೆ ಉತ್ಸಾಹ ಶ್ರದ್ಧೆ |**
**ಸ್ತವನ ಮೇಣ್ಸೇವೆ ಮಾಡುವನವನು ತಾನೆ ತ್ಯಜಿಸುವನು ಸಮ್ಯಕ್ತ್ವವನು ||೧೩||**

ಸೇವೆ, ಶ್ರದ್ಧೆಗಳು ಉತ್ಪನ್ನವಾದರೆ ಸಮ್ಯಕ್ತ್ವದ ಅಭಾವವಾಗಿ ಹೋಗುವುದು, ಏಕೆಂದರೆ ಜಿನ ಮತವನ್ನು ಹೊರತುಪಡಿಸಿ ಅನ್ಯಮತಗಳಲ್ಲಿ ಛದ್ಮಸ್ಥ ಅಜ್ಞಾನಿಗಳ ಮುಖಾಂತರ ಪ್ರರೂಪಿತವಾದ ಮಿಥ್ಯಾ ಪದಾರ್ಥ ಹಾಗೂ ಮಿಥ್ಯಾ ಪ್ರವೃತ್ತಿರೂಪವಾದ ಮಾರ್ಗದ ಶ್ರದ್ಧೆಯುಂಟಾದಾಗ ಜಿನಮತದ ಶ್ರದ್ಧೆಯು ಹೋಗುತ್ತಿರುವುದರಿಂದ ಮಿಥ್ಯಾದೃಷ್ಟಿಗಳ ಸಂಸರ್ಗವನ್ನೇ ಮಾಡಬಾರದು, ಈ ಪ್ರಕಾರವಾಗಿ ಭಾವಾರ್ಥವಿದೆಯೆಂದು ತಿಳಿಯಬೇಕು. ।।೧೩।।

ಯಾವ ಈ ಉತ್ಸಾಹ ಭಾವನೆಗಳನ್ನು ಹೇಳಿದೆ ಅವು ಸುದರ್ಶನದಲ್ಲಿ ಇದ್ದರೆ ಅವನು ಜಿನಮತದ ಶ್ರದ್ಧಾರೂಪವಾದ ಸಮ್ಯಕ್ತ್ವವನ್ನು ಬಿಡುವುದಿಲ್ಲವೆಂದು ಈಗ ಹೇಳುತ್ತಾರೆ, –

ಉಚ್ಛಾಹಭಾವಣಾಸಂಪಸಂಸಸೇವಾ ಸುದಂಸಣೇ ಸದ್ಧಾ ।
ಣ ಜಹದಿ ಜಿಣಸಮ್ಮತ್ತಂ ಕುವ್ವಂತೋ ಣಾಣಮಗ್ಗೇಣ ।।೧೪।।

ಉತ್ಸಾಹಭಾವನಾ ಶಂಪ್ರಶಂಸಸೇವಾಃ ಸುದರ್ಶನೇ ಶ್ರದ್ಧಾಂ ।
ನ ಜಹಾತಿ ಜಿನಸಮ್ಯಕ್ತ್ವಂ ಕುರ್ವನ್ ಜ್ಞಾನಮಾರ್ಗೇಣ ।।೧೪।।

ಅರ್ಥ ಃ– ಸುದರ್ಶನ ಎಂದರೆ ಸಮ್ಯಗ್ದರ್ಶನ ಜ್ಞಾನ ಚಾರಿತ್ರಸ್ವರೂಪವಾದ ಸಮ್ಯಕ್‌ಮಾರ್ಗದಲ್ಲಿ ಉತ್ಸಾಹಭಾವನೆ ಎಂದರೆ ಗ್ರಹಣ ಮಾಡುವ ಉತ್ಸಾಹ ಮಾಡಿ ಪುನಃಪುನಃ ಚಿಂತನರೂಪವಾದ ಭಾವ ಮತ್ತು ಪ್ರಶಂಸೆ ಎಂದರೆ ಮನ–ವಚನ–ಕಾಯಗಳಿಂದ ಸರಿಯಾಗಿ ತಿಳಿದುಕೊಂಡು ಸ್ತುತಿ ಮಾಡುವುದು, ಸೇವೆ ಎಂದರೆ ಉಪಾಸನೆ, ಪೂಜೆ ಮೊದಲಾದುವನ್ನು ಮಾಡುವುದು ಮತ್ತು ಶ್ರದ್ಧೆ ಮಾಡುವುದು, ಹೀಗೆ ಜ್ಞಾನಮಾರ್ಗದಿಂದ ಯಥಾರ್ಥವಾಗಿ ತಿಳಿದುಕೊಂಡು ಮಾಡುತ್ತಿರುವ ಪುರುಷನು ಅವನು ಜಿನಮತದ ಶ್ರದ್ಧಾರೂಪವಾದ ಸಮ್ಯಕ್ತ್ವವನ್ನು ಬಿಡುವುದಿಲ್ಲ.

ಭಾವಾರ್ಥ ಃ– ಜಿನಮತದಲ್ಲಿ ಉತ್ಸಾಹ, ಭಾವನೆ, ಪ್ರಶಂಸೆ, ಸೇವೆ, ಶ್ರದ್ಧೆಗಳು ಯಾವನಿಗೆ ಇವೆ ಅವನು ಸಮ್ಯಕ್ತ್ವದಿಂದ ಚ್ಯುತನಾಗುವುದಿಲ್ಲ. ।।೧೪।।

ಈಗ ಅಜ್ಞಾನ, ಮಿಥ್ಯಾತ್ವ, ಕುಚಾರಿತ್ರಗಳ ತ್ಯಾಗದ ಉಪದೇಶ ಮಾಡುತ್ತಾರೆ, –

ಅಣ್ಣಾಣಂ ಮಿಚ್ಛತ್ತಂ ವಜ್ಜಹ ಣಾಣೇ ವಿಸುದ್ಧಸಮ್ಮತ್ತೇ ।
ಅಹ ಮೋಹಂ ಸಾರಂಭಂ ಪರಿಹರ ಧಮ್ಮೇ ಅಹಿಂಸಾಏ ।।೧೫।।

ಅಜ್ಞಾನಂ ಮಿಥ್ಯಾತ್ವಂ ವರ್ಜ್ಜಯ ಜ್ಞಾನೇ ವಿಶುದ್ಧಸಮ್ಯಕ್ತ್ವೇ ।
ಅಥ ಮೋಹಂ ಸಾರಂಭಂ ಪರಿಹರ ಧರ್ಮೇ ಅಹಿಂಸಾಯಾಮ್ ।।೧೫।।

---

ಯಾವನು ಸದ್ದರ್ಶನದಲಿ ಉತ್ಸಾಹ ಶ್ರದ್ಧೆ ಭಾವನೆ ಸ್ತುತಿಮತ್ತದರಂತೆ ।
ಸೇವೆಯನು ಜ್ಞಾನಮಾರ್ಗದಿಂ ಮಾಡಿದರವನು ತ್ಯಜಿಸನು ಸಮ್ಯಕ್ತ್ವವನು ।।೧೪।।

ತ್ಯಜಿಸು ಅಜ್ಞಾನ ಮೇಣ್ಮಿಥ್ಯಾತ್ವ ಸುಜ್ಞಾನ ಮೇಣ್ವಿಶುದ್ಧ ಸಮ್ಯಕ್ತ್ವವಾದಮೇಲೆ ।
ತ್ಯಜಿಸು ಸಾರಂಭ ಮೋಹವನು ನೀನು ಅಹಿಂಸಾಧರ್ಮದ ಪ್ರಾಪ್ತಿಯಾದಮೇಲೆ ।।೧೫।।

ಅರ್ಥ ಃ– ಎಲೈ ಭವ್ಯನೇ ! ನೀನು ಜ್ಞಾನವಿದ್ದಮೇಲಂತೂ ಅಜ್ಞಾನದ ತ್ಯಾಗ ಮಾಡು, ವಿಶುದ್ಧಸಮ್ಯಕ್ತ್ವವಾದ ನಂತರ ಮಿಥ್ಯಾತ್ವದ ತ್ಯಾಗ ಮಾಡು ಮತ್ತು ಅಹಿಂಸಾಲಕ್ಷಣ ಧರ್ಮವಿದ್ದ ಬಳಿಕ ಆರಂಭ ಸಹಿತವಾದ ಮೋಹವನ್ನು ಬಿಟ್ಟುಕೊಡೆಂದು ಆಚಾರ್ಯ ಭಗವಂತರು ಹೇಳುತ್ತಾರೆ.

ಭಾವಾರ್ಥ ಃ– ಸಮ್ಯಗ್ದರ್ಶನ ಜ್ಞಾನ ಚಾರಿತ್ರದ ಪ್ರಾಪ್ತಿಯಾದ ನಂತರ ಪುನಃ ಮಿಥ್ಯಾದರ್ಶನ ಜ್ಞಾನ ಚಾರಿತ್ರದಲ್ಲಿ ಪ್ರವೃತ್ತಿ ಮಾಡಬೇಡವೆಂದು ಉಪದೇಶವಿದೆ. ।।೧೫।।

ಈಗ ಪುನಃ ಉಪದೇಶ ಮಾಡುತ್ತಾರೆ,ಃ

**ಪವ್ವಜ ಸಂಗಚಾಏ ಪಯಟ್ಟ ಸುತವೇ ಸುಸಂಜಮೇ ಭಾವೇ ।**
**ಹೋಇ ಸುವಿಸುದ್ಧಝಾಣಂ ಣಿಮ್ಮೋಹೇ ವೀಯರಾಯತ್ತೇ ।।೧೬।।**

**ಪ್ರವ್ರಜ್ಯಾಯಾಂ ಸಂಗತ್ಯಾಗೇ ಪ್ರವರ್ತಸ್ವ ಸುತಪಸಿ ಸುಸಂಯಮೇಭಾವೇ ।**
**ಭವತಿ ಸುವಿಶುದ್ಧಧ್ಯಾನಂ ನಿರ್ಮೋಹೇ ವೀತರಾಗತ್ವೇ ।।೧೬।।**

ಅರ್ಥ ಃ– ಎಲೈ ಭವ್ಯನೇ ! ನೀನು ಸಂಗ ಎಂದರೆ ಪರಿಗ್ರಹದ ತ್ಯಾಗವು ಯಾವುದರಲ್ಲಿದೆ ಅಂಥ ದೀಕ್ಷೆಯನ್ನು ಗ್ರಹಣ ಮಾಡು ಮತ್ತು ಒಳ್ಳೆಯ ಪ್ರಕಾರ ಸಂಯಮಸ್ವರೂಪಭಾವವಾದ ಮೇಲೆ ಸಮ್ಯಕ್ ಪ್ರಕಾರ ತಪದಲ್ಲಿ ಪ್ರವರ್ತನೆ ಮಾಡು, ಅದರಿಂದ ನಿನ್ನ ಮೋಹರಹಿತವಾದ ವೀತರಾಗತೆಯಾದ ಮೇಲೆ ನಿರ್ಮಲ ಧರ್ಮಧ್ಯಾನ ಶುಕ್ಲಧ್ಯಾನವಾಗುವುದು.

ಭಾವಾರ್ಥ ಃ– ದೀಕ್ಷೆ ಸ್ವೀಕರಿಸಿ ನಿರ್ಗ್ರಂಥನಾಗು, ಸಂಯಮಭಾವದಿಂದ ಒಳ್ಳೆಯ ಪ್ರಕಾರದಿಂದ ತಪಸ್ಸಿನಲ್ಲಿ ಪ್ರವರ್ತನೆ ಮಾಡು, ಆಗ ಸಂಸಾರದ ಮೋಹವು ದೂರವಾಗಿ ವೀತರಾಗತೆಯಾಗುವುದು, ಪುನಃ ನಿರ್ಮಲ ಧರ್ಮಧ್ಯಾನ–ಶುಕ್ಲಧ್ಯಾನಗಳಾಗುತ್ತವೆ, ಈ ಪ್ರಕಾರದ ಧ್ಯಾನದಿಂದ ಕೇವಲಜ್ಞಾನವನ್ನು ಉತ್ಪನ್ನ ಮಾಡಿಕೊಂಡು ಮೋಕ್ಷ ಪ್ರಾಪ್ತವಾಗುತ್ತಿರುವುದರಿಂದ ಈ ಪ್ರಕಾರದ ಉಪದೇಶವಿದೆ. ।।೧೬।।

ಈ ಜೀವನು ಅಜ್ಞಾನ ಮತ್ತು ಮಿಥ್ಯಾತ್ವದ ದೋಷದಿಂದ ಮಿಥ್ಯಾಮಾರ್ಗದಲ್ಲಿ ಪ್ರವರ್ತನೆ ಮಾಡುತ್ತಾನೆಂದು ಈಗ ಹೇಳುತ್ತಾರೆ, –

**ಮಿಚ್ಛಾದಂಸಣಮಗ್ಗೇ ಮಲಿಣೇ ಅಣ್ಣಾಣಮೋಹದೋಸೇಹಿಂ ।**
**ವಜ್ಝಂತಿ ಮೂಢಜೀವಾ [೧]ಮಿಚ್ಛತ್ತಾಬುದ್ಧಿಉದಏಣ ।।೧೭।।**

---

ನೀನಸಂಗ ದೀಕ್ಷೆ ಗ್ರಹಿಸಿ ಸತ್ತಪದಿ ಪ್ರವರ್ತಿಸು ಸುಸಂಯಮಭಾವದಿಂ ।
ಆ ನಿರ್ಮೋಹ ವೀತರಾಗತೆಯಾದನಂತರ ಸುವಿಶುದ್ಧ ಧ್ಯಾನವಾಗುವುದು ।।೧೬।।

ಆ ಮಿಥ್ಯಾದರ್ಶನ ಮಲಿನಮಾರ್ಗದೊಳಜ್ಞಾನಮೋಹದೋಷದಿಂ ವರ್ತಿಸುವ ।
ಆ ಮೂಢಜೀವನು ಮಿಥ್ಯಾತ್ವಮೇಣಜ್ಞಾನದುದಯದಿಂದ ಬದ್ಧನಾಗುವನು ।।೧೭।।

---

೧ 'ಮಿಚ್ಛತ್ತಾ ಬುದ್ಧಿದೋಸೇಣ' ಎಂಬ ಪಾಠಾಂತರವಿದೆ.

**ಮಿಥ್ಯಾದರ್ಶನಮಾರ್ಗೇ ಮಲಿನೇ ಅಜ್ಞಾನಮೋಹದೋಷೈಃ ।**
**ಬಧ್ಯಂತೇ ಮೂಢ ಜೀವಾಃ ಮಿಥ್ಯಾತ್ವಾಬುದ್ಧ್ಯುದಯೇನ ॥೧೭॥**

ಅರ್ಥ ಃ- ಮೂಢ ಜೀವರುಗಳು ಅಜ್ಞಾನ ಮತ್ತು ಮೋಹ ಎಂದರೆ ಮಿಥ್ಯಾತ್ವದ ದೋಷಗಳಿಂದ ಮಲಿನವಾದ ಆ ಮಿಥ್ಯಾದರ್ಶನದಲ್ಲಿ ಎಂದರೆ ಕುಮತದ ಮಾರ್ಗದಲ್ಲಿ ಮಿಥ್ಯಾತ್ವ ಮತ್ತು ಅಬುದ್ಧಿ ಎಂದರೆ ಅಜ್ಞಾನದ ಉದಯದಿಂದ ಪ್ರವೃತ್ತಿ ಮಾಡುತ್ತಾರೆ.

ಭಾವಾರ್ಥ ಃ- ಈ ಮೂಢ ಜೀವರುಗಳು ಮಿಥ್ಯಾತ್ವ ಮತ್ತು ಅಜ್ಞಾನದ ಉದಯದಿಂದ ಮಿಥ್ಯಾ ಮಾರ್ಗದಲ್ಲಿ ಪ್ರವರ್ತಿಸುತ್ತಿರುವುದರಿಂದ ಮಿಥ್ಯಾತ್ವದ ಅಜ್ಞಾನದ ನಾಶಮಾಡಬೇಕೆಂದು ಈ ಉಪದೇಶವಿದೆ ॥೧೭॥

ಸಮ್ಯಗ್ದರ್ಶನ ಜ್ಞಾನಗಳ ಶ್ರದ್ಧೆಯಿಂದ ಚಾರಿತ್ರದ ದೋಷಗಳು ದೂರವಾಗುತ್ತವೆಂಬುದನ್ನು ಈಗ ಹೇಳುತ್ತಾರೆ,-

**ಸಮ್ಮದ್ದಂಸಣ ಪಸ್ಸದಿ ಜಾಣದಿ ಣಾಣೇಣ ದವ್ವಪಜ್ಜಾಯಾ ।**
**ಸಮ್ಮೇಣ ಯ ಸದ್ದಹದಿ ಯ ಪರಿಹರದಿ ಚರಿತ್ತಜೇ ದೋಸೇ ॥೧೮॥**

**ಸಮ್ಯಗ್ದರ್ಶನೇನ ಪಶ್ಯತಿ ಜಾನಾತಿ ಜ್ಞಾನೇನ ದ್ರವ್ಯಪರ್ಯಾಯಾನ್ ।**
**ಸಮ್ಯಕ್ತ್ವೇನ ಚ ಶ್ರದ್ದಧಾತಿ ಚ ಪರಿಹರತಿ ಚಾರಿತ್ರಜಾನ್ ದೋಷಾನ್ ॥೧೮॥**

ಅರ್ಥ ಃ- ಈ ಆತ್ಮನು ಸಮ್ಯಗ್ದರ್ಶನದಿಂದಂತೂ ಸತ್ತಾ ಮಾತ್ರ ವಸ್ತುವನ್ನು ನೋಡುತ್ತಾನೆ, ಸಮ್ಯಗ್ಜ್ಞಾನದಿಂದ ದ್ರವ್ಯ ಮತ್ತು ಪರ್ಯಾಯಗಳನ್ನು ತಿಳಿಯುತ್ತಾನೆ, ಸಮ್ಯಕ್ತ್ವದಿಂದ ದ್ರವ್ಯ-ಪರ್ಯಾಯ ಸ್ವರೂಪವಾದ ಸತ್ತಾಮಯ ವಸ್ತುವಿನ ಶ್ರದ್ಧೆ ಮಾಡುತ್ತಾನೆ ಮತ್ತು ಹೀಗೆ ನೋಡುವುದು, ತಿಳಿಯುವುದು ಹಾಗೂ ಶ್ರದ್ಧೆಯಾಗುತ್ತದೆ ಆಗ ಚಾರಿತ್ರದಲ್ಲಿ ಎಂದರೆ ಆಚರಣೆಯಲ್ಲಿ ಉತ್ಪನ್ನವಾದ ದೋಷಗಳನ್ನು ಬಿಡುತ್ತಾನೆ.

ಭಾವಾರ್ಥ ಃ- ವಸ್ತುವಿನ ಸ್ವರೂಪವು ದ್ರವ್ಯ ಪರ್ಯಾಯಾತ್ಮಕವಾದ ಸತ್ತಾಸ್ವರೂಪವಿದೆ ಅದು ಹೇಗಿದೆ ಹಾಗೆ ನೋಡಿ ತಿಳಿದು ಶ್ರದ್ಧೆ ಮಾಡಿದಾಗ ಆಚರಣವನ್ನು ಶುದ್ಧ ಮಾಡುವುದು, ಆದರೆ ಸರ್ವಜ್ಞರ ಆಗಮದಿಂದ ವಸ್ತುವಿನ ನಿಶ್ಚಯ ಮಾಡಿ ಆಚರಣೆ ಮಾಡಬೇಕು. ವಸ್ತುವಿದೆ ಅದು ದ್ರವ್ಯ ಪರ್ಯಾಯ ಸ್ವರೂಪವಿದೆ. ದ್ರವ್ಯದ ಲಕ್ಷಣವು ಸತ್ತಾ ಇದೆ ಮತ್ತು ಗುಣಪರ್ಯಾಯವುಳ್ಳದನ್ನು ದ್ರವ್ಯವೆಂದು ಹೇಳುತ್ತಾರೆ. ಪರ್ಯಾಯವು ಸಹವರ್ತಿ ಮತ್ತು ಕ್ರಮವರ್ತಿಯೆಂದು ಎರಡು ಪ್ರಕಾರದ್ದಿದೆ. ಸಹವರ್ತಿಯನ್ನು ಗುಣವೆಂದು ಹೇಳುತ್ತಾರೆ ಮತ್ತು ಕ್ರಮವರ್ತಿಯನ್ನು ಪರ್ಯಾಯವೆಂದು ಹೇಳುತ್ತಾರೆ. ದ್ರವ್ಯವು ಸಾಮಾನ್ಯ ರೂಪದಿಂದ ಒಂದೇ ಇದ್ದರೂ ಕೂಡ ವಿಶೇಷರೂಪದಿಂದ ಜೀವ, ಪುದ್ಗಲ, ಧರ್ಮ, ಅಧರ್ಮ, ಆಕಾಶ ಮತ್ತು ಕಾಲವೆಂದು ಆರು ಇವೆ.

---

ಸಮ್ಯಗ್ದರ್ಶನದಿಕಾಣ್ಬನು ತಿಳಿವನು ಜ್ಞಾನದಿಂ ದ್ರವ್ಯಪರ್ಯಾಯಗಳನು ।
ಸಮ್ಯಕ್ತ್ವದಿಂ ಶ್ರದ್ಧೆಮಾಡುವನು ನಿವಾರಿಸುವನು ಚಾರಿತ್ರದ ದೋಷಗಳ ॥೧೮॥

ಜೀವದ ದರ್ಶನ-ಜ್ಞಾನಮಯವಾದ ಚೇತನವಂತೂ ಗುಣವಿದೆ, ಮತ್ತು ಅಚಕ್ಷು ಮೊದಲಾದ ದರ್ಶನ, ಮತಿ ಮೊದಲಾದ ಜ್ಞಾನ ಹಾಗೂ ಕ್ರೋಧ, ಮಾನ, ಮಾಯೆ, ಲೋಭ, ಮೊದಲಾದ ಮತ್ತು ನರ-ನಾರಕ ಮೊದಲಾದವು ವಿಭಾವ ಪರ್ಯಾಯಗಳಿವೆ, ಅಗುರುಲಘುಗುಣದ ಮುಖಾಂತರ ಹಾನಿ-ವೃದ್ಧಿಯ ಪರಿಣಮನವಿದೆ ಅದು ಸ್ವಭಾವಪರ್ಯಾಯವಿದೆ. ಪುದ್ಗಲದ್ರವ್ಯಕ್ಕೆ ಸ್ಪರ್ಶ, ರಸ, ಗಂಧ, ವರ್ಣರೂಪದ ಮೂರ್ತಿಕತನವಂತೂ ಗುಣವಿದೆ ಮತ್ತು ಸ್ಪರ್ಶ, ರಸ, ಗಂಧ, ವರ್ಣದ ಭೇದರೂಪವಾದ ಪರಿಣಮನ ಹಾಗೂ ಅಣುವಿನಿಂದ ಸ್ಕಂಧ ರೂಪವಾಗುವುದು ಮತ್ತು ಶಬ್ದ, ಬಂಧ ಮೊದಲಾದ ರೂಪವಾಗುವುದು ಇತ್ಯಾದಿಗಳು ಪರ್ಯಾಯವಿವೆ. ಧರ್ಮ, ಅಧರ್ಮ ದ್ರವ್ಯದ ಗತಿಹೇತುತ್ವ, ಸ್ಥಿತಿಹೇತುತ್ವತನವಂತೂ ಗುಣವಿದೆ ಮತ್ತು ಈ ಗುಣಕ್ಕೆ ಜೀವ-ಪುದ್ಗಲದ ಗತಿ-ಸ್ಥಿತಿಯ ಭೇದಗಳಿಂದ ಭೇದಗಳಾಗುತ್ತವೆ ಅವು ಪರ್ಯಾಯಗಳಿವೆ ಮತ್ತು ಅಗುರುಲಘು ಗುಣದ ಮುಖಾಂತರ ಹಾನಿ-ವೃದ್ಧಿಯ ಪರಿಣಮನವಾಗುತ್ತದೆ ಅದು ಸ್ವಭಾವಪರ್ಯಾಯವಿದೆ.

ಆಕಾಶದ್ದು ಅವಗಾಹನಗುಣವಿದೆ ಮತ್ತು ಜೀವ-ಪುದ್ಗಲ ಮೊದಲಾದವುಗಳ ನಿಮಿತ್ತದಿಂದ ಪ್ರದೇಶ ಭೇದ ಕಲ್ಪನೆ ಮಾಡಲಾಗುತ್ತದೆ ಅವು ಪರ್ಯಾಯಗಳಿವೆ ಮತ್ತು ಹಾನಿ-ವೃದ್ಧಿಯ ಪರಿಣಮನವು ಅದು ಸ್ವಭಾವ ಪರ್ಯಾಯವಿದೆ. ಕಾಲದ್ರವ್ಯದ ವರ್ತನವಂತೂ ಗುಣವಿದೆ ಮತ್ತು ಜೀವ ಹಾಗೂ ಪುದ್ಗಲದ ನಿಮಿತ್ತದಿಂದ ಸಮಯ ಮೊದಲಾದ ಕಲ್ಪನೆಯು ಅದು ಪರ್ಯಾಯವಿದೆ, ಇದನ್ನು ವ್ಯವಹಾರ ಕಾಲವೆಂದೂ ಹೇಳುತ್ತಾರೆ ಮತ್ತು ಹಾನಿ-ವೃದ್ಧಿಯ ಪರಿಣಮನವು ಅದು ಸ್ವಭಾವ ಪರ್ಯಾಯವಿದೆ ಇತ್ಯಾದಿ-ಇವುಗಳ ಸ್ವರೂಪವನ್ನು ಜಿನಾಗಮದಿಂದ ತಿಳಿದುಕೊಂಡು ನೋಡುವುದು, ತಿಳಿಯುವುದು, ಶ್ರದ್ಧೆ ಮಾಡುವುದರಿಂದ ಚಾರಿತ್ರವು ಶುದ್ಧವಾಗುತ್ತದೆ. ಜ್ಞಾನ, ಶ್ರದ್ಧೆಗಳ ಹೊರತಾಗಿ ಆಚರಣವು ಶುದ್ಧವಾಗುವುದಿಲ್ಲವೆಂದು ತಿಳಿದುಕೊಳ್ಳಬೇಕು. ॥೧೮॥

ಈ ಸಮ್ಯಗ್ದರ್ಶನ ಜ್ಞಾನ ಚಾರಿತ್ರಗಳೆಂಬ ಮೂರು ಭಾವಗಳು ಮೋಹರಹಿತನಾದ ಜೀವನಿಗೆ ಇರುತ್ತವೆ, ಇವುಗಳ ಆಚರಣೆ ಮಾಡುತ್ತಿದ್ದರೆ ಶೀಘ್ರ ಮೋಕ್ಷವಾಗುತ್ತದೆಂಬುದನ್ನು ಈಗ ಹೇಳುತ್ತಾರೆ, -

ಏಏ ತಿಣ್ಣಿ ವಿ ಭಾವಾ ಹವಂತಿ ಜೀವಸ್ಸ ಮೋಹರಹಿಯಸ್ಸ ।
ಣಿಯಗುಣಮಾರಾಹಂತೋ ಅಚಿರೇಣ ಯ ಕಮ್ಮ ಪರಿಹರಇ ॥೧೯॥

ಏತೇ ತ್ರಯೋಽಪಿ ಭಾವಾಃ ಭವಂತಿ ಜೀವಸ್ಯ ಮೋಹರಹಿತಸ್ಯ ।
ನಿಜಗುಣಮಾರಾಧಯನ್ ಅಚಿರೇಣ ಚ ಕರ್ಮ ಪರಿಹರತಿ ॥೧೯॥

ಅರ್ಥ ಃ- ಈ ಪೂರ್ವೋಕ್ತ ಸಮ್ಯಗ್ದರ್ಶನ ಜ್ಞಾನಚಾರಿತ್ರವೆಂದು ಮೂರು ಭಾವಗಳಿವೆ, ಇವು ನಿಶ್ಚಯದಿಂದ ಮೋಹ ಎಂದರೆ ಮಿಥ್ಯಾತ್ವರಹಿತನಾದ ಜೀವನಿಗೇ ಇರುತ್ತವೆ, ಆಗ ಈ ಜೀವನು ತನ್ನ ನಿಜಗುಣವಾದ ಆ ಶುದ್ಧ ದರ್ಶನ ಜ್ಞಾನಮಯವಾದ ಚೇತನಾದ ಆರಾಧನೆ ಮಾಡುತ್ತ ಅಲ್ಪ ಕಾಲದಲ್ಲಿಯೇ ಕರ್ಮದ ನಾಶ ಮಾಡುತ್ತಾನೆ.

ಭಾವಾರ್ಥ ಃ- ನಿಜಗುಣದ ಧ್ಯಾನದಿಂದ ಶೀಘ್ರವಾಗಿಯೇ ಕೇವಲಜ್ಞಾನವನ್ನು ಉತ್ಪನ್ನ ಮಾಡಿಕೊಂಡು ಮೋಕ್ಷ ಪಡೆಯುತ್ತಾನೆ. ॥೧೯॥

---

ನಿಜದೀ ಮೂರು ಭಾವಗಳು ಮೋಹವಿರಹಿತನಾದ ಜೀವನಿಗಿರುವವು ।
ನಿಜಗುಣಮಾರಾಧಿಸುತವನು ಶೀಘ್ರದಲಿ ಕರ್ಮ ಪರಿಹರಿಸುವನು ॥೧೯॥

ಈಗ ಈ ಸಮ್ಯಕ್ತ್ವಚರಣ ಚಾರಿತ್ರದ ಕಥನವನ್ನು ಸಂಕೋಚ ಮಾಡುತ್ತ ಆಚಾರ್ಯ ಭಗವಂತರು ಹೀಗೆ ಹೇಳುತ್ತಾರೆ,-

ಸಂಖಿಜ್ಜಮಸಂಖಿಜ್ಜಗುಣಂ ಚ [೧]ಸಂಸಾರಿಮೇರುಮತ್ತಾ ಣಂ ।
ಸಮ್ಮತ್ತಮಣುಚರಂತಾ ಕರೇಂತಿ ದುಕ್ಖಕ್ಖಯಂ ಧೀರಾ ॥೨೦॥

ಸಂಖ್ಯೇಯಾಮಸಂಖ್ಯೇಯಗುಣಾಂ ಸಂಸಾರಿಮೇರುಮಾತ್ರಾ ಣಂ ।
ಸಮ್ಯಕ್ತ್ವಮನುಚರಂತಃ ಕುರ್ವಂತಿ ದುಃಖಕ್ಷಯಂ ಧೀರಾಃ ॥೨೦॥

ಅರ್ಥ :- ಧೀರ ಪುರುಷರು ಸಮ್ಯಕ್ತ್ವದ ಆಚರಣೆ ಮಾಡುತ್ತ ಸಂಖ್ಯಾತಗುಣಿತ ಹಾಗೂ ಅಸಂಖ್ಯಾತ ಗುಣಿತವಾಗಿ ಕರ್ಮಗಳ ನಿರ್ಜರೆ ಮಾಡುತ್ತಾರೆ ಮತ್ತು ಕರ್ಮಗಳ ಉದಯದಿಂದಾದ ಸಂಸಾರದ ದುಃಖದ ನಾಶ ಮಾಡುತ್ತಾರೆ. ಕರ್ಮಗಳು ಹೇಗಿವೆಯೆಂದರೆ ಸಂಸಾರೀ ಜೀವರುಗಳಿಗೆ ಮೇರು ಎಂದರೆ ಮರ್ಯಾದೆ ಮಾತ್ರವಿವೆ ಮತ್ತು ಸಿದ್ಧವಾದನಂತರ ಕರ್ಮಗಳಿಲ್ಲ.

ಭಾವಾರ್ಥ :- ಈ ಸಮ್ಯಕ್ತ್ವದ ಆಚರಣೆಯಾದ ಮೇಲೆ ಪ್ರಥಮ ಕಾಲದಲ್ಲಂತೂ ಗುಣಶ್ರೇಣಿಯ ನಿರ್ಜರೆಯಾಗುತ್ತದೆ, ಅದು ಅಸಂಖ್ಯಾತದ ಗುಣಾಕಾರರೂಪವಿದೆ. ಅನಂತರ ಎಲ್ಲಿಯವರೆಗೆ ಸಂಯಮದ ಆಚರಣೆಯಾಗುವುದಿಲ್ಲ ಅಲ್ಲಿಯವರೆಗೆ ಗುಣಶ್ರೇಣಿಯ ನಿರ್ಜರೆಯಾಗುವುದಿಲ್ಲ. ಅಲ್ಲಿ ಸಂಖ್ಯಾತದ ಗುಣಾಕಾರ ರೂಪವಾಗುತ್ತಿರುವುದರಿಂದ ಸಂಖ್ಯಾತಗುಣ ಮತ್ತು ಅಸಂಖ್ಯಾತಗುಣವೆಂದು ಹೀಗೆ ಎರಡೂ ವಚನಗಳನ್ನು ಹೇಳಿದೆ. ಕರ್ಮವಂತೂ ಸಂಸಾರ ಅವಸ್ಥೆಯಿದೆ, ಅದು ಇರುವವರೆಗೆ ಅದರಲ್ಲಿ ದುಃಖದ ಕಾರಣವು ಮೋಹ ಕರ್ಮವಿದೆ, ಅದರಲ್ಲಿ ಮಿಥ್ಯಾತ್ವ ಕರ್ಮವು ಮುಖ್ಯವಿದೆ. ಸಮ್ಯಕ್ತ್ವವು ಆದನಂತರ ಮಿಥ್ಯಾತ್ವದ್ದಂತೂ ಅಭಾವವೇ ಆಗುವುದು ಮತ್ತು ದುಃಖದ ಕಾರಣವಾದ ಚಾರಿತ್ರಮೋಹವು ಕೂಡ ಎಲ್ಲಿಯವರೆಗಿದೆ ಅಲ್ಲಿಯವರೆಗೆ ಅದರ ನಿರ್ಜರೆ ಮಾಡುತ್ತಾನೆ, ಈ ಪ್ರಕಾರ ಅನುಕ್ರಮದಿಂದ ದುಃಖದ ಕ್ಷಯವಾಗುತ್ತದೆ. ಸಂಯಮಾಚರಣವು ಆದಮೇಲೆ ಸಮಸ್ತ ಕರ್ಮಗಳ ಕ್ಷಯವಾಗೇ ಆಗುವುದು. ಸಮ್ಯಕ್ತ್ವದ ಮಾಹಾತ್ಮ್ಯವು ಹೇಗಿದೆಯೆಂದರೆ ಸಮ್ಯಕ್ತ್ವಾಚರಣವಾದಮೇಲೆ ಸಂಯಮಾಚರಣವು ಕೂಡ ಶೀಘ್ರದಲ್ಲಿಯೇ ಆಗುತ್ತದೆ,ಆದುದರಿಂದ ಮೋಕ್ಷ ಮಾರ್ಗದಲ್ಲಿ ಸಮ್ಯಕ್ತ್ವವನ್ನು ಮುಖ್ಯವೆಂದು ತಿಳಿದುಕೊಂಡು ಇದರ ವರ್ಣನೆಯನ್ನು ಮೊದಲು ಮಾಡಲಾಗಿದೆ. ॥೨೦॥

ಇನ್ನು ಮುಂದೆ ಸಂಯಮಾಚರಣ ಚಾರಿತ್ರವನ್ನು ಹೇಳುತ್ತಾರೆ, -

ದುವಿಹಂ ಸಂಜಮಚರಣಂ ಸಾಯಾರಂ ತಹ ಹವೇ ಣಿರಾಯಾರಂ ।
ಸಾಯಾರಂ [೨]ಸಗ್ಗಂಥೇ ಪರಿಗ್ಗಹಾ ರಹಿಯ ಖಲು ಣಿರಾಯಾರಂ ॥೨೧॥

---

ಅಸಂಖ್ಯಾತ-ಸಂಖ್ಯಾತಗುಣಿತವಿದೆ ಕರ್ಮಸಂಸಾರಿಗೆ ಮೇರುಮಾತ್ರವಿದೆ ।
ಆ ಸಮ್ಯಕ್ತ್ವದಾಚರಣೆಮಾಡುತ್ತ ಧೀರಪುರುಷ ದುಃಖಕ್ಷಯ ಮಾಡುವನು ॥೨೦॥
ಸಾಗಾರ-ನಿರಾಗಾರವೆಂದೆರಡು ಭೇದವಿವೆ ಸಂಯಮಾಚರಣದೊಳಗೆ
ಸಾಗಾರವದು ಸಗ್ರಂಥವಿದ್ದರೆ ನಿರಾಗಾರ ಪರಿಗ್ರಹರಹಿತವಿದೆ ॥೨೧॥

---

೧ 'ಸಂಸಾರಿ ಮೇರುಮತ್ತಾ' 'ಸಾಸಾರಿ ಮೇರುಮಿತ್ತಾ' ಇದರ ಸಟೀಕ ಸಂಸ್ಕೃತ ಪ್ರತಿಯಲ್ಲಿ ಸರ್ಷಪಮೇರು ಮಾತ್ರಾಂ ಎಂದಿದೆ.

೨. 'ಸಗ್ಗಂಥಂ' ಎಂಬ ಪಾಠಾಂತರವಿದೆ.

ದ್ವಿವಿಧಂ ಸಂಯಮಚರಣಂ ಸಾಗಾರಂ ತಥಾ ಭವೇತ್ ನಿರಾಗಾರಂ ।
ಸಾಗಾರಂ ಸಗ್ರಂಥೇ ಪರಿಗ್ರಹಾದ್ರಹಿತೇ ಖಲು ನಿರಾಗಾರಮ್ ॥೨೧॥

ಅರ್ಥ ಃ- ಸಂಯಮಚರಣ ಚಾರಿತ್ರವು ಸಾಗಾರ ಮತ್ತು ನಿರಾಗಾರವೆಂದು ಎರಡು ಪ್ರಕಾರದ್ದಿದೆ. ಸಾಗಾರವಂತೂ ಪರಿಗ್ರಹ ಸಹಿತನಾದ ಶ್ರಾವಕನಿಗೆ ಆಗುತ್ತದೆ ಮತ್ತು ನಿರಾಗಾರವು ಪರಿಗ್ರಹದಿಂದ ರಹಿತನಾದ ಮುನಿಗೆ ಆಗುತ್ತದೆಯೆಂದು ನಿಶ್ಚಯವಿದೆ.

ಭಾವಾರ್ಥ ಃ- ಸಂಯಮಚರಣ ಚಾರಿತ್ರವು ನಿಶ್ಚಯದಿಂದ ಸಾಗಾರ-ನಿರಾಗಾರವೆಂದು ಎರಡು ಪ್ರಕಾರವಿದೆ. ಅದರಲ್ಲಿ ಸಾಗಾರದ ಆಚರಣೆಯನ್ನು ಶ್ರಾವಕನು ಮಾಡಿದರೆ ನಿರಾಗಾರದ ಆಚರಣೆಯನ್ನು ಮುನಿಯು ಮಾಡುತ್ತಾನೆ. ॥೨೧॥

ಈಗ ಸಾಗಾರ ಸಂಯಮಾಚರಣವನ್ನು ಹೇಳುತ್ತಾರೆ, -

ದಂಸಣ ವಯಸಾಮಾಇಯಂ ಪೋಸಹ ಸಚಿತ್ತ ರಾಯಭತ್ತೇ ಯ ।
ಬಂಭಾರಂಭಪರಿಗ್ಗಹ ಅಣುಮಣ ಉದ್ದಿಟ್ಠ ದೇಸವಿರದೋ ಯ ॥೨೨॥

ದರ್ಶನಂ ವ್ರತಂ ಸಾಮಾಯಿಕಂ ಪ್ರೋಷಧಂ ಸಚಿತ್ತಂ ರಾತ್ರಿಭುಕ್ತಿಶ್ಚ ।
ಬ್ರಹ್ಮ ಆರಂಭಃ ಪರಿಗ್ರಹಃ ಅನುಮತಿಃ ಉದ್ದಿಷ್ಟ ದೇಶವಿರತಶ್ಚ ॥೨೨॥

ಅರ್ಥ ಃ- ದರ್ಶನ, ವ್ರತ, ಸಾಮಾಯಿಕ ಮತ್ತು ಪ್ರೋಷಧ ಮೊದಲಾದವುಗಳ ಹೆಸರು ಏಕದೇಶವಿದೆ ಮತ್ತು ಹೆಸರು ಹೀಗೆ ಹೇಳಿದ್ದಾರೆ, ಪ್ರೋಷಧೋಪವಾಸ, ಸಚಿತ್ತತ್ಯಾಗ, ರಾತ್ರಿಭುಕ್ತಿತ್ಯಾಗ, ಬ್ರಹ್ಮಚರ್ಯ, ಆರಂಭತ್ಯಾಗ, ಪರಿಗ್ರಹತ್ಯಾಗ, ಅನುಮತಿತ್ಯಾಗ, ಮತ್ತು ಉದ್ದಿಷ್ಟತ್ಯಾಗವೆಂದು ದೇಶವಿರತವು ಹನ್ನೊಂದು ಪ್ರಕಾರವಿದೆ.

ಭಾವಾರ್ಥ ಃ- ಇವು ಸಾಗಾರ ಸಂಯಮಾಚರಣದ ಹನ್ನೊಂದು ಸ್ಥಾನಗಳಿವೆ, ಅವನ್ನು ಪ್ರತಿಮೆಯೆಂದೂ ಹೇಳುತ್ತಾರೆ. ॥೨೨॥

ಈ ಸ್ಥಾನಗಳಲ್ಲಿ ಸಂಯಮದ ಆಚರಣೆಯು ಯಾವ ಪ್ರಕಾರವಿದೆಯೆಂಬುದನ್ನು ಈಗ ಹೇಳುತ್ತಾರೆ, -

ಪಂಚೇವ ಣುವ್ವಯಾಇಂ ಗುಣವ್ವಯಾಇಂ ಹವಂತಿ ತಹ ತಿಣ್ಣಿ ।
ಸಿಕ್ಖಾವಯ ಚತ್ತಾರಿ ಯ ಸಂಜಮಚರಣಂ ಚ ಸಾಯಾರಂ ॥೨೩॥

---

ದರಶನ ವ್ರತ ಸಾಮಾಯಿಕ ಪ್ರೋಷಧ ಸಚಿತ್ತ ರಾತ್ರಿಭುಕ್ತಿ ಬ್ರಹ್ಮಚರ್ಯ ।
ಆರಂಭ ಪರಿಗ್ರಹ ಅನುಮತಿ ಉದ್ದಿಷ್ಟವೀ ಸ್ಥಾನ ದೇಶವಿರತಿಯವು ॥೨೨॥

ಐದು ಅಣುವ್ರತ ಮೂರುಗುಣವ್ರತ ಮೇಣ್ನಾಲ್ಕು ಶಿಕ್ಷಾವ್ರತವೆಂದೀ ತೆರದಿ ।
ದ್ವಾದಶ ಸಂಯಮಚರಣ ಚಾರಿತ್ರವಿದ್ದಿದನು ಸಾಗಾರವೆಂದು ಹೇಳಿದೆ ॥೨೩॥

**ಪಂಚೈವ ಅಣುವ್ರತಾನಿ ಗುಣವ್ರತಾನಿ ಭವಂತಿ ತಥಾ ತ್ರೀಣಿ ।**
**ಶಿಕ್ಷಾವ್ರತಾನಿ ಚತ್ವಾರಿ ಸಂಯಮಚರಣಂ ಚ ಸಾಗಾರಮ್ ॥೨೩॥**

ಅರ್ಥ ಃ- ಐದು ಅಣುವ್ರತ, ಮೂರು ಗುಣವ್ರತ ಮತ್ತು ನಾಲ್ಕು ಶಿಕ್ಷಾವ್ರತವೆಂದು ಹೀಗೆ ಹನ್ನೆರಡು ಪ್ರಕಾರದ ಸಂಯಮಚರಣ ಚಾರಿತ್ರವಿದೆ ಅದು ಸಾಗಾರವಿದೆ, ಗ್ರಂಥಸಹಿತನಾದ ಶ್ರಾವಕನಿಗೆ ಆಗುತ್ತಿರುವುದರಿಂದ ಸಾಗಾರವೆಂದು ಹೇಳಿದೆ.

ಪ್ರಶ್ನೆ ಃ- ಇವು ವ್ರತದ ಹನ್ನೆರಡು ಪ್ರಕಾರ ಹೇಳಿದೆ ಮತ್ತು ಮೊದಲಿನ ಗಾಥೆಯಲ್ಲಿ ಹನ್ನೊಂದು ಹೆಸರು ಹೇಳಿದೆ, ಅವುಗಳಲ್ಲಿ ಮೊದಲು ದರ್ಶನ ನಾಮ ಹೇಳಿದೆ ಆದರಲ್ಲಿ ಈ ವ್ರತಗಳು ಹೇಗೆ ಆಗುತ್ತವೆ. ?

ಉತ್ತರ ಃ- ಅಣುವ್ರತವೆಂಬ ಹೆಸರು ಕಿಂಚಿತ್ ವ್ರತದ್ದಿದೆ, ಆ ಐದು ಅಣುವ್ರತಗಳೊಳಗಿಂದ ಕಿಂಚಿತ್ ಇಲ್ಲಿಕೂಡ ಆಗುತ್ತಿರುವುದರಿಂದ ದರ್ಶನ ಪ್ರತಿಮೆಯ ಧಾರಕನು ಕೂಡ ಅಣುವ್ರತಿಯೇ ಇದ್ದಾನೆ, ಇದರ ಹೆಸರು ದರ್ಶನವೆಂದೇ ಹೇಳಿದೆ. ಇವನಿಗೆ ಕೇವಲ ಸಮ್ಯಕ್ತ್ವವೇ ಇರುತ್ತದೆ ಮತ್ತು ಅವ್ರತಿಯಿದ್ದಾನೆ, ಅಣುವ್ರತಗಳಿಲ್ಲ, ಇವನಿಗೆ ಅಣುವ್ರತಗಳು ಅತಿಚಾರಸಹಿತ ಆಗುತ್ತಿರುವುದರಿಂದ ವ್ರತಿಯೆಂಬ ಹೆಸರನ್ನು ಹೇಳಿಲ್ಲವೆಂದು ಇಲ್ಲಿ ತಿಳಿದುಕೊಳ್ಳಬೇಕು. ಎರಡನೆಯ ಪ್ರತಿಮೆಯಲ್ಲಿ ಅತಿಚಾರವಿಲ್ಲದೆ ಅಣುವ್ರತಗಳನ್ನು ಪಾಲಿಸುವುದರಿಂದ ವ್ರತವೆಂಬ ಹೆಸರನ್ನು ಹೇಳಿದೆ, ಇಲ್ಲಿ ಸಮ್ಯಕ್ತ್ವದ ಅತಿಚಾರವನ್ನು ನಿವಾರಿಸುತ್ತಾನೆ, ಸಮ್ಯಕ್ತ್ವವೇ ಮುಖ್ಯವಿರುವುದರಿಂದ ದರ್ಶನ ಪ್ರತಿಮೆಯೆಂಬ ಹೆಸರಿದೆ. ಅನ್ಯ ಗ್ರಂಥಗಳಲ್ಲಿ ಇದರ ಸ್ವರೂಪವನ್ನು ಯಾವನು ಅಷ್ಟಮೂಲಗುಣಗಳ ಪಾಲನೆ ಮಾಡುವನು, ಸಪ್ತವ್ಯಸನಗಳನ್ನು ತ್ಯಜಿಸುವನು, ಯಾವನಿಗೆ ಸಮ್ಯಕ್ತ್ವವು ಅತಿಚಾರರಹಿತ ಶುದ್ಧವಿರುವುದು ಅವನು ದರ್ಶನ ಪ್ರತಿಮೆಯ ಧಾರಕನೆಂದು ಹೇಳಿದೆ. ಐದು ಔದುಂಬರಫಲ ಮತ್ತು ಮದ್ಯ, ಮಾಂಸ, ಮಧು ಈ ಎಂಟರ ತ್ಯಾಗ ಮಾಡುವುದು ಅದು ಅಷ್ಟಮೂಲ ಗುಣಗಳಿವೆ.

ಅಥವಾ ಐದು ಅಣುವ್ರತ ಪಾಲಿಸುವುದು ಮತ್ತು ಮದ್ಯ, ಮಾಂಸ, ಮಧುವಿನ ತ್ಯಾಗ ಮಾಡುವುದು ಅದು ಅಷ್ಟಮೂಲಗುಣಗಳಿವೆಯೆಂದು ಬೇರೆ ಗ್ರಂಥಗಳಲ್ಲಿ ಹೇಳಿದೆ, ಆದರೆ ಇದರಲ್ಲಿ ವಿರೋಧವಿಲ್ಲ, ವಿವಕ್ಷೆಯ ಭೇದವಿದೆ. ಐದು ಔದುಂಬರ ಫಲ ಮತ್ತು ಮೂರು ಮಕಾರದ ತ್ಯಾಗ ಹೇಳುವುದರಿಂದ ಯಾವ ವಸ್ತುಗಳಲ್ಲಿ ಪ್ರತ್ಯಕ್ಷ ತ್ರಸಜೀವಗಳು ಕಾಣುತ್ತವೆ ಅವೆಲ್ಲ ವಸ್ತುಗಳನ್ನು ಭಕ್ಷಣ ಮಾಡಬಾರದು. ದೇವಾದಿಕರ ನಿಮಿತ್ತವಾಗಿ ಅಥವಾ ಔಷಧಾದಿಗಳ ನಿಮಿತ್ತದಿಂದ ಇತ್ಯಾದಿ ಕಾರಣಗಳಿಂದ ಗೋಚರಿಸುತ್ತಿರುವ ತ್ರಸಜೀವಗಳ ಘಾತ ಮಾಡಬಾರದೆಂಬ ಆಶಯವಿದೆ. ಇದರಲ್ಲಂತೂ ಆ ಅಹಿಂಸಾಣುವ್ರತವು ಬಂತು. ಸಪ್ತವ್ಯಸನಗಳ ತ್ಯಾಗದಲ್ಲಿ ಅಸತ್ಯ, ಕಳವು ಮತ್ತು ಪರಿಗ್ರಹದ ತ್ಯಾಗವು ಬಂತು, ಅನ್ಯವ್ಯಸನಗಳ ತ್ಯಾಗದಲ್ಲಿ ಅನ್ಯಾಯ, ಪರಧನ, ಪರಸ್ತ್ರೀಯ ಗ್ರಹಣವಿಲ್ಲ; ಇದರಲ್ಲಿ ಅತಿಲೋಭದ ತ್ಯಾಗದಿಂದ ಪರಿಗ್ರಹದ ಕುಂದುವಿಕೆ ಬಂತು, ಈ ಪ್ರಕಾರ ಐದು ಅಣುವ್ರತಗಳು ಬರುತ್ತವೆ. ಇದಕ್ಕೆ (ವ್ರತಾದಿಗಳ ಪ್ರತಿಮೆಗಳಿಗೆ) ಅತಿಚಾರವು ತೊಲಗದಿರುವುದರಿಂದ ಅಣುವ್ರತವೆಂಬ ಹೆಸರು ಪ್ರಾಪ್ತಮಾಡಿಕೊಳ್ಳುವುದಿಲ್ಲ, (ಆದಾಗ್ಯೂ) ಈ ಪ್ರಕಾರದಿಂದ ದರ್ಶನ ಪ್ರತಿಮೆಯ ಧಾರಕನು ಕೂಡ ಅಣುವ್ರತಿಯಿರುವುದರಿಂದ ದೇಶವಿರತ ಸಾಗಾರಸಂಯಮಚರಣ ಚಾರಿತ್ರದಲ್ಲಿ ಇವನನ್ನು ಗಣಿಸಲಾಗಿದೆ. ॥೨೩॥

ಇನ್ನು ಮುಂದೆ ಐದು ಅಣುವ್ರತಗಳ ಸ್ವರೂಪ ಹೇಳುತ್ತಾರೆ, –

ಥೂಲೇ ತಸಕಾಯವಹೇ ಥೂಲೇ ಮೋಷೇ [೧]ಅದತ್ತಥೂಲೇ ಯ ।
ಪರಿಹಾರೋ ಪರಮಹಿಲಾ ಪರಿಗ್ಗಹಾರಂಭಪರಿಮಾಣಂ ॥೨೪॥

ಸ್ಥೂಲೇ ತ್ರಸಕಾಯವಧೇ ಸ್ಥೂಲಾಯಾಂ ಮೃಷಾಯಾಂ ಅದತ್ತಸ್ಥೂ ಲೇ ಚ ।
ಪರಿಹಾರಃ ಪರಮಹಿಲಾಯಾಂ ಪರಿಗ್ರಹಾರಂಭಪರಿಮಾಣಮ್ ॥೨೪॥

ಅರ್ಥ ಃ- ಸ್ಥೂಲ ತ್ರಸಕಾಯದ ಘಾತ, ಸ್ಥೂಲ ಮೃಷೆ ಎಂದರೆ ಅಸತ್ಯ, ಸ್ಥೂಲ ಅದತ್ತ ಎಂದರೆ ಕೊಡದ ಪರಧನ, ಪರಮಹಿಳೆ ಎಂದರೆ ಪರಸ್ತ್ರೀ ಇವುಗಳದಂತೂ ಪರಿಹಾರ ಎಂದರೆ ತ್ಯಾಗ ಮತ್ತು ಪರಿಗ್ರಹ ಹಾಗೂ ಆರಂಭದ ಪ್ರಮಾಣವೆಂದು ಹೀಗೆ ಐದು ಅಣುವ್ರತಗಳಿವೆ.

ಭಾವಾರ್ಥ ಃ- ಯಾವುದರಲ್ಲಿ ತನ್ನ ಮರಣವಾಗುವುದು, ಇತರರ ಮರಣವಾಗುವುದು, ತನ್ನ ಮನೆಯು ಕೆಡುವುದು, ಇತರರ ಮನೆಯು ಕೆಡುವುದು, ದೊರೆಯ ದಂಡನೆಗೆ ಯೋಗ್ಯವಾಗುವುದು, ಪಂಚರ ದಂಡನೆಗೆ ಯೋಗ್ಯವಾಗುವುದೆಂಬ ದೊಡ್ಡ ಅನ್ಯಾಯರೂಪವಾದ ಪಾಪಕಾರ್ಯಗಳನ್ನು ಸ್ಥೂಲವೆಂದು ಹೇಳುವುದರ ಅರ್ಥವಿದೆಯೆಂದು ಇಲ್ಲಿ ತಿಳಿಯಬೇಕು. ಈ ಪ್ರಕಾರದ ಸ್ಥೂಲ ಪಾಪಗಳನ್ನು ರಾಜಾದಿಕರ ಭಯದಿಂದ ಮಾಡದಿರುವುದು ಅದು ವ್ರತವಲ್ಲ, ತೀವ್ರ ಕಷಾಯದ ನಿಮಿತ್ತದಿಂದ ಇವನ್ನು ತೀವ್ರ ಕರ್ಮಬಂಧಕ್ಕೆ ನಿಮಿತ್ತವೆಂದು ತಿಳಿದುಕೊಂಡು ತಾನಾಗಿಯೇ ಮಾಡದಿರುವ ಭಾವರೂಪವಾದ ತ್ಯಾಗವಿರುವುದು ಅದು ವ್ರತವಿದೆ ಇದರ ಹನ್ನೊಂದು ಸ್ಥಾನಕ ಹೇಳಿದೆ. ಇವುಗಳಲ್ಲಿ ಮೇಲೆ ಮೇಲೆ ತ್ಯಾಗವು ವೃದ್ಧಿಸುತ್ತ ಹೋಗುತ್ತದೆ, ಆದರೆ ಇದರ ಉತ್ಕೃಷ್ಟತೆಯವರೆಗೆ ಹೇಗಿದೆಯೆಂದರೆ ಯಾವ ಕಾರ್ಯಗಳಲ್ಲಿ ತ್ರಸ ಜೀವಗಳಿಗೆ ಬಾಧೆಯಾಗುವುದು ಅಂಥ ಸಮಸ್ತ ಕಾರ್ಯಗಳು ಬಿಟ್ಟುಹೋಗುತ್ತವೆ, ಅದರಿಂದಾಗಿ ತ್ರಸಹಿಂಸೆಯ ತ್ಯಾಗಿಯು ದೇಶವ್ರತಿಯಾಗುತ್ತಾನೆಂದು ಸಾಮಾನ್ಯ ಹೆಸರು ಹೇಳಿದೆ. ಇದರ ವಿಶೇಷ ಕಥನವನ್ನು ಅನ್ಯಗ್ರಂಥಗಳಿಂದ ತಿಳಿದುಕೊಳ್ಳಬೇಕು. ॥೨೪॥

ಈಗ ಮೂರು ಗುಣವ್ರತಗಳನ್ನು ಹೇಳುತ್ತಾರೆ,-

ದಿಸಿವಿದಿಸಿಮಾಣ ಪಢಮಂ ಅಣತ್ಥದಂಡಸ್ಸ ವಜ್ಜಣಂ ಬಿದಿಯಂ ।
ಭೋಗೋಪಭೋಗಪರಿಮಾ ಇಯಮೇವ ಗುಣವ್ವಯಾ ತಿಣ್ಣಿ ॥೨೫॥

ದಿಗ್ವಿದಿಗ್ಮಾನಂ ಪ್ರಥಮಂ ಅನರ್ಥದಂಡಸ್ಯ ವರ್ಜನಂ ದ್ವಿತೀಯಮ್ ।
ಭೋಗೋಪಭೋಗಪರಿಮಾಣಂ ಇಮಾನ್ಯೇವ ಗುಣವ್ರತಾನಿ ತ್ರೀಣಿ ॥೨೫॥

---

ತೋರತ್ರಸಕಾಯವಧೆ ತೋರವಾದಸತ್ಯ ತೋರವಾದದತ್ತ ಮೇಣ್ಪರಸ್ತ್ರೀ ।
ಪರಿಹರಿಸಿ ಪರಿಗ್ರಹಾರಂಭ ಪ್ರಮಾಣವೆಂದೈದು ಅಣುವ್ರತಗಳಿವೆ ॥೨೪॥

ವಿದಿಶೆದಿಶೆಗತಿಪ್ರಮಾಣ ಪ್ರಥಮ ಅನರ್ಥದಂಡವರ್ಜನ ದ್ವಿತೀಯ ।
ಅದರಂತೆ ಭೋಗೋಪಭೋಗ ಪರಿಮಾಣವೆಂದೀಮೂರು ಗುಣವ್ರತಗಳಿವೆ ॥೨೫॥

---

೧ 'ಅದತ್ತಥೂಲೇ' ಇದರ ಸ್ಥಾನದಲ್ಲಿ ಸಂಸ್ಕೃತ ಛಾಯೆಯಲ್ಲಿ 'ತಿತಿಕ್ಖಥೂಲೇ', 'ಪರಮಹಿಲಾ'ದ ಸ್ಥಾನದಲ್ಲಿ 'ಮಹಿಮ್ಮೇ' ಎಂಬ ಪಾಠವಿದೆ.

ಅರ್ಥ ಃ- ದಿಶೆ-ವಿದಿಶೆಗಳಲ್ಲಿ ಗಮನದ ಪರಿಮಾಣವು ಅದು ಪ್ರಥಮ ಗುಣವ್ರತವಿದೆ, ಅನರ್ಥದಂಡದ ವರ್ಜನೆಯು ಅದು ದ್ವಿತೀಯ ಗುಣವ್ರತವಿದೆ ಮತ್ತು ಭೋಗೋಪಭೋಗದ ಪರಿಮಾಣವು ಅದು ತೃತೀಯ ಗುಣವ್ರತವಿದೆ, ಈ ಪ್ರಕಾರ ಇವು ಮೂರು ಗುಣವ್ರತಗಳಿವೆ.

ಭಾವಾರ್ಥ ಃ- ಇಲ್ಲಿ ಗುಣಶಬ್ದವಂತೂ ಉಪಕಾರದ ವಾಚಕವಿದೆ, ಇವು ಅಣುವ್ರತಗಳಿಗೆ ಉಪಕಾರ ಮಾಡುತ್ತವೆ. ದಿಶೆ-ವಿದಿಶೆ ಎಂದರೆ ಪೂರ್ವದಿಶೆ ಮೊದಲಾದುವಲ್ಲಿ ಗಮನ ಮಾಡುವುದರ ಮರ್ಯಾದೆ ಮಾಡುವುದು. ಅನರ್ಥದಂಡ ಎಂದರೆ ಯಾವ ಕಾರ್ಯಗಳಲ್ಲಿ ತಮ್ಮ ಪ್ರಯೋಜನವು ಸಾಧಿಸುವುದಿಲ್ಲ ಅಂಥ ಪಾಪಕಾರ್ಯಗಳನ್ನು ಮಾಡದಿರುವುದು. ಪ್ರಯೋಜನವಿಲ್ಲದೆಯಂತೂ ಯಾವ ಜೀವನೂ ಕಾರ್ಯ ಮಾಡುವುದಿಲ್ಲ, ಯಾವುದಾದರೂ ಪ್ರಯೋಜನದ ವಿಚಾರ ಮಾಡಿಯೇ ಮಾಡುತ್ತಾನೆಂದಮೇಲೆ ಮತ್ತೆ ಅನರ್ಥದಂಡವೇಕೆಂದು ಇಲ್ಲಿ ಕೆಲವರು ಕೇಳಬಹುದು, ಅದರ ಉತ್ತರವು ಹೀಗಿದೆ - ಸಮ್ಯಗ್ದೃಷ್ಟಿ ಶ್ರಾವಕನಿರುತ್ತಾನೆ ಅವನು ತನ್ನ ಪದಕ್ಕೆ ಯೋಗ್ಯ ಪ್ರಯೋಜನದ ವಿಚಾರ ಮಾಡುತ್ತಾನೆ ಪದದ ಹೊರತಾಗಿ ಎಲ್ಲವು ಅನರ್ಥವಿವೆ. ಪಾಪಿ ಪುರುಷರಿಗಂತೂ ಎಲ್ಲವೂ ಪಾಪ ಪ್ರಯೋಜನವಿವೆ, ಅವರದೇನು ಹೇಳುವುದು. ಭೋಗವೆಂದು ಹೇಳುವುದರಿಂದ ಭೋಜನಾದಿಗಳು ಮತ್ತು ಉಪಭೋಗವೆಂದು ಹೇಳುವುದರಿಂದ ಸ್ತ್ರೀ , ವಸ್ತ್ರ, ಆಭೂಷಣ, ವಾಹನ ಮೊದಲಾದವುಗಳ ಪರಿಮಾಣ ಮಾಡುವುದೆಂದು ತಿಳಿದುಕೊಳ್ಳಬೇಕು. ॥೨೫॥

ಇನ್ನು ಮುಂದೆ ನಾಲ್ಕು ಶಿಕ್ಷಾವ್ರತಗಳನ್ನು ಹೇಳುತ್ತಾರೆ, -

**ಸಾಮಾಇಯಂ ಚ ಪಢಮಂ ಬಿದಿಯಂ ಚ ತಹೇವ ಪೋಸಹಂ ಭಣಿಯಂ ।**
**ತಇಯಂ ಚ ಅತಿಹಿಪುಜ್ಜಂ ಚಉತ್ಥ ಸಲ್ಲೇಹಣಾ ಅಂತೇ ॥೨೬॥**

**ಸಾಮಾಯಿಕಂ ಚ ಪ್ರಥಮಂ ದ್ವಿತೀಯಂ ಚ ತಥೈವ ಪ್ರೋಷಧಃ ಭಣಿತಃ ।**
**ತೃತೀಯಂ ಚ ಅತಿಥಿಪೂಜಾ ಚತುರ್ಥಂ ಸಲ್ಲೇಖನಾ ಅಂತೇ ॥೨೬॥**

ಅರ್ಥ ಃ- ಸಾಮಾಯಿಕವಂತೂ ಮೊದಲನೆಯ ಶಿಕ್ಷಾವ್ರತವಿದೆ, ಅದೇ ಪ್ರಕಾರ ಎರಡನೆಯದು ಪ್ರೋಷಧ ವ್ರತವಿದೆ, ಮೂರನೆಯದು ಅತಿಥಿಯ ಪೂಜನವಿದೆ, ನಾಲ್ಕನೆಯದು ಕೊನೆಯ ಸಮಯದಲ್ಲಿ ಸಲ್ಲೇಖನ ವ್ರತವಿದೆ.

ಭಾವಾರ್ಥ ಃ- ಇಲ್ಲಿ ಶಿಕ್ಷಾ ಶಬ್ದದಿಂದಂತೂ ಭವಿಷ್ಯದ ಮುನಿವ್ರತದ ಶಿಕ್ಷೆಯು ಇವುಗಳಲ್ಲಿದೆಯೆಂಬ ಅರ್ಥವು ಸೂಚಿತವಾಗುತ್ತದೆ, ಮುನಿಯಾದಾಗ ಈ ಪ್ರಕಾರ ಇರಬೇಕಾಗುವುದು. ಸಾಮಾಯಿಕವೆಂದು ಹೇಳುವುದರಿಂದಂತೂ ರಾಗ-ದ್ವೇಷಗಳ ತ್ಯಾಗಮಾಡಿ, ಸಮಸ್ತ ಗೃಹಾರಂಭ ಸಂಬಂಧದ ಕ್ರಿಯೆಗಳಿಂದ ನಿವೃತ್ತನಾಗಿ, ಏಕಾಂತ ಸ್ಥಾನದಲ್ಲಿ ಕುಳಿತುಕೊಂಡು ಬೆಳಿಗ್ಗೆ, ಮಧ್ಯಾಹ್ನ, ಸಾಯಂಕಾಲ ಕೆಲಕಾಲದ ಮರ್ಯಾದೆ ಮಾಡಿ ತನ್ನ ಸ್ವರೂಪದ ಚಿಂತನೆ ಮತ್ತು ಪಂಚಪರಮೇಷ್ಠಿಗಳ ಭಕ್ತಿಯ ಪಾಠ ಪಠಿಸುವುದು, ಅವರ ವಂದನೆ ಮಾಡುವುದು ಇತ್ಯಾದಿ ವಿಧಾನ ಮಾಡುವುದು ಸಾಮಾಯಿಕವಿದೆ. ಇದೇ ಪ್ರಕಾರ ಪ್ರೋಷಧ ಎಂದರೆ ಅಷ್ಟಮಿ ಚತುರ್ದಶಿಯ ಪರ್ವಗಳಲ್ಲಿ ಪ್ರತಿಜ್ಞೆ ಸ್ವೀಕರಿಸಿ ಧರ್ಮಕಾರ್ಯಗಳಲ್ಲಿ ಪ್ರವರ್ತಿಸುವುದು ಅದು ಪ್ರೋಷಧವಿದೆ. ಅತಿಥಿ ಎಂದರೆ ಮುನಿಗಳ ಪೂಜೆ ಮಾಡುವುದು,

---

**ಸಾಮಾಯಿಕ ಪ್ರಥಮ ದ್ವಿತೀಯ ಪ್ರೋಷಧವ್ರತ ತೃತೀಯ ಅತಿಥಿಪೂಜನ ।**
**ಸಮಯಾಂತ್ಯದಲಿ ಸಲ್ಲೇಖನವೆಂದೀ ನಾಲ್ಕು ಶಿಕ್ಷಾವ್ರತಗಳಿವೆ ॥೨೬॥**

ಅವರಿಗೆ ಆಹಾರದಾನ ಕೊಡುವುದು ಅದು ಅತಿಥಿ ಪೂಜೆಯಿದೆ. ಕೊನೆಯ ಸಮಯದಲ್ಲಿ ಕಾಯ ಮತ್ತು ಕಷಾಯಗಳನ್ನು ಕೃಶ ಮಾಡುವುದು, ಸಮಾಧಿಮರಣ ಮಾಡುವುದು ಅದು ಕೊನೆಯ ಸಲ್ಲೇಖನವಿದೆ. ಈ ಪ್ರಕಾರ ನಾಲ್ಕು ಶಿಕ್ಷಾವ್ರತಗಳಿವೆ.

ಪ್ರಶ್ನೆ :– ತತ್ತ್ವಾರ್ಥಸೂತ್ರದೊಳಗೆ ಮೂರು ಗುಣವ್ರತಗಳಲ್ಲಿ ದೇಶವ್ರತ ಹೇಳಿದೆ ಮತ್ತು ಭೋಗೋಪಭೋಗ ಪರಿಮಾಣವನ್ನು ಶಿಕ್ಷಾವ್ರತಗಳಲ್ಲಿ ಹೇಳಿದೆ ಮತ್ತು ಸಲ್ಲೇಖನವನ್ನು ಭಿನ್ನವಾಗಿ ಹೇಳಿದೆ, ಅದು ಹೇಗೆ ?

ಉತ್ತರ :– ಇದು ವಿವಕ್ಷೆಯ ಭೇದವಿದೆ, ಇಲ್ಲಿ ದೇಶವ್ರತವು ದಿಗ್ವ್ರತದಲ್ಲಿ ಗರ್ಭಿತವಿದೆ ಮತ್ತು ಸಲ್ಲೇಖನವನ್ನು ಶಿಕ್ಷಾವ್ರತಗಳಲ್ಲಿ ಹೇಳಿದೆ, ಇದರಲ್ಲಿ ಯಾವ ವಿರೋಧವು ಇಲ್ಲ. ॥೨೬॥

ಸಂಯಮಚರಣ ಚಾರಿತ್ರದಲ್ಲಿ ಶ್ರಾವಕ ಧರ್ಮವನ್ನು ಹೇಳಿತು, ಈಗ ಯತಿಧರ್ಮವನ್ನು ಹೇಳುತ್ತೇವೆಂದು ಹೇಳುತ್ತಾರೆ, –

ಏವಂ ಸಾವಯಧಮ್ಮಂ ಸಂಜಮಚರಣಂ ಉದೇಸಿಯಂ ಸಯಲಂ ।
ಸುದ್ಧಂ ಸಂಜಮಚರಣಂ ಜಇಧಮ್ಮಂ ಣಿಕ್ಕಲಂ ವೋಚ್ಛೇ ॥೨೭॥

ಏವಂ ಶ್ರಾವಕಧರ್ಮಂ ಸಂಯಮಚರಣಂ ಉಪದೇಶಿತಂ ಸಕಲಮ್ ।
ಶುದ್ಧಂ ಸಂಯಮಚರಣಂ ಯತಿಧರ್ಮಂ ನಿಷ್ಕಲಂ ವಕ್ಷ್ಯೇ ॥೨೭॥

ಅರ್ಥ :– ಏವಂ ಎಂದರೆ ಈ ಪ್ರಕಾರದಿಂದ ಶ್ರಾವಕಧರ್ಮಸ್ವರೂಪವಾದ ಸಂಯಮಚರಣವನ್ನಂತೂ ಹೇಳಿತು, ಇಲ್ಲಿ ಸಕಲ ಎಂದರೆ ಕಲಾಸಹಿತವಿದೆ, (ಇಲ್ಲಿ) ಏಕದೇಶವನ್ನು ಕಲಾ ಎಂದು ಹೇಳುತ್ತಾರೆ. ಈಗ ಯತಿಧರ್ಮದ ಧರ್ಮಸ್ವರೂಪವಾದ ಸಂಯಮಚರಣವನ್ನು ಹೇಳುತ್ತೇವೆಂದು ಆಚಾರ್ಯದೇವರು ಪ್ರತಿಜ್ಞೆ ಮಾಡಿದ್ದಾರೆ. ಯತಿಧರ್ಮವು ಅದು ಶುದ್ಧವಿದೆ, ನಿರ್ದೋಷವಿದೆ, ಅದರಲ್ಲಿ ಪಾಪಾಚರಣೆಯ ಲೇಶವಿಲ್ಲ. ನಿಕಲ ಎಂದರೆ ಕಲಾದಿಂದ ನಿಃಕ್ರಾಂತವಿದೆ, ಸಂಪೂರ್ಣವಿದೆ, ಶ್ರಾವಕಧರ್ಮದ ಹಾಗೆ ಏಕದೇಶವಿಲ್ಲ. ॥೨೭॥

ಈಗ ಯತಿಧರ್ಮದ ಸಾಮಗ್ರಿ ಹೇಳುತ್ತಾರೆ,

ಪಂಚೇಂದಿಯಸಂವರಣಂ ಪಂಚ ವಯಾ ಪಂಚವಿಂಸಕಿರಿಯಾಸು ।
ಪಂಚ ಸಮಿದಿ ತಯ ಗುತ್ತೀ ಸಂಜಮಚರಣಂ ಣಿರಾಯಾರಂ ॥೨೮॥

ಪಂಚೇಂದ್ರಿಯಸಂವರಣಂ ಪಂಚ ವ್ರತಾಃಪಂಚವಿಂಶತಿಕ್ರಿಯಾಸು ।
ಪಂಚ ಸಮಿತಯಃ ತಿಸ್ರಃ ಗುಪ್ತಯಃ ಸಂಯಮಚರಣಂ ನಿರಾಗಾರಮ್ ॥೨೮॥

---

ಈ ತೆರದಿ ಶ್ರಾವಕಧರ್ಮರೂಪ ದೇಶಸಂಯಮಚರಣ ಪೇಳಲಾಯಿತು ।
ಯತಿಧರ್ಮರೂಪ ಸಂಯಮಚರಣ ಪೇಳ್ವೆನೀಗದು ಶುದ್ಧ ಸಂಪೂರ್ಣವಿದೆ ॥೨೭॥

ಪಂಚೇಂದ್ರಿಯಸಂವರಣ ಪಂಚವ್ರತ ಪಂಚವಿಂಶತಿಕ್ರಿಯೆಗಳ ಸದ್ಭಾವ ।
ಪಂಚಸಮಿತಿ ತ್ರಿಗುಪ್ತಿಯೆಂದು ನಿರಾಗಾರ ಸಂಯಮಚರಣವಿರುವುದು ॥೨೮॥

ಅರ್ಥ ಃ- ಐದು ಇಂದ್ರಿಯಗಳ ಸಂವರ, ಐದು ವ್ರತಗಳು ಇವು ಇಪ್ಪತ್ತೈದು ಕ್ರಿಯೆಗಳ ಸದ್ಭಾವವಿದ್ದ ಮೇಲೆ ಆಗುತ್ತವೆ, ಐದು ಸಮಿತಿ ಮತ್ತು ಮೂರು ಗುಪ್ತಿಗಳೆಂದು ಹೀಗೆ ನಿರಾಗಾರ ಸಂಯಮಚರಣ ಚಾರಿತ್ರವಾಗುತ್ತದೆ. ॥೨೮॥

ಇನ್ನು ಮುಂದೆ ಐದು ಇಂದ್ರಿಯಗಳ ಸಂವರಣದ ಸ್ವರೂಪ ಹೇಳುತ್ತಾರೆ,-

ಅಮಣುಣ್ಣೇ ಯ ಮಣುಣ್ಣೇ ಸಜೀವದವ್ವೇ ಅಜೀವದವ್ವೇ ಯ ।
ಣ ಕರೇದಿ ರಾಯದೋಸೇ ಪಂಚೇಂದಿಯಸಂವರೋ ಭಣಿಓ ॥೨೯॥

ಅಮನೋಜ್ಞೇ ಚ ಮನೋಜ್ಞೇ ಸಜೀವದ್ರವ್ಯೇ ಅಜೀವದ್ರವ್ಯೇ ಚ ।
ನ ಕರೋತಿ ರಾಗದ್ವೇಷಾ ಪಂಚೇಂದ್ರಿಯಸಂವರಃ ಭಣಿತಃ ॥೨೯॥

ಅರ್ಥ ಃ- ಅಮನೋಜ್ಞ ಮತ್ತು ಮನೋಜ್ಞಗಳಾದಂಥ ಪದಾರ್ಥಗಳನ್ನು ಜನರು ತಾವು ಮನ್ನಿಸುವಂಥ ಸಜೀವದ್ರವ್ಯ ಸ್ತ್ರೀ-ಪುತ್ರಾದಿಕರು ಮತ್ತು ಅಜೀವದ್ರವ್ಯ ಧನ-ಧಾನ್ಯ ಮೊದಲಾದ ಸಮಸ್ತ ಪುದ್ಗಲ ದ್ರವ್ಯಾದಿಗಳಲ್ಲಿ ರಾಗ-ದ್ವೇಷಗಳನ್ನು ಮಾಡದಿರುವುದು ಅದು ಐದು ಇಂದ್ರಿಯಗಳ ಸಂವರವೆಂದು ಹೇಳಿದೆ.

ಭಾವಾರ್ಥ ಃ- ಇಂದ್ರಿಯಗೋಚರವಾದಂಥ ಜೀವ-ಅಜೀವ ದ್ರವ್ಯಗಳಿವೆ, ಇವು ಇಂದ್ರಿಯಗಳ ಗ್ರಹಣದಲ್ಲಿ ಬರುತ್ತವೆ, ಇವುಗಳಲ್ಲಿ ಈ ಪ್ರಾಣಿಯು ಒಂದನ್ನು ಇಷ್ಟವೆಂದು ಮನ್ನಿಸಿ ರಾಗ ಮಾಡುತ್ತಾನೆ ಇನ್ನೊಂದನ್ನು ಅನಿಷ್ಟವೆಂದು ಮನ್ನಿಸಿ ದ್ವೇಷ ಮಾಡುತ್ತಾನೆ, ಆದರೆ ಈ ಪ್ರಕಾರದ ರಾಗ-ದ್ವೇಷಗಳನ್ನು ಮುನಿಗಳು ಮಾಡುವುದಿಲ್ಲ, ಅವರಿಗೆ ಸಂಯಮಚರಣ ಚಾರಿತ್ರವಿರುತ್ತದೆ. ॥೨೯॥

ಈಗ ಐದು ವ್ರತಗಳ ಸ್ವರೂಪ ಹೇಳುತ್ತಾರೆ, -

ಹಿಂಸಾವಿರಇ ಅಹಿಂಸಾ ಅಸಚ್ಚವಿರಈ ಅದತ್ತವಿರಈ ಯ ।
ತುರಿಯಂ ಅಬಂಭವಿರಈ ಪಂಚಮ ಸಂಗಮ್ಮಿ ವಿರಈ ಯ ॥೩೦॥

ಹಿಂಸಾವಿರತಿರಹಿಂಸಾ ಅಸತ್ಯವಿರತಿಃ ಅದತ್ತವಿರತಿಶ್ಚ ।
ತುರ್ಯಂ ಅಬ್ರಹ್ಮವಿರತಿಃ ಪಂಚಮಂ ಸಂಗೇ ವಿರತಿಃ ಚ ॥೩೦॥

ಅರ್ಥ ಃ- ಮೊದಲನೆಯದಂತೂ ಹಿಂಸೆಯಿಂದ ವಿರತಿಯು ಅಹಿಂಸೆಯಿದೆ, ಎರಡನೆಯದು ಅಸತ್ಯ ವಿರತಿಯಿದೆ, ಮೂರನೆಯದು ಅದತ್ತವಿರತಿಯಿದೆ, ನಾಲ್ಕನೆಯದು ಅಬ್ರಹ್ಮವಿರತಿಯಿದೆ ಮತ್ತು ಐದನೆಯದು ಪರಿಗ್ರಹವಿರತಿಯಿದೆ.

---

ಅಮನೋಜ್ಞ ಮೇಣ್ಮನೋಜ್ಞವಾದ ಸಜೀವದ್ರವ್ಯ ಮೇಣಜೀವದ್ರವ್ಯಗಳಲಿ ।
ತಾ ಮಾಡದಿರೆ ರಾಗ-ದ್ವೇಷವದನು ಪಂಚೇಂದ್ರಿಯಸಂವರವೆನ್ನಲಾಗಿದೆ ॥೨೯॥

ಆದಿಯಲಿ ಹಿಂಸಾವಿರತಿರಹಿಂಸೆ ಅಸತ್ಯವಿರತಿ ಅದತ್ತವಿರತಿ ।
ಅದರಂತೆ ಅಬ್ರಹ್ಮವಿರತಿ ಸಂಗವಿರತಿಯೆಂದ್ಯೈದು ಮಹಾವ್ರತಗಳು ॥೩೦॥

ಭಾವಾರ್ಥ ಃ- ಈ ಐದು ಪಾಪಗಳ ಸಂಪೂರ್ಣ ತ್ಯಾಗವು ಯಾವವುಗಳಲ್ಲಿ ಆಗುತ್ತವೆ ಅವು ಐದು ಮಹಾವ್ರತವೆಂದು ಕರೆಯಿಸಿಕೊಳ್ಳುತ್ತವೆ. ॥೩೦॥

ಇವುಗಳನ್ನು ಮಹಾವ್ರತವೆಂದೇಕೆ ಹೇಳುತ್ತಾರೆಂಬುದನ್ನು ಈಗ ತಿಳಿಸಿಕೊಡುತ್ತಾರೆ,-

ಸಾಹಂತಿ ಜಂ ಮಹಲ್ಲಾ ಆಯರಿಯಂ ಜಂ ಮಹಲ್ಲಪುವ್ವೇಹಿಂ ।
ಜಂ ಚ ಮಹಲ್ಲಾಣಿ ತದೋ [೧]ಮಹವ್ವಯಾ ಇತ್ತಹೇ ಯಾಇಂ ॥೩೧॥

ಸಾಧಯಂತಿ ಯನ್ಮಹಾಂತಃ ಆಚರಿತಂ ಯತ್ ಮಹತ್ಪೂರ್ವೈಃ ।
ಯಚ್ಚ ಮಹಂತಿ ತತಃ ಮಹಾವ್ರತಾನಿ ಏತಸ್ಮಾದ್ಧೇತೋಃ ತಾನಿ ॥೩೧॥

ಅರ್ಥ ಃ- ಮಹಲ್ಲಾ ಎಂದರೆ ಶ್ರೇಷ್ಠ ಪುರುಷರು ಯಾವವುಗಳನ್ನು ಸಾಧಿಸುತ್ತಾರೆ ಆಚರಣೆ ಮಾಡುತ್ತಾರೆ ಮತ್ತು ಮೊದಲು ಕೂಡ ಶ್ರೇಷ್ಠ ಪುರುಷರು ಯಾವವುಗಳನ್ನು ಆಚರಣೆ ಮಾಡಿದ್ದಾರೆ ಮತ್ತು ವ್ರತಗಳು ತಾವಾಗಿಯೇ ಮಹಾನವಿವೆ, ಏಕೆಂದರೆ ಇವುಗಳಲ್ಲಿ ಪಾಪದ ಲೇಶಕೂಡ ಇಲ್ಲ ಈ ಪ್ರಕಾರದ ಇವು ಐದು ಮಹಾವ್ರತಗಳಿವೆ.

ಭಾವಾರ್ಥ ಃ- ಮಹಾಪುರುಷರು ಯಾವವುಗಳ ಆಚರಣೆ ಮಾಡುತ್ತಾರೆ ಮತ್ತು ಸ್ವಯಂ ನಿರ್ದೋಷವಿವೆ ಅವನ್ನೇ ಮಹಾನವೆಂದು ಹೇಳುತ್ತಾರೆ, ಈ ಪ್ರಕಾರ ಈ ಐದು ವ್ರತಗಳಿಗೆ ಮಹಾವ್ರತವೆಂಬ ಸಂಜ್ಞೆಯಿದೆ. ॥೩೧॥

ಈ ಐದು ವ್ರತಗಳ ಇಪ್ಪತ್ತೈದು ಭಾವನೆಗಳನ್ನು ಹೇಳುತ್ತಾರೆ ಅವುಗಳಲ್ಲಿ ಮೊದಲನೆಯ ಅಹಿಂಸಾವ್ರತದ ಐದು ಭಾವನೆಗಳನ್ನು ಈಗ ಹೇಳುತ್ತಾರೆ, -

ವಯಗುತ್ತೀ ಮಣಗುತ್ತೀ ಇರಿಯಾಸಮಿದೀ ಸುದಾಣಣಿಕ್ಖೇವೋ ।
ಅವಲೋಯಭೋಯಣಾಏ ಅಹಿಂಸಏ ಭಾವಣಾ ಹೋಂತಿ ॥೩೨॥

ವಚೋಗುಪ್ತಿಃ ಮನೋಗುಪ್ತಿಃ ಈರ್ಯಾಸಮಿತಿಃ ಸುದಾನನಿಕ್ಷೇಪಃ ।
ಅವಲೋಕ್ಯಭೋಜನೇನ ಅಹಿಂಸಾಯಾ ಭಾವನಾ ಭವಂತಿ ॥೩೨॥

---

ಮಹಾಪುರುಷರು ಸಾಧಿಪರು ಮೊದಲು ಮಹಾಪುರುಷರು ಸಾಧಿಸಿಹರು ।
ಮಹಾನವಿವೆಸ್ವಯಮವುವೆ ಅದರಿಂದಿವು ಪಂಚಮಹಾವ್ರತಗಳಿವೆ ॥೩೧॥

ಆ ವಚನಗುಪ್ತಿ ಮನೋಗುಪ್ತಿ ಈರ್ಯಾಸಮಿತಿ ಸುದಾನನಿಕ್ಷೇಪಣ ಮೇಣ್ ।
ಅವಲೋಕಿಸಿ ಭೋಜನಮೆಂಬೈದಹಿಂಸಾ ಮಹಾವ್ರತದ ಭಾವನೆಗಳಿವೆ ॥೩೨॥

---

೧ 'ಮಹವ್ವಯಾ ಇತ್ತಹೇ ಯಾಇಂ' ಸ್ಥಾನದ ಮೇಲೆ 'ಮಹವ್ವಯಾಇಂ ತಹೇಯಾಇಂ' ಎಂಬ ಪಾಠಾಂತರವಿದೆ.

ಅರ್ಥ ಃ- ವಚನಗುಪ್ತಿ ಮತ್ತು ಮನೋಗುಪ್ತಿಯೆಂಬೆರಡಂತೂ ಗುಪ್ತಿಗಳು, ಈರ್ಯಾಸಮಿತಿ, ಒಳ್ಳೆಯ ಪ್ರಕಾರದಿಂದ ಕಮಂಡಲು ಮೊದಲಾದವುಗಳ ಗ್ರಹಣ-ನಿಕ್ಷೇಪವು ಇದು ಆದಾನನಿಕ್ಷೇಪಣ ಸಮಿತಿಯಿದೆ ಮತ್ತು ಒಳ್ಳೆಯ ರೀತಿಯಿಂದ ನೋಡಿ ವಿಧಿಪೂರ್ವಕ ಶುದ್ಧ ಭೋಜನ ಮಾಡುವುದು ಇದು ಏಷಣಾಸಮಿತಿಯಿದೆ, ಈ ಪ್ರಕಾರ ಇವು ಐದು ಅಹಿಂಸಾ ಮಹಾವ್ರತದ ಭಾವನೆಗಳಿವೆ.

ಭಾವಾರ್ಥ ಃ- ಮತ್ತೆ ಮತ್ತೆ ಅದರದೇ ಅಭ್ಯಾಸ ಮಾಡುವುದರ ಹೆಸರು ಭಾವನೆಯಿದೆ, ಆದರೆ ಇಲ್ಲಿ ಪ್ರವೃತ್ತಿ-ನಿವೃತ್ತಿಯಲ್ಲಿ ಹಿಂಸೆ ತಗಲುತ್ತದೆ, ನಿರಂತರ ಅದರ ಯತ್ನ ಮಾಡಿದಾಗ ಅಹಿಂಸಾವ್ರತದ ಪಾಲನೆಯಾಗುವುದು, ಆದರಿಂದ ಇಲ್ಲಿ ಯೋಗಗಳ ನಿವೃತ್ತಿ ಮಾಡುವುದೆಂದರೆ ಒಳ್ಳೆಯ ಪ್ರಕಾರ ಗುಪ್ತಿರೂಪ ಮಾಡುವುದು ಮತ್ತು ಪ್ರವೃತ್ತಿ ಮಾಡುವುದೆಂದರೆ ಸಮಿತಿರೂಪ ಮಾಡುವುದು, ಹೀಗೆ ನಿರಂತರ ಅಭ್ಯಾಸದಿಂದ ಅಹಿಂಸಾ ಮಹಾವ್ರತವು ದೃಢವಿರುತ್ತದೆ, ಇದೇ ಆಶಯದಿಂದ ಇವುಗಳನ್ನು ಭಾವನೆಯೆಂದು ಹೇಳುತ್ತಾರೆ. ॥೩೨॥

ಇನ್ನು ಮುಂದೆ ಸತ್ಯ ಮಹಾವ್ರತದ ಭಾವನೆಗಳನ್ನು ಹೇಳುತ್ತಾರೆ, -

**ಕೋಹಭಯಹಾಸಲೋಹಾ ಮೋಹಾ ವಿವರೀಯಭಾವಣಾ ಚೇವ ।**
**ವಿದಿಯಸ್ಸ ಭಾವಣಾಏ ಏ ಪಂಚೇವ ಯ ತಹಾ ಹೋಂತಿ ॥೩೩॥**

**ಕ್ರೋಧಭಯಹಾಸ್ಯಲೋಭಮೋಹಾ ವಿಪರೀತಭಾವನಾಃ ಚ ಏವ ।**
**ದ್ವಿತೀಯಸ್ಯ ಭಾವನಾ ಇಮಾ ಪಂಚೈವ ಚ ತಥಾ ಭವಂತಿ ॥೩೩॥**

ಅರ್ಥ ಃ- ಕ್ರೋಧ, ಭಯ, ಹಾಸ್ಯ, ಲೋಭ ಮತ್ತು ಮೋಹ ಇವುಗಳಿಂದ ವಿಪರೀತ ಎಂದರೆ ವಿರುದ್ಧ ಇವುಗಳ ಅಭಾವವು ಇವು ಎರಡನೆಯ ವ್ರತ ಸತ್ಯ ಮಹಾವ್ರತದ ಭಾವನೆಗಳಿವೆ.

ಭಾವಾರ್ಥ ಃ- ಅಸತ್ಯ ವಚನದ ಪ್ರವೃತ್ತಿಯು ಕ್ರೋಧದಿಂದ, ಭಯದಿಂದ, ಹಾಸ್ಯದಿಂದ, ಲೋಭದಿಂದ ಮತ್ತು ಪರದ್ರವ್ಯದ ಮೋಹರೂಪವಾದ ಮಿಥ್ಯಾತ್ವದಿಂದ ಆಗುತ್ತದೆ, ಇವುಗಳ ತ್ಯಾಗವಾದ ನಂತರ ಸತ್ಯ ಮಹಾವ್ರತವು ದೃಢವಾಗುತ್ತದೆ.

ತತ್ತ್ವಾರ್ಥಸೂತ್ರದಲ್ಲಿ ಐದನೆಯ ಭಾವನೆಯನ್ನು ಅನುವೀಚೀಭಾಷಣವೆಂದು ಹೇಳಿದೆ, ಆದರೆ ಇದರ ಅರ್ಥವು ಹೀಗೆ - ಜಿನಸೂತ್ರದ ಅನುಸಾರ ವಚನ ಆಡುವುದು ಮತ್ತು ಅಲ್ಲಿ ಮೋಹದ ಅಭಾವ ಹೇಳಿದೆ ಅವನು ಮಿಥ್ಯಾತ್ವದ ನಿಮಿತ್ತದಿಂದ ಸೂತ್ರವಿರುದ್ಧ ಆಡುತ್ತಾನೆ, ಮಿಥ್ಯಾತ್ವದ ಅಭಾವವಾದಮೇಲೆ ಸೂತ್ರ ವಿರುದ್ಧವಾಗಿ ಆಡುವುದಿಲ್ಲ, ಅನುವೀಚೀ ಭಾಷಣದ ಅರ್ಥ ಕೂಡ ಇದೇ ಆಯಿತು, ಇದರಲ್ಲಿ ಅರ್ಥ ಭೇದವಿಲ್ಲ. ॥೩೩॥

ಈಗ ಅಚೌರ್ಯ ಮಹಾವ್ರತದ ಭಾವನೆಗಳನ್ನು ಹೇಳುತ್ತಾರೆ, -

---

**ಕ್ರೋಧ ಭಯ ಹಾಸ್ಯ ಲೋಭ ಮೋಹ ಇವುಗಳಿಂ ವಿಪರೀತವಾದ ಭಾವಗಳ ।**
**ಅಧಿಗಮನವದು ದ್ವಿತೀಯ ಸತ್ಯಮಹಾವ್ರತದ ಐದು ಭಾವಗಳಿವೆ ॥೩೩॥**

ಸುಣ್ಣಾಯಾರಣಿವಾಸೋ [೧]ವಿಮೋಚಿಯಾವಾಸ ಜಂ ಪರೋಧಂ ಚ ।
ಏಸಣಸುದ್ಧಿಸಉತ್ತಂ ಸಾಹಮ್ಮೀಸಂವಿಸಂವಾದೋ ।।೩೪।।

ಶೂನ್ಯಾಗಾರನಿವಾಸಃ ವಿಮೋಚಿತಾವಾಸಃ ಯತ್ ಪರೋಧಂ ಚ ।
ಏಷಣಾಶುದ್ಧಿಸಹಿತಂ ಸಾಧರ್ಮಿಸಮವಿಸಂವಾದಃ ।।೩೪।।

ಅರ್ಥ ಃ- ಶೂನ್ಯಾಗಾರ ಎಂದರೆ ಗಿರಿ, ಗುಹೆ,ತರು, ಪೊಟರೆ ಮೊದಲಾದವುಗಳಲ್ಲಿ ನಿವಾಸ ಮಾಡುವುದು, ವಿಮೋಚಿತಾವಾಸ ಎಂದರೆ ಜನರು ಯಾವುದೇ ಒಂದು ಕಾರಣದಿಂದ ಬಿಟ್ಟುಕೊಟ್ಟಿರುವಂಥ ಮನೆ, ಗ್ರಾಮ ಮೊದಲಾದವುಗಳಲ್ಲಿ ನಿವಾಸ ಮಾಡುವುದು, ಪರೋಪರೋಧ ಎಂದರೆ ಇತರರ ಅಡೆ-ತಡೆ ಇಲ್ಲದಿರುವುದು, ವಸತಿಕಾದಿಗಳನ್ನು ತನ್ನವನ್ನಾಗಿ ಮಾಡಿಕೊಂಡು ಇತರರನ್ನು ತಡೆಯುವುದು, ಈ ಪ್ರಕಾರ ಮಾಡದಿರುವುದು, ಏಷಣಾಶುದ್ಧಿ ಎಂದರೆ ಶುದ್ಧ ಆಹಾರ ತೆಗೆದುಕೊಳ್ಳುವುದು ಮತ್ತು ಸಾಧರ್ಮಿಗಳಲ್ಲಿ ವಿಸಂವಾದ ಮಾಡದಿರುವುದು. ಇವು ಐದು ಭಾವನೆಗಳು ಮೂರನೆಯ ಮಹಾವ್ರತದ್ದಿವೆ.

ಭಾವಾರ್ಥ ಃ- ಮುನಿಗಳ ವಸತಿಕೆಯಲ್ಲಿರುವುದು ಮತ್ತು ಆಹಾರ ತೆಗೆದುಕೊಳ್ಳುವುದು ಇವೆರಡು ಪ್ರವೃತ್ತಿಗಳು ಅವಶ್ಯವಾಗಿ ಆಗುತ್ತವೆ. ಲೋಕದಲ್ಲಿ ಇವುಗಳ ನಿಮಿತ್ತವಾಗಿಯೇ ಅದತ್ತದ ಆದಾನವಾಗುತ್ತದೆ. ಎಲ್ಲಿ ಅದತ್ತದ ದೋಷ ತಗಲುವುದಿಲ್ಲ ಮತ್ತು ಆಹಾರ ಕೂಡ ಅದತ್ತದ ದೋಷ ತಗಲದಂಥದ್ದನ್ನು ತೆಗೆದುಕೊಳ್ಳುವುದು ಹಾಗೂ ಇವೆರಡರ ಪ್ರವೃತ್ತಿಯಲ್ಲಿ ಸಾಧರ್ಮಿ ಮೊದಲಾದವರಿಂದ ವಿಸಂವಾದವು ಉತ್ಪನ್ನವಾಗದಂಥ ಸ್ಥಾನದಲ್ಲಿಯೇ ಮುನಿಗಳಿಗೆ ಇರಬೇಕಾಗುವುದು. ಈ ಪ್ರಕಾರ ಇವು ಐದು ಭಾವನೆಗಳನ್ನು ಹೇಳಲಾಗಿದೆ, ಇವು ಇರುವುದರಿಂದ ಅಚೌರ್ಯ ಮಹಾವ್ರತವು ದೃಢವಿರುತ್ತದೆ. ।।೩೪।।

ಈಗ ಬ್ರಹ್ಮಚರ್ಯ ಮಹಾವ್ರತದ ಭಾವನೆಗಳನ್ನು ಹೇಳುತ್ತಾರೆ, -

ಮಹಿಲಾಲೋಯಣಪುವ್ವರಇಸರಣಸಂಸತ್ತವಸಹಿವಿಕಹಾಹಿಂ ।
ಪುಟ್ಠಿಯರಸೇಹಿಂ ವಿರಓ ಭಾವಣ ಪಂಚಾವಿ ತುರಿಯಮ್ಮಿ ।।೩೫।।

ಮಹಿಲಾಲೋಕನಪೂರ್ವರತಿಸ್ಮರಣಸಂಸಕ್ತವಸತಿವಿಕಥಾಭಿಃ ।
ಪೌಷ್ಟಿಕರಸೈಃ ವಿರತಃ ಭಾವನಾಃ ಪಂಚಾಪಿ ತುರ್ಯೇ ।।೩೫।।

---

ಆ ಶೂನ್ಯಾಗಾರನಿವಾಸ ವಿಮೋಚಿತಾವಾಸ ಮೇಣ್ಪರ-ಉಪರೋಧಮಿಲ್ಲದ ।
ಏಷಣಾಶುದ್ಧಿಯುಕ್ತ ಸಾಧರ್ಮಿಯೊಡ ವಿಸಂವಾದವಿಲ್ಲದೈದು ಭಾವಗಳು ।।೩೪।।

ಮಹಿಳಾನಿರೀಕ್ಷಣ ಪೂರ್ವರತಿಸ್ಮರಣ ನಿಕಟವಾಸ ಸ್ತ್ರೀಯರ ಕಥೆ ।
ಸಿಹಿ ಪೌಷ್ಟಿಕರಸದಿಂದ ವಿರಕ್ತಿಯೆಂದೈದು ತುರ್ಯವ್ರತ ಭಾವಗಳಿವೆ ।।೩೫।।

---

೧ 'ವಿಮೋಚಿತಾವಾಸ'ವೆಂಬ ಪಾಠಾಂತರವಿದೆ.

ಅರ್ಥ ಃ- ಸ್ತ್ರೀಯರುಗಳ ಅವಲೋಕನೆ ಎಂದರೆ ರಾಗಭಾವದೊಡನೆ ನೋಡುವುದು, ಪೂರ್ವಕಾಲದಲ್ಲಿ ಭೋಗಿಸಿದ ಭೋಗಗಳ ಸ್ಮರಣೆ ಮಾಡುವುದು, ಸ್ತ್ರೀಯರುಗಳಿಂದ ಸಂಸಕ್ತವಾದ ವಸತಿಕೆಯಲ್ಲಿರುವುದು, ಸ್ತ್ರೀಯರ ಕಥೆ ಹೇಳುವುದು, ಪೌಷ್ಟಿಕ ರಸಗಳ ಸೇವನೆ ಮಾಡುವುದು, ಈ ಐದರಿಂದ ವಿಕಾರವು ಉತ್ಪನ್ನವಾಗುವುದರಿಂದ ಇವುಗಳಿಂದ ವಿರಕ್ತವಿರಬೇಕು. ಇವು ಐದು ಬ್ರಹ್ಮಚರ್ಯ ಮಹಾವ್ರತದ ಭಾವನೆಗಳಿವೆ.

ಭಾವಾರ್ಥ ಃ- ಕಾಮವಿಕಾರದ ನಿಮಿತ್ತಗಳಿಂದ ಬ್ರಹ್ಮಚರ್ಯವ್ರತವು ಭಂಗವಾಗುತ್ತದೆ, ಆದುದರಿಂದ ಸ್ತ್ರೀಯರುಗಳನ್ನು ರಾಗಭಾವದಿಂದ ನೋಡುವುದು ಇತ್ಯಾದಿ ನಿಮಿತ್ತಗಳನ್ನು ಹೇಳಿದೆ, ಇವುಗಳಿಂದ ವಿರಕ್ತವಿರಬೇಕು. ಪ್ರಸಂಗ ತಂದುಕೊಳ್ಳಬಾರದು, ಇದರಿಂದ ಬ್ರಹ್ಮಚರ್ಯ ಮಹಾವ್ರತವು ದೃಢವಿರುತ್ತದೆ. ।।೩೫।।

ಈಗ ಅಪರಿಗ್ರಹ ಮಹಾವ್ರತದ ಐದು ಭಾವನೆಗಳನ್ನು ಹೇಳುತ್ತಾರೆ, -

**ಅಪರಿಗ್ಗಹ ಸಮಣುಣ್ಣೇಸು ಸದ್ದ ಪರಿಸರಸರೂವಗಂಧೇಸು ।**
**ರಾಯದ್ದೋಸಾಈಣಂ ಪರಿಹಾರೋ ಭಾವಣಾ ಹೋಂತಿ ।।೩೬।।**

**ಅಪರಿಗ್ರಹೇ ಸಮನೋಜ್ಞೇಷು ಶಬ್ದಸ್ಪರ್ಶರಸರೂಪಗಂಧೇಷು ।**
**ರಾಗದ್ವೇಷಾದೀನಾಂ ಪರಿಹಾರೋ ಭಾವನಾಃ ಭವಂತಿ ।।೩೬।।**

ಅರ್ಥ ಃ- ಶಬ್ದ, ಸ್ಪರ್ಶ, ರಸ, ರೂಪ, ಗಂಧ ಇವು ಐದು ಇಂದ್ರಿಯಗಳ ವಿಷಯಗಳು ಸಮನೋಜ್ಞ ಎಂದರೆ ಮನಸ್ಸಿಗೆ ಒಳ್ಳೆಯವೆನಿಸುವಂಥವುಗಳು ಮತ್ತು ಅಮನೋಜ್ಞ ಎಂದರೆ ಮನಸ್ಸಿಗೆ ಕೆಡಕೆನಿಸುವಂಥವುಗಳಿದ್ದರೆ ಇವೆರಡರಲ್ಲೂ ರಾಗ-ದ್ವೇಷಾದಿಗಳನ್ನು ಮಾಡದಿರುವುದು ಇವು ಐದು ಪರಿಗ್ರಹತ್ಯಾಗವ್ರತದ ಭಾವನೆಗಳಿವೆ.

ಭಾವಾರ್ಥ ಃ- ಸ್ಪರ್ಶ, ರಸ, ಗಂಧ, ವರ್ಣ, ಶಬ್ದ ಇವು ಐದು ಇಂದ್ರಿಯಗಳ ವಿಷಯಗಳಿವೆ, ಇವುಗಳಲ್ಲಿ ಇಷ್ಟ-ಅನಿಷ್ಟ ಬುದ್ಧಿರೂಪದ ರಾಗ-ದ್ವೇಷಗಳನ್ನು ಮಾಡದಿರುವುವಾಗ ಅಪರಿಗ್ರಹವ್ರತವು ದೃಢವಿರುತ್ತದೆ. ಆದ್ದರಿಂದ ಅಪರಿಗ್ರಹಮಹಾವ್ರತದ ಈ ಐದು ಭಾವನೆಗಳನ್ನು ಹೇಳಲಾಗಿದೆ. ।।೩೬।।

ಇನ್ನು ಮುಂದೆ ಐದು ಸಮಿತಿಗಳನ್ನು ಹೇಳುತ್ತಾರೆ, -

**ಇರಿಯಾ ಭಾಸಾ ಏಸಣ ಜಾ ಸಾ ಆದಾಣ ಚೇವ ಣಿಕ್ಖೇವೋ ।**
**[೧]ಸಂಜಮಸೋಹಿಣಿಮಿತ್ತಂ ಖಂತಿ ಜಿಣಾ ಪಂಚಸಮಿದೀಓ ।।೩೭।।**

---

**ಅಮನೋಜ್ಞ-ಸುಮನೋಜ್ಞವಾದ ಶಬ್ದಸ್ಪರ್ಶರಸರೂಪ ಮೇಣ್ಗಂಧಗಳಲಿ ।**
**ತಾ ಮಾಡದಿರ್ಪುದು ರಾಗದ್ವೇಷಾದಿ ಇವೈದೈದನೇವ್ರತ ಭಾವಗಳಿವೆ ।।೩೬।।**

**ಈರ್ಯಾ ಭಾಷಾ ಏಷಣಾ ಆದಾನನಿಕ್ಷೇಪಣ ಮೇಣ್ಪ್ರತಿಷ್ಠಾಪನವೆಂಬಿವೈದು ।**
**ಆರ್ಯ ಸಮಿತಿಗಳನು ಸಂಯಮಶುದ್ಧಿನಿಮಿತ್ತ ಜಿನದೇವ ಪೇಳಿಹರು ।।೩೭।।**

---

೧ 'ಸಂಜಮಸೋಹಿಣಿಮಿತ್ತೇ' ಎಂಬ ಪಾಠಾಂತರವಿದೆ.

**ಈರ್ಯಾ ಭಾಷಾಏಷಣಾ ಯಾ ಸಾ ಆದಾನಂ ಚೈವ ನಿಕ್ಷೇಪಃ ।**
**ಸಂಯಮಶೋಧಿನಿಮಿತ್ತಂ ಖ್ಯಾಂತಿ ಜಿನಾಃಪಂಚ ಸಮಿತೀಃ ॥೩೭॥**

ಅರ್ಥ ಃ- ಈರ್ಯಾ, ಭಾಷಾ,ಏಷಣಾ, ಆದಾನನಿಕ್ಷೇಪಣ ಮತ್ತು ಪ್ರತಿಷ್ಠಾಪನವೆಂದು ಇವು ಐದು ಸಮಿತಿಗಳು ಸಂಯಮದ ಶುದ್ಧತೆಯ ಸಲುವಾಗಿ ಕಾರಣಗಳಿವೆಯೆಂದು ಜಿನದೇವರು ಹೇಳುತ್ತಾರೆ.

ಭಾವಾರ್ಥ ಃ- ಮುನಿಗಳು ಪಂಚಮಹಾವ್ರತರೂಪವಾದ ಸಂಯಮದ ಸಾಧನೆ ಮಾಡುತ್ತಾರೆ, ಆ ಸಂಯಮದ ಶುದ್ಧತೆಯ ಸಲುವಾಗಿ ಐದು ಸಮಿತಿರೂಪವಾಗಿ ಪ್ರವರ್ತಿಸುತ್ತಾರೆ. 'ಸಂ' ಎಂದರೆ ಸಮ್ಯಕ್ ಪ್ರಕಾರದಿಂದ 'ಇತಿ' ಎಂದರೆ ಯಾವುದರಲ್ಲಿ ಪ್ರವೃತ್ತಿಯಿದೆ ಅದು ಸಮಿತಿಯಿದೆಯೆಂಬ ಹೆಸರು ಇದರಿಂದಲೇ ಸಾರ್ಥಕವಿದೆ. ನಡೆಯುವ ಸಮಯದಲ್ಲಿ ಒಂದು ಮಾರುದ್ದ (ನಾಲ್ಕು ಮೊಳ) ಪ್ರಮಾಣ ನೆಲವನ್ನು ನೋಡುತ್ತ ನಡೆಯುತ್ತಾರೆ, ಮಾತನಾಡುವಾಗ ಹಿತಮಿತರೂಪದ ವಚನಗಳನ್ನು ಆಡುತ್ತಾರೆ, ಆಹಾರ ಸ್ವೀಕರಿಸಿದರೆ ನಲವತ್ತಾರು ದೋಷ, ಮೂವತ್ತೆರಡು ಅಂತರಾಯಗಳನ್ನು ನಿವಾರಿಸಿ, ಹದಿನಾಲ್ಕು ಮಲದೋಷ ರಹಿತ ಶುದ್ಧ ಆಹಾರ ತೆಗೆದುಕೊಳ್ಳುತ್ತಾರೆ, ಧರ್ಮೋಪಕರಣಗಳನ್ನು ಎತ್ತಿಗ್ರಹಣ ಮಾಡುವುದು ಅದು ಯತ್ನಪೂರ್ವಕವಾಗಿ ತೆಗೆದುಕೊಳ್ಳುತ್ತಾರೆ, ಹೀಗೆಯೇ ಏನಾದರೂ ಕ್ಷೇಪಣ ಮಾಡಿದಾಗ ಯತ್ನಪೂರ್ವಕ ಕ್ಷೇಪಣ ಮಾಡುತ್ತಾರೆ, ಈ ಪ್ರಕಾರ ಪ್ರಮಾದರಹಿತವಾಗಿ ವರ್ತಿಸಿದಾಗ ಸಂಯಮದ ಶುದ್ಧಪಾಲನೆಯಾಗುತ್ತದೆ, ಆದಕ್ಕಾಗಿ ಪಂಚಸಮಿತಿರೂಪದ ಪ್ರವೃತ್ತಿಯನ್ನು ಹೇಳಿದೆ. ಹೀಗೆ ಸಂಯಮಚರಣ ಚಾರಿತ್ರದ ಪ್ರವೃತ್ತಿಯ ವರ್ಣನೆ ಮಾಡಲಾಯಿತು. ॥೩೭॥

ಈಗ ಆಚಾರ್ಯದೇವರು ನಿಶ್ಚಯ ಚಾರಿತ್ರವನ್ನು ಮನಸ್ಸಿನಲ್ಲಿ ಧಾರಣ ಮಾಡಿ ಜ್ಞಾನದ ಸ್ವರೂಪವನ್ನು ಹೇಳುತ್ತಾರೆ,-

**ಭವ್ವಜಣಬೋಹಣತ್ಥಂ ಜಿಣಮಗ್ಗೇ ಜಿಣವರೇಹಿ ಜಹ ಭಣಿಯಂ ।**
**ಣಾಣಂ ಣಾಣಸರೂವಂ ಅಪ್ಪಾಣಂ ತಂ ವಿಯಾಣೇಹಿ ॥೩೮॥**

**ಭವ್ಯಜನಬೋಧನಾರ್ಥಂ ಜಿನಮಾರ್ಗೇ ಜಿನವರೈಃ ಯಥಾ ಭಣಿತಂ ।**
**ಜ್ಞಾನಂ ಜ್ಞಾನಸ್ವರೂಪಂ ಆತ್ಮಾನಂ ತಂ ವಿಜಾನೀಹಿ ॥೩೮॥**

ಅರ್ಥ ಃ- ಜಿನಮಾರ್ಗದಲ್ಲಿ ಜಿನೇಶ್ವರದೇವರು ಭವ್ಯ ಜೀವಗಳ ಸಂಬೋಧನೆಯ ಸಲುವಾಗಿ ಜ್ಞಾನ ಮತ್ತು ಜ್ಞಾನದ ಸ್ವರೂಪವನ್ನು ಹೇಳಿದ್ದಾರೆ. ಆ ಜ್ಞಾನಸ್ವರೂಪನಾದ ಆತ್ಮನನ್ನು ಎಲೈ ಭವ್ಯ ಜೀವನೇ ! ನೀನು ತಿಳಿದುಕೊಳ್ಳು.

ಭಾವಾರ್ಥ ಃ- ಜ್ಞಾನವನ್ನು ಮತ್ತು ಜ್ಞಾನದ ಸ್ವರೂಪವನ್ನು ಅನ್ಯಮತದವರು ಅನೇಕ ಪ್ರಕಾರದಿಂದ ಹೇಳುತ್ತಾರೆ, ಆದರೆ ಹಾಗೆ ಜ್ಞಾನ ಮತ್ತು ಜ್ಞಾನದಸ್ವರೂಪವಿಲ್ಲ. ಆ ಸರ್ವಜ್ಞ ವೀತರಾಗದೇವರು ಹೇಳಿದ ಜ್ಞಾನ ಮತ್ತು ಜ್ಞಾನದ ಸ್ವರೂಪವಿದೆ ಅದೇ ನಿರ್ಬಾಧ ಸತ್ಯಾರ್ಥವಿದೆ ಮತ್ತು ಜ್ಞಾನವಿದೆ ಅದೇ ಆತ್ಮವಿದೆ ಹಾಗೂ ಆತ್ಮನ ಸ್ವರೂಪವಿದೆ,

---

**ಜಿನಮಾರ್ಗದಲಿ ಜಿನದೇವ ಭವ್ಯಜನಬೋಧನಾರ್ಥ ಹೇಗೆ ಜ್ಞಾನ ಮೇಣ್ ।**
**ಜ್ಞಾನದ ಸ್ವರೂಪ ಪೇಳಿಹರಾ ಜ್ಞಾನಸ್ವರೂಪಾತ್ಮನನು ನೀವು ತಿಳಿಯಿರಿ ॥೩೮॥**

ಅವನನ್ನು ತಿಳಿದುಕೊಂಡು ಅವನಲ್ಲಿ ಸ್ಥಿರತೆಯ ಭಾವ ಮಾಡುವುದು, ಪರದ್ರವ್ಯಗಳಲ್ಲಿ ರಾಗ-ದ್ವೇಷ ಮಾಡದಿರುವುದು ಅದೇ ನಿಶ್ಚಯ ಚಾರಿತ್ರವಿರುವುದರಿಂದ ಪೂರ್ವೋಕ್ತ ಮಹಾವ್ರತಾದಿಗಳ ಪ್ರವೃತ್ತಿ ಮಾಡಿ ಈ ಜ್ಞಾನಸ್ವರೂಪನಾದ ಆತ್ಮನಲ್ಲಿ ಲೀನವಾಗಬೇಕೆಂಬ ಉಪದೇಶವಿದೆ. ॥೩೮॥

ಯಾವನು ಈ ಪ್ರಕಾರ ಜ್ಞಾನದಿಂದ ಹೀಗೆ ತಿಳಿಯುತ್ತಾನೆ ಅವನು ಸಮ್ಯಗ್ಜ್ಞಾನಿಯಿದ್ದಾನೆಂದು ಈಗ ಹೇಳುತ್ತಾರೆ, –

ಜೀವಾಜೀವವಿಭತ್ತೀ ಜೋ ಜಾಣಇ ಸೋ ಹವೇಇ ಸಣ್ಣಾಣೀ ।
ರಾಯಾದಿದೋಸರಹಿಓ ಜಿಣಸಾಸಣೇ [೧]ಮೋಕ್ಖಮಗ್ಗೋತ್ತಿ ॥೩೯॥

ಜೀವಾಜೀವವಿಭಕ್ತಿಂ ಯಃ ಜಾನಾತಿ ಸ ಭವೇತ್ ಸಜ್ಜ್ಞಾನಃ ।
ರಾಗಾದಿದೋಷರಹಿತಃ ಜಿನಶಾಸನೇ ಮೋಕ್ಷಮಾರ್ಗ ಇತಿ ॥೩೯॥

ಅರ್ಥ ಃ– ಯಾವ ಪುರುಷನು ಜೀವ ಮತ್ತು ಅಜೀವದ ಭೇದ ತಿಳಿಯುತ್ತಾನೆ ಅವನು ಸಮ್ಯಗ್ಜ್ಞಾನಿಯಾಗುತ್ತಾನೆ ಮತ್ತು ರಾಗಾದಿದೋಷಗಳಿಂದ ರಹಿತನಾಗುತ್ತಾನೆ ಹೀಗೆ ಜಿನಶಾಸನದಲ್ಲಿ ಮೋಕ್ಷಮಾರ್ಗವಿದೆ.

ಭಾವಾರ್ಥ ಃ– ಯಾವನು ಜೀವ-ಅಜೀವ ಪದಾರ್ಥದ ಸ್ವರೂಪವನ್ನು ಭೇದರೂಪವಾಗಿ ತಿಳಿದುಕೊಂಡು ಸ್ವ-ಪರದ ಭೇದ ತಿಳಿಯುತ್ತಾನೆ ಅವನು ಸಮ್ಯಗ್ಜ್ಞಾನಿಯಾಗುತ್ತಾನೆ ಮತ್ತು ಪರದ್ರವ್ಯಗಳಲ್ಲಿನ ರಾಗ-ದ್ವೇಷ ಬಿಡುವುದರಿಂದ ಜ್ಞಾನದಲ್ಲಿ ಸ್ಥಿರತೆಯಾದಮೇಲೆ ನಿಶ್ಚಯ ಸಮ್ಯಕ್ಚಾರಿತ್ರವಾಗುತ್ತದೆ, ಇದನ್ನು ಜಿನಶಾಸನದಲ್ಲಿ ಮೋಕ್ಷಮಾರ್ಗದ ಸ್ವರೂಪವೆಂದು ಹೇಳಿದೆ. ಅನ್ಯ ಮತದವರು ಅನೇಕ ಪ್ರಕಾರದಿಂದ ಕಲ್ಪನೆ ಮಾಡಿ ಹೇಳಿದ್ದಾರೆ ಅದು ಮೋಕ್ಷಮಾರ್ಗವಿಲ್ಲ. ॥೩೯॥

ಈ ಪ್ರಕಾರ ಮೋಕ್ಷಮಾರ್ಗವನ್ನು ತಿಳಿದುಕೊಂಡು ಶ್ರದ್ಧೆಯೊಡನೆ ಇದರಲ್ಲಿ ಪ್ರವೃತ್ತಿ ಮಾಡುವವನು ಶೀಘ್ರದಲ್ಲಿಯೇ ಮೋಕ್ಷವನ್ನು ಪ್ರಾಪ್ತಮಾಡಿಕೊಳ್ಳುತ್ತಾನೆಂದು ಈಗ ಹೇಳುತ್ತಾರೆ.–

ದಂಸಣಣಾಣಚರಿತ್ತಂ ತಿಣ್ಣಿ ವಿ ಜಾಣೇಹ ಪರಮಸದ್ಧಾಏ ।
ಜಂ ಜಾಣಿಊಣ ಜೋಈ ಅಇರೇಣ ಲಹಂತಿ ಣಿವ್ವಾಣಂ ॥೪೦॥

---

ಜೀವ-ಅಜೀವದ ವಿಭಾಗವನು ತಿಳಿವವನು ಸಮ್ಯಗ್ಜ್ಞಾನಿಯಾಗುವನು ।
ಅವನು ರಾಗಾದಿರಿಕ್ತನಪ್ಪನಿದು ಜಿನಶಾಸನದಿ ಮೋಕ್ಷಮಾರ್ಗವಿದೆ ॥೩೯॥

ನೀನು ದರ್ಶನ ಜ್ಞಾನ ಚಾರಿತ್ರಮೀಮೂರನು ತಿಳಿ ಪರಮಶ್ರದ್ಧೆಯಿಂದಾವ ।
ಮುನಿಯಿವನು ತಿಳಿವನವನು ಅಲ್ಪಕಾಲದಲಿ ನಿರ್ವಾಣ ಪಡೆಯುವನು ॥೪೦॥

---

೧ 'ಮೋಕ್ಖಮಗ್ಗುತ್ತಿ' ಎಂಬ ಪಾಠಾಂತರವಿದೆ.

**ದರ್ಶನಜ್ಞಾನಚಾರಿತ್ರಂ ತ್ರೀಣ್ಯಪಿ ಜಾನೀಹಿ ಪರಮಶ್ರದ್ಧಯಾ ।**
**ಯತ್ ಜ್ಞಾತ್ವಾ ಯೋಗಿನಃ ಅಚಿರೇಣ ಲಭಂತೇ ನಿರ್ವಾಣಮ್ ॥೪೦॥**

ಅರ್ಥ ಃ- ಎಲೈ ಭವ್ಯನೇ ! ನೀನು ದರ್ಶನ, ಜ್ಞಾನ, ಚಾರಿತ್ರ ಈ ಮೂರನ್ನೂ ಪರಮಶ್ರದ್ಧೆಯಿಂದ ತಿಳಿದುಕೊಳ್ಳು, ಅವನ್ನು ತಿಳಿದುಕೊಂಡು ಯೋಗಿ ಮುನಿಗಳು ಅಲ್ಪಕಾಲದಲ್ಲಿಯೇ ನಿರ್ವಾಣವನ್ನು ಪ್ರಾಪ್ತ ಮಾಡಿಕೊಳ್ಳುತ್ತಾರೆ.

ಭಾವಾರ್ಥ ಃ- ಸಮ್ಯಗ್ದರ್ಶನ ಜ್ಞಾನ ಚಾರಿತ್ರವೆಂದು ತ್ರಯಾತ್ಮಕವಾಗಿ ಮೋಕ್ಷಮಾರ್ಗವಿದೆ, ಇದನ್ನು ಶ್ರದ್ಧಾಪೂರ್ವಕವಾಗಿ ತಿಳಿದುಕೊಳ್ಳುವ ಉಪದೇಶವಿದೆ, ಏಕೆಂದರೆ ಇದನ್ನು ತಿಳಿದುಕೊಳ್ಳುವುದರಿಂದ ಮುನಿವರರುಗಳಿಗೆ ಮೋಕ್ಷದ ಪ್ರಾಪ್ತಿಯಾಗುತ್ತದೆ. ॥೪೦॥

ಈ ಪ್ರಕಾರ ನಿಶ್ಚಯಚಾರಿತ್ರರೂಪ ಜ್ಞಾನದ ಸ್ವರೂಪ ಹೇಳಿತು, ಇದನ್ನು ಪಡೆದುಕೊಳ್ಳುವವರು ಶಿವರೂಪವಾದ ಮಂದಿರದಲ್ಲಿ ಇರುವಂಥವರಾಗುತ್ತಾರೆಂದು ಈಗ ಹೇಳುತ್ತಾರೆ, –

**[೧]ಪಾಊಣ ಣಾಣಸಲಿಲಂ ಣಿಮ್ಮಲಸುವಿಸುದ್ಧಭಾವಸಂಜುತ್ತಾ ।**
**ಹೋಂತಿ ಸಿವಾಲಯವಾಸೀ ತಿಹುವಣಚೂಡಾಮಣೀ ಸಿದ್ಧಾ ॥೪೧॥**

**[೨]ಪ್ರಾಪ್ಯ ಜ್ಞಾನಸಲಿಲಂ ನಿರ್ಮಲಸುವಿಶುದ್ಧಭಾವಸಂಯುಕ್ತಾಃ ।**
**ಭವಂತಿ ಶಿವಾಲಯವಾಸಿನಃ ತ್ರಿಭುವನಚೂಡಾಮಣಯಃ ಸಿದ್ಧಾಃ ॥೪೧॥**

ಅರ್ಥ ಃ- ಯಾವ ಪುರುಷರು ಈ ಜಿನಭಾಷಿತ ಜ್ಞಾನರೂಪದ ಜಲವನ್ನು ಪ್ರಾಪ್ತಮಾಡಿಕೊಂಡು ತಮ್ಮ ನಿರ್ಮಲ ಒಳ್ಳೆಯ ಪ್ರಕಾರದ ವಿಶುದ್ಧಭಾವದಲ್ಲಿ ಸಂಯುಕ್ತರಾಗುತ್ತಾರೆ ಆ ಪುರುಷರು ಮೂರು ಲೋಕದ ಚೂಡಾಮಣಿ ಮತ್ತು ಶಿವಾಲಯ ಎಂದರೆ ಮೋಕ್ಷರೂಪದ ಮಂದಿರದಲ್ಲಿ ವಾಸಮಾಡುವಂಥ ಸಿದ್ಧಪರಮೇಷ್ಠಿಗಳಾಗುತ್ತಾರೆ.

ಭಾವಾರ್ಥ ಃ- ಯಾವ ಪ್ರಕಾರ ಉತ್ತಮ ಪುರುಷರು ಜಲದಿಂದ ಸ್ನಾನ ಮಾಡಿ ಶುದ್ಧರಾಗಿ ಮಹಲಿನಲ್ಲಿ ನಿವಾಸ ಮಾಡುತ್ತಾರೆ ಅದೇ ಪ್ರಕಾರ ಈ ಜ್ಞಾನವು ಜಲದ ಸಮಾನವಿದೆ ಮತ್ತು ಆತ್ಮನಿಗೆ ರಾಗ ಮೊದಲಾದ ಮಲವು ತಗಲುವುದರಿಂದ ಮಲಿನತೆಯಾಗುತ್ತಿರುವುದರಿಂದ ಈ ಜ್ಞಾನರೂಪದ ಜಲದಿಂದ ರಾಗಾದಿಗಳ ಮಲವನ್ನು ತೊಳೆದು ಯಾರು ತಮ್ಮ ಆತ್ಮನನ್ನು ಶುದ್ಧ ಮಾಡುತ್ತಾರೆ ಅವರು ಮುಕ್ತಿರೂಪದ ಮಹಲಿನಲ್ಲಿದ್ದುಕೊಂಡು ಆನಂದ ಭೋಗಿಸುತ್ತಾರೆ, ಅವರನ್ನು ತ್ರಿಭುವನ ಚೂಡಾಮಣಿ ಸಿದ್ಧರೆಂದು ಹೇಳುತ್ತಾರೆ. ॥೪೧॥

---

**ಏವ ಜ್ಞಾನಜಲಪಡೆದು ನಿರ್ಮಲಸುವಿಶುದ್ಧ ಭಾವಸಂಯುಕ್ತನಪ್ಪನು ।**
**ಅವನು ಶಿವಾಲಯವಾಸಿಯಾಗಿ ತ್ರಿಭುವನ ಚೂಡಾಮಣಿ ಸಿದ್ಧನಪ್ಪನು ॥೪೧॥**

---

೧ 'ಪೀಊಣ' ಎಂಬ ಪಾಠಾಂತರವಿದೆ.

೨. 'ಪಿತ್ವಾ' ಎಂಬ ಪಾಠಾಂತರವಿದೆ.

ಜ್ಞಾನಗುಣದಿಂದ ರಹಿತರಾಗಿರುವವರು ಇಷ್ಟ ವಸ್ತುವನ್ನು ಪಡೆಯದಿರುವುದರಿಂದ ಗುಣ ದೋಷಗಳನ್ನು ತಿಳಿಯುವ ಸಲುವಾಗಿ ಜ್ಞಾನವನ್ನು ಒಳ್ಳೆಯ ಪ್ರಕಾರದಿಂದ ತಿಳಿದುಕೊಳ್ಳಬೇಕೆಂದು ಈಗ ಹೇಳುತ್ತಾರೆ, –

**ಣಾಣಗುಣೇಹಿಂ ವಿಹೀಣಾ ಣ ಲಹಂತೇ ತೇ ಸುಇಚ್ಛಿಯಂ ಲಾಹಂ ।**
**ಇಯ ಣಾಉಂ ಗುಣದೋಸಂ ತಂ ಸಣ್ಣಾಣಂ ವಿಯಾಣೇಹಿ ॥೪೨॥**

**ಜ್ಞಾನಗುಣೈಃ ವಿಹೀನಾ ನ ಲಭತೇ ತೇ ಸ್ವಿಷ್ಟಂ ಲಾಭಂ ।**
**ಇತಿ ಜ್ಞಾತ್ವಾ ಗುಣದೋಷೌ ತತ್ ಸದ್‌ಜ್ಞಾನಂ ನಿಜಾನೀಹಿ ॥೪೨॥**

ಅರ್ಥ ಃ– ಜ್ಞಾನಗುಣದಿಂದ ವಿಹೀನನಾದ ಪುರುಷನು ತನ್ನ ಐಚ್ಛಿಕ ವಸ್ತುವಿನ ಲಾಭವನ್ನು ಪ್ರಾಪ್ತ ಮಾಡಿಕೊಳ್ಳುವುದಿಲ್ಲವೆಂದು ತಿಳಿದುಕೊಂಡು ಎಲೈ ಭವ್ಯನೇ ! ನೀನು ಪೂರ್ವೋಕ್ತ ಗುಣ–ದೋಷಗಳನ್ನು ತಿಳಿಯುವುದರ ಸಲುವಾಗಿ ಸಮ್ಯಗ್ಜ್ಞಾನವನ್ನು ತಿಳಿದುಕೊಳ್ಳು.

ಭಾವಾರ್ಥ ಃ– ಜ್ಞಾನದ ಹೊರತಾಗಿ ಗುಣ–ದೋಷಗಳ ಜ್ಞಾನವಾಗುವುದಿಲ್ಲ, ಆಗ ತನ್ನ ಇಷ್ಟ ಹಾಗೂ ಅನಿಷ್ಟ ವಸ್ತುಗಳನ್ನು ತಿಳಿಯುವುದಿಲ್ಲ, ಅದರಿಂದ ಇಷ್ಟ ವಸ್ತುವಿನ ಲಾಭವಾಗುವುದಿಲ್ಲ, ಆದುದರಿಂದ ಸಮ್ಯಗ್ಜ್ಞಾನದಿಂದಲೇ ಗುಣ–ದೋಷಗಳು ತಿಳಿದುಬರುತ್ತವೆ. ಏಕೆಂದರೆ ಸಮ್ಯಗ್ಜ್ಞಾನವಿಲ್ಲದೆ ಹೇಯ–ಉಪದೇಯಗಳನ್ನು ತಿಳಿಯುವುದಾಗುವುದಿಲ್ಲ ಮತ್ತು ಹೇಯ–ಉಪಾದೇಯಗಳನ್ನು ತಿಳಿದುಕೊಂಡಲ್ಲದೆ ಸಮ್ಯಕ್ಚಾರಿತ್ರವಾಗುವುದಿಲ್ಲ, ಆದುದರಿಂದ ಚಾರಿತ್ರಕ್ಕಿಂತ ಜ್ಞಾನವನ್ನು ಮುಖ್ಯವೆಂದು ಹೇಳಿದೆ. ॥೪೨॥

ಯಾವನು ಸಮ್ಯಗ್ಜ್ಞಾನದೊಡನೆ ಚಾರಿತ್ರದ ಧಾರಣ ಮಾಡುತ್ತಾನೆ ಅವನು ಅಲ್ಪ ಕಾಲದಲ್ಲಿಯೇ ಅನುಪಮ ಸುಖವನ್ನು ಪಡೆಯುತ್ತಾನೆಂದು ಈಗ ಹೇಳುತ್ತಾರೆ,–

**ಚಾರಿತ್ತಸಮಾರೂಢೋ ಅಪ್ಪಾಸು ಪರಂ ಣ ಈಹಏ ಣಾಣೀ ।**
**ಪಾವಇ ಅಇರೇಣ ಸುಹಂ ಅಣೋವಮಂ ಜಾಣ ಣಿಚ್ಛಯದೋ ॥೪೩॥**

**ಚಾರಿತ್ರಸಮಾರೂಢ [೧]ಆತ್ಮನಿ ಪರಂ ನ ಈಹತೇ ಜ್ಞಾನೀ ।**
**ಪ್ರಾಪ್ನೋತಿ ಅಚಿರೇನ ಸುಖಂ ಅನುಪಮಂ ಜಾನೀಹಿ ನಿಶ್ಚಯತಃ ॥೪೩॥**

---

**ಜ್ಞಾನಗುಣ ವಿಹೀನನು ತನ್ನ ಇಚ್ಛಿತಲಾಭ ಪಡೆಯಲಾರನೆಂದರಿದು ।**
**ನೀನು ಗುಣದೋಷಗಳ ತಿಳಿಯುವುದಕಾಗಿ ಆ ಸಮ್ಯಗ್ಜ್ಞಾನವನು ತಿಳಿ ॥೪೨॥**

**ಜ್ಞಾನಿ ಚಾರಿತ್ರಾರೂಢನಾಗಿ ನಿಜಾತ್ಮನಲಿ ಪರದ್ರವ್ಯದ ಇಚ್ಛೆಮಾಡನು ।**
**ಅನುಪಮ ಸುಖವನಲ್ಪಕಾಲದಲಿ ಪಡೆಯುವನೆಂದರಿ ನಿಶ್ಚಯದಿ ॥೪೩॥**

---

೧ ಸಂಸ್ಕೃತ ಪ್ರತಿಯಲ್ಲಿ 'ಆತ್ಮನಿ'ಯ ಸ್ಥಾನದಲ್ಲಿ 'ಆತ್ಮನಃ' ಎಂದು ಶ್ರುತಸಾಗರೀ ಸಂಸ್ಕೃತ ಟೀಕೆಯ ಮುದ್ರಿತ ಪ್ರತಿಯಲ್ಲಿದೆ. ಟೀಕೆಯಲ್ಲಿ 'ಆತ್ಮನಃ' ಎಂಬುದರ ಅರ್ಥವನ್ನೇ ಮಾಡಿದೆ. ಕೆಳನೇ ಪುಟ ನೋಡಿರಿ.

ಅರ್ಥ :- ಯಾವ ಪುರುಷನು ಜ್ಞಾನಿಯಿದ್ದಾನೆ ಮತ್ತು ಚಾರಿತ್ರಸಹಿತನಿದ್ದಾನೆ ಅವನು ತನ್ನ ಆತ್ಮನಲ್ಲಿ ಪರದ್ರವ್ಯದ ಇಚ್ಛೆ ಮಾಡುವುದಿಲ್ಲ, ಪರದ್ರವ್ಯದಲ್ಲಿ ರಾಗ-ದ್ವೇಷ-ಮೋಹಗಳನ್ನು ಮಾಡುವುದಿಲ್ಲ. ಆ ಜ್ಞಾನಿಯು ಉಪಮಾತೀತವಾದಂಥ ಅವಿನಾಶಿಯಾದ ಮುಕ್ತಿಯ ಸುಖವನ್ನು ಪಡೆಯುತ್ತಾನೆ. ಎಲೈ ಭವ್ಯನೇ ! ನೀನು ನಿಶ್ಚಯದಿಂದ ಈ ಪ್ರಕಾರ ತಿಳಿ. ಇಲ್ಲಿ ಜ್ಞಾನಿಯಾಗಿ ಹೇಯ-ಉಪಾದೇಯಗಳನ್ನು ತಿಳಿದುಕೊಂಡು, ಸಂಯಮಿಯಾಗಿ ತನ್ನಲ್ಲಿ ಪರದ್ರವ್ಯಗಳನ್ನು ಬೆರಸದವನು ಪರಮಸುಖ ಪಡೆಯುತ್ತಾನೆಂದು ತಿಳಿಸಿಕೊಡಲಾಗಿದೆ. ||೪೩||

ಈಗ ಇಷ್ಟ ಚಾರಿತ್ರದ ಕಥನದ ಸಂಕೋಚ ಮಾಡುತ್ತಾರೆ, -

**ಏವಂ ಸಂಖೇವೇಣ ಯ ಭಣಿಯಂ ಣಾಣೇಣ ವೀಯರಾಏಣ ।**
**ಸಮ್ಮತ್ತಸಂಜಮಾಸಯದುಣ್ಹಂ ಪಿ ಉದೇಸಿಯಂ ಚರಣಂ ||೪೪||**

**ಏವಂ ಸಂಕ್ಷೇಪೇಣ ಚ ಭಣಿತಂ ಜ್ಞಾನೇನ ವೀತರಾಗೇಣ ।**
**ಸಮ್ಯಕ್ತ್ವಸಂಯಮಾಶ್ರಯದ್ವಯೋರಪಿ ಉದ್ದೇಶಿತಂ ಚರಣಮ್ ||೪೪||**

ಅರ್ಥ :- ಏವಂ ಎಂದರೆ ಹೀಗೆ ಪೂರ್ವೋಕ್ತ ಪ್ರಕಾರ ಸಂಕ್ಷೇಪದಲ್ಲಿ ಶ್ರೀ ವೀತರಾಗದೇವರು ಜ್ಞಾನದ ಮುಖಾಂತರ ಹೇಳಿರುವ ಈ ಸಮ್ಯಕ್ತ್ವ ಮತ್ತು ಸಂಯಮ ಇವೆರಡರ ಆಶ್ರಯವಾದ ಚಾರಿತ್ರವನ್ನು ಸಮ್ಯಕ್ತ್ವಚರಣಸ್ವರೂಪ ಮತ್ತು ಸಂಯಮಚರಣಸ್ವರೂಪವೆಂದು ಎರಡು ಪ್ರಕಾರದಿಂದ ಉಪದೇಶ ಮಾಡಿದ್ದಾರೆ. ಆಚಾರ್ಯದೇವರು ಚಾರಿತ್ರದ ಕಥನವನ್ನು ಸಂಕ್ಷೇಪದಿಂದ ಹೇಳಿ ಸಂಕೋಚ ಮಾಡಿದ್ದಾರೆ. ||೪೪||

ಈಗ ಈ ಚಾರಿತ್ರಪಾಹುಡವನ್ನು ಭಾವಿಸುವ ಉಪದೇಶ ಮತ್ತು ಇದರ ಫಲವನ್ನು ಹೇಳುತ್ತಾರೆ, -

**ಭಾವೇಹ ಭಾವಸುದ್ಧಂ ಫುಡು ರಇಯಂ ಚರಣಪಾಹುಡಂ ಚೇವ ।**
**ಲಹು ಚಉಗಇ ಚಇಊಣಂ ಅಇರೇಣಽಪುಣಬ್ಭವಾ ಹೋಈ ||೪೫||**

**ಭಾವಯತ ಭಾವಶುದ್ಧಂ ಸ್ಫುಟಂ ರಚಿತಂ ಚರಣಪ್ರಾಭೃತಂ ಚೈವ ।**
**ಲಘು ಚತುರ್ಗತೀಃ ತ್ಯಕ್ತ್ವಾ ಅಚಿರೇಣ ಅಪುನರ್ಭವಾಃ ಭವತ ||೪೫||**

ಅರ್ಥ :- ಎಲೈ ಭವ್ಯ ಜೀವರುಗಳೇ ! ಈ ಚರಣ ಎಂದರೆ ಚಾರಿತ್ರಪಾಹುಡವನ್ನು ನಾವು ಸ್ಪಷ್ಟ ಪ್ರಕಟ ಮಾಡಿ ರಚಿಸಿದ್ದೇವೆ, ಇದನ್ನು ನೀವು ನಿಮ್ಮ ಶುದ್ಧ ಭಾವದಿಂದ ಭಾವಿಸಿರಿ. ನಿಮ್ಮ ಭಾವಗಳಲ್ಲಿ ಪುನಃ ಪುನಃ ಅಭ್ಯಾಸ ಮಾಡಿರಿ,

---

ಈ ರೀತಿ ವೀತರಾಗದೇವರು ಜ್ಞಾನದಿಂ ಸಮ್ಯಕ್ತ್ವಮೇಣ್ಸಂಯಮಾಶ್ರಿತವಾದ ।
ಚಾರಿತ್ರವನೆರಡು ಪ್ರಕಾರದಿಂದುಪದೇಶಿಸಿದರಿಲ್ಲಿ ಸಂಕ್ಷೇಪದಿಂದ ||೪೪||

ಶುದ್ಧಭಾವದಿಂ ಭಾವಿಸಿರಿ ಸ್ಫುಟವಾಗಿ ರಚಿಸಿದೀ ಚಾರಿತ್ರಪಾಹುಡವ ।
ಬದ್ಧ ಚತುರ್ಗತಿಗಳ ಶೀಘ್ರ ತ್ಯಜಿಸಿ ಶಾಶ್ವತಮೋಕ್ಷ ನಿಮಗಾಗುವುದು ||೪೫||

ಇದರಿಂದ ಶೀಘ್ರವಾಗಿಯೇ ಚತುರ್ಗತಿಗಳನ್ನು ಬಿಟ್ಟುಕೊಟ್ಟು ಅಪುನರ್ಭವವಾದ ಮೋಕ್ಷವು ನಿಮಗಾಗುವುದು, ಪುನಃ ಈ ಸಂಸಾರದಲ್ಲಿ ಜನ್ಮವೆತ್ತಬೇಕಾಗುವುದಿಲ್ಲವೆಂದು ಆಚಾರ್ಯದೇವರು ಹೇಳುತ್ತಾರೆ.

ಭಾವಾರ್ಥ :– ಈ ಚಾರಿತ್ರಪಾಹುಡವನ್ನು ರಕ್ಷಿಸಬೇಕು, ಓದಬೇಕು, ಧಾರಣ ಮಾಡಬೇಕು, ಮತ್ತೆ ಮತ್ತೆ ಭಾವಿಸಬೇಕು, ಅಭ್ಯಾಸ ಮಾಡಬೇಕೆಂಬ ಉಪದೇಶವಿದೆ. ಇದರಿಂದ ಚಾರಿತ್ರದ ಸ್ವರೂಪವನ್ನು ತಿಳಿದುಕೊಂಡು ಧಾರಣ ಮಾಡುವ ಅಭಿರುಚಿಯಾದರೆ, ಅಂಗೀಕಾರ ಮಾಡಿದರೆ ಆಗ ಚತುರ್ಗತಿರೂಪವಾದ ಸಂಸಾರದ ದುಃಖದಿಂದ ರಹಿತರಾಗಿ ನಿರ್ವಾಣವನ್ನು ಪಡೆಯುವಿರಿ, ಪುನಃ ಸಂಸಾರದಲ್ಲಿ ಜನ್ಮಧಾರಣ ಮಾಡಬೇಕಾಗುವುದಿಲ್ಲ. ಆದುದರಿಂದ ಕಲ್ಯಾಣವನ್ನು ಇಚ್ಛಿಸುವವರು ಈ ಪ್ರಕಾರ ಮಾಡುವುದು. ॥೪೫॥

ಜಿನವರದೇವರೆರಡು ಪ್ರಕಾರದ ಚಾರಿತ್ರ ಪೇಳಿಹರು
ಸಮಕಿತ ಸಂಯಮಚರಣ ಜ್ಞಾನಪೂರ್ವಕ ಇರಿಸಿಹರು
ಜಗದ ವೃತ್ತಿಯನೆಲ್ಲ ಬಿಟ್ಟು ನಿಜರೂಪದಲಿ ಸ್ಥಿರವಿರೆ
ಅಷ್ಟ ಕರ್ಮವ ಕೆಡಿಸಿ ಅವಿನಾಶಿ ಶಿವಸುಖ ಪಡೆವರು

ಹೀಗೆ ಸಮ್ಯಕ್ತ್ವಚರಣ ಚಾರಿತ್ರ ಮತ್ತು ಸಂಯಮಚರಣ ಚಾರಿತ್ರವೆಂದು ಎರಡು ಪ್ರಕಾರದ ಚಾರಿತ್ರದ ಸ್ವರೂಪವನ್ನು ಈ ಪಾಹುಡದಲ್ಲಿ ಹೇಳಿದೆ.

ಜಿನಭಾಷಿತ ಚಾರಿತ್ರವಂ ಪಾಲಿಸುವ ಮುನಿರಾಜರುಗಳ
ಚರಣಕೆರಗುವೆನು ನಿತ್ಯ ಪಡೆವೆನವರ ಗುಣಗಳ

ಈ ಪ್ರಕಾರ ಕುಂದಕುಂದಾಚಾರ್ಯದೇವವಿರಚಿತ ಅಷ್ಟಪಾಹುಡದಲ್ಲಿ
ಮೂರನೆಯ ಚಾರಿತ್ರಪಾಹುಡ ಮತ್ತು ಅದರ ಜಯಚಂದ
ಛಾಬಡಾಕೃತ ದೇಶಭಾಷಾಮಯ ವಚನಿಕೆಯ
ಕನ್ನಡ ಭಾಷಾನುವಾದವು
ಸಮಾಪ್ತವಾಯಿತು.

ಓ

# ಬೋಧ ಪಾಹುಡ

ಸರ್ವಗುರು ಜಿನೇಶ್ವರದೇವಗೆ ವಂದಿಪೆ ಮನ-ವಚ-ಕಾಯ ।
ಈ ಪ್ರಸಾದ ಭವಿ ಬೋಧಪಡೆಯೆ ಪಾಲಿಪುದು ಜೀವನಿಕಾಯ ॥

ಈ ಪ್ರಕಾರ ಮಂಗಲಾಚರಣೆಯಿಂದ ಭ. ಕುಂದಕುಂದಾಚಾರ್ಯದೇವ ವಿರಚಿತ ಗಾಥಾಬಂಧ 'ಬೋಧ ಪಾಹುಡ'ದ ದೇಶಭಾಷಾಮಯ ವಚನಿಕೆಯ ಕನ್ನಡ ಭಾಷಾನುವಾದ ಬರೆಯುತ್ತೇವೆ. ಪ್ರಾರಂಭದಲ್ಲಿ ಆಚಾರ್ಯ ದೇವರು ಮಂಗಲಪೂರ್ವಕವಾಗಿ ಗ್ರಂಥ ರಚನೆಯ ಪ್ರತಿಜ್ಞೆ ಮಾಡುತ್ತಾರೆ,-

ಬಹುಸತ್ಥಅತ್ಥಜಾಣೇ ಸಂಜಮಸಮ್ಮತ್ತಸುದ್ಧತವಯರಣೇ ।
ವಂದಿತ್ತಾ ಆಯರಿಏ ಕಸಾಯಮಲವಜ್ಜಿದೇ ಸುದ್ಧೇ ॥೧॥

ಸಯಲಜಣಬೋಹಣತ್ಥಂ ಜಿಣಮಗ್ಗೇ ಜಿಣವರೇಹಿಂ ಜಹ ಭಣಿಯಂ ।
ವೋಚ್ಛಾಮಿ ಸಮಾಸೇಣ [೧]ಛಕ್ಕಾಯಸುಹಂಕರಂ ಸುಣಹ ॥೨॥

ಬಹುಶಾಸ್ತ್ರಾರ್ಥಜ್ಞಾಪಕಾನ್ ಸಂಯಮಸಮ್ಯಕ್ತ್ವಶುದ್ಧತಪಶ್ಚರಣಾನ್ ।
ವಂದಿತ್ವಾ ಆಚಾರ್ಯಾನ್ ಕಷಾಯಮಲವರ್ಜಿತಾನ್ ಶುದ್ಧಾನ್ ॥೧॥

ಅಮಿತ ಶಾಸ್ತ್ರಾರ್ಥ ತಿಳಿವ ಸಂಯಮಸಮ್ಯಕ್ತ್ವ ಶುದ್ಧ ತಪವಾಚರಿಸುವ ।
ನಮಿಸಿ ಆಚಾರ್ಯದೇವರಿಗೆ ಕಷಾಯಮಲವಿವರ್ಜಿತ ವಿಶುದ್ಧರಿಗೆ ॥೧॥

ಆ ಸಕಲಜನ ಬೋಧನಾರ್ಥ ಜಿನಮಾರ್ಗದಲಿ ಜಿನವರ ಪೇಳಿದಂತೆ ।
ಉಸುರುವೆನು ಸಂಕ್ಷೇಪದಿಂ ಷಟ್ಕಾಯಸುಖಕರಕಥನ ತಾವ್ಕೇಳುವುದು ॥೨॥

೧ ಮುದ್ರಿತ ಸಟೀಕ ಸಂಸ್ಕೃತ ಪ್ರತಿಯಲ್ಲಿ 'ಛಕ್ಕಾಯಹಿಯಂಕರಂ' ಎಂಬ ಪಾಠವಿದೆ.

ಸಕಲಜನಬೋಧನಾರ್ಥಂ ಜಿನಮಾರ್ಗೇ ಜಿನವರೈಃ ಯಥಾ ಭಣಿತಮ್ ।
ವಕ್ಷ್ಯಾಮಿ ಸಮಾಸೇನ ಷಟ್‌ಕಾಯಸುಖಂಕರಂ ಶೃಣು ॥೨॥

ಅರ್ಥ ಃ- ನಾನು ಆಚಾರ್ಯರುಗಳಿಗೆ ನಮಸ್ಕಾರಮಾಡಿ, ಷಟ್‌ಕಾಯ ಜೀವಗಳಿಗೆ ಸುಖವನ್ನು ಮಾಡುವಂಥ ಜಿನಮಾರ್ಗದಲ್ಲಿ ಜಿನದೇವರು ಹೇಳಿರುವ ಹಾಗೆ, ಅದರಲ್ಲಿ ಸಮಸ್ತಲೋಕದ ಹಿತದ ಪ್ರಯೋಜನವೇ ಇರುವಂಥ ಗ್ರಂಥವನ್ನು ಸಂಕ್ಷೇಪದಿಂದ ಹೇಳುವೆನು, ಅದನ್ನು ಎಲೈ ಭವ್ಯ ಜೀವರುಗಳೇ ! ನೀವು ಕೇಳಿರೆಂದು ಆಚಾರ್ಯದೇವರು ಹೇಳುತ್ತಾರೆ. ಅವರು ಯಾವ ಆಚಾರ್ಯರುಗಳಿಗೆ ವಂದನೆ ಮಾಡಿದ್ದಾರೆ ಆ ಆಚಾರ್ಯರುಗಳು ಬಹಳಷ್ಟು ಶಾಸ್ತ್ರಗಳ ಅರ್ಥವನ್ನು ತಿಳಿಯುವಂಥವರಿದ್ದಾರೆ, ಅವರ ತಪಶ್ಚರಣವು ಸಮ್ಯಕ್ತ್ವ ಮತ್ತು ಸಂಯಮದಿಂದ ಶುದ್ಧವಿದೆ, ಅವರು ಕಷಾಯರೂಪದ ಮಲದಿಂದ ರಹಿತರಿರುವುದರಿಂದ ಶುದ್ಧರಿದ್ದಾರೆ.

ಭಾವಾರ್ಥ ಃ- ಇಲ್ಲಿ ಯಾವ ಆಚಾರ್ಯರಿಗೆ ವಂದನೆ ಮಾಡಿದೆ ಅವರು ಗಣಧರ ಮೊದಲಾದವರಿಂದ ಹಿಡಿದು ತಮ್ಮ ಗುರುಗಳವರೆಗೆ ಎಲ್ಲರಿಗೆ ವಂದನೆ ಮಾಡಿದೆಯೆಂಬುದು ಅವರುಗಳ ವಿಶೇಷಣಗಳಿಂದ ತಿಳಿದು ಬರುತ್ತದೆ. ಮತ್ತು ಗ್ರಂಥ ರಚಿಸುವ ಪ್ರತಿಜ್ಞೆ ಮಾಡಿದೆ ಅದು ಯಾವ ಬೋಧಪಾಹುಡ ಗ್ರಂಥದ ರಚನೆ ಮಾಡುವೆನು ಅದು ಜನರನ್ನು ಧರ್ಮಮಾರ್ಗದಲ್ಲಿ ಸಾವಧಾನ ಮಾಡಿ ಕುಮಾರ್ಗವನ್ನು ಬಿಡಿಸಿ ಅಹಿಂಸಾ ಧರ್ಮದ ಉಪದೇಶ ಮಾಡುವುದೆಂದು ಅದರ ವಿಶೇಷಣಗಳಿಂದ ತಿಳಿದು ಬರುತ್ತದೆ. ॥೧-೨॥

ಆಯದಣಂ ಚೇದಿಹರಂ ಜಿಣಪಡಿಮಾ ದಂಸಣಂ ಚ ಜಿಣಬಿಂಬಂ ।
ಭಣಿಯಂ ಸುವೀಯರಾಯಂ ಜಿಣಮುದ್ದಾ ಣಾಣಮಾದತ್ಥಂ ॥೩॥

ಅರಹಂತೇಣ ಸುದಿಟ್ಠಂ ಜಂ ದೇವಂ ತಿತ್ಥಮಿಹ ಯ ಅರಹಂತಂ ।
ಪಾವಜ್ಜಗುಣವಿಸುದ್ಧಾ ಇಯ ಣಾಯವ್ವಾ ಜಹಾಕಮಸೋ ॥೪॥

ಆಯತನಂ ಚೈತ್ಯಗೃಹಂ ಜಿನಪ್ರತಿಮಾ ದರ್ಶನಂ ಚ ಜಿನಬಿಂಬಮ್ ।
ಭಣಿತಂ ಸುವೀತರಾಗಂ ಜಿನಮುದ್ರಾ ಜ್ಞಾನಮಾತ್ಮಾರ್ಥಮ್[೧] ॥೩॥

ಅರ್ಹತಾ ಸುದೃಷ್ಟಂ ಯಃ ದೇವಃ ತೀರ್ಥಮಿಹ ಚ ಅರ್ಹನ್ ।
ಪ್ರವ್ರಜ್ಯಾ ಗುಣವಿಶುದ್ಧಾ ಇತಿ ಜ್ಞಾತವ್ಯಾಃ ಯಥಾಕ್ರಮಶಃ ॥೪॥

---

ಆಯತನ ಚೈತ್ಯಗೃಹ ಜಿನಪ್ರತಿಮೆ ದರ್ಶನಮದರಂತೆ ಜಿನಬಿಂಬ ।
ಪ್ರಯತ ಸುವೀತರಾಗ ಜಿನಮುದ್ರೆ ಆತ್ಮಾರ್ಥಜ್ಞಾನವೆಂದೇಳು ಪೇಳಿಹರು ॥೩।

ಅರಹಂತ ಭಗವಂತರು ಪೇಳ್ದದೇವ ಮೇಣ್ತೀರ್ಥ ಅರಹಂತಮದರಂತೆ ।
ಅರಿಯುವುದು ಗುಣವಿಶುದ್ಧಪ್ರವ್ರಜ್ಯಮನೀಗ್ರಂಥದಲಿ ಯಥಾಕ್ರಮದಿ ॥೪॥

---

೧ ಸಂಸ್ಕೃತ ಪ್ರತಿಯಲ್ಲಿ 'ಆತ್ಮಸ್ಥಂ' ಎಂಬ ಪಾಠಾಂತರವಿದೆ.

ಅರ್ಥ ಃ- ೧) ಆಯತನ, ೨) ಚೈತ್ಯಗೃಹ, ೩) ಜಿನಪ್ರತಿಮೆ, ೪)ದರ್ಶನ, ೫) ಜಿನಬಿಂಬ. ಆ ಜಿನಬಿಂಬವು ಒಳ್ಳೆಯ ಪ್ರಕಾರ ವೀತರಾಗವಿದೆ, ೬) ಜಿನಮುದ್ರೆಯು ರಾಗಸಹಿತವಾಗಿರುವುದಿಲ್ಲ, ೭) ಜ್ಞಾನ ಪದದಲ್ಲಿ ಆತ್ಮನೇ ಅರ್ಥ ಎಂದರೆ ಪ್ರಯೋಜನನಿದ್ದಾನೆ, ಹೀಗೆ ಇವು ಏಳಂತೂ ನಿಶ್ಚಯ, ವೀತರಾಗದೇವರು ಹೇಳಿರುವ ಹಾಗೆ ಯಥಾನುಕ್ರಮದಿಂದ ತಿಳಿಯುವುದು ಮತ್ತು ೮)ದೇವ, ೯) ತೀರ್ಥ, ೧೦)ಅರಹಂತ ಹಾಗೂ ಗುಣದಿಂದ ವಿಶುದ್ಧವಾದ ೧೧) ಪ್ರವ್ರಜ್ಯ ಇವು ನಾಲ್ಕು ಆ ಅರಹಂತ ಭಗವಂತರು ಹೇಳಿರುವ ಹಾಗೆ ಈ ಗ್ರಂಥದಲ್ಲಿ ತಿಳಿಯುವುದು, ಹೀಗೆ ಇವು ಹನ್ನೊಂದು ಸ್ಥಳಗಳಾದವು.

ಭಾವಾರ್ಥ ಃ- ಕಾಲದೋಷದಿಂದ ಧರ್ಮಮಾರ್ಗದಲ್ಲಿ ಅನೇಕ ಮತಗಳುಂಟಾಗಿವೆ ಮತ್ತು ಜಿನಮತದಲ್ಲೂ ಭೇದಗಳಾಗಿವೆ, ಅವುಗಳಲ್ಲಿ ಆಯತನ ಮೊದಲಾದುವಲ್ಲಿ ವಿಪರ್ಯಯವಾಗಿದೆ (ವಿಪರೀತತೆಯಾಗಿದೆ), ಅವುಗಳ ಪರಮಾರ್ಥಭೂತವಾದ ಸತ್ಯಸ್ವರೂಪವನ್ನಂತೂ ಜನರು ತಿಳಿಯುವುದಿಲ್ಲ ಮತ್ತು ಧರ್ಮದ ಲೋಭಿಗಳಾಗಿ ಕಂಡು ಬರುತ್ತಿರುವಂಥ ಬಾಹ್ಯಪ್ರವೃತ್ತಿಗಳಲ್ಲಿಯೇ ಪ್ರವರ್ತನೆಮಾಡಲಾರಂಭಿಸುತ್ತಾರೆ, ಅವರನ್ನು ಸಂಬೋಧಿಸುವ ಈ 'ಬೋಧಪಾಹುಡ'ವನ್ನು ರಚಿಸಲಾಗಿದೆ. ಇದರಲ್ಲಿ ಆಯತನ ಮೊದಲಾದ ಹನ್ನೊಂದು ಸ್ಥಾನಗಳ ಪರಮಾರ್ಥಭೂತವಾದ ಸತ್ಯಸ್ವರೂಪವನ್ನು ಸರ್ವಜ್ಞದೇವರು ಹೇಳಿರುವ ಹಾಗೆ ಹೇಳುವೆವು, ಅನುಕ್ರಮದಿಂದ ಹೇಗೆ ಹೆಸರುಗಳನ್ನು ಹೇಳಿದೆ ಹಾಗೆಯೇ ಅನುಕ್ರಮದಿಂದ ಇವುಗಳ ವ್ಯಾಖ್ಯಾನ ಮಾಡುವೆವು, ಅದು ತಿಳಿದುಕೊಳ್ಳಲು ಯೋಗ್ಯವಿದೆ. ||೩-೪||

೧) ಪ್ರಾರಂಭದಲ್ಲಿಯೇ ಆ ಆಯತನ ಹೇಳಿದೆ ಈಗ ಅದರ ನಿರೂಪಣೆ ಮಾಡುತ್ತಾರೆ, -

**ಮಣವಯಣಕಾಯದವ್ವಾ[೧]ಆಯತ್ತಾ ಜಸ್ಸ ಇಂದಿಯಾವಿಸಯಾ |**
**ಆಯದಣಂ ಜಿಣಮಗ್ಗೇ ಣಿದ್ದಿಟ್ಠಂ ಸಂಜಯಂ ರೂವಂ ||೫||**

**ಮನೋವಚನಕಾಯದ್ರವ್ಯಾಣಿ ಆಯತ್ತಾಃ ಯಸ್ಯ ಇಂದ್ರಿಯಾಃ ವಿಷಯಾಃ |**
**ಆಯತನಂ ಜಿನಮಾರ್ಗೇ ನಿದಿಷ್ಟಂ ಸಂಯತಂ ರೂಪಮ್ ||೫||**

ಅರ್ಥ ಃ- ಜಿನಮಾರ್ಗದಲ್ಲಿ ಸಂಯಮಸಹಿತ ಮುನಿರೂಪವಿದೆ ಅದನ್ನು 'ಆಯತನ'ವೆಂದು ಹೇಳಿದೆ. ಮನ-ವಚನ-ಕಾಯಗಳು ದ್ರವ್ಯರೂಪವಿದ್ದು ಅವು ಮುನಿರೂಪವಿವೆ, ಮತ್ತು ಸ್ಪರ್ಶ, ರಸ, ಗಂಧ, ವರ್ಣ, ಶಬ್ದ ಇವು ಪಂಚೇಂದ್ರಿಯಗಳ ವಿಷಯಗಳಿವೆ ಅವು ಮುನಿರೂಪವಿವೆ. 'ಅಯತ್ತಾ' ಎಂದರೆ ಆಧೀನವಿವೆ-ವಶೀಭೂತವಿವೆ. ಸಂಯಮೀ ಮುನಿಯು ಅವುಗಳ (ಮನ-ವಚನ-ಕಾಯ ಮತ್ತು ಪಂಚೇಂದ್ರಿಯ ವಿಷಯಗಳ) ಆಧೀನವಿಲ್ಲ. ಅವು ಮುನಿಯ ವಶೀಭೂತವಿರುವಂತೆ ಸಂಯಮಿಯಿದ್ದಾನೆ ಅವನು 'ಆಯತನ'ನಿದ್ದಾನೆ. ||೫||

ಮುಂದೆ ಮತ್ತೆ ಹೇಳುತ್ತಾರೆ,-

---

**ಆಯತ್ತವಿವೆ ಯಾವನಿಗೆ ಮನ-ವಚ-ಕಾಯ ಮೇಣಿಂದ್ರಿಯ ವಿಷಯಗಳು |**
**ಆಯತನವೆಂದಿದೆ ಸಂಯಮ ಸಹಿತ ಮುನಿರೂಪನು ಜಿನಮಾರ್ಗದಲಿ ||೫||**

---

೧ ಸಂಸ್ಕೃತ ಪ್ರತಿಯಲ್ಲಿ 'ಆಸತ್ತಾ' ಎಂಬ ಪಾಠವಿದೆ ಅದರ ಸಂಸ್ಕೃತವು 'ಆಸಕ್ತಾಃ' ಎಂದಿದೆ.

ಮಯರಾಯದೋಸ ಮೋಹೋ ಕೋಹೋ ಲೋಹೋ ಯ ಜಸ್ಸ ಆಯತ್ತಾ ।
ಪಂಚಮಹವ್ವಯಧಾರೀ ಆಯದಣಂ ಮಹರಿಸೀ ಭಣಿಯಂ ॥೬॥

ಮದಃ ರಾಗಃ ದ್ವೇಷಃ ಮೋಹಃಕ್ರೋಧಃ ಲೋಭಃ ಚ ಯಸ್ಯ ಆಯತ್ತಾಃ ।
ಪಂಚಮಹಾವ್ರತಧಾರೀ ಆಯತನಂ ಮಹರ್ಷಯೋ ಭಣಿತಾಃ ।.೬॥

ಅರ್ಥ ಃ- ಯಾವ ಮುನಿಗೆ ಮದ, ರಾಗ, ದ್ವೇಷ, ಮೋಹ, ಕ್ರೋಧ, ಲೋಭ ಮತ್ತು ಚಕಾರದಿಂದ ಮಾಯೆ ಮೊದಲಾದವುಗಳೆಲ್ಲವು 'ಆಯತ್ತಾ' ಎಂದರೆ ನಿಗ್ರಹಕ್ಕೆ ಪ್ರಾಪ್ತವಾಗಿ ಹೋಗಿವೆ ಮತ್ತು ಅಹಿಂಸೆ,ಸತ್ಯ, ಅಚೌರ್ಯ, ಬ್ರಹ್ಮಚರ್ಯ ಹಾಗೂ ಅಪರಿಗ್ರಹವೆಂಬ ಪಂಚ ಮಹಾವ್ರತಗಳ ಧಾರಕನಿರುವಂಥ ಮಹಾಮುನಿ ಋಷೀಶ್ವರನು 'ಆಯತನ'ನಿದ್ದಾನೆ.

ಭಾವಾರ್ಥ ಃ- ಮೊದಲನೆಯ ಗಾಥೆಯಲ್ಲಂತೂ ಬಾಹ್ಯದ ಸ್ವರೂಪ ಹೇಳಿತ್ತು. ಇಲ್ಲಿ ಬಾಹ್ಯ-ಅಭ್ಯಂತರವೆಂದು ಎರಡೂ ಪ್ರಕಾರದಿಂದ ಸಂಯಮಿಯಿರುವವನು 'ಆಯತನ'ನಿದ್ದಾನೆಂದು ತಿಳಿದುಕೊಳ್ಳಬೇಕು. ॥೬॥

ಮುಂದೆ ಮತ್ತೆ ಹೇಳುತ್ತಾರೆ,-

ಸಿದ್ಧಂ ಜಸ್ಸ ಸದತ್ಥಂ ವಿಸುದ್ಧಝಾಣಸ್ಸ ಣಾಣಜುತ್ತಸ್ಸ ।
ಸಿದ್ಧಾಯದಣಂ ಸಿದ್ಧಂ ಮುನಿವರವಸಹಸ್ಸ ಮುಣಿದತ್ಥಂ ॥೭॥

ಸಿದ್ಧಂ ಯಸ್ಯ ಸದರ್ಥಂ ವಿಶುದ್ಧ ಧ್ಯಾನಸ್ಯ ಜ್ಞಾನಯುಕ್ತಸ್ಯ ।
ಸಿದ್ಧಾಯತನಂ ಸಿದ್ಧಂ ಮುನಿವರವೃಷಭಸ್ಯ ಮುನಿತಾರ್ಥಮ್ ॥೭॥

ಅರ್ಥ ಃ- ಯಾವ ಮುನಿಯ ಸದರ್ಥ ಎಂದರೆ ಸಮೀಚೀನ ಅರ್ಥ ಯಾವ 'ಶುದ್ಧ ಆತ್ಮನು' ಸಿದ್ಧನಾಗಿಹೋಗಿರುವನು ಅವನು ಸಿದ್ಧಾಯತನನಿದ್ದಾನೆ. ಮುನಿಗೆ ವಿಶುದ್ಧ ಧ್ಯಾನವಿದೆ, ಅವನು ಧರ್ಮಧ್ಯಾನವನ್ನು ಸಾಧಿಸಿ ಶುಕ್ಲಧ್ಯಾನಕ್ಕೆ ಪ್ರಾಪ್ತನಾಗಿರುವನು ; ಜ್ಞಾನಸಹಿತನಿರುವನು, ಕೇವಲಜ್ಞಾನಕ್ಕೆ ಪ್ರಾಪ್ತನಾಗಿ ಹೋಗಿರುವನು. ಘಾತಿಕರ್ಮರೂಪದ ಮಲದಿಂದ ರಹಿತನಾಗಿರುವುದರಿಂದ ಮುನಿಗಳಲ್ಲಿ 'ವೃಷಭ' ಎಂದರೆ ಮುಖ್ಯನಿದ್ದಾನೆ, ಅವನು ಸಮಸ್ತ ಪದಾರ್ಥಗಳನ್ನು ತಿಳಿದುಕೊಂಡಿದ್ದಾನೆ. ಇಂಥ ಮುನಿಮುಖ್ಯನನ್ನು 'ಸಿದ್ಧಾಯತನ' ನೆಂದು ಹೇಳುತ್ತಾರೆ.

ಭಾವಾರ್ಥ ಃ- ಈ ಪ್ರಕಾರ ಮೂರು ಗಾಥೆಗಳಲ್ಲಿ 'ಆಯತನ'ದ ಸ್ವರೂಪ ಹೇಳಿತು. ಮೊದಲಿನ ಗಾಥೆಯಲ್ಲಂತೂ ಸಂಯಮಿ ಸಾಮಾನ್ಯನ ಬಾಹ್ಯರೂಪವನ್ನು ಮುಖ್ಯತೆಯಿಂದ ಹೇಳಲಾಯಿತು. ಎರಡನೆಯದರಲ್ಲಿ ಅಂತರಂಗ-

---

ಆಯತ್ತ ಯಾವನಿಗಿವೆ ಮದ-ರಾಗ-ದ್ವೇಷ-ಮೋಹ-ಕ್ರೋಧ-ಲೋಭ-ಮಾಯೆಗಳು ।
ಆಯತನವೆಂದಿದೆ ಪಂಚಮಹಾವ್ರತಧಾರಿಯಾಗಿರುವಾ ಮಹರ್ಷಿಯನು ॥೬॥

ಜ್ಞಾನಯುಕ್ತನಿಗೆ ವಿಶುದ್ಧಧ್ಯಾನಿಗೆ ಸದರ್ಥಸಿದ್ಧವಾಗಿರುವುದರಿಂದಾ ।
ಮುನಿವರ ವೃಷಭನನು ಮಲರಹಿತ ಸಿದ್ಧಾಯತನನೆಂದೆನ್ನುವರು ॥೭॥

ಬಾಹ್ಯವೆಂದು ಎರಡರ ಶುದ್ಧತಾರೂಪ ಋದ್ಧಿಧಾರಿ ಮುನಿ ಋಷೀಶ್ವರನೆಂದು ಹೇಳಲಾಯಿತು ಮತ್ತು ಈ ಮೂರನೆಯ ಗಾಥೆಯಲ್ಲಿಮುನಿಗಳೊಳಗೆ ಮುಖ್ಯನಾದ ಆ ಕೇವಲಜ್ಞಾನಿಯನ್ನು 'ಸಿದ್ಧಾಯತನ'ನೆಂದು ಹೇಳಿದೆ, ಇಲ್ಲಿ 'ಆಯತನ' ಎಂದರೆ ಯಾವುದರಲ್ಲಿ ವಾಸಿಸುವುದು, ನಿವಾಸ ಮಾಡುವುದು ಅದನ್ನು ಆಯತನವೆಂದು ಹೇಳಿರುವುದರಿಂದ ಧರ್ಮಪದ್ಧತಿಯಲ್ಲಿ ಆ ಧರ್ಮಾತ್ಮ ಪುರುಷನಿಗೆ ಆಶ್ರಯ ಮಾಡಲು ಯೋಗ್ಯವಿರುವುದು ಅದು 'ಧರ್ಮಾಯತನ'ವಿದೆ. ಈ ಪ್ರಕಾರ ಮುನಿಗಳೇ ಧರ್ಮದ ಆಯತನರಿದ್ದಾರೆ, ಬೇರೆ ಯಾವ ವೇಷಧಾರಿ, ಪಾಖಂಡಿ (ಕಪಟಿ), ವಿಷಯ-ಕಷಾಯಗಳಲ್ಲಿ ಆಸಕ್ತವಿರುವವರು, ಪರಿಗ್ರಹಧಾರಕರು ಧರ್ಮದ ಆಯತನರಿಲ್ಲ ಮತ್ತು ಜೈನಮತದಲ್ಲಿ ಕೂಡ ಸೂತ್ರವಿರುದ್ಧವಾಗಿ ಪ್ರವರ್ತಿಸುವವರು ಕೂಡ ಆಯತನರಿಲ್ಲ, ಅವರೆಲ್ಲರು 'ಅನಾಯತನ'ರಿದ್ದಾರೆ. ಬೌದ್ಧಮತದಲ್ಲಿ ಐದು ಇಂದ್ರಿಯ, ಅವುಗಳ ಐದು ವಿಷಯಗಳು, ಒಂದು ಮನಸ್ಸು, ಒಂದು ಧರ್ಮಾಯತನ ಶರೀರವೆಂದು ಹೀಗೆ ಹನ್ನೆರಡು ಆಯತನಗಳನ್ನು ಹೇಳಿದ್ದಾರೆ ಅವು ಕೂಡ ಕಾಲ್ಪನಿಕವಿವೆ. ಆದುದರಿಂದ ಇಲ್ಲಿ ಹೇಗೆ ಆಯತನ ಹೇಳಿದೆ ಹಾಗೆಯೇ ತಿಳಿಯಬೇಕು, ಧರ್ಮಾತ್ಮನಿಗೆ ಅದರದೇ ಆಶ್ರಯ ಮಾಡಬೇಕಾಗುವುದು, ಅನ್ಯರ ಸ್ತುತಿ, ಪ್ರಶಂಸೆ, ವಿನಯಾದಿಗಳನ್ನು ಮಾಡಬಾರದು, ಇದು ಬೋಧಪಾಹುಡ ಗ್ರಂಥ ರಚನೆಯ ಆಶಯವಿದೆ. ಎಲ್ಲಿ ಈ ಪ್ರಕಾರದ ನಿರ್ಗ್ರಂಥ ಮುನಿಗಳಿರುತ್ತಾರೆ ಆ ಕ್ಷೇತ್ರವನ್ನು ಕೂಡ 'ಆಯತನ'ವೆಂದು ಹೇಳುತ್ತಾರೆ ಅದು ವ್ಯವಹಾರವಿದೆ. ॥೭॥

೨) ಈಗ ಚೈತ್ಯಗೃಹದ ನಿರೂಪಣೆ ಮಾಡುತ್ತಾರೆ,-

ಬುದ್ಧಂ ಜಂ ಬೋಹಂತೋ ಅಪ್ಪಾಣಂ ಚೇದಯಾಇಂ ಅಣ್ಣಂ ಚ ।
ಪಂಚಮಹವ್ವಯಸುದ್ಧಂ ಣಾಣಮಯಂ ಜಾಣ ಚೇದಿಹರಂ ॥೮॥

ಬುದ್ಧಂ ಯತ್ ಬೋಧಯನ್ ಆತ್ಮಾನಂ ಚೈತ್ಯಾನಿ ಅನ್ಯತ್ ಚ ।
ಪಂಚಮಹಾವ್ರತಶುದ್ಧಂ ಜ್ಞಾನಮಯಂ ಜಾನೀಹಿ ಚೈತ್ಯಗೃಹಮ್ ॥೮॥

ಅರ್ಥ ః- ಯಾವ ಮುನಿಯು 'ಬುದ್ಧ' ಎಂದರೆ ಜ್ಞಾನಮಯವಾದ ಆತ್ಮನನ್ನು ತಿಳಿಯುವನು, ಅನ್ಯ ಜೀವರುಗಳನ್ನು 'ಚೈತ್ಯ' ಎಂದರೆ ಚೇತನಾಸ್ವರೂಪವಾಗಿ ತಿಳಿಯುವನು, ತಾನು ಜ್ಞಾನಮಯನಿರುವನು ಮತ್ತು ಐದು ಮಹಾವ್ರತಗಳಿಂದ ಶುದ್ಧನಿರುವನು, ನಿರ್ಮಲನಿರುವನು ಆ ಮುನಿಯನ್ನು ಎಲೈ ಭವ್ಯನೇ ! ನೀನು 'ಚೈತ್ಯಗೃಹ'ವೆಂದು ತಿಳಿದುಕೊಳ್ಳು.

ಭಾವಾರ್ಥ ః- ಯಾವುದರಲ್ಲಿ ತನ್ನನ್ನು ಮತ್ತು ಇತರರನ್ನು ತಿಳಿದುಕೊಳ್ಳುವಂಥ ಜ್ಞಾನೀ ನಿಷ್ಪಾಪ-ನಿರ್ಮಲ 'ಚೈತ್ಯ' ಎಂದರೆ ಚೇತನಾಸ್ವರೂಪನಾದ ಆತ್ಮನಿರುತ್ತಾನೆ ಅದು 'ಚೈತ್ಯಗೃಹ'ವಿದೆ. ಈ ಪ್ರಕಾರದ ಚೈತ್ಯಗೃಹನು ಸಂಯಮಿಯಾದ ಮುನಿಯಿದ್ದಾನೆ, ಅನ್ಯ ಪಾಷಾಣ ಮೊದಲಾದವುಗಳ ಮಂದಿರವನ್ನು 'ಚೈತ್ಯಗೃಹ'ವೆಂದು ಹೇಳುವುದು ಅದು ವ್ಯವಹಾರವಿದೆ. ॥೮॥

ಮುಂದೆ ಮತ್ತೆ ಹೇಳುತ್ತಾರೆ,-

---

ಜ್ಞಾನಮಯ ಆತ್ಮನನು ಮೇಣನ್ಯರನು ಚೇತನಸ್ವರೂಪರೆಂದರಿಯುವ ।
ಜ್ಞಾನಮೂರ್ತಿ ಪಂಚಮಹಾವ್ರತ ವಿಶುದ್ಧನನು ಚೈತ್ಯಗೃಹನೆಂದರಿವುದು ॥೮॥

ಚೇಇಯಂ ಬಂಧಂ ಮೋಕ್ಖಂ ದುಕ್ಖಂ ಸುಕ್ಖಂ ಚ ಅಪ್ಪಯಂ ತಸ್ಸ ।
ಚೇಇಹರಂ ಜಿಣಮಗ್ಗೇ ಛಕ್ಕಾಯಹಿಯಂಕರಂ ಭಣಿಯಂ ॥೯॥

ಚೈತ್ಯಂಬಂಧಂ ಮೋಕ್ಷಂ ದುಃಖಂ ಸುಖಂ ಚ ಆತ್ಮಕಂ ತಸ್ಯ ।
ಚೈತ್ಯಗೃಹಂ ಜಿನಮಾರ್ಗೇ ಷಡ್‌ಕಾಯಹಿತಂಕರಂ ಭಣಿತಂ ॥೯॥

ಅರ್ಥ ಃ- ಯಾವುದಕ್ಕೆ ಬಂಧ ಮತ್ತು ಮೋಕ್ಷ, ಸುಖ ಮತ್ತು ದುಃಖಗಳಿವೆ ಆ ಆತ್ಮನನ್ನು ಚೈತ್ಯವೆಂದು ಹೇಳುತ್ತಾರೆ ಎಂದರೆ ಈ ಚಿಹ್ನಗಳು ಯಾವುದರ ಸ್ವರೂಪದಲ್ಲಿವೆ ಅದನ್ನು 'ಚೈತ್ಯ'ವೆಂದು ಹೇಳುತ್ತಾರೆ, ಏಕೆಂದರೆ ಯಾವುದು ಚೇತನಾಸ್ವರೂಪವಿದೆ ಅದಕ್ಕೇ ಬಂಧ, ಮೋಕ್ಷ, ಸುಖ, ದುಃಖಗಳು ಸಂಭವವಿವೆ. ಈ ಪ್ರಕಾರ ಚೈತ್ಯದ ಯಾವ ಗೃಹವಿದೆ ಅದು 'ಚೈತ್ಯಗೃಹ'ವಿದೆ. ಜಿನಮಾರ್ಗದಲ್ಲಿ ಈ ಪ್ರಕಾರ ಚೈತ್ಯಗೃಹನು ಷಟ್‌ಕಾಯಗಳ ಹಿತಮಾಡುವಂಥವನಿರುತ್ತಾನೆ ಅವನು ಈ ಪ್ರಕಾರದ 'ಮುನಿ'ಯಿದ್ದಾನೆ. ಐದು ಸ್ಥಾವರಗಳು ಮತ್ತು ತ್ರಸದಲ್ಲಿ ವಿಕಲತ್ರಯ ಹಾಗೂ ಅಸಂಜ್ಞೀ ಪಂಚೇಂದ್ರಿಯಗಳವರೆಗೆ ಕೇವಲ ರಕ್ಷಣೆಯನ್ನೇ ಮಾಡಲು ಯೋಗ್ಯವಿರುವುದರಿಂದ ಅವುಗಳ ರಕ್ಷಣೆ ಮಾಡುವ ಉಪದೇಶ ಮಾಡುತ್ತಾನೆ ಮತ್ತು ಸ್ವಯಂ ಅವುಗಳ ಘಾತ ಮಾಡುವುದಿಲ್ಲ ಇದೇ ಅವುಗಳ ಹಿತವಿದೆ ಮತ್ತು ಸಂಜ್ಞೀ ಪಂಚೇಂದ್ರಿಯ ಜೀವಗಳ ರಕ್ಷಣೆಯನ್ನೂ ಮಾಡುತ್ತಾನೆ, ರಕ್ಷಣೆಯ ಉಪದೇಶವನ್ನೂ ಮಾಡುತ್ತಾನೆ ಮತ್ತು ಅವಕ್ಕೆ ಸಂಸಾರದಿಂದ ನಿವೃತ್ತಿರೂಪವಾದ ಮೋಕ್ಷ ಪ್ರಾಪ್ತಮಾಡಿಕೊಳ್ಳುವ ಉಪದೇಶ ಮಾಡುತ್ತಾರೆ. ಇಂಥ ಮುನಿರಾಜರನ್ನು 'ಚೈತ್ಯಗೃಹ'ವೆಂದು ಹೇಳುತ್ತಾರೆ.

ಭಾವಾರ್ಥ ಃ- ಲೌಕಿಕ ಜನರು ಚೈತ್ಯಗೃಹದ ಸ್ವರೂಪವನ್ನು ಅನ್ಯಥಾ ಅನೇಕ ಪ್ರಕಾರದಿಂದ ಮನ್ನಿಸುತ್ತಾರೆ. ಆದರೆ ಜಿನಸೂತ್ರದಲ್ಲಿ ಷಟ್‌ಕಾಯಗಳ ಹಿತಮಾಡುವಂಥ ಜ್ಞಾನಮಯನಾದ ಸಂಯಮಿ ಮುನಿಯಿದ್ದಾನೆ ಅವನು 'ಚೈತ್ಯಗೃಹ'ನಿದ್ದಾನೆ; ಅನ್ಯರನ್ನು ಚೈತ್ಯಗೃಹವೆಂದು ಹೇಳುವುದು ಮನ್ನಿಸುವುದು ವ್ಯವಹಾರವಿದೆಯೆಂದು ಹೇಳಿ ಅವರನ್ನು ಸಾವಧಾನ ಮಾಡಿದೆ. ಈ ಪ್ರಕಾರ ಚೈತ್ಯಗೃಹದ ಸ್ವರೂಪವನ್ನು ಹೇಳಲಾಯಿತು. ॥೯॥

೩) ಈಗ ಜಿನಪ್ರತಿಮೆಯ ನಿರೂಪಣೆ ಮಾಡುತ್ತಾರೆ,-

ಸಪರಾ ಜಂಗಮದೇಹಾ ದಂಸಣಣಾಣೇಣ ಸುದ್ಧ ಚರಣಾಣಂ ।
ಣಿಗ್ಗಂಥವೀಯರಾಯಾ ಜಿಣಮಗ್ಗೇ ಏರಿಸಾ ಪಡಿಮಾ ॥೧೦॥

ಸ್ವಪರಾ ಜಂಗಮದೇಹಾ ದರ್ಶನಜ್ಞಾನೇನ ಶುದ್ಧಚರಣಾನಾಮ್ ।
ನಿರ್ಗ್ರಂಥವೀತರಾಗಾ ಜಿನಮಾರ್ಗೇ ಈದೃಶೀ ಪ್ರತಿಮಾ ॥೧೦॥

---

ಚೈತ್ಯವೆನ್ನುವರು ಬಂಧ ಮೋಕ್ಷ ಮೇಣ್ಸುಖದುಃಖಗಳಿರುವಂಥ ಆತ್ಮನನು ।
ಚೈತ್ಯಗೃಹವೆನ್ನುವರು ಜಿನಮಾರ್ಗದಲವನು ಷಟ್ಕಾಯಹಿತಮಾಳ್ಪನು ॥೯॥

ಚಾರಿತ್ರದರ್ಶನಜ್ಞಾನದಿಂ ಶುದ್ಧವಿದ್ದವರ ಸ್ವ-ಪರ ಜಂಗಮದೇಹವು ।
ನಿರಗ್ರಂಥ ವೀತರಾಗವಿರ್ಪುದದು ಜಿನಮಾರ್ಗದೊಳಗೆ ಪ್ರತಿಮೆಯಿದೆ ॥೧೦॥

ಅರ್ಥ ಃ- ಯಾರ ಚಾರಿತ್ರವು ದರ್ಶನ-ಜ್ಞಾನದಿಂದ ಶುದ್ಧ-ನಿರ್ಮಲವಿದೆ ಅವರದು ಸ್ವ-ಪರ ಎಂದರೆ ತಮ್ಮ ಮತ್ತು ಪರರ ನಡೆಯುತ್ತಿರುವ ದೇಹವಿದೆ ಅದು ಜಿನಮಾರ್ಗದಲ್ಲಿ 'ಜಂಗಮ ಪ್ರತಿಮೆ'ಯಿದೆ, ಅಥವಾ ಸ್ವಪರ ಎಂದರೆ ಆತ್ಮನಿಂದ 'ಪರ' ಎಂದರೆ ಭಿನ್ನವಿರುವಂಥ ದೇಹವಿದೆ. ಅದು ನಿರ್ಗ್ರಂಥ ಸ್ವರೂಪವಿದೆ, ಸ್ವಲ್ಪ ಕೂಡ ಪರಿಗ್ರಹದ ಲೇಶವೂ ಇಲ್ಲದಂಥ ದಿಗಂಬರ ಮುದ್ರೆಯಿದೆ. ಅದು ವೀತರಾಗ ಸ್ವರೂಪವಿದೆ, ಯಾವ ವಸ್ತುವಿನಲ್ಲಿ ರಾಗ-ದ್ವೇಷ-ಮೋಹಗಳಿಲ್ಲ, ಜಿನಮಾರ್ಗದಲ್ಲಿ ಇಂಥ 'ಪ್ರತಿಮೆ' ಹೇಳಿದೆ. ಅದರ ದರ್ಶನ ಜ್ಞಾನದಿಂದ ನಿರ್ಮಲ ಚಾರಿತ್ರವು ಕಂಡುಬರುತ್ತದೆ, ಈ ಪ್ರಕಾರ ಮುನಿಗಳ ಗುರು-ಶಿಷ್ಯ ಅಪೇಕ್ಷೆಯಿಂದ ತಮ್ಮ ಹಾಗೂ ಪರರ ಚಲಿಸುತ್ತಿರುವ ದೇಹವು ನಿರ್ಗ್ರಂಥ ವೀತರಾಗಮುದ್ರಾಸ್ವರೂಪವಿದೆ, ಅದು ಜಿನಮಾರ್ಗದಲ್ಲಿ 'ಪ್ರತಿಮೆ'ಯಿದೆ, ಅನ್ಯ ಕಲ್ಪಿತವಿದೆ, ಮತ್ತು ಧಾತು-ಪಾಷಾಣ ಮೊದಲಾದವುಗಳಿಂದ ರಚಿಸಲಾದ ದಿಗಂಬರ ಮುದ್ರಾಸ್ವರೂಪವನ್ನು 'ಪ್ರತಿಮೆ'ಯೆಂದು ಹೇಳುತ್ತಾರೆ ಅದು ವ್ಯವಹಾರವಿದೆ. ಅದೂ ಬಾಹ್ಯ ಆಕೃತಿಯಂತೂ ಹಾಗೆಯೇ ಇದ್ದರೆ ಅದು ವ್ಯವಹಾರದಲ್ಲಿ ಮಾನ್ಯವಿದೆ. ||೧೦||

ಮುಂದೆ ಮತ್ತೆ ಹೇಳುತ್ತಾರೆ, -

**ಜಂ ಚರದಿ ಸುದ್ಧಚರಣಂ ಜಾಣಇ ಪಿಚ್ಛೇಇ ಸುದ್ಧಸಮ್ಮತ್ತಂ ।**
**ಸಾ ಹೋಈ ವಂದಣೀಯಾ ಣಿಗ್ಗಂಥಾ ಸಂಜದಾ ಪಡಿಮಾ ||೧೧||**

**ಯಃ ಚರತಿ ಶುದ್ಧ ಚರಣಂ ಜಾನಾತಿ ಪಶ್ಯತಿ ಶುದ್ಧ ಸಮ್ಯಕ್ತ್ವಮ್ ।**
**ಸಾ ಭವತಿ ವಂದನೀಯಾ ನಿರ್ಗ್ರಂಥಾ ಸಂಯತಾ ಪ್ರತಿಮಾ ||೧೧||**

ಅರ್ಥ ಃ- ಯಾರು ಶುದ್ಧ ಆಚರಣದ ಆಚರಣೆ ಮಾಡುತ್ತಾರೆ ಮತ್ತು ಸಮ್ಯಗ್ಜ್ಞಾನದಿಂದ ಯಥಾರ್ಥ ವಸ್ತುವನ್ನು ತಿಳಿಯುತ್ತಾರೆ ಹಾಗೂ ಸಮ್ಯಗ್ದರ್ಶನದಿಂದ ತಮ್ಮ ಸ್ವರೂಪವನ್ನು ನೋಡುತ್ತಾರೆ. ಈ ಪ್ರಕಾರ ಶುದ್ಧಸಮ್ಯಕ್ತ್ವವು ಕಂಡು ಬರುವಂಥ ನಿರ್ಗ್ರಂಥ ಸಂಯಮ ಸ್ವರೂಪವಾದ ಪ್ರತಿಮೆಯಿದೆ ಅದು ವಂದನೆಮಾಡಲು ಯೋಗ್ಯವಿದೆ.

ಭಾವಾರ್ಥ ಃ- ತಿಳಿಯುವಂಥ, ನೋಡುವಂಥ ಶುದ್ಧಸಮ್ಯಕ್ತ್ವ, ಶುದ್ಧಚಾರಿತ್ರಸ್ವರೂಪ ನಿರ್ಗ್ರಂಥ ಸಂಯಮಸಹಿತವಾಗಿರುವುದು ಅದು ಮುನಿಯ ಸ್ವರೂಪವಿದೆ ಅದೇ 'ಪ್ರತಿಮೆ'ಯಿದೆ, ಅದೇ ವಂದನೆ ಮಾಡಲು ಯೋಗ್ಯವಿದೆ; ಅನ್ಯ ಕಲ್ಪಿತಗಳು ವಂದನೆ ಮಾಡಲು ಯೋಗ್ಯವಿಲ್ಲ ಮತ್ತು ಅಂಥದೇ ರೂಪ ಸದೃಶವಾದ ಧಾತುಪಾಷಾಣದ ಪ್ರತಿಮೆಯಿದ್ದರೆ ಅದು ವ್ಯವಹಾರದಿಂದ ವಂದನೆಗೆ ಯೋಗ್ಯವಿದೆ. ||೧೧||

ಮುಂದೆ ಮತ್ತೆ ಹೇಳುತ್ತಾರೆ, -

---

**ಯಾರು ಶುದ್ಧಾಚರಣವಾಚರಿಸಿ ಶುದ್ಧಸಮ್ಯಕ್ತ್ವದಿಂ ತಿಳಿವರು-ನೋಳ್ಪರು ।**
**ಈ ರೀತಿ ನಿರ್ಗ್ರಂಥ ಸಂಯಮಸ್ವರೂಪದ ಪ್ರತಿಮೆಯದು ವಂದನೀಯವಿದೆ ||೧೧||**

ದಂಸಣಅಣಂತಣಾಣಂ ಅಣಂತವೀರಿಯ ಅಣಂತಸುಕ್ಖಾ ಯ ।
ಸಾಸಯಸುಕ್ಖ ಅದೇಹಾ ಮುಕ್ಕಾ ಕಮ್ಮಟ್ಠಬಂಧೇಹಿಂ ॥೧೨॥

ನಿರುವಮಮಚಲಮಖೋಹಾ ಣಿಮ್ಮಿವಿಯಾ ಜಂಗಮೇಣ ರೂವೇಣ ।
ಸಿದ್ಧಟ್ಠಾಣಮ್ಮಿ ಠಿಯಾ ವೋಸರಪಡಿಮಾ ಧುವಾ ಸಿದ್ಧಾ ॥೧೩॥

ದರ್ಶನಾನಂತಜ್ಞಾನಂ ಅನಂತವೀರ್ಯಾಃ ಅನಂತಸುಖಾಃ ಚ ।
ಶಾಶ್ವತಸುಖಾ ಅದೇಹಾ ಮುಕ್ತಾಃ ಕರ್ಮಾಷ್ಟಕಬಂಧೈಃ ॥೧೨॥

ನಿರುಪಮಾ ಅಚಲಾ ಅಕ್ಷೋಭಾಃ ನಿರ್ಮಾಪಿತಾ ಜಂಗಮೇನ ರೂಪೇಣ ।
ಸಿದ್ಧಸ್ಥಾನೇ ಸ್ಥಿತಾಃ ವ್ಯುತ್ಸರ್ಗಪ್ರತಿಮಾ ಧ್ರುವಾಃ ಸಿದ್ಧಾಃ ॥೧೩॥

ಅರ್ಥ ಃ- ಯಾರು ಅನಂತದರ್ಶನ, ಅನಂತಜ್ಞಾನ, ಅನಂತವೀರ್ಯ ಮತ್ತು ಅನಂತಸುಖ ಸಹಿತರಿದ್ದಾರೆ; ಶಾಶ್ವತ ಅವಿನಾಶೀ ಸುಖಸ್ವರೂಪರಿದ್ದಾರೆ ; ಅದೇಹರಿದ್ದಾರೆ, ಅವರಿಗೆ ಕರ್ಮನೋಕರ್ಮರೂಪದ ಪುದ್ಗಲಮಯವಾದ ದೇಹವಿಲ್ಲ; ಅಷ್ಟಕರ್ಮಗಳ ಬಂಧನದಿಂದ ರಹಿತರಿದ್ದಾರೆ ; ಉಪಮಾರಹಿತರಿದ್ದಾರೆ ಎಂದರೆ ಅವರಿಗೆ ಉಪಮೆ ಕೊಡುವಂಥ ವಸ್ತುವು ಲೋಕದಲ್ಲಿಲ್ಲ; ಅಚಲರಿದ್ದಾರೆ, ಅವರಿಗೆ ಪ್ರದೇಶಗಳ ಚಲನೆಯಿಲ್ಲ; ಅಕ್ಷೋಭರಿದ್ದಾರೆ, ಅವರ ಉಪಯೋಗದಲ್ಲಿ ಯಾವ ಕ್ಷೋಭವಿಲ್ಲ, ನಿಶ್ಚಲರಿದ್ದಾರೆ ; ಜಂಗಮರೂಪದಿಂದ ನಿರ್ಮಿತರಿದ್ದಾರೆ, ಕರ್ಮದಿಂದ ನಿರ್ಮುಕ್ತರಾದ ನಂತರ ಒಂದು ಸಮಯಮಾತ್ರ ಗಮನರೂಪರಾಗುವುದರಿಂದ ಜಂಗಮರೂಪದಿಂದ ನಿರ್ಮಾಪಿತರಿದ್ದಾರೆ ; ಸಿದ್ಧಸ್ಥಾನ ಆ ಲೋಕದ ಅಗ್ರಭಾಗದಲ್ಲಿ ಸ್ಥಿರರಿದ್ದಾರೆ ; ಆದುದರಿಂದ ಉತ್ಸರ್ಗ ಎಂದರೆ ಕಾಯರಹಿತರಿದ್ದಾರೆ, ಹೇಗೆ ಪೂರ್ವಶರೀರದಲ್ಲಿ ಆಕಾರವಿತ್ತು ಹಾಗೆಯೇ ಪ್ರದೇಶಗಳ ಆಕಾರವು ಚರಮಶರೀರಕ್ಕಿಂತ ಸ್ವಲ್ಪ ಕಡಿಮೆಯಿದೆ ; ಧ್ರುವರಿದ್ದಾರೆ, ಸಂಸಾರದಿಂದ ಮುಕ್ತವಾಗಿ (ಅದೇ ಸಮಯ) ಒಂದು ಸಮಯ ಮಾತ್ರ ಗಮನಮಾಡಿ ಲೋಕದ ಅಗ್ರಭಾಗದಲ್ಲಿ ಸ್ಥಿರರಾಗಿ ಬಿಡುತ್ತಾರೆ ; ಪುನಃ ಚಂಚಲರಾಗುವುದಿಲ್ಲ, ಇಂಥ ಪ್ರತಿಮೆಯು 'ಸಿದ್ಧಭಗವಂತರ'ದಿದೆ.

ಭಾವಾರ್ಥ ಃ- ಮೊದಲು ಎರಡು ಗಾಥೆಗಳಲ್ಲಂತೂ ಸಂಯಮೀ ಮುನಿಗಳ ದೇಹಸಹಿತ ಜಂಗಮ ಪ್ರತಿಮೆಯನ್ನು ಹೇಳಿದೆ. ಇವೆರಡು ಗಾಥೆಗಳಲ್ಲಿ ಸಿದ್ಧರ 'ಸ್ಥಿರಪ್ರತಿಮೆ' ಹೇಳಿದೆ, ಈ ಪ್ರಕಾರ ಜಂಗಮ ಸ್ಥಾವರ ಪ್ರತಿಮೆಯ ಸ್ವರೂಪವನ್ನು ಹೇಳಲಾಯಿತು. ಅನ್ಯ ಕೆಲವರು ಅನ್ಯಥಾ ಅನೇಕ ಪ್ರಕಾರದಿಂದ ಕಲ್ಪನೆ ಮಾಡುತ್ತಾರೆ ಆ ಪ್ರತಿಮೆಗಳು ವಂದನೆ ಮಾಡಲು ಯೋಗ್ಯವಿಲ್ಲ.

---

ಯಾರಿಗೆ ಅನಂತದರ್ಶನ-ಜ್ಞಾನ ಮೇಣನಂತವೀರ್ಯ ಅನಂತಸುಖವಿದೆ ।
ಸ್ಥಿರಸುಖಿ ಅಶರೀರಿಯುಂ ಮತ್ತೆ ಕರ್ಮಾಷ್ಟಬಂಧವಿಮುಕ್ತರಾಗಿರುವರು ॥೧೨॥
ನಿರುಪಮ ಅಚಲ ಅಕ್ಷೋಭ ಮೇಣ್ಜಂಗಮರೂಪದಿಂ ನಿರ್ಮಾಪಿತರಿದ್ದು ।
ಸ್ಥಿರವಿರುವ ಸಿದ್ಧಸ್ಥಾನದಲಾ ಸಿದ್ಧರನು ವ್ಯುತ್ಸರ್ಗ ಪ್ರತಿಮೆಯೆಂದರಿ ॥೧೩॥

ಪ್ರಶ್ನೆ ಃ- ಇದಂತೂ ಪರಮಾರ್ಥ ಸ್ವರೂಪವನ್ನು ಹೇಳಿದೆ ಮತ್ತು ಬಾಹ್ಯ ವ್ಯವಹಾರದಲ್ಲಿ ಪಾಷಾಣಾದಿಗಳ ಪ್ರತಿಮೆಯ ವಂದನೆ ಮಾಡುತ್ತಾರೆ ಅದು ಹೇಗೆ ?

ಉತ್ತರ ಃ- ಆ ಬಾಹ್ಯ ವ್ಯವಹಾರದಲ್ಲಿ ಮತಾಂತರದ ಭೇದದಿಂದ ಅನೇಕ ರೀತಿಯಾಗಿ ಪ್ರತಿಮೆಯ ಪ್ರವೃತ್ತಿಯಿದೆ, ಇಲ್ಲಿ ಪರಮಾರ್ಥವನ್ನು ಮುಖ್ಯಮಾಡಿ ಹೇಳಿದೆ ಮತ್ತು ವ್ಯವಹಾರವಿದೆ ಅಲ್ಲಿ ಹೇಗೆ ಪ್ರತಿಮೆಯ ಪರಮಾರ್ಥ ರೂಪವಿದೆ ಅದನ್ನೇ ಸೂಚಿತ ಮಾಡುತ್ತಿದ್ದರೆ ಅದು ನಿರ್ಬಾಧವಿದೆ. ಹೇಗೆ ಪರಮಾರ್ಥರೂಪ ಆಕಾರ ಹೇಳಿದೆ ಹಾಗೆಯೇ ಆಕಾರರೂಪ ವ್ಯವಹಾರವಿದ್ದರೆ ಆ ವ್ಯವಹಾರವೂ ಪ್ರಶಸ್ತವಿದೆ ; ವ್ಯವಹಾರೀ ಜೀವರುಗಳಿಗೆ ಇದುಕೂಡ ವಂದನೆ ಮಾಡಲು ಯೋಗ್ಯವಿದೆ. ಸ್ಯಾದ್ವಾದ ನ್ಯಾಯದಿಂದ ಸಿದ್ಧಮಾಡಲಾದ ಪರಮಾರ್ಥ ಮತ್ತು ವ್ಯವಹಾರದಲ್ಲಿ ವಿರೋಧವಿಲ್ಲ. ||೧೨-೧೩||

ಈ ಪ್ರಕಾರ ಜಿನಪ್ರತಿಮೆಯ ಸ್ವರೂಪ ಹೇಳಲಾಯಿತು.

೪) ಈಗ ದರ್ಶನದ ಸ್ವರೂಪವನ್ನು ಹೇಳುತ್ತಾರೆ, -

**ದಂಸೇಇ ಮೋಕ್ಖಮಗ್ಗಂ ಸಮ್ಮತ್ತಂ ಸಂಜಮಂ ಸುಧಮ್ಮಂ ಚ |**
**ಣಿಗ್ಗಂಥಂ ಣಾಣಮಯಂ ಜಿಣಮಗ್ಗೇ ದಂಸಣಂ ಭಣಿಯಂ ||೧೪||**

**ದರ್ಶಯತಿ ಮೋಕ್ಷಮಾರ್ಗಂ ಸಮ್ಯಕ್ತ್ವಂ ಸಂಯಮಂ ಸುಧರ್ಮಂ ಚ |**
**ನಿರ್ಗ್ರಂಥಂ ಜ್ಞಾನಮಯಂ ಜಿನಮಾರ್ಗೇ ದರ್ಶನಂ ಭಣಿತಮ್ ||೧೪||**

ಅರ್ಥ ಃ- ಯಾವುದು ಮೋಕ್ಷಮಾರ್ಗವನ್ನು ತೋರಿಸಿಕೊಡುತ್ತದೆ ಅದು 'ದರ್ಶನ'ವಿದೆ ಮೋಕ್ಷ ಮಾರ್ಗವು ಅದು ಸಮ್ಯಕ್ತ್ವ ಎಂದರೆ ತತ್ತ್ವಾರ್ಥಶ್ರದ್ಧಾನಲಕ್ಷಣದ ಸಮ್ಯಕ್ತ್ವ ಸ್ವರೂಪವಿದೆ, ಸಂಯಮ ಎಂದರೆ ಚಾರಿತ್ರವು ಐದು ಮಹಾವ್ರತ, ಐದು ಸಮಿತಿ, ಮೂರು ಗುಪ್ತಿ ಹೀಗೆ ಹದಿಮೂರು ಪ್ರಕಾರ ಚಾರಿತ್ರ ರೂಪವಿದೆ, ಸುಧರ್ಮ ಎಂದರೆ ಉತ್ತಮ-ಕ್ಷಮೆ ಮೊದಲಾದ ದಶಲಕ್ಷಣ ಧರ್ಮರೂಪವಿದೆ, ನಿರ್ಗ್ರಂಥರೂಪವಿದೆ ಅದು ಬಾಹ್ಯಾಭ್ಯಂತರ ಪರಿಗ್ರಹ ರಹಿತವಿದೆ, ಜ್ಞಾನಮಯವಿದೆ ಅದು ಜೀವ-ಅಜೀವ ಮೊದಲಾದ ಪದಾರ್ಥಗಳನ್ನು ತಿಳಿಯುವಂಥದ್ದಿದೆ. ಇಲ್ಲಿ 'ನಿರ್ಗ್ರಂಥ' ಮತ್ತು 'ಜ್ಞಾನಮಯಿ' ಇವೆರಡು ವಿಶೇಷಣಗಳು ದರ್ಶನಕ್ಕೂ ಇರುತ್ತವೆ, ಏಕೆಂದರೆ ದರ್ಶನವಿದೆ ಅದು ಬಾಹ್ಯದಲ್ಲಂತೂ ಇದರ ಮೂರ್ತಿ ನಿರ್ಗ್ರಂಥವಿದೆ ಮತ್ತು ಅಂತರಂಗವು ಜ್ಞಾನಮಯವಿದೆ. ಈ ಪ್ರಕಾರ ಮುನಿಯ ರೂಪವನ್ನು ಜಿನಮಾರ್ಗದಲ್ಲಿ 'ದರ್ಶನ'ವೆಂದು ಹೇಳಿದೆ ಮತ್ತು ಈ ಪ್ರಕಾರದ ರೂಪದ ಶ್ರದ್ಧಾರೂಪ ಸಮ್ಯಕ್ತ್ವ ಸ್ವರೂಪವನ್ನು 'ದರ್ಶನ'ವೆಂದು ಹೇಳುತ್ತಾರೆ.

ಭಾವಾರ್ಥ ಃ- ಪರಮಾರ್ಥರೂಪವಾದ 'ಅಂತರಂಗ ದರ್ಶನ'ವಂತೂ ಸಮ್ಯಕ್ತ್ವವಿದೆ. ಮತ್ತು 'ಬಾಹ್ಯ' ಅದರ ಮೂರ್ತಿಯು ಜ್ಞಾನಸಹಿತವಾಗಿ ಗ್ರಹಣ ಮಾಡಿದ ನಿರ್ಗ್ರಂಥರೂಪವು ಈ ಪ್ರಕಾರ ಮುನಿಯ ರೂಪವಿದೆ

---

**ತೋರಿಸುವುದು ಮೋಕ್ಷಮಾರ್ಗವನು ಸಮ್ಯಕ್ತ್ವ ಸಂಯಮ ಸುಧರ್ಮ ಅದರಂತೆ |**
**ನಿರಗ್ರಂಥ ಜ್ಞಾನಮಯಮದನು ಜಿನಮಾರ್ಗದಲಿ ದರ್ಶನವೆನ್ನುವರು ||೧೪||**

ಅದು 'ದರ್ಶನ'ವಿದೆ, ಏಕೆಂದರೆ ಮತದ ಮೂರ್ತಿಯನ್ನು ದರ್ಶನವೆಂದು ಹೇಳುವುದು ಲೋಕದಲ್ಲಿ ಪ್ರಸಿದ್ಧವಿದೆ. ||೧೪||

ಮುಂದೆ ಮತ್ತೆ ಹೇಳುತ್ತಾರೆ, –

ಜಹ ಫುಲ್ಲಂ ಗಂಧಮಯಂ ಭವದಿ ಹು ಖೀರಂ ಸ ಘಿಯಮಯಂ ಚಾವಿ ।
ತಹ ದಂಸಣಂ ಹಿ ಸಮ್ಮಂ ಣಾಣಮಯಂ ಹೋಇ ರೂವತ್ಥಂ ||೧೫||

ಯಥಾ ಪುಷ್ಪಂ ಗಂಧಮಯಂ ಭವತಿ ಸ್ಫುಟಂ ಕ್ಷೀರಂ ತತ್ ಘೃತಮಯಂ ಚಾಪಿ ।
ತಥಾ ದರ್ಶನಂ ಹಿ ಸಮ್ಯಕ್ ಜ್ಞಾನಮಯಂ ಭವತಿ ರೂಪಸ್ಥಮ್ ||೧೫||

ಅರ್ಥ :– ಯಾವ ಪ್ರಕಾರ ಪುಷ್ಪವು ಗಂಧಮಯವಿದೆ, ಹಾಲು ಘೃತಮಯವಿದೆ ಅದೇ ಪ್ರಕಾರ ದರ್ಶನ ಎಂದರೆ ಮತದಲ್ಲಿ ಸಮ್ಯಕ್ತ್ವವಿದೆ. ಆ ದರ್ಶನದ ಅಂತರಂಗವಂತೂ ಜ್ಞಾನಮಯವಿದೆ ಮತ್ತು ಬಾಹ್ಯರೂಪಸ್ಥವಿದೆ– ಮುನಿಯ ರೂಪವಿದೆ ಅದರಂತೆ ಉತ್ಕೃಷ್ಟ ಶ್ರಾವಕ, ಆರ್ಯಿಕೆಯ ರೂಪವಿದೆ.

ಭಾವಾರ್ಥ :– 'ದರ್ಶನ' ನಾಮವು ಮತದ್ದಿದೆಯೆಂಬುದು ಪ್ರಸಿದ್ಧವಿದೆ. ಇಲ್ಲಿ ಜೈನದರ್ಶನದಲ್ಲಿ ಮುನಿ, ಶ್ರಾವಕ ಮತ್ತು ಆರ್ಯಿಕೆಯದಂಥ ಬಾಹ್ಯವೇಷ ಹೇಳಿದೆ ಅದನ್ನು 'ದರ್ಶನ'ವೆಂದು ತಿಳಿಯುವುದು ಮತ್ತು ಇದರ ಶ್ರದ್ಧೆಯನ್ನು 'ಅಂತರಂಗದರ್ಶನ'ವೆಂದು ತಿಳಿಯುವುದು ಇವೆರಡೂ ಜ್ಞಾನಮಯವಿದ್ದು, ಯಥಾರ್ಥ ತತ್ತ್ವಾರ್ಥವನ್ನು ತಿಳಿಯುವ ರೂಪದ ಸಮ್ಯಕ್ತ್ವವು ಅದರಲ್ಲಿ ಕಂಡು ಬರುತ್ತದೆ, ಆದುದರಿಂದ ಪುಷ್ಪದಲ್ಲಿ ಗಂಧದ ಮತ್ತು ಹಾಲಿನಲ್ಲಿ ಘೃತದ ದೃಷ್ಟಾಂತವು ಯುಕ್ತವಿದೆ, ಈ ಪ್ರಕಾರ ದರ್ಶನವು ರೂಪು ಹೇಳಲಾಗಿದೆ. ಅನ್ಯಮತದಲ್ಲಿ ಹಾಗೂ ಕಾಲದೋಷದಿಂದ ಜಿನಮತದಲ್ಲಿ ಜೈನಾಭಾಸದ ವೇಷಧಾರಿಗಳು ಅನೇಕ ಪ್ರಕಾರದಿಂದ ಅನ್ಯಥಾ ಹೇಳುತ್ತಾರೆ ಅದು ಕಲ್ಯಾಣರೂಪವಿಲ್ಲ, ಸಂಸಾರದ ಕಾರಣವಿದೆ. ||೧೫||

೫) ಇನ್ನು ಮುಂದೆ ಜಿನಬಿಂಬದ ನಿರೂಪಣೆ ಮಾಡುತ್ತಾರೆ, –

ಜಿಣಬಿಂಬಂ ಣಾಣಮಯಂ ಸಂಜಮಸುದ್ಧಂ ಸುವೀಯರಾಯಂ ಚ ।
ಜಂ ದೇಇ ದಿಕ್ಖಸಿಕ್ಖಾ ಕಮ್ಮಕ್ಖಯಕಾರಣೇ ಸುದ್ಧಾ ||೧೬||

ಜಿನಬಿಂಬಂ ಜ್ಞಾನಮಯಂ ಸಂಯಮಶುದ್ಧಂ ಸುವೀತರಾಗಂ ಚ ।
ಯತ್ ದದಾತಿ ದೀಕ್ಷಾಶಿಕ್ಷೇ ಕರ್ಮಕ್ಷಯಕಾರಣೇ ಶುದ್ಧೇ ||೧೬||

---

ಹೇಗೆ ಪುಷ್ಪ ಗಂಧಮಯವಿರುವುದು ಮತ್ತೆ ಕ್ಷೀರ ಘೃತಮಯವಿರುವುದು ।
ಹಾಗೆ ದರ್ಶನವು ಸಮ್ಯಗ್ಜ್ಞಾನಮಯ ಮೇಣ್ಬಾಹ್ಯದಲಿ ರೂಪಸ್ಥವಿರುವುದು ||೧೫||

ಜಿನಬಿಂಬವಿದೆಯದು ಜ್ಞಾನಮಯ ಸಂಯಮ ಶುದ್ಧ ಸುವೀತರಾಗವಿದೆ ।
ತಾನದು ದೀಕ್ಷೆ–ಶಿಕ್ಷೆ ಕೊಡುವುದು ಕರ್ಮಕ್ಷಯಕಾರಣವಿದೆ ಶುದ್ಧವಿದೆ ||೧೬||

ಅರ್ಥ :- ಜಿನಬಿಂಬವು ಜ್ಞಾನಮಯವಿದೆ, ಸಂಯಮದಿಂದ ಶುದ್ಧವಿದೆ, ಅತಿಶಯಕರ ವೀತರಾಗವಿದೆ, ಕರ್ಮಕ್ಷಯದ ಕಾರಣವಿದೆ ಮತ್ತು ಶುದ್ಧವಿದೆ. ಅದು ಈ ಪ್ರಕಾರದ ದೀಕ್ಷೆ ಮತ್ತು ಶಿಕ್ಷೆ ಕೊಡುತ್ತದೆ.

ಭಾವಾರ್ಥ :- ಅದು 'ಜಿನ' ಎಂದರೆ ಅರಹಂತ ಸರ್ವಜ್ಞರ ಪ್ರತಿಬಿಂಬವೆಂದು ಕರೆಯಿಸಿಕೊಳ್ಳುತ್ತದೆ. ಅದರ ಸ್ಥಾನದಲ್ಲಿ ಅದರ ಹಾಗೆಯೇ ಮನ್ನಿಸಲು ಯೋಗ್ಯವಿರುವವರು ಆಚಾರ್ಯರಿದ್ದಾರೆ, ಅವರು ದೀಕ್ಷೆ ಎಂದರೆ ವ್ರತದ ಗ್ರಹಣ ಮತ್ತು ಶಿಕ್ಷೆ ಎಂದರೆ ವ್ರತದ ವಿಧಾನ ತಿಳಿಸುವುದು, ಇವೆರಡನ್ನು ಭವ್ಯ ಜೀವರುಗಳಿಗೆ ಕೊಡುತ್ತಾರೆ. ಆದುದರಿಂದ ೧) ಮೊದಲಂತೂ ಆ ಆಚಾರ್ಯರು ಜ್ಞಾನಮಯರಿರಬೇಕು, ಅವರಿಗೆ ಜಿನಸೂತ್ರದ ಜ್ಞಾನವಿರಬೇಕು, ಜ್ಞಾನವಿಲ್ಲದೆ ಯಥಾರ್ಥ ದೀಕ್ಷೆ-ಶಿಕ್ಷೆ ಹೇಗಾಗುವುದು ? ೨)ಸ್ವಯಂ ಸಂಯಮದಿಂದ ಶುದ್ಧರಿರಬೇಕು, ಒಂದುವೇಳೆ ಹೀಗಿರದಿದ್ದರೆ ಅನ್ಯರನ್ನು ಸಂಯಮದಿಂದ ಶುದ್ಧ ಮಾಡುವ ಸಾಧ್ಯತೆಯಿಲ್ಲ, ೩) ಅತಿಶಯ = ವಿಶೇಷವಾಗಿ ವೀತರಾಗರಿಲ್ಲದಿದ್ದರೆ ಕಷಾಯ ಸಹಿತರಿದ್ದರೆ ಆಗ ಯಥಾರ್ಥ ದೀಕ್ಷೆ-ಶಿಕ್ಷೆ ಕೊಡುವ ಸಾಧ್ಯತೆಯಿಲ್ಲ, ಆದುದರಿಂದ ಈ ಪ್ರಕಾರದ ಆಚಾರ್ಯರನ್ನು ಜಿನರ ಪ್ರತಿಬಿಂಬರೆಂದು ತಿಳಿಯಬೇಕು. ॥೧೬॥

ಮುಂದೆ ಮತ್ತೆ ಹೇಳುತ್ತಾರೆ, -

**ತಸ್ಸ ಯ ಕರಹ ಪಣಾಮಂ ಸವ್ವಂ ಪುಜ್ಜಂ ಚ ವಿಣಯ ವಚ್ಛಲ್ಲಂ ।**
**ಜಸ್ಸ ಯ ದಂಸಣ ಣಾಣಂ ಅತ್ಥಿ ಧುವಂ ಚೇಯಣಾಭಾವೋ ॥೧೭॥**

**ತಸ್ಯ ಚ ಕುರುತ ಪ್ರಣಾಮಂ ಸರ್ವಾಂ ಪೂಜಾಂ ಚ ವಿನಯಂ ವಾತ್ಸಲ್ಯಮ್ ।**
**ಯಸ್ಯ ಚ ದರ್ಶನಂ ಜ್ಞಾನಂ ಅಸ್ತಿ ಧ್ರುವಂ ಚೇತನಾಭಾವಃ ॥೧೭॥**

ಅರ್ಥ :- ಈ ಪ್ರಕಾರ ಪೂರ್ವೋಕ್ತ ಜಿನಬಿಂಬಕ್ಕೆ ಪ್ರಣಾಮ ಮಾಡಿರಿ ಮತ್ತು ಎಲ್ಲ ಪ್ರಕಾರದಿಂದ ಪೂಜೆ ಮಾಡಿರಿ, ವಿನಯ ಮಾಡಿರಿ, ವಾತ್ಸಲ್ಯ ಮಾಡಿರಿ, ಏಕೆಂದರೆ ಅದಕ್ಕೆ ಧ್ರುವ ಎಂದರೆ ನಿಶ್ಚಯದಿಂದ ದರ್ಶನ-ಜ್ಞಾನಗಳು ಕಂಡುಬರುತ್ತವೆ ಮತ್ತು ಚೇತನಾಭಾವವಿದೆ.

ಭಾವಾರ್ಥ :- ದರ್ಶನ-ಜ್ಞಾನಮಯ ಹಾಗೂ ಚೇತನಾಭಾವಸಹಿತ ಜಿನಬಿಂಬವೆಂದರೆ ಆಚಾರ್ಯರಿದ್ದಾರೆ, ಅವರಿಗೆ ನಮಸ್ಕಾರಾದಿಗಳನ್ನು ಮಾಡುವುದು, ಇಲ್ಲಿ ಪರಮಾರ್ಥವನ್ನು ಮುಖ್ಯವಾಗಿ ಹೇಳಿದೆ, ಜಡಪ್ರತಿಬಿಂಬದ ಗೌಣತೆಯಿದೆ. ॥೧೭॥

ಮುಂದೆ ಮತ್ತೆ ಹೇಳುತ್ತಾರೆ, -

**ತವವಯಗುಣೇಹಿಂ ಸುದ್ಧೋ ಜಾಣದಿ ಪಿಚ್ಛೇಇ ಸುದ್ಧಸಮ್ಮತ್ತಂ ।**
**ಅರಹಂತಮುದ್ದ ಏಸಾ ದಾಯಾರೀ ದಿಕ್ಖಸಿಕ್ಖಾ ಯ ॥೧೮॥**

---

**ಅದಕೆ ನಮನ ಮಾಡಿರಿ ಸರ್ವವಿಧ ಪೂಜೆ ವಿನಯ ವಾತ್ಸಲ್ಯ ಮಾಡಿರಿ ।**
**ಇದಕೆ ನಿಶ್ಚಯದಿ ದರ್ಶನ-ಜ್ಞಾನಗಳಿದ್ದು ಚೇತನಾಭಾವವಿರುವುದು ॥೧೭॥**

**ತಪೋವ್ರತಗುಣಗಳಿಂ ಶುದ್ಧ, ತಿಳಿವುದು ನೋಳ್ಪುದು ಶುದ್ಧಸಮ್ಯಕ್ತ್ವದಿಂದ ।**
**ಉಪಕರಿಸುವುದು ದೀಕ್ಷೆ-ಶಿಕ್ಷೆಗಳನಿತ್ತದೇ ಅರಹಂತ ಮುದ್ರೆಯಿದೆ ॥೧೮॥**

ತಪೋವ್ರತಗುಣೈಃ ಶುದ್ಧಃ ಜಾನಾತಿ ಪಶ್ಯತಿ ಶುದ್ಧಸಮ್ಯಕ್ತ್ವಮ್ ।
ಅರ್ಹನ್ಮುದ್ರಾ ಏಷಾ ದಾತ್ರೀ ದೀಕ್ಷಾಶಿಕ್ಷಾಣಾಂ ಚ ॥೧೮॥

ಅರ್ಥ ಃ- ಯಾರು ತಪ, ವ್ರತ ಮತ್ತು ಗುಣ ಎಂದರೆ ಉತ್ತರಗುಣಗಳಿಂದ ಶುದ್ಧರಿದ್ದಾರೆ, ಸಮ್ಯಗ್ಜ್ಞಾನದಿಂದ ಪದಾರ್ಥಗಳನ್ನು ಯಥಾರ್ಥವಾಗಿ ತಿಳಿಯುತ್ತಾರೆ, ಸಮ್ಯಗ್ದರ್ಶನದಿಂದ ಪದಾರ್ಥಗಳನ್ನು ನೋಡುತ್ತಾರೆ ಅದರಿಂದ ಅವರಿಗೆ ಶುದ್ಧ ಸಮ್ಯಕ್ತ್ವವಿದೆ, ಈ ಪ್ರಕಾರದ ಜಿನಬಿಂಬರು ಆಚಾರ್ಯರಿದ್ದಾರೆ. ಇದೇ ದೀಕ್ಷೆ-ಶಿಕ್ಷೆ ಕೊಡುವಂಥ ಅರಹಂತರ ಮುದ್ರೆಯಿದೆ.

ಭಾವಾರ್ಥ ಃ- ಈ ಪ್ರಕಾರದ ಜಿನಬಿಂಬವಿದೆ ಅದು ಜಿನಮುದ್ರೆಯೇ ಇದೆ. ಈ ಪ್ರಕಾರವಾಗಿ ಜಿನಬಿಂಬದ ಸ್ವರೂಪ ಹೇಳಲಾಯಿತು. ॥೧೮॥

೬) ಈಗ ಜಿನಮುದ್ರೆಯ ಸ್ವರೂಪವನ್ನು ಹೇಳುತ್ತಾರೆ,-

ದಢಸಂಜಮಮುದ್ದಾಏ ಇಂದಿಯಮುದ್ದಾ ಕಸಾಯದಿಢಮುದ್ದಾ।
ಮುದ್ದಾ ಇಹ ಣಾಣಾಏ ಜಿಣಮುದ್ದಾ ಏರಿಸಾ ಭಣಿಯಾ ॥೧೯॥

ದೃಢಸಂಯಮಮುದ್ರಯಾ ಇಂದ್ರಿಯಮುದ್ರಾ ಕಷಾಯದೃಢಮುದ್ರಾ ।
ಮುದ್ರಾ ಇಹ ಜ್ಞಾನೇನ ಜಿನಮುದ್ರಾ ಈದೃಶೀ ಭಣಿತಾ ॥೧೯॥

ಅರ್ಥ ಃ- ದೃಢ ಎಂದರೆ ವಜ್ರದಂತೆ ಅಲುಗಾಡಿಸಿದರೂ ಅಲುಗಾಡದಂಥ ಸಂಯಮ ಎಂದರೆ ಇಂದ್ರಿಯ-ಮನಸ್ಸನ್ನು ವಶದಲ್ಲಿಟ್ಟುಕೊಳ್ಳುವುದು, ಷಟ್‌ಜೀವ ನಿಕಾಯಗಳ ರಕ್ಷಣೆ ಮಾಡುವುದು, ಈ ಪ್ರಕಾರ ಸಂಯಮ ರೂಪದ ಮುದ್ರೆಯಿಂದಂತೂ ಐದು ಇಂದ್ರಿಯಗಳನ್ನು ವಿಷಯಗಳಲ್ಲಿ ಪ್ರವರ್ತಿಸದೆ ಅವುಗಳ ಸಂಕೋಚ ಮಾಡುವುದು ಇದು ಇಂದ್ರಿಯ ಮುದ್ರೆಯಿದೆ, ಮತ್ತು ಈ ಪ್ರಕಾರ ಸಂಯಮದ ಮುಖಾಂತರವೇ ಅದರಲ್ಲಿ ಕಷಾಯಗಳ ಪ್ರವೃತ್ತಿಯಿಲ್ಲದಂಥ ಕಷಾಯದೃಢಮುದ್ರೆಯಿದೆ, ಅದರಂತೆ ಜ್ಞಾನವನ್ನು ಸ್ವರೂಪದಲ್ಲಿ ತೊಡಗಿಸುವುದು ಹೀಗೆ ಜ್ಞಾನದ ಮುಖಾಂತರ ಸಮಸ್ತ ಬಾಹ್ಯ ಮುದ್ರೆಗಳು ಶುದ್ಧವಾಗುತ್ತವೆ. ಈ ಪ್ರಕಾರ ಜಿನಶಾಸನದಲ್ಲಿ ಇಂಥ 'ಜಿನಮುದ್ರೆ'ಯಿರುತ್ತದೆ.

ಭಾವಾರ್ಥ ಃ- ೧) ಯಾರು ಸಂಯಮಸಹಿತರಿದ್ದಾರೆ, ೨)ಯಾರ ಇಂದ್ರಿಯಗಳು ವಶದಲ್ಲಿವೆ, ೩) ಕಷಾಯಗಳ ಪ್ರವೃತ್ತಿಯು ಆಗುವುದಿಲ್ಲ ಮತ್ತು ೪) ಜ್ಞಾನವನ್ನು ಸ್ವರೂಪದಲ್ಲಿ ತೊಡಗಿಸುತ್ತಿರುವಂಥ ಮುನಿಯೇ 'ಜಿನಮುದ್ರೆ'ಯಿದ್ದಾನೆ. ॥೧೯॥

೭) ಈಗ ಜ್ಞಾನದ ನಿರೂಪಣೆ ಮಾಡುತ್ತಾರೆ, -

---

ಸ್ಥಿರಸಂಯಮಮಯಮುದ್ರೆ ಇಂದ್ರಿಯಮುದ್ರೆ ಕಷಾಯನಿರೋಧಮಯಮುದ್ರೆ ।
ಈ ರೀತಿಯ ಮುದ್ರೆ ಜ್ಞಾನದಿಂ ನಿಷ್ಪನ್ನವಿದ್ದದನು ಜಿನಮುದ್ರೆಯೆನ್ನುವರು ॥೧೯॥

ಸಂಜಮಸಂಜುತ್ತಸ್ಸ ಯ ಸುಝಾಣಜೋಯಸ್ಸ ಮೋಕ್ಖಮಗ್ಗಸ್ಸ।
ಣಾಣೇಣ ಲಹದಿ ಲಕ್ಖಂ ತಮ್ಹಾ ಣಾಣಂ ಚ ಣಾಯವ್ವಂ ॥೨೦॥

ಸಂಯಮಸಂಯುಕ್ತಸ್ಯ ಚ [೧]ಸುಧ್ಯಾನಯೋಗ್ಯಸ್ಯ ಮೋಕ್ಷಮಾರ್ಗಸ್ಯ।
ಜ್ಞಾನೇನ ಲಭತೇ ಲಕ್ಷಂ ತಸ್ಮಾತ್ ಜ್ಞಾನಂ ಚ ಜ್ಞಾತವ್ಯಮ್ ॥೨೦॥

ಅರ್ಥ ಃ- ಸಂಯಮದಿಂದ ಸಂಯುಕ್ತ ಮತ್ತು ಧ್ಯಾನಯೋಗ್ಯವಾದ ಆ ಮೋಕ್ಷಮಾರ್ಗದ ಲಕ್ಷ್ಯ ಎಂದರೆ ಲಕ್ಷ್ಯಯೋಗ್ಯ-ತಿಳಿಯಲು ಯೋಗ್ಯವಾದ ಗುರಿಯು ತಮ್ಮ ನಿಜಸ್ವರೂಪವಿದ್ದು ಅದನ್ನು ಜ್ಞಾನದ ಮುಖಾಂತರ ಪಡೆಯಲಾಗುತ್ತದೆ, ಆದುದರಿಂದ ಈ ಪ್ರಕಾರದ ಲಕ್ಷ್ಯವನ್ನು ತಿಳಿಯುವ ಸಲುವಾಗಿ ಜ್ಞಾನವನ್ನು ತಿಳಿಯಬೇಕು.

ಭಾವಾರ್ಥ ಃ- ಸಂಯಮವನ್ನು ಅಂಗೀಕಾರ ಮಾಡಿ ಧ್ಯಾನ ಮಾಡಿದರೆ ಮತ್ತು ಆತ್ಮನ ಸ್ವರೂಪವನ್ನು ತಿಳಿದುಕೊಳ್ಳದಿದ್ದರೆ ಮೋಕ್ಷಮಾರ್ಗದ ಸಿದ್ಧಿಯಾಗುವುದಿಲ್ಲ, ಆದುದರಿಂದ ಜ್ಞಾನದ ಸ್ವರೂಪವನ್ನು ತಿಳಿದು ಕೊಳ್ಳಬೇಕು, ಅದನ್ನು ತಿಳಿದುಕೊಳ್ಳುವುದರಿಂದ ಸರ್ವಸಿದ್ಧಿಯಾಗುವುದು. ॥೨೦॥

ಈಗ ಇದನ್ನೇ ದೃಷ್ಟಾಂತದ ಮುಖಾಂತರ ದೃಢಪಡಿಸುತ್ತಾರೆ, -

ಜಹ ಣವಿ ಲಹದಿ ಹು ಲಕ್ಖಂ ರಹಿಓ ಕಂಡಸ್ಸ ವೇಜ್ಝಯವಿಹೀಣೋ।
ತಹ ಣವಿ ಲಕ್ಖದಿ ಲಕ್ಖಂ ಅಣ್ಣಾಣೀ ಮೋಕ್ಖಮಗ್ಗಸ್ಸ ॥೨೧॥

ತಥಾ ನಾಪಿ ಲಭತೇ ಸ್ಫುಟಂ ಲಕ್ಷಂ ರಹಿತಃ ಕಾಂಡಸ್ಯ [೨]ವೇಧಕವಿಹೀನಃ।
ತಥಾ ನಾಪಿ ಲಕ್ಷಯತಿ ಲಕ್ಷಂ ಅಜ್ಞಾನೀ ಮೋಕ್ಷಮಾರ್ಗಸ್ಯ ॥೨೧॥

ಅರ್ಥ ಃ- ಯಾವ ಪ್ರಕಾರ ಭೇದಿಸುವಂಥ (ಭೇದಕನು) ಆ ಬಾಣದಿಂದ ರಹಿತನಿರುವಂಥ ಯಾವ ಪುರುಷನಿದ್ದಾನೆ ಅವನು ಕಾಂಡ ಎಂದರೆ ಧನುಷ್ಯದ ಅಭ್ಯಾಸದಿಂದ ರಹಿತನಿದ್ದರೆ ಅವನು ಲಕ್ಷ್ಯ ಎಂದರೆ ಗುರಿಯನ್ನು ಪಡೆಯುವುದಿಲ್ಲ, ಅದೇ ಪ್ರಕಾರ ಜ್ಞಾನದಿಂದ ರಹಿತನಾದ ಅಜ್ಞಾನಿಯಿದ್ದಾನೆ ಅವನು ದರ್ಶನ-ಜ್ಞಾನ-ಚಾರಿತ್ರರೂಪವಾದ ಆ ಮೋಕ್ಷಮಾರ್ಗದ ಲಕ್ಷ್ಯ ಎಂದರೆ ಸ್ವಲಕ್ಷಣದಿಂದ ತಿಳಿಯಲು ಯೋಗ್ಯವಾದ ಪರಮಾತ್ಮನ ಸ್ವರೂಪವನ್ನು ಪ್ರಾಪ್ತಮಾಡಿಕೊಳ್ಳುವ ಸಾಧ್ಯತೆಯಿಲ್ಲ.

---

ಧ್ಯಾನಯೋಗ್ಯ ಸಂಯಮಸಂಯುಕ್ತವಾದಾ ಮೋಕ್ಷಮಾರ್ಗದ ಲಕ್ಷ್ಯಯೋಗ್ಯಗುರಿಯಂ।
ಜ್ಞಾನದಿಂ ಪಡೆಯಲಾಗುವುದದರಿಂ ಲಕ್ಷ್ಯಕಾಗಿ ಜ್ಞಾನವನು ತಿಳಿವುದು ॥೨೦॥

ಹೇಗೆ ಶರ ಮೇಣ್ಚಾಪದಭ್ಯಾಸವಿಲ್ಲದ ವೇಧಕನು ಗುರಿಯ ಪಡೆಯನು।
ಹಾಗೆ ಅಜ್ಞಾನಿಯು ಲಕ್ಷಿತ ಮೋಕ್ಷಮಾರ್ಗದ ಲಕ್ಷ್ಯವನು ಪಡೆಯಲಾರನು ॥೨೧॥

---

೧ 'ಸುಧ್ಯಾನಯೋಗಸ್ಯ'ದ ಅರ್ಥವು .ಶ್ರೇಷ್ಠ ಧ್ಯಾನಸಹಿತವೆಂದೂ ಇದೆ. ಸಂಸ್ಕೃತ ಟೀಕಾ ಪ್ರತಿಯಲ್ಲಿ ನೋಡಿರಿ.

೨ 'ವೇಧ್ಯಕ'ವೆಂದು ಪಾಠಾಂತರವಿದೆ.

ಭಾವಾರ್ಥ :- ಧನುಷ್ಯಧಾರಿಯು ಧನುಷ್ಯದ ಅಭ್ಯಾಸದಿಂದ ರಹಿತನಿದ್ದರೆ ಮತ್ತು 'ಭೇದಕ'ನು ಆ ಬಾಣದಿಂದ ರಹಿತನಿದ್ದರೆ ಗುರಿಯನ್ನು ಪ್ರಾಪ್ತಮಾಡಿಕೊಳ್ಳುವ ಸಾಧ್ಯತೆಯಿಲ್ಲ, ಅದೇ ಪ್ರಕಾರ ಜ್ಞಾನದಿಂದ ರಹಿತನಾದ ಅಜ್ಞಾನಿಯು ಮೋಕ್ಷಮಾರ್ಗದ ಗುರಿಯನ್ನು ಆ ಪರಮಾತ್ಮನ ಸ್ವರೂಪವನ್ನು ಗುರುತಿಸಿಕೊಳ್ಳದಿದ್ದರೆ ಅವನಿಗೆ ಮೋಕ್ಷಮಾರ್ಗದ ಸಿದ್ಧಿಯಾಗುವುದಿಲ್ಲ, ಆದುದರಿಂದ ಜ್ಞಾನವನ್ನು ತಿಳಿದುಕೊಳ್ಳಬೇಕಾಗುವುದು. ಪರಮಾತ್ಮರೂಪದ ಗುರಿಯನ್ನು ಜ್ಞಾನರೂಪದ ಬಾಣದಿಂದ ಭೇದಿಸಲು ಯೋಗ್ಯವಿದೆ. ॥೨೧॥

ಈ ಪ್ರಕಾರ ಜ್ಞಾನ-ವಿನಯ ಸಂಯುಕ್ತನಾದ ಪುರುಷನಿದ್ದರೆ ಅವನೇ ಮೋಕ್ಷವನ್ನು ಪ್ರಾಪ್ತಮಾಡಿಕೊಳ್ಳುತ್ತಾನೆಂದು ಈಗ ಹೇಳುತ್ತಾರೆ, -

**ಣಾಣಂ ಪುರಿಸಸ್ಸ ಹವದಿ ಲಹದಿ ಸುಪುರಿಸೋ ವಿ ವಿಣಯಸಂಜುತ್ತೋ ।**
**ಣಾಣೇಣ ಲಹದಿ ಲಕ್ಖಂ ಲಕ್ಖಂತೋ ಮೋಕ್ಖಮಗ್ಗಸ್ಸ ॥೨೨॥**

**ಜ್ಞಾನಂ ಪುರುಷಸ್ಯ ಭವತಿ ಲಭತೇ ಸುಪುರುಷೋಽಪಿ ವಿನಯಸಂಯುಕ್ತಃ ।**
**ಜ್ಞಾನೇನ ಲಭತೇ ಲಕ್ಷ್ಯಂ ಲಕ್ಷಯನ್ ಮೋಕ್ಷಮಾರ್ಗಸ್ಯ ॥೨೨॥**

ಅರ್ಥ :- ಜ್ಞಾನವು ಪುರುಷನಿಗೆ ಆಗುತ್ತದೆ ಮತ್ತು ಪುರುಷನೇ ವಿನಯಸಂಪನ್ನನಿದ್ದರೆ ಅವನು ಜ್ಞಾನವನ್ನು ಪ್ರಾಪ್ತಮಾಡಿಕೊಳ್ಳುತ್ತಾನೆ, ಯಾವಾಗ ಜ್ಞಾನವನ್ನು ಪ್ರಾಪ್ತಮಾಡಿಕೊಳ್ಳುತ್ತಾನೆ ಆಗ ಆ ಜ್ಞಾನದ ಮುಖಾಂತರವೇ ಮೋಕ್ಷಮಾರ್ಗದ ಲಕ್ಷ್ಯವನ್ನು ಎಂದರೆ 'ಪರಮಾತ್ಮನ ಸ್ವರೂಪ'ವನ್ನು ಗಮನ ಕೊಡುತ್ತ-ನೋಡುತ್ತ-ಧ್ಯಾನ ಮಾಡುತ್ತ ಆ ಲಕ್ಷ್ಯವನ್ನು ಪ್ರಾಪ್ತಮಾಡಿಕೊಳ್ಳುತ್ತಾನೆ.

ಭಾವಾರ್ಥ :- ಜ್ಞಾನವು ಪುರುಷನಿಗೆ ಆಗುತ್ತದೆ ಮತ್ತು ಪುರುಷನೇ ವಿನಯವುಳ್ಳವನಿದ್ದರೆ ಅವನು ಜ್ಞಾನವನ್ನು ಪ್ರಾಪ್ತಮಾಡಿಕೊಳ್ಳುತ್ತಾನೆ, ಆ ಜ್ಞಾನದ ಮುಖಾಂತರವಾಗಿಯೇ ಶುದ್ಧ ಆತ್ಮನ ಸ್ವರೂಪವನ್ನು ತಿಳಿಯಲಾಗುತ್ತದೆ, ಆದುದರಿಂದ ವಿಶೇಷ ಜ್ಞಾನಿಗಳ ವಿನಯದ ಮುಖಾಂತರ ಜ್ಞಾನದ ಪ್ರಾಪ್ತಿಮಾಡಿಕೊಳ್ಳಬೇಕು, ಏಕೆಂದರೆ ತನ್ನ ಶುದ್ಧ ಸ್ವರೂಪವನ್ನು ತಿಳಿದುಕೊಂಡು ಮೋಕ್ಷ ಪ್ರಾಪ್ತಮಾಡಿಕೊಳ್ಳಲಾಗುತ್ತದೆ- ಇಲ್ಲಿ ಯಾವನು ವಿನಯರಹಿತನಿದ್ದಾನೆ, ಯಥಾರ್ಥ ಸೂತ್ರ ಪದದಿಂದ ಚ್ಯುತನಿದ್ದಾನೆ, ಭ್ರಷ್ಟನಾಗಿ ಹೋಗಿದ್ದಾನೆ ಅವನ ನಿಷೇಧವಿದೆಯೆಂದು ತಿಳಿಯುವುದು ॥೨೨॥

ಮತ್ತೆ ಇದನ್ನೇ ದೃಢ ಮಾಡುತ್ತಾರೆ, -

**ಮಇಧಣುಹಂ ಜಸ್ಸ ಥಿರಂ ಸುದಗುಣ ಬಾಣಾ ಸುಅತ್ಥಿ ರಯಣತ್ತಂ ।**
**ಪರಮತ್ಥಬದ್ಧಲಕ್ಖೋ ಣವಿ ಚುಕ್ಕದಿ ಮೋಕ್ಖಮಗ್ಗಸ್ಸ ॥೨೩॥**

---

ಜ್ಞಾನ ಪುರುಷನಿಗಪ್ಪುದು ಪುರುಷ ವಿನಯಿಯಿದ್ದರೆ ಜ್ಞಾನ ಪಡೆವನು ।
ಜ್ಞಾನದಿಂದಲೆ ಮೋಕ್ಷಮಾರ್ಗದ ಲಕ್ಷ್ಯ ಮಾಡುತಾ ಲಕ್ಷ್ಯವನು ಪಡೆಯುವನು ॥೨೨॥

ಯಾರಿಗೆ ಮತಿಚಾಪ ಸ್ಥಿರ, ಶ್ರುತದಾರ ರತ್ನತ್ರಯರೂಪ ಸುಬಾಣವಿದೆ ।
ಪರಮಾರ್ಥ ಸಂಬಂಧ ಲಕ್ಷ್ಯವಿದೆಯವರು ಮೋಕ್ಷಮಾರ್ಗದಿಂದ ಚ್ಯುತರಾಗರು ॥೨೩॥

ಮತಿಧನುರ್ಯಸ್ಯ ಸ್ಥಿರಂ ಶ್ರುತಂ ಗುಣಃ ಬಾಣಾಃ ಸುಸಂತಿ ರತ್ನತ್ರಯಂ ।
ಪರಮಾರ್ಥಬದ್ಧಲಕ್ಷ್ಯಃ ನಾಪಿ ಸ್ಖಲತಿ ಮೋಕ್ಷಮಾರ್ಗಸ್ಯ ॥೨೩॥

ಅರ್ಥ ಃ- ಯಾವ ಮುನಿಯ ಮತಿಜ್ಞಾನರೂಪದ ಧನುಷ್ಯವು ಸ್ಥಿರವಿದೆ, ಶ್ರುತಜ್ಞಾನರೂಪದ ಗುಣ ಎಂದರೆ ಪ್ರತ್ಯಂಚವಿದೆ, ರತ್ನತ್ರಯರೂಪದ ಉತ್ತಮ ಬಾಣವಿದೆ ಮತ್ತು ಪರಮಾತ್ಮಸ್ವರೂಪ ನಿಜಶುದ್ಧಾತ್ಮ ಸ್ವರೂಪದ ಸಂಬಂಧರೂಪವಾದ ಲಕ್ಷ್ಯವಿದೆ, ಆ ಮುನಿಯು ಮೋಕ್ಷಮಾರ್ಗವನ್ನು ತಪ್ಪಿಸಿಕೊಳ್ಳುವುದಿಲ್ಲ.

ಭಾವಾರ್ಥ ಃ- ಧನುಷ್ಯದ ಸಮಸ್ತ ಸಾಮಗ್ರಿಗಳು ಯಥಾ ಪ್ರಕಾರ ದೊರಕಿದಾಗ ಗುರಿಯು ತಪ್ಪಿ ಹೋಗುವುದಿಲ್ಲ, ಅದೇ ಪ್ರಕಾರ ಮುನಿಗೆ ಮೋಕ್ಷಮಾರ್ಗದ ಸಾಮಗ್ರಿಗಳು ಯಥಾಪ್ರಕಾರ ದೊರಕಿದಾಗ ಅವನು ಮೋಕ್ಷಮಾರ್ಗದಿಂದ ಭ್ರಷ್ಟನಾಗುವುದಿಲ್ಲ. ಅದರ ಸಾಧನದಿಂದ ಮೋಕ್ಷಕ್ಕೆ ಪ್ರಾಪ್ತನಾಗುತ್ತಾನೆ,ಇದು ಜ್ಞಾನದ ಮಾಹಾತ್ಮ್ಯವಿದೆ, ಆದುದರಿಂದ ಜಿನಾಗಮದ ಅನುಸಾರವಾಗಿ ಸತ್ಯಾರ್ಥ ಜ್ಞಾನಿಗಳ ವಿನಯ ಮಾಡಿ ಜ್ಞಾನದ ಸಾಧನ ಮಾಡಬೇಕು. ॥೨೩॥

ಈ ಪ್ರಕಾರ ಜ್ಞಾನದ ನಿರೂಪಣೆ ಮಾಡಲಾಯಿತು.

೮) ಈಗ ದೇವರ ಸ್ವರೂಪವನ್ನು ಹೇಳುತ್ತಾರೆ,-

ಸೋ ದೇವೋ ಜೋ ಅತ್ಥಂ ಧಮ್ಮಂ ಕಾಮಂ ಸುದೇಇ ಣಾಣಂ ಚ ।
ಸೋ ದೇಇ ಜಸ್ಸ ಅತ್ಥಿ ಹು ಅತ್ಥೋ ಧಮ್ಮೋ ಯ ಪವ್ವಜ್ಜಾ ॥೨೪॥

ಸಃ ದೇವಃ ಯಃ ಅರ್ಥಂ ಧರ್ಮಂ ಕಾಮಂ ಸುದದಾತಿ ಜ್ಞಾನಂ ಚ ।
ಸಃ ದದಾತಿ ಯಸ್ಯ ಅಸ್ತಿ ತು ಅರ್ಥಃ ಧರ್ಮಃ ಚ ಪ್ರವ್ರಜ್ಯಾ ॥೨೪॥

ಅರ್ಥ ಃ- ಯಾವನು ಅರ್ಥ ಎಂದರೆ ಧನ, ಧರ್ಮ ಮತ್ತು ಕಾಮ ಎಂದರೆ ಇಚ್ಛೆಯ ವಿಷಯವಾದಂಥ ಭೋಗ ಹಾಗೂ ಮೋಕ್ಷದ ಕಾರಣವಾದ ಜ್ಞಾನ ಇವು ನಾಲ್ಕನ್ನೂ ಕೊಡುವವನಿಗೆ 'ದೇವ'ನೆಂದು ಹೇಳುತ್ತಾರೆ. ಯಾವ ವಸ್ತುವು ಯಾವನ ಹತ್ತಿರ ಇದೆ ಅದನ್ನು ಅವನು ಕೊಡುವನು ಮತ್ತು ಯಾವನ ಹತ್ತಿರ ಆ ವಸ್ತುವಿಲ್ಲ ಅವನು ಹೇಗೆ ಕೊಡುವನು ? ಈ ನ್ಯಾಯದಿಂದ ಧರ್ಮ, ಅರ್ಥ, ಸ್ವರ್ಗಾದಿಗಳ ಭೋಗ ಮತ್ತು ಮೋಕ್ಷ ಸುಖದ ಕಾರಣವಾದ ಪ್ರವ್ರಜ್ಯೆ ಎಂದರೆ ದೀಕ್ಷೆಯು ಯಾವನ ಹತ್ತಿರ ಇದೆ ಅವನನ್ನು 'ದೇವ'ನೆಂದು ತಿಳಿಯಬೇಕು. ॥೨೪॥

ಈಗ ಧರ್ಮಾದಿಗಳ ಸ್ವರೂಪ ಹೇಳುತ್ತಾರೆ ಅವನ್ನು ತಿಳಿದುಕೊಳ್ಳುವುದರಿಂದ ದೇವಾದಿಕರ ಸ್ವರೂಪವು ತಿಳಿಯಲ್ಪಡುತ್ತದೆ,-

---

ಯಾವನು ಸುರೀತಿ ಧರ್ಮ ಅರ್ಥ ಕಾಮ ಜ್ಞಾನ ಕೊಡುವನವ ದೇವನಿಹನು ।
ಆ ವಸ್ತುವಿದ್ದವನೀಯುವನದು ಧರ್ಮ ಅರ್ಥ ದೀಕ್ಷೆಯಿದ್ದವ ಕೊಡುವನು ॥೨೪॥

ಧಮ್ಮೋ ದಯಾವಿಸುದ್ಧೋ ಪವ್ವಜ್ಜಾ ಸವ್ವಸಂಗಪರಿಚತ್ತಾ ।
ದೇವೋ ವವಗಯಮೋಹೋ ಉದಯಕರೋ ಭವ್ವಜೀವಾಣಂ ।।೨೫।।

ಧರ್ಮಃ ದಯಾವಿಶುದ್ಧಃ ಪ್ರವ್ರಜ್ಯಾ ಸರ್ವಸಂಗಪರಿತ್ಯಕ್ತಾ ।
ದೇವಃ ವ್ಯಪಗತಮೋಹಃ ಉದಯಕರಃ ಭವ್ಯ ಜೀವಾನಾಮ್ ।।೨೫।।

ಅರ್ಥ ಃ- ಯಾವುದು ದಯೆಯಿಂದ ವಿಶುದ್ಧವಿದೆ ಅದು ಧರ್ಮವಿದೆ, ಯಾವುದು ಸಮಸ್ತ ಪರಿಗ್ರಹದಿಂದ ರಹಿತವಿದೆ ಅದು ಪ್ರವ್ರಜ್ಯೆಯಿದೆ, ಯಾವನ ಮೋಹವು ನಷ್ಟವಾಗಿ ಹೋಗಿದೆ ಅವನು ದೇವನಿದ್ದಾನೆ. ಅವನು ಭವ್ಯ ಜೀವರುಗಳ ಉದಯವನ್ನು ಮಾಡುವಂಥವನಿದ್ದಾನೆ.

ಭಾವಾರ್ಥ ಃ- ಧರ್ಮ, ಅರ್ಥ, ಕಾಮ ಮತ್ತು ಮೋಕ್ಷ ಇವು ನಾಲ್ಕು ಪುರುಷನ ಪ್ರಯೋಜನಗಳಿವೆಯೆಂಬುದು ಲೋಕದಲ್ಲಿ ಪ್ರಸಿದ್ಧವಿದೆ ಅವುಗಳ ಸಲುವಾಗಿ ಪುರುಷನು ಯಾರಿಗೋ ವಂದನೆ ಮಾಡುತ್ತಾನೆ, ಪೂಜೆ ಮಾಡುತ್ತಾನೆ ಮತ್ತು ಯಾವನ ಹತ್ತಿರ ಯಾವ ವಸ್ತುವಿದೆ ಅದನ್ನು ಅವನು ಇತರರಿಗೆ ಕೊಡುವನೆಂಬುದು ನ್ಯಾಯವಿದೆ, ಆದರೆ ಇಲ್ಲದವನು ಎಲ್ಲಿಂದ ಕೊಡುವನು ? ಆದುದರಿಂದ ಈ ನಾಲ್ಕು ಪುರುಷಾರ್ಥಗಳು ಜಿನದೇವರಿಗೆ ಕಂಡು ಬರುತ್ತವೆ. ಧರ್ಮವಂತೂ ಅವರಿಗೆ ದಯಾರೂಪವಾಗಿ ಕಂಡು ಬರುತ್ತದೆ, ಅದನ್ನು ಸಾಧಿಸಿ ಅವರು ತೀರ್ಥಂಕರರಾಗಿ ಹೋದರು, ಆಗ ಧನದ ಮತ್ತು ಸಂಸಾರ ಭೋಗದ ಪ್ರಾಪ್ತಿಯಾಯಿತು, ಲೋಕ ಪೂಜ್ಯರಾದರು, ಮತ್ತು ತೀರ್ಥಂಕರ ಪರಮಪದದಲ್ಲಿ ದೀಕ್ಷೆ ಸ್ವೀಕರಿಸಿ, ಸಮಸ್ತ ಮೋಹದಿಂದ ರಹಿತರಾಗಿ ಪರಮಾರ್ಥಸ್ವರೂಪವಾದ ಆತ್ಮಿಕಧರ್ಮವನ್ನು ಸಾಧಿಸಿಕೊಂಡು, ಮೋಕ್ಷಸುಖವನ್ನು ಪ್ರಾಪ್ತಮಾಡಿಕೊಂಡಿರುವಂಥ ತೀರ್ಥಂಕರ ಜಿನರಿದ್ದಾರೆ, ಅವರೇ 'ದೇವ'ರಿದ್ದಾರೆ, ಅಜ್ಞಾನಿಯಾದ ಜನರು ಯಾರನ್ನು ದೇವರೆಂದು ಮನ್ನಿಸುತ್ತಾರೆ ಅವರಿಗೆ ಧರ್ಮ, ಅರ್ಥ, ಕಾಮ, ಮೋಕ್ಷಗಳಿಲ್ಲ, ಏಕೆಂದರೆ ಕೆಲವರು ಹಿಂಸಕರಿದ್ದಾರೆ, ಕೆಲವರು ವಿಷಯಾಸಕ್ತರಿದ್ದಾರೆ, ಮೋಹಿಗಳಿದ್ದಾರೆ ಅವರಲ್ಲಿ ಧರ್ಮ ಹೇಗಿರುವುದು ? ಅರ್ಥ ಮತ್ತು ಕಾಮದ ಇಚ್ಛೆಯು ಕಂಡು ಬರುತ್ತಿರುವವರಲ್ಲಿ ಅರ್ಥ, ಕಾಮಗಳು ಹೇಗೆ ? ಜನ್ಮ, ಮರಣ ಸಹಿತವಾಗಿರುವವರಲ್ಲಿ ಮೋಕ್ಷವು ಹೇಗಿರುವುದು ? ಇಂಥ ದೇವರು ನಿಜವಾದ ಜಿನದೇವರೇ ಇದ್ದಾರೆ, ಅವರೇ ಭವ್ಯ ಜೀವರುಗಳ ಮನೋರಥವನ್ನು ಪೂರ್ಣ ಮಾಡುತ್ತಾರೆ, ಉಳಿದವರೆಲ್ಲರು ಕೇವಲ ಕಾಲ್ಪನಿಕ ದೇವರಿದ್ದಾರೆ. ।।೨೫।।

ಈ ಪ್ರಕಾರ ದೇವರ ಸ್ವರೂಪ ಹೇಳಲಾಯಿತು.

೯) ಈಗ ತೀರ್ಥದ ಸ್ವರೂಪವನ್ನು ಹೇಳುತ್ತಾರೆ, -

ವಯಸಮ್ಮತ್ತವಿಸುದ್ಧೇ ಪಂಚೇಂದಿಯಸಂಜದೇ ಣಿರಾವೇಕ್ಖೇ ।
ಣ್ಹಾಏಉ ಮುಣೀ ತಿತ್ಥೇ ದಿಕ್ಖಾಸಿಕ್ಖಾಸುಣ್ಹಾಣೇಣ ।।೨೬।।

---

ಆ ದಯಾವಿಶುದ್ಧವದು ಧರ್ಮ ಸರ್ವಪರಿಗ್ರಹಮುಕ್ತವದು ದೀಕ್ಷೆಯಿದೆ ।
ಆ ದೇವ ವ್ಯಪಗತಮೋಹನಿದ್ದು ಭವ್ಯಜೀವ ಉದಯಕರನಿರುವನು ।।೨೫।।

ವ್ರತಸಮ್ಯಕ್ತ್ವ ವಿಶುದ್ಧ ಪಂಚೇಂದ್ರಿಯಸಂಯಮಯುಕ್ತ ಮೇಣ್ನಿರಪೇಕ್ಷವಾದ ।
ಆ ತೀರ್ಥದಲಿ ದೀಕ್ಷೆ-ಶಿಕ್ಷೆರೂಪದ ಸ್ನಾನಮಾಡಿ ಪವಿತ್ರನಾಗೆಲೆ ಮುನಿ ।।೨೬।।

ವ್ರತಸಮ್ಯಕ್ತ್ವವಿಶುದ್ಧೇ ಪಂಚೇಂದ್ರಿಯಸಂಯತೇ ನಿರಪೇಕ್ಷೇ ।
ಸ್ನಾತು ಮುನಿಃ ತೀರ್ಥೇ ದೀಕ್ಷಾಶಿಕ್ಷಾಸುಸ್ನಾನೇನ ॥೨೬॥

ಅರ್ಥ ಃ- ವ್ರತ ಸಮ್ಯಕ್ತ್ವದಿಂದ ವಿಶುದ್ಧ ಮತ್ತು ಐದು ಇಂದ್ರಿಯಗಳಿಂದ ಸಂಯತ ಎಂದರೆ ಸಂವರ ಸಹಿತ ಹಾಗೂ ನಿರಪೇಕ್ಷ ಎಂದರೆ ಖ್ಯಾತಿ, ಲಾಭ, ಪೂಜೆ ಮೊದಲಾದ ಈ ಲೋಕದ ಫಲದ ಹಾಗೂ ಪರಲೋಕದಲ್ಲಿ ಸ್ವರ್ಗಾದಿಗಳ ಭೋಗದ ಅಪೇಕ್ಷೆಯಿಂದ ರಹಿತವಾದಂಥ ಆತ್ಮಸ್ವರೂಪ ತೀರ್ಥದಲ್ಲಿ ದೀಕ್ಷೆ-ಶಿಕ್ಷೆರೂಪದ ಸ್ನಾನದಿಂದ ಪವಿತ್ರರಾಗಿರಿ !

ಭಾವಾರ್ಥ ಃ- ತತ್ತ್ವಾರ್ಥಶ್ರದ್ಧಾನಲಕ್ಷಣ-ಸಹಿತ, ಐದು ಮಹಾವ್ರತಗಳಿಂದ ಶುದ್ಧ ಮತ್ತು ಐದು ಇಂದ್ರಿಯಗಳ ವಿಷಯಗಳಿಂದ ವಿರಕ್ತ, ಈ ಲೋಕದಲ್ಲಿ - ಪರಲೋಕದಲ್ಲಿ ವಿಷಯ ಭೋಗಗಳ ವಾಂಛೆಯಿಂದ ರಹಿತವಾದಂಥ ನಿರ್ಮಲ ಆತ್ಮನ ಸ್ವಭಾವರೂಪವಾದ ತೀರ್ಥದಲ್ಲಿ ಸ್ನಾನ ಮಾಡುವುದರಿಂದ ಪವಿತ್ರರಾಗುತ್ತಾರೆಂದು ಎಲ್ಲರಿಗೂ ಇಂಥ ಪ್ರೇರಣೆ ಮಾಡುತ್ತಾರೆ. ॥೨೬॥

ಈಗ ಮತ್ತೆ ಹೇಳುತ್ತಾರೆ, -

ಜಂ ಣಿಮ್ಮಲಂ ಸುದಮ್ಮಂ ಸಮ್ಮತ್ತಂ ಸಂಜಮಂ ತವಂ ಣಾಣಂ ।
ತಂ ತಿತ್ಥಂ ಜಿಣಮಗ್ಗೇ ಹವೇಇ ಜದಿ ಸತಿಭಾವೇಣ ॥೨೭॥

ಯತ್ ನಿರ್ಮಲಂ ಸುಧರ್ಮಂ ಸಮ್ಯಕ್ತ್ವಂ ಸಂಯಮಂ ತಪಃ ಜ್ಞಾನಮ್ ।
ತತ್ ತೀರ್ಥಂ ಜಿನಮಾರ್ಗೇ ಭವತಿ ಯದಿ ಶಾಂತಭಾವೇನ ॥೨೭॥

ಅರ್ಥ ಃ- ಜಿನಮಾರ್ಗದಲ್ಲಿ ಆ ನಿರ್ಮಲ ಉತ್ತಮ ಕ್ಷಮೆ ಮೊದಲಾದ ಧರ್ಮ ಮತ್ತು ತತ್ತ್ವಾರ್ಥಶ್ರದ್ಧಾನ ಲಕ್ಷಣವುಳ್ಳ ಶಂಕಾದಿಮಲರಹಿತ ನಿರ್ಮಲ ಸಮ್ಯಕ್ತ್ವ ಹಾಗೂ ಇಂದ್ರಿಯ ಮನಸ್ಸುಗಳನ್ನು ವಶದಲ್ಲಿಡುವುದು, ಷಟ್‌ಕಾಯ ಜೀವಗಳ ರಕ್ಷಣೆ ಮಾಡುವಂಥ ಆ ನಿರ್ಮಲ ಸಂಯಮ, ಮತ್ತು ಅನಶನ, ಅವಮೌದರ್ಯ, ವೃತ್ತಿಪರಿಸಂಖ್ಯಾನ, ರಸಪರಿತ್ಯಾಗ, ವಿವಿಕ್ತಶಯ್ಯಾಸನ, ಕಾಯಕ್ಲೇಶದಂಥ ಬಾಹ್ಯ ಆರು ಪ್ರಕಾರದ ತಪಸ್ಸು ಹಾಗೂ ಪ್ರಾಯಶ್ಚಿತ್ತ, ವಿನಯ, ವೈಯಾವೃತ್ಯ, ಸ್ವಾಧ್ಯಾಯ, ವ್ಯುತ್ಸರ್ಗ, ಧ್ಯಾನವೆಂಬ ಆರು ಪ್ರಕಾರದ ಅಂತರಂಗ ತಪಸ್ಸು ಹೀಗೆ ಹನ್ನೆರಡು ಪ್ರಕಾರದ ನಿರ್ಮಲ ತಪಸ್ಸು ಮತ್ತು ಜೀವ-ಅಜೀವ ಮೊದಲಾದ ಪದಾರ್ಥಗಳ ಯಥಾರ್ಥ ಜ್ಞಾನ ಇವು 'ತೀರ್ಥ'ಗಳಿವೆ, ಇವು ಕೂಡ ಒಂದು ವೇಳೆ ಶಾಂತಭಾವಸಹಿತವಿದ್ದರೆ, ಕಷಾಯ ಭಾವವಿಲ್ಲದಿದ್ದರೆ ಆಗ ನಿರ್ಮಲ ತೀರ್ಥವಿವೆ, ಏಕೆಂದರೆ ಒಂದು ವೇಳೆ ಇವು ಕ್ರೋಧಾದಿಭಾವಸಹಿತವಿದ್ದರೆ ಮಲಿನತೆಯಾಗುವುದು ಮತ್ತು ನಿರ್ಮಲತೆ ಉಳಿಯಲಾರದು.

ಭಾವಾರ್ಥ ಃ- ಜಿನಮಾರ್ಗದಲ್ಲಂತೂ ಈ ಪ್ರಕಾರ 'ತೀರ್ಥ' ಹೇಳಿದೆ, ಜನರು ಸಮುದ್ರ-ನದಿಗಳನ್ನು ತೀರ್ಥವೆಂದು ಮನ್ನಿಸಿ ಸ್ನಾನಮಾಡಿ ಪವಿತ್ರರಾಗಲು ಬಯಸುತ್ತಾರೆ ಆ ಶರೀರದ ಬಾಹ್ಯಮಲವು ಇವುಗಳಿಂದ ಸ್ವಲ್ಪ ಕಡಿಮೆಯಾಗುತ್ತದೆ, ಆದರೆ ಶರೀರದ ಒಳಗಿರುವ ಧಾತು-ಉಪಧಾತುರೂಪದ ಅಂತರ್ಮಲವು ಇವುಗಳಿಂದ

---

ಆ ವಿಮಲ ಸುಧರ್ಮ ಸಮ್ಯಕ್ತ್ವ ಸಂಯಮ ತಪಶ್ಚರಣ ಮೇಣ್ಯಥಾರ್ಥ ಜ್ಞಾನ ।
ಇವು ಶಾಂತಭಾವಯುಕ್ತವಿದ್ದರೆ ಜಿನಮಾರ್ಗದಲಿ ನಿರ್ಮಲ ತೀರ್ಥವಿವೆ ॥೨೭॥

ಇಳಿದುಹೋಗುವುದಿಲ್ಲ ಮತ್ತು ಜ್ಞಾನಾವರಣ ಮೊದಲಾದ ಕರ್ಮರೂಪದ ಮಲ ಹಾಗೂ ಅಜ್ಞಾನ, ರಾಗ ದ್ವೇಷ-ಮೋಹ ಮೊದಲಾದ ಭಾವಕರ್ಮರೂಪದ ಮಲಗಳು ಆತ್ಮನ ಅಂತರ್ಮಲಗಳಿವೆ ಅವಂತೂ ಇವುಗಳಿಂದ ಸ್ವಲ್ಪ ಕೂಡ ಕಡಿಮೆಯಾಗುವುದಿಲ್ಲ, ಪ್ರತಿಯಾಗಿ ಹಿಂಸಾದಿಗಳಿಂದ ಪಾಪಕರ್ಮರೂಪದ ಮಲವು ತಗಲುವುದರಿಂದ ಸಮುದ್ರ ನದೀ ಮೊದಲಾದುವನ್ನು ತೀರ್ಥವೆಂದು ಮನ್ನಿಸುವುದು ಭ್ರಾಂತಿಯಿದೆ. ಯಾವುದರಿಂದ ಪಾರಾಗುವುದು ಅದು 'ತೀರ್ಥ'ವಿದೆಯೆಂದು ಜಿನಮಾರ್ಗದಲ್ಲಿ ಹೇಳಿದೆ, ಅದನ್ನೇ ಸಂಸಾರಸಮುದ್ರದಿಂದ ಪಾರುಮಾಡುವುದೆಂದು ತಿಳಿಯಬೇಕು. ॥೨೭॥

ಈ ಪ್ರಕಾರ ತೀರ್ಥದ ಸ್ವರೂಪವನ್ನು ಹೇಳಲಾಯಿತು.

೧೦) ಈಗ ಅರಹಂತರ ಸ್ವರೂಪವನ್ನು ಹೇಳುತ್ತಾರೆ,-

**ಣಾಮೇ ಠವಣೇ ಹಿ ಯ ಸಂದವ್ವೇ ಭಾವೇ ಹಿ ಸಗುಣಪಜ್ಜಾಯಾ ।**
**ಚಉಣಾಗದಿ [1]ಸಂಪದಿಮೇ ಭಾವಾ ಭವಂತಿ ಅರಹಂತಂ ॥೨೮॥**

**ನಾಮ್ನಿ ಸಂಸ್ಥಾಪನಾಯಾಂ ಹಿ ಚ ಸಂದ್ರವ್ಯೇ ಭಾವೇ ಚ [2]ಸಗುಣಪರ್ಯಾಯಾಃ ।**
**ಚ್ಯವನಮಾಗತಿಃ ಸಂಪತ್ ಇಮೇ ಭಾವಾ ಭಾವಯಂತಿ ಅರ್ಹಂತಮ್ ॥೨೮॥**

ಅರ್ಥ ಃ- ನಾಮ, ಸ್ಥಾಪನೆ, ದ್ರವ್ಯ, ಭಾವ ಇವು ನಾಲ್ಕು ಭಾವಗಳಿವೆ ಎಂದರೆ ಪದಾರ್ಥಗಳಿವೆ, ಇವು ಅರಹಂತರನ್ನು ತಿಳಿಸಿಕೊಡುತ್ತವೆ ಮತ್ತು ಸಗುಣಪರ್ಯಾಯಾಃ ಎಂದರೆ ಅರಹಂತರ ಗುಣ-ಪರ್ಯಾಯಗಳು ಸಹಿತ ಹಾಗೂ ಚಉಣಾ ಎಂದರೆ ಚ್ಯವನ ಮತ್ತು ಆಗತಿ ಹಾಗೂ ಸಂಪದವೆಂಬ ಈ ಭಾವಗಳು ಅರಹಂತರನ್ನು ತಿಳಿಸಿಕೊಡುತ್ತವೆ.

ಭಾವಾರ್ಥ ಃ- ಅರಹಂತ ಶಬ್ದದಿಂದ ಒಂದು ವೇಳೆ ಸಾಮಾನ್ಯ ಅಪೇಕ್ಷೆಯಿಂದ ಕೇವಲಜ್ಞಾನಿಗಳಾದರೆ ಅವರೆಲ್ಲರೂ ಅರಹಂತರಿದ್ದರೂ ಇಲ್ಲಿ ತೀರ್ಥಂಕರ ಪದದ ಮುಖ್ಯತೆಯಿಂದ ಕಥನ ಮಾಡುತ್ತಿರುವುದರಿಂದ ಹೆಸರು ಮೊದಲಾದವುಗಳಿಂದ ತಿಳಿಸುವುದೆಂದು ಹೇಳಿದೆ - ಲೋಕ ವ್ಯವಹಾರದಲ್ಲಿ ನಾಮ ಮೊದಲಾದವುಗಳ ಪ್ರವೃತ್ತಿಯು ಹೇಗಿದೆಯೆಂದರೆ ಯಾವುದು ಯಾವ ವಸ್ತುವಿನ ನಾಮವಿದೆ ಹಾಗೆ ಗುಣವಿಲ್ಲದಿದ್ದರೆ ಅದನ್ನು ನಾಮನಿಕ್ಷೇಪವೆಂದು ಹೇಳುತ್ತಾರೆ. ಯಾವ ವಸ್ತುವಿನ ಆಕಾರವು ಹೇಗಿದೆ ಆ ಆಕಾರದ ಕಾಷ್ಟ-ಪಾಷಾಣಾದಿಗಳ ಮೂರ್ತಿಯನ್ನು ರಚಿಸಿ ಅದರ ಸಂಕಲ್ಪ ಮಾಡಿ ಅದನ್ನು ಸ್ಥಾಪನೆಯೆಂದು ಹೇಳುತ್ತಾರೆ. ಯಾವ ವಸ್ತುವಿನ ಮೊದಲಿನ ಅವಸ್ಥೆಯಿದೆ ಅದನ್ನೇ ಮುಂದಿನ ಅವಸ್ಥೆ ಮುಖ್ಯಮಾಡಿ ಹೇಳಿದರೆ ಅದನ್ನು ದ್ರವ್ಯವೆಂದು ಹೇಳುತ್ತಾರೆ. ವರ್ತಮಾನದಲ್ಲಿ ಯಾವ ಅವಸ್ಥೆಯಿದೆ ಅದನ್ನು ಭಾವವೆಂದು ಹೇಳುತ್ತಾರೆ. ಹೀಗೆ ನಾಲ್ಕು ನಿಕ್ಷೇಪಗಳ ಪ್ರವೃತ್ತಿಯಿದೆ. ಅದರ ಕಥನವನ್ನು ಶಾಸ್ತ್ರದಲ್ಲಿ ಕೂಡ

---

**ನಾಮ ಸ್ಥಾಪನ ದ್ರವ್ಯ ಭಾವಗಳಿಂದಮಲ್ಲದೆ ಸ್ವಕೀಯ ಪರ್ಯಾಯಗಳಿಂದ ।**
**ನೇಮದಿಂದರ್ಹಂತರನು ತಿಳಿಯಬಹುದು ಆಗತಿ ಚ್ಯವನ ಸಂಪತ್ತಿಯಿಂ ॥೨೮॥**

---

೧ 'ಸಂಪದಿಮ'ವೆಂಬ ಪಾಠವು ಸಂಸ್ಕೃತ ಪ್ರತಿಯಲ್ಲಿದೆ.

೨. 'ಸಗುಣಪಜ್ಜಾಯಾ' ಈ ಪದದ ಛಾಯೆಯಲ್ಲಿ 'ಸ್ವಗುಣ ಪರ್ಯಾಯಃ' ಎಂದು ಸಂಸ್ಕೃತ ಪ್ರತಿಯಲ್ಲಿದೆ.

ಜನರಿಗೆ ತಿಳಿಸುವ ಸಲುವಾಗಿ ಮಾಡಿದೆ. ಆ ನಿಕ್ಷೇಪ-ವಿಧಾನದಿಂದ ನಾಮ, ಸ್ಥಾಪನಾ ದ್ರವ್ಯವನ್ನು ಭಾವವೆಂದು ತಿಳಿಯದಿರುವುದು ; ನಾಮವನ್ನು ನಾಮವೆಂದು ತಿಳಿದರೆ, ಸ್ಥಾಪನಾವನ್ನು ಸ್ಥಾಪನಾವೆಂದು ತಿಳಿದರೆ, ದ್ರವ್ಯವನ್ನು ದ್ರವ್ಯವೆಂದು ತಿಳಿದರೆ, ಭಾವವನ್ನು ಭಾವವೆಂದು ತಿಳಿದರೆ, ಅನ್ಯವನ್ನು ಅನ್ಯವೆಂದು ತಿಳಿದರೆ ಅನ್ಯಥಾವಂತೂ 'ವ್ಯಭಿಚಾರ' ನಾಮದ ದೋಷವು ಬರುತ್ತದೆ. ಅದನ್ನು ದೂರಮಾಡುವ ಸಲುವಾಗಿ ಜನರಿಗೆ ಯಥಾರ್ಥ ತಿಳಿಸುವುದಕ್ಕೆ ಶಾಸ್ತ್ರದಲ್ಲಿ ಕಥನವಿದೆ. ಆದರೆ ಇಲ್ಲಿ ಹಾಗೆ ನಿಕ್ಷೇಪದ ಕಥನ ತಿಳಿಯಬಾರದು. ಇಲ್ಲಿಯಂತೂ ನಿಶ್ಚಯನಯದ ಮುಖ್ಯತೆಯಿಂದ ಕಥನವಿದೆ ಅದು ಹೇಗೆ ಅರಹಂತರ ನಾಮವಿದೆ ಹಾಗೆಯೇ ಗುಣಸಹಿತ ನಾಮವನ್ನು ತಿಳಿಯುವುದು, ಸ್ಥಾಪನಾ ಹೇಗೆ ಅವನ ದೇಹ ಸಹಿತ ಮೂರ್ತಿಯಿದೆ ಅದೇ ಸ್ಥಾಪನೆಯೆಂದು ತಿಳಿಯುವುದು, ಹೇಗೆ ಅವನ ದ್ರವ್ಯವಿದೆ ಹಾಗೆ ದ್ರವ್ಯ ತಿಳಿಯುವುದು ಹೇಗೆ ಅವನ ಭಾವವಿದೆ ಹಾಗೆಯೇ ಭಾವ ತಿಳಿಯುವುದು. ॥೨೮॥

ಈ ಪ್ರಕಾರದ ಕಥನವನ್ನೇ ಈಗ ಮಾಡುತ್ತಾರೆ. ಪ್ರಥಮದಲ್ಲಿಯೇ ನಾಮವನ್ನು ಮುಖ್ಯಮಾಡಿ ಹೇಳುತ್ತಾರೆ,-

**ದಂಸಣ ಅಣಂತ ಣಾಣೇ ಮೋಕ್ಖೋ ಣಟ್ಠಟ್ಠಕಮ್ಮಬಂಧೇಣ ।**
**ಣಿರುವಮಗುಣಮಾರೂಢೋ ಅರಹಂತೋ ಏರಿಸೋ ಹೋಇ ॥೨೯॥**

**[೧]ದರ್ಶನಂ ಅನಂತಂ ಜ್ಞಾನಂ ಮೋಕ್ಷಃ ನಷ್ಟಾಷ್ಟ ಕರ್ಮಬಂಧೇನ ।**
**ನಿರುಪಮಗುಣಮಾರೂಢಃ ಅರ್ಹನ್ ಈದೃಶೋ ಭವತಿ ॥೨೯॥**

ಅರ್ಥ :- ಅವರಿಗೆ ದರ್ಶನ ಮತ್ತು ಜ್ಞಾನ ಇವಂತೂ ಅನಂತವಿವೆ, ಘಾತಿಕರ್ಮಗಳ ನಾಶದಿಂದ ಸಮಸ್ತಜ್ಞೇಯ ಪದಾರ್ಥಗಳನ್ನು ನೋಡುವುದು ಮತ್ತು ತಿಳಿಯುವುದಿದೆ, ಅಷ್ಟಕರ್ಮಗಳ ಬಂಧವು ನಷ್ಟವಾಗಿರುವುದರಿಂದ ಮೋಕ್ಷವಿದೆ. ಇಲ್ಲಿ ಸತ್ವದ ಮತ್ತು ಉದಯದ ವಿವಕ್ಷೆಯನ್ನು ಸ್ವೀಕರಿಸಬಾರದು, ಕೇವಲಿಗಳಿಗೆ ಎಂಟೂ ಕರ್ಮಗಳ ಬಂಧವಿಲ್ಲ. ಸಿದ್ಧಾಂತದಲ್ಲಿ ಸಾತಾವೇದನೀಯದ ಆಸ್ರವ ಮಾತ್ರ ಬಂಧವೆಂದು ಹೇಳಿದ್ದರೂ ಕೂಡ ಸ್ಥಿತಿ ಅನುಭಾಗರೂಪಬಂಧವಿಲ್ಲ, ಆದುದರಿಂದ ಅಬಂಧತುಲ್ಯವೇ ಇದೆ. ಈ ಪ್ರಕಾರ ಎಂಟೂ ಕರ್ಮಗಳ ಬಂಧದ ಅಭಾವದ ಅಪೇಕ್ಷೆಯಿಂದ ಭಾವಮೋಕ್ಷವೆನಿಸಿಕೊಳ್ಳುತ್ತಾರೆ ಮತ್ತು ಉಪಮಾರಹಿತಗುಣಗಳಿಂದ ಆರೂಢರಿದ್ದಾರೆ-ಸಹಿತರಿದ್ದಾರೆ. ಈ ಪ್ರಕಾರದ ಗುಣಗಳನ್ನು ಛದ್ಮಸ್ಥನಲ್ಲಿ ಹೇಳಿಯೂ ಇಲ್ಲ, ಆದುದರಿಂದ ಉಪಮಾರಹಿತ ಗುಣಗಳಿರುವವರು ಅರಹಂತರಿರುತ್ತಾರೆ.

ಭಾವಾರ್ಥ :- ಕೇವಲ ನಾಮಮಾತ್ರವಾಗಿ ಅರಹಂತನಿದ್ದರೆ ಅವನನ್ನು ಅರಹಂತನೆಂದು ಹೇಳುವುದಿಲ್ಲ. ಈ ಪ್ರಕಾರ ಗುಣಗಳಿಂದ ಸಹಿತನಿದ್ದರೆ ಅವನ ಹೆಸರು ಅರಹಂತರೆಂದು ಹೇಳುತ್ತಾರೆ, ॥೨೯॥

ಮುಂದೆ ಮತ್ತೆ ಹೇಳುತ್ತಾರೆ, -

---

**ಜ್ಞಾನ-ದರ್ಶನ ಅನಂತ ಮೇಣಷ್ಟಕರ್ಮಗಳ ಬಂಧನಾಶದಿಂ ಮೋಕ್ಷವಿದೆ ।**
**ಆ ನಿರುಪಮಗುಣಾರೂಢರಾಗಿರುವಂಥವರು ಅರಹಂತರಿರುವರು ॥೨೯॥**

---

೧ 'ದರ್ಶನೇ ಅನಂತ ಜ್ಞಾನೇ' ಎಂದು ಸಟೀಕ ಸಂಸ್ಕೃತ ಪ್ರತಿಯಲ್ಲಿ ಸಪ್ತಮೀ ಅಂತ ಪಾಠವಿದೆ.

**ಜರವಾಹಿಜಮ್ಮಮರಣಂ ಚಉಗಇಗಮಣಂ ಚ ಪುಣ್ಣಪಾವಂ ಚ ।**
**ಹಂತೂಣ ದೋಸಕಮ್ಮೇ ಹುಉ ಣಾಣಮಯಂ ಚ ಅರಹಂತೋ ॥೩೦॥**

**ಜರಾವ್ಯಾಧಿಜನ್ಮಮರಣಂ ಚತುರ್ಗತಿಗಮನಂ ಪುಣ್ಯಪಾಪಂ ಚ ।**
**ಹತ್ವಾ ದೋಷಕರ್ಮಾಣಿ ಭೂತಃ ಜ್ಞಾನಮಯಶ್ಚಾರ್ಹನ್ ॥೩೦॥**

ಅರ್ಥ ಃ– ಜರೆ–ವೃದ್ಧಾವಸ್ಥೆ, ವ್ಯಾಧಿ ರೋಗ, ಜನ್ಮ–ಮರಣ, ನಾಲ್ಕೂ ಗತಿಗಳಲ್ಲಿ ಗಮನ, ಪುಣ್ಯ–ಪಾಪ ಮತ್ತು ದೋಷಗಳನ್ನು ಉತ್ಪನ್ನ ಮಾಡುವಂಥ ಕರ್ಮಗಳನ್ನು ನಾಶಮಾಡಿ, ಕೇವಲಜ್ಞಾನಮಯರಾಗಿ ಅರಹಂತರಾದವರು ಅವರು 'ಅರಹಂತ'ರಿದ್ದಾರೆ.

ಭಾವಾರ್ಥ ಃ– ಮೊದಲಿನ ಗಾಥೆಗಳಲ್ಲಂತೂ ಗುಣಗಳ ಸದ್ಭಾವದಿಂದ ಅರಹಂತ ನಾಮವನ್ನು ಹೇಳಿದೆ ಮತ್ತು ಈ ಗಾಥೆಯಲ್ಲಿ ದೋಷಗಳ ಅಭಾವದಿಂದ ಅರಹಂತ ನಾಮವನ್ನು ಹೇಳಿದೆ. ರಾಗ, ದ್ವೇಷ, ಮದ, ಮೋಹ, ಅರತಿ, ಚಿಂತೆ, ಭಯ, ನಿದ್ರೆ, ವಿಷಾದ, ಖೇದ ಮತ್ತು ವಿಸ್ಮಯವೆಂದು ಈ ಹನ್ನೊಂದು ದೋಷಗಳಂತೂ ಘಾತಿಕರ್ಮದ ಉದಯದಿಂದ ಆಗುತ್ತವೆ ಮತ್ತು ಕ್ಷುಧೆ, ತೃಷೆ, ಜನ್ಮ, ಜರಾ, ಮರಣ, ರೋಗ ಮತ್ತು ಸ್ವೇದವೆಂದು ಈ ಏಳು ದೋಷಗಳು ಅಘಾತಿ ಕರ್ಮದ ಉದಯದಿಂದ ಆಗುತ್ತವೆ. ಈ ಗಾಥೆಯಲ್ಲಿ ಜರಾ, ರೋಗ, ಜನ್ಮ, ಮರಣ ಮತ್ತು ಚತುರ್ಗತಿಗಳಲ್ಲಿ ಗಮನದ ಅಭಾವ ಹೇಳಿರುವುದರಿಂದಂತೂ ಅಘಾತಿ ಕರ್ಮಗಳಿಂದಾದ ದೋಷಗಳ ಅಭಾವವೆಂದು ತಿಳಿಯುವುದು, ಏಕೆಂದರೆ ಅಘಾತಿ ಕರ್ಮದಲ್ಲಿ ಈ ದೋಷಗಳನ್ನು ಉತ್ಪನ್ನ ಮಾಡುವಂಥ ಪಾಪಪ್ರಕೃತಿಗಳ ಉದಯದ ಅಭಾವವು ಅರಹಂತರಿಗೆ ಇದೆ ಮತ್ತು ರಾಗ–ದ್ವೇಷ ಮೊದಲಾದ ದೋಷಗಳ ಅಭಾವವು ಘಾತಿಕರ್ಮದ ಅಭಾವದಿಂದ ಇದೆ.

ಪ್ರಶ್ನೆ ಃ– ಅರಹಂತರಿಗೆ ಮರಣದ ಮತ್ತು ಪುಣ್ಯದ ಅಭಾವ ಹೇಳಿದೆ ; ಮೋಕ್ಷಗಮನವಾಗುವ 'ಮರಣ'ವು ಅರಹಂತರಿಗಿದೆ ಮತ್ತು ಪುಣ್ಯ ಪ್ರಕೃತಿಗಳ ಉದಯವು ಕಂಡು ಬರುತ್ತದೆ, ಅವುಗಳ ಅಭಾವ ಹೇಗೆ ?

ಉತ್ತರ ಃ– ಇಲ್ಲಿ ಮರಣವಾಗಿ ಪುನಃ ಸಂಸಾರದಲ್ಲಿ ಜನ್ಮವಾಗುವಂಥ 'ಮರಣ'ದ ಅಪೇಕ್ಷೆಯಿಂದ ಈ ಕಥನವಿದೆ,ಈ ಪ್ರಕಾರದ ಮರಣವು ಅರಹಂತರಿಗೆ ಇಲ್ಲ, ಅದೇ ಪ್ರಕಾರ ಆ ಪುಣ್ಯಪ್ರಕೃತಿಯ ಉದಯವು ಪಾಪಪ್ರಕೃತಿಯ ಅಪೇಕ್ಷೆ ಮಾಡುವಂಥ ಪುಣ್ಯದ ಉದಯದ ಅಭಾವವೆಂದು ತಿಳಿಯುವುದು ಅಥವಾ ಬಂಧದ ಅಪೇಕ್ಷೆಯಿಂದ ಪುಣ್ಯದ್ದೂ ಬಂಧವಿಲ್ಲ. ಸಾತಾವೇದನೀಯದ ಬಂಧವು ಅದು ಸ್ಥಿತಿ–ಅನುಭಾಗವಿಲ್ಲದೆ ಅಬಂಧತುಲ್ಯವೇ ಇದೆ.

ಪ್ರಶ್ನೆ ಃ– ಸಿದ್ಧಾಂತದಲ್ಲಿ ಕೇವಲಿಗೆ ಅಸಾತಾವೇದನೀಯದ ಉದಯವನ್ನೂ ಹೇಳಿದೆ, ಅದರ ಪ್ರವೃತ್ತಿ ಹೇಗಿದೆ?

ಉತ್ತರ ಃ– ಈ ಪ್ರಕಾರ ಆ ಅಸಾತಾದ ಉದಯವು ಅತ್ಯಂತ ಮಂದ–ತೀರ ಮಂದ ಅನುಭಾಗವಿದೆ ಮತ್ತು ಸಾತಾದ ಉದಯವು ಅತ್ಯಂತ ತೀವ್ರ ಅನುಭಾಗವಿದೆ, ಅದರ ವಶದಿಂದ ಅಸಾತಾವು ಬಾಹ್ಯದಲ್ಲಿ ಯಾವ ಕಾರ್ಯ ಮಾಡುವಲ್ಲಿ ಸಮರ್ಥವಿಲ್ಲ, ಸೂಕ್ಷ್ಮ ಉದಯವಿತ್ತು ಉದುರಿಹೋಗುತ್ತದೆ ಮತ್ತು ಸಂಕ್ರಮಣರೂಪವಾಗಿ ಸಾತಾರೂಪವಾಗಿ ಹೋಗುತ್ತದೆಯೆಂದು ತಿಳಿಯಬೇಕು. ಈ ಪ್ರಕಾರ ಅನಂತಚತುಷ್ಟಯಸಹಿತ ಸರ್ವ ದೋಷರಹಿತ

---

ಜರಾವ್ಯಾಧಿಜನ್ಮಮರಣ ಚತುರ್ಗತಿಗಮನರೂಪ ಪುಣ್ಯ–ಪಾಪಗಳ ।
ಪರಿಹರಿಸಿ ದೋಷಕರ್ಮಗಳ ಜ್ಞಾನಮಯರಾದ ಅರಹಂತರಾದರು ॥೩೦॥

ಸರ್ವಜ್ಞ ವೀತರಾಗರಿದ್ದರೆ ಅವರನ್ನು ಹೆಸರಿನಿಂದ 'ಅರಹಂತ'ರೆಂದು ಹೇಳುತ್ತಾರೆ. ॥೩೦॥

ಈಗ ಸ್ಥಾಪನೆಯ ಮುಖಾಂತರ ಅರಹಂತರ ವರ್ಣನೆ ಮಾಡುತ್ತಾರೆ, –

ಗುಣಠಾಣಮಗ್ಗಣೇಹಿಂ ಯ ಪಜ್ಜತ್ತೀಪಾಣಜೀವಠಾಣೇಹಿಂ ।
ಠಾವಣ ಪಂಚವಿಹೇಹಿಂ ಪಣಯವ್ವಾ ಅರಹಪುರಿಸಸ್ಸ ॥೩೧॥

ಗುಣಸ್ಥಾನಮಾರ್ಗಣಾಭಿಃ ಚ ಪರ್ಯಾಪ್ತಿ ಪ್ರಾಣ ಜೀವಸ್ಥಾನೈಃ ।
ಸ್ಥಾಪನಾ ಪಂಚವಿಧೈಃ ಪ್ರಣೇತವ್ಯಾ ಅರ್ಹತ್ಪುರುಷಸ್ಯ ॥೩೧॥

ಅರ್ಥ ಃ– ಗುಣಸ್ಥಾನ, ಮಾರ್ಗಣಾಸ್ಥಾನ, ಪರ್ಯಾಪ್ತಿ, ಪ್ರಾಣ ಮತ್ತು ಜೀವಸ್ಥಾನವೆಂದು ಈ ಐದು ಪ್ರಕಾರದಿಂದ ಅರಹಂತ ಪುರುಷರ ಸ್ಥಾಪನೆ ಪ್ರಾಪ್ತಮಾಡುವುದು ಅಥವಾ ಅವರಿಗೆ ಪ್ರಣಾಮಮಾಡಬೇಕಾಗುವುದು.

ಭಾವಾರ್ಥ ಃ– ಸ್ಥಾಪನಾನಿಕ್ಷೇಪದಲ್ಲಿ ಕಾಷ್ಟ ಪಾಷಾಣ ಮೊದಲಾದವುಗಳೊಳಗೆ ಸಂಕಲ್ಪ ಮಾಡುವುದನ್ನು ಹೇಳಿದೆ ಅದು ಇಲ್ಲಿ ಮುಖ್ಯವಿಲ್ಲ. ಇಲ್ಲಿ ನಿಶ್ಚಯದ ಮುಖ್ಯತೆಯಿಂದ ಕಥನವಿದೆ. ಇಲ್ಲಿ ಗುಣಸ್ಥಾನ ಮೊದಲಾದವುಗಳಿಂದ ಅರಹಂತರ ಸ್ಥಾಪನೆಯನ್ನು ಹೇಳಿದೆ. ॥೩೧॥

ಈಗ ವಿಶೇಷ ಹೇಳುತ್ತಾರೆ, –

ತೇರಹಮೇ ಗುಣಠಾಣೇ ಸಜೋಇಕೇವಲಿಯ ಹೋಇ ಅರಹಂತೋ ।
ಚಉತೀಸ ಅಇಸಯಗುಣಾ ಹೋಂತಿ ಹು ತಸ್ಸಟ್ಠ ಪಡಿಹಾರಾ ॥೩೨॥

ತ್ರಯೋದಶೇ ಗುಣಸ್ಥಾನೇ ಸಯೋಗಕೇವಲಿಕಃ ಭವತಿ ಅರ್ಹನ್ ।
ಚತುಸ್ತ್ರಿಂಶತ್ ಅತಿಶಯಗುಣಾ ಭವಂತಿ ಸ್ಫುಟಂ ತಸ್ಯಾಷ್ಟಪ್ರಾತಿಹಾರ್ಯಾ ॥೩೨॥

ಅರ್ಥ ಃ– ಹದಿನಾಲ್ಕು ಗುಣಸ್ಥಾನಗಳನ್ನು ಹೇಳಿದ್ದಾರೆ, ಅವುಗಳಲ್ಲಿ ಸಯೋಗಕೇವಲಿ ನಾಮದ ಹದಿಮೂರನೆಯ ಗುಣಸ್ಥಾನವಿದೆ. ಅದರಲ್ಲಿ ಯೋಗಗಳ ಪ್ರವೃತ್ತಿ ಸಹಿತ ಕೇವಲಜ್ಞಾನಸಹಿತ ಸಯೋಗ ಕೇವಲೀ ಅರಹಂತರಿರುತ್ತಾರೆ. ಅವರಿಗೆ ಮೂವತ್ತಾನ್ಲಾಲ್ಕು ಅತಿಶಯ ಮತ್ತು ಎಂಟು ಪ್ರಾತಿಹಾರ್ಯಗಳಿರುತ್ತವೆ, ಹೀಗಂತೂ ಗುಣಸ್ಥಾನ ಮುಖಾಂತರ 'ಸ್ಥಾಪನಾ ಅರಹಂತ'ರೆನಿಸಿಕೊಳ್ಳುತ್ತಾರೆ.

---

ಗುಣಸ್ಥಾನ ಮಾರ್ಗಣಾಸ್ಥಾನ ಪರ್ಯಾಪ್ತಿ ಪ್ರಾಣಮಲ್ಲದೆ ಜೀವಸ್ಥಾನವೆಂಬೈದು ।
ಎಣಿಕೆಯಿಂ ಅರಹಂತ ಪುರುಷರ ಸ್ಥಾಪನೆ ಮಾಡುವುದು ಕರ್ತವ್ಯವಿದೆ ॥೩೧॥

ತವೆ ಹದಿಮೂರನೇ ಗುಣಸ್ಥಾನ ಸಯೋಗಕೇವಲಿ ಅರಹಂತರದಿದೆ ।
ಅವರಿಗೆ ಮೂವತ್ತಾನ್ಲಾಲ್ಕು ಅತಿಶಯ ಮೇಣಷ್ಟಪ್ರಾತಿಹಾರ್ಯಗಳಿರುವವು ॥೩೨॥

ಭಾವಾರ್ಥ :- ಇಲ್ಲಿ ಮೂವತ್ತಾ ನ್ಲುಕ್ಕು ಅತಿಶಯ ಮತ್ತು ಎಂಟು ಪ್ರಾತಿಹಾರ್ಯ ಹೇಳುವುದರಿಂದಂತೂ ಸಮವಸರಣದಲ್ಲಿ ವಿರಾಜಮಾನ ಹಾಗೂ ವಿಹಾರ ಮಾಡುತ್ತಿರುವ ಅರಹಂತರಿದ್ದಾರೆ ಮತ್ತು 'ಸಯೋಗ'ವೆಂದು ಹೇಳುವುದರಿಂದ ವಿಹಾರದ ಪ್ರವೃತ್ತಿ ಮತ್ತು ವಚನದ ಪ್ರವೃತ್ತಿಯು ಸಿದ್ಧವಾಗುತ್ತದೆ. 'ಕೇವಲಿ'ಯೆಂದು ಹೇಳುವುದರಿಂದ ಕೇವಲಜ್ಞಾನದಿಂದ ಸಮಸ್ತ ತತ್ತ್ವಗಳನ್ನು ತಿಳಿಯುವುದು ಸಿದ್ಧವಾಗುತ್ತದೆ. ಮೂವತ್ತಾ ನ್ಲುಕ್ಕು ಅತಿಶಯಗಳಲ್ಲಿ ಜನ್ಮದಿಂದ ಪ್ರಕಟವಾಗುವಂಥವು ಹತ್ತು ಇವೆ. ೧) ಮಲಮೂತ್ರದ ಅಭಾವ, ೨) ಸ್ವೇದದ ಅಭಾವ, ೩) ಧವಲ ರುಧಿರವಿರುವುದು, ೪) ಸಮಚತುರಸ್ರಸಂಸ್ಥಾನ, ೫) ವಜ್ರವೃಷಭನಾರಾಚ ಸಂಹನನ, ೬) ಸುಂದರರೂಪು, ೭)ಸುಗಂಧ ಶರೀರ, ೮) ಶುಭ ಲಕ್ಷಣಗಳಿರುವುದು, ೯) ಅನಂತಬಲ, ೧೦) ಮಧುರವಚನ ಈ ಪ್ರಕಾರ ಹತ್ತು ಇರುತ್ತವೆ.

ಕೇವಲಜ್ಞಾನವು ಉತ್ಪನ್ನವಾದ ನಂತರ ಹತ್ತು ಆಗುತ್ತವೆ, ೧) ಉಪಸರ್ಗದ ಅಭಾವ, ೨) ಅದಯದ ಅಭಾವ, ೩) ಶರೀರದ ನೆರಳು ಬೀಳದಿರುವುದು, ೪) ಚತುರ್ಮುಖಗಳು ಗೋಚರಿಸುವುದು, ೫) ಸಮಸ್ತ ವಿದ್ಯೆಗಳ ಸ್ವಾಮಿತ್ವ, ೬) ಕಣ್ಣುಗಳ ರೆಪ್ಪೆ ಹೊಡೆಯದಿರುವುದು, ೭) ನೂರುಯೋಜನ ಸುಭಿಕ್ಷತೆ, ೮) ಆಕಾಶಗಮನ, ೯) ಕವಲಾಹಾರವಿಲ್ಲದಿರುವುದು, ೧೦) ನಖಕೇಶಗಳ ವೃದ್ಧಿಯಾಗದಿರುವುದು, ಹೀಗೆ ಹತ್ತು ಆಗುತ್ತವೆ.

ಹದಿನಾಲ್ಕು ದೇವಕೃತಗಳಿರುತ್ತವೆ. ೧) ಸಕಲಾರ್ಧಮಾಗಧೀ ಭಾಷೆ, ೨) ಸಮಸ್ತ ಜೀವಗಳಲ್ಲಿ ಮೈತ್ರಿ ಭಾವ, ೩) ಎಲ್ಲ ಋತುಗಳ ಫಲ ಪುಷ್ಪಗಳು ಫಲಿಸುವುದು, ೪) ಕನ್ನಡಿಯ ಸಮಾನವಾದ ಭೂಮಿ, ೫) ಕಂಟಕರಹಿತ ಭೂಮಿ, ೬) ಮಂದ ಸುಗಂಧ ಮಾರುತ, ೭) ಎಲ್ಲರ್ರಿಗೆ ಆನಂದವಿರುವುದು, ೮) ಗಂಧೋದಕದ ವೃಷ್ಟಿಯಾಗುವುದು, ೯) ಪಾದಗಳ ಕೆಳಗೆ ಕಮಲಗಳ ರಚನೆ, ೧೦) ಸರ್ವಧಾನ್ಯ ನಿಷ್ಪತ್ತಿ, ೧೧) ಹತ್ತು ದಿಕ್ಕುಗಳು ನಿರ್ಮಲವಾಗಿರುವುದು, ೧೨) ದೇವಗಳ ಮುಖಾಂತರ ಆಹ್ವಾನನ ಶಬ್ದ, ೧೩) ಮುಂದೆ ಮುಂದೆ ಧರ್ಮಚಕ್ರದ ಚಲನೆ, ೧೪) ಅಷ್ಟಮಂಗಲ ದ್ರವ್ಯಗಳು ಮುಂದೆ ಚಲಿಸುವುದು.

ಅಷ್ಟ ಮಂಗಲ ದ್ರವ್ಯಗಳ ಹೆಸರು - ೧) ಛತ್ರ, ೨) ಧ್ವಜ, ೩) ಕನ್ನಡಿ, ೪) ಕಲಶ, ೫) ಚಾಮರ, ೬) ಭೃಂಗಾರ (ಗಿಂಡಿ), ೭) ಕೈತಾಳ ಮತ್ತು ೮) ಸ್ವಸ್ತಿಕ ಎಂದರೆ ಸುಪ್ರತೀಚ್ಛಕ ಹೀಗೆ ಎಂಟು ಇರುತ್ತವೆ. ಈ ಪ್ರಕಾರ ಮೂವತ್ತಾ ನ್ಲುಕ್ಕು ಅತಿಶಯಗಳ ಹೆಸರು ಹೇಳಲಾಯಿತು.

ಎಂಟು ಪ್ರಾತಿಹಾರ್ಯಗಳಿರುತ್ತವೆ ಅವುಗಳ ಹೆಸರು - ೧) ಅಶೋಕವೃಕ್ಷ, ೨) ಪುಷ್ಪವೃಷ್ಟಿ, ೩) ದಿವ್ಯಧ್ವನಿ, ೪) ಚಾಮರ, ೫) ಸಿಂಹಾಸನ, ೬) ಭಾಮಂಡಲ, ೭) ದುಂದುಭಿವಾದನ, ಮತ್ತು ೮) ಛತ್ರ ಹೀಗೆ ಎಂಟು ಇರುತ್ತವೆ, ಈ ಪ್ರಕಾರ ಗುಣಸ್ಥಾನದಿಂದ ಅರಹಂತರ ಸ್ಥಾಪನೆ ಹೇಳಲಾಯಿತು. ।।೩೨।।

ಈಗ ಮಾರ್ಗಣಾದ ಮುಖಾಂತರ ಹೇಳುತ್ತಾರೆ, -

**ಗಇ ಇಂದಿಯಂ ಚ ಕಾಏ ಜೋಏ ವೇಏ ಕಸಾಯ ಣಾಣೇ ಯ ।**
**ಸಂಜಮ ದಂಸಣ ಲೇಸಾ ಭವಿಯಾ ಸಮ್ಮತ್ತ ಸಣ್ಣಿ ಆಹಾರೇ ।।೩೩।।**

---

**ಗತಿ ಇಂದ್ರಿಯ ಮೇಣ್ಕಾಯ ಯೋಗ ವೇದ ಕಷಾಯ ಜ್ಞಾನ ಸಂಯಮಮದರಂತೆ ।**
**ನುತ ದರ್ಶನ ಲೇಶ್ಯೆ ಭವ್ಯತ್ವ ಸಮ್ಯಕ್ತ್ವ ಸಂಜ್ಞಿ ಆಹಾರದಿಂ ಸ್ಥಾಪಿಸುವುದು ।।೩೩।।**

**ಗತೌ ಇಂದ್ರಿಯೇ ಚ ಕಾಯೇ ಯೋಗೇ ವೇದೇ ಕಷಾಯೇ ಜ್ಞಾನೇ ಚ ।**
**ಸಂಯಮೇ ದರ್ಶನೇ ಲೇಶ್ಯಾಯಾಂ ಭವ್ಯತ್ವೇ ಸಮ್ಯಕ್ತ್ವೇ ಸಂಜ್ಞಿನಿ ಆಹಾರೇ ।।೩೩।।**

ಅರ್ಥ :- ಗತಿ, ಇಂದ್ರಿಯ, ಕಾಯ, ಯೋಗ, ವೇದ, ಕಷಾಯ, ಜ್ಞಾನ, ಸಂಯಮ, ದರ್ಶನ, ಲೇಶ್ಯೆ, ಭವ್ಯತ್ವ, ಸಮ್ಯಕ್ತ್ವ, ಸಂಜ್ಞೀ ಮತ್ತು ಆಹಾರವೆಂದು ಹದಿನಾಲ್ಕು ಮಾರ್ಗಣಗಳಿರುತ್ತವೆ. ಅರಹಂತ ಸಯೋಗಕೇವಲಿಗೆ ಹದಿಮೂರನೆಯ ಗುಣಸ್ಥಾನವಿದೆ, ಇದರಲ್ಲಿ 'ಮಾರ್ಗಣಾ' ತಗಲಿಸುತ್ತಾರೆ. ಚತುರ್ಗತಿಗಳಲ್ಲಿ ಮನುಷ್ಯಗತಿಯಿದೆ, ಐದು ಇಂದ್ರಿಯ ಜಾತಿಗಳಲ್ಲಿ ಪಂಚೇಂದ್ರಿಯ ಜಾತಿಯಿದೆ, ಆರು ಕಾಯಗಳಲ್ಲಿ ತ್ರಸ ಕಾಯವಿದೆ, ಹದಿನೈದು ಯೋಗಗಳಲ್ಲಿ ಮನೋಯೋಗವಂತೂ ಸತ್ಯ ಮತ್ತು ಅನುಭಯವೆಂದು ಎರಡು ಮತ್ತು ಇವೇ ವಚನಯೋಗ ಎರಡು ಹಾಗೂ ಕಾಯಯೋಗ ಔದಾರಿಕವೆಂದು ಐದು ಯೋಗಗಳಿವೆ, ಸಮುದ್ಘಾತ ಮಾಡಿದಾಗ ಔದಾರಿಕಮಿಶ್ರ ಮತ್ತು ಕಾರ್ಮಾಣ ಇವೆರಡು ಸೇರಿ ಏಳು ಯೋಗಗಳಿವೆ ; ಮೂರೂ ವೇದಗಳ ಅಭಾವವಿದೆ ; ಇಪ್ಪತ್ತೈದು ಕಷಾಯಗಳೆಲ್ಲದರ ಅಭಾವವಿದೆ ; ಎಂಟು ಜ್ಞಾನಗಳಲ್ಲಿ ಕೇವಲಜ್ಞಾನವಿದೆ ; ಏಳು ಸಂಯಮಗಳಲ್ಲಿ ಒಂದು ಯಥಾಖ್ಯಾತವಿದೆ ; ನಾಲ್ಕು ದರ್ಶನಗಳಲ್ಲಿ ಒಂದು ಕೇವಲದರ್ಶನವಿದೆ ; ಆರು ಲೇಶ್ಯೆಗಳಲ್ಲಿ ಒಂದು ಶುಕ್ಲವು ಅದು ಯೋಗನಿಮಿತ್ತವಿದೆ ; ಎರಡು ಭವ್ಯಗಳಲ್ಲಿ ಒಂದು ಭವ್ಯವಿದೆ ; ಆರು ಸಮ್ಯಕ್ತ್ವದಲ್ಲಿ ಕ್ಷಾಯಿಕ ಸಮ್ಯಕ್ತ್ವವಿದೆ; ಎರಡು ಸಂಜ್ಞಿಗಳಲ್ಲಿ ಸಂಜ್ಞಿಯಿದೆ ಅದು ದ್ರವ್ಯದಿಂದಿದೆ ಭಾವದಿಂದ ಕ್ಷಯೋಪಶಮರೂಪ ಭಾವಮನದ ಅಭಾವವಿದೆ ; ಆಹಾರಕ-ಅನಾಹಾರಕಗಳೆರಡರಲ್ಲಿ 'ಆಹಾರಕ'ವಿದೆ ಅದು ಕೂಡ ನೋಕರ್ಮವರ್ಗಣಾದ ಅಪೇಕ್ಷೆಯಿಂದ ಇದೆ, ಆದರೆ ಕವಲಾಹಾರವಿಲ್ಲ ಮತ್ತು ಸಮುದ್ಘಾತ ಮಾಡಿದರೆ 'ಅನಾಹಾರಕ'ವು ಕೂಡ ಇದೆ, ಈ ಪ್ರಕಾರ ಎರಡೂ ಇವೆ. ಈ ಪ್ರಕಾರವಾಗಿ ಮಾರ್ಗಣಾದ ಅಪೇಕ್ಷೆಯಿಂದ ಅರಹಂತರ ಸ್ಥಾಪನೆಯಿದೆಯೆಂದು ತಿಳಿಯಬೇಕು. ।।೩೩।।

ಈಗ ಪರ್ಯಾಪ್ತಿಯ ಮುಖಾಂತರ ಹೇಳುತ್ತಾರೆ, -

**ಆಹಾರೋ ಯ ಸರೀರೋ ಇಂದಿಯಮಣಆಣಪಾಣಭಾಸಾ ಯ ।**
**ಪಜ್ಜತ್ತಿಗುಣಸಮಿದ್ಧೋ ಉತ್ತಮದೇವೋ ಹವಇ ಅರಹೋ ।।೩೪।।**

**ಆಹಾರಃ ಚ ಶರೀರಂ ಇಂದ್ರಿಯಮನಆನಪ್ರಾಣಭಾಷಾಃ ಚ ।**
**ಪರ್ಯಾಪ್ತಿಗುಣಸಮೃದ್ಧಃ ಉತ್ತಮದೇವಃ ಭವತಿ ಅರ್ಹನ್ ।।೩೪।।**

ಅರ್ಥ :- ಆಹಾರ, ಶರೀರ, ಇಂದ್ರಿಯ, ಮನ, ಆನಪ್ರಾಣ ಎಂದರೆ ಶ್ವಾಸೋಚ್ಛ್ವಾಸ ಮತ್ತು ಭಾಷೆಯೆಂದು ಆರು ಪರ್ಯಾಪ್ತಿಗಳಿವೆ, ಈ ಪರ್ಯಾಪ್ತಿ ಗುಣದಿಂದ ಸಮೃದ್ಧ ಎಂದರೆ ಯುಕ್ತರಾದ ಉತ್ತಮ ದೇವರು ಅರಹಂತರಿದ್ದಾರೆ.

ಭಾವಾರ್ಥ :- ಪರ್ಯಾಪ್ತಿಯ ಸ್ವರೂಪವು ಹೀಗಿದೆ - ಆ ಜೀವವು ಒಂದು ಅನ್ಯ ಪರ್ಯಾಯವನ್ನು ಬಿಟ್ಟುಕೊಟ್ಟು ಬೇರೆ ಪರ್ಯಾಯದಲ್ಲಿ ಹೋಗುವಾಗ ವಿಗ್ರಹಗತಿಯಲ್ಲಿ ಉತ್ಕೃಷ್ಟ ಮೂರು ಸಮಯ ಮಧ್ಯದಲ್ಲಿರುವುದು,

---

**ಆಹಾರ ಶರೀರ ಇಂದ್ರಿಯ ಮನ ಆನಪ್ರಾಣಮದಂತೆ ಭಾಷೆಯೆಂದಾರು ।**
**ಇಹವಾಪರ್ಯಾಪ್ತಿಗುಣದಿಂ ಸಮೃದ್ಧರಿಹರುತ್ತಮದೇವ ಅರಹಂತರು ।।೩೪।।**

ನಂತರ ಸಂಜ್ಞೀ ಪಂಚೇಂದ್ರಿಯದಲ್ಲಿ ಉತ್ಪನ್ನವಾಗುವುದು. ಅಲ್ಲಿ ಆಹಾರವರ್ಗಣೆ, ಭಾಷಾ ವರ್ಗಣೆ, ಮನೋವರ್ಗಣೆಯೆಂದು ಮೂರು ಜಾತಿಯ ವರ್ಗಣೆಗಳನ್ನು ಗ್ರಹಣ ಮಾಡಿ 'ಆಹಾರ' ಜಾತಿಯ ವರ್ಗಣಾದಿಂದಂತೂ ಆಹಾರ, ಶರೀರ, ಇಂದ್ರಿಯ ಶ್ವಾಸೋಚ್ಛ್ವಾಸವೆಂದು ಹೀಗೆ ನಾಲ್ಕು ಪರ್ಯಾಪ್ತಿಗಳನ್ನು ಅಂತರ್ಮುಹೂರ್ತ ಕಾಲದಲ್ಲಿ ಪೂರ್ಣಮಾಡುವುದು ಅನಂತರ ಭಾಷಾಜಾತಿ ಮನೋಜಾತಿಯ ವರ್ಗಣಾದಿಂದ ಅಂತರ್ಮುಹೂರ್ತದಲ್ಲಿಯೇ ಭಾಷಾ, ಮನಃಪರ್ಯಾಪ್ತಿಗಳನ್ನು ಪೂರ್ಣಮಾಡುವುದು ಈ ಪ್ರಕಾರ ಆರೂ ಪರ್ಯಾಪ್ತಿಗಳನ್ನು ಅಂತರ್ಮುಹೂರ್ತದಲ್ಲಿ ಪೂರ್ಣಮಾಡುತ್ತದೆ ಅದಾದನಂತರ ಆಯುವಿನವರೆಗೆ ಪರ್ಯಾಪ್ತಿಯೆಂದೇ ಹೇಳಲಾಗುತ್ತದೆ ಮತ್ತು ನೋಕರ್ಮವರ್ಗಣಾದ ಗ್ರಹಣ ಮಾಡುತ್ತಲೇ ಇರುತ್ತದೆ. ಇಲ್ಲಿ ಆಹಾರ ನಾಮವನ್ನು ಕವಲಾಹಾರವೆಂದು ತಿಳಿಯಬಾರದು. ಈ ಪ್ರಕಾರ ಹದಿಮೂರನೆಯ ಗುಣಸ್ಥಾನದಲ್ಲೂ ಅರಹಂತರ ಪರ್ಯಾಪ್ತಿಯು ಪೂರ್ಣವೇ ಇದೆ, ಹೀಗೆ ಪರ್ಯಾಪ್ತಿಯ ಮುಖಾಂತರ ಅರಹಂತರ ಸ್ಥಾಪನೆಯಿದೆ. ॥೩೪॥

ಈಗ ಪ್ರಾಣ ಮುಖಾಂತರ ಹೇಳುತ್ತಾರೆ, -

**ಪಂಚ ವಿ ಇಂದಿಯಪಾಣಾ ಮಣವಯಕಾಏಣ ತಿಣ್ಣಿ ಬಲಪಾಣಾ ।**
**ಆಣಪ್ಪಾಣಪ್ಪಾಣಾ ಆಉಗಪಾಣೇಣ ಹೋಂತಿ ದಹ ಪಾಣಾ ॥೩೫॥**

**ಪಂಚಾಪಿ ಇಂದ್ರಿಯಪ್ರಾಣಾಃ ಮನೋವಚನಕಾಯೈಃ ತ್ರಯೋ ಬಲಪ್ರಾಣಾಃ ।**
**ಆನಪ್ರಾಣಪ್ರಾಣಾಃ ಆಯುಷ್ಕಪ್ರಾಣೇನ ಭವಂತಿ ದಶಪ್ರಾಣಾಃ ॥೩೫॥**

ಅರ್ಥ :- ಐದು ಇಂದ್ರಿಯಪ್ರಾಣಗಳು, ಮನ-ವಚನ-ಕಾಯವೆಂದು ಮೂರು ಬಲಪ್ರಾಣಗಳು ಒಂದು ಶ್ವಾಸೋಚ್ಛ್ವಾಸ ಪ್ರಾಣ ಮತ್ತು ಒಂದು ಆಯುಷ್ಯ ಪ್ರಾಣವೆಂದು ಇವು ಹತ್ತು ಪ್ರಾಣಗಳಿವೆ.

ಭಾವಾರ್ಥ :- ಈ ಪ್ರಕಾರ ಹತ್ತು ಪ್ರಾಣಗಳನ್ನು ಹೇಳಿದೆ, ಅವುಗಳಲ್ಲಿ ಹದಿಮೂರನೆಯ ಗುಣಸ್ಥಾನದಲ್ಲಿ ಭಾವ ಇಂದ್ರಿಯ ಮತ್ತು ಭಾವಮನದ ಕ್ಷಯೋಪಶಮಭಾವರೂಪದ ಪ್ರವೃತ್ತಿಯಿಲ್ಲವೆಂಬ ಅಪೇಕ್ಷೆಯಿಂದಂತೂ ಕಾಯಬಲ, ವಚನಬಲ, ಶ್ವಾಸೋಚ್ಛ್ವಾಸ, ಆಯುವೆಂದು ಈ ನಾಲ್ಕು ಪ್ರಾಣಗಳಿವೆ ಮತ್ತು ದ್ರವ್ಯ ಅಪೇಕ್ಷೆಯಿಂದ ಹತ್ತೂ ಇವೆ. ಈ ಪ್ರಕಾರ ಪ್ರಾಣದ ಮುಖಾಂತರ ಅರಹಂತರ ಸ್ಥಾಪನೆಯಿದೆ. ॥೩೫॥

ಈಗ ಜೀವಸ್ಥಾನದ ಮುಖಾಂತರ ಹೇಳುತ್ತಾರೆ.

**ಮಣುಯಭವೇ ಪಂಚಿಂದಿಯ ಜೀವಟ್ಠಾಣೇಸು ಹೋಇ ಚಉದಸಮೇ ।**
**ಏದೇ ಗುಣಗಣಜುತ್ತೋ ಗುಣಮಾರೂಢೋ ಹವಇ ಅರಹೋ ॥೩೬॥**

---

**ಐದು ಇಂದ್ರಿಯಪ್ರಾಣ ಮನ-ವಚ-ಕಾಯಗಳೆಂದು ಮೂರು ಬಲಪ್ರಾಣಗಳು ।**
**ತುದಿಗೆ ಆನಪ್ರಾಣಪ್ರಾಣ ಮೇಣಾಯುಷ್ಯಪ್ರಾಣವೆಂದೀ ದಶಪ್ರಾಣಗಳಿವೆ ॥೩೫॥**

**ಮನುಷ್ಯಭವದಲಿ ಪಂಚೇಂದ್ರಿನಾಮದ ಹದಿನಾಲ್ಕನೇ ಜೀವಸ್ಥಾನವಿದೆ ।**
**ಇನಿತು ಗುಣಗಣಯುಕ್ತ ಗುಣಮಾರೂಢರಾದ ಅರಹಂತರಿರುವರು ॥೩೬॥**

**ಮನುಜಭವೇ ಪಂಚೇಂದ್ರಿಯಃ ಜೀವಸ್ಥಾನೇಷು ಭವತಿ ಚತುರ್ದಶೇ ।**
**ಏತದ್ಗುಣಗಣಯುಕ್ತಃ ಗುಣಮಾರೂಢೋ ಭವತಿ ಅರ್ಹನ್ ।।೩೬।।**

ಅರ್ಥ :- ಮನುಷ್ಯ ಭವದಲ್ಲಿ ಪಂಚೇಂದ್ರಿಯ ನಾಮದ ಹದಿನಾಲ್ಕನೆಯ ಜೀವಸ್ಥಾನ ಎಂದರೆ ಜೀವ ಸಮಾಸದಲ್ಲಿ ಇಷ್ಟು ಗುಣಗಳ ಸಮೂಹದಿಂದ ಯುಕ್ತವಾದ ಹದಿಮೂರನೆಯ ಗುಣಸ್ಥಾನಕ್ಕೆ ಪ್ರಾಪ್ತರಾದ ಅರಹಂತರಿರುತ್ತಾರೆ.

ಭಾವಾರ್ಥ :- ಹದಿನಾಲ್ಕು ಜೀವ ಸಮಾಸಗಳನ್ನು ಹೇಳಿದ್ದಾರೆ. ಏಕೇಂದ್ರಿಯ ಸೂಕ್ಷ್ಮ ಬಾದರ ೨, ದ್ವೀಂದ್ರಿಯ, ತ್ರೀಂದ್ರಿಯ, ಚತುರಿಂದ್ರಿಯವೆಂದು ವಿಕಲತ್ರಯಗಳು ೩, ಪಂಚೇಂದ್ರಿಯ ಅಸಂಜ್ಞೀ ಸಂಜ್ಞೀ ೨, ಹೀಗೆ ಏಳು ಆದವು, ಇವು ಪರ್ಯಾಪ್ತ ಅಪರ್ಯಾಪ್ತದ ಭೇದದಿಂದ ಹದಿನಾಲ್ಕು ಆದವು. ಇವುಗಳಲ್ಲಿ ಹದಿನಾಲ್ಕನೆಯ 'ಸಂಜ್ಞೀ ಪಂಚೇಂದ್ರಿಯ ಜೀವಸ್ಥಾನ'ವು ಅರಹಂತರಿಗಿದೆ. ಗಾಥೆಯಲ್ಲಿ ಸಂಜ್ಞಿಯ ಹೆಸರನ್ನು ತೆಗೆದುಕೊಂಡಿಲ್ಲ ಮತ್ತು ಮನುಷ್ಯಭವದ ಹೆಸರು ಸ್ವೀಕರಿಸಿದ್ದಾರೆ, ಆದರೆ ಮನುಷ್ಯರು ಸಂಜ್ಞಿಗಳೇ ಇರುತ್ತಾರೆ, ಅಸಂಜ್ಞಿಗಳಿರುವುದಿಲ್ಲ, ಆದುದರಿಂದ ಮನುಷ್ಯನೆಂದು ಹೇಳುವುದರಲ್ಲಿ 'ಸಂಜ್ಞಿ'ಯೆಂದೇ ತಿಳಿಯಬೇಕು. ।।೩೬।।

ಈ ಪ್ರಕಾರ ಜೀವಸ್ಥಾನದ ಮುಖಾಂತರ 'ಸ್ಥಾಪನಾ ಅರಹಂತ'ರ ವರ್ಣನೆ ಮಾಡಲಾಯಿತು.

ಈಗ ದ್ರವ್ಯದ ಮುಖ್ಯತೆಯಿಂದ ಅರಹಂತರ ನಿರೂಪಣೆ ಮಾಡುತ್ತಾರೆ,-

**ಜರವಾಹಿದುಕ್ಖರಹಿಯಂ ಆಹಾರಣಿಹಾರವಜ್ಜಿಯಂ ವಿಮಲಂ ।**
**ಸಿಂಹಾಣ ಖೇಲ ಸೇಓ ಣತ್ಥಿ ದುಗುಂಛಾ ಯ ದೋಸೋ ಯ ।।೩೭।।**

**ದಸ ಪಾಣಾ ಪಜ್ಜತ್ತೀ ಅಟ್ಠಸಹಸ್ಸಾ ಯ ಲಕ್ಖಣಾ ಭಣಿಯಾ ।**
**ಗೋಖೀರಸಂಖಧವಲಂ ಮಂಸಂ ರುಹಿರಂ ಚ ಸವ್ವಂಗೇ ।।೩೮।।**

**ಏರಿಸಗುಣೇಹಿಂ ಸವ್ವಂ ಅಇಸಯವಂತಂ ಸುಪರಿಮಲಾಮೋಯಂ ।**
**ಓರಾಲಿಯಂ ಚ ಕಾಯ ಣಾಯವ್ವಂ ಅರಹಪುರಿಸಸ್ಸ ।।೩೯।।**

---

**ವ್ಯಾಧಿಜರಾದುಃಖಗಳಿಲ್ಲದ ಆಹಾರನಿಹಾರವರ್ಜಿತ ವಿಮಲವಿದೆ ।**
**ಸ್ವೇದಕಫ ಉಗುಳು ಮೇಣ್ಜುಗುಪ್ಸೆಗ್ಲಾನಿಮಲ್ಲದೆದುರ್ಗಂಧಾದಿ ದೋಷವಿಲ್ಲ ।।೩೭।।**

**ದಶಪ್ರಾಣ ಪೂರ್ಣಪರ್ಯಾಪ್ತಿಮಲ್ಲದೆ ಅಷ್ಟಸಹಸ್ರಲಕ್ಷಣಯುಕ್ತರಿದ್ದು ।**
**ಆ ಶಂಖಗೋಕ್ಷೀರಸಮ ಧವಲರಕ್ತ ಮಾಂಸವಿರುವುದು ಸರ್ವಾಂಗದಲಿ ।।೩೮।।**

**ಈ ದೊರೆಯಗುಣಗಳಿಂ ಸರ್ವಾಂಗಅತಿಶಯವಂತ ಸುಪರಿಮಲಾಮೋದ ।**
**ಔದಾರಿಕದೇಹ ಅರಹಂತಪುರುಷರಿಗಿರುವುದೆಂದು ತಿಳಿಯುವುದು ।।೩೯।।**

ಜರಾವ್ಯಾಧಿದುಃಖರಹಿತಃ ಆಹಾರನೀಹಾರವರ್ಜಿತಃ ವಿಮಲಃ ।
ಸಿಂಹಾಣಃ ಖೇಲಃ ಸ್ವೇದಃ ನಾಸ್ತಿ ದುರ್ಗಂಧಃ ಚ ದೋಷಃ ಚ ॥೩೭॥

ದಶ ಪ್ರಾಣಾಃ ಪರ್ಯಾಪ್ತಯಃ ಅಷ್ಟಸಹಸ್ರಾಣಿ ಚ ಲಕ್ಷಣಾನಿ ಭಣಿತಾನಿ ।
ಗೋಕ್ಷೀರಶಂಖಧವಲಂ ಮಾಂಸಂ ರುಧಿರಂ ಚ ಸರ್ವಾಂಗೇ ॥೩೮॥

ಈದೃಶಗುಣೈಃ ಸರ್ವಃ ಅತಿಶಯವಾನ್ ಸುಪರಿಮಲಾಮೋದಃ ।
ಔದಾರಿಕಶ್ಚ ಕಾಯಃ ಅರ್ಹತ್ಪುರುಷಸ್ಯ ಜ್ಞಾತವ್ಯಃ ॥೩೯॥

ಅರ್ಥ ಃ- ಅರಹಂತ ಪುರುಷರ ಔದಾರಿಕ ಶರೀರದಲ್ಲಿ ಆ ಜರೆ, ವ್ಯಾಧಿ ಮತ್ತು ರೋಗಗಳಿಗೆ ಸಂಬಂಧಿಸಿದ ದುಃಖವು ಇರುವುದಿಲ್ಲ, ಅದು ಆಹಾರ-ನೀಹಾರದಿಂದ ರಹಿತವಿದೆ, ನಿರ್ಮಲ ಎಂದರೆ ಮಲಮೂತ್ರದಿಂದ ರಹಿತವಿದೆ; ಸಿಂಹಾಣ ಎಂದರೆ ಕಫ, ಖೇಲ ಎಂದರೆ ಉಗುಳು, ಬೆವರು ಮತ್ತು ದುರ್ಗಂಧ ಎಂದರೆ ಜುಗುಪ್ಸೆ, ಗ್ಲಾನಿ ಮತ್ತು ದುರ್ಗಂಧ ಮೊದಲಾದ ದೋಷಗಳು ಅದರಲ್ಲಿ ಇಲ್ಲ.

ಅದರಲ್ಲಿರುವ ಹತ್ತು ಪ್ರಾಣಗಳು ಅವು ದ್ರವ್ಯಪ್ರಾಣಗಳಿವೆ, ಪೂರ್ಣ ಪರ್ಯಾಪ್ತಿಯಿದೆ, ಒಂದು ಸಾವಿರದೆಂಟು ಲಕ್ಷಣಗಳಿವೆ ಮತ್ತು ಗೋಕ್ಷೀರ ಎಂದರೆ ಕರ್ಪೂರ ಅಥವಾ ಚಂದನ ಹಾಗೂ ಶಂಖದಂತೆ ಅದರಲ್ಲಿ ಧವಲರುಧಿರ ಮತ್ತು ಮಾಂಸವು ಸರ್ವಾಂಗದಲ್ಲಿದೆ.

ಈ ಪ್ರಕಾರ ಗುಣಗಳಿಂದ ಸಂಯುಕ್ತವಾದ ಸಂಪೂರ್ಣ ದೇಹವು ಅತಿಶಯಸಹಿತವಾಗಿ ನಿರ್ಮಲವಿದೆ, ಆಮೋದ ಎಂದರೆ ಸುಗಂಧಮಯವಾದ ಔದಾರಿಕದೇಹವು ಅರಹಂತ ಪುರುಷರದಿದೆ.

ಭಾವಾರ್ಥ ಃ- ಇಲ್ಲಿ ದ್ರವ್ಯನಿಕ್ಷೇಪವೆಂದು ತಿಳಿಯಬಾರದು. ಆತ್ಮನಿಂದ ಭಿನ್ನವಾಗಿಯೇ ದೇಹದ ಮುಖ್ಯತೆಯಿಂದ 'ದ್ರವ್ಯ ಅರಹಂತ'ರ ವರ್ಣನೆಯಿದೆ. ॥೩೭-೩೮-೩೯॥

ಈ ಪ್ರಕಾರ ದ್ರವ್ಯ ಅರಹಂತರ ವರ್ಣನೆ ಮಾಡಲಾಯಿತು.

ಈಗ ಭಾವದ ಮುಖ್ಯತೆಯಿಂದ ವರ್ಣನೆ ಮಾಡುತ್ತಾರೆ, -

ಮಯರಾಯದೋಸರಹಿಓ ಕಸಾಯಮಲವಜ್ಜಿಓ ಯ ಸುವಿಸುದ್ಧೋ ।
ಚಿತ್ತಪರಿಣಾಮರಹಿದೋ ಕೇವಲಭಾವೇ ಮುಣೇಯವ್ವೋ ॥೪೦॥

ಮದರಾಗದೋಷರಹಿತಃ ಕಷಾಯಮಲವರ್ಜಿತಃ ಚ ಸುವಿಶುದ್ಧಃ ।
ಚಿತ್ತಪರಿಣಾಮರಹಿತಃ ಕೇವಲಭಾವೇ ಜ್ಞಾತವ್ಯಃ ॥೪೦॥

ಅರ್ಥ ಃ- ಕೇವಲಭಾವ ಎಂದರೆ ಒಂದು ಕೇವಲಜ್ಞಾನರೂಪದ ಭಾವವೇ ಇರುತ್ತ ಅರಹಂತರಿರುತ್ತಾರೆಂದು ತಿಳಿಯುವುದು. ಮದ ಎಂದರೆ ಮಾನಕಷಾಯದಿಂದಾದ ಗರ್ವ, ರಾಗ, ದ್ವೇಷ ಎಂದರೆ ಕಷಾಯಗಳ ತೀವ್ರ

---

ಮಾನರಾಗದೋಷರಹಿತ ಕಷಾಯಮಲವರ್ಜಿತ ಮೇಣ್ಸುವಿಶುದ್ಧರಾದ ।
ಮನಪರಿಣಾಮರಹಿತ ಕೇವಲಭಾವಸ್ಥಿತರಾದರಹಂತರಿಹರು ॥೪೦॥

ಉದಯದಿಂದಾಗುವಂಥ ಪ್ರೀತಿ ಮತ್ತು ಅಪ್ರೀತಿರೂಪದ ಪರಿಣಾಮಗಳಿಂದ ರಹಿತರಿದ್ದಾರೆ,ಇಪ್ಪತ್ತೈದು ಕಷಾಯರೂಪ ಮಲ ಅದರ ದ್ರವ್ಯಕರ್ಮ ಹಾಗೂ ಅವುಗಳ ಉದಯದಿಂದಾದ ಭಾವಮಲದಿಂದ ರಹಿತರಿದ್ದಾರೆ, ಆದುದರಿಂದ ಅತ್ಯಂತ ವಿಶುದ್ಧರಿದ್ದಾರೆ-ನಿರ್ಮಲರಿದ್ದಾರೆ, ಚಿತ್ತಪರಿಣಾಮ ಎಂದರೆ ಮನಸ್ಸಿನ ಪರಿಣಾಮ ರೂಪವಾದ ವಿಕಲ್ಪದಿಂದ ರಹಿತರಿದ್ದಾರೆ, ಜ್ಞಾನಾವರಣಕರ್ಮದ ಕ್ಷಯೋಪಶಮರೂಪ ಮನಸ್ಸಿನ ವಿಕಲ್ಪವಿಲ್ಲ, ಈ ಪ್ರಕಾರ ಕೇವಲ ಒಂದು ಜ್ಞಾನರೂಪ ವೀತರಾಗಸ್ವರೂಪವಾಗಿ 'ಭಾವ ಅರಹಂತ' ರೆಂದು ತಿಳಿಯುವುದು. ||೪೦||

ಈಗ ಭಾವದ್ದೇ ವಿಶೇಷ ಹೇಳುತ್ತಾರೆ, -

**ಸಮ್ಮದ್ದಂಸಣಿ ಪಸ್ಸದಿ ಜಾಣದಿ ಣಾಣೇಣ ದವ್ವಪಜ್ಜಾಯಾ ।**
**ಸಮ್ಮತ್ತಗುಣವಿಸುದ್ಧೋ ಭಾವೋ ಅರಹಸ್ಸ ಣಾಯವ್ವೋ ||೪೧||**

**ಸಮ್ಯಗ್ದರ್ಶನೇನ ಪಶ್ಯತಿ ಜಾನಾತಿ ಜ್ಞಾನೇನ ದ್ರವ್ಯಪರ್ಯಾಯಾನ್ ।**
**ಸಮ್ಯಕ್ತ್ವಗುಣವಿಶುದ್ಧಃ ಭಾವಃ ಅರ್ಹತಃ ಜ್ಞಾತವ್ಯಃ ||೪೧||**

ಅರ್ಥ ಃ- 'ಭಾವ ಅರಹಂತ'ರು ಸಮ್ಯಗ್ದರ್ಶನದಿಂದಂತೂ ತಮ್ಮನ್ನು ಹಾಗೂ ಎಲ್ಲವನ್ನು ಸತ್ತಾ ಮಾತ್ರ ನೋಡುತ್ತಾರೆ, ಈ ಪ್ರಕಾರ ಅವರಿಗೆ ಕೇವಲದರ್ಶನವಿದೆ, ಜ್ಞಾನದಿಂದ ಎಲ್ಲ ದ್ರವ್ಯ-ಪರ್ಯಾಯಗಳನ್ನು ತಿಳಿಯುತ್ತಾರೆ ಈ ಪ್ರಕಾರ ಅವರಿಗೆ ಕೇವಲಜ್ಞಾನವಿದೆ, ಅದರಲ್ಲಿ ಸಮ್ಯಕ್ತ್ವಗುಣದಿಂದ ವಿಶುದ್ಧವಾದ ಕ್ಷಾಯಿಕ ಸಮ್ಯಕ್ತ್ವವು ಕಂಡುಬರುತ್ತದೆ, ಈ ಪ್ರಕಾರ ಅರಹಂತರ ಭಾವವನ್ನು ತಿಳಿಯುವುದು.

ಭಾವಾರ್ಥ ಃ- ಅರಹಂತತನವು ಘಾತಿಕರ್ಮಗಳ ನಾಶದಿಂದ ಆಗುತ್ತದೆ. ಮೋಹಕರ್ಮದ ನಾಶದಿಂದ ಸಮ್ಯಕ್ತ್ವ ಮತ್ತು ಕಷಾಯದ ಅಭಾವದಿಂದ ಪರಮವೀತರಾಗತೆ ಎಲ್ಲ ಪ್ರಕಾರದ ನಿರ್ಮಲತೆಯಾಗುತ್ತದೆ. ಜ್ಞಾನಾವರಣ, ದರ್ಶನಾವರಣ ಕರ್ಮಗಳ ನಾಶದಿಂದ ಅನಂತದರ್ಶನ-ಅನಂತಜ್ಞಾನಗಳು ಪ್ರಕಟವಾಗುತ್ತವೆ, ಇವುಗಳಿಂದ ಸಮಸ್ತ ದ್ರವ್ಯ-ಪರ್ಯಾಯಗಳನ್ನು ಒಂದು ಸಮಯದಲ್ಲಿ ಪ್ರತ್ಯಕ್ಷ ನೋಡುತ್ತಾರೆ ಮತ್ತು ತಿಳಿಯುತ್ತಾರೆ. ಆರು ದ್ರವ್ಯಗಳಿದ್ದು ಅವುಗಳಲ್ಲಿ ಜೀವದ್ರವ್ಯದ ಸಂಖ್ಯೆಯು ಅನಂತಾನಂತವಿದೆ, ಪುದ್ಗಲ ದ್ರವ್ಯಗಳು ಅವುಗಳಿಂದ ಅನಂತಾನಂತಗುಣಿತವಿವೆ, ಆಕಾಶದ್ರವ್ಯವು ಒಂದು ಇದ್ದು ಅದು ಅನಂತಾನಂತ ಪ್ರದೇಶಿಯಿದೆ, ಇದರ ಮಧ್ಯದಲ್ಲಿ ಎಲ್ಲ ಜೀವ-ಪುದ್ಗಲಗಳು ಅಸಂಖ್ಯಾತ ಪ್ರದೇಶದಲ್ಲಿ ಸ್ಥಿರವಿವೆ, ಒಂದು ಧರ್ಮದ್ರವ್ಯವಿದೆ, ಒಂದು ಅಧರ್ಮದ್ರವ್ಯವಿದೆ ಇವೆರಡೂ ಅಸಂಖ್ಯಾತ ಪ್ರದೇಶಿಯಿವೆ, ಇವುಗಳಿಂದ ಆಕಾಶದಲ್ಲಿ ಲೋಕ ಅಲೋಕವೆಂಬ ವಿಭಾಗವಿದೆ, ಅದೇ ಲೋಕದಲ್ಲಿಯೇ ಕಾಲದ್ರವ್ಯದ ಅಸಂಖ್ಯಾತ ಕಾಲಾಣುಗಳು ಸ್ಥಿರವಿವೆ. ಇವೆಲ್ಲ ದ್ರವ್ಯಗಳಿಗೆ ಪರಿಣಾಮರೂಪವಾದ ಪರ್ಯಾಯಗಳಿವೆ ಅವು ಒಂದೊಂದು ದ್ರವ್ಯಕ್ಕೆ ಅನಂತಾನಂತವಿವೆ, ಅವಕ್ಕೆ ಕಾಲದ್ರವ್ಯದ ಪರಿಣಾಮವು ನಿಮಿತ್ತವಿದೆ, ಅದರ ನಿಮಿತ್ತದಿಂದ ಕ್ರಮರೂಪವಾಗಿ ಸಮಯ ಮೊದಲಾದ 'ವ್ಯವಹಾರಕಾಲ'ವೆಂದು ಕರೆಸಿಕೊಳ್ಳುತ್ತದೆ. ಇದರ ಗಣನೆಯಿಂದ ಭೂತ, ಭವಿಷ್ಯತ್, ವರ್ತಮಾನ ದ್ರವ್ಯಗಳ ಪರ್ಯಾಯಗಳು ಅನಂತಾನಂತವಿವೆ, ಇವೆಲ್ಲ ದ್ರವ್ಯಪರ್ಯಾಯಗಳನ್ನು ಅರಹಂತರ ದರ್ಶನ-ಜ್ಞಾನಗಳು ಒಂದು ಸಮಯದಲ್ಲಿ ನೋಡುತ್ತ ಮತ್ತು ತಿಳಿಯುತ್ತಿರುವುದರಿಂದ ಅರಹಂತರನ್ನು ಸರ್ವದರ್ಶಿ-ಸರ್ವಜ್ಞರೆಂದು ಹೇಳುತ್ತಾರೆ.

---

**ಸಮ್ಯಗ್ದರ್ಶನದಿಂ ನೋಳ್ಪರು ತಿಳಿವರು ಜ್ಞಾನದಿಂ ದ್ರವ್ಯಪರ್ಯಾಯಗಳನು ।**
**ಸಮ್ಯಕ್ತ್ವಗುಣವಿಶುದ್ಧರಿದ್ದೀ ತೆರದಿ ಅರಹಂತರ ಭಾವ ತಿಳಿಯುವುದು ||೪೧||**

ಭಾವಾರ್ಥ :- ಈ ಪ್ರಕಾರ ಅರಹಂತರ ನಿರೂಪಣೆಯನ್ನು ಹದಿನಾಲ್ಕು ಗಾಥೆಗಳಲ್ಲಿ ಮಾಡಲಾಯಿತು. ಮೊದಲನೇ ಗಾಥೆಯಲ್ಲಿ ನಾಮ, ಸ್ಥಾಪನೆ, ದ್ರವ್ಯ, ಭಾವ, ಗುಣ, ಪರ್ಯಾಯಸಹಿತ ಚ್ಯವನ, ಆಗತಿ, ಸಂಪತ್ತಿ ಈ ಭಾವಗಳನ್ನು ಅರಹಂತರಿಗೆ ಹೇಳುತ್ತಾರೆ, ಇದರ ವ್ಯಾಖ್ಯಾನವು ನಾಮಾದಿ ಕಥನದಲ್ಲಿ ಎಲ್ಲವೂ ಬಂದು ಬಿಟ್ಟಿತು, ಈಗ ಅದರ ಸಂಕ್ಷೇಪ ಭಾವಾರ್ಥವು ಈ ಕೆಳಗಿನಂತಿದೆ.

ಗರ್ಭಕಲ್ಯಾಣಿಕ :- ಮೊದಲು ಗರ್ಭಕಲ್ಯಾಣಿಕವಾಗುತ್ತದೆ, ಗರ್ಭದಲ್ಲಿ ಬರುವುದಕ್ಕೆ ಆರು ತಿಂಗಳು ಮೊದಲು ಇಂದ್ರನು ಕಳಿಸಿಕೊಟ್ಟಿರುವ ಕುಬೇರನು ಯಾವ ರಾಜನ ರಾಣಿಯ ಗರ್ಭದಲ್ಲಿ ತೀರ್ಥಂಕರರು ಬರುವವರಿದ್ದಾರೆ ಅವನ ನಗರದ ಶೋಭೆ ಮಾಡುತ್ತಾನೆ, ರತ್ನಮಯ-ಸುವರ್ಣಮಯ ಮಂದಿರ ರಚಿಸುತ್ತಾನೆ,. ನಗರದ ಕೋಟೆ, ಕಂದಕ, ಬಾಗಿಲು, ಸುಂದರವನ, ಉಪವನದ ರಚನೆ ಮಾಡುತ್ತಾನೆ, ಸುಂದರ ವೇಷವುಳ್ಳ ನರ-ನಾರಿಯರನ್ನು ನಗರದಲ್ಲಿ ತಂಗಿಸುತ್ತಾನೆ, ನಿತ್ಯ ರಾಜಮಂದಿರದ ಮೇಲೆ ರತ್ನಗಳ ವೃಷ್ಟಿಯಾಗುತ್ತಿರುತ್ತದೆ, ತೀರ್ಥಂಕರರ ಜೀವವು ಯಾವಾಗ ತಾಯಿಯ ಗರ್ಭದಲ್ಲಿ ಬರುತ್ತದೆ ಆಗ ಮಾತೆಗೆ ಹದಿನಾರು ಕನಸು ಬೀಳುತ್ತವೆ, ರುಚಕವರ ದ್ವೀಪದಲ್ಲಿ ವಾಸಿಸುವಂಥ ದೇವಾಂಗನೆಯರು ನಿತ್ಯ ಮಾತೆಯ ಸೇವೆ ಮಾಡುತ್ತಾರೆ, ಹೀಗೆ ಒಂಭತ್ತು ತಿಂಗಳು ಪೂರ್ಣವಾದ ಮೇಲೆ ಮೂರು ಜ್ಞಾನ ಮತ್ತು ಹತ್ತು ಅತಿಶಯಸಹಿತ ಪ್ರಭುವಿನ ಜನ್ಮವಾಗುತ್ತದೆ, ಆಗ ಮೂರು ಲೋಕದಲ್ಲಿ ಆನಂದಮಯವಾದ ಕ್ಷೋಭವಾಗುತ್ತದೆ, ಬಾರಿಸದೆಯೇ ದೇವವಾದ್ಯಗಳು ಮೊಳಗುತ್ತವೆ, ಇಂದ್ರನ ಆಸನವು ಕಂಪಾಯಮಾನವಾಗುತ್ತದೆ,ಆಗ ಇಂದ್ರನು ಪ್ರಭುವಿನ ಜನ್ಮವಾಯಿತೆಂದು ತಿಳಿದುಕೊಂಡು ತನ್ನ ಐರಾವತ ಆನೆಯನ್ನು ಹತ್ತಿ ಸ್ವರ್ಗದಿಂದ ಇಳಿದು ಬರುತ್ತಾನೆ, ನಾಲ್ಕು ಪ್ರಕಾರದ ದೇವದೇವಿಯರೆಲ್ಲ ಏಕತ್ರವಾಗಿ ಬರುತ್ತಾರೆ, ಶಚಿಯು (ಇಂದ್ರಾಣಿಯು) ಮಾತೆಯ ಹತ್ತಿರ ಹೋಗಿ ಗುಪ್ತರೂಪದಿಂದ ಪ್ರಭುವನ್ನು ತೆಗೆದುಕೊಂಡು ಬರುತ್ತಾಳೆ, ಇಂದ್ರನು ಹರ್ಷಿತನಾಗಿ ಸಹಸ್ರ ನೇತ್ರಗಳಿಂದ ನೋಡುತ್ತಾನೆ.

ಅನಂತರ ಸೌಧರ್ಮೇಂದ್ರನು ಬಾಲಕ ಶರೀರಿಯಾದ ಭಗವಂತನನ್ನು ತನ್ನ ಮಡಿಲಲ್ಲಿ ತೆಗೆದುಕೊಂಡು ಐರಾವತ ಆನೆಯನ್ನು ಹತ್ತಿ ಮೇರುಪರ್ವತದ ಮೇಲೆ ಬರುತ್ತಾನೆ, ಈಶಾನೇಂದ್ರನು ಛತ್ರ ಹಿಡಿಯುತ್ತಾನೆ, ಸನತ್ಕುಮಾರ, ಮಹೇಂದ್ರ ಇಂದ್ರರು ಚಾಮರ ಬೀಸುತ್ತಾರೆ, ಮೇರುವಿನ ಪಾಂಡುಕವನದ ಪಾಂಡುಕಶಿಲೆಯಲ್ಲಿ ಸಿಂಹಾಸನದ ಮೇಲೆ ಪ್ರಭುವನ್ನು ವಿರಾಜಮಾನ ಮಾಡುತ್ತಾರೆ, ಎಲ್ಲ ದೇವಗಳು ಕ್ಷೀರ ಸಮುದ್ರದಿಂದ ಒಂದು ಸಾವಿರದೆಂಟು ಕಲಶಗಳಲ್ಲಿ ನೀರು ತಂದು ದೇವ-ದೇವಾಂಗನೆಯರ ನೃತ್ಯ ವಾದ್ಯದೊಡನೆ ಅತ್ಯಂತ ಉತ್ಸಾಹದಿಂದ ಪ್ರಭುವಿನ ಮಸ್ತಕದ ಮೇಲೆ ಕಲಶ ಸುರಿದು ಜನ್ಮಕಲ್ಯಾಣಿಕದ ಅಭಿಷೇಕ ಮಾಡುತ್ತಾರೆ, ಅನಂತರ ಶೃಂಗಾರ, ವಸ್ತ್ರ, ಆಭೂಷಣಗಳನ್ನು ತೊಡಿಸಿ ಮಾತೆಯ ಮಂದಿರದಲ್ಲಿ ತಂದು ಮಾತೆಗೆ ಒಪ್ಪಿಸುತ್ತಾರೆ, ಇಂದ್ರ ಮೊದಲಾದ ದೇವಗಳು ತಮ್ಮ ತಮ್ಮ ಸ್ಥಾನಕ್ಕೆ ಹೊರಟುಹೋಗುತ್ತಾರೆ, ಕುಬೇರನು ಸೇವೆಯ ಸಲುವಾಗಿ ಅಲ್ಲಿಯೇ ಉಳಿಯುತ್ತಾನೆ.

ಇದಾದ ನಂತರ ಕುಮಾರ ಅವಸ್ಥೆ ಹಾಗೂ ರಾಜ್ಯ ಅವಸ್ಥೆಯನ್ನು ಭೋಗಿಸುತ್ತಾರೆ. ಅದರಲ್ಲಿ ಮನೋವಾಂಛಿತ ಭೋಗಗಳನ್ನು ಭೋಗಿಸಿ ನಂತರ ಒಂದಿಷ್ಟು ವೈರಾಗ್ಯದ ಕಾರಣ ಪಡೆದು ಸಂಸಾರ-ದೇಹ-ಭೋಗಗಳಿಂದ ವಿರಕ್ತರಾಗಿ ಬಿಡುತ್ತಾರೆ. ಆಗ ಲೌಕಾಂತಿಕ ದೇವಗಳು ಬಂದು ವೈರಾಗ್ಯವನ್ನು ವೃದ್ಧಿಸುವಂಥ ಪ್ರಭುವಿನ ಸ್ತುತಿ ಮಾಡುತ್ತಾರೆ, ಪುನಃ ಇಂದ್ರನು ಬಂದು 'ತಪಕಲ್ಯಾಣಿಕ' ಮಾಡುತ್ತಾನೆ. ಪಲ್ಲಕ್ಕಿಯಲ್ಲಿ ಕೂಡ್ರಿಸಿಕೊಂಡು ದೊಡ್ಡ ಉತ್ಸವದಿಂದ ವನದಲ್ಲಿ ತೆಗೆದುಕೊಂಡು ಹೋಗುತ್ತಾರೆ, ಅಲ್ಲಿ ಪ್ರಭುವು ಪವಿತ್ರ ಶಿಲಾತಲದ ಮೇಲೆ ಕುಳಿತುಕೊಂಡು ಪಂಚಮುಷ್ಟಿಯಿಂದ ಲೋಚ ಮಾಡಿಕೊಂಡು ಪಂಚಮಹಾವ್ರತಗಳನ್ನು ಅಂಗೀಕರಿಸುತ್ತಾರೆ. ಸಮಸ್ತ ಪರಿಗ್ರಹದ ತ್ಯಾಗ ಮಾಡಿ ದಿಗಂಬರರೂಪ ಧಾರಣ ಮಾಡಿ ಧ್ಯಾನ ಮಾಡುತ್ತಾರೆ, ಅದೇ ಸಮಯದಲ್ಲಿ ಮನಃಪರ್ಯಯಜ್ಞಾನವು ಉತ್ಪನ್ನವಾಗುತ್ತದೆ. ಪುನಃ ಕೆಲಸಮಯವು

ವ್ಯತೀತವಾದ ಮೇಲೆ ತಪಸ್ಸಿನ ಬಲದಿಂದ ಘಾತಿಕರ್ಮದ ೪೭ ಪ್ರಕೃತಿ ಅಘಾತಿಕರ್ಮದ ೧೬ ಪ್ರಕೃತಿ ಹೀಗೆ ಸತ್ತಾದೊಳಗಿಂದ ಅರವತ್ತೂ ಮೂರು ಪ್ರಕೃತಿಗಳ ನಾಶಮಾಡಿ ಕೇವಲಜ್ಞಾನದ ಪ್ರಾಪ್ತಿಮಾಡಿಕೊಂಡು ಅನಂತಚತುಷ್ಟಯರೂಪವಾಗಿ ಕ್ಷುಧೆ ಮೊದಲಾದ ಹದಿನೆಂಟು ದೋಷಗಳಿಂದ ರಹಿತವಾದ ಅರಹಂತರಾಗುತ್ತಾರೆ.

ಪುನಃ ಇಂದ್ರನು ಬಂದು ಸಮವಸರಣದ ರಚನೆ ಮಾಡುತ್ತಾನೆ, ಅದು ಆಗಮೋಕ್ತ ಅನೇಕ ಶೋಭೆಯೊಡನೆ ಮಣಿಸುವರ್ಣಮಯ ಕೋಟೆ, ಕಂದಕ, ವೇದಿ ನಾಲ್ಕೂ ದಿಶೆಗಳಲ್ಲಿ ನಾಲ್ಕು ಬಾಗಿಲುಗಳು, ಮಾನಸ್ತಂಭ, ನಾಟ್ಯಶಾಲೆ, ವನ ಮೊದಲಾಗಿ ಅನೇಕಗಳ ರಚನೆ ಮಾಡುತ್ತಾನೆ. ಅದರ ಮಧ್ಯೆ ಸಭಾಮಂಟಪದಲ್ಲಿ ಹನ್ನೆರಡು ಸಭೆಗಳು, ಅವುಗಳಲ್ಲಿ ಮುನಿ, ಆರ್ಯಿಕೆ, ಶ್ರಾವಕ, ಶ್ರಾವಿಕೆ, ದೇವ, ದೇವಿ, ತಿರ್ಯಂಚಮೊದಲಾಗಿ ಕುಳಿತುಕೊಳ್ಳುತ್ತಾರೆ ಪ್ರಭುವಿಗೆ ಅನೇಕ ಅತಿಶಯಗಳು ಪ್ರಕಟವಾಗುತ್ತವೆ. ಸಭಾಮಂಟಪದ ಮಧ್ಯೆ ಮೂರು ಪೀಠಗಳ ಮೇಲೆ ಗಂಧಕುಟಿಯ ಮಧ್ಯೆ ಸಿಂಹಾಸನದಲ್ಲಿರುವ ಕಮಲದ ಮೇಲೆ ಅಂತರಾಳದಲ್ಲಿ ಪ್ರಭುಗಳು ವಿರಾಜಿಸುತ್ತಾರೆ ಮತ್ತು ಎಂಟು ಪ್ರಾತಿಹಾರ್ಯಗಳಿಂದ ಯುಕ್ತರಿರುತ್ತಾರೆ. ವಾಣಿಯು ಹೊರಡುತ್ತದೆ, ಅದನ್ನು ಕೇಳಿ ಗಣಧರರು ದ್ವಾದಶಾಂಗ ಶಾಸ್ತ್ರ ರಚಿಸುತ್ತಾರೆ. ಹೀಗೆ ಕೇವಲಜ್ಞಾನಕಲ್ಯಾಣಿಕದ ಉತ್ಸವವನ್ನು ಇಂದ್ರನು ಮಾಡುತ್ತಾನೆ. ಪುನಃ ಪ್ರಭುಗಳು ವಿಹಾರ ಮಾಡುತ್ತಾರೆ. ಅದರದೊಡ್ಡ ಉತ್ಸವವನ್ನು ದೇವಗಳು ಮಾಡುತ್ತಾರೆ ಕೆಲಸಮಯದ ನಂತರ ಆಯುವಿನ ದಿವಸಗಳು ಕಡಿಮೆಯಿರುವಾಗ ಯೋಗನಿರೋಧ ಮಾಡಿ ಅಘಾತಿಕರ್ಮಗಳ ನಾಶಮಾಡಿ ಮುಕ್ತಿಗೆ ಸಲ್ಲುತ್ತಾರೆ, ಇದಾದ ನಂತರ ಶರೀರಕ್ಕೆ ಅಗ್ನಿ ಸಂಸ್ಕಾರ ಮಾಡಿ ಇಂದ್ರನು ಉತ್ಸವದೊಡನೆ 'ನಿರ್ವಾಣ ಕಲ್ಯಾಣಿಕ' ಮಹೋತ್ಸವ ಮಾಡುತ್ತಾನೆ. ಈ ಪ್ರಕಾರ ತೀರ್ಥಂಕರರು ಪಂಚಕಲ್ಯಾಣಿಕಗಳ ಪೂಜೆಗೆ ಪ್ರಾಪ್ತರಾಗಿ ನಿರ್ವಾಣವನ್ನು ಪಡೆಯುತ್ತಾರೆಂದು ತಿಳಿಯಬೇಕು. ॥೪೧॥

೧೧) ಈಗ ಪ್ರವ್ರಜ್ಯಯ ನಿರೂಪಣೆ ಮಾಡುತ್ತಾರೆ, ಅದನ್ನು ದೀಕ್ಷೆಯೆಂದು ಹೇಳುತ್ತಾರೆ. ಪ್ರಾರಂಭದಲ್ಲಿ ದೀಕ್ಷೆಗೆ ಯೋಗ್ಯವಾದ ಸ್ಥಾನ ವಿಶೇಷವನ್ನು ಹಾಗೂ ದೀಕ್ಷಾಸಹಿತರಾದ ಮುನಿಗಳು ಎಲ್ಲಿ ವಾಸಿಸುತ್ತಾರೆ ಅದರ ಸ್ವರೂಪ ಹೇಳುತ್ತಾರೆ, –

ಸುಣ್ಣಹರೇ ತರುಹಿಟ್ಠೇ ಉಜ್ಜಾಣೇ ತಹ ಮಸಾಣವಾಸೇ ವಾ ।
ಗಿರಿಗುಹ ಗಿರಿಸಿಹರೇ ವಾ ಭೀಮವಣೇ ಅಹವ ವಸಿತೇ ವಾ ॥೪೨॥

[1]ಸವಸಾಸತ್ತಂ ತಿತ್ಥಂ [2]ವಚಚಇದಾಲತ್ತಯಂ ಚ ವುತ್ತೇಹಿಂ ।
ಜಿಣಭವಣಂ ಅಹ ವೇಜ್ಝಂ ಜಿಣಮಗ್ಗೇ ಜಿಣವರಾ ವಿಂತಿ ॥೪೩॥

---

ಬರಿದಾದ ಮನೆ ತರುಮೂಲ ಮೇಣುದ್ಯಾನವನ ಸ್ಮಶಾನಭೂಮಿಯಿಲ್ಲವೆ ।
ಗಿರಿಗುಹೆ ಗಿರಿಶಿಖರಮಥವ ಭಯಾನಕವಾದವನ ವಸತಿಕೆ ॥೪೨॥

ಮುನಿ ಸ್ವವಶಾಸಕ್ತಕ್ಷೇತ್ರ ತೀರ್ಥಸ್ಥಾನ ವಚಚೈತ್ಯ ಆಲಯತ್ರಿಕ ಮೇಣ್ ।
ಜಿನಭವನ ವೇದ್ಯವೆಂದು ಜಿನಮಾರ್ಗದಲಿ ಜಿನವರರು ಪೇಳಿಹರು ॥೪೩॥

---

೧ ಸಂ. ಪ್ರತಿಯಲ್ಲಿ 'ಸವಸಾ' 'ಸತ್ತಂ' ಎಂದು ಎರಡು ಪದ ಮಾಡಿದ್ದಾರೆ, ಅವುಗಳ ಸಂ. 'ಸ್ವವಶಾ ಸತ್ತ್ವಂ ಮಾಡಿದ್ದಾರೆ.

೨. 'ವಚಚಇದಾಲತ್ತಯಂ' ಇದರದೂ ಎರಡು ಪದ ಮಾಡಿದ್ದಾರೆ 'ವಚಃ' ಚೈತ್ಯಾಲಯಂ.

ಪಂಚಮಹವ್ವಯಜುತ್ತಾ ಪಂಚಿಂದಿಯಸಂಜಯಾ ಣಿರಾವೇಕ್ಖಾ ।
ಸಜ್ಝಾಯಝಾಣಜುತ್ತಾ ಮುಣಿವರವಸಹಾ ಣಿಇಚ್ಛಂತಿ ।।೪೪।।

ಶೂನ್ಯಗೃಹೇ ತರುಮೂಲೇ ಉದ್ಯಾನೇ ತಥಾ ಶ್ಮಶಾನವಾಸೇ ವಾ ।
ಗಿರಿಗುಹಾಯಾಂ ಗಿರಿಶಿಖರೇ ವಾ ಭೀಮವನೇ ಅಥವಾ ವಸತೌ ವಾ ।।೪೨।।

ಸ್ವವಶಾಸಕ್ತಂ ತೀರ್ಥಂ ವಚಶ್ಚೈತ್ಯಾಲಯತ್ರಿಕಂ ಚ ಉಕ್ತೈಃ ।
ಜಿನಭವನಂ ಅಥ ವೇಧ್ಯಂ ಜಿನಮಾರ್ಗೇ ಜಿನವರಾ ವಿದಂತಿ ।।೪೩।।

ಪಂಚಮಹಾವ್ರತಯುಕ್ತಾಃ ಪಂಚೇಂದ್ರಿಯಸಂಯತಾಃನಿರಪೇಕ್ಷಾಃ ।
ಸ್ವಾಧ್ಯಾಯಧ್ಯಾನಯುಕ್ತಾಃ ಮುನಿವರವೃಷಭಾಃ ನೀಚ್ಛಂತಿ ।।೪೪।।

ಅರ್ಥ :– ಶೂನ್ಯಗೃಹ, ವೃಕ್ಷದಮೂಲ, ಅರಣ್ಯ , ಉದ್ಯಾನವನ, ಸ್ಮಶಾನಭೂಮಿ, ಪರ್ವತದ ಗುಹೆ, ಪರ್ವತದ ಶಿಖರ, ಭಯಾನಕವನ, ಮತ್ತು ವಸತಿಕೆಗಳಲ್ಲಿ ದೀಕ್ಷಾಸಹಿತನಾದ ಮುನಿಯು ವಾಸಿಸಬೇಕು. ಇವು ದೀಕ್ಷಾಯೋಗ್ಯವಾದ ಸ್ಥಾನಗಳಿವೆ.

ಸ್ವವಶಾಸಕ್ತ ಎಂದರೆ ಸ್ವಾಧೀನ ಮುನಿಗಳಿಂದ ಆಸಕ್ತವಾದ ಯಾವ ಕ್ಷೇತ್ರಗಳಿವೆ ಆ ಕ್ಷೇತ್ರಗಳಲ್ಲಿ ಮುನಿಗಳು ವಾಸಿಸಬೇಕು, ಮೋಕ್ಷಕ್ಕೆ ಹೋಗಿರುವಂಥ ತೀರ್ಥಸ್ಥಾನಗಳು ಮತ್ತು ವಚ, ಚೈತ್ಯ , ಆಲಯವೆಂದು ಹೀಗೆ ಮೂರು ಈ ಮೊದಲು ಹೇಳಿರುವಂಥ ಎಂದರೆ ಆಯತನ ಮೊದಲಾದ ಪರಮಾರ್ಥರೂಪ, ಸಂಯಮೀ ಮುನಿ, ಅರಹಂತ, ಸಿದ್ಧಸ್ವರೂಪ ಅವರ ನಾಮದ ಅಕ್ಷರರೂಪ ಮಂತ್ರ ಹಾಗೂ ಅವರ ಆಜ್ಞಾರೂಪವಾದ ವಾಣಿಯನ್ನು 'ವಚ'ವೆಂದು ಹೇಳುತ್ತಾರೆ ಇನ್ನು ಅವರ ಆಕಾರ ಧಾತು–ಪಾಷಾಣಗಳ ಪ್ರತಿಮಾ ಸ್ಥಾಪನೆಯನ್ನು 'ಚೈತ್ಯ'ವೆಂದು ಹೇಳುತ್ತಾರೆ ಮತ್ತು ಆ ಪ್ರತಿಮೆ ಹಾಗೂ ಅಕ್ಷರ ಮಂತ್ರ ವಾಣಿಯನ್ನು ಸ್ಥಾಪಿಸಲಾಗುತ್ತಿರುವಂಥ ಆಲಯ–ಮಂದಿರ, ಯಂತ್ರ ಅಥವಾ ಪುಸ್ತಕರೂಪವಾದಂಥ ವಚ, ಚೈತ್ಯ ಹಾಗೂ ಆಲಯದ ಚಿತ್ರವಿದೆ ಅಥವಾ ಜಿನಭವನ ಎಂದರೆ ಅಕೃತ್ರಿಮ ಚೈತ್ಯಾಲಯ ಮಂದಿರ ಆದರಂತೆ ಆಯತನ ಮೊದಲಾದವುಗಳಿಗೆ ಸಮಾನವಾಗಿಯೇ ಅದರ ವ್ಯವಹಾರವನ್ನು ಜಿನಮಾರ್ಗದಲ್ಲಿ ಜಿನವರದೇವರು 'ವೇದ್ಯ' ಎಂದರೆ ದೀಕ್ಷಾಸಹಿತರಾದ ಮುನಿಗಳಿಗೆ ಧ್ಯಾನಮಾಡಲು ಯೋಗ್ಯ ಚಿಂತನೆಮಾಡಲು ಯೋಗ್ಯವೆಂದು ಹೇಳುತ್ತಾರೆ.

ಆ ಮುನಿವೃಷಭ ಎಂದರೆ ಮುನಿಗಳಲ್ಲಿ ಮುಖ್ಯರಿರುವವರು ಹೇಳಿರುವ ಶೂನ್ಯಗೃಹಾದಿಗಳು ಮತ್ತು ತೀರ್ಥ, ನಾಮ, ಮಂತ್ರ, ಸ್ಥಾಪನಾರೂಪವಾದ ಮೂರ್ತಿ ಹಾಗೂ ಅವರ ಆಲಯ–ಮಂದಿರ, ಪುಸ್ತಕ ಮತ್ತು ಅಕೃತ್ರಿಮ ಜಿನಮಂದಿರಗಳನ್ನು 'ಣಿಇಚ್ಛಂತಿ' ಎಂದರೆ ನಿಶ್ಚಯದಿಂದ ಇಷ್ಟಪಡುತ್ತಾರೆ. ಶೂನ್ಯಗೃಹ ಮೊದಲಾದವುಗಳಲ್ಲಿ ವಾಸಿಸುತ್ತಾರೆ ಮತ್ತು ತೀರ್ಥ ಮೊದಲಾದವುಗಳ ಧ್ಯಾನ ಚಿಂತನೆ ಮಾಡುತ್ತಾರೆ ಅಲ್ಲದೆ ಇತರರಿಗೆ ಅಲ್ಲಿ ದೀಕ್ಷೆ ಕೊಡುತ್ತಾರೆ. ಇಲ್ಲಿ 'ಣಿಇಚ್ಛತಿ'ಯ ಪಾಠಾಂತರವು 'ಣಿಯಚ್ಛಂತಿ'ಯೆಂದೂ ಇದೆ ಆದರ ಕಾಕೋಕ್ತಿಯಿಂದಂತೂ 'ಅವರು ಏನನ್ನು ಇಷ್ಟಮಾಡುವುದಿಲ್ಲ ? ಎಂದರೆ ಮಾಡೇ ಮಾಡುತ್ತಾರೆ'ಂದು ಇದರ ಅರ್ಥವಾಗುತ್ತದೆ. ಇಂಥ ಶೂನ್ಯ ಗೃಹಾದಿಗಳನ್ನು

---

ಪಂಚಮಹಾವ್ರತಯುಕ್ತ ಸ್ವಾಧ್ಯಾಯಧ್ಯಾನಸದಾರಕ್ತಮಲ್ಲದೆ ನಿರಪೇಕ್ಷ ।
ಪಂಚೇಂದ್ರಿಯ ಸಂಯಮವಂತರಾಮುನಿವರ ವೃಷಭರದನಿಚ್ಛಿಸುವರು ।।೪೪।।

ಹಾಗೂ ತೀರ್ಥಾದಿಗಳನ್ನು ಸ್ವವಶಾಸಕ್ತ ಎಂದರೆ ಸ್ವೇಚ್ಛಾಚಾರಿ ಭ್ರಷ್ಟಾಚಾರಿಗಳ ಮುಖಾಂತರ ಆಸಕ್ತವಿದ್ದರೆ (ಯುಕ್ತವಿದ್ದರೆ) ಅವನ್ನು ಮುನಿಮುಖ್ಯರುಗಳು ಇಷ್ಟಮಾಡುವುದಿಲ್ಲ ಅಲ್ಲಿ ವಾಸಿಸುವುದಿಲ್ಲವೆಂದು ಅರ್ಥವನ್ನು ಒಂದು ಟಿಪ್ಪಣಿಯಲ್ಲಿ ಮಾಡಲಾಗಿದೆ. ಆ ಮುನಿ ಮುಖ್ಯರು ಐದು ಮಹಾವ್ರತಗಳಿಂದ ಸಂಯುಕ್ತರಿದ್ದಾರೆ, ಐದು ಇಂದ್ರಿಯಗಳನ್ನು ಚನ್ನಾಗಿ ಜಯಿಸಿದವರಿದ್ದಾರೆ, ನಿರಪೇಕ್ಷರಿದ್ದಾರೆ, ಅವರು ಯಾವುದೇ ಪ್ರಕಾರದ ಇಚ್ಛೆಯಿಂದ ಮುನಿಗಳಾಗಿಲ್ಲ, ಸ್ವಾಧ್ಯಾಯ ಮತ್ತು ಧ್ಯಾನಯುಕ್ತರಿದ್ದಾರೆ, ಕೆಲವೊಮ್ಮೆ ಶಾಸ್ತ್ರ ಓದುತ್ತಾರೆ ಓದಿಸುತ್ತಾರೆ, ಕೆಲವೊಮ್ಮೆ ಧರ್ಮ ಶುಕ್ಲ ಧ್ಯಾನಗಳನ್ನು ಮಾಡುತ್ತಾರೆ.

ಭಾವಾರ್ಥ :- ಇಲ್ಲಿ ದೀಕ್ಷಾ ಯೋಗ್ಯಸ್ಥಾನ ಹಾಗೂ ದೀಕ್ಷಾಸಹಿತ ದೀಕ್ಷೆ ಕೊಡುವಂಥ ಮುನಿಗಳ ಮತ್ತು ಅವರ ಚಿಂತನಯೋಗ್ಯ ವ್ಯವಹಾರದ ಸೂತ್ರವನ್ನು ಹೇಳಲಾಗಿದೆ. ||೪೨-೪೩-೪೪||

೧೧) ಈಗ ಪ್ರವ್ರಜ್ಯದ ಸ್ವರೂಪವನ್ನು ಹೇಳುತ್ತಾರೆ, -

**ಗಿಹಗಂಥಮೋಹಮುಕ್ಕಾ ಬಾವೀಸಪರಿಸಹಾ ಜಿಯಕಷಾಯಾ |**
**ಪಾವಾರಂಭವಿಮುಕ್ಕಾ ಪವ್ವಜ್ಜಾ ಏರಿಸಾ ಭಣಿಯಾ ||೪೫||**

**ಗೃಹಗ್ರಂಥಮೋಹಮುಕ್ತಾ ದ್ವಾವಿಂಶತಿಪರೀಷಹಾ ಜಿತಕಷಾಯಾ |**
**ಪಾಪಾರಂಭವಿಮುಕ್ತಾ ಪ್ರವ್ರಜ್ಯಾ ಈದೃಶೀ ಭಣಿತಾ ||೪೫||**

ಅರ್ಥ :- ಗೃಹ (ಮನೆ) ಮತ್ತು ಗ್ರಂಥ (ಪರಿಗ್ರಹ ಇವೆರಡರಿಂದ ಮುನಿಗಳಂತೂ ಮೋಹ, ಮಮತ್ವ, ಇಷ್ಟ-ಅನಿಷ್ಟ ಬುದ್ಧಿಯಿಂದ ರಹಿತರಾಗಿಯೇ ಇರುತ್ತಾರೆ, ಅವರು ಇಪ್ಪತ್ತೆರಡು ಪರೀಷಹಗಳನ್ನು ಸಹನ ಮಾಡುತ್ತಾರೆ, ಕಷಾಯಗಳನ್ನು ಜಯಿಸುತ್ತಾರೆ ಮತ್ತು ಪಾಪರೂಪದ ಆರಂಭದಿಂದ ರಹಿತರಿರುತ್ತಾರೆ ಹೀಗೆ ಪ್ರವ್ರಜ್ಯವನ್ನು ಜಿನೇಶ್ವರದೇವರು ಹೇಳಿದ್ದಾರೆ.

ಭಾವಾರ್ಥ :- ಜೈನದೀಕ್ಷೆಯಲ್ಲಿ ಸ್ವಲ್ಪವೂ ಪರಿಗ್ರಹವಿಲ್ಲ, ಮತ್ತು ಸಮಸ್ತ ಸಂಸಾರದ ಮೋಹವಿಲ್ಲ, ಅದರಲ್ಲಿ ಇಪ್ಪತ್ತೆರಡು ಪರೀಷಹಗಳ ಸಹನೆ ಹಾಗೂಕಷಾಯಗಳ ಜಯಿಸುವಿಕೆಯು ಕಂಡು ಬರುತ್ತದೆ ಮತ್ತು ಪಾಪಾರಂಭದ ಅಭಾವವಿರುತ್ತದೆ. ಈ ಪ್ರಕಾರದ ದೀಕ್ಷೆಯು ಅನ್ಯಮತಗಳಲ್ಲಿ ಇಲ್ಲ. ||೪೫||

ಈಗ ಮತ್ತೆ ಹೇಳುತ್ತಾರೆ.-

**ಧಣಧಣ್ಣವತ್ಥದಾಣಂ ಹಿರಣ್ಣಸಯಣಾಸಣಾಇ ಛತ್ತಾಇಂ |**
**ಕುದ್ದಾಣವಿರಹರಹಿಯಾ ಪವ್ವಜ್ಜಾ ಏರಿಸಾ ಭಣಿಯಾ ||೪೬||**

---

ಗೃಹಗ್ರಂಥಮೋಹವಿಮುಕ್ತ ದ್ವಾವಿಂಶತಿ ಪರೀಷಹಜಯಿ ಜಿತಕಷಾಯಿ |
ಇಹರು ಪಾಪಾರಂಭವಿಮುಕ್ತಮೀರೀತಿ ದೀಕ್ಷೆಯನು ಜಿನರು ಪೇಳಿಹರು ||೪೫||

ಆ ಧನಧಾನ್ಯ ವಸ್ತ್ರದಾನ ಹಿರಣ್ಯ ಶಯನ ಆಸನ ಛತ್ರಾದಿಗಳೆಲ್ಲ |
ಕುದಾನಗಳಿಂದ ರಹಿತವಿರುವೀ ಪ್ರವ್ರಜ್ಯವನು ಜಿನರು ಪೇಳಿಹರು ||೪೬||

ಧನಧಾನ್ಯವಸ್ತ್ರದಾನಂ ಹಿರಣ್ಯಶಯನಾಸನಾದಿ ಛತ್ರಾದಿ ।
ಕುದಾನವಿರಹರಹಿತಾ ಪ್ರವ್ರಜ್ಯಾ ಈದೃಶೀ ಭಣಿತಾ ॥೪೬॥

ಅರ್ಥ ಃ- ಧನ, ಧಾನ್ಯ, ವಸ್ತ್ರಗಳ ದಾನ, ಹಿರಣ್ಯ ಎಂದರೆ ಬೆಳ್ಳಿ, ಚಿನ್ನ ಮೊದಲಾದ, ಶಯ್ಯೆ, ಆಸನ ಮೊದಲಾದ ಶಬ್ದದಿಂದ ಛತ್ರ-ಚಾಮರಾದಿ ಮತ್ತು ಕ್ಷೇತ್ರ ಮೊದಲಾದ ಕುದಾನಗಳಿಂದ ರಹಿತವಾಗಿ ಪ್ರವ್ರಜ್ಯವನ್ನು ಹೇಳಿದೆ.

ಭಾವಾರ್ಥ ಃ- ಅನ್ಯಮತಿಗಳು ಗೋವು, ಧನ, ಧಾನ್ಯ, ವಸ್ತ್ರ, ಚಿನ್ನ, ಬೆಳ್ಳಿ, ಶಯನ, ಆಸನ, ಛತ್ರ, ಚಾಮರ ಮತ್ತು ಭೂಮಿ ಮೊದಲಾದವುಗಳನ್ನು ಅಧಿಕ ಪ್ರಮಾಣದಲ್ಲಿ ದಾನ ಕೊಡುವುದು ಪ್ರವ್ರಜ್ಯೆಯಿದೆ ಯೆಂದು ಹೇಳುತ್ತಾರೆ, ಆದರೆ ಈ ಗಾಥೆಯಲ್ಲಿ ಅದರ ನಿಷೇಧ ಮಾಡಿದೆ. ಪ್ರವ್ರಜ್ಯೆಯಂತೂ ನಿರ್ಗ್ರಂಥರೂಪವಿದೆ, ಆ ಧನ, ಧಾನ್ಯ ಮೊದಲಾದುವನ್ನು ಇಟ್ಟುಕೊಂಡು ದಾನ ಮಾಡುವವರಿಗೆಲ್ಲಿಯ ಪ್ರವ್ರಜ್ಯೆ ? ಅದಂತೂ ಗೃಹಸ್ಥರ ಕರ್ಮವಿದೆ, ಗೃಹಸ್ಥರಿಗೂ ಆ ವಸ್ತುಗಳ ದಾನದಿಂದ ವಿಶೇಷ ಪುಣ್ಯವಂತೂ ಆಗುವುದಿಲ್ಲ, ಏಕೆಂದರೆ ಪಾಪವು ಅಧಿಕವಿದೆ ಮತ್ತು ಪುಣ್ಯವು ಅಲ್ಪವಿದೆ,ಆ ಅಧಿಕಪಾಪ ಕಾರ್ಯವನ್ನು ಮಾಡುವಲ್ಲಿ ಗೃಹಸ್ಥರಿಗೆ ಲಾಭವಿಲ್ಲ. ಅಧಿಕಲಾಭವಿರುವಂಥ ಕಾರ್ಯ ಮಾಡುವುದೇ ಯೋಗ್ಯವಿದೆ. ದೀಕ್ಷೆಯಂತೂ ಈ ವಸ್ತುಗಳಿಂದ ರಹಿತವಾಗೇ ಇದೆ. ॥೪೬॥

ಈಗ ಮತ್ತೆ ಹೇಳುತ್ತಾರೆ, -

ಸತ್ತೂಮಿತ್ತೇ ಯ ಸಮಾ ಪಸಂಸಣಿಂದಾ ಅಲದ್ಧಿಲದ್ಧಿಸಮಾ ।
ತಣಕಣಏ ಸಮಭಾವಾ ಪವ್ವಜ್ಜಾ ಏರಿಸಾ ಭಣಿಯಾ ॥೪೭॥

ಶತ್ರೌ ಮಿತ್ರೇ ಚ ಸಮಾ ಪ್ರಶಂಸಾನಿಂದಾಽಲಬ್ಧಿಲಬ್ಧಿಸಮಾ ।
ತೃಣೇ ಕನಕೇ ಸಮಭಾವಾ ಪ್ರವ್ರಜ್ಯಾ ಈದೃಶೀ ಭಣಿತಾ ॥೪೭॥

ಅರ್ಥ ಃ- ಯಾವುದರೊಳಗೆ ಶತ್ರು-ಮಿತ್ರರಲ್ಲಿ ಸಮಭಾವವಿದೆ, ಪ್ರಶಂಸೆ-ನಿಂದೆಗಳಲ್ಲಿ, ಲಾಭ-ಅಲಾಭಗಳಲ್ಲಿ ಮತ್ತು ಹುಲ್ಲು-ಚಿನ್ನಗಳಲ್ಲಿ ಸಮಭಾವವಿದೆ ಅದನ್ನು ಪ್ರವ್ರಜ್ಯವೆಂದು ಹೇಳಿದೆ.

ಭಾವಾರ್ಥ ಃ- ಜೈನದೀಕ್ಷೆಯಲ್ಲಿ ರಾಗ-ದ್ವೇಷಗಳ ಅಭಾವವಿದೆ. ಶತ್ರು-ಮಿತ್ರ, ನಿಂದೆ-ಪ್ರಶಂಸೆ, ಲಾಭ-ಅಲಾಭ ಮತ್ತು ಹುಲ್ಲು-ಚಿನ್ನಗಳಲ್ಲಿ ಸಮಭಾವವಿದೆ. ಜೈನ ಮುನಿಗಳ ದೀಕ್ಷೆಯು ಇದೇ ಪ್ರಕಾರ ವಾಗಿರುತ್ತದೆ. ॥೪೭॥

ಈಗ ಮತ್ತೆ ಹೇಳುತ್ತಾರೆ,-

---

ನಿಂದೆ-ಪ್ರಶಂಸೆ ಶತ್ರು-ಮಿತ್ರ ಲಬ್ಧಿ-ಅಲಬ್ಧಿ ತೃಣ-ಕನಕವಿಷಯದಿ ।
ಒಂದೆತೆರ ಸಮಭಾವವಿರುವುದನು ದೀಕ್ಷೆಯೆಂದು ಜಿನರು ಪೇಳಿಹರು ॥೪೭॥

ಉತ್ತಮಮಜ್ಝಿಮಗೇಹೇ ದಾರಿದ್ದೇ ಈಸರೇ ಣಿರಾವೇಕ್ಖಾ ।
ಸವ್ವತ್ಥ ಗಿಹಿದಪಿಂಡಾ ಪವ್ವಜ್ಜಾ ಏರಿಸಾ ಭಣಿಯಾ ॥೪೮॥

ಉತ್ತಮಮಧ್ಯಮಗೇಹೇ ದಾರಿದ್ರೇ ಈಶ್ವರೇ ನಿರಪೇಕ್ಷಾ ।
ಸರ್ವತ್ರ ಗೃಹೀತಪಿಂಡಾ ಪ್ರವ್ರಜ್ಯಾ ಈದೃಶೀ ಭಣಿತಾ ॥೪೮॥

ಅರ್ಥ :- ಉತ್ತಮ ಗೇಹ ಎಂದರೆ ಶೋಭಾಸಹಿತವಾದ ರಾಜಭವನಾದಿಗಳು ಮತ್ತು ಮಧ್ಯಮ ಗೇಹ ಎಂದರೆ ಅದರಲ್ಲಿ ಅಪೇಕ್ಷೆಯಿಲ್ಲ. ಶೋಭಾರಹಿತವಾದ ಸಾಮಾನ್ಯ ಜನರ ಮನೆಗಳಲ್ಲಿ ಹಾಗೂ ದರಿದ್ರ-ಧನವಂತರುಗಳಲ್ಲಿ ನಿರಪೇಕ್ಷ ಎಂದರೆ ಇಚ್ಛಾರಹಿತರಿದ್ದಾರೆ, ಎಲ್ಲ ಯೋಗ್ಯಸ್ಥಾನಗಳಲ್ಲಿಯೂ ಆಹಾರ ಗ್ರಹಣ ಮಾಡಲಾಗುತ್ತದೆ. ಈ ಪ್ರಕಾರ ಪ್ರವ್ರಜ್ಯವನ್ನು ಹೇಳಿದೆ.

ಭಾವಾರ್ಥ :- ಮುನಿಗಳು ದೀಕ್ಷಾಸಹಿತರಿರುತ್ತಾರೆ ಮತ್ತು ಆಹಾರ ತೆಗೆದುಕೊಳ್ಳಲು ಹೋಗುತ್ತಾರೆ ಆಗ ದೊಡ್ಡ ಮನೆಗೆ ಹೋಗಬೇಕೋ ಅಥವಾ ಚಿಕ್ಕ ಮನೆಗೆ ಹೋಗಬೇಕೋ ಇಲ್ಲವೆ ದರಿದ್ರನ ಮನೆಗೆ ಹೋಗಬೇಕೋ ಅಥವಾ ಶ್ರೀಮಂತನ ಮನೆಗೆ ಹೋಗಬೇಕೋ !-ಎಂಬ ವಿಚಾರ ಮಾಡುವುದಿಲ್ಲ. ಈ ಪ್ರಕಾರ ಇಚ್ಛಾರಹಿತರಾಗಿ ನಿರ್ದೋಷ ಆಹಾರದ ಯೋಗ್ಯತೆಯಿರುವಲ್ಲಿ ಎಲ್ಲ ಸ್ಥಾನಗಳಲ್ಲಿಯೂ ಯೋಗ್ಯ ಆಹಾರ ತೆಗೆದುಕೊಳ್ಳುತ್ತಾರೆ, ಈ ಪ್ರಕಾರ ದೀಕ್ಷೆಯಿದೆ. ॥೪೮॥

ಈಗ ಮತ್ತೆ ಹೇಳುತ್ತಾರೆ, -

ಣಿಗ್ಗಂಥಾ ಣಿಸ್ಸಂಗಾ ಣಿಮ್ಮಾಣಾಸಾ ಅರಾಯ ಣಿದ್ದೋಸಾ ।
ಣಿಮ್ಮಮ ಣಿರಹಂಕಾರಾ ಪವ್ವಜ್ಜಾ ಏರಿಸಾ ಭಣಿಯಾ ॥೪೯॥

ನಿರ್ಗ್ರಂಥಾ ನಿಃಸಂಗಾ ನಿರ್ಮಾನಾಶಾ ಅರಾಗಾ ನಿರ್ದ್ವೇಷಾ ।
ನಿರ್ಮಮಾ ನಿರಹಂಕಾರಾ ಪ್ರವ್ರಜ್ಯಾ ಈದೃಶೀ ಭಣಿತಾ ॥೪೯॥

ಅರ್ಥ :- ಆ ಪ್ರವ್ರಜ್ಯೆಯು ನಿರ್ಗ್ರಂಥ ಸ್ವರೂಪವಿದೆ, ಪರಿಗ್ರಹದಿಂದ ರಹಿತವಿದೆ, ನಿಃಸಂಗ ಎಂದರೆ ಅದರಲ್ಲಿ ಸ್ತ್ರೀ ಮೊದಲಾದ ಪರದ್ರವ್ಯದ ಸಂಗವಿಲ್ಲ-ಮಿಶ್ರಣವಿಲ್ಲ, ಅದರಲ್ಲಿ ನಿರ್ಮಾನಾ ಎಂದರೆ ಮಾನ ಕಷಾಯವು ಕೂಡ ಇಲ್ಲ, ಮದರಹಿತವಿದೆ, ಅದರಲ್ಲಿ ಆಶೆಯಿಲ್ಲ, ಸಂಸಾರಭೋಗದ ಆಶೆಯಿಂದ ರಹಿತವಿದೆ, ಅದರಲ್ಲಿ ಅರಾಗ ಎಂದರೆ ರಾಗದ ಅಭಾವವಿದೆ, ಸಂಸಾರ-ದೇಹ-ಭೋಗಗಳಲ್ಲಿ ಪ್ರೀತಿಯಿಲ್ಲ, ನಿರ್ದ್ವೇಷ ಎಂದರೆ ಯಾರೊಡನೆ ದ್ವೇಷವಿಲ್ಲ, ನಿರ್ಮಮ ಎಂದರೆ ಯಾರೊಡನೆ ಮಮತ್ವಭಾವವಿಲ್ಲ, ನಿರಹಂಕಾರ ಎಂದರೆ ಅಹಂಕಾರದಿಂದ ರಹಿತವಿದೆ, ಆ ಯಾವ ಕರ್ಮದ

---

ಉತ್ತಮ ಮಧ್ಯಮಗೇಹದಲಿ ಸಧನ ನಿರ್ಧನರಲಿ ನಿರಪೇಕ್ಷರಾಗಿ ।
ಎತ್ತಲುಂ ಪಿಂಡಗ್ರಹಣ ಮಾಡುವುದನು ದೀಕ್ಷೆಯೆಂದು ಜಿನರು ಹೇಳಿಹರು ॥೪೮॥

ನಿರ್ಮಾನ ನಿರ್ಗ್ರಂಥ ನಿಃಸಂಗ ನಿರ್ದ್ವೇಷಮಲ್ಲದೆ ರಾಗಮೋಹಾಶೆಗಳಿಲ್ಲದ ।
ನಿರ್ಮಮ ನಿರಹಂಕಾರವಿರುವುದನು ದೀಕ್ಷೆಯೆಂದು ಜಿನರು ಪೇಳಿಹರು ॥೪೯॥

ಉದಯವಿರುತ್ತದೆ ಅದೇ ಆಗುತ್ತದೆಯೆಂದು ತಿಳಿದುಕೊಳ್ಳುವುದರಿಂದ ಪರದ್ರವ್ಯಗಳಲ್ಲಿ ಕರ್ತೃತ್ವದ ಅಹಂಕಾರವು ಉಳಿಯುವುದಿಲ್ಲ ಮತ್ತು ಅದರಲ್ಲಿ ತನ್ನ ಸ್ವರೂಪದ ಸಾಧನವೇ ಇರುತ್ತದೆ. ಈ ಪ್ರಕಾರ ಪ್ರವ್ರಜ್ಯವನ್ನು ಹೇಳಿದೆ.

ಭಾವಾರ್ಥ ಃ- ಅನ್ಯ ಮತಿಗಳು ವೇಷ ಮಾಡಿಕೊಂಡು ಅಷ್ಟು ಮಾತ್ರವನ್ನೇ ದೀಕ್ಷೆಯೆಂದು ಮನ್ನಿಸುತ್ತಾರೆ, ಆದರೆ ಅದು ದೀಕ್ಷೆಯಲ್ಲ, ಜೈನದೀಕ್ಷೆಯನ್ನು ಈ ಪ್ರಕಾರ ಹೇಳಲಾಗಿದೆ. ।।೪೯।।

ಈಗ ಮತ್ತೆ ಹೇಳುತ್ತಾರೆ, -

ಣಿಣ್ಣೇಹಾ ಣಿಲ್ಲೋಹಾ ಣಿಮ್ಮೋಹಾ ಣಿವ್ವಿಯಾರ ಣಿಕ್ಕಲುಸಾ ।
ಣಿಬ್ಭಯ ಣಿರಾಸಭಾವಾ ಪವ್ವಜ್ಜಾ ಏರಿಸಾ ಭಣಿಯಾ ।।೫೦।।

ನಿಃಸ್ನೇಹಾ ನಿರ್ಲೋಭಾ ನಿರ್ಮೋಹಾ ನಿರ್ವಿಕಾರಾ ನಿಃಕಲುಷಾ ।
ನಿರ್ಭಯಾ ನಿರಾಶಭಾವಾ ಪ್ರವ್ರಜ್ಯಾ ಈದೃಶೀ ಭಣಿತಾ ।।೫೦।।

ಅರ್ಥ ಃ- ನಿಃಸ್ನೇಹ ಎಂದರೆ ಅದರಲ್ಲಿ ಯಾರೊಡನೆ ಸ್ನೇಹವಿಲ್ಲ, ಅದರೊಳಗೆ ಪರದ್ರವ್ಯಗಳಲ್ಲಿ ರಾಗಾದಿ ರೂಪದ ಸ್ನಿಗ್ಧಭಾವವಿಲ್ಲ, ಅದರಲ್ಲಿ ನಿರ್ಲೋಭಾ ಎಂದರೆ ಯಾವುದೇ ಪರದ್ರವ್ಯವನ್ನು ತೆಗೆದುಕೊಳ್ಳುವ ಇಚ್ಛೆಯಿಲ್ಲ, ಅದರಲ್ಲಿ ನಿರ್ಮೋಹ ಎಂದರೆ ಯಾವುದೇ ಪರದ್ರವ್ಯದಲ್ಲಿ ಮೋಹವಿಲ್ಲ, ತಪ್ಪಿ ಕೂಡ ಪರದ್ರವ್ಯದಲ್ಲಿ ಆತ್ಮ ಬುದ್ಧಿಯು ಆಗುವುದಿಲ್ಲ, ನಿರ್ವಿಕಾರ ಎಂದರೆ ಬಾಹ್ಯಾಭ್ಯಂತರ ವಿಕಾರದಿಂದ ರಹಿತವಿದೆ, ಅದರಲ್ಲಿ ಬಾಹ್ಯ ಶರೀರದ ಚೇಷ್ಟೆ ಮತ್ತು ವಸ್ತ್ರ-ಭೂಷಣಾದಿಗಳ ಹಾಗೂ ಅಂಗ-ಉಪಾಂಗಗಳ ವಿಕಾರವಿಲ್ಲ, ಅದರಲ್ಲಿ ಅಂತರಂಗದ ಕಾಮ-ಕ್ರೋಧಾದಿಗಳ ವಿಕಾರವಿಲ್ಲ. ನಿಃಕಲುಷ ಎಂದರೆ ಮಲಿನಭಾವದಿಂದ ರಹಿತವಿದೆ. ಆತ್ಮನನ್ನು ಕಷಾಯಗಳು ಮಲಿನ ಮಾಡುತ್ತವೆ, ಆದುದರಿಂದ ಅದರಲ್ಲಿ ಕಷಾಯಗಳಿಲ್ಲ. ನಿರ್ಭಯ ಎಂದರೆ ಅದರಲ್ಲಿ ಯಾವುದೇ ಪ್ರಕಾರದ ಭಯವಿಲ್ಲ, ತನ್ನ ಸ್ವಭಾವವನ್ನು ಅವಿನಾಶಿಯೆಂದು ತಿಳಿಯುವವನಿಗೆ ಯಾವುದರ ಭಯವಿರುವುದು, ಅದರಲ್ಲಿ ನಿರಾಶಾಭಾವ ಎಂದರೆ ಯಾವುದೇ ಪ್ರಕಾರದ ಪರದ್ರವ್ಯದ ಆಶೆಯ ಭಾವವಿಲ್ಲ, ಆಶೆಯಂತೂ ಯಾವುದೇ ವಸ್ತುವಿನ ಪ್ರಾಪ್ತಿಯಾಗದಿದ್ದರೆ ಅದರದು ಅಂಟಿಕೊಂಡಿರುತ್ತದೆ, ಆದರೆ ಎಲ್ಲಿ ಪರದ್ರವ್ಯಗಳನ್ನು ತನ್ನುವೆಂದು ತಿಳಿದೇ ಇಲ್ಲ ಮತ್ತು ತನ್ನ ಸ್ವಪದದ ಪ್ರಾಪ್ತಿ ಯಾಗಿದೆ ಆಗ ಏನನ್ನೂ ಪ್ರಾಪ್ತಮಾಡಿಕೊಳ್ಳುವುದರ ಬಾಕಿ ಉಳಿದಿಲ್ಲವೆಂದಮೇಲೆ ಯಾವುದರ ಆಶೆಯಿರುವುದು? ಈ ಪ್ರಕಾರ ಪ್ರವ್ರಜ್ಯವನ್ನು ಹೇಳಿದೆ.

ಭಾವಾರ್ಥ ಃ- ಜೈನದೀಕ್ಷೆಯು ಹೀಗಿದೆ. ಅನ್ಯ ಮತಗಳಲ್ಲಿ ಸ್ವ-ಪರದ್ರವ್ಯದ ಭೇದಜ್ಞಾನವಿಲ್ಲ, ಅವರಿಗೆ ಈ ಪ್ರಕಾರದ ದೀಕ್ಷೆಯು ಎಲ್ಲಿಂದ ಇರುವುದು. ।।೫೦।।

ಈಗ ದೀಕ್ಷೆಯ ಬಾಹ್ಯ ಸ್ವರೂಪವನ್ನು ಹೇಳುತ್ತಾರೆ, -

---

ನಿರ್ಮೋಹ ನಿರ್ಲೋಭ ನಿರ್ವಿಕಾರ ನಿಃಸ್ನೇಹ ನಿಃಕಲುಷ ನಿರ್ಭಯವದರಂತೆ ।
ನಿರ್ಮಲ ನಿರಾಶಭಾವವಿರುವುದನು ದೀಕ್ಷೆಯೆಂದು ಜಿನರು ಪೇಳಿಹರು ।।೫೦।।

ಜಹಜಾಯರೂವಸರಿಸಾ ಅವಲಂಬಿಯಭುಯ ಣಿರಾಉಹಾ ಸಂತಾ ।
ಪರಕಿಯಣಿಲಯಣಿವಾಸಾ ಪವ್ವಜ್ಜಾ ಏರಿಸಾ ಭಣಿಯಾ ।।೫೧।।

ಯಥಾಜಾತರೂಪಸದೃಶೀ ಅವಲಂಬಿತಭುಜಾ ನಿರಾಯುಧಾ ಶಾಂತಾ ।
ಪರಕೃತನಿಲಯನಿವಾಸಾ ಪ್ರವ್ರಜ್ಯಾ ಈದೃಶೀ ಭಣಿತಾ ।।೫೧।।

ಅರ್ಥ :- ಪ್ರವ್ರಜ್ಯವು ಯಥಾಜಾತರೂಪಸದೃಶ ಎಂದರೆ ಹೇಗೆ ಜನ್ಮವಾಗುತ್ತಿರುವಂತೆಯೇ ಬಾಲಕನ ನಗ್ನರೂಪವಿರುತ್ತದೆ ಅಂಥದೆ ನಗ್ನರೂಪವು ಅದರಲ್ಲಿದೆ. ಅವಲಂಬಿತಭುಜಾ ಎಂದರೆ ಅದರಲ್ಲಿ ತೋಳುಗಳನ್ನು ಲಂಬಾಯಮಾನಮಾಡಿದೆ, ಅದರಲ್ಲಿ ಬಾಹುಲ್ಯ ಅಪೇಕ್ಷೆಯಿಂದ ಕಾಯೋತ್ಸರ್ಗವು ಎದ್ದು ನಿಂತುಕೊಳ್ಳುವದಿರುತ್ತದೆ, ನಿರಾಯುಧಾ ಎಂದರೆ ಆಯುಧಗಳಿಂದ ರಹಿತವಿದೆ, ಶಾಂತ ಎಂದರೆ ಅದರಲ್ಲಿ ಅಂಗ-ಉಪಾಂಗಗಳು ವಿಕಾರವಿಲ್ಲದ ಶಾಂತಮುದ್ರೆಯಿರುತ್ತದೆ. ಪರಕೃತನಿಲಯನಿವಾಸ ಎಂದರೆ ಅದರಲ್ಲಿ ಇತರರು ನಿರ್ಮಿಸಿದ ನಿಲಯ ಆ ವಸತಿಕೆ ಮೊದಲಾದವುಗಳಲ್ಲಿ ನಿವಾಸವಿರುವುದಿಲ್ಲ, ಅದರಲ್ಲಿ ತನಗೆ ಕೃತ, ಕಾರಿತ, ಅನುಮೋದನ, ಮನ, ವಚನ, ಕಾಯಗಳಿಂದ ದೋಷವು ತಗಲದಂತೆ ಇತರರು ನಿರ್ಮಿಸಿರುವ ವಸತಿಕೆ ಮೊದಲಾದವುಗಳಲ್ಲಿ ಇರುವುದಾಗುವಂಥ ಪ್ರವ್ರಜ್ಯವನ್ನು ಹೇಳಲಾಗಿದೆ.

ಭಾವಾರ್ಥ :- ಅನ್ಯಮತದ ಕೆಲವು ಜನರು ಬಾಹ್ಯದಲ್ಲಿ ವಸ್ತ್ರಾದಿಗಳನ್ನಿಟ್ಟುಕೊಳ್ಳುತ್ತಾರೆ, ಕೆಲವರು ಆಯುಧಗಳನ್ನಿಟ್ಟುಕೊಳ್ಳುತ್ತಾರೆ, ಕೆಲವರು ಸುಖದ ಸಲುವಾಗಿ ಚಂಚಲ ಆಸನಗಳನ್ನಿಟ್ಟುಕೊಳ್ಳುತ್ತಾರೆ, ಕೆಲವರು ಉಪಾಶ್ರಯ ಮೊದಲಾದ ಇರುವ ನಿವಾಸಗಳನ್ನು ನಿರ್ಮಿಸಿ ಅದರಲ್ಲಿರುತ್ತಾರೆ ಮತ್ತು ತಮ್ಮನ್ನು ದೀಕ್ಷಾಸಹಿತರೆಂದು ಮನ್ನಿಸುತ್ತಾರೆ, ಅವರಿಗೆ ವೇಷಮಾತ್ರವಿದೆ, ಜೈನದೀಕ್ಷೆಯಂತೂ ಹೇಗೆ ಹೇಳಿದೆ ಹಾಗೆಯೇ ಇದೆ. ।।೫೧।।

ಈಗ ಮತ್ತೆ ಹೇಳುತ್ತಾರೆ,

ಉವಸಮಖಮದಮಜುತ್ತಾ ಸರೀರಸಂಕಾರವಜ್ಜಿಯಾ ರುಕ್ಖಾ ।
ಮಯರಾಯದೋಸರಹಿಯಾ ಪವ್ವಜ್ಜಾ ಏರಿಸಾ ಭಣಿಯಾ ।।೫೨।।

ಉಪಶಮಕ್ಷಮದಮಯುಕ್ತಾ ಶರೀರಸಂಸ್ಕಾರ ವರ್ಜಿತಾ ರೂಕ್ಷಾ ।
ಮದರಾಗದೋಷರಹಿತಾ ಪ್ರವ್ರಜ್ಯಾ ಈದೃಶೀ ಭಣಿತಾ ।।೫೨।।

ಅರ್ಥ :- ಪ್ರವ್ರಜ್ಯವು ಉಪಶಮಕ್ಷಮದಮಯುಕ್ತಾ ಎಂದರೆ ಉಪಶಮವಂತೂ ಮೋಹಕರ್ಮದ ಉದಯದ ಅಭಾವರೂಪವಾದ ಶಾಂತ ಪರಿಣಾಮವು ಮತ್ತು ಕ್ಷಮೆ ಎಂದರೆ ಕ್ರೋಧದ ಅಭಾವರೂಪವಾದ ಉತ್ತಮ ಕ್ಷಮೆಯು

---

ನಿರಾಯುಧ ಶಾಂತಮುದ್ರೆ ಹುಟ್ಟುವಾಗಿರುವಂಥ ರೂಪು ಅವಲಂಬಿತಭುಜ ।
ಪರಕೃತನಿಲಯನಿವಾಸವಿರ್ಪುದನು ದೀಕ್ಷೆಯೆಂದು ಜಿನರು ಪೇಳಿಹರು ।।೫೧।।

ಆ ದಮಕ್ಷಮಉಪಶಮಯುಕ್ತ ಶರೀರಸಂಸ್ಕಾರವರ್ಜಿತ ರೂಕ್ಷಮೇಣ್ ।
ಮದರಾಗದೋಷರಹಿತವಿರ್ಪುದನು ದೀಕ್ಷೆಯೆಂದು ಜಿನರು ಪೇಳಿಹರು ।।೫೨।।

ಹಾಗೂ ದಮ ಎಂದರೆ ಇಂದ್ರಿಯಗಳನ್ನು ವಿಷಯಗಳಲ್ಲಿ ಪ್ರವರ್ತಿಸದ ಭಾವಗಳಿಂದ ಯುಕ್ತವಿರುವುದು, ಶರೀರ ಸಂಸ್ಕಾರವರ್ಜಿತ ಎಂದರೆ ಸ್ನಾನಾದಿಗಳಿಂದ ಶರೀರವನ್ನು ಅಲಂಕರಿಸದಿರುವುದು ಆದರಲ್ಲಿ ರೂಕ್ಷ ಎಂದರೆ ಶರೀರಕ್ಕೆ ಎಣ್ಣೆ ಮೊದಲಾದವುಗಳ ಮರ್ದನವಿಲ್ಲ. ಮದ, ರಾಗ, ದ್ವೇಷರಹಿತವಿದೆ, ಈ ಪ್ರಕಾರ ಪ್ರವ್ರಜ್ಯವನ್ನು ಹೇಳಿದೆ.

ಭಾವಾರ್ಥ :- ಅನ್ಯಮತದ ವೇಷಧಾರಿಗಳು ಕ್ರೋಧಾದಿರೂಪವಾಗಿ ಪರಿಣಮಿಸುತ್ತಾರೆ, ಶರೀರವನ್ನು ಅಲಂಕರಿಸಿ ಸುಂದರವಿಡುತ್ತಾರೆ, ಇಂದ್ರಿಯ ವಿಷಯಗಳ ಸೇವನೆ ಮಾಡುತ್ತಾರೆ ಮತ್ತು ತಮ್ಮನ್ನು ದೀಕ್ಷಾಸಹಿತರೆಂದು ಮನ್ನಿಸುತ್ತಾರೆ ಅವರಂತೂ ಗೃಹಸ್ಥರ ಸಮಾನರಿದ್ದಾರೆ, ಅತೀತ (ಯತಿ)ಗಳೆಂದು ಹೇಳಿಸಿಕೊಂಡು ಮಿಥ್ಯಾತ್ವವನ್ನು ದೃಢ ಮಾಡುತ್ತಾರೆ ; ಜಿನದೀಕ್ಷೆಯು ಈ ಪ್ರಕಾರವಿದೆ ಅದೇ ಸತ್ಯಾರ್ಥವಿದೆ, ಇದರ ಅಂಗೀಕಾರ ಮಾಡುವವರೇ ನಿಜವಾದ ಅತೀತರಿದ್ದಾರೆ-ಯತಿಗಳಿದ್ದಾರೆ. ॥೫೨॥

ಈಗ ಮತ್ತೆ ಹೇಳುತ್ತಾರೆ, -

ವಿವರೀಯಮೂಢಭಾವಾ ಪಣಟ್ಠಕಮ್ಮಟ್ಠ ಣಟ್ಠಮಿಚ್ಛತ್ತಾ ।
ಸಮ್ಮತ್ತಗುಣವಿಸುದ್ಧಾ ಪವ್ವಜ್ಜಾ ಏರಿಸಾ ಭಣಿಯಾ ॥೫೩॥

ವಿಪರೀತಮೂಢಭಾವಾ ಪ್ರಣಷ್ಟಕರ್ಮಾಷ್ಟ ನಷ್ಟಮಿಥ್ಯಾತ್ವಾ ।
ಸಮ್ಯಕ್ತ್ವಗುಣವಿಶುದ್ಧಾ ಪ್ರವ್ರಜ್ಯಾ ಈದೃಶೀ ಭಣಿತಾ ॥೫೩॥

ಅರ್ಥ :- ಪ್ರವ್ರಜ್ಯ ಸ್ವೀಕರಿಸಿದವನ ಮೂಢಭಾವವು, ಅಜ್ಞಾನಭಾವವು ವಿಪರೀತವಾಗಿದೆ ಎಂದರೆ ದೂರವಾಗಿದೆ. ಅನ್ಯಮತಿಗಳು ಆತ್ಮನ ಸ್ವರೂಪವನ್ನು ಸರ್ವಥಾ ಏಕಾಂತದಿಂದ ಅನೇಕ ಪ್ರಕಾರ ಭಿನ್ನ-ಭಿನ್ನವಾಗಿ ಹೇಳಿ ವಾದ ಮಾಡುತ್ತಾರೆ, ಅವರಿಗೆ ಆತ್ಮನ ಸ್ವರೂಪದಲ್ಲಿ ಮೂಢಭಾವವಿದೆ. ಜೈನ ಮುನಿಗಳಿಗೆ ಅನೇಕಾಂತದಿಂದ ಸಿದ್ಧಮಾಡಿರುವ ಯಥಾರ್ಥ ಜ್ಞಾನವಿರುವುದರಿಂದ ಮೂಢಭಾವವಿಲ್ಲ. ಆದರಲ್ಲಿ ಎಂಟು ಕರ್ಮ ಮತ್ತು ಮಿಥ್ಯಾತ್ವಾದಿಗಳು ಪ್ರಣಷ್ಟವಾಗಿವೆ, ಜೈನದೀಕ್ಷೆಯಲ್ಲಿ ಅತತ್ತ್ವಾರ್ಥಶ್ರದ್ಧಾನರೂಪ ಮಿಥ್ಯಾತ್ವದ ಅಭಾವವಿದೆ, ಆದುದರಿಂದ ಅದು ಸಮ್ಯಕ್ತ್ವನಾಮದ ಗುಣದಿಂದ ವಿಶುದ್ಧವಿದೆ, ನಿರ್ಮಲವಿದೆ, ಸಮ್ಯಕ್ತ್ವ ಸಹಿತವಾದ ದೀಕ್ಷೆಯಲ್ಲಿ ದೋಷವು ಉಳಿಯುವುದಿಲ್ಲ. ಈ ಪ್ರಕಾರ ಪ್ರವ್ರಜ್ಯವನ್ನು ಹೇಳಿದೆ. ॥೫೩॥

ಈಗ ಮತ್ತೆ ಹೇಳುತ್ತಾರೆ, -

ಜಿಣಮಗ್ಗೇ ಪವ್ವಜ್ಜಾ ಛಹಸಂಹಣಣೇಸು ಭಣಿಯ ಣಿಗ್ಗಂಥಾ ।
ಭಾವಂತಿ ಭವ್ವಪುರಿಸಾ ಕಮ್ಮಕ್ಖಯಕಾರಣೇ ಭಣಿಯಾ ॥೫೪॥

---

ಸಾಮ್ಯಭಾವವಿದ್ದಷ್ಟಕರ್ಮಗಳು ಪ್ರಣಷ್ಟವಾಗಿ ಮಿಥ್ಯಾತ್ವದಭಾವವಾಗಿ ।
ಸಮ್ಯಕ್ತ್ವಗುಣವಿಶುದ್ಧವಿರುವುದನು ದೀಕ್ಷೆಯೆಂದು ಜಿನರು ಪೇಳಿಹರು ॥೫೩॥

ಜೀವ ಷಟ್ಸಂಹನನವಂತನಿರೆ ಜಿನಮಾರ್ಗದಿ ನಿರ್ಗ್ರಂಥ ದೀಕ್ಷೆ ಪೇಳಿದೆ ।
ಭಾವಿಪನು ಭವ್ಯಪುರುಷನಿದನು ಕರ್ಮಕ್ಷಯಕಾರಣವೆಂದು ಪೇಳಿದೆ ॥೫೪॥

ಜಿನಮಾರ್ಗೇ ಪ್ರವ್ರಜ್ಯಾ ಷಟ್‌ಸಂಹನನೇಷು ಭಣಿತಾ ನಿರ್ಗ್ರಂಥಾ ।
ಭಾವಯಂತಿ ಭವ್ಯಪುರುಷಾಃ ಕರ್ಮಕ್ಷಯಕಾರಣೇ ಭಣಿತಾ ।।೫೪।।

ಅರ್ಥ ಃ- ಜಿನಮಾರ್ಗದಲ್ಲಿ ಪ್ರವ್ರಜ್ಯವು ಆರು ಸಂಹನನವುಳ್ಳ ಜೀವನಿಗೆ ಇರುವುದೆಂದು ಹೇಳಿದೆ, ಅದು ನಿರ್ಗ್ರಂಥ ಸ್ವರೂಪವಿದೆ, ಎಲ್ಲ ಪರಿಗ್ರಹದಿಂದ ರಹಿತ ಯಥಾಜಾತಸ್ವರೂಪವಿದೆ ಇದನ್ನು ಭವ್ಯ ಪುರುಷರೇ ಭಾವನೆ ಮಾಡುತ್ತಾರೆ. ಈ ಪ್ರಕಾರದ ಪ್ರವ್ರಜ್ಯವನ್ನು ಕರ್ಮಕ್ಷಯದ ಕಾರಣವೆಂದು ಹೇಳಿದೆ.

ಭಾವಾರ್ಥ ಃ- ವಜ್ರವೃಷಭನಾರಾಚ ಮೊದಲಾದ ಆರು ಶರೀರದ ಸಂಹನನಗಳನ್ನು ಹೇಳಿದ್ದಾರೆ ಅವೆಲ್ಲವುಗಳಲ್ಲೂ ದೀಕ್ಷೆಯಾಗುವುದನ್ನು ಹೇಳಿದೆ, ಭವ್ಯಪುರುಷರಿರುವವರು ಕರ್ಮಕ್ಷಯದ ಕಾರಣವೆಂದು ತಿಳಿದುಕೊಂಡು ಇದನ್ನು ಅಂಗೀಕಾರ ಮಾಡಬೇಕು, ವಜ್ರವೃಷಭ ಮೊದಲಾದ ದೃಢಸಂಹನನಗಳಲ್ಲಿಯೇ ಇರುವುದು ಮತ್ತು ಅಸಂಸ್ಪಪಾಟಿಕ ಸಂಹನನದಲ್ಲಿ ಇರುವುದಿಲ್ಲವೆಂಬುದಾಗಿಲ್ಲ, ಈ ಪ್ರಕಾರ ನಿರ್ಗ್ರಂಥರೂಪ ದೀಕ್ಷೆಯಂತೂ ಅಸಂಪ್ರಾಪ್ತಾಸ್ಪಪಾಟಿಕಾ ಸಂಹನನದಲ್ಲಿ ಕೂಡ ಇರುತ್ತದೆ.

ಈಗ ಮತ್ತೆ ಹೇಳುತ್ತಾರೆ, -

ತಿಲತುಸಮತ್ತಣಿಮಿತ್ತಸಮ ಬಾಹಿರಗ್ಗಂಥಸಂಗಹೋ ಣತ್ಥಿ ।
ಪವ್ವಜ್ಜ ಹವಇ ಏಸಾ ಜಹ ಭಣಿಯಾ ಸವ್ವದರಸೀಹಿಂ ।।೫೫।।

ತಿಲತುಷಮಾತ್ರನಿಮಿತ್ತಸಮಃ ಬಾಹ್ಯಗ್ರಂಥಸಂಗ್ರಹಃ ನಾಸ್ತಿ ।
ಪ್ರವ್ರಜ್ಯಾ ಭವತಿ ಏಷಾ ಯಥಾ ಭಣಿತಾ ಸರ್ವದರ್ಶಿಭಿಃ ।।೫೫।।

ಅರ್ಥ ಃ- ಆ ಪ್ರವ್ರಜ್ಯದಲ್ಲಿ ಎಳ್ಳಿನ ತವಡಿನಷ್ಟು ಸಂಗ್ರಹಕ್ಕೆ ಕಾರಣವಾದ ಭಾವರೂಪದ ಇಚ್ಛೆ ಎಂದರೆ ಅಂತರಂಗ ಪರಿಗ್ರಹ ಮತ್ತು ಆ ಎಳ್ಳಿನ ತವಡು ಮಾತ್ರ ಬಾಹ್ಯ ಪರಿಗ್ರಹದ ಸಂಗ್ರಹವಿಲ್ಲದಂಥ ಪ್ರವ್ರಜ್ಯವು ಯಾವ ಪ್ರಕಾರ ಸರ್ವಜ್ಞದೇವರು ಹೇಳಿದ್ದಾರೆ ಅದೇ ಪ್ರಕಾರವಿದೆ, ಬೇರೆ ಪ್ರಕಾರದಿಂದ ಪ್ರವ್ರಜ್ಯವಿಲ್ಲವೆಂಬ ನಿಯಮವನ್ನು ತಿಳಿದುಕೊಳ್ಳಬೇಕು, ಶ್ವೇತಾಂಬರ ಮೊದಲಾದವರು ಅಪವಾದ ಮಾರ್ಗದಲ್ಲಿ ಸಾಧುವಿಗೆ ವಸ್ತ್ರಾದಿಗಳ ಸಂಗ್ರಹವನ್ನು ಹೇಳಿದೆಯೆಂದು ಹೇಳುತ್ತಾರೆ, ಆದರೆ ಸರ್ವಜ್ಞರ ಸೂತ್ರದಲ್ಲಂತೂ ಹೇಳಲಾಗಿಲ್ಲ. ಅವರು ಕಾಲ್ಪನಿಕ ಸೂತ್ರಗಳನ್ನು ರಚಿಸಿದ್ದಾರೆ ಅವುಗಳಲ್ಲಿ ಹೇಳಿರುವುದು ಅದು ಕಾಲದೋಷವಿದೆ ।।೫೫।।

ಈಗ ಮತ್ತೆ ಹೇಳುತ್ತಾರೆ, -

ಉವಸಗ್ಗಪರಿಸಹಸಹಾ ಣಿಜ್ಜಣದೇಸೇ ಹಿ ಣಿಚ್ಚ[೧]ಅತ್ಥಇ ।
ಸಿಲ ಕಟ್ಠೇ ಭೂಮಿತಲೇ ಸವ್ವೇ ಆರುಹಇ ಸವ್ವತ್ಥ ।।೫೬।।

---

ಆ ತಿಲತುಷಪ್ರಮಾಣ ಬಾಹ್ಯಪರಿಗ್ರಹವಿಲ್ಲ ಮೇಣ್ತತ್ಸಮರಾಗವಿಲ್ಲ ।
ಈ ತೆರದ ಪ್ರವ್ರಜ್ಯವಿದ್ದಿದು ಸರ್ವಜ್ಞ ಜಿನದೇವ ಪೇಳಿದಂತಿರುವುದು ।।೫೫।।

ಉಪಸರ್ಗಪರೀಷಹ ಸಹಿಪರು ನಿತ್ಯನಿರ್ಜನಸ್ಥಲದಲಿರುವರು ।
ತಪಸಿ ಶಿಲಾಕಾಷ್ಠ ಮೇಣ್ಭೂತಲದಲಿ ಸರ್ವದಾ ಸರ್ವತ್ರ ನೆಲೆಸುವರು ।।೫೬।।

---

೧ 'ಅಚ್ಛೇದ'ವೆಂಬ ಪಾಠಾಂತರವಿದೆ.

ಉಪಸರ್ಗಪರೀಷಹಸಹಾ ನಿರ್ಜನದೇಶೇ ಹಿ ನಿತ್ಯಂ ತಿಷ್ಠತಿ ।
ಶಿಲಾಯಾಂ ಕಾಷ್ಠೇ ಭೂಮಿತಲೇ ಸರ್ವಾಣಿ ಆರೋಹತಿ ಸರ್ವತ್ರ ॥೫೬॥

ಅರ್ಥ ಃ- ಉಪಸರ್ಗ ಅಥವಾ ದೇವ, ಮನುಷ್ಯ, ತಿರ್ಯಂಚ ಮತ್ತು ಅಚೇತನಕೃತ ಉಪದ್ರವ ಇನ್ನು ಪರೀಷಹ ಎಂದರೆ ದೈವ-ಕರ್ಮಯೋಗದಿಂದ ಬಂದಿರುವ ಇಪ್ಪತ್ತೆರಡು ಪರೀಷಹಗಳನ್ನು ಸಮಭಾವದಿಂದ ಸಹಿಸುವಂಥ ಪ್ರವ್ರಜ್ಯಸಹಿತ ಮುನಿಗಳಿದ್ದಾರೆ, ಅವರು ಅನ್ಯಜನರು ವಾಸಮಾಡದಂಥ ನಿರ್ಜನವಾದ ವನಾದಿ ಪ್ರದೇಶಗಳಲ್ಲಿ ಯಾವಾಗಲೂ ವಾಸಿಸುತ್ತಾರೆ, ಅಲ್ಲಿಕೂಡ ಶಿಲಾತಲ, ಕಾಷ್ಠ, ಭೂಮಿತಲದಲ್ಲಿ ಇರುತ್ತಾರೆ ಇವೆಲ್ಲ ಪ್ರದೇಶಗಳಲ್ಲಿ ಕೂಡ್ರುತ್ತಾರೆ, ಮಲಗಿಕೊಳ್ಳುತ್ತಾರೆ, 'ಸರ್ವತ್ರ'ವೆಂದು ಹೇಳುವುದರಿಂದ ವನದಲ್ಲಿರುವರು ಮತ್ತು ಕಿಂಚಿತ್‌ಕಾಲ ನಗರದಲ್ಲಿ ಇದ್ದರೆ ಇಂಥ ಸ್ಥಾನಗಳಲ್ಲಿಯೇ ಇರುವರು.

ಭಾವಾರ್ಥ ಃ- ಜೈನದೀಕ್ಷೆಯುಳ್ಳ ಮುನಿಗಳು ಉಪಸರ್ಗ ಪರೀಷಹಗಳಲ್ಲಿ ಸಮಭಾವವಿಡುತ್ತಾರೆ ಮತ್ತು ಎಲ್ಲಿ ಮಲಗಿಕೊಳ್ಳುತ್ತಾರೆ, ಕುಳಿತುಕೊಳ್ಳುತ್ತಾರೆ ಅಲ್ಲಿ ನಿರ್ಜನ ಪ್ರದೇಶದಲ್ಲಿ ಶಿಲೆ, ಕಾಷ್ಠ, ಭೂಮಿಯಲ್ಲಿಯೇ ಕೂಡ್ರುತ್ತಾರೆ, ಮಲಗಿಕೊಳ್ಳುತ್ತಾರೆ, ಅನ್ಯಮತದ ವೇಷಧಾರಿಯಂತೆ ಸ್ವಚ್ಛಂದಿ, ಪ್ರಮಾದಿಗಳಾಗಿರುವುದಿಲ್ಲವೆಂದು ತಿಳಿದುಕೊಳ್ಳಬೇಕು. ॥೫೬॥

ಈಗ ಅನ್ಯ ವಿಶೇಷ ಹೇಳುತ್ತಾರೆ, -

ಪಸುಮಹಿಲಸಂಢಸಂಗಂ ಕುಸೀಲಸಗಂ ಣ ಕುಣಇ ವಿಕಹಾಓ ।
ಸಜ್ಝಾಯಝಾಣಜುತ್ತಾ ಪವ್ವಜ್ಜಾ ಏರಿಸಾ ಭಣಿಯಾ ॥೫೭॥

ಪಶುಮಹಿಲಾಷಂಢಸಂಗಂ ಕುಶೀಲಸಂಗಂ ನ ಕರೋತಿ ವಿಕಥಾಃ ।
ಸ್ವಾಧ್ಯಾಯಧ್ಯಾನಯುಕ್ತಾ ಪ್ರವ್ರಜ್ಯಾ ಈದೃಶೀ ಭಣಿತಾ ॥೫೭॥

ಅರ್ಥ ಃ- ಆ ಪ್ರವ್ರಜ್ಯದಲ್ಲಿ ಪಶು-ತಿರ್ಯಂಚ, ಮಹಿಳೆ (ಸ್ತ್ರೀ), ಷಂಢ (ನಪುಂಸಕ) ಇವರುಗಳ ಸಂಗ ಹಾಗೂ ಕುಶೀಲ (ವ್ಯಭಿಚಾರಿ) ಪುರುಷನ ಸಂಗ ಮಾಡುವುದಿಲ್ಲ ; ಸ್ತ್ರೀಕಥೆ, ರಾಜಕಥೆ, ಭೋಜನಕಥೆ ಮತ್ತು ಚೋರಇತ್ಯಾದಿಕರ ಕಥೆಗಳು ವಿಕಥೆಗಳಿದ್ದು ಅವನ್ನು ಮಾಡುವುದಿಲ್ಲ, ಆದರೆ ಸ್ವಾಧ್ಯಾಯ ಎಂದರೆ ಶಾಸ್ತ್ರ ಜಿನವಚನಗಳ ಪಠನ-ಪಾಠನ ಮತ್ತು ಧ್ಯಾನ ಎಂದರೆ ಧರ್ಮ-ಶುಕ್ಲ ಧ್ಯಾನಗಳಿಂದ ಯುಕ್ತರಿರುತ್ತಾರೆ. ಈ ಪ್ರಕಾರದ ಪ್ರವ್ರಜ್ಯವನ್ನು ಜಿನದೇವರು ಹೇಳಿದ್ದಾರೆ.

ಭಾವಾರ್ಥ ಃ- ಜಿನದೀಕ್ಷೆಯನ್ನು ತೆಗೆದುಕೊಂಡು ಕುಸಂಗತಿ ಮಾಡಿದರೆ, ವಿಕಥಾದಿಗಳನ್ನು ಮಾಡಿದರೆ ಮತ್ತು ಪ್ರಮಾದಿಯಾಗಿದ್ದರೆ ದೀಕ್ಷೆಯ ಅಭಾವವಾಗಿ ಹೋಗುವುದರಿಂದ ಕುಸಂಗತಿಯು ನಿಷಿದ್ಧವಿದೆ. ಅನ್ಯ ವೇಷಗಳಂತೆ ಈ ವೇಷವಿಲ್ಲ. ಇದು ಮೋಕ್ಷಮಾರ್ಗವಿದೆ, ಅನ್ಯ ಸಂಸಾರದ ಮಾರ್ಗವಿದೆ. ॥೫೭॥

ಈಗ ಮತ್ತೆ ವಿಶೇಷ ಹೇಳುತ್ತಾರೆ, -

---

ಸ್ತ್ರೀನಪುಂಸಕಪಶುಸಂಗ ಕುಶೀಲಸಂಗ ಮೇಣ್ವಿಕಥೆ ಮಾಡದಿರುವುದು ।
ಧ್ಯಾನಸ್ವಾಧ್ಯಾಯದಲಿಯುಕ್ತವಿರ್ಪುದನು ದೀಕ್ಷೆಯೆಂದು ಜಿನರು ಪೇಳಿಹರು ॥೫೭॥

**ತವವಯಗುಣೇಹಿಂ ಸುದ್ಧಾ ಸಂಜಮಸಮ್ಮತ್ತಗುಣವಿಸುದ್ಧಾ ಯ ।**
**ಸುದ್ಧಾ ಗುಣೇಹಿಂ ಸುದ್ಧಾ ಪವ್ವಜ್ಜಾ ಏರಿಸಾ ಭಣಿಯಾ ॥೫೮॥**

**ತಪೋವ್ರತಗುಣೈಃ ಶುದ್ಧಾ ಸಂಯಮಸಮ್ಯಕ್ತ್ವಗುಣವಿಶುದ್ಧಾ ಚ ।**
**ಶುದ್ಧಾ ಗುಣೈಃ ಶುದ್ಧಾ ಪ್ರವ್ರಜ್ಯಾ ಈದೃಶೀ ಭಣಿತಾಃ ॥೫೮॥**

ಅರ್ಥ :– ಜಿನದೇವರು ಪ್ರವ್ರಜ್ಯವನ್ನು ಹೀಗೆ ಹೇಳುತ್ತಾರೆ, – ತಪ ಎಂದರೆ ಬಾಹ್ಯ ಅಭ್ಯಂತರವೆಂದು ಹನ್ನೆರಡು ಪ್ರಕಾರದ ತಪ ಮತ್ತು ವ್ರತ ಎಂದರೆ ಐದು ಮಹಾವ್ರತಗಳು ಇನ್ನು ಗುಣ ಎಂದರೆ ಇವುಗಳ ಭೇದ ರೂಪಗಳಾದ ಉತ್ತರಗುಣಗಳಿಂದ ಶುದ್ಧರಿದ್ದಾರೆ. 'ಸಂಯಮ' ಎಂದರೆ ಇಂದ್ರಿಯ ಮನಸ್ಸಿನ ನಿರೋಧ, ಷಡ್‌ಕಾಯ ಜೀವಗಳ ರಕ್ಷಣೆ 'ಸಮ್ಯಕ್ತ್ವ' ಎಂದರೆ ತತ್ತ್ವಾರ್ಥಶ್ರದ್ಧಾನಲಕ್ಷಣ ನಿಶ್ಚಯ–ವ್ಯವಹಾರರೂಪ ಸಮ್ಯಗ್ದರ್ಶನ ಹಾಗೂ ಇವುಗಳ 'ಗುಣ' ಎಂದರೆ ಮೂಲಗುಣಗಳಿಂದ ಶುದ್ಧ, ಅತಿಚಾರರಹಿತ ನಿರ್ಮಲವಿದೆ ಮತ್ತು ಆ ಪ್ರವ್ರಜ್ಯದ ಗುಣಗಳನ್ನು ಹೇಳಿದೆ ಅವುಗಳಿಂದ ಶುದ್ಧವಿದೆ, ವೇಷಮಾತ್ರವೇ ಇಲ್ಲ ; ಹೀಗೆ ಶುದ್ಧ ಪ್ರವ್ರಜ್ಯವನ್ನು ಹೇಳಲಾಗುತ್ತದೆ, ಈ ಗುಣಗಳಿಲ್ಲದೆ ಪ್ರವ್ರಜ್ಯವು ಶುದ್ಧವಿಲ್ಲ.

ಭಾವಾರ್ಥ :– ತಪ ವ್ರತ ಸಮ್ಯಕ್ತ್ವಗಳು ಸಹಿತ ಮತ್ತು ಅದರಲ್ಲಿ ಇವುಗಳ ಮೂಲಗುಣ ಹಾಗೂ ಅತಿಚಾರಗಳ ಶೋಧನೆಯಾಗುತ್ತದೆ, ಈ ಪ್ರಕಾರ ದೀಕ್ಷೆಯು ಶುದ್ಧವಿದೆ. ಅನ್ಯವಾದಿಗಳು ಹಾಗೂ ಶ್ವೇತಾಂಬರಾದಿಗಳು ಬೇಕಾದ ಹಾಗೆ ಹೇಳುತ್ತಾರೆ, ಆದರೆ ಆ ದೀಕ್ಷೆಯು ಶುದ್ಧವಿಲ್ಲ. ॥೫೮॥

ಈಗ ಪ್ರವ್ರಜ್ಯದ ಕಥನದ ಸಂಕೋಚ ಮಾಡುತ್ತಾರೆ, –

**ಏವಂ [೧]ಆಯತ್ತಣಗುಣಪಜ್ಜಂತಾ ಬಹುವಿಸುದ್ಧಸಮ್ಮತ್ತೇ ।**
**ಣಿಗ್ಗಂಥೇ ಜಿಣಮಗ್ಗೇ ಸಂಖೇವೇಣಂ ಜಹಾಖಾದಂ ॥೫೯॥**

**ಏವಂ [೨]ಆಯತನಗುಣಪರ್ಯಾಪ್ತಾ ಬಹುವಿಶುದ್ಧಸಮ್ಯಕ್ತ್ವೇ ।**
**ನಿರ್ಗ್ರಂಥೇ ಜಿನಮಾರ್ಗೇ ಸಂಕ್ಷೇಪೇಣ ಯಥಾಖ್ಯಾತಮ್ ॥೫೯॥**

ಅರ್ಥ :– ಹೀಗೆ ಪೂರ್ವೋಕ್ತ ಪ್ರಕಾರದಿಂದ ಆಯತನ ಎಂದರೆ ದೀಕ್ಷೆಯ ಸ್ಥಾನವು, ಆ ನಿರ್ಗ್ರಂಥ ಮುನಿಯು, ಅದರ ಗುಣಗಳೆಷ್ಟಿವೆ ಅವುಗಳಿಂದ ಪಜ್ಜಂತಾ ಎಂದರೆ ಪರಿಪೂರ್ಣ ಅನ್ಯವೂ ಬಹಳಷ್ಟು ಗುಣಗಳು ದೀಕ್ಷೆಯಲ್ಲಿ

---

ವ್ರತ ತಪಗುಣಗಳಿಂ ಶುದ್ಧ ಸಂಯಮ ಮೇಣ್ಸಮ್ಯಕ್ತ್ವಗುಣದಿಂದ ವಿಶುದ್ಧ ।
ಇತಿಗುಣವಿಶುದ್ಧವಿರ್ಪುದನು ಶುದ್ಧದೀಕ್ಷೆಯೆಂದು ಜಿನರು ಪೇಳಿಹರು ॥೫೮॥

ಈ ರೀತಿ ಆಯತನಗುಣದಿಂ ಪರಿಪೂರ್ಣ ಬಹುವಿಶುದ್ಧಸಮ್ಯಕ್ತ್ವಯುತ ।
ನಿರಗ್ರಂಥವನು ಜಿನಮಾರ್ಗದಲಿ ವರ್ಣಿಸಿದಂತೆ ಸಂಕ್ಷೇಪದಿಂ ಪೇಳಿದೆ ॥೫೯॥

---

೧ ಆಯತ್ತಣಗುಣಪವ್ವಜ್ಜಂತಾ' ಎಂಬ ಪಾಠಾಂತರವಿದೆ.

೨. ಸಂಸ್ಕೃತ ಸಟೀಕ ಪ್ರತಿಯಲ್ಲಿ 'ಆಯತನ'ದ ಸಂಸ್ಕೃತವು 'ಆತ್ಮತ್ವ'ವೆಂದಿದೆ.

ಇರಬೇಕಾಗುವುದು ಆ ಗುಣಗಳು ಅದರಲ್ಲಿ ಇರುವಂಥ ಪ್ರವ್ರಜ್ಯವು ಜಿನಮಾರ್ಗದಲ್ಲಿ ಪ್ರಸಿದ್ಧವಿದೆ. ಅದೇ ಪ್ರಕಾರ ಸಂಕ್ಷೇಪದಿಂದ ಹೇಳಿದೆ. ಆ ಜಿನಮಾರ್ಗದಲ್ಲಿ ಸಮ್ಯಕ್ತ್ವವು ವಿಶುದ್ಧವಿದೆ, ಅದರಲ್ಲಿ ಅತಿಚಾರ ರಹಿತವಾದ ಸಮ್ಯಕ್ತ್ವವು ಕಂಡು ಬರುತ್ತದೆ ಮತ್ತು ಅದು ನಿರ್ಗ್ರಂಥರೂಪವಿದೆ ಎಂದರೆ ಅದರಲ್ಲಿ ಬಾಹ್ಯ-ಅಭ್ಯಂತರ ಪರಿಗ್ರಹವಿಲ್ಲ.

ಭಾವಾರ್ಥ :- ಈ ಪ್ರಕಾರ ಪೂರ್ವೋಕ್ತ ಪ್ರವ್ರಜ್ಯವು ಜಿನಮಾರ್ಗದಲ್ಲಿ ನಿರ್ಮಲ ಸಮ್ಯಕ್ತ್ವಸಹಿತ ನಿರ್ಗ್ರಂಥರೂಪವೆಂದು ಹೇಳಿದೆ. ಇತರ ನೈಯಾಯಿಕ ವೈಶೇಷಿಕ, ಸಾಂಖ್ಯ, ವೇದಾಂತ, ಮೀಮಾಂಸಕ, ಪಾತಂಜಲಿ ಮತ್ತು ಬೌದ್ಧ ಮೊದಲಾದ ಮತಗಳಲ್ಲಿ ಇಲ್ಲ. ಕಾಲದೋಷದಿಂದ ಜೈನಮತದಿಂದ ಭ್ರಷ್ಟರಾಗಿ ಹೋಗಿರುವ ಮತ್ತು ಜೈನರೆನಿಸಿಕೊಳ್ಳುವಂಥ ಶ್ವೇತಾಂಬರ ಮೊದಲಾದವರಲ್ಲೂ ಇಲ್ಲ.

ಈ ಪ್ರಕಾರ ಪ್ರವ್ರಜ್ಯದ ಸ್ವರೂಪದ ವರ್ಣನೆಯನ್ನು ಮಾಡಲಾಯಿತು.

ರೂವತ್ಥಂ ಸುದ್ಧತ್ಥಂ ಜಿಣಮಗ್ಗೇ ಜಿಣವರೇಹಿಂ ಜಹ ಭಣಿಯಂ ।
ಭವ್ವಜಣಬೋಹಣತ್ಥಂ ಛಕ್ಕಾಯಹಿಯಂಕರಂ ಉತ್ತಂ ॥೬೦॥

ರೂಪಸ್ಥಂ ಶುದ್ಧ್ಯರ್ಥಂ ಜಿನಮಾರ್ಗೇ ಜಿನವರ್ಯೈಃ ಯಥಾ ಭಣಿತಮ್ ।
ಭವ್ಯಜನಬೋಧನಾರ್ಥಂ ಷಟ್‌ಕಾಯಹಿತಂಕರಂ ಉಕ್ತಮ್ ॥೬೦॥

ಅರ್ಥ :- ಯಾವುದರಲ್ಲಿ ಅಂತರಂಗ ಭಾವರೂಪವಾದ ಅರ್ಥವು ಶುದ್ಧವಿದೆ ಮತ್ತು ಹಾಗೆಯೇ ರೂಪಸ್ಥ ಎಂದರೆ ಬಾಹ್ಯಸ್ವರೂಪ ಮೋಕ್ಷಮಾರ್ಗವು ಹೇಗೆ ಜಿನಮಾರ್ಗದಲ್ಲಿ ಜಿನದೇವರು ಹೇಳಿದ್ದಾರೆ ಹಾಗೆ ಷಟ್‌ಕಾಯ ಜೀವಗಳ ಹಿತಮಾಡುವಂಥ ಮಾರ್ಗವನ್ನು ಭವ್ಯಜೀವರುಗಳ ಸಂಬೋಧನೆಯ ಸಲುವಾಗಿ ಹೇಳಿದೆ. ಈ ಪ್ರಕಾರ ಆಚಾರ್ಯ ಭಗವಂತರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಭಾವಾರ್ಥ :- ಈ ಬೋಧಪಾಹುಡದಲ್ಲಿ ಆಯತನ ಮೊದಲಾದವುಗಳಿಂದ ಹಿಡಿದುಕೊಂಡು ಪ್ರವ್ರಜ್ಯದವರೆಗೆ ಹನ್ನೊಂದು ಸ್ಥಳ ಹೇಳಿದೆ. ಇವುಗಳ ಬಾಹ್ಯ-ಅಂತರಂಗ ಸ್ವರೂಪವನ್ನು ಜಿನದೇವರು ಹೇಗೆ ಹೇಳಿದ್ದಾರೆ ಹಾಗೆಯೇ ಹೇಳಲಾಗಿದೆ. ಆ ರೂಪವು ಷಟ್‌ಕಾಯ ಜೀವಗಳ ಹಿತಮಾಡುವಂಥದ್ದಿದೆ, ಅದರಲ್ಲಿ ಏಕೇಂದ್ರಿಯ ಮೊದಲಾಗಿ ಅಸಂಜ್ಞೀವರೆಗಿನ ಜೀವಗಳ ರಕ್ಷಣೆಯ ಅಧಿಕಾರವಿದೆ, ಸಂಜ್ಞೀ ಪಂಚೇಂದ್ರಿಯ ಜೀವಗಳ ರಕ್ಷಣೆಯನ್ನೂ ಮಾಡುತ್ತದೆ ಮತ್ತು ಮೋಕ್ಷಮಾರ್ಗದ ಉಪದೇಶ ಮಾಡಿ ಸಂಸಾರದ ದುಃಖವನ್ನು ದೂರಮಾಡಿ ಮೋಕ್ಷವನ್ನು ಪ್ರಾಪ್ತಮಾಡಿಸುತ್ತದೆ. ಈ ಪ್ರಕಾರದ ಮಾರ್ಗವನ್ನು-ಉಪಾಯವನ್ನು ಭವ್ಯ ಜೀವರುಗಳ ಸಂಬೋಧನೆಯ ಸಲುವಾಗಿ ಹೇಳಿದೆ. ಜಗತ್ತಿನ ಜೀವರುಗಳು ಅನಾದಿಯಿಂದ ಹಿಡಿದು ಮಿಥ್ಯಾಮಾರ್ಗದಲ್ಲಿ ಪ್ರವರ್ತನೆ ಮಾಡಿ ಸಂಸಾರದಲ್ಲಿ ಭ್ರಮಣ ಮಾಡುತ್ತಿದ್ದಾರೆ, ಆದುದರಿಂದ ಅವರುಗಳ ದುಃಖವನ್ನು ದೂರಮಾಡುವ ಸಲುವಾಗಿ ಆಯತನ ಮೊದಲಾದ ಹನ್ನೊಂದು ಸ್ಥಾನ ಧರ್ಮದ ಸ್ಥಳಗಳ ಆಶ್ರಯ ತೆಗೆದುಕೊಳ್ಳುತ್ತಾರೆ, ಅಜ್ಞಾನಿ ಜೀವರುಗಳು ಈ ಸ್ಥಾನಗಳ ಮೇಲೆ ಅನ್ಯಥಾ ಸ್ವರೂಪ ಸ್ಥಾಪನೆ ಮಾಡಿ ಅವುಗಳಿಂದ ಸುಖ ಪಡೆಯಲು ಅಪೇಕ್ಷಿಸುತ್ತಾರೆ, ಆದರೆ ಯಥಾರ್ಥವಿಲ್ಲದೆ ಸುಖವೆಲ್ಲಿಯದು ? ಆದುದರಿಂದ

---

ಹೇಗೆ ರೂಪಸ್ಥಶುದ್ಧ್ಯರ್ಥ ಜಿನಮಾರ್ಗದಲಿ ಜಿನವರರು ಪೇಳಿರುವರು ।
ಹಾಗೆ ಭವ್ಯ ಜನಬೋಧನಾರ್ಥಷಟ್ಕಾಯ ಹಿತಕರವಾದುದನು ಪೇಳಿದೆ ॥೬೦॥

ಆಚಾರ್ಯ ಭಗವಂತರು ದಯಾಳುಗಳಾಗಿ ಸರ್ವಜ್ಞ ಭಗವಂತರು ಹೇಳಿರುವ ಹಾಗೆಯೇ ಆಯತನ ಮೊದಲಾದವುಗಳ ಸ್ವರೂಪವನ್ನು ಸಂಕ್ಷೇಪದಿಂದ ಯಥಾರ್ಥವಾಗಿ ಹೇಳಿದ್ದಾರೆ. ಇದನ್ನು ರಕ್ಷಿಸಿರಿ, ಓದಿರಿ, ಧಾರಣ ಮಾಡಿರಿ ಮತ್ತು ಇದರ ಶ್ರದ್ಧೆ ಮಾಡಿರಿ. ಇದರ ಅನುಸಾರವಾಗಿ ಪ್ರವೃತ್ತಿ ಮಾಡಿರಿ. ಹೀಗೆ ಮಾಡುವುದರಿಂದ ವರ್ತಮಾನದಲ್ಲಿ ಸುಖಿಯಾಗುವಿರಿ ಮತ್ತು ಭವಿಷ್ಯದಲ್ಲಿ ಸಂಸಾರ ದುಃಖದಿಂದ ಬಿಡುಗಡೆ ಹೊಂದಿ ಪರಮಾನಂದಸ್ವರೂಪವಾದ ಮೋಕ್ಷವನ್ನು ಪ್ರಾಪ್ತಮಾಡಿಕೊಳ್ಳಿರೆಂದು ಹೇಳುವುದು ಆಚಾರ್ಯ ಭಗವಂತರ ಅಭಿಪ್ರಾಯವಿದೆ.

ಪ್ರಶ್ನೆ :- ಈ ಬೋಧಪಾಹುಡದಲ್ಲಿ ವ್ಯವಹಾರಧರ್ಮದ ಪ್ರವೃತ್ತಿಯ ಹನ್ನೊಂದು ಸ್ಥಾನಗಳನ್ನು ಹೇಳಿದೆ. ಇವು ಷಟ್‌ಕಾಯ ಜೀವಗಳ ಹಿತಮಾಡುವಂಥವುಗಳಿವೆ. ಅನ್ಯಮತಿಗಳು ಇವನ್ನು ಅನ್ಯಥಾ ಸ್ಥಾಪನೆ ಮಾಡಿ ಪ್ರವೃತ್ತಿ ಮಾಡುತ್ತಾರೆ ಅವರು ಹಿಂಸಾರೂಪರಿದ್ದಾರೆ ಮತ್ತು ಜೀವಗಳಿಗೆ ಹಿತ ಮಾಡುವಂಥವರಿಲ್ಲ. ಈ ಹನ್ನೊಂದು ಸ್ಥಾನಗಳನ್ನು ಸಂಯಮಿ ಮುನಿ ಮತ್ತು ಅರಹಂತ, ಸಿದ್ಧರಿಗೇನೇ ಹೇಳಿದ್ದಾರೆ. ಅವರಂತೂ ಷಟ್‌ಕಾಯ ಜೀವಗಳಹಿತ ಮಾಡುವಂಥವರೇ ಇದ್ದಾರೆ ಆದರಿಂದ ಪೂಜ್ಯರಿದ್ದಾರೆ. ಇದಂತೂ ಸತ್ಯವಿದೆ, ಮತ್ತು ಎಲ್ಲಿ ಇರುತ್ತಾರೆ ಆ ಆಕಾಶದ ಪ್ರದೇಶರೂಪ ಕ್ಷೇತ್ರಹಾಗೂ ಪರ್ವತದ ಗುಹೆ ವನಾದಿಗಳು ಹಾಗೂ ಅಕೃತ್ರಿಮ ಚೈತ್ಯಾಲಯಗಳೆಲ್ಲವು ಸ್ವಯಮೇವ ರಚಿಸಲ್ಪಟ್ಟಿವೆ, ಅವನ್ನು ಕೂಡ ಪ್ರಯೋಜನ ಮತ್ತು ನಿಮಿತ್ತವೆಂದು ತಿಳಿದು ಉಪಚಾರಮಾತ್ರದಿಂದ ಷಟ್‌ಕಾಯ ಜೀವಗಳ ಹಿತಮಾಡುವಂಥವವೆಂದು ಹೇಳಿದರೆ ವಿರೋಧವಿಲ್ಲ, ಏಕೆಂದರೆ ಈ ಪ್ರದೇಶಗಳು ಜಡವಿದ್ದು, ಇವು ಬುದ್ಧಿಪೂರ್ವಕವಾಗಿ ಯಾವುದರ ಒಳಿತು-ಕೆಡಕು ಮಾಡುವುದಿಲ್ಲ ಮತ್ತು ಜಡಕ್ಕೆ ಸುಖ-ದುಃಖ ಮೊದಲಾದ ಫಲಗಳ ಅನುಭವವಿಲ್ಲದಿರುವುದರಿಂದ ಇವೂ ವ್ಯವಹಾರದಿಂದ ಪೂಜ್ಯವಿವೆ, ಏಕೆಂದರೆ ಅರಹಂತ ಮೊದಲಾದವರು ಎಲ್ಲಿ ಇರುತ್ತಾರೆ ಆ ಕ್ಷೇತ್ರ-ನಿವಾಸ ಮೊದಲಾದವು ಪ್ರಶಸ್ತವಿರುವುದರಿಂದ ಆ ಅರಹಂತಾದಿಕರ ಆಶ್ರಯದಿಂದ ಈ ಕ್ಷೇತ್ರ ಮೊದಲಾದವೂ ಪೂಜ್ಯವಿವೆ. ಆದರೆ ಪ್ರಶ್ನವೆಂದರೆ ಗೃಹಸ್ಥರು ಜಿನಮಂದಿರಗಳನ್ನು ನಿರ್ಮಿಸುವುದು, ವಸತಿಕೆ, ಪ್ರತಿಮೆಗಳನ್ನು ಮಾಡಿಸುವುದು ಮತ್ತು ಪ್ರತಿಷ್ಠೆ ಪೂಜೆ ಮಾಡುವುದರಲ್ಲಂತೂ ಷಟ್‌ಕಾಯ ಜೀವಗಳ ವಿರಾಧನೆಯಾಗುತ್ತದೆ, ಆದ್ದರಿಂದ ಈ ಉಪದೇಶ ಮತ್ತು ಪ್ರವೃತ್ತಿಯ ಬಾಹುಳ್ಯತೆಯು ಹೇಗಿದೆ ?

ಉತ್ತರ :- ಗೃಹಸ್ಥನು ಅರಹಂತ, ಸಿದ್ಧ, ಮುನಿಗಳ ಉಪಾಸಕನಿದ್ದಾನೆ,ಇವರು ಪ್ರತ್ಯಕ್ಷವಿರುವಲ್ಲಿಯಂತೂ ಅವರ ವಂದನೆ, ಪೂಜೆ ಮಾಡಿಯೇ ಮಾಡುತ್ತಾನೆ. ಇವರು ಪ್ರತ್ಯಕ್ಷವಿಲ್ಲದಿರುವಲ್ಲಿ ಪರೋಕ್ಷ ಸಂಕಲ್ಪ ಮಾಡಿ ವಂದನೆ, ಪೂಜೆ ಮಾಡುತ್ತಾನೆ ಮತ್ತು ಅವರುಗಳಿರುವ ಕ್ಷೇತ್ರ ಹಾಗೂ ಅವರು ಮುಕ್ತವಾದ ಕ್ಷೇತ್ರದಲ್ಲಿ ಅದರಂತೆ ಅಕೃತ್ರಿಮ ಚೈತ್ಯಾಲಯಗಳಲ್ಲಿ ಅವರ ಸಂಕಲ್ಪ ಮಾಡಿ ವಂದನೆ, ಪೂಜೆ ಮಾಡುತ್ತಾನೆ. ಇದರಲ್ಲಿ ಅನುರಾಗ ವಿಶೇಷವು ಸೂಚಿತವಾಗುತ್ತದೆ, ಪುನಃ ಅವರ ಮುದ್ರೆ ಪ್ರತಿಮೆಗಳನ್ನು ತದಾಕಾರ ಮಾಡುವುದು ಮತ್ತು ಅದಕ್ಕೆ ಮಂದಿರ ನಿರ್ಮಿಸಿ ಪ್ರತಿಷ್ಠೆ ಮಾಡಿ ಸ್ಥಾಪನೆ ಮಾಡುವುದು ಹಾಗೂ ನಿತ್ಯಪೂಜೆ ಮಾಡುವುದರಲ್ಲಿ ಅತ್ಯಂತ ಅನುರಾಗವು ಸೂಚಿತವಾಗುತ್ತದೆ, ಆ ಅನುರಾಗದಿಂದ ವಿಶಿಷ್ಟ ಪುಣ್ಯಬಂಧವಾಗುತ್ತದೆ ಮತ್ತು ಆ ಮಂದಿರದಲ್ಲಿ ಷಟ್‌ಕಾಯ ಜೀವಗಳ ಹಿತದ ರಕ್ಷಣೆಯ ಉಪದೇಶವಾಗುತ್ತದೆ ಹಾಗೂ ನಿರಂತರ ಕೇಳುವವರಿಗೆ ಧಾರಣ ಮಾಡವವರಿಗೆ ಅಹಿಂಸಾ ಧರ್ಮದ ಶ್ರದ್ಧೆಯು ದೃಢವಾಗುತ್ತದೆ ಅದರಂತೆ ಅವರ ತದಾಕಾರ ಪ್ರತಿಮೆ ನೋಡುವವರಿಗೆ ಶಾಂತಭಾವಗಳಾಗುತ್ತವೆ, ಧ್ಯಾನದ ಮುದ್ರೆಯ ಸ್ವರೂಪವು ತಿಳಿದುಬರುತ್ತದೆ ಮತ್ತು ವೀತರಾಗ ಧರ್ಮದಲ್ಲಿ ವಿಶೇಷ ಅನುರಾಗವಾಗುವುದರಿಂದ ಪುಣ್ಯಬಂಧವಾಗುತ್ತದೆ, ಆದುದರಿಂದ ಇವರನ್ನು ಷಟ್‌ಕಾಯ ಜೀವಗಳಹಿತ ಮಾಡುವಂಥವರೆಂದು ಉಪಚಾರದಿಂದ ಹೇಳುತ್ತಾರೆ, -

ಜಿನಮಂದಿರ, ವಸತಿಕೆ, ಪ್ರತಿಮೆಗಳನ್ನು ನಿರ್ಮಿಸುವಲ್ಲಿ ಮತ್ತು ಪೂಜೆ, ಪ್ರತಿಷ್ಠೆ ಮಾಡುವಲ್ಲಿ ಆರಂಭವಾಗುತ್ತದೆ ಅದರಲ್ಲಿ ಸ್ವಲ್ಪ ಹಿಂಸೆಯೂ ಆಗುತ್ತದೆ.ಇಂಥ ಆರಂಭವಂತೂ ಗೃಹಸ್ಥನ ಕಾರ್ಯವಿದೆ, ಇದರಲ್ಲಿ ಗೃಹಸ್ಥನಿಗೆ ಅಲ್ಪಪಾಪ ಹೇಳಿದೆ, ಅಧಿಕ ಪುಣ್ಯ ಹೇಳಿದೆ, ಏಕೆಂದರೆ ಗೃಹಸ್ಥ ಪದದಲ್ಲಿ ನ್ಯಾಯಕಾರ್ಯ ಮಾಡಿ, ನ್ಯಾಯಪೂರ್ವಕ ಧನ ಉಪಾರ್ಜನೆ ಮಾಡುವುದು, ವಾಸಿಸುವ ಸಲುವಾಗಿ ಮನೆ ಕಟ್ಟಿಸುವುದು, ವಿವಾಹಾದಿಗಳನ್ನು ಮಾಡುವುದು ಮತ್ತು ಯತ್ನಪೂರ್ವಕ ಆರಂಭ ಮಾಡಿ ಆಹಾರಾದಿಗಳನ್ನು ಸ್ವಯಂ ಸಿದ್ಧಪಡಿಸುವುದು ಹಾಗೂ ಅಡಿಗೆ ಇತ್ಯಾದಿಗಳ ಕಾರ್ಯಗಳಲ್ಲಿ ಹಿಂಸೆಯಾಗುತ್ತಿದ್ದರೂ ಕೂಡ ಗೃಹಸ್ಥನಿಗೆ ಇವುಗಳ ಮಹಾ ಪಾಪಗಳನ್ನು ಹೇಳಲಾಗುವುದಿಲ್ಲ. ಗೃಹಸ್ಥನ ಮಹಾಪಾಪವಂತೂ ಮಿಥ್ಯಾತ್ವದ ಸೇವನೆ ಮಾಡುವುದು, ಅನ್ಯಾಯ, ಕಳವು ಮೊದಲಾದವುಗಳಿಂದ ಧನೋಪಾರ್ಜನೆ ಮಾಡುವುದು, ತ್ರಸಜೀವಗಳನ್ನು ಸಾಯಿಸಿ ಮಾಂಸ ಭಕ್ಷಣ ಮಾಡುವುದು ಮತ್ತು ಪರಸ್ತ್ರೀ ಸೇವನೆ ಮಾಡುವುದು ಇವು ಮಹಾಪಾಪಗಳಿವೆ.

ಗೃಹಸ್ಥಾಚಾರ ಬಿಟ್ಟುಕೊಟ್ಟು ಮುನಿಯಾಗಿ ಹೋದಾಗ ಗೃಹಸ್ಥನ ನ್ಯಾಯಕಾರ್ಯಗಳು ಅನ್ಯಾಯಗಳೇ ಇವೆ, ಮುನಿಗೆ ಕೂಡ ಆಹಾರಾದಿಗಳ ಪ್ರವೃತ್ತಿಯಲ್ಲಿ ಸ್ವಲ್ಪ ಹಿಂಸೆಯಾಗುತ್ತದೆ ಅದರಿಂದ ಮುನಿಯನ್ನು ಹಿಂಸಕನೆಂದು ಹೇಳಲಾಗುವುದಿಲ್ಲ, ಅದೇ ಪ್ರಕಾರ ಗೃಹಸ್ಥನಿಗೆ ನ್ಯಾಯಪೂರ್ವಕವಾದ ತನ್ನ ಪದಕ್ಕೆ ಯೋಗ್ಯವಾದ ಆರಂಭದ ಕಾರ್ಯಗಳಲ್ಲಿ ಅಲ್ಪ ಪಾಪವನ್ನೇ ಹೇಳಲಾಗುತ್ತದೆ. ಆದುದರಿಂದ ಜಿನಮಂದಿರ, ವಸತಿಕೆ ಮತ್ತು ಪೂಜೆ-ಪ್ರತಿಷ್ಠೆ ಕಾರ್ಯಗಳಲ್ಲಿ ಆರಂಭದ ಅಲ್ಪಪಾಪವಿದೆ, ಮೋಕ್ಷಮಾರ್ಗದಲ್ಲಿ ಪ್ರವರ್ತಿಸುವವರ ಕುರಿತು ಅತ್ಯಂತ ಅನುರಾಗವಾಗುತ್ತದೆ ಮತ್ತು ಅವರ ಪ್ರಭಾವನೆ ಮಾಡುತ್ತಾರೆ. ಅವರಿಗೆ ಆಹಾರ ದಾನಾದಿಗಳನ್ನು ಕೊಡುತ್ತಾರೆ ಮತ್ತು ಅವರ ವೈಯ್ಯಾವೃತ್ಯ ಮಾಡುತ್ತಾರೆ. ಇವು ಸಮ್ಯಕ್ತ್ವದ ಅಂಗಗಳಿವೆ ಮತ್ತು ಮಹಾ ಪುಣ್ಯಕ್ಕೆ ಕಾರಣವಿವೆ, ಆದುದರಿಂದ ಗೃಹಸ್ಥನು ಯಾವಾಗಲೂ ಮಾಡುವುದು ಯೋಗ್ಯವಿದೆ. ಇನ್ನು ಗೃಹಸ್ಥನಾಗಿ ಈ ಕಾರ್ಯಗಳನ್ನು ಮಾಡದಿದ್ದರೆ ಅವನಿಗೆ ಧರ್ಮಾನುರಾಗವು ವಿಶೇಷವಾಗಿ ಇಲ್ಲವೆಂದು ತಿಳಿದುಬರುತ್ತದೆ.

ಪ್ರಶ್ನೆ :- ಗೃಹಸ್ಥನಿಗೆ ಯಾವುದು ಮಾಡಿದಲ್ಲದೆ ನಡೆಯುವುದಿಲ್ಲ ಅಂಥ ಕಾರ್ಯಗಳನ್ನಂತೂ ಮಾಡಲೇ ಬೇಕಾಗುವುದು, ಮತ್ತು ಧರ್ಮಪದ್ಧತಿಯಲ್ಲಿ ಆರಂಭದ ಕಾರ್ಯವಾಗಿ ಪಾಪವನ್ನೇಕೆ ಸೇರಿಸುವುದು, ಸಾಮಾಯಿಕ, ಪ್ರತಿಕ್ರಮಣ, ಪ್ರೋಷಧ ಮೊದಲಾದುವನ್ನು ಮಾಡಿ ಪುಣ್ಯ ಸಂಪಾದಿಸಬೇಕು ?

ಉತ್ತರ :- ನೀನು ಹೀಗೆ ಹೇಳಿದರೆ ನಿನ್ನ ಪರಿಣಾಮಗಳೇನು ಈ ಜಾತಿಯವಿಲ್ಲ, ಕೇವಲ ಬಾಹ್ಯ ಕ್ರಿಯೆಗಳಲ್ಲಿಯೇ ಪುಣ್ಯ ತಿಳಿಯುತ್ತಿರುವೆ. ಬಾಹ್ಯದಲ್ಲಿ ಅಧಿಕ ಆರಂಭ ಪರಿಗ್ರಹದ ಮನಸ್ಸು ಸಾಮಾಯಿಕ ಪ್ರತಿಕ್ರಮಣ ಮೊದಲಾದ ನಿರಾರಂಭ ಕಾರ್ಯಗಳಲ್ಲಿ ವಿಶೇಷ ರೂಪದಿಂದ ತೊಡಗುವುದಿಲ್ಲವೆಂಬುದು ಅನುಭವ ಗಮ್ಯವಿದೆ, ನನಗೆ ತನ್ನ ಭಾವಗಳ ಅನುಭವವಿಲ್ಲ, ಕೇವಲ ಬಾಹ್ಯ ಸಾಮಾಯಿಕ ಮೊದಲಾದ ನಿರಾರಂಭ ಕಾರ್ಯಗಳ ವೇಷಧಾರಣ ಮಾಡಿ ಕುಳಿತುಕೊಂಡರೇನು ವಿಶಿಷ್ಟ ಪುಣ್ಯವಿಲ್ಲ, ಶರೀರ ಮೊದಲಾದ ಬಾಹ್ಯ ವಸ್ತುಗಳಂತೂ ಜಡವಿವೆ, ಕೇವಲ ಜಡದ ಕ್ರಿಯೆಯ ಫಲವಂತೂ ಆತ್ಮನಿಗೆ ದೊರಕುವುದಿಲ್ಲ. ತನ್ನ ಭಾವಗಳು ಎಷ್ಟು ಅಂಶದಲ್ಲಿ ಬಾಹ್ಯ ಕ್ರಿಯೆಗಳಲ್ಲಿ ತೊಡಗುತ್ತವೆ ಅಷ್ಟು ಅಂಶದಲ್ಲಿ ಶುಭಾಶುಭ ಫಲವು ತನಗೆ ತಗಲುತ್ತದೆ, ಹೀಗೆ ವಿಶಿಷ್ಟ ಪುಣ್ಯವಂತೂ ಭಾವಗಳ ಅನುಸಾರವಿದೆ.

ಆರಂಭ ಪರಿಗ್ರಹಿಯ ಭಾವಗಳಂತೂ ಪೂಜೆ, ಪ್ರತಿಷ್ಠೆ ಮೊದಲಾದ ದೊಡ್ಡ ಆರಂಭಗಳಲ್ಲಿಯೇ ವಿಶೇಷ ಅನುರಾಗದೊಡನೆ ತೊಡಗುತ್ತವೆ. ಆ ಗೃಹಸ್ಥಾಚಾರದ ದೊಡ್ಡ ಆರಂಭದಿಂದ ವಿರಕ್ತವಾಗಿ ಅದನ್ನು ತ್ಯಾಗ ಮಾಡಿ ತನ್ನ ಪದವನ್ನು ವೃದ್ಧಿಸಿಕೊಂಡಾಗ ಗೃಹಸ್ಥಾಚಾರದ ಆರಂಭವು ಬಿಡುವುದು, ಅದೇ ಪ್ರಕಾರ ಧರ್ಮ ಪ್ರವೃತ್ತಿಯ ದೊಡ್ಡ

ಆರಂಭ ಕೂಡ ಪದದ ಅನುಸಾರ ಕುಂದುವುದು. ಮುನಿಯಾದಾಗ ಆರಂಭವನ್ನೇನು ಮಾಡುವನು ?ಆದ್ದರಿಂದ ಆಗಂತೂ ಸರ್ವಥಾ ಆರಂಭ ಮಾಡುವುದಿಲ್ಲ, ಆದುದರಿಂದ ಮಿಥ್ಯಾದೃಷ್ಟಿಯ ಬಾಹ್ಯಬುದ್ಧಿಯುಳ್ಳವರು ಆ ಬಾಹ್ಯ ಕಾರ್ಯಗಳನ್ನೇ ಪುಣ್ಯ-ಪಾಪ ಮೋಕ್ಷಮಾರ್ಗವೆಂದು ತಿಳಿಯುತ್ತಾರೆ ಅವರ ಉಪದೇಶಕೇಳಿ ತಮ್ಮನ್ನು ಅಜ್ಞಾನಿಯನ್ನಾಗಿ ಮಾಡಬಾರದು. ಪುಣ್ಯ-ಪಾಪದ ಬಂಧದಲ್ಲಿ ಶುಭಾಶುಭ ಭಾವಗಳೇ ಮುಖ್ಯವಿವೆ ಮತ್ತು ಪುಣ್ಯ-ಪಾಪರಹಿತ ಮೋಕ್ಷಮಾರ್ಗದಲ್ಲಿ ಸಮ್ಯಗ್ದರ್ಶನಾದಿರೂಪದ ಆತ್ಮ ಪರಿಣಾಮಗಳೇ ಮುಖ್ಯವಿವೆ. (ಹೇಯಬುದ್ಧಿಸಹಿತ) ಧರ್ಮಾನುರಾಗವು ಮೋಕ್ಷಮಾರ್ಗದ ಸಹಕಾರಿಯಿದೆ ಮತ್ತು (ಆಂಶಿಕವೀತರಾಗಭಾವಸಹಿತ) ಧರ್ಮಾನುರಾಗದ ತೀವ್ರ-ಮಂದದ ಭೇದಗಳು ಅಧಿಕವಿವೆ, ಆದುದರಿಂದ ತಮ್ಮ ಭಾವಗಳ ಯಥಾರ್ಥ ಪರಿಚಯ ಮಾಡಿಕೊಂಡು ತಮ್ಮ ಪದವಿ, ಸಾಮರ್ಥ್ಯಗಳನ್ನು ಗುರುತಿಸಿ ತಿಳಿದುಕೊಂಡು ಶ್ರದ್ಧೆ-ಜ್ಞಾನ ಮತ್ತು ಅದರಲ್ಲಿ ಪ್ರವೃತ್ತಿ ಮಾಡುವುದು. ತಮ್ಮ ಒಳಿತು-ಕೆಡಕುಗಳು ತಮ್ಮ ಭಾವಗಳ ಆಧೀನವಿವೆ, ಬಾಹ್ಯ ಪರದ್ರವ್ಯಗಳಂತೂ ನಿಮಿತ್ತ ಮಾತ್ರವಿವೆ, ಉಪಾದಾನ ಕಾರಣವಿದ್ದರೆ ನಿಮಿತ್ತ ಕೂಡ ಸಹಕಾರಿಯಿದೆ ಮತ್ತು ಉಪಾದಾನವಿಲ್ಲದಿದ್ದರೆ ನಿಮಿತ್ತವೇನನ್ನೂ ಮಾಡುವುದಿಲ್ಲವೆಂಬುದು ಈ ಬೋಧಪಾಹುಡದ ಆಶಯವಿದೆಯೆಂದು ತಿಳಿಯಬೇಕು.

ಇದನ್ನು ಚನ್ನಾಗಿ ತಿಳಿದುಕೊಂಡು ಆಯತನಾದಿಗಳನ್ನು ಹೇಗೆ ಹೇಳಿದೆ ಹಾಗೆ ಮತ್ತು ಇವುಗಳ ವ್ಯವಹಾರವೂ ಬಾಹ್ಯದಂತೆಯೇ ಹಾಗೂ ಚೈತ್ಯಗೃಹ, ಪ್ರತಿಮೆ, ಜಿನಬಿಂಬ, ಜಿನಮುದ್ರೆ ಮೊದಲಾದ ಧಾತು ಪಾಷಾಣಾದಿಗಳದ್ದೂ ವ್ಯವಹಾರವಿರುವಂತೆಯೇ ತಿಳಿದುಕೊಂಡು ಶ್ರದ್ಧೆ ಮತ್ತು ಪ್ರವೃತ್ತಿ ಮಾಡಬೇಕು, ಅನ್ಯ ಮತಿಗಳು ಅನೇಕ ಪ್ರಕಾರ ಸ್ವರೂಪ ಕೆಡಿಸಿ ಪ್ರವೃತ್ತಿ ಮಾಡುತ್ತಾರೆ ಅವರ ಬುದ್ಧಿಯು ಕಾಲ್ಪನಿಕವಿದೆಯೆಂದು ತಿಳಿದುಕೊಂಡು ಉಪಾಸನೆ ಮಾಡಬಾರದು, ಈ ದ್ರವ್ಯ ವ್ಯವಹಾರದ ಪ್ರರೂಪಣೆಯು ಪ್ರವ್ರಜ್ಯದ ಸ್ಥಳದಲ್ಲಿ ಆದಿಯಿಂದ ಎರಡನೇ ಗಾಥೆಯಲ್ಲಿ ಬಿಂಬ[೧] ಚೈತ್ಯಾಲಯತ್ರಿಕ ಮತ್ತು ಜಿನಭವನಗಳೂ ಮುನಿಗಳಿಗೆ ಧ್ಯಾನ ಮಾಡಲು ಯೋಗ್ಯವಿವೆಯೆಂದು ಹೇಳಿದೆ, ಆದರೆ ಗೃಹಸ್ಥರು ಇವುಗಳ ಪ್ರವೃತ್ತಿ ಮಾಡಿದಾಗ ಇವು ಮುನಿಗಳಿಗೆ ಧ್ಯಾನ ಮಾಡಲು ಯೋಗ್ಯವಾಗುತ್ತವೆ, ಆದುದರಿಂದ ಆ ಜಿನಮಂದಿರ, ಪ್ರತಿಮೆ, ಪೂಜೆ, ಪ್ರತಿಷ್ಠೆ ಮೊದಲಾದವುಗಳ ಸರ್ವಥಾ ನಿಷೇಧ ಮಾಡುವಂಥವರು ಸರ್ವಥಾ ಏಕಾಂತಿಗಳ ಹಾಗೆ ಮಿಥ್ಯಾದೃಷ್ಟಿಗಳಿದ್ದಾರೆ, ಇವರ ಸಂಗತಿ ಮಾಡಬಾರದು. ['ಶ್ರದ್ಧಾಭ್ರಷ್ಟರ ಸಂಪರ್ಕದ ಅಪೇಕ್ಷೆಯಿಂದ (ಗೃಹದಲ್ಲಿ) ಪ್ರವೇಶ ಮಾಡುವುದು ಒಳ್ಳೆಯದಿದೆ, ಏಕೆಂದರೆ ವಿವಾಹದಲ್ಲಿ ಮಿಥ್ಯಾತ್ವವಾಗುವುದಿಲ್ಲ, ಆದರೆ ಇಂಥ ವರ್ಗವಂತೂ ಸರ್ವ ದೋಷಗಳ ಆಕರವಿದ್ದು ಅದರಲ್ಲಿ ಮಿಥ್ಯಾತ್ವಾದಿ ದೋಷಗಳು ಉತ್ಪನ್ನವಾಗುತ್ತವೆ ಆದ್ದರಿಂದ ಅವರಿಂದ ಬೇರೆಯಿರುವುದೇ ಒಳ್ಳೆಯದಿದೆ'ಯೆಂದು ಮೂಲಾಚಾರ ಅ. ೧೦, ಗಾಥೆ ೯೬ ಪುಟ ೪೯೧ರಲ್ಲಿ ಹೇಳಿದೆ.]

ಈ ಬೋಧಪಾಹುಡದಲ್ಲಿ ವರ್ಣನೆಯು ನಮ್ಮ ಬುದ್ಧಿ ಕಲ್ಪಿತವಿಲ್ಲ, ಆದರೆ ಪೂರ್ವಾಚಾರ್ಯರುಗಳ ಅನುಸಾರ ವಿದೆಯೆಂದು ಆಚಾರ್ಯ ಭಗವಂತರು ಹೇಳುತ್ತಾರೆ, -

**ಸದ್ದವಿಯಾರೋ ಹೂಓ ಭಾಸಾಸುತ್ತೇಸು ಜಂ ಜಿಣೇ ಕಹಿಯಂ ।**
**ಸೋ ತಹಕಹಿಯಂ ಣಾಯಂ ಸೀಸೇಣ ಯ ಭದ್ದ ಬಾಹುಸ್ಸ ॥೬೧॥**

---

**ಜಿನರು ಭಾಷಾಸೂತ್ರದಿ ಪೇಳ್ದುದು ಶಾಬ್ದಿಕ ವಿಕಾರರೂಪದಿಂದಾಗಿಹುದು ।**
**ಅನಿತುಮನರಿತಾ ಭದ್ರಬಾಹುಮುನಿ ಅರಿತಂತೆ ಶಿಷ್ಯರಿಗೆ ಪೇಳ್ದರು ॥೬೧॥**

---

೧ ಎರಡನೇ ಗಾಥೆಯಲ್ಲಿ ಬಿಂಬದ ಸ್ಥಾನದಲ್ಲಿ 'ವಚ'ವೆಂಬ ಪಾಠವಿದೆ.

**ಶಬ್ದವಿಕಾರೋ ಭೂತಃ ಭಾಷಾಸೂತ್ರೇಷು ಯಜ್ಜಿನೇನ ಕಥಿತಮ್ ।**
**ತತ್ ತಥಾ ಕಥಿತಂ ಜ್ಞಾತಂ ಶಿಷ್ಯೇಣ ಚ ಭದ್ರಬಾಹೋಃ ॥೬೧॥**

ಅರ್ಥ :- ಶಬ್ದದ ವಿಕಾರದಿಂದ ಉತ್ಪನ್ನವಾಗಿ ಈ ಅಕ್ಷರರೂಪವಾಗಿ ಪರಿಣಮಿಸಿದ ಭಾಷಾಸೂತ್ರಗಳಲ್ಲಿ ಜಿನದೇವರು ಹೇಳಿರುವುದೇ ಶ್ರವಣದಲ್ಲಿ ಅಕ್ಷರರೂಪವಾಗಿ ಬಂತು ಮತ್ತು ಜಿನದೇವರು ಹೇಳಿರುವ ಹಾಗೆಯೇ ಪರಂಪರೆಯಿಂದ ಭದ್ರಬಾಹುನಾಮದ ಪಂಚಮ ಶ್ರುತಕೇವಲಿಗಳು ತಿಳಿದರು ಮತ್ತು ತಮ್ಮ ಶಿಷ್ಯ [೧]ವಿಶಾಖಾಚಾರ್ಯ ಮೊದಲಾದವರಿಗೆ ಹೇಳಿದರು. ಅದನ್ನು ಅವರು ತಿಳಿದರು ಅದೇ ಅರ್ಥ ರೂಪವಾಗಿ ವಿಶಾಖಾಚಾರ್ಯರ ಪರಂಪರೆಯಿಂದ ನಡೆದು ಬಂತು. ಅದೇ ಅರ್ಥವನ್ನು ನಾವು ಹೇಳಿದ್ದೇವೆಂದು ಆಚಾರ್ಯರು ಹೇಳುತ್ತಾರೆ, ಅದು ನಮ್ಮ ಬುದ್ಧಿಯಿಂದ ಕಲ್ಪನೆ ಮಾಡಿ ಹೇಳಿಲ್ಲವೆಂದು ಇಲ್ಲಿನ ಅಭಿಪ್ರಾಯವಿದೆ. ॥೬೧॥

ಈಗ ಭದ್ರಬಾಹು ಸ್ವಾಮಿಗಳ ಸ್ತುತಿರೂಪವಾದ ವಚನ ಹೇಳುತ್ತಾರೆ, –

**ಬಾರಸಅಂಗವಿಯಾಣಂ ಚಉದಸಪುವ್ವಂಗವಿಉಲವಿತ್ಥರಣಂ ।**
**ಸುಯಣಾಣಿ ಭದ್ದಬಾಹೂ ಗಮಯಗುರೂ ಭಯವಓ ಜಯಉ ॥೬೨॥**

**ದ್ವಾದಶಾಂಗವಿಜ್ಞಾನಃ ಚತುರ್ದಶಪೂರ್ವಾಂಗ ವಿಪುಲವಿಸ್ತರಣಃ ।**
**ಶ್ರುತಜ್ಞಾನಿಭದ್ರಬಾಹುಃ ಗಮಕಗುರುಃ ಭಗವಾನ್ ಜಯತು ॥೬೨॥**

ಅರ್ಥ :- ಭದ್ರಬಾಹು ನಾಮದ ಆಚಾರ್ಯರು ಜಯವಂತರಾಗಿರಲಿ ! ಅವರಿಗೆ ಹನ್ನೆರಡು ಅಂಗಗಳ ವಿಶೇಷ ಜ್ಞಾನವಿದೆ, ಅವರಿಗೆ ಹದಿನಾಲ್ಕು ವಿಪುಲ ಪೂರ್ವಗಳ ವಿಸ್ತಾರವಿರುವುದರಿಂದ ಶ್ರುತಜ್ಞಾನಿಗಳಿದ್ದಾರೆ, ಪೂರ್ಣ ಭಾವಜ್ಞಾನಸಹಿತ ಅಕ್ಷರಾತ್ಮಕವಾದ ಶ್ರುತಜ್ಞಾನವು ಅವರಿಗೆ ಇತ್ತು, 'ಗಮಕಗುರು'ಗಳಿದ್ದಾರೆ, ಆ ಸೂತ್ರದ ಅರ್ಥವನ್ನು ಪ್ರಾಪ್ತಮಾಡಿಕೊಂಡು ಅದೇ ಪ್ರಕಾರ ವಾಕ್ಯಾರ್ಥ ಮಾಡುವವರನ್ನು 'ಗಮಕ'ವೆಂದು ಹೇಳುತ್ತಾರೆ, ಅವರೂ ಗುರುಗಳಲ್ಲಿ ಮುಖ್ಯರಿದ್ದಾರೆ, ಭಗವಂತರಿದ್ದಾರೆ –ಸುರಾಸುರರಿಂದ ಪೂಜ್ಯರಿದ್ದಾರೆ, ಅವರು ಜಯವಂತರಾಗಿರಲಿ ! ಈ ಪ್ರಕಾರ ಹೇಳುವಲ್ಲಿ ಅವರಿಗೆ ಸತ್ತಾರೂಪದ ನಮಸ್ಕಾರವು ಸೂಚಿತವಿದೆ. 'ಜಯತಿ' ಧಾತುವು ಸರ್ವೋತ್ಕೃಷ್ಟ ಅರ್ಥದಲ್ಲಿ ಇದೆ, ಆ ಸರ್ವೋತ್ಕೃಷ್ಟವೆಂದು ಹೇಳುವುದರಿಂದ ನಮಸ್ಕಾರವೇ ಆಗುತ್ತದೆ.

ಭಾವಾರ್ಥ :- ಭದ್ರಬಾಹು ಸ್ವಾಮಿಗಳು ಐದನೆಯ ಶ್ರುತಕೇವಲಿಗಳಾದರು. ಅವರುಗಳ ಪರಂಪರೆಯಿಂದ ಶಾಸ್ತ್ರದ ಅರ್ಥ ತಿಳಿದುಕೊಂಡು ಈ ಬೋಧಪಾಹುಡ ಗ್ರಂಥ ರಚಿಸಲಾಗಿದೆ, ಆದುದರಿಂದ ಅವರಿಗೆ ಅಂತಿಮ ಮಂಗಲದ ಸಲುವಾಗಿ ಆಚಾರ್ಯ ಭಗವಂತರು ಸ್ತುತಿರೂಪ ನಮಸ್ಕಾರ ಮಾಡಿದ್ದಾರೆ, ಈ ಪ್ರಕಾರ ಬೋಧಪಾಹುಡವನ್ನು ಸಮಾಪ್ತ ಮಾಡಿದ್ದಾರೆ. ॥೬೨॥

---

**ಚತುರ್ದಶ ಪೂರ್ವಗಳ ವಿಪುಲವಿಸ್ತಾರ ದ್ವಾದಶಾಂಗಗಳಜ್ಞಾನವಿರ್ಪ ।**
**ಶ್ರುತಜ್ಞಾನಿ ಭದ್ರಬಾಹು ಗಮಕಗುರು ಭಗವಾನ ಜಯವಂತರಿರಲಿ ॥೬೨॥**

---

೧ 'ವಿಶಾಖಾಚಾರ್ಯ' ಇದು ಮೌರ್ಯಸಮ್ರಾಟ ಚಂದ್ರಗುಪ್ತನಿಗೆ ದೀಕ್ಷೆಯ ಸಮಯದಲ್ಲಿ ಕೊಟ್ಟ ಹೆಸರು ಇದೆ.

ಪರಮಾರ್ಥದಿಂದೀ ಮುನಿರೂಪ ಸತ್ಯವಿದ್ದನ್ಯ ವೇಷಗಳೆಲ್ಲ ನಿಂದ್ಯವಿವೆ
ವ್ಯವಹಾರದಿಂದಿವರಧಾತುಪಾಷಾಣಮಯ ಮೂರ್ತಿಗಳೆಲ್ಲವಂದ್ಯವಿವೆ
ವೀರ ಜಿನಬೋಧವನು ಗೌತಮಗಣಧರ ಧರಿಸಿದನು
ವರ್ತಿಸಿದರು [೧]ಪಂಚಮಗುರು ಮದಬಿಟ್ಟವರ್ಗೆ ನಮಿಪೆನು

ಈ ಪ್ರಕಾರ ಭ. ಕುಂದಕುಂದಾಚಾರ್ಯದೇವ ವಿರಚಿತ ಅಷ್ಟಪಾಹುಡದಲ್ಲಿ
ನಾಲ್ಕನೆಯ ಬೋಧಪಾಹುಡ ಮತ್ತು ಅದರ ಜಯಚಂದ
ಛಾಬಡಾಕೃತ ದೇಶಭಾಷಾಮಯ ವಚನಿಕೆಯ
ಕನ್ನಡ ಭಾಷಾನುವಾದವು
ಸಮಾಪ್ತವಾಯಿತು.

೧ ಪಂಚಮಗುರು – ಐದನೇ ಶ್ರುತಕೇವಲಿಯಾದ ಭದ್ರಬಾಹುಸ್ವಾಮಿ.

ಜಿ

# ಭಾವ ಪಾಹುಡ

ಪರಮಾತ್ಮನಿಗೆ ವಂದನೆ ಮಾಡಿ ಶುದ್ಧಭಾವವನೆ ಮಾಡುವ ।
ಭಾವಪಾಹುಡದ ದೇಶಭಾಷಾಮಯ ವಚನಿಕೆ ರಚಿಸುವೆ ॥

ಈ ಪ್ರಕಾರ ಮಂಗಲಪೂರ್ವಕ ಪ್ರತಿಜ್ಞೆ ಮಾಡಿ ಭ. ಕುಂದಕುಂದಾಚಾರ್ಯದೇವಕೃತಭಾವಪಾಹುಡ ಗಾಥಾ ಬಂಧದ ದೇಶಭಾಷಾಮಯವಾದ ವಚನಿಕೆಯನ್ನು ಬರೆಯಲಾಗುತ್ತದೆ. ಮೊದಲು ಆಚಾರ್ಯದೇವರು ಇಷ್ಟದೇವರಿಗೆ ನಮಸ್ಕಾರರೂಪವಾದ ಮಂಗಲಮಾಡಿ ಗ್ರಂಥ ರಚನೆಯ ಪ್ರತಿಜ್ಞೆಯ ಸೂತ್ರ ಹೇಳುತ್ತಾರೆ, –

ಣಮಿಊಣ ಜಿಣವರಿಂದೇ ಣರಸುರಭವಣಿಂದವಂದಿಏ ಸಿದ್ಧೇ ।
ವೋಚ್ಛಾಮಿ ಭಾವಪಾಹುಡಮವಸೇಸೇ ಸಂಜದೇ ಸಿರಸಾ ॥೧॥

ನಮಸ್ಕೃತ್ಯ ಜಿನವರೇಂದ್ರಾನ್ ನರಸುರಭವನೇಂದ್ರವಂದಿತಾನ್ ಸಿದ್ಧಾನ್ ।
ವಕ್ಷ್ಯಾಮಿ ಭಾವಪ್ರಾಭೃತಮವಶೇಷಾನ್ ಸಂಯತಾನ್ ಸಿರಸಾ ॥೧॥

ಅರ್ಥ :– ನಾನು ಭಾವಪಾಹುಡ ಗ್ರಂಥವನ್ನು ಹೇಳುವೆನೆಂದು ಆಚಾರ್ಯದೇವರು ಹೇಳುತ್ತಾರೆ. ಮೊದಲು ಜಿನವರೇಂದ್ರ ಎಂದರೆ ತೀರ್ಥಂಕರ ಪರಮದೇವ ಹಾಗೂ ಸಿದ್ಧ ಎಂದರೆ ಅಷ್ಟಕರ್ಮಗಳ ನಾಶ ಮಾಡಿ ಸಿದ್ಧಪದವಿಗೆ ಪ್ರಾಪ್ತರಾದ ಮತ್ತು ಅವಶೇಷ ಸಂಯತ ಎಂದರೆ ಆಚಾರ್ಯ, ಉಪಾಧ್ಯಾಯ ಮತ್ತು ಸರ್ವಸಾಧುಗಳು ಹೀಗೆ ಪಂಚಪರಮೇಷ್ಠಿಗಳಿಗೆ ಮಸ್ತಕದಿಂದ ವಂದನೆ ಮಾಡಿ ಹೇಳುವೆನು. ಆ ಪಂಚಪರಮೇಷ್ಠಿಗಳು ನರ ಎಂದರೆ ಮನುಷ್ಯ, ಸುರ ಎಂದರೆ ಸ್ವರ್ಗವಾಸೀ ದೇವ, ಭವನೇಂದ್ರ ಎಂದರೆ ಪಾತಾಳವಾಸೀ ದೇವ ಇವರುಗಳ ಇಂದ್ರರುಗಳಿಂದ ವಂದನೆಗೆ ಯೋಗ್ಯರಿದ್ದಾರೆ.

ಭಾವಾರ್ಥ :– ಆಚಾರ್ಯದೇವರು ಭಾವಪಾಹುಡ ಗ್ರಂಥ ರಚಿಸುತ್ತಾರೆ ಆ ಭಾವಪ್ರಧಾನರಾದ ಪಂಚಪರಮೇಷ್ಠಿಗಳಿಗೆ ಪ್ರಾರಂಭದಲ್ಲಿ ನಮಸ್ಕಾರವು ಯುಕ್ತವಿದೆ, ಏಕೆಂದರೆ ಆ ಜಿನವರೇಂದ್ರರು–ಜಿನ ಎಂದರೆ ಗುಣಶ್ರೇಣೀ ನಿರ್ಜರಾಯುಕ್ತರಾದ ಅವಿರತ ಸಮ್ಯಗ್ದೃಷ್ಟಿ ಮೊದಲಾದವರಲ್ಲಿ ವರ ಎಂದರೆ ಶ್ರೇಷ್ಠರಾದಂಥ ಗಣಧರ ಮೊದಲಾದವರಲ್ಲಿ ಇಂದ್ರ ತೀರ್ಥಂಕರ ಪರಮದೇವರಿದ್ದಾರೆ, ಆ ಗುಣಶ್ರೇಣೀ ನಿರ್ಜರೆಯು ಶುದ್ಧ ಭಾವದಿಂದಲೇ

---

ನಮಿಸಿ ನರಸುರಭವನೇಂದ್ರ ವಂದಿತ ಜಿನವರರಿಗೆ ಸಿದ್ಧರಿಗೆ ।
ಆ ಮುನಿಶೇಷರಿಗೆ ತಲೆಬಾಗಿ ನಮಿಸೀ ಭಾವಪಾಹುಡವ ಪೇಳುವೆನು ॥೧॥

ಆಗುತ್ತದೆ. ಅವರು ತೀರ್ಥಂಕರ ಭಾವದ ಫಲಕ್ಕೆ ಪ್ರಾಪ್ತರಾದರು, ಘಾತಿಕರ್ಮಗಳ ನಾಶಮಾಡಿ ಕೇವಲಜ್ಞಾನವನ್ನು ಪ್ರಾಪ್ತಮಾಡಿಕೊಂಡರು, ಅದೇ ಪ್ರಕಾರ ಸಮಸ್ತ ಕರ್ಮಗಳ ನಾಶಮಾಡಿ, ಪರಮಶುದ್ಧ ಭಾವವನ್ನು ಪಡೆದು ಸಿದ್ಧರಾದರು, ಆಚಾರ್ಯ, ಉಪಾಧ್ಯಾಯರು ಶುದ್ಧ ಭಾವದ ಏಕದೇಶವನ್ನು ಪ್ರಾಪ್ತ ಮಾಡಿಕೊಂಡು ಪೂರ್ಣತೆಯನ್ನು ಸ್ವಯಂ ಸಾಧಿಸುತ್ತಾರೆ ಮತ್ತು ಇತರರಿಗೆ ಶುದ್ಧಭಾವದ ದೀಕ್ಷೆ-ಶಿಕ್ಷೆ ಕೊಡುತ್ತಾರೆ, ಇದೇ ಪ್ರಕಾರ ಸಾಧುಗಳಿದ್ದಾರೆ ಅವರು ಕೂಡ ಶುದ್ಧಭಾವವನ್ನು ಸ್ವಯಂ ಸಾಧಿಸುತ್ತಾರೆ ಮತ್ತು ಶುದ್ಧಭಾವದ ಮಹಿಮೆಯಿಂದಲೇ ಮೂರು ಲೋಕದ ಪ್ರಾಣಿಗಳ ಮುಖಾಂತರ ಪೂಜಾಯೋಗ್ಯ ವಂದನಾಯೋಗ್ಯರೆನಿಸಿದ್ದಾರೆ, ಆದುದರಿಂದ 'ಭಾವಪಾಹುಡ'ದ ಪ್ರಾರಂಭದಲ್ಲಿ ಇವರಿಗೆ ನಮಸ್ಕಾರವು ಯುಕ್ತವಿದೆ. ಮಸ್ತಕದ ಮುಖಾಂತರ ನಮಸ್ಕಾರ ಮಾಡುವಲ್ಲಿ ಎಲ್ಲ ಅಂಗಗಳು ಬಂದುಬಿಡುವವು ಏಕೆಂದರೆ ಮಸ್ತಕವು ಎಲ್ಲ ಅಂಗಗಳಲ್ಲಿ ಉತ್ತಮವಿದೆ. ಸ್ವಯಂ ನಮಸ್ಕಾರಮಾಡಿದಾಗ ತನ್ನ ಭಾವಪೂರ್ವಕವೇ ಆಯಿತು, ಆದರಲ್ಲಿ 'ಮನ-ವಚನ ಕಾಯ' ಮೂರೂ ಬಂದುವೆಂದು ತಿಳಿಯಬೇಕು. ||೧||

ಲಿಂಗವು ದ್ರವ್ಯ, ಭಾವದ ಭೇದದಿಂದ ಎರಡು ಪ್ರಕಾರದ್ದಿದ್ದು ಇವುಗಳಲ್ಲಿ ಭಾವಲಿಂಗವು ಪರಮಾರ್ಥ-ವಿದೆಯೆಂದು ಈಗ ಹೇಳುತ್ತಾರೆ,-

**ಭಾವೋ ಹಿ ಪಢಮಲಿಂಗಂ ಣ ದವ್ವಲಿಂಗಂ ಚ ಜಾಣ ಪರಮತ್ಥಂ ।**
**ಭಾವೋ ಕಾರಣಭೂದೋ ಗುಣದೋಸಾಣಂ ಜಿಣಾ [೧]ಬೇಂತಿ ||೨||**

**ಭಾವಃ ಹಿ ಪ್ರಥಮಲಿಂಗಂ ನ ದ್ರವ್ಯಲಿಂಗಂ ಚ ಜಾನೀಹಿ ಪರಮಾರ್ಥಮ್ ।**
**ಭಾವೋ ಕಾರಣಭೂತಃ ಗುಣದೋಷಾಣಾಂ ಜಿನಾ [೨]ಬ್ರುವಂತಿ ||೨||**

ಅರ್ಥ :- ಭಾವವು ಪ್ರಥಮಲಿಂಗವಿದೆ, ಆದುದರಿಂದ ಎಲೈ ಭವ್ಯನೇ ! ನೀನು ದ್ರವ್ಯಲಿಂಗವನ್ನು ಪರಮಾರ್ಥರೂಪವಾಗಿ ತಿಳಿಯಬೇಡ, ಏಕೆಂದರೆ ಗುಣ ಮತ್ತು ದೋಷಗಳಿಗೆ ಕಾರಣಭೂತವು ಭಾವವೇ ಇದೆಯೆಂದು ಜಿನೇಂದ್ರ ಭಗವಂತರು ಹೇಳುತ್ತಾರೆ.

ಭಾವಾರ್ಥ :- ಗುಣ ಎಂದರೆ ಸ್ವರ್ಗ-ಮೋಕ್ಷಗಳಾಗುವುದು ಮತ್ತು ದೋಷ ಎಂದರೆ ನರಕಾದಿ ಸಂಸಾರವಾಗುವುದು, ಭಗವಂತರು ಭಾವಗಳನ್ನೇ ಇವುಗಳ ಕಾರಣವೆಂದು ಹೇಳಿದ್ದಾರೆ, ಏಕೆಂದರೆ ಕಾರಣವು ಕಾರ್ಯದ ಮೊದಲು ಇರುತ್ತದೆ. ಇಲ್ಲಿ ಮುನಿ-ಶ್ರಾವಕರಿಗೆ ದ್ರವ್ಯಲಿಂಗದ ಮೊದಲು ಭಾವಲಿಂಗ ಎಂದರೆ ಸಮ್ಯಗ್ದರ್ಶನ ಮೊದಲಾದ ನಿರ್ಮಲಭಾವಗಳಿದ್ದರೆ ನಿಜವಾದ ಮುನಿ-ಶ್ರಾವಕನಾಗುತ್ತಾನೆ, ಆದುದರಿಂದ ಭಾವಲಿಂಗವೇ ಮುಖ್ಯವಿದೆ. ಮುಖ್ಯವಿದ್ದುದೇ ಪರಮಾರ್ಥವಿದೆ, ಆದುದರಿಂದ ದ್ರವ್ಯಲಿಂಗವನ್ನು ಪರಮಾರ್ಥವೆಂದು ತಿಳಿಯಬಾರದೆಂದು ಉಪದೇಶಮಾಡಿದೆ.

---

**ಭಾವವು ಪ್ರಥಮಲಿಂಗವಿದೆ ದ್ರವ್ಯಲಿಂಗ ಪರಮಾರ್ಥವೆಂದು ತಿಳಿಯಬೇಡ ।**
**ಭಾವವೇ ಗುಣದೋಷಗಳಿಗೆ ಕಾರಣವಿದೆಯೆಂದು ಜಿನರು ಪೇಳಿಹರು ||೨||**

---

೧ 'ಏಂತಿ' ಎಂಬ ಪಾಠಾಂತರವಿದೆ. ೨. 'ಏದಂತಿ' ಎಂಬ ಪಾಠಾಂತರವಿದೆ.

ಪ್ರಶ್ನೆ :– ಭಾವಸ್ವರೂಪವೆಂದರೇನಿದೆ ?

ಉತ್ತರ :– ಭಾವದ ಸ್ವರೂಪವನ್ನಂತೂ ಆಚಾರ್ಯರು ಮುಂದೆ ಹೇಳುವರು, ಆದಾಗ್ಯೂ ಇಲ್ಲಿ ಸ್ವಲ್ಪ ಹೇಳುವೆವು. ಈ ಲೋಕದಲ್ಲಿ ಆರು ದ್ರವ್ಯಗಳಿವೆ, ಅವುಗಳಲ್ಲಿ ಜೀವವು ಚೇತನಾ ಸ್ವರೂಪವಿದ್ದರೆ ಪುದ್ಗಲವು ಸ್ಪರ್ಶ, ರಸ, ಗಂಧ ಮತ್ತು ವರ್ಣಸ್ವರೂಪ ಜಡವಿದೆ. ಹೀಗೆ ಇವೆರಡರ ವರ್ತನವು ಸ್ಪಷ್ಟ ಕಂಡು ಬರುತ್ತದೆ. ಇವುಗಳ ಅವಸ್ಥೆಯಿಂದ ಅವಸ್ಥಾಂತರ ರೂಪವಾಗುವಂಥ ಪರಿಣಾಮವನ್ನು 'ಭಾವ'ವೆಂದು ಹೇಳುತ್ತಾರೆ. ಜೀವದ ಸ್ವಭಾವವು- ಪರಿಣಾಮ ರೂಪಭಾವವು ದರ್ಶನ–ಜ್ಞಾನವಿದೆ ಮತ್ತು ಪುದ್ಗಲ ಕರ್ಮದ ನಿಮಿತ್ತದಿಂದ ಜ್ಞಾನದಲ್ಲಿ ಮೋಹ–ರಾಗ–ದ್ವೇಷಗಳಾಗುವುದು ಅದು 'ವಿಭಾವಭಾವ'ವಿದೆ. ಪುದ್ಗಲದ ಸ್ಪರ್ಶದಿಂದ ಸ್ಪರ್ಶಾಂತರ, ರಸದಿಂದ ರಸಾಂತರ ಇತ್ಯಾದಿ ಗುಣಗಳಿಂದ ಗುಣಾಂತರವಾಗುವುದು ಅದು 'ಸ್ವಭಾವಭಾವ'ವಿದೆ ಮತ್ತು ಪರಮಾಣುದಿಂದ ಸ್ಕಂಧವಾಗುವುದು ಹಾಗೂ ಸ್ಕಂಧದಿಂದ ಅನ್ಯಸ್ಕಂಧವಾಗುವುದು ಮತ್ತು ಜೀವದ ಭಾವದ ನಿಮಿತ್ತದಿಂದ ಕರ್ಮರೂಪವಾಗುವುದು ಇವೆಲ್ಲವು 'ವಿಭಾವಭಾವ'ಗಳಿವೆ. ಹೀಗೆ ಇವುಗಳ ಪರಸ್ಪರ ನಿಮಿತ್ತ ನೈಮಿತ್ತಿಕ ಭಾವಗಳಾಗುತ್ತವೆ.

ಪುದ್ಗಲವಂತೂ ಜಡವಿದೆ, ಇದರ ನೈಮಿತ್ತಿಕಭಾವದಿಂದ ಯಾವ ಸುಖ–ದುಃಖ ಮೊದಲಾದವುಗಳಿಲ್ಲ ಮತ್ತು ಜೀವವು ಚೇತನವಿದೆ, ಇದರ ನಿಮಿತ್ತದಿಂದ ಭಾವಗಳಾಗುತ್ತವೆ, ಅವುಗಳಿಂದ ಸುಖ–ದುಃಖ ಮೊದಲಾದವುಗಳಾಗುತ್ತವೆ, ಆದುದರಿಂದ ಜೀವಕ್ಕೆ ಸ್ವಭಾವ–ಭಾವರೂಪವಿರುವ ಮತ್ತು ನೈಮಿತ್ತಿಕ ಭಾವರೂಪವಾಗಿ ಪ್ರವರ್ತಿಸದಿರುವ ಉಪದೇಶವಿದೆ. ಜೀವಕ್ಕೆ ಪುದ್ಗಲ ಕರ್ಮದ ಸಂಯೋಗದಿಂದ ದೇಹಾದಿ ದ್ರವ್ಯಗಳ ಸಂಬಂಧವಿದೆ, ಈ ಬಾಹ್ಯರೂಪವನ್ನು 'ದ್ರವ್ಯ'ವೆಂದು ಹೇಳುತ್ತಾರೆ ಮತ್ತು 'ಭಾವ'ದಿಂದದ್ರವ್ಯದ ಪ್ರವೃತ್ತಿಯಾಗುತ್ತದೆ, ಈ ಪ್ರಕಾರ ದ್ರವ್ಯದ ಪ್ರವೃತ್ತಿಯಾಗುತ್ತದೆ. ಹೀಗೆ ದ್ರವ್ಯ–ಭಾವದ ಸ್ವರೂಪವನ್ನು ತಿಳಿದುಕೊಂಡು ಸ್ವಭಾವದಲ್ಲಿ ಪ್ರವರ್ತಿಸುವವನಿಗೆ ವಿಭಾವದಲ್ಲಿ ಪ್ರವರ್ತಿಸದವನಿಗೆ ಪರಮಾನಂದ ಸುಖವಾಗುತ್ತದೆ, ಮತ್ತು ವಿಭಾವ ರಾಗ ದ್ವೇಷಮೋಹ ರೂಪವಾಗಿ ಪ್ರವರ್ತಿಸುವವನಿಗೆ ಸಂಸಾರ ಸಂಬಂಧದ ದುಃಖವಾಗುತ್ತದೆ.

ದ್ರವ್ಯರೂಪವು ಪುದ್ಗಲದ ವಿಭಾವವಿದೆ, ಈ ಸಂಬಂಧದ ಸುಖ–ದುಃಖವು ಜೀವಕ್ಕೆ ಆಗುವುದಿಲ್ಲ, ಆದುದರಿಂದ ಭಾವವೇ ಮುಖ್ಯವಿದೆ, ಹೀಗಿಲ್ಲದಿದ್ದರೆ ಕೇವಲೀ ಭಗವಂತರಿಗೂ ಸಾಂಸಾರಿಕ ಸುಖ–ದುಃಖದ ಪ್ರಾಪ್ತಿಯಾಗುವುದು, ಆದರೆ ಹೀಗೆ ಇಲ್ಲ. ಈ ಪ್ರಕಾರ ಜ್ಞಾನ ದರ್ಶನಗಳಂತೂ ಜೀವದ ಸ್ವಭಾವವಿವೆ ಮತ್ತು ರಾಗ–ದ್ವೇಷ–ಮೋಹ ಇವು ಸ್ವಭಾವ–ವಿಭಾವಗಳಿವೆ ಮತ್ತು ಪುದ್ಗಲದ ಸ್ಪರ್ಶಾದಿಗಳು ಹಾಗೂ ಸ್ಕಂಧಾದಿಗಳು ಸ್ವಭಾವ–ವಿಭಾವಗಳಿವೆ. ಇವುಗಳಲ್ಲಿ ಜೀವದಹಿತ–ಅಹಿತಭಾವವು ಮುಖ್ಯವಿದೆ, ಪುದ್ಗಲ ದ್ರವ್ಯಸಂಬಂಧವಾಗಿ ಮುಖ್ಯವಿಲ್ಲ. ಬಾಹ್ಯದ್ರವ್ಯವು ನಿಮಿತ್ತಮಾತ್ರವಿದೆ, ಉಪಾದಾನವಿಲ್ಲದೆ ನಿಮಿತ್ತವೇನನ್ನೂ ಮಾಡುವುದಿಲ್ಲ ಇದಂತೂ ಸಾಮಾನ್ಯರೂಪದಿಂದ ಸ್ವಭಾವದ ಸ್ವರೂಪವಿದೆ ಮತ್ತು ಇದರದೇ ವಿಶೇಷ ಸಮ್ಯಗ್ದರ್ಶನ–ಜ್ಞಾನ–ಚಾರಿತ್ರವಂತೂ ಜೀವದ ಸ್ವಭಾವ–ಭಾವವಿದೆ, ಇದರಲ್ಲಿ ಸಮ್ಯಗ್ದರ್ಶನ ಭಾವವು ಮುಖ್ಯವಿದೆ. ಇದಿಲ್ಲದೆ ಸಮಸ್ತ ಬಾಹ್ಯಕ್ರಿಯೆಗಳು ಮಿಥ್ಯಾದರ್ಶನ–ಜ್ಞಾನ–ಚಾರಿತ್ರಗಳಿವೆ, ಇವು ವಿಭಾವಗಳಿವೆ ಮತ್ತು ಸಂಸಾರಕ್ಕೆ ಕಾರಣವಿವೆಯೆಂದು ತಿಳಿದುಕೊಳ್ಳಬೇಕು. ।।೨।।

ಬಾಹ್ಯದ್ರವ್ಯವು ನಿಮಿತ್ತಮಾತ್ರವಿದೆ 'ಇದರ ಅಭಾವ'ವು ಜೀವ ಭಾವದ ವಿಶುದ್ಧತೆಯ ನಿಮಿತ್ತವೆಂದು ತಿಳಿದುಕೊಂಡು ಬಾಹ್ಯದ್ರವ್ಯದ ತ್ಯಾಗಮಾಡುತ್ತಾರೆಂದು ಈಗ ಹೇಳುತ್ತಾರೆ,–

ಭಾವವಿಸುದ್ಧಿಣಿಮಿತ್ತಂ ಬಾಹಿರಗಂಥಸ್ಸ ಕೀರಏ ಚಾಓ ।
ಬಾಹಿರಚಾಓ ವಿಹಲೋ ಅಬ್ಭಂತರಗಂಥಜುತ್ತಸ್ಸ ॥೩॥

ಭಾವವಿಶುದ್ಧಿನಿಮಿತ್ತಂ ಬಾಹ್ಯಗ್ರಂಥಸ್ಯ ಕ್ರಿಯತೇ ತ್ಯಾಗಃ ।
ಬಾಹ್ಯತ್ಯಾಗಃ ವಿಫಲಃ ಅಭ್ಯಂತರಗ್ರಂಥಯುಕ್ತಸ್ಯ ॥೩॥

ಅರ್ಥ ಃ- ಬಾಹ್ಯಪರಿಗ್ರಹದ ತ್ಯಾಗವನ್ನು ಭಾವಗಳ ವಿಶುದ್ಧಿಯ ಸಲುವಾಗಿ ಮಾಡಲಾಗುತ್ತದೆ, ಆದರೆ ಅಭ್ಯಂತರ ಪರಿಗ್ರಹಗಳಾದ ರಾಗಾದಿಗಳಿಂದ ಯುಕ್ತನಿರುವವನಿಗೆ ಬಾಹ್ಯ ಪರಿಗ್ರಹದ ತ್ಯಾಗವು ನಿಷ್ಫಲವಿದೆ.

ಭಾವಾರ್ಥ ಃ- ಅಂತರಂಗದ ಭಾವವಿಲ್ಲದೆ ಬಾಹ್ಯ ತ್ಯಾಗಾದಿಗಳ ಪ್ರವೃತ್ತಿಯು ನಿಷ್ಫಲವಿದೆಯೆಂಬುದು ಪ್ರಸಿದ್ಧವಿದೆ. ॥೩॥

ಕೋಟ್ಯಂತರ ಭವಗಳಲ್ಲಿ ತಪಸ್ಸು ಮಾಡಿದರೂ ಕೂಡ ಭಾವವಿಲ್ಲದೆ ಸಿದ್ಧಿಯಿಲ್ಲವೆಂದು ಈಗ ಹೇಳುತ್ತಾರೆ, -

ಭಾವರಹಿಓ ಣ ಸಿಜ್ಝಇ ಜಇ ವ ತವಂ ಚರಇ ಕೋಡಿಕೋಡೀಓ ।
ಜಮ್ಮಂತರಾಇ ಬಹುಸೋ ಲಂಬಿಯಹತ್ಥೋ ಗಲಿಯವತ್ಥೋ ॥೪॥

ಭಾವರಹಿತಃ ನ ಸಿದ್ಧ್ಯತಿ ಯದ್ಯಪಿ ತಪಶ್ಚರತಿ ಕೋಟಿಕೋಟೀಃ ।
ಜನ್ಮಾಂತರಾಣಿ ಬಹುಶಃ ಲಂಬಿತಹಸ್ತಃ ಗಲಿತವಸ್ತ್ರಃ ॥೪॥

ಅರ್ಥ ಃ- ಒಂದು ವೇಳೆ ಆದೆಷ್ಟೋ ಜನ್ಮಾಂತರಗಳವರೆಗೆ ಕೋಟಾಕೋಟಿ ಸಂಖ್ಯಾಕಾಲದವರೆಗೆ ಕೈಗಳನ್ನು ನೀಳವಾಗಿ ನೇತಾಡಿಸಿ, ವಸ್ತ್ರಾದಿಗಳ ತ್ಯಾಗಮಾಡಿ ತಪಶ್ಚರಣ ಮಾಡಿದರೂ ಕೂಡ ಭಾವರಹಿತನಿಗೆ ಸಿದ್ಧಿಯಾಗುವುದಿಲ್ಲ.

ಭಾವಾರ್ಥ ಃ- ಭಾವದಲ್ಲಿ ಮಿಥ್ಯಾದರ್ಶನ, ಮಿಥ್ಯಾಜ್ಞಾನ, ಮಿಥ್ಯಾಚಾರಿತ್ರರೂಪ ವಿಭಾವಗಳಿಲ್ಲದ ಸಮ್ಯಗ್ದರ್ಶನ-ಜ್ಞಾನ-ಚಾರಿತ್ರಸ್ವರೂಪವಾದ ಸ್ವಭಾವದಲ್ಲಿ ಪ್ರವೃತ್ತಿಯಾಗದಿದ್ದರೆ ಕೋಟಾಕೋಟಿ ಭವಗಳವರೆಗೆ ಕಾಯೋತ್ಸರ್ಗಪೂರ್ವಕ ನಗ್ನಮುದ್ರೆಯನ್ನು ಧಾರಣಮಾಡಿ ತಪಶ್ಚರಣ ಮಾಡಿದರೂ ಕೂಡ ಮುಕ್ತಿಯ ಪ್ರಾಪ್ತಿಯಾಗುವುದಿಲ್ಲ. ಹೀಗೆ ಭಾವಗಳಲ್ಲಿ ಸಮ್ಯಗ್ದರ್ಶನ-ಜ್ಞಾನ-ಚಾರಿತ್ರರೂಪದ ಭಾವಗಳು ಮುಖ್ಯವಿವೆ, ಮತ್ತು ಇವುಗಳಲ್ಲೂ ಸಮ್ಯಗ್ದರ್ಶನವು ಮುಖ್ಯವಿದೆ, ಏಕೆಂದರೆ ಇದಿಲ್ಲದೆ ಜ್ಞಾನ-ಚಾರಿತ್ರಗಳನ್ನು ಮಿಥ್ಯೆಯೆಂದು ಹೇಳಿದ್ದಾರೆಂದು ತಿಳಿದುಕೊಳ್ಳಬೇಕು. ॥೪॥

---

ಬಾಹ್ಯ ಪರಿಗ್ರಹದ ತ್ಯಾಗ ಭಾವವಿಶುದ್ಧಿಯ ಕುರಿತು ಮಾಡಲಾಗುವುದು ।
ಬಾಹ್ಯತ್ಯಾಗ ವಿಫಲವಿದೆ ಅಂತರಂಗ ಪರಿಗ್ರಹಯುಕ್ತರಾದವರಿಗೆ ॥೩॥

ವಿಗಲಿತವಸ್ತ್ರ ಲಂಬಿತಹಸ್ತನಾಗಿ ಕೋಟಿ ಕೋಟಿ ಭವಗಳವರೆಗೆ ।
ಅಗಣಿತ ತಪ ಮಾಡಿದರು ಕೂಡ ಭಾವವಿರಹಿತನಿಗೆ ಸಿದ್ಧಿಯಿಲ್ಲ ॥೪॥

ಈಗ ಮತ್ತೆ ಇದೇ ಅರ್ಥವನ್ನು ದೃಢ ಮಾಡುತ್ತಾರೆ, –

ಪರಿಣಾಮಮ್ಮಿ ಅಸುದ್ಧೇ ಗಂಥೇ ಮುಂಚೇಇ ಬಾಹಿರೇ ಯ ಜಈ ।
ಬಾಹಿರಂಗಥಚ್ಚಾಓ ಭಾವವಿಹೂಣಸ್ಸಂ ಕಿಂ ಕುಣ ಇ ॥೫॥

ಪರಿಣಾಮೇ ಅಶುದ್ಧೇ ಗ್ರಂಥಾನ್ ಮುಂಚತಿ ಬಾಹ್ಯಾನ್ ಚ ಯದಿ ।
ಬಾಹ್ಯಗ್ರಂಥತ್ಯಾಗಃ ಭಾವವಿಹೀನಸ್ಯ ಕಿಂ ಕರೋತಿ ॥೫॥

ಅರ್ಥ :–ಒಂದು ವೇಳೆ ಮುನಿಯಾಗಿ ಪರಿಣಾಮವು ಅಶುದ್ಧವಾಗಿದ್ದರೂ ಬಾಹ್ಯ ಪರಿಗ್ರಹವನ್ನು ಬಿಟ್ಟು ಕೊಟ್ಟರೆ ಬಾಹ್ಯ ಪರಿಗ್ರಹದ ತ್ಯಾಗವು ಆ ಭಾವರಹಿತನಾದ ಮುನಿಗೆ ಏನು ಮಾಡುವುದು ? ಎಂದರೆ ಯಾವ ಲಾಭವನ್ನೂ ಮಾಡುವುದಿಲ್ಲ.

ಭಾವಾರ್ಥ :– ಆ ಬಾಹ್ಯ ಪರಿಗ್ರಹವನ್ನು ಬಿಟ್ಟುಕೊಟ್ಟು ಮುನಿಯಾಗಿ ಹೋಗುವುದು ಮತ್ತು ಪರಿಣಾಮವು ಪರಿಗ್ರಹರೂಪವಾಗಿ ಅಶುದ್ಧವಿದ್ದರೆ, ಅಭ್ಯಂತರ ಪರಿಗ್ರಹವನ್ನು ಬಿಟ್ಟುಕೊಡದಿದ್ದರೆ ಬಾಹ್ಯ ತ್ಯಾಗವು ಯಾವ ಕಲ್ಯಾಣರೂಪವಾದ ಫಲವನ್ನು ಕೊಡುವ ಸಾಧ್ಯತೆಯಿಲ್ಲ, ಸಮ್ಯಗ್ದರ್ಶನ ಮೊದಲಾದ ಭಾವಗಳಿಲ್ಲದೆ ಕರ್ಮನಿರ್ಜರಾರೂಪದ ಕಾರ್ಯವಾಗುವುದಿಲ್ಲ. ॥೫॥

ಮೊದಲಿನ ಗಾಥೆಗಿಂತ ಇದರಲ್ಲಿರುವ ವಿಶೇಷತೆಯೇನೆಂದರೆ ಒಂದುವೇಳೆ ಮುನಿಪದವನ್ನು ಸ್ವೀಕರಿಸುವುದು ಮತ್ತು ಪರಿಣಾಮವು ಉಜ್ವಲವಿರದಿದ್ದರೆ, ಆತ್ಮಜ್ಞಾನದ ಭಾವನೆಯಿರದಿದ್ದರೆ ಕರ್ಮವು ಕತ್ತರಿಸುವುದಿಲ್ಲ.

ಭಾವವನ್ನು ಪರಮಾರ್ಥವೆಂದು ತಿಳಿದುಕೊಂಡು ಇದನ್ನೇ ಅಂಗೀಕಾರ ಮಾಡಬೇಕೆಂಬ ಉಪದೇಶವನ್ನು ಈಗ ಕೊಡುತ್ತಾರೆ, –

ಜಾಣಹಿ ಭಾವಂ ಪಢಮಂ ಕಿಂ ತೇ ಲಿಂಗೇಣ ಭಾವರಹಿಏಣ ।
ಪಂಥಿಯ ಸಿವಪುರಿಪಂಥಂ ಜಿಣಉವಇಟ್ಠ ಪಯತ್ತೇಣ ॥೬॥

ಜಾನೀಹಿ ಭಾವಂ ಪ್ರಥಮಂ ಕಿಂ ತೇ ಲಿಂಗೇನ ಭಾವರಹಿತೇನ ।
ಪಥಿಕ ಶಿವಪುರೀಪಂಥಾಃ ಜಿನೋಪದಿಷ್ಟಃ ಪ್ರಯತ್ನೇನ ॥೬॥

ಅರ್ಥ :– ಎಲೈ ಶಿವಪುರದ ಪಥಿಕನೇ ! ನೀನು ಮೊದಲು ಭಾವವನ್ನು ತಿಳಿದುಕೊಳ್ಳು, ಭಾವ ರಹಿತವಾದ ಲಿಂಗದಿಂದ ನಿನಗೆ ಯಾವ ಪ್ರಯೋಜನವಿದೆ ? ಶಿವಪುರದ ಪಂಥವನ್ನು ಜಿನಭಗವಂತರು ಪ್ರಯತ್ನ ಸಾಧ್ಯವೆಂದು ಹೇಳಿದ್ದಾರೆ.

---

ಪರಿಣಾಮ ಅಶುದ್ಧವಿದ್ದೊಂದುವೇಳೆ ಬಾಹ್ಯಪರಿಗ್ರಹವ ಬಿಟ್ಟುಕೊಟ್ಟರೆ ।
ಹೊರ ಪರಿಗ್ರಹದ ತ್ಯಾಗವೇನು ಮಾಡುವುದಾ ಭಾವವಿಹೀನನಾದವಗೆ ॥೫॥

ಭಾವವನು ಮೊದಲು ತಿಳಿ ಭಾವರಹಿತನಿಗೆ ಲಿಂಗದಿಂದೇನಾಗುವುದು ।
ಶಿವಪುರದ ಪಥಿಕನಾಮಾರ್ಗಪ್ರಯತ್ನಸಾಧ್ಯವೆಂದು ಜಿನರು ಹೇಳಿಹರು ॥೬॥

ಭಾವಾರ್ಥ :- ಜಿನೇಶ್ವರದೇವರು ಮೋಕ್ಷಮಾರ್ಗವನ್ನು ಸಮ್ಯಗ್ದರ್ಶನ-ಜ್ಞಾನ-ಚಾರಿತ್ರರೂಪ ಆತ್ಮ ಭಾವಸ್ವರೂಪ ಪರಮಾರ್ಥದಿಂದೆಂದು ಹೇಳಿದ್ದಾರೆ, ಆದುದರಿಂದ ಇದನ್ನೇ ಪರಮಾರ್ಥವೆಂದು ತಿಳಿದುಕೊಂಡು ಸರ್ವ ಉದ್ಯಮದಿಂದ ಅಂಗೀಕಾರ ಮಾಡಿರಿ ! ಕೇವಲದ್ರವ್ಯಮಾತ್ರ ಲಿಂಗದಿಂದ ಏನು ಸಾಧ್ಯವಿದೆಯೆಂಬ ಉಪದೇಶವಿದೆ. ।।೬।।

ನೀನು ದ್ರವ್ಯಲಿಂಗ ಮೊದಲಾದುವನ್ನು ಸಾಕಷ್ಟು ಧಾರಣ ಮಾಡಿರುವೆ, ಆದರೆ ಅದರಿಂದ ಯಾವ ಸಿದ್ಧಿಯೂ ಆಗಲಿಲ್ಲವೆಂದು ಈಗ ಹೇಳುತ್ತಾರೆ, -

ಭಾವರಹಿಏಣ ಸಪುರಿಸ ಅಣಾಇಕಾಲಂ ಅಣಂತಸಂಸಾರೇ ।
ಗಹಿಉಜ್ಝಿಯಾಇಂ ಬಹುಸೋ ಬಾಹಿರಣಿಗ್ಗಂಥರೂವಾಇಂ ।।೭।।

ಭಾವರಹಿತೇನ ಸತ್ಪುರುಷ ಅನಾದಿಕಾಲಂ ಅನಂತಸಂಸಾರೇ ।
ಗೃಹೀತೋಜ್ಝಿತಾನಿ ಬಹುಶಃ ಬಾಹ್ಯನಿರ್ಗ್ರಂಥರೂಪಾಣಿ ।।೭।।

ಅರ್ಥ :- ಎಲೈ ಸತ್ಪುರುಷನೇ ! ನೀನು ಅನಾದಿಕಾಲದಿಂದ ಹಿಡಿದು ಈ ಅನಂತಸಂಸಾರದಲ್ಲಿ ಭಾವರಹಿತ ನಿರ್ಗ್ರಂಥರೂಪವನ್ನು ಬಹಳಷ್ಟು ಬಾರಿ ಗ್ರಹಣ ಮಾಡಿರುವೆ ಮತ್ತು ಬಿಟ್ಟಿರುವೆ.

ಭಾವಾರ್ಥ :- ಆ ನಿಶ್ಚಯ ಸಮ್ಯಗ್ದರ್ಶನ-ಜ್ಞಾನ-ಚಾರಿತ್ರರೂಪವಾದ ಭಾವಗಳಿಲ್ಲದೆ ಬಾಹ್ಯದಲ್ಲಿ ನಿರ್ಗ್ರಂಥರೂಪವಾದ ದ್ರವ್ಯಲಿಂಗವನ್ನು ಈ ಸಂಸಾರದಲ್ಲಿ ಅನಂತಕಾಲದಿಂದ ಹಿಡಿದು ಬಹಳಷ್ಟು ಬಾರಿ ಧಾರಣ ಮಾಡಿರುವೆ ಮತ್ತು ಬಿಟ್ಟು ಕೊಟ್ಟಿದ್ದರೂ ಕೂಡ ಸಿದ್ಧಿಯಾಗಲಿಲ್ಲ, ಚತುರ್ಗತಿಗಳಲ್ಲಿ ಭ್ರಮಣವನ್ನು ಮಾಡುತ್ತಲೇ ಇರುವೆ. ।।೭।।

ಮತ್ತೆ ಅದನ್ನೇ ಹೇಳುತ್ತಾರೆ, -

ಭೀಸಣಣರಯಗಈಏ ತಿರಿಯಗಈಏ ಕುದೇವಮಣುಗಇಏ ।
ಪತ್ತೋ ಸಿ ತೀವ್ವದುಃಖಂ ಭಾವಹಿ ಜಿನಭಾವನಾ ಜೀವ ।।೮।।

ಭೀಷಣನರಕಗತೌ ತಿರ್ಯಗ್ಗತೌ ಕುದೇವಮನುಷ್ಯಗತ್ಯೋಃ ।
ಪ್ರಾಪ್ತೋಽಸಿ ತೀವ್ರದುಃಖಂ ಭಾವಯ ಜಿನಭಾವನಾಂ ಜೀವ ।।೮।।

ಅರ್ಥ :- ಎಲೈ ಜೀವನೇ ! ನೀನು ಭೀಷಣವಾದ (ಭಯಂಕರವಾದ) ನರಕಗತಿ ಹಾಗೂ ತಿರ್ಯಂಚ ಗತಿಯಲ್ಲಿ ಮತ್ತು ಕುದೇವ-ಕುಮನುಷ್ಯಗತಿಯಲ್ಲಿ ತೀವ್ರ ದುಃಖವನ್ನು ಪಡೆದಿರುವೆ, ಆದುದರಿಂದ ಈಗ ನೀನು

---

ಎಲೆ ಸತ್ಪುರುಷ ಅನಾದಿಕಾಲದಿಂದನಂತ ಸಂಸಾರದೊಳ್ಭಾವವಿಲ್ಲದೆ ।
ಹಲವುಬಾರಿ ಬಾಹ್ಯನಿರ್ಗ್ರಂಥರೂಪ ಧರಿಸಿರುವೆ ಮೇಣ್ಬಿಟ್ಟು ಕೊಟ್ಟಿರುವೆ ।।೭।।
ಭೀಕರನರಕಗತಿ ತಿರ್ಯಂಚಗತಿ ಕುದೇವಮನುಷ್ಯಗತಿಗಳಲಿ ।
ಭೀಕರದುಃಖ ಪಡೆದಿರುವೆ ಜೀವ ನೀನೀಗ ಜಿನಭಾವನೆಯ ಭಾವಿಸು ।।೮।।

ಜಿನಭಾವನೆಯನ್ನು ಎಂದರೆ ಶುದ್ಧ ಆತ್ಮಭಾವನೆಯನ್ನು ಭಾವಿಸು, ಅದರಿಂದ ನಿನ್ನ ಸಂಸಾರದ ಭ್ರಮಣವು ದೂರವಾಗುವುದು.

ಭಾವಾರ್ಥ :- ಎಲೈ ಜೀವನೇ ! ನೀನು ಆತ್ಮನ ಭಾವನೆಯಿಲ್ಲದೆ ಅನಾದಿಕಾಲದಿಂದ ಈ ಸಂಸಾರದಲ್ಲಿ ಚತುರ್ಗತಿಯ ದುಃಖವನ್ನು ಪ್ರಾಪ್ತಮಾಡಿಕೊಂಡಿರುವೆ, ಆದುದರಿಂದ ಈಗ ಜಿನೇಶ್ವರದೇವರ ಆಶ್ರಯ ತೆಗೆದುಕೊಳ್ಳು ಮತ್ತು ಶುದ್ಧಸ್ವರೂಪದ ಭಾವನಾರೂಪವಾದ ಅಭ್ಯಾಸವನ್ನು ಪುನಃ ಪುನಃ ಮಾಡು, ಅದರಿಂದ ಸಂಸಾರದ ಭ್ರಮಣದಿಂದ ರಹಿತನಾಗಿ ಮೋಕ್ಷವನ್ನು ಪ್ರಾಪ್ತಮಾಡಿಕೊಳ್ಳುವೆ ! – ಎಂಬ ಉಪದೇಶವಿದೆ.

ಈಗ ಚತುರ್ಗತಿಯ ದುಃಖಗಳನ್ನು ವಿಶೇಷರೂಪದಿಂದ ಹೇಳುತ್ತಾರೆ, ಅದರಲ್ಲಿ ಮೊದಲು ನರಕಗತಿಯ ದುಃಖಗಳನ್ನು ಹೇಳುತ್ತಾರೆ, –

**ಸತ್ತಸು ಣರಯಾವಾಸೇ ದಾರುಣಭೀಮಾಇಂ ಅಸಹಣೀಯಾಇಂ ।**
**ಭುತ್ತಾ ಇಂ ಸುಇರಕಾಲಂ ದುಕ್ಖಾಇಂ ಣಿರಂತರಂ ಸಹಿಯಂ ॥೯॥**

[೧]ಸಪ್ತಸು ನರಕಾವಾಸೇಷು ದಾರುಣಭೀಷಣಾನಿ ಅಸಹನೀಯಾನಿ ।
ಭುಕ್ತಾನಿ ಸುಚಿರಕಾಲಂ ದುಃಖಾನಿ ನಿರಂತರಂ [೨]ಸೋಢಾನಿ ॥೯॥

ಅರ್ಥ :- ಎಲೈ ಜೀವನೇ ! ನೀನು ಏಳು ನರಕಭೂಮಿಗಳ ನರಕಾವಾಸದ ಬಿಲಗಳಲ್ಲಿ ದಾರುಣ ಎಂದರೆ ತೀವ್ರ ಹಾಗೂ ಭಯಾನಕ ಮತ್ತು ಅಸಹನೀಯವಾದ ಎಂದರೆ ಸಹಿಸಲಿಕ್ಕಾಗದಂತಹ ದುಃಖಗಳನ್ನು ಅತ್ಯಂತ ದೀರ್ಘಕಾಲದವರೆಗೆ ನಿರಂತರವಾಗಿ ಭೋಗಿಸಿರುವೆ ಮತ್ತು ಸಹಿಸಿರುವೆ.

ಭಾವಾರ್ಥ :- ಏಳು ನರಕದ ಪೃಥ್ವಿಗಳಿದ್ದು ಅವುಗಳಲ್ಲಿ ಬಹಳಷ್ಟು ಬಿಲಗಳಿವೆ, ಅವುಗಳಲ್ಲಿ ಹತ್ತು ಸಾವಿರ ವರುಷಗಳಿಂದ ಹಿಡಿದು ಹಾಗೂ ಒಂದು ಸಾಗರದಿಂದ ಹಿಡಿದು ಮೂವತ್ತುಮೂರು ಸಾಗರದವರೆಗೆ ಆಯುಷ್ಯವಿದೆ. ಅಲ್ಲಿ ಆಯು ಪೂರ್ಣವಾಗುವವರೆಗೆ ಅತ್ಯಂತ ತೀವ್ರ ದುಃಖವನ್ನು ಈ ಜೀವನು ಅನಂತ ಕಾಲದಿಂದ ಸಹಿಸುತ್ತ ಬಂದಿದ್ದಾನೆ. ॥೯॥

ಈಗ ತಿರ್ಯಂಚಗತಿಯ ದುಃಖಗಳನ್ನು ಹೇಳುತ್ತಾರೆ, –

**ಖಣಣುತ್ತಾವಣವಾಲಣವೇಯಣವಿಚ್ಛೇಯಣಾಣಿರೋಹಂ ಚ ।**
**ಪತ್ತೋ ಸಿ ಭಾವರಹಿಓ ತಿರಿಯಗಈಏ ಚಿರಂ ಕಾಲಂ ॥೧೦॥**

---

ಸುತೀವ್ರಭೀಷಣ ಅಸಹ್ಯಕರ ದುಃಖಗಳನೇಳು ನರಕಾವಾಸದಲಿ ।
ಅತಿ ದೀರ್ಘಕಾಲದವರೆಗೆ ನಿರಂತರವಾಗಿ ಭೋಗಿಸಿದೆ ಸಹಿಸಿದೆ ॥೯॥
ಖನನ ಉತ್ತಾಪನ ಜ್ವಲನವೇದನವ್ಯುಚ್ಛೇದನ ನಿರೋಧನಾದಿಗಳ ।
ಅನೇಕದುಃಖ ಚಿರಕಾಲಪಡೆದೆ ಭಾವವಿಲ್ಲದೆ ತಿರ್ಯಂಚಗತಿಯಲಿ ॥೧೦॥

---

೧ ಮುದ್ರಿತ ಸಂಸ್ಕೃತ ಪ್ರತಿಯಲ್ಲಿ 'ಸಪ್ತಸು ನರಕಾವಾಸೇ', ಎಂದು ಪಾಠವಿದೆ.

೨ ಮುದ್ರಿತ ಸಂಸ್ಕೃತ ಪ್ರತಿಯಲ್ಲಿ 'ಸ್ವಹಿತ' ಎಂಬ ಪಾಠವಿದೆ. 'ಸಹಿಯ' ಇದರ ಛಾಯೆಯಲ್ಲಿ.

ಖನನೋತ್ತಾಪನಜ್ವಾಲನ [1]ವೇದನವಿಚ್ಛೇದನಾನಿರೋಧಂ ಚ ।
ಪ್ರಾಪ್ತೋऽಸಿ ಭಾವರಹಿತಃತಿರ್ಯಗ್ಗತೌ ಚಿರಂ ಕಾಲಂ ॥೧೦॥

ಅರ್ಥ ಃ- ಎಲೈ ಜೀವನೇ ! ನೀನು ತಿರ್ಯಂಚಗತಿಯಲ್ಲಿ ಸಮ್ಯಗ್ದರ್ಶನ ಮೊದಲಾದ ಭಾವಗಳಿಂದ ರಹಿತನಾಗಿ ಖನನ, ಉತ್ತಾಪನ, ಜ್ವಲನ, ವೇದನ, ವ್ಯುಚ್ಛೇದನ, ನಿರೋಧನ ಮೊದಲಾದ ದುಃಖಗಳನ್ನು ಬಹಳಷ್ಟು ಕಾಲದವರೆಗೆ ಪ್ರಾಪ್ತಮಾಡಿಕೊಂಡಿರುವೆ.

ಭಾವಾರ್ಥ ಃ- ಈ ಜೀವನು ಸಮ್ಯಗ್ದರ್ಶನಾದಿಭಾವಗಳಿಲ್ಲದೆ ತಿರ್ಯಂಚಗತಿಯಲ್ಲಿ ಚಿರಕಾಲದವರೆಗೆ ದುಃಖವನ್ನು ಪಡೆದಿದ್ದಾನೆ. ಪೃಥ್ವೀಕಾಯದಲ್ಲಿ ಗುದ್ದಲಿ ಮೊದಲಾದವುಗಳಿಂದ ಅಗೆಯುವ ಮುಖಾಂತರ ದುಃಖ ಪಡೆದಿದ್ದಾನೆ, ಜಲಕಾಯದಲ್ಲಿ ಅಗ್ನಿಯಿಂದ ಕಾಯಿಸುವುದು, ಸುಡುವುದು ಮೊದಲಾದವುಗಳಿಂದ ದುಃಖ ಪಡೆದಿದ್ದಾನೆ, ಅಗ್ನಿಕಾಯದಲ್ಲಿ ಉರಿಸುವುದು, ಆರಿಸುವುದು ಮೊದಲಾದವುಗಳಿಂದ ದುಃಖ ಪಡೆದಿದ್ದಾನೆ, ವಾಯುಕಾಯದಲ್ಲಿ ಪ್ರಬಲದಿಂದ ನಿದಾನ ಚಲಿಸುವುದು, ಒಡೆಯುವುದು ಮೊದಲಾದವುಗಳಿಂದ ದುಃಖ ಪಡೆದಿದ್ದಾನೆ, ವನಸ್ಪತಿಕಾಯದಲ್ಲಿ ಹರಿಯುವದು, ಛೇದಿಸುವುದು, ಕುದಿಸುವುದು ಮೊದಲಾದವುಗಳಿಂದ ದುಃಖ ಪಡೆದಿದ್ದಾನೆ, ವಿಕಲತ್ರಯದಲ್ಲಿ ಇತರರಿಂದ ತಡೆಯುವುದು ಅಲ್ಪಾಯುವಿನಿಂದ ಸಾಯುವುದು ಮೊದಲಾದವುಗಳಿಂದ ದುಃಖ ಪಡೆದಿದ್ದಾನೆ, ಪಂಚೇಂದ್ರಿಯ ಪಶು-ಪಕ್ಷಿ-ಜಲಚರ ಮೊದಲಾದವುಗಳಲ್ಲಿ ಪರಸ್ಪರ ಘಾತ ಹಾಗೂ ಮನುಷ್ಯ ಮೊದಲಾದವರಿಂದ ವೇದನೆ, ಹಸಿವು, ಬಾಯಾರಿಕೆ, ವಧೆ, ಬಂಧನ ಇತ್ಯಾದಿಗಳಿಂದ ದುಃಖ ಪಡೆದಿದ್ದಾನೆ. ಈ ಪ್ರಕಾರ ತಿರ್ಯಂಚಗತಿಯಲ್ಲಿ ಅಸಂಖ್ಯಾತ ಅನಂತಕಾಲದವರೆಗೆ ದುಃಖ ಪಡೆದಿದ್ದಾನೆ.[2] ॥೧೦॥

ಈಗ ಮನುಷ್ಯಗತಿಯಲ್ಲಿನ ದುಃಖಗಳನ್ನು ಹೇಳುತ್ತಾರೆ, -

ಆಗಂತುಕ ಮಾಣಸಿಯಂ ಸಹಜಂ ಸಾರೀರಿಯಂ ಚ ಚತ್ತಾರಿ ।
ದುಕ್ಖಾಇಂ ಮಣುಯಜಮ್ಮೇ ಪತ್ತೋ ಸಿ ಅಣಂತಯಂ ಕಾಲಂ ॥೧೧॥

ಆಗಂತುಕಂ ಮಾನಸಿಕಂ ಸಹಜಂ ಶಾರೀರಿಕಂ ಚ ಚತ್ವಾರಿ ।
ದುಃಖಾನಿ ಮನುಜಜನ್ಮನಿ ಪ್ರಾಪ್ತೋऽಸಿ ಅನಂತಕಂ ಕಾಲಂ ॥೧೧॥

ಅರ್ಥ ಃ- ಎಲೈಜೀವನೇ ! ನೀನು ಮನುಷ್ಯಗತಿಯಲ್ಲಿ ಅನಂತಕಾಲದವರೆಗೆ ಆಗಂತುಕ ಎಂದರೆ ಅಕಸ್ಮಾತ್ ವಜ್ರಪಾತ ಮೊದಲಾದವು ಬಂದು ಬೀಳುವುದು, ಮಾನಸಿಕ ಎಂದರೆ ಮನಸ್ಸಿನಲ್ಲಿಯೇ ಆಗುವಂಥ ವಿಷಯಗಳ ಇಚ್ಛೆಯಾಗುವುದು ಮತ್ತು ಅದಕ್ಕೆ ಅನುಸರಿಸಿ ದೊರಕದಿರುವುದು, ಸಹಜ ಎಂದರೆ ತಾಯಿ-ತಂದೆಗಳಿಂದ

---

ಶಾರೀರಿಕ ಮಾನಸಿಕ ಆಗಂತುಕ ಮೇಣ್ಸಹಜವೆಂಬೀ ನಾಲ್ಕು ಪ್ರಕಾರದ ।
ಕ್ರೂರ ದುಃಖಗಳನೀನನಂತಕಾಲ ಪಡೆದಿರುವೆ ಮನುಷ್ಯಜನ್ಮದಲಿ ॥೧೧॥

---

೧ ಮುದ್ರಿತ ಸಂಸ್ಕೃತ ಪ್ರತಿಯಲ್ಲಿ 'ವೇಯಣ'ದ ಸಂಸ್ಕೃತವು 'ವ್ಯಂಜನ' ಇದೆ.

೨ [ದೇಹಾದಿಗಳಲ್ಲಿ ಅಥವಾ ಬಾಹ್ಯ ಸಂಯೋಗಗಳಿಂದ ದುಃಖವಿಲ್ಲ, ಆದರೆ ತನ್ನ ಅಪರಾಧರೂಪ ಮಿಥ್ಯಾತ್ವ ರಾಗಾದಿಗಳ ದೋಷದಿಂದಲೇ ದುಃಖವಾಗುತ್ತದೆ. ಇಲ್ಲಿ ನಿಮಿತ್ತದಿಂದ ಉಪಾದಾನದ-ಯೋಗ್ಯತೆಯ ಜ್ಞಾನ ಮಾಡಿಸುವ ಸಲುವಾಗಿ ಉಪಚರಿತ ವ್ಯವಹಾರ ನಯದಿಂದ ಈ ಕಥನವಿದೆ. ]

ಸ್ವಾಭಾವಿಕವಾಗಿಯೇ ಉತ್ಪನ್ನವಾಗುವ ಹಾಗೂ ರಾಗ-ದ್ವೇಷಾದಿಗಳಿಂದ ವಸ್ತುವನ್ನು ಇಷ್ಟಾನಿಷ್ಟವಾಗಿ ಮನ್ನಿಸುವುದರಿಂದಾಗುವ ದುಃಖ ಶಾರೀರಿಕ ಎಂದರೆ ವ್ಯಾಧಿ, ರೋಗಾದಿಗಳು ಹಾಗೂ ಪರಕೃತ ಛೇದನ, ಭೇದನ ಮೊದಲಾದವುಗಳಿಂದಾದ ದುಃಖ ಹೀಗೆ ಇವು ನಾಲ್ಕುಪ್ರಕಾರದ ಮತ್ತು ಚಕಾರದಿಂದ ಇವನ್ನು ಆದಿಯಾಗಿ ಸ್ವೀಕರಿಸಿ ಅನೇಕ ಪ್ರಕಾರದ ದುಃಖ ಪಡೆದಿದ್ದಾನೆ, ॥೧೧॥

ಈಗ ದೇವಗತಿಯಲ್ಲಿನ ದುಃಖಗಳನ್ನು ಹೇಳುತ್ತಾರೆ, -

**ಸುರಣಿಲಯೇಸು ಸುರಚ್ಛರವಿಓಯಕಾಲೇ ಯ ಮಾಣಸಂ ತಿವ್ವಂ ।**
**ಸಂಪತ್ತೋ ಸಿ ಮಹಾಜಸ ದುಕ್ಖಂ ಸುಹಭಾವಣಾರಹಿಓ ॥೧೨॥**

**ಸುರನಿಲಯೇಷು ಸುರಾಪ್ಸರಾವಿಯೋಗಕಾಲೇ ಚ ಮಾನಸಂ ತೀವ್ರಮ್ ।**
**ಸಂಪ್ರಾಪ್ತೋಽಸಿ ಮಹಾಯಶ ! ದುಃಖಂ ಶುಭಭಾವನಾರಹಿತಃ ॥೧೨॥**

ಅರ್ಥ :- ಎಲೈ ಮಹಾಶಯನೇ ! ನೀನು ಸುರನಿಲಯೇಷು ಎಂದರೆ ದೇವಲೋಕದಲ್ಲಿ ಸುರಾಪ್ಸರೆ ಎಂದರೆ ಪ್ರೀತಿಯದೇವ ಹಾಗೂ ಪ್ರೀತಿಯ ಅಪ್ಸರೆಯ ವಿಯೋಗ ಕಾಲದಲ್ಲಿ ಅವರ ವಿಯೋಗ ಸಂಬಂಧದ ದುಃಖ ಮತ್ತು ಇಂದ್ರ ಮೊದಲಾದ ದೊಡ್ಡ ಋದ್ಧಿಧಾರಕರನ್ನು ನೋಡಿ ತಮ್ಮನ್ನು ಕೀಳಾಗಿ ಮನ್ನಿಸುವ ಮಾನಸಿಕ ತೀವ್ರ ದುಃಖಗಳನ್ನು ಶುಭ ಭಾವನೆಯಿಂದ ರಹಿತನಾಗಿ ಪಡೆದಿರುವೆ.

ಭಾವಾರ್ಥ :- ಇಲ್ಲಿ 'ಮಹಾಯಶ'ನೆಂದು ಸಂಬೋಧಿಸಲಾಗಿದೆ. ಇದರ ಆಶಯವೇನೆಂದರೆ - ಆ ಮುನಿಯು ನಿರ್ಗ್ರಂಥ ಲಿಂಗವನ್ನು ಧಾರಣ ಮಾಡಿದರೂ ಮತ್ತು ದ್ರವ್ಯಲಿಂಗಿಮುನಿಯ ಸಮಸ್ತ ಕ್ರಿಯೆಗಳನ್ನು ಮಾಡಿದರೂ ಕೂಡ ಅವನು ಆತ್ಮನ ಸ್ವರೂಪವಾದ ಶುದ್ಧೋಪಯೋಗದ ಸನ್ಮುಖವಾಗದಿದ್ದರೆ ಅವನಿಗೆ ನೀನು ಮುನಿಯಾಗಿಯಂತೂ ದೊಡ್ಡ ಕಾರ್ಯ ಮಾಡಿದೆ, ನಿನ್ನ ಯಶಸ್ಸು ಲೋಕದಲ್ಲಿ ಪ್ರಸಿದ್ಧವಾಯಿತು, ಆದರೆ ಒಳ್ಳೆಯ ಭಾವನೆ ಎಂದರೆ ಶುದ್ಧಾತ್ಮತತ್ತ್ವದ ಅಭ್ಯಾಸವಿಲ್ಲದೆ ತಪಶ್ಚರ್ಯಾದಿಗಳನ್ನು ಮಾಡಿ ದೇವನೂ ಆಗಿರುವೆ, ಆದರೆ ಅಲ್ಲಿಯೂ ವಿಷಯಗಳ ಲೋಭಿಯಾಗಿ ಮಾನಸಿಕ ದುಃಖದಿಂದಲೇ ತಪ್ತಾಯಮಾನನಾದೆಯೆಂದು ಉಪದೇಶವಿದೆ. ॥೧೨॥

ಈಗ ಶುಭ ಭಾವನೆಯಿಂದ ರಹಿತವಾದ ಅಶುಭಭಾವನೆಯ ನಿರೂಪಣೆ ಮಾಡುತ್ತಾರೆ, -

**ಕಂದಪ್ಪಮಾಇಯಾಓ ಪಂಚ ವಿ ಅಸುಹಾದಿಭಾವಣಾಈ ಯ ।**
**ಭಾಊಣ ದವ್ವಲಿಂಗೀ ಪಹೀಣದೇವೋ ದಿವೇ ಜಾಓ ॥೧೩॥**

---

**ಓ ಮಹಾಶಯ ! ಸುರಲೋಕದಲಿ ಸುರಾಪ್ಸರೆಯರ ವಿಯೋಗಕಾಲದಲಿ ।**
**ಆ ಮಾನಸಿಕ ತೀವ್ರದುಃಖ ಶುಭಭಾವನಾರಹಿತನಾಗಿ ಪಡೆದಿರುವೆ ॥೧೨॥**

**ಜೀವ ದ್ರವ್ಯಲಿಂಗಿಯಾಗಿ ಕಾಂದರ್ಪೀ ಮೊದಲಾದೈದು ಅಶುಭ ಭಾವನೆಗಳ ।**
**ಭಾವಿಸಿ ಸ್ವರ್ಗಲೋಕದಲಿ ಕಿಲ್ವಿಷಾದಿ ನೀಚದೇವನಾಗಿ ಜನಿಸಿದನು ॥೧೩॥**

ಕಾಂದರ್ಪೀತ್ಯಾದೀಃ ಪಂಚಾಪಿ ಅಶುಭಾದಿಭಾವನಾಃ ಚ ।
ಭಾವಯಿತ್ವಾ ದ್ರವ್ಯಲಿಂಗೀ ಪ್ರಹೀಣದೇವಃ ದಿವಿ ಜಾತಃ ॥೧೩॥

ಅರ್ಥ ಃ- ಎಲೈ ಜೀವನೇ ! ನೀನು ದ್ರವ್ಯಲಿಂಗಿ ಮುನಿಯಾಗಿ ಕಾಂದರ್ಪೀ ಮೊದಲಾದ ಐದು ಅಶುಭ ಭಾವನೆಗಳನ್ನು ಭಾವಿಸಿ ಪ್ರಹೀಣದೇವ ಎಂದರೆ ಕೀಳುದೇವನಾಗಿ ಸ್ವರ್ಗದಲ್ಲಿ ಉತ್ಪನ್ನನಾಗಿರುವೆ.

ಭಾವಾರ್ಥ ಃ- ಕಾಂದರ್ಪೀ, ಕಿಲ್ವಿಷಿಕೀ, ಸಂಮೋಹೀ, ದಾನವೀ ಮತ್ತು ಅಭಿಯೋಗಿಕೆಯೆಂದು ಇವು ಐದು ಅಶುಭಭಾವಗಳಿವೆ. ನಿರ್ಗ್ರಂಥ ಮುನಿಯಾಗಿ ಸಮ್ಯಕ್ತ್ವಭಾವನೆಯಿಲ್ಲದೆ ಈ ಅಶುಭ ಭಾವನೆಗಳನ್ನು ಭಾವಿಸಿದಾಗ ಕಿಲ್ವಿಷ ಮೊದಲಾದ ಕೀಳು ದೇವನಾಗಿ ಮಾನಸಿಕ ದುಃಖಕ್ಕೆ ಪ್ರಾಪ್ತನಾಗುತ್ತಾನೆ. ॥೧೩॥

ದ್ರವ್ಯಲಿಂಗಿಗಳು ಪಾರ್ಶ್ವಸ್ಥ ಮೊದಲಾದವರಿರುತ್ತಾರೆ ಈಗ ಅವರನ್ನು ಹೇಳುತ್ತಾರೆ, -

ಪಾಸತ್ಥಭಾವಣಾಓ ಅಣಾಇಕಾಲಂ ಅಣೇಯವಾರಾಓ ।
ಭಾಊಣ ದುಹಂ ಪತ್ತೋ ಕುಭಾವಣಾಭಾವಬೀಏಹಿಂ ॥೧೪॥

ಪಾರ್ಶ್ವಸ್ಥಭಾವನಾಃ ಅನಾದಿಕಾಲಂ ಅನೇಕವಾರಾನ್ ।
ಭಾವಯಿತ್ವಾ ದುಃಖಂ ಪ್ರಾಪ್ತಃ ಕುಭಾವನಾಭಾವಬೀಜೈಃ ॥೧೪॥

ಅರ್ಥ ಃ- ಎಲೈ ಜೀವನೇ ! ನೀನು ಪಾರ್ಶ್ವಸ್ಥ ಭಾವನೆಯಿಂದ ಅನಾದಿಕಾಲದಿಂದ ಹಿಡಿದು ಅನಂತ ಬಾರಿ ಭಾವಿಸಿ ದುಃಖವನ್ನು ಪ್ರಾಪ್ತಮಾಡಿಕೊಂಡಿರುವೆ. ಕುಭಾವನೆಯಿಂದ ದುಃಖ ಪಡೆದಿರುವೆ ಎಂದರೆ ದುಷ್ಟ ಭಾವನೆಯ ಭಾವಗಳೇ ದುಃಖದ ಬೀಜಗಳಾದವು, ಅವುಗಳಿಂದ ದುಃಖ ಪಡೆದಿರುವೆ.

ಭಾವಾರ್ಥ ಃ- ಮುನಿಯೆನಿಸಿಕೊಳ್ಳುವುದು ಮತ್ತು ವಸತಿಕೆಯನ್ನು ಕಟ್ಟಿಸಿ ಆಜೀವಿಕೆ ಮಾಡಿದರೆ ಅವನನ್ನು ಪಾರ್ಶ್ವಸ್ಥ ವೇಷಧಾರಿಯೆಂದು ಹೇಳುತ್ತಾರೆ. ಕಷಾಯವುಳ್ಳವನಾಗಿ ವ್ರತಾದಿಗಳಿಂದ ಭ್ರಷ್ಟನಿದ್ದರೆ, ಸಂಘದ ಅವಿನಯ ಮಾಡಿದರೆ ಆ ವೇಷಧಾರಿಯನ್ನು ಕುಶೀಲನೆಂದು ಹೇಳುತ್ತಾರೆ. ವೈದ್ಯಕೀಯ ಜ್ಯೋತಿಷ್ಯ ವಿದ್ಯೆ ಮಂತ್ರದಿಂದ ಆಜೀವಿಕೆ ಮಾಡಿದರೆ, ರಾಜಾದಿಕರ ಸೇವಕನಾದರೆ ಇಂಥ ವೇಷಧಾರಿಯನ್ನು ಸಂಸಕ್ತನೆಂದು ಹೇಳುತ್ತಾರೆ. ಜಿನಸೂತ್ರದಿಂದ ಪ್ರತಿಕೂಲ, ಚಾರಿತ್ರದಿಂದ ಭ್ರಷ್ಟ, ಆಲಸಿಯಾಗಿರುವಂಥ ವೇಷಧಾರಿಯನ್ನು 'ಅವಸನ್ನ'ನೆಂದು ಹೇಳುತ್ತಾರೆ. ಗುರುಗಳ ಆಶ್ರಯವನ್ನು ಬಿಟ್ಟುಕೊಟ್ಟು ಏಕಾಕಿಯಾಗಿ ಸ್ವಚ್ಛಂದ ಪ್ರವರ್ತಿಸುವಂಥ, ಜಿನಾಜ್ಞೆಯ ಲೋಪ ಮಾಡುವಂಥ ವೇಷಧಾರಿಯನ್ನು 'ಮೃಗಚಾರಿ'ಯೆಂದು ಹೇಳುತ್ತಾರೆ. ಇವರ ಭಾವನೆ ಭಾವಿಸುವವನು ದುಃಖಕ್ಕೇನೇ ಪ್ರಾಪ್ತನಾಗುತ್ತಾನೆ. ॥೧೪॥

ಹೀಗೆ ದೇವನಾಗಿ ಮಾನಸಿಕ ದುಃಖ ಪಡೆಯುತ್ತಾನೆಂದು ಹೇಳುತ್ತಾರೆ, -

---

ಜೀವ ಪಾರ್ಶ್ವಸ್ಥಭಾವನೆಯನು ಅನಾದಿಕಾಲದಿಂ ಪಿಡಿದು ಅನೇಕಬಾರಿ ।
ಭಾವಿಸಿ ದುಃಖವನು ಪಡೆದಿರುವೆ ಕುಭಾವನಾಭಾವರೂಪ ಬೀಜದಿಂದ ॥೧೪॥

ದೇವಾಣ ಗುಣ ವಿಹೂಈ ಇಡ್ಢೀ ಮಾಹಪ್ಪ ಬಹುವಿಹಂ ದಟ್ಟುಂ ।
ಹೋಊಣ ಹೀಣದೇವೋ ಪತ್ತೋ ಬಹು ಮಾಣಸಂ ದುಕ್ಖಂ ॥೧೫॥

ದೇವಾನಾಂ ಗುಣಾನ್ ವಿಭೂತೀಃ ಋದ್ಧೀಃ ಮಾಹಾತ್ಮ್ಯಂ ಬಹುವಿಧಂ ದೃಷ್ಟ್ವಾ ।
ಭೂತ್ವಾ ಹೀನದೇವಃ ಪ್ರಾಪ್ತಃ ಬಹು ಮಾನಸಂ ದುಃಖಮ್ ॥೧೫॥

ಅರ್ಥ :- ಎಲೈ ಜೀವನೇ ! ನೀನು ಹೀನದೇವನಾಗಿ ಅನ್ಯ ಮಹರ್ದ್ಧಿಕ ದೇವಗಳ ಗುಣ, ವಿಭೂತಿ ಮತ್ತು ಋದ್ಧಿಯ ಅನೇಕ ಪ್ರಕಾರ ಮಾಹಾತ್ಮ್ಯವನ್ನು ನೋಡಿ ಬಹಳಷ್ಟು ಮಾನಸಿಕ ದುಃಖಕ್ಕೆ ಪ್ರಾಪ್ತನಾಗಿರುವೆ.

ಭಾವಾರ್ಥ :- ಸ್ವರ್ಗದಲ್ಲಿ ಹೀನದೇವನಾಗಿ ದೊಡ್ಡ ಋದ್ಧಿಧಾರಿ ದೇವಗಳ ಅಣಿಮಾದಿ ಗುಣಗಳ ವಿಭೂತಿಯನ್ನು ನೋಡಿದಾಗ ಹಾಗೂ ದೇವಾಂಗನೆ ಮೊದಲಾದ ಅಧಿಕ ಪರಿವಾರವನ್ನು ನೋಡಿದಾಗ ಮತ್ತು ಆಜ್ಞೆ, ಐಶ್ವರ್ಯ ಮೊದಲಾದವುಗಳ ಮಾಹಾತ್ಮ್ಯವನ್ನು ನೋಡಿದಾಗ ಓಹೋ, ನಾನು ಪುಣ್ಯರಹಿತನಿದ್ದೇನೆ, ಇವರು ಅಧಿಕ ಪುಣ್ಯವುಳ್ಳವರಿದ್ದಾರೆ, ಇವರಿಗೆ ಇಂಥ ವಿಭೂತಿ ಮಾಹಾತ್ಮ್ಯದ ಋದ್ಧಿಯಿದೆಯೆಂದು ಮನಸ್ಸಿನಲ್ಲಿ ವಿಚಾರ ಮಾಡುವುದರಿಂದ ಮಾನಸಿಕ ದುಃಖವಾಗುತ್ತದೆ. ॥೧೫॥

ಅಶುಭ ಭಾವನೆಯಿಂದ ಕೀಳುದೇವಗಳಾಗಿ ಇಂಥ ದುಃಖ ಪಡೆಯುತ್ತಾರೆಂದು ಹೇಳಿ ಈ ಕಥನದ ಸಂಕೋಚ ಮಾಡುತ್ತಾರೆ, –

ಚಉವಿಹವಿಕಹಾಸತ್ತೋ ಮಹಮತ್ತೋ ಅಸುಹಭಾವಪಯಡತ್ಥೋ ।
ಹೋಊಣ ಕುದೇವತ್ತಂ ಪತ್ತೋ ಸಿ ಅಣೇಯವಾರಾಓ ॥೧೬॥

ಚತುರ್ವಿಧವಿಕಥಾಸಕ್ತಃ ಮದಮತ್ತಃ ಅಶುಭಭಾವಪ್ರಕಟಾರ್ಥಃ ।
ಭೂತ್ವಾ ಕುದೇವತ್ವಂ ಪ್ರಾಪ್ತಃ ಅಸಿ ಅನೇಕವಾರಾನ್ ॥೧೬॥

ಅರ್ಥ :- ಎಲೈ ಜೀವನೇ ! ನೀನು ನಾಲ್ಕು ಪ್ರಕಾರದ ವಿಕಥೆಗಳಲ್ಲಿ ಆಸಕ್ತನಾಗಿ, ಮದದಿಂದ ಮತ್ತನಾಗಿ ಮತ್ತು ಅದರ ಅಶುಭ ಭಾವನೆಯದೇ ಸ್ಪಷ್ಟ ಪ್ರಯೋಜನವಿರುವಂಥವನಾಗಿ ಅನೇಕ ಬಾರಿ ಕುದೇವತನಕ್ಕೆ ಪ್ರಾಪ್ತನಾಗಿರುವೆ.

---

ದೇವಗಳ ಗುಣ ವಿಭೂತಿಋದ್ಧಿಯ ಬಹುವಿಧದ ಮಾಹಾತ್ಮ್ಯವನು ನೋಡಿ ।
ಜೀವ ತಾ ಹೀನದೇವನಾಗಿ ಬಹಳಷ್ಟು ಮಾನಸಿಕ ದುಃಖ ಪಡೆದಿಹನು ॥೧೫॥

ಆ ನಾಲ್ಕು ವಿಧದ ವಿಕಥೆಗಳಲಾಸಕ್ತನಾಗಿ ಮೇಣ್ಮದದಿಂ ಆಸಕ್ತನಾಗಿ ।
ಅನೇಕಬಾರಿ ಕುದೇವತ್ವಪಡೆದೆ ಅಶುಭ ಭಾವದಿಂದ ಪರಿಣಮಿಸಿ ॥೧೬॥

ಭಾವಾರ್ಥ :- ಸ್ತ್ರೀಕಥೆ, ಭೋಜನಕಥೆ, ದೇಶಕಥೆ ಮತ್ತು ರಾಜಕಥೆಯೆಂದು ಈ ನಾಲ್ಕು ವಿಕಥೆಗಳಲ್ಲಿ ಆಸಕ್ತನಾಗಿ ಅಲ್ಲಿ ಪರಿಣಾಮವನ್ನು ತೊಡಗಿಸಿದೆ ಮತ್ತು ಜಾತಿ ಮೊದಲಾದ ಎಂಟು ಮದಗಳಿಂದ ಉನ್ಮತ್ತವಾಗುವಂಥ ಅಶುಭ ಭಾವನೆಯ ಪ್ರಯೋಜನವನ್ನೇ ಧಾರಣ ಮಾಡಿ ಅನೇಕ ಬಾರಿ ಕೀಳು ದೇವತನಕ್ಕೆ ಪ್ರಾಪ್ತನಾಗಿರುವೆ, ಅಲ್ಲಿ ಮಾನಸಿಕ ದುಃಖವನ್ನು ಪಡೆದಿರುವೆ.

ವಿಕಥೆಗಳಿಂದಂತೂ ನೀಚ ದೇವ ಕೂಡ ಆಗುವುದಿಲ್ಲ, ಆದರೆ ಇಲ್ಲಿ ಮುನಿಗೆ ಉಪದೇಶವಿದೆ, ಅವನು ಮುನಿಪದ ಧಾರಣ ಮಾಡಿ ಸ್ವಲ್ಪ ತಪಶ್ಚರ್ಣಾದಿಗಳನ್ನು ಮಾಡುವನು ಮತ್ತು ವೇಷದಲ್ಲಿ ವಿಕಥೆ ಮೊದಲಾದುವಲ್ಲಿ ಆಸಕ್ತನಾದಾಗ ನೀಚದೇವನಾಗುತ್ತಾನೆಂಬ ವಿಶೇಷವನ್ನು ಇಲ್ಲಿ ತಿಳಿದುಕೊಳ್ಳುವುದು ಯೋಗ್ಯವಾಗಿದೆ. ||೧೬||

ಹೀಗೆ ಕುದೇವಯೋನಿ ಪಡೆದು ಅಲ್ಲಿಂದ ಚ್ಯುತವಾಗಿ ಮನುಷ್ಯ ತಿರ್ಯಂಚನಾಗುವಾಗ ಅಲ್ಲಿ ಗರ್ಭದಲ್ಲಿ ಬಂದಾಗಿನ ಅವಸ್ಥೆಯನ್ನು ಈಗ ಹೇಳುತ್ತಾರೆ, -

**ಅಸುಈಬೀಹತ್ಥೇಹಿ ಯ ಕಲಿಮಲಬಹುಲಾಹಿ ಗಬ್ಭವಸಹೀಹಿ|**
**ವಸಿಓ ಸಿ ಚಿರಂ ಕಾಲಂ ಅಣೇಯಜಣಣೀಣ ಮುಣಿಪವರ ||೧೭||**

**ಅಶುಚಿಬೀಭತ್ಸಾಸು ಯ ಕಲಿಮಲಬಹುಲಾಸು ಗರ್ಭವಸತಿಷು ।**
**ಉಷಿತೋಽಸಿ ಚಿರಂ ಕಾಲಂ ಅನೇಕಜನನೀನಾಂ ಮುನಿಪ್ರವರ ! ||೧೭||**

ಅರ್ಥ :- ಎಲೈ ಮುನಿಪ್ರವರನೇ ! ನೀನು ಕುದೇವ ಯೋನಿಯಿಂದ ಚ್ಯುತನಾಗಿ ಅನೇಕ ಮಾತೆಯರ ಗರ್ಭದ ನಿವಾಸದಲ್ಲಿ ಅಧಿಕಕಾಲ ವಾಸಿಸಿದೆ. ಆ ನಿವಾಸವು ಅಶುಚಿ ಎಂದರೆ ಅಪವಿತ್ರವಿದೆ, ಬೀಭತ್ಸ(ಅಸಹ್ಯಕರ)ವಿದೆ ಮತ್ತು ಅದರಲ್ಲಿ ಕಲಿಮಲವು ಅಧಿಕವಿದೆ ಎಂದರೆ ಪಾಪರೂಪವಾದ ಮಲಿನ ಮಲದ ಅಧಿಕತೆಯಿದೆ.

ಭಾವಾರ್ಥ :- ಇಲ್ಲಿ 'ಮುನಿಪ್ರವರ'ವೆಂಬ ಸಂಬೋಧನವಿದೆ ಅದು ಮುಖ್ಯರೂಪದಿಂದ ಮುನಿಗಳಿಗೆ ಉಪದೇಶವಿದೆ. ಮುನಿಪದವನ್ನು ಸ್ವೀಕರಿಸಿ ಮುನಿಗಳಲ್ಲಿ ಮುಖ್ಯನೆನಿಸಿಕೊಳ್ಳುವುದು ಮತ್ತು ಶುದ್ಧಾತ್ಮರೂಪ ನಿಶ್ಚಯಚಾರಿತ್ರದ ಸನ್ಮುಖನಾಗದವನಿಗೆ ಹೀಗೆ ಹೇಳುತ್ತಾರೆ - ಬಾಹ್ಯದ್ರವ್ಯಲಿಂಗವನ್ನಂತೂ ಅದೆಷ್ಟೋ ಬಾರಿ ಧಾರಣ ಮಾಡಿ ಚತುರ್ಗತಿಗಳಲ್ಲಿಯೇ ಭ್ರಮಣ ಮಾಡಿದೆ, ದೇವನಾದರೂ ಕೂಡ ಅಲ್ಲಿಂದ ಚ್ಯುತನಾಗಿ ಈ ಪ್ರಕಾರದ ಮಲಿನವಾದ ಗರ್ಭವಾಸದಲ್ಲಿ ಬಂದೆ, ಅಲ್ಲಿ ಕೂಡ ಅದೆಷ್ಟೋ ಬಾರಿ ಉಳಿದಿರುವೆ. ||೧೭||

ಈ ಪ್ರಕಾರದ ಗರ್ಭವಾಸದಿಂದ ಹೊರಹೊರಟು ಜನ್ಮ ಪಡೆದು ಅನೇಕ ಮಾತೆಯರ ಹಾಲು ಕುಡಿದಿರುವೆಯೆಂದು ಈಗ ಪುನಃ ಹೇಳುತ್ತಾರೆ, -

---

**ಅಶುಚಿ ಬೀಭತ್ಸ ಕಲಿಮಲಪರಿಪೂರ್ಣವಾದ ಗರ್ಭಾವಾಸದಲಿ ನೀನು ।**
**ವಾಸಿಸಿದೆ ಚಿರಕಾಲ ಅನೇಕ ಜನನಿಯರಲಿ ಎಲೆ ಮುನಿಪ್ರವರ ! ||೧೭||**

**ಪೀಓ ಸಿ ಥಣಚ್ಛೀರಂ ಅಣಂತಜಮ್ಮಂತರಾಇಂ ಜಣಣೀಣಂ ।**
**ಅಣ್ಣಾಣ್ಣಾಣ ಮಹಾಜಸ ಸಾಯರಸಲಿಲಾದು ಅಹಿಯಯರಂ ॥೧೮॥**

**ಪೀತೋಽಸಿ ಸ್ತನಕ್ಷೀರಂ ಅನಂತಜನ್ಮಾಂತರಾಣಿ ಜನನೀನಾಮ್ ।**
**ಅನ್ಯಾಸಾಮನ್ಯಾಸಾಂ ಮಹಾಯಶ ! ಸಾಗರಸಲಿಲಾತ್ ಅಧಿಕತರಮ್ ॥೧೮॥**

ಅರ್ಥ ಃ- ಎಲೈ ಮಹಾಶಯನೇ ! ಆ ಪೂರ್ವೋಕ್ತ ಗರ್ಭವಾಸದಲ್ಲಿ ಅನ್ಯ-ಅನ್ಯ ಜನ್ಮಗಳಲ್ಲಿ ಅನ್ಯ-ಅನ್ಯ ಮಾತೆಯರ ಸ್ತನದ ಹಾಲನ್ನು ನೀನು ಸಮುದ್ರದ ಜಲಕ್ಕಿಂತಲೂ ಅಧಿಕ ಅತಿಶಯಕರವಾಗಿ ಕುಡಿದಿರುವೆ.

ಭಾವಾರ್ಥ ಃ- ಜನ್ಮ-ಜನ್ಮಗಳಲ್ಲಿ ಬೇರೆ-ಬೇರೆ ಮಾತೆಯರ ಮೊಲೆ ಹಾಲನ್ನು ಎಷ್ಟು ಕುಡಿದಿರುವೆಯೆಂದರೆ ಅದನ್ನೆಲ್ಲ ಏಕತ್ರ ಮಾಡಿದರೆ ಸಮುದ್ರದ ಜಲಕ್ಕಿಂತಲೂ ಅಧಿಕ ಅತಿಶಯಕರವಾಗಿ ಹೋಗುವುದು. ಇಲ್ಲಿ ಅತಿಶಯದ ಅರ್ಥವನ್ನು ಅನಂತಗುಣಿತವೆಂದು ತಿಳಿಯಬೇಕು, ಏಕೆಂದರೆ ಅನಂತಕಾಲದ್ದು ಏಕತ್ರಗೊಳಿಸಿರುವ ಹಾಲು ಅನಂತಗುಣಿತವಾಗಿ ಹೋಗುತ್ತದೆ. ॥೧೭॥

ಜನ್ಮ-ಪಡೆದು ಮರಣ ಹೊಂದಿದಾಗ ತಾಯಿಯ ರೋದನದ ಅಶ್ರುಪಾತವು ಕೂಡ ಇದರಷ್ಟೇ ಇದೆಯೆಂದು ಈಗ ಹೇಳುತ್ತಾರೆ, -

**ತುಹ ಮರಣೇ ದುಕ್ಖೇಣ ಅಣ್ಣಣ್ಣಾಣಂ ಅಣೇಯಜಣಣೀಯಂ ।**
**ರುಣ್ಣಾಣ ಣಯಣಣೀರ ಸಾಯರಸಲಿಲಾದು ಅಹಿಯಯರಂ ॥೧೯॥**

**ತವ ಮರಣೇ ದುಃಖೇನ ಅನ್ಯಾಸಾಮನ್ಯಾಸಾಂ ಅನೇಕಜನನೀನಾಮ್ ।**
**ರುದಿತಾನಾಂ ನಯನನೀರಂ ಸಾಗರಸಲಿಲಾತ್ ಅಧಿಕತರಮ್ ॥೧೯॥**

ಅರ್ಥ ಃ- ಎಲೈ ಮುನಿಯೇ ! ನೀನು ಮಾತೆಯ ಗರ್ಭದಲ್ಲಿದ್ದುಕೊಂಡು ಜನ್ಮ ಪಡೆದು ಮರಣ ಹೊಂದಿದಾಗ ಆ ನಿನ್ನ ಮರಣದಿಂದ ಅನ್ಯ-ಅನ್ಯ ಜನ್ಮದಲ್ಲಿ ಅನ್ಯ-ಅನ್ಯ ಮಾತೆಯ ರೋದನದ ಕಣ್ಣೀರನ್ನು ಏಕತ್ರಗೊಳಿಸಿದರೆ ಅದು ಒಂದು ಸಮುದ್ರದ ಜಲಕ್ಕಿಂತಲೂ ಅತಿಶಯಕರ ಅಧಿಕಗುಣಿತ ಎಂದರೆ ಅನಂತ ಗುಣಿತವಾಗುವುದು. ॥೧೯॥

ಸಂಸಾರದಲ್ಲಿ ಎಷ್ಟು ಸಲ ಜನ್ಮ ಪಡೆದಿದೆ ಅವುಗಳಲ್ಲಿನ ಕೇಶ, ನಖ, ಕತ್ತರಿಸಿದ ನಲಿಕೆಗಳನ್ನೆಲ್ಲ ರಾಶಿಮಾಡಿದರೆ ಅದು ಮೇರುವಿಗಿಂತಲೂ ಅಧಿಕರಾಶಿಯಾಗುವುದೆಂದು ಈಗ ಮತ್ತೆ ಹೇಳುತ್ತಾರೆ, -

---

ನೀನು ಅನಂತ ಜನ್ಮಾಂತರಗಳಲಿ ಭಿನ್ನ ಭಿನ್ನ ಜನನಿಯರುಗಳಿಂದ ।
ಸ್ತನಕ್ಷೀರ ಕುಡಿದಿರುವೆಲೆ ಮಹಾಶಯ ! ಸಾಗರಜಲದಿಂಧಿಕವಾಗಿ ॥೧೮॥

ನಿನ್ನ ಮರಣ ದುಃಖದಿಂದನ್ಯ-ಅನ್ಯ ಅನೇಕ ಜನನಿಯರ ರೋದನದ ।
ಬೆನ್ನೀರನೇಕತ್ರ ಮಾಡಿದರೆ ಸಾಗರಸಲಿಲದಿಂದಧಿಕವಾಗುವವು ॥೧೯॥

**ಭವಸಾಯರೇ ಅಣಂತೇ ಛಿಣ್ಣುಜ್ಜಿಯ ಕೇಸಣಹರಣಾಲಟ್ಠೀ ।
ಪುಂಜಇ ಜಇ ಕೋ ವಿ ಜಏ ಹವದಿ ಯ ಗಿರಿಸಮಧಿಯಾ ರಾಸೀ ॥೨೦॥**

**ಭವಸಾಗರೇ ಅನಂತೇ ಛಿನ್ನೋಜ್ಝಿತಾನಿ ಕೇಶನಖರನಾಲಾಸ್ಥೀನಿ ।
ಪುಂಜಯತಿ ಯದಿ ಕೋಽಪಿ ದೇವಃ ಭವತಿ ಚ ಗಿರಿಸಮಾಧಿಕಃ ರಾಶಿಃ ॥೨೦॥**

ಅರ್ಥ ಃ- ಎಲೈ ಮುನಿಯೇ ಈ ಅನಂತ ಸಂಸಾರ ಸಾಗರದಲ್ಲಿ ಜನ್ಮ ಪಡೆದವುಗಳಲ್ಲಿನ ಕೇಶ, ನಖ, ನಲಿಕೆ ಮತ್ತು ಕತ್ತರಿಸಿದ-ಮುರಿದ ಅಸ್ಥಿಗಳನ್ನೆಲ್ಲ ಒಂದು ವೇಳೆ ಯಾವನಾದರೂ ದೇವನು ರಾಶಿ ಮಾಡಿದರೆ ಅದು ಮೇರುಪರ್ವತಕ್ಕಿಂತಲೂ ಅಧಿಕ ರಾಶಿಯಾಗುವುದು, ಅನಂತಗುಣಿತವಾಗುವುದು. ॥೨೦॥

ಎಲೈ ಆತ್ಮನೇ ! ನೀನು ಜಲ, ಸ್ಥಳ ಮೊದಲಾದ ಸ್ಥಾನಗಳಲ್ಲಿ ಎಲ್ಲಕಡೆಗೂ ವಾಸ ಮಾಡಿರುವೆಯೆಂದು ಈಗ ಹೇಳುತ್ತಾರೆ, -

**ಜಲಥಲಸಿಹಿಪವಣಂಬರಗಿರಿಸರಿದರಿತರುವಣಾಇ[೧] ಸವ್ವತ್ಥ ।
ವಸಿಓ ಸಿ ಚಿರಂ ಕಾಲಂ ತಿಹುವಣಮಜ್ಝೇ ಅಣಪ್ಪವಸೋ ॥೨೧॥**

**ಜಲಸ್ಥಲಶಿಖಿಪವನಾಂಬರಗಿರಿಸರಿದ್ದರೀತರುವನಾದಿಷು ಸರ್ವತ್ರ ।
ಉಷಿತೋಽಸಿ ಚಿರಂ ಕಾಲಂ ತ್ರಿಭುವನಮಧ್ಯೇ ಅನಾತ್ಮವಶಃ ॥೨೧॥**

ಅರ್ಥ ಃ- ಎಲೈ ಜೀವನೇ ! ನೀನು ಜಲದಲ್ಲಿ, ಸ್ಥಲ ಎಂದರೆ ಭೂಮಿಯಲ್ಲಿ, ಶಿಖಿ ಎಂದರೆ ಅಗ್ನಿಯಲ್ಲಿ, ಪವನದಲ್ಲಿ, ಅಂಬರ ಎಂದರೆ ಆಕಾಶದಲ್ಲಿ, ಗಿರಿ ಎಂದರೆ ಪರ್ವತದಲ್ಲಿ, ಸರಿತ್ ಎಂದರೆ ನದಿಯಲ್ಲಿ, ದರೀ ಎಂದರೆ ಪರ್ವತದ ಗುಹೆಯಲ್ಲಿ, ತರು ಎಂದರೆ ವೃಕ್ಷಗಳಲ್ಲಿ, ವನಗಳಲ್ಲಿ ಮತ್ತು ಹೆಚ್ಚಿಗೇನು ಹೇಳುವುದು ಎಲ್ಲ ಸ್ಥಾನಗಳಲ್ಲಿ, ಮೂರೂ ಲೋಕಗಳಲ್ಲಿ ಅನಾತ್ಮ ವಶನಾಗಿ ಎಂದರೆ ಪರಾಧೀನನಾಗಿ ಬಹಳಷ್ಟು ಕಾಲದವರೆಗೆ ಉಳಿದಿರುವೆ ಎಂದರೆ ನಿವಾಸ ಮಾಡಿರುವೆ.

ಭಾವಾರ್ಥ ಃ- ನಿಜ ಶುದ್ಧಾತ್ಮನ ಭಾವನೆಯಿಲ್ಲದೆ ಕರ್ಮದ ವಶವರ್ತಿಯಾಗಿ ಮೂರು ಲೋಕಗಳಲ್ಲಿ ಸಮಸ್ತ ದುಃಖ ಸಹಿತ ಸರ್ವತ್ರ ನಿವಾಸಮಾಡಿರುವೆ. ॥೨೧॥

---

**ಅನಂತ ಭವಸಾಗರದಿ ತ್ಯಕ್ತ ಕೇಶ ನಖ ನಾಲ ಮೇಣಸ್ಥಿಗಳನೆಲ್ಲ।
ಆ ನಾಕಿಗನೋರ್ವ ಏಕತ್ರಮಾಡಿದರೆ ಗಿರಿಯಧಿಕರಾಶಿಯಾಗುವುದು ॥೨೦॥**

**ಜಲ ಸ್ಥಲ ಶಿಖಿ ಪವನ ಗಿರಿ ದರಿ ನದಿ ತರುವನಾದಿಗಳಲೆಲ್ಲ।
ನೆಲೆಸಿರುವೆ ಚಿರಕಾಲ ತ್ರಿಭುವನದೊಳೆಲ್ಲೆಡೆ ಅನಾತ್ಮವಶದಿಂದ ॥೨೧॥**

---

೧ 'ವಣಾಇ', 'ವಣಾಈ' ಎಂದು ಪಾಠಾಂತರವಿದೆ.

ಎಲೈ ಜೀವನೇ ! ನೀನು ಈ ಲೋಕದಲ್ಲಿ ಸಮಸ್ತ ಪುದ್ಗಲಗಳನ್ನು ಭಕ್ಷಣ ಮಾಡಿದರೂ ಕೂಡ ತೃಪ್ತನಾಗಲಿಲ್ಲವೆಂದು ಈಗ ಹೇಳುತ್ತಾರೆ, –

ಗಸಿಯಾಇಂ ಪುಗ್ಗಲಾಇಂ ಭುವಣೋದರವತ್ತಿಯಾಇಂ ಸವ್ವಾಇಂ ।
ಪತ್ತೋ ಸಿ ತೋ ಣ ತಿತ್ತಿಂ [೧]ಪುಣರುತ್ತಂ ತಾಇಂ ಭುಂಜಂತೀ ॥೨೨॥

ಗ್ರಸಿತಾಃಪುದ್ಗಲಾಃ ಭುವನೋದರವರ್ತಿನಃ ಸರ್ವೇ ।
ಪ್ರಾಪ್ತೋಽಸಿ ತನ್ನ ತೃಪ್ತಿಂ ಪುನರುಕ್ತಾನ್ ತಾನ್ ಭುಂಜಾನಃ ॥೨೨॥

ಅರ್ಥ :– ಎಲೈ ಜೀವನೇ ! ನೀನು ಈ ಲೋಕದ ಉದರದಲ್ಲಿ ವರ್ತಿಸುತ್ತಿರುವ ಆ ಪುದ್ಗಲ ಸ್ಕಂಧಗಳನ್ನೆಲ್ಲ ಗ್ರಸಿತ ಎಂದರೆ ಭಕ್ಷಣ ಮಾಡಿರುವೆ ಮತ್ತು ಅವುಗಳನ್ನೇ ಪುನರುಕ್ತ ಎಂದರೆ ಪುನಃಪುನಃಭೋಗಿಸುತ್ತಿದ್ದರೂ ಕೂಡ ನೀನು ತೃಪ್ತಿಗೆ ಪ್ರಾಪ್ತನಾಗಲಿಲ್ಲ. ॥೨೨॥

ಮತ್ತೆ ಹೇಳುತ್ತಾರೆ, –

ತಿಹುಯಣಸಲಿಲಂ ಸಯಲಂ ಪೀಯಂ ತಿಣ್ಹಾಇ ಪೀಡಿಏಣ ತುಮೇ ।
ತೋ ವಿ ಣ ತಣ್ಹಾಛೇಓ ಜಾಓ ಚಿಂತೇಹ ಭವಮಹಣಂ ॥೨೩॥

ತ್ರಿಭುವನಸಲಿಲಂ ಸಕಲಂ ಪೀತಂ ತೃಷ್ಣಾಯಾ ಪೀಡಿತೇನ ತ್ವಯಾ।
ತದಪಿ ನ ತೃಷ್ಣಾಛೇದಃ ಜಾತಃ ಚಿಂತಯ ಭವಮಥನಮ್ ॥೨೩॥

ಅರ್ಥ :– ಎಲೈ ಜೀವನೇ ! ನೀನು ಈ ಲೋಕದಲ್ಲಿ ತೃಷ್ಣೆಯಿಂದ ಪೀಡಿತನಾಗಿ ಮೂರು ಲೋಕಗಳ ಸಮಸ್ತ ಜಲವನ್ನು ಕುಡಿದರೂ ಕೂಡ ತೃಷ್ಣೆಯ ವ್ಯುಚ್ಛೇದವಾಗಲಿಲ್ಲ ಎಂದರೆ ಬಾಯಾರಿಕೆಯು ಆರಲಿಲ್ಲ. ಆದುದರಿಂದ ನೀನು ಈ ಸಂಸಾರದ ಮಥನ ಎಂದರೆ ನಿನ್ನ ಸಂಸಾರದ ನಾಶವಾಗಿ ಹೋಗುವಂತೆ ನಿಶ್ಚಯ ರತ್ನತ್ರಯದ ಚಿಂತನೆ ಮಾಡು.

---

ಭುವನೋದರದೊಳಗೊರ್ತಿಸುವ ಪುದ್ಗಲಸ್ಕಂಧಗಳನೆಲ್ಲಭಕ್ಷಿಸಿದೆ।
ಅವುಗಳನೆ ಮತ್ತೆ ಮತ್ತೆ ಭಕ್ಷಿಸಿದರುಕೂಡ ತೃಪ್ತಿಯನು ಪಡೆಲಿಲ್ಲ॥೨೨॥

ತೃಷ್ಣೆಯಿಂ ಪೀಡಿತನಾಗಿ ನೀನು ತ್ರಿಭುವನಸಲಿಲವನೆಲ್ಲ ಕುಡಿದರೂ ।
ತೃಷ್ಣೆಯದು ಬತ್ತಲಿಲ್ಲದರಿಂ ಭವಮಥನಕರವಾದುದನು ಚಿಂತಿಸು ॥೨೩॥

---

೧ ಮುದ್ರಿತ ಸಂಸ್ಕೃತ ಪ್ರತಿಯಲ್ಲಿ 'ಪುಣರುವಂ' ಪಾಠವಿದೆ ಸಂಸ್ಕೃತದಲ್ಲಿ 'ಪುನರೂಪ'ವೆಂದು ಛಾಯೆಯಿದೆ.

ಭಾವಾರ್ಥ :- ಸಂಸಾರದಲ್ಲಿ ಯಾವುದೇ ಪ್ರಕಾರದಿಂದ ತೃಪ್ತಿಯಿಲ್ಲ, ಆದುದರಿಂದ ತಮ್ಮ ಸಂಸಾರದ ಅಭಾವವಾಗುವಂಥ ಚಿಂತನೆ ಮಾಡಬೇಕು, ಎಂದರೆ ನಿಶ್ಚಯ ಸಮ್ಯಗ್ದರ್ಶನ, ಜ್ಞಾನ, ಚಾರಿತ್ರವನ್ನು ಧಾರಣ ಮಾಡಬೇಕು, ಸೇವನೆ ಮಾಡಬೇಕೆಂದು ಉಪದೇಶವಿದೆ. ||೨೩||

ಮುಂದೆ ಮತ್ತೆ ಹೇಳುತ್ತಾರೆ, -

ಗಹಿಉಜ್ಝಿಯಾಇಂ ಮುಣಿವರ ಕಲೇವರಾಇಂ ತುಮೇ ಅಣೇಯಾಇಂ |
ತಾಣಂ ಣತ್ಥಿ ಪಮಾಣಂ ಅಣಂತಭವಸಾಯರೇ ಧೀರ ||೨೪||

ಗೃಹಿತೋಜ್ಝಿತಾನಿ ಮುನಿವರ ಕಲೇವರಾಣಿ ತ್ವಯಾ ಅನೇಕಾನಿ |
ತೇಷಾಂ ನಾಸ್ತಿ ಪ್ರಮಾಣಂ ಅನಂತಭವಸಾಗರೇ ಧೀರ ! ||೨೪||

ಅರ್ಥ :- ಎಲೈ ಮುನಿವರನೇ ! ಎಲೈ ಧೀರನೇ ! ನೀನು ಈ ಅನಂತ ಭವಸಾಗರದಲ್ಲಿ ಕಳೇವರ ಎಂದರೆ ಅನೇಕ ಶರೀರಗಳನ್ನು ಧಾರಣ ಮಾಡಿರುವೆ ಮತ್ತು ಬಿಟ್ಟುಕೊಟ್ಟಿರುವೆ, ಅವುಗಳ ಅಳತೆ ಮಾಡುವಂತಿಲ್ಲ.

ಭಾವಾರ್ಥ :- ಎಲೈ ಮುನಿ ಮುಖ್ಯನೇ ! ನೀನು ಈ ಶರೀರದ ಮೇಲೆ ಏನಾದರೂ ಸ್ನೇಹ ಮಾಡಲು ಇಚ್ಛಿಸುತ್ತಿದ್ದರೆ ಈ ವಿಶಾಲ ಸಂಸಾರದಲ್ಲಿ ಎಷ್ಟು ಶರೀರಗಳನ್ನು ಬಿಟ್ಟುಕೊಟ್ಟಿರುವೆ ಮತ್ತು ಎಷ್ಟು ಶರೀರಗಳನ್ನು ಗ್ರಹಣ ಮಾಡಿರುವೆ ಅವುಗಳ ಎಣಿಕೆಯನ್ನು ಕೂಡ ಮಾಡುವ ಸಾಧ್ಯತೆಯಿಲ್ಲ. ||೨೪||

ಆ ಪರ್ಯಾಯವು ಸ್ಥಿರವಿಲ್ಲ, ಅದು ಆಯುಕರ್ಮದ ಆಧೀನವಿದೆ ಅದು ಅನೇಕ ಪ್ರಕಾರದಿಂದ ಕ್ಷೀಣವಾಗಿ ಹೋಗುತ್ತದೆಯೆಂದು ಈಗ ಹೇಳುತ್ತಾರೆ, -

ವಿಸವೇಯಣರತ್ತಕ್ಖಯಭಯಸತ್ಥಗ್ಗಹಣಸಂಕಿಲೇಸೇಣಂ |
ಆಹಾರುಸ್ಸಾಸಾಣಂ ಣಿರೋಹಣಾ ಖಿಜ್ಜಏ ಆಊ ||೨೫||

ಹಿಮಜಲಣಸಲಿಲಗುರುಯರಪವ್ವಯತರುರುಹಣಪಡಣಭಂಗೇಹಿಂ |
ರಸವಿಜ್ಜಜೋಯಧಾರಣ ಅಣಯಪಸಂಗೇಹಿಂ ವಿವಿಹೇಹಿಂ ||೨೬||

---

ಎಲೆ ಮುನಿವರ ! ನೀನು ಅನೇಕ ಶರೀರ ಗ್ರಹಿಸಿರುವೆ ಮೇಣ್ಬಿಟ್ಟಿರುವೆ |
ಎಲೆ ಧೀರ ! ಅವುಗಳ ಎಣಿಕೆಯಿಲ್ಲ ಈ ಅನಂತ ಭವಸಾಗರದಲಿ ||೨೪||

ಬಿಸಸೇವನೆ ವೇದನೆ ರಕ್ತಕ್ಷಯ ಭಯ ಶಸ್ತ್ರಘಾತ ಸಂಕ್ಲೇಶಮಲ್ಲದೆ |
ಶ್ವಾಸ ಮೇಣಾಹಾರನಿರೋಧವೆಂಬೀಕಾರಣಗಳಿಂದಾಯುಕ್ಷಯವಾಗುವುದು ||೨೫||

ಆ ಸಲಿಲ ಹಿಮ ಜ್ವಲನ ಉತ್ತುಂಗಪರ್ವತ-ತರುರೋಹಣ ಪತನದಿಂ |
ರಸವಿಜ್ಞಾನ ಯೋಗಧಾರಣ ಅನ್ಯಾಯ ಮೊದಲಾದ ವಿವಿಧ ಪ್ರಸಂಗದಿಂ||೨೬||

ಇಯ ತಿರಿಯಮಣುಯಜಮ್ಮೇ ಸುಇರಂ ಉವವಜ್ಜಿಊಣ ಬಹುವಾರಂ ।
ಅವಮಿಚ್ಚುಮಹಾದುಕ್ಖಂ ತಿವ್ವಂ ಪತ್ತೋ ಸಿ ತಂ ಮಿತ್ತ ॥೨೭॥

ವಿಷವೇದನಾರಕ್ತಕ್ಷಯಭಯಶಸ್ತ್ರಗ್ರಹಣಸಂಕ್ಲೇಶೈಃ ।
ಆಹಾರೋಚ್ಛ್ವಾಸಾನಾಂ ನಿರೋಧನಾತ್ ಕ್ಷೀಯತೇ ಆಯು ॥೨೫॥

ಹಿಮಜ್ವಲನಸಲಿಲಗುರುತರಪರ್ವತತರುರೋಹಣಪತನಭಂಗೈಃ ।
ರಸವಿದ್ಯಾಯೋಗಧಾರಣಾನಯಪ್ರಸಂಗೈಃ ವಿವಿಧೈಃ ॥೨೬॥

ಇತಿ ತಿರ್ಯಙ್ಮನುಷ್ಯಜನ್ಮನಿ ಸುಚಿರಂ ಉತ್ಪದ್ಯ ಬಹುವಾರಮ್ ।
ಅಪಮೃತ್ಯುಮಹಾದುಃಖಂ ತೀವ್ರಂ ಪ್ರಾಪ್ತೋಽಸಿ ತ್ವಂ ಮಿತ್ರ ! ॥೨೭॥

ಅರ್ಥ ಃ– ವಿಷಭಕ್ಷಣದಿಂದ, ವೇದನೆಯ ಪೀಡೆಯ ನಿಮಿತ್ತದಿಂದ, ರಕ್ತ ಎಂದರೆ ರುಧೀರದ ಕ್ಷಯದಿಂದ, ಭಯದಿಂದ, ಶಸ್ತ್ರದ ಘಾತದಿಂದ, ಸಂಕ್ಲೇಶ ಪರಿಣಾಮದಿಂದ, ಆಹಾರ ಹಾಗೂ ಶ್ವಾಸದ ನಿರೋಧದಿಂದ ಈ ಎಲ್ಲ ಕಾರಣಗಳಿಂದ ಆಯುವಿನ ಕ್ಷಯವಾಗುತ್ತದೆ.

ಹಿಮ ಎಂದರೆ ಶೀತವಶದಿಂದ, ಅಗ್ನಿಯಿಂದ, ಜಲದಿಂದ, ವಿಶಾಲ ಪರ್ವತದ ಮೇಲೆ ಹತ್ತಿ ಉರುಳಿ ಬೀಳುವುದರಿಂದ, ವಿಶಾಲ ವೃಕ್ಷವನ್ನು ಹತ್ತಿ ಕೆಳಗೆ ಉರುಳುವುದರಿಂದ, ಶರೀರ ಭಂಗವಾಗುವುದರಿಂದ, ರಸ ಎಂದರೆ ಪಾರಜ ಮೊದಲಾದ ವಿದ್ಯೆಯ ಸಂಯೋಗದಿಂದ ಧಾರಣ ಮಾಡಿ ಭಕ್ಷಣೆ ಮಾಡುವುದರಿಂದ ಮತ್ತು ಅನ್ಯಾಯದ ಕಾರ್ಯ, ಕಳವು, ವ್ಯಭಿಚಾರ ಮೊದಲಾದವುಗಳ ನಿಮಿತ್ತದಿಂದ ಹೀಗೆ ಅನೇಕ ಪ್ರಕಾರದ ಕಾರಣಗಳಿಂದ ಆಯುವಿನ ವ್ಯಚ್ಛೇದ (ನಾಶ)ವಾಗಿ ಕುಮರಣವಾಗುತ್ತದೆ.

ಆದುದರಿಂದ ಎಲೈ ಮಿತ್ರನೇ ! ಈ ಪ್ರಕಾರ ತಿರ್ಯಂಚ, ಮನುಷ್ಯ ಜನ್ಮಗಳಲ್ಲಿ ಬಹಳಷ್ಟು ಕಾಲ ಬಹಳಷ್ಟು ಬಾರಿ ಉತ್ಪನ್ನವಾಗಿ ಅಪಮೃತ್ಯು ಎಂದರೆ ಕುಮರಣದ ಸಂಬಂಧದಿಂದ ತೀವ್ರತರವಾದ ಮಹಾದುಃಖವನ್ನು ಪ್ರಾಪ್ತಮಾಡಿಕೊಂಡಿರುವೆ.

ಭಾವಾರ್ಥ ಃ– ಈ ಲೋಕದಲ್ಲಿ ಆಯುಷ್ಯವು (–ಎಲ್ಲಿ ಸೋಪಕ್ರಮ ಆಯುಷ್ಯವು ಕಟ್ಟಿದೆ ಅದೇ ನಿಯಮಕ್ಕೆ ಅನುಸರಿಸಿ) ತಿರ್ಯಂಚ–ಮನುಷ್ಯ ಪರ್ಯಾಯಗಳಲ್ಲಿ ಅನೇಕ ಕಾರಣಗಳಿಂದ ಛಿದ್ರಯುಕ್ತವಾಗುತ್ತದೆ, ಅದರಿಂದ ಕುಮರಣವಾಗುತ್ತದೆ. ಅದರಿಂದ ಮರಣದ ಸಮಯದಲ್ಲಿ ತೀವ್ರ ದುಃಖವಾಗುತ್ತದೆ ಮತ್ತು ದುಷ್ಟ ಪರಿಣಾಮಗಳಿಂದ ಮರಣವಾಗಿ ಪುನಃ ದುರ್ಗತಿಯಲ್ಲಿಯೇ ಬೀಳುತ್ತದೆ, ಈ ಪ್ರಕಾರ ಈ ಜೀವನು ಸಂಸಾರದಲ್ಲಿ ಮಹಾದುಃಖ ಪಡೆಯುತ್ತಾನೆ. ಆದುದರಿಂದ ಆಚಾರ್ಯಭಗವಂತರು ದಯಾಳುಗಳಾಗಿ ಪುನಃ ಪುನಃ ತಿಳಿಸಿ ಹೇಳುತ್ತಾರೆ ಮತ್ತು ಸಂಸಾರದಿಂದ ಮುಕ್ತವಾಗುವ ಉಪದೇಶವನ್ನು ಮಾಡುತ್ತಾರೆಂದು ತಿಳಿದುಕೊಳ್ಳಬೇಕು. ॥೨೫–೨೬–೨೭॥

---

ಎಲೆ ಮಿತ್ರ ! ಈ ರೀತಿ ತಿರ್ಯಂಚ ಮನುಷ್ಯ ಜನ್ಮದಲಿ ಜನಿಸಿ ಚಿರಕಾಲ ।
ಹಲವು ಬಾರಿ ಅಪಮೃತ್ಯುವಿನ ಮಹಾತೀವ್ರ ದುಃಖವನು ಪಡೆದೆ ನೀನು ॥೨೭॥

ಈಗ ನಿಗೋದದ ದುಃಖವನ್ನು ಹೇಳುತ್ತಾರೆ, –

**ಛತ್ತೀಸ ತಿಣ್ಣಿ ಸಯಾ ಛಾವಟ್ಠಿಸಹಸ್ಸವಾರಮರಣಾಣಿ ।**
**ಅಂತೋಮುಹುತ್ತಮಜ್ಝೇ ಪತ್ತೋ ಸಿ ನಿಗೋಯವಾಸಮ್ಮಿ ॥೨೮॥**

**ಷಟ್‌ತ್ರಿಂಶತ್ ತ್ರೀಣಿ ಶತಾನಿ ಷಟ್ಷಷ್ಟಿಸಹಸ್ರಬಾರಮರಣಾನಿ ।**
**ಅಂತರ್ಮುಹೂರ್ತಮಧ್ಯೇ ಪ್ರಾಪ್ತೋಽಸಿ ನಿಕೋತವಾಸೇ ॥೨೮॥**

ಅರ್ಥ ಃ– ಎಲೈ ಆತ್ಮನೇ ! ನೀನು ನಿಗೋದದ ವಾಸದಲ್ಲಿ ಒಂದು ಅಂತರ್ಮುಹೂರ್ತದೊಳಗೆ ಅರವತ್ತಾರು ಸಾವಿರ ಮೂನ್ನೂರಾಮೂವತ್ತಾರು ಬಾರಿ ಮರಣಕ್ಕೆ ಪ್ರಾಪ್ತನಾಗಿರುವೆ.

ಭಾವಾರ್ಥ ಃ– ನಿಗೋದದಲ್ಲಿ ಒಂದು ಶ್ವಾಸದ ಹದಿನೆಂಟನೆಯ ಭಾಗ ಪ್ರಮಾಣವಾಗಿ ಆಯುಷ್ಯ ಪಡೆಯುತ್ತಾನೆ. ಒಂದು ಮೂಹೂರ್ತದಲ್ಲಿ ಮೂವತ್ತೇಳುನೂರಾ ಎಪ್ಪತ್ತೂ ಮೂರು ಶ್ವಾಸೋಚ್ಛ್ವಾಸಗಳಾಗುತ್ತವೆ, ಅವುಗಳಲ್ಲಿ ಮೂವತ್ತಾರುನೂರಾ ಎಂಭತ್ತೈದು ಶ್ವಾಸೋಚ್ಛ್ವಾಸ ಮತ್ತು ಒಂದು ಶ್ವಾಸದ ಮೂರನೆಯ ಭಾಗದಲ್ಲಿ ಅರವತ್ತಾರು ಸಾವಿರದಾ ಮುನ್ನೂರ ಮೂವತ್ತಾರು ಬಾರಿ ನಿಗೋದದಲ್ಲಿ ಜನ್ಮ-ಮರಣಗಳಾಗುತ್ತವೆ. ಇದರ ದುಃಖವನ್ನು ಈ ಪ್ರಾಣಿಯು ಸಮ್ಯಗ್ದರ್ಶನದ ಭಾವ ಪಡೆದುಕೊಂಡಲ್ಲದೆ ಮಿಥ್ಯಾತ್ವದ ಉದಯದ ವಶವರ್ತಿಯಾಗಿ ಸಹಿಸುತ್ತದೆ. ಅಂತರ್ಮುಹೂರ್ತದಲ್ಲಿ ಅರವತ್ತಾರು ಸಾವಿರದಾ ಮುನ್ನೂರಾ ಮೂವತ್ತಾರು ಬಾರಿ ಜನ್ಮ ಮರಣ ಹೇಳಿದೆ ಅದು ಅಂತರ್ಮುಹೂರ್ತದಲ್ಲಿ ಎಂಭತ್ತೆಂಟು ಶ್ವಾಸ ಕಡಿಮೆ ಮುಹೂರ್ತವೆಂಬ ತಾತ್ಪರ್ಯವನ್ನು ತಿಳಿದುಕೊಳ್ಳಬೇಕು. ॥೨೮॥

[ವಿಶೇಷಾರ್ಥ ಃ– ಗಾಥೆಯಲ್ಲಿ ಬಂದಿರುವ 'ನಿಗೋದ ವಾಸಮ್ಮಿ' ಶಬ್ದದ ಸಂಸ್ಕೃತ ಛಾಯೆಯಲ್ಲಿ 'ನಿಗೋದ ವಾಸೇ' ಎಂದಿದೆ. ನಿಗೋದ ಶಬ್ದವು ಏಕೇಂದ್ರಿಯ ವನಸ್ಪತಿ ಕಾಯಿಕ ಜೀವಗಳ ಸಾಧಾರಣ ಭೇದದಲ್ಲಿ ರೂಢವಿದೆ, ಆದರೆ ನಿಗೋದ ಶಬ್ದವು ಐದೂ ಇಂದ್ರಿಯಗಳ ಸಮ್ಮೂರ್ಛನ ಜನ್ಮದಿಂದ ಉತ್ಪನ್ನವಾಗುವಂಥ ಲಬ್ಧ ಪರ್ಯಾಪ್ತಕ ಜೀವಗಳ ಸಲುವಾಗಿ ಪ್ರಯುಕ್ತವಾಗುತ್ತದೆ. ಆದುದರಿಂದ ಇಲ್ಲಿ ಯಾವ ೬೬೩೩೬ ಬಾರಿ ಮರಣದ ಸಂಖ್ಯೆಯಿದೆ ಅದು ಐದೂ ಇಂದ್ರಿಯಗಳನ್ನು ಸಮ್ಮಿಲಿತವೆಂದು ತಿಳಿಯಬೇಕು.]

ಇದೇ ಅಂತರ್ಮುಹೂರ್ತದ ಜನ್ಮ-ಮರಣಗಳಲ್ಲಿ ಕ್ಷುದ್ರಭವದ ವಿಶೇಷ ಹೇಳುತ್ತಾರೆ, –

**ವಿಯಲಿಂದಏ ಅಸೀದೀ ಸಟ್ಠೀ ಚಾಲೀಸಮೇವ ಜಾಣೇಹ ।**
**ಪಂಚಿಂದಿಯ ಚಉವೀಸಂ ಖುದ್ದಭವಂತೋಮುಹುತ್ತಸ್ಸ ॥೨೯॥**

**ವಿಕಲೇಂದ್ರಿಯಾಣಾಮಶೀತಿಂ ಷಷ್ಟಿಂ ಚತ್ವಾರಿಂಶತಮೇವ ಜಾನೀಹಿ ।**
**ಪಂಚೇಂದ್ರಿಯಾಣಾಂ ಚತುರ್ವಿಂಶತಿಂ ಕ್ಷುದ್ರಭವಾನ್ ಅಂತರ್ಮುಹೂರ್ತಸ್ಯ ॥೨೯॥**

---

**ಅರವತ್ತಾರುಸಾವಿರದಾ ಮುನ್ನೂರಾಮೂವತ್ತಾರು ಬಾರಿ ಮರಣವಾಗಿದೆ ।**
**ಬರಿದೊಂದೆ ಅಂತರ್ಮುಹೂರ್ತಪ್ರಮಾಣ ಕಾಲದಲಿ ನಿಗೋದನಿವಾಸದಲಿ ॥೨೮॥**

**ವಿಕಲೇಂದ್ರಿಯದಿ ಎಂಭತ್ತರವತ್ತು ನಾಲ್ವತ್ತು ಕ್ಷುದ್ರ ಭವವೆಂದರಿವುದು ।**
**ಏಕ ಅಂತರ್ಮುಹೂರ್ತದಲಿ ಕ್ಷುದ್ರಭವ ಇಪ್ಪತ್ತಾ ನ್ಲುಕ್ಕ ಪಂಚೇಂದ್ರಿಯಗಳಿಗೆ ॥೨೯॥**

ಅರ್ಥ :– ಎಲೈ ಆತ್ಮನೇ ! ಈ ಅಂತರ್ಮುಹೂರ್ತದ ಭವಗಳಲ್ಲಿ ಎರಡು ಇಂದ್ರಿಯದ ಕ್ಷುದ್ರ ಭವಗಳು ಎಂಭತ್ತು, ಮೂರು ಇಂದ್ರಿಯವು ಅರವತ್ತು, ನಾಲ್ಕು ಇಂದ್ರಿಯವು ನಲವತ್ತು ಮತ್ತು ಪಂಚೇಂದ್ರಿಯವು ಇಪ್ಪತ್ತಾ ್ಲಲ್ಕು, ಈ ಪ್ರಕಾರ ಕ್ಷುದ್ರಭವಗಳಿವೆಯೆಂದು ನೀನು ತಿಳಿದುಕೊಳ್ಳು.

ಭಾವಾರ್ಥ :– ಅನ್ಯ ಶಾಸ್ತ್ರಗಳಲ್ಲಿ ಕ್ಷುದ್ರ ಭವಗಳನ್ನು ಹೀಗೆ ಎಣಿಸಲಾಗಿದೆ, ಪೃಥ್ವೀ, ಆಪ್, ತೇಜ, ವಾಯು ಮತ್ತು ಸಾಧಾರಣ ನಿಗೋದದದ್ದು ಸೂಕ್ಷ್ಮ ಬಾದರದಿಂದ ಹತ್ತು ಮತ್ತು ಸಪ್ರತಿಷ್ಠಿತ ವನಸ್ಪತಿ ಒಂದು, ಹೀಗೆ ಹನ್ನೊಂದು ಸ್ಥಾನಗಳ ಭವಗಳಂತೂ ಒಂದೊಂದಕ್ಕೆ ಆರು ಸಾವಿರ ಬಾರಿ ಅದರದು ಅರವತ್ತಾರು ಸಾವಿರದಾ ಒಂದುನೂರಾ ಮೂವತ್ತೆರಡು ಆದವು ಮತ್ತು ಈ ಗಾಥೆಯಲ್ಲಿ ಹೇಳಿದ ಆ ಭವಗಳು ಎರಡು ಇಂದ್ರಿಯ ಮೊದಲಾದವುಗಳದ್ದು ಇನ್ನೂರಾ ನಾಲ್ಕು, ಹೀಗೆ ಒಂದು ಅಂತರ್ಮುಹೂರ್ತದಲ್ಲಿ ೬೬೩೩೬ ಕ್ಷುದ್ರಭವಗಳನ್ನು ಹೇಳಿದ್ದಾರೆ. ||೨೯||

ಎಲೈ ಆತ್ಮನೇ ! ನೀನು ಈ ದೀರ್ಘ ಸಂಸಾರದಲ್ಲಿ ಪೂರ್ವೋಕ್ತ ಪ್ರಕಾರ ಸಮ್ಯಗ್ದರ್ಶನ ಮೊದಲಾದ ರತ್ನತ್ರಯದ ಪ್ರಾಪ್ತಿಯಿಲ್ಲದೆ ಭ್ರಮಣ ಮಾಡಿದೆ, ಆದುದರಿಂದ ಈಗ ರತ್ನತ್ರಯವನ್ನು ಧಾರಣ ಮಾಡೆಂದು ಹೇಳುತ್ತಾರೆ, –

ರಯಣತ್ತಯೇ ಅಲದ್ಧೇ ಏವಂ ಭಮಿಓ ಸಿ ದೀಹಸಂಸಾರೇ |
ಇಯ ಜಿಣವರೇಹಿಂ ಭಣಿಯಂ ತಂ ರಯಣತ್ತಯ ಸಮಾಯರಹ ||೩೦||

ರತ್ನತ್ರಯೇ ಅಲಬ್ಧೇ ಏವಂ ಭ್ರಮಿತೋಽಸಿ ದೀರ್ಘಸಂಸಾರೇ |
ಇತಿ ಜಿನವರೈರ್ಭಣಿತಂ ತತ್‌ರತ್ನತ್ರಯಂ ಸಮಾಚರ ||೩೦||

ಅರ್ಥ :– ಎಲೈ ಜೀವನೇ ! ನೀನು ಸಮ್ಯಗ್ದರ್ಶನ–ಜ್ಞಾನ–ಚಾರಿತ್ರ ರೂಪವಾದ ರತ್ನತ್ರಯವನ್ನು ಪಡೆಯಲಿಲ್ಲ, ಆದುದರಿಂದ ಈ ದೀರ್ಘಕಾಲದಿಂದ–ಅನಾದಿ ಸಂಸಾರದಲ್ಲಿ ಮೊದಲು ಹೇಳಿದ ಪ್ರಕಾರ ಭ್ರಮಣ ಮಾಡಿದೆಯೆಂದು ತಿಳಿದುಕೊಂಡು ಈಗ ನೀನು ಆ ರತ್ನತ್ರಯದ ಆಚರಣೆ ಮಾಡೆಂದು ಜಿನೇಶ್ವರದೇವರು ಹೇಳಿದ್ದಾರೆ.

ಭಾವಾರ್ಥ :– ಈ ಜೀವನು ನಿಶ್ಚಯ ರತ್ನತ್ರಯವನ್ನು ಪಡೆದುಕೊಂಡಲ್ಲದೆ ಮಿಥ್ಯಾತ್ವದ ಉದಯದಿಂದ ಸಂಸಾರದಲ್ಲಿ ಭ್ರಮಣ ಮಾಡುತ್ತಿರುವುದರಿಂದ ರತ್ನತ್ರಯದ ಆಚರಣೆಯ ಉಪದೇಶವಿದೆ. ||೩೦||

ಆ ರತ್ನತ್ರಯವು ಎಂಥದಿದೆಯೆಂದು ಕೇಳಿದ ಶಿಷ್ಯನ ಪ್ರಶ್ನೆಗೆ ಉತ್ತರರೂಪವಾಗಿ ರತ್ನತ್ರಯದ ಸ್ವರೂಪವನ್ನು ಈಗ ಹೇಳುತ್ತಾರೆ, –

ಅಪ್ಪಾ ಅಪ್ಪಮ್ಮಿ ರಓ ಸಮ್ಮಾಇಟ್ಠೀ ಹವೇಇ ಫುಡು ಜೀವೋ |
ಜಾಣಇ ತಂ ಸಣ್ಣಾಣಂ ಚರದಿಹಂ ಚಾರಿತ್ತ ಮಗ್ಗೋ ತ್ತಿ ||೩೧||

---

ರತ್ನತ್ರಯ ಪಡೆಯದೀ ತೆರ ಭ್ರಮಿಸಿದೆ ದೀರ್ಘಸಂಸಾರದಲದರಿಂದ |
ರತ್ನತ್ರಯವನೀಗ ಆಚರಿಸೆಂದು ಜಿನವರದೇವರು ಪೇಳಿರುವರು ||೩೦||

ಆತ್ಮ ಆತ್ಮನಲಿ ಅನುರಕ್ತನಿರುವ ಜೀವ ಸ್ಪಷ್ಟ ಸಮ್ಯಗ್ದೃಷ್ಟಿಯಿಹನು |
ಆತ್ಮನರಿವು ಸಮ್ಯಗ್ಜ್ಞಾನ ಆತ್ಮನಾಚರಣೆ ಚಾರಿತ್ರವಿದು ಮೋಕ್ಷಮಾರ್ಗ ||೩೧||

**ಆತ್ಮಾ ಆತ್ಮನಿ ರತಃ ಸಮ್ಯಗ್ದೃಷ್ಟಿಃ ಭವತಿ ಸ್ಫುಟಂ ಜೀವಃ ।**
**ಜಾನಾತಿ ತತ್ ಸಂಜ್ಞಾನಂ ಚರತೀಹ ಚಾರಿತ್ರಂ ಮಾರ್ಗ ಇತಿ ॥೩೧॥**

ಅರ್ಥ ಃ- ಯಾವ ಆತ್ಮನು ಆತ್ಮನಲ್ಲಿ ಅನುರಕ್ತನಾಗಿ ಯಥಾರ್ಥಸ್ವರೂಪದ ಅನುಭವ ಮಾಡುವನು ತದ್ರೂಪವಾಗಿ ಶ್ರದ್ಧೆ ಮಾಡುವನು ಅವನು ಸ್ಪಷ್ಟವಾಗಿ ಸಮ್ಯಗ್ದೃಷ್ಟಿಯಿರುತ್ತಾನೆ, ಆ ಆತ್ಮನನ್ನು ತಿಳಿದುಕೊಳ್ಳುವುದು ಸಮ್ಯಗ್ಜ್ಞಾನವಿದೆ, ಆ ಆತ್ಮನಲ್ಲಿ ಆಚರಣೆ ಮಾಡಿ ರಾಗ-ದ್ವೇಷರೂಪವಾಗಿ ಪರಿಣಮಿಸದಿರುವುದು ಸಮ್ಯಕ್ಚಾರಿತ್ರವಿದೆ. ಈ ಪ್ರಕಾರ ಇದು ನಿಶ್ಚಯ ರತ್ನತ್ರಯವಿದೆ, ಮೋಕ್ಷಮಾರ್ಗವಿದೆ.

ಭಾವಾರ್ಥ ಃ- ಆತ್ಮನ ಶ್ರದ್ಧೆ ಜ್ಞಾನ ಆಚರಣವು ನಿಶ್ಚಯ ರತ್ನತ್ರಯವಿದೆ ಮತ್ತು ಬಾಹ್ಯದಲ್ಲಿ ಇದರ ವ್ಯವಹಾರ, ಜೀವ-ಅಜೀವಾದಿ ತತ್ತ್ವಗಳ ಶ್ರದ್ಧೆ, ಹಾಗೂ ತಿಳಿದುಕೊಳ್ಳುವುದು ಮತ್ತು ಪರದ್ರವ್ಯ ಪರಭಾವದ ತ್ಯಾಗ ಮಾಡುವುದು, ಹೀಗೆ ನಿಶ್ಚಯ-ವ್ಯವಹಾರಸ್ವರೂಪದ ರತ್ನತ್ರಯವು ಮೋಕ್ಷದ ಮಾರ್ಗವಿದೆ. ಅಲ್ಲಿ ನಿಶ್ಚಯವಂತೂ ಮುಖ್ಯವಿದೆ, ಇದಿಲ್ಲದೆ ವ್ಯವಹಾರವು ಸಂಸಾರಸ್ವರೂಪವೇ ಇದೆ. ವ್ಯವಹಾರವು[೧] ಅದು ನಿಶ್ಚಯದ ಸಾಧನ ಸ್ವರೂಪವಿದೆ, ಇದಿಲ್ಲದೆ ನಿಶ್ಚಯದ ಪ್ರಾಪ್ತಿಯಿಲ್ಲ ಮತ್ತು ನಿಶ್ಚಯದ ಪ್ರಾಪ್ತಿಯಾದ ನಂತರ ವ್ಯವಹಾರವೇನೂ ಇಲ್ಲವೆಂದು ತಿಳಿದುಕೊಳ್ಳಬೇಕು. ॥೩೧॥

ಈ ಜೀವನು ಸಂಸಾರದಲ್ಲಿ ಮಾಡಿರುವ ಜನ್ಮ-ಮರಣಗಳೆಲ್ಲವು ಕುಮರಣಗಳಿವೆ, ಈಗ ಸುಮರಣದ ಉಪದೇಶ ಮಾಡುತ್ತಾರೆ, -

**ಅಣ್ಣೇ ಕುಮರಣಮರಣಂ ಅಣೇಯಜಮ್ಮಂತರಾಇಂ ಮರಿಓ ಸಿ ।**
**ಭಾವಹಿ ಸುಮರಣಮರಣ ಜರಮರಣವಿಣಾಸಣಂ ಜೀವ ! ॥೩೨॥**

**ಅನ್ಯಸ್ಮಿನ್ ಕುಮರಣಮರಣಂ ಅನೇಕಜನ್ಮಾಂತರೇಷು ಮೃತಃ ಅಸಿ ।**
**ಭಾವಯ ಸುಮರಣಮರಣಂ ಜನ್ಮಮರಣವಿನಾಶನಂ ಜೀವ ॥೩೨॥**

ಅರ್ಥ ಃ- ಎಲೈ ಜೀವನೇ ! ಈ ಸಂಸಾರದಲ್ಲಿ ಅನೇಕ ಜನ್ಮಾಂತರಗಳಲ್ಲಿ ಅನ್ಯ ಕುಮರಣಗಳು ಮರಣದಂತೆ ಇರುತ್ತವೆ ಹಾಗೆ ನೀನು ಮರಣ ಹೊಂದಿರುವೆ. ಈಗ ನೀನು ಯಾವ ಮರಣದಿಂದ ಜನ್ಮ-ಮರಣದ ನಾಶವಾಗಿ ಹೋಗುವುದು ಅಂಥ ಸುಮರಣವನ್ನು ಭಾವಿಸು ಎಂದರೆ ಸಮಾಧಿಮರಣದ ಭಾವನೆ ಮಾಡು.

ಭಾವಾರ್ಥ ಃ- ಅನ್ಯ ಶಾಸ್ತ್ರಗಳಲ್ಲಿ ಸಂಕ್ಷೇಪದಿಂದ ಹದಿನೇಳು ಪ್ರಕಾರದ ಮರಣಗಳನ್ನು ಹೇಳುತ್ತಾರೆ. ಅವು ೧) ಆವೀಚಿಕಾಮರಣ, ೨)ತದ್ಭವಮರಣ, ೩) ಅವಧಿಮರಣ, ೪) ಆದ್ಯಂತ ಮರಣ, ೫)ಬಾಲಮರಣ, ೬) ಪಂಡಿತಮರಣ,

---

**ಕುಮರಣಮರಣದಿಂ ಜೀವನೀನನೇಕ ಭವದಲಿ ಸತ್ತು ಹೋಗಿರುವೆ ।**
**ಸುಮರಣವನೀಗ ಭಾವಿಸದರಿಂ ಜನ್ಮ ಮರಣದ ನಾಶವಾಗುವುದು ॥೩೨॥**

---

೧ ಇಲ್ಲಿ ಮೊದಲು ವ್ಯವಹಾರವಾಗುವುದು ಮತ್ತು ನಂತರ ನಿಶ್ಚಯವಾಗುವುದೆಂದು ತಿಳಿದುಕೊಳ್ಳಬಾರದು, ಆದರೆ ಭೂಮಿಕೆಗೆ ಅನುಸರಿಸಿ ಪ್ರಾರಂಭದಿಂದಲೇ ನಿಶ್ಚಯ-ವ್ಯವಹಾರಗಳು ಜತೆಯಲ್ಲಿರುತ್ತವೆ. ಶಾಸ್ತ್ರದಲ್ಲಿ ನಿಮಿತ್ತವಿಲ್ಲದೆ ಯಾವ ಅರ್ಥ ಹೇಳಿದೆ ಅದರಿಂದ ವಿರುದ್ಧವಾಗಿ ನಿಮಿತ್ತವಿರುವುದಿಲ್ಲವೆಂದು ತಿಳಿಯಬೇಕು.

೭) ಆಸನ್ನಮರಣ, ೮) ಬಾಲಪಂಡಿತಮರಣ, ೯) ಸಶಲ್ಯಮರಣ, ೧೦) ಪಲಾಯಮರಣ, ೧೧) ವಶಾರ್ತ್ತಮರಣ, ೧೨) ವಿಪ್ರಾಣಸಮರಣ, ೧೩) ಗೃಧ್ರಪೃಷ್ಟಮರಣ, ೧೪) ಭಕ್ತ ಪ್ರತ್ಯಾಖ್ಯಾನಮರಣ, ೧೫) ಇಂಗಿನೀಮರಣ, ೧೬) ಪ್ರಾಯೋಪಗಮನಮರಣ, ಮತ್ತು ೧೭)ಕೇವಲಿ ಮರಣವೆಂದು ಹದಿನೇಳು ಇವೆ.

ಇವುಗಳ ಸ್ವರೂಪವು ಕೆಳಗೆ ಹೇಳಿದಂತಿದೆ,-

೧) ಆಯುಕರ್ಮದ ಉದಯವು ಸಮಯ ಸಮಯದಲ್ಲಿ ಕಡಿಮೆಯಾಗುತ್ತದೆ ಅದು ಸಮಯ ಸಮಯದ ಮರಣವಿದೆ, ಇದು ಆವೀಚಿಕಾಮರಣವಿದೆ.

೨) ವರ್ತಮಾನ ಪರ್ಯಾಯದ ಅಭಾವವು ಅದು ತದ್ಭವಮರಣವಿದೆ.

೩) ಹೇಗೆ ವರ್ತಮಾನ ಪರ್ಯಾಯದ ಮರಣವಿದೆ ಹಾಗೆ ಮುಂದಿನ ಪರ್ಯಾಯದ್ದಾಗುವುದು ಅದು ಅವಧಿ ಮರಣವಿದೆ. ಇದರಲ್ಲಿ ಎರಡು ಭೇದಗಳಿದ್ದು ಹೇಗೆ ವರ್ತಮಾನದ ಪ್ರಕೃತಿ, ಸ್ಥಿತಿ, ಅನುಭಾಗದ ಉದಯಬರುವುದು ಹಾಗೆಯೇ ಮುಂದಿನದು ಉದಯಬರುವುದು ಅದು ಸರ್ವಾವಧಿಮರಣವಿದೆ ಮತ್ತು ಏಕದೇಶ ಬಂಧ-ಉದಯವಿದ್ದರೆ ಅದು ದೇಶಾವಧಿಮರಣವೆಂದು ಕರೆಸಿಕೊಳ್ಳುತ್ತದೆ.

೪) ವರ್ತಮಾನ ಪರ್ಯಾಯದ ಸ್ಥಿತಿ ಮೊದಲಾದವುಗಳ ಉದಯವಿರುವಂತೆ ಮುಂದಿನದು ಸರ್ವತಃ ಅಥವಾ ದೇಶತಃ ಬಂಧ-ಉದಯವಿಲ್ಲದಿರುವುದು ಅದು ಆದ್ಯಂತಮರಣವಿದೆ.

೫) ಬಾಲಮರಣವು ಅವ್ಯಕ್ತಬಾಲ, ವ್ಯವಹಾರಬಾಲ, ಜ್ಞಾನಬಾಲ, ದರ್ಶನಬಾಲ ಮತ್ತು ಚಾರಿತ್ರಬಾಲವೆಂದು ಐದು ಪ್ರಕಾರದ್ದಿದೆ. ಯಾವನು ಧರ್ಮ, ಅರ್ಥ, ಕಾಮವೆಂಬ ಕಾರ್ಯಗಳನ್ನು ತಿಳಿಯುವುದಿಲ್ಲ, ಅವನ ಶರೀರವು ಇವುಗಳ ಆಚರಣೆಯ ಸಲುವಾಗಿ ಸಮರ್ಥವಿಲ್ಲ ಅವನು 'ಅವ್ಯಕ್ತಬಾಲ'ನಿದ್ದಾನೆ. ಯಾವನು ಲೋಕದ ಮತ್ತು ಶಾಸ್ತ್ರದ ವ್ಯವಹಾರವನ್ನು ತಿಳಿಯುವುದಿಲ್ಲ ಹಾಗೂ ಬಾಲಕ ಅವಸ್ಥೆಯಿದೆ ಅವನು 'ವ್ಯವಹಾರಬಾಲ'ನಿದ್ದಾನೆ. ವಸ್ತುವಿನ ಯಥಾರ್ಥ ಜ್ಞಾನರಹಿತನು 'ಜ್ಞಾನಬಾಲ'ನಿದ್ದಾನೆ ತತ್ತ್ವಾರ್ಥ ಶ್ರದ್ಧೆಯಿಲ್ಲದ ಮಿಥ್ಯಾದೃಷ್ಟಿಯು 'ದರ್ಶನಬಾಲ'ನಿದ್ದಾನೆ. ಚಾರಿತ್ರರಹಿತನಾದ ಜೀವನು 'ಚಾರಿತ್ರಬಾಲ'ನಿದ್ದಾನೆ. ಇವರುಗಳ ಮರಣವು ಅದು ಬಾಲಮರಣವಿದೆ. ಇಲ್ಲಿ ಮುಖ್ಯರೂಪದಿಂದ ದರ್ಶನಬಾಲದ್ದೇ ಗ್ರಹಣವಿದೆ, ಏಕೆಂದರೆ ಸಮ್ಯಗ್ದೃಷ್ಟಿಗೆ ಅನ್ಯ ಬಾಲತನಗಳಿದ್ದರೂ ಕೂಡ ದರ್ಶನಪಂಡಿತತೆಯ ಸದ್ಭಾವದಿಂದ ಅವನನ್ನು ಪಂಡಿತಮರಣದಲ್ಲಿಯೇ ಗಣಿಸುತ್ತಾರೆ. ಇಚ್ಛಾಪ್ರವೃತ್ತ ಮತ್ತು ಅನಿಚ್ಛಾಪ್ರವೃತ್ತವೆಂದು ದರ್ಶನ ಬಾಲದ ಮರಣವನ್ನು ಸಂಕ್ಷೇಪದಿಂದ ಎರಡು ಪ್ರಕಾರವಾಗಿ ಹೇಳಿದ್ದಾರೆ. ಅಗ್ನಿಯಿಂದ, ಹೊಗೆಯಿಂದ, ಶಸ್ತ್ರದಿಂದ, ವಿಷದಿಂದ, ನೀರಿನಿಂದ ಪರ್ವತದ ಪಾರ್ಶ್ವದಿಂದ ಉರುಳುವುದರಿಂದ, ತೀವ್ರಶೀತೋಷ್ಣಗಳ ಬಾಧೆಯಿಂದ, ಬಂಧನದಿಂದ, ಕ್ಷುಧೆ-ತೃಷೆಗಳನ್ನು ತಡೆಯುವುದರಿಂದ, ನಾಲಿಗೆ ಕಿತ್ತುಕೊಳ್ಳುವುದರಿಂದ ಮತ್ತು ವಿರುದ್ಧ ಆಹಾರ ಮಾಡುವುದರಿಂದ ಬಾಲ ಎಂದರೆ ಅಜ್ಞಾನಿಯು ಇಚ್ಛಾಪೂರ್ವಕ ಸಾಯುವುದು ಅದು 'ಇಚ್ಛಾಪ್ರವೃತ್ತ'ವಿದೆ ಮತ್ತು ಬದುಕುವ ಇಚ್ಛೆಯಿದ್ದರೆ ಹಾಗೂ ಮರಣವಾದರೆ ಅದು 'ಅನಿಚ್ಛಾಪ್ರವೃತ್ತ'ವಿದೆ.

೬) ಪಂಡಿತಮರಣವು ವ್ಯವಹಾರಪಂಡಿತ, ಸಮ್ಯಕ್ತ್ವಪಂಡಿತ, ಜ್ಞಾನಪಂಡಿತ ಮತ್ತು ಚಾರಿತ್ರಪಂಡಿತವೆಂದು ನಾಲ್ಕು ಪ್ರಕಾರದ್ದಿದೆ. ಲೋಕಶಾಸ್ತ್ರದ ವ್ಯವಹಾರದಲ್ಲಿ ಪ್ರವೀಣನಿದ್ದರೆ ಅವನು 'ವ್ಯವಹಾರಪಂಡಿತ'ನಿದ್ದಾನೆ. ಸಮ್ಯಕ್ತ್ವಸಹಿತನಿದ್ದರೆ 'ಸಮ್ಯಕ್ತ್ವಪಂಡಿತ'ನಿದ್ದಾನೆ. ಸಮ್ಯಗ್ಜ್ಞಾನಸಹಿತನಿದ್ದರೆ 'ಜ್ಞಾನಪಂಡಿತ'ನಿದ್ದಾನೆ.

ಸಮ್ಯಕ್ಚಾರಿತ್ರಸಹಿತನಿದ್ದರೆ 'ಚಾರಿತ್ರಪಂಡಿತ'ನಿದ್ದಾನೆ. ಇಲ್ಲಿ ದರ್ಶನ-ಜ್ಞಾನ-ಚಾರಿತ್ರ ಸಹಿತನಾದ ಪಂಡಿತನ ಗ್ರಹಣವಿದೆ, ಏಕೆಂದರೆ ವ್ಯವಹಾರ-ಪಂಡಿತನು ಮಿಥ್ಯಾದೃಷ್ಟಿ ಬಾಲಮರಣದಲ್ಲಿ ಬರುವನು.

೭) ಮೋಕ್ಷಮಾರ್ಗದಲ್ಲಿ ಪ್ರವರ್ತಿಸುವಂಥ ಸಾಧುವು ಸಂಘದಿಂದ ದೂರವಾದರೆ ಅವನನ್ನು 'ಆಸನ್ನ'ನೆಂದು ಹೇಳುತ್ತಾರೆ. ಇದರಲ್ಲಿ ಪಾರ್ಶ್ವಸ್ಥ, ಸ್ವಚ್ಛಂದ, ಕುಶೀಲ, ಸಂಸಕ್ತರನ್ನೂ ತೆಗೆದುಕೊಳ್ಳಬೇಕು, ಈ ಪ್ರಕಾರ ಐದು ಪ್ರಕಾರ ಭ್ರಷ್ಟ ಸಾಧುಗಳ ಮರಣವು 'ಆಸನ್ನಮರಣ'ವಿದೆ.

೮) ಸಮ್ಯಗ್ದೃಷ್ಟಿ ಶ್ರಾವಕನ ಮರಣವು ಅದು 'ಬಾಲಪಂಡಿತಮರಣ'ವಿದೆ.

೯) ಸಶಲ್ಯಮರಣವು ಭಾವಶಲ್ಯ ಮತ್ತು ದ್ರವ್ಯಶಲ್ಯವೆಂದು ಎರಡು ಪ್ರಕಾರವಿದ್ದು ಮಿಥ್ಯಾದರ್ಶನ, ಮಾಯೆ, ನಿದಾನವೆಂಬ ಮೂರು ಶಲ್ಯಗಳಂತೂ 'ಭಾವಶಲ್ಯ'ವಿವೆ ಮತ್ತು ಐದು ಸ್ಥಾವರ ಹಾಗೂ ತ್ರಸದಲ್ಲಿ ಅಸಂಜ್ಞೀ ಇವು 'ದ್ರವ್ಯಶಲ್ಯ' ಸಹಿತವಿವೆ. ಹೀಗೆ ಸಶಲ್ಯಮರಣವಿದೆ.

೧೦) ಯಾವನು ಪ್ರಶಸ್ತ ಕ್ರಿಯೆಗಳಲ್ಲಿ ಸೋಮಾರಿಯಿರುವವನು, ವ್ರತಾದಿಗಳಲ್ಲಿ ಶಕ್ತಿಯನ್ನು ಬಚ್ಚಿಡುವವನು, ಧ್ಯಾನಾದಿಗಳಿಂದ ದೂರ ಓಡುವವನು ಇಂಥವನ ಮರಣವು 'ಪಲಾಯಮರಣ'ವಿದೆ.

೧೧) ವಶಾರ್ತ ಮರಣವು ನಾಲ್ಕು ಪ್ರಕಾರದ್ದಿದೆ. ಅದು ಆರ್ತ-ರೌದ್ರಧ್ಯಾನಸಹಿತವಾದ ಮರಣವಿದೆ. ಅದರಲ್ಲಿ ಐದು ಇಂದ್ರಿಯ ವಿಷಯಗಳಲ್ಲಿ ರಾಗ-ದ್ವೇಷಸಹಿತವಾದ ಮರಣವು ಅದು 'ಇಂದ್ರಿಯವಶಾರ್ತಮರಣ'ವಿದೆ. ಸಾತಾ-ಅಸಾತಾದ ವೇದನಾಸಹಿತವಾದ ಮರಣವು ಅದು 'ವೇದನಾವಶಾರ್ತಮರಣ'ವಿದೆ. ಕ್ರೋಧ, ಮಾನ, ಮಾಯೆ, ಲೋಭ ಕಷಾಯದ ವಶದಿಂದಾದ ಮರಣವು ಅದು 'ಕಷಾಯವಶಾರ್ತಮರಣ'ವಿದೆ. ಹಾಸ್ಯ, ವಿನೋದ ಕಷಾಯದ ವಶದಿಂದಾದ ಮರಣವು ಅದು 'ನೋಕಷಾಯವಶಾರ್ತಮರಣ'ವಿದೆ.

೧೨) ಯಾವನು ತನ್ನ ವ್ರತ, ಕ್ರಿಯೆ, ಚಾರಿತ್ರದಲ್ಲಿ ಉಪಸರ್ಗವುಂಟಾದಾಗ ಅದನ್ನು ಸಹಿಸುವುದೂ ಆಗುವುದಿಲ್ಲ ಮತ್ತು ಭ್ರಷ್ಟವಾಗುವ ಭಯವುಂಟಾಗುವುದು ಆಗ ಅಶಕ್ತನಾಗಿ ಅನ್ನ-ನೀರುಗಳನ್ನು ತ್ಯಾಗಮಾಡಿ ಸಾಯುವುದು ಅದು 'ವಿಪ್ರಾಣಸಮರಣ'ವಿದೆ.

೧೩) ಶಸ್ತ್ರಗ್ರಹಣ ಮಾಡಿ ಮರಣವಾಗುವುದು ಅದು 'ಗೃಧ್ರಪೃಷ್ಠಮರಣ'ವಿದೆ.

೧೪) ಅನುಕ್ರಮದಿಂದ ಅನ್ನ-ನೀರುಗಳನ್ನು ಯಥಾವಿಧಿ ತ್ಯಾಗಮಾಡಿ ಸಾಯುವುದು ಅದು 'ಭಕ್ತಪ್ರತ್ಯಾಖ್ಯಾನಮರಣ'ವಿದೆ.

೧೫) ಸನ್ಯಾಸ ಮಾಡುವುದು ಮತ್ತು ಅನ್ಯರಿಂದ ವೈಯಾವೃತ್ಯ ಮಾಡಿಸಿಕೊಳ್ಳುವುದು ಅದು 'ಇಂಗಿನೀಮರಣ'ವಿದೆ.

೧೬) ಪ್ರಾಯೋಪಗಮನ ಸನ್ಯಾಸ ಮಾಡುವುದು ಮತ್ತು ಯಾರಿಂದಲೂ ವೈಯಾವೃತ್ಯ ಮಾಡಿಸಿ ಕೊಳ್ಳದಿರುವುದು ಹಾಗೂ ತನಗೆ ತಾನು ಮಾಡದಿರುವುದು, ಪ್ರತಿಮಾಯೋಗದಿಂದಿರುವುದು ಅದು 'ಪ್ರಾಯೋಪಗಮನಮರಣ'ವಿದೆ.

೧೭) ಕೇವಲಿಯು ಮುಕ್ತಿಗೆ ಪ್ರಾಪ್ತನಾಗುವುದು ಅದು 'ಕೇವಲೀಮರಣ'ವಿದೆ.

ಹೀಗೆ ಹದಿನೇಳು ಪ್ರಕಾರ ಹೇಳಿದೆ. ಇವುಗಳ ಸಂಕ್ಷೇಪವು ಹೀಗಿದೆ - ಮರಣವು ೧)ಪಂಡಿತಪಂಡಿತ, ೨) ಪಂಡಿತ, ೩) ಬಾಲಪಂಡಿತ, ೪)ಬಾಲ, ೫) ಬಾಲಬಾಲವೆಂದು ಐದು ಪ್ರಕಾರದ್ದಿದೆ. ಯಾವನು ದರ್ಶನ, ಜ್ಞಾನ,

ಚಾರಿತ್ರದ ಅತಿಶಯ ಸಹಿತನಿದ್ದಾನೆ ಅವನು ಪಂಡಿತಪಂಡಿತನಿದ್ದಾನೆ ಮತ್ತು ಇವುಗಳ ಪ್ರಕರ್ಷತೆಯಿಲ್ಲದವನು ಅವನು ಪಂಡಿತನಿದ್ದಾನೆ, ಸಮ್ಯಗ್ದೃಷ್ಟಿ ಶ್ರಾವಕನು ಅವನು ಬಾಲಪಂಡಿತನಿದ್ದಾನೆ ಮತ್ತು ಮೊದಲು ನಾಲ್ಕು ಪ್ರಕಾರದ ಪಂಡಿತ ಹೇಳಿದೆ ಅವುಗಳಲ್ಲಿ ಒಂದು ಭಾವವಿಲ್ಲದವನು ಅವನು ಬಾಲನಿದ್ದಾನೆ, ಇನ್ನು ಎಲ್ಲವುಗಳಿಂದ ನ್ಯೂನನಾಗಿರುವವನು ಅವನು ಬಾಲಬಾಲನಿದ್ದಾನೆ. ಇವುಗಳಲ್ಲಿ ಪಂಡಿತಪಂಡಿತಮರಣ, ಪಂಡಿತ ಮರಣ ಮತ್ತು ಬಾಲಪಂಡಿತಮರಣ ಇವು ಮೂರನ್ನೂ ಪ್ರಶಸ್ತ ಸುಮರಣಗಳೆಂದು ಹೇಳಿದ್ದಾರೆ, ಅನ್ಯರೀತಿಯಾದರೆ ಅದು ಕುಮರಣವಿದೆ. ಈ ಪ್ರಕಾರ ಯಾವನು ಸಮ್ಯಗ್ದರ್ಶನ-ಜ್ಞಾನ-ಚಾರಿತ್ರದ ಏಕದೇಶಸಹಿತ ಸಾಯುವನು ಅದು 'ಸುಮರಣ'ವಿದೆ. ಹೀಗೆ ಸುಮರಣ ಮಾಡುವ ಉಪದೇಶವಿದೆ. ॥೩೨॥

ಈ ಜೀವನು ಸಂಸಾರದಲ್ಲಿ ಭ್ರಮಣ ಮಾಡುತ್ತಾನೆ, ಆ ಭ್ರಮಣದ ಪರಾವರ್ತನದ ಸ್ವರೂಪವನ್ನು ಮನಸ್ಸಿನಲ್ಲಿ ಧಾರಣ ಮಾಡಿ ನಿರೂಪಣೆ ಮಾಡುತ್ತಾರೆ. ಮೊದಲು ಸಾಮಾನ್ಯ ರೂಪದಿಂದ ಲೋಕದ ಪ್ರದೇಶಗಳ ಅಪೇಕ್ಷೆಯಿಂದ ಹೇಳುತ್ತಾರೆ, –

ಸೋ ಣತ್ಥಿ ದವ್ವಸವಣೋ ಪರಮಾಣುಪಮಾಣಮೇತ್ತಓ ಣಿಲಓ ।
ಜತ್ಥ ಣ ಜಾಓ ಣ ಮಓ ತಿಯಲೋಯಪಮಾಣಿಓ ಸವ್ವೋ ॥೩೩॥

ಸಃ ನಾಸ್ತಿ ದ್ರವ್ಯಶ್ರಮಣಃ ಪರಮಾಣುಪ್ರಮಾಣಮಾತ್ರೋ ನಿಲಯಃ ।
ಯತ್ರ ನ ಜಾತಃ ನ ಮೃತಃ ತ್ರಿಲೋಕಪ್ರಮಾಣಕಃ ಸರ್ವಃ ॥೩೩॥

ಅರ್ಥ ಃ– ಈ ಜೀವನು ದ್ರವ್ಯಲಿಂಗದ ಧಾರಕವಾದ ಮುನಿತನವಿದ್ದರೂ ಕೂಡ ಅವನು ಆ ಮೂರು ಲೋಕ ಪ್ರಮಾಣವಾದ ಸಮಸ್ತ ಸ್ಥಾನಗಳಲ್ಲಿ ಜನ್ಮ-ಮರಣ ಮಾಡಿರದಂಥದು ಒಂದು ಪರಮಾಣು ಪ್ರಮಾಣ ಒಂದು ಪ್ರದೇಶ ಮಾತ್ರವೂ ಸ್ಥಾನವಿಲ್ಲ.

ಭಾವಾರ್ಥ ಃ– ದ್ರವ್ಯಲಿಂಗ ಧಾರಣ ಮಾಡಿಕೂಡ ಈ ಜೀವನು ಸರ್ವಲೋಕದಲ್ಲಿ ಅನಂತಬಾರಿ ಜನ್ಮ ಮತ್ತು ಮರಣ ಮಾಡಿದ್ದಾನೆ, ಆದರೆ ಇವನು ಜನ್ಮ ಮತ್ತು ಮರಣ ಮಾಡಿರದಂಥದು ಯಾವ ಪ್ರದೇಶವೂ ಶೇಷ ಉಳಿದಿಲ್ಲ. ಈ ಪ್ರಕಾರ ಭಾವಲಿಂಗವಿಲ್ಲದೆ ದ್ರವ್ಯಲಿಂಗದಿಂದ ಮೋಕ್ಷದ (–ನಿಜ ಪರಮಾತ್ಮದಶೆಯ) ಪ್ರಾಪ್ತಿಯಾಗುವುದಿಲ್ಲವೆಂದು ತಿಳಿಯಬೇಕು.

ಇದೇ ಅರ್ಥವನ್ನು ದೃಢಪಡಿಸುವ ಸಲುವಾಗಿ ಭಾವಲಿಂಗವನ್ನು ಮುಖ್ಯಮಾಡಿ ಹೇಳುತ್ತಾರೆ, –

ಕಾಲಮಣಂತಂ ಜೀವೋ ಜಮ್ಮಜರಾಮರಣಪೀಡಿಓ ದುಕ್ಖಂ ।
ಜಿಣಲಿಂಗೇಣ ವಿ ಪತ್ತೋ ಪರಂಪರಾಭಾವರಹಿಏಣ ॥೩೪॥

---

ಪರಮಾಣು ಪ್ರಮಾಣ ಮಾತ್ರ ಸ್ಥಾನವುಳಿದಿಲ್ಲ ಜೀವ ದ್ರವ್ಯಶ್ರಮಣವಾಗಿ ।
ಮರಣಮೇಣ್ಜನನ ಮಾಡದಂಥದು ತ್ರಿಲೋಕಪ್ರಮಾಣವಾದೆಲ್ಲೆಡೆಯೊಳು ॥೩೩॥

ಜನನ-ಜರಾ-ಮರಣ ಪೀಡಿತನಾದೀ ಜೀವ ಅನಂತಕಾಲ ದುಃಖವನು ।
ಜಿನಲಿಂಗವನು ಪಡೆದರು ಕೂಡ ಪರಂಪರಾಭಾವವಿಹೀನತೆಯಿಂದ ॥೩೪॥

**ಕಾಲಮನಂತಂ ಜೀವಃ ಜನ್ಮಜರಾಮರಣಪೀಡಿತಃ ದುಃಖಮ್ ।**
**ಜಿನಲಿಂಗೇನ ಅಪಿ ಪ್ರಾಪ್ತಃ ಪರಂಪರಾಭಾವರಹಿತೇನ ॥೩೪॥**

ಅರ್ಥ ಃ– ಈ ಜೀವನು ಈ ಸಂಸಾರದಲ್ಲಿ ಅದರೊಳಗೆ ಪರಂಪರಾ ಭಾವಲಿಂಗವಿಲ್ಲದಿರುವುದರಿಂದ ಅನಂತ ಕಾಲದವರೆಗೆ ಜನ್ಮ–ಜರಾ–ಮರಣದಿಂದ ಪೀಡಿತನಾಗಿ ದುಃಖಕ್ಕೇನೇ ಪ್ರಾಪ್ತನಾದನು.

ಭಾವಾರ್ಥ ಃ– ದ್ರವ್ಯಲಿಂಗ ಧಾರಣ ಮಾಡಿದನು ಮತ್ತು ಅದರಲ್ಲಿ ಪರಂಪರೆಯಿಂದ ಕೂಡ ಭಾವಲಿಂಗದ ಪ್ರಾಪ್ತಿಯಾಗದಿರುವುದರಿಂದ ದ್ರವ್ಯಲಿಂಗವು ನಿಷ್ಫಲವಾಗಿ ಹೋಯಿತು, ಮುಕ್ತಿಯ ಪ್ರಾಪ್ತಿಯಾಗಲಿಲ್ಲ, ಸಂಸಾರದಲ್ಲಿಯೇ ಭ್ರಮಣ ಮಾಡಿದನು.

ದ್ರವ್ಯಲಿಂಗವು ಭಾವಲಿಂಗದ ಸಾಧನವಿದೆ, ಆದರೆ [೧]ಕಾಲಲಬ್ಧಿಯಿಲ್ಲದೆ ದ್ರವ್ಯಲಿಂಗಧಾರಣಮಾಡಿದ ಮೇಲೂ ಭಾವಲಿಂಗದ ಪ್ರಾಪ್ತಿಯಾಗದಿರುವುದರಿಂದ ದ್ರವ್ಯಲಿಂಗವು ನಿಷ್ಫಲವಾಗಿ ಹೋಗುತ್ತದೆಯೆಂಬ ಆಶಯವಿದೆ. ಈ ಪ್ರಕಾರ ಮೋಕ್ಷಮಾರ್ಗದಲ್ಲಿ ಭಾವಲಿಂಗವೇ ಮುಖ್ಯವಿದೆ.

ಪ್ರಶ್ನೆ ಃ– ಹೀಗಿದ್ದರೆ ಮೊದಲು ದ್ರವ್ಯಲಿಂಗವನ್ನೇಕೆ ಧಾರಣ ಮಾಡುವುದು ?

ಉತ್ತರ ಃ– ಹೀಗೆ ಮನ್ನಿಸಿದರೆ ವ್ಯವಹಾರದ ಲೋಪವಾಗುತ್ತದೆ, ಆದುದರಿಂದ ಮೊದಲು ದ್ರವ್ಯಲಿಂಗ ಧಾರಣಮಾಡುವುದೆಂದು ಮನ್ನಿಸುವುದು, ಆದರೆ ಇದರಿಂದಲೇ ಸಿದ್ಧಿಯಿದೆಯೆಂದು ತಿಳಿಯಬಾರದು. ಭಾವಲಿಂಗವನ್ನು ಮುಖ್ಯವೆಂದು ಮನ್ನಿಸಿ ಅದರ ಸನ್ಮುಖ ಉಪಯೋಗವಿಡುವುದು, ದ್ರವ್ಯಲಿಂಗವನ್ನು ಯತ್ನಪೂರ್ವಕವಾಗಿ ಸಾಧಿಸುವುದು, ಈ ಪ್ರಕಾರದ ಶ್ರದ್ಧೆಯು ಒಳ್ಳೆಯದಿದೆ. ॥೩೪॥

ಈಗ ಪುದ್ಗಲ ದ್ರವ್ಯವನ್ನು ಮುಖ್ಯಮಾಡಿ ಭ್ರಮಣ ಹೇಳುತ್ತಾರೆ, –

**ಪಡಿದೇಸಸಮಯಪುಗ್ಗಲಆಉಗಪರಿಣಾಮಣಾಮಕಾಲಟ್ಠಂ ।**
**ಗಹಿಉಜ್ಝಿಯಾಇಂ ಬಹುಸೋ ಅಣಂತಭವಸಾಯರೇ [೨]ಜೀವ ॥೩೫॥**

---

**ಪ್ರತಿದೇಶ ಸಮಯ ಪುದ್ಗಲ ಆಯುಷ್ಯ ಪರಿಣಾಮ ನಾಮ ಕಾಲಗಳಲಿ ।**
**ಅತಿಯಾಗಿ ಗ್ರಹಿಸಿ ಬಿಟ್ಟಿಹನು ಅನಂತಭವಸಾಗರದಲಿ ಜೀವನು ॥೩೫॥**

---

೧ ೧) ಕಾಲಲಬ್ಧಿ–ಸ್ವಸಮಯ–ನಿಜಸ್ವರೂಪ ಪರಿಣಮನದ ಪ್ರಾಪ್ತಿ – ಆತ್ಮಾವಲೋಕನ ಗಾಥೆ – ೯.

೨) ಕಾಲಲಬ್ಧಿಯ ಅರ್ಥವು ಸ್ವಕಾಲದ ಪ್ರಾಪ್ತಿಯಿದೆ.

೩) ‘ಯದಾಯಂ ಜೀವಃ ಆಗಮಭಾಷಯಾ ಕಾಲಾದಿ ಲಬ್ಧಿ ರೂಪಮಧ್ಯಾತ್ಮಭಾಷಯಾ ಶುದ್ಧಾತ್ಮಾಭಿಮುಖಂ ಪರಿಣಾಮರೂಪಂ ಸ್ವಸಂವೇದನಜ್ಞಾನಂ ಲಭತೇ... ಅರ್ಥ ಃ– ಯಾವಾಗ ಈ ಜೀವನು ಆಗಮ ಭಾಷೆಯಿಂದ ಕಾಲಾದಿ ಲಬ್ಧಿಯನ್ನು ಪ್ರಾಪ್ತಮಾಡಿಕೊಳ್ಳುತ್ತಾನೆ ಹಾಗೂ ಅಧ್ಯಾತ್ಮ ಭಾಷೆಯಿಂದ ಶುದ್ಧಾತ್ಮನ ಸನ್ಮುಖ ಪರಿಣಾಮ ಸ್ವಸಂವೇದನ ಜ್ಞಾನವನ್ನು ಪ್ರಾಪ್ತಮಾಡಿಕೊಳ್ಳುತ್ತಾನೆ.’ – ಪಂಚಾಸ್ತಿಕಾಯ ಗಾಥೆ ೧೫೦–೧೫೧ ಜಯಸೇನಾಚಾರ್ಯದೇವರ ಟೀಕೆ. ವಿಶೇಷಕ್ಕಾಗಿ ಮೋಕ್ಷಮಾರ್ಗಪ್ರಕಾಶಕದ ೯ನೇ ಅಧ್ಯಾಯ ನೋಡುವುದು.

೨. ‘ಜೀವೋ’ ಎಂಬ ಪಾಠಾಂತರವಿದೆ.

ಪ್ರತಿದೇಶಸಮಯಪುದ್ಗಲಾಯುಃ ಪರಿಣಾಮನಾಮಕಾಲಸ್ಥಮ್ ।
ಗೃಹೀತೋಜ್ಝಿತಾನಿ ಬಹುಶಃ ಅನಂತಭವಸಾಗರೇ ಜೀವಃ ॥೩೫॥

ಅರ್ಥ ಃ– ಈ ಜೀವನು ಈ ಅನಂತ ಅಪಾರವಾದ ಭವಸಮುದ್ರದಲ್ಲಿ ಲೋಕಾಕಾಶದಷ್ಟು ಪ್ರದೇಶಗಳಿವೆ ಆ ಪ್ರತಿ ಸಮಯ ಸಮಯ ಮತ್ತು ಪರ್ಯಾಯದ ಆಯು ಪ್ರಮಾಣಕಾಲ ಮತ್ತು ತನ್ನಂತೆ ಯೋಗಕಷಾಯದ ಪರಿಣಮನ ಸ್ವರೂಪ ಪರಿಣಾಮ ಮತ್ತು ಅಂಥ ಗತಿ ಜಾತಿ ಮೊದಲಾದ ನಾಮಕರ್ಮದ ಉದಯದಿಂದಾದ ನಾಮ ಮತ್ತು ಕಾಲದಂತೆ ಉತ್ಸರ್ಪಿಣೀ ಅವಸರ್ಪಿಣೆಗಳಲ್ಲಿ ಪುದ್ಗಲದ ಪರಮಾಣುರೂಪ ಸ್ಕಂಧಗಳನ್ನು ಬಹಳಷ್ಟು ಬಾರಿ ಅನಂತಬಾರಿ ಗ್ರಹಣಮಾಡಿದ್ದಾನೆ ಮತ್ತು ಬಿಟ್ಟುಕೊಟ್ಟಿದ್ದಾನೆ.

ಭಾವಾರ್ಥ ಃ– ಭಾವಲಿಂಗವಿಲ್ಲದೆ ಲೋಕದಲ್ಲಿ ಎಷ್ಟು ಪುದ್ಗಲ ಸ್ಕಂಧಗಳಿವೆ ಅವೆಲ್ಲವುಗಳನ್ನೂ ಗ್ರಹಣ ಮಾಡಿದರೂ ಮತ್ತು ಬಿಟ್ಟುಕೊಟ್ಟರೂ ಕೂಡ ಮುಕ್ತನಾಗಲಿಲ್ಲ. ॥೩೫॥

ಈಗ ಕ್ಷೇತ್ರವನ್ನು ಮುಖ್ಯಮಾಡಿಕೊಂಡು ಹೇಳುತ್ತಾರೆ, –

ತೇಯಾಲಾ ತಿಣ್ಣಿಸಯಾ ರಜ್ಜೂಣಂ ಲೋಯಖೇತ್ತಪರಿಮಾಣಂ ।
ಮುತ್ತೂಣಟ್ಠ ಪಏಸಾ ಜತ್ಥ ಣ ಢುರಢುಲ್ಲಿಓ ಜೀವೋ ॥೩೬॥

ತ್ರಿಚತ್ವಾರಿಂಶತ್ ತ್ರೀಣಿ ಶತಾನಿ ರಜ್ಜೂನಾಂ ಲೋಕಕ್ಷೇತ್ರಪರಿಮಾಣಂ ।
ಮುಕ್ತ್ವಾಽಷ್ಟೌ ಪ್ರದೇಶಾನ್ ಯತ್ರ ನ ಭ್ರಮಿತಃ ಜೀವಃ ॥೩೬॥

ಅರ್ಥ ಃ– ಈ ಲೋಕವು ಮುನ್ನೂರಾ ನಲವತ್ತ್ಮೂರು ರಜ್ಜು ಪ್ರಮಾಣ ಕ್ಷೇತ್ರವಿದೆ. ಅದರ ಮಧ್ಯೆ ಮೇರುವಿನ ಕೆಳಗೆ ಹಸುವಿನ ಸ್ತನಾಕಾರದ ಎಂಟು ಪ್ರದೇಶಗಳಿವೆ ಅವನ್ನು ಬಿಟ್ಟು ಈ ಜೀವನು ಜನ್ಮ-ಮರಣ ಮಾಡದಂಥ ಬೇರಾವ ಪ್ರದೇಶವು ಉಳಿಯಲಿಲ್ಲ.

ಭಾವಾರ್ಥ ಃ– 'ಢುರುಢುಲ್ಲಿಓ' ಎಂದು ಪ್ರಾಕೃತದಲ್ಲಿ ಭ್ರಮಣ ಅರ್ಥದ ಧಾತುವಿನ ಆದೇಶವಿದೆ ಮತ್ತು ಕ್ಷೇತ್ರಪರಾವರ್ತನದಲ್ಲಿ ಮೇರುವಿನ ಕೆಳಗೆ ಎಂಟು ಪ್ರದೇಶಗಳು ಲೋಕದ ಮಧ್ಯದಲ್ಲಿವೆ ಅವನ್ನು ಜೀವನು ತನ್ನ ಶರೀರದ ಅಷ್ಟಮಧ್ಯ ಪ್ರದೇಶಗಳನ್ನಾಗಿ ಮಾಡಿ ಉತ್ಪನ್ನನಾಗಿದ್ದಾನೆ ಅಲ್ಲಿಂದ ಕ್ಷೇತ್ರಪರಾವರ್ತನದ ಪ್ರಾರಂಭಮಾಡಲಾಗುತ್ತಿರುವುದ-ರಿಂದ ಅವನ್ನು ಪುನರಕ್ತ ಭ್ರಮಣದಲ್ಲಿ ಗಣಿಸುವುದಿಲ್ಲ. ॥೩೬॥ (ಗೋ. ಜೀವಕಾಂಡ ಗಾಥೆ ೫೬೦ ಪುಟ ೨೬೬. ಮೂಲಾಚಾರ ಅ. ೯ ಗಾಥೆ ೧೪ ಪುಟ ೪೨೮ ನೋಡಿರಿ.)

ಈ ಜೀವನು ಶರೀರ ಸಹಿತವಾಗಿ ಉತ್ಪನ್ನನಾಗುತ್ತಾನೆ ಮತ್ತು ಸಾಯುತ್ತಾನೆ, ಈಗ ಆ ಶರೀರದಲ್ಲಾಗುವ ರೋಗಗಳ ಸಂಖ್ಯೆಯನ್ನು ತಿಳಿಸಿಕೊಡುತ್ತಾರೆ,–

---

ಮೂರುನೂರಾನಲವತ್ತುಮೂರು ರಜ್ಜುಪ್ರಮಾಣವಾಗಿರುವ ಈ ಲೋಕದಲಿ ।
ಪರಿವರ್ಜಿಸಿ ಎಂಟು ಪ್ರದೇಶಗಳ ಈ ಜೀವ ಭ್ರಮಿಸದಂಥ ಸ್ಥಾನವಿಲ್ಲ ॥೩೬॥

**ಏಕ್ಕೇಕ್ಕಂಗುಲಿ ವಾಹೀ ಛಣ್ಣವದೀ ಹೋಂತಿ ಜಾಣ ಮಣುಯಾಣಂ ।**
**ಅವಸೇಸೇ ಯ ಸರೀರೇ ರೋಯಾ ಭಣ ಕಿತ್ತಿಯಾ ಭಣಿಯಾ ।।೩೭।।**

**ಏಕೈಕಾಂಗುಲೌ ವ್ಯಾಧಯಃ ಷಣ್ಣವತಿಃ ಭವಂತಿ ಜಾನೀಹಿ ಮನುಷ್ಯಾನಾಂ**
**ಅವಶೇಷೇ ಚ ಶರೀರೇ ರೋಗಾಃ ಭಣ ಕಿಯಂತಃ ಭಣಿತಾಃ ।।೩೭।।**

ಅರ್ಥ :- ಈ ಮನುಷ್ಯನ ಶರೀರದಲ್ಲಿ ಒಂದೊಂದು ಅಂಗುಲದಲ್ಲಿ ತೊಂಭತ್ತಾರು ತೊಂಭತ್ತಾರು ರೋಗಗಳಿರುತ್ತವೆ, ಹಾಗಾದರೆ ಉಳಿದ ಸಂಪೂರ್ಣ ಶರೀರದಲ್ಲಿ ಎಷ್ಟು ರೋಗಗಳಿರಬೇಕೆಂಬುದನ್ನು ಹೇಳಿರಿ. ।।೩೭।।

ಎಲೈ ಜೀವನೇ ! ಆ ರೋಗಗಳ ದುಃಖವನ್ನು ನೀನೇ ಸಹಿಸುವೆಯೆಂದು ಈಗ ಹೇಳುತ್ತಾರೆ, -

**ತೇ ರೋಯಾ ವಿ ಯ ಸಯಲಾ ಸಹಿಯಾ ತೇ ಪರವಸೇಣ ಪುವ್ವಭವೇ ।**
**ಏವಂ ಸಹಸಿ ಮಹಾಜಸ ಕಿಂ ವಾ ಬಹುಏಹಿಂ ಲವಿಏಹಿಂ ।।೩೮।।**

**ತೇ ರೋಗಾ ಅಪಿ ಚ ಸಕಲಾಃ ಸೋಢಾಸ್ತ್ವಯಾ ಪರವಶೇಣ ಪೂರ್ವಭವೇ ।**
**ಏವಂ ಸಹಸೇ ಮಹಾಯಶಃ ! ಕಿಂ ವಾ ಬಹುಭಿಃ ಲಪಿತೈಃ ।।೩೮।।**

ಅರ್ಥ :- ಎಲೈ ಮಹಾಯಶನೇ ! ಓ ಮುನಿಯೇ ! ನೀನು ಪೂರ್ವೋಕ್ತ ಸಮಸ್ತ ರೋಗಗಳನ್ನು ಪೂರ್ವಭವಗಳಲ್ಲಂತೂ ಪರವಶನಾಗಿ ಸಹಿಸಿರುವೆ, ಈ ಪ್ರಕಾರ ಪುನಃ ಸಹಿಸಬಹುದು, ಹೆಚ್ಚು ಹೇಳುವುದರಲ್ಲೇನಿದೆ ?

ಭಾವಾರ್ಥ :- ಈ ಜೀವನು ಪರಾಧೀನನಾಗಿ ಸಮಸ್ತ ದುಃಖಗಳನ್ನು ಸಹಿಸುತ್ತಾನೆ. ಒಂದು ವೇಳೆ ಜ್ಞಾನ ಭಾವನೆ ಮಾಡಿದರೆ ಮತ್ತು ದುಃಖ ಬಂದ ಮೇಲೆ ಅದರಿಂದ ಚಂಚಲವಾಗದೆ ಸ್ವವಶನಾಗಿ ಸಹನೆ ಮಾಡಿದರೆ ಕರ್ಮದ ನಾಶಮಾಡಿ ಮುಕ್ತನಾಗಿ ಹೋಗುವನೆಂದು ತಿಳಿದುಕೊಳ್ಳಬೇಕು. ।।೩೮।।

ಅಪವಿತ್ರವಾದ ಗರ್ಭವಾಸದಲ್ಲಿ ಕೂಡ ಉಳಿದಿರುವೆಯೆಂದು ಈಗ ಹೇಳುತ್ತಾರೆ,-

**ಪಿತ್ತಂತಮುತ್ತಫೇಫಸಕಾಲಿಜ್ಜಯರುಹಿರಖರಿಸಕಿಮಿಜಾಲೇ ।**
**ಉಯರೇ ವಸಿಓ ಸಿ ಚಿರಂ ಣವದಸಮಾಸೇಹಿಂ ಪತ್ತೇಹಿಂ ।।೩೯।।**

---

**ಒಂದೊಂದು ಅಂಗುಲದಿ ತೊಂಭತ್ತಾರು ರೋಗಗಳಿರುವುವೀನರ ದೇಹದಲಿ ।**
**ಎಂದಮೇಲವಶೇಷ ಶರೀರದಲೆಷ್ಟು ರೋಗಗಳಿವೆಯೆಂದು ಹೇಳುವುದು ।।೩೭।।**

**ಸಹಿಸಿದೆ ಇವೆಲ್ಲ ರೋಗಗಳನು ಪೂರ್ವಭವದಲಿ ಪರವಶನಾಗಿ ।**
**ಸಹಿಸುವೆ ಮುಂದೆ ಕೂಡ ಓ ಮಹಾಯಶ ! ನಿನಗೆ ಹೆಚ್ಚಿಗೇನು ಹೇಳುವುದು ।।೩೮।।**

**ಮಲಮೂತ್ರ ಪಿತ್ತ ರುಧಿರ ಫೇಫಸ ಯಕೃತ ಕ್ರಮಿಕುಲಜಾಲವಿರುವ ।**
**ಮಲಿನ ಮಾತೆಯುದರದಲಿ ನವ-ದಶಮಾಸ ಬಹುಬಾರಿ ವಾಸಿಸಿದೆ ।।೩೯।।**

ಪಿತ್ತಾಂತ್ರಮೂತ್ರಫೇಫಸಯಕೃದ್ರುಧಿರಖರಿಸಕೃಮಿಜಾಲೇ।
ಉದರೇ ಉಷಿತೋಽಸಿ ಚಿರಂ ನವದಶಮಾಸೈಃ ಪ್ರಾಪ್ತೈಃ ॥೩೯॥

ಅರ್ಥ ಃ- ಎಲೈ ಮುನಿಯೇ ! ನೀನು ಈ ಪ್ರಕಾರದ ಮಲಿನ ಅಪವಿತ್ರವಾದ ಉದರದಲ್ಲಿ ಒಂಭತ್ತು ತಿಂಗಳು ಹಾಗೂ ಹತ್ತು ತಿಂಗಳು ಪ್ರಾಪ್ತಮಾಡಿ ಉಳಿದಿರುವೆ. ಆ ಉದರದಲ್ಲಿ ಪಿತ್ತ ಮತ್ತು ಕರುಳುಗಳಿಂದ ವೇಷ್ಟಿತ, ಮೂತ್ರದ ಸ್ರವಣ, ಫೇಫಸ ಎಂದರೆ ರುಧಿರವಿಲ್ಲದೆ ಕೊಬ್ಬು ಬೆಳೆಯುವುದು, ಯಕೃತ್ ಎಂದರೆ ಕಾಳಜ, ರಕ್ತ, ಖರಿಸ್ ಎಂದರೆ ಅಪಕ್ವಮಲದಿಂದ ಕೂಡಿಕೊಂಡಿರುವ ರುಧಿರ, ಶ್ಲೇಷ್ಮ ಮತ್ತು ಕ್ರಿಮಿಜಾಲ ಎಂದರೆ ಸೂಕ್ಷ್ಮ ಜೀವಗಳ ಸಮೂಹವೆಲ್ಲವು ಕಂಡು ಬರುತ್ತದೆ, ಈ ಪ್ರಕಾರದ ಜನನಿಯ ಉದರದಲ್ಲಿ ಬಹಳಷ್ಟು ಬಾರಿ ಉಳಿದಿರುವೆ. ॥೩೯॥

ಈಗ ಮತ್ತೆ ಇದನ್ನೇ ಹೇಳುತ್ತಾರೆ, -

ದಿಯಸಂಗಟ್ಠಿಯಮಸಣಂ ಆಹಾರಿಯ ಮಾಯಭುತ್ತಮಣ್ಣಾಂತೇ ।
ಛದ್ದಿಖರಿಸಾಣ ಮಜ್ಝೇ ಜಢರೇ ವಸಿಓ ಸಿ ಜಣಣೇಏ ॥೪೦॥

ದ್ವಿಜಸಂಗಸ್ಥಿತಮಶನಂ ಆಹೃತ್ಯ ಮಾತೃಭುಕ್ತಮನ್ನಾಂತೇ ।
ಛರ್ದಿಖರಿಸಯೋರ್ಮಧ್ಯೇ ಜಠರೇ ಉಷಿತೋಽಸಿ ಜನನ್ಯಾಃ ॥೪೦॥

ಅರ್ಥ ಃ- ಎಲೈ ಜೀವನೇ ! ನೀನು ಜನನಿಯ (ಮಾತೆಯ) ಉದರ (ಗರ್ಭ)ದಲ್ಲಿವಾಸಿಸಿದೆ, ಅಲ್ಲಿತಾಯಿಯ ಮತ್ತು ತಂದೆಯ ಭೋಗದ ಕೊನೆಯಲ್ಲಿಛರ್ದ್ದಿಯ (ವಮನದ)ಅನ್ನ, ಖರಿಸದ (ರುಧಿರದಿಂದ ಕೂಡಿಕೊಂಡಿರುವ ಅಪಕ್ವಮಲದ) ಮಧ್ಯದಲ್ಲಿಉಳಿದುಕೊಂಡೆ, ಹೇಗೆ ಉಳಿದುಕೊಂಡೆ ? ಮಾತೆಯ ಹಲ್ಲುಗಳಿಂದ ಚರ್ವಣ ಮಾಡಿದ ಮತ್ತು ಆ ಹಲ್ಲುಗಳಿಗೆ ತಗಲಿದ (ಉಳಿದುಕೊಂಡಿರುವ) ಎಂಜಲು ಭೋಜನವು ಮಾತೆಯು ತಿಂದನಂತರ ಉದರದಲ್ಲಿ ಹೋದುದರ ರಸರೂಪಿಯಾದ ಆಹಾರದಿಂದ ಉಳಿದುಕೊಂಡೆ. ॥೪೦॥

ಗರ್ಭದಿಂದ ಹೊರಬಂದು ಈ ಪ್ರಕಾರ ಬಾಲ್ಯತನವನ್ನು ಭೋಗಿಸಿದೆಯೆಂದು ಈಗ ಹೇಳುತ್ತಾರೆ, -

ಸಿಸುಕಾಲೇ ಯ ಅಯಾಣೇ ಅಸುಈಮಜ್ಝಮ್ಮಿ ಲೋಲಿಓ ಸಿ ತುಮಂ ।
ಅಸುಈ ಅಸಿಯಾ ಬಹುಸೋ ಮುಣಿವರ ಬಾಲತ್ತಪತ್ತೇಣ ॥೪೧॥

---

ಮಾತಾಪಿತರ ಭೋಗಾಂತ್ಯದ ವಮನಾನ್ನ ಖರಿಸಮಧ್ಯದಲುಳಿದುಕೊಂಡೆ ।
ಮಾತೆಯ ಹಲ್ಲುಗಳಿಂ ಜಗಿದುಳಿದ ಹುಸಿಯಾಹಾರದಿಂದ ನೀನುಳಿದುಕೊಂಡೆ ॥೪೦॥

ಶಿಶುಕಾಲದಲಿ ಅಜ್ಞಾನವಸ್ಥೆಯಲಿ ನೀನು ಅಶುಚಿಮಧ್ಯೆ ಒರಗಿದೆ ।
ಅಶುಚಿ ವಸ್ತುಗಳನುಂಡೆ ಬಹುಬಾರಿ ಮುನಿವರ ! ಬಾಲತ್ವಕಾಲದಲಿ ॥೪೧॥

**ಶಿಶುಕಾಲೇ ಚ ಅಜ್ಞಾನೇ ಅಶುಚಿಮಧ್ಯೇ ಲೋಲಿತೋಽಸಿತ್ವಮ್ ।**
**ಅಶುಚಿಃ ಅಶಿತಾ ಬಹುಶಃ ಮುನಿವರ ! ಬಾಲತ್ವಪ್ರಾಪ್ತೇನ ॥೪೧॥**

ಅರ್ಥ ಃ- ಎಲೈ ಮುನಿವರನೇ ! ನೀನು ಬಾಲಕತನದ ಸಮಯದಲ್ಲಿ ಅಜ್ಞಾನದ ಅವಸ್ಥೆಯಲ್ಲಿ ಅಶುಚಿ (ಅಪವಿತ್ರ) ಸ್ಥಾನಗಳಲ್ಲಿ ಅಶುಚಿಯ ಮಧ್ಯದಲ್ಲಿ ಮಲಗಿಕೊಂಡೆ ಮತ್ತು ಬಹಳಷ್ಟು ಬಾರಿ ಅಶುಚಿಯಾದ ವಸ್ತುಗಳನ್ನೇ ಭಕ್ಷಿಸಿದೆ, ಬಾಲ್ಯಾವಸ್ಥೆಯನ್ನು ಪಡೆದು ಈ ಪ್ರಕಾರ ಚೇಷ್ಟೆಗಳನ್ನು ಮಾಡಿರುವೆ.

ಭಾವಾರ್ಥ ಃ- ಇಲ್ಲಿ 'ಮುನಿವರ'ವೆಂಬ ಸಂಬೋಧನವಿದೆ ಅದನ್ನು ಮೊದಲಿನ ಹಾಗೆಯೇ ತಿಳಿಯಬೇಕು, ಬಾಹ್ಯ ಆಚರಣೆ ಸಹಿತ ಮುನಿಯಿರುವವನಿಗೆ ಇಲ್ಲಿ ಮುಖ್ಯರೂಪದಿಂದ ಉಪದೇಶವಿದೆ. ನೀನು ಬಾಹ್ಯ ಆಚರಣೆ ಮಾಡಿರುವೆ ಅದಂತೂ ದೊಡ್ಡಕಾರ್ಯ ಮಾಡಿರುವೆ, ಆದರೆ ಭಾವಗಳಿಲ್ಲದೆ ಇದು ನಿಷ್ಫಲವಿರುವುದರಿಂದ ಭಾವದ ಸನ್ಮುಖವಿರಬೇಕು, ಭಾವಗಳಿಲ್ಲದುದರಿಂದಲೇ ಈ ಅಪವಿತ್ರವಾದ ಸ್ಥಾನಗಳು ದೊರಕಿಕೊಂಡಿವೆ. ॥೪೧॥

ಈ ದೇಹವು ಹೇಗಿದೆಯೆಂಬುದರ ವಿಚಾರಮಾಡೆಂದು ಈಗ ಹೇಳುತ್ತಾರೆ, –

**ಮಂಸಟ್ಠಿ ಸುಕ್ಕಸೋಣಿಯಪಿತ್ತಂತಸವತ್ತಕುಣಿಮದುಗ್ಗಂಧಂ ।**
**ಖರಿಸವಸಾಪೂಯ [೧]ಖಿಬ್ಬಿಸ ಭರಿಯಂ ಚಿಂತೇಹಿ ದೇಹಉಡಂ ॥೪೨॥**

**ಮಾಂಸಾಸ್ಥಿಶುಕ್ರಶ್ರೋಣಿತಪಿತ್ತಾಂತ್ರಸ್ರವತ್ಕುಣಿಮದುರ್ಗಂಧಮ್ ।**
**ಖರಿಸವಸಾಪೂಯಕಿಲ್ಬಿಷಭರಿತಂ ಚಿಂತಯ ದೇಹಕುಟಮ್ ॥೪೨॥**

ಅರ್ಥ ಃ- ಎಲೈ ಮುನಿಯೇ ! ನೀನು ಈ ದೇಹರೂಪವಾದ ಘಟವು ಹೇಗಿದೆಯೆಂಬುದರ ವಿಚಾರ ಮಾಡು, ಅದು ಮಾಂಸ, ಮೂಳೆ, ಶುಕ್ರ(ವೀರ್ಯ), ಶ್ರೋಣಿತ (ರುಧಿರ), ಪಿತ್ತ (ಉಷ್ಣವಿಕಾರ) ಮತ್ತು ಕರುಳು ಮೊದಲಾದವುಗಳಿಂದ ತತ್ಕಾಲ ಮೃತಕದ ಹಾಗೆ ದುರ್ಗಂಧವಿದೆ ಮತ್ತು ಖರಿಸ (ರುಧಿರದಿಂದ ಕೂಡಿಕೊಂಡಿರುವ ಅಪಕ್ವಮಲ), ನೆಣ, ಕೀವು (ಕೆಟ್ಟ ರಕ್ತ) ಮತ್ತು ಕೊಳೆ ಈ ಎಲ್ಲ ಮಲಿನ ವಸ್ತುಗಳಿಂದ ಪರಿಪೂರ್ಣ ತುಂಬಿಕೊಂಡಿರುವ ದೇಹರೂಪ ಘಟದ ವಿಚಾರ ಮಾಡು.

ಭಾವಾರ್ಥ ಃ- ಈ ಜೀವನಂತೂ ಪವಿತ್ರನಿದ್ದು ಶುದ್ಧ ಜ್ಞಾನಮಯನಿದ್ದಾನೆ ಮತ್ತು ದೇಹವು ಹೀಗಿದೆ, ಇದರಲ್ಲಿ ವಾಸ ಮಾಡುವುದು ಯೋಗ್ಯವಿಲ್ಲವೆಂದು ತಿಳಿಸಿಕೊಡಲಾಗಿದೆ. ॥೪೨॥

ಯಾವನು ಕುಟುಂಬದಿಂದ ಬಿಡುಗಡೆಯಾಗಿದ್ದಾನೆ ಅವನು ಬಿಡುಗಡೆ ಹೊಂದಿಲ್ಲ ಭಾವದಿಂದ ಬಿಡುಗಡೆ ಹೊಂದಿದವನನ್ನೇ ಬಿಡುಗಡೆಹೊಂದಿದ್ದಾನೆಂದು ಹೇಳುತ್ತಾರೆಂಬುದನ್ನು ಈಗ ಹೇಳುತ್ತಾರೆ, –

---

**ರುಧಿರ ಮಾಂಸ ಮೂಳೆ ಶುಕ್ರ ಪಿತ್ತ ಕರುಳುಗಳಿಂ ಶವಸಮದುರ್ಗಂಧ ಮೇಣ್ ।**
**ಮೇಧಸ್ಸು ಕೀವಾದಿ ಅಶುಚಿಭರಿತೀ ದೇಹಘಟದ ವಿಚಾರಮಾಡು ನೀನು ॥೪೨॥**

---

೧ 'ಖಿಂಬಿಸ'ವೆಂದು ಪಾಠಾಂತರವಿದೆ.

ಭಾವವಿಮುತ್ತೋ ಮುತ್ತೋ ಣ ಯ ಮುತ್ತೋ ಬಂಧವಾಇಮಿತ್ತೇಣ ।
ಇಯ ಭಾವಿಊಣ ಉಜ್ಝಸು ಗಂಥಂ ಅಬ್ಭಂತರಂ ಧೀರ ॥೪೩॥

ಭಾವವಿಮುಕ್ತಃ ಮುಕ್ತಃ ನ ಚ ಮುಕ್ತಃ ಬಾಂಧವಾದಿಮಿತ್ರೇಣ ।
ಇತಿ ಭಾವಯಿತ್ವಾ ಉಜ್ಝಯ ಗಂಧಮಾಭ್ಯಂತರಂ ಧೀರ ! ॥೪೩॥

ಅರ್ಥ ಃ- ಯಾವ ಮುನಿಯು ಭಾವಗಳಿಂದ ಮುಕ್ತನಾಗಿದ್ದಾನೆ ಅವನನ್ನು ಮುಕ್ತನೆಂದು ಹೇಳುತ್ತಾರೆ ಮತ್ತು ಬಾಂಧವ ಮೊದಲಾದ ಕುಟುಂಬ ಹಾಗೂ ಮಿತ್ರ ಮೊದಲಾದವರಿಂದ ಮುಕ್ತನಾದವನನ್ನು ಮುಕ್ತನೆಂದು ಹೇಳುವುದಿಲ್ಲ, ಆದುದರಿಂದ ಎಲೈ ಧೀರ ಮುನಿಯೇ ! ನೀನು ಈ ಪ್ರಕಾರ ತಿಳಿದುಕೊಂಡು ಅಭ್ಯಂತರದ ವಾಸನೆಗಳನ್ನು ಬಿಟ್ಟುಕೊಡು.

ಭಾವಾರ್ಥ ಃ- ಯಾವನು ಬಾಹ್ಯ ಬಾಂಧವ ಕುಟುಂಬ ಹಾಗೂ ಮಿತ್ರರುಗಳನ್ನು ಬಿಟ್ಟುಕೊಟ್ಟು ನಿರ್ಗ್ರಂಥನಾಗಿದ್ದಾನೆ ಮತ್ತು ಅಭ್ಯಂತರದ ಮಮತ್ವಭಾವರೂಪದ ವಾಸನೆ ಹಾಗೂ ಇಷ್ಟ-ಅನಿಷ್ಟಗಳಲ್ಲಿ ರಾಗ-ದ್ವೇಷದ ವಾಸನೆಯು ಬಿಟ್ಟಿರದಿದ್ದರೆ ಅವನನ್ನು ನಿರ್ಗ್ರಂಥನೆಂದು ಹೇಳುವುದಿಲ್ಲ, ಅಭ್ಯಂತರದ ವಾಸನೆಯು ಬಿಟ್ಟುಹೋದಮೇಲೆ ನಿರ್ಗ್ರಂಥನಾಗುತ್ತಾನೆ. ಆದುದರಿಂದ ಅಭ್ಯಂತರದ ಮಿಥ್ಯಾತ್ವ ಕಷಾಯಗಳನ್ನು ಬಿಟ್ಟುಕೊಟ್ಟು ಭಾವಮುನಿಯಾಗಬೇಕೆಂದು ಈ ಉಪದೇಶವಿದೆ. ॥೪೩॥

ಮೊದಲು ಮುನಿಯಾದವರು ಭಾವಶುದ್ಧಿಯಿಲ್ಲದೆ ಸಿದ್ಧಿ ಪಡೆಯಲಿಲ್ಲ. ಅವರ ಉದಾಹರಣೆಯೆಂದು ಕೇವಲ ಹೆಸರು ಹೇಳುತ್ತಾರೆ. ಮೊದಲು ಬಾಹುಬಲಿಯ ಉದಾಹರಣೆಯನ್ನು ಹೇಳುತ್ತಾರೆ,-

ದೇಹಾದಿಚತ್ತಸಂಗೋ ಮಾಣಕಸಾಏಣ ಕಲುಸಿಓ ಧೀರ ! ।
ಅತ್ತಾವಣೇಣ ಜಾದೋ ಬಾಹುಬಲಿ [೧]ಕಿತ್ತಿಯಂ ಕಾಲಂ ॥೪೪॥

ದೇಹಾದಿತ್ಯಕ್ತಸಂಗಃ ಮಾನಕಷಾಯೇನ ಕಲುಷಿತಃ ಧೀರಃ ! ।
ಆತಾಪನೇನ ಜಾತಃ ಬಾಹುಬಲೀ ಕಿಯಂತ ಕಾಲಮ್ ॥೪೪॥

ಅರ್ಥ ಃ- ಭ. ಋಷಭದೇವರ ಪುತ್ರನಾದ ಬಾಹುಬಲಿಯು ದೇಹಾದಿಗಳ ಪರಿಗ್ರಹವನ್ನು ಬಿಟ್ಟುಕೊಟ್ಟು ನಿರ್ಗ್ರಂಥ ಮುನಿಯಾದರೂ ಕೂಡ ಮಾನಕಷಾಯದಿಂದ ಕಲುಷಿತ ಪರಿಣಾಮರೂಪನಾಗಿ ಕೆಲವು ಸಮಯದವರೆಗೆ ಆತಾಪನಯೋಗ ಧಾರಣಮಾಡಿ ಸ್ಥಿರನಾಗಿ ಹೋದರೂ ಕೂಡ ಸಿದ್ಧಿ ಪಡೆಯಲಿಲ್ಲ.

---

ಭಾವವಿಮುಕ್ತಮುಕ್ತನಿಹನು ಸ್ವಜನಾದಿಗಳಿಂದ ಮುಕ್ತನು ಮುಕ್ತನಿಲ್ಲ ।
ಭಾವಿಸಿ ಇದನೆಲೆ ಧೀರ ! ನೀನು ಅಭ್ಯಂತರ ಪರಿಗ್ರಹ ಪರಿತ್ಯಜಿಸು ॥೪೩॥

ದೇಹಾದಿಸಂಗ ತ್ಯಜಿಸಿದರು ಮಾನಕಷಾಯದಿಂ ಕಲುಷಿತನಾದ ಧೀರ !
ಬಾಹುಬಲಿ ಆತಪನ ಮಾಡುತಿದ್ದರು ಕೂಡ ಸಿದ್ಧಿಯನು ಪಡೆಯಲಿಲ್ಲ ॥೪೪॥

---

೧ 'ಕಿತ್ತಿಯಂ'ಗೆ ಪ್ರತಿಯಾಗಿ 'ಕಿತಿಯಂ' ಎಂದು ಪಾಠಾಂತರವಿದೆ.

ಭಾವಾರ್ಥ ಃ- ಭರತ ಚಕ್ರವರ್ತಿಯು ಬಾಹುಬಲಿಯೊಡನೆ ವಿರೋಧ ಮಾಡಿ ಯುದ್ಧವನ್ನಾರಂಭಿಸಿದನು, ಆದರಲ್ಲಿ ಭರತನ ಅವಮಾನವಾಯಿತು. ಆದರ ನಂತರ ಬಾಹುಬಲಿಯು ವಿರಕ್ತನಾಗಿ ನಿರ್ಗ್ರಂಥ ಮುನಿಯಾದನು, ಆದರೆ ನಾನು ಭರತನ ಭೂಮಿಯಲ್ಲಿ ಹೇಗೆ ನಿಲ್ಲುವುದೆಂದು ಸ್ವಲ್ಪ ಮಾನಕಷಾಯದ ಕಲುಷತೆಯುಳಿಯಿತು, ಆಗ ಕಾಯೋತ್ಸರ್ಗ ಯೋಗದಿಂದ ಒಂದು ವರುಷದವರೆಗೆ ನಿಂತುಕೊಂಡರೂ ಕೂಡ ಕೇವಲ ಜ್ಞಾನ ಪಡೆಯಲಿಲ್ಲ. ಅನಂತರ ಕಲುಷತೆಯು ದೂರವಾದೊಡನೆ ಕೇವಲಜ್ಞಾನವು ಉತ್ಪನ್ನವಾಯಿತು. ಆದುದರಿಂದ ಮಹಾನ ಪುರುಷನು ಅಧಿಕಶಕ್ತಿಯ ಧಾರಕನು ಕೂಡ ಭಾವಶುದ್ಧಿಯಿಲ್ಲದೆ ಸಿದ್ಧಿಪಡೆಯಲಿಲ್ಲವೆಂದ ಮೇಲೆ ಉಳಿದವರ ಮಾತೇನೆಂದು ಹೇಳುತ್ತಾರೆ. ಆದುದರಿಂದ ಭಾವಗಳನ್ನು ಶುದ್ಧಮಾಡಿಕೊಳ್ಳಬೇಕೆಂಬುದೇ ಇಲ್ಲಿನ ತಾತ್ಪರ್ಯವಿದೆ, ಉಪದೇಶವಿದೆ. ॥೪೪॥

ಈಗ ಮಧುಪಿಂಗಲ ಮುನಿಯ ಉದಾಹರಣೆ ಹೇಳುತ್ತಾರೆ, -

**ಮಹುಪಿಂಗೋ ಣಾಮ ಮುಣೀ ದೇಹಾಹಾರಾದಿಚತ್ತವಾವಾರೋ ।**
**ಸವಣತ್ತಣಂ ಣ ಪತ್ತೋ ಣಿಯಾಣಮಿತ್ತೇಣ ಭವಿಯಣುಯ ॥೪೫॥**

**ಮಧುಪಿಂಗೋ ನಾಮ ಮುನಿಃ ದೇಹಾಹಾರಾದಿತ್ಯಕ್ತವ್ಯಾಪಾರಃ ।**
**ಶ್ರಮಣತ್ವಂ ನ ಪ್ರಾಪ್ತಃ ನಿದಾನಮಾತ್ರೇಣ ಭವ್ಯನುತ ! ॥೪೫॥**

ಅರ್ಥ ಃ- ಮಧುಪಿಂಗಲನಾಮದ ಮುನಿಯು ದೇಹ ಆಹಾರಾದಿಗಳಲ್ಲಿನ ವ್ಯಾಪಾರವನ್ನು ಬಿಟ್ಟುಕೊಟ್ಟರೂ ಕೂಡ ನಿದಾನಮಾತ್ರದಿಂದ ಭಾವಶ್ರಮಣತೆಗೆ ಪ್ರಾಪ್ತನಾಗಲಿಲ್ಲ ಭವ್ಯ ಜೀವರುಗಳಿಂದ ನಮಸ್ಕರಿಸಲು ಯೋಗ್ಯನಾದ ಮುನಿಯೇ ನೀನು ಅವನನ್ನು ನೋಡು.

ಭಾವಾರ್ಥ ಃ- ಮಧುಪಿಂಗಲನಾಮದ ಮುನಿಯ ಕಥೆಯು ಪುರಾಣದಲ್ಲಿದೆ ಅದರ ಸಂಕ್ಷೇಪವು ಹೀಗಿದೆ- ಈ ಭರತಕ್ಷೇತ್ರದ ಸುರಮ್ಯದೇಶದಲ್ಲಿನ ಪೋದನಪುರದ ದೊರೆ ತೃಣಪಿಂಗಲನ ಪುತ್ರನಾದ ಮಧುಪಿಂಗಲನಿದ್ದನು. ಅವನು ಚಾರಣಯುಗಲನಗರದ ದೊರೆ ಸುಯೋಧನನ ಪುತ್ರಿಯಾದ ಸುಲಸೆಯ ಸ್ವಯಂವರಕ್ಕೆ ಬಂದಿದ್ದನು. ಅಲ್ಲಿಯೇ ಸಾಕೇತಪುರದ ದೊರೆಯಾದ ಸಗರನು ಬಂದಿದ್ದನು. ಸಗರನ ಮಂತ್ರಿಯು ಕಪಟದಿಂದ ನವೀನ ಸಾಮುದ್ರಿಕ ಶಾಸ್ತ್ರವನ್ನು ರಚಿಸಿ,ಮಧುಪಿಂಗಲನ ಕಣ್ಣುಗಳು ಹಳದಿ (ಬೆಕ್ಕಿನ ಕಣ್ಣುಗಳಂತೆ) ಇವೆ. ಯಾವ ಕನ್ಯೆಯು ಇವನನ್ನು ವರಿಸುವಳು ಅವಳು ಮರಣಕ್ಕೆ ಪ್ರಾಪ್ತಳಾಗುವಳೆಂದು ಹೇಳಿ ಮಧುಪಿಂಗಲನನ್ನು ದೋಷಿಯೆಂದು ತಿಳಿಸಿದನು. ಆಗ ಕನ್ಯೆಯು ಸಗರನ ಕೊರಳಿಗೆ ವರಮಾಲೆ ಹಾಕಿದಳು. ಮಧುಪಿಂಗಲನನ್ನು ವರಿಸಲಿಲ್ಲ, ಆಗ ಮಧುಪಿಂಗಲನು ವಿರಕ್ತನಾಗಿ ದೀಕ್ಷೆ ಸ್ವೀಕರಿಸಿದನು.

ಪುನಃ ಕಾರಣ ಪಡೆದು ಸಗರನ ಮಂತ್ರಿಯ ಕಪಟವನ್ನು ತಿಳಿದುಕೊಂಡು ಕ್ರೋಧದಿಂದ ನನ್ನ ತಪಸ್ಸಿನ ಫಲವಿದ್ದರೆ 'ಮುಂದಿನ ಜನ್ಮದಲ್ಲಿ ಸಗರನ ಮಂತ್ರಿಯನ್ನು ನಿರ್ಮೂಲ ಮಾಡುವೆ'ನೆಂದು ನಿದಾನ ಮಾಡಿದನು, ಅದರ ನಂತರ

---

ಆ ಮಧುಪಿಂಗಲನಾಮದ ಮುನಿ ದೇಹ ಆಹಾರಾದಿಗಳ ವ್ಯಾಪಾರ ಬಿಟ್ಟು ।
ಶ್ರಮಣತ್ವವನ್ನು ಪಡೆಯಲಿಲ್ಲ ನಿದಾನಮಾತ್ರದಿಂದೆಲೆ ಭವ್ಯನುತನೇ ! ॥೪೫॥

ಮಧುಪಿಂಗಲನು ಸತ್ತು ಮಹಾಕಾಲಾಸುರನಾಮದ ಅಸುರದೇವನಾದನು, ಆಗ ಸಗರನನ್ನು ಮಂತ್ರಿಸಹಿತವಾಗಿ ಕೊಲ್ಲುವ ಉಪಾಯ ಯೋಚಿಸತೊಡಗಿದನು. ಅವನಿಗೆ ಕ್ಷೀರಕದಂಬ ಬ್ರಾಹ್ಮಣನ ಪುತ್ರನಾದ ಪಾಪಿ ಪರ್ವತನು ದೊರಕಿದನು. ಆಗ ಅವನನ್ನು ಪಶುಗಳ ಹಿಂಸಾರೂಪವಾದ ಯಜ್ಞದ ಸಹಾಯಕನನ್ನಾಗಿ ಮಾಡಿಕೊಂಡು ನೀನು ಸಗರ ರಾಜನಿಗೆ ಯಜ್ಞದ ಉಪದೇಶ ಮಾಡಿ ಯಜ್ಞ ಮಾಡಿಸು, ನಾನು ನಿನ್ನ ಯಜ್ಞದಲ್ಲಿ ಸಹಾಯ ಮಾಡುವೆನೆಂದು ಹೇಳು- ಎಂದು ಹೇಳಿ ಕಳಿಸಿದನು. ಆಗ ಪರ್ವತನು ಸಗರನಿಂದ ಯಜ್ಞ ಮಾಡಿಸಿದನು, ಪಶುಗಳ ಹೋಮವಾಯಿತು. ಆ ಪಾಪದಿಂದ ಸಗರನು ಏಳನೆಯ ನರಕಕ್ಕಿಳಿದನು ಮತ್ತು ಸಹಾಯಕನಾದ ಕಾಲಾಸುರನು ಯಜ್ಞ ಮಾಡುವವರನ್ನು ಸ್ವರ್ಗಕ್ಕೆ ಹೋದಂತೆ ತೋರಿಸಿದನು. ಹೀಗೆ ಮಧುಪಿಂಗಲನಾಮದ ಮುನಿಯು ನಿದಾನದಿಂದ ಮಹಾಕಾಲಾಸುರನಾಗಿ ಮಹಾಪಾಪ ಸಂಪಾದಿಸಿದನು, ಆದುದರಿಂದ ಮುನಿಯಾದ ಮೇಲೂ ಭಾವವು ಕೆಟ್ಟುಹೋದರೆ ಸಿದ್ಧಿಯನ್ನು ಪಡೆಯುವುದಿಲ್ಲವೆಂದು ಆಚಾರ್ಯರು ಹೇಳುತ್ತಾರೆ. ಇವನ ಕಥೆಯನ್ನು ಪುರಾಣದಿಂದ ವಿಸ್ತಾರವಾಗಿ ತಿಳಿಯಬೇಕು. ॥೪೫॥

ಈಗ ವಶಿಷ್ಠ ಮುನಿಯ ಉದಾಹರಣೆ ಹೇಳುತ್ತಾರೆ, -

**ಅಣ್ಣಂ ಚ ವಸಿಟ್ಠಮುಣೀ ಪತ್ತೋ ದುಕ್ಖಂ ಣಿಯಾಣದೋಸೇಣ .**
**ಸೋ ಣತ್ಥಿ ವಾಸಠಾಣೋ ಜತ್ಥ ಣ ಢುರುಢುಲ್ಲಿಓ ಜೀವೋ ॥೪೬॥**

**ಅನ್ಯಶ್ಚ ವಸಿಷ್ಠಮುನಿಃ ಪ್ರಾಪ್ತಃದುಃಖಂ ನಿದಾನದೋಷೇಣ ।**
**ತನ್ನಾಸ್ತಿ ವಾಸಸ್ಥಾನಂ ಯತ್ರ ನ ಭ್ರಮಿತಃ ಜೀವ ! ॥೪೬॥**

ಅರ್ಥ :- ಬೇರೆ ಮತ್ತೊಬ್ಬ ವಶಿಷ್ಠನಾಮದ ಮುನಿಯು ನಿದಾನದ ದೋಷದಿಂದ ದುಃಖಕ್ಕೆ ಪ್ರಾಪ್ತನಾದನು, ಆದುದರಿಂದ ಈ ಜೀವನು ಜನ್ಮಮರಣ ಸಹಿತವಾಗಿ ಭ್ರಮಣಕ್ಕೆ ಪ್ರಾಪ್ತವಾಗಿರದಂಥ ವಾಸಸ್ಥಾನವು ಲೋಕದಲ್ಲಿ ಯಾವುದೂ ಇಲ್ಲ.

ಭಾವಾರ್ಥ :- ವಶಿಷ್ಠಮುನಿಯ ಕಥೆಯು ಹೀಗಿದೆ-ಗಂಗಾ ಮತ್ತು ಗಂಧವತಿ ಇವೆರಡೂ ನದಿಗಳ ಸಂಗಮವಾಗಿರುವಲ್ಲಿ ಜಠರಕೌಶಿಕನಾಮದ ತಪಸ್ವಿಯ ಹಳ್ಳಿಯಿತ್ತು. ಅಲ್ಲಿ ವಶಿಷ್ಠನಾಮದ ಓರ್ವ ತಪಸ್ವಿಯು ಪಂಚಾಗ್ನಿಯಿಂದ ತಪಸ್ಸು ಮಾಡುತ್ತಿದ್ದನು. ಅಲ್ಲಿ ಗುಣಭದ್ರ, ವೀರಭದ್ರನಾಮದ ಈರ್ವರು ಚಾರಣ ಮುನಿಗಳು ಬರುತ್ತಾರೆ. ಬಂದು ಆ ವಶಿಷ್ಠ ತಪಸ್ವಿಗೆ ನೀನು ಅಜ್ಞಾನ ತಪಸ್ಸು ಮಾಡುತ್ತಿರುವೆ ಇದರಲ್ಲಿ ಜೀವಗಳ ಹಿಂಸೆಯಾಗುತ್ತದೆಯೆಂದು ಹೇಳಿದಾಗ ತಪಸ್ವಿಯು ಆ ಪ್ರತ್ಯಕ್ಷ ಹಿಂಸೆಯನ್ನು ನೋಡಿದನು ಮತ್ತು ವಿರಕ್ತನಾಗಿ ಜೈನದೀಕ್ಷೆ ಸ್ವೀಕರಿಸಿದನು, ಮಾಸೋಪವಾಸದೊಡನೆ ಆತಾಪನಯೋಗ ಸ್ಥಾಪಿಸಿದನು, ಆ ತಪದ ಮಾಹಾತ್ಮ್ಯದಿಂದ ಏಳು ಜನ ವ್ಯಂತರದೇವಗಳು ಬಂದು ನಮಗೆ ಆಜ್ಞೆ ಮಾಡೆಂದು ಹೇಳುತ್ತಾರೆ. ಆಗ ವಶಿಷ್ಠನು 'ಈಗಂತೂ ನನಗೆ ಯಾವ ಪ್ರಯೋಜನವಿಲ್ಲ, ಜನ್ಮಾಂತರದಲ್ಲಿ ನಿಮ್ಮ ಸ್ಮರಣೆ ಮಾಡುವೆ'ನೆಂದು ಹೇಳುತ್ತಾನೆ. ನಂತರ ವಶಿಷ್ಠನು ಮಥುರಾಪುರಕ್ಕೆ ಬಂದು ಮಾಸೋಪವಾಸದೊಡನೆ ಆತಾಪನಯೋಗ ಸ್ಥಾಪಿಸುವನು.

---

**ಬೇರೊಬ್ಬ ವಶಿಷ್ಠನಾಮದ ಮುನಿ ದುಃಖ ಪಡೆದನು ನಿದಾನದೋಷದಿಂದ ।**
**ಬೇರೊಂದು ವಾಸಸ್ಥಾನವಿಲ್ಲದರೊಳು ಜೀವನು ಭ್ರಮಣಮಾಡಿಲ್ಲವೆಂಬುದು ॥೪೬॥**

ಮಥುರಾಪಟ್ಟಣದ ದೊರೆಯಾದ ಉಗ್ರಸೇನನು ಅವನನ್ನು ನೋಡಿ ಭಕ್ತಿವಶದಿಂದ ನಾನು ಇವರಿಗೆ ಪಾರಣೆ ಮಾಡಿಸುವೆನೆಂದು ವಿಚಾರ ಮಾಡಿದನು. ಈ ಮುನಿಗೆ ಬೇರೆ ಯಾರೂ ಆಹಾರ ಕೊಡಕೂಡದೆಂದು ನಗರದಲ್ಲಿ ಆಜ್ಞೆ ಹೊರಡಿಸಿದನು. ಅನಂತರ ಪಾರಣೆಯ ದಿವಸ ನಗರದಲ್ಲಿ ಬಂದು ಅಲ್ಲಿ ಅಗ್ನಿಯ ಉಪದ್ರವ ನೋಡಿ ಅಂತರಾಯವೆಂದು ತಿಳಿದುಕೊಂಡು ಮರಳಿ ಹೋದನು. ಮತ್ತೆ ಮಾಸೋಪವಾಸ ಮಾಡಿದನು ಪುನಃ ಪಾರಣೆಯದಿವಸ ನಗರದಲ್ಲಿ ಬಂದಾಗ ಆನೆಯ ಕ್ಷೋಭವನ್ನು ನೋಡಿ ಅಂತರಾಯವೆಂದು ತಿಳಿದುಕೊಂಡು ಮರಳಿ ಹೋದನು. ಮತ್ತೆ ಮಾಸೋಪವಾಸ ಮಾಡಿದನು, ಅನಂತರ ಪಾರಣೆಯ ದಿವಸ ಪುನಃ ನಗರದಲ್ಲಿ ಬಂದನು. ಆಗ ಜರಾಸಂಧ ದೊರೆಯ ಪತ್ರ ಬಂದುದರ ನಿಮಿತ್ತದಿಂದ ದೊರೆಯ ಚಿತ್ತವು ವ್ಯಗ್ರವಾಗಿರುವುದರಿಂದ ಮುನಿಯನ್ನು ಬಲಗೊಳ್ಳಲಿಲ್ಲ, ಆಗ ಅಂತರಾಯವೆಂದು ನಂಬಿ ಮರಳಿ ಕಾಡಿನಲ್ಲಿ ಹೋಗುವಾಗ 'ದೊರೆಯು ತಾನೂ ಮುನಿಗೆ ಆಹಾರ ಕೊಡಲಿಲ್ಲ ಮತ್ತು ಬೇರೆ ಕೊಡುವವರನ್ನೂ ತಡೆದನೆ'ಂದು ಜನರಾಡುತ್ತಿರುವ ವಚನಗಳನ್ನು ಕೇಳಿ ದೊರೆಯ ಮೇಲೆ ಕ್ರೋಧವುಂಟಾಗಿ 'ಈ ದೊರೆಯ ಮಗನಾಗಿ ದೊರೆಯ ನಿಗ್ರಹ ಮಾಡಿ ನಾನು ರಾಜ್ಯ ಮಾಡುವೆ'ನೆಂದು ನಿದಾನ ಮಾಡಿದನು, ನನಗೆ ಈ ತಪಸ್ಸಿನ ಫಲವು ಹೀಗೆ ಲಭಿಸಲೆಂದು ಬಯಸಿ ನಿದಾನದಿಂದ ಸತ್ತನು.

ಉಗ್ರಸೇನ ದೊರೆಯ ರಾಣಿ ಪದ್ಮಾವತಿಯ ಗರ್ಭದಲ್ಲಿ ಬಂದನು, ಪೂರ್ಣಮಾಸಗಳಾದ ಮೇಲೆ ಜನ್ಮ ಪಡೆದಾಗ ಇವನನ್ನು ಕ್ರೂರದೃಷ್ಟಿಯಿಂದ ನೋಡಿ ಒಂದು ರೀತಿಯ ಹುಲ್ಲಿನ ಪೆಟ್ಟಿಗೆಯಲ್ಲಿಟ್ಟು ವೃತ್ತಾಂತದ ಲೇಖದೊಡನೆ ಯಮುನಾ ನದಿಯಲ್ಲಿ ತೇಲಿಬಿಟ್ಟನು. ಕೌಶಾಂಬೀನಗರದ ಮಂದೋದರಿನಾಮದ ಕಲಾಲಿನಿಯು ಅದನ್ನು ತೆಗೆದುಕೊಂಡು ಪುತ್ರಬುದ್ಧಿಯಿಂದ ಜೋಪಾನ ಮಾಡಿದಳು, ಕಂಸನೆಂದು ಹೆಸರಿಟ್ಟಳು. ಅವನು ದೊಡ್ಡವನಾಗಿ ಬಾಲಕರ ಜತೆ ಆಡುವಾಗ ಎಲ್ಲರಿಗೆ ದುಃಖ ಕೊಡತೊಡಗಿದನು, ಆ ಮಂದೋದರಿಯು ನಿಂದೆಯ ದುಃಖದಿಂದ ಅವನನ್ನು ಹೊರಗೆ ಹಾಕಿದಳು. ಮುಂದೆ ಆ ಕಂಸನು ಶೌರ್ಯಪುರಕ್ಕೆ ಹೋಗಿ ಅಲ್ಲಿ ವಸುದೇವ ದೊರೆಯ ಸೇವಕನಾಗಿ ಉಳಿದನು. ಆಗ ಪೋದನಪುರದ ದೊರೆ ಸಿಂಹರಥನನ್ನು ಸೋಲಿಸಿ ಕಟ್ಟಿ ತಂದವನಿಗೆ ಅರ್ಧರಾಜ್ಯದೊಡನೆ ತನ್ನ ಮಗಳನ್ನು ವಿವಾಹ ಮಾಡಿಕೊಡುವೆನೆಂಬ ಪತ್ರವು ಪ್ರತಿನಾರಾಯಣನಾದ ಜರಾಸಂಧನಿಗೆ ಬಂತು. ಆಗ ವಸುದೇವನು ಕಂಸನೊಡನೆ ಅಲ್ಲಿ ಹೋಗಿ ಯುದ್ಧಮಾಡಿ ಆ ಸಿಂಹರಥನನ್ನು ಕಟ್ಟಿ ತಂದು ಜರಾಸಂಧನಿಗೆ ಒಪ್ಪಿಸಿದನು. ಜರಾಸಂಧನು ತನ್ನ ಪುತ್ರಿ ಜೀವಂಜಶೆಯೊಡನೆ ಅರ್ಧ ರಾಜ್ಯ ಕೊಡುವನು. ಆಗ ಸಿಂಹರಥನನ್ನು ಕಂಸನು ಕಟ್ಟಿ ತಂದಿದ್ದಾನೆ ಅವನಿಗೆ ಕೊಡೆಂದು ವಸುದೇವನು ಹೇಳುತ್ತಾನೆ. ಆಗ ಜರಾಸಂಧನು ಅವನ ಕುಲ ತಿಳಿಯುವ ಸಲುವಾಗಿ ಮಂದೋದರಿಯನ್ನು ಕರೆಸಿ ಕುಲದ ನಿಶ್ಚಿತ ಮಾಡಿ ಅವನಿಗೆ ಜೀವಂಜಸೆಯನ್ನು ಕೊಟ್ಟು ಮದುವೆ ಮಾಡುವನು, ಮುಂದೆ ಕಂಸನು ಮಥುರೆಯ ರಾಜ್ಯವನ್ನು ವಶಪಡಿಸಿಕೊಂಡು ತಂದೆಯಾದ ಉಗ್ರಸೇನನನ್ನು ಹಾಗೂ ಮಾತೆ ಪದ್ಮಾವತಿಯನ್ನು ಕಾರಾಗೃಹದಲ್ಲಿಟ್ಟನು, ನಂತರ ನಾರಾಯಣನಾದ ಕೃಷ್ಣನಿಂದ ಮರಣ ಹೊಂದಿದನು. ಇದರ ವಿಸ್ತಾರಪೂರ್ವಕವಾದ ಕಥೆಯನ್ನು ಉತ್ತರ ಪುರಾಣಾದಿಗಳಿಂದ ತಿಳಿದುಕೊಳ್ಳಬೇಕು. ಈ ಪ್ರಕಾರ ವಶಿಷ್ಠಮುನಿಯು ನಿದಾನದಿಂದ ಸಿದ್ಧಿಯನ್ನು ಪಡೆಯಲಿಲ್ಲ, ಆದುದರಿಂದ ಭಾವಲಿಂಗದಿಂದಲೇ ಸಿದ್ಧಿಯಿದೆ. ॥೪೬॥

ಭಾವರಹಿತತೆಯಿಂದ ಎಂಭತ್ತಾ ಲ್ಕುಲಕ್ಷ ಯೋನಿಗಳಲ್ಲಿ ಭ್ರಮಣ ಮಾಡುತ್ತಾನೆಂದು ಈಗ ಹೇಳುತ್ತಾರೆ, –

**ಸೋ ಣತ್ಥಿ ತಪ್ಪಏಸೋ ಚಉರಾಸೀಲಕ್ಖಜೋಣಿವಾಸಮ್ಮಿ ।**
**ಭಾವವಿರಓ ವಿ ಸವಣೋ ಜತ್ಥ ಣ ಢುರುಢುಲ್ಲಿಓ [೧]ಜೀವ ॥೪೭॥**

ಸಃ ನಾಸ್ತಿ ತಂ ಪ್ರದೇಶಃ ಚತುರಶೀತಿಲಕ್ಷಯೋನಿವಾಸೇ ।
ಭಾವವಿರತಃ ಅಪಿ ಶ್ರಮಣಃ ಯತ್ರ ನ ಭ್ರಮಿತಃ ಜೀವಃ ॥೪೭॥

ಅರ್ಥ :– ಈ ಸಂಸಾರದಲ್ಲಿ ಎಂಭತ್ತಾ ್ನಲ್ಕು ಲಕ್ಷ ಯೋನಿಗಳ ನಿವಾಸದಲ್ಲಿ ಈ ಜೀವನು ದ್ರವ್ಯಲಿಂಗಿ ಮುನಿಯಾಗಿ ಕೂಡ ಭಾವರಹಿತನಾಗಿರುತ್ತ ಭ್ರಮಣ ಮಾಡಿರದಂಥ ಯಾವ ಪ್ರದೇಶವೂ ಇಲ್ಲ.

ಭಾವಾರ್ಥ :– ಈ ಜೀವನು ದ್ರವ್ಯಲಿಂಗ ಧಾರಣಮಾಡಿ ನಿರ್ಗ್ರಂಥ ಮುನಿಯಾಗಿ ಶುದ್ಧಸ್ವರೂಪದ ಅನುಭವರೂಪವಾದ ಭಾವವಿಲ್ಲದೆ ಎಂಭತ್ತಾ ್ನಲ್ಕು ಲಕ್ಷ ಯೋನಿಗಳಲ್ಲಿ ಭ್ರಮಣವನ್ನೇ ಮಾಡುತ್ತಲಿರುವನು, ಈತನ ಮರಣವಾಗದಂಥ ಸ್ಥಾನವು ಉಳಿದಿಲ್ಲ.

ಆ ಎಂಭತ್ತಾ ್ನಲ್ಕು ಲಕ್ಷ ಯೋನಿಯ ಭೇದ ಹೇಳುತ್ತಾರೆ, – ಪೃಥ್ವೀ, ಆಪ್, ತೇಜ, ವಾಯು, ನಿತ್ಯನಿಗೋದ ಮತ್ತು ಇತರನಿಗೋದಗಳಂತೂ ಏಳೇಳು ಲಕ್ಷವಿವೆ, ಎಲ್ಲವು ನಲವತ್ತೆರಡು ಲಕ್ಷವಾಗುವವು, ವನಸ್ಪತಿಯು ಹತ್ತು ಲಕ್ಷವಿವೆ, ಎರಡು ಇಂದ್ರಿಯ, ಮೂರು ಇಂದ್ರಿಯ, ನಾಲ್ಕು ಇಂದ್ರಿಯವು ಎರಡೆರಡು ಲಕ್ಷವಿವೆ, ಪಂಚೇಂದ್ರಿಯತಿರ್ಯಂಚ ನಾಲ್ಕುಲಕ್ಷ, ದೇವ ನಾಲ್ಕುಲಕ್ಷ, ನಾರಕಿ ನಾಲ್ಕುಲಕ್ಷ, ಮನುಷ್ಯ ಹದಿನಾಲ್ಕು ಲಕ್ಷವಿವೆ. ಹೀಗೆ ಎಂಭತ್ತಾ ್ನಲ್ಕು ಲಕ್ಷಗಳಿವೆ, ಇವು ಜೀವಗಳು ಉತ್ಪನ್ನವಾಗುವ ಸ್ಥಾನಗಳಿವೆ. ॥೪೭॥

ದ್ರವ್ಯಮಾತ್ರದಿಂದ ಲಿಂಗಿಯಾಗುವುದಿಲ್ಲ, ಭಾವದಿಂದಾಗುತ್ತಾನೆಂದು ಈಗ ಹೇಳುತ್ತಾರೆ, –

**ಭಾವೇಣ ಹೋಇ ಲಿಂಗೀ ಣ ಹು ಲಿಂಗೀ ಹೋಇ ದವ್ವಮಿತ್ತೇಣ ।**
**ತಮ್ಹಾ ಕುಣಿಜ್ಜ ಭಾವಂ ಕಿಂ ಕೀರಇ ದವ್ವಲಿಂಗೇಣ ॥೪೮॥**

ಭಾವೇನ ಭವತಿ ಲಿಂಗೀ ನ ಹಿ ಭವತಿ ಲಿಂಗೀ ದ್ರವ್ಯಮಾತ್ರೇಣ ।
ತಸ್ಮಾತ್ ಕುರ್ಯಾಃ ಭಾವಂ ಕಿಂ ಕ್ರಿಯತೇ ದ್ರವ್ಯಲಿಂಗೇನ ॥೪೮॥

ಅರ್ಥ :– ಭಾವಲಿಂಗದಿಂದಲೇ ಲಿಂಗಿಯಾಗುತ್ತಾನೆ, ದ್ರವ್ಯಲಿಂಗದಿಂದ ಲಿಂಗಿಯಾಗುವುದಿಲ್ಲವೆಂಬುದು ಸ್ಪಷ್ಟವಿದೆ, ಆದುದರಿಂದ ಭಾವಲಿಂಗವನ್ನೇ ಧಾರಣ ಮಾಡಬೇಕು, ದ್ರವ್ಯಲಿಂಗದಿಂದ ಸಿದ್ಧಿಯಾಗುವುದೇನು ?

---

ಯಾವುದೊಂದಾ ತರದಪ್ರದೇಶವಿಲ್ಲ ಎಂಭತ್ತಾ ್ನಲ್ಕುಲಕ್ಷ ಯೋನಿವಾಸದಲಿ ।
ಜೀವ ಭಾವವಿರಹಿತ ಶ್ರಮಣನಾಗಿ ಕೂಡ ಭ್ರಮಣ ಮಾಡಿರದಂಥದು ॥೪೭॥

ಭಾವದಿಂದ ಲಿಂಗಿಯಾಗುವನು ಲಿಂಗಿ ತಾನಾಗುವುದಿಲ್ಲ ದ್ರವ್ಯಮಾತ್ರದಿಂದ ।
ಭಾವವನು ಧರಿಸಬೇಕದರಿಂದ ದ್ರವ್ಯಲಿಂಗದಿಂದಾವುದು ಸಾಧ್ಯವಿದೆ ॥೪೮॥

---

೧ 'ಜೀವೋ' ಎಂಬ ಪಾಠಾಂತರವಿದೆ.

ಭಾವಾರ್ಥ ః- ಇದಕ್ಕಿಂತ ಹೆಚ್ಚಿಗೇನು ಹೇಳುವುದು, ಭಾವಲಿಂಗವಿಲ್ಲದೆ 'ಲಿಂಗಿ'ಯೆಂಬ ಹೆಸರೇ ಬರುವುದಿಲ್ಲ, ಏಕೆಂದರೆ ಶುದ್ಧಭಾವ ಕಾಣದಾಗ ಇವನೆಂತಹ ಮುನಿ ? ಕಪಟಿಯಿದ್ದಾನೆಂದು ಜನರೇ ಹೇಳುತ್ತಿರುವುದು ಸ್ಪಷ್ಟವಿದೆ ದ್ರವ್ಯಲಿಂಗದಿಂದ ಯಾವ ಸಿದ್ಧಿಯಿಲ್ಲ, ಆದುದರಿಂದ ಭಾವಲಿಂಗವನ್ನು ಧಾರಣ ಮಾಡುವುದೇ ಯೋಗ್ಯವಿದೆ. ||೪೮||

ಇದನ್ನೇ ದೃಢ ಮಾಡುವ ಸಲುವಾಗಿ ದ್ರವ್ಯಲಿಂಗಧಾರಕನಿಗೆ ಪ್ರತಿಯಾಗಿ ಉಪದ್ರವವಾಯಿತೆಂದು ಈಗ ಉದಾಹರಣೆ ಹೇಳುತ್ತಾರೆ, -

**ದಂಡಯಣಯರಂ ಸಯಲಂ ಡಹಿಓ ಅಬ್ಭಂತರೇಣ ದೋಸೇಣ |**
**ಜಿಣಲಿಂಗೇಣ ವಿ ಬಾಹೂ ಪಡಿಓ ಸೋ ರಉರವೇ ಣರಏ ||೪೯||**

**ದಂಡಕನಗರಂ ಸಕಲಂ ದಗ್ಧ್ವಾ ಅಭ್ಯಂತರೇಣ ದೋಷೇಣ |**
**ಜಿನಲಿಂಗೇನಾಪಿ ಬಾಹುಃ ಪತಿತಃ ಸಃ ರೌರವೇ ನರಕೇ ||೪೯||**

ಅರ್ಥ ః- ಬಾಹು ನಾಮದ ಮುನಿಯು ಬಾಹ್ಯ ಜಿನಲಿಂಗ ಸಹಿತನಿದ್ದರೂ ಕೂಡ ಅಭ್ಯಂತರದ ದೋಷದಿಂದ ಸಮಸ್ತ ದಂಡಕನಾಮದ ನಗರವನ್ನು ದಗ್ಧಮಾಡಿದನು ಮತ್ತು ಏಳನೆಯ ಪೃಥ್ವಿಯ ರೌರವ ನಾಮದ ಬಿಲದಲ್ಲಿ ಉರುಳಿದನು.

ಭಾವಾರ್ಥ ః- ದ್ರವ್ಯಲಿಂಗ ಧಾರಣ ಮಾಡಿ ಸ್ವಲ್ಪ ತಪಸ್ಸು ಮಾಡಿದರೆ, ಅದರಿಂದ ಸ್ವಲ್ಪ ಸಾಮರ್ಥ್ಯ ವೃದ್ಧಿಸಿದರೆ, ಆಗ ಯಾವುದೇ ಕಾರಣ ಪಡೆದು ಕ್ರೋಧದಿಂದ ತನ್ನ ಹಾಗೂ ಇತರರ ಉಪದ್ರವದ ಕಾರಣನಾಗುವನು, ಆದುದರಿಂದ ದ್ರವ್ಯಲಿಂಗವನ್ನು ಭಾವಸಹಿತ ಧಾರಣ ಮಾಡುವುದೇ ಶ್ರೇಷ್ಠವಿದೆ ಮತ್ತು ಕೇವಲ ದ್ರವ್ಯಲಿಂಗವಂತೂ ಉಪದ್ರವಕ್ಕೆ ಕಾರಣವಾಗುತ್ತದೆ. ಇದಕ್ಕೆ ಬಾಹು ಮುನಿಯ ಉದಾಹರಣೆ ಕೊಡಲಾಗಿದೆ. ಅವನ ಕಥೆಯು ಹೀಗಿದೆ-

ದಕ್ಷಿಣ ದಿಶೆಯಲ್ಲಿ ಕುಂಭಕಾರಕಟಕ ನಗರದಲ್ಲಿ ದಂಡಕನಾಮದ ರಾಜನಿದ್ದನು. ಅವನಿಗೆ ಬಾಲಕ ನಾಮದ ಮಂತ್ರಿಯಿದ್ದನು. ಅಲ್ಲಿ ಅಭಿನಂದನ ಮೊದಲಾದ ಐನೂರು ಮುನಿಗಳು ಬರುವರು, ಅವರಲ್ಲಿ ಓರ್ವ ದಂಡಕನಾಮದ ಮುನಿಯಿದ್ದನು. ಅವರು ಬಾಲಕನಾಮದ ಮಂತ್ರಿಯನ್ನು ವಾದದಲ್ಲಿ ಜಯಿಸಿದರು, ಆಗ ಮಂತ್ರಿಯು ಕ್ರೋಧದಿಂದ ಓರ್ವ ವಿದೂಷಕನಿಗೆ ಮುನಿಯ ರೂಪು ಮಾಡಿಸಿ ದೊರೆಯ ಅರಸಿಯಾದ ಸುವ್ರತೆಯ ಜತೆ ಕ್ರೀಡೆ ಮಾಡುತ್ತಿರುವುದನ್ನು ದೊರೆಗೆ ತೋರಿಸುವನು ಮತ್ತು ನೋಡಿರಿ ! ದೊರೆಯ ಭಕ್ತಿಯೆಂಥದು ಅವನು ತನ್ನ ಪತ್ನಿಯನ್ನು ಕೂಡ ದಿಗಂಬರನಿಗೆ ಕ್ರೀಡೆ ಮಾಡುವ ಸಲುವಾಗಿ ಕೊಟ್ಟುಬಿಟ್ಟಿದ್ದಾನೆಂದು ಹೇಳುವನು. ಆಗ ದೊರೆಯು ದಿಗಂಬರರ ಮೇಲೆ ಕ್ರೋಧಾನ್ವಿತನಾಗಿ ಐನೂರು ಮುನಿಗಳನ್ನು ಗಾಣದ ದಿಂಡಿನಲ್ಲಿ ಹಿಂಡಿದನು. ಆ ಮುನಿಗಳು ಉಪಸರ್ಗಸಹಿಸಿ ಪರಮ ಸಮಾಧಿಯಿಂದ ಸಿದ್ಧಿಗೆ ಪ್ರಾಪ್ತರಾದರು.

---

**ದಂಡಕನಗರವನೆಲ್ಲ ಸುಟ್ಟು ಹಾಕಿದನು ಅಭ್ಯಂತರದ ದೋಷದಿಂದ |**
**ಭಂಡ ಬಾಹುಮುನಿ ಜಿನಲಿಂಗದಿಂ ಕೂಡ ರೌರವನರಕಕುರುಳಿದನು ||೪೯||**

ಮತ್ತೆ ಆ ನಗರದಲ್ಲಿ ಬಾಹುನಾಮದ ಓರ್ವ ಮುನಿ ಬರುವರು. ಆಗ ಜನರು ಇಲ್ಲಿಯ ದೊರೆಯು ದುಷ್ಟನಿರುವುದರಿಂದ ತಾವು ನಗರದಲ್ಲಿ ಪ್ರವೇಶ ಮಾಡಬೇಡಿರೆಂದು ಅವರನ್ನು ತಡೆದರು. ಅವನು ಮೊದಲು ಐನೂರು ಮುನಿಗಳನ್ನು ಗಾಣದ ದಿಂಡಿನಲ್ಲಿ ಹಿಂಡಿದ್ದಾನೆ, ತಮ್ಮನ್ನೂ ಬಿಡಲಾರನೆಂದು ಹೇಳಿದಾಗ ಜನರ ಮಾತುಗಳನ್ನು ಕೇಳಿ ಆ ಬಾಹುಮುನಿಗೆ ಕ್ರೋಧವು ಉತ್ಪನ್ನವಾಯಿತು, ಅಶುಭ ತೈಜಸಸಮುದ್ಘಾತದಿಂದ ರಾಜನನ್ನು ಮಂತ್ರಿಸಹಿತವಾಗಿ ಮತ್ತು ಸಮಸ್ತ ನಗರವನ್ನು ಭಸ್ಮ ಮಾಡಿದನು. ದೊರೆ ಮತ್ತು ಮಂತ್ರಿಯು ಏಳನೆಯ ನರಕ ರೌರವನಾಮದ ಬಿಲದಲ್ಲಿ ಉರುಳಿದರು, ಆ ಬಾಹುಮುನಿ ಕೂಡ ಸತ್ತು ರೌರವ ಬಿಲದಲ್ಲಿ ಉರುಳಿದನು. ಈ ಪ್ರಕಾರ ದ್ರವ್ಯಲಿಂಗದಲ್ಲಿ ಭಾವದ ದೋಷದಿಂದ ಉಪದ್ರವಗಳಾಗುತ್ತವೆ. ಆದುದರಿಂದ ಮುಖ್ಯವಾಗಿ ಭಾವಲಿಂಗದ ಉಪದೇಶವಿದೆ. ।।೪೯।।

ಇದೇ ಅರ್ಥದ ಮೇಲೆ ದೀಪಾಯನ ಮುನಿಯ ಉದಾಹರಣೆ ಕೊಡುತ್ತಾರೆ, –

**ಅವರೋ ವಿ ದವ್ವಸವಣೋ ದಂಸಣವರಣಾಣಚರಣಪಬ್ಭಟ್ಠೋ ।**
**ದೀವಾಯಣೋ ತ್ತಿ ಣಾಮೋ ಅಣಂತಸಂಸಾರಿಓ ಜಾಓ ।।೫೦।।**

**ಅಪರಃ ಅಪಿ ದ್ರವ್ಯಶ್ರಮಣಃ ದರ್ಶನವರಜ್ಞಾನಚರಣಪ್ರಭ್ರಷ್ಟಃ ।**
**ದೀಪಾಯನ ಇತಿ ನಾಮ ಅನಂತಸಂಸಾರಿಕಃ ಜಾತಃ ।।೫೦।।**

ಅರ್ಥ :– ಹೇಗೆ ಮೊದಲು ಬಾಹುಮುನಿ ಹೇಳಿದೆ ಹಾಗೆಯೇ ಇನ್ನೂ ದೀಪಾಯನನಾಮದ ದ್ರವ್ಯ ಶ್ರಮಣನು ಸಮ್ಯಗ್ದರ್ಶನಜ್ಞಾನಚಾರಿತ್ರದಿಂದ ಭ್ರಷ್ಟನಾಗಿ ಅನಂತಸಂಸಾರಿಯಾದನು.

ಭಾವಾರ್ಥ :– ಮೊದಲಿನ ಹಾಗೆಯೇ ಇವನ ಕಥೆಯು ಸಂಕ್ಷೇಪದಲ್ಲಿ ಹೀಗಿದೆ–ಒಂಭತ್ತನೆಯ ಬಲಭದ್ರನು ನೇಮಿನಾಥ ತೀರ್ಥಂಕರರಲ್ಲಿ ಓ ಪ್ರಭು ! ಈ ದ್ವಾರಕಾಪಟ್ಟಣವು ಸಮುದ್ರದಲ್ಲಿದೆ ಇದರ ಸ್ಥಿತಿಯು ಎಷ್ಟು ಕಾಲದವರೆಗಿದೆಯೆಂದು ಕೇಳುತ್ತಾನೆ. ಆಗ ಭಗವಂತರು ರೋಹಿಣಿಯಸೋದರ ದೀಪಾಯನ ನಿನ್ನ ಮಾವನು ಹನ್ನೆರಡು ವರುಷಗಳ ನಂತರ ಮದ್ಯದ ನಿಮಿತ್ತದಿಂದ ಕ್ರೋಧ ಮಾಡಿ ಈ ಪಟ್ಟಣವನ್ನು ದಗ್ಧ ಮಾಡುವನೆಂದು ಹೇಳುವರು. ಈ ಪ್ರಕಾರ ಭಗವಂತರ ವಚನ ಕೇಳಿ ನಿಶ್ಚಯ ಮಾಡಿ ದೀಪಾಯನನು ದೀಕ್ಷೆ ಸ್ವೀಕರಿಸಿ ಪೂರ್ವದಿಶೆಯಲ್ಲಿ ಹೊರಟು ಹೋದನು. ಹನ್ನೆರಡು ವರ್ಷಗಳನ್ನು ಕಳೆಯುವ ಸಲುವಾಗಿ ತಪಸ್ಸನ್ನಾರಂಭಿಸಿದನು, ಮತ್ತು ಬಲಭದ್ರ ನಾರಾಯಣರು ದ್ವಾರಿಕೆಯಲ್ಲಿ ಮದ್ಯ ನಿಷೇಧದ ಘೋಷಣೆ ಮಾಡಿದರು. ಮದ್ಯದ ಪಾತ್ರೆ ಹಾಗೂ ಅದರ ಸಾಮಗ್ರಿಗಳನ್ನು ಮದ್ಯ ತಯಾರಿಸುವವರು ಹೊರಗೆ ಪರ್ವತ ಮೊದಲಾದವುಗಳಲ್ಲಿ ಎಸೆದುಬಿಟ್ಟರು. ಆಗ ಪಾತ್ರೆಗಳಲ್ಲಿರುವಂಥ ಮದ್ಯ ಮತ್ತು ಮದ್ಯದ ಸಾಮಗ್ರಿಗಳೆಲ್ಲವು ನೀರಿನ ಕುಂಡಗಳಲ್ಲಿ ಹರಡಿಹೋಯಿತು.

ಅನಂತರ ಹನ್ನೆರಡು ವರುಷ ಕಳೆದುವೆಂದು ತಿಳಿದುಕೊಂಡು ದೀಪಾಯನನು ದ್ವಾರಿಕೆಗೆ ಬಂದು ನಗರದ ಹೊರಗೆ ಆತಾಪನಯೋಗ ಧಾರಣಮಾಡಿ ನಿಂತುಕೊಂಡನು. ಭಗವಂತರ ವಚನದ ಪ್ರತೀತಿಯನ್ನಿಟ್ಟುಕೊಳ್ಳಲಿಲ್ಲ. ಅನಂತರ ಶಂಭವಕುಮಾರ ಮೊದಲಾದವರು ಕ್ರೀಡೆ ಮಾಡುತ್ತ ತೃಷಾತುರರಾಗಿ ಕುಂಡಗಳಲ್ಲಿ ನೀರೆಂದು ತಿಳಿದುಕೊಂಡು ಕುಡಿದರು.

---

**ಈ ರೀತಿ ಬೇರೆ ಮತ್ತೋರ್ವ ದ್ವೀಪಾಯನನೆಂಬ ಹೆಸರಿನ ದ್ರವ್ಯಶ್ರಮಣನು ।**
**ವರ ಜ್ಞಾನದರ್ಶನಚಾರಿತ್ರದಿಂ ಭ್ರಷ್ಟನಾಗಿ ಅನಂತ ಸಂಸಾರಿಯಾದನು ।।೫೦।।**

ಆ ಮದ್ಯದ ನಿಮಿತ್ತದಿಂದ ಕುಮಾರರು ಉನ್ಮತ್ತರಾಗಿ ಹೋದರು. ಅಲ್ಲಿ ನಿಂತುಕೊಂಡಿರುವ ದೀಪಾಯನ ಮುನಿಯನ್ನು ನೋಡಿ 'ಇವನು ದ್ವಾರಿಕೆಯನ್ನು ಭಸ್ಮಮಾಡುವಂಥ ದೀಪಾಯನನಿದ್ದಾನೆ'ಂದು ಹೇಳಿಕೊಳ್ಳುತ್ತ ಅವನನ್ನು ಪಾಷಾಣಾದಿಗಳಿಂದ ಹೊಡೆಯಲಾರಂಭಿಸಿದರು. ಆಗ ದೀಪಾಯನನು ನೆಲದ ಮೇಲೆ ಹೊರಳಿ ಬಿದ್ದನು, ಅವನಿಗೆ ಕ್ರೋಧವು ಉತ್ಪನ್ನವಾಯಿತು, ಅವನ ನಿಮಿತ್ತದಿಂದ ದ್ವಾರಿಕೆಯು ಸುಟ್ಟು ಭಸ್ಮವಾಗಿ ಹೋಯಿತು. ಈ ಪ್ರಕಾರ ದೀಪಾಯನನು ಭಾವಶುದ್ಧಿಯಿಲ್ಲದೆ ಅನಂತ ಸಂಸಾರಿಯಾದನು. ||೫೦||

ಭಾವಶುದ್ಧಿಯೊಡನೆ ಮುನಿಯಾದವರು ಸಿದ್ಧಿ ಪಡೆದರು, ಈಗ ಅದರ ಉದಾಹರಣೆ ಹೇಳುತ್ತಾರೆ, –

**ಭಾವಸಮಣೋ ಯ ಧೀರೋ ಜುವಈಜಣವೇಢಿಓ ವಿಸುದ್ಧಮಈ |**
**ಣಾಮೇಣ ಸಿವಕುಮಾರೋ ಪರೀತ್ತಸಂಸಾರಿಓ ಜಾದೋ ||೫೧||**

**ಭಾವಶ್ರಮಣಶ್ಚ ಧೀರಃ ಯುವತಿಜನವೇಷ್ಟಿತಃ ವಿಶುದ್ಧಮತಿಃ |**
**ನಾಮ್ನಾ ಶಿವಕುಮಾರಃ ಪರಿತ್ಯಕ್ತಸಾಂಸಾರಿಕಃ ಜಾತಃ ||೫೧||**

ಅರ್ಥ :– ಶಿವಕುಮಾರನಾಮದ ಭಾವಶ್ರಮಣನು ಸ್ತ್ರೀಯರುಗಳಿಂದ ವೇಷ್ಟಿತನಾಗಿದ್ದರೂ ಕೂಡ ವಿಶುದ್ಧಬುದ್ಧಿಯ ಧಾರಕನು ಮತ್ತು ಸಂಸಾರವನ್ನು ತ್ಯಾಗ ಮಾಡುವವನೂ ಆದನು.

ಭಾವಾರ್ಥ :– ಶಿವಕುಮಾರನು ಭಾವದ ಶುದ್ಧತೆಯಿಂದ ಬ್ರಹ್ಮಸ್ವರ್ಗದಲ್ಲಿ ವಿದ್ಯುನ್ಮಾಲಿಯೆಂಬ ದೇವನಾಗಿ ಅಲ್ಲಿಂದ ಚ್ಯುತನಾಗಿ ಜಂಬೂಸ್ವಾಮಿ ಕೇವಲಿಯಾಗಿ ಮೋಕ್ಷ ಪ್ರಾಪ್ತಮಾಡಿಕೊಂಡನು. ಈ ಕಥೆ ಹೀಗಿದೆ,–

ಈ ಜಂಬೂದ್ವೀಪದ ಪೂರ್ವವಿದೇಹದಲ್ಲಿ ಪುಷ್ಕಲಾವತಿ ದೇಶದ ವೀತಶೋಕಪುರದಲ್ಲಿರುವ ದೊರೆ ಮಹಾಪದ್ಮನ ರಾಣಿ ವನಮಾಲೆಯ ಉದರದಿಂದ ಶಿವಕುಮಾರನಾಮದ ಪುತ್ರನಾದನು. ಅವನು ಒಂದು ದಿವಸ ಮಿತ್ರನೊಡನೆ ವನಕ್ರೀಡೆಯಾಡಿ ನಗರಕ್ಕೆ ಮರಳಿ ಬರುತ್ತಿದ್ದನು. ಅವನು ಮಾರ್ಗದಲ್ಲಿ ಪೂಜೆಯ ಸಾಮಗ್ರಿಗಳನ್ನು ತೆಗೆದುಕೊಂಡು ಹೋಗುತ್ತಿರುವ ಜನರನ್ನು ನೋಡಿದನು. ಇವರು ಎಲ್ಲಿಗೆ ಹೋಗುತ್ತಿದ್ದಾರೆಂದು ಮಿತ್ರನನ್ನು ಕೇಳಲು ಅವನು ಇವರು ಸಾಗರದತ್ತನಾಮದ ಋದ್ಧಿಧಾರಿ ಮುನಿಯನ್ನು ಪೂಜಿಸುವ ಸಲುವಾಗಿ ವನಕ್ಕೆ ಹೋಗುತ್ತಿದ್ದಾರೆಂದು ಹೇಳಿದನು. ಆಗ ಶಿವಕುಮಾರನು ಆ ಮುನಿಗಳ ಹತ್ತಿರ ಹೋಗಿ ತನ್ನ ಪೂರ್ವ ಭವವನ್ನು ಕೇಳಿ ತಿಳಿದು ಸಂಸಾರದಿಂದ ವಿರಕ್ತನಾಗಿ ದೀಕ್ಷೆ ಸ್ವೀಕರಿಸಿದನು ಮತ್ತು ದೃಢಧರನಾಮದ ಶ್ರಾವಕನ ಮನೆಯಲ್ಲಿ ಪ್ರಾಸುಕ ಆಹಾರ ಸ್ವೀಕರಿಸಿದನು. ಅದರ ನಂತರ ಸ್ತ್ರೀಯರುಗಳ ನಿಕಟದಲ್ಲಿ ಅಸಿಧಾರಾ ವ್ರತದ ಪರಮ ಬ್ರಹ್ಮಚರ್ಯವನ್ನು ಪಾಲಿಸುತ್ತ ಹನ್ನೆರಡು ವರುಷಗಳವರೆಗೆ ತಪಸ್ಸು ಮಾಡಿ ಕೊನೆಯಲ್ಲಿ ಸನ್ಯಾಸ ಮರಣದಿಂದ ಸತ್ತು ಬ್ರಹ್ಮಕಲ್ಪದಲ್ಲಿ ವಿದ್ಯುನ್ಮಾಲಿಯೆಂಬ ದೇವನಾದನು. ಅಲ್ಲಿಂದ ಚ್ಯುತನಾಗಿ ಜಂಬುಕುಮಾರನಾಗಿ ದೀಕ್ಷೆ ಸ್ವೀಕರಿಸಿ ಕೇವಲಜ್ಞಾನ ಪ್ರಾಪ್ತಮಾಡಿಕೊಂಡು ಮೋಕ್ಷಕ್ಕೆ ಹೋದನು. ಹೀಗೆ ಶಿವಕುಮಾರ ಭಾವಮುನಿಯು ಮೋಕ್ಷ ಪಡೆದುಕೊಂಡನು. ಈ ಕಥೆಯು ವಿಸ್ತಾರಪೂರ್ವಕವಾಗಿ ಜಂಬೂ ಚರಿತ್ರದಲ್ಲಿದೆ ಓದಿ ತಿಳಿದುಕೊಳ್ಳಬೇಕು. ಹೀಗೆ ಭಾವಲಿಂಗವು ಮುಖ್ಯವಿದೆ. ||೫೧||

---

**ಭಾವಶ್ರಮಣ ಯುವತಿಜನವೇಷ್ಟಿತನಿದ್ದರೂ ಧೀರನಾವಿಶುದ್ಧಮತಿ |**
**ಶಿವಕುಮಾರನೆಂಬ ಹೆಸರಿನವನು ಪರಿತ್ಯಕ್ತ ಸಾಂಸಾರಿಕನಾದನು ||೫೧||**

ಶಾಸ್ತ್ರ ಓದಿದರೂ ಸಮ್ಯಗ್ದರ್ಶನಾದಿರೂಪದ ಭಾವವಿಶುದ್ಧಿಯಿಲ್ಲದಿದ್ದರೆ ಸಿದ್ಧಿಗೆ ಪ್ರಾಪ್ತವಾಗುವ ಸಾಧ್ಯತೆಯಿಲ್ಲವೆಂಬುದನ್ನು ಅಭವ್ಯಸೇನನ ಉದಾಹರಣೆಯೊಡನೆ ಈಗ ಹೇಳುತ್ತಾರೆ, –

[೧]ಕೇವಲಿಜಿಣಪಣ್ಣತ್ತಂ ಏಯಾದಸಅಂಗ ಸಯಲಸುಯಣಾಣಂ ।
ಪಢಿಓ ಅಭವ್ವಸೇಣೋ ಣ ಭಾವಸವಣತ್ತಣಂ ಪತ್ತೋ ॥೫೨॥

ಕೇವಲಿಜಿನಪ್ರಜ್ಞಪ್ತಂ ಏಕಾದಶಾಂಗಂ ಸಕಲಶ್ರುತಜ್ಞಾನಮ್ ।
ಪಠಿತಃ ಅಭವ್ಯಸೇನಃ ನ ಭಾವಶ್ರಮಣತ್ವಂ ಪ್ರಾಪ್ತಃ ॥೫೨॥

ಅರ್ಥ ಃ– ಅಭವ್ಯಸೇನನಾಮದ ದ್ರವ್ಯಲಿಂಗಿಮುನಿಯು ಕೇವಲೀಭಗವಂತರಿಂದ ಉಪದೇಶಿಸಲ್ಪಟ್ಟ ಹನ್ನೊಂದು ಅಂಗಗಳನ್ನು ಓದಿದನು ಮತ್ತು ಹನ್ನೊಂದು ಅಂಗಗಳಿಗೆ 'ಪೂರ್ಣ ಶ್ರುತಜ್ಞಾನ'ವೆಂದು ಹೇಳುತ್ತಾರೆ, ಏಕೆಂದರೆ ಇಷ್ಟು ಓದಿದವರಿಗೆ ಅರ್ಥದ ಅಪೇಕ್ಷೆಯಿಂದ 'ಪೂರ್ಣ ಶ್ರುತಜ್ಞಾನ'ವೂ ಆಗಿಹೋಗುತ್ತದೆ. ಅಭವ್ಯ ಸೇನನು ಇಷ್ಟು ಓದಿದರೂ ಕೂಡ ಅವನು ಭಾವಶ್ರಮಣತೆಗೆ ಪ್ರಾಪ್ತನಾಗಲಿಲ್ಲ.

ಭಾವಾರ್ಥ ಃ– ಯಾವನಾದರೂ ಕೇವಲ ಬಾಹ್ಯಕ್ರಿಯೆಯಿಂದ ಸಿದ್ಧಿಯಿಲ್ಲ ಮತ್ತು ಶಾಸ್ತ್ರಗಳನ್ನೋದುವುದರಿಂದ ಸಿದ್ಧಿಯಾಗುತ್ತದೆಂದು ತಿಳಿದುಕೊಂಡರೆ ಅದು ಕೂಡ ಸತ್ಯವಿಲ್ಲ, ಏಕೆಂದರೆ ಕೇವಲ ಶಾಸ್ತ್ರ ಓದುವುದರಿಂದ ಸಿದ್ಧಿಯಿಲ್ಲ. ಅಭವ್ಯಸೇನನು ದ್ರವ್ಯಮುನಿಯೂ ಆದನು ಮತ್ತು ಹನ್ನೊಂದು ಅಂಗಗಳನ್ನು ಓದಿದರೂ ಕೂಡ ಅವನಿಗೆ ಜಿನವಚನದ ಪ್ರತೀತಿಯಾಗಲಿಲ್ಲ, ಆದುದರಿಂದ ಭಾವಲಿಂಗವನ್ನು ಪಡೆಯಲಿಲ್ಲ ಅಭವ್ಯಸೇನನ ಕಥೆಯು ಪುರಾಣಗಳಲ್ಲಿ ಪ್ರಸಿದ್ಧವಿದೆ ಅಲ್ಲಿಂದ ಓದಿ ತಿಳಿದುಕೊಳ್ಳಬೇಕು. ॥೫೨॥

ಶಿವಭೂತಿಮುನಿಯು ಶಾಸ್ತ್ರಗಳನ್ನೋದದೆ ತುಷಮಾಷವನ್ನು ಪಠಿಸುತ್ತಲೇ ಭಾವದ ವಿಶುದ್ಧತೆಯನ್ನು ಪಡೆದು ಮೋಕ್ಷಕ್ಕೆ ಪ್ರಾಪ್ತನಾದನು. ಈಗ ಅವನ ಉದಾಹರಣೆಯನ್ನು ಹೇಳುತ್ತಾರೆ, –

ತುಸಮಾಸಂ ಘೋಸಂತೋ ಭಾವವಿಸುದ್ಧೋ ಮಹಾಣುಭಾವೋ ಯ ।
ಣಾಮೇಣ ಯ ಸಿವಭೂಈ ಕೇವಲಣಾಣೀ ಫುಡಂ ಜಾಓ ॥೫೩॥

---

ಕೇವಲಿಜಿನಕಥಿತ ಏಕಾದಶಾಂಗಮಯ ಸಕಲಶ್ರುತಜ್ಞಾನವನು ।
ತವೆ ಪಠಿಸಿದರಭವ್ಯಸೇನ ಭಾವಶ್ರಮಣತ್ವವನು ಪಡೆಯಲಿಲ್ಲ ॥೫೨॥

ಭಾವವಿಶುದ್ಧನಾದ ಮಹಾನುಭಾವ ತುಷಮಾಷ ಶಬ್ದವನು ಪಠಿಸುತ್ತ ।
ಶಿವಭೂತಿನಾಮದ ಮುನಿವರನು ಪ್ರಕಟಕೇವಲಜ್ಞಾನ ಪಡೆದನು ॥೫೩॥

---

೧ ಮುದ್ರಿತ ಸಂಸ್ಕೃತ ಸಟೀಕಪ್ರತಿಯಲ್ಲಿ ೫೨ನೇ ಗಾಥೆಯು ಹೀಗಿದೆ–
ಅಂಗಾಇಂ ದಸ ಯ ದುಣ್ಣಿ ಯ ಚಉದಸಪುವ್ವಾಇಂ ಸಯಲಸುಯಣಾಣಂ ।
ಪಢಿಓ ಅಭವ್ವಸೇಣೋ ಣ ಭಾವಸವಣತ್ತಣಂ ಪತ್ತೋ ॥೫೨॥
ಅಂಗಾನಿ ದಶ ಚ ದ್ವೇ ಚ ಚತುರ್ದಶಪೂರ್ವಾಣಿ ಸಕಲಶ್ರುತಜ್ಞಾನಮ್ ।
ಪಠಿತಶ್ಚ ಅಭವ್ಯಸೇನಃ ನ ಭಾವಶ್ರಮಣತ್ವಂ ಪ್ರಾಪ್ತಃ ॥೫೨॥

**ತುಷಮಾಷಂ ಘೋಷಯನ್ ಭಾವವಿಶುದ್ಧಃ ಮಹಾನುಭಾವಶ್ಚ।**
**ನಾಮ್ನಾ ಚ ಶಿವಭೂತಿಃ ಕೇವಲಜ್ಞಾನೀ ಸ್ಫುಟಂ ಜಾತಃ ॥೫೩॥**

ಅರ್ಥ ಃ- ಶಿವಭೂತಿ ಮುನಿಯು ಶಾಸ್ತ್ರಗಳನ್ನೋದಿರಲಿಲ್ಲ, ಆದರೆ ತುಷಮಾಷವೆಂಬ ಶಬ್ದವನ್ನು ಪಠಿಸುತ್ತ ಭಾವಗಳ ವಿಶುದ್ಧತೆಯಿಂದ ಮಹಾನುಭಾವನಾಗಿ ಕೇವಲಜ್ಞಾನವನ್ನು ಪ್ರಾಪ್ತಮಾಡಿಕೊಂಡನೆಂಬುದು ಸ್ಪಷ್ಟವಿದೆ.

ಭಾವಾರ್ಥ ಃ- ಶಾಸ್ತ್ರಗಳನ್ನೋದುವುದರಿಂದಲೇ ಸಿದ್ಧಿಯಿದೆಯೆಂದು ಯಾರಾದರೂ ತಿಳಿದುಕೊಳ್ಳಬಹುದು, ಆದರೆ ಹಾಗೇನು ಇಲ್ಲ, ಶಿವಭೂತಿಯೆಂಬ ಮುನಿಯು ತುಷಮಾಷವೆಂಬ ಶಬ್ದವನ್ನು ಪಠಿಸುವುದರಿಂದಲೇ ಭಾವಗಳ ವಿಶುದ್ಧತೆಯಿಂದ ಕೇವಲಜ್ಞಾನ ಪಡೆದುಕೊಂಡನು. ಈತನ ಕಥೆಯು ಹೀಗಿದೆ - ಓರ್ವ ಶಿವಭೂತಿ ನಾಮದ ಮುನಿಯಿದ್ದನು. ಅವನು ಗುರುಗಳ ಹತ್ತಿರ ಶಾಸ್ತ್ರಗಳನ್ನೋದಿದರೂ ಧಾರಣವಾಗಲಿಲ್ಲ. ಆಗ ಗುರುಗಳು 'ಮಾ ರುಷ ಮಾ ತುಷ'ವೆಂಬ ಶಬ್ದ ಓದಿಸಿದರು, ಅವನು ಆ ಶಬ್ದವನ್ನೇ ಪಠಿಸತೊಡಗಿದನು. ಈ ಶಬ್ದದ ಅರ್ಥವು ರೋಷ ಮಾಡಬೇಡ ತೋಷ ಮಾಡಬೇಡ ಎಂದರೆ ರಾಗ-ದ್ವೇಷಗಳನ್ನು ಮಾಡಬೇಡ, ಇದರಿಂದ ಸಕಲ ಸಿದ್ಧಿಯಾಗುವುದು.

ಮುಂದೆ ಅವನಿಗೆ ಇದು ಕೂಡ ಶುದ್ಧ ಸ್ಮರಣೆಯುಳಿಯದಾಗ ಅವನು 'ತುಷಮಾಷ'ವೆಂಬ ಪಾಠವನ್ನು ಪಠಿಸ ತೊಡಗಿದನು, ಎರಡು ಪದಗಳ 'ರುಕಾರ' ಮತ್ತು [೧]'ತುಕಾರ'ಗಳು ಮರೆತುಹೋದವು ಮತ್ತು 'ತುಷಮಾಷ'ವೆಂಬುದು ಸ್ಮರಣೆಯಲ್ಲಿ ಉಳಿಯಿತು. ಅದನ್ನು ಪಠಿಸುತ್ತ ವಿಚಾರಿಸಲಾರಂಭಿಸಿದನು. ಆಗ ಯಾವಳೋ ಓರ್ವ ಸ್ತ್ರೀಯು ಉದ್ದಿನ ಬೇಳೆಯನ್ನು ಸ್ವಚ್ಛ ಮಾಡುತ್ತಿದ್ದಳು, ಇನ್ನೋರ್ವಳು ಅವಳನ್ನು ಏನು ಮಾಡುತ್ತಿರುವೆಯೆಂದು ಕೇಳಿದಳು, ಆಗ ಅವಳು ತವಡು ಮತ್ತು ಬೇಳೆಯನ್ನು ಭಿನ್ನ ಭಿನ್ನ ಮಾಡುತ್ತಿದ್ದೇನೆಂದು ಹೇಳಿದಳು. ಅದನ್ನು ಕೇಳಿದ ಮುನಿಯು ಈ ಶರೀರವಂತೂ ತುಷ ಇದೆ ಮತ್ತು ಆತ್ಮನು ಮಾಷನಿದ್ದಾನೆ, ಎರಡೂ ಭಿನ್ನ ಭಿನ್ನವಿವೆಯೆಂದು ಆ 'ತುಷಮಾಷ' ಶಬ್ದದ ಭಾವಾರ್ಥವನ್ನು ತಿಳಿದುಕೊಂಡನು. ಹೀಗೆ ಭಾವ ತಿಳಿದುಕೊಂಡು ಆತ್ಮನ ಅನುಭವ ಪಡೆಯಲಾರಂಭಿಸಿದನು. ಚಿನ್ಮಾತ್ರ ಶುದ್ಧ ಆತ್ಮನನ್ನು ತಿಳಿದುಕೊಂಡು ಆತ್ಮನಲ್ಲಿ ಲೀನನಾದನು. ಆಗ ಘಾತಿಕರ್ಮಗಳು ನಾಶವಾಗಿ ಕೇವಲಜ್ಞಾನವು ಪ್ರಾಪ್ತವಾಯಿತು. ಹೀಗೆ ಭಾವಗಳ ವಿಶುದ್ಧತೆಯಿಂದ ಸಿದ್ಧಿಯಾಗುವುದೆಂದು ತಿಳಿದುಕೊಂಡು ಭಾವಶುದ್ಧ ಮಾಡಿಕೊಳ್ಳಬೇಕೆಂಬ ಉಪದೇಶವಿದೆ. ॥೫೩॥

ಈಗ ಇದೇ ಅರ್ಥವನ್ನು ಸಾಮಾನ್ಯರೂಪದಿಂದ ಹೇಳುತ್ತಾರೆ,-

**ಭಾವೇಣ ಹೋಇ ಣಗ್ಗೋ ಬಾಹಿರಲಿಂಗೇನ ಕಿಂ ಚ ಣಗ್ಗೇಣ ।**
**ಕಮ್ಮಪಯಡೀಣ ಣಿಯರಂ ಣಾಸಇ ಭಾವೇಣ ದವ್ವೇಣ ॥೫೪॥**

---

ಭಾವದಿಂ ನಗ್ನತ್ವವಿರುವುದು ಬಾಹ್ಯನಗ್ನಲಿಂಗದಿಂದೇನು ಸಿದ್ಧಿಸುವುದು ।
ಭಾವಸಹಿತ ದ್ರವ್ಯಲಿಂಗದಿಂ ಕರ್ಮಪ್ರಕೃತಿ ಸಮೂಹ ನಾಶವಾಗುವುದು ॥೫೪॥

---

೧ ಇಲ್ಲಿ ಮಾಕಾರವೆಂಬ ಪಾಠವು ಸುಸಂಗತವಿದೆ.

ಭಾವೇನ ಭವತಿ ನಗ್ನಃಬಹಿರ್ಲಿಂಗೇನ ಕಿಂ ಚ ನಗ್ನೇನ ।
ಕರ್ಮಪ್ರಕೃತೀನಾಂ ನಿಕರಂ ನಾಶಯತಿ ಭಾವೇನ ದ್ರವ್ಯೇಣ ॥೫೪॥

ಅರ್ಥ ಃ- ಭಾವದಿಂದ ನಗ್ನನಾಗುತ್ತಾನೆ, ಬಾಹ್ಯ ನಗ್ನಲಿಂಗದಿಂದ ಯಾವ ಕಾರ್ಯವಾಗುತ್ತದೆ ? ಎಂದರೆ ಆಗುವುದಿಲ್ಲ, ಏಕೆಂದರೆ ಭಾವಸಹಿತವಾದ ದ್ರವ್ಯಲಿಂಗದಿಂದ ಕರ್ಮಪ್ರಕೃತಿ ಸಮೂಹದ ನಾಶವಾಗುತ್ತದೆ.

ಭಾವಾರ್ಥ ಃ- ಆತ್ಮನ ಕರ್ಮಪ್ರಕೃತಿಯ ನಾಶದಿಂದ ನಿರ್ಜರೆ ಹಾಗೂ ಮೋಕ್ಷವಾಗುವುದು ನಿರ್ಜರೆ ನಾಮದ ಕಾರ್ಯವಾಗುತ್ತದೆ. ಕೇವಲ ದ್ರವ್ಯಲಿಂಗದಿಂದಂತೂ ಆಗುವುದಿಲ್ಲ, ಆದುದರಿಂದ ಭಾವಸಹಿತವಾಗಿ ದ್ರವ್ಯಲಿಂಗ ಧಾರಣಮಾಡುವ ಉಪದೇಶವಿದೆ. ॥೫೪॥

ಈಗ ಇದೇ ಅರ್ಥವನ್ನು ದೃಢ ಮಾಡುತ್ತಾರೆ, -

ಣಗ್ಗತ್ತಣಂ ಅಕಜ್ಜಂ ಭಾವಣರಹಿಯಂ ಜಿಣೇಹಿಂ ಪಣ್ಣತ್ತಂ ।
ಇಯ ಣಾಊಣ ಯ ಣಿಚ್ಚಂ ಭಾವಿಜ್ಜಹಿ ಅಪ್ಪಯಂ ಧೀರ ॥೫೫॥

ನಗ್ನತ್ವಂ ಅಕಾರ್ಯಂ ಭಾವರಹಿತಂ ಜಿನೈಃ ಪ್ರಜ್ಞಪ್ತಮ್ ।
ಇತಿ ಜ್ಞಾತ್ವಾ ನಿತ್ಯಂ ಭಾವಯೇಃ ಆತ್ಮಾನಂ ಧೀರ ! ॥೫೫॥

ಅರ್ಥ ಃ- ಭಾವರಹಿತವಾದ ನಗ್ನತ್ವವು ಅಕಾರ್ಯವಿದೆ, ಯಾವ ಕಾರ್ಯಕಾರಿಯಿಲ್ಲವೆಂದು ಜಿನೇಂದ್ರ ಭಗವಂತರು ಹೇಳಿದ್ದಾರೆ. ಹೀಗೆ ತಿಳಿದುಕೊಂಡು ಎಲೈ ಧೀರನೇ ! ಎಲೈ ಧೈರ್ಯಶಾಲಿಯಾದ ಮುನಿಯೇ ! ನೀನು ನಿತ್ಯ ನಿರಂತರ ಆತ್ಮನ ಭಾವನೆಯನ್ನೇ ಭಾವಿಸು.

ಭಾವಾರ್ಥ ಃ- ಆತ್ಮನ ಭಾವನೆಯಿಲ್ಲದೆ ಕೇವಲ ನಗ್ನತ್ವವು ಯಾವ ಕಾರ್ಯ ಮಾಡುವಂಥದ್ದಿಲ್ಲ, ಆದುದರಿಂದ ಚಿದಾನಂದಸ್ವರೂಪನಾದ ಆತ್ಮನ ಭಾವನೆಯನ್ನು ನಿರಂತರವಾಗಿ ಭಾವಿಸಬೇಕು, ಆತ್ಮನ ಭಾವನೆಯಿಂದ ಕೂಡಿದ ನಗ್ನತ್ವವು ಸಫಲವಾಗುತ್ತದೆ. ॥೫೫॥

ಭಾವಲಿಂಗವನ್ನು ಮುಖ್ಯಮಾಡಿ ನಿರೂಪಣೆ ಮಾಡಿದಿರಿ ಆ ಭಾವಲಿಂಗವು ಹೇಗಿದೆಯೆಂದು ಕೇಳಿದ ಶಿಷ್ಯನ ಪ್ರಶ್ನೆಗೆ ಉತ್ತರ ಕೊಡುವ ಸಲುವಾಗಿ ಈಗ ಭಾವಲಿಂಗದ ನಿರೂಪಣೆ ಮಾಡುತ್ತಾರೆ, -

ದೇಹಾದಿಸಂಗರಹಿಓ ಮಾಣ ಕಸಾಏಹಿಂ ಸಯಲಪರಿಚತ್ತೋ ।
ಅಪ್ಪಾ ಅಪ್ಪಮ್ಮಿ ರಓ ಸ ಭಾವಲಿಂಗೀ ಹವೇ ಸಾಹೂ ॥೫೬॥

---

ಭಾವರಹಿತ ನಗ್ನತ್ವವದು ಅಕಾರ್ಯವೆಂದು ಶ್ರೀ ಜಿನದೇವ ಪೇಳಿಹರು ।
ಈ ವಿಧ ತಿಳಿದು ಎಲೆಧೀರ ! ನಿತ್ಯ ನೀನು ನಿಜಾತ್ಮನನು ಭಾವಿಸುವುದು ॥೫೫॥
ದೇಹಾದಿಸಂಗರಹಿತನಿದ್ದು ಮಾನಕಷಾಯಗಳನೆಲ್ಲ ಪರಿತ್ಯಜಿಸಿ ।
ಇಹನಾತ್ಮ ಆತ್ಮನಲಿ ಲೀನನವನೇ ಭಾವಲಿಂಗಿ ಶ್ರಮಣನಿರುವನು ॥೫೬॥

ದೇಹಾದಿಸಂಗರಹಿತಃ ಮಾನಕಷಾಯೈಃ ಸಕಲಪರಿತ್ಯಕ್ತಃ ।
ಆತ್ಮಾ ಆತ್ಮನಿ ರತಃ ಸ ಭಾವಲಿಂಗೀ ಭವೇತ್ ಸಾಧು ।।೫೬।।

ಅರ್ಥ ಃ- ಭಾವಲಿಂಗಿ ಸಾಧುವು ದೇಹ ಮೊದಲಾದ ಪರಿಗ್ರಹಗಳಿಂದ ರಹಿತನಾಗಿರುತ್ತಾನೆ ಅದರಂತೆ ಮಾನ-ಕಷಾಯದಿಂದ ರಹಿತನಿರುತ್ತಾನೆ ಮತ್ತು ಆತ್ಮನಲ್ಲಿ ಲೀನನಿರುತ್ತಾನೆ, ಅದೇ ಆತ್ಮನು ಭಾವಲಿಂಗಿಯಿದ್ದಾನೆ.

ಭಾವಾರ್ಥ ಃ- ಆತ್ಮನ ಸ್ವಾಭಾವಿಕವಾದ ಪರಿಣಾಮಗಳನ್ನು 'ಭಾವ'ವೆಂದು ಹೇಳುತ್ತಾರೆ, ಆ ರೂಪವಾದ ಲಿಂಗ (ಚಿಹ್ನ), ಲಕ್ಷಣ ಹಾಗೂ ರೂಪವಿದ್ದರೆ ಅದು ಭಾವಲಿಂಗವಿದೆ. ಆತ್ಮನು ಅಮೂರ್ತಿಕ ಚೇತನಾರೂಪನಿದ್ದಾನೆ, ಅವನ ಪರಿಣಾಮಗಳು ದರ್ಶನ ಜ್ಞಾನಗಳಿವೆ ಆದರಲ್ಲಿ ಕರ್ಮದ ನಿಮಿತ್ತದಿಂದ (-ಪರಾಶ್ರಯ ಮಾಡುವುದರಿಂದ) ಬಾಹ್ಯದಲ್ಲಂತೂ ಶರೀರ ಮೊದಲಾದ ಮೂರ್ತಿಕ ಪದಾರ್ಥಗಳ ಸಂಬಂಧವಿದೆ ಮತ್ತು ಅಂತರಂಗದಲ್ಲಿ ಮಿಥ್ಯಾತ್ವ ಹಾಗೂ ರಾಗ-ದ್ವೇಷ ಮೊದಲಾದ ಕಷಾಯಭಾವಗಳಿರುವುದರಿಂದ ಹೀಗೆ ಹೇಳುತ್ತಾರೆ, -

ಬಾಹ್ಯದಲ್ಲಂತೂ ದೇಹಾದಿ ಪರಿಗ್ರಹಗಳಿಂದ ರಹಿತ ಮತ್ತು ಅಂತರಂಗವು ರಾಗಾದಿಪರಿಣಾಮಗಳಲ್ಲಿ ಅಹಂಕಾರರೂಪದ ಮಾನಕಷಾಯ, ಪರಭಾವಗಳಲ್ಲಿ ತನ್ನತನ ಮನ್ನಿಸುವ ಭಾವದಿಂದ ರಹಿತವಾಗಿರುವುದು ಮತ್ತು ತನ್ನ ದರ್ಶನಜ್ಞಾನರೂಪವಾದ ಚೇತನಾಭಾವದಲ್ಲಿ ಲೀನವಿರುವುದು ಅದು 'ಭಾವಲಿಂಗ'ವಿದೆ, ಯಾವನಿಗೆ ಈ ಪ್ರಕಾರದ ಭಾವಗಳಿರುತ್ತವೆ ಅವನು ಭಾವಲಿಂಗಿಸಾಧುವಿದ್ದಾನೆ. ।।೫೬।।

ಈಗ ಇದೇ ಅರ್ಥವನ್ನು ಇನ್ನೂ ಸ್ಪಷ್ಟಮಾಡಿ ಹೇಳುತ್ತಾರೆ, -

ಮಮತ್ತಿಂ ಪರಿವಜ್ಜಾಮಿ ಣಿಮ್ಮಮತ್ತಿಮುವಟ್ಠಿದೋ ।
ಆಲಂಬಣಂ ಚ ಮೇ ಆದಾ ಅವಸೇಸಾಇಂ ವೋಸರೇ ।।೫೭।।

ಮಮತ್ವಂ ಪರಿವರ್ಜಾಮಿ ನಿರ್ಮಮತ್ವಮುಪಸ್ಥಿತಃ
ಆಲಂಬನಂ ಚ ಮೇ ಆತ್ಮಾ ಅವಶೇಷಾನಿ ವ್ಯುತ್ಸೃಜಾಮಿ ।।೫೭।।

ಅರ್ಥ ಃ- ನಾನು ಪರದ್ರವ್ಯ ಮತ್ತು ಪರಭಾವಗಳಲ್ಲಿನ ಮಮತ್ವವನ್ನು (ತನ್ನವೆಂದು ಮನ್ನಿಸುವುದನ್ನು) ಬಿಡುತ್ತೇನೆ ಮತ್ತು ನನ್ನ ನಿಜ ಭಾವವು ಮಮತ್ವರಹಿತವಿದೆ ಅದನ್ನು ಅಂಗೀಕಾರ ಮಾಡಿ ಸ್ಥಿರನಿರುತ್ತೇನೆ. ಈಗ ನನಗೆ ಆತ್ಮನದೇ ಅವಲಂಬನವಿದೆ, ಉಳಿದೆಲ್ಲವನ್ನು ಬಿಡುತ್ತೇನೆಂಬ ಭಾವಗಳು ಭಾವಲಿಂಗಿ ಮುನಿಗೆ ಇರುತ್ತವೆ.

ಭಾವಾರ್ಥ ಃ- ಸಮಸ್ತ ಪರದ್ರವ್ಯಗಳ ಅವಲಂಬನೆಯನ್ನು ಬಿಟ್ಟುಕೊಟ್ಟು ತನ್ನ ಆತ್ಮಸ್ವಭಾವದಲ್ಲಿ ಸ್ಥಿರವಿರುವಂಥದು 'ಭಾವಲಿಂಗ'ವಿದೆ. ।।೫೭।।

---

ಮಮತೆಯನು ಪರಿವರ್ಜಿಸಿ ನಿರ್ಮಮತೆಯಲಿ ಉಪಸ್ಥಿತನಿರುವೆನು ।
ನೇಮದಿಂದೆನಗೆ ಆತ್ಮಾವಲಂಬನವಿದ್ದು ಉಳಿದೆಲ್ಲವನು ಬಿಡುವೆನು ।।೫೭।।

ಜ್ಞಾನ, ದರ್ಶನ, ಸಂಯಮ, ತ್ಯಾಗ, ಸಂವರ ಮತ್ತು ಯೋಗವೆಂಬ ಈ ಭಾವಗಳು ಭಾವಲಿಂಗಿ ಮುನಿಗೆ ಇರುತ್ತವೆ, ಅವು ಅನೇಕವಿದ್ದರೂ ಕೂಡ ಆತ್ಮನೇ ಇರುವುದರಿಂದ ಇವುಗಳಿಂದ ಕೂಡ ಅಭೇದದ ಅನುಭವ ಮಾಡುತ್ತಾನೆಂದು ಈಗ ಹೇಳುತ್ತಾರೆ,-

ಆದಾ ಖು ಮಜ್ಝ ಣಾಣೇ ಆದಾ ಮೇ ದಂಸಣೇ ಚರಿತ್ತೇ ಯ ।
ಆದಾ ಪಚ್ಚಕ್ಖಾಣೇ ಆದಾ ಮೇ ಸಂವರೇ ಜೋಗೇ ।।೫೮।।

ಆತ್ಮಾಖಲು ಮಮ ಜ್ಞಾನೇ ಆತ್ಮಾ ಮೇ ದರ್ಶನೇ ಚಾರಿತ್ರೇ ಚ ।
ಆತ್ಮಾ ಪ್ರತ್ಯಾಖ್ಯಾನೇ ಆತ್ಮಾ ಮೇ ಸಂವರೇ ಯೋಗೇ ।।೫೮।।

ಅರ್ಥ ಃ- ನನ್ನ ಜ್ಞಾನಭಾವವು ಪ್ರಕಟವಿದೆ ಅದರಲ್ಲಿ ಆತ್ಮನದೇ ಭಾವನೆಯಿದೆ, ಜ್ಞಾನವೇನು ಭಿನ್ನ ವಸ್ತುವಿಲ್ಲ, ಜ್ಞಾನವಿದೆ ಅದು ಆತ್ಮನೇ ಇದ್ದಾನೆ, ಇದೇ ಪ್ರಕಾರ ದರ್ಶನದಲ್ಲಿ ಕೂಡ ಆತ್ಮನೇ ಇದ್ದಾನೆ. ಜ್ಞಾನದಲ್ಲಿ ಸ್ಥಿರವಿರುವುದು ಅದು ಚಾರಿತ್ರವಿದೆ, ಇದರಲ್ಲಿ ಕೂಡ ಆತ್ಮನೇ ಇದ್ದಾನೆ. ಪ್ರತ್ಯಾಖ್ಯಾನ (ಎಂದರೆ ಶುದ್ಧ ನಿಶ್ಚಯನಯದ ವಿಷಯಭೂತವಾದ ಸ್ವದ್ರವ್ಯದ ಅವಲಂಬನದ ಬಲದಿಂದ) ಭವಿಷ್ಯದ ಪರದ್ರವ್ಯದ ಸಂಬಂಧ ಬಿಡುವುದಿದೆ, ಈ ಭಾವದಲ್ಲಿ ಕೂಡ ಆತ್ಮನೇ ಇದ್ದಾನೆ, 'ಸಂವರ'ವೆಂದರೆ ಜ್ಞಾನರೂಪವಾಗಿರುವುದು ಮತ್ತು ಪರದ್ರವ್ಯದ ಭಾವರೂಪವಾಗಿ ಪರಿಣಮಿಸದಿರುವುದಿದೆ, ಈ ಭಾವದಲ್ಲಿ ಕೂಡ ನನ್ನ ಆತ್ಮನೇ ಇದ್ದಾನೆ ಮತ್ತು 'ಯೋಗ'ದ ಅರ್ಥವು ಏಕಾಗ್ರಚಿಂತಾರೂಪ ಸಮಾಧಿ-ಧ್ಯಾನವಿದೆ, ಈ ಭಾವದಲ್ಲಿ ಕೂಡ ನನ್ನ ಆತ್ಮನೇ ಇದ್ದಾನೆಂದು ಭಾವಲಿಂಗಿ ಮುನಿಯು ವಿಚಾರ ಮಾಡುತ್ತಾನೆ.

ಭಾವಾರ್ಥ ಃ- ಜ್ಞಾನ ಮೊದಲಾದವುಗಳೇನು ಭಿನ್ನ ಪದಾರ್ಥಗಳಂತೂ ಇಲ್ಲ, ಅವು ಆತ್ಮನ ಭಾವಗಳೇ ಇವೆ, ಸಂಜ್ಞೆ, ಸಂಖ್ಯೆ, ಲಕ್ಷಣ ಮತ್ತು ಪ್ರಯೋಜನದ ಭೇದದಿಂದ ಭಿನ್ನವೆಂದು ಹೇಳುತ್ತಾರೆ, ಅಲ್ಲಿ ಅಭೇದ ದೃಷ್ಟಿಯಿಂದ ನೋಡಹೋದರೆ ಇವೆಲ್ಲ ಭಾವಗಳು ಒಬ್ಬ ಆತ್ಮನೇ ಇರುವುದರಿಂದ ಭಾವಲಿಂಗಿ ಮುನಿಯ ಅಭೇದ ಅನುಭವದಲ್ಲಿ ವಿಕಲ್ಪಗಳಿಲ್ಲ, ಆದುದರಿಂದ ನಿರ್ವಿಕಲ್ಪ ಅನುಭವದಿಂದ ಸಿದ್ಧಿಯಿದೆಯೆಂದು ತಿಳಿದುಕೊಂಡು ಹೀಗೆ ಮಾಡುತ್ತಾನೆ. ।।೫೮।।

ಈಗ ಇದೇ ಅರ್ಥವನ್ನು ದೃಢಪಡಿಸುತ್ತ ಹೀಗೆ ಹೇಳುತ್ತಾರೆ, -

ಏಗೋ ಮೇ ಸಸ್ಸದೋ ಅಪ್ಪಾ ಣಾಣದಂಸಣಲಕ್ಖಣೋ ।
ಸೇಸಾ ಮೇ ಬಾಹಿರಾ ಭಾವಾ ಸವ್ವೇ ಸಂಜೋಗಲಕ್ಖಣಾ ।।೫೯।।

---

ಆತ್ಮನಿಜದಿ ನನ್ನ ಜ್ಞಾನದಲ್ಲಿದ್ದು ಆತ್ಮ ದರ್ಶನ-ಚಾರಿತ್ರದಲಿಹನು ।
ಆತ್ಮಪ್ರತ್ಯಾಖ್ಯಾನದಲಿದ್ದು ಆತ್ಮ-ಸಂವರ-ಯೋಗದಲಿ ಕೂಡ ಇರುವನು ।।೫೮।।

ಸುಶಾಶ್ವತ ಜ್ಞಾನದರ್ಶನಲಕ್ಷಣರೂಪ ಆತ್ಮನೊಬ್ಬನೆ ನನ್ನವನಿದ್ದು ।
ಆ ಶೇಷ ಭಾವಗಳು ನನ್ನಿಂದ ಬಾಹ್ಯವಿದ್ದವೆಲ್ಲ ಸಂಯೋಗಸ್ವರೂಪವಿವೆ ।।೫೯।।

ಏಕ ಮೇ ಶಾಶ್ವತಃ ಆತ್ಮಾ ಜ್ಞಾನದರ್ಶನ ಲಕ್ಷಣಃ ।
ಶೇಷಾಃ ಮೇ ಬಾಹ್ಯಾಃ ಭಾವಾಃ ಸರ್ವೇ ಸಂಯೋಗಲಕ್ಷಣಾಃ ॥೫೯॥

ಅರ್ಥ ಃ- ಜ್ಞಾನ, ದರ್ಶನ, ಲಕ್ಷಣರೂಪನು ಮತ್ತು ಶಾಶ್ವತನೂ ಎಂದರೆ ನಿತ್ಯನಾದಂಥ ಆತ್ಮನೊಬ್ಬನೇ ನನ್ನವನಿದ್ದಾನೆ. ಉಳಿದ ಯಾವ ಭಾವಗಳಿವೆ ಅವೆಲ್ಲವು ನನ್ನಿಂದ ಬಾಹ್ಯವಿವೆ, ಅವೆಲ್ಲವೂ ಸಂಯೋಗ ಸ್ವರೂಪವಿವೆ, ಪರದ್ರವ್ಯಗಳಿವೆಯೆಂದು ಭಾವಲಿಂಗಿ ಮುನಿಯು ವಿಚಾರ ಮಾಡುತ್ತಾನೆ.

ಭಾವಾರ್ಥ ಃ- ಜ್ಞಾನ ದರ್ಶನಸ್ವರೂಪನಾದ ನಿತ್ಯ ಒಬ್ಬ ಆತ್ಮನಿದ್ದಾನೆ ಅದಂತೂ ನನ್ನ ರೂಪವಿದೆ, ಏಕರೂಪವಿದೆ ಮತ್ತು ಇತರ ಪರದ್ರವ್ಯಗಳೆಲ್ಲವು ನನ್ನಿಂದ ಬಾಹ್ಯವಿವೆ, ಎಲ್ಲವೂ ಸಂಯೋಗಸ್ವರೂಪವಿವೆ, ಭಿನ್ನವಿವೆ. ಈ ಭಾವನೆಯು ಭಾವಲಿಂಗಿ ಮುನಿಯದಿದೆ ॥೫೯॥

ಮೋಕ್ಷವನ್ನಿಚ್ಛಿಸುವವನು ಈ ಪ್ರಕಾರದ ಭಾವನೆ ಭಾವಿಸಬೇಕೆಂದು ಈಗ ಹೇಳುತ್ತಾರೆ, -

ಭಾವೇಹ ಭಾವಸುದ್ಧಂ ಅಪ್ಪಾ ಸುವಿಸುದ್ಧಣಿಮ್ಮಲಂ ಚೇವ ।
ಲಹು ಚಉಗಇ ಚಇಊಣಂ ಜಇ ಇಚ್ಛಹ ಸಾಸಯಂ ಸುಕ್ಖಂ ॥೬೦॥

ಭಾವಯ ಭಾವಶುದ್ಧಂ ಆತ್ಮಾನಂ ಸುವಿಶುದ್ಧನಿರ್ಮಲಂ ಚೈವ ।
ಲಘು ಚತುರ್ಗತಿ ಚ್ಯುತ್ವಾ ಯದಿ ಇಚ್ಛಸಿ ಶಾಶ್ವತಂ ಸೌಖ್ಯಮ್ ॥೬೦॥

ಅರ್ಥ ಃ- ಎಲೈ ಮುನಿಜನರೇ ! ನೀವು ಒಂದುವೇಳೆ ಚತುರ್ಗತಿರೂಪವಾದ ಸಂಸಾರದಿಂದ ಬಿಡುಗಡೆ ಹೊಂದಿ ಶೀಘ್ರವಾಗಿ ಶಾಶ್ವತ ಸುಖರೂಪವಾದ ಮೋಕ್ಷವನ್ನು ಅಪೇಕ್ಷಿಸುತ್ತಿದ್ದರೆ ಭಾವದಿಂದ ಹೇಗೆ ಶುದ್ಧವಾಗುವುದು ಹಾಗೆ ಅತಿಶಯ ವಿಶುದ್ಧ ನಿರ್ಮಲ ಆತ್ಮನನ್ನು ಭಾವಿಸಿರಿ.

ಭಾವಾರ್ಥ ಃ- ಒಂದು ವೇಳೆ ಸಂಸಾರದಿಂದ ನಿವೃತ್ತರಾಗಿ ಮೋಕ್ಷವನ್ನು ಇಚ್ಛಿಸುತ್ತಿದ್ದರೆ ದ್ರವ್ಯಕರ್ಮ, ಭಾವಕರ್ಮ ಮತ್ತು ನೋಕರ್ಮಗಳಿಂದ ರಹಿತನಾದ ಶುದ್ಧ ಆತ್ಮನನ್ನು ಭಾವಿಸಿರೆಂಬ ಉಪದೇಶವಿದೆ. ॥೬೦॥

ಆತ್ಮನ ಸ್ವಭಾವವನ್ನು ತಿಳಿದುಕೊಂಡು ಅವನನ್ನು ಭಾವಿಸುವವನೇ ಮೋಕ್ಷ ಪಡೆಯುತ್ತಾನೆಂದು ಈಗ ಹೇಳುತ್ತಾರೆ, -

ಜೋ ಜೀವೋ ಭಾವಂತೋ ಜೀವಸಹಾವಂ ಸುಭಾವಸಂಜುತ್ತೋ ।
ಸೋ ಜರಮರಣವಿಣಾಸಂ ಕುಣಇ ಫುಡಂ ಲಹಇ ಣಿವ್ವಾಣಂ ॥೬೧॥

---

ಭಾವಿಸು ಶುದ್ಧಭಾವದಿಂದ ಸುವಿಶುದ್ಧನಾಗಿರುವ ನಿರ್ಮಲ ಆತ್ಮನನು ।
ಜವದಿ ಚತುರ್ಗತಿಗಳಿಂ ಮುಕ್ತನಾಗಿ ಶಾಶ್ವತಸುಖವ ಬಯಸುತಿರೆ ॥೬೦॥

ಯಾವ ಜೀವನು ಜೀವಸ್ವಭಾವವಂ ಸುಭಾವಸಂಯುಕ್ತನಾಗಿ ಭಾವಿಸುವವನು ।
ಅವನು ಜರಾಮರಣಗಳ ನಾಶಮಾಡಿ ಸ್ಪಷ್ಟ ನಿರ್ವಾಣ ಪಡೆಯುವನು ॥೬೧॥

यः जीवः भावयन् जीवस्वभावं सुभावसंयुक्तः ।
सः जरामरणविनाशं करोति स्फुटं लभते निर्वाणम् ॥६१॥

ಅರ್ಥ :- ಯಾವ ಭವ್ಯ ಪುರುಷನು ಜೀವನನ್ನು ಭಾವಿಸುತ್ತ ಒಳ್ಳೆಯ ಭಾವಗಳಿಂದ ಸಂಯುಕ್ತವಾಗಿ ಜೀವದ ಸ್ವಭಾವವನ್ನು ತಿಳಿದುಕೊಂಡು ಭಾವಿಸುವನು ಅವನು ಜರಾ-ಮರಣಗಳ ವಿನಾಶ ಮಾಡಿ ಸ್ಪಷ್ಟ ನಿರ್ವಾಣವನ್ನು ಪ್ರಾಪ್ತಮಾಡಿಕೊಳ್ಳುತ್ತಾನೆ.

ಭಾವಾರ್ಥ :- 'ಜೀವ'ವೆಂಬ ಹೆಸರಂತೂ ಲೋಕದಲ್ಲಿ ಪ್ರಸಿದ್ಧವಿದೆ, ಆದರೆ ಅವನ ಸ್ವಭಾವವು ಹೇಗೆ ಇದೆಯೆಂಬುದರ ಯಥಾರ್ಥ ಜ್ಞಾನವು ಜನರಿಗೆ ಇಲ್ಲ ಮತ್ತು ಮತಾಂತರದ ದೋಷದಿಂದ ಇವನ ಸ್ವರೂಪವು ವಿಪರ್ಯಯವಾಗುತ್ತಲಿದೆ. ಆದುದರಿಂದ ಇವನ ಯಥಾರ್ಥ ಸ್ವರೂಪವನ್ನು ತಿಳಿದುಕೊಂಡು ಯಾರು ಭಾವನೆ ಮಾಡುತ್ತಾರೆ ಅವರು ಸಂಸಾರದಿಂದ ನಿವೃತ್ತರಾಗಿ ಮೋಕ್ಷ ಪಡೆದುಕೊಳ್ಳುತ್ತಾರೆ. ॥೬೧॥

ಜೀವದ ಸ್ವರೂಪವನ್ನು ಸರ್ವಜ್ಞದೇವರು ಹೇಳಿದ್ದಾರೆ ಅದನ್ನು ಈಗ ಹೇಳುತ್ತಾರೆ, -

ಜೀವೋ ಜಿಣಪಣ್ಣತ್ತೋ ಣಾಣಸಹಾಓ ಯ ಚೇಯಣಾಸಹಿಓ ।
ಸೋ ಜೀವೋ ಣಾಯವ್ವೋ ಕಮ್ಮಕ್ಖಯಕರಣಣಿಮಿತ್ತೋ ॥೬೨॥

जीवः जिनप्रज्ञप्तः ज्ञानस्वभावः च चेतनासहितः
सः जीवः ज्ञातव्यः कर्मक्षयकरणनिमित्तः ॥६२॥

ಅರ್ಥ :- ಜೀವನು ಚೇತನಾಸಹಿತನಿದ್ದಾನೆ ಮತ್ತು ಜ್ಞಾನಸ್ವಭಾವಿಯಿದ್ದಾನೆಂದು ಸರ್ವಜ್ಞದೇವರು ಜೀವದ ಸ್ವರೂಪವನ್ನು ಹೇಳಿದ್ದಾರೆ. ಈ ಪ್ರಕಾರ ಜೀವದ ಭಾವನೆಯನ್ನು ಭಾವಿಸುವುದು ಅದು ಕರ್ಮದ ಕ್ಷಯಕ್ಕೆ ನಿಮಿತ್ತವಿದೆಯೆಂದು ತಿಳಿಯಬೇಕು.

ಭಾವಾರ್ಥ :- ಜೀವದ ವಿಶೇಷಣವನ್ನು ಚೇತನಾಸಹಿತವೆಂದು ಹೇಳುವುದರಿಂದ ಜೀವವನ್ನು ಚೇತನಾ ಸಹಿತವೆಂದು ಮನ್ನಿಸದಿರುವ ಚಾರ್ವಾಕರ ನಿರಾಕರಣವಿದೆ. ಜ್ಞಾನಸ್ವಭಾವವೆಂಬ ವಿಶೇಷಣದಿಂದ ಸಾಂಖ್ಯ ಮತಿಗಳು ಜ್ಞಾನವನ್ನು ಮುಖ್ಯಧರ್ಮವೆಂದು ಮನ್ನಿಸುತ್ತಾರೆ, ಜೀವವನ್ನು ಉದಾಸೀನ ನಿತ್ಯಚೇತನಾರೂಪವೆಂದು ಮನ್ನಿಸುತ್ತಾರೆ ಅವರ ನಿರಾಕರಣವಿದೆ ಮತ್ತು ನೈಯಾಯಿಕರು ಗುಣ-ಗುಣಿಯ ಭೇದ ಮನ್ನಿಸಿ ಜ್ಞಾನವನ್ನು ಸದಾ ಭಿನ್ನವೆಂದು ಮನ್ನಿಸುತ್ತಾರೆ ಅವರ ನಿರಾಕರಣವಿದೆ. ಇಂಥ ಜೀವದ ಸ್ವರೂಪವನ್ನು ಭಾವಿಸುವುದು ಅದು ಕರ್ಮದ ಕ್ಷಯಕ್ಕೆ ನಿಮಿತ್ತವಾಗುತ್ತದೆ, ಅನ್ಯ ಪ್ರಕಾರವು ಮಿಥ್ಯಾಭಾವವಿದೆ. ॥೬೨॥

ಜೀವದ ಅಸ್ತಿತ್ವವನ್ನು ಮನ್ನಿಸುವಂಥ ಪುರುಷರು [೧]ಸಿದ್ಧರಾಗುತ್ತಾರೆಂದು ಈಗ ಹೇಳುತ್ತಾರೆ, -

---

ಜೀವ ಜ್ಞಾನಸ್ವಭಾವ ಮೇಣ್ಚೇತನಾಯುಕ್ತನೆಂದು ಜಿನದೇವರು ಪೇಳಿಹರು ।
ಜೀವನವನು ಜ್ಞಾತವ್ಯನಿದ್ದು ಕರ್ಮಕ್ಷಯಕರಣನಿಮಿತ್ತನಿರುವನು ॥೬೨॥

---

೧ ಸಿದ್ಧ-ಮುಕ್ತ-ಪರಮಾತ್ಮದಶೆಗೆ ಪ್ರಾಪ್ತ.

**ಜೇಸಿಂ ಜೀವಸಹಾವೋ ಣತ್ಥಿ ಅಭಾವೋ ಯ ಸವ್ವಹಾ ತತ್ಥ ।**
**ತೇ ಹೋಂತಿ ಭಿಣ್ಣದೇಹಾ ಸಿದ್ಧಾ ವಚಿಗೋಯರಮದೀದಾ ॥೬೩॥**

**ಯೇಷಾಂ ಜೀವಸ್ವಭಾವಃನಾಸ್ತಿ ಅಭಾವಃ ಚ ಸರ್ವಥಾ ತತ್ರ ।**
**ತೇ ಭವಂತಿ ಭಿನ್ನದೇಹಾಃ ಸಿದ್ಧಾಃ ವಚೋಗೋಚರಾತೀತಾಃ ॥೬೩॥**

ಅರ್ಥ ಃ– ಯಾವ ಭವ್ಯ ಜೀವರುಗಳ ಜೀವನಾಮದ ಪದಾರ್ಥವು ಸದ್ ಭಾವರೂಪವಿದೆ ಮತ್ತು ಸರ್ವಥಾ ಅಭಾವರೂಪವಿಲ್ಲ, ಆ ಭವ್ಯಜೀವರುಗಳು ದೇಹದಿಂದ ಭಿನ್ನ ಹಾಗೂ ವಚನಗೋಚರಾತೀತರಾದ ಸಿದ್ಧರಾಗುತ್ತಾರೆ.

ಭಾವಾರ್ಥ ಃ– ಜೀವವು ದ್ರವ್ಯಪರ್ಯಾಯಸ್ವರೂಪವಿದೆ, ಕಥಂಚಿತ್ ಅಸ್ತಿಸ್ವರೂಪವಿದೆ ಕಥಂಚಿತ್ ನಾಸ್ತಿಸ್ವರೂಪವಿದೆ. ಪರ್ಯಾಯವು ಅನಿತ್ಯವಿದೆ, ಈ ಜೀವನಿಗೆ ಕರ್ಮದ ನಿಮಿತ್ತದಿಂದ ಮನುಷ್ಯ , ತಿರ್ಯಂಚ, ದೇವ ಮತ್ತು ನಾರಕ ಪರ್ಯಾಯಗಳಾಗುತ್ತವೆ, ಇದರ ಕಥಂಚಿತ್ ಅಭಾವ ನೋಡಿ ಸರ್ವಥಾ ಜೀವದ ಅಭಾವ ಮನ್ನಿಸುತ್ತಾರೆ. ಅವರಿಗೆ ಸಂಬೋಧನೆ ಮಾಡುವ ಸಲುವಾಗಿ ದ್ರವ್ಯದೃಷ್ಟಿಯಿಂದ ಜೀವದ ಸ್ವಭಾವವು ನಿತ್ಯವಿದೆಯೆಂದು ಹೇಳಿದೆ. ಪರ್ಯಾಯದ ಅಭಾವವಾದ ಮೇಲೆ ಸರ್ವಥಾ ಅಭಾವ ಮನ್ನಿಸದವನು ದೇಹದಿಂದ ಭಿನ್ನನಾಗಿ ಸಿದ್ಧಪರಮಾತ್ಮನಾಗುತ್ತಾನೆ, ಆ ಸಿದ್ಧರು ವಚನಗೋಚರರಿಲ್ಲ. ನಷ್ಟವಾಗುತ್ತಿರುವ ದೇಹವನ್ನು ನೋಡಿ ಸರ್ವಥಾ ಜೀವದ ನಾಶ ಮನ್ನಿಸುವವರು ಮಿಥ್ಯಾದೃಷ್ಟಿಗಳಿದ್ದಾರೆ, ಅವರು ಸಿದ್ಧ ಪರಮಾತ್ಮರು ಹೇಗೆ ಆಗುವ ಸಾಧ್ಯತೆಯಿದೆ ? ಎಂದರೆ ಆಗುವುದಿಲ್ಲ. ॥೬೩॥

ಆ ಜೀವದ ಸ್ವರೂಪವು ವಚನ ಅಗೋಚರವಿದೆ ಮತ್ತು ಅನುಭವಗಮ್ಯವಿದೆ ಅದು ಹೀಗಿದೆಯೆಂದು ಈಗ ಹೇಳುತ್ತಾರೆ, –

**ಅರಸಮರೂವಮಗಂಧಂ ಅವ್ವತ್ತಂ ಚೇದಣಾಗುಣಮಸದ್ದಂ ।**
**ಜಾಣ ಅಲಿಂಗಗ್ಗಹಣಂ ಜೀವಮಣಿದ್ದಿಟ್ಠಸಂಠಾಣಂ ೬೪॥**

**ಅರಸಮರೂಪಮಗಂಧಂ ಅವ್ಯಕ್ತಂ ಚೇತನಾಗುಣಂ ಅಶಬ್ದಮ್ ।**
**ಜಾನೀಹಿ ಅಲಿಂಗಗ್ರಹಣಂ ಜೀವ ಅನಿರ್ದಿಷ್ಟಸಂಸ್ಥಾನಮ್ ॥೬೪॥**

ಅರ್ಥ ಃ– ಎಲೈ ಭವ್ಯನೇ ! ನೀನು ಜೀವದ ಸ್ವರೂಪವು ಅರಸ ಎಂದರೆ ಐದು ಪ್ರಕಾರದ ಸಿಹಿ, ಕಹಿ, ಹುಳಿ, ಉಪ್ಪು ಮತ್ತು ಕಾರರಸದಿಂದ ರಹಿತವಿದೆ. ಕಪ್ಪು, ಹಳದಿ, ಕೆಂಪು, ಬೆಳ್ಳಗೆ ಮತ್ತು ಹಸಿರು ಈ ಪ್ರಕಾರ ಅರೂಪ ಎಂದರೆ

---

ಯಾವನಿಗೆ ಜೀವಸ್ವಭಾವ ಸತ್ರೂಪವಿದೆ ಸರ್ವಥಾ ಅಭಾವರೂಪವಿಲ್ಲ ।
ಅವನು ದೇಹರಹಿತ ವಚನಗೋಚರಾತೀತ ಸಿದ್ಧತ್ವ ಪಡೆಯುವನು ॥೬೩॥

ಅರಸ ಅರೂಪ ಅಗಂಧ ಅವ್ಯಕ್ತ ಚೇತನಾಗುಣಯುಕ್ತ ಮೇಣಶಬ್ದ ।
ಅರಿ ಅಲಿಂಗಗ್ರಹಣಮಲ್ಲದೆ ಜೀವ ಅನಿರ್ದಿಷ್ಟಸಂಸ್ಥಾನಮೆಂಬುದನು ॥೬೪॥

ಐದು ಪ್ರಕಾರದ ರೂಪದಿಂದ ರಹಿತವಿದೆ. ಎರಡು ಪ್ರಕಾರದ ಗಂಧದಿಂದ ರಹಿತವಿದೆ. ಅವ್ಯಕ್ತ ಎಂದರೆ ಇಂದ್ರಿಯಗಳಿಗೆ ಗೋಚರ-ವ್ಯಕ್ತವಿಲ್ಲ. ಚೇತನಾಗುಣವುಳ್ಳದ್ದಿದೆ, ಅಶಬ್ದ ಎಂದರೆ ಶಬ್ದ ರಹಿತವಿದೆ. ಅಲಿಂಗಗ್ರಹಣ ಎಂದರೆ ಅದರ ಯಾವ ಚಿಹ್ನವು ಇಂದ್ರಿಯಗಳಿಂದ ಗ್ರಹಣದಲ್ಲಿ ಬರುವುದಿಲ್ಲ, ಅನಿರ್ದಿಷ್ಟಸಂಸ್ಥಾನ ಎಂದರೆ ಚತುಷ್ಕೋಣ ವೃತ್ತಾಕಾರ ಮೊದಲಾದ ಯಾವ ಆಕಾರವನ್ನು ಅದಕ್ಕೆ ಹೇಳಲಾಗುವುದಿಲ್ಲ, ಈ ಪ್ರಕಾರ ಜೀವ ಸ್ವರೂಪವಿದೆಯೆಂದು ತಿಳಿ.

ಭಾವಾರ್ಥ :- ರಸ, ರೂಪ, ಗಂಧ, ಶಬ್ದಗಳಂತೂ ಪುದ್ಗಲದ ಗುಣಗಳಿವೆ, ಇವುಗಳ ನಿಷೇಧರೂಪವಾಗಿ ಜೀವವನ್ನು ಹೇಳಿದೆ, ಅವ್ಯಕ್ತ, ಅಲಿಂಗಗ್ರಹಣ, ಅನಿರ್ದಿಷ್ಟ ಸಂಸ್ಥಾನವೆಂದು ಹೇಳಿದೆ, ಹೀಗೆ ಇವು ಕೂಡ ಪುದ್ಗಲಸ್ವಭಾವದ ಅಪೇಕ್ಷೆಯಿಂದ ನಿಷೇಧರೂಪವಾಗಿಯೇ ಜೀವವನ್ನು ಹೇಳಿದೆ ಮತ್ತು ಚೇತನಾಗುಣ ಹೇಳಿರುವುದಂತೂ ಇದು ಜೀವ ವಿಧಿರೂಪ ಹೇಳಿದೆ. ನಿಷೇಧ ಅಪೇಕ್ಷೆಯಿಂದಂತೂ ವಚನದ ಅಗೋಚರವೆಂದು ತಿಳಿಯುವುದು ಮತ್ತು ವಿಧಿ ಅಪೇಕ್ಷೆಯಿಂದ ಸ್ವಸಂವೇದದ ಗೋಚರವೆಂದು ತಿಳಿಯುವುದು. ಹೀಗೆ ಜೀವದ ಸ್ವರೂಪವನ್ನು ತಿಳಿದುಕೊಂಡು ಅನುಭವಗೋಚರ ಮಾಡಿಕೊಳ್ಳುವುದು. ಈ ಗಾಥೆಯು ಸಮಯಸಾರದಲ್ಲಿ ೪೯, ಪ್ರವಚನಸಾರದಲ್ಲಿ ೧೭೨, ನಿಯಮಸಾರದಲ್ಲಿ ೪೬, ಪಂಚಾಸ್ತಿಕಾಯದಲ್ಲಿ ೧೨೭, ಧವಲ ಟೀಕೆ ಪು. ೩, ಪು. ೨, ಲಘು ದ್ರವ್ಯಸಂಗ್ರಹದಲ್ಲಿ ಗಾಥೆ ೫ ಮೊದಲಾದವುಗಳಲ್ಲೂ ಇದೆ. ಇದರ ವ್ಯಾಖ್ಯಾನವನ್ನು ಟೀಕಾಕಾರರು ವಿಶೇಷವಾಗಿ ಹೇಳಿದ್ದಾರೆ ಅದನ್ನು ಅಲ್ಲಿಂದ ತಿಳಿದುಕೊಳ್ಳಬೇಕು. ।।೬೪।।

ಜೀವದ ಸ್ವಭಾವವನ್ನು ಜ್ಞಾನಸ್ವರೂಪವಾಗಿ ಭಾವಿಸಬೇಕೆಂದು ಹೇಳಿದೆ, ಆ ಜ್ಞಾನವನ್ನು ಎಷ್ಟು ಪ್ರಕಾರದ್ದಾಗಿ ಭಾವಿಸಬೇಕೆಂಬುದನ್ನು ಈಗ ಹೇಳುತ್ತಾರೆ, -

**ಭಾವಹಿಂ ಪಂಚಪಯಾರಂ ಣಾಣಂ ಅಣ್ಣಾಣಣಾಸಣಂ ಸಿಗ್ಘಂ ।**
**ಭಾವಣಭಾವಿಯಸಹಿಓ ದಿವಸಿವಸುಹಭಾಯಣೋ[1] ಹೋಇ ।।೬೫।।**

**ಭಾವಯ ಪಂಚಪ್ರಕಾರಂ ಜ್ಞಾನಂ ಅಜ್ಞಾನನಾಶನಂ ಶೀಘ್ರಮ್ ।**
**ಭಾವನಾಭಾವಿತಸಹಿತಃ ದಿವಶಿವಸುಖಭಾಜನ ಭವತಿ ।।೬೫।।**

ಅರ್ಥ :- ಎಲೈ ಭವ್ಯ ಜನರೇ ! ನೀವು ಈ ಜ್ಞಾನವನ್ನು ಐದು ಪ್ರಕಾರದಿಂದ ಭಾವಿಸಬೇಕು, ಈ ಜ್ಞಾನವು ಅಜ್ಞಾನವನ್ನು ನಾಶಮಾಡುವಂಥದ್ದಿದೆ, ಅದನ್ನು ಭಾವನೆಯಿಂದ ಭಾವಿತವಾಗಿ ಆ ಭಾವಸಹಿತವಾಗಿ ಭಾವಿಸಬೇಕು, ಶೀಘ್ರ ಭಾವಿಸಬೇಕು. ಇದರಿಂದ ನೀವು ದಿವ(ಸ್ವರ್ಗ)ಕ್ಕೆ ಮತ್ತು ಶಿವ(ಮೋಕ್ಷ)ಕ್ಕೆ ಪಾತ್ರರಾಗುವಿರಿ.

ಭಾವಾರ್ಥ :- ಒಂದು ವೇಳೆ ಜ್ಞಾನವು ತಿಳಿದುಕೊಳ್ಳುವ ಸ್ವಭಾವದಿಂದ ಏಕಪ್ರಕಾರವಾಗಿದ್ದರೂ ಕೂಡ ಕರ್ಮದ ಕ್ಷಯೋಪಶಮ ಮತ್ತು ಭಾವದ ಅಪೇಕ್ಷೆಯಿಂದ ಐದು ಪ್ರಕಾರದ್ದಿದೆ. ಅದರಲ್ಲಿ ಮಿಥ್ಯಾತ್ವಭಾವದ ಅಪೇಕ್ಷೆಯಿಂದ

---

**ಭಾವಿಸು ಪಂಚಪ್ರಕಾರದಿಂದ ಅಜ್ಞಾನನಾಶಕವಾದ ಜ್ಞಾನವನು ಶೀಘ್ರ ।**
**ಭಾವನಾ ಭಾವಿತ ಸಹಿತನು ದಿವಶಿವಸುಖದ ಭಾಜನನಾಗುವನು ।।೬೫।।**

---

೧ "ಭಾಯೀಣ"ವೆಂಬ ಪಾಠಾಂತರವಿದೆ.

ಮತಿ, ಶ್ರುತ ಮತ್ತು ಅವಧಿ ಇವು ಮೂರು ಮಿಥ್ಯಾಜ್ಞಾನವೆಂದೂ ಕರೆಸಿಕೊಳ್ಳುವುದರಿಂದ ಮಿಥ್ಯಾಜ್ಞಾನದ ಅಭಾವ ಮಾಡುವ ಸಲುವಾಗಿ, ಮತಿ, ಶ್ರುತ, ಅವಧಿ, ಮನಃಪರ್ಯಾಯ, ಮತ್ತು ಕೇವಲ ಜ್ಞಾನಸ್ವರೂಪವಾದ ಐದು ಪ್ರಕಾರದ ಸಮ್ಯಗ್ಜ್ಞಾನವೆಂದು ತಿಳಿದುಕೊಂಡು ಅವನ್ನು ಭಾವಿಸಬೇಕು. ಪರಮಾರ್ಥ ವಿಚಾರದಿಂದ ಜ್ಞಾನವು ಒಂದೇ ಪ್ರಕಾರದ್ದಿದೆ, ಈ ಜ್ಞಾನದ ಭಾವನೆಯು ಸ್ವರ್ಗ-ಮೋಕ್ಷಗಳನ್ನು ಕೊಡುವಂಥದ್ದಿದೆ. ।।೬೫।।

ಓದುವುದು-ಕೇಳುವುದು ಕೂಡ ಭಾವವಿಲ್ಲದೆ ಏನೂ ಇಲ್ಲವೆಂದು ಈಗ ಹೇಳುತ್ತಾರೆ, -

ಪಢಿಏಣ ವಿ ಕಿಂ ಕೀರಇ ಕಿಂ ವಾ ಸುಣಿಏಣ ಭಾವರಹಿಏಣ ।
ಭಾವೋ ಕಾರಣಭೂದೋ ಸಾಯಾರಣಯಾರಭೂದಾಣಂ ।।೬೬।।

ಪಠಿತೇನಾಪಿ ಕಿಂ ಕ್ರಿಯತೇ ಕಿಂ ವಾ ಶ್ರುತೇನ ಭಾವರಹಿತೇನ ।
ಭಾವಃಕಾರಣಭೂತಃ ಸಾಗಾರಾನಗಾರಭೂತಾನಾಮ್ ।।೬೬।।

ಅರ್ಥ ಃ- ಭಾವರಹಿತವಾಗಿ ಓದುವುದರಿಂದ-ಕೇಳುವುದರಿಂದ ಏನಾಗುತ್ತದೆ ? ಎಂದರೆ ಏನೂ ಕಾರ್ಯಕಾರಿಯಿಲ್ಲ, ಆದುದರಿಂದ ಶ್ರಾವಕತನ ಮತ್ತು ಮುನಿತನಗಳ ಕಾರಣಭೂತವು ಭಾವವೇ ಇದೆ.

ಭಾವಾರ್ಥ ಃ- ಮೋಕ್ಷಮಾರ್ಗದಲ್ಲಿ ಏಕದೇಶ, ಸರ್ವದೇಶ ವ್ರತಗಳ ಪ್ರವೃತ್ತಿರೂಪವಾಗಿ ಮುನಿ-ಶ್ರಾವಕತನಗಳಿವೆ, ಅವೆರಡಕ್ಕೂ ಕಾರಣಭೂತವು ನಿಶ್ಚಯಸಮ್ಯಗ್ದರ್ಶನ ಮೊದಲಾದ ಭಾವಗಳಿವೆ. ಭಾವವಿಲ್ಲದೆ ವ್ರತಕ್ರಿಯೆಗಳ ಕಥನವು ಏನೂ ಕಾರ್ಯಕಾರಿಯಿಲ್ಲ, ಆದುದರಿಂದ ಭಾವವಿಲ್ಲದೆ ಓದುವುದು-ಕೇಳುವುದು ಮೊದಲಾದುವಿಂದ ಏನಾಗುತ್ತದೆ ? ಕೇವಲ ಖೇದಮಾತ್ರವಿದೆ, ಆದುದರಿಂದ ಭಾವಸಹಿತ ಮಾಡುವುದು ಸಫಲವಿದೆಯೆಂಬ ಉಪದೇಶವಿದೆ. ಓದುವುದು-ಕೇಳುವುದು ಕೂಡ ಜ್ಞಾನವಿದೆಯೆಂದು ಯಾರಾದರೂ ತಿಳಿಯಬಹುದು, ಆದರೆ ಹಾಗೆ ಇಲ್ಲ, ಓದಿ ಕೇಳಿ ತಮ್ಮನ್ನು ಜ್ಞಾನಸ್ವರೂಪವಾಗಿ ತಿಳಿದುಕೊಂಡಾಗ ಭಾವವು ತಿಳಿದುಬರುತ್ತದೆ, ಆದುದರಿಂದ ಪುನಃ ಪುನಃ ಭಾವನೆಯಿಂದ ಭಾವತೊಡಗಿಸಿದಮೇಲೆಯೇ ಸಿದ್ಧಿಯಿದೆಯೆಂಬ ಆಶಯವಿದೆ. ।।೬೬।।

ಒಂದು ವೇಳೆ ಬಾಹ್ಯ ನಗ್ನತೆಯಿಂದಲೇ ಸಿದ್ಧಿಯಾಗುತ್ತಿದ್ದರೆ ನಗ್ನರಂತೂ ಎಲ್ಲರೂ ಇರುತ್ತಾರೆಂದು ಈಗ ಹೇಳುತ್ತಾರೆ, -

ದವ್ವೇಣ ಸಯಲ ಣಗ್ಗಾ ಣಾರಯತಿರಿಯಾ ಯ ಸಯಲಸಂಘಾಯಾ ।
ಪರಿಣಾಮೇಣ ಅಸುದ್ಧಾ ಣ ಭಾವಸವಣತ್ತಣಂ ಪತ್ತಾ ।।೬೭।।

---

ಭಾವರಹಿತವಾಗಿ ಓದುವುದರಿಂ ಮೇಣ್ಕೇಳುವುದರಿಂದೇನು ಸಿದ್ಧಿಪುದು ।
ಭಾವವೇ ಕಾರಣಭೂತವಿದೆ ಸಾಗಾರ-ಅನಗಾರತನಗಳೆರಡಕ್ಕೆ ।।೬೬।।

ನಾರಕ ತಿರ್ಯಂಚ ಮೊದಲಾದೆಲ್ಲ ಜೀವಗಳು ದ್ರವ್ಯದಿಂ ತಾನೆ ನಗ್ನವಿವೆ ।
ಪರಿಣಾಮ ಶುದ್ಧವಿಲ್ಲದಿರುವಲ್ಲಿ ಭಾವಶ್ರಮಣತ್ವದ ಪ್ರಾಪ್ತಿಯಾಗದು ।।೬೭।।

ದ್ರವ್ಯೇಣ ಸಕಲಾ ನಗ್ನಾಃ ನಾರಕತಿರ್ಯಂಚಶ್ಚ ಸಕಲಸಂಘಾತಾಃ ।
ಪರಿಣಾಮೇನ ಅಶುದ್ಧಾಃ ನ ಭಾವಶ್ರಮಣತ್ವಂ ಪ್ರಾಪ್ತಾಃ ॥೬೭॥

ಅರ್ಥ ಃ– ದ್ರವ್ಯದಿಂದ ಬಾಹ್ಯದಲ್ಲಂತೂ ಸಮಸ್ತ ಪ್ರಾಣಿಗಳು ನಗ್ನವಿರುತ್ತವೆ ನಾರಕೀ ಜೀವ ಮತ್ತು ತಿರ್ಯಂಚ ಜೀವಗಳಂತೂ ನಿರಂತರ ವಸ್ತ್ರಾದಿಗಳಿಂದ ರಹಿತವಾಗಿ ನಗ್ನವೇ ಇರುತ್ತವೆ. 'ಸಕಲಸಂಘಾತ'ವೆಂದು ಹೇಳುತ್ತಿರುವುದರಿಂದ ಅನ್ಯ ಮನುಷ್ಯ ಮೊದಲಾದವರು ಕೂಡ ಕಾರಣ ಪಡೆದು ನಗ್ನರಾಗುತ್ತಿದ್ದರೂ ಕೂಡ ಪರಿಣಾಮಗಳಿಂದ ಅಶುದ್ಧರಿರುತ್ತಾರೆ, ಆದುದರಿಂದ ಭಾವಶ್ರಮಣತೆಗೆ ಪ್ರಾಪ್ತರಾಗುವುದಿಲ್ಲ.

ಭಾವಾರ್ಥ ಃ– ಒಂದು ವೇಳೆ ನಗ್ನವಿರುವುದರಿಂದಲೇ ಮುನಿಲಿಂಗವಿರುತ್ತಿದ್ದರೆ ನಾರಕಿ,ತಿರ್ಯಂಚ ಮೊದಲಾದ ಸಮಸ್ತ ಜೀವ ಸಮೂಹವು ನಗ್ನವಿರುತ್ತದೆ ಅವೆಲ್ಲವು ಮುನಿಯೆಂದು ನಿಶ್ಚಯಿಸಬಹುದು, ಆದುದರಿಂದ ಮುನಿತನವಂತೂ ಭಾವಶುದ್ಧವಾದ ಮೇಲೆಯೇ ಆಗುತ್ತದೆ ಅಶುದ್ಧ ಭಾವವಿದ್ದಮೇಲೆ ದ್ರವ್ಯದಿಂದ ನಗ್ನವಾದರೂ ಕೂಡ ಭಾವಮುನಿತನವನ್ನು ಪಡೆಯುವುದಿಲ್ಲ. ॥೬೭॥

ಇದೇ ಅರ್ಥವನ್ನು ದೃಢಪಡಿಸುವ ಸಲುವಾಗಿ ಕೇವಲ ನಗ್ನತೆಯು ನಿಷ್ಫಲವಿದೆಯೆಂದು ಈಗ ಹೇಳುತ್ತಾರೆ, –

ಣಗ್ಗೋ ಪಾವಇ ದುಕ್ಖಂ ಣಗ್ಗೋ ಸಂಸಾರಸಾಯರೇ ಭಮಇ ।
ಣಗ್ಗೋ ಣ ಲಹಇ ಬೋಹಿಂ ಜಿಣಭಾವಣವಜ್ಜಿಓ ಸುಇರಂ ॥೬೮॥

ನಗ್ನಃ ಪ್ರಾಪ್ನೋತಿ ದುಃಖಂ ನಗ್ನಃ ಸಂಸಾರಸಾಗರೇ ಭ್ರಮತಿ ।
ನಗ್ನಃ ನ ಲಭತೇ ಬೋಧಿಂ ಜಿನಭಾವನಾವರ್ಜಿತಃ ಸುಚಿರಂ ॥೬೮॥

ಅರ್ಥ ಃ– ನಗ್ನನು ಯಾವಾಗಲೂ ದುಃಖ ಪಡೆಯುತ್ತಾನೆ, ನಗ್ನನು ಯಾವಾಗಲೂ ಸಂಸಾರ ಸಮುದ್ರದಲ್ಲಿ ಭ್ರಮಣ ಮಾಡುತ್ತಾನೆ ಮತ್ತು ನಗ್ನನು ಬೋಧಿ ಎಂದರೆ ಸಮ್ಯಗ್ದರ್ಶನ–ಜ್ಞಾನ–ಚಾರಿತ್ರರೂಪದ ಸ್ವಾನುಭವವನ್ನು ಪಡೆಯುವುದಿಲ್ಲ.ಆ ನಗ್ನನು ಜಿನಭಾವನೆಯಿಂದ ರಹಿತನಿದ್ದಾನೆ.

ಭಾವಾರ್ಥ ಃ– 'ಜಿನಭಾವನೆ' ಆ ಸಮ್ಯಗ್ದರ್ಶನದ ಭಾವನೆಯಿಂದ ರಹಿತನಿರುವ ಜೀವನು ನಗ್ನನಿದ್ದರೂ ಕೂಡ ಬೋಧಿ ಆ ಸಮ್ಯಗ್ದರ್ಶನ–ಜ್ಞಾನ–ಚಾರಿತ್ರರೂಪವಾದ ಮೋಕ್ಷಮಾರ್ಗವನ್ನು ಪಡೆಯುವುದಿಲ್ಲ. ಆದುದರಿಂದ ಸಂಸಾರಸಮುದ್ರದಲ್ಲಿ ಭ್ರಮಣ ಮಾಡುತ್ತ ಸಂಸಾರದಲ್ಲಿಯೇ ದುಃಖವನ್ನು ಪಡೆಯುತ್ತಾನೆ. ಮತ್ತು ವರ್ತಮಾನ ಕಾಲದಲ್ಲಿ ಕೂಡ ನಗ್ನನಾಗುವಂಥ ಪುರುಷನು ದುಃಖವನ್ನೇ ಪಡೆಯುತ್ತಾನೆ. ಸುಖವನ್ನಂತೂ ಭಾವಮುನಿಗಳು ನಗ್ನವಿದ್ದರೆ ಅವರೇ ಪಡೆಯುತ್ತಾರೆ. ॥೬೮॥

ಇದೇ ಅರ್ಥವನ್ನು ದೃಢ ಮಾಡುವ ಸಲುವಾಗಿ ದ್ರವ್ಯದಿಂದ ನಗ್ನನಾಗಿ ಮುನಿಯೆಂದು ಕರೆಯಿಸಿಕೊಳ್ಳುವವನ ಅಪಯಶವಾಗುತ್ತದೆಯೆಂದು ಈಗ ಹೇಳುತ್ತಾರೆ, –

---

ನಗ್ನ ಪಡೆಯುವನು ದುಃಖ ಆ ನಗ್ನ ಸಂಸಾರಸಾಗರದಿ ಭ್ರಮಿಸುವನು ।
ನಗ್ನ ಬೋಧಿಪಡೆಯುವುದಿಲ್ಲವನು ಜಿನಭಾವನೆಯಿಂ ವರ್ಜಿತನಿರುವನು ॥೬೮॥

**ಅಯಸಾಣ ಭಾಯಣೇಣ ಯ ಕಿಂ ತೇ ಣಗ್ಗೇಣ ಪಾವಮಲಿಣೇಣ ।**
**ಪೇಸುಣ್ಣಹಾಸಮಚ್ಛರಮಾಯಾಬಹುಲೇಣ ಸವಣೇಣ ॥೬೯॥**

**ಅಯಶಸಾಂ ಭಾಜನೇನ ಚ ಕಿಂ ತೇ ನಗ್ನೇನ ಪಾಪಮಲಿನೇನ ।**
**ಪೈಶೂನ್ಯಹಾಸಮತ್ಸರಮಾಯಾಬಹುಲೇನ ಶ್ರಮಣೇನ ॥೬೯॥**

ಅರ್ಥ ಃ- ಎಲೈ ಮುನಿಯೇ ! ನಿನ್ನ ಇಂಥ ನಗ್ನತೆಯಿಂದ ಹಾಗೂ ಮುನಿತನದಿಂದ ಏನು ಸಾಧ್ಯವಿದೆ ? ಹೇಗಿದೆ – ಪೈಶೂನ್ಯ ಎಂದರೆ ಇತರರ ದೋಷ ಹೇಳುವ ಸ್ವಭಾವ, ಹಾಸ್ಯ ಎಂದರೆ ಇತರರ ಗೇಲಿಮಾಡುವುದು, ಮತ್ಸರ ಎಂದರೆ ತನ್ನ ಸರಿದೊರೆಯಿರುವವನೊಡನೆ ಈರ್ಷೆಯನ್ನಿಟ್ಟುಕೊಂಡು ಎರಡನೇಯವರನ್ನು ಕೀಳು ಮಾಡುವ ಬುದ್ಧಿ, ಮಾಯೆ ಎಂದರೆ ಕುಟೀಲ ಪರಿಣಾಮ, ಈ ಭಾವಗಳು ಅವನಲ್ಲಿ ಪ್ರಚುರತೆಯಿಂದ ಕಂಡು ಬರುತ್ತವೆ, ಆದುದರಿಂದ ಪಾಪದಿಂದ ಮಲಿನನಿದ್ದಾನೆ ಮತ್ತು ಆಯಶ ಎಂದರೆ ಅಪಕೀರ್ತಿಗೆ ಭಾಜನನಿದ್ದಾನೆ.

ಭಾವಾರ್ಥ ಃ- ಪೈಶೂನ್ಯ ಮೊದಲಾದ ಪಾಪಗಳಿಂದ ಮಲಿನವಿರುವಂಥ ನಗ್ನಸ್ವರೂಪವಾದ ಮುನಿತನದಿಂದೇನು ಸಾಧ್ಯವಿದೆ ? ಪ್ರತಿಯಾಗಿ ಅಪಕೀರ್ತಿಗೆ ಭಾಜನನಾಗಿ ವ್ಯವಹಾರ ಧರ್ಮದ ಪರಿಹಾಸ್ಯ ಮಾಡುವಂಥವನಾಗುತ್ತಾನೆ, ಆದುದರಿಂದ ಭಾವಲಿಂಗಿಯಾಗುವುದು ಯೋಗ್ಯವಿದೆಯೆಂದು ಉಪದೇಶವಿದೆ. ॥೬೯॥

ಈ ಪ್ರಕಾರ ಭಾವಲಿಂಗಿಯಾಗುವ ಉಪದೇಶವನ್ನೀಗ ಮಾಡುತ್ತಾರೆ, –

**ಪಯಡಹಿಂ ಜಿಣವರಲಿಂಗಂ ಅಬ್ಭಿಂತರಭಾವದೋಸಪರಿಸುದ್ಧೋ ।**
**ಭಾವಮಲೇಣ ಯ ಜೀವೋ ಬಾಹಿರಸಂಗಮ್ಮಿ ಮಯಲಿಯಇ ॥೭೦॥**

**ಪ್ರಕಟಯ ಜಿನವರಲಿಂಗಂ ಅಭ್ಯಂತರಭಾವದೋಷಪರಿಶುದ್ಧಃ ।**
**ಭಾವಮಲೇನ ಚ ಜೀವಃ ಬಾಹ್ಯಸಂಗೇ ಮಲಿನಯತಿ ॥೭೦॥**

ಅರ್ಥ ಃ- ಎಲೈ ಆತ್ಮನೇ ! ನೀನು ಅಭ್ಯಂತರ ಭಾವದೋಷಗಳಿಂದ ಅತ್ಯಂತ ಶುದ್ಧವಾದಂಥ ಜಿನವರಲಿಂಗ ಎಂದರೆ ಬಾಹ್ಯ ನಿರ್ಗ್ರಂಥಲಿಂಗವನ್ನು ಪ್ರಕಟಮಾಡು, ಭಾವಶುದ್ಧಿಯಿಲ್ಲದೆ ದ್ರವ್ಯಲಿಂಗವು ಕೆಟ್ಟು ಹೋಗುವುದು, ಏಕೆಂದರೆ ಭಾವಮಲಿನನಾದ ಜೀವನು ಬಾಹ್ಯಪರಿಗ್ರಹದಲ್ಲಿ ಮಲಿನನಾಗುತ್ತಾನೆ.

ಭಾವಾರ್ಥ ಃ- ಒಂದು ವೇಳೆ ಭಾವಶುದ್ಧಮಾಡಿ ದ್ರವ್ಯಲಿಂಗ ಧಾರಣಮಾಡಿದರೆ ಭ್ರಷ್ಟವಾಗುವುದಿಲ್ಲ. ಮತ್ತು ಭಾವಮಲಿನವಿದ್ದರೆ ಬಾಹ್ಯಪರಿಗ್ರಹದ ಸಂಗತಿಯಿಂದ ದ್ರವ್ಯಲಿಂಗವೂ ಕೆಡುವುದರಿಂದ ಮುಖ್ಯ

---

ನಿನಗೇನು ಸಾಧ್ಯವಿದೆ ಅಯಶಭಾಜನ ಪಾಪಯುತವಾದ ನಗ್ನತ್ವದಿಂ ।
ಆ ನಗೆ ಮತ್ಸರಭಾವ ಪಿಶುನತೆ ಮೇಣ್ಮಾಯೆತುಂಬಿದ ಶ್ರಮಣತ್ವದಿಂದ ॥೬೯॥

ಭಾವದೋಷ ಪರಿಶುದ್ಧವಾದಭ್ಯಂತರ ಜಿನವರಲಿಂಗಮಂ ಪ್ರಕಟಿಸು ।
ಭಾವಮಲದಿಂ ಮಲಿನಜೀವ ಬಾಹ್ಯಸಂಗದಲಿ ತಾ ಮಲಿನನಾಗುವನು ॥೭೦॥

ರೂಪದಿಂದ ಭಾವಲಿಂಗದ ಉಪದೇಶವೇ ಇದೆ, ವಿಶುದ್ಧವಾದ ಭಾವಗಳಿಲ್ಲದೆ ಬಾಹ್ಯವೇಷಧಾರಣಮಾಡುವುದು ಅದು ಯೋಗ್ಯವಿಲ್ಲ. ॥೭೦॥

ಭಾವರಹಿತನಾದ ನಗ್ನಮುನಿಯು ಹಾಸ್ಯದ ಸ್ಥಾನನಿದ್ದಾನೆಂದು ಈಗ ಹೇಳುತ್ತಾರೆ, –

ಧಮ್ಮಮ್ಮಿ ಣಿಪ್ಪವಾಸೋ ದೋಸಾವಾಸೋ ಯ [1]ಉಚ್ಛುಫುಲ್ಲಸಮೋ ।
ಣಿಪ್ಫಲಣಿಗ್ಗುಣಯಾರೋ ಣಡಸವಣೋ ಣಗ್ಗರೂವೇಣ ॥೭೧॥

ಧರ್ಮೇ ನಿಪ್ರವಾಸಃ ದೋಷಾವಾಸಃ ಚ ಇಕ್ಷುಪುಷ್ಪಸಮಃ ।
ನಿಷ್ಫಲನಿರ್ಗುಣಕಾರಃ ನಟಶ್ರಮಣಃ ನಗ್ನರೂಪೇಣ ॥೭೧॥

ಅರ್ಥ ಃ– ಧರ್ಮ ಎಂದರೆ ತನ್ನ ಸ್ವಭಾವ ಮತ್ತು ದಶಲಕ್ಷಣಸ್ವರೂಪದಲ್ಲಿ ಯಾವನ ವಾಸವಿಲ್ಲ ಆ ಜೀವನು ದೋಷಗಳ ಆವಾಸನಿದ್ದಾನೆ ಅಥವಾ ಯಾವನಲ್ಲಿ ದೋಷಗಳಿರುತ್ತವೆ ಅವನು ಇಕ್ಷುಕುಸುಮಸಮಾನನಿದ್ದಾನೆ. ಆ ಪುಷ್ಪದಿಂದ ಯಾವ ಫಲಗಳೂ ಆಗುವುದಿಲ್ಲ ಮತ್ತು ಅದರಲ್ಲಿ ಗಂಧಾದಿ ಗುಣಗಳೂ ಕಂಡು ಬರುವುದಿಲ್ಲ. ಆದುದರಿಂದ ಇಂಥ ಮುನಿಯಂತೂ ನಗ್ನರೂಪ ಮಾಡಿ ನಟಶ್ರಮಣ ಎಂದರೆ ನರ್ತಿಸುವಂಥ ವಿದೂಷಕನ ಸೋಗಿನಂತಿದ್ದಾನೆ.

ಭಾವಾರ್ಥ ಃ– ಧರ್ಮದ ವಾಸನೆ ಇಲ್ಲದಿರುವವನಲ್ಲಿ ಕ್ರೋಧ ಮೊದಲಾದ ದೋಷಗಳೇ ಇರುತ್ತವೆ. ಒಂದು ವೇಳೆ ಅವನು ದಿಗಂಬರರೂಪ ಧಾರಣ ಮಾಡಿದ್ದರೂ ಆ ಮುನಿಯು ಇಕ್ಷು ಕುಸುಮದ ಸಮಾನ ನಿರ್ಗುಣ ಮತ್ತು ನಿಷ್ಫಲನಿದ್ದಾನೆ, ಇಂಥ ಮುನಿಗೆ ಮೋಕ್ಷರೂಪದಫಲವು ಬರುವುದಿಲ್ಲ, ಸಮ್ಯಗ್ಜ್ಞಾನ ಮೊದಲಾದ ಗುಣಗಳಿಲ್ಲದವನು ನಗ್ನನಿದ್ದರೂ ಕೂಡ ವಿದೂಷಕನಂತೆ ಸೋಗವು ತೋರುತ್ತದೆ, ವಿದೂಷಕನು ನರ್ತಿಸುವಾಗ ಶೃಂಗಾರಾದಿಗಳನ್ನು ಮಾಡಿಕೊಂಡು ನರ್ತಿಸಿದರೆ ಶೋಭೆ ಪಡೆಯುವವನು, ನಗ್ನನಾಗಿ ನರ್ತಿಸಿದರೆ ಹಾಸ್ಯಕ್ಕೆ ಪಾತ್ರನಾಗುವನು, ಅದೇ ಪ್ರಕಾರ ಕೇವಲ ದ್ರವ್ಯನಗ್ನವು ಹಾಸ್ಯದ ಸ್ಥಾನವಿದೆ. ॥೭೧॥

ಇದೇ ಅರ್ಥದ ಸಮರ್ಥನರೂಪವಾಗಿ ದ್ರವ್ಯಲಿಂಗಿಯು ಜಿನಮಾರ್ಗದಲ್ಲಿ ಬೋಧಿ–ಸಮಾಧಿಯಂಥವುಗಳನ್ನು ಹೇಳಿದ್ದಾರೆ ಅವನ್ನು ಪಡೆಯುವುದಿಲ್ಲವೆಂದು ಈಗ ಹೇಳುತ್ತಾರೆ, –

ಜೇ ರಾಯಸಂಗಜುತ್ತಾ ಜಿಣಭಾವಣರಹಿಯದವ್ವಣಿಗ್ಗಂಥಾ ।
ಣ ಲಹಂತಿ ತೇ ಸಮಾಹಿಂ ಬೋಹಿಂ ಜಿಣಸಾಸಣೇ ವಿಮಲೇ ॥೭೨॥

---

ಜೀವ ನಗ್ನತ್ವಧರಿಸಿ ಧರ್ಮದೊಳ್ವಾಸವಿಲ್ಲದಿರೆ ದೋಷಾವಾಸನಿಹನು ।
ಅವನು ಇಕ್ಷುಪುಷ್ಪಸಮ ನಿಷ್ಫಲ–ನಿರ್ಗುಣ ನಟಶ್ರಮಣನಿರುವನು ॥೭೧॥

ಯಾವನು ರಾಗಸಂಯುಕ್ತ ಜಿನಭಾವನಾರಹಿತ ದ್ರವ್ಯನಿರ್ಗ್ರಂಥನಿಹನು ।
ಅವನು ಬೋಧಿ–ಸಮಾಧಿಯನು ಪಡೆಯನು ವಿಮಲ ಜಿನಶಾಸನದಲಿ ॥೭೨॥

---

೧ 'ಇಚ್ಛು' ಎಂಬ ಪಾಠಾಂತರವಿದೆ.

ಯೇ ರಾಗಸಂಗಯುಕ್ತಾಃ ಜಿನಭಾವನಾರಹಿತದ್ರವ್ಯನಿರ್ಗ್ರಂಥಾಃ ।
ನ ಲಭಂತೇ ತೇ ಸಮಾಧಿಂ ಬೋಧಿಂ ಜಿನಶಾಸನೇ ವಿಮಲೇ ॥೭೨॥

ಅರ್ಥ ಃ- ಯಾವ ಮುನಿಗಳು ರಾಗ ಎಂದರೆ ಅಭ್ಯಂತರ ಪರದ್ರವ್ಯದಲ್ಲಿ ಪ್ರೀತಿ, ಅದರದೇ ಸಂಗ ಎಂದರೆ ಪರಿಗ್ರಹದಿಂದ ಯುಕ್ತರಿದ್ದಾರೆ ಮತ್ತು ಜಿನಭಾವನೆ ಎಂದರೆ ಶುದ್ಧಸ್ವರೂಪದ ಭಾವನೆಯಿಂದ ರಹಿತರಿದ್ದಾರೆ ಅವರು ದ್ರವ್ಯ ನಿರ್ಗ್ರಂಥರಿದ್ದರೂ ಕೂಡ ನಿರ್ಮಲವಾದ ಜಿನಶಾಸನದಲ್ಲಿ ಆ ಸಮಾಧಿ ಎಂದರೆ ಧರ್ಮಶುಕ್ಲಧ್ಯಾನ ಮತ್ತು ಬೋಧಿ ಎಂದರೆ ಸಮ್ಯಗ್ದರ್ಶನ-ಜ್ಞಾನ-ಚಾರಿತ್ರಸ್ವರೂಪವಾದ ಮೋಕ್ಷಮಾರ್ಗವನ್ನು ಪಡೆಯುವುದಿಲ್ಲ.

ಭಾವಾರ್ಥ ಃ- ದ್ರವ್ಯಲಿಂಗಿಯು ಅಭ್ಯಂತರದ ರಾಗವನ್ನು ಬಿಟ್ಟುಕೊಡುವುದಿಲ್ಲ, ಪರಮಾತ್ಮನ ಧ್ಯಾನ ಮಾಡುವುದಿಲ್ಲವೆಂದಮೇಲೆ ಮೋಕ್ಷಮಾರ್ಗವನ್ನು ಹೇಗೆ ಪಡೆಯುವನು ಮತ್ತು ಸಮಾಧಿ ಮರಣವನ್ನು ಹೇಗೆ ಪಡೆಯುವನು. ॥೭೨॥

ಮೊದಲು ಮಿಥ್ಯಾತ್ವ ಮೊದಲಾದ ದೋಷಗಳನ್ನು ಬಿಟ್ಟುಕೊಟ್ಟು ಭಾವದಿಂದ ನಗ್ನನಾಗಬೇಕು ಅನಂತರ ದ್ರವ್ಯಮುನಿಯಾಗಬೇಕು, ಇದು ಮಾರ್ಗವಿದೆಯೆಂದು ಈಗ ಹೇಳುತ್ತಾರೆ, -

ಭಾವೇಣ ಹೋಇ ಣಗ್ಗೋ ಮಿಚ್ಛತ್ತಾಈ ಯ ದೋಸ ಚಇಊಣಂ ।
ಪಚ್ಛಾ ದವ್ವೇಣ ಮುಣೀ ಪಯಡದಿ ಲಿಂಗಂ ಜಿಣಾಣಾಏ ॥೭೩॥

ಭಾವೇನ ಭವತಿ ನಗ್ನಃ ಮಿಥ್ಯಾತ್ವಾದೀನ್ ಚ ದೋಷಾನ್ ತ್ಯಕ್ತ್ವಾ ।
ಪಶ್ಚಾತ್ ದ್ರವ್ಯೇಣ ಮುನಿಃಪ್ರಕಟಯತಿ ಲಿಂಗಂ ಜಿನಾಜ್ಞಯಾ ॥೭೩॥

ಅರ್ಥ ಃ- ಮೊದಲು ಮಿಥ್ಯಾತ್ವ ಮೊದಲಾದ ದೋಷಗಳನ್ನು ಬಿಟ್ಟುಕೊಟ್ಟು ಮತ್ತು ಭಾವದಿಂದ ಅಂತರಂಗ ನಗ್ನವಾಗುವುದು, ಏಕರೂಪ ಶುದ್ಧ ಆತ್ಮನ ಶ್ರದ್ಧೆ ಜ್ಞಾನ ಆಚರಣ ಮಾಡುವುದು ನಂತರ ಮುನಿಯು ದ್ರವ್ಯದಿಂದ ಬಾಹ್ಯಲಿಂಗವನ್ನು ಜಿನಾಜ್ಞೆಯಿಂದ ಪ್ರಕಟಮಾಡುವುದು, ಇದು ಮಾರ್ಗವಿದೆ.

ಭಾವಾರ್ಥ ಃ- ಭಾವಶುದ್ಧವಾದಲ್ಲದೆ ಮೊದಲೇ ದಿಗಂಬರರೂಪ ಧಾರಣ ಮಾಡಿದರೆ ನಂತರ ಭಾವವು ಕೆಟ್ಟಾಗ ಭ್ರಷ್ಟವಾಗಿ ಹೋಗುವುದು ಮತ್ತು ಭ್ರಷ್ಟವಾಗಿ ಕೂಡ ಮುನಿಯೆನಿಸಿಕೊಳ್ಳುತ್ತಿದ್ದರೆ ಮಾರ್ಗದ ಗೇಲಿಯಾಗುವುದು, ಆದುದರಿಂದ ಭಾವ ಶುದ್ಧಮಾಡಿ ಬಾಹ್ಯದಲ್ಲಿ ಮುನಿತನವನ್ನು ಪ್ರಕಟಮಾಡಬೇಕೆಂಬುದು ಜಿನಾಜ್ಞೆಯಿದೆ. ॥೭೩॥

ಶುದ್ಧಭಾವವೇ ಸ್ವರ್ಗಮೋಕ್ಷಗಳ ಕಾರಣವಿದೆ ಮತ್ತು ಮಲಿನ ಭಾವವು ಸಂಸಾರದ ಕಾರಣವಿದೆಯೆಂದು ಈಗ ಹೇಳುತ್ತಾರೆ, -

---

ಮೊದಲು ಮಿಥ್ಯಾತ್ವಾದಿ ದೋಷಗಳನು ತ್ಯಜಿಸಿ ಭಾವದಿಂ ನಗ್ನವಾಗುವುದು ।
ಅದರ ನಂತರ ದ್ರವ್ಯದಿಂ ಮುನಿಲಿಂಗಮಂ ಪ್ರಕಟಿಪುದು ಜಿನಾಜ್ಞೆಯಿಂದ ॥೭೩॥

**ಭಾವೋ ವಿ ದಿವ್ವಸಿವಸುಕ್ಖಭಾಯಣೋ ಭಾವವಜ್ಜಿಓ ಸವಣೋ ।**
**ಕಮ್ಮಮಲಮಲಿಣಚಿತ್ತೋ ತಿರಿಯಾಲಯಭಾಯಣೋ ಪಾವೋ ॥೭೪॥**

**ಭಾವಃ ಅಪಿ ದಿವ್ಯಶಿವಸೌಖ್ಯಭಾಜನಂ ಭಾವವರ್ಜಿತಃ ಶ್ರಮಣಃ ।**
**ಕರ್ಮಮಲಮಲಿನಚಿತ್ತಃ ತಿರ್ಯಗಾಲಯಭಾಜನಂ ಪಾಪಃ ॥೭೪॥**

ಅರ್ಥ :- ಭಾವವೇ ಸ್ವರ್ಗ-ಮೋಕ್ಷಗಳಿಗೆ ಕಾರಣವಿದೆ, ಮತ್ತು ಭಾವರಹಿತನಾದ ಶ್ರಮಣನು ಪಾಪ ಸ್ವರೂಪನಿದ್ದಾನೆ, ತಿರ್ಯಂಚಗತಿಯ ಸ್ಥಾನನಿದ್ದಾನೆ ಹಾಗೂ ಕರ್ಮಮಲದಿಂದ ಮಲಿನವಾದ ಚಿತ್ತವುಳ್ಳವನಿದ್ದಾನೆ.

ಭಾವಾರ್ಥ :- ಭಾವದಿಂದ ಶುದ್ಧನಿರುವವನಂತೂ ಸ್ವರ್ಗ-ಮೋಕ್ಷಗಳಿಗೆ ಪಾತ್ರನಿದ್ದಾನೆ ಮತ್ತು ಭಾವದಿಂದ ಮಲಿನನಿರುವವನು ತಿರ್ಯಂಚಗತಿಯಲ್ಲಿ ನಿವಾಸಮಾಡುತ್ತಾನೆ. ॥೭೪॥

ಈಗ ಮತ್ತೆ ಭಾವದ ಫಲದ ಮಾಹಾತ್ಮ್ಯವನ್ನು ಹೇಳುತ್ತಾರೆ, -

**ಖಯರಾಮರಮಣುಯಕರಂಜಲಿಮಾಲಾಹಿಂ ಚ ಸಂಥುಯಾ ವಿಊಲಾ ।**
**ಚಕ್ಕಹರರಾಯಲಚ್ಛೀ ಲಬ್ಭಹಿ ಬೋಹೀ ಸುಭಾವೇಣ ॥೭೫॥**

**ಖಚರಾಮರಮನುಜಕರಾಂಜಲಿಮಾಲಾಭಿಶ್ಚ ಸಂಸ್ತುತಾ ವಿಪುಲಾ .**
**ಚಕ್ರಧರರಾಜಲಕ್ಷ್ಮೀಃ ಲಭ್ಯತೇ ಬೋಧಿಃ ಸುಭಾವೇನ ॥೭೫॥**

ಅರ್ಥ :- ಸುಭಾವ ಎಂದರೆ ಒಳ್ಳೆಯ ಭಾವದಿಂದ ಮಂದಕಷಾಯರೂಪವಾದ ವಿಶುದ್ಧಭಾವದಿಂದ ಚಕ್ರವರ್ತಿ ಮೊದಲಾದ ರಾಜರುಗಳ ವಿಪುಲ ಎಂದರೆ ಅಧಿಕ ಸಂಪತ್ತನ್ನು ಪಡೆಯುತ್ತಾನೆ. ಅದು ಖಚರ (ವಿದ್ಯಾಧರ) ಅಮರ (ದೇವ) ಮತ್ತು ಮನುಜ (ಮನುಷ್ಯ) ಇವರುಗಳ ಅಂಜಲಿಮಾಲೆ (ಕರಗಳ ಅಂಜಲಿ)ಯ ಪಂಕ್ತಿಯಿಂದ ಸಂಸ್ತುತವಿದೆ (ನಮಸ್ಕಾರಪೂರ್ವಕ ಸ್ತುತಿಮಾಡಲು ಯೋಗ್ಯವಿದೆ) ಮತ್ತು ಇವನು ಕೇವಲ ಸಂಪತ್ತನ್ನೇ ಪಡೆಯುವುದಿಲ್ಲ, ಆದರೆ ಬೋಧಿಯನ್ನು (ರತ್ನತ್ರಯಾತ್ಮಕ ಮೋಕ್ಷಮಾರ್ಗವನ್ನು) ಪಡೆಯುತ್ತಾನೆ.

ಭಾವಾರ್ಥ :- ಇದು ವಿಶುದ್ಧ ಭಾವಗಳ ಮಾಹಾತ್ಮ್ಯವಿದೆ. ॥೭೫॥

ಈಗ ಭಾವಗಳ ಭೇದವನ್ನು ಹೇಳುತ್ತಾರೆ, -

---

ಭಾವವೇ ದಿವಶಿವಸೌಖ್ಯಭಾಜನವಿದ್ದು ಭಾವರಹಿತನಿರುವಾ ಪಾಪಿ ।
ಸವಣ ಕರ್ಮಮಲಮಲಿನಚಿತ್ತನಿದ್ದು ತಿರ್ಯಂಚಗತಿಪಾತ್ರನಿಹನು ॥೭೪॥

ಖಚರಾಮರಮನುಜಕರಾಂಜಲಿಮಾಲಾಪಂಕ್ತಿಯಿಂ ಸಂಸ್ತುತ ಮೇಣ್ವಿಪುಲ ।

ಆ ಚಕ್ರಧರರಾಜವಿಭೂತಿ ಮೇಣ್ಬೋಧಿಪ್ರಾಪ್ತವಾಗುವುದು ಸುಭಾವದಿಂದ ॥೭೫॥

**ಭಾವಂ ತಿವಿಹಪಯಾರಂ ಸುಹಾಸುಹಂ ಸುದ್ಧಮೇವ ಣಾಯವ್ವಂ ।**
**ಅಸುಹಂ ಚ ಅಟ್ಟರಉದ್ದಂ ಸುಹ ಧಮ್ಮಂ ಜಿಣವರಿಂದೇಹಿಂ ॥೭೬॥**

**ಭಾವಃ ತ್ರಿವಿಧಪ್ರಕಾರಃಶುಭೋಽಶುಭಃ ಶುದ್ಧ ಏವ ಜ್ಞಾತವ್ಯಃ ।**
**ಅಶುಭಶ್ಚ ಆರ್ತರೌದ್ರಂ ಶುಭಃ ಧರ್ಮ್ಯಂ ಜಿನವರೇಂದ್ರೈಃ ॥೭೬॥**

ಅರ್ಥ ಃ- ಜಿನವರದೇವರು ಶುಭ, ಅಶುಭ ಮತ್ತು ಶುದ್ಧವೆಂದು ಮೂರು ಪ್ರಕಾರದ ಭಾವಗಳನ್ನು ಹೇಳಿದ್ದಾರೆ. ಆರ್ತ ಮತ್ತು ರೌದ್ರ ಇವು ಅಶುಭ ಧ್ಯಾನಗಳಿವೆ ಮತ್ತು ಧರ್ಮಧ್ಯಾನವು ಶುಭವಿದೆ. ॥೭೬॥

**ಸುದ್ಧಂ ಸುದ್ಧಸಹಾವಂ ಅಪ್ಪಾ ಅಪ್ಪಮ್ಮಿ ತಂ ಚ ಣಾಯವ್ವಂ ।**
**ಇದಿ ಜಿಣವರೇಹಿಂ ಭಣಿಯಂ ಜಂ ಸೇಯಂ ತಂ ಸಮಾಯರಹ ॥೭೭॥**

**ಶುದ್ಧಃ ಶುದ್ಧಸ್ವಭಾವಃ ಆತ್ಮಾ ಆತ್ಮನಿ ಸಃ ಚ ಜ್ಞಾತವ್ಯಃ ।**
**ಇತಿ ಜಿನವರೈಃ ಭಣಿತಂ ಯಃ ಶ್ರೇಯಾನ್ ತಂ ಸಮಾಚರ ॥೭೭॥**

ಅರ್ಥ ಃ- ಶುದ್ಧವಿರುವಂಥ ತನ್ನ ಶುದ್ಧ ಸ್ವಭಾವವು ತನ್ನಲ್ಲಿಯೇ ಇದೆಯೆಂದು ಜಿನದೇವರು ಹೇಳಿದ್ದಾರೆ. ಅದನ್ನು ತಿಳಿದುಕೊಂಡು ಅವುಗಳಲ್ಲಿ ಕಲ್ಯಾಣರೂಪವಿರುವುದನ್ನು ಅಂಗೀಕಾರ ಮಾಡಬೇಕು.

ಭಾವಾರ್ಥ ಃ- ಭಗವಂತರು ಶುಭ, ಅಶುಭ ಮತ್ತು ಶುದ್ಧವೆಂದು ಮೂರು ಪ್ರಕಾರದ ಭಾವಗಳನ್ನು ಹೇಳಿದ್ದಾರೆ. ಆರ್ತ ಮತ್ತು ರೌದ್ರ ಧ್ಯಾನಗಳಂತೂ ಅಶುಭವಿದ್ದು ಅವು ಅತ್ಯಂತ ಮಲಿನವಿವೆ, ತ್ಯಾಜ್ಯವೇ ಇವೆ. ಧರ್ಮಧ್ಯಾನವು ಶುಭವಿದ್ದು ಇದು ಕಥಂಚಿತ್ ಉಪಾದೇಯವಿದೆ, ಇದರಿಂದ ಮಂದಕಷಾಯರೂಪ ವಿಶುದ್ಧಭಾವದ ಪ್ರಾಪ್ತಿಯಿದೆ. ಶುದ್ಧಭಾವವಿದೆ ಅದು ಸರ್ವಥಾ ಉಪಾದೇಯವಿದೆ, ಏಕೆಂದರೆ ಇದು ಆತ್ಮನ ಸ್ವರೂಪವೇ ಇದೆ. ಹೀಗೆ ಹೇಯ, ಉಪಾದೇಯವನ್ನು ತಿಳಿದುಕೊಂಡು ತ್ಯಾಗ ಮತ್ತು ಗ್ರಹಣ ಮಾಡಬೇಕು. ಆದುದರಿಂದ ಯಾವುದು ಕಲ್ಯಾಣಕಾರಿಯಿದೆ ಅದನ್ನು ಅಂಗೀಕಾರ ಮಾಡಬೇಕೆಂಬುದು ಜಿನದೇವರ ಉಪದೇಶವಿದೆಯೆಂದು ಹೇಳಿದೆ. ॥೭೭॥

ಈಗ ಜಿನಶಾಸನದ ಮಾಹಾತ್ಮ್ಯವು ಹೇಗಿದೆಯೆಂಬುದನ್ನು ಹೇಳುತ್ತಾರೆ,-

**ಪಯಲಿಯಮಾಣಕಸಾಓ ಪಯಲಿಯಮಿಚ್ಛತ್ತಮೋಹಸಮಚಿತ್ತೋ ।**
**ಪಾವಇ ತಿಹುವಣಸಾರಂ ಬೋಹೀ ಜಿಣಸಾಸಣೇ ಜೀವೋ ॥೭೮॥**

---

**ಅಶುಭ ಶುಭ ಮೇಣ್ಶುದ್ಧವೆಂದು ಮೂರುಪ್ರಕಾರದ ಭಾವಗಳ ಪೇಳಿಹರು ।**
**ಅಶುಭದಲಿ ಆರ್ತ ರೌದ್ರ ಮೇಣ್ಶುಭ ಧರ್ಮವೆಂದು ಜಿನದೇವ ಪೇಳಿಹರು ॥೭೬॥**

**ತಾನಾಗಿಶುದ್ಧವಿರುವಂಥ ತನ್ನ ಶುದ್ಧಸ್ವಭಾವವದು ತನ್ನಲಿದೆಯೆಂದು ।**
**ಜಿನವರರು ಪೇಳಿರುವರದರೊಳು ಶ್ರೇಯಸಾದುದನು ಆಚರಿಪುದು ॥೭೭॥**

**ವಿಗಲಿತಮಾನಕಷಾಯ ವಿಗಲಿತಮಿಥ್ಯಾತ್ವಮೋಹ ಸಮಚಿತ್ತನಾದ ।**
**ಮಿಗೆ ಪಡೆವನು ತ್ರಿಭುವನಸಾರ ಬೋಧಿಯನು ಜಿನಶಾಸನದಿ ಜೀವ ॥೭೮॥**

ಪ್ರಗಲಿತಮಾನಕಷಾಯಃ ಪ್ರಗಲಿತಮಿಥ್ಯಾತ್ವಮೋಹಸಮಚಿತ್ತಃ ।
ಆಪ್ನೋತಿ ತ್ರಿಭುವನಸಾರಂ ಬೋಧಿಂ ಜಿನಶಾಸನೇ ಜೀವಃ ॥೭೮॥

ಅರ್ಥ :- 'ಪ್ರಗಲಿತಮಾನಕಷಾಯಃ' ಎಂದರೆ ಯಾವನ ಮಾನ ಕಷಾಯವು ಪ್ರಕರ್ಷತೆಯಿಂದ ಸೋರಿ ಹೋಗಿದೆ,ಯಾವುದೇ ಪರದ್ರವ್ಯದಲ್ಲಿ ಅಹಂಕಾರರೂಪದ ಗರ್ವ ಮಾಡುವುದಿಲ್ಲ ಮತ್ತು ಯಾವನ ಮಿಥ್ಯಾತ್ವದ ಉದಯರೂಪದ ಮೋಹ ಕೂಡ ನಷ್ಟವಾಗಿ ಹೋಗಿರುವುದರಿಂದ 'ಸಮಚಿತ್ತ'ನಿದ್ದಾನೆ, ಯಾವನಿಗೆ ಪರದ್ರವ್ಯದಲ್ಲಿ ಮಮಕಾರರೂಪದ ಮಿಥ್ಯಾತ್ವ ಮತ್ತು ಇಷ್ಟ-ಅನಿಷ್ಟ ಬುದ್ಧಿರೂಪದ ರಾಗದ್ವೇಷಗಳಿಲ್ಲ ಆ ಜೀವನು ಜಿನ ಶಾಸನದಲ್ಲಿ ಮೂರು ಲೋಕಗಳಲ್ಲಿ ಸಾರವಾದಂಥ ಬೋಧಿಯನ್ನು ಎಂದರೆ ರತ್ನತ್ರಯಾತ್ಮಕವಾದ ಮೋಕ್ಷಮಾರ್ಗವನ್ನು ಪಡೆಯುತ್ತಾನೆ.

ಭಾವಾರ್ಥ :- ಮಿಥ್ಯಾತ್ವಭಾವ ಮತ್ತು ಕಷಾಯಭಾವದ ಸ್ವರೂಪಗಳು ಅನ್ಯಮತಗಳಲ್ಲಿ ಯಥಾರ್ಥವಿಲ್ಲ. ಈ ಕಥನವು ಈ ವೀತರಾಗರೂಪವಾದ ಜಿನಮತದಲ್ಲಿಯೇ ಇದೆ, ಆದುದರಿಂದ ಈ ಜೀವನು ಮಿಥ್ಯಾತ್ವ ಕಷಾಯದ ಅಭಾವರೂಪವಾದ ಮೋಕ್ಷಮಾರ್ಗವನ್ನು ಮೂರು ಲೋಕಗಳಲ್ಲಿ ಸಾರವಾದ ಜಿನಮತದ ಸೇವನೆಯಿಂದಲೇ ಪಡೆಯುತ್ತಾನೆ, ಅನ್ಯತ್ರವಿಲ್ಲ. ॥೭೮॥

ಜಿನಶಾಸನದಲ್ಲಿ ಇಂಥ ಮುನಿಯೇ ತೀರ್ಥಂಕರ ಪ್ರಕೃತಿಯನ್ನು ಕಟ್ಟಿಕೊಳ್ಳುತ್ತಾನೆಂದು ಈಗ ಹೇಳುತ್ತಾರೆ, -

ವಿಸಯವಿರತ್ತೋ ಸಮಣೋ ಛದ್ದಸವರಕಾರಣಾಇಂ ಭಾಊಣ ।
ತಿತ್ಥಯರಣಾಮಕಮ್ಮಂ ಬಂಧಇ ಅಇರೇಣ ಕಾಲೇಣ ॥೭೯॥

ವಿಷಯವಿರಕ್ತಃ ಶ್ರಮಣಃ ಷೋಡಶವರಕಾರಣಾನಿ ಭಾವಯಿತ್ವಾ ।
ತೀರ್ಥಂಕರನಾಮಕರ್ಮ ಬಧ್ನಾತಿ ಅಚಿರೇಣ ಕಾಲೇನ ॥೭೯॥

ಅರ್ಥ :- ಇಂದ್ರಿಯ ವಿಷಯಗಳಿಂದ ವಿರಕ್ತಚಿತ್ತನಿರುವಂಥ ಶ್ರಮಣನು ಎಂದರೆ ಮುನಿಯು ಸೋಳಹಕಾರಣ ಭಾವನೆಯನ್ನು ಭಾವಿಸಿ 'ತೀರ್ಥಂಕರ' ನಾಮ ಪ್ರಕೃತಿಯನ್ನು ಅಲ್ಪಕಾಲದಲ್ಲಿಯೇ ಕಟ್ಟಿಕೊಳ್ಳುತ್ತಾನೆ.

ಭಾವಾರ್ಥ :- ಇದು ಭಾವದ ಮಾಹಾತ್ಮ್ಯವಿದೆ, (ಸರ್ವಜ್ಞವೀತರಾಗ ಕಥಿತ ತತ್ತ್ವಜ್ಞಾನದೊಡನೆ, ಸ್ವಸನ್ಮುಖತೆಯೊಡನೆ) ವಿಷಯಗಳಿಂದ ವಿರಕ್ತಚಿತ್ತನಾಗಿ ಸೋಳಹಕಾರಣ ಭಾವನೆಗಳನ್ನು ಭಾವಿಸಿದರೆ ಅಚಿಂತ್ಯ ಮಹಿಮೆಯಿರುವಂಥ ಮೂರು ಲೋಕಗಳಲ್ಲಿ ಪೂಜ್ಯವಾದ 'ತೀರ್ಥಂಕರ' ನಾಮ ಪ್ರಕೃತಿಯನ್ನು ಕಟ್ಟಿಕೊಳ್ಳುತ್ತಾನೆ ಮತ್ತು ಅದನ್ನು ಭೋಗಿಸಿ ಮೋಕ್ಷವನ್ನು ಪ್ರಾಪ್ತಮಾಡಿಕೊಳ್ಳುತ್ತಾನೆ. ಆ ಸೋಳಹಕಾರಣ ಭಾವನೆಯ ಹೆಸರುಗಳು ಹೀಗಿವೆ- ೧) ದರ್ಶನವಿಶುದ್ಧಿ, ೨) ವಿನಯಸಂಪನ್ನತೆ, ೩) ಶೀಲವ್ರತೇಷ್ವನತಿಚಾರ, ೪) ಅಭೀಕ್ಷ್ಣಜ್ಞಾನೋಪಯೋಗ, ೫)ಸಂವೇಗ, ೬) ಶಕ್ತಿತಸ್ತ್ಯಾಗ, ೭) ಶಕ್ತಿತಸ್ತಪ, ೮) ಸಾಧು ಸಮಾಧಿ, ೯) ವೈಯಾವೃತ್ತ್ಯಕರಣ, ೧೦) ಅರ್ಹದ್ಭಕ್ತಿ, ೧೧) ಆಚಾರ್ಯಭಕ್ತಿ, ೧೨) ಬಹುಶ್ರುತಭಕ್ತಿ, ೧೩) ಪ್ರವಚನಭಕ್ತಿ, ೧೪) ಆವಶ್ಯಕಾಪರಿಹಾಣಿ, ೧೫) ಸನ್ಮಾರ್ಗಪ್ರಭಾವನೆ, ೧೬) ಪ್ರವಚನ

---

ವಿಷಯವಿರಕ್ತನಾದ ಶ್ರಮಣ ಷೋಡಶೋತ್ತಮ ಭಾವನೆಗಳ ಭಾವಿಸಿ ।
ಭೂಷಿತ ತೀರ್ಥಕರನಾಮಕರ್ಮ ಅಚಿರಕಾಲದಲಿ ಕಟ್ಟಿಕೊಳ್ಳುವನು ॥೭೯॥

ವಾತ್ಸಲ್ಯವೆಂದು ಹದಿನಾರು ಭಾವನೆಗಳಿವೆ, ಇವುಗಳ ಸ್ವರೂಪವನ್ನು ತತ್ತ್ವಾರ್ಥಸೂತ್ರದ ಟೀಕೆಯಿಂದ ತಿಳಿದುಕೊಳ್ಳಬೇಕು. ಇವುಗಳಲ್ಲಿ ಸಮ್ಯಗ್ದರ್ಶನವು ಮುಖ್ಯವಿದೆ, ಇದು ಇಲ್ಲದಿರುವುದು ಮತ್ತು ಹದಿನೈದು ಭಾವನೆಗಳ ವ್ಯವಹಾರವಿದ್ದರೆ ಕಾರ್ಯಕಾರಿಯಿಲ್ಲ ಮತ್ತು ಇದು ಇದ್ದರೆ ಹದಿನೈದು ಭಾವನೆಗಳ ಕಾರ್ಯವನ್ನು ಇದೇ ಮಾಡಿಕೊಳ್ಳುವುದೆಂದು ತಿಳಿದುಕೊಳ್ಳಬೇಕು. ॥೭೯॥

ಈಗ ಭಾವದ ವಿಶುದ್ಧತೆಯ ನಿಮಿತ್ತವಾದ ಆಚರಣೆಯನ್ನು ಹೇಳುತ್ತಾರೆ, –

**ಬಾರಸವಿಹತವಯರಣಂ ತೇರಸಕಿರಿಯಾಉ ಭಾವ ತಿವಿಹೇಣ ।**
**ಧರಹಿ ಮಣಮತ್ತದುರಿಯಂ ಣಾಣಂಕುಸಏಣ ಮುಣಿಪವರ ॥೮೦॥**

**ದ್ವಾದಶವಿಧತಪಶ್ಚರಣಂ ತ್ರಯೋದಶ ಕ್ರಿಯಾಃ ಭಾವಯ ತ್ರಿವಿಧೇನ ।**
**ಧರ ಮನೋಮತ್ತದುರಿತಂ ಜ್ಞಾನಾಂಕುಶೇನ ಮುನಿಪ್ರವರ ! ॥೮೦॥**

ಅರ್ಥ :– ಎಲೈ ಮುನಿಪ್ರವರನೇ ! ಮುನಿಗಳಲ್ಲಿ ಶ್ರೇಷ್ಠನೇ ! ನೀನು ಹನ್ನೆರಡು ಪ್ರಕಾರದ ತಪಸ್ಸನ್ನು ಆಚರಿಸು ಮತ್ತು ಹದಿಮೂರು ಪ್ರಕಾರದ ಕ್ರಿಯೆಗಳನ್ನು ಮನ–ವಚನ–ಕಾಯಗಳಿಂದ ಭಾವಿಸು ಮತ್ತು ಜ್ಞಾನರೂಪದ ಅಂಕುಶದಿಂದ ಮನರೂಪದ ಮದಗಜವನ್ನು ನಿನ್ನ ವಶದಲ್ಲಿ ಇಟ್ಟುಕೊಳ್ಳು.

ಭಾವಾರ್ಥ :– ಈ ಮನಸ್ಸುರೂಪದ ಆನೆಯು ಅಧಿಕ ಮದೋನ್ಮತ್ತವಿದೆ, ಅದು ತಪಶ್ಚರಣ ಕ್ರಿಯಾದಿಗಳೊಡನೆ ಜ್ಞಾನರೂಪದ ಅಂಕುಶದಿಂದಲೇ ವಶದಲ್ಲಿ ಬರುತ್ತದೆ, ಆದುದರಿಂದ ಈ ಉಪದೇಶವಿದೆ ; ಅದು ಅನ್ಯ ಪ್ರಕಾರದಿಂದ ವಶದಲ್ಲಿ ಬರುವುದಿಲ್ಲ. ಆ ಹನ್ನೆರಡು ತಪಸ್ಸುಗಳ ಹೆಸರು ಹೀಗಿವೆ – ೧) ಅನಶನ, ೨) ಅವಮೌದರ್ಯ, ೩) ವೃತ್ತಿಪರಿಸಂಖ್ಯಾನ, ೪) ರಸಪರಿತ್ಯಾಗ, ೫) ವಿವಿಕ್ತಶಯ್ಯಾಸನ, ೬) ಕಾಯಕ್ಲೇಶವೆಂದು ಇವು ಆರು ಪ್ರಕಾರದ ಬಾಹ್ಯತಪಗಳಿವೆ, ಮತ್ತು ೧) ಪ್ರಾಯಶ್ಚಿತ್ತ, ೨) ವಿನಯ, ೩) ವೈಯಾವೃತ್ಯ , ೪) ಸ್ವಾಧ್ಯಾಯ, ೫) ವ್ಯುತ್ಸರ್ಗ, ೬) ಧ್ಯಾನವೆಂದು ಇವು ಆರು ಪ್ರಕಾರದ ಅಭ್ಯಂತರ ತಪಗಳಿವೆ, ಇವುಗಳ ಸ್ವರೂಪವನ್ನು ತತ್ತ್ವಾರ್ಥಸೂತ್ರದ ಟೀಕೆಯಿಂದ ತಿಳಿದುಕೊಳ್ಳಬೇಕು. ಹದಿಮೂರು ಕ್ರಿಯೆಗಳು ಹೀಗಿವೆ–ಪಂಚಪರಮೇಷ್ಠಿಗಳಿಗೆ ನಮಸ್ಕಾರ ಇವು ಐದು ಕ್ರಿಯೆ, ಆರು ಆವಶ್ಯಕ ಕ್ರಿಯೆ, [೧]ನಿಷಿಧಿಕಾಕ್ರಿಯೆ ಮತ್ತು [೨]ಆಸಿಕಾಕ್ರಿಯೆ ಹೀಗೆ ಹದಿಮೂರು. ಈ ಪ್ರಕಾರ ಭಾವಶುದ್ಧವಾಗುವ ಕಾರಣ ಹೇಳಲಾಯಿತು. ॥೮೦॥

---

**ಹನ್ನೆರಡು ತಪ ಹದಿಮೂರು ಕ್ರಿಯೆಗಳನು ಭಾವಿಸು ತ್ರಿವಿಧದಿ ।**
**ನಿನ್ನ ಮನೋಮತ್ತಗಜವ ಜ್ಞಾನಾಂಕುಶದಿ ವಶೀಕರಿಸು ಮುನಿಪ್ರವರ ! ॥೮೦॥**

---

೧ ನಿಷಿಧಿಕೆ–ಜಿನಮಂದಿರ ಮೊದಲಾದವುಗಳಲ್ಲಿ ಪ್ರವೇಶಮಾಡುತ್ತಿರುವಂತೆಯೇ ಗೃಹಸ್ಥರು ಅಥವಾ ವ್ಯಂತರಾದಿ ದೇವಗಳಾರಾದರೂ ಉಪಸ್ಥಿತರಿರುವರೆಂದು ಮನ್ನಿಸಿ ಆಜ್ಞಾರ್ಥವಾಗಿ 'ನಿಃಸಹೀ' ಶಬ್ದವನ್ನು ಮೂರು ಬಾರಿ ಹೇಳುವುದರಲ್ಲಿ ಬರುತ್ತದೆ ಅಥವಾ ಸಮ್ಯಗ್ದರ್ಶನ–ಜ್ಞಾನ–ಚಾರಿತ್ರಗಳಲ್ಲಿ ಸ್ಥಿರವಿರುವುದು ಅದು 'ನಿಃಸಹೀ' ಇದೆ.

೨. ಧರ್ಮಸ್ಥಾನದಿಂದ ಹೊರ ಹೊರಡುವ ಸಮಯದಲ್ಲಿ ವಿನಯದೊಡನೆ ತ್ರಿದಾಯದ ಆಜ್ಞೆ ಬೇಡುವ ಅರ್ಥದಲ್ಲಿ 'ಆಸಿಕಾ' ಶಬ್ದ ಹೇಳುತ್ತಾರೆ ಅಥವಾ ಪಾಪಕ್ರಿಯೆಯಿಂದ ಮನಸ್ಸು ತಿರುಗಿಸುವುದು 'ಆಸಿಕಾ' ಇದೆ.

ಈಗ ದ್ರವ್ಯ-ಭಾವರೂಪ ಸಾಮಾನ್ಯರೂಪದಿಂದ ಜಿನಲಿಂಗದ ಸ್ವರೂಪ ಹೇಳುತ್ತಾರೆ, -

**ಪಂಚವಿಹಚೇಲಚಾಯಂ ಖಿದಿಸಯಣಂ ದುವಿಹಸಂಜಮಂ ಭಿಕ್ಖೂ।**
**ಭಾವಂ ಭಾವಿಯಪುವ್ವಂ ಜಿಣಲಿಂಗಂ ಣಿಮ್ಮಲಂ ಸುದ್ಧಂ ॥೮೧॥**

**ಪಂಚವಿಧಚೇಲತ್ಯಾಗಂ ಕ್ಷಿತಿಶಯನಂ ದ್ವಿವಿಧಸಂಯಮಂ ಭಿಕ್ಷು।**
**ಭಾವಭಾವಯಿತ್ವಾ ಪೂರ್ವಂ ಜಿನಲಿಂಗಂ ನಿರ್ಮಲಂ ಶುದ್ಧಮ್ ॥೮೧॥**

ಅರ್ಥ :- ಎಲ್ಲಿ ಐದು ಪ್ರಕಾರದ ವಸ್ತ್ರದ ತ್ಯಾಗವಿದೆ, ನೆಲದ ಮೇಲೆ ಶಯನವಿದೆ, ಎರಡು ಪ್ರಕಾರದ ಸಂಯಮವಿದೆ, ಭಿಕ್ಷಾ ಭೋಜನವಿದೆ, ಭಾವಿತಪೂರ್ವ ಎಂದರೆ ಮೊದಲು ಶುದ್ಧ ಆತ್ಮನ ಸ್ವರೂಪವು ಪರದ್ರವ್ಯದಿಂದ ಭಿನ್ನ ಸಮ್ಯಗ್ದರ್ಶನ-ಜ್ಞಾನ-ಚಾರಿತ್ರಮಯವಾಗಿರುವುದನ್ನು ಮತ್ತೆ ಮತ್ತೆ ಭಾವನೆಯಿಂದ ಅನುಭವ ಮಾಡುವ ಭಾವವು ಯಾವುದರಲ್ಲಿದೆ ಅಂಥ ನಿರ್ಮಲ ಎಂದರೆ ಬಾಹ್ಯ ಮಲರಹಿತ ಶುದ್ಧ ಎಂದರೆ ಅಂತರ್ಮಲರಹಿತವಿರುವುದು ಅದು ಜಿನಲಿಂಗವಿದೆ.

ಭಾವಾರ್ಥ :- ಇಲ್ಲಿ ಲಿಂಗವು ದ್ರವ್ಯ-ಭಾವವೆಂದು ಎರಡು ಪ್ರಕಾರದ್ದಿದೆ. ದ್ರವ್ಯವಂತೂ ಬಾಹ್ಯ ತ್ಯಾಗದ ಅಪೇಕ್ಷೆಯಿಂದ ಇದೆ ಅದರಲ್ಲಿ ಐದು ಪ್ರಕಾರದ ವಸ್ತ್ರದ ತ್ಯಾಗವಿದೆ. ಆ ಐದು ಪ್ರಕಾರಗಳು ಹೀಗಿವೆ- ೧) ಅಂಡಜ ಎಂದರೆ ರೇಷ್ಮೆಯಿಂದ ಮಾಡಿದ್ದು, ೨) ಬೋಂಡಜ ಎಂದರೆ ಅರಳೆಯಿಂದ ಮಾಡಿದ್ದು, ೩) ರೋಮಜ ಎಂದರೆ ಉಣ್ಣೆಯಿಂದ ಮಾಡಿದ್ದು, ೪) ವಲ್ಕಲಜ ಎಂದರೆ ವೃಕ್ಷದ ಸಿಪ್ಪೆಯಿಂದ ಮಾಡಿದ್ದು, ೫)ಚರ್ಮಜ ಎಂದರೆ ಮೃಗಾದಿಗಳ ಚರ್ಮದಿಂದ ಮಾಡಿದ್ದು ಹೀಗೆ ಐದು ಪ್ರಕಾರ ಹೇಳಿದೆ. ಇವನ್ನು ಹೊರತುಪಡಿಸಿ ಉಳಿದ ವಸ್ತ್ರಗಳು ಗ್ರಾಹ್ಯವಿವೆಯೆಂದು ತಿಳಿಯಬಾರದು, ಇವುಗಳನ್ನಂತೂ ಉಪಲಕ್ಷಣ ಮಾತ್ರವಾಗಿ ಹೇಳಿದ್ದಾರೆ, ಆದುದರಿಂದ ಸಮಸ್ತ ವಸ್ತ್ರಮಾತ್ರದ ತ್ಯಾಗವಿದೆಯೆಂದು ತಿಳಿಯಬೇಕು.

ನೆಲದ ಮೇಲೆ ಮಲಗುವುದು, ಕುಳಿತುಕೊಳ್ಳುವುದು ಇದರಲ್ಲಿ ಕಾಷ್ಠ ತೃಣಗಳನ್ನೂ ಗಣಿಸಬೇಕು, ಇಂದ್ರಿಯ ಮತ್ತು ಮನಸ್ಸನ್ನು ವಶದಲ್ಲಿಟ್ಟುಕೊಳ್ಳುವುದು, ಷಟ್‌ಕಾಯ ಜೀವಗಳ ರಕ್ಷಣೆ ಮಾಡುವುದು ಹೀಗೆ ಎರಡು ಪ್ರಕಾರದ ಸಂಯಮವಿದೆ ಭಿಕ್ಷಾ ಭೋಜನ ಮಾಡುವುದು ಅದರಲ್ಲಿ ಕೃತ-ಕಾರಿತ-ಅನುಮೋದನ ದೋಷ ತಗಲಬಾರದು- ನಲವತ್ತಾರು ದೋಷಗಳಿಂದ ದೂರ-ಮೂವತ್ತೆರಡು ಅಂತರಾಯಗಳನ್ನು ನಿವಾರಿಸಿ ವಿಧಿಯ ಅನುಸಾರ ಆಹಾರ ಮಾಡಬೇಕು. ಹೀಗಂತೂ ಬಾಹ್ಯಲಿಂಗವಿದೆ ಮತ್ತು ಮೊದಲು ಹೇಳಿರುವಂತಿರುವುದು ಅದು 'ಭಾವಲಿಂಗ'ವಿದೆ. ಹೀಗೆ ಎರಡು ಪ್ರಕಾರದ ಶುದ್ಧ ಜಿನಲಿಂಗವನ್ನು ಹೇಳಿದೆ. ಶ್ವೇತಾಂಬರ ಮೊದಲಾದವರು ಬೇರೆ ಪ್ರಕಾರದಿಂದ ಹೇಳುತ್ತಾರೆ ಅದು ಜಿನಲಿಂಗವಲ್ಲ. ॥೮೧॥

ಈಗ ಜಿನಧರ್ಮದ ಮಹಿಮೆಯನ್ನು ಹೇಳುತ್ತಾರೆ, -

---

**ದ್ವಿವಿಧಸಂಯಮ ಪಂಚವಿಧ ವಸ್ತ್ರತ್ಯಾಗ ಭೂಶಯನ ಭಿಕ್ಷಾಹಾರವಿದೆ।**
**ಭಾವ ಭಾವಿತಪೂರ್ವವಿದೆಯದು ನಿರ್ಮಲ ಶುದ್ಧ ಜಿನಲಿಂಗವಿರುವುದು ॥೮೧॥**

ಜಹ ರಯಣಾಣಂ ಪವರಂ ವಜ್ಜಂ ಜಹ ತರುಗಣಾಣ ಗೋಸಿರಂ ।
ತಹ ಧಮ್ಮಾಣಂ ಪವರಂ ಜಿಣಧರ್ಮಂ ಭಾವಿಭವಮಹಣಂ ॥೮೨॥

ಯಥಾ ರತ್ನಾನಾಂ ಪ್ರವರಂ ವಜ್ರಂ ಯಥಾ ತರುಗಣಾನಾಂ ಗೋಶೀರಮ್ ।
ತಥಾ ಧರ್ಮಾಣಾಂ ಪ್ರವರಂ ಜಿನಧರ್ಮಂ ಭಾವಿಭವಮಥನಮ್ ॥೮೨॥

ಅರ್ಥ ಃ- ಯಾವ ಪ್ರಕಾರ ರತ್ನಗಳಲ್ಲಿ ಪ್ರವರವು (ಶ್ರೇಷ್ಠವು) ಉತ್ತಮವಾದ ವಜ್ರವಿದೆ ಮತ್ತು ಹೇಗೆ ತರುಗಣಗಳಲ್ಲಿ(ದೊಡ್ಡ ವೃಕ್ಷಗಳಲ್ಲಿ) ಉತ್ತಮವಾದುದು ಗೋಶೀರ್ಷವಿದೆ (ಶ್ರೀಗಂಧದ ಮರವಿದೆ) ಅದೇ ಪ್ರಕಾರ ಧರ್ಮಗಳಲ್ಲಿ ಉತ್ತಮವಾದುದು (ಭವಿಷ್ಯ ಸಂಸಾರದ ಮಂಥನ ಮಾಡುವಂಥದು) ಜಿನಧರ್ಮವಿದೆ, ಇದರಿಂದ ಮೋಕ್ಷವಾಗುತ್ತದೆ.

ಭಾವಾರ್ಥ ಃ- 'ಧರ್ಮ'ವೆಂಬ ಸಾಮಾನ್ಯ ಹೆಸರಂತೂ ಲೋಕದಲ್ಲಿ ಪ್ರಸಿದ್ಧವಿದೆ, ಮತ್ತು ಜನರು ಅನೇಕ ಪ್ರಕಾರದಿಂದ ಕ್ರಿಯಾಕಾಂಡಾದಿಗಳನ್ನು ಧರ್ಮವೆಂದು ತಿಳಿದುಕೊಂಡು ಸೇವನೆ ಮಾಡುತ್ತಾರೆ, ಆದರೆ ಪರೀಕ್ಷೆ ಮಾಡಿದಮೇಲೆ ಮೋಕ್ಷದ ಪ್ರಾಪ್ತಿ ಮಾಡಿಸುವಂಥದು ಜಿನಧರ್ಮವೇ ಇದೆ, ಉಳಿದವುಗಳೆಲ್ಲವು ಸಂಸಾರಕ್ಕೆ ಕಾರಣವಿವೆ. ಆ ಕ್ರಿಯಾಕಾಂಡಾದಿಗಳು ಸಂಸಾರದಲ್ಲಿಯೇ ಇರಿಸುತ್ತವೆ, ಒಮ್ಮೊಮ್ಮೆ ಸಂಸಾರದ ಭೋಗಗಳ ಪ್ರಾಪ್ತಿಮಾಡಿಸುತ್ತಿದ್ದರೂ ಪುನಃಭೋಗಗಳಲ್ಲಿ ಲೀನವಾಗುತ್ತದೆ ಆಗ ಏಕೇಂದ್ರಿಯ ಮೊದಲಾದ ಪರ್ಯಾಯ ಪಡೆಯುತ್ತದೆ ಹಾಗೂ ನರಕಕ್ಕೆ ಹೋಗುತ್ತದೆ. ಹೀಗೆ ಅನ್ಯ ಧರ್ಮಗಳು ನಾಮಮಾತ್ರವಿವೆ, ಆದುದರಿಂದ ಜಿನಧರ್ಮವೊಂದೇ ಉತ್ತಮವಾದುದೆಂದು ತಿಳಿದುಕೊಳ್ಳಬೇಕು. ॥೮೨॥

ಜಿನಧರ್ಮವನ್ನು ಉತ್ತಮವೆಂದು ಹೇಳಿದಿರಿ, ಆದರೆ ಧರ್ಮದ ಸ್ವರೂಪ ಹೇಗಿದೆಯೆಂದು ಕೇಳಿದ ಶಿಷ್ಯನ ಪ್ರಶ್ನೆಗೆ ಉತ್ತರವಾಗಿ ಈಗ ಧರ್ಮದ ಸ್ವರೂಪ ಹೇಳುತ್ತಾರೆ, -

ಪೂಯಾದಿಸು ವಯಸಹಿಯಂ ಪುಣ್ಣಂ ಹಿ ಜಿಣೇಹಿಂ ಸಾಸಣೇ ಭಣಿಯಂ ।
ಮೋಹಕ್ಖೋಹವಿಹೀಣೋ ಪರಿಣಾಮೋ ಅಪ್ಪಣೋ ಧಮ್ಮೋ ॥೮೩॥

ಪೂಜಾದಿಷು ವ್ರತಸಹಿತಂ ಪುಣ್ಯಂ ಹಿ ಜಿನೈಃ ಶಾಸನೇ ಭಣಿತಮ್ ।
ಮೋಹಕ್ಷೋಭವಿಹೀನಃ ಪರಿಣಾಮಃ ಆತ್ಮನಃ ಧರ್ಮಃ ॥೮೩॥

ಅರ್ಥ ಃ- ಪೂಜೆ ಮೊದಲಾದವುಗಳಲ್ಲಿ ಮತ್ತು ವ್ರತಸಹಿತವಿರುವಲ್ಲಿಯಂತೂ 'ಪುಣ್ಯ'ವೇ ಇದೆ ಮತ್ತು ಮೋಹದ ಕ್ಷೋಭದಿಂದ ರಹಿತವಾದ ಆ ಆತ್ಮನ ಪರಿಣಾಮವು ಅದು 'ಧರ್ಮ'ವಿದೆಯೆಂದು ಜಿನಶಾಸನದಲ್ಲಿ ಜಿನೇಂದ್ರದೇವರು ಹೇಳಿದ್ದಾರೆ.

---

ಹೇಗೆ ರತ್ನಗಳಲಿ ಪ್ರವರ ವಜ್ರ ಹೇಗೆ ತರುಗಣದಿ ಗೋಶೀರ್ಷವಿದೆ ।
ಹಾಗೆ ಧರ್ಮಗಳಲಿ ಶ್ರೇಷ್ಠ ಭಾವಿಭವಮಥನ ಜಿನಧರ್ಮವಿರುವುದು ॥೮೨॥

ವ್ರತದಲಿ ಪೂಜಾದಿಯಲಿ ಪುಣ್ಯವಿದೆಯೆಂದು ಜಿನಶಾಸನದಿ ಪೇಳಿದೆ ।
ಆತಮನ ಮೋಹಕ್ಷೋಭವಿಹೀನ ಪರಿಣಾಮವನು ಧರ್ಮವೆಂದು ಹೇಳಿದೆ ॥೮೩॥

ಭಾವಾರ್ಥ :- ಪೂಜೆ ಮೊದಲಾದ ಶುಭ ಕ್ರಿಯೆಗಳಲ್ಲಿ ಮತ್ತು ವ್ರತಕ್ರಿಯೆಸಹಿತವಿದೆ ಅದು ಜಿನಧರ್ಮವಿದೆಯೆಂದು ಲೌಕಿಕ ಜನರು ಹಾಗೂ ಕೆಲವು ಅನ್ಯಮತಿಗಳು ಹೇಳುತ್ತಾರೆ, ಆದರೆ ಹಾಗೆ ಇಲ್ಲ. ಪೂಜಾದಿಗಳಲ್ಲಿ ಹಾಗೂ ವ್ರತಸಹಿತವಿರುವಲ್ಲಿಯಂತೂ 'ಪುಣ್ಯ'ವಿದೆ, ಇದರಲ್ಲಿ ಪೂಜೆ ಮತ್ತು ಆದಿಶಬ್ದದಿಂದ ಭಕ್ತಿ, ವಂದನೆ, ವೈಯಾವೃತ್ಯ ಮೊದಲಾದುವೆಂದು ತಿಳಿದುಕೊಳ್ಳಬೇಕು, ಇವಂತೂ ದೇವ-ಗುರು-ಶಾಸ್ತ್ರಗಳ ಸಲುವಾಗಿ ಇರುತ್ತವೆ ಮತ್ತು ಉಪವಾಸ ಮೊದಲಾದ ವ್ರತಗಳಿವೆ ಅವು ಶುಭ ಕ್ರಿಯೆಗಳಿವೆ, ಇವುಗಳಲ್ಲಿ ಆತ್ಮನ ರಾಗಸಹಿತ ಶುಭ ಪರಿಣಾಮವಿರುವುದರಿಂದ ಪುಣ್ಯ ಕರ್ಮವಾಗುತ್ತದೆ ಆದುದರಿಂದ ಇವನ್ನು ಪುಣ್ಯವೆಂದು ಹೇಳುತ್ತಾರೆ. ಇದರ ಫಲವು ಸ್ವರ್ಗಾದಿ ಭೋಗಗಳ ಪ್ರಾಪ್ತಿಯಿದೆಯೆಂದು ಜಿನಮತದಲ್ಲಿ ಜಿನಭಗವಂತರು ಹೇಳಿದ್ದಾರೆ.

ಮೋಹದ ಕ್ಷೋಭದಿಂದ ರಹಿತವಾದ ಆತ್ಮನ ಪರಿಣಾಮವನ್ನು ಧರ್ಮವೆಂದು ತಿಳಿಯಬೇಕು. ಮಿಥ್ಯಾತ್ವವಂತೂ ಅತತ್ತ್ವಾರ್ಥಶ್ರದ್ಧೆಯಿದೆ, ಕ್ರೋಧ-ಮಾನ-ಅರತಿ-ಶೋಕ-ಭಯ-ಜುಗುಪ್ಸೆ ಇವು ಆರು ದ್ವೇಷಪ್ರಕೃತಿಗಳಿವೆ ಮತ್ತು ಮಾಯೆ, ಲೋಭ, ಹಾಸ್ಯ, ರತಿ ಇವು ನಾಲ್ಕು ಹಾಗೂ ಪುರುಷ, ಸ್ತ್ರೀ, ನಪುಂಸಕ ಇವು ಮೂರು ವಿಕಾರಗಳಿವೆ, ಹೀಗೆ ಏಳು ಪ್ರಕೃತಿಗಳು ರಾಗರೂಪವಿವೆ. ಇವುಗಳ ನಿಮಿತ್ತದಿಂದ ಆತ್ಮನ ಜ್ಞಾನ-ದರ್ಶನ ಸ್ವಭಾವವು ವಿಕಾರಸಹಿತ, ಕ್ಷೋಭರೂಪ, ಚಂಚಲ, ವ್ಯಾಕುಲವಾಗುತ್ತಿರುವುದರಿಂದ ಈ ವಿಕಾರಗಳಿಂದ ರಹಿತವಾದಾಗ ಶುದ್ಧದರ್ಶನಜ್ಞಾನರೂಪದ ನಿಶ್ಚಯವಾಗುವುದು ಅದು ಆತ್ಮನ ಧರ್ಮವಿದೆ. ಈ ಧರ್ಮದಿಂದ ಆತ್ಮನ ಭವಿಷ್ಯ ಕರ್ಮದ ಆಸ್ರವವು ನಿಂತುಹೋಗಿ ಸಂವರವಾಗುತ್ತದೆ ಮತ್ತು ಮೊದಲು ಕಟ್ಟಲ್ಪಟ್ಟ ಕರ್ಮಗಳ ನಿರ್ಜರೆಯಾಗುತ್ತದೆ. ಸಂಪೂರ್ಣ ನಿರ್ಜರೆಯಾಗಿ ಹೋದಾಗ ಮೋಕ್ಷವಾಗುತ್ತದೆ ಮತ್ತು ಏಕದೇಶ ಮೋಹದ ಕ್ಷೋಭದ ಹಾನಿಯಾಗುವುದರಿಂದ ಶುಭ ಪರಿಣಾಮವನ್ನು ಕೂಡ ಉಪಚಾರದಿಂದ ಧರ್ಮವೆಂದು ಹೇಳುತ್ತಾರೆ, ಮತ್ತು ಯಾರು ಕೇವಲ ಶುಭ ಪರಿಣಾಮವನ್ನೇ ಧರ್ಮವೆಂದು ಮನ್ನಿಸಿ ಸಂತುಷ್ಟರಿದ್ದಾರೆ ಅವರಿಗೆ ಧರ್ಮದ ಪ್ರಾಪ್ತಿಯಿಲ್ಲವೆಂಬುದು ಜಿನಮತದ ಉಪದೇಶವಿದೆ. ॥೮೩॥

'ಪುಣ್ಯವನ್ನೇ ಧರ್ಮ'ವೆಂದು ತಿಳಿದುಕೊಂಡು ಶ್ರದ್ಧೆಮಾಡುವವರಿಗೆ ಕೇವಲ ಭೋಗದ ನಿಮಿತ್ತವಿದೆ, ಆದರೆ ಕರ್ಮಕ್ಷಯದ ನಿಮಿತ್ತವಿಲ್ಲವೆಂದು ಈಗ ಹೇಳುತ್ತಾರೆ, -

**ಸದ್ದಹದಿ ಯ ಪತ್ತೇದಿ ಯ ರೋಚೇದಿ ಯ ತಹ ಪುಣೋ ವಿ ಫಾಸೇದಿ ।**
**ಪುಣ್ಣಂ ಭೋಯಣಿಮಿತ್ತಂ ಣ ಹು ಸೋ ಕಮ್ಮಕ್ಖಯಣಿಮಿತ್ತಂ ॥೮೪॥**

**ಶ್ರದ್ದಧಾತಿ ಚ ಪ್ರತ್ಯೇತಿ ಚ ರೋಚತೇ ಚ ತಥಾ ಪುನರಪಿ ಸ್ಪೃಶತಿ ।**
**ಪುಣ್ಯಂ ಭೋಗನಿಮಿತ್ತಂ ನ ಹಿ ತತ್ ಕರ್ಮಕ್ಷಯನಿಮಿತ್ತಮ್ ॥೮೪॥**

ಅರ್ಥ :- ಯಾವ ಪುರುಷರು ಪುಣ್ಯವನ್ನು ಧರ್ಮವೆಂದು ತಿಳಿದುಕೊಂಡು ಶ್ರದ್ಧೆ ಮಾಡುತ್ತಾರೆ, ಪ್ರತೀತಿ ಮಾಡುತ್ತಾರೆ, ಅಭಿರುಚಿ ಮಾಡುತ್ತಾರೆ ಮತ್ತು ಸ್ಪರ್ಶ ಮಾಡುತ್ತಾರೆ ಅವರಿಗೆ 'ಪುಣ್ಯ'ವು ಭೋಗದ

---

ಪುಣ್ಯದ ಶ್ರದ್ಧೆ ಪ್ರತೀತಿ ಅಭಿರುಚಿ ಅದರಂತೆ ಸ್ಪರ್ಶಮಾಡುವರವರ ।
ಪುಣ್ಯವದು ಭೋಗದನಿಮಿತ್ತವಿದೆಯಾದರೆ ಕರ್ಮಕ್ಷಯನಿಮಿತ್ತವಿಲ್ಲ ॥೮೪॥

ನಿಮಿತ್ತವಿದೆ. ಇದರಿಂದ ಸ್ವರ್ಗ ಮೊದಲಾದ ಭೋಗಗಳನ್ನು ಪಡೆಯುತ್ತಾರೆ ಮತ್ತು ಆ ಪುಣ್ಯವು ಕರ್ಮ ಕ್ಷಯದ ನಿಮಿತ್ತವಾಗುವುದಿಲ್ಲವೆಂಬುದನ್ನು ಸ್ಪಷ್ಟವಾಗಿ ತಿಳಿದುಕೊಳ್ಳಬೇಕು.

ಭಾವಾರ್ಥ ಃ- ಶುಭಕ್ರಿಯೆರೂಪವಾದ ಪುಣ್ಯವನ್ನು ಧರ್ಮವೆಂದು ತಿಳಿದುಕೊಂಡು ಇದರ ಶ್ರದ್ಧೆ, ಜ್ಞಾನ, ಆಚರಣೆ ಮಾಡುವವನಿಗೆ ಪುಣ್ಯಕರ್ಮದ ಬಂಧವಾಗುತ್ತದೆ, ಮತ್ತು ಅದರಿಂದ ಕರ್ಮದ ಕ್ಷಯ ರೂಪವಾದ ಸಂವರ-ನಿರ್ಜರೆ-ಮೋಕ್ಷವಾಗುವುದಿಲ್ಲ. ॥೮೪॥

ಆ ಆತ್ಮನ ಸ್ವಭಾವರೂಪವಾದ ಧರ್ಮವಿದೆ ಅದೇ ಮೋಕ್ಷದ ಕಾರಣವಿದೆಯೆಂಬ ನಿಯಮವಿದೆಯೆಂಬುದನ್ನು ಈಗ ಹೇಳುತ್ತಾರೆ, -

ಅಪ್ಪಾ ಅಪ್ಪಮ್ಮಿ ರಓ ರಾಯಾದಿಸು ಸಯಲದೋಸಪರಿಚತ್ತೋ ।
ಸಂಸಾರತರಣಹೇದೂ ಧಮ್ಮೋ ತ್ತಿ ಜಿಣೇಹಿಂ ಣಿದ್ದಿಟ್ಠಂ ॥೮೫॥

ಆತ್ಮಾ ಆತ್ಮನಿ ರತಃ ರಾಗಾದಿಷು ಸಕಲದೋಷಪರಿತ್ಯಕ್ತಃ ।
ಸಂಸಾರತರಣಹೇತುಃ ಧರ್ಮಂ ಇತಿ ಜಿನೈಃ ನಿರ್ದಿಷ್ಟಮ್ ॥೮೫॥

ಅರ್ಥ ಃ- ಒಂದುವೇಳೆ ಆತ್ಮನು ರಾಗ ಮೊದಲಾದ ಸಮಸ್ತದೋಷಗಳಿಂದ ರಹಿತನಾಗಿ ಆತ್ಮನಲ್ಲಿಯೇ ಮಗ್ನನಾಗಿ ಹೋಗುವಂಥ ಧರ್ಮವನ್ನು ಜಿನೇಶ್ವರದೇವರು ಸಂಸಾರಸಮುದ್ರದಿಂದ ಪಾರಾಗಿ ಹೋಗಲು ಕಾರಣವೆಂದು ಹೇಳಿದ್ದಾರೆ.

ಭಾವಾರ್ಥ ಃ- ಮೋಹದ ಕ್ಷೋಭದಿಂದ ರಹಿತವಾದ ಆತ್ಮನ ಪರಿಣಾಮವಿದೆ ಅದು ಧರ್ಮವಿದೆಯೆಂದು ಮೊದಲು ಹೇಳಿತ್ತು, ಅಂಥ ಆ ಧರ್ಮವೇ ಸಂಸಾರದಿಂದ ಪಾರುಮಾಡಿ ಮೋಕ್ಷವಾಗುವಲ್ಲಿ ಕಾರಣವಿದೆಯೆಂದು ಭಗವಂತರು ಹೇಳಿರುವರು, ಇದು ನಿಯಮವಿದೆ. ॥೮೫॥

ಇದೇ ಅರ್ಥವನ್ನು ದೃಢಪಡಿಸುವ ಸಲುವಾಗಿ ಆ ಆತ್ಮನ ಸಲುವಾಗಿ ಇಷ್ಟವಿರುವುದನ್ನು ಮಾಡುವುದಿಲ್ಲ ಮತ್ತು ಸಂಪೂರ್ಣ ಪುಣ್ಯದ ಆಚರಣೆ ಮಾಡುತ್ತಿದ್ದರೂ ಕೂಡ ಸಿದ್ಧಿಗೆ ಪ್ರಾಪ್ತನಾಗುವುದಿಲ್ಲವೆಂಬುದನ್ನು ಈಗ ಹೇಳುತ್ತಾರೆ, -

ಅಹ ಪುಣ ಅಪ್ಪಾ ಣಿಚ್ಛದಿ ಪುಣ್ಣಾಣಿಂ ಕರೇದಿ ಣಿರವಸೇಸಾಇಂ ।
ತಹ ವಿ ಣ ಪಾವದಿ ಸಿದ್ಧಿಂ ಸಂಸಾರತ್ಥೋ ಪುಣೋ ಭಣಿದೋ ॥೮೬॥

---

ರಾಗಾದಿ ಸಕಲದೋಷ ಪರಿತ್ಯಜಿಸಿ ಆತ್ಮ ಆತ್ಮನಲನುರಕ್ತನಿರೆ ।
ಆಗ ಸಂಸಾರತರಣಹೇತು ಧರ್ಮವಿದೆಯೆಂದು ಜಿನದೇವ ಪೇಳಿಹರು ॥೮೫॥

ಆದರೆ ಆತ್ಮನನಿಚ್ಛಿಸದೆ ಮತ್ತೆ ನಿರವಶೇಷ ಪುಣ್ಯವನು ಮಾಡಲಿ ।
ಆದರೂ ಸಿದ್ಧಿಯಪಡೆಯದೆ ಸಂಸಾರದಲಿ ಭ್ರಮಿಸುವನೆಂದು ಹೇಳಿದೆ ॥೮೬॥

ಅಥ ಪುನಃ ಆತ್ಮಾನಂ ನೇಚ್ಛತಿ ಪುಣ್ಯಾನಿ ಕರೋತಿ ನಿರವಶೇಷಾನಿ ।
ತಥಾಪಿ ನ ಪ್ರಾಪ್ನೋತಿ ಸಿದ್ಧಿಂ ಸಂಸಾರಸ್ಥಃ ಪುನಃ ಭಣಿತಃ ॥೮೬॥

ಅರ್ಥ ಃ- ಅಥವಾ ಆ ಪುರುಷನು ಆತ್ಮನಿಗೆ ಇಷ್ಟವಿರುವುದನ್ನು ಮಾಡುವುದಿಲ್ಲ, ಅವನ ಸ್ವರೂಪ ತಿಳಿಯುವುದಿಲ್ಲ, ಅಂಗೀಕಾರ ಮಾಡುವುದಿಲ್ಲ ಮತ್ತು ಎಲ್ಲ ಪ್ರಕಾರದ ಸಮಸ್ತ ಪುಣ್ಯವನ್ನು ಮಾಡುತ್ತಿದ್ದರೂ ಕೂಡ ಸಿದ್ಧಿಯನ್ನು ಮೋಕ್ಷವನ್ನು ಪಡೆಯುವುದಿಲ್ಲ, ಆದರೆ ಆ ಪುರುಷನು ಸಂಸಾರದಲ್ಲಿಯೇ ಭ್ರಮಣ ಮಾಡುತ್ತಾನೆ.

ಭಾವಾರ್ಥ ಃ- ಆತ್ಮಿಕ ಧರ್ಮವನ್ನು ಧಾರಣ ಮಾಡಿದಲ್ಲದೆ ಎಲ್ಲ ಪ್ರಕಾರದ ಪುಣ್ಯದ ಆಚರಣೆ ಮಾಡಿದರೂ ಕೂಡ ಮೋಕ್ಷವಾಗುವುದಿಲ್ಲ, ಸಂಸಾರದಲ್ಲಿಯೇ ಉಳಿಯುತ್ತಾನೆ. ಒಮ್ಮೊಮ್ಮೆ ಸ್ವರ್ಗಾದಿಗಳ ಭೋಗಗಳನ್ನು ಪಡೆದರೆ ಅಲ್ಲಿ ಭೋಗಗಳಲ್ಲಿ ಆಸಕ್ತನಾಗಿರುವನು, ಅಲ್ಲಿಂದ ಚ್ಯುತನಾಗಿ ಏಕೇಂದ್ರಿಯ ಮೊದಲಾದವುಗಳಾಗಿ ಸಂಸಾರದಲ್ಲಿಯೇ ಭ್ರಮಣ ಮಾಡುತ್ತಾನೆ. ॥೮೬॥

ಈ ಕಾರಣದಿಂದ ಆತ್ಮನದೇ ಶ್ರದ್ಧೆಮಾಡಿರಿ, ಪ್ರಯತ್ನಪೂರ್ವಕವಾಗಿ ತಿಳಿದುಕೊಳ್ಳಿರಿ, ಮೋಕ್ಷ ಪ್ರಾಪ್ತ ಮಾಡಿಕೊಳ್ಳಿರೆಂದು ಈಗ ಉಪದೇಶ ಮಾಡುತ್ತಾರೆ,-

ಏಏಣ ಕಾರಣೇಣ ಯ ತಂ ಅಪ್ಪಾ ಸದ್ದಹೇಹ ತಿವಿಹೇಣ ।
ಜೇಣ ಯ ಲಹೇಹ ಮೋಕ್ಖಂ ತಂ ಜಾಣಿಜ್ಜಹ ಪಯತ್ತೇಣ ॥೮೭।

ಏತೇನ ಕಾರಣೇನ ಚ ತಂ ಆತ್ಮಾನಂ ಶ್ರದ್ಧತ್ತ ತ್ರಿವಿಧೇನ ।
ಯೇನ ಚ ಲಭಧ್ವಂ ಮೋಕ್ಷಂ ತಂ ಜಾನೀತ ಪ್ರಯತ್ನೇನ ॥೮೭॥

ಅರ್ಥ ಃ- ಆತ್ಮನ ಧರ್ಮವಂತೂ ಮೋಕ್ಷವಿದೆಯೆಂದು ಮೊದಲು ಹೇಳಿತ್ತು, ಅದೇ ಕಾರಣದಿಂದ ಎಲೈ ಭವ್ಯ ಜೀವರುಗಳೇ ! ನೀವು ಆ ಆತ್ಮನನ್ನು ಪ್ರಯತ್ನಪೂರ್ವಕವಾಗಿ ಎಲ್ಲ ಪ್ರಕಾರದ ಉದ್ಯಮ ಮಾಡಿ ಯಥಾರ್ಥವಾಗಿ ತಿಳಿದುಕೊಳ್ಳಿರಿ, ಆ ಆತ್ಮನ ಶ್ರದ್ಧೆ ಮಾಡಿರಿ, ಪ್ರತೀತಿ ಮಾಡಿರಿ, ಆಚರಣೆ ಮಾಡಿರಿ. ಮನ-ವಚನ-ಕಾಯಗಳಿಂದ ಮೋಕ್ಷ ಪಡೆಯುವ ಹಾಗೆ ಮಾಡಿರಿ.

ಭಾವಾರ್ಥ ಃ- ಯಾವುದನ್ನು ತಿಳಿಯುವುದರಿಂದ ಮತ್ತು ಶ್ರದ್ಧೆ ಮಾಡುವುದರಿಂದ ಮೋಕ್ಷವಾಗುತ್ತದೆ ಅದನ್ನು ತಿಳಿದುಕೊಳ್ಳಬೇಕು ಮತ್ತು ಶ್ರದ್ಧೆಮಾಡಬೇಕು ಅದು ಮೋಕ್ಷಪ್ರಾಪ್ತಿ ಮಾಡಿಸುತ್ತದೆ, ಆದುದರಿಂದ ಆತ್ಮನನ್ನು ತಿಳಿದುಕೊಳ್ಳುವ ಕಾರ್ಯವನ್ನು ಎಲ್ಲ ಪ್ರಕಾರದ ಉದ್ಯಮದಿಂದ ಮಾಡಬೇಕಾಗುವುದು, ಇದರಿಂದಲೇ ಮೋಕ್ಷದ ಪ್ರಾಪ್ತಿಯಾಗುತ್ತದೆ, ಆದುದರಿಂದ ಭವ್ಯ ಜನರಿಗೆ ಇದೇ ಉಪದೇಶವಿದೆ. ॥೮೭॥

---

ಇದೇ ಕಾರಣದಿಂದಾ ಆತ್ಮನ ಶ್ರದ್ಧೆಯನು ಮಾಡುವುದು ತ್ರಿವಿಧದಿಂ ನೀವು ।
ಅದರಿಂದ ಆ ಆತ್ಮನನು ಯತ್ನದಿಂ ತಿಳಿಯಿರಿ ಮುಕ್ತಿಯನು ಪಡೆಯಿರಿ ॥೮೭॥

ಬಾಹ್ಯದಲ್ಲಿ ಹಿಂಸಾದಿ ಕ್ರಿಯೆಗಳನ್ನು ಮಾಡದೆಯೇ ಅಶುದ್ಧಭಾವದಿಂದ ತಂದುಲಮತ್ಸ್ಯತುಲ್ಯ ಜೀವವು ಕೂಡ ಏಳನೆಯ ನರಕಕ್ಕೆ ಹೋಯಿತೆಂದಮೇಲೆ ಉಳಿದ ದೊಡ್ಡ ಜೀವಗಳ ಕಥೆಯೇನೆಂಬುದನ್ನು ಈಗ ಹೇಳುತ್ತಾರೆ, -

**ಮಚ್ಛೋ ವಿ ಸಾಲಿಸಿತ್ಥೋ ಅಸುದ್ಧಭಾವೋ ಗಓ ಮಹಾಣರಯಂ ।**
**ಇಯ ಣಾಉಂ ಅಪ್ಪಾಣಂ ಭಾವಹ ಜಿಣಭಾವಣಂ ಣಿಚ್ಚಂ ।।೮೮।।**

**ಮತ್ಸ್ಯಂ ಅಪಿ ಶಾಲಿಸಿಕ್ಥಃ ಅಶುದ್ಧಭಾವಃ ಗತಃ ಮಹಾನರಕಮ್ ।**
**ಇತಿ ಜ್ಞಾತ್ವಾ ಆತ್ಮಾನಂ ಭಾವಯ ಜಿನಭಾವನಾಂ ನಿತ್ಯಮ್ ।।೮೮।।**

ಅರ್ಥ ಃ- ಎಲೈ ಭವ್ಯ ಜೀವನೇ ! ಶಾಲಿಶಿಕ್ಥವು (ತಂದುಲನಾಮದ ಮತ್ಸ್ಯವು) ಕೂಡ ಅಶುದ್ಧಭಾವನಾ ಸ್ವರೂಪವಾಗುತ್ತ ಮಹಾನರಕ ಎಂದರೆ ಏಳನೆಯ ನರಕದಲ್ಲಿ ಹೋಯಿತೆಂಬುದನ್ನು ನೀನು ನೋಡು ! ಆದುದರಿಂದ ನಿನ್ನ ಆತ್ಮನನ್ನು ತಿಳಿದುಕೊಳ್ಳುವ ಸಲುವಾಗಿ ನಿರಂತರ ಜಿನಭಾವನೆಯನ್ನು ಮಾಡೆಂದು ನಿನಗೆ ಉಪದೇಶ ಕೊಡುತ್ತಾರೆ.

ಭಾವಾರ್ಥ ಃ- ಅಶುದ್ಧಭಾವದ ಮಾಹಾತ್ಮ್ಯದಿಂದ ತಂದುಲಮತ್ಸ್ಯದಂಥ ಅಲ್ಪ ಜೀವವು ಕೂಡ ಏಳನೆಯ ನರಕಕ್ಕೆ ಹೋಯಿತೆಂದಮೇಲೆ ಉಳಿದ ದೊಡ್ಡ ಜೀವಗಳೇಕೆ ನರಕಕ್ಕೆ ಹೋಗಬಾರದು, ಆದುದರಿಂದ ಭಾವಶುದ್ಧಮಾಡುವ ಉಪದೇಶವಿದೆ. ಭಾವಶುದ್ಧವಾದಮೇಲೆ ತನ್ನ ಹಾಗೂ ಇತರರ ಸ್ವರೂಪವನ್ನು ತಿಳಿಯುವುದಾಗುತ್ತದೆ. ತನ್ನ ಮತ್ತು ಇತರರ ಸ್ವರೂಪದ ಜ್ಞಾನವು ಜಿನದೇವರ ಆಜ್ಞೆಯ ಭಾವನೆಯನ್ನು ನಿರಂತರ ಭಾವಿಸುವುದರಿಂದ ಆಗುತ್ತದೆ,ಆದುದರಿಂದ ಜಿನದೇವರ ಆಜ್ಞೆಯ ಭಾವನೆಯನ್ನು ನಿರಂತರ ಮಾಡುವುದು ಯೋಗ್ಯವಿದೆ.

ತಂದುಲಮತ್ಸ್ಯದ ಕಥೆಯು ಹೀಗಿದೆ-ಕಾಕಂದೀಪುರದ ದೊರೆ ಸೂರಸೇನನಿದ್ದನು. ಅವನು ಮಾಂಸ ಭಕ್ಷಕನಾಗಿಬಿಟ್ಟನು . ಅತ್ಯಂತ ಲೋಲುಪಿ, ನಿರಂತರ ಮಾಂಸ ಭಕ್ಷಣದ ಅಭಿಪ್ರಾಯವಿಡುತ್ತಿದ್ದನು. ಅವನಿಗೆ 'ಪಿತೃಪ್ರಿಯ'ನಾಮದ ಅಡಿಗೆಯವನಿದ್ದನು. ಅವನು ಅನೇಕ ಜೀವಗಳ ಮಾಂಸವನ್ನು ನಿರಂತರ ಭಕ್ಷಣ ಮಾಡಿಸುತ್ತಿದ್ದನು. ಅವನಿಗೆ ಸರ್ಪದಂಶವಾಗಿ ಸತ್ತು ಸ್ವಯಂಭೂರಮಣ ಸಮುದ್ರದಲ್ಲಿ ಮಹಾಮತ್ಸ್ಯನಾದನು. ದೊರೆಯಾದ ಸೂರಸೇನನು ಕೂಡ ಸತ್ತು ಅಲ್ಲಿಯೇ ಅದೇ ಮಹಾಮತ್ಸ್ಯದ ಕಿವಿಯಲ್ಲಿ ತಂದುಲಮತ್ಸ್ಯನಾದನು.

ಅಲ್ಲಿ ಮಹಾಮತ್ಸ್ಯದ ಮುಖದಲ್ಲಿ ಅನೇಕ ಜೀವಗಳು ಬರುತ್ತಿದ್ದವು ಮತ್ತು ಹೊರಗೆ ಹೋಗುತ್ತಿದ್ದವು. ಆಗ ತಂದುಲಮತ್ಸ್ಯವು ಅವನ್ನು ನೋಡಿ ಈ ಮಹಾಮತ್ಸ್ಯವು ದುರ್ದೈವಿಯಿದೆ ಬಾಯೊಳಗೆ ಬಂದಿರುವ ಜೀವಗಳನ್ನು ನುಂಗುವುದಿಲ್ಲ. ಒಂದುವೇಳೆ ನನ್ನ ಶರೀರವು ಇಷ್ಟು ದೊಡ್ಡದಾಗಿದ್ದರೆ ಈ ಸಮುದ್ರದ ಸಮಸ್ತ ಜೀವಗಳನ್ನು ತಿಂದುಹಾಕುತ್ತಿದ್ದೆನೆಂದು ವಿಚಾರ ಮಾಡುತ್ತದೆ. ಇಂಥ ಭಾವಗಳ ಪಾಪದಿಂದ ಜೀವಗಳನ್ನು ತಿನ್ನದಿದ್ದರೂ ಕೂಡ ಏಳನೆಯ ನರಕದಲ್ಲಿ ಹೋಯಿತು ಮತ್ತು ಮಹಾಮತ್ಸ್ಯವಂತೂ ತಿನ್ನುವಂಥದ್ದಿತ್ತು ಆದಂತೂ ನರಕದಲ್ಲಿ ಹೋಗಿಯೇ ಹೋಗುವುದು.

---

**ತಂದುಲಮತ್ಸ್ಯವು ಕೂಡ ಅಶುದ್ಧಭಾವದಿಂದ ಮಹಾನರಕಕ್ಕಿಳಿಯಿತು ।**
**ಎಂದರಿದು ಆತ್ಮನ ಅರಿವಿಗಾಗಿ ಭಾವಿಸು ಜಿನಭಾವನೆಯನು ನಿತ್ಯ ।।೮೮।।**

ಆದುದರಿಂದ ಅಶುದ್ಧ ಭಾವದೊಡನೆ ಬಾಹ್ಯ ಪಾಪ ಮಾಡುವುದೂ ಕೂಡ ನರಕದ ಕಾರಣವೇ ಇದೆ, ಆದರೆ ಬಾಹ್ಯದಲ್ಲಿ ಹಿಂಸಾದಿ ಪಾಪಗಳನ್ನು ಮಾಡದೆ ಕೇವಲ ಅಶುದ್ಧಭಾವವು ಕೂಡ ಅದರ ಸಮಾನವೇ ಇದೆ, ಆದುದರಿಂದ ಭಾವಗಳಲ್ಲಿನ ಅಶುಭಧ್ಯಾನ ಬಿಟ್ಟುಕೊಟ್ಟು ಶುಭಧ್ಯಾನ ಮಾಡುವುದು ಯೋಗ್ಯವಿದೆ. ಯಾವನು ಮೊದಲು ರಾಜ್ಯ ಪಡೆದಿದ್ದನು ಅವನು ಮೊದಲು ಪುಣ್ಯ ಮಾಡಿದ್ದನು ಅದು ಅದರ ಫಲವಿತ್ತು, ನಂತರ ಕುಭಾವ ಮಾಡಿದಾಗ ನರಕಕ್ಕೆ ಹೋದನೆಂದು ಇಲ್ಲಿ ತಿಳಿಯಬೇಕು. ಆದುದರಿಂದ ಆತ್ಮಜ್ಞಾನವಿಲ್ಲದೆ ಕೇವಲ ಪುಣ್ಯವೇ ಮೋಕ್ಷದ ಸಾಧನವಿಲ್ಲ. ||೮೮||

ಭಾವರಹಿತನಿಗೆ ಬಾಹ್ಯ ಪರಿಗ್ರಹದ ತ್ಯಾಗಾದಿಗಳೆಲ್ಲವೂ ನಿಷ್ಪ್ರಯೋಜಕವಿವೆಯೆಂದು ಈಗ ಹೇಳುತ್ತಾರೆ, –

**ಬಾಹಿರಸಂಗಚ್ಚಾಓ ಗಿರಿಸರಿದರಿಕಂದರಾಇ ಆವಾಸೋ ।**
**ಸಯಲೋ ಣಾಣಜ್ಝಯಣೋ ಣಿರತ್ಥಓ ಭಾವರಹಿಯಾಣಂ ||೮೯||**

**ಬಾಹ್ಯಸಂಗತ್ಯಾಗಃ ಗಿರಿಸರಿದ್ದರೀಕಂದರಾದೌ ಆವಾಸಃ ।**
**ಸಕಲಂ ಜ್ಞಾನಾಧ್ಯಯನಂ ನಿರರ್ಥಕಂ ಭಾವರಹಿತಾನಾಮ್ ||೮೯||**

ಅರ್ಥ :– ಯಾವ ಪುರುಷರು ಭಾವರಹಿತರಿದ್ದಾರೆ, ಶುದ್ಧ ಆತ್ಮನ ಭಾವನೆಯಿಂದ ರಹಿತರಿದ್ದಾರೆ ಮತ್ತು ಬಾಹ್ಯ ಆಚರಣದಿಂದ ಸಂತುಷ್ಟರಿದ್ದಾರೆ ಅವರಿಗೆ ಬಾಹ್ಯ ಪರಿಗ್ರಹದ ತ್ಯಾಗವಿದೆ ಅದು ನಿರರ್ಥಕವಿದೆ. ಗಿರಿ (ಪರ್ವತ) ದರೀ (ಪರ್ವತದ ಗುಹೆ) ಸರಿತ್ (ನದಿಯ ಹತ್ತಿರ) ಕಂದರ (ಪರ್ವತದ ನೀರಿನಿಂದ ಸೀಳಿರುವ ಸ್ಥಾನ) ಇವೇ ಮೊದಲಾದ ಸ್ಥಾನಗಳಲ್ಲಿನ ಆವಾಸವು (ಇರುವುದು) ನಿರರ್ಥಕವಿದೆ. ಧ್ಯಾನಮಾಡುವುದು, ಆಸನದ ಮುಖಾಂತರ ಮನಸ್ಸನ್ನು ತಡೆಯುವುದು, ಅಧ್ಯಯನಗಳೆಲ್ಲವೂ ನಿರರ್ಥಕವಿದೆ.

ಭಾವಾರ್ಥ :– ಬಾಹ್ಯ ಕ್ರಿಯೆಯ ಫಲವು ಆತ್ಮಜ್ಞಾನ ಸಹಿತವಾಗಿದ್ದರೆ ಸಫಲವಿದೆ, ಅನ್ಯಥಾ ಎಲ್ಲವು ನಿರರ್ಥಕವಿದೆ. ಪುಣ್ಯದ ಫಲವಿದ್ದರೂ ಕೂಡ ಸಂಸಾರದ ಕಾರಣವೇ ಇದೆ, ಮೋಕ್ಷಫಲವಿಲ್ಲ. ||೮೯||

ಭಾವಶುದ್ಧಿಯ ಸಲುವಾಗಿ ಇಂದ್ರಿಯ ಮೊದಲಾದುವನ್ನು ವಶದಲ್ಲಿಟ್ಟುಕೊಳ್ಳು, ಭಾವಶುದ್ಧಿಯಿಲ್ಲದೆ ಬಾಹ್ಯವೇಷದ ಆಡಂಬರ ಮಾಡಬೇಡೆಂದು ಈಗ ಉಪದೇಶ ಮಾಡುತ್ತಾರೆ, –

**ಭಂಜಸು ಇಂದಿಯಸೇಣಂ ಭಂಜಸು ಮಣಮಕ್ಕಡಂ ಪಯತ್ತೇಣ ।**
**ಮಾ ಜಣರಂಜಣಕರಣಂ ಬಾಹಿರವಯವೇಸ ತಂ ಕುಣಸು ||೯೦||**

---

ಹೊರಸಂಗತ್ಯಾಗ ಗಿರಿದರಿನದಿತಟಕಂದರಾದಿಗಳ ಆವಾಸವು ।
ನಿರರ್ಥಕವಿವೆ ಜ್ಞಾನಾಧ್ಯಯನಗಳೆಲ್ಲ ಭಾವರಹಿತನಾದವನಿಗೆ ||೮೯||

ನೀನು ಇಂದ್ರಿಯಸೇನೆಯಂ ಭಂಜಿಸು ಭಂಜಿಸು ಮನೋಮರ್ಕಟವ ಪ್ರಯತ್ನದಿಂ ।
ನೀನು ಜನರಂಜನಕರವಾದ ಬಾಹ್ಯವ್ರತವೇಷವನು ಧರಿಸದಿರು ||೯೦||

**ಭಂಗ್ಧಿ ಇಂದ್ರಿಯಸೇನಾಂ ಭಂಗ್ಧಿ ಮನೋಮರ್ಕಟಂ ಪ್ರಯತ್ನೇನ ।**
**ಮಾ ಜನರಂಜನಕರಣಂ ಬಹಿರ್ವ್ರತವೇಷ ! ತ್ವಂಕಾರ್ಷೀಃ ॥೯೦॥**

ಅರ್ಥ ಃ- ಎಲೈ ಮುನಿಯೇ ! ನೀನು ಇಂದ್ರಿಯಗಳ ಸೇನೆಯ ಭಂಜನ ಮಾಡು, ವಿಷಯಗಳಲ್ಲಿ ರಮಿಸಬೇಡ, ಮನಸ್ಸುರೂಪದ ಮಂಗನನ್ನು ಪ್ರಯತ್ನಪೂರ್ವಕ ದೊಡ್ಡ ಉದ್ಯಮ ಮಾಡಿ ಭಂಜನ ಮಾಡು, ವಶೀಭೂತಮಾಡು ಮತ್ತು ಜನರ ಮನೋರಂಜನ ಮಾಡುವಂಥ ಬಾಹ್ಯವ್ರತದ ವೇಷವನ್ನು ಧಾರಣ ಮಾಡಬೇಡ.

ಭಾವಾರ್ಥ ಃ- ಬಾಹ್ಯ ಮುನಿಯ ವೇಷವು ಜನರಂಜನೆ ಮಾಡುವಂಥದ್ದಿರುವುದರಿಂದ ಈ ಉಪದೇಶವಿದೆ, ಲೋಕರಂಜನೆಯಿಂದ ಯಾವ ಪರಮಾರ್ಥದ ಸಿದ್ಧಿಯಿಲ್ಲದಿರುವುದರಿಂದ ಇಂದ್ರಿಯ ಮತ್ತು ಮನಸ್ಸನ್ನು ವಶದಲ್ಲಿಟ್ಟುಕೊಳ್ಳುವ ಸಲುವಾಗಿ ಬಾಹ್ಯಯತ್ನ ಮಾಡಿದರೆ ಉತ್ತಮವಿದೆ, ಇಂದ್ರಿಯ ಮತ್ತು ಮನಸ್ಸನ್ನು ವಶದಲ್ಲಿಟ್ಟುಕೊಳ್ಳದೆ ಕೇವಲ ಲೋಕರಂಜನೆ ಮಾತ್ರವಾಗಿ ವೇಷಧಾರಣ ಮಾಡುವುದರಿಂದ ಯಾವ ಪರಮಾರ್ಥದ ಸಿದ್ಧಿಯಿಲ್ಲ. ॥೯೦॥

ಮತ್ತೆ ಉಪದೇಶ ಮಾಡುತ್ತಾರೆ, -

**ಣವಣೋಕಸಾಯವಗ್ಗಂ ಮಿಚ್ಛತ್ತಂ ಚಯಸು ಭಾವಸುದ್ಧೀಏ ।**
**ಚೇಇಯಪವಯಣಗುರುಣಂ ಕರೇಹಿ ಭತ್ತಿಂ ಜಿಣಾಣಾಏ ॥೯೧॥**

**ನವನೋಕಷಾಯವರ್ಗಂ ಮಿಥ್ಯಾತ್ವಂ ತ್ಯಜ ಭಾವಶುದ್ಧ್ಯಾ ।**
**ಚೈತ್ಯಪ್ರವಚನಗುರೂಣಾಂ ಕುರು ಭಕ್ತಿಂ ಜಿನಾಜ್ಞಯಾ ॥೯೧॥**

ಅರ್ಥ ಃ- ಎಲೈ ಮುನಿಯೇ ! ನೀನು ಆ ಹಾಸ್ಯ, ರತಿ, ಅರತಿ, ಶೋಕ, ಭಯ, ಜುಗುಪ್ಸೆ, ಸ್ತ್ರೀವೇದ, ಪುರುಷವೇದ, ನಪುಂಸಕವೇದವೆಂಬ ಈ ನವನೋಕಷಾಯವರ್ಗ ಮತ್ತು ಮಿಥ್ಯಾತ್ವ ಇವುಗಳನ್ನು ಭಾವಶುದ್ಧಿಯ ಮುಖಾಂತರ ಬಿಡು ಮತ್ತು ಜಿನಾಜ್ಞೆಯಿಂದ ಚೈತ್ಯ, ಪ್ರವಚನ, ಗುರು ಇವುಗಳ ಭಕ್ತಿ ಮಾಡು. ॥೯೧॥

ಈಗ ಮತ್ತೆ ಹೇಳುತ್ತಾರೆ, -

**ತಿತ್ಥಯರಭಾಸಿಯತ್ಥಂ ಗಣಹರದೇವೇಹಿಂ ಗಂಥಿಯಂ ಸಮ್ಮಂ ।**
**ಭಾವಹಿ ಅಣುದಿಣು ಅತುಲಂ ವಿಸುದ್ಧಭಾವೇಣ ಸುಯಣಾಣಂ ॥೯೨॥**

---

ನವನೋಕಷಾಯವರ್ಗವನು ಮಿಥ್ಯಾತ್ವವನು ಭಾವಶುದ್ಧಿಯಿಂದ ತ್ಯಜಿಸು ।
ಪ್ರವಚನ ಚೈತ್ಯ ಮೇಣ್ಗುರುಭಕ್ತಿಯನು ಜಿನಾಜ್ಞೆಗನುಸರಿಸಿ ನೀ ಮಾಡು ॥೯೧॥

ತೀರ್ಥಂಕರ ಭಾಷಿತ ಅರ್ಥಮಯ ಗಣಧರದೇವ ಗ್ರಥಿತವಂ ಭಾವಿಸು ।
ಪ್ರಾರ್ಥಿಸು ಅನುದಿನ ವಿಶುದ್ಧಭಾವದಿಂ ಅತುಲವಾದಾ ಶ್ರುತಜ್ಞಾನವನು ॥೯೨॥

ತೀರ್ಥಂಕರಭಾಷಿತಾರ್ಥಂ ಗಣಧರದೇವೈಃ ಗ್ರಥಿತಂ ಸಮ್ಯಕ್ ।
ಭಾವಯ ಅನುದಿನಂ ಅತುಲಂ ವಿಶುದ್ಧಭಾವೇನ ಶ್ರುತಜ್ಞಾನಮ್ ॥೯೨॥

ಅರ್ಥ :– ಎಲೈ ಮುನಿಯೇ ! ನೀನು ಆ ತೀರ್ಥಂಕರ ಭಗವಂತರು ಹೇಳಿರುವ ಮತ್ತು ಗಣಧರ ದೇವರು ಹೆಣೆದ ಎಂದರೆ ಶಾಸ್ತ್ರರೂಪವಾಗಿ ರಚನೆ ಮಾಡಿರುವ ಶ್ರುತಜ್ಞಾನವನ್ನು ಸಮ್ಯಕ್ ಪ್ರಕಾರ ಭಾವಶುದ್ಧಮಾಡಿ ನಿರಂತರ ಭಾವನೆ ಮಾಡು. ಆ ಶ್ರುತಜ್ಞಾನವು ಅತುಲವಿದೆ ಇದರ ಸರಿದೊರೆಯಾಗಿ ಅನ್ಯ ಮತದವರು ಹೇಳರುವ ಶ್ರುತಜ್ಞಾನವಿಲ್ಲ. ॥೯೨॥

ಹೀಗೆ ಮಾಡುವುದರಿಂದ ಏನಾಗುತ್ತದೆಂಬುದನ್ನು ಈಗ ಹೇಳುತ್ತಾರೆ, –

[1]ಪೀಊಣ ಣಾಣಸಲಿಲಂ ಣಿಮ್ಮಹತಿಸಡಾಹಸೋಸಉಮ್ಮುಕ್ಕಾ ।
ಹೋಂತಿ ಸಿವಾಲಯವಾಸೀ ತಿಹುವಣಚೂಡಾಮಣೀ ಸಿದ್ಧಾ ॥೯೩॥

[2]ಪೀತ್ವಾ ಜ್ಞಾನಸಲಿಲಂ ನಿರ್ಮಥ್ಯತೃಷಾದಾಹಶೋಷೋನ್ಮುಕ್ತಾ ।
ಭವಂತಿ ಶಿವಾಲಯವಾಸಿನಃ ತ್ರಿಭುವನಚೂಡಾಮಣಯಃ ಸಿದ್ಧಾಃ ॥೯೩॥

ಅರ್ಥ :– ಪೂರ್ವೋಕ್ತ ಪ್ರಕಾರದಿಂದ ಭಾವ ಶುದ್ಧ ಮಾಡಿದ ಮೇಲೆ ಜ್ಞಾನರೂಪದ ಜಲವನ್ನು ಕುಡಿದು ಸಿದ್ಧರಾಗುತ್ತಾರೆ. ಸಿದ್ಧರು ನಿರ್ಮಥ್ಯ ಎಂದರೆ ಮಥಿಸಲಾಗದಂಥ ತೃಷೆ, ದಾಹ, ಶೋಷಣೆಯಿಂದ ರಹಿತರಿರುತ್ತಾರೆ. ಈ ಪ್ರಕಾರ ಸಿದ್ಧರಾಗುತ್ತಾರೆ, ಇದು ಜ್ಞಾನರೂಪದ ಜಲವನ್ನು ಕುಡಿಯುವುದರ ಫಲವಿದೆ. ಸಿದ್ಧಶಿವಾಲಯ ಎಂದರೆ ಮುಕ್ತಿರೂಪದ ಮಹಲಿನಲ್ಲಿ ಇರುವಂಥವರಿದ್ದಾರೆ, ಲೋಕದ ಶಿಖರದಮೇಲೆ ಅವರ ವಾಸವಿದೆ. ಆದುದರಿಂದ ತ್ರಿಭುವನದ ಚೂಡಾಮಣಿಯಿದ್ದಾರೆ, ಮಕುಟಮಣಿಯಿದ್ದಾರೆ ಮತ್ತು ತ್ರಿಭುವನದಲ್ಲಿ ಸುಖಿಗಳಿದ್ದಾರೆ, ಹೀಗೆ ಪರಮಾನಂದ ಅವಿನಾಶಿಯಾದ ಸುಖವನ್ನು ಅವರು ಭೋಗಿಸುತ್ತಾರೆ. ಈ ಪ್ರಕಾರ ಅವರು ತ್ರಿಭುವನದ ಮಕುಟಮಣಿಯಿದ್ದಾರೆ.

ಭಾವಾರ್ಥ :– ಶುದ್ಧ ಭಾವ ಮಾಡಿ ಜ್ಞಾನರೂಪದ ಜಲವನ್ನು ಕುಡಿದನಂತರ ತೃಷ್ಣೆ, ದಾಹ, ಶೋಷಣೆಗಳು ಅಳಿಸಿ ಹೋಗುವುದರಿಂದ ಪರಮಾನಂದರೂಪದ ಸಿದ್ಧರಾಗುತ್ತಾರೆಂದು ಹೇಳಿದೆ. ॥೯೩॥

ಈಗ ಭಾವಶುದ್ಧಿಯ ಸಲುವಾಗಿ ಮತ್ತೆ ಉಪದೇಶ ಮಾಡುತ್ತಾರೆ, –

---

ಜೀವ ಜ್ಞಾನಸಲಿಲವನು ಕುಡಿದು ತೀವ್ರತೃಷ್ಣಾದಾಹಶೋಷೋನ್ಮುಕ್ತನಾಗಿ ।
ಶಿವಾಲಯವಾಸಿ ಸಿದ್ಧನಾಗುವನು ತ್ರಿಭುವನ ಚೂಡಾಮಣಿಯಾಗುವನು ॥೯೩॥

---

೧ 'ಪಾಊಣ'ವೆಂಬ ಪಾಠಾಂತರವಿದೆ.

೨ 'ಪ್ರಾಪ್ಯ'ವೆಂದು ಪಾಠಾಂತರವಿದೆ.

ದಸ ದಸ ದೋ ಸುಪರೀಸಹ ಸಹಹಿ ಮುಣೀ ಸಯಲಕಾಲ ಕಾಏಣ ।
ಸುತ್ತೇಣ ಅಪ್ಪಮತ್ತೋ ಸಂಜಮಘಾದಂ ಪಮೋತ್ತೂಣ ॥೯೪॥

ದಶ ದಶ ದ್ವೌ ಸುಪರೀಷಹಾನ್ ಸಹಸ್ವ ಮುನೇ ! ಸಕಲಕಾಲಂ ಕಾಯೇನ ।
ಸೂತ್ರೇಣ ಅಪ್ರಮತ್ತಃ ಸಂಯಮಘಾತಂ ಪ್ರಮುಚ್ಯ ॥೯೪॥

ಅರ್ಥ ಃ- ಎಲೈ ಮುನಿಯೇ ! ನೀನು ದಸ ದಸ ದೋ ಎಂದರೆ ಇಪ್ಪತ್ತೆರಡು ಸುಪರೀಷಹ ಎಂದರೆ ಅತಿಶಯಕರವಾಗಿ ಸಹಿಸಲು ಯೋಗ್ಯವಾದುದನ್ನು ಸೂತ್ರೇಣ ಎಂದರೆ ಜಿನವಚನದಲ್ಲಿ ಹೇಗೆ ಹೇಳಿದ್ದಾರೆ ಅದೇ ರೀತಿಯಿಂದ ನಿಃಪ್ರಮಾದಿಯಾದಿ ಸಂಯಮದ ಘಾತವನ್ನು ದೂರಮಾಡಿ ಮತ್ತು ನಿನ್ನ ಕಾಯದಿಂದ ಸದಾಕಾಲ ನಿರಂತರ ಸಹನೆಮಾಡು.

ಭಾವಾರ್ಥ ಃ- ಮುನಿಯು ತನ್ನ ಸಂಯಮವು ಕೆಡದ ಹಾಗೆ ಮತ್ತು ಪ್ರಮಾದದ ನಿವಾರಣೆಯಾಗುವಂತೆ ನಿರಂತರ ಕ್ಷುಧೆ, ತೃಷೆ ಮೊದಲಾದ ಇಪ್ಪತ್ತೆರಡು ಪರೀಷಹಗಳನ್ನು ಸಹನೆಮಾಡಬೇಕು. ಇವುಗಳನ್ನು ಸಹನೆಮಾಡುವುದರಿಂದ ಕರ್ಮದ ನಿರ್ಜರೆಯಾಗುತ್ತದೆ ಮತ್ತು ಸಂಯಮದ ಮಾರ್ಗದಿಂದ ಬಿಡುಗಡೆ ಹೊಂದುವುದಾಗುವುದಿಲ್ಲ, ಪರಿಣಾಮವು ದೃಢವಾಗುತ್ತದೆಯೆಂದು ಸೂತ್ರದಲ್ಲಿ ಇದನ್ನು ಸಹನೆ ಮಾಡುವುದರ ಪ್ರಯೋಜನವೆಂದು ಹೇಳಿದೆ. ॥೯೪॥

ಪರೀಷಹ ಸಹಿಸುವಲ್ಲಿ ದೃಢನಾದನೆಂದರೆ ಅವನು ಉಪಸರ್ಗ ಬಂದಮೇಲೂ ದೃಢನಿರುತ್ತಾನೆ, ಚ್ಯುತನಾಗುವುದಿಲ್ಲವೆಂಬುದರ ದೃಷ್ಟಾಂತವನ್ನೀಗ ಹೇಳುತ್ತಾರೆ, -

ಜಹ ಪತ್ಥರೋ ಣ ಭಿಜ್ಜಇ ಪರಿಟ್ಠಿಓ ದೀಹಕಾಲಮುದಏಣ[೧] ।
ತಹ ಸಾಹೂ ವಿ ಣ ಭಿಜ್ಜಇ ಉವಸಗ್ಗಪರೀಸಹೇಹಿಂತೋ ॥೯೫॥

ಯಥಾ ಪ್ರಸ್ತರಃ ನ ಭಿದ್ಯತೇ ಪರಿಸ್ಥಿತಃದೀರ್ಘಕಾಲಮುದಕೇನ ।
ತಥಾ ಸಾಧುರಪಿ ನ ಭಿದ್ಯತೇ ಉಪಸರ್ಗಪರೀಷಹೇಭ್ಯಃ ॥೯೫॥

ಅರ್ಥ ಃ- ಯಾವ ಪ್ರಕಾರ ಪಾಷಾಣವು ನೀರಿನಲ್ಲಿ ಅಧಿಕ ಕಾಲದವರೆಗೆ ಇದ್ದರೂ ಕೂಡ ಭೇದಿಸುವಿಕೆಗೆ ಪ್ರಾಪ್ತವಾಗುವುದಿಲ್ಲ ಅದೇ ಪ್ರಕಾರ ಸಾಧುವು ಉಪಸರ್ಗ ಮತ್ತು ಪರೀಷಹಗಳಿಂದ ಭೇದಿಸುವಿಕೆಗೆ ಪ್ರಾಪ್ತನಾಗುವುದಿಲ್ಲ.

---

ಇಪ್ಪತ್ತೆರಡು ಪರೀಷಹಗಳನೆಲ್ಲಕಾಲ ಸಹಿಸೆಲೆ ಮುನಿ ಕಾಯದಿಂ ।
ಅಪ್ರಮತ್ತನಾಗಿದ್ದು ಸೂತ್ರಾನುಸಾರ ಸಂಯಮದ ಘಾತವನು ನಿವಾರಿಸಿ ॥೯೪॥

ಹೇಗೆ ಪಾಷಾಣ ಚಿರಕಾಲ ನೀರಿನೊಳಗಿದ್ದರದು ನೀರಿನಿಂ ಭೇದಿಸದು ।
ಹಾಗೆ ಸಾಧು ಕೂಡ ಉಪಸರ್ಗಮೇಣ್ಪರೀಷಹಗಳಿಂದ ಭೇದಿಸಲಾರನು ॥೯೫॥

---

೧ 'ಮುದಕೇಣ'ವೆಂಬ ಪಾಠಾಂತರವಿದೆ.

ಭಾವಾರ್ಥ ಃ- ಪಾಷಾಣವು ಎಷ್ಟು ಕಠೋರವಿರುತ್ತದೆಯೆಂದರೆ ಅದು ನೀರಿನಲ್ಲಿ ಅಧಿಕ ಸಮಯದವರೆಗೆ ಇದ್ದರೂ ಕೂಡ ಅದರಲ್ಲಿ ಜಲವು ಪ್ರವೇಶ ಮಾಡುವುದಿಲ್ಲ, ಅದೇ ಪ್ರಕಾರ ಸಾಧುವಿನ ಪರಿಣಾಮ ಕೂಡ ಎಷ್ಟು ದೃಢವಿರುತ್ತದೆಯೆಂದರೆ ಅವರು ಉಪಸರ್ಗ ಪರೀಷಹಗಳುಂಟಾದರೂ ಕೂಡ ಸಂಯಮದ ಪರಿಣಾಮದಿಂದ ಚ್ಯುತರಾಗುವುದಿಲ್ಲ ಮತ್ತು ಮೊದಲು ಹೇಳಿದ ಆ ಸಂಯಮದ ಘಾತವು ಆಗದ ಹಾಗೆ ಪರೀಷಹಗಳನ್ನು ಸಹಿಸುತ್ತಾರೆ. ಒಂದು ವೇಳೆ ಎಂದಾದರೊಮ್ಮೆ ಸಂಯಮದ ಘಾತವಾಗುವುದನ್ನು ತಿಳಿದರೆ ಹಾಗೆ ಘಾತವಾಗದಂತೆ ಮಾಡುವರು. ।।೯೫।।

ಪರೀಷಹಗಳು ಬಂದಮೇಲೆ ಭಾವಶುದ್ಧವಿರುವಂಥ ಉಪಾಯವನ್ನೀಗ ಹೇಳುತ್ತಾರೆ, -

**ಭಾವಹಿ ಅಣುವೇಕ್ಖಾಓ ಅವರೇ ಪಣವೀಸಭಾವಣಾ ಭಾವಿ ।**
**ಭಾವರಹಿಏಣ ಕಿಂ ಪುಣ ಬಾಹಿರಲಿಂಗೇಣ ಕಾಯವ್ವಂ ।।೯೬।।**

**ಭಾವಯ ಅನುಪ್ರೇಕ್ಷಾಃ ಅಪರಾಃ ಪಂಚವಿಂಶತಿಭಾವನಾಃ ಭಾವಯ ।**
**ಭಾವರಹಿತೇನ ಕಿಂ ಪುನಃ ಬಾಹ್ಯಲಿಂಗೇನ ಕರ್ತವ್ಯಮ್ ।।೯೬।।**

ಅರ್ಥ ಃ- ಎಲೈ ಮುನಿಯೇ ! ನೀನು ಅನುಪ್ರೇಕ್ಷೆ ಎಂದರೆ ಅನಿತ್ಯ ಮೊದಲಾದ ಹನ್ನೆರಡು ಅನುಪ್ರೇಕ್ಷೆಗಳಿವೆ ಅವುಗಳ ಭಾವನೆ ಮಾಡು ಮತ್ತು ಅಪರ ಎಂದರೆ ಅನ್ಯ ಪಂಚಮಹಾವ್ರತಗಳ ಇಪ್ಪತ್ತೈದು ಭಾವನೆ ಹೇಳಿದೆ ಅವುಗಳ ಭಾವನೆ ಮಾಡು, ಭಾವರಹಿತವಾದ ಆ ಬಾಹ್ಯಲಿಂಗದಿಂದ ಯಾವ ಕರ್ತವ್ಯವಿದೆ ? ಎಂದರೆ ಯಾವುದೂ ಇಲ್ಲ.

ಭಾವಾರ್ಥ ಃ- ಕಷ್ಟಗಳು ಬಂದಮೇಲೆ ಹನ್ನೆರಡು ಅನುಪ್ರೇಕ್ಷೆಗಳ ಚಿಂತನೆ ಮಾಡುವುದು ಯೋಗ್ಯವಿದೆ. ಅವು ೧) ಅನಿತ್ಯ, ೨) ಅಶರಣ, ೩) ಸಂಸಾರ, ೪) ಏಕತ್ವ, ೫) ಅನ್ಯತ್ವ, ೬) ಅಶುಚಿತ್ವ೭) ಆಸ್ರವ, ೮) ಸಂವರ, ೯) ನಿರ್ಜರೆ, ೧೦) ಲೋಕ, ೧೧) ಬೋಧಿದುರ್ಲಭ, ೧೨) ಧರ್ಮವೆಂದು ಹನ್ನೆರಡು ಇವೆ, ಇವುಗಳನ್ನು ಮತ್ತು ಇಪ್ಪತ್ತೈದು ಭಾವನೆಗಳನ್ನು ಭಾವಿಸುವುದು ಮಹಾನ ಉಪಾಯವಿದೆ. ಪುನಃ ಪುನಃ ಇವುಗಳ ಚಿಂತನೆ ಮಾಡುವುದರಿಂದ ಕಷ್ಟದಲ್ಲಿ ಪರಿಣಾಮವು ಕೆಡುವುದಿಲ್ಲ, ಆದುದರಿಂದ ಈ ಉಪದೇಶವಿದೆ. ।।೯೬।।

ಮತ್ತೆ ಭಾವಶುದ್ಧ ಇಡುವುದಕ್ಕೆ ಜ್ಞಾನದ ಅಭ್ಯಾಸ ಮಾಡುತ್ತಾರೆ, -

**ಸವ್ವವಿರಓ ವಿ ಭಾವಹಿ ಣವ ಯ ಪಯತ್ಥಾಇಂ ಸತ್ತ ತಚ್ಚಾಇಂ ।**
**ಜೀವಸಮಾಸಾಇಂ ಮುಣೀ ಚಉದಸಗುಣಠಾಣಣಾಮಾಇಂ ।।೯೭।।**

---

**ಭಾವಿಸು ಅನುಪ್ರೇಕ್ಷೆಗಳನು ಮೇಣಿಪ್ಪತ್ತೈದು ಭಾವನೆಗಳನು ಭಾವಿಸು ।**
**ಭಾವವಿರಹಿತವಾದಾ ಬಾಹ್ಯಲಿಂಗದಿಂದೇನು ಪ್ರಯೋಜನವಿದೆ ನಿನಗೆ ।।೯೬।।**

**ನೀನು ಸರ್ವವಿರಕ್ತನಿದ್ದರೂ ನವಪದಾರ್ಥ ಸಪ್ತತತ್ತ್ವಗಳ ಭಾವಿಸು ।**
**ಮುನಿವರ ! ಜೀವಸಮಾಸ ಮೇಣ್ಚತುರ್ದಶಗುಣಸ್ಥಾನಗಳನು ಭಾವಿಸು ।।೯೭।।**

**ಸರ್ವ ವಿರತಃ ಅಪಿ ಭಾವಯ ನವ ಪದಾರ್ಥಾನ್ ಸಪ್ತ ತತ್ತ್ವಾನಿ ।**
**ಜೀವಸಮಾಸಾನ್ ಮುನೇ ! ಚತುರ್ದಶಗುಣಸ್ಥಾನನಾಮಾನಿ ॥೯೭॥**

ಅರ್ಥ :- ಎಲೈ ಮುನಿಯೇ ! ನೀನು ಸಮಸ್ತ ಪರಿಗ್ರಹಾದಿಗಳಿಂದ ವಿರಕ್ತನಾಗಿ ಹೋಗಿರುವೆ, ಮಹಾವ್ರತಸಹಿತನಿದ್ದರೂ ಕೂಡ ಭಾವ ವಿಶುದ್ಧಿಯ ಸಲುವಾಗಿ ನವಪದಾರ್ಥ, ಸಪ್ತತತ್ತ್ವ, ಹದಿನಾಲ್ಕು ಜೀವ ಸಮಾಸ, ಹದಿನಾಲ್ಕು ಗುಣಸ್ಥಾನಗಳ ನಾಮ ಲಕ್ಷಣ ಭೇದ ಇತ್ಯಾದಿಗಳ ಭಾವನೆಯನ್ನು ಭಾವಿಸು.

ಭಾವಾರ್ಥ :- ಪದಾರ್ಥಗಳ ಸ್ವರೂಪದ ಚಿಂತನೆ ಮಾಡುವುದು ಭಾವಶುದ್ಧಿಯ ಸಲುವಾಗಿ ದೊಡ್ಡ ಉಪಾಯವಿರುವುದರಿಂದ ಈ ಉಪದೇಶವಿದೆ. ಇವುಗಳ ನಾಮ ಸ್ವರೂಪಗಳನ್ನು ಬೇರೆ ಗ್ರಂಥಗಳಿಂದ ತಿಳಿದುಕೊಳ್ಳಬೇಕು. ॥೯೭॥

ಈಗ ಭಾವಶುದ್ಧಿಯ ಸಲುವಾಗಿ ಬೇರೆ ಉಪಾಯ ಹೇಳುತ್ತಾರೆ, -

**ಣವವಿಹಬಂಭಂ ಪಯಡಹಿ ಅಬ್ಬಂಭಂ ದಸವಿಹಂ ಪಮೋತ್ತೂಣ ।**
**ಮೇಹುಣಸಣ್ಣಾಸತ್ತೋ ಭಮಿಓ ಸಿ ಭವಣ್ಣವೇ ಭೀಮೇ ॥೯೮॥**

**ನವವಿಧಬ್ರಹ್ಮಚರ್ಯಂ ಪ್ರಕಟ್ಯ ಅಬ್ರಹ್ಮ ದಶವಿಧಂ ಪ್ರಮುಚ್ಯ ।**
**ಮೈಥುನಸಂಜ್ಞಾಸಕ್ತಃ ಭ್ರಮಿತೋಽಸಿ ಭವಾರ್ಣವೇ ಭೀಮೇ ॥೯೮॥**

ಅರ್ಥ :- ಎಲೈ ಜೀವನೇ ! ನೀನು ಮೊದಲು ಹತ್ತುಪ್ರಕಾರದ ಅಬ್ರಹ್ಮವಿದೆ ಅದನ್ನು ಬಿಟ್ಟುಕೊಟ್ಟು ಒಂಭತ್ತು ಪ್ರಕಾರದ ಬ್ರಹ್ಮಚರ್ಯವಿದೆ ಅದನ್ನು ಪ್ರಕಟಮಾಡು, ಭಾವಗಳಲ್ಲಿ ಪ್ರತ್ಯಕ್ಷಪಡಿಸು. ಈ ಉಪದೇಶವನ್ನೇಕೆ ಕೊಡಲಾಗಿದೆಯೆಂದರೆ ನೀನು ಮೈಥುನಸಂಜ್ಞೆ ಆ ಕಾಮಸೇವನೆಯ ಅಭಿಲಾಷೆಯಲ್ಲಿ ಆಸಕ್ತನಾಗಿ ಅಶುದ್ಧಭಾವಗಳಿಂದ ಈ ಭೀಮ (ಭಯಾನಕ)ವಾದ ಸಂಸಾರರೂಪದ ಸಮುದ್ರದಲ್ಲಿ ಭ್ರಮಣ ಮಾಡುತ್ತಲಿರುವೆ.

ಭಾವಾರ್ಥ :- ಈ ಜೀವನು ಮೈಥುನಸಂಜ್ಞೆಯಲ್ಲಿ ಆಸಕ್ತನಾಗಿ ಗೃಹಸ್ಥಾವಸ್ಥೆ ಮೊದಲಾದ ಅನೇಕ ಉಪಾಯಗಳಿಂದ ಸ್ತ್ರೀಸೇವನೆ ಮೊದಲಾದ ಅಶುದ್ಧ ಭಾವಗಳಿಂದ ಅಶುಭ ಕಾರ್ಯಗಳಲ್ಲಿ ಪ್ರವರ್ತಿಸುತ್ತಿರುವುದರಿಂದ ಈ ಭಯಾನಕವಾದ ಸಂಸಾರಸಮುದ್ರದಲ್ಲಿ ಭ್ರಮಣಮಾಡುತ್ತಾನೆ. ಅದಕ್ಕಾಗಿಯೇ ಹತ್ತು ಪ್ರಕಾರದ ಅಬ್ರಹ್ಮವನ್ನು ಬಿಟ್ಟುಕೊಟ್ಟು ಒಂಭತ್ತು ಪ್ರಕಾರದ ಬ್ರಹ್ಮಚರ್ಯವನ್ನು ಅಂಗೀಕಾರಮಾಡೆಂದು ಉಪದೇಶವಿದೆ. ೧) ಮೊದಲಂತೂ ಸ್ತ್ರೀಯ ಚಿಂತನವಿರುವುದು, ೨) ಅನಂತರ ನೋಡುವ ಚಿಂತೆಯಾಗುವುದು, ೩) ಬಳಿಕ ನಿಶ್ವಾಸಬಿಡುವುದು, ೪) ನಂತರ ಜ್ವರಬರುವುದು, ೫) ಬಳಿಕ ದಾಹವಾಗುವುದು, ೬) ಅನಂತರ ಕಾಮದ ಅಭಿರುಚಿಯಾಗುವುದು, ೭) ಬಳಿಕ ಮೂರ್ಛೆಬರುವುದು, ೮) ನಂತರ ಉನ್ಮಾದವಾಗುವುದು, ೯) ಬಳಿಕ ಜೀವಿತದ ಸಂದೇಹವೆನಿಸುವುದು, ೧೦) ಅನಂತರ ಮರಣವಾಗುವುದು. ಹೀಗೆ ಇವು ಹತ್ತು ಪ್ರಕಾರದ ಅಬ್ರಹ್ಮಗಳಿವೆ.

---

**ನವವಿಧ ಬ್ರಹ್ಮಚರ್ಯವನು ಪ್ರಕಟಿಸು ದಶವಿಧ ಅಬ್ರಹ್ಮ ತ್ಯಜಿಸಿ ।**
**ಜೀವ ಮೈಥುನಸಂಜ್ಞಾಸಕ್ತನಾಗಿ ಭ್ರಮಿಸುವನು ಭೀಮಭವಾರ್ಣವದಲಿ ॥೯೮॥**

ಒಂಭತ್ತು ಕಾರಣಗಳಿಂದ ಬ್ರಹ್ಮಚರ್ಯವು ಕೆಡುತ್ತದೆ. ಆ ಕಾರಣಗಳು ಹೀಗಿವೆ – ೧) ಸ್ತ್ರೀಸೇವನೆ ಮಾಡುವ ಅಭಿಲಾಷೆ, ೨) ಸ್ತ್ರೀಯ ಅಂಗದ ಸ್ಪರ್ಶನ, ೩) ಪುಷ್ಟರಸಗಳ ಸೇವನೆ, ೪) ಸ್ತ್ರೀಯಿಂದ ಸಂಸಕ್ತವಾದ ವಸ್ತು ಶಯ್ಯೆ ಮೊದಲಾದವುಗಳ ಸೇವನೆ, ೫) ಸ್ತ್ರೀಯ ಮುಖ, ನೇತ್ರ ಮೊದಲಾದುವನ್ನು ನೋಡುವುದು, ೬) ಸ್ತ್ರೀಯ ಸತ್ಕಾರ ಪುರಸ್ಕಾರ ಮಾಡುವುದು, ೭) ಮೊದಲು ಮಾಡಿದ ಸ್ತ್ರೀ ಸೇವನೆಯನ್ನು ಸ್ಮರಿಸುವುದು, ೮) ಭವಿಷ್ಯದ ಸ್ತ್ರೀಯ ಸೇವನೆಯ ಅಭಿಲಾಷೆ ಮಾಡುವುದು, ೯) ಮನೋವಾಂಛಿತ ಇಷ್ಟ ವಿಷಯಗಳ ಸೇವನೆ ಮಾಡುವುದು, ಹೀಗೆ ಒಂಭತ್ತು ಪ್ರಕಾರಗಳಿವೆ. ಇವುಗಳ ತ್ಯಾಗ ಮಾಡುವುದು ಅದು ಒಂಭತ್ತು ಭೇದರೂಪದ ಬ್ರಹ್ಮಚರ್ಯವಿದೆ ಅಥವಾ ಮನ–ವಚನ–ಕಾಯ, ಕೃತ–ಕಾರಿತ–ಅನುಮೋದನದಿಂದ ಬ್ರಹ್ಮಚರ್ಯದ ಪಾಲನೆ ಮಾಡುವುದೆಂದೂ ಒಂಭತ್ತು ಪ್ರಕಾರಗಳಿವೆ. ಹೀಗೆ ಮಾಡುವುದು ಕೂಡ ಭಾವಶುದ್ಧವಾಗುವ ಉಪಾಯವಿದೆ. ॥೯೮॥

ಭಾವಸಹಿತವಿರುವ ಮುನಿಯು ನಾಲ್ಕು ಆರಾಧನೆಗಳನ್ನು ಪಡೆಯುತ್ತಾನೆ, ಭಾವರಹಿತನಾಗಿರುವವನು ಸಂಸಾರದಲ್ಲಿಯೇ ಭ್ರಮಣಮಾಡುತ್ತಾನೆಂದು ಈಗ ಹೇಳುತ್ತಾರೆ, –

ಭಾವಸಹಿದೋ ಯ ಮುಣೀಣೋ ಪಾವಇ ಆರಾಹಣಾಚಉಕ್ಕಂ ಚ ।
ಭಾವರಹಿದೋ ಯ ಮುಣಿವರ ಭಮಇ ಚಿರಂ ದೀಹಸಂಸಾರೇ ॥೯೯॥

ಭಾವಸಹಿತಶ್ಚ ಮುನಿನಃ ಪ್ರಾಪ್ನೋತಿ ಆರಾಧನಾಚತುಷ್ಕಂ ಚ ।
ಭಾವರಹಿತಶ್ಚ ಮುನಿವರ ! ಭ್ರಮಂತಿ ಚಿರಂ ದೀರ್ಘಸಂಸಾರೇ ॥೯೯॥

ಅರ್ಥ :– ಎಲೈ ಮುನಿವರನೇ ! ಯಾವನು ಭಾವಸಹಿತನಿದ್ದಾನೆ ಅವನು ದರ್ಶನ–ಜ್ಞಾನ–ಚಾರಿತ್ರ–ತಪವೆಂಬ ನಾಲ್ಕು ಆರಾಧನೆಗಳನ್ನು ಪಡೆಯುತ್ತಾನೆ, ಅವನು ಮುನಿಗಳಲ್ಲಿ ಮುಖ್ಯನಿದ್ದಾನೆ ಮತ್ತು ಯಾವ ಮುನಿಯು ಭಾವರಹಿತನಿದ್ದಾನೆ ಅವನು ಅಧಿಕ ಕಾಲದವರೆಗೆ ದೀರ್ಘ ಸಂಸಾರದಲ್ಲಿ ಭ್ರಮಣ ಮಾಡುತ್ತಾನೆ.

ಭಾವಾರ್ಥ :– ನಿಶ್ಚಯ ಸಮ್ಯಕ್ತ್ವದ ಶುದ್ಧ ಆತ್ಮನ ಅನುಭೂತಿರೂಪವಾದ ಶ್ರದ್ಧೆಯು ಅದು ಭಾವವಿದೆ, ಇಂಥ ಭಾವಸಹಿತನಿರುವವನಿಗೆ ನಾಲ್ಕು ಆರಾಧನೆಗಳಿರುತ್ತವೆ, ಅದರ ಫಲವು ಅರಹಂತ ಸಿದ್ಧಪದಗಳಿವೆ ಮತ್ತು ಇಂಥ ಭಾವಗಳಿಂದ ರಹಿತನಾದವನಿಗೆ ಆರಾಧನೆಗಳಿರುವುದಿಲ್ಲ ಅದರ ಫಲವು ಸಂಸಾರದ ಪರಿಭ್ರಮಣವಿದೆ. ಹೀಗೆ ತಿಳಿದುಕೊಂಡು ಭಾವಶುದ್ಧಮಾಡಿಕೊಳ್ಳಬೇಕೆಂಬ ಉಪದೇಶವಿದೆ. ॥೯೯॥

ಈಗ ಭಾವದ ಫಲವನ್ನೇ ವಿಶೇಷರೂಪದಿಂದ ಹೇಳುತ್ತಾರೆ, –

ಪಾವಂತಿ ಭಾವಸವಣಾ ಕಲ್ಲಾಣಪರಂಪರಾಇಂ ಸೋಕ್ಖಾಇಂ ।
ದುಕ್ಖಾಇಂ ದವ್ವಸವಣಾ ಣರತಿರಿಯಕುದೇವಜೋಣೀಏ ॥೧೦೦॥

---

ಭಾವಸಹಿತ ಮುನಿವರನು ಪಡೆಯುವನು ಆರಾಧನಾ ಚತುಷ್ಕವನು ।
ಭಾವರಹಿತ ಶ್ರಮಣ ಭ್ರಮಿಸುವನು ಚಿರಕಾಲ ದೀರ್ಘ ಸಂಸಾರದಲಿ ॥೯೯॥

ಭಾವಶ್ರಮಣ ಕಲ್ಯಾಣ ಪರಂಪರೆಯುಳ್ಳ ಸುಖಗಳನೆ ಪಡೆಯುವನು ।
ದ್ರವ್ಯಶ್ರಮಣ ನರತಿರ್ಯಕ್ಕುದೇವದಲಿ ದುಃಖಗಳನೆ ಪಡೆಯುವನು ॥೧೦೦॥

ಪ್ರಾಪ್ನುವಂತಿ ಭಾವಶ್ರಮಣಾಃ ಕಲ್ಯಾಣಪರಂಪರಾಃ ಸೌಖ್ಯಾನಿ ।
ದುಃಖಾನಿ ದ್ರವ್ಯಶ್ರಮಣಾಃ ನರತಿರ್ಯಕ್ಕುದೇವಯೋನೌ ॥೧೦೦॥

ಅರ್ಥ ಃ- ಯಾರು ಭಾವಶ್ರಮಣರಿದ್ದಾರೆ, ಭಾವಮುನಿಗಳಿದ್ದಾರೆ ಅವರು ಕಲ್ಯಾಣದ ಪರಂಪರೆಯಿರುವಂಥ ಸುಖಗಳನ್ನು ಪಡೆಯುತ್ತಾರೆ ಮತ್ತು ದ್ರವ್ಯ ಶ್ರಮಣರಿರುವವರು ತಿರ್ಯಂಚ, ಮನುಷ್ಯ ಮತ್ತು ಕುದೇವ ಯೋನಿಗಳಲ್ಲಿ ದುಃಖಗಳನ್ನು ಪಡೆಯುತ್ತಾರೆ.

ಭಾವಾರ್ಥ ಃ- ಸಮ್ಯಗ್ದರ್ಶನಸಹಿತ ಭಾವಮುನಿಯಿರುವವರಂತೂ ಸೋಳಹಕಾರಣ ಭಾವನೆ ಭಾವಿಸಿ ಗರ್ಭ, ಜನ್ಮ,ತಪ, ಜ್ಞಾನ, ನಿರ್ವಾಣವೆಂಬ ಪಂಚಕಲ್ಯಾಣಕಗಳೊಡನೆ ತೀರ್ಥಂಕರರ ಪದವನ್ನು ಪಡೆದು ಮೋಕ್ಷ ಪ್ರಾಪ್ತಮಾಡಿಕೊಳ್ಳುತ್ತಾರೆ ಮತ್ತು ಸಮ್ಯಗ್ದರ್ಶನದಿಂದ ರಹಿತರಾದ ದ್ರವ್ಯಮುನಿಗಳು ತಿರ್ಯಂಚ, ಮನುಷ್ಯ , ಕುದೇವ ಯೋನಿಗಳನ್ನು ಪಡೆಯುತ್ತಾರೆ. ಇದು ಭಾವದ ವಿಶೇಷದಿಂದ ಫಲದ ವಿಶೇಷವಿದೆ. ॥೧೦೦॥

ಅಶುದ್ಧಭಾವದಿಂದ ಅಶುದ್ಧ ಆಹಾರವನ್ನೇ ಮಾಡುವುದರಿಂದ ದುರ್ಗತಿಯನ್ನೇ ಪಡೆಯುತ್ತಾರೆಂದು ಈಗ ಹೇಳುತ್ತಾರೆ, -

ಛಾಯಾಲದೋಸದೂಸಿಯಮಸಣಂ ಗಸಿಉಂ ಅಸುದ್ಧಭಾವೇಣ ।
ಪತ್ತೋ ಸಿ ಮಹಾವಸಣಂ ತಿರಿಯಗಈಏ ಅಣಪ್ಪವಸೋ ॥೧೦೧॥

ಷಟ್‌ಚತ್ವಾರಿಂಶದ್ದೋಷದೂಷಿತಮಶನಂ ಗ್ರಸಿತಂ ಅಶುದ್ಧಭಾವೇನ ।
ಪ್ರಾಪ್ತಃ ಅಸಿ ಮಹಾವ್ಯಸನಂ ತಿರ್ಯಗ್ಗತೌ ಅನಾತ್ಮವಶಃ ॥೧೦೧॥

ಅರ್ಥ ಃ- ಎಲೈ ಮುನಿಯೇ ! ನೀನು ಅಶುದ್ಧ ಭಾವದಿಂದ ನಲವತ್ತಾರು ದೋಷಗಳಿಂದ ದೂಷಿತವಾದ ಅಶುದ್ಧ ಅಶನ(ಆಹಾರ)ವನ್ನು ಸ್ವೀಕರಿಸಿದ ಕಾರಣದಿಂದ ತಿರ್ಯಂಚಗತಿಯಲ್ಲಿ ಪರಾಧೀನನಾಗಿ ಮಹಾನ (ಹಿರಿದಾದ) ವ್ಯಸನ (ಕಷ್ಟವನ್ನು) ಪ್ರಾಪ್ತಮಾಡಿಕೊಂಡಿರುವೆ.

ಭಾವಾರ್ಥ ಃ- ಮುನಿಯು ನಲವತ್ತಾರು ದೋಷಗಳಿಂದ ರಹಿತವಾದ ಶುದ್ಧ ಆಹಾರ ಮಾಡುತ್ತಾನೆ, ಮೂವತ್ತೆರಡು ಅಂತರಾಯಗಳನ್ನು ನಿವಾರಿಸುತ್ತಾನೆ, ಹದಿನಾಲ್ಕು ಮಲದೋಷರಹಿತವಾಗಿ ಮಾಡುತ್ತಾನೆ, ಆದರೆ ಯಾವನು ಮುನಿಯಾಗಿ ಸದೋಷ ಆಹಾರ ಮಾಡುತ್ತಾನೆ ಅವನ ಭಾವ ಕೂಡ ಶುದ್ಧವಿಲ್ಲವೆಂದು ತಿಳಿದು ಬರುತ್ತದೆ. ಅವನಿಗೆ ಹೀಗೆ ಉಪದೇಶ ಮಾಡುತ್ತಾರೆ - ಎಲೈ ಮುನಿಯೇ ! ನೀನು ದೋಷಸಹಿತವಾಗಿ ಅಶುದ್ಧ ಆಹಾರ ಮಾಡುವುದರಿಂದ ತಿರ್ಯಂಚ ಗತಿಯಲ್ಲಿ ಮೊದಲು ಭ್ರಮಣ ಮಾಡಿದೆ ಮತ್ತು ಕಷ್ಟ ಸಹಿಸಿದೆ, ಆದುದರಿಂದ ಭಾವಶುದ್ಧಮಾಡಿ ಶುದ್ಧ ಆಹಾರ ಮಾಡು ಅದರಿಂದ ಪುನಃ ಭ್ರಮಣ ಮಾಡುವುದಿಲ್ಲ, ನಲವತ್ತಾರು ದೋಷಗಳಲ್ಲಿ

---

ನಲವತ್ತಾರು ದೋಷದೂಷಿತಾಹಾರವನು ಅಶುದ್ಧಭಾವದಿಂ ಗ್ರಹಿಸಿದೆ ।
ಸಲೆ ತಿರ್ಯಂಚಗತಿಯಲಿ ಮಹಾವ್ಯಸನ ಪಡೆದೆ ಅನಾತ್ಮವಶದಿಂದ ॥೧೦೧॥

ಹದಿನಾರಂತೂ ಉದ್ಗಮ ದೋಷಗಳಿವೆ, ಅವು ಆಹಾರವನ್ನು ಸಿದ್ಧಪಡಿಸುವವಿವೆ, ಇವು ಶ್ರಾವಕನ ಆಶ್ರಿತವಿವೆ. ಹದಿನಾರು ಉತ್ಪಾದನ ದೋಷಗಳಿವೆ ಇವು ಮುನಿಯ ಆಶ್ರಿತವಿವೆ. ಹತ್ತು ಏಷಣಾದ ದೋಷಗಳಿವೆ, ಇವು ಆಹಾರದ ಆಶ್ರಿತವಿವೆ. ನಾಲ್ಕು ಪ್ರಮಾಣಾದಿಗಳಿವೆ. ಇವುಗಳ ಹೆಸರು ಹಾಗೂ ಸ್ವರೂಪವನ್ನು 'ಮೂಲಾಚಾರ', 'ಆಚಾರಸಾರ' ಗ್ರಂಥಗಳಿಂದ ತಿಳಿದುಕೊಳ್ಳಬೇಕು. ||೧೦೧||

ಈಗ ಮತ್ತೆ ಹೇಳುತ್ತಾರೆ.

ಸಚಿತ್ತ ಭತ್ತಪಾಣಂ ಗಿದ್ಧೀಂ ದಪ್ಪೇಣಽಧೀ ಪಭುತ್ತೂಣ ।
ಪತ್ತೋ ಸಿ ತಿವ್ವದುಕ್ಖಂ ಅಣಾಇಕಾಲೇಣ ತಂ ಚಿಂತ ||೧೦೨||

ಸಚಿತ್ತಭಕ್ತಪಾನಂ ಗೃದ್ಧ್ಯಾ ದರ್ಪೇಣ ಅಧೀಃ ಪ್ರಭುಜ್ಯ ।
ಪ್ರಾಪ್ತೋಽಸಿ ತೀವ್ರದುಃಖಂ ಅನಾದಿಕಾಲೇನ ತ್ವಂ ಚಿಂತಯ ||೧೦೨||

ಅರ್ಥ ಃ- ಎಲೈ ಜೀವನೇ ! ನೀನು ದುರ್ಬುದ್ಧಿ(ಅಜ್ಞಾನಿ)ಯಾಗಿ ಅತಿಚಾರಸಹಿತ ಮತ್ತು ಅತ್ಯಂತ ಗರ್ವದಿಂದ (ಉದ್ಧತತನದಿಂದ) ಸಚಿತ್ತ ಭೋಜನ ಹಾಗೂ ಪಾನ, ಜೀವಸಹಿತವಾಗಿ ಆಹಾರ ನೀರು ಸ್ವೀಕರಿಸಿ ಅನಾದಿಕಾಲದಿಂದ ತೀವ್ರ ದುಃಖವನ್ನು ಪಡೆದಿರುವುದರ ಚಿಂತನೆ ಮಾಡು-ವಿಚಾರ ಮಾಡು.

ಭಾವಾರ್ಥ ಃ- ಅನಾದಿಕಾಲದಿಂದ ಎಲ್ಲಿಯವರೆಗೆ ಅಜ್ಞಾನಿಯಾಗಿ ಉಳಿದೆ ಜೀವದ ಸ್ವರೂಪವನ್ನು ತಿಳಿಯಲಿಲ್ಲ ಅಲ್ಲಿಯವರೆಗೆ ಸಚಿತ್ತ (ಜೀವಸಹಿತ) ಆಹಾರ ನೀರುಗಳನ್ನು ಸ್ವೀಕರಿಸುತ್ತ ಸಂಸಾರದಲ್ಲಿ ತೀವ್ರ ನರಕಾದಿಗಳ ದುಃಖವನ್ನು ಪಡೆದಿರುವೆ. ಈಗ ಮುನಿಯಾಗಿ ಭಾವಶುದ್ಧಮಾಡಿ ಸಚಿತ್ತವಾದ ಆಹಾರ ಪಾನೀಯಗಳನ್ನು ಸ್ವೀಕರಿಸಬೇಡ, ಇಲ್ಲದಿದ್ದರೆ ಪುನಃ ಮೊದಲಿನ ಹಾಗೆ ದುಃಖವನ್ನು ಭೋಗಿಸುವೆಯೆಂದು ಮುನಿಗೆ ಉಪದೇಶ ಮಾಡುತ್ತಾರೆ. ||೧೦೨||

ಈಗ ಮತ್ತೆ ಹೇಳುತ್ತಾರೆ, -

ಕಂದಂ ಮೂಲಂ ಬೀಯಂ ಪುಪ್ಫಂ ಪತ್ತಾದಿ ಕಿಂಚಿ ಸಚ್ಚಿತ್ತಂ ।
ಅಸಿಊಣ ಮಾಣಗವ್ವಂ ಭಮಿಓ ಸಿ ಅಣಂತಸಂಸಾರೇ ||೧೦೩||

ಕಂದಂ ಮೂಲಂ ಬೀಜಂ ಪುಷ್ಪಂ ಪತ್ರಾದಿ ಕಿಂಚಿತ್ ಸಚಿತ್ತಮ್ ।
ಅಶಿತ್ವಾ ಮಾನಗರ್ವೇ ಭ್ರಮಿತಃ ಅಸಿ ಅನಂತಸಂಸಾರೇ ||೧೦೩||

ಅರ್ಥ ಃ- ಕಂದ ಸ್ವರ್ಣಗಡ್ಡೆ ಮೊದಲಾದ, ಬೀಜ ಕಡಲೆ ಮೊದಲಾದ ಅನ್ನಾದಿಗಳು, ಮೂಲ ಶುಂಠೀ ಮೂಲಂಗೀ ಗಜ್ಜರೆ ಮೊದಲಾದ, ಪುಷ್ಪ, ಹೂವು, ಪತ್ರ ವೀಳೆದೆಲೆ ಮೊದಲಾದುವನ್ನು ಮೊದಲು ಮಾಡಿಕೊಂಡು

---

ನೀನು ಸಚಿತ್ತ ಅಶನಪಾನಗಳನು ಅಜ್ಞಾನ ಗೃದ್ಧಿ ದರ್ಪದಿಂ ಮಾಡುತ್ತ ।
ಅನಾದಿಕಾಲದಿಂ ತೀವ್ರ ದುಃಖ ಪಡೆದಿರುವುದರ ವಿಚಾರವನು ಮಾಡು ||೧೦೨||

ನೀನು ಕಂದ-ಮೂಲ ಬೀಜ ಪುಷ್ಪಪತ್ರ ಮೊದಲಾದ ಕಿಂಚಿತ್ಸಚಿತ್ತಗಳನು ।
ಮಾನಮದದಿಂದ ಭಕ್ಷಿಸಿ ಭ್ರಮಣಮಾಡಿದೆ ಅನಂತಸಂಸಾರದೊಳಗೆ ||೧೦೩||

ಬೇರೆ ಯಾವುದೇ ಸಚಿತ್ತ ವಸ್ತುವನ್ನು ಮಾನ(ಗರ್ವ)ದಿಂದ ಭಕ್ಷಣೆ ಮಾಡಿದೆ. ಆದರಿಂದ ಎಲೈ ಜೀವನೇ ! ನೀನು ಅನಂತ ಸಂಸಾರದಲ್ಲಿ ಭ್ರಮಣ ಮಾಡಿದೆ.

ಭಾವಾರ್ಥ ೞ- ಕಂದಮೂಲ ಮೊದಲಾದ ಸಚಿತ್ತಗಳು ಅನಂತ ಜೀವಗಳ ಕಾಯವಿವೆ ಮತ್ತು ಬೇರೆ ವನಸ್ಪತಿ ಬೀಜಾದಿಗಳು ಸಚಿತ್ತವಿದ್ದು ಅವನ್ನು ಭಕ್ಷಣೆ ಮಾಡಿದೆ. ಮೊದಲಂತೂ ನಾವು ತಪಸ್ವಿಗಳಿದ್ದೇವೆ, ನಮಗೆ ಮನೆಮಾರುಗಳಿಲ್ಲ, ವನದ ಫಲಪುಷ್ಪಾದಿಗಳನ್ನು ತಿಂದು ತಪಸ್ಸು ಮಾಡುತ್ತೇವೆಂದು ಮನ್ನಿಸಿ ಮಿಥ್ಯಾದೃಷ್ಟಿ ತಪಸ್ವಿಯಾಗಿ ಭಕ್ಷಿಸಿದೆ ಮತ್ತು ಗರ್ವದಿಂದ ಉದ್ಧತನಾಗಿ ದೋಷಗಳನ್ನು ತಿಳಿದುಕೊಳ್ಳದೆ ಸ್ವಚ್ಛಂದನಾಗಿ ಸರ್ವಭಕ್ಷಕನಾದೆ. ಹೀಗೆ ಈ ಜೀವನು ಆ ಕಂದಮೂಲಾದಿಗಳನ್ನು ತಿಂದು ಸಂಸಾರದಲ್ಲಿ ಭ್ರಮಣ ಮಾಡಿದನು. ಈಗ ಮುನಿಯಾಗಿ ಇವುಗಳ ಭಕ್ಷಣ ಮಾಡಬೇಡೆಂಬ ಉಪದೇಶವಿದೆ. ಅನ್ಯಮತದ ತಪಸ್ವಿಗಳು ಕಂದಮೂಲ ಮೊದಲಾದ ಫಲ-ಪುಷ್ಪಗಳನ್ನು ತಿಂದು ತಮ್ಮನ್ನು ಶ್ರೇಷ್ಠರೆಂದು ಮನ್ನಿಸುತ್ತಾರೆ, ಅವರ ನಿಷೇಧವಿದೆ. ॥೧೦೩॥

ಈಗ ವಿನಯ ಮೊದಲಾದವುಗಳ ಉಪದೇಶ ಮಾಡುತ್ತಾರೆ, ಮೊದಲು ವಿನಯದ ವರ್ಣನೆಯಿದೆ, -

ವಿಣಯಂ ಪಂಚಪಯಾರಂ ಪಾಲಹಿ ಮಣವಯಣಕಾಯಜೋಏಣ ।
ಅವಿಣಯಣರಾ ಸುವಿಹಿಯಂ ತತ್ತೋ ಮುತ್ತಿಂ ನ ಪಾವಂತಿ ॥೧೦೪॥

ವಿನಯಃ ಪಂಚಪ್ರಕಾರಂ ಪಾಲಯ ಮನೋವಚನಕಾಯಯೋಗೇನ ।
ಅವಿನತನರಾಃಸುವಿಹಿತಾಂ ತತೋ ಮುಕ್ತಿಂ ನ ಪ್ರಾಪ್ನುವಂತಿ ॥೧೦೪॥

ಅರ್ಥ ೞ- ಎಲೈ ಮುನಿಯೇ ! ಆ ಕಾರಣದಿಂದ ಅವಿನಯಿಯಾದ ಮನುಷ್ಯನು ಒಳ್ಳೆಯ ಪ್ರಕಾರ ವಿಹಿತವಿರುವ ಆ ಮುಕ್ತಿಯನ್ನು ಪಡೆಯುವುದಿಲ್ಲ ಎಂದರೆ ಅಭ್ಯುದಯಕರವಾದ ತೀರ್ಥಂಕರಾದಿಗಳೊಡನೆ ಮುಕ್ತಿಯನ್ನು ಪಡೆಯುವುದಿಲ್ಲ. ಆದುದರಿಂದ ಕೈ ಮುಗಿಯುವುದು, ಪಾದಗಳಲ್ಲಿ ಮಣಿಯುವುದು, ಬಂದಮೇಲೆ ಎದ್ದು ನಿಲ್ಲುವುದು, ಎದುರು ಹೋಗುವುದು ಮತ್ತು ಅನುಕೂಲ ವಚನಗಳನ್ನಾಡುವುದು ಇವು ಐದು ಪ್ರಕಾರದ ವಿನಯಗಳಿವೆ. ಅಥವಾ ಜ್ಞಾನ, ದರ್ಶನ, ಚಾರಿತ್ರ, ತಪ ಮತ್ತು ಇವುಗಳ ಧಾರಕರಿರುವ ಪುರುಷರ ವಿನಯ ಮಾಡುವುದು, ಹೀಗೆ ಐದು ಪ್ರಕಾರದ ವಿನಯವನ್ನು ನೀನು ಮನ, ವಚನ, ಕಾಯವೆಂಬ ಮೂರೂ ಯೋಗಗಳಿಂದ ಪಾಲನೆ ಮಾಡೆಂದು ನಾವು ಉಪದೇಶ ಮಾಡುತ್ತೇವೆ.

ಭಾವಾರ್ಥ ೞ- ವಿನಯವಿಲ್ಲದೆ ಮುಕ್ತಿಯಿಲ್ಲ, ಆದುದರಿಂದ ವಿನಯದ ಉಪದೇಶವಿದೆ. ವಿನಯದಲ್ಲಿ ದೊಡ್ಡ ಗುಣಗಳಿವೆ, ಜ್ಞಾನದ ಪ್ರಾಪ್ತಿಯಾಗುತ್ತದೆ, ಮಾನಕಷಾಯದ ನಾಶವಾಗುತ್ತದೆ, ಶಿಷ್ಟಾಚಾರದ ಪಾಲನವಾಗುತ್ತದೆ ಮತ್ತು ಕಲಹದ ನಿವಾರಣೆಯಾಗುತ್ತದೆ, ಇತ್ಯಾದಿಗಳು ವಿನಯದ ಗುಣಗಳೆಂದು ತಿಳಿಯಬೇಕು. ಆದುದರಿಂದ ಸಮ್ಯಗ್ದರ್ಶನ ಮೊದಲಾದವುಗಳಿಂದ ಶ್ರೇಷ್ಠರಿರುವವರ ವಿನಯ ಮಾಡೆಂಬ ಉಪದೇಶವಿದೆ, ಮತ್ತು ಯಾರು ವಿನಯವಿಲ್ಲದೆ ಜಿನಮಾರ್ಗದಲ್ಲಿ ಭ್ರಷ್ಟರಾಗಿದ್ದಾರೆ, ವಸ್ತ್ರಾದಿಗಳೊಡನೆ ಮೋಕ್ಷಮಾರ್ಗವನ್ನು ಮನ್ನಿಸಲಾರಂಭಿಸಿದ್ದಾರೆ ಅವರುಗಳ ನಿಷೇಧವಿದೆ. ॥೧೦೪॥

---

ವಿನಯವನು ಪಂಚಪ್ರಕಾರದಿಂದ ಪಾಲಿಪುದು ಮನವಚಕಾಯಯೋಗದಿಂ ।
ಮನುಜ ತಾನವಿನೀತನಿದ್ದರೆ ಸುವಿಹಿತಮುಕ್ತಿಯನು ತಾ ಪಡೆಯನು ॥೧೦೪॥

ಈಗ ಭಕ್ತಿರೂಪ ವೈಯಾವೃತ್ಯದ ಉಪದೇಶ ಮಾಡುತ್ತಾರೆ, –

**ಣಿಯಸತ್ತೀಏ ಮಹಾಜಸ ಭತ್ತೀರಾಏಣ ಣಿಚ್ಚಕಾಲಮ್ಮಿ ।**
**ತಂ ಕುಣ ಜಿಣಭತ್ತಿಪರಂ ವಿಜ್ಜಾವಚ್ಚಂ ದಸವಿಯಪ್ಪಂ ।।೧೦೫।।**

**ನಿಜಶಕ್ತ್ಯಾ ಮಹಾಯಶಃ ! ಭಕ್ತಿರಾಗೇಣ ನಿತ್ಯಕಾಲೇ ।**
**ತ್ವಂ ಕುರು ಜಿನಭಕ್ತಿಪರಂ ವೈಯಾವೃತ್ಯಂ ದಶವಿಕಲ್ಪಮ್ ।।೧೦೫।।**

ಅರ್ಥ ೞ– ಎಲೈ ಮಹಾಯಶನೇ ! ಎಲೈ ಮುನಿಯೇ ! ನೀನು ಜಿನಭಕ್ತಿಯಲ್ಲಿ ತತ್ಪರನಾಗಿ ಭಕ್ತಿಯ ರಾಗಪೂರ್ವಕ ಆ ಹತ್ತು ಭೇದರೂಪದ ವೈಯಾವೃತ್ಯವನ್ನು ಸದಾಕಾಲ ನಿನ್ನ ಶಕ್ತಿಗೆ ಅನುಸರಿಸಿ ಮಾಡು. 'ವೈಯಾವೃತ್ಯ'ದ ಇತರ ದುಃಖ (ಕಷ್ಟ)ಗಳು ಬಂದಮೇಲೆ ಅದರ ಸೇವೆ ದಾಸ್ಯ ಮಾಡುವುದಕ್ಕೆ ಹೇಳುತ್ತಾರೆ. ೧) ಆಚಾರ್ಯ, ೨) ಉಪಾಧ್ಯಾಯ, ೩) ತಪಸ್ವೀ, ೪) ಶೈಕ್ಷ್ಯ, ೫) ಗ್ಲಾನ, ೬)ಗಣ, ೭) ಕುಲ, ೮) ಸಂಘ, ೯) ಸಾಧು, ೧೦) ಮನೋಜ್ಞ ಇವು ಹತ್ತು ಮುನಿಯ ಭೇದಗಳಿವೆ. ಇವರ ವೈಯಾವೃತ್ಯ ಮಾಡುತ್ತಿರುವುದರಿಂದ ಹತ್ತು ಭೇದ ಹೇಳಿದ್ದಾರೆ, –

ತಮ್ಮ ದೋಷವನ್ನು ಗುರುಗಳ ಹತ್ತಿರ ಹೇಳುವಂಥ ಗರ್ಹಾದ ಉಪದೇಶವನ್ನೀಗ ಮಾಡುತ್ತಾರೆ, –

**ಜಂ ಕಿಂಚಿಂ ಕಯಂ ದೋಸಂ ಮಣವಯಕಾಏಹಿಂ ಅಸುಹಭಾವೇಣಂ ।**
**ತಂ ಗರಹಿ ಗುರುಸಯಾಸೇ ಗಾರವ ಮಾಯಂ ಚ ಮೋತ್ತೂಣ ।।೧೦೬।।**

**ಯಃ ಕಶ್ಚಿತ್ ಕೃತಃ ದೋಷಃ ಮನೋವಚಃ ಕಾಯೈಃ ಅಶುಭಭಾವೇನ ।**
**ತಂ ಗರ್ಹಂ ಗುರುಸಕಾಶೇ ಗಾರವಂ ಮಾಯಾಂ ಚ ಮುಕ್ತ್ವಾ ।।೧೦೬।।**

ಅರ್ಥ ೞ– ಎಲೈ ಮುನಿಯೇ ! ಮನ–ವಚನ–ಕಾಯಗಳ ಮುಖಾಂತರ ಆಶುಭ ಭಾವಗಳಿಂದ ಪ್ರತಿಜ್ಞೆಯಲ್ಲಿ ಅಲ್ಪಸ್ವಲ್ಪ ದೋಷ ತಗಲಿದ್ದರೆ ಅದನ್ನು ಗುರುಗಳ ಹತ್ತಿರ ತನ್ನ ಗೌರವ (ಶ್ರೇಷ್ಠತೆಯ ಗರ್ವ)ವನ್ನು ಬಿಟ್ಟುಕೊಟ್ಟು ಮತ್ತು ಮಾಯೆಯನ್ನು (ಕಪಟವನ್ನು)ಬಿಟ್ಟುಕೊಟ್ಟು ಮನ–ವಚನ–ಕಾಯಗಳನ್ನು ಸರಳ ಮಾಡಿ ಗರ್ಹಾ ಮಾಡು ಎಂದರೆ ವಚನದಿಂದ ಪ್ರಕಟಮಾಡು.

ಭಾವಾರ್ಥ ೞ– ತಮಗೆ ಯಾವುದಾದರೂ ದೋಷವು ತಗಲಿದ್ದರೆ ಮತ್ತು ನಿಷ್ಕಪಟರಾಗಿ ಗುರುಗಳಿಗೆ ಹೇಳಿದರೆ ಆ ದೋಷವು ನಿವೃತ್ತವಾಗಿ ಹೋಗುವುದು. ಒಂದುವೇಳೆ ತಾವು ಶಲ್ಯವುಳ್ಳವರಾಗಿ ಉಳಿದರೆ ಮುನಿ ಪದದಲ್ಲಿ ಇದು ದೊಡ್ಡ ದೋಷವಿದೆ, ಆದುದರಿಂದ ತಮ್ಮ ದೋಷ ಬಚ್ಚಿಡಬಾರದು, ಹೇಗಿದೆ ಹಾಗೆ ಸರಳ ಬುದ್ಧಿಯಿಂದ ಗುರುಗಳ ಹತ್ತಿರ ಹೇಳಿದಾಗ ದೋಷವು ದೂರವಾಗುವುದೆಂಬ ಉಪದೇಶವಿದೆ. ಕಾಲದ ನಿಮಿತ್ತವಾಗಿ ಮುನಿಪದದಿಂದ

---

ನಿಜಶಕ್ತಿಯಿಂದೆಲೆ ಮಹಾಶಯ ! ಭಕ್ತಿರಾಗದಿಂದಲೇ ನಿತ್ಯಕಾಲದೊಳು ।
ಆ ಜಿನಭಕ್ತಿರತನಾಗಿ ದಶಭೇದ ವೈಯಾವೃತ್ಯಮಂ ನೀನು ಆಚರಿಸು ।।೧೦೫।।

ಮನವಚನಕಾಯದಿಂ ಅಶುಭಭಾವದಿಂ ಮಾಡಿದ ಆ ಕೆಲವು ದೋಷಗಳ ।
ನೀನು ಗುರುಗಳ ಹತ್ತಿರ ಹೋಗಿ ಮಾನಮಾಯೆಯನುಬಿಟ್ಟುಮಾಡುಗರ್ಹಣ ।।೧೦೬।।

ಭ್ರಷ್ಟವಾಗುವುದು, ಮತ್ತು ಗುರುಗಳ ಹತ್ತಿರ ಪ್ರಾಯಶ್ಚಿತ್ತ ಮಾಡಿಕೊಳ್ಳದಿದ್ದಾಗ ವಿಪರೀತವಾಗಿ ಬೇರೆ ಸಂಪ್ರದಾಯ ಮಾಡಿಕೊಂಡಿರುವಂಥ ವಿಪರ್ಯಯವಾಗಿದೆ. ॥೧೦೬॥

ಈಗ ಕ್ಷಮೆಯ ಉಪದೇಶ ಮಾಡುತ್ತಾರೆ, –

**ದುಜ್ಜಣವಯಣಚಡಕ್ಕಂ ಣಿಟ್ಠುರಕಡುಯಂ ಸಹಂತಿ ಸಪ್ಪುರಿಸಾ ।**
**ಕಮ್ಮಮಲಣಾಸಣಟ್ಠಂ ಭಾವೇಣ ಯ ಣಿಮ್ಮಮಾ ಸವಣಾ ॥೧೦೭॥**

**ದುರ್ಜನವಚನಚಪೇಟಾಂ ನಿಷ್ಠುರಕಟುಕಂ ಸಹಂತೇ ಸತ್ಪುರುಷಾಃ ।**
**ಕರ್ಮಮಲನಾಶನಾರ್ಥಂ ಭಾವೇನ ಚ ನಿರ್ಮಮಾಃ ಶ್ರಮಣಾಃ ॥೧೦೭॥**

ಅರ್ಥ ಃ– ಸತ್ಪುರುಷರಾದ ಮುನಿಗಳು ದುರ್ಜನರ ವಚನರೂಪದ ಆಘಾತವನ್ನು ಆ ನಿಷ್ಠುರ (ಕಠೋರ) ದಯಾರಹಿತ ಮತ್ತು ಕಠೋರ ಎಂದರೆ ಕೇಳುತ್ತಿರುವಂತೆಯೇ ಕಿವಿಗಳಲ್ಲಿ ತೀಕ್ಷ್ಣಶೂಲದ ತಿವಿತದಂತೆನಿಸುವ ಆಘಾತವನ್ನು ಸಹಿಸುತ್ತಾರೆ. ಅವರು ಕರ್ಮಗಳ ನಾಶಮಾಡುವ ಸಲುವಾಗಿ ಇಂಥದನ್ನು ಸಹಿಸುತ್ತಾರೆ. ಮೊದಲು ಅಶುಭ ಕರ್ಮವು ಕಟ್ಟಿತ್ತು ಆದರ ನಿಮಿತ್ತದಿಂದ ದುರ್ಜನನು ಕಟೂಕ್ತಿಗಳನ್ನಾಡಿದ್ದಾನೆ, ನಾನು ಕೇಳಿದ್ದೇನೆ, ಅದನ್ನು ತಾನು ಉಪಶಮ ಪರಿಣಾಮದಿಂದ ಸಹಿಸಿದರೆ ಅಶುಭಕರ್ಮದ ಉದಯವಿದ್ದುದು ಹೊರಟುಹೋಗುವುದು. ಇಂಥ ಕಟೂಕ್ತಿಗಳನ್ನು ಸಹಿಸುವುದರಿಂದ ಕರ್ಮದ ನಾಶವಾಗುತ್ತದೆ.

ಆ ಮುನಿಸತ್ಪುರುಷರು ತಮ್ಮ ಭಾವದಿಂದ ವಚನಾದಿಗಳಿಂದ ನಿರ್ಮಮತ್ವರಿದ್ದಾರೆ. ವಚನದಿಂದ ಮಾನ ಕಷಾಯದಿಂದ ಮತ್ತು ದೇಹಾದಿಗಳಿಂದ ಮಮತೆಯಿಲ್ಲದವರಿದ್ದಾರೆ. ಮಮತ್ವವಿದ್ದರೆ ದುರ್ವಚನಗಳನ್ನು ಸಹಿಸುವುದಾಗುವುದಿಲ್ಲ. ಇವನು ನನಗೆ ದುರ್ವಚನಗಳನ್ನಾಡಿದನೆಂಬುದನ್ನು ತಿಳಿಯುವುದಿಲ್ಲ. ಆದುದರಿಂದ ಮಮತೆಯ ಅಭಾವದಿಂದ ದುರ್ವಚನಗಳನ್ನು ಸಹಿಸುತ್ತಾರೆ. ಅದಕ್ಕಾಗಿ ಮುನಿಯಾಗಿ ಯಾರಮೇಲೆ ಕ್ರೋಧ ಮಾಡಬೇಡವೆಂಬ ಉಪದೇಶವಿದೆ. ಲೌಕಿಕದಲ್ಲಿ ಕೂಡ ದೊಡ್ಡ ಪುರುಷರು ದುರ್ವಚನಗಳನ್ನು ಕೇಳಿ ಕ್ರೋಧ ಮಾಡುವುದಿಲ್ಲವೆಂದ ಮೇಲೆ ಮುನಿಯು ಸಹಿಸುವುದು ಉಚಿತವೇ ಇದೆ. ಕ್ರೋಧ ಮಾಡುವವರು ಹೇಳುವುದಕ್ಕೆ ಮಾತ್ರ ತಪಸ್ವಿಗಳಿದ್ದಾರೆ, ಆದರೆ ನಿಜವಾದ ತಪಸ್ವಿಗಳಿಲ್ಲ. ॥೧೦೭॥

ಈಗ ಕ್ಷಮೆಯ ಫಲವನ್ನು ಹೇಳುತ್ತಾರೆ, –

**ಪಾವಂ ಖವಇ ಅಸೇಸಂ ಖಮಾಏ ಪಡಿಮಂಡಿಓ ಯ ಮುಣಿಪವರೋ ।**
**ಖೇಯರಅಮರಣರಾಣಂ ಪಸಂಸಣೀಓ ಧುವಂ ಹೋಇ ॥೧೦೮॥**

---

ದುರಜನರ ನಿಷ್ಠುರ ಕಟುಕಮಾತಿನೇಟು ಸಹಿಸುವರು ಸತ್ಪುರುಷರು ।
ನಿರಮಮಭಾವಯುತರಾದ ಶ್ರಮಣರು ಕರ್ಮಮಲನಾಶನಾರ್ಥವಾಗಿ ॥೧೦೭॥

ಮುನಿಪ್ರವರ ಪರಿಮಂಡಿತ ಕ್ಷಮೆಯಿಂದ ಅಶೇಷಪಾಪ ಕ್ಷಯಿಸುವರು ।
ಮನುಜಾಮರ ವಿದ್ಯಾಧರರಿಂದ ನಿಶ್ಚಯದಿ ಪ್ರಶಂಸಾಪಾತ್ರರಾಗುವರು ॥೧೦೮॥

ಪಾಪಂ ಕ್ಷಿಪತಿ ಅಶೇಷಂ ಕ್ಷಮಯಾ ಪರಿಮಂಡಿತಃ ಚ ಮುನಿಪ್ರವರಃ ।
ಖೇಚರಾಮರನರಾಣಾಂ ಪ್ರಶಂಸನೀಯಃ ಧ್ರುವಂ ಭವತಿ ॥೧೦೮॥

ಅರ್ಥ :- ಯಾವ ಮುನಿಪ್ರವರನು (ಮುನಿಗಳಲ್ಲಿ ಶ್ರೇಷ್ಠನು ಮುಖ್ಯನು) ಕ್ರೋಧದ ಅಭಾವರೂಪವಾದ ಕ್ಷಮೆಯಿಂದ ಮಂಡಿತನಿದ್ದಾನೆ ಆ ಮುನಿಯು ಸಮಸ್ತ ಪಾಪಗಳ ಕ್ಷಯ ಮಾಡುತ್ತಾನೆ. ಮತ್ತು ವಿದ್ಯಾಧರ, ದೇವ, ಮನುಷ್ಯರುಗಳಿಂದ ನಿಶ್ಚಯವಾಗಿ ಪ್ರಶಂಸೆ ಮಾಡಲು ಯೋಗ್ಯನಿರುತ್ತಾನೆ.

ಭಾವಾರ್ಥ :- ಕ್ಷಮಾಗುಣವು ಹೆಚ್ಚು ಮುಖ್ಯವಿರುವುದರಿಂದ ಎಲ್ಲರಿಂದ ಸ್ತುತಿಮಾಡಿಸಿಕೊಳ್ಳಲು ಯೋಗ್ಯ ಪುರುಷನಾಗುತ್ತಾನೆ. ಯಾರು ಮುನಿಗಳಿದ್ದಾರೆ ಅವರಿಗೆ ಉತ್ತಮ ಕ್ಷಮೆಯಿರುತ್ತದೆ, ಅವರಂತೂ ಎಲ್ಲ ಮನುಷ್ಯ, ದೇವ, ವಿದ್ಯಾಧರರುಗಳಿಂದ ಸ್ತುತಿಯೋಗ್ಯರೇ ಇರುತ್ತಾರೆ ಮತ್ತು ಅವರಿಗೆ ಎಲ್ಲ ಪಾಪಗಳ ಕ್ಷಯವಾಗುವುದರಿಂದ ಕ್ಷಮೆ ಮಾಡುವುದು ಯೋಗ್ಯವಿದೆಯೆಂಬ ಉಪದೇಶವಿದೆ. ಕ್ರೋಧಿಯು ಎಲ್ಲರ ನಿಂದೆಗೆ ಯೋಗ್ಯನಿರುವುದರಿಂದ ಕ್ರೋಧವನ್ನು ಬಿಡುವುದು ಉತ್ತಮವಿದೆ. ॥೧೦೮॥

ಹೀಗೆ ಕ್ಷಮಾಗುಣವನ್ನು ತಿಳಿದುಕೊಂಡು ಕ್ಷಮೆ ಮಾಡುವುದು ಮತ್ತು ಕ್ರೋಧವನ್ನು ಬಿಡಬೇಕೆಂದು ಈಗ ಹೇಳುತ್ತಾರೆ, -

**ಇಯ ಣಾಊಣ ಖಮಾಗುಣ ಖಮೇಹಿ ತಿವಿಹೇಣ ಸಯಲ ಜೀವಾಣಂ ।**
**ಚಿರಸಂಚಿಯಕೋಹಸಿಹಿಂ ವರಖಿಮಸಲಿಲೇಣ ಸಿಂಚೇಹ ॥೧೦೯॥**

ಇತಿ ಜ್ಞಾತ್ವಾ ಕ್ಷಮಾಗುಣ ! ಕ್ಷಮಸ್ವ ತ್ರಿವಿಧೇನ ಸಕಲಜೀವಾನ್ ।
ಚಿರಸಂಚಿತಕ್ರೋಧಶಿಖಿನಂ ವರಕ್ಷಮಾಸಲಿಲೇನ ಸಿಂಚ ॥೧೦೯॥

ಅರ್ಥ :- ಎಲೈ ಕ್ಷಮಾಗುಣಮುನಿಯೇ ! (ಕ್ಷಮಾಗುಣವಿರುವಂಥ ಮುನಿಯ ಸಂಬೋಧನೆಯಿದೆ) ಇತಿ ಎಂದರೆ ಪೂರ್ವೋಕ್ತ ಪ್ರಕಾರದಿಂದ ಕ್ಷಮಾಗುಣವನ್ನು ತಿಳಿ ಮತ್ತು ಸಮಸ್ತ ಜೀವಗಳ ಮೇಲೆ ಮನ ವಚನಕಾಯದಿಂದ ಕ್ಷಮೆ ಮಾಡು ಆದರಂತೆ ಅಧಿಕಕಾಲದಿಂದ ಸಂಗ್ರಹಿತವಾದ ಕ್ರೋಧರೂಪವಾದ ಅಗ್ನಿಯನ್ನು ಕ್ಷಮಾರೂಪದ ಜಲದಿಂದ ಪ್ರೋಕ್ಷಣೆ ಮಾಡು ಎಂದರೆ ಶಮನ ಮಾಡು.

ಭಾವಾರ್ಥ :- ಕ್ರೋಧರೂಪದ ಅಗ್ನಿಯು ಪುರುಷನ ಒಳ್ಳೆಯ ಗುಣಗಳನ್ನು ದಗ್ಧಮಾಡುವಂಥದ್ದಿದೆ ಮತ್ತು ಪರಜೀವಗಳ ಘಾತಮಾಡುವಂಥದ್ದಿದೆ, ಆದುದರಿಂದ ಇದನ್ನು ಕ್ಷಮಾರೂಪದ ಜಲದಿಂದ ನಂದಿಸಬೇಕು, ಬೇರೆ ಪ್ರಕಾರದಿಂದ ಇದು ನಂದುವುದಿಲ್ಲ ಮತ್ತು ಕ್ಷಮಾಗುಣವು ಎಲ್ಲ ಗುಣಗಳಲ್ಲಿ ಮುಖ್ಯವಿದೆ. ಆದುದರಿಂದ ಕ್ರೋಧವನ್ನು ಬಿಟ್ಟುಕೊಟ್ಟು ಕ್ಷಮೆಯನ್ನು ಗ್ರಹಣ ಮಾಡಬೇಕೆಂಬ ಉಪದೇಶವಿದೆ. ॥೧೦೯॥

ಈಗ ದೀಕ್ಷಾಕಾಲಾದಿಗಳ ಭಾವನೆಯ ಉಪದೇಶ ಮಾಡುತ್ತಾರೆ, -

---

ಅರಿತು ಕ್ಷಮಾಗುಣಧರ ! ಕ್ಷಮಿಸು ತ್ರಿವಿಧದಿ ಸಕಲಜೀವಗಳನು ।
ಚಿರಸಂಚಿತಕ್ರೋಧಾಗ್ನಿಯನು ನೀನು ಉತ್ತಮಕ್ಷಮಾಗುಣದಿಂದ ಶಮಿಸು ॥೧೦೯॥

**ದಿಕ್ಖಾಕಾಲಾಈಯಂ ಭಾವಹಿ ಅವಿಯಾರದಂಸಣವಿಸುದ್ಧೋ ।**
**ಉತ್ತಮ ಬೋಹಿಣಿಮಿತ್ತಂ ಅಸಾರಸಾರಾಣಿ ಮುಣಿಊಣ ॥೧೧೦॥**

**ದೀಕ್ಷಾಕಾಲಾದಿಕಂ ಭಾವಯ ಅವಿಕಾರದರ್ಶನವಿಶುದ್ಧಃ।**
**ಉತ್ತಮಬೋಧಿನಿಮಿತ್ತಂ ಅಸಾರಸಾರಾಣಿ ಜ್ಞಾತ್ವಾ ॥೧೧೦॥**

ಅರ್ಥ ಃ– ಎಲೈ ಮುನಿಯೇ ! ನೀನು ಸಂಸಾರವನ್ನು ಅಸಾರವೆಂದು ತಿಳಿದುಕೊಂಡು ಉತ್ತಮ ಬೋಧಿ ಎಂದರೆ ಸಮ್ಯಗ್ದರ್ಶನ–ಜ್ಞಾನ–ಚಾರಿತ್ರದ ಪ್ರಾಪ್ತಿಯ ನಿಮಿತ್ತದಿಂದ ಅವಿಕಾರ ಎಂದರೆ ಅತಿಚಾರರಹಿತ ನಿರ್ಮಲ ಸಮ್ಯಗ್ದರ್ಶನ ಸಹಿತನಾಗಿ ದೀಕ್ಷಾಕಾಲ ಮೊದಲಾದವುಗಳನ್ನು ಭಾವಿಸು.

ಭಾವಾರ್ಥ ಃ– ದೀಕ್ಷೆ ತೆಗೆದುಕೊಳ್ಳುವಾಗ ಸಂಸಾರ, (ಶರೀರ) ಭೋಗಗಳನ್ನು (ವಿಶೇಷವಾಗಿ) ಅಸಾರವೆಂದು ತಿಳಿದುಕೊಂಡು ಅತ್ಯಂತ ವೈರಾಗ್ಯ ಉತ್ಪನ್ನವಾಗುತ್ತದೆ ಅದರಂತೆ ಅದರ ಆದಿಶಬ್ದದಿಂದ ರೋಗೋತ್ಪತ್ತಿ ಮರಣಕಾಲಾದಿಗಳನ್ನು ತಿಳಿಯುವುದು. ಆ ಸಮಯದಲ್ಲಿ ಹೇಗೆ ಭಾವಗಳಿರುವವು ಹಾಗೆಯೇ ಸಂಸಾರವನ್ನು ಅಸಾರವೆಂದು ತಿಳಿದುಕೊಂಡು ವಿಶುದ್ಧ ಸಮ್ಯಗ್ದರ್ಶನ ಸಹಿತನಾಗಿ ಉತ್ತಮ ಬೋಧಿ ಅದರಿಂದ ಕೇವಲಜ್ಞಾನವು ಉತ್ಪನ್ನವಾಗುತ್ತದೆ, ಅದರ ಸಲುವಾಗಿ ದೀಕ್ಷಾಕಾಲ ಮೊದಲಾದವುಗಳ ಭಾವನೆಯನ್ನು ನಿರಂತರ ಮಾಡುವುದು ಯೋಗ್ಯವಿದೆಯೆಂಬ ಉಪದೇಶವಿದೆ. ॥೧೧೦॥

[ವಿಶೇಷ ಭಾವಾರ್ಥ ಃ– ಸಮ್ಯಗ್ದರ್ಶನ–ಜ್ಞಾನ–ಚಾರಿತ್ರದ ವೃದ್ಧಿಯ ಉದ್ದೇಶದಿಂದ ಎಲೈ ಮುನಿಯೇ ! ದೀಕ್ಷೆಯ ಸಮಯದ ಅಪೂರ್ವ ಉತ್ಸಾಹಮಯವಾದ ತೀವ್ರ ವಿರಕ್ತ ದಶೆಯನ್ನು ; ಯಾವುದೇ ರೋಗೋತ್ಪತ್ತಿಯ ಸಮಯದ ಉಗ್ರಜ್ಞಾನ–ವೈರಾಗ್ಯ ಸಂಪತ್ತನ್ನು, ಯಾವುದೇ ದುಃಖದ ಅವಸರದಲ್ಲಿ ಪ್ರಕಟವಾದ ಉದಾಸೀನತೆಯ ಭಾವನೆಯನ್ನು, ಯಾವುದೇ ಉಪದೇಶ ಹಾಗೂ ತತ್ತ್ವವಿಚಾರದ ಧನ್ಯ ಅವಸರದಲ್ಲಿ ಜಾಗೃತವಾದ ಪವಿತ್ರ ಅಂತಃಭಾವನೆಯನ್ನು ಸ್ಮರಣೆಯಲ್ಲಿಟ್ಟುಕೊಳ್ಳಬೇಕು, ನಿರಂತರ ಸ್ವಸನ್ಮುಖಜ್ಞಾತಾತನದ ಅರ್ಥವನ್ನು ತಾಳ್ಮೆಯಿಂದ ಸ್ಮರಣೆಯಲ್ಲಿಟ್ಟುಕೊಳ್ಳಬೇಕು, ಮರೆಯಬಾರದು.]

ಈಗ ಭಾವಲಿಂಗವನ್ನು ಶುದ್ಧಮಾಡಿ ದ್ರವ್ಯಲಿಂಗ ಸೇವನೆಯ ಉಪದೇಶ ಮಾಡುತ್ತಾರೆ, –

**ಸೇವಹಿ ಚಉವಿಹಲಿಂಗಂ ಅಬ್ಭಂತರಲಿಂಗಸುದ್ಧಿಮಾವಣ್ಣೋ ।**
**ಬಾಹಿರಲಿಂಗಮಕಜ್ಜಂ ಹೋಇ ಫುಡಂ ಭಾವರಹಿಯಾಣಂ ॥೧೧೧॥**

**ಸೇವಸ್ವ ಚತುರ್ವಿಧಲಿಂಗಂ ಅಭ್ಯಂತರಲಿಂಗಶುದ್ಧಿಮಾಪನ್ನಃ ।**
**ಬಾಹ್ಯಲಿಂಗಮಕಾರ್ಯಂ ಭವತಿ ಸ್ಫುಟಂ ಭಾವರಹಿತಾನಾಮ್ ॥೧೧೧॥**

---

ಅವಿಕಾರದರ್ಶನವಿಶುದ್ಧನಾಗಿ ನೀನು ಉತ್ತಮ ಬೋಧಿ ನಿಮಿತ್ತದಿಂದ ।
ಭಾವಿಸು ದೀಕ್ಷಾಕಾಲಾದಿಗಳನು ಸಂಸಾರ ಅಸಾರವೆಂದು ತಿಳಿದುಕೊಂಡು ॥೧೧೦॥

ಸೇವಿಸು ಚತುರ್ವಿಧಲಿಂಗಗಳಂ ಅಭ್ಯಂತರಲಿಂಗಶುದ್ಧತೆಯ ಪಡೆದು ।
ಭಾವರಹಿತನಿಗೆ ಬಾಹ್ಯಲಿಂಗವದು ನಿಶ್ಚಯದಿ ಅಕಾರ್ಯವಿರುವುದು ॥೧೧೧॥

ಅರ್ಥ :- ಎಲೈ ಮುನಿವರನೇ ! ನೀನು ಅಭ್ಯಂತರ ಲಿಂಗದ ಶುದ್ಧಿ ಎಂದರೆ ಶುದ್ಧತೆಯನ್ನು ಪ್ರಾಪ್ತ ಮಾಡಿಕೊಂಡು ನಾಲ್ಕು ಪ್ರಕಾರದ ಬಾಹ್ಯಲಿಂಗದ ಸೇವನೆ ಮಾಡು, ಏಕೆಂದರೆ ಯಾರು ಭಾವರಹಿತರಿರುತ್ತಾರೆ ಅವರಿಗೆ ಪ್ರಕಟರೂಪದಿಂದ ಬಾಹ್ಯಲಿಂಗವು ಅಕಾರ್ಯವಿದೆ ಎಂದರೆ ಕಾರ್ಯಕಾರಿಯಿಲ್ಲ.

ಭಾವಾರ್ಥ :- ಯಾರು ಭಾವದ ಶುದ್ಧತೆಯಿಂದ ರಹಿತರಿದ್ದಾರೆ, ಯಾರಿಗೆ ತಮ್ಮ ಆತ್ಮನ ಯಥಾರ್ಥ ಶ್ರದ್ಧೆ, ಜ್ಞಾನ, ಆಚರಣವಿಲ್ಲ ಅವರಿಗೆ ಬಾಹ್ಯಲಿಂಗವು ಒಂದಿಷ್ಟೂ ಕಾರ್ಯಕಾರಿಯಿಲ್ಲ, ಕಾರಣ ಪಡೆದು ಕೂಡಲೇ ಕೆಟ್ಟು ಹೋಗುತ್ತಾರೆ, ಆದಕ್ಕಾಗಿ ಮೊದಲು ಭಾವದ ಶುದ್ಧತೆ ಮಾಡಿಕೊಂಡು ನಂತರ ದ್ರವ್ಯಲಿಂಗಧಾರಣ ಮಾಡಬೇಕೆಂದು ಉಪದೇಶವಿದೆ. ಈ ದ್ರವ್ಯಲಿಂಗವನ್ನು ನಾಲ್ಕು ಪ್ರಕಾರದ್ದಾಗಿ ಹೇಳಿದೆ ಅದರ ಸೂಚನೆಯು ಹೀಗಿದೆ – ೧) ಮಸ್ತಕದ ೨) ಗಡ್ಡದ ಮತ್ತು ೩) ಮೀಸೆಯ ಕೇಶಗಳ ಲೋಚ ಮಾಡುವುದು, ಇವಂತೂ ಮೂರು ಚಿಹ್ನೆಗಳಾದವು ಇನ್ನು ೪) ನಾಲ್ಕನೆಯದು ಕೆಳಗಿನ ಕೇಶಗಳನ್ನಿಡುವುದು ; ಅಥವಾ ೧) ವಸ್ತ್ರದ ತ್ಯಾಗ, ೨) ಕೇಶಲೋಚ ಮಾಡುವುದು, ೩) ಸ್ನಾನಾದಿಗಳಿಂದ ಶರೀರ ಸಂಸ್ಕಾರ ಮಾಡದಿರುವುದು, ೪) ಪ್ರತಿಲೇಖನ ಮಯೂರ ಪಿಂಛವನ್ನಿಡುವುದು, ಹೀಗೂ ನಾಲ್ಕು ಪ್ರಕಾರದ ಬಾಹ್ಯಲಿಂಗ ಹೇಳಿದೆ. ಹೀಗೆ ಸಮಸ್ತ ಬಾಹ್ಯ ವಸ್ತ್ರಾದಿಗಳಿಂದ ರಹಿತವಾಗಿ ನಗ್ನವಿರುವುದು, ಇಂಥ ನಗ್ನರೂಪವು ಭಾವವಿಶುದ್ಧಿಯಿಲ್ಲದೆ ಹಾಸ್ಯದ ಸ್ಥಾನವಿದೆ ಮತ್ತು ಯಾವ ಉತ್ತಮ ಫಲವೂ ಇಲ್ಲ. ||೧೧೧||

ಭಾವ ಕೆಡುವುದರ ಕಾರಣವು ನಾಲ್ಕು ಸಂಜ್ಞೆಗಳಿದ್ದು ಅವುಗಳಿಂದ ಸಂಸಾರದ ಭ್ರಮಣವಾಗುತ್ತದೆಯೆಂಬುದನ್ನು ಈಗ ತಿಳಿಸಿ ಹೇಳುತ್ತಾರೆ, –

**ಆಹಾರಭಯಪರಿಗ್ಗಹಮೇಹುಣಸಣ್ಣಾಹಿಂ ಮೋಹಿಓ ಸಿ ತುಮಂ ।**
**ಭಮಿಓ ಸಂಸಾರವಣೇ ಅಣಾಇಕಾಲಂ ಅಣಪ್ಪವಸೋ ||೧೧೨||**

**ಆಹಾರಭಯಪರಿಗ್ರಹಮೈಥುನಸಂಜ್ಞಾಭಿಃ ಮೋಹಿತಃ ಅಸಿ ತ್ವಮ್ ।**
**ಭ್ರಮಿತಃ ಸಂಸಾರವನೇ ಅನಾದಿಕಾಲಂ ಅನಾತ್ಮವಶಃ ||೧೧೨||**

ಅರ್ಥ :- ಎಲೈ ಮುನಿಯೇ ! ನೀನು ಆಹಾರ, ಭಯ, ಮೈಥುನ ಮತ್ತು ಪರಿಗ್ರಹವೆಂಬ ಈ ನಾಲ್ಕು ಸಂಜ್ಞೆಗಳಿಂದ ಮೋಹಿತನಾಗಿ ಅನಾದಿಕಾಲದಿಂದ ಪರಾಧೀನನಾಗಿ ಸಂಸಾರರೂಪದ ವನದಲ್ಲಿ ಸತತ ಭ್ರಮಣ ಮಾಡಿದೆ.

ಭಾವಾರ್ಥ :- 'ಸಂಜ್ಞೆ'ಯೆಂಬ ಹೆಸರು ಇಚ್ಛೆಯು ಜಾಗೃತವಿರುವುದರದಿದೆ ಎಂದರೆ ಅಖಂಡವಾಗಿರುವುದರದಿದೆ. ಅದು ಆಹಾರದ ಇಚ್ಛೆಯಿರುವುದು, ಭಯವಿರುವುದು, ಮೈಥುನದ ಇಚ್ಛೆಯಿರುವುದು ಮತ್ತು ಪರಿಗ್ರಹದ ಇಚ್ಛೆಯು ಪ್ರಾಣಿಗೆ ನಿರಂತರವಾಗಿರುತ್ತದೆ, ಇದು ಜನ್ಮಾಂತರದಲ್ಲಿ ನಡೆದು ಹೋಗುತ್ತದೆ, ಜನ್ಮವೆತ್ತುತ್ತಿರುವಂತೆಯೇ ತತ್ಕಾಲ ಪ್ರಕಟವಾಗುತ್ತದೆ, ಇದರ ನಿಮಿತ್ತದಿಂದ ಜೀವನು ಕರ್ಮಗಳನ್ನು ಕಟ್ಟಿಕೊಂಡು ಸಂಸಾರಾರಣ್ಯದಲ್ಲಿ ಭ್ರಮಣಮಾಡುತ್ತಾನೆ. ಆದಕ್ಕಾಗಿಯೇ ಈಗ ಈ ಸಂಜ್ಞೆಗಳ ಅಭಾವ ಮಾಡಿರೆಂದು ಮುನಿಗಳಿಗೆ ಉಪದೇಶವಿದೆ. ||೧೧೨||

---

**ನೀನು ಆಹಾರ ಭಯ ಪರಿಗ್ರಹ ಮೈಥುನ ಸಂಜ್ಞೆಗಳಿಂದ ಮೋಹಿತನಾಗಿ ।**
**ಅನಾದಿಕಾಲದಿಂ ಸಂಸಾರಕಾನನದಿ ಭ್ರಮಿಸಿದೆ ಅನಾತ್ಮವಶದಿಂದ ||೧೧೨||**

ಈಗ ಬಾಹ್ಯ ಉತ್ತರಗುಣದ ಪ್ರವೃತ್ತಿಯನ್ನು ಕೂಡ ಭಾವಶುದ್ಧಮಾಡಿ ಮಾಡಬೇಕೆಂದು ಹೇಳುತ್ತಾರೆ, –

**ಬಾಹಿರಸಯಣತ್ತಾವಣತರುಮೂಲಾಈಣಿ ಉತ್ತರಗುಣಾಣಿ ।**
**ಪಾಲಹಿ ಭಾವವಿಸುದ್ಧೋ ಪೂಯಾಲಾಹಂ ಣ ಈಹಂತೋ ।।೧೧೩।।**

**ಬಹಿಃಶಯನಾತಾಪನತರುಮೂಲಾದೀನ್ ಉತ್ತರಗುಣಾನ್ ।**
**ಪಾಲಯ ಭಾವವಿಶುದ್ಧಃ ಪೂಜಾಲಾಭಂ ನ ಈಹಮಾನಃ ।।೧೧೩।।**

ಅರ್ಥ ಃ– ಎಲೈ ಮುನಿಶ್ರೇಷ್ಠನೇ ! ನೀನು ಭಾವದಿಂದ ವಿಶುದ್ಧನಾಗಿ ಪೂಜೆ ಲಾಭಾದಿಗಳನ್ನು ಅಪೇಕ್ಷಿಸದೆ ಬಾಹ್ಯಶಯನ, ಆತಾಪನ, ವೃಕ್ಷಮೂಲಯೋಗ ಧಾರಣ ಮಾಡುವುದು ಇವೇ ಮೊದಲಾದ ಉತ್ತರಗುಣಗಳ ಪಾಲನೆಮಾಡು.

ಭಾವಾರ್ಥ ಃ– ಶೀತಕಾಲದಲ್ಲಿ ಹೊರಗೆ ಆವರಣವಿಲ್ಲದ ಬಯಲು ಪ್ರದೇಶದಲ್ಲಿ ಮಲಗುವುದು ಕುಳಿತುಕೊಳ್ಳುವುದು, ಗ್ರೀಷ್ಮಕಾಲದಲ್ಲಿ ಪರ್ವತದ ಶಿಖರದಮೇಲೆ ಸೂರ್ಯಸನ್ಮುಖವಾಗಿ ಆತಾಪನಯೋಗ ಧರಿಸುವುದು, ವರ್ಷಾಕಾಲದಲ್ಲಿ ವೃಕ್ಷದ ಕೆಳಗೆ ಯೋಗ ಧರಿಸುವುದು ಅಲ್ಲಿ ಜಲಬಿಂದುಗಳು ವೃಕ್ಷದ ಮೇಲೆ ಬಿದ್ದ ನಂತರ ಏಕತ್ರವಾಗಿ ಶರೀರದ ಮೇಲೆ ಬೀಳುವವು. ಇದರಲ್ಲಿ ಸ್ವಲ್ಪ ಪ್ರಾಸುಕದ ಸಂಕಲ್ಪವೂ ಇದೆ ಮತ್ತು ಬಾಧೆಯು ಅಧಿಕವಿದೆ, ಇವನ್ನು ಮೊದಲು ಮಾಡಿಕೊಂಡು ಇವು ಉತ್ತರಗುಣಗಳಿದ್ದು ಇವುಗಳ ಪಾಲನೆಯನ್ನು ಭಾವಶುದ್ಧ ಮಾಡಿ ಮಾಡಬೇಕು. ಭಾವಶುದ್ಧಿಯಿಲ್ಲದೆ ಮಾಡಿದರೆ ಕೂಡಲೇ ಕೆಡುವುದು ಮತ್ತು ಯಾವ ಫಲವೂ ಇಲ್ಲ, ಆದುದರಿಂದ ಭಾವಶುದ್ಧಮಾಡಿ ಮಾಡುವ ಉಪದೇಶವಿದೆ. ಆದರೆ ಇವನ್ನು ಬಾಹ್ಯದಲ್ಲಿ ಮಾಡುವುದರ ನಿಷೇಧ ಮಾಡುತ್ತಾರೆಂದು ತಿಳಿಯಬಾರದು. ಇವನ್ನೂ ಮಾಡಬೇಕು ಮತ್ತು ಭಾವವನ್ನೂ ಶುದ್ಧ ಮಾಡಬೇಕೆಂಬ ಆಶಯವಿದೆ. ಕೇವಲ ಪೂಜೆ ಲಾಭಾದಿಗಳ ಸಲುವಾಗಿ ತಮ್ಮ ದೊಡ್ಡಸ್ತಿಕೆಯನ್ನು ಮೆರೆಸುವುದರ ಸಲುವಾಗಿ ಮಾಡಿದರೆ ಯಾವ ಫಲದ (ಲಾಭದ) ಪ್ರಾಪ್ತಿಯಿಲ್ಲ. ।।೧೧೩।।

ಈಗ ತತ್ತ್ವದ ಭಾವನೆ ಮಾಡುವ ಉಪದೇಶ ಮಾಡುತ್ತಾರೆ, –

**ಭಾವಹಿ ಪಢಮಂ ತಚ್ಚಂ ಬಿದಿಯಂ ತದಿಯಂ ಚಉತ್ಥ ಪಂಚಮಯಂ ।**
**ತಿಯರಣಸುದ್ಧೋ ಅಪ್ಪಂ ಅಣಾಇಣಿಹಣಂ ತಿವಗ್ಗಹರಂ ।।೧೧೪।।**

**ಭಾವಯ ಪ್ರಥಮಂ ತತ್ತ್ವಂ ದ್ವಿತೀಯಂ ತೃತೀಯಂ ಚತುರ್ಥಂ ಪಂಚಮಕಮ್ ।**
**ತ್ರಿಕರಣಶುದ್ಧಃ ಆತ್ಮಾನಂ ಅನಾದಿನಿಧನಂ ತ್ರಿವರ್ಗಹರಮ್ ।।೧೧೪।।**

---

ವೃಕ್ಷಮೂಲ ಆತಾಪನ ಬಾಹ್ಯಶಯನ ಮೊದಲಾದ ಉತ್ತರಗುಣಗಳಂ ।
ರಕ್ಷಿಸು ಶುದ್ಧಭಾವದಿಂ ನೀನು ಪೂಜೆ ಲಾಭಾದಿಗಳಿಂದ ನಿರಪೇಕ್ಷನಾಗಿ ।।೧೧೩।।

ನೀನು ಭಾವಿಸು ಪ್ರಥಮ ದ್ವಿತೀಯ ತೃತೀಯ ಚತುರ್ಥ ಪಂಚಮ ತತ್ತ್ವವನು ।
ಅನಾದಿನಿಧನ ತ್ರಿವರ್ಗಹರಣನಾದಾತ್ಮನನು ತ್ರಿಕರಣಶುದ್ಧದಿಂ ।।೧೧೪।।

ಅರ್ಥ ಃ- ಎಲೈ ಮುನಿಯೇ ! ನೀನು ಮೊದಲು ಆ ಜೀವತತ್ತ್ವದ ಚಿಂತನೆ ಮಾಡು, ಎರಡನೆಯದಾಗಿ ಅಜೀವತತ್ತ್ವದ ಚಿಂತನೆ ಮಾಡು, ಮೂರನೆಯದಾಗಿ ಆಸ್ರವ ತತ್ತ್ವದ ಚಿಂತನೆಮಾಡು, ನಾಲ್ಕನೆಯದಾಗಿ ಬಂಧತತ್ತ್ವದ ಚಿಂತನೆ ಮಾಡು, ಐದನೆಯದಾಗಿ ಸಂವರತತ್ತ್ವದ ಚಿಂತನೆ ಮಾಡು ಮತ್ತು ತ್ರಿಕರಣ ಎಂದರೆ ಮನ-ವಚನ-ಕಾಯ, ಕೃತ-ಕಾರಿತ-ಅನುಮೋದನದಿಂದ ಶುದ್ಧನಾಗಿ ಆತ್ಮಸ್ವರೂಪದ ಚಿಂತನೆ ಮಾಡು ಆ ಆತ್ಮನು ಅನಾದಿನಿಧನನಿದ್ದಾನೆ ಮತ್ತು ತ್ರಿವರ್ಗ ಎಂದರೆ ಧರ್ಮ, ಅರ್ಥ ಮತ್ತು ಕಾಮಗಳನ್ನು ಹರಣ ಮಾಡುವಂಥವನಿದ್ದಾನೆ.

ಭಾವಾರ್ಥ ಃ- ಮೊದಲು 'ಜೀವತತ್ತ್ವ'ದ ಭಾವನೆಯನ್ನಂತೂ ದರ್ಶನ-ಜ್ಞಾನಮಯ ಚೇತನಾ ಸ್ವರೂಪವಾದ 'ಸಾಮಾನ್ಯ ಜೀವ'ದ ಭಾವನೆ ಮಾಡಬೇಕು. ಅನಂತರ ಹೀಗೆ ನಾನಿದ್ದೇನೆಂದು ಆತ್ಮತತ್ತ್ವದ ಭಾವನೆ ಮಾಡಬೇಕು. ಎರಡನೆಯದು ಅಜೀವತತ್ತ್ವವಿದ್ದು ಅದು ಸಾಮಾನ್ಯವಾಗಿ ಅಚೇತನ ಜಡವಿದೆ, ಇವು ಪುದ್ಗಲ, ಧರ್ಮ, ಅಧರ್ಮ, ಆಕಾಶ, ಕಾಲವೆಂದು ಐದು ಭೇದರೂಪವಿದ್ದು ಅವುಗಳ ವಿಚಾರ ಮಾಡಬೇಕು. ಅನಂತರ ಇವು ನಾನಲ್ಲವೆಂಬ ಭಾವನೆ ಮಾಡಬೇಕು. ಮೂರನೆಯದು 'ಆಸ್ರವತತ್ತ್ವ'ವಿದ್ದು ಅದು ಜೀವ ಪುದ್ಗಲಗಳ ಸಂಯೋಗಜನ್ಯ ಭಾವವಿದೆ, ಇವುಗಳಲ್ಲಿ ಅನಾದಿಕರ್ಮಸಂಬಂಧದಿಂದ ಜೀವದ ಭಾವಗಳಂತೂ (ಭಾವಾಸ್ರವಗಳಂತೂ)ರಾಗ-ದ್ವೇಷ-ಮೋಹಗಳಿವೆ ಮತ್ತು ಅಜೀವ ಪುದ್ಗಲದ ಭಾವಕರ್ಮದ ಉದಯ ರೂಪವಾಗಿ ಮಿಥ್ಯಾತ್ವ, ಅವಿರತಿ,ಕಷಾಯ ಮತ್ತು ಯೋಗಗಳು ದ್ರವ್ಯಾಸ್ರವವಿವೆ. ಇವು (ಅಸದ್ಭೂತ ವ್ಯವಹಾರನಯದ ಅಪೇಕ್ಷೆಯಿಂದ) ನನಗೆ ಆಗುತ್ತವೆ, (ಅಶುದ್ಧ ನಿಶ್ಚಯನಯದಿಂದ) ರಾಗ-ದ್ವೇಷ-ಮೋಹ ಭಾವಗಳು ನನ್ನವುಗಳಿದ್ದು ಇವುಗಳಿಂದ ಕರ್ಮದ ಬಂಧವಾಗುತ್ತದೆ, ಅದರಿಂದ ಸಂಸಾರವಾಗುವುದರಿಂದ ಇವುಗಳ ಕರ್ತೃವಾಗಬಾರದು (ತನ್ನಲ್ಲಿ ತಾನು ಜ್ಞಾತಾನಾಗಿ ಉಳಿಯಬೇಕು) ಹೀಗೆ ಇವುಗಳ ಭಾವನೆ ಮಾಡಬೇಕು.

ನಾಲ್ಕನೆಯದು 'ಬಂಧತತ್ತ್ವ'ವಿದ್ದು ಅದು ನಾನು ರಾಗ-ದ್ವೇಷ-ಮೋಹರೂಪವಾಗಿ ಪರಿಣಮನ ಮಾಡುತ್ತೇನೆ ಅದಂತೂ ನನ್ನ ಚೇತನದ ವಿಭಾವವಿದೆ, ಇದರಿಂದ ಬಂಧಿಸಲ್ಪಡುತ್ತಿರುವವು ಅವು ಪುದ್ಗಲಗಳಿವೆ, ಕರ್ಮವು ಪುದ್ಗಲವಿದೆ, ಕರ್ಮಪುದ್ಗಲಗಳು ಜ್ಞಾನಾವರಣ ಮೊದಲಾದ ಎಂಟು ಪ್ರಕಾರಗಳಾಗಿ ಕಟ್ಟುತ್ತವೆ, ಅವು ಸ್ವಭಾವ-ಪ್ರಕೃತಿ, ಸ್ಥಿತಿ, ಅನುಭಾಗ ಮತ್ತು ಪ್ರದೇಶರೂಪದಿಂದ ನಾಲ್ಕು ಪ್ರಕಾರಗಳಾಗಿ ಕಟ್ಟುತ್ತವೆ, ಆ ನನ್ನ ವಿಭಾವ ಹಾಗೂ ಪುದ್ಗಲಕರ್ಮಗಳೆಲ್ಲವು ಹೇಯವಿವೆ ಸಂಸಾರಕ್ಕೆ ಕಾರಣವಾಗಿವೆ, ನನಗೆ ರಾಗ-ದ್ವೇಷ-ಮೋಹರೂಪವಾಗುವುದಿಲ್ಲವೆಂದು ಭಾವನೆ ಮಾಡಬೇಕು.

ಐದನೆಯದು 'ಸಂವರತತ್ತ್ವ'ವಿದ್ದು ಅದು ರಾಗ-ದ್ವೇಷ-ಮೋಹರೂಪವು ಜೀವದ ವಿಭಾವಗಳಿದ್ದು ಅವು ಆಗದಿರುವುದು ಮತ್ತು ದರ್ಶನ-ಜ್ಞಾನರೂಪದ ಚೇತನಾಭಾವವು ಸ್ಥಿರವಿರುವುದು ಅದು 'ಸಂವರ'ವಿದೆ, ಅದು ತನ್ನ ಭಾವವಿದೆ ಮತ್ತು ಇದರಿಂದಲೇ ಪುದ್ಗಲಕರ್ಮಜನ್ಯ ಭ್ರಮಣವು ನಾಶವಾಗುತ್ತದೆ.

ಹೀಗೆ ಈ ಐದು ತತ್ತ್ವಗಳ ಭಾವನೆ ಮಾಡುವಲ್ಲಿ ಆತ್ಮತತ್ತ್ವದ ಭಾವನೆಯು ಮುಖ್ಯವಿದೆ, ಅದರಿಂದ ಕರ್ಮದ ನಿರ್ಜರೆಯಾಗಿ ಮೋಕ್ಷವಾಗುತ್ತದೆ. ಆತ್ಮನ ಭಾವವು ಅನುಕ್ರಮದಿಂದ ಶುದ್ಧವಾಗುವುದು ಅದು 'ನಿರ್ಜರಾತತ್ತ್ವ'ವಿದೆ ಮತ್ತು ಸಮಸ್ತ ಕರ್ಮಗಳ ಅಭಾವವಾಗುವುದು ಅದು 'ಮೋಕ್ಷತತ್ತ್ವ'ವಿದೆ. ಈ ಪ್ರಕಾರ ಏಳು ತತ್ತ್ವಗಳ ಭಾವನೆ ಮಾಡಬೇಕು. ಅದಕ್ಕಾಗಿಯೇ ಆತ್ಮತತ್ತ್ವವು ಧರ್ಮ, ಅರ್ಥ, ಕಾಮವೆಂಬ ಈ ತ್ರಿವರ್ಗದ ಅಭಾವ ಮಾಡುತ್ತದೆಯೆಂಬ ವಿಶೇಷಣವನ್ನು ಆತ್ಮತತ್ತ್ವಕ್ಕೆ ಕೊಡಲಾಗಿದೆ. ಇದರ ಭಾವನೆಯ ಮುಖಾಂತರ ತ್ರಿವರ್ಗದಿಂದ ಭಿನ್ನವಾದ ಆ ನಾಲ್ಕನೆಯ 'ಮೋಕ್ಷ' ಪುರುಷಾರ್ಥವಾಗುತ್ತದೆ. ಈ ಆತ್ಮನು ಜ್ಞಾನ-ದರ್ಶನಮಯನೂ ಚೇತನಾಸ್ವರೂಪನೂ ಅನಾದಿನಿಧನನೂ ಇದ್ದಾನೆ. ಇವನಿಗೆ ಆದಿಯೂ ಇಲ್ಲ ಮತ್ತು ನಿಧನವೂ (ನಾಶವೂ)ಇಲ್ಲ. 'ಭಾವನೆ' ಎಂದರೆ ಮತ್ತೆ ಮತ್ತೆ ಅಭ್ಯಾಸ

ಮಾಡುವುದು ; ಚಿಂತನೆ ಮಾಡುವುದಿದೆ, ಅದು ಮನ-ವಚನ-ಕಾಯದಿಂದ ತಾನು ಮಾಡುವುದು ಹಾಗೂ ಇತರರಿಗೆ ಮಾಡಿಸುವುದು ಮತ್ತು ಮಾಡುವವರನ್ನು ಒಳ್ಳೆಯವರೆಂದು ತಿಳಿಯುವುದು ಹೀಗೆ ತ್ರಿಕರಣ ಶುದ್ಧಮಾಡಿ ಭಾವನೆ ಮಾಡಬೇಕು. ಮಾಯೆ-ಮಿಥ್ಯೆ-ನಿದಾನ ಶಲ್ಯಗಳನ್ನು ಇಟ್ಟುಕೊಳ್ಳಬಾರದು; ಖ್ಯಾತಿ, ಪೂಜೆ, ಲಾಭದ ಆಶಯವಿಟ್ಟು-ಕೊಳ್ಳಬಾರದು. ಈ ಪ್ರಕಾರದಿಂದ ತತ್ತ್ವದ ಭಾವನೆ ಮಾಡುವುದರಿಂದ ಭಾವಗಳು ಶುದ್ಧವಾಗುತ್ತವೆ.

### ಸ್ತ್ರೀ ಮೊದಲಾದ ಪದಾರ್ಥಗಳ ಮೇಲಿಂದ ಭೇದ ಜ್ಞಾನಿಯ ವಿಚಾರ

ಯಾವಾಗ ಸ್ತ್ರೀ ಮೊದಲಾದವರು ಇಂದ್ರಿಯಗೋಚರವಾಗುತ್ತಾರೆ (ಕಂಡು ಬರುತ್ತಾರೆ) ಆಗ ಅವರ ವಿಷಯದಲ್ಲಿ ಹೀಗೆ ತತ್ತ್ವ ವಿಚಾರ ಮಾಡಬೇಕು – ಈ ಸ್ತ್ರೀಯಿದ್ದಾಳೆ ಅವಳು ಏನಿದ್ದಾಳೆ ?ಅದು ಜೀವನಾಮ ತತ್ತ್ವದ ಒಂದು ಪರ್ಯಾಯವಿದೆ, ಇವಳ ಶರೀರವಿದೆ ಅದಂತೂ ಪುದ್ಗಲತತ್ತ್ವದ ಪರ್ಯಾಯವಿದೆ, ಈ ಹಾವಭಾವ ಚೇಷ್ಟೆ ಮಾಡುತ್ತಾಳೆ ಅದು ಈ ಜೀವಕ್ಕೆ ವಿಕಾರವಾಗಿದೆ ಅದು ಆಸ್ರವತತ್ತ್ವವಿದೆ ಮತ್ತು ಬಾಹ್ಯ ಚೇಷ್ಟೆಯು ಅದು ಪುದ್ಗಲದ್ದಿದೆ, ಈ ವಿಕಾರದಿಂದ ಈ ಸ್ತ್ರೀಯ ಆತ್ಮಕ್ಕೆ ಕರ್ಮದ ಬಂಧವಾಗುತ್ತದೆ. ಇವಳಿಗೆ ಈ ವಿಕಾರವಿರದಿದ್ದರೆ ಇವಳಿಗೆ 'ಆಸ್ರವ', 'ಬಂಧ'ಗಳಾಗುತ್ತಿರಲಿಲ್ಲ. ಒಂದುವೇಳೆ ನಾನು ಕೂಡ ಇವಳನ್ನು ನೋಡಿ ವಿಕಾರರೂಪವಾಗದಿರುವುದು ಅದು 'ಸಂವರತತ್ತ್ವ'ವಿದೆ. ಸಾಧ್ಯವಾದರೆ ಏನಾದರೂ ಉಪದೇಶ ಮಾಡಿ ಇವಳ ವಿಕಾರ ದೂರಮಾಡುವೆನೆಂಬ ವಿಕಲ್ಪವು ರಾಗವಿದೆ, ಈ ರಾಗವೂ ಮಾಡಲು ಯೋಗ್ಯವಿಲ್ಲ-ಸ್ವಸನ್ಮುಖ ಜ್ಞಾತಾತನದಲ್ಲಿ ಧೈರ್ಯವಿಡುವುದು ಯೋಗ್ಯವಿದೆಯೆಂಬ ತತ್ತ್ವದ ಭಾವನೆಯಿಂದ ತಮ್ಮ ಭಾವವು ಅಶುದ್ಧವಾಗುವುದಿಲ್ಲ, ಆದುದರಿಂದ ದೃಷ್ಟಿಗೋಚರವಾಗುವಂಥ ಪದಾರ್ಥಗಳಲ್ಲಿ ಈ ಪ್ರಕಾರ ತತ್ತ್ವದ ಭಾವನೆಯಿರಿಸುವುದು ಇದು ತತ್ತ್ವದ ಭಾವನೆಯ ಉಪದೇಶವಿದೆ. ||೧೧೪||

ಹೀಗೆ ತತ್ತ್ವದ ಭಾವನೆಯು ಎಲ್ಲಿಯವರೆಗೆ ಇರುವುದಿಲ್ಲ ಅಲ್ಲಿಯವರೆಗೆ ಮೋಕ್ಷವಾಗುವುದಿಲ್ಲವೆಂದು ಈಗ ಹೇಳುತ್ತಾರೆ, –

**ಜಾವ ಣ ಭಾವಇ ತಚ್ಚಂ ಜಾವ ಇ ಚಿಂತೇಇ ಚಿಂತಣೀಯಾಇಂ ।**
**ತಾವ ಣ ಪಾವಇ ಜೀವೋ ಜರಮರಣವಿವಜ್ಜಿಯಂ ಠಾಣಂ ||೧೧೫||**

**ಯಾವನ್ನ ಭಾವಯತಿ ತತ್ತ್ವಂ ಯಾವನ್ನ ಚಿಂತಯತಿ ಚಿಂತನೀಯಾನಿ ।**
**ತಾವನ್ನ ಪ್ರಾಪ್ನೋತಿ ಜೀವಃ ಜರಾಮರಣವಿವರ್ಜಿತಂ ಸ್ಥಾನಮ್ ||೧೧೫||**

ಅರ್ಥ :– ಎಲೈ ಮುನಿಯೇ ! ನೀನು ಎಲ್ಲಿಯವರೆಗೆ ಈ ಜೀವಾದಿ ತತ್ತ್ವಗಳನ್ನು ಭಾವಿಸುವುದಿಲ್ಲ ಮತ್ತು ಚಿಂತನೆ ಮಾಡಲು ಯೋಗ್ಯವಿರುವುದರ ಚಿಂತನೆ ಮಾಡುವುದಿಲ್ಲ ಅಲ್ಲಿಯವರೆಗೆ ಜರೆ ಮತ್ತು ಮರಣದಿಂದ ರಹಿತವಾದ ಮೋಕ್ಷಸ್ಥಾನವನ್ನು ಪಡೆಯುವುದಿಲ್ಲ.

ಭಾವಾರ್ಥ :– ತತ್ತ್ವದ ಭಾವನೆಯನ್ನಂತೂ ಮೊದಲು ಹೇಳಿದೆ ಅದು ಚಿಂತನೆ ಮಾಡಲು ಯೋಗ್ಯವಾದ ಧರ್ಮಶುಕ್ಲಧ್ಯಾನದ ವಿಷಯಭೂತ ಆ ಶುದ್ಧ ವಸ್ತು ತನ್ನ ಶುದ್ಧ ದರ್ಶನ ಜ್ಞಾನಮಯ ಚೇತನಾಭಾವ ಮತ್ತು

---

ಎನ್ನೆವರ ಭಾವಿಸನು ತತ್ತ್ವ ಎನ್ನೆವರ ಚಿಂತಿಸನು ಚಿಂತನೀಯವನು ।
ಅನ್ನೆವರ ಜೀವ ಪಡೆಯಲಾರನು ಜರಾಮರಣವರ್ಜಿತ ಸ್ಥಾನವನು ||೧೧೫||

ಹೀಗೆಯೇ ಅರಹಂತ ಸಿದ್ಧಪರಮೇಷ್ಠಿಯ ಸ್ವರೂಪದ ಚಿಂತನವು ಎಲ್ಲಿಯವರೆಗೆ ಈ ಆತ್ಮನಿಗೆ ಇರುವುದಿಲ್ಲ ಅಲ್ಲಿಯವರೆಗೆ ಸಂಸಾರದಿಂದ ನಿವೃತ್ತವಾಗುವುದಿಲ್ಲ, ಆದುದರಿಂದ ತತ್ತ್ವದ ಭಾವನೆ ಮತ್ತು ಶುದ್ಧಸ್ವರೂಪದ ಧ್ಯಾನದ ಉಪಾಯವನ್ನು ನಿರಂತರ ಮಾಡುತ್ತಿರಬೇಕೆಂಬ ಉಪದೇಶವಿದೆ. ॥೧೧೫॥

ಪಾಪ-ಪುಣ್ಯದ ಮತ್ತು ಬಂಧ ಮೋಕ್ಷದ ಕಾರಣವು ಪರಿಣಾಮವೇ ಇದೆಯೆಂದು ಈಗ ಹೇಳುತ್ತಾರೆ, –

ಪಾವಂ ಹವಇ ಅಸೇಸಂ ಪುಣ್ಣಮಸೇಸಂ ಚ ಹವಇ ಪರಿಣಾಮಾ ।
ಪರಿಣಾಮಾದೋ ಬಂಧೋ ಮುಕ್ಖೋ ಜಿಣಸಾಸಣೇ ದಿಟ್ಠೋ ॥೧೧೬॥

ಪಾಪಂ ಭವತಿ ಅಶೇಷಂ ಪುಣ್ಯಮಶೇಷಂ ಚ ಭವತಿ ಪರಿಣಾಮಾತ್ ।
ಪರಿಣಾಮಾದ್‌ಬಂಧಃ ಮೋಕ್ಷಃ ಜಿನಶಾಸನೇ ದೃಷ್ಟಃ ॥೧೧೬॥

ಅರ್ಥ ः- ಪರಿಣಾಮವನ್ನೇ ಪಾಪ-ಪುಣ್ಯ, ಬಂಧ-ಮೋಕ್ಷದ ಕಾರಣವೆಂದು ಹೇಳಿದೆ, ಜೀವಕ್ಕೆ ಮಿಥ್ಯಾತ್ವ, ವಿಷಯ-ಕಷಾಯ, ಅಶುಭ ಲೇಶ್ಯಾರೂಪದ ತೀವ್ರ ಪರಿಣಾಮಗಳಾಗುತ್ತವೆ, ಅವುಗಳಿಂದಂತೂ ಪಾಪಾಸ್ರವದ ಬಂಧವಾಗುತ್ತದೆ. ಪಂಚಪರಮೇಷ್ಠಿಯ ಭಕ್ತಿ, ಜೀವಗಳ ಮೇಲೆ ದಯಾ ಇತ್ಯಾದಿಗಳ ಮಂದ ಕಷಾಯದ ಶುಭಲೇಶ್ಯಾರೂಪವಾದ ಪರಿಣಾಮಗಳಾಗುತ್ತವೆ, ಅವುಗಳಿಂದ ಪುಣ್ಯಾಸ್ರವದ ಬಂಧವಾಗುತ್ತದೆ. ಶುದ್ಧಪರಿಣಾಮರಹಿತ ವಿಭಾವರೂಪದ ಪರಿಣಾಮದಿಂದ ಬಂಧವಾಗುತ್ತದೆ. ಶುದ್ಧಭಾವದ ಸನ್ಮುಖವಿರುವುದು, ಅದಕ್ಕೆ ಅನುಕೂಲವಾದ ಶುಭ ಪರಿಣಾಮಗಳನ್ನು ಇಟ್ಟುಕೊಳ್ಳುವುದು, ಅಶುಭ ಪರಿಣಾಮಗಳನ್ನು ಸರ್ವಥಾ ದೂರಮಾಡಬೇಕೆಂಬ ಉಪದೇಶವಿದೆ. ॥೧೧೬॥

ಎಂಥ ಭಾವಗಳಿಂದ ಪುಣ್ಯ-ಪಾಪದ ಬಂಧವಾಗುತ್ತದೆಂಬುದನ್ನು ಹೇಳುತ್ತಾರೆ. ಅದರಲ್ಲಿ ಮೊದಲು ಪಾಪ ಬಂಧದ ಪರಿಣಾಮಗಳನ್ನು ಹೇಳುತ್ತಾರೆ, –

ಮಿಚ್ಛತ್ತ ತಹ ಕಸಾಯಾಸಂಜಮಜೋಗೇಹಿಂ ಅಸುಹಲೇಸೇಹಿಂ ।
ಬಂಧಇ ಅಸುಹಂ ಕಮ್ಮಂ ಜಿಣವಯಣಪರಮ್ಮುಹೋ ಜೀವೋ ॥೧೧೭॥

ಮಿಥ್ಯಾತ್ವಂ ತಥಾ ಕಷಾಯಾಸಂಯಮಯೋಗೈಃ ಅಶುಭಲೇಶ್ಯೈಃ ।
ಬಧ್ನಾತಿ ಅಶುಭಂ ಕರ್ಮಂ ಜಿನವಚನಪರಾಙ್ಮುಖಃ ಜೀವಃ ॥೧೧೭॥

ಅರ್ಥ ः- ಮಿಥ್ಯಾತ್ವ, ಕಷಾಯ, ಅಸಂಯಮ ಮತ್ತು ಯೋಗಗಳಲ್ಲಿ ಅಶುಭ ಲೇಶ್ಯೆಯು ಕಂಡು ಬರುತ್ತದೆ ಅಂಥ ಭಾವಗಳಿಂದ ಈ ಜೀವನು ಜಿನವಚನಗಳಿಂದ ಪರಾಙ್ಮುಖನಾಗುತ್ತಾನೆ-ಅಶುಭಕರ್ಮಗಳನ್ನು ಕಟ್ಟಿಕೊಳ್ಳುತ್ತಾನೆ ಅವನು ಪಾಪವನ್ನೇ ಕಟ್ಟಿಕೊಳ್ಳುತ್ತಾನೆ.

---

ಪರಿಣಾಮದಿಂದಶೇಷಪಾಪ ಪರಿಣಾಮದಿಂದಶೇಷ ಪುಣ್ಯವಾಗುವುದು ।
ಪರಿಣಾಮದಿಂ ಬಂಧ ಪರಿಣಾಮದಿಂ ಮೋಕ್ಷವೆಂದು ಜಿನಶಾಸನದಲಿದೆ ॥೧೧೬॥

ಅಶುಭಲೇಶ್ಯಾನ್ವಿತವಾದ ಮಿಥ್ಯಾತ್ವ ಕಷಾಯ ಅಸಂಯಮ ಯೋಗಗಳಿಂದ ।
ಅಶುಭಕರ್ಮ ಕಟ್ಟಿಕೊಳ್ಳುವನು ಜಿನವಚನಪರಾಙ್ಮುಖನಾದ ಜೀವ ॥೧೧೭॥

ಭಾವಾರ್ಥ :- 'ಮಿಥ್ಯಾತ್ವಭಾವ'ವು ಅದು ತತ್ತ್ವಾರ್ಥದ ಶ್ರದ್ಧಾರಹಿತವಾದ ಪರಿಣಾಮವಿದೆ. 'ಕಷಾಯ'ವು ಅವು ಕ್ರೋಧಾದಿಗಳಿವೆ. 'ಅಸಂಯಮ'ವು ಅದು ಪರದ್ರವ್ಯದ ಗ್ರಹಣರೂಪವಿದೆ ತ್ಯಾಗರೂಪಭಾವವಿಲ್ಲ. ಈ ಪ್ರಕಾರ ಇಂದ್ರಿಯಗಳಿಗೆ ವಿಷಯಗಳಿಂದ ಪ್ರೀತಿ ಮತ್ತು ಜೀವಗಳ ವಿರಾಧನಾಸಹಿತವಾದ ಭಾವವಿದೆ. 'ಯೋಗ'ವು ಅದು ಮನ-ವಚನ-ಕಾಯಗಳ ನಿಮಿತ್ತದಿಂದ ಆತ್ಮಪ್ರದೇಶಗಳ ಚಲನೆಯಿದೆ. ಈ ಭಾವಗಳು ತೀವ್ರಕಷಾಯಸಹಿತ ಕೃಷ್ಣ, ನೀಲ, ಕಾಪೋತ ಅಶುಭಲೇಶ್ಯಾರೂಪಗಳಾದಾಗ ಈ ಜೀವನಿಗೆ ಪಾಪಕರ್ಮದ ಬಂಧವಾಗುತ್ತದೆ. ಪಾಪಬಂಧ ಮಾಡಿಕೊಳ್ಳುವಂಥ ಜೀವನಿಗೆ ಜಿನವಚನದ ಶ್ರದ್ಧೆಯಿಲ್ಲ. ಅನ್ಯಮತದ ಶ್ರದ್ಧೆಯುಳ್ಳವನಿಗೆ ಎಂದಾದರೊಮ್ಮೆ ಶುಭಲೇಶ್ಯೆಯ ನಿಮಿತ್ತದಿಂದ ಪುಣ್ಯದ ಬಂಧವಾದರೂ ಕೂಡ ಅದನ್ನು ಪಾಪದಲ್ಲಿಯೇ ಗಣಿಸುತ್ತಾರೆಂಬುದು ಈ ವಿಶೇಷಣದ ಆಶಯವಿದೆ. ಜಿನಾಜ್ಞೆಯಲ್ಲಿ ಪ್ರವರ್ತಿಸುವವನಿಗೆ ಎಂದಾದರೊಮ್ಮೆ ಪಾಪಬಂಧಿಸಿದರೂ ಕೂಡ ಅವನು ಪುಣ್ಯ ಜೀವರುಗಳ ಪಂಕ್ತಿಯಲ್ಲಿಯೇ ಗಣಿಸಲ್ಪಡುತ್ತಾನೆ, ಮಿಥ್ಯಾದೃಷ್ಟಿಯನ್ನೇ ಪಾಪೀ ಜೀವರುಗಳಲ್ಲಿ ಮನ್ನಿಸಿದೆ ಮತ್ತು ಸಮ್ಯಗ್ದೃಷ್ಟಿಯನ್ನು ಪುಣ್ಯವಂತ ಜೀವರುಗಳಲ್ಲಿ ಮನ್ನಿಸಿದೆ, ಈ ಪ್ರಕಾರ ಪಾಪಬಂಧದ ಕಾರಣ ಹೇಳಿದೆ. ||೧೧೭||

ಇದರಿಂದ ವಿರುದ್ಧವಾದ ಜೀವನು ಪುಣ್ಯಕಟ್ಟಿಕೊಳ್ಳುತ್ತಾನೆಂದು ಈಗ ಹೇಳುತ್ತಾರೆ, -

**ತವ್ವಿವರೀಓ ಬಂಧಇ ಸುಹಕಮ್ಮಂ ಭಾವಸುದ್ಧಿಮಾವಣ್ಣೋ ।**
**ದುವಿಹಪಯಾರಂ ಬಂಧಇ ಸಂಖೇಪೇಣೇವ ವಜ್ಜರಿಯಂ ||೧೧೮||**

**ತದ್ವಿಪರೀತಃ ಬಧ್ನಾತಿ ಶುಭಕರ್ಮ ಭಾವಶುದ್ಧಿಮಾಪನ್ನಃ ।**
**ದ್ವಿವಿಧಪ್ರಕಾರಂ ಬಧ್ನಾತಿ ಸಂಕ್ಷೇಪೇಣೈವ ಕಥಿತಮ್ ||೧೧೮||**

ಅರ್ಥ :- ಆ ಪೂರ್ವೋಕ್ತ ಜಿನವಚನದ ಶ್ರದ್ಧೆಯುಳ್ಳ ಮಿಥ್ಯಾತ್ವರಹಿತ ಸಮ್ಯಗ್ದೃಷ್ಟಿ ಜೀವನು ಶುಭಕರ್ಮವನ್ನು ಕಟ್ಟಿಕೊಳ್ಳುತ್ತಾನೆ, ಅವನು ಭಾವಗಳಲ್ಲಿ ವಿಶುದ್ಧಿಯನ್ನು ಪ್ರಾಪ್ತಮಾಡಿಕೊಂಡಿದ್ದಾನೆ, ಹೀಗೆ ಎರಡೂ ಪ್ರಕಾರದ ಜೀವರುಗಳು ಶುಭಾಶುಭ ಕರ್ಮಗಳನ್ನು ಕಟ್ಟಿಕೊಳ್ಳುತ್ತಾರೆಂದು ಸಂಕ್ಷೇಪದಿಂದ ಜಿನಭಗವಂತರು ಹೇಳಿದ್ದಾರೆ.

ಭಾವಾರ್ಥ :- ಜಿನವಚನದಿಂದ ಪರಾಙ್ಮುಖ ಮಿಥ್ಯಾತ್ವಸಹಿತನಾದ ಜೀವನಿದ್ದಾನೆಂದು ಮೊದಲು ಹೇಳಿತ್ತು, ಅವನಿಂದ ವಿಪರೀತ ಜಿನಾಜ್ಞೆಯ ಶ್ರದ್ಧೆಯುಳ್ಳ ಸಮ್ಯಗ್ದೃಷ್ಟಿ ಜೀವನು ವಿಶುದ್ಧಭಾವಕ್ಕೆ ಪ್ರಾಪ್ತನಾಗಿ ಶುಭ ಕರ್ಮವನ್ನು ಕಟ್ಟಿಕೊಳ್ಳುತ್ತಾನೆ, ಏಕೆಂದರೆ ಇವನಿಗೆ ಸಮ್ಯಕ್ತ್ವದ ಮಾಹಾತ್ಮ್ಯದಿಂದ ಮಿಥ್ಯಾತ್ವದ ಜತೆ ಬಂಧಿಸಲ್ಪಡುವ ಪಾಪಪ್ರಕೃತಿಗಳ ಅಭಾವಮಾಡುವಂಥ ಉಜ್ವಲ ಭಾವಗಳಿವೆ. ಎಂದಾದರೊಮ್ಮೆ ಸ್ವಲ್ಪ ಯಾವುದೇ ಪಾಪಪ್ರಕೃತಿಯು ಕಟ್ಟುತ್ತಿದ್ದರೆ ಅವುಗಳ ಅನುಭಾಗವು ಮಂದವಿರುತ್ತದೆ, ಯಾವ ತೀವ್ರ ಪಾಪ ಫಲದ ದಾತೃವಾಗುವುದಿಲ್ಲ. ಆದುದರಿಂದ ಸಮ್ಯಗ್ದೃಷ್ಟಿಯು ಶುಭಕರ್ಮಗಳನ್ನೇ ಕಟ್ಟಿಕೊಳ್ಳುವವನಿದ್ದಾನೆ. ಈ ಪ್ರಕಾರ ಶುಭಾಶುಭ ಕರ್ಮಗಳ ಬಂಧದ ವಿಧಾನವನ್ನು ಸರ್ವಜ್ಞದೇವರು ಸಂಕ್ಷೇಪದಿಂದ ಹೇಳಿದ್ದಾರೆ, ಅದನ್ನು ತಿಳಿದುಕೊಳ್ಳಬೇಕು. ||೧೧೮||

---

**ಭಾವಶುದ್ಧಿಪಡೆದ ಅದರಿಂ ವಿಪರೀತ ಶುಭಕರ್ಮಕಟ್ಟಿಕೊಳ್ಳುವನು ।**
**ದ್ವಿವಿಧ ಪ್ರಕಾರಕಟ್ಟಿಕೊಳ್ಳುವರೆಂದು ಸಂಕ್ಷೇಪದಿಂದ ಜಿನರು ಪೇಳ್ದರು ||೧೧೮||**

ಎಲೈ ಮುನಿಯೇ ! ನೀನು ಇಂಥ ಭಾವನೆ ಮಾಡೆಂದು ಈಗ ಹೇಳುತ್ತಾರೆ,-

**ಣಾಣಾವರಣಾದೀಹಿಂ ಯ ಅಟ್ಠಹಿಂ ಕಮ್ಮೇಹಿಂ ವೇಢಿಓ ಯ ಅಹಂ ।**
**ಡಹಿಊಣ ಇಣ್ಹಿಂ ಪಯಡಮಿ ಅಣಂತಣಾಣಾಇಗುಣಚಿತ್ತಾಂ ॥೧೧೯॥**

**ಜ್ಞಾನಾವರಣಾದಿಭಿಃ ಚ ಅಷ್ಟಭಿಃ ಕರ್ಮಭಿಃ ವೇಷ್ಟಿತಶ್ಚ ಅಹಂ ।**
**ದಗ್ಧ್ವಾ ಇದಾನೀಂ ಪ್ರಕಟಯಾಮಿ ಅನಂತಜ್ಞಾನಾದಿಗುಣಚೇತನಾಂ ॥೧೧೯॥**

ಅರ್ಥ ಃ- ಎಲೈ ಮುನಿವರನೇ ! ನಾನು ಜ್ಞಾನಾವರಣ ಮೊದಲಾದ ಎಂಟು ಕರ್ಮಗಳಿಂದ ವೇಷ್ಟಿತನಿದ್ದೇನೆ, ಆದುದರಿಂದ ಅವನ್ನು ಭಸ್ಮಮಾಡಿ ಅನಂತಜ್ಞಾನಾದಿ ಗುಣ ಜಿನಸ್ವರೂಪ ಚೇತನಾವನ್ನು ಪ್ರಕಟಮಾಡಿಕೊಳ್ಳುವೆನೆಂದು ನೀನು ಭಾವನೆ ಮಾಡು.

ಭಾವಾರ್ಥ ಃ- ತಮ್ಮನ್ನು ಕರ್ಮಗಳಿಂದ ವೇಷ್ಟಿತವೆಂದು ಮನ್ನಿಸಿದಾಗ ಮತ್ತು ಅವುಗಳಿಂದ ಅನಂತ ಜ್ಞಾನಾದಿಗುಣಗಳು ಆಚ್ಛಾದಿತವಿವೆಯೆಂದು ಮನ್ನಿಸಿದಾಗ ಆ ಕರ್ಮಗಳನ್ನು ನಾಶಮಾಡುವ ವಿಚಾರಮಾಡುವನು, ಆದುದರಿಂದ ಕರ್ಮಗಳ ಬಂಧದ ಮತ್ತು ಅವುಗಳ ಅಭಾವದ ಭಾವನೆ ಮಾಡುವ ಉಪದೇಶವಿದೆ. ಕರ್ಮಗಳ ಅಭಾವವು ಶುದ್ಧಸ್ವಭಾವದ ಧ್ಯಾನದಿಂದ ಆಗುತ್ತದೆ, ಅದನ್ನೇ ಮಾಡುವ ಉಪದೇಶವಿದೆ.

ಕರ್ಮಗಳು ಎಂಟು ಇದ್ದು ಅವುಗಳಲ್ಲಿ೧) ಜ್ಞಾನಾವರಣ, ೨) ದರ್ಶನಾವರಣ, ೩) ಮೋಹನೀಯ, ೪) ಅಂತರಾಯವೆಂದು ಇವು ನಾಲ್ಕು ಘಾತಿಕರ್ಮಗಳಿವೆ, ಅವುಗಳ ಪ್ರಕೃತಿಗಳು ನಲವತ್ತೇಳು ಇವೆ,ಕೇವಲ ಜ್ಞಾನಾವರಣದಿಂದ ಅನಂತಜ್ಞಾನವು ಆಚ್ಛಾದಿತವಿದೆ, ಕೇವಲದರ್ಶನಾವರಣದಿಂದ ಅನಂತದರ್ಶನವು ಆಚ್ಛಾದಿತವಿದೆ, ಮೋಹನೀಯದಿಂದ ಅನಂತಸುಖವು ಪ್ರಕಟವಾಗುವುದಿಲ್ಲ ಮತ್ತು ಅಂತರಾಯದಿಂದ ಅನಂತ ವೀರ್ಯವು ಪ್ರಕಟವಾಗುವುದಿಲ್ಲ, ಆದುದರಿಂದ ಇವುಗಳ ನಾಶ ಮಾಡಬೇಕು. ನಾಲ್ಕು ಅಘಾತಿಕರ್ಮಗಳಿಂದ ಅವ್ಯಾಬಾಧ, ಅಗುರುಲಘು, ಸೂಕ್ಷ್ಮತೆ ಮತ್ತು ಅವಗಾಹನಗುಣ (-ದ ನಿರ್ಮಲ ಪರ್ಯಾಯ)ಗಳು ಪ್ರಕಟವಾಗುವುದಿಲ್ಲ, ಈ ಅಘಾತಿಕರ್ಮಗಳ ಪ್ರಕೃತಿಗಳು ಒಂದುನೂರಾಒಂದು ಇವೆ. ಘಾತಿಕರ್ಮಗಳು ನಾಶವಾದ ಮೇಲೆ ಅಘಾತಿಕರ್ಮಗಳ ಅಭಾವವು ತಾನಾಗಿಯೇ ಆಗುತ್ತದೆಂದು ತಿಳಿಯಬೇಕು. ॥೧೧೯॥

ಈ ಕರ್ಮಗಳು ನಾಶವಾಗುವ ಸಲುವಾಗಿ ಅನೇಕ ಪ್ರಕಾರದ ಉಪದೇಶವಿದೆ, ಅದನ್ನು ಈಗ ಸಂಕ್ಷೇಪದಿಂದ ಹೇಳುತ್ತಾರೆ, -

**ಸೀಲಸಹಸ್ಸಟ್ಠಾರಸ ಚಉರಾಸೀಗುಣಗಣಾಣ ಲಕ್ಖಾಇಂ ।**
**ಭಾವಹಿ ಅಣುದಿಣು ಣಿಹಿಲಂ ಅಸಪ್ಪಲಾವೇಣ ಕಿಂ ಬಹುಣಾ ॥೧೨೦॥**

---

ಜ್ಞಾನಾವರಣಕರ್ಮ ಮೊದಲಾದೆಂಟು ಕರ್ಮಗಳಿಂದ ವೇಷ್ಟಿತನಿರುವೆನು ।
ನಾನೀಗವನು ಸುಟ್ಟು ಅನಂತಜ್ಞಾನಾದಿಗುಣಚೇತನ ಪ್ರಕಟಿಸುವೆನು ॥೧೧೯॥

ಹದಿನೆಂಟು ಸಾವಿರ ಶೀಲ ಮೇಣೆಂಭತ್ತಾ ನ್ಲುಕ್ಷ ಉತ್ತರಗುಣಗಳನು ।
ಸದಾಕಾಲ ಭಾವಿಸೆಲ್ಲವನು ಅಧಿಕ ಅಸತ್ಪ್ರಲಾಪದಿಂದೇನಾಗುವುದು ॥೧೨೦॥

**ಶೀಲಸಹಸ್ರಾಷ್ಟಾದಶ ಚತುರಶೀತಿಗುಣಗಣಾನಾಂ ಲಕ್ಷಾಣಿ ।**
**ಭಾವಯ ಅನುದಿನಂ ನಿಖಿಲಂ ಅಸತ್ಪ್ರಲಾಪೇನ ಕಿಂ ಬಹುನಾ ॥೧೨೦॥**

ಅರ್ಥ ಃ– ಶೀಲವು ಹದಿನೆಂಟುಸಾವಿರ ಭೇದರೂಪವಿದೆ ಮತ್ತು ಉತ್ತರ ಗುಣಗಳು ಎಂಭತ್ತಾ ್ಲಕ್ಕು ಲಕ್ಷ ಇವೆ. ಎಲೈ ಮುನಿಯೇ ! ಅಧಿಕ ಅಸತ್ಯ ಪ್ರಲಾಪರೂಪವಾದ ನಿರರ್ಥಕ ವಚನಗಳಿಂದೇನು ಪ್ರಯೋಜನವಿದೆ ? ಈ ಶೀಲಗಳನ್ನು ಮತ್ತು ಉತ್ತರಗುಣಗಳೆಲ್ಲವನ್ನೂ ನೀನು ನಿರಂತರವಾಗಿ ಭಾವಿಸು. ಇವುಗಳ ಭಾವನೆ–ಚಿಂತನೆ–ಅಭ್ಯಾಸಗಳನ್ನು ನಿರಂತರ ಮಾಡು, ಹೇಗೆ ಇವುಗಳ ಪ್ರಾಪ್ತಿಯಾಗುವುದೋ ಹಾಗೆಯೇ ಮಾಡು.

ಭಾವಾರ್ಥ ಃ– 'ಆತ್ಮ–ಜೀವ' ನಾಮದ ವಸ್ತುವು ಅನಂತಧರ್ಮಸ್ವರೂಪವಿದೆ. ಸಂಕ್ಷೇಪದಿಂದ ಸ್ವಾಭಾವಿಕ ಮತ್ತು ವಿಭಾವರೂಪವೆಂದು ಇದರ ಎರಡು ಪರಿಣತಿಗಳಿವೆ. ಇವುಗಳಲ್ಲಿ ಸ್ವಾಭಾವಿಕವಂತೂ ಶುದ್ಧದರ್ಶನ–ಜ್ಞಾನಮಯ ಚೇತನಾಪರಿಣಾಮವಿದೆ ಮತ್ತು ವಿಭಾವ ಪರಿಣಾಮಗಳು ಕರ್ಮದ ನಿಮಿತ್ತದಿಂದಿವೆ, ಇವು ಮುಖ್ಯರೂಪದಿಂದಂತೂ ಮೋಹಕರ್ಮದ ನಿಮಿತ್ತದಿಂದಾಗಿವೆ. ಸಂಕ್ಷೇಪದಿಂದ ಮಿಥ್ಯಾತ್ವ–ರಾಗ–ದ್ವೇಷಗಳಿವೆ, ವಿಸ್ತಾರದಿಂದ ಇವುಗಳಲ್ಲಿ ಅನೇಕ ಭೇದಗಳಿವೆ. ಅನ್ಯ ಕರ್ಮಗಳ ಉದಯದಿಂದ ವಿಭಾವಗಳಾಗುತ್ತವೆ ಅವುಗಳಲ್ಲಿ ಪೌರುಷವು ಮುಖ್ಯವಿರುವುದರಿಂದ ಉಪದೇಶ ಅಪೇಕ್ಷೆಯಿಂದ ಅವು ಗೌಣವಿವೆಯೆಂದು ಈ ಶೀಲ ಮತ್ತು ಉತ್ತರ ಗುಣಗಳನ್ನು ಸ್ವಭಾವವಿಭಾವ ಪರಿಣತಿಯ ಭೇದದಿಂದ ಭೇದರೂಪಮಾಡಿ ಹೇಳಿದ್ದಾರೆ.

ಶೀಲದ ಪ್ರರೂಪಣೆಯು ಒಂದು ಸ್ವದ್ರವ್ಯ–ಪರದ್ರವ್ಯದ ವಿಭಾವದ ಅಪೇಕ್ಷೆಯಿಂದ ಇನ್ನೊಂದು ಸ್ತ್ರೀ ಸಂಸರ್ಗದ ಅಪೇಕ್ಷೆಯಿಂದ ಹೀಗೆ ಎರಡು ಪ್ರಕಾರದ್ದಿದೆ. ಪರದ್ರವ್ಯದ ಸಂಸರ್ಗವನ್ನು ಮನ, ವಚನ, ಕಾಯದಿಂದ ಮತ್ತು ಕೃತ, ಕಾರಿತ, ಅನುಮೋದನದಿಂದ ಮಾಡದಿರುವುದು. ಇವನ್ನು ಪರಸ್ಪರದಲ್ಲಿ ಗುಣಾಕಾರ ಮಾಡುವುದರಿಂದ ಒಂಭತ್ತು ಭೇದಗಳಾಗುತ್ತವೆ. ಆಹಾರ, ಭಯ, ಮೈಥುನ ಮತ್ತು ಪರಿಗ್ರಹ ಇವು ನಾಲ್ಕು ಸಂಜ್ಞೆಗಳಿವೆ, ಇವುಗಳಿಂದ ಪರದ್ರವ್ಯದ ಸಂಸರ್ಗವಾಗುತ್ತದೆ ಅದು ಆಗದಿರುವುದು, ಹೀಗೆ ಒಂಭತ್ತು ಭೇದಗಳನ್ನು ನಾಲ್ಕು ಸಂಜ್ಞೆಗಳಿಂದ ಗುಣಾಕಾರ ಮಾಡಿದ ಮೇಲೆ ಮೂವತ್ತಾರು ಆಗುತ್ತವೆ, ಐದು ಇಂದ್ರಿಯಗಳ ನಿಮಿತ್ತದಿಂದ ವಿಷಯಗಳ ಸಂಸರ್ಗವಾಗುತ್ತದೆ, ಅವುಗಳ ಪ್ರವೃತ್ತಿಯ ಅಭಾವರೂಪವಾಗಿ ಐದು ಇಂದ್ರಿಯಗಳಿಂದ ಮೂವತ್ತಾರನ್ನು ಗುಣಾಕಾರ ಮಾಡಿದಮೇಲೆ ಒಂದುನೂರಾ ಎಂಭತ್ತು ಆಗುತ್ತವೆ, ಪೃಥ್ವಿ, ಅಪ್, ತೇಜ, ವಾಯು, ಪ್ರತ್ಯೇಕ, ಸಾಧಾರಣ ಇವಂತೂ ಏಕೇಂದ್ರಿಯವಿವೆ ಮತ್ತು ದ್ವೀಂದ್ರಿಯ, ತ್ರೀಂದ್ರಿಯ, ಚತುರಿಂದ್ರಿಯ, ಪಂಚೇಂದ್ರಿಯವೆಂದು ಹತ್ತು ಭೇದರೂಪ ಜೀವಗಳ ಸಂಸರ್ಗ, ಇವುಗಳ ಹಿಂಸಾರೂಪ ಪ್ರವರ್ತನೆಯಿಂದ ಪರಿಣಾಮಗಳು ವಿಭಾವರೂಪವಾಗುತ್ತವೆ ಅವು ಆಗದಿರುವುದು, ಹೀಗೆ ಒಂದುನೂರಾ ಎಂಭತ್ತು ಭೇದಗಳನ್ನು ಹತ್ತರಿಂದ ಗುಣಾಕಾರ ಮಾಡಿದ ಮೇಲೆ ಹದಿನೆಂಟು ನೂರು ಆಗುತ್ತವೆ. ಕ್ರೋಧಾದಿ ಕಷಾಯ ಮತ್ತು ಅಸಂಯಮ ಪರಿಣಾಮಗಳಿಂದ ಪರದ್ರವ್ಯ ಸಂಬಂಧದಲ್ಲಿ ವಿಭಾವಪರಿಣಾಮಗಳಾಗುತ್ತವೆ ಅವುಗಳ ಅಭಾವರೂಪವಾಗಿ ದಶಲಕ್ಷಣಧರ್ಮವಿವೆ, ಅವುಗಳಿಂದ ಗುಣಾಕಾರ ಮಾಡುವುದರಿಂದ ಹದಿನೆಂಟು ಸಾವಿರ ಆಗುತ್ತವೆ. ಹೀಗೆ ಪರದ್ರವ್ಯದ ಸಂಸರ್ಗರೂಪ ಕುಶೀಲದ ಅಭಾವರೂಪವಾಗಿ ಹದಿನೆಂಟುಸಾವಿರ ಶೀಲದ ಭೇದಗಳಿವೆ. ಇವುಗಳ ಪಾಲನದಿಂದ ಶ್ರೇಷ್ಠ ಬ್ರಹ್ಮಚರ್ಯವಾಗುತ್ತದೆ, ಬ್ರಹ್ಮ(ಆತ್ಮ)ನಲ್ಲಿ ಪ್ರವರ್ತಿಸುವುದು ಮತ್ತು ರಮಿಸುವುದನ್ನು 'ಬ್ರಹ್ಮಚರ್ಯ'ವೆಂದು ಹೇಳುತ್ತಾರೆ.

ಸ್ತ್ರೀಯ ಸಂಸರ್ಗದ ಅಪೇಕ್ಷೆಯಿಂದ ಹೀಗಿದೆ–ಸ್ತ್ರೀಯು ಚೇತನ, ಅಚೇತನವೆಂದು ಎರಡು ಪ್ರಕಾರವಿದ್ದು ಅಚೇತನ ಸ್ತ್ರೀಯು ಕಾಷ್ಠ, ಪಾಷಾಣ, ಲೇಪ್ಪ(ಚಿತ್ರ) ಇವು ಮೂರು, ಇವುಗಳ ಸಂಸರ್ಗವು ಮನ ಮತ್ತು ಕಾಯಗಳೆರಡರಿಂದ ಆಗುತ್ತದೆ, ಇಲ್ಲಿ ವಚನವಿಲ್ಲದಿರುವುದರಿಂದ ಎರಡರಿಂದ ಗುಣಾಕಾರ ಮಾಡಿದ ಮೇಲೆ ಆರು ಆಗುತ್ತವೆ. ಕೃತ, ಕಾರಿತ,

ಅನುಮೋದನದಿಂದ ಗುಣಾಕಾರ ಮಾಡಿದ ಮೇಲೆ ಹದಿನೆಂಟು ಆಗುತ್ತವೆ. ಐದು ಇಂದ್ರಿಯಗಳಿಂದ ಗುಣಾಕಾರ ಮಾಡಿದ ಮೇಲೆ ತೊಂಭತ್ತು ಆಗುತ್ತವೆ. ದ್ರವ್ಯ-ಭಾವದಿಂದ ಗುಣಾಕಾರ ಮಾಡಿದಮೇಲೆ ಒಂದುನೂರಾ ಎಂಭತ್ತು ಆಗುತ್ತವೆ, ಕ್ರೋಧ, ಮಾನ, ಮಾಯೆ, ಲೋಭ ಈ ನಾಲ್ಕು ಕಷಾಯಗಳಿಂದ ಗುಣಾಕಾರ ಮಾಡಿದಮೇಲೆ ಏಳುನೂರಾ ಇಪ್ಪತ್ತು ಆಗುತ್ತವೆ. ಇನ್ನು ಚೇತನ ಸ್ತ್ರೀಯು ದೇವಿ, ಮನುಷ್ಯಿಣಿ, ತಿರ್ಯಂಚಿಣಿಯೆಂದು ಮೂರು, ಈ ಮೂರನ್ನು ಮನ, ವಚನ,ಕಾಯಗಳಿಂದ ಗುಣಾಕಾರ ಮಾಡಿದ ಮೇಲೆ ಒಂಭತ್ತು ಆಗುತ್ತವೆ. ಇವನ್ನು ಕೃತ, ಕಾರಿತ, ಅನುಮೋದನದಿಂದ ಗುಣಾಕಾರ ಮಾಡಿದ ಮೇಲೆ ಇಪ್ಪತ್ತೇಳು ಆಗುತ್ತವೆ. ಇವನ್ನು ಐದು ಇಂದ್ರಿಯಗಳಿಂದ ಗುಣಾಕಾರ ಮಾಡಿದಮೇಲೆ ಒಂದುನೂರಾ ಮೂವತ್ತೈದು ಆಗುತ್ತವೆ. ಇವನ್ನು ದ್ರವ್ಯ ಮತ್ತು ಭಾವ ಇವೆರಡರಿಂದ ಗುಣಾಕಾರ ಮಾಡಿದ ಮೇಲೆ ಇನ್ನೂರಾ ಎಪ್ಪತ್ತು ಆಗುತ್ತವೆ. ಇವನ್ನು ನಾಲ್ಕು ಸಂಜ್ಞೆಗಳಿಂದ ಗುಣಾಕಾರ ಮಾಡಿದ ಮೇಲೆ ಒಂದು ಸಾವಿರದಾ ಎಂಭತ್ತು ಆಗುತ್ತವೆ. ಇವನ್ನು ಅನಂತಾನುಬಂಧಿ, ಅಪ್ರತ್ಯಾಖ್ಯಾನಾವರಣ, ಪ್ರತ್ಯಾಖ್ಯಾನಾವರಣ, ಸಂಜ್ವಲನ, ಕ್ರೋಧ, ಮಾನ, ಮಾಯೆ, ಲೋಭ ಈ ಹದಿನಾರು ಕಷಾಯಗಳಿಂದ ಗುಣಾಕಾರ ಮಾಡಿದ ಮೇಲೆ ಹದಿನೇಳು ಸಾವಿರದಾ ಇನ್ನೂರಾ ಎಂಭತ್ತು ಆಗುತ್ತವೆ. ಹೀಗೆ ಅಚೇತನ ಸ್ತ್ರೀಯ ಏಳುನೂರಾ ಇಪ್ಪತ್ತು ಸೇರಿಸಿದ ಮೇಲೆ[1] ಹದಿನೆಂಟು ಸಾವಿರ ಆಗುತ್ತವೆ ಹೀಗೆ ಸ್ತ್ರೀಯ ಸಂಸರ್ಗದಿಂದ ವಿಕಾರ ಪರಿಣಾಮಗಳಾಗುತ್ತವೆ ಅದು ಕುಶೀಲವಿದೆ, ಇವುಗಳ ಅಭಾವರೂಪ ಪರಿಣಾಮವು ಶೀಲವಿದೆ, ಇದರದೂ ಕೂಡ 'ಬ್ರಹ್ಮಚರ್ಯ'ವೆಂಬ ಸಂಜ್ಞೆಯಿದೆ.

ಎಂಭತ್ತಾ ನ್ಲುಕ್ಕ ಲಕ್ಷ ಗುಣಗಳು ಹೀಗಿದೆ. ಆ ಆತ್ಮನ ವಿಭಾವ ಪರಿಣಾಮಗಳ ಬಾಹ್ಯ ಕಾರಣಗಳ ಅಪೇಕ್ಷೆಯಿಂದ ಭೇದಗಳಾಗುತ್ತವೆ. ಅವುಗಳ ಅಭಾವರೂಪವಾಗಿ ಈ ಗುಣಗಳ ಭೇದಗಳಿವೆ. ಆ ವಿಭಾವಗಳ ಭೇದಗಳ ಗಣನೆಯು ಸಂಕ್ಷೇಪದಿಂದ ಹೀಗಿದೆ. ೧) ಹಿಂಸೆ, ೨) ಅನೃತ, ೩) ಸ್ತೇಯ, ೪) ಮೈಥುನ, ೫) ಪರಿಗ್ರಹ, ೬) ಕ್ರೋಧ, ೭) ಮಾನ, ೮) ಮಾಯೆ, ೯) ಲೋಭ, ೧೦) ಭಯ, ೧೧) ಜುಗುಪ್ಸೆ, ೧೨) ಅರತಿ, ೧೩) ಶೋಕ, ೧೪) ಮನೋದುಷ್ಟತ್ವ, ೧೫) ವಚನದುಷ್ಟತ್ವ, ೧೬) ಕಾಯದುಷ್ಟತ್ವ, ೧೭) ಮಿಥ್ಯಾತ್ವ, ೧೮) ಪ್ರಮಾದ, ೧೯) ಪೈಶೂನ್ಯ, ೨೦) ಅಜ್ಞಾನ, ೨೧) ಇಂದ್ರಿಯದ ಅನುಗ್ರಹವೆಂದು ಇಪ್ಪತ್ತೊಂದು ದೋಷಗಳಿವೆ. ಇವನ್ನು ಅತಿಕ್ರಮ, ವ್ಯತಿಕ್ರಮ, ಅತಿಚಾರ, ಅನಾಚಾರ ಈ ನಾಲ್ಕರಿಂದ ಗುಣಾಕಾರ ಮಾಡಿದ ಮೇಲೆ ಎಂಭತ್ತಾ ನ್ಲುಕ್ಕ ಆಗುತ್ತವೆ. ಪೃಥ್ವಿ-ಅಪ್-ತೇಜ-ವಾಯು-ಪ್ರತ್ಯೇಕ- ಸಾಧಾರಣ ಈ ಸ್ಥಾವರ ಏಕೇಂದ್ರಿಯ ಜೀವಗಳು ಆರು ಮತ್ತು ವಿಕಲ ಮೂರು ಪಂಚೇಂದ್ರಿಯ ಒಂದು ಹೀಗೆ ಜೀವಗಳ ಭೇದ ಹತ್ತು, ಪರಸ್ಪರ ಆರಂಭದಿಂದ ಇವುಗಳ ಘಾತವಾಗುತ್ತದೆ ಇದನ್ನು ಪರಸ್ಪರ ಗುಣಾಕಾರ ಮಾಡಿದ ಮೇಲೆ ನೂರು ಆಗುತ್ತವೆ. ಇವುಗಳಿಂದ ಎಂಭತ್ತಾ ನ್ಲಕ್ಕೆ ಗುಣಾಕಾರ ಮಾಡಿದ ಮೇಲೆ ಎಂಟುಸಾವಿರದಾ ನಾನೂರು ಆಗುತ್ತವೆ, ಇವನ್ನು ಹತ್ತು 'ಶೀಲ-ವಿರಾಧನೆ'ಯಿಂದ ಗುಣಾಕಾರ ಮಾಡಿದ ಮೇಲೆ ಎಂಭತ್ತಾ ನ್ಲುಕ್ಕ ಸಾವಿರ ಆಗುತ್ತವೆ. ೧) ಸ್ತ್ರೀಸಂಸರ್ಗ, ೨)

---

| | | | | | | | |
|---|---|---|---|---|---|---|---|
| ೧ ಅಚೇತನಃ ಸ್ತ್ರೀ | ಕಾಷ್ಠ, ಪಾಷಾಣ<br>ಚಿತ್ರಣ | ಮನ<br>ಕಾಯ | ಕೃತ, ಕಾರಿತ<br>ಅನುಮೋದನ | ಇಂದ್ರಿಯಗಳು<br>೫ | ದ್ರವ್ಯ<br>ಭಾವ | ಕ್ರೋಧ, ಮಾನ<br>ಮಾಯೆ, ಲೋಭ | |
| | ೩ x | ೨ x | ೩ x | ೫ x | ೨ x | ೪ | = ೭೨೦ |

| | | | | | | | | | |
|---|---|---|---|---|---|---|---|---|---|
| ಚೇತನ<br>ಸ್ತ್ರೀ | ದೇವಿ<br>ಮನುಷ್ಯಿಣಿ<br>ತಿರ್ಯಂಚಿಣಿ | ಮನ<br>ವಚನ<br>ಕಾಯ | ಕೃತ,ಕಾರಿತ<br>ಅನುಮೋದನ | ಇಂದ್ರಿಯಗಳು<br>೫ | ದ್ರವ್ಯ<br>ಭಾವ | ಆಹಾರ<br>ಪರಿಗ್ರಹ<br>ಭಯ, ಮೈಥುನ | ಅನಂತಾನುಬಂಧಿ<br>ಅಪ್ರತ್ಯಾಖ್ಯಾನಾವರಣ<br>ಪ್ರತ್ಯಾಖ್ಯಾನಾವರಣ<br>ಸಂಜ್ವಲನ | ಕ್ರೋಧ, ಮಾನ<br>ಮಾಯೆ<br>ಲೋಭ | |
| | ೩ x | ೩ x | ೩ x | ೫ x | ೨ x | ೪ x | ೪ x | ೪ | = ೧೭೨೮೦<br>೧೮೦೦೦ |

ಪುಷ್ಟರಸಭೋಜನ, ೩) ಗಂಧಮಾಲ್ಯಾದಿಗಳ ಗ್ರಹಣ, ೪) ಸುಂದರ ಶಯನಾಸನದ ಗ್ರಹಣ, ೫) ಭೂಷಣಮಂಡನ, ೬)ಗೀತವಾದನದ ಪ್ರಸಂಗ, ೭) ಧನದ ಸಂಪ್ರಯೋಜನ, ೮) ಕುಶೀಲದ ಸಂಸರ್ಗ, ೯) ರಾಜಸೇವೆ, ೧೦) ನಿಶಾಸಂಚಾರ ಇವು ಹತ್ತು 'ಶೀಲ ವಿರಾಧನೆ'ಗಳಿವೆ. ಇವುಗಳ ಆಲೋಚನೆಯ ದೋಷಗಳು ಹತ್ತು ಇವೆ. – ಗುರುಗಳ ಹತ್ತಿರ ತಗಲಿದ ದೋಷಗಳ ಆಲೋಚನೆ ಮಾಡುವುದು ಅದನ್ನು ಸರಳವಾಗಿ ಮಾಡದೆ ಸ್ವಲ್ಪ ಶಲ್ಯವಿಡುವುದರ ಭೇದಗಳು ಹತ್ತು ಇವೆ, ಇವುಗಳಿಂದ ಗುಣಾಕಾರ ಮಾಡಿದ ಮೇಲೆ ಎಂಟುಲಕ್ಷ ನಲವತ್ತುಸಾವಿರ ಆಗುತ್ತವೆ. ಆಲೋಚನೆಯನ್ನು ಮೊದಲು ಮಾಡಿಕೊಂಡು ಪ್ರಾಯಶ್ಚಿತ್ತದ ಹತ್ತು ಭೇದಗಳಿವೆ ಇವುಗಳಿಂದ ಗುಣಾಕಾರ ಮಾಡಿದ ಮೇಲೆ ಎಂಭತ್ತಾ ಲ್ಕು ಲಕ್ಷ ಆಗುತ್ತವೆ ಇವೆಲ್ಲವು ದೋಷಗಳ ಭೇದಗಳಿದ್ದು ಇವುಗಳ ಅಭಾವದಿಂದ ಗುಣಗಳಾಗುತ್ತವೆ. ಇವುಗಳ ಭಾವನೆ ಮಾಡಬೇಕು, ಚಿಂತನೆ ಮತ್ತು ಅಭ್ಯಾಸ ಮಾಡಬೇಕು, ಇವುಗಳು ಸಂಪೂರ್ಣವಾಗಿ ಪ್ರಾಪ್ತಿಯಾಗುವ ಉಪಾಯ ಮಾಡಬೇಕು, ಹೀಗೆ ಇವುಗಳ ಭಾವನೆಯ ಉಪದೇಶವಿದೆ.

ಪುನಃ ಪುನಃ ಅಧಿಕ ವಚನದ ಪ್ರಲಾಪದಿಂದಂತೂ ಯಾವುದೂ ಸಾಧ್ಯವಿಲ್ಲ, ಆ ಆತ್ಮನ ಭಾವದ ಪ್ರವೃತ್ತಿಯ ವ್ಯವಹಾರದ ಭೇದಗಳಿವೆ ಅವಕ್ಕೆ 'ಗುಣ'ವೆಂದು ಸಂಜ್ಞೆಯಿದೆ, ಅವುಗಳ ಭಾವನೆ ಮಾಡಬೇಕೆಂದು ಆಚಾರ್ಯರು ಹೇಳುತ್ತಾರೆ. ಹದಿನಾಲ್ಕು ಗುಣಸ್ಥಾನಗಳನ್ನು ಹೇಳಿದೆ ಆ ಪರಿಪಾಟಿಯಿಂದ ಗುಣದೋಷಗಳ ವಿಚಾರವಿದೆಯೆಂದು ಇಲ್ಲಿ ತಿಳಿಯಬೇಕು. ಮಿಥ್ಯಾತ್ವ, ಸಾಸಾದನ, ಮಿಶ್ರ ಈ ಮೂರರಲ್ಲಂತೂ ವಿಭಾವ ಪರಿಣತಿಯೇ ಇದೆ, ಇವುಗಳಲ್ಲಂತೂ ಗುಣದ ವಿಚಾರವೇ ಇಲ್ಲ. ಅವಿರತಿ, ದೇಶವಿರತ ಮೊದಲಾದುವಲ್ಲಿ ಶೀಲ ಗುಣದ ಏಕದೇಶವು ಬರುತ್ತದೆ. ಅವಿರತಿಯಲ್ಲಿ ಮಿಥ್ಯಾತ್ವ ಅನಂತಾನುಬಂಧೀ ಕಷಾಯದ ಅಭಾವರೂಪಗುಣದ ಏಕದೇಶ ಸಮ್ಯಕ್ತ್ವ ಮತ್ತು ತೀವ್ರರಾಗದ್ವೇಷಗಳ ಅಭಾವರೂಪಗುಣವು ಬರುತ್ತದೆ ಮತ್ತು ದೇಶವಿರತದಲ್ಲಿ ಸ್ವಲ್ಪ ವ್ರತದ ಏಕದೇಶ ಬರುತ್ತದೆ. ಪ್ರಮತ್ತದಲ್ಲಿ ಮಹಾವ್ರತರೂಪ ಸಾಮಾಯಿಕ ಚಾರಿತ್ರದ ಏಕದೇಶ ಬರುತ್ತದೆ, ಏಕೆಂದರೆ ಪಾಪಸಂಬಂಧದ ರಾಗದ್ವೇಷಗಳಂತೂ ಇಲ್ಲಿ ಇಲ್ಲ, ಆದರೆ ಧರ್ಮಸಂಬಂಧದ ರಾಗವಿದೆ ಮತ್ತು 'ಸಾಮಾಯಿಕ'ವು ರಾಗದ್ವೇಷಗಳ ಅಭಾವದ ಹೆಸರಿದೆ, ಆದುದರಿಂದ ಸಾಮಾಯಿಕದ ಏಕದೇಶವನ್ನೇ ಹೇಳಿದೆ. ಇಲ್ಲಿ ಸ್ವರೂಪದ ಸನ್ಮುಖವಾಗುವಲ್ಲಿ ಕ್ರಿಯಾಕಾಂಡದ ಸಂಬಂಧದಿಂದ ಪ್ರಮಾದವಿರುವುದರಿಂದ 'ಪ್ರಮತ್ತ'ನಾಮ ಕೊಡಲಾಗಿದೆ. ಅಪ್ರಮತ್ತದಲ್ಲಿ ಸ್ವರೂಪಸಾಧನೆಯಲ್ಲಂತೂ ಪ್ರಮಾದವಿಲ್ಲ, ಆದರೆ ಸ್ವಲ್ಪ ಸ್ವರೂಪದ ಸಾಧನೆಯ ರಾಗವು ವ್ಯಕ್ತವಿರುವುದರಿಂದ ಅಲ್ಲಿ ಕೂಡ ಸಾಮಾಯಿಕದ ಏಕದೇಶವನ್ನೇ ಹೇಳಿದೆ. ಅಪೂರ್ವಕರಣ–ಅನಿವೃತ್ತಿಕರಣದಲ್ಲಿ ರಾಗವು ವ್ಯಕ್ತವಿಲ್ಲ, ಅವ್ಯಕ್ತಕಷಾಯದ ಸದ್ಭಾವವಿರುವುದರಿಂದ ಸಾಮಾಯಿಕ ಚಾರಿತ್ರದ ಪೂರ್ಣತೆ ಹೇಳಿದೆ. ಸೂಕ್ಷ್ಮಸಾಂಪರಾಯದಲ್ಲಿ ಅವ್ಯಕ್ತಕಷಾಯ ಕೂಡ ಸೂಕ್ಷ್ಮ ಉಳಿದಿರುವುದರಿಂದ ಇದರ ಹೆಸರು 'ಸೂಕ್ಷ್ಮಸಾಂಪರಾಯ'ವೆಂದಿದೆ. ಉಪಶಾಂತಮೋಹ, ಕ್ಷೀಣಮೋಹದಲ್ಲಿ ಕಷಾಯದ ಅಭಾವವೇ ಇರುವುದರಿಂದ ಹೇಗೆ ಆತ್ಮನದು ಮೋಹ–ವಿಕಾರರಹಿತ ಶುದ್ಧಸ್ವರೂಪವಿತ್ತು ಅದರ ಅನುಭವವಾಯಿತು, ಆದುದರಿಂದ 'ಯಥಾಖ್ಯಾತ–ಚಾರಿತ್ರ'ವೆಂಬ ಹೆಸರನ್ನಿಡಲಾಗಿದೆ. ಹೀಗೆ ಚಾರಿತ್ರಮೋಹದ ಅಭಾವದ ಅಪೇಕ್ಷೆಯಿಂದಂತೂ ಇಲ್ಲಿಯೇ ಉತ್ತರ ಗುಣಗಳ ಪೂರ್ಣತೆಯನ್ನು ಹೇಳಲಾಗುತ್ತದೆ, ಆದರೆ ಆತ್ಮನ ಸ್ವರೂಪವು ಅನಂತಜ್ಞಾನಾದಿ ಸ್ವರೂಪವಿದ್ದು ಅದು ಘಾತಿಕರ್ಮಗಳ ನಾಶವಾದಮೇಲೆ ಅನಂತಜ್ಞಾನಾದಿಗಳು ಪ್ರಕಟವಾಗುತ್ತವೆ ಆಗ 'ಸಯೋಗಕೇವಲಿ'ಯೆಂದು ಹೇಳುತ್ತಾರೆ. ಅದರಲ್ಲೂ ಸ್ವಲ್ಪ ಯೋಗಗಳ ಪ್ರವೃತ್ತಿಯಿರುವುದರಿಂದ 'ಅಯೋಗಕೇವಲಿ'ಯು ಹದಿನಾಲ್ಕನೆಯ ಗುಣಸ್ಥಾನವಿದೆ. ಇದರಲ್ಲಿ ಯೋಗಗಳ ಪ್ರವೃತ್ತಿಯು ದೂರವಾಗಿ ಆತ್ಮನು ಅವಸ್ಥಿತನಾಗಿಬಿಡುತ್ತಾನೆ ಆಗ ಎಂಭತ್ತಾ ಲ್ಕುಲಕ್ಷ ಉತ್ತರಗುಣಗಳ ಪೂರ್ಣತೆಯನ್ನು ಹೇಳಲಾಗುತ್ತದೆ. ಹೀಗೆ ಗುಣಸ್ಥಾನಗಳ ಅಪೇಕ್ಷೆಯಿಂದ ಉತ್ತರಗುಣಗಳ ಪ್ರವೃತ್ತಿಯು ವಿಚಾರಿಸಲು ಯೋಗ್ಯವಿದೆ. ಇವು

ಬಾಹ್ಯ ಅಪೇಕ್ಷೆಯಿಂದ ಭೇದಗಳಿವೆ ಅಂತರಂಗದ ಅಪೇಕ್ಷೆಯಿಂದ ವಿಚಾರಮಾಡಿದರೆ ಸಂಖ್ಯಾತ, ಅಸಂಖ್ಯಾತ, ಅನಂತ ಭೇದಗಳಾಗುತ್ತವೆಯೆಂದು ತಿಳಿದುಕೊಳ್ಳಬೇಕು. ||೧೨೦||

ಈಗ ಭೇದಗಳ ವಿಕಲ್ಪದಿಂದ ರಹಿತರಾಗಿ ಧ್ಯಾನ ಮಾಡುವ ಉಪದೇಶ ಮಾಡುತ್ತಾರೆ, –

ಝಾಯಹಿ ಧಮ್ಮಂ ಸುಕ್ಕಂ ಅಟ್ಟಂ ರಉದ್ದಂ ಚ ಝಾಣ ಮುತ್ತೂಣ ।
ರುದ್ದಟ್ಟ ಝಾಇಯಾಇಂ ಇಮೇಣ ಜೀವೇಣ ಚಿರಕಾಲಂ ||೧೨೧||

ಧ್ಯಾಯ ಧರ್ಮ್ಯಂ ಶುಕ್ಲಂ ಆರ್ತಂ ರೌದ್ರಂ ಚ ಧ್ಯಾನಂ ಮುಕ್ತ್ವಾ ।
ರೌದ್ರಾರ್ತೇ ಧ್ಯಾತೇ ಅನೇನ ಜೀವೇನ ಚಿರಕಾಲಮ್ ||೧೨೧||

ಅರ್ಥ ಃ– ಎಲೈ ಮುನಿಯೇ ! ನೀನು ಆರ್ತ–ರೌದ್ರ ಧ್ಯಾನಗಳನ್ನು ಬಿಡು ಮತ್ತು ಧರ್ಮ–ಶುಕ್ಲಧ್ಯಾನಗಳನ್ನೇ ಮಾಡು, ಏಕೆಂದರೆ ರೌದ್ರ ಮತ್ತು ಆರ್ತಧ್ಯಾನಗಳನ್ನಂತೂ ಈ ಜೀವನು ಅನಾದಿಕಾಲದಿಂದ ಅಧಿಕ ಸಮಯದವರೆಗೆ ಮಾಡಿದ್ದಾನೆ.

ಭಾವಾರ್ಥ ಃ– ಆರ್ತ–ರೌದ್ರ ಧ್ಯಾನಗಳು ಅವು ಅಶುಭವಿದ್ದು ಸಂಸಾರಕ್ಕೆ ಕಾರಣವಿವೆ, ಇವೆರಡೂ ಧ್ಯಾನಗಳಂತೂ ಜೀವನಿಗೆ ಉಪದೇಶವಿಲ್ಲದೆಯೇ ಅನಾದಿಯಿಂದ ಕಂಡು ಬರುತ್ತವೆ, ಆದುದರಿಂದ ಇವನ್ನು ಬಿಡುವ ಉಪದೇಶವಿದೆ. ಧರ್ಮ–ಶುಕ್ಲಧ್ಯಾನಗಳು ಸ್ವರ್ಗ–ಮೋಕ್ಷಕ್ಕೆ ಕಾರಣವಿವೆ. ಇವನ್ನೆಂದೂ ಧ್ಯಾನಿಸಿಲ್ಲ, ಆದುದರಿಂದ ಇವುಗಳ ಧ್ಯಾನ ಮಾಡುವ ಉಪದೇಶವಿದೆ. ಧ್ಯಾನದ ಸ್ವರೂಪವನ್ನು 'ಏಕಾಗ್ರಚಿಂತಾನಿರೋಧ' ವೆಂದು ಹೇಳಿದೆ. ಧರ್ಮಧ್ಯಾನದಲ್ಲಂತೂ ಧರ್ಮಾನುರಾಗದ ಸದ್ಭಾವವಿದೆ, ಅದು ಧರ್ಮದ ಮೋಕ್ಷಮಾರ್ಗದ ಕಾರಣದಲ್ಲಿ ರಾಗಸಹಿತ–ಏಕಾಗ್ರಚಿಂತಾನಿರೋಧವಾಗುತ್ತದೆ. ಆದುದರಿಂದ ಶುಭರಾಗದ ನಿಮಿತ್ತದಿಂದ ಪುಣ್ಯಬಂಧ ಕೂಡ ಆಗುತ್ತದೆ ಮತ್ತು ವಿಶುದ್ಧಭಾವದ ನಿಮಿತ್ತದಿಂದ ಪಾಪಕರ್ಮದ ನಿರ್ಜರೆ ಕೂಡ ಆಗುತ್ತದೆ. ಶುಕ್ಲಧ್ಯಾನದಲ್ಲಿ ಎಂಟನೆಯ, ಒಂಭತ್ತನೆಯ, ಹತ್ತನೆಯ ಗುಣಸ್ಥಾನದಲ್ಲಂತೂ ಅವ್ಯಕ್ತರಾಗವಿದೆ. ಅಲ್ಲಿ ಅನುಭವ–ಅಪೇಕ್ಷೆಯಿಂದ ಉಪಯೋಗವು ಉಜ್ವಲವಿದೆ, ಆದುದರಿಂದ 'ಶುಕ್ಲ'ವೆಂಬ ಹೆಸರನ್ನಿಟ್ಟಿದೆ ಮತ್ತು ಇದರ ಮೇಲಿನ ಗುಣಸ್ಥಾನಗಳಲ್ಲಿ ರಾಗ–ಕಷಾಯದ ಅಭಾವವೇ ಇರುವುದರಿಂದ ಉಪಯೋಗವು ಸರ್ವಥಾ ಉಜ್ವಲವೇ ಇದೆ, ಅಲ್ಲಿ ಶುಕ್ಲಧ್ಯಾನವು ಯುಕ್ತವೇ ಇದೆ. ಉಪಯೋಗದ ಏಕಗ್ರಾತಾರೂಪ ಧ್ಯಾನದ ಸ್ಥಿತಿಯು ಅಂತರ್ಮುಹೂರ್ತವಿರುವುದಿಷ್ಟು ವಿಶೇಷತೆಯಿದೆ. ಆ ಅಪೇಕ್ಷೆಯಿಂದ ಹದಿಮೂರನೆಯ–ಹದಿನಾಲ್ಕನೆಯ ಗುಣಸ್ಥಾನದಲ್ಲಿ ಧ್ಯಾನದ ಉಪಚಾರವಿದೆ ಮತ್ತು ಯೋಗಕ್ರಿಯೆಯ ಸ್ತಂಭನದ ಅಪೇಕ್ಷೆಯಿಂದ ಧ್ಯಾನವೆಂದು ಹೇಳಿದೆ ಈ ಶುಕ್ಲಧ್ಯಾನವು ಕರ್ಮದ ನಿರ್ಜರೆಮಾಡಿ ಜೀವನಿಗೆ ಮೋಕ್ಷದ ಪ್ರಾಪ್ತಿ ಮಾಡಿಸುತ್ತದೆ. ಹೀಗೆ ಧ್ಯಾನದ ಉಪದೇಶವಿದೆಯೆಂದು ತಿಳಿಯಬೇಕು. ||೧೨೧||

ಈ ಧ್ಯಾನವು ಭಾವಲಿಂಗಿ ಮುನಿಗೆ ಮೋಕ್ಷ ಮಾಡಿಸುತ್ತದೆಂದು ಈಗ ಹೇಳುತ್ತಾರೆ, –

---

ಧ್ಯಾನಿಸು ಧರ್ಮಶುಕ್ಲಧ್ಯಾನಗಳನು ಆರ್ತರೌದ್ರಧ್ಯಾನಗಳನು ತ್ಯಜಿಸು ।
ಧ್ಯಾನಿಸಿಹನಾರ್ತರೌದ್ರಗಳನೀ ಜೀವ ಅನಾದಿಯಿಂ ಚಿರಕಾಲವರೆಗೆ ||೧೨೧||

**ಜೇ ಕೇ ವಿ ದವ್ವಸವಣಾ ಇಂದಿಯಸುಹಆಉಲಾ ಣ ಛಿಂದಂತಿ ।**
**ಛಿಂದಂತಿ ಭಾವಸವಣಾ ಝಾಣಕುಢಾರೇಹಿಂ ಭವರುಕ್ಖಂ ॥೧೨೨॥**

**ಯೇ ಕೇಽಪಿ ದ್ರವ್ಯಶ್ರಮಣಾ ಇಂದ್ರಿಯಸುಖಾಕುಲಾಃ ನ ಛಿಂದಂತಿ ।**
**ಛಿಂದಂತಿ ಭಾವಶ್ರಮಣಾ ಧ್ಯಾನಕುಠಾರೈಃ ಭವವೃಕ್ಷಮ್ ॥೧೨೨॥**

ಅರ್ಥ ಃ- ಕೆಲವು ದ್ರವ್ಯಲಿಂಗಿ ಶ್ರಮಣರಿದ್ದಾರೆ, ಅವರಂತೂ ಇಂದ್ರಿಯಸುಖದಲ್ಲಿ ವ್ಯಾಕುಲರಿದ್ದಾರೆ, ಅವರಿಗೆ ಈ ಧರ್ಮ-ಶುಕ್ಲ ಧ್ಯಾನಗಳಾಗುವುದಿಲ್ಲ, ಅವರಂತೂ ಸಂಸಾರರೂಪದ ವೃಕ್ಷವನ್ನು ಕತ್ತರಿಸುವಲ್ಲಿ ಸಮರ್ಥರಿಲ್ಲ ಮತ್ತು ಭಾವಲಿಂಗಿ ಶ್ರಮಣರಿದ್ದಾರೆ ಅವರು ಧ್ಯಾನರೂಪದ ಕುಠಾರದಿಂದ ಸಂಸಾರರೂಪದ ವೃಕ್ಷವನ್ನು ಕತ್ತರಿಸುತ್ತಾರೆ.

ಭಾವಾರ್ಥ ಃ- ಆ ಮುನಿಗಳು ದ್ರವ್ಯಲಿಂಗವನ್ನಂತೂ ಧಾರಣ ಮಾಡುತ್ತಾರೆ, ಆದರೆ ಅವರಿಗೆ ಪರಮಾರ್ಥ ಸುಖದ ಅನುಭವವಾಗಿಲ್ಲ, ಆದುದರಿಂದ ಇಹಲೋಕ-ಪರಲೋಕದಲ್ಲಿ ಇಂದ್ರಿಯಗಳ ಸುಖವನ್ನೇ ಇಚ್ಛಿಸುತ್ತಾರೆ, ತಪಶ್ಚರ್ಯಾದಿಗಳನ್ನು ಕೂಡ ಅವರು ಇದೇ ಅಭಿಪ್ರಾಯದಿಂದ ಮಾಡುತ್ತಾರೆ, ಅವರಿಗೆ ಧರ್ಮ-ಶುಕ್ಲಧ್ಯಾನಗಳು ಹೇಗಾಗುವವು ? ಎಂದರೆ ಆಗುವುದಿಲ್ಲ. ಪರಮಾರ್ಥಸುಖದ ಆಸ್ವಾದಪಡೆದವರಿಗೆ ಇಂದ್ರಿಯಸುಖಗಳು ದುಃಖವೇ ಇವೆಯೆಂದು ಸ್ಪಷ್ಟ ಭಾಸವಾಗಿದೆ, ಆದುದರಿಂದ ಪರಮಾರ್ಥಸುಖದ ಉಪಾಯವು ಧರ್ಮ-ಶುಕ್ಲ ಧ್ಯಾನವಿದ್ದು ಅದನ್ನು ಮಾಡಿ ಅವರು ಸಂಸಾರದ ಅಭಾವ ಮಾಡುತ್ತಾರೆ, ಆದುದರಿಂದ ಭಾವಲಿಂಗಿಯಾಗಿ ಧ್ಯಾನದ ಅಭ್ಯಾಸ ಮಾಡಬೇಕು. ॥೧೨೨॥

ಈಗ ಇದೇ ಅರ್ಥವನ್ನು ದೃಷ್ಟಾಂತದ ಮುಖಾಂತರ ದೃಢ ಮಾಡುತ್ತಾರೆ,-

**ಜಹ ದೀವೋ ಗಬ್ಭಹರೇ ಮಾರುಯಬಾಹಾವಿವಜ್ಜಿಓ ಜಲಇ ।**
**ತಹ ರಾಯಾಣಿಲರಹಿಓ ಝಾಣಪಈವೋ ವಿ ಪಜ್ಜಲಇ ॥೧೨೩॥**

**ಯಥಾ ದೀಪಃ ಗರ್ಭಗೃಹೇ ಮಾರುತಬಾಧಾವಿವರ್ಜಿತಃ ಜ್ವಲತಿ ।**
**ತಥಾ ರಾಗಾನಿಲರಹಿತಃ ಧ್ಯಾನಪ್ರದೀಪಃ ಅಪಿ ಪ್ರಜ್ವಲತಿ ॥೧೨೩॥**

ಅರ್ಥ ಃ- ಯಾವ ಪ್ರಕಾರ ದೀವಿಗೆಯು ಗರ್ಭಗೃಹ ಎಂದರೆ ವಾಯು ಸಂಚಾರವಿಲ್ಲದಂಥ ಮಧ್ಯದ ಮನೆಯಲ್ಲಿ ಗಾಳಿಯ ಬಾಧೆಯಿಲ್ಲದೆ ನಿಶ್ಚಲವಾಗಿ ಉರಿಯುತ್ತದೆ (ಪ್ರಕಾಶ ಬೀರುತ್ತದೆ), ಅದೇ ಪ್ರಕಾರ ಅಂತರಂಗದ ಮನಸ್ಸಿನಲ್ಲಿ ರಾಗರೂಪದ ಗಾಳಿಯಿಂದ ರಹಿತವಾಗಿ ಧ್ಯಾನರೂಪದ ದೀವಿಗೆ ಕೂಡ ಉರಿಯುತ್ತದೆ, ಏಕಾಗ್ರವಾಗಿ ನಿಂತುಕೊಳ್ಳುತ್ತದೆ, ಆತ್ಮಸ್ವರೂಪವನ್ನು ಪ್ರಕಾಶಿತ ಮಾಡುತ್ತದೆ.

---

**ಭೇದಿಸಲಸಮರ್ಥರು ಇಂದ್ರಿಯಸುಖಾಕುಲರಿರುವ ದ್ರವ್ಯಶ್ರಮಣರು ।**
**ಭೇದಿಸುವರು ಭಾವಶ್ರಮಣರು ಧ್ಯಾನಕುಠಾರದಿಂದಾ ಭವವೃಕ್ಷವನು ॥೧೨೨॥**

**ಹೇಗೆ ದೀವಿಗೆ ಗರ್ಭಗೃಹದಲ್ಲಿ ಪವನಬಾಧೆಯಿಲ್ಲದೆ ಉರಿಯುವುದು ।**
**ಹಾಗೆ ಧ್ಯಾನಪ್ರದೀಪ ಕೂಡ ರಾಗಾನಿಲವಿವರ್ಜಿತವಾಗಿ ಉರಿಯುವುದು ॥೧೨೩॥**

ಭಾವಾರ್ಥ :- ಇಂದ್ರಿಯ ಸುಖದಲ್ಲಿ ವ್ಯಾಕುಲರಿರುವವರಿಗೆ ಶುಭಧ್ಯಾನವಾಗುವುದಿಲ್ಲವೆಂದು ಮೊದಲು ಹೇಳಿತ್ತು, ಈ ದೀವಿಗೆಯ ದೃಷ್ಟಾಂತವು ಅದರದಿದೆ. ಆ ಇಂದ್ರಿಯಗಳ ಸುಖದಲ್ಲಿರುವ ರಾಗವೇ ವಾಯುವಿದೆ ಅದು ವಿದ್ಯಮಾನವಿದೆ ಎಂದ ಮೇಲೆ ಅವರ ಧ್ಯಾನರೂಪದ ದೀವಿಗೆಯು ನಿರ್ಬಾಧವಾಗಿ ಹೇಗೆ ಉದ್ಯೋತ ಮಾಡುವುದು? ಎಂದರೆ ಮಾಡುವುದಿಲ್ಲ ಮತ್ತು ಯಾರಿಗೆ ಈ ರಾಗರೂಪದ ಗಾಳಿಯು ಬಾಧೆ ಮಾಡುವುದಿಲ್ಲ ಅವರಿಗೆ ಧ್ಯಾನರೂಪದ ದೀವಿಗೆಯು ನಿಶ್ಚಲವಾಗಿ ಸ್ಥಿರಗೊಳ್ಳುತ್ತದೆ. ||೧೨೩||

ಧ್ಯಾನದಲ್ಲಿ ಯಾವ ಪರಮಾರ್ಥ ಧ್ಯೇಯವಾದ ಶುದ್ಧ ಆತ್ಮನ ಸ್ವರೂಪವಿದೆ ಆ ಸ್ವರೂಪದ ಆರಾಧನೆಯಲ್ಲಿ ಪಂಚಪರಮೇಷ್ಠಿಗಳು ಪ್ರಮುಖರಾಗಿದ್ದು ಈಗ ಅವರ ಧ್ಯಾನ ಮಾಡುವ ಉಪದೇಶ ಮಾಡುತ್ತಾರೆ, -

**ಝಾಯಹಿ ಪಂಚ ವಿ ಗುರವೇ ಮಂಗಲಚಉಸರಣಲೋಯಪರಿಯರಿಏ |**
**ಣರಸುರಖೇಯರಮಹಿಏ ಆರಾಹಣಣಾಯಗೇ ವೀರೇ ||೧೨೪||**

**ಧ್ಯಾಯ ಪಂಚ ಅಪಿ ಗುರೂನ್ ಮಂಗಲಚತುಃ ಶರಣಲೋಕಪರಿಕರಿತಾನ್ |**
**ನರಸುರಖೇಚರಮಹಿತಾನ್ ಆರಾಧನಾನಾಯಕಾನ್ ವೀರಾನ್ ||೧೨೪||**

ಅರ್ಥ :- ಎಲೈ ಮುನಿಯೇ ! ನೀನು ಪಂಚಗುರು ಎಂದರೆ ಪಂಚಪರಮೇಷ್ಠಿಗಳ ಧ್ಯಾನಮಾಡು. ಇಲ್ಲಿ 'ಅಪಿ' ಶಬ್ದವು ಶುದ್ಧಾತ್ಮಸ್ವರೂಪದ ಧ್ಯಾನವನ್ನು ಸೂಚಿತಗೊಳಿಸುತ್ತದೆ. ಪಂಚಪರಮೇಷ್ಠಿಗಳು ಮಂಗಲ ಎಂದರೆ ಪಾಪದ ನಾಶಕರು ಅಥವಾ ಸುಖದಾಯಕರು ಮತ್ತು ಚಉಶರಣ ಎಂದರೆ ನಾಲ್ಕು ಶರಣ ಹಾಗೂ 'ಲೋಕ' ಎಂದರೆ ಲೋಕದ ಪ್ರಾಣಿಗಳಿಂದ ಅರಹಂತ, ಸಿದ್ಧ, ಸಾಧು, ಕೇವಲೀಪ್ರಣೀತ ಧರ್ಮ-ಇವು ಪರಿಕರಿತ ಎಂದರೆ ಪರಿವಾರಿತರಿದ್ದಾರೆ-ಯುಕ್ತ (-ಸಹಿತ)ರಿದ್ದಾರೆ, ನರ-ಸುರ-ವಿದ್ಯಾಧರ ಸಹಿತರಿದ್ದಾರೆ, ಪೂಜ್ಯರಿರುವುದರಿಂದ ಅವರನ್ನು 'ಲೋಕೋತ್ತಮ'ರೆಂದು ಹೇಳಲಾಗುತ್ತದೆ, ಆರಾಧನೆಯ ನಾಯಕರಿದ್ದಾರೆ, ವೀರರಿದ್ದಾರೆ, ಕರ್ಮಗಳನ್ನು ಜಯಿಸುವಲ್ಲಿ ಸುಭಟರಿದ್ದಾರೆ ಮತ್ತು ವಿಶಿಷ್ಟ ಲಕ್ಷ್ಮೀಯನ್ನು ಪ್ರಾಪ್ತಮಾಡಿಕೊಂಡಿದ್ದಾರೆ ಹಾಗೂ ಕೊಡುತ್ತಾರೆ. ಈ ಪ್ರಕಾರ ಪಂಚಪರಮಗುರುಗಳ ಧ್ಯಾನ ಮಾಡಬೇಕು.

ಭಾವಾರ್ಥ :- ಇಲ್ಲಿ ಪಂಚಪರಮೇಷ್ಠಿಗಳ ಧ್ಯಾನ ಮಾಡುವುದರ ಸಲುವಾಗಿ ಹೇಳಿದೆ, ಆ ಧ್ಯಾನದಲ್ಲಿ ವಿಘ್ನವನ್ನು ದೂರಮಾಡುವಂಥ 'ನಾಲ್ಕು ಮಂಗಲಸ್ವರೂಪ' ಹೇಳಿದೆ ಅವರು ಇವರೇ ಇದ್ದಾರೆ. 'ನಾಲ್ಕು ಶರಣ' ಮತ್ತು ನಾಲ್ಕು 'ಲೋಕೋತ್ತಮ' ಹೇಳಿದ್ದಾರೆ ಅವನ್ನು ಕೂಡ ಇವರಿಗೇ ಹೇಳಿದ್ದಾರೆ. ಇವರ ಹೊರತಾಗಿ ಪ್ರಾಣಿಗಳಿಗೆ ಬೇರೆ ಶರಣ ಅಥವಾ ರಕ್ಷಣೆ ಮಾಡುವಂಥವರು ಯಾರೂ ಇಲ್ಲ ಮತ್ತು ಲೋಕದಲ್ಲಿ ಉತ್ತಮರು ಕೂಡ ಇವರೇ ಇದ್ದಾರೆ. ದರ್ಶನ-ಜ್ಞಾನ-ಚಾರಿತ್ರ-ತಪ ಇವು ನಾಲ್ಕು ಆರಾಧನೆಗಳಿವೆ ಇವುಗಳ ನಾಯಕರು (ಪ್ರಭುಗಳು) ಕೂಡ ಇವರೇ ಇದ್ದಾರೆ, ಕರ್ಮಗಳನ್ನು ಜಯಿಸುವವರು ಕೂಡ ಇವರೇ ಇದ್ದಾರೆ. ಆದುದರಿಂದ ಧ್ಯಾನ ಮಾಡುವವರ ಸಲುವಾಗಿ ಇವರ ಧ್ಯಾನವು ಶ್ರೇಷ್ಠವಿದೆ. ಇವರುಗಳ ಧ್ಯಾನದಿಂದಲೇ ಶುದ್ಧಸ್ವರೂಪದ ಪ್ರಾಪ್ತಿಯಾಗುತ್ತದೆ. ಅದಕ್ಕಾಗಿಯೇ ಈ ಉಪದೇಶವಿದೆ. ||೧೨೪||

---

ಗುರುಗಳೈವರನು ಧ್ಯಾನಿಸು ಮಂಗಲ ಶರಣ ಲೋಕೋತ್ತಮರಿರುವರು |
ನರಸುರಖೇಚರಪೂಜಿತ ಆರಾಧನಾನಾಯಕ ಮೇಣ್ವೀರರಿರುವರು ||೧೨೪||

'ಜ್ಞಾನದ ಏಕಾಗ್ರತೆಯಾಗುವುದೇ' ಧ್ಯಾನವಿರುವುದರಿಂದ ಈಗ ಜ್ಞಾನದ ಅನುಭವ ಮಾಡಿಕೊಳ್ಳುವ ಉಪದೇಶ ಮಾಡುತ್ತಾರೆ, -

ಣಾಣಮಯವಿಮಲಸೀಯಲಸಲಿಲಂ ಪಾಊಣ ಭವಿಯ ಭಾವೇಣ ।
ವಾಹಿಜರಮರಣವೇಯಣಡಾಹವಿಮುಕ್ಕಾ ಸಿವಾ ಹೋಂತಿ ।।೧೨೫।।

ಜ್ಞಾನಮಯವಿಮಲಶೀತಲಸಲಿಲಂ ಪ್ರಾಪ್ಯ ಭವ್ಯಾಃ ಭಾವೇನ ।
ವ್ಯಾಧಿಜರಾಮರಣವೇದನಾದಾಹವಿಮುಕ್ತಾಃ ಶಿವಾಃ ಭವಂತಿ ।।೧೨೫।।

ಅರ್ಥ ಃ- ಭವ್ಯ ಜೀವರುಗಳು ಜ್ಞಾನಮಯವಾದ ನಿರ್ಮಲ ಶೀತಲ ಜಲವನ್ನು ಸಮ್ಯಕ್ತ್ವಭಾವದೊಡನೆ ಕುಡಿದು ವ್ಯಾಧಿಸ್ವರೂಪವಾದ ಜರಾ-ಮರಣದ ವೇದನೆಯನ್ನು (-ಪೀಡೆ)ಯನ್ನು ಭಸ್ಮಮಾಡಿ ಮುಕ್ತ ಎಂದರೆ ಸಂಸಾರದಿಂದ ರಹಿತ 'ಶಿವ' ಎಂದರೆ ಪರಮಾನಂದಸುಖರೂಪರಾಗುತ್ತಾರೆ.

ಭಾವಾರ್ಥ ಃ- ಯಾವ ಪ್ರಕಾರ ನಿರ್ಮಲ ಮತ್ತು ಶೀತಲವಾದ ಜಲವನ್ನು ಕುಡಿಯುವುದರಿಂದ ಪಿತ್ತದ ದಾಹರೂಪವಾದ ವ್ಯಾಧಿಯು ದೂರವಾಗಿ ಸಾತಾ ಆಗುತ್ತದೆ, ಅದೇ ಪ್ರಕಾರ ಈ ಜ್ಞಾನವು ಯಾವಾಗ ರಾಗಾದಿಗಳ ಮಲದಿಂದ ರಹಿತವಾಗಿ ನಿರ್ಮಲ ಮತ್ತು ಆಕುಲತೆಯಿಲ್ಲದೆ ಶಾಂತಭಾವರೂಪವಾಗುತ್ತದೆ, ಅದರಿಂದ ಅದರ ಭಾವನೆ ಮಾಡಿ ರುಚಿ, ಶ್ರದ್ಧೆ, ಪ್ರತೀತಿಯಿಂದ ಕುಡಿದು, ಅದರಲ್ಲಿ ತನ್ಮಯವಾದರೆ ಜರಾ-ಮರಣರೂಪದ ದಾಹವು-ವೇದನೆಯು ಅಳಿಸಿಹೋಗುತ್ತದೆ ಮತ್ತು ಸಂಸಾರದಿಂದ ನಿವೃತ್ತನಾಗಿ ಸುಖರೂಪನಾಗುತ್ತಾನೆ, ಆದುದರಿಂದ ಜ್ಞಾನದಲ್ಲಿ ಲೀನರಾಗಬೇಕೆಂದು ಭವ್ಯಜೀವರುಗಳಿಗೆ ಈ ಉಪದೇಶವಿದೆ. ।।೧೨೫।।

ಈ ಧ್ಯಾನರೂಪದ ಅಗ್ನಿಯಿಂದ ಸಂಸಾರದ ಬೀಜಸ್ವರೂಪಗಳಾದ ಎಂಟು ಕರ್ಮಗಳು ಒಂದೇ ಬಾರಿಗೆ ದಗ್ಧವಾಗಿ ಹೋದಮೇಲೆ ಪುನಃ ಮತ್ತೆ ಸಂಸಾರವಿರುವುದಿಲ್ಲ, ಈ ಬೀಜಗಳು ಭಾವಲಿಂಗಿ ಮುನಿಗೆ ದಗ್ಧವಾಗಿ ಹೋಗುತ್ತವೆಂಬುದನ್ನು ಈಗ ಹೇಳುತ್ತಾರೆ, -

ಜಹ ಬೀಯಮ್ಮಿಯ ದಡ್ಢೇಣ ವಿ ರೋಹಇ ಅಂಕುರೋ ಯ ಮಹಿವೀಢೇ ।
ತಹ ಕಮ್ಮಬೀಯದಡ್ಢೇ ಭವಂಕುರೋ ಭಾವಸವಣಾಣಂ ।।೧೨೬।।

ಯಥಾ ಬೀಜೇ ಚ ದಗ್ಧೇ ನಾಪಿ ರೋಹತಿ ಅಂಕುರಶ್ಚ ಮಹೀಪೀಠೇ ।
ತಥಾ ಕರ್ಮಬೀಜದಗ್ಧೇ ಭವಾಂಕುರಃ ಭಾವಶ್ರಮಣಾನಾಮ್ ।।೧೨೬।।

---

ಜ್ಞಾನಮಯ ವಿಮಲ ಶೀತಲಸಲಿಲವಂ ಪಡೆದು ಭವ್ಯನು ಭಾವದಿಂದ ।
ತಾನಾಗುವನು ವ್ಯಾಧಿ ಜರಾಮರಣವೇದನಾದಾಹವಿಮುಕ್ತ ಶಿವಮಯಿ ।।೧೨೫।।

ಹೇಗೆ ಭೂತಲದಲಿ ಬೀಜದಗ್ಧವಾದಮೇಲೆ ಮತ್ತೆ ಅಂಕುರ ಉದಿಸದು ।
ಹಾಗೆ ಕರ್ಮಬೀಜ ದಗ್ಧಮಪ್ಪುದರಿಂ ಭವಾಂಕುರವಿಲ್ಲ ಭಾವಶ್ರಮಣಗೆ ।।೧೨೬।।

ಅರ್ಥ ಃ- ಯಾವ ಪ್ರಕಾರ ಭೂತಲದಲ್ಲಿ ಬೀಜವು ಸುಟ್ಟುಹೋದಮೇಲೆ ಅದರ ಅಂಕುರವು ಪುನಃ ಉತ್ಪನ್ನವಾಗುವುದಿಲ್ಲ ಅದೇ ಪ್ರಕಾರ ಭಾವಲಿಂಗಿ ಶ್ರಮಣನಿಗೆ ಸಂಸಾರದ ಕರ್ಮರೂಪವಾದ ಬೀಜವು ದಗ್ಧವಾಗುವುದರಿಂದ ಸಂಸಾರರೂಪದ ಅಂಕುರವು ಮತ್ತೆ ಉತ್ಪನ್ನವಾಗುವುದಿಲ್ಲ,

ಭಾವಾರ್ಥ ಃ- ಸಂಸಾರದ ಬೀಜವು 'ಜ್ಞಾನಾವರಣಾದಿ' ಕರ್ಮಗಳಿವೆ.ಈ ಕರ್ಮಗಳು ಭಾವಶ್ರಮಣನಿಗೆ ಧ್ಯಾನರೂಪದ ಅಗ್ನಿಯಿಂದ ಭಸ್ಮವಾಗಿ ಹೋಗುತ್ತವೆ, ಆದುದರಿಂದ ಮತ್ತೆ ಸಂಸಾರರೂಪದ ಅಂಕುರವು ಯಾವುದರಿಂದಾಗುವುದು ? ಅದಕ್ಕಾಗಿ ಭಾವಶ್ರಮಣರಾಗಿ ಧರ್ಮ-ಶುಕ್ಲಧ್ಯಾನದಿಂದ ಕರ್ಮಗಳನ್ನು ನಾಶಮಾಡುವುದು ಯೋಗ್ಯವಿದೆಯೆಂಬ ಉಪದೇಶವಿದೆ. ಕರ್ಮವು ಅನಾದಿಯಿದೆ, ಅದರ ಕೊನೆಯೇ ಇಲ್ಲವೆಂದು ಯಾರಾದರೂ ಸರ್ವಥಾ ಏಕಾಂತವಾದಿಗಳು ಅನ್ಯಥಾ ಹೇಳುತ್ತಿದ್ದರೆ ಅವರದೂ ನಿಷೇಧವಾಯಿತು. ಬೀಜವು ಅನಾದಿಯಿದ್ದರೂ ಅದು ಒಂದು ಬಾರಿ ದಗ್ಧವಾಗಿ ಹೋದರೆ ಪುನಃ ಮತ್ತೆ ಅಂಕುರಿಸುವುದಿಲ್ಲ, ಅದೇ ರೀತಿ ಇದನ್ನು ತಿಳಿಯಬೇಕು. ||೧೨೬||

ಈಗ ಸಂಕ್ಷೇಪದಿಂದ ಉಪದೇಶ ಮಾಡುತ್ತಾರೆ, -

**ಭಾವಸವಣೋ ವಿ ಪಾವಇ ಸುಕ್ಖಾಇಂ ದುಹಾಇಂ ದವ್ವಸವಣೋ ಯ |**
**ಇಯ ಣಾಉಂ ಗುಣದೋಸೇ ಭಾವೇಣ ಯ ಸಂಜುದೋ ಹೋಹ ||೧೨೭||**

**ಭಾವಶ್ರಮಣಃ ಅಪಿ ಪ್ರಾಪ್ನೋತಿ ಸುಖಾನಿ ದುಃಖಾನಿ ದ್ರವ್ಯಶ್ರಮಣಶ್ಚ |**
**ಇತಿ ಜ್ಞಾತ್ವಾ ಗುಣದೋಷಾನ್ ಭಾವೇನ ಚ ಸಂಯುತಃ ಭವ ||೧೨೭||**

ಅರ್ಥ ಃ- ಭಾವ ಶ್ರಮಣರಂತೂ ಸುಖಗಳನ್ನು ಪಡೆಯುತ್ತಾರೆ ಮತ್ತು ದ್ರವ್ಯಶ್ರಮಣರು ದುಃಖಗಳನ್ನು ಪಡೆಯುತ್ತಾರೆ, ಈ ಪ್ರಕಾರ ಗುಣ-ದೋಷಗಳನ್ನು ತಿಳಿದುಕೊಂಡು ಎಲೈ ಜೀವನೇ ! ನೀನು ಭಾವ ಸಹಿತ ಸಂಯಮಿಯಾಗು.

ಭಾವಾರ್ಥ ಃ- ಭಾವಶ್ರಮಣನು ಸಮ್ಯಗ್ದರ್ಶನ ಸಹಿತನಿರುತ್ತಾನೆ, ಅವನು ಸಂಸಾರದ ಅಭಾವಮಾಡಿ ಸುಖಗಳನ್ನು ಪಡೆಯುತ್ತಾನೆ ಮತ್ತು ದ್ರವ್ಯಶ್ರಮಣನು ಮಿಥ್ಯಾತ್ವಸಹಿತ ವೇಷಮಾತ್ರನಿರುತ್ತಾನೆ, ಇವನು ಸಂಸಾರದ ಅಭಾವ ಮಾಡುವ ಸಾಧ್ಯತೆಯಿಲ್ಲ, ಅದರಿಂದಾಗಿ ದುಃಖಗಳನ್ನು ಪಡೆಯುತ್ತಾನೆ. ಅದಕ್ಕಾಗಿ ಎರಡರ ಗುಣ-ದೋಷಗಳನ್ನು ತಿಳಿದುಕೊಂಡು ಭಾವಸಂಯಮಿಯಾಗುವುದು ಯೋಗ್ಯವಿದೆಯೆಂದು ಉಪದೇಶ ಮಾಡುತ್ತಾರೆ, ಇದು ಎಲ್ಲ ಉಪದೇಶಗಳ ಸಾರವಿದೆ. ||೧೨೭||

ಪುನಃ ಇದರದೇ ಉಪದೇಶವನ್ನು ಸಂಕ್ಷೇಪದಿಂದ ಅರ್ಥರೂಪವಾಗಿ ಹೇಳುತ್ತಾರೆ, -

---

**ಭಾವಶ್ರಮಣ ಸುಖವಪಡೆದರೆ ದ್ರವ್ಯಶ್ರಮಣ ದುಃಖಪಡೆಯುವನು |**
**ಭಾವದಿಂ ಸಂಯುಕ್ತನಾಗು ನೀನೀತೆರದಿ ಗುಣದೋಷಗಳ ತಿಳಿದುಕೊಂಡು ||೧೨೭||**

ತಿತ್ಥಯರಗಣಹರಾಇಂ ಅಬ್ಭುದಯಪರಂಪರಾಇಂ ಸೋಕ್ಖಾಇಂ ।
ಪಾವಂತಿ ಭಾವಸಹಿಯಾ ಸಂಖೇವಿ ಜಿಣೇಹಿಂ ವಜ್ಜರಿಯಂ ।।೧೨೮।।

ತೀರ್ಥಕರಗಣಧರಾದೀನಿ ಅಭ್ಯುದಯಪರಂಪರಾಣಿ ಸೌಖ್ಯಾನಿ .
ಪ್ರಾಪ್ನುವಂತಿ ಭಾವಶ್ರಮಣಾಃ ಸಂಕ್ಷೇಪೇನ ಜಿನೈಃ ಭಣಿತಮ್ ।।೧೨೮।।

ಅರ್ಥ ಃ– ಭಾವಸಹಿತರಾಗಿರುವಂಥ ಮುನಿಗಳು ಅವರು ಅಭ್ಯುದಯದೊಡನೆ ತೀರ್ಥಂಕರ–ಗಣಧರ ಮೊದಲಾದ ಪದವಿಯ ಸುಖಗಳನ್ನು ಪಡೆಯುತ್ತಾರೆಂದು ಸಂಕ್ಷೇಪದಿಂದ ಹೇಳಿದೆ.

ಭಾವಾರ್ಥ ಃ– ತೀರ್ಥಂಕರ, ಗಣಧರ, ಚಕ್ರವರ್ತಿ ಮೊದಲಾದ ಪದಗಳ ಸುಖವು ಅಧಿಕ ಅಭ್ಯುದಯ ಸಹಿತವಿದೆ, ಅವನ್ನು ಭಾವಸಹಿತರಾದ ಸಮ್ಯಗ್ದೃಷ್ಟಿ ಮುನಿಗಳು ಪಡೆಯುತ್ತಾರೆ. ಸಮಸ್ತ ಉಪದೇಶದ ಸಂಕ್ಷೇಪವೆಂದು ಈ ಉಪದೇಶ ಹೇಳಿದೆ, ಆದುದರಿಂದ ಭಾವಸಹಿತ ಮುನಿಯಾಗುವುದು ಯೋಗ್ಯವಿದೆ. ।।೧೨೮।।

ಆ ಭಾವಶ್ರಮಣರು ಧನ್ಯರಿದ್ದಾರೆ, ಅವರಿಗೆ ನಮ್ಮ ನಮಸ್ಕಾರವಿರಲೆಂದು ಈಗ ಆಚಾರ್ಯದೇವರು ಹೇಳುತ್ತಾರೆ,–

ತೇ ಧಣ್ಣಾ ತಾಣ ಣಮೋ ದಂಸಣವರಣಾಣಚರಣಸುದ್ಧಾಣಂ ।
ಭಾವಸಹಿಯಾಣ ಣಿಚ್ಚಂ ತಿವಿಹೇಣ ಪಣಟ್ಠಮಾಯಾಣಂ ।।೧೨೯।।

ತೇ ಧನ್ಯಾಃ ತೇಭ್ಯಃ ನಮಃದರ್ಶನವರಜ್ಞಾನಚರಣಶುದ್ಧೇಭ್ಯಃ ।
ಭಾವಸಹಿತೇಭ್ಯಃ ನಿತ್ಯಂ ತ್ರಿವಿಧೇನ ಪ್ರಣಷ್ಟಮಾಯೇಭ್ಯಃ ।।೧೨೯।।

ಅರ್ಥ ಃ– ಯಾವ ಮುನಿಗಳು ಸಮ್ಯಗ್ದರ್ಶನ, ಶ್ರೇಷ್ಠ (ವಿಶಿಷ್ಟ) ಜ್ಞಾನ ಮತ್ತು ನಿರ್ದೋಷ ಚಾರಿತ್ರಗಳಿಂದ ಶುದ್ಧರಿರುವುದರಿಂದ ಭಾವಸಹಿತರಿದ್ದಾರೆ ಮತ್ತು ಯಾರ ಮಾಯೆಯು ಪ್ರಣಷ್ಟವಾಗಿ ಹೋಗಿದೆ ಎಂದರೆ ಯಾರು ಕಪಟ ಪರಿಣಾಮದಿಂದ ರಹಿತರಿದ್ದಾರೆ ಅವರು ಧನ್ಯರಿದ್ದಾರೆ. ಅವರ ಸಲುವಾಗಿ ಮನ–ವಚನ–ಕಾಯದಿಂದ ಯಾವಾಗಲೂ ನಮ್ಮ ನಮಸ್ಕಾರವಿರಲೆಂದು ಆಚಾರ್ಯದೇವರು ಹೇಳುತ್ತಾರೆ.

ಭಾವಾರ್ಥ ಃ– ಭಾವಲಿಂಗಿಗಳಲ್ಲಿ ಯಾರು ದರ್ಶನ–ಜ್ಞಾನ–ಚಾರಿತ್ರದಿಂದ ಶುದ್ಧರಿದ್ದಾರೆ ಅವರ ಕುರಿತು ಆಚಾರ್ಯದೇವರ ಭಕ್ತಿಯು ಉತ್ಪನ್ನವಾಗಿರುವುದರಿಂದ ಅವರಿಗೆ ಧನ್ಯವಾದಗಳನ್ನರ್ಪಿಸಿ ನಮಸ್ಕಾರ ಮಾಡಿದ್ದಾರೆ ಅದು ಯುಕ್ತವಿದೆ, ಯಾರಿಗೆ ಮೋಕ್ಷಮಾರ್ಗದಲ್ಲಿ ಅನುರಾಗವಿದೆ, ಅವರಲ್ಲಿ ಮೋಕ್ಷಮಾರ್ಗದ ಪ್ರವೃತ್ತಿಯ ಮುಖ್ಯತೆಯು ಕಂಡು ಬರುತ್ತದೆ ಅವರಿಗೆ ನಮಸ್ಕಾರ ಮಾಡಿಯೇ ಮಾಡುತ್ತಾರೆ, ।।೧೨೯।।

---

ತೀರ್ಥಕರ ಗಣಧರಾದಿಗಳ ಅಭ್ಯುದಯಸಹಿತವಾದ ಸೌಖ್ಯವನು ।
ತೀರ್ಥಕ ಭಾವಶ್ರಮಣ ಪಡೆವರೆಂದು ಸಂಕ್ಷೇಪದಿಂ ಜಿನರುಪೇಳಿಹರು ।।೧೨೮।।

ಅವರು ಧನ್ಯರಿಹರವರಿಗೆ ನಿತ್ಯ ತ್ರಿವಿಧದಿ ನಮಸ್ಕಾರವಿರಲಿ ।
ಭಾವಸಹಿತ ದರ್ಶನವರಜ್ಞಾನಚರಣ ಶುದ್ಧಮೇಣ್ಮಾಯೆ ಮುಕ್ತರಿಗೆ ।।೧೨೯।।

ಯಾರು ಭಾವಶ್ರಮಣರಿದ್ದಾರೆ ಅವರು ದೇವಾದಿಕರ ಋದ್ಧಿಯನ್ನು ನೋಡಿ ಮೋಹಕ್ಕೆ ಪ್ರಾಪ್ತರಾಗುವುದಿಲ್ಲ-ವೆಂಬುದನ್ನು ಈಗ ಹೇಳುತ್ತಾರೆ, -

**ಇಡ್ಢಿಮತುಲಂ ವಿಉವ್ವಿಯ ಕಿಣ್ಣರಕಿಂಪುರಿಸಅಮರಖಯರೇಹಿಂ ।**
**ತೇಹಿಂ ವಿ ಣ ಜಾಇ ಮೋಹಂ ಜಿಣಭಾವಣಭಾವಿಓ ಧೀರೋ ।।೧೩೦।।**

**ಋದ್ಧಿಮತುಲಾಂ [೧]ವಿಕುರ್ವದ್ಭಿಃ ಕಿಂನರಕಿಂಪುರುಷಾಮರಖಚರೈಃ ।**
**ತೈರಪಿ ನ ಯಾತಿ ಮೋಹಂ ಜಿನಭಾವನಾಭಾವಿತಃ ಧೀರಃ ।।೧೩೦।।**

ಅರ್ಥ ಃ- ಜಿನಭಾವನೆ (ಸಮ್ಯಕ್ತ್ವಭಾವನೆ)ಯಿಂದ ವಾಸಿಸುವ ಜೀವನು ಕಿನ್ನರ, ಕಿಂಪುರುಷದೇವ, ಕಲ್ಪವಾಸಿದೇವ ಮತ್ತು ವಿದ್ಯಾಧರರುಗಳಿಂದ ವಿಕ್ರಿಯಾರೂಪವಾಗಿ ವಿಸ್ತಾರ ಮಾಡಲಾದ ಅತುಲ ಋದ್ಧಿಗಳಿಂದ ಮೋಹಕ್ಕೆ ಪ್ರಾಪ್ತನಾಗುವುದಿಲ್ಲ, ಏಕೆಂದರೆ ಸಮ್ಯಗ್ದೃಷ್ಟಿ ಜೀವನು ಧೀರನಿರುತ್ತಾನೆ, ದೃಢಬುದ್ಧಿಯವನಿರುತ್ತಾನೆ ಎಂದರೆ ನಿಃಶಂಕಿತ ಅಂಗದ ಧಾರಕನಿರುತ್ತಾನೆ.

ಭಾವಾರ್ಥ ಃ- ಯಾವನಿಗೆ ಜಿನಸಮ್ಯಕ್ತ್ವವು ದೃಢವಿದೆ ಅವನಿಗೆ ಸಂಸಾರದ ಋದ್ಧಿಯು ತೃಣ ಸಮಾನವಿದೆ, ಪರಮಾರ್ಥಸುಖದ ಭಾವನೆಯೇ ಇದೆ, ವಿನಾಶಶೀಲ ಋದ್ಧಿಯ ಇಚ್ಛೆ ಹೇಗಿರುವುದು ? ।।೧೩೦।।

ಇಂಥ ಋದ್ಧಿಯನ್ನು ಕೂಡ ಇಚ್ಛಿಸುವುದಿಲ್ಲವೆಂದಮೇಲೆ ಅನ್ಯಸಾಂಸಾರಿಕ ಸುಖದ ಮಾತೇನೆಂದು ಈಗ ಮತ್ತೆ ಇದರ ಸಮರ್ಥನೆಯನ್ನೇ ಮಾಡುತ್ತಾರೆ, -

**ಕಿಂ ಪುಣ ಗಚ್ಛಇ ಮೋಹಂ ಣರಸುರಸುಕ್ಖಾಣ ಅಪ್ಪಸಾರಾಣಂ ।**
**ಜಾಣಂತೋ ಪಸ್ಸಂತೋ ಚಿಂತಂತೋ ಮೋಕ್ಖ ಮುಣಿಧವಲೋ ।।೧೩೧।।**

**ಕಿಂ ಪುನಃ ಗಚ್ಛತಿ ಮೋಹಂ ನರಸುರಸುಖಾನಾಂ ಅಲ್ಪಸಾರಾಣಾಮ್ ।**
**ಜಾನನ್ ಪಶ್ಯನ್ ಚಿಂತಯನ್ ಮೋಕ್ಷಂ ಮುನಿಧವಲಃ ।।೧೩೧।।**

ಅರ್ಥ ಃ- ಸಮ್ಯಗ್ದೃಷ್ಟಿ ಜೀವನು ಪೂರ್ವೋಕ್ತ ಪ್ರಕಾರದ ಋದ್ಧಿಯನ್ನು ಕೂಡ ಅಪೇಕ್ಷಿಸದಿದ್ದರೆ ಮುನಿ ಧವಲನಿದ್ದಾನೆ ಎಂದರೆ ಮುನಿಮುಖ್ಯನಿದ್ದಾನೆ ಅವನಿಗೆ ಅಲ್ಪಸಾರವಿರುವಂಥ ಆ ಅನ್ಯ ಮನುಷ್ಯ , ದೇವಗಳ ಸುಖ ಭೋಗಾದಿಗಳಲ್ಲಿ ಮೋಹವು ಹೇಗೆ ಪ್ರಾಪ್ತವಾಗುವುದು ? ಆ ಮುನಿಧವಲನು ಮೋಕ್ಷವನ್ನು ತಿಳಿಯುತ್ತಾನೆ, ಅದರ ಕಡೆಗೇ ದೃಷ್ಟಿಯಿದೆ, ಅದರದೇ ಚಿಂತನೆ ಮಾಡುತ್ತಾನೆ.

---

**ಕಿನ್ನರಕಿಂಪುರುಷ ಸುರಖೇಚರರು ವಿಕ್ರಿಯೆಯಿಂಗೆಯ್ದತುಲ ಋದ್ಧಿಯಿಂ ।**
**ಜಿನಭಾವನಾಪರಿಣತನಾದ ಧೀರನದರಿಂ ಮೋಹಕೆ ಪ್ರಾಪ್ತನಾಗನು ।।೧೩೦।।**

**ಮರಳೇಕೆ ಮೋಹಮಾಡುವನಲ್ಪಸಾರವಾದಾ ನರಸುರಸುಖಗಳಲಿ ।**
**ಅರಿಯುವನು ನೋಡುವನು ಚಿಂತಿಸುವನಾಮೋಕ್ಷವನೆ ಮುನಿಧವಲನು ।।೧೩೧।।**

---

೧ 'ವಿಕೃತಾಂ' ಎಂದು ಸಂಸ್ಕೃತ ಮುದ್ರಿತ ಪ್ರತಿಯಲ್ಲಿ ಪಾಠವಿದೆ.

ಭಾವಾರ್ಥ :- ಯಾರು ಮುನಿಮುಖ್ಯರಿದ್ದಾರೆ ಅವರ ಭಾವನೆಯು ಮೋಕ್ಷದ ಸುಖಗಳಲ್ಲಿದೆ. ಅವರು ದೊಡ್ಡ-ದೊಡ್ಡ ದೇವವಿದ್ಯಾಧರರುಗಳ ಹರಡಿಕೊಂಡಿರುವ ವಿಕ್ರಿಯೆ ಋದ್ಧಿಗಳಲ್ಲಿ ಕೂಡ ಲಾಲಸೆಯನ್ನು ಮಾಡುವುದಿಲ್ಲವೆಂದಮೇಲೆ ಕಿಂಚಿತ್ ಮಾತ್ರ ಮತ್ತು ವಿನಾಶಶೀಲವಾದ ಆ ಮನುಷ್ಯ ದೇವಗಳ ಭೋಗ ಮೊದಲಾದ ಸುಖಗಳಲ್ಲಿ ಹೇಗೆ ಅಪೇಕ್ಷೆ ಮಾಡುವರು ? ಎಂದರೆ ಮಾಡುವುದಿಲ್ಲ. ॥೧೩೧॥

ಎಲ್ಲಿಯವರೆಗೆ ವಾರ್ಧಕ್ಯ ಮೊದಲಾದವುಗಳು ಬರುವುದಿಲ್ಲ ಅಲ್ಲಿಯವರೆಗೆ ತಮ್ಮ ಹಿತಮಾಡಿಕೊಳ್ಳಬೇಕೆಂದು ಈಗ ಉಪದೇಶ ಮಾಡುತ್ತಾರೆ, -

**ಉತ್ಥರಇ ಜಾ ಣ ಜರಓ ರೋಯಗ್ಗೀ ಜಾ ಣ ಡಹಇ ದೇಹಉಡಿಂ ।**
**ಇಂದಿಯಬಲಂ ಣ ವಿಯಲಇ ತಾವ ತುಮಂ ಕುಣಹಿ ಅಪ್ಪಹಿಯಂ ॥೧೩೨॥**

**ಆಕ್ರಮತೇ ಯಾವನ್ನ ಜರಾ ರೋಗಾಗ್ನಿರ್ಯಾವನ್ನ ದಹತಿ ದೇಹಕುಟೀಮ್ ।**
**ಇಂದ್ರಿಯಬಲಂ ನ ವಿಗಲತಿ ತಾವತ್ ತ್ವಂ ಕುರು ಆತ್ಮಹಿತಮ್ ॥೧೩೨॥**

ಅರ್ಥ :- ಎಲೈ ಮುನಿಯೇ! ಎಲ್ಲಿಯವರೆಗೆ ನಿನಗೆ ವಾರ್ಧಕ್ಯವು ಬರುವುದಿಲ್ಲ ಮತ್ತು ಎಲ್ಲಿಯವರೆಗೆ ರೋಗರೂಪದ ಅಗ್ನಿಯು ನಿನ್ನ ದೇಹರೂಪದ ಕುಟೀರವನ್ನು ಭಸ್ಮಮಾಡುವುದಿಲ್ಲ ಹಾಗೂ ಎಲ್ಲಿಯವರೆಗೆ ಇಂದ್ರಿಯಗಳ ಬಲವು ಕಡಿಮೆಯಾಗುವುದಿಲ್ಲ ಅಲ್ಲಿಯವರೆಗೆ ನಿನ್ನ ಹಿತ ಮಾಡಿಕೊಳ್ಳು.

ಭಾವಾರ್ಥ :- ವೃದ್ಧಾವಸ್ಥೆಯಲ್ಲಿ ದೇಹವು ರೋಗಾದಿಗಳಿಂದ ಜರ್ಜರಿತವಾಗಿ ಹೋಗುತ್ತದೆ, ಇಂದ್ರಿಯಗಳು ಕ್ಷೀಣವಾಗಿ ಹೋಗುತ್ತವೆ ಆಗ ಅಸಮರ್ಥವಾಗಿ ಈ ಲೋಕದ ಕಾರ್ಯಗಳಾದ ಏಳುವುದು-ಕೂಡ್ರುವುದನ್ನು ಕೂಡ ಮಾಡುವ ಸಾಧ್ಯತೆಯಿಲ್ಲದಾಗ ಪರಲೋಕ ಸಂಬಂಧದ ತಪಶ್ಚರ್ಯಾದಿಗಳನ್ನು ಹಾಗೂ ಜ್ಞಾನಾಭ್ಯಾಸ ಮತ್ತು ಸ್ವರೂಪದ ಅನುಭವಾದಿ ಕಾರ್ಯಗಳನ್ನು ಹೇಗೆ ಮಾಡುವನು ? ಅದಕ್ಕಾಗಿಯೇ ಎಲ್ಲಿಯವರೆಗೆ ಸಾಮರ್ಥ್ಯವಿದೆ, ಅಲ್ಲಿಯವರೆಗೆ ತನ್ನ ಹಿತರೂಪವಾದ ಕಾರ್ಯವನ್ನು ಮಾಡಿಕೊಳ್ಳಬೇಕೆಂದು ಈ ಉಪದೇಶವಿದೆ. ॥೧೩೨॥

ಈಗ ಅಹಿಂಸಾಧರ್ಮದ ಉಪದೇಶದ ವರ್ಣನೆ ಮಾಡುತ್ತಾರೆ, -

**ಛಜ್ಜೀವ ಛಡಾಯದಣಂ ಣಿಚ್ಚಂ ಮಣವಯಣಕಾಯಜೋಏಹಿಂ ।**
**ಕುರು ದಯ ಪರಿಹರ ಮುಣಿವರ ಭಾವಿ ಅಪುವ್ವಂ [೧]ಮಹಾಸತ್ತಂ ॥೧೩೩॥**

---

**ಎನ್ನೆವರ ಮುಪ್ಪಾಕ್ರಮಿಸದೆನ್ನೆವರ ರೋಗಾಗ್ನಿದೇಹಕುಟೀರ ಸುಡದು ।**
**ಎವ್ವೆವರೆಗಿಂದ್ರಿಯಬಲ ಕ್ಷೀಣಿಸದನ್ನೆವರೆಗಾತ್ಮಹಿತನೀ ಮಾಡಿಕೊ ॥೧೩೨॥**

**ಅನಾಯತನಾರು ತ್ಯಜಿಸು ಷಟ್ಜೀವಗಳದಯೆ ಮಾಡು ನಿತ್ಯ ತ್ರಿವಿಧದಿ ।**
**ನೀನು ಮಹಾಸತ್ವವನು ಭಾವಿಸು ಅಪೂರ್ವತೆಯಿಂದೆಲೆ ಮುನಿಪ್ರವರನೆ ! ॥೧೩೩॥**

---

೧ ಮುದ್ರಿತ ಸಂಸ್ಕೃತ ಪ್ರತಿಯಲ್ಲಿ 'ಮಹಾಸತ್ತ'ವೆಂಬ ಸಂಬೋಧನ ಪದ ಮಾಡಿದೆ, ಅದು ಸಂಸ್ಕೃತ ಛಾಯೆಯಲ್ಲಿ 'ಮಹಾಸತ್ತ್ವ'ವಿದೆ.

[೧]ಷಟ್ ಜೀವಾನ್ ಷಡಾಯತನಾನಾಂ ನಿತ್ಯಂ ಮನೋವಚನಕಾಯಯೋಗೈಃ ।
ಕುರು ದಯಾಂ ಪರಿಹರ ಮುನಿವರ ಭಾವಯ ಅಪೂರ್ವಂ ಮಹಾಸತ್ವಮ್ ॥೧೩೩॥

ಅರ್ಥ :- ಎಲೈ ಮುನಿವರನೇ ! ನೀನು ಷಟ್‌ಕಾಯ ಜೀವಗಳ ಮೇಲೆ ದಯೆ ಮಾಡು ಮತ್ತು ಆರು ಅನಾಯತನಗಳನ್ನು ಮನ, ವಚನ, ಕಾಯದ ಯೋಗಗಳಿಂದ ಬಿಡು ಮತ್ತು ಅಪೂರ್ವ ಎಂದರೆ ಮೊದಲು ಆಗದಂಥ ಮಹಾಸತ್ತ್ವ ಎಂದರೆ ಎಲ್ಲ ಜೀವಗಳಲ್ಲಿ ವ್ಯಾಪಕ(ಜ್ಞಾಯಕ)ವಾದ ಮಹಾಸತ್ತ್ವ ಚೇತನಾಭಾವವನ್ನು ಭಾವಿಸು.

ಭಾವಾರ್ಥ :- ಅನಾದಿಕಾಲದಿಂದ ಜೀವದ ಸ್ವರೂಪವಾದ ಚೇತನಾಸ್ವರೂಪವನ್ನು ತಿಳಿಯದಿರುವುದರಿಂದ ಜೀವಗಳ ಹಿಂಸೆ ಮಾಡಿದೆ, ಆದುದರಿಂದ ಈಗ ಜೀವಾತ್ಮನ ಸ್ವರೂಪವನ್ನು ತಿಳಿದುಕೊಂಡು ಷಟ್‌ಕಾಯ ಜೀವಗಳ ಮೇಲೆ ದಯೆ ಮಾಡೆಂದು ಈ ಉಪದೇಶವಿದೆ. ಅನಾದಿಯಿಂದಲೇ ಆಪ್ತ, ಆಗಮ, ಪದಾರ್ಥ ಮತ್ತು ಇವುಗಳ ಸೇವೆ ಮಾಡುವವರ ಸ್ವರೂಪವನ್ನು ತಿಳಿಯದಿರುವುದರಿಂದ ಅನಾಪ್ತ ಮೊದಲಾದ ಆರು ಅನಾಯತನಗಳನ್ನು ಮೋಕ್ಷಮಾರ್ಗದ ಸ್ಥಾನವಿಲ್ಲದವುಗಳನ್ನು ಒಳ್ಳೆಯವೆಂದು ತಿಳಿದುಕೊಂಡು ಸೇವನೆ ಮಾಡಿದೆ, ಅದರಿಂದ ಅನಾಯತನದ ಪರಿಹಾರ ಮಾಡೆಂದು ಈ ಉಪದೇಶವಿದೆ. ಜೀವ ಸ್ವರೂಪದ ಉಪದೇಶಕನನ್ನು ಇವೆರಡನ್ನು ನೀನು ಮೊದಲು ತಿಳಿದುಕೊಳ್ಳಲಿಲ್ಲ, ಭಾವನೆ ಮಾಡಲಿಲ್ಲ, ಆದುದರಿಂದ ಈಗ ಆ ಭಾವನೆ ಮಾಡಬೇಕೆಂದು ಉಪದೇಶವಿದೆ. ॥೧೩೩॥

ಜೀವದ ಮತ್ತು ಉಪದೇಶ ಮಾಡುವವರ ಸ್ವರೂಪವನ್ನು ತಿಳಿದುಕೊಂಡಲ್ಲದೆ ಸಮಸ್ತ ಜೀವರುಗಳ ಪ್ರಾಣಗಳ ಆಹಾರ ಮಾಡಿದೆಯೆಂದು ಈಗ ತಿಳಿಸಿ ಹೇಳುತ್ತಾರೆ, -

ದಸವಿಹಪಾಣಾಹಾರೋ ಅಣಂತಭವಸಾಯರೇ ಭಮಂತೇಣ ।
ಭೋಯಸುಹಕಾರಣಟ್ಠಂ ಕದೋ ಯ ತಿವಿಹೇಣ ಸಯಲಜೀವಾಣಂ ॥೧೩೪॥

ದಶವಿಧಪ್ರಾಣಾಹಾರಃ ಅನಂತಭವಸಾಯರೇ ಭ್ರಮತಾ ।
ಭೋಗಸುಖಕಾರಣಾರ್ಥಂ ಕೃತಶ್ಚ ತ್ರಿವಿಧೇನ ಸಕಲಜೀವಾನಂ ॥೧೩೪॥

ಅರ್ಥ :- ಎಲೈ ಮುನಿಯೇ ! ನೀನು ಅನಂತಭವಸಾಗರದಲ್ಲಿ ಭ್ರಮಣ ಮಾಡುತ್ತ, ಎಲ್ಲತ್ರಸ, ಸ್ಥಾವರ ಜೀವಗಳ ಹತ್ತು ಪ್ರಕಾರದ ಪ್ರಾಣಗಳ ಆಹಾರವನ್ನು ಭೋಗಸುಖದ ಕಾರಣದ ಸಲುವಾಗಿ ಮನ, ವಚನ, ಕಾಯಗಳಿಂದ ಮಾಡಿರುವೆ.

ಭಾವಾರ್ಥ :- ನೀನು ಅನಾದಿಕಾಲದಿಂದ ಜಿನಮತದ ಉಪದೇಶವಿಲ್ಲದೆ ಅಜ್ಞಾನಿಯಾಗಿ ತ್ರಸ, ಸ್ಥಾವರ ಜೀವಗಳ ಪ್ರಾಣಗಳ ಆಹಾರವನ್ನು ಮಾಡಿರುವುದರಿಂದ ಈಗ ಜೀವಗಳ ಸ್ವರೂಪವನ್ನು ತಿಳಿದುಕೊಂಡು ಜೀವಗಳ ಮೇಲೆ ದಯೆ ಪಾಲಿಸು, ಭೋಗಾಭಿಲಾಷೆಯನ್ನು ಬಿಟ್ಟುಕೊಡೆಂದು ಉಪದೇಶವಿದೆ. ॥೧೩೪॥

---

ಅನಂತಭವಸಾಗರದೊಳ್ಭ್ರಮಿಸುವಾಗ ಭೋಗಸುಖದ ಕಾರಣದಿಂದ ।
ನೀನು ಸಕಲ ಜೀವಗಳ ದಶವಿಧ ಪ್ರಾಣಾಹಾರಮಾಡಿದೆ ತ್ರಿವಿಧದಿ ॥೧೩೪॥

---

೧ ಮುದ್ರಿತ ಸಂಸ್ಕೃತ ಪ್ರತಿಯಲ್ಲಿ 'ಷಟ್‌ಜೀವಷಡಾಯತನಾನಾಂ' ಎಂದು ಒಂದೇ ಪದ ಮಾಡಿದೆ.

ಹೀಗೆ ಪ್ರಾಣಿಗಳ ಹಿಂಸೆಯಿಂದ ಸಂಸಾರದಲ್ಲಿ ಭ್ರಮಣ ಮಾಡಿ ದುಃಖಪಡೆದಿರುವೆಯೆಂದು ಈಗ ಮತ್ತೆ ಹೇಳುತ್ತಾರೆ, –

**ಪಾಣಿವಹೇಹಿ ಮಹಾಜಸ ಚಉರಾಸೀಲಕ್ಖಜೋಣಿಮಜ್ಝಮ್ಮಿ ।**
**ಉಪ್ಪಜಂತ ಮರಂತೋ ಪತ್ತೋ ಸಿ ಣಿರಂತರಂ ದುಕ್ಖಂ ॥೧೩೪॥**

**ಪ್ರಾಣಿವಧೈಃ ಮಹಾಯಶಃ । ಚತುರಶೀತಿಲಕ್ಷಯೋನಿಮಧ್ಯೇ ।**
**ಉತ್ಪದ್ಯಮಾನಃ ಮ್ರಿಯಮಾಣಃ ಪ್ರಾಪ್ತೋಽಸಿ ನಿರಂತರಂ ದುಃಖಮ್ ॥೩೪॥**

ಅರ್ಥ ಃ– ಎಲೈ ಮುನಿಯೇ ! ನೀನು ಪ್ರಾಣಿಗಳ ಘಾತದಿಂದ ಎಂಭತ್ತಾ ನ್ಲುಕ್ಕು ಲಕ್ಷ ಯೋನಿಗಳ ಮಧ್ಯದಲ್ಲಿ ಉತ್ಪನ್ನವಾಗುತ್ತ ಮತ್ತು ಮರಣಹೊಂದುತ್ತ ನಿರಂತರ ದುಃಖ ಪಡೆದಿರುವೆ.

ಭಾವಾರ್ಥ ಃ– ಈ ಜೀವನು ಜಿನಮತದ ಉಪದೇಶವಿಲ್ಲದೆ ಜೀವಗಳ ಹಿಂಸೆಯಿಂದ ಎಂಭತ್ತಾ ನ್ಲುಕ್ಕು ಲಕ್ಷ ಯೋನಿಗಳಲ್ಲಿ ಉತ್ಪನ್ನನಾಗುತ್ತಾನೆ ಮತ್ತು ಸಾಯುತ್ತಾನೆ ಹಿಂಸೆಯಿಂದ ಕರ್ಮಬಂಧವಾಗುತ್ತದೆ, ಕರ್ಮ ಬಂಧದ ಉದಯದಿಂದ ಉತ್ಪತ್ತಿಮರಣರೂಪದ ಸಂಸಾರವಾಗುತ್ತದೆ. ಈ ಪ್ರಕಾರ ಜನ್ಮ–ಮರಣಗಳ ದುಃಖವನ್ನು ಸಹಿಸುತ್ತಿರುವುದರಿಂದ ಜೀವಗಳ ದಯೆಯ ಉಪದೇಶವಿದೆ. ॥೧೩೪॥

ಈಗ ಆ ದಯೆಯ ಉಪದೇಶವನ್ನೇ ಮಾಡುತ್ತಾರೆ, –

**ಜೀವಾಣಮಭಯದಾಣಂ ದೇಹಿ ಮುಣೇ ಪಾಣಿಭೂಯಸತ್ತಾಣಂ ।**
**ಕಲ್ಲಾಣಸುಹಣಿಮಿತ್ತಂ ಪರಂಪರಾ ತಿವಿಹಸುದ್ಧೀಏ ॥೧೩೬॥**

**ಜೀವಾನಾಮಭಯದಾನಂ ದೇಹಿ ಮುನೇ ಪ್ರಾಣಿಭೂತಸತ್ವಾನಾಮ್ ।**
**ಕಲ್ಯಾಣಸುಖನಿಮಿತ್ತಂ ಪರಂಪರಯಾ ತ್ರಿವಿಧಶುದ್ಧ್ಯಾ ॥೧೩೬॥**

ಅರ್ಥ ಃ– ಎಲೈ ಮುನಿಯೇ ! ಜೀವಗಳಿಗೆ ಮತ್ತು ಪ್ರಾಣಿಭೂತ ಸತ್ವಗಳಿಗೆ ತಮ್ಮ ಪರಂಪರೆಯಿಂದ ಕಲ್ಯಾಣ ಮತ್ತು ಸುಖವಾಗುವ ಸಲುವಾಗಿ ಮನ, ವಚನ, ಕಾಯಗಳ ಶುದ್ಧತೆಯಿಂದ ಅಭಯದಾನಕೊಡು.

ಭಾವಾರ್ಥ ಃ– ಪಂಚೇಂದ್ರಿಯಗಳನ್ನು 'ಜೀವ'ವೆಂದು ಹೇಳುತ್ತಾರೆ, ವಿಕಲತ್ರಯಗಳನ್ನು 'ಪ್ರಾಣಿ'ಯೆಂದು ಹೇಳುತ್ತಾರೆ, ವನಸ್ಪತಿಯನ್ನು 'ಭೂತ'ವೆಂದು ಹೇಳುತ್ತಾರೆ ಮತ್ತು ಪೃಥ್ವೀ , ಆಪ್, ತೇಜ, ವಾಯುವನ್ನು 'ಸತ್ವ'ವೆಂದು ಹೇಳುತ್ತಾರೆ. ಈ ಎಲ್ಲ ಜೀವಗಳನ್ನು ತಮ್ಮ ಸಮಾನವೆಂದು ತಿಳಿದುಕೊಂಡು ಅಭಯದಾನ ಕೊಡುವ ಉಪದೇಶವಿದೆ.

---

ಮುನಿ ಮಹಾಯಶ ! ಪ್ರಾಣಿವಧೆಯಿಂದ ಎಂಭತ್ತಾ ನ್ಲುಕ್ಕು ಲಕ್ಷ ಯೋನಿಮಧ್ಯದಲಿ ।
ಜನಿಸುತ್ತ ಮರಣಹೊಂದುತ್ತ ನಿರಂತರ ದುಃಖಗಳನೆ ಪಡೆದಿರುವೆ ॥೧೩೪॥

ಜೀವಗಳಿಗೆ ಮೇಣ್ಪ್ರಾಣಿಭೂತ ಸತ್ತ್ವಗಳಿಗೆ ಅಭಯದಾನ ಕರುಣಿಸು ।
ತ್ರಿವಿಧಶುದ್ಧಿಯಿಂದೆಲೆ ಮುನಿ ! ಕಲ್ಯಾಣಸುಖನಿಮಿತ್ತ ಪರಂಪರೆಯಿಂದ ॥೧೩೬॥

ಇದರಿಂದ ಶುಭ ಪ್ರಕೃತಿಗಳ ಬಂಧವಾಗುವುದರಿಂದ ಅಭ್ಯುದಯದ ಸುಖವಾಗುತ್ತದೆ, ಪರಂಪರೆಯಿಂದ ತೀರ್ಥಂಕರ ಪದವನ್ನು ಪಡೆದುಕೊಂಡು ಮೋಕ್ಷಹೊಂದುತ್ತಾನೆಂಬುದಾಗಿ ಈ ಉಪದೇಶವಿದೆ. ||೧೩೭||

ಈ ಜೀವನು ಷಟ್‌ಅನಾಯತನಗಳ ಪ್ರಸಂಗದಿಂದಾಗಿ ಮಿಥ್ಯಾತ್ವದಿಂದ ಸಂಸಾರದಲ್ಲಿ ಭ್ರಮಣ ಮಾಡುತ್ತಾನೆ, ಈಗ ಅದರ ಸ್ವರೂಪ ಹೇಳುತ್ತಾರೆ. ಮೊದಲು ಮಿಥ್ಯಾತ್ವದ ಭೇದಗಳನ್ನು ಹೇಳುತ್ತಾರೆ, –

**ಅಸಿಯಸಯ ಕಿರಿಯವಾ ಈ ಅಕ್ಕಿರಿಯಾಣಂ ಚ ಹೋಇ ಚುಲಸೀದೀ ।**
**ಸತ್ತಟ್ಠೀ ಅಣ್ಣಾಣೀ ವೇಣಈಯಾ ಹೋಂತಿ ಬತ್ತೀಸಾ ||೧೩೮||**

**ಅಶೀತಿಶತಂ ಕ್ರಿಯಾವಾದಿನಾಮಕ್ರಿಯಮಾಣಂ ಚ ಭವತಿ ಚತುರಶೀತಿಃ ।**
**ಸಪ್ತಷಷ್ಟಿರಜ್ಞಾನಿನಾಂ ವೈನಯಿಕಾನಾಂ ಭವತಿ ದ್ವಾತ್ರಿಂಶತ್ ||೧೩೮||**

ಅರ್ಥ :– ಒಂದುನೂರು ಎಂಭತ್ತು ಕ್ರಿಯಾವಾದಿಗಳಿದ್ದಾರೆ, ಎಂಭತ್ತಾ ನ್ನಾಲ್ಕು ಅಕ್ರಿಯಾವಾದಿಗಳ ಭೇದಗಳಿವೆ, ಅಜ್ಞಾನಿಗಳು ಅರವತ್ತೇಳು ಭೇದರೂಪರಿದ್ದಾರೆ ಮತ್ತು ವಿನಯವಾದಿಗಳು ಮೂವತ್ತೆರಡು ಇದ್ದಾರೆ.

ಭಾವಾರ್ಥ :– ಸರ್ವಜ್ಞರು ವಸ್ತುವಿನ ಸ್ವರೂಪವನ್ನು ಅನಂತಧರ್ಮಸ್ವರೂಪವೆಂದು ಹೇಳಿದ್ದಾರೆ, ಅದು ಪ್ರಮಾಣ ಮತ್ತು ನಯದಿಂದ ಸತ್ಯಾರ್ಥವಾಗಿ ಸಿದ್ಧವಾಗುತ್ತದೆ. ಯಾರ ಮತದಲ್ಲಿ ಸರ್ವಜ್ಞರಿಲ್ಲ ಮತ್ತು ಸರ್ವಜ್ಞರ ಸ್ವರೂಪದ ನಿಶ್ಚಯವನ್ನು ಯಥಾರ್ಥರೂಪದಿಂದ ಮಾಡಿ ಅದರ ಶ್ರದ್ಧೆ ಮಾಡಿರದಂಥ ಅನ್ಯವಾದಿಗಳು ವಸ್ತುವಿನ ಏಕಧರ್ಮವನ್ನು ಗ್ರಹಣ ಮಾಡಿ ನಾವು ಹೀಗೆ ಮನ್ನಿಸಿದ್ದೇವೆ ಅದು 'ಹೀಗೆಯೇ ಇದೆ' ಅನ್ಯಪ್ರಕಾರದಿಂದ ಇಲ್ಲ'ವೆಂದು ಅದರ ಪಕ್ಷಪಾತ ಮಾಡುತ್ತಾರೆ. ಹೀಗೆ ವಿಧಿ–ನಿಷೇಧ ಮಾಡಿ ಒಂದೊಂದು ಧರ್ಮದ ಪಕ್ಷಪಾತಿಗಳಾಗಿದ್ದಾರೆ. ಅವರವು ಇವು ಮುನ್ನೂರಾಅರವತ್ತುಮೂರು ಭೇದಗಳು ಸಂಕ್ಷೇಪದಿಂದ ಆಗಿದೆ.

ಕ್ರಿಯಾವಾದಿಗಳು – ಕೆಲವರಂತೂ ಗಮನ ಮಾಡುವುದು, ಕೂಡ್ರುವುದು, ಎದ್ದುನಿಲ್ಲುವುದು, ತಿನ್ನುವುದು, ಕುಡಿಯುವುದು, ಮಲಗುವುದು, ಉತ್ಪನ್ನವಾಗುವುದು, ನಷ್ಟವಾಗುವುದು, ನೋಡುವುದು, ತಿಳಿಯುವುದು, ಮಾಡುವುದು, ಭೋಗಿಸುವುದು, ಮರೆಯುವುದು, ಸ್ಮರಣೆ ಮಾಡುವುದು, ಪ್ರೀತಿಮಾಡುವುದು, ಹರ್ಷಮಾಡುವುದು, ವಿಷಾದ ಮಾಡುವುದು, ದ್ವೇಷ ಮಾಡುವುದು, ಬದುಕುವುದು, ಸಾಯುವುದು ಇವೇ ಮೊದಲಾದ ಕ್ರಿಯೆಗಳಿವೆ. ಇವನ್ನು ಜೀವಾದಿಪದಾರ್ಥಗಳನ್ನು ನೋಡಿ ಯಾವನೋ ಓರ್ವನು ಯಾವುದೇ ಒಂದು ಕ್ರಿಯೆಯ ಪಕ್ಷ ವಹಿಸಿದನುಮತ್ತು ಯಾವನೋ ಓರ್ವನು ಯಾವುದೇ ಒಂದು ಕ್ರಿಯೆಯ ಪಕ್ಷ ವಹಿಸಿದನು. ಹೀಗೆ ಪರಸ್ಪರ ಕ್ರಿಯಾವಿವಾದದಿಂದ ಭೇದಗಳಾಗಿವೆ, ಇವನ್ನು ಸಂಕ್ಷೇಪದಿಂದ ಒಂದುನೂರಾ ಎಂಭತ್ತು ಭೇದಗಳಾಗಿ ನಿರೂಪಣೆ ಮಾಡಿದ್ದಾರೆ, ವಿಸ್ತಾರಮಾಡಿದ ನಂತರ ಬಹಳಷ್ಟು ಆಗುತ್ತದೆ.

ಕೆಲವರು ಅಕ್ರಿಯಾವಾದಿಗಳಿದ್ದಾರೆ, ಇವರು ಜೀವ ಮೊದಲಾದ ಪದಾರ್ಥಗಳಲ್ಲಿಕ್ರಿಯೆಯ ಅಭಾವ ಮನ್ನಿಸಿ ತಮ್ಮ–ತಮ್ಮಲ್ಲಿ ವಿವಾದ ಮಾಡುತ್ತಾರೆ, ಕೆಲವರು ಜೀವವು ತಿಳಿಯುವುದಿಲ್ಲವೆಂದು ಹೇಳುತ್ತಾರೆ, ಕೆಲವರು ಏನನ್ನು

---

**ನೂರೆಂಭತ್ತು ಕ್ರಿಯಾವಾದಿಗಳು ಎಂಭತ್ತಾ ನ್ನಾಲ್ಕು ಅಕ್ರಿಯಾವಾದಿಯ ಭೇದವಿವೆ ।**
**ಅರವತ್ತೇಳು ಅಜ್ಞಾನಿಗಳು ಮೂವತ್ತೆರಡು ವಿನಯವಾದಿಗಳಿಹರು ||೧೩೮||**

ಮಾಡುವುದಿಲ್ಲವೆಂದು ಹೇಳುತ್ತಾರೆ, ಕೆಲವರು ಭೋಗಿಸುವುದಿಲ್ಲವೆಂದು ಹೇಳುತ್ತಾರೆ, ಕೆಲವರು ಉತ್ಪನ್ನವಾಗುವುದಿಲ್ಲವೆಂದು ಹೇಳುತ್ತಾರೆ, ಕೆಲವರು ನಷ್ಟವಾಗುವುದಿಲ್ಲವೆಂದು ಹೇಳುತ್ತಾರೆ, ಕೆಲವರು ಗಮನ ಮಾಡುವುದಿಲ್ಲವೆಂದು ಹೇಳುತ್ತಾರೆ, ಕೆಲವರು ನಿಲ್ಲುವುದಿಲ್ಲವೆಂದು ಹೇಳುತ್ತಾರೆ, ಇವೇ ಮೊದಲಾದ ಕ್ರಿಯೆಗಳ ಅಭಾವದ ಪಕ್ಷಪಾತದಿಂದ ಸರ್ವಥಾ ಏಕಾಂತಿಗಳಾಗಿದ್ದಾರೆ. ಇವರಲ್ಲಿ ಸಂಕ್ಷೇಪದಿಂದ ಎಂಭತ್ತಾ ನ್ಲುಕ್ಕು ಭೇದಗಳಿವೆ.

ಕೆಲವರು ಅಜ್ಞಾನವಾದಿಗಳಿದ್ದಾರೆ, ಇವರಲ್ಲಿ ಕೆಲವರಂತೂ ಸರ್ವಜ್ಞರ ಅಭಾವ ಮನ್ನಿಸುತ್ತಾರೆ, ಕೆಲವರು ಜೀವವು ಅಸ್ತಿಯಿದೆಯೆಂದು ಯಾರು ತಿಳಿಯುತ್ತಾರೆಂದು ಹೇಳುತ್ತಾರೆ, ಕೆಲವರು ಜೀವವು ನಾಸ್ತಿಯಿದೆಯೆಂದು ಯಾರು ತಿಳಿಯುತ್ತಾರೆಂದು ಹೇಳುತ್ತಾರೆ, ಕೆಲವರು ಜೀವವು ನಿತ್ಯವಿದೆಯೆಂಬುದನ್ನು ಯಾರು ತಿಳಿಯುವರೆಂದು ಹೇಳುತ್ತಾರೆ, ಕೆಲವರು ಜೀವವು ಅನಿತ್ಯವಿದೆಯೆಂಬುದನ್ನು ಯಾರು ತಿಳಿಯುವರೆಂದು ಹೇಳುತ್ತಾರೆ, ಇತ್ಯಾದಿ ಸಂಶಯ, ವಿಪರ್ಯಯ, ಅನಧ್ಯವಸಾಯರೂಪವಾಗಿ ವಿವಾದ ಮಾಡುತ್ತಾರೆ. ಇವರಲ್ಲಿ ಸಂಕ್ಷೇಪದಿಂದ ಅರವತ್ತೇಳು ಭೇದಗಳಿವೆ. ಕೆಲವರು ವಿನಯವಾದಿಗಳಿದ್ದಾರೆ, ಅವರಲ್ಲಿ ಕೆಲವರು ದೇವಾದಿಕರ ವಿನಯದಿಂದ ಸಿದ್ಧಿಯಿದೆಯೆಂದು ಹೇಳುತ್ತಾರೆ, ಕೆಲವರು ಗುರುಗಳ ವಿನಯದಿಂದ ಸಿದ್ಧಿಯಿದೆಯೆಂದು ಹೇಳುತ್ತಾರೆ, ಕೆಲವರು ಮಾತೆಯ ವಿನಯದಿಂದ ಮತ್ತು ಕೆಲವರು ತಂದೆಯ ವಿನಯದಿಂದ ಸಿದ್ಧಿಯಿದೆಯೆಂದು ಹೇಳುತ್ತಾರೆ, ಕೆಲವರು ರಾಜನ ವಿನಯದಿಂದ ಸಿದ್ಧಿಯಿದೆಯೆಂದು ಹೇಳುತ್ತಾರೆ, ಕೆಲವರು ಎಲ್ಲ ವಿನಯದಿಂದ ಸಿದ್ಧಿಯಿದೆಯೆಂದು ಹೇಳುತ್ತಾರೆ, ಇತ್ಯಾದಿಯಾಗಿ ವಿವಾದ ಮಾಡುತ್ತಾರೆ ಇವರಲ್ಲಿ ಸಂಕ್ಷೇಪದಿಂದ ಮುನ್ನೂರಾ ಅರವತ್ತು ಮೂರು ಭೇದಗಳಿವೆ, ವಿಸ್ತಾರಮಾಡಿದ ಮೇಲೆ ಅಧಿಕವಾಗಿ ಹೋಗುತ್ತವೆ. ಅದರಲ್ಲಿ ಕೆಲವರು ಈಶ್ವರವಾದಿಗಳಿದ್ದಾರೆ, ಕೆಲವರು ಕಾಲವಾದಿಗಳಿದ್ದಾರೆ, ಕೆಲವರು ಸ್ವಭಾವವಾದಿಗಳಿದ್ದಾರೆ, ಕೆಲವರು ವಿನಯವಾದಿಗಳಿದ್ದಾರೆ, ಕೆಲವರು ಆತ್ಮವಾದಿಗಳಿದ್ದಾರೆ, ಇವರುಗಳ ಸ್ವರೂಪವನ್ನು ಗೊಮ್ಮಟಸಾರ ಮೊದಲಾದ ಗ್ರಂಥಗಳಿಂದ ತಿಳಿದು ಕೊಳ್ಳಬೇಕು. ಹೀಗೆ ಮಿಥ್ಯಾತ್ವದ ಭೇದಗಳಿವೆ. ||೧೩೭||

ಅಭವ್ಯಜೀವನು ತನ್ನ ಪ್ರಕೃತಿಯನ್ನು ಬಿಡುವುದಿಲ್ಲ ಅವನ ಮಿಥ್ಯಾತ್ವವು ದೂರವಾಗುವುದಿಲ್ಲವೆಂಬುದನ್ನು ಈಗ ಹೇಳುತ್ತಾರೆ, –

**ಣ ಮುಯಇ ಪಯಡಿ ಅಭವ್ವೋ ಸುಟ್ಠು ವಿ ಆಯಣ್ಣಿ ಊಣ ಜಿಣಧಮ್ಮಂ ।**
**ಗುಡದುದ್ಧಂ ಪಿ ಪಿಬಂತಾ ಣ ಪಣ್ಣಯಾ ಣಿವ್ವಿಸಾ ಹೋಂತಿ ||೧೩೮||**

**ನ ಮುಂಚತಿ ಪ್ರಕೃತಿಮಭವ್ಯಃ ಸುಷ್ಠು ಅಪಿ ಆಕರ್ಣ್ಯ ಜಿನಧರ್ಮಮ್ ।**
**ಗುಡದುಗ್ಧಮಪಿ ಪಿಬಂತಃ ನ ಪನ್ನಗಾಃ ನಿರ್ವಿಷಾಃ ಭವಂತಿ ||೧೩೮||**

ಅರ್ಥ :– ಯಾವ ಪ್ರಕಾರ ಸರ್ಪವು ಬೆಲ್ಲಸಹಿತವಾದ ಹಾಲನ್ನು ಕುಡಿಯುತ್ತಿದ್ದರೂ ಕೂಡ ಅದು ವಿಷರಹಿತವಾಗುವುದಿಲ್ಲ, ಅದೇ ಪ್ರಕಾರ ಅಭವ್ಯ ಜೀವನು ಒಳ್ಳೆಯ ರೀತಿಯಿಂದ ಜಿನಧರ್ಮವನ್ನು ಕೇಳುತ್ತಿದ್ದರೂ ಕೂಡ ತನ್ನ ಪ್ರಕೃತಿಯನ್ನು ಬಿಟ್ಟುಕೊಡುವುದಿಲ್ಲ.

---

**ಬಿಡನು ಪ್ರಕೃತಿಯನು ಅಭವ್ಯ ಆಕರ್ಣಿ ಜಿನಧರ್ಮ ಕೇಳಿದರು ಕೂಡ ।**
**ಗುಡಮಿಶ್ರ ಕ್ಷೀರಪಾನದಿಂ ಕೂಡ ಉರಗವದು ನಿರ್ವಿಷವಾಗಲಾರದು ||೧೩೮||**

ಭಾವಾರ್ಥ :– ಯಾವುದು ಕಾರಣ ಪಡೆದು ಕೂಡ ಹೋಗುವುದಿಲ್ಲ ಅದನ್ನು 'ಪ್ರಕೃತಿ' ಅಥವಾ 'ಸ್ವಭಾವ'ವೆಂದು ಹೇಳುತ್ತಾರೆ. ಅನೇಕಾಂತ ತತ್ತ್ವಸ್ವರೂಪವಿರುವಂಥ ವೀತರಾಗವಿಜ್ಞಾನರೂಪವಾದ ಜಿನಧರ್ಮವು ಮಿಥ್ಯಾತ್ವವನ್ನು ನಾಶಮಾಡುವಂಥದ್ದಿದೆ, ಆದರೆ ಅದರ ಸ್ವರೂಪವನ್ನು ಒಳ್ಳೆಯ ಪ್ರಕಾರದಿಂದ ಕೇಳಿದರೂ ಕೂಡ ಮಿಥ್ಯಾತ್ವಸ್ವರೂಪದ ಭಾವವು ಬದಲಾಗದಿರುವುದು ಅದು ವಸ್ತುವಿನ ಸ್ವರೂಪವಿದೆ, ಇದು ಅಭವ್ಯನ ಸ್ವಭಾವವಿದೆ, ಇದನ್ನು ಯಾರೂ ಮಾಡಿಲ್ಲ, ಅಭವ್ಯರೂಪದ ಪ್ರಕೃತಿಯಂತೂ ಸರ್ವಜ್ಞಗಮ್ಯವಿದೆ, ಆದರೂ ಅಭವ್ಯನ ಪ್ರಕೃತಿಯ ಸಮಾನವಾಗಿ ತಮ್ಮ ಪ್ರಕೃತಿಯನ್ನಿಡಬಾರದು, ಇದು ಮಿಥ್ಯಾತ್ವವನ್ನು ಬಿಡಿಸುವ ಉಪದೇಶವಿದೆಯೆಂಬ ಅಪೇಕ್ಷೆಯನ್ನು ತಿಳಿದುಕೊಳ್ಳಬೇಕು. ॥೧೩೮॥

ಈಗ ಇದೇ ಅರ್ಥವನ್ನು ಇನ್ನೂ ದೃಢಪಡಿಸುತ್ತಾರೆ, –

ಮಿಚ್ಛತ್ತಛಣ್ಣದಿಟ್ಠೀ ದುದ್ಧೀಏ ದುಮ್ಮಏಹಿಂ ದೋಸೇಹಿಂ ।
ಧಮ್ಮಂ ಜಿಣಪಣ್ಣತ್ತಂ ಅಭವ್ಯಜೀವೋ ಣ ರೋಚೇದಿ ॥೧೩೯॥

ಮಿಥ್ಯಾತ್ವಛನ್ನದೃಷ್ಟಿಃ ದುರ್ಧಿಯಾ ದುರ್ಮತೈಃ ದೋಷೈಃ ।
ಧರ್ಮ ಜಿನಪ್ರಜ್ಞಪ್ತಂ ಅಭವ್ಯಜೀವಃ ನ ರೋಚಯತಿ ॥೧೩೯॥

ಅರ್ಥ :– ದುರ್ಮತ ಎಂದರೆ ಏಕಾಂತ ಮತಗಳಿಂದ ಪ್ರರೂಪಿಸಲ್ಪಟ್ಟ ಅನ್ಯಮತಗಳೇ ದೋಷಗಳಾಗಿ, ಅವುಗಳ ಮುಖಾಂತರ ತಮ್ಮ ದುರ್ಬುದ್ಧಿಯಿಂದ (ಮಿಥ್ಯಾತ್ವದಿಂದ) ಆಚ್ಛಾದಿತವಾದ ಬುದ್ಧಿಯಿರುವಂಥ ಅಭವ್ಯ ಜೀವನಿಗೆ ಜಿನಪ್ರಣೀತವಾದ ಧರ್ಮವು ರುಚಿಸುವುದಿಲ್ಲ, ಅವನು ಅದರ ಶ್ರದ್ಧೆಮಾಡುವುದಿಲ್ಲ, ಅದರಲ್ಲಿ ಅಭಿರುಚಿ ಮಾಡುವುದಿಲ್ಲ.

ಭಾವಾರ್ಥ :– ಮಿಥ್ಯಾತ್ವದ ಉಪದೇಶದಿಂದ ತನ್ನ ದುರ್ಬುದ್ಧಿಯ ಮುಖಾಂತರ ಮಿಥ್ಯಾದೃಷ್ಟಿಯಿರುವವನಿಗೆ ಜಿನಧರ್ಮವು ರುಚಿಸುವುದಿಲ್ಲ, ಆಗ ಇವು ಅಭವ್ಯಜೀವನ ಭಾವಗಳಿವೆಯೆಂದು ತಿಳಿದುಬರುತ್ತದೆ. ಯಥಾರ್ಥವಾದ ಅಭವ್ಯ ಜೀವನನ್ನಂತೂ ಸರ್ವಜ್ಞರು ತಿಳಿಯುತ್ತಾರೆ, ಆದರೆ ಇವು ಅಭವ್ಯಜೀವನ ಚಿಹ್ನಗಳಿವೆಯೆಂಬುದು ಪರೀಕ್ಷೆಯ ಮುಖಾಂತರ ತಿಳಿದು ಬರುತ್ತದೆ. ॥೧೩೯॥

ಹೀಗೆ ಮಿಥ್ಯಾತ್ವದ ನಿಮಿತ್ತದಿಂದ ದುರ್ಗತಿಗೆ ಪ್ರಾಪ್ತನಾಗುತ್ತಾನೆಂದು ಈಗ ಹೇಳುತ್ತಾರೆ, –

ಕುಚ್ಛಿಯಧಮ್ಮಮ್ಮಿ ರಓ ಕುಚ್ಛಿಯಪಾಸಂಡಿಭತ್ತಿಸಂಜುತ್ತೋ ।
ಕುಚ್ಛಿಯತವಂ ಕುಣಂತೋ ಕುಚ್ಛಿಯಗಇಭಾಯಣೋ ಹೋಇ ॥೧೪೦॥

---

ದುರ್ಮತದೋಷದಿಂ ದುರ್ಬುದ್ಧಿಯಿಂ ಮಿಥ್ಯಾತ್ವಾವರಿಸಿದ ದೃಷ್ಟಿಯುಳ್ಳವನಿಗೆ ।
ಧರ್ಮದಲಿ ಜಿನಪ್ರಣೀತ ಅಭವ್ಯಜೀವ ಅಭಿರುಚಿ ತಾ ಮಾಡಲಾರನು ॥೧೩೯॥

ಕುತ್ಸಿತ ಧರ್ಮದೊಳನುರಕ್ತ ಮೇಣ್ಕುತ್ಸಿತ ಪಾಖಂಡಿಗಳ ಭಕ್ತಿಸಂಯುಕ್ತ .
ಕುತ್ಸಿತ ತಪ ಮಾಡುವಂಥವನು ಕುತ್ಸಿತಗತಿಯ ಭಾಜನನಾಗುವನು ॥೧೪೦॥

ಕುತ್ಸಿತಧರ್ಮೇ ರತಃ ಕುತ್ಸಿತಪಾಷಂಡಿಭಕ್ತಿಸಂಯುಕ್ತಃ ।
ಕುತ್ಸಿತತಪಃ ಕುರ್ವನ್ ಕುತ್ಸಿತಗತಿಭಾಜನಂ ಭವತಿ ॥೧೪೦॥

ಅರ್ಥ ಃ- ಯಾವನು ಕುತ್ಸಿತ (ನಿಂದ್ಯ) ಮಿಥ್ಯಾಧರ್ಮದಲ್ಲಿ ರತ (ಲೀನ)ನಿದ್ದಾನೆ, ಯಾವನು ಪಾಖಂಡಿ ನಿಂದ್ಯವೇಷಧಾರಿಗಳ ಭಕ್ತಿಸಂಯುಕ್ತನಿದ್ದಾನೆ,ಯಾವನು ನಿಂದ್ಯವಾದ ಮಿಥ್ಯಾಧರ್ಮವನ್ನು ಪಾಲಿಸುತ್ತಾನೆ, ಮಿಥ್ಯಾದೃಷ್ಟಿಗಳ ಭಕ್ತಿ ಮಾಡುತ್ತಾನೆ ಮತ್ತು ಮಿಥ್ಯಾ ಅಜ್ಞಾನ ತಪ ಮಾಡುತ್ತಾನೆ ಅವನು ದುರ್ಗತಿಯನ್ನೇ ಪಡೆಯುತ್ತಾನೆ, ಆದುದರಿಂದ ಮಿಥ್ಯಾತ್ವವನ್ನು ಬಿಟ್ಟುಕೊಡಬೇಕೆಂಬ ಉಪದೇಶವಿದೆ. ।.೧೪೦॥

ಈಗ ಇದೇ ಅರ್ಥವನ್ನು ದೃಢಪಡಿಸುತ್ತ ಇಂಥ ಮಿಥ್ಯಾತ್ವದಿಂದ ಮೋಹಿತನಾದ ಜೀವನು ಸಂಸಾರದಲ್ಲಿ ಭ್ರಮಣ ಮಾಡುತ್ತಾನೆಂದು ಹೇಳುತ್ತಾರೆ, -

ಇಯ ಮಿಚ್ಛತ್ತಾವಾಸೇ ಕುಣಯಕುಸತ್ಥೇಹಿಂ ಮೋಹಿಓ ಜೀವೋ ।
ಭಮಿಓ ಅಣಾಯಿಕಾಲಂ ಸಂಸಾರೇ ಧೀರ ಚಿಂತೇಹಿ ॥೧೪೧॥

ಇತಿ ಮಿಥ್ಯಾತ್ವಾವಾಸೇ ಕುನಯಕುಶಾಸ್ತ್ರೈಃ ಮೋಹಿತಃ ಜೀವಃ ।
ಭ್ರಮಿತಃ ಅನಾದಿಕಾಲಂ ಸಂಸಾರೇ ಧೀರ ! ಚಿಂತಯ ॥೧೪೧॥

ಅರ್ಥ ಃ- ಇತಿ ಎಂದರೆ ಪೂರ್ವೋಕ್ತ ಪ್ರಕಾರ ಮಿಥ್ಯಾತ್ವದ ಆವಾಸ(ಸ್ಥಾನ)ವಾದ ಈ ಮಿಥ್ಯಾದೃಷ್ಟಿಗಳ ಸಂಸಾರದಲ್ಲಿ ಕುನಯ ಸರ್ವಥಾ ಏಕಾಂತ ಸಹಿತಗಳಾದ ಕುಶಾಸ್ತ್ರಗಳಿಂದ ಮೋಹಿತ (ಪ್ರಜ್ಞಾಹೀನ)ನಾದ ಈ ಜೀವನು ಅನಾದಿಕಾಲದಿಂದ ಬಿಟ್ಟೂಬಿಡದೆ ಸಂಸಾರದಲ್ಲಿ ಭ್ರಮಣ ಮಾಡುತ್ತಲಿದ್ದಾನೆಂಬುದನ್ನು ಎಲೈ ಧೀರನಾದ ಮುನಿಯೇ ! ನೀನು ವಿಚಾರ ಮಾಡು.

ಭಾವಾರ್ಥ ಃ- ಪೂರ್ವೋಕ್ತ ಮುನ್ನೂರಾ ಅರವತ್ತುಮೂರು ಕುವಾದಿಗಳಿಂದ ಸರ್ವಥಾ ಏಕಾಂತಪಕ್ಷ ರೂಪವಾದ ಕುನಯದ ಮುಖಾಂತರ ರಚಿಸಲ್ಪಟ್ಟ ಶಾಸ್ತ್ರಗಳಿಂದ ಮೋಹಿತನಾದ ಈ ಜೀವನು ಸಂಸಾರದಲ್ಲಿ ಅನಾದಿಕಾಲದಿಂದ ಭ್ರಮಣಮಾಡುತ್ತಲಿದ್ದಾನೆ, ಆದುದರಿಂದ ಎಲೈ ಧೀರನಾದ ಮುನಿಯೇ ! ಈಗ ಇಂಥ ಕುವಾದಿಗಳ ಸಂಗತಿಯನ್ನು ಕೂಡ ಮಾಡಬೇಡೆಂದು ಉಪದೇಶವಿದೆ. ॥೧೪೧॥

ಪೂರ್ವೋಕ್ತ ಮುನ್ನೂರಾ ಅರವತ್ತು ಮೂರು ಪಾಖಂಡಿಗಳ ಮಾರ್ಗವನ್ನು ಬಿಟ್ಟುಕ್ಕೊಟ್ಟು ಜಿನಮಾರ್ಗದಲ್ಲಿ ಮನಸ್ಸನ್ನು ತೊಡಗಿಸೆಂದು ಈಗ ಹೇಳುತ್ತಾರೆ, -

ಪಾಸಂಡಿ ತಿಣ್ಣಿ ಸಹಾ ತಿಸಟ್ಠಿ ಭೇಯಾ ಉಮಗ್ಗ ಮುತ್ತೂಣ ।
ರುಂಭಹಿ ಮಣು ಜಿಣಮಗ್ಗೇ ಅಸಪ್ಪಲಾವೇಣ ಕಿಂ ಬಹುಣಾ ॥೧೪೨॥

---

ಕುನಯಕುಶಾಸ್ತ್ರದಿಂ ಮೋಹಿತಜೀವ ಮಿಥ್ಯಾತ್ವವಾಸವಾದೀ ಸಂಸಾರದಲಿ ।
ಅನಾದಿಕಾಲದಿಂ ಭ್ರಮಣಮಾಡುತಿರುವುದನು ಎಲೆ ಧೀರ ! ನೀ ಚಿಂತಿಸು ॥೧೪೧॥

ನೀನು ಮುನ್ನೂರರವತ್ತು ಮೂರು ಪಾಖಂಡಿಗಳ ಉನ್ಮಾರ್ಗವನು ಬಿಟ್ಟುಕೊಟ್ಟು ।
ಜಿನಮಾರ್ಗದಲಿ ಮನವ ನಿಲ್ಲಿಸು ಬಹುಅಸತ್ಪ್ರಲಾಪದಿಂದೇನಪ್ಪುದು ॥೧೪೨॥

ಪಾಖಂಡಿನಃ ತ್ರೀಣಿ ಶತಾನಿ ತ್ರಿಷಷ್ಟಿ ಭೇದಾಃ ಉನ್ಮಾರ್ಗಂ ಮುಕ್ತ್ವಾ ।
ರುಂಧ್ಧಿ ಮನಃ ಜಿನಮಾರ್ಗೇ ಅಸತ್ಪ್ರಲಾಪೇನ ಕಿಂ ಬಹುನಾ ॥೧೪೨॥

ಅರ್ಥ ಃ- ಎಲೈ ಜೀವನೇ ! ಮುನ್ನೂರಾ ಅರವತ್ತು ಮೂರು ಪಾಖಂಡಿಗಳ ಮಾರ್ಗವನ್ನು ಬಿಟ್ಟುಕೊಟ್ಟು ಜಿನಮಾರ್ಗದಲ್ಲಿ ನಿನ್ನ ಮನಸ್ಸನ್ನು ನಿಲ್ಲಿಸು (ತೊಡಗಿಸು) ಎಂಬುದು ಸಂಕ್ಷೇಪವಿದೆ ಮತ್ತು ನಿರರ್ಥಕ ಪ್ರಳಾಪರೂಪವಾಗಿ ಹೇಳುವುದರಲ್ಲೇನಿದೆ ?

ಭಾವಾರ್ಥ ಃ- ಈ ಪ್ರಕಾರ ಮಿಥ್ಯಾತ್ವದ ವರ್ಣನೆ ಮಾಡಲಾಯಿತು. ಹೆಚ್ಚು ನಿರರ್ಥಕ ವಚನಾ-ಳಾಪದಲ್ಲೇನಿದೆ ? ಮುನ್ನೂರಾ ಅರವತ್ತು ಮೂರು ಕುವಾದಿಗಳು ಪಾಖಂಡಿಗಳು ಹೇಳಿರುವ ಅವರ ಮಾರ್ಗವನ್ನು ಬಿಟ್ಟುಕೊಟ್ಟು ಜಿನಮಾರ್ಗದಲ್ಲಿ ಮನಸ್ಸನ್ನು ನಿಲ್ಲಿಸು, ಬೇರೆಡೆಗೆ ಹೋಗಗೊಡಬೇಡವೆಂದು ಆಚಾರ್ಯದೇವರು ಹೇಳುತ್ತಾರೆ. ಕಾಲದೋಷದಿಂದ ಈ ಪಂಚಮಕಾಲದಲ್ಲಿ ಅನೇಕ ಪಕ್ಷಪಾತದಿಂದ ಮತ-ಮತಾಂತರಗಳು ಹುಟ್ಟಿಕೊಂಡಿವೆ ಅವನ್ನು ಕೂಡ ಮಿಥ್ಯೆಯೆಂದು ತಿಳಿದುಕೊಂಡು ಅವುಗಳ ಪ್ರಸಂಗ ಮಾಡಬಾರದು. ಸರ್ವಥಾ ಏಕಾಂತದ ಪಕ್ಷಪಾತ ಬಿಟ್ಟುಕೊಟ್ಟು ಅನೇಕಾಂತರೂಪವಾದ ಜಿನವಚನದ ಆಶ್ರಯ ತೆಗೆದುಕೊಳ್ಳಬೇಕೆಂಬ ವಿಶೇಷವನ್ನು ಇಲ್ಲಿ ತಿಳಿದುಕೊಳ್ಳಬೇಕು. ॥೧೪೨॥

ಈಗ ಸಮ್ಯಗ್ದರ್ಶನದ ನಿರೂಪಣೆ ಮಾಡುತ್ತಾರೆ, ಮೊದಲು ಸಮ್ಯಗ್ದರ್ಶನದಿಂದ ರಹಿತನಾದ ಪ್ರಾಣಿಯು ಚಲಿಸುತ್ತಿರುವ 'ಕಳೇವರ'ನಿದ್ದಾನೆಂದು ಹೇಳುತ್ತಾರೆ, -

ಜೀವವಿಮುಕ್ಕೋ ಸಬಓ ದಂಸಣಮುಕ್ಕೋ ಯ ಹೋಇ ಚಲಸಬಓ ।
ಸಬಓ ಲೋಯಅಪುಜ್ಜೋ ಲೋಉತ್ತರಯಮ್ಮಿ ಚಲಸಬವೋ ॥೧೪೩॥

ಜೀವವಿಮುಕ್ತಃ ಶವಃ ದರ್ಶನಮುಕ್ತಶ್ಚ ಭವತಿ ಚಲಶವಃ ।
ಶವಃ ಲೋಕೇ ಅಪೂಜ್ಯಃ ಲೋಕೋತ್ತರೇ ಚಲಶವಃ ॥೧೪೩॥

ಅರ್ಥ ಃ- ಲೋಕದಲ್ಲಿ ಜೀವರಹಿತವಾದ ಶರೀರವನ್ನು 'ಶವ'ವೆಂದು ಹೇಳುತ್ತಾರೆ, 'ಮೃತಕ' ಅಥವಾ 'ಹೆಣ'ವೆಂದು ಹೇಳುತ್ತಾರೆ, ಅದೇ ಪ್ರಕಾರ ಸಮ್ಯಗ್ದರ್ಶನವಿಲ್ಲದ ಪುರುಷನು 'ಚಲಿಸುತ್ತಿರುವ ಕಳೇವರ'ನಿದ್ದಾನೆ, ಹೆಣವಂತೂ ಲೋಕದಲ್ಲಿ ಅಪೂಜ್ಯವಿದೆ, ಅದನ್ನು ಅಗ್ನಿಯಿಂದ ಸುಡಲಾಗುತ್ತದೆ ಇಲ್ಲವೆ ಭೂಮಿಯಲ್ಲಿ ಹೂಳಿ ಬಿಡಲಾಗುತ್ತದೆ ಮತ್ತು ದರ್ಶನದಿಂದ ರಹಿತವಾದ ಚಲಿಸುತ್ತಿರುವ 'ಕಳೇವರ'ನು ಲೋಕೋತ್ತರರಾದ ಆ ಮುನಿಸಮ್ಯಗ್ದೃಷ್ಟಿಗಳಲ್ಲಿ ಅಪೂಜ್ಯನಿದ್ದಾನೆ, ಅವರು ಅವನಿಗೆ ವಂದನಾದಿಗಳನ್ನು ಮಾಡುವುದಿಲ್ಲ. ಮುನಿವೇಷ ಧರಿಸಿದರೂ ಕೂಡ ಅವನನ್ನು ಸಂಘದ ಹೊರಗೆ ಹಾಕಿ ಬಿಡುತ್ತಾರೆ ಅಥವಾ ಪರಲೋಕದಲ್ಲಿ ನಿಂದ್ಯಗತಿ ಪಡೆದು ಅಪೂಜ್ಯನಾಗುತ್ತಾನೆ.

ಭಾವಾರ್ಥ ಃ- ಸಮ್ಯಗ್ದರ್ಶನವಿಲ್ಲದ ಪುರುಷನು ಮೃತಕತುಲ್ಯನಿದ್ದಾನೆ. ॥೧೪೩॥

---

ಜೀವವಿಮುಕ್ತಶವವಿದ್ದರೆ ದರ್ಶನಮುಕ್ತ ಚಲಶವನಿರುವನು ।
ಶವವದು ಲೋಕದಲಿ ಅಪೂಜ್ಯವಿದ್ದರೆ ಚಲಶವ ಲೋಕೋತ್ತರವಿದೆ ॥೧೪೩॥

ಈಗ ಸಮ್ಯಕ್ತ್ವದ ಮಹಾನತೆಯನ್ನು ಹೇಳುತ್ತಾರೆ, -

**ಜಹ ತಾರಯಾಣ ಚಂದೋ ಮಯರಾಓ ಮಯಉಲಾಣ ಸವ್ವಾಣಂ ।**
**ಅಹಿಓ ತಹ ಸಮ್ಮತ್ತೋ ರಿಸಿಸಾವಯದುವಿಹಧಮ್ಮಾಣಂ ॥೧೪೪॥**

**ಯಥಾ ತಾರಕಾನಾಂ ಚಂದ್ರಃ ಮೃಗರಾಜಃ ಮೃಗಕುಲಾನಾಂ ಸರ್ವೇಷಾಮ್ ।**
**ಅಧಿಕಃ ತಥಾ ಸಮ್ಯಕ್ತ್ವಂ ಋಷಿಶ್ರಾವಕದ್ವಿವಿಧಧರ್ಮಾಣಾಮ್ ॥೧೪೪॥**

ಅರ್ಥ :- ಯಾವ ಪ್ರಕಾರ ನಕ್ಷತ್ರಗಳ ರಾಜಿಯಲ್ಲಿ ಚಂದ್ರನು ಅಧಿಕನಿದ್ದಾನೆ ಮತ್ತು ಮೃಗಕುಲ ಎಂದರೆ ಪಶುಗಳ ಸಮೂಹದಲ್ಲಿ ಮೃಗರಾಜ (ಸಿಂಹ)ವು ಅಧಿಕವಿದೆ, ಅದೇ ಪ್ರಕಾರ ಋಷಿ (ಮುನಿ) ಮತ್ತು ಶ್ರಾವಕವೆಂಬ ಈ ಎರಡು ಪ್ರಕಾರದ ಧರ್ಮಗಳಲ್ಲಿ ಸಮ್ಯಕ್ತ್ವವು ಅಧಿಕವಿದೆ.

ಭಾವಾರ್ಥ :- ಎಷ್ಟು ವ್ಯವಹಾರ ಧರ್ಮದ ಪ್ರವೃತ್ತಿಗಳಿವೆ ಅವುಗಳಲ್ಲಿ ಸಮ್ಯಕ್ತ್ವವು ಅಧಿಕವಿದೆ, ಅದನ್ನು ಹೊರತುಪಡಿಸಿ ಉಳಿದವುಗಳೆಲ್ಲವು ಸಂಸಾರ ಮಾರ್ಗಗಳಿವೆ, ಬಂಧದ ಕಾರಣವಿವೆ. ॥೧೪೪॥

ಈಗ ಮತ್ತೆ ಹೇಳುತ್ತಾರೆ, -

**ಜಹ ಫಣಿರಾಓ [1]ಸೋಹಇ ಫಣಮಣಿಮಾಣಿಕ್ಕಕಿರಣವಿಪ್ಫುರಿಓ ।**
**ತಹ ವಿಮಲದಂಸಣಧರೋ [2]ಜಿಣಭತ್ತೀ ಪವಯಣೇ ಜೀವೋ ॥೧೪೫॥**

**ಯಥಾ ಫಣಿರಾಜಃ ಶೋಭತೇ ಫಣಮಣಿಮಾಣಿಕ್ಯ ಕಿರಣವಿಸ್ಫುರಿತಃ ।**
**ತಥಾ ವಿಮಲದರ್ಶನಧರಃ ಜಿನಭಕ್ತಿಃ ಪ್ರವಚನೇ ಜೀವಃ ॥೧೪೫॥**

ಅರ್ಥ :- ಯಾವ ಪ್ರಕಾರ ಫಣಿರಾಜನು (ಧರಣೇಂದ್ರನು) ಆ ಸಹಸ್ರ ಹೆಡೆಗಳಲ್ಲಿ ಸೇರಿಸಲ್ಪಟ್ಟ ಮಾಣಿಕಗಳ ಮಧ್ಯದಲ್ಲಿರುವ ಕೆಂಪು ಮಾಣಿಕ್ಯದ ಕಿರಣಗಳಿಂದ ವಿಸ್ಫುರಿತ (ದೈದೀಪ್ಯಮಾನ)ವಾಗಿ ಶೋಭೆ ಪಡೆಯುತ್ತಾನೆ, ಅದೇ

---

**ಹೇಗೆ ತಾರಾಗಣದಿ ಚಂದ್ರ ಮೃಗಕುಲದಿ ಮೃಗರಾಜ ಸರ್ವೋತ್ತಮವಿವೆ ।**
**ಹಾಗೆ ಅಧಿಕವಿದೆ ಸಮ್ಯಕ್ತ್ವ ಋಷಿಶ್ರಾವಕವೆಂಬುಭಯ ಧರ್ಮಗಳಲಿ ॥೧೪೪॥**

**ಹೇಗೆ ಫಣಿರಾಜ ಫಣಮಣಿಮಾಣಿಕ್ಯ ಕಿರಣವಿಸ್ಫುರಿಸಿ ಶೋಭಿಪುದು ।**
**ಹಾಗೆ ವಿಮಲದರ್ಶನಧಾರಕ ಜಿನಭಕ್ತ ಪ್ರವಚನದಿ ಶೋಭಿಪನು ॥೧೪೫॥**

---

೧ ಮುದ್ರಿತ ಸಂಸ್ಕೃತ ಪ್ರತಿಯಲ್ಲಿ 'ರೋಹಇ' ಪಾಠವಿದೆ ಅದರದು ಸಂಸ್ಕೃತ ಛಾಯೆಯಲ್ಲಿ 'ರಾಜತೇ' ಎಂಬ ಪಾಠಾಂತರವಿದೆ.

೨. ಮುದ್ರಿತ ಸಂಸ್ಕೃತ ಪ್ರತಿಯಲ್ಲಿ 'ಜಿಣಭತ್ತೀಪವಯಣೋ' ಎಂಬ ಒಂದೇ ಪದರೂಪದ ಪದವಿದೆ, ಆದರದು ಸಂಸ್ಕೃತದಲ್ಲಿ 'ಜಿನಭಕ್ತಿಪ್ರವಚನಃ' ಇದೆ. ಈ ಪಾಠದಲ್ಲಿ ಯತಿಭಂಗವಾದಂತೆನಿಸುತ್ತದೆ.

ಪ್ರಕಾರ ಜಿನಭಕ್ತಿಯಿಂದ ಕೂಡಿದ ನಿರ್ಮಲ ಸಮ್ಯಗ್ದರ್ಶನದ ಧಾರಕನಾದ ಜೀವನು ಇದರಿಂದ ಪ್ರವಚನ ಎಂದರೆ ಮೋಕ್ಷಮಾರ್ಗದ ಪ್ರರೂಪಣೆಯಲ್ಲಿ ಶೋಭೆ ಪಡೆಯುತ್ತಾನೆ.

ಭಾವಾರ್ಥ ಃ– ಜಿನ–ಪ್ರವಚನದಲ್ಲಿ ಸಮ್ಯಕ್ತ್ವ ಸಹಿತ ಜೀವನ ಅಧಿಕತೆಯು ವಿಶೇಷವಿದೆ. ಅಲ್ಲಲ್ಲಿ (ಎಲ್ಲ ಸ್ಥಳದಲ್ಲಿ) ಶಾಸ್ತ್ರಗಳಲ್ಲಿ ಸಮ್ಯಕ್ತ್ವದ ಮುಖ್ಯತೆಯನ್ನೇ ಹೇಳಿದೆ. ॥೧೪೫॥

ಈಗ ಸಮ್ಯಗ್ದರ್ಶನಸಹಿತವಾದ ಲಿಂಗದ ಮಹಿಮೆಯನ್ನು ಹೇಳುತ್ತಾರೆ, –

ಜಹ ತಾರಾಯಣಸಹಿಯಂ ಸಸಹರಬಿಂಬಂ ಖಮಂಡಲೇ ವಿಮಲೇ ।
ಭಾವಿಯ [1]ತವವಯವಿಮಲಂ [2]ಜಿಣಲಿಂಗಂ ದಂಸಣವಿಸುದ್ಧಂ ॥೧೪೬॥

ಯಥಾ ತಾರಾಗಣಸಹಿತಂ ಶಶಧರಬಿಂಬಂ ಖಮಂಡಲೇ ವಿಮಲೇ ।
ಭಾವತಂ ತಪೋವ್ರತವಿಮಲಂ ಜಿನಲಿಂಗಂ ದರ್ಶನವಿಶುದ್ಧಮ್ ॥೧೪೬॥

ಅರ್ಥ ಃ– ಯಾವ ಪ್ರಕಾರ ನಿರ್ಮಲವಾದ ಆಕಾಶಮಂಡಲದಲ್ಲಿ ತಾರಾಗಣಗಳ ಸಮೂಹದೊಡನೆ ಚಂದ್ರನ ಬಿಂಬವು ಶೋಭೆ ಪಡೆಯುತ್ತದೆ, ಅದೇ ಪ್ರಕಾರ ಜಿನಶಾಸನದಲ್ಲಿ ದರ್ಶನದಿಂದ ವಿಶುದ್ಧ ಮತ್ತು ಭಾವಿಸಲ್ಪಟ್ಟ ತಪಸ್ಸು ಹಾಗೂ ವ್ರತಗಳಿಂದ ನಿರ್ಮಲವಾದ ಜಿನಲಿಂಗವು ಅದು ಶೋಭೆ ಪಡೆಯುತ್ತದೆ.

ಭಾವಾರ್ಥ ಃ– ಜಿನಲಿಂಗವು ಎಂದರೆ 'ನಿರ್ಗ್ರಂಥ ಮುನಿವೇಷ'ವು ತಪವ್ರತಸಹಿತವಾಗಿ ನಿರ್ಮಲವಿದ್ದರೂ ಕೂಡ ಅದು ಸಮ್ಯಗ್ದರ್ಶನವಿಲ್ಲದೆ ಶೋಭೆ ಪಡೆಯುವುದಿಲ್ಲ. ಇದು ಇರುವುದರಿಂದಲೇ ಅತ್ಯಂತ ಶೋಭಾಯಮಾನವಾಗುತ್ತದೆ. ॥೧೪೬॥

ಹೀಗೆ ತಿಳಿದುಕೊಂಡು ದರ್ಶನರತ್ನವನ್ನು ಧಾರಣಮಾಡಿರೆಂದು ಈಗ ಉಪದೇಶ ಮಾಡುತ್ತಾರೆ, –

ಇಯ ಣಾಉಂ ಗುಣದೋಸಂ ದಂಸಣರಯಣಂ ಧರೇಹ ಭಾವೇಣ ।
ಸಾರಂ ಗುಣರಯಣಾಣಂ ಸೋವಾಣಂ ಪಢಮ ಮೋಕ್ಖಸ್ಸ ॥೧೪೭॥

---

ಹೇಗೆ ತಾರಾಗಣಸಹಿತ ಶಶಿಬಿಂಬ ನಿರ್ಮಲ ಆಗಸದಿ ಶೋಭಿಪುದು ।
ಹಾಗೆ ತಪೋವ್ರತವಿಮಲ ಜಿನಲಿಂಗ ದರ್ಶನವಿಶುದ್ಧಿಯಿಂ ಶೋಭಿಪುದು ॥೧೪೬॥

ಈ ರೀತಿ ಗುಣದೋಷ ತಿಳಿದು ದರ್ಶನರತ್ನವನು ಭಾವದಿಂ ಆಧರಿಸು ।
ಸಾರವಿದೆಯದು ಗುಣರತ್ನಗಳಲಿ ಮೇಣ್ಮೋಕ್ಷದ ಮೊದಲ ಮೆಟ್ಟಿಲಿದೆ ॥೧೪೭॥

---

೧ ಮುದ್ರಿತ ಸಂಸ್ಕೃತ ಪ್ರತಿಯಲ್ಲಿ 'ತಹ ವಯವಿಮಲಂ' ಎಂಬ ಪಾಠವಿದೆ. ಅದರ ಸಂಸ್ಕೃತವು 'ತಥಾ ವ್ರತವಿಮಲಂ' ಇದೆ.

೨. ಈ ಗಾಥೆಯ ನಾಲ್ಕನೆಯ ಪಾದದಲ್ಲಿಯತಿಭಂಗವಿದೆ. ಇದರ ಸ್ಥಾನದಲ್ಲಿ 'ಜಿಣಲಿಂಗಂ ದಂಸಣೇಣ ಸುವಿಸುದ್ಧಂ' ಇರುವುದು ಯೋಗ್ಯವೆನಿಸುತ್ತದೆ.

**ಇತಿ ಜ್ಞಾತ್ವಾ ಗುಣದೋಷಂ ದರ್ಶನರತ್ನಂ ಧರತಭಾವೇನ ।**
**ಸಾರಂ ಗುಣರತ್ನಾನಾಂ ಸೋಪಾನಂ ಪ್ರಥಮಂ ಮೋಕ್ಷಸ್ಯ ॥೧೪೭॥**

ಅರ್ಥ ಃ– ಎಲೈ ಮುನಿಯೇ ! ನೀನು 'ಇತಿ' ಎಂದರೆ ಪೂರ್ವೋಕ್ತ ಪ್ರಕಾರದಿಂದ ಸಮ್ಯಕ್ತ್ವದ ಗುಣಗಳನ್ನು ಮತ್ತು ಮಿಥ್ಯಾತ್ವದ ದೋಷಗಳನ್ನು ತಿಳಿದುಕೊಂಡು ಸಮ್ಯಕ್ತ್ವರೂಪದ ರತ್ನವನ್ನು ಭಾವಪೂರ್ವಕ ಧಾರಣಮಾಡು. ಇದು ಗುಣರೂಪದ ರತ್ನಗಳಲ್ಲಿ ಸಾರವಿದೆ ಮತ್ತು ಮೋಕ್ಷರೂಪಮಂದಿರದ ಮೊದಲು ಮೆಟ್ಟಲಿದೆ. ಎಂದರೆ ಹತ್ತುವ ಸಲುವಾಗಿ ಪ್ರಥಮ ಸೋಪಾನವಿದೆ.

ಭಾವಾರ್ಥ ಃ– (ಗೃಹಸ್ಥರ ದಾನ ಪೂಜಾದಿಗಳು ಮತ್ತು ಮುನಿಗಳ ಮಹಾವ್ರತ ಶೀಲಸಂಯಮಾದಿಗಳೆಂದು) ಅದೆಷ್ಟೋ ವ್ಯವಹಾರ ಮೋಕ್ಷಮಾರ್ಗದ ಅಂಗಗಳಿವೆ, ಅವೆಲ್ಲವುಗಳಲ್ಲಿ ಸಮ್ಯಗ್ದರ್ಶನವು ಸಾರವಿದೆ, ಇದರಿಂದ ಎಲ್ಲವು ಸಫಲವಿವೆ, ಆದುದರಿಂದ ಮಿಥ್ಯಾತ್ವವನ್ನು ಬಿಟ್ಟುಕೊಟ್ಟು ಸಮ್ಯಗ್ದರ್ಶನವನ್ನು ಅಂಗೀಕಾರ ಮಾಡಬೇಕೆಂಬುದು ಮುಖ್ಯ ಉಪದೇಶವಿದೆ. ॥೧೪೭॥

ಯಾವ ಜೀವನು ಜೀವ ಪದಾರ್ಥದ ಸ್ವರೂಪವನ್ನು ತಿಳಿದುಕೊಂಡು ಅದರ ಭಾವನೆಮಾಡುವನು ಶ್ರದ್ಧೆ ಮಾಡುವನು, ತನ್ನನ್ನು ಜೀವಪದಾರ್ಥವೆಂದು ತಿಳಿದುಕೊಂಡು ಅನುಭವದ ಮುಖಾಂತರ ಪ್ರತೀತಿ ಮಾಡುತ್ತಾನೆ ಅವನಿಗೆ ಸಮ್ಯಗ್ದರ್ಶನವಾಗುತ್ತದೆ. ಆದುದರಿಂದ ಈಗ ಆ ಜೀವಪದಾರ್ಥವು ಹೇಗಿದೆಯೆಂಬುದರ ಸ್ವರೂಪವನ್ನು ಹೇಳುತ್ತಾರೆ, –

**ಕತ್ತಾ ಭೋಇ ಅಮುತ್ತೋ ಸರೀರಮಿತ್ತೋ ಅಣಾಇಣಿಹಣೋಯ ।**
**ದಂಸಣಣಾಣುವಓಗೋ [೧]ಣಿದ್ದಿಟ್ಠೋ ಜಿಣವರಿಂದೇಹಿಂ ॥೧೪೮॥**

**ಕರ್ತಾ ಭೋಕ್ತಾ ಅಮೂರ್ತಃ ಶರೀರಮಾತ್ರಃ ಅನಾದಿನಿಧನಃ ಚ ।**
**ದರ್ಶನಜ್ಞಾನೋಪಯೋಗಃ [೨]ನಿರ್ದಿಷ್ಟಃ ಜಿನವರೇಂದ್ರೈಃ ॥೧೪೮॥**

ಅರ್ಥ ಃ– 'ಜೀವ' ನಾಮದ ಪದಾರ್ಥವು ಕರ್ತೃವಿದೆ, ಭೋಕ್ತೃವಿದೆ, ಅಮೂರ್ತಿಕವಿದೆ, ಶರೀರ ಪ್ರಮಾಣವಿದೆ, ಅನಾದಿನಿಧನವಿದೆ, ದರ್ಶನ–ಜ್ಞಾನ ಉಪಯೋಗವುಳ್ಳದ್ದಿದೆಯೆಂದು ಜಿನವರೇಂದ್ರರಾದ ವೀತರಾಗ ಸರ್ವಜ್ಞದೇವರು ಹೇಳಿದ್ದಾರೆ.

ಭಾವಾರ್ಥ ಃ– ಇಲ್ಲಿ 'ಜೀವ' ನಾಮದ ಪದಾರ್ಥದ ಆರು ವಿಶೇಷಣಗಳನ್ನು ಹೇಳಿದೆ. ಅವುಗಳ ಆಶಯ ಹೀಗಿದೆ–

೧) 'ಕರ್ತೃ'ವೆಂದು ಹೇಳಿದೆ, ಅದು ನಿಶ್ಚಯನಯದಿಂದಂತೂ ಅಜ್ಞಾನ ಅವಸ್ಥೆಯಲ್ಲಿ ತನ್ನ ಅಶುದ್ಧ ಭಾವಗಳ ಕರ್ತೃ ತಾನೇ ಇದೆ ಮತ್ತು ವ್ಯವಹಾರನಯದಿಂದ ಜ್ಞಾನಾವರಣ ಮೊದಲಾದ ಪುದ್ಗಲ ಕರ್ಮಗಳ ಕರ್ತೃವಿದೆ ಹಾಗೂ ಶುದ್ಧನಯದಿಂದ ತನ್ನ ಶುದ್ಧಭಾವಗಳ ಕರ್ತೃವಿದೆ.

---

**ಅನಾದಿನಿಧನ ಶರೀರಪ್ರಮಾಣ ಅಮೂರ್ತಿಕ ಮೇಣ್ಕರ್ತಾಭೋಕ್ತಾಮಲ್ಲದೆ ।**
**ಜ್ಞಾನದರ್ಶನೋಪಯೋಗಮಯ ಜೀವನೆಂದು ಜಿನವರೇಂದ್ರ ಪೇಳಿರುವರು ॥೧೪೮॥**

---

೧ 'ಜೀವೋ ಣಿದ್ದಿಟ್ಠೋ' ಎಂಬ ಪಾಠಾಂತರವಿದೆ.
೨ 'ಜೀವಃ ನಿರ್ದಿಷ್ಟಃ' ಎಂಬ ಪಾಠಾಂತರವಿದೆ.

೨) 'ಭೋಕ್ತೃ'ವೆಂದು ಹೇಳಿದೆ, ಅದು ನಿಶ್ಚಯನಯದಿಂದಂತೂ ತನ್ನ ಜ್ಞಾನ-ದರ್ಶನಮಯವಾದ ಚೇತನಾಭಾವದ ಭೋಕ್ತೃವಿದೆ ಮತ್ತು ವ್ಯವಹಾರನಯದಿಂದ ಪುದ್ಗಲಕರ್ಮದ ಫಲವಾದ ಆ ಸುಖ-ದುಃಖ ಮೊದಲಾದವುಗಳ ಭೋಕ್ತೃವಿದೆ.

೩) 'ಅಮೂರ್ತಿಕ'ವೆಂದು ಹೇಳಿದೆ, ಅದು ನಿಶ್ಚಯದಿಂದಂತೂ ಸ್ಪರ್ಶ, ರಸ, ಗಂಧ, ವರ್ಣ, ಶಬ್ದ ಇವು ಪುದ್ಗಲದ ಗುಣಪರ್ಯಾಯಗಳಿವೆ, ಇವುಗಳಿಂದ ರಹಿತವಾಗಿ ಅಮೂರ್ತಿಕವಿದೆ ಮತ್ತು ವ್ಯವಹಾರದಿಂದ ಎಲ್ಲಿಯವರೆಗೆ ಪುದ್ಗಲಕರ್ಮದಿಂದ ಬಂಧಿಸಲ್ಪಟ್ಟಿದೆ ಅಲ್ಲಿಯವರೆಗೆ 'ಮೂರ್ತಿಕ'ವೆಂದೂ ಹೇಳುತ್ತಾರೆ.

೪) 'ಶರೀರಪ್ರಮಾಣ'ವೆಂದು ಹೇಳಿದೆ, ಅದು ನಿಶ್ಚಯದಿಂದಂತೂ ಅಸಂಖ್ಯಾತಪ್ರದೇಶಿ ಲೋಕ ಪ್ರಮಾಣವಿದೆ, ಅದು ಸಂಕೋಚ-ವಿಸ್ತಾರಶಕ್ತಿಯಿಂದ ಶರೀರಕ್ಕಿಂತ ಸ್ವಲ್ಪ ಕಡಿಮೆ-ಪ್ರದೇಶ ಪ್ರಮಾಣದ ಆಕಾರದಲ್ಲಿ ಇರುತ್ತದೆ.

೫) 'ಅನಾದಿನಿಧನ'ವೆಂದು ಹೇಳಿದೆ, ಅದು ಪರ್ಯಾಯದೃಷ್ಟಿಯಿಂದ ನೋಡಿದಮೇಲಂತೂ ಉತ್ಪನ್ನವಾಗುತ್ತದೆ- ನಷ್ಟವಾಗುತ್ತದೆ, ಆದಾಗ್ಯೂ ದ್ರವ್ಯದೃಷ್ಟಿಯಿಂದ ನೋಡಿದರೆ ಅನಾದಿನಿಧನ ಯಾವಾಗಲೂ ನಿತ್ಯ ಅವಿನಾಶಿಯಿದೆ.

೬) 'ದರ್ಶನ-ಜ್ಞಾನ ಉಪಯೋಗಸಹಿತ'ವೆಂದು ಹೇಳಿದೆ, ಅದು ನೋಡುವ ತಿಳಿಯುವರೂಪದ ಉಪಯೋಗಸ್ವರೂಪ ಚೇತನಾರೂಪವಿದೆ.

ಅನ್ಯಮತಿಗಳು ಅನ್ಯ ಪ್ರಕಾರದಿಂದ ಸರ್ವಥಾ ಏಕಾಂತರೂಪವಾಗಿ ಮನ್ನಿಸುತ್ತಾರೆ ಅವರ ನಿಷೇಧವನ್ನೂ ಈ ವಿಶೇಷಣಗಳಿಂದ ತಿಳಿಯಬೇಕು. ಸಾಂಖ್ಯಮತಿಗಳು ಸರ್ವಥಾ ಅಕರ್ತೃವೆಂದು ಮನ್ನಿಸುತ್ತಾರೆ. 'ಕರ್ತೃ' ವಿಶೇಷಣದಿಂದ ಅವರ ನಿಷೇಧವಿದೆ. ಬೌದ್ಧಮತಿಗಳು ಕ್ಷಣಿಕವನ್ನು ಮನ್ನಿಸಿ ಕರ್ಮವನ್ನು ಮಾಡುವವನು ಬೇರೆಯಿದ್ದಾನೆ ಮತ್ತು ಭೋಗಿಸುವವನು ಬೇರೆಯಿದ್ದಾನೆಂದು ಹೇಳುತ್ತಾರೆ 'ಭೋಕ್ತೃ' ವಿಶೇಷಣದಿಂದ ಇದರ ನಿಷೇಧವಿದೆ. ಯಾವ ಜೀವನು ಕರ್ಮ ಮಾಡುತ್ತಾನೆ ಅದರ ಫಲವನ್ನು ಅದೇ ಜೀವನು ಭೋಗಿಸುತ್ತಾನೆಂಬ ಕಥನದಿಂದ ಬೌದ್ಧಮತಿಗಳ ಹೇಳಿಕೆಯ ನಿಷೇಧವಿದೆ. ಮೀಮಾಂಸಕ ಮೊದಲಾದವರು ಈ ಶರೀರ ಸಹಿತವಾಗಿ ಮೂರ್ತಿಕವೆಂದೇ ಮನ್ನಿಸುತ್ತಾರೆ, 'ಅಮೂರ್ತಿಕ'ವೆಂದು ಹೇಳುವುದರಿಂದ ಅವರ ನಿಷೇಧವಿದೆ. ನೈಯಾಯಿಕ, ವೈಶೇಷಿಕ, ವೇದಾಂತಿ ಮೊದಲಾದವರು ಸರ್ವಥಾ, ಸರ್ವವ್ಯಾಪಕವೆಂದು ಮನ್ನಿಸುತ್ತಾರೆ 'ಶರೀರ ಪ್ರಮಾಣ'ವೆಂದು ಹೇಳುವುದರಿಂದ ಅವರ ನಿಷೇಧವಿದೆ. ಬೌದ್ಧಮತಿಗಳು ಸರ್ವಥಾ ಕ್ಷಣಸ್ಥಾಯಿಯೆಂದು ಮನ್ನಿಸುತ್ತಾರೆ 'ಅನಾದಿನಿಧನ'ವೆಂದು ಹೇಳುವುದರಿಂದ ಅವರ ನಿಷೇಧವಿದೆ. ಸಾಂಖ್ಯಮತಿಗಳು ಜ್ಞಾನರಹಿತ ಚೇತನಾಮಾತ್ರವೆಂದು ಮನ್ನಿಸುತ್ತಾರೆ, ನೈಯಾಯಿಕ, ವೈಶೇಷಿಕರು ಗುಣ-ಗುಣಿಯ ಸರ್ವಥಾ ಭೇದ ಮನ್ನಿಸಿ ಜ್ಞಾನ ಮತ್ತು ಜೀವದ ಸರ್ವಥಾ ಭೇದ ಮನ್ನಿಸುತ್ತಾರೆ, ಬೌದ್ಧಮತದ ವಿಶೇಷ 'ವಿಜ್ಞಾನಾದ್ವೈತವಾದಿ'ಗಳು ಜ್ಞಾನಮಾತ್ರವನ್ನೇ ಮನ್ನಿಸುತ್ತಾರೆ ಮತ್ತು ವೇದಾಂತಿಗಳು ಜ್ಞಾನದ ನಿರೂಪಣೆಯನ್ನೇ ಮಾಡುವುದಿಲ್ಲ 'ದರ್ಶನಜ್ಞಾನಉಪಯೋಗಮಯಿ'ಯೆಂದು ಹೇಳುವುದರಿಂದ ಇವರೆಲ್ಲರ ನಿಷೇಧವಿದೆ.

ಈ ಪ್ರಕಾರ ಸರ್ವಜ್ಞರು ಹೇಳಿರುವ ಜೀವದ ಸ್ವರೂಪವನ್ನು ತಿಳಿದುಕೊಂಡು ತಮ್ಮನ್ನು ಈ ಪ್ರಕಾರ ಮನ್ನಿಸಿ, ಶ್ರದ್ಧೆ, ರುಚಿ, ಪ್ರತೀತಿ ಮಾಡಬೇಕು. ಜೀವವೆಂದು ಹೇಳುವುದರಿಂದ ಅಜೀವ ಪದಾರ್ಥ ಕೂಡ ತಿಳಿದುಬರುತ್ತದೆ, ಅಜೀವವಿಲ್ಲದಿದ್ದರೆ ಜೀವವೆಂಬ ಹೆಸರು ಹೇಗೆ ಇರುತ್ತದೆ, ಆದುದರಿಂದ ಅಜೀವದ ಸ್ವರೂಪ ಹೇಳಿದೆ, ಹಾಗೆಯೇ ಅದರ ಶ್ರದ್ಧೆಯನ್ನು ಆಗಮದ ಅನುಸಾರವಾಗಿ ಮಾಡಬೇಕು. ಹೀಗೆ ಅಜೀವ ಪದಾರ್ಥದ ಸ್ವರೂಪವನ್ನು ತಿಳಿದುಕೊಂಡು ಮತ್ತು

ಇವೆರಡರ ಸಂಯೋಗದಿಂದ ಅನ್ಯ ಆಸ್ರವ, ಬಂಧ, ಸಂವರ, ನಿರ್ಜರೆ, ಮೋಕ್ಷ ಈ ಭಾವಗಳ ಪ್ರವೃತ್ತಿಯಾಗುತ್ತದೆ. ಆಗಮದ ಅನುಸಾರ ಇವುಗಳ ಸ್ವರೂಪ ತಿಳಿದುಕೊಂಡು ಶ್ರದ್ಧೆ ಮಾಡುವುದರಿಂದ ಸಮ್ಯಗ್ದರ್ಶನದ ಪ್ರಾಪ್ತಿಯಾಗುತ್ತದೆ-ಯೆಂದು ತಿಳಿಯಬೇಕು. ||೧೪೮||

ಈ ಜೀವನು 'ಜ್ಞಾನ-ದರ್ಶನ ಉಪಯೋಗಮಯ'ನಿದ್ದಾನೆ ಆದರೆ ಅನಾದಿ ಪೌದ್ಗಲಿಕ ಕರ್ಮದ ಸಂಯೋಗದಿಂದ ಇವನ ಜ್ಞಾನ-ದರ್ಶನದ ಪೂರ್ಣತೆಯಿಲ್ಲ, ಆದುದರಿಂದ ಅಲ್ಪಜ್ಞಾನ-ದರ್ಶನಗಳು ಅನುಭವದಲ್ಲಿ ಬರುತ್ತವೆ ಮತ್ತು ಅದರಲ್ಲೂ ಅಜ್ಞಾನದ ನಿಮಿತ್ತದಿಂದ ಇಷ್ಟ-ಅನಿಷ್ಟ ಬುದ್ಧಿರೂಪವಾದ ರಾಗ-ದ್ವೇಷ-ಮೋಹ ಭಾವಗಳ ಮುಖಾಂತರ ಜ್ಞಾನ-ದರ್ಶನದಲ್ಲಿ ಕಲುಷತೆಯರೂಪದ ಸುಖ-ದುಃಖಾದಿ ಭಾವಗಳು ಅನುಭವದಲ್ಲಿ ಬರುತ್ತವೆ. ಈ ಜೀವನು ನಿಜಭಾವನಾರೂಪವಾದ ಸಮ್ಯಗ್ದರ್ಶನಕ್ಕೆ ಪ್ರಾಪ್ತನಾದಾಗ ಜ್ಞಾನ-ದರ್ಶನ-ಸುಖ-ವೀರ್ಯದ ಘಾತಕಗಳಾದ ಕರ್ಮಗಳ ನಾಶಮಾಡುತ್ತಾನೆಂದು ಈಗ ತಿಳಿಸಿ ಹೇಳುತ್ತಾರೆ, -

**ದಂಸಣಣಾಣಾವರಣಂ ಮೋಹಣಿಯಂ ಅಂತರಾಇಯಂ ಕಮ್ಮಂ ।**
**ಣಿಟ್ಠವಇ ಭವಿಯಜೀವೋ ಸಮ್ಮಂ ಜಿಣಭಾವಣಾಜುತ್ತೋ ||೧೪೯||**

**ದರ್ಶನಜ್ಞಾನಾವರಣಂ ಮೋಹನೀಯಂ ಅಂತರಾಯಕಂ ಕರ್ಮ ।**
**ನಿಷ್ಠಾಪಯತಿ ಭವ್ಯಜೀವಾಃ ಸಮ್ಯಕ್ ಜಿನಭಾವನಾಯುಕ್ತಃ ||೧೪೯||**

ಅರ್ಥ :- ಸಮ್ಯಕ್ ಪ್ರಕಾರ ಜಿನಭಾವನೆಯಿಂದ ಯುಕ್ತವಿರುವ ಭವ್ಯಜೀವನು ಜ್ಞಾನಾವರಣ, ದರ್ಶನಾವರಣ, ಮೋಹನೀಯ, ಅಂತರಾಯವೆಂಬ ಈ ನಾಲ್ಕು ಘಾತಿಕರ್ಮಗಳ ನಿಷ್ಠಾಪನ ಮಾಡುತ್ತಾನೆ ಎಂದರೆ ಸಂಪೂರ್ಣ ಅಭಾವ ಮಾಡುತ್ತಾನೆ.

ಭಾವಾರ್ಥ :- ದರ್ಶನದ ಘಾತಕವು ದರ್ಶನಾವರಣ ಕರ್ಮವಿದೆ, ಜ್ಞಾನದ ಘಾತಕವು ಜ್ಞಾನಾವರಣ ಕರ್ಮವಿದೆ, ಸುಖದ ಘಾತಕವು ಮೋಹನೀಯ ಕರ್ಮವಿದೆ, ವೀರ್ಯದ ಘಾತಕವು ಅಂತರಾಯ ಕರ್ಮವಿದೆ. ಇವುಗಳ ನಾಶವನ್ನು ಯಾರು ಮಾಡುತ್ತಾರೆಂದರೆ ಸಮ್ಯಕ್ ಪ್ರಕಾರದಿಂದ ಜಿನಭಾವನೆಯನ್ನು ಭಾವಿಸಿ ಎಂದರೆ ಜಿನಾಜ್ಞೆಯನ್ನು ಮನ್ನಿಸಿ, ಜೀವ-ಅಜೀವ ಮೊದಲಾದ ತತ್ತ್ವಗಳ ಯಥಾರ್ಥ ನಿಶ್ಚಯ ಮಾಡಿ ಶ್ರದ್ಧೆಯುಳ್ಳವನಾದ ಜೀವನು ಮಾಡುತ್ತಾನೆ. ಆದುದರಿಂದ ಜಿನಾಜ್ಞೆಯನ್ನು ಮನ್ನಿಸಿ ಯಥಾರ್ಥ ಶ್ರದ್ಧೆ ಮಾಡಿರೆಂದು ಈ ಉಪದೇಶವಿದೆ. ||೧೪೯||

ಈ ಘಾತಿಕರ್ಮಗಳು ನಾಶವಾಗಿ ಹೋದಮೇಲೆ 'ಅನಂತಚತುಷ್ಟಯ'ಗಳು ಪ್ರಕಟವಾಗುತ್ತವೆಯೆಂಬುದನ್ನು ಈಗ ಹೇಳುತ್ತಾರೆ, -

**ಬಲಸೋಕ್ಖಣಾಣದಂಸಣ ಚತ್ತಾರಿ ವಿ ಪಾಯಡಾ ಗುಣಾ ಹೋಂತಿ ।**
**ಣಟ್ಠೇ ಘಾಇಚಉಕ್ಕೇ ಲೋಯಾಲೋಯಂ ಪಯಾಸೇದಿ ||೧೫೦||**

---

ಆ ದರ್ಶನಾವರಣ ಜ್ಞಾನಾವರಣ ಮೋಹನೀಯಾಂತರಾಯ ಕರ್ಮಗಳನು ।
ಸದೆಬಡೆವನು ಭವ್ಯಜೀವ ಸಮ್ಯಕ್ಪ್ರಕಾರ ಜಿನಭಾವನಾ ಯುಕ್ತನಾಗಿ ||೧೪೯||

ಜ್ಞಾನ ದರ್ಶನ ಸೌಖ್ಯಬಲವೆಂಬೀ ನಾಲ್ಕು ಗುಣಗಳು ಪ್ರಕಟವಾಗುವವು ।
ಆ ನಾಲ್ಕು ಘಾತಿಕರ್ಮಗಳ ನಾಶದಿಂದ ಲೋಕಾಲೋಕವನು ಪ್ರಕಾಶಿಸುವುದು ||೧೫೦||

ಬಲಸೌಖ್ಯಜ್ಞಾನದರ್ಶನಾನಿ ಚತ್ವಾರೋಽಪಿ ಪ್ರಕಟಾಗುಣಾಭವಂತಿ ।
ನಷ್ಟೇ ಘಾತಿಚತುಷ್ಕೇ ಲೋಕಾಲೋಕಂ ಪ್ರಕಾಶಯತಿ ॥೧೫೦॥

ಅರ್ಥ ಃ– ಪೂರ್ವೋಕ್ತ ನಾಲ್ಕು ಘಾತಿಕರ್ಮಗಳು ನಾಶವಾದಮೇಲೆ ಅನಂತ ದರ್ಶನ–ಜ್ಞಾನ–ಸುಖ ಮತ್ತು ವೀರ್ಯ (ಬಲ)ವೆಂದು ನಾಲ್ಕು ಗುಣಗಳು ಪ್ರಕಟವಾಗುತ್ತವೆ. ಯಾವಾಗ ಜೀವನಿಗೆ ಈ ನಾಲ್ಕು ಗುಣಗಳ ಪೂರ್ಣ ನಿರ್ಮಲ ದಶೆಯು ಪ್ರಕಟವಾಗುತ್ತದೆ ಆಗ ಲೋಕಾಲೋಕವನ್ನು ಪ್ರಕಾಶಿತ ಮಾಡುತ್ತದೆ.

ಭಾವಾರ್ಥ ಃ– ಘಾತಿಕರ್ಮಗಳು ನಾಶವಾಗಿ ಹೋದಮೇಲೆ ಅನಂತದರ್ಶನ, ಅನಂತಜ್ಞಾನ, ಅನಂತಸುಖ ಮತ್ತು ಅನಂತವೀರ್ಯವೆಂಬ ಈ 'ಅನಂತಚತುಷ್ಟಯ'ಗಳು ಪ್ರಕಟವಾಗುತ್ತವೆ. ಅನಂತದರ್ಶನಜ್ಞಾನದಿಂದ ಆರು ದ್ರವ್ಯಗಳಿಂದ ತುಂಬಿರುವ ಈ ಲೋಕದಲ್ಲಿ ಅನಂತಾನಂತ ಜೀವಗಳನ್ನು, ಇವುಗಳಿಗಿಂತಲೂ ಅನಂತಾನಂತ ಗುಣಿತವಾದ ಪುದ್ಗಲಗಳನ್ನು ಹಾಗೂ ಧರ್ಮ–ಅಧರ್ಮ–ಆಕಾಶ ಈ ಮೂರು ದ್ರವ್ಯ ಮತ್ತು ಅಸಂಖ್ಯಾತ ಕಾಲಾಣು ಈ ಎಲ್ಲ ದ್ರವ್ಯಗಳ ಭೂತ, ಭವಿಷ್ಯತ್ ಮತ್ತು ವರ್ತಮಾನಕಾಲ ಸಂಬಂಧದ ಅನಂತಪರ್ಯಾಯಗಳನ್ನು ಭಿನ್ನ–ಭಿನ್ನವಾಗಿ ಒಂದು ಸಮಯದಲ್ಲಿ ಸ್ಪಷ್ಟವಾಗಿ ನೋಡುತ್ತಾನೆ ಮತ್ತು ತಿಳಿಯುತ್ತಾನೆ. ಅನಂತ ಸುಖದಿಂದ ಅತ್ಯಂತ ತೃಪ್ತಿರೂಪನಿದ್ದಾನೆ ಮತ್ತು ಅನಂತಶಕ್ತಿಯಿಂದ ಈಗ ಯಾವುದೇ ನಿಮಿತ್ತದಿಂದ ಅವಸ್ಥೆಯು ಬದಲಾಗುವುದಿಲ್ಲ. ಹೀಗೆ ಅನಂತಚತುಷ್ಟಯರೂಪವಾದ ಜೀವದ ನಿಜಸ್ವಭಾವವು ಪ್ರಕಟವಾಗುತ್ತದೆ, ಆದುದರಿಂದ ಪರಮಾರ್ಥದಿಂದ ಜೀವದ ಇಂಥ ಸ್ವರೂಪದ ಶ್ರದ್ಧೆ ಮಾಡುವುದೇ ಸಮ್ಯಗ್ದರ್ಶನವಿದೆ. ॥೧೫೦॥

ಅನಂತಚತುಷ್ಟಯಗಳು ಪ್ರಕಟವಾದವರನ್ನು ಪರಮಾತ್ಮರೆಂದು ಹೇಳುತ್ತಾರೆ. ಅವರಿಗೆ ಅನೇಕ ಹೆಸರುಗಳಿದ್ದು ಅವುಗಳೊಳಗಿಂದ ಕೆಲವನ್ನು ಪ್ರಕಟಮಾಡಿ ಹೇಳುತ್ತಾರೆ,–

ಣಾಣೀ ಸಿವ ಪರಮೇಟ್ಠೀ ಸವ್ವಣ್ಹೂ ವಿಣ್ಹು ಚಉಮುಹೋ ಬುದ್ಧೋ ।
ಅಪ್ಪೋ ವಿ ಯ ಪರಮಪ್ಪೋ ಕಮ್ಮವಿಮುಕ್ಕೋ ಯ ಹೋಇ ಫುಡಂ ॥೧೫೧॥

ಜ್ಞಾನೀ ಶಿವಃ ಪರಮೇಷ್ಠೀ ಸರ್ವಜ್ಞಃ ವಿಷ್ಣುಃ ಚತುರ್ಮುಖಃ ಬುದ್ಧಃ ।
ಆತ್ಮಾ ಅಪಿ ಚ ಪರಮಾತ್ಮಾ ಕರ್ಮವಿಮುಕ್ತಃ ಚ ಭವತಿ ಸ್ಫುಟಮ್ ॥೧೫೧॥

ಅರ್ಥ ಃ– ಪರಮಾತ್ಮನು ಜ್ಞಾನಿಯಿದ್ದಾನೆ. ಶಿವನಿದ್ದಾನೆ, ಪರಮೇಷ್ಠಿಯಿದ್ದಾನೆ, ಸರ್ವಜ್ಞನಿದ್ದಾನೆ, ವಿಷ್ಣುವಿದ್ದಾನೆ, ಚತುರ್ಮುಖಬ್ರಹ್ಮನಿದ್ದಾನೆ, ಬುದ್ಧನಿದ್ದಾನೆ, ಆತ್ಮನಿದ್ದಾನೆ, ಪರಮಾತ್ಮನಿದ್ದಾನೆ ಮತ್ತು ಕರ್ಮರಹಿತನಿದ್ದಾನೆಂಬುದನ್ನು ಸ್ಪಷ್ಟವಾಗಿ ತಿಳಿಯಿರಿ.

ಭಾವಾರ್ಥ ಃ– 'ಜ್ಞಾನಿ'ಯೆಂದು ಹೇಳುವುದರಿಂದ ಸಾಂಖ್ಯಮತಿಗಳು ಜ್ಞಾನರಹಿತ ಉದಾಸೀನ ಚೈತನ್ಯಮಾತ್ರವೆಂದು ಮನ್ನಿಸುತ್ತಾರೆ ಅವರ ನಿಷೇಧವಿದೆ. 'ಶಿವ' ಎಂದರೆ ಎಲ್ಲ ಕಲ್ಯಾಣಗಳಿಂದ ಪರಿಪೂರ್ಣನಿದ್ದಾನೆ,

---

ಜ್ಞಾನಿ ಶಿವ ಪರಮೇಷ್ಠಿ ಸರ್ವಜ್ಞನಿದ್ದು ವಿಷ್ಣು ಚತುರ್ಮುಖ ಬುದ್ಧನಿಹನು ।
ತಾನೆ ಆತ್ಮ ಪರಮಾತ್ಮ ಮೇಣ್ಕರ್ಮವಿಮುಕ್ತನಿಹನೆಂಬುದನ್ನು ಸ್ಪಷ್ಟ ತಿಳಿ ॥೧೫೧॥

ಹೇಗೆ ಸಾಂಖ್ಯ, ನೈಯಾಯಿಕ, ವೈಶೇಷಿಕರು ಮನ್ನಿಸುತ್ತಾರೆ ಹಾಗೆ ಇಲ್ಲ. 'ಪರಮೇಷ್ಠಿ'ಯಿದ್ದಾನೆ, ಅವನು ಪರಮ (ಉತ್ಕೃಷ್ಟ) ಪದದಲ್ಲಿ ಸ್ಥಿರನಿದ್ದಾನೆ ಅಥವಾ ಉತ್ಕೃಷ್ಟ ಇಷ್ಟತ್ವವು ಸ್ವಭಾವವಿದೆ, ಅನ್ಯಮತಿಗಳು ಯಾವುದನ್ನೋ ತಮ್ಮ ಇಷ್ಟವೆಂದು ಮನ್ನಿಸಿ ಅದನ್ನು ಪರಮೇಷ್ಠಿಯೆಂದು ಹೇಳುತ್ತಾರೆ ಹಾಗೆ ಇಲ್ಲ. 'ಸರ್ವಜ್ಞ'ನಿದ್ದಾನೆ ಎಂದರೆ ಸಮಸ್ತ ಲೋಕಾಲೋಕಗಳನ್ನು ತಿಳಿಯುತ್ತಾನೆ, ಬೇರೆ ಕೆಲವರು ಯಾವುದೇ ಒಂದು ಪ್ರಕರಣದ ಸಂಬಂಧದಲ್ಲಿ ಎಲ್ಲ ಮಾತು ತಿಳಿಯುತ್ತಾರೆ ಅವರನ್ನು ಕೂಡ ಸರ್ವಜ್ಞರೆಂದು ಹೇಳುತ್ತಾರೆ ಹಾಗೆ ಇಲ್ಲ. 'ವಿಷ್ಣು'ವಿದ್ದಾನೆ ಎಂದರೆ ಅವನ ಜ್ಞಾನವು ಎಲ್ಲ ಜ್ಞೇಯಗಳಲ್ಲಿ ವ್ಯಾಪಕವಿದೆ- ಅನ್ಯಮತದ ವೇದಾಂತಿ ಮೊದಲಾದವರು ಎಲ್ಲ ಪದಾರ್ಥಗಳಲ್ಲಿ ವಿಷ್ಣುವಿದ್ದಾನೆಂದು ಹೇಳುತ್ತಾರೆ ಹಾಗೆ ಇಲ್ಲ.

'ಚತುರ್ಮುಖ'ವೆಂದು ಹೇಳುವುದರಿಂದ ಕೇವಲಿ ಅರಹಂತರಿಗೆ ಸಮವಸರಣದಲ್ಲಿ ನಾಲ್ಕೂ ದಿಕ್ಕುಗಳಲ್ಲಿ ನಾಲ್ಕು ಮುಖಗಳು ಕಾಣುತ್ತವೆ, ಇಂಥ ಅತಿಶಯವಿರುವುದರಿಂದ ಚತುರ್ಮುಖವೆಂದು ಹೇಳುತ್ತಾರೆ. ಅನ್ಯ ಮತದವರು ಬ್ರಹ್ಮನಿಗೆ ಚತುರ್ಮುಖಗಳನ್ನು ಹೇಳುತ್ತಾರೆ, ಆದರೆ ಅಂಥ ಬ್ರಹ್ಮನು ಯಾವನೂ ಇಲ್ಲ. 'ಬುದ್ಧ'ನಿದ್ದಾನೆ ಎಂದರೆ ಎಲ್ಲವುಗಳ ಜ್ಞಾತಾನಿದ್ದಾನೆ ಬೌದ್ಧಮತದವರು ಕ್ಷಣಿಕವನ್ನು ಬುದ್ಧನೆಂದು ಹೇಳುತ್ತಾರೆ ಹಾಗೆ ಇಲ್ಲ. 'ಆತ್ಮ'ನಿದ್ದಾನೆ ಎಂದರೆ ತನ್ನ ಸ್ವಭಾವದಲ್ಲಿಯೇ ನಿರಂತರ ಪ್ರವರ್ತಿಸುತ್ತಾನೆ. ಅನ್ಯಮತದ ವೇದಾಂತಿಗಳು ಎಲ್ಲವುಗಳಲ್ಲಿ ಪ್ರವರ್ತಿಸುವ ಆತ್ಮನನ್ನು ಮನ್ನಿಸುತ್ತಾರೆ ಹಾಗೆ ಇಲ್ಲ. 'ಪರಮಾತ್ಮ'ನಿದ್ದಾನೆ ಎಂದರೆ ಆತ್ಮನ ಪೂರ್ಣರೂಪ 'ಅನಂತಚತುಷ್ಟಯ'ಗಳು ಅವನಿಗೆ ಪ್ರಕಟವಾಗಿ ಹೋಗಿರುವುದರಿಂದ ಪರಮಾತ್ಮನಿದ್ದಾನೆ. ಕರ್ಮ ಆ ಆತ್ಮಸ್ವಭಾವದ ಘಾತಕಗಳಾದ ಘಾತಿಕರ್ಮಗಳಿಂದ ರಹಿತನಾಗಿ ಹೋಗಿರುವುದರಿಂದ 'ಕರ್ಮವಿಮುಕ್ತನಿದ್ದಾನೆ, ಅಥವಾ ಮಾಡಲು ಯೋಗ್ಯವಾದ ಕಾರ್ಯವು ಯಾವುದೂ ಉಳಿಯದಿರುವುದರಿಂದ ಕೂಡ ಕರ್ಮವಿಮುಕ್ತನಿದ್ದಾನೆ. ಸಾಂಖ್ಯಮತಿಗಳು, ನೈಯಾಯಿಕರು ಯಾವಾಗಲೂ ಕರ್ಮರಹಿತವೆಂದು ಮನ್ನಿಸುತ್ತಾರೆ ಹಾಗೆ ಇಲ್ಲ. ಹೀಗೆ ಪರಮಾತ್ಮನಿಗೆ ಸಾರ್ಥಕ ನಾಮಗಳಿವೆ. ಅನ್ಯಮತಿಗಳು ತಮ್ಮ ಇಷ್ಟದ ಹೆಸರನ್ನು ಒಂದೇ ಹೇಳುತ್ತಾರೆ, ಅವರ ಸರ್ವಥಾ ಏಕಾಂತದ ಅಭಿಪ್ರಾಯದಿಂದ ಅರ್ಥವು ಕೆಡುತ್ತಿರುವುದರಿಂದ ಯಥಾರ್ಥವಿಲ್ಲ. ಅರಹಂತರ ಈ ಹೆಸರುಗಳು ನಯವಿವಕ್ಷೆಯಿಂದ ಯಥಾರ್ಥವಿವೆಯೆಂದು ತಿಳಿಯಬೇಕು. ॥೧೫೧॥

ಇಂಥ ದೇವರು ನನಗೆ ಒಳ್ಳೆಯ ಬೋಧಿ ಕೊಡಲೆಂದು ಈಗ ಆಚಾರ್ಯದೇವರು ಹೇಳುತ್ತಾರೆ, –

**ಇಯ ಘಾಇಕಮ್ಮಮುಕ್ಕೋ ಅಟ್ಠಾರಹದೋಸವಜ್ಜಿಓ ಸಯಲೋ ।**
**ತಿಹುವಣಭವಣಪದೀವೋ ದೇಉ ಮಮಂ ಉತ್ತಮಂ ಬೋಹಿಂ ॥೧೫೨॥**

ಇತಿ ಘಾತಿಕರ್ಮಮುಕ್ತಃ ಅಷ್ಟಾದಶದೋಷವರ್ಜಿತಃ ಸಕಲಃ ।
ತ್ರಿಭುವನಭವನಪ್ರದೀಪಃ ದದಾತು ಮಹ್ಯಂ ಉತ್ತಮಾಂ ಬೋಧಿಮ್ ॥೧೫೨॥

ಅರ್ಥ :- ಈ ಪ್ರಕಾರ ಘಾತಿಕರ್ಮಗಳಿಂದ ರಹಿತ, ಕ್ಷುಧೆ, ತೃಷೆ ಮೊದಲಾದ ಪೂರ್ವೋಕ್ತ ಹದಿನೆಂಟು ದೋಷಗಳಿಂದ ರಹಿತ, ಸಕಲ (ಶರೀರಸಹಿತ) ಮತ್ತು ತ್ರಿಭುವನರೂಪದ ಭವನವನ್ನು ಪ್ರಕಾಶಿತ ಮಾಡುವ ಸಲುವಾಗಿ

---

ಈ ರೀತಿ ಘಾತಿಕರ್ಮವಿಮುಕ್ತ ಹದಿನೆಂಟು ದೋಷವರ್ಜಿತ ದೇಹಸಹಿತ ।
ಮೂರು ಭುವನಭವನಪ್ರದೀಪರೆಮಗೆ ಉತ್ತಮ ಬೋಧಿಕರುಣಿಸಲಿ ॥೧೫೨॥

ಪ್ರಕೃಷ್ಟದೀವಿಗೆ ತುಲ್ಯ ದೇವನಿದ್ದಾನೆ, ಅವನು ನನಗೆ ಉತ್ತಮ ಬೋಧಿಯ (ಸಮ್ಯಗ್ದರ್ಶನ-ಜ್ಞಾನ-ಚಾರಿತ್ರದ) ಪ್ರಾಪ್ತಿ ಮಾಡಲೆಂದು ಆಚಾರ್ಯಭಗವಂತರು ಪ್ರಾರ್ಥನೆ ಮಾಡಿದ್ದಾರೆ.

ಭಾವಾರ್ಥ :- ಇಲ್ಲಿ ಉಳಿದುವನ್ನಂತೂ ಪೂರ್ವೋಕ್ತ ಪ್ರಕಾರದಿಂದ ತಿಳಿಯುವುದು, ಆದರೆ 'ಸಕಲ' ವಿಶೇಷಣದ ಆಶಯವೇನೆಂದರೆ - ಮೋಕ್ಷಮಾರ್ಗದ ಪ್ರವೃತ್ತಿ ಮಾಡುವ ಯಾವ ಉಪದೇಶವಿದೆ ಅದು ವಚನಗಳು ಪ್ರವರ್ತಿಸಿದಲ್ಲದೆ ಆಗುವುದಿಲ್ಲ ಮತ್ತು ವಚನದ ಪ್ರವೃತ್ತಿಯು ಶರೀರವಿಲ್ಲದೆ ಆಗುವುದಿಲ್ಲ, ಆದುದರಿಂದ ಅರಹಂತರ ಅವಸ್ಥಾನವು ಆಯುಕರ್ಮದ ಉದಯದಿಂದ ಶರೀರಸಹಿತವಿರುತ್ತದೆ ಮತ್ತು ಸುಸ್ವರ ಮೊದಲಾದ ನಾಮ ಕರ್ಮದ ಉದಯದಿಂದ ವಚನದ ಪ್ರವೃತ್ತಿಯಾಗುತ್ತದೆ. ಈ ರೀತಿ ಅನೇಕ ಜೀವಗಳಿಗೆ ಕಲ್ಯಾಣಕಾರಕವಾದ ಉಪದೇಶವು ಆಗುತ್ತಿರುತ್ತದೆ. ಇಂಥ ಅವಸ್ಥಾನವು (ಇಂಥ ಸ್ಥಿತಿಯು) ಅನ್ಯಮತದವರ ಭಗವಂತನಿಗೆ ಸಂಭವವಿಲ್ಲ, ಆದುದರಿಂದ ಉಪದೇಶದ ಪ್ರವೃತ್ತಿಯಾಗುವುದಿಲ್ಲ, ಆಗ ಮೋಕ್ಷಮಾರ್ಗದ ಉಪದೇಶವು ಕೂಡ ಸಂಭವಿಸುವುದಿಲ್ಲವೆಂದು ತಿಳಿದು ಕೊಳ್ಳಬೇಕು. ||೧೫೨||

ಇಂಥ ಅರಹಂತ ಜಿನೇಶ್ವರರ ಚರಣಗಳಿಗೆ ಯಾರು ನಮಸ್ಕಾರ ಮಾಡುತ್ತಾರೆ ಅವರು ಸಂಸಾರದ ಜನ್ಮರೂಪದ ಬಳ್ಳಿಯನ್ನು ಕತ್ತರಿಸುತ್ತಾರೆಂದು ಈಗ ಹೇಳುತ್ತಾರೆ, -

ಜಿಣವರಚರಣಂಬುರುಹಂ ಣಮಂತಿ ಜೇ ಪರಮಭತ್ತಿರಾಏಣ ।
ತೇ ಜಮ್ಮವೇಲ್ಲಿಮೂಲಂ ಖಣಂತಿ ವರಭಾವಸತ್ತೇಣ ||೧೫೩||

ಜಿನವರಚರಣಾಂಬುರುಹಂ ನಮಂತಿಯೇ ಪರಮಭಕ್ತಿರಾಗೇಣ ।
ತೇ ಜನ್ಮವಲ್ಲೀಮೂಲಂ ಖನಂತಿ ವರಭಾವಶಸ್ತ್ರೇಣ ||೧೫೩||

ಅರ್ಥ :- ಯಾವ ಪುರುಷರು ಪರಮಭಕ್ತಿ ಅನುರಾಗದಿಂದ ಜಿನವರರ ಚರಣಕಮಲಗಳಿಗೆ ನಮಸ್ಕಾರ ಮಾಡುತ್ತಾರೆ ಅವರು ಶ್ರೇಷ್ಠಭಾವರೂಪವಾದ 'ಶಸ್ತ್ರ'ದಿಂದ ಜನ್ಮ ಎಂದರೆ ಸಂಸಾರರೂಪದ ಬಳ್ಳಿಯ ಮೂಲವನ್ನು ಆ ಮಿಥ್ಯಾತ್ವ ಮೊದಲಾದ ಕರ್ಮಗಳನ್ನು ನಾಶಮಾಡಿಬಿಡುತ್ತಾರೆ (ಕಿತ್ತು ಎಸೆಯುತ್ತಾರೆ).

ಭಾವಾರ್ಥ :- ಯಾರು ತಮ್ಮ ಶ್ರದ್ಧೆ-ರುಚಿ-ಪ್ರತೀತಿಯಿಂದ ಆ ಜಿನೇಶ್ವರದೇವರಿಗೆ ನಮಸ್ಕಾರ ಮಾಡುತ್ತಾರೆ, ಅವರ ಸತ್ಯಾರ್ಥಸ್ವರೂಪವಾದ ಸರ್ವಜ್ಞ ವೀತರಾಗತೆಯನ್ನು ತಿಳಿದುಕೊಂಡು ಭಕ್ತಿಯ ಅನುರಾಗದಿಂದ ನಮಸ್ಕಾರ ಮಾಡುತ್ತಾರೆ ಆಗ ಇದು ಸಮ್ಯಗ್ದರ್ಶನದ ಪ್ರಾಪ್ತಿಯ ಚಿಹ್ನವಿದೆಯೆಂದು ತಿಳಿದು ಬರುತ್ತದೆ, ಆದುದರಿಂದ ಇವರ ಮಿಥ್ಯಾತ್ವದ ನಾಶವಾಗಿ ಹೋಗಿದೆಯೆಂದು ತಿಳಿದುಬರುತ್ತದೆ, ಆಗ ಭವಿಷ್ಯ ಸಂಸಾರದ ವೃದ್ಧಿಯು ಇವರಿಗೆ ಆಗುವುದಿಲ್ಲವೆಂದು ತಿಳಿಸಿದೆ. ||೧೫೩||

ಜಿನಸಮ್ಯಕ್ತ್ವವನ್ನು ಪ್ರಾಪ್ತಮಾಡಿಕೊಂಡ ಪುರುಷರು ಭವಿಷ್ಯಕರ್ಮದಿಂದ ಲಿಪ್ತರಾಗುವುದಿಲ್ಲವೆಂದು ಈಗ ಹೇಳುತ್ತಾರೆ, -

---

ಏವ ಜಿನವರಚರಣಾಂಬುಜವ ಪರಮಭಕ್ತಿರಾಗದಿಂ ನಮಿಪನು ।
ಅವನು ಜನ್ಮವಲ್ಲೀಮೂಲವನು ವರಭಾವಶಸ್ತ್ರದಿಂ ನಷ್ಟ ಮಾಡುವನು ||೧೫೩||

**ಜಹ ಸಲಿಲೇಣ ಣ ಲಿಪ್ಪಇ ಕಮಲಿಣಿಪತ್ತಂ ಸಹಾವಪಯಡೀಏ ।**
**ತಹ ಭಾವೇಣ ಣ ಲಿಪ್ಪಇ ಕಸಾಯವಿಸಏಹಿಂ ಸಪ್ಪುರಿಸೋ ॥೧೫೪॥**

**ಯಥಾ ಸಲಿಲೇನ ನ ಲಿಪ್ಯತೇ ಕಮಲಿನೀಪತ್ರಂ ಸ್ವಭಾವಪ್ರಕೃತ್ಯಾ ।**
**ತಥಾ ಭಾವೇನ ನ ಲಿಪ್ಯತೇ ಕಷಾಯವಿಷಯೈಃ ಸತ್ಪುರುಷಃ ॥೧೫೪॥**

ಅರ್ಥ ಃ- ಯಾವ ಪ್ರಕಾರ ಕಮಲಪತ್ರವು ತನ್ನ ಸ್ವಭಾವದಿಂದಲೇ ಜಲದಿಂದ ಲಿಪ್ತವಾಗುವುದಿಲ್ಲ ಅದೇ ಪ್ರಕಾರ ಸಮ್ಯಗ್ದೃಷ್ಟಿಸತ್ಪುರುಷನು ತನ್ನ ಭಾವದಿಂದಲೇ ಕ್ರೋಧಾದಿ ಕಷಾಯಗಳಿಂದ ಮತ್ತು ಇಂದ್ರಿಯಗಳ ವಿಷಯಗಳಿಂದ ಲಿಪ್ತನಾಗುವುದಿಲ್ಲ.

ಭಾವಾರ್ಥ ಃ- ಸಮ್ಯಗ್ದೃಷ್ಟಿ ಪುರುಷನಿಗೆ ಮಿಥ್ಯಾತ್ವ ಮತ್ತು ಅನಂತಾನುಬಂಧಿ ಕಷಾಯದ್ದಂತೂ ಸರ್ವಥಾ ಅಭಾವವೇ ಇದ್ದು, ಅನ್ಯಕಷಾಯಗಳದ್ದು ಯಥಾಸಂಭವ ಅಭಾವವಿದೆ. ಮಿಥ್ಯಾತ್ವ ಅನಂತಾನುಬಂಧಿಯ ಅಭಾವದಿಂದ ಇಂಥ ಭಾವಗಳಾಗುತ್ತವೆ. ಆ ಪರದ್ರವ್ಯಮಾತ್ರದ ಕರ್ತೃತ್ವದ ಬುದ್ಧಿಯಂತೂ ಇರುವುದಿಲ್ಲ, ಆದರೆ ಶೇಷಕಷಾಯಗಳ ಉದಯದಿಂದ ಸ್ವಲ್ಪ ರಾಗ-ದ್ವೇಷಗಳಾಗುತ್ತವೆ, ಅವನ್ನು ಕರ್ಮದ ಉದಯದ ನಿಮಿತ್ತದಿಂದ ಆಗಿವೆಯೆಂದು ತಿಳಿಯುತ್ತಾನೆ, ಆದುದರಿಂದ ಅದರಲ್ಲೂ ಕರ್ತೃತ್ವಬುದ್ಧಿಯಿಲ್ಲದಿದ್ದರೂ ಕೂಡ ಆ ಭಾವಗಳನ್ನು ರೋಗದ ಸಮಾನವಾಗಿವೆಯೆಂದು ತಿಳಿದುಕೊಂಡು ಒಳ್ಳೆಯವೆಂದು ತಿಳಿಯುವುದಿಲ್ಲ, ಈ ಪ್ರಕಾರ ತನ್ನ ಭಾವಗಳಿಂದಲೇ ಕಷಾಯ-ವಿಷಯಗಳಲ್ಲಿ ಪ್ರೀತಿಯ ಬುದ್ಧಿಯಿಲ್ಲ, ಆದುದರಿಂದ ಅವುಗಳಿಂದ ಲಿಪ್ತನಾಗುವುದಿಲ್ಲ, ಜಲಕಮಲದಂತೆ ನಿರ್ಲೇಪನಿರುತ್ತಾನೆ. ಇದರಿಂದ ಭವಿಷ್ಯ ಕರ್ಮದ ಬಂಧವಾಗುವುದಿಲ್ಲ, ಸಂಸಾರದ ವೃದ್ಧಿಯಾಗುವುದಿಲ್ಲವೆಂಬ ಆಶಯವಿದೆ. ॥೧೫೪॥

ಆ ಪೂರ್ವೋಕ್ತಭಾವಸಹಿತರಾದ ಸಮ್ಯಗ್ದೃಷ್ಟಿ ಸತ್ಪುರುಷರಿದ್ದಾರೆ ಅವರೇ ಸಮಸ್ತಶೀಲ-ಸಂಯಮಾದಿ ಗುಣಗಳಿಂದ ಸಂಯುಕ್ತರಿದ್ದಾರೆ, ಇತರರಿಲ್ಲವೆಂದು ಈಗ ಹೇಳುತ್ತಾರೆ, -

**ತೇ [೧]ಚ್ಚಿಯ ಭಣಾಮಿ ಹಂ ಜೇ ಸಯಲಕಲಾಸೀಲಸಂಜಮಗುಣೇಹಿಂ ।**
**ಬಹುದೋಸಾಣಾವಾಸೋ ಸುಮಲಿಣಚಿತ್ತೋ ಣ ಸಾವಯಸಮೋ ಸೋ ॥೧೫೫॥**

**[೨]ತಾನೇವ ಚ ಭಣಾಮಿ ಯೇ ಸಕಲಕಲಾಶೀಲಸಂಯಮಗುಣೈಃ ।**
**ಬಹುದೋಷಾಣಾಮಾವಾಸಃ ಸುಮಲಿನಚಿತ್ತಃ ನ ಶ್ರಾವಕಸಮಃ ಸಃ ॥೧೫೫॥**

ಅರ್ಥ ಃ- ಪೂರ್ವೋಕ್ತಭಾವಸಹಿತರಾದ ಸಮ್ಯಗ್ದೃಷ್ಟಿ ಪುರುಷರಿದ್ದಾರೆ ಮತ್ತು ಶೀಲ-ಸಂಯಮಗುಣಗಳಿಂದ ಸಕಲಕಲೆ ಎಂದರೆ ಸಂಪೂರ್ಣ ಕಲಾವಂತರಿದ್ದಾರೆ ಅವರನ್ನೇ ನಾವು ಮುನಿಯೆಂದು ಹೇಳುತ್ತೇವೆ. ಯಾವನು

---

ಹೇಗೆ ಕಮಲಿನಿಯಪತ್ರ ಸ್ವಭಾವದಿಂದಲೇ ನೀರಿನಿಂದ ಲಿಪ್ತವಾಗದು ।
ಹಾಗೆ ಸತ್ಪುರುಷ ವಿಷಯಕಷಾಯಗಳಿಂದ ಲಿಪ್ತನಾಗನು ಭಾವದಿಂದ ॥೧೫೪॥

ಶೀಲಸಂಯಮಗುಣದಿಂ ಸಕಲಕಲಾಧರನನು ಮುನಿಯೆಂದು ಹೇಳಿದೆ
ಮಲಿನಚಿತ್ತ ಮೇಣ್ಬಹುಲದೋಷನಿಲಯನು ಶ್ರಾವಕಸಮಕೂಡ ಇಲ್ಲ ॥೧೫೫॥

---

೧ 'ಚಿ ಯ' ಎಂಬ ಪಾಠಾಂತರವಿದೆ. ೨ 'ತಾನ್ ಅಪಿ' ಎಂಬ ಪಾಠಾಂತರವಿದೆ.

ಸಮ್ಯಗ್ದೃಷ್ಟಿಯಿಲ್ಲ, ಮಲಿನಚಿತ್ತಸಹಿತ ಮಿಥ್ಯಾದೃಷ್ಟಿಯಿದ್ದಾನೆ ಮತ್ತು ಅಧಿಕ ದೋಷಗಳ ಆವಾಸ(ಸ್ಥಾನ)ನಿದ್ದಾನೆ ಅವನಂತೂ ವೇಷಧಾರಣಮಾಡಿದ್ದರೂ ಕೂಡ ಶ್ರಾವಕನ ಸಮಾನನೂ ಇಲ್ಲ.

ಭಾವಾರ್ಥ :- ಯಾವನು ಸಮ್ಯಗ್ದೃಷ್ಟಿಯಿದ್ದಾನೆ ಮತ್ತು ಶೀಲ (-ಉತ್ತರಗುಣ)ಹಾಗೂ ಸಂಯಮ (-ಮೂಲಗುಣ) ಸಹಿತನಿದ್ದಾನೆ ಅವನು ಮುನಿಯಿದ್ದಾನೆ. ಯಾವನು ಮಿಥ್ಯಾದೃಷ್ಟಿಯಿದ್ದಾನೆ ಎಂದರೆ ಅವನ ಚಿತ್ತವು ಮಿಥ್ಯಾತ್ವದಿಂದ ಮಲಿನವಿದೆ ಮತ್ತು ಅವನಲ್ಲಿ ಕ್ರೋಧಾದಿ ವಿಕಾರರೂಪದ ದೋಷಗಳು ಅಧಿಕವಾಗಿ ಕಂಡುಬರುತ್ತವೆ ಅವನಂತೂ ಮುನಿಯ ವೇಷಧಾರಣಮಾಡಿದ್ದರೂ ಕೂಡ ಶ್ರಾವಕನ ಸಮಾನವೂ ಇಲ್ಲ. ಶ್ರಾವಕನು ಸಮ್ಯಗ್ದೃಷ್ಟಿಯಿದ್ದು ಮತ್ತು ಗೃಹಸ್ಥಾಚರಣೆಯ ಪಾಪಸಹಿತನಿದ್ದರೂ ಕೂಡ ಅವನ ಸರಿದೊರೆಯಾಗಿ ಆ ಕೇವಲ ವೇಷ ಮಾತ್ರವನ್ನು ಧಾರಣ ಮಾಡುವಂಥ ಮುನಿ ಕೂಡ ಇಲ್ಲವೆಂದು ಆಚಾರ್ಯದೇವರು ಹೇಳಿದ್ದಾರೆ. ।।೧೫೪।।

ಸಮ್ಯಗ್ದೃಷ್ಟಿಗಳಾಗಿ ಕಷಾಯರೂಪದ ಸುಭಟರನ್ನು ಜಯಿಸಿದವರೇ ಶೂರ-ವೀರರಿದ್ದಾರೆಂಬುದನ್ನು ಈಗ ಹೇಳುತ್ತಾರೆ, -

ತೇ ಧೀರವೀರಪುರಿಸಾ ಖಮದಮಖಗ್ಗೇಣ ವಿಪ್ಫುರಂತೇಣ ।
ದುಜ್ಜಯಪಬಲಬಲುದ್ಧರಕಸಾಯಭಡ ಣಿಜ್ಜಿಯಾ ಜೇಹಿಂ ।।೧೫೬।।

ತೇ ಧೀರವೀರಪುರುಷಾಃ ಕ್ಷಮಾದಮಖಡ್ಗೇಣ ವಿಸ್ಫುರತಾ ।
ದುರ್ಜಯಪ್ರಬಲಬಲೋದ್ಧತಕಷಾಯಭಟಾಃ ನಿರ್ಜಿತಾ ಯೈಃ ।।೧೫೬।।

ಅರ್ಥ :- ಯಾವ ಪುರುಷರು ಕ್ಷಮೆ ಮತ್ತು ಇಂದ್ರಿಯಗಳ ನಿಗ್ರಹರೂಪದ ವಿಸ್ಫುರಿತ ಎಂದರೆ ಅಲಂಕರಿಸಿದ ಮತ್ತು ಮಲಿನತೆಯಿಲ್ಲದ ಉಜ್ವಲವಾದ ತೀಕ್ಷ್ಣ ಖಡ್ಗದಿಂದ ಜಯಿಸಲಸಾಧ್ಯವಾದಂಥ ದುರ್ಜಯ, ಪ್ರಬಲ ಹಾಗೂ ಬಲದಿಂದ ಉದ್ಧತವಾದ ಕಷಾಯರೂಪದ ಸುಭಟರನ್ನು ಜಯಿಸಿದ್ದಾರೆ, ಅವರೇ ಧೀರ-ವೀರ ಸುಭಟರಿದ್ದಾರೆ, ಅನ್ಯ ಸಂಗ್ರಾಮಾದಿಗಳಲ್ಲಿ ಜಯಿಸುವವರಂತೂ 'ಹೇಳುವುದಕ್ಕೆ ಸುಭಟ'ರಿದ್ದಾರೆ.

ಭಾವಾರ್ಥ :- ಯುದ್ಧಗಳಲ್ಲಿ ಜಯಿಸುವಂಥ ಶೂರ ವೀರರುಗಳಂತೂ ಲೋಕದಲ್ಲಿ ಬಹಳಷ್ಟು ಇದ್ದಾರೆ, ಆದರೆ ಕಷಾಯಗಳನ್ನು ಜಯಿಸುವಂಥವರು ವಿರಳರಿದ್ದಾರೆ, ಅವರು ಮುನಿಪ್ರಧಾನರಿದ್ದಾರೆ ಮತ್ತು ಅವರೇ ಶೂರವೀರರುಗಳಲ್ಲಿ ಮುಖ್ಯರಿದ್ದಾರೆ. ಯಾರು ಸಮ್ಯಗ್ದೃಷ್ಟಿಗಳಾಗಿ ಕಷಾಯಗಳನ್ನು ಜಯಿಸಿ ಚಾರಿತ್ರವಂತರಾಗುತ್ತಾರೆ ಅವರು ಮೋಕ್ಷ ಪಡೆಯುತ್ತಾರೆಂಬ ಆಶಯವಿದೆ.

ಯಾರು ಸ್ವಯಂ ದರ್ಶನ-ಜ್ಞಾನ-ಚಾರಿತ್ರರೂಪರಿರುತ್ತಾರೆ ಅವರು ಇತರರನ್ನು ಕೂಡ ಅವುಗಳ ಸಹಿತ ಮಾಡುತ್ತಾರೆ, ಅವರು ಧನ್ಯರಿದ್ದಾರೆಂದು ಈಗ ಹೇಳುತ್ತಾರೆ, -

---

ನಿಜಧೀರವೀರ ಪುರುಷನವನೆ ಕ್ಷಮಾದಮರೂಪದ ತೀಕ್ಷ್ಣಖಡ್ಗದಿಂ ।
ಅಜೇಯ ಪ್ರಬಲ ಬಲೋದ್ಧತ ಕಷಾಯಸುಭಟರನು ಜಯಿಸಿದವನು ।।೧೫೬।।

**ಧಣ್ಣಾ ತೇ ಭಯವಂತಾ ದಂಸಣಣಾಣಗ್ಗಪವರಹತ್ಥೇಹಿಂ ।**
**ವಿಸಯಮಯರಹರಪಡಿಯಾ ಭವಿಯಾ ಉತ್ತಾರಿಯಾ ಜೇಹಿಂ ॥೧೫೭॥**

**ತೇ ಧನ್ಯಾಃ ಭಗವಂತಃ ದರ್ಶನಜ್ಞಾನಾಗ್ರಪ್ರವರಹಸ್ತೈಃ ।**
**ವಿಷಯಮಕರಧರಪತಿತಾಃ ಭವ್ಯಾಃ ಉತ್ತಾರಿತಾಃ ಯೈಃ ॥೧೫೭॥**

ಅರ್ಥ ః- ಯಾವ ಸತ್ಪುರುಷರು ವಿಷಯರೂಪದ ಮಕರಧರ (ಸಮುದ್ರ)ದಲ್ಲಿ ಬಿದ್ದುಕೊಂಡಿರುವ ಭವ್ಯ ಜೀವರುಗಳನ್ನು ದರ್ಶನ ಮತ್ತು ಜ್ಞಾನರೂಪದ ಮುಖ್ಯ ಎರಡೂ ಕರಗಳಿಂದ ಎತ್ತಿ ಪಾರು ಮಾಡಿದ್ದಾರೆ, ಆ ಮುನಿಮುಖ್ಯರಾದ ಭಗವಂತರು ಇಂದ್ರಾದಿಕರಿಂದ ಪೂಜ್ಯರಾದ ಜ್ಞಾನಿಗಳು ಧನ್ಯರಿದ್ದಾರೆ.

ಭಾವಾರ್ಥ ః- ಈ ಸಂಸಾರಸಮುದ್ರದಿಂದ ಸ್ವಯಂ ಪಾರಾಗುವರು ಮತ್ತು ಇತರರನ್ನು ಪಾರು ಮಾಡುವಂಥ ಮುನಿಗಳು ಧನ್ಯರಿದ್ದಾರೆ. ಧನ ಮೊದಲಾದ ಸಾಮಗ್ರಿಸಹಿತರನ್ನು 'ಧನ್ಯ'ರೆಂದು ಹೇಳುತ್ತಾರೆ 'ಅದಂತೂ ಹೇಳುವುದಕ್ಕೆ ಧನ್ಯ'ವಿದೆ. ॥೧೫೭॥

ಈಗ ಮತ್ತೆ ಇಂಥ ಮುನಿಗಳ ಮಹಿಮೆ ಮಾಡುತ್ತಾರೆ, -

**ಮಾಯಾವೇಲ್ಲಿ ಅಸೇಸಾ ಮೋಹಮಹಾತರುವರಮ್ಮಿ ಆರೂಢಾ ।**
**ವಿಸಯವಿಸಪುಪ್ಫಫುಲ್ಲಿಯ ಲುಣಂತಿ ಮುಣಿ ಣಾಣಸತ್ಥೇಹಿಂ ॥೧೫೮॥**

**ಮಾಯಾವಲ್ಲೀಂ ಅಶೇಷಾಂ ಮೋಹಮಹಾತರುವರೇ ಆರೂಢಾಮ್ ।**
**ವಿಷಯವಿಷಪುಷ್ಪಪುಷ್ಪಿತಾಂ ಲುನಂತಿ ಮುನಯಃ ಜ್ಞಾನಶಸ್ತ್ರೈಃ ॥೧೫೮॥**

ಅರ್ಥ ః- ಮಾಯಾರೂಪದ (ಕಪಟರೂಪದ) ಬಳ್ಳಿಯು ಅದು ಮೋಹರೂಪದ ಮಹಾವೃಕ್ಷದಮೇಲೆ ಹಬ್ಬಿಕೊಂಡಿದೆ ಮತ್ತು ವಿಷಯರೂಪದ ವಿಷದ ಹೂವುಗಳಿಂದ ಅರಳುತ್ತಿದೆ ಅದನ್ನು ಮುನಿಗಳು ಜ್ಞಾನರೂಪದ ಶಸ್ತ್ರದಿಂದ ಸಂಪೂರ್ಣವಾಗಿ ಕತ್ತರಿಸಿ ಹಾಕುತ್ತಾರೆ ಎಂದರೆ ನಿಃಶೇಷ ಮಾಡಿಬಿಡುತ್ತಾರೆ.

ಭಾವಾರ್ಥ ః- ಈ ಮಾಯಾಕಷಾಯವು ಗೂಢವಿದ್ದು, ಇದರ ವಿಸ್ತಾರಕೂಡ ಅಧಿಕವಿದೆ, ಮುನಿಗಳವರೆಗೆ ಹರಡುತ್ತದೆ, ಆದುದರಿಂದ ಯಾವ ಮುನಿಗಳು ಜ್ಞಾನದಿಂದ ಇದನ್ನು ಕತ್ತರಿಸಿ ಹಾಕುತ್ತಾರೆ ಅವರೇ ನಿಜವಾದ ಮುನಿಗಳಿದ್ದಾರೆ, ಅವರೇ ಮೋಕ್ಷ ಪಡೆಯುತ್ತಾರೆ. ॥೧೫೮॥

ಈಗ ಮತ್ತೆ ಆ ಮುನಿಗಳ ಸಾಮರ್ಥ್ಯವನ್ನು ಹೇಳುತ್ತಾರೆ, -

---

ಕೃತಾರ್ಥ ಭಗವಂತರವರೆ ದರ್ಶನಜ್ಞಾನರೂಪದುತ್ತಮ ಹಸ್ತಗಳಿಂ ।
ಪತಿತ ವಿಷಯಮಕರಾಕರ ಭವ್ಯಜೀವರನು ಉದ್ಧಾರ ಮಾಡುವರು ॥೧೫೭॥

ಮುನಿ ಮೋಹಮಹಾದ್ರುಮದಮೇಲಾರೂಢವಾದಶೇಷಮಾಯಾರೂಪ ಬಳ್ಳಿಯಂ ।
ಜ್ಞಾನ ಶಸ್ತ್ರದಿಂ ಛೇದಿಸುವವನು ವಿಷಯರೂಪ ವಿಷಪುಷ್ಪ ಪುಷ್ಪಿತವನು ॥೧೫೮॥

**ಮೋಹಮಯಗಾರವೇಹಿಂ ಯ ಮುಕ್ಕಾ ಜೇ ಕರುಣಭಾವಸಂಜುತ್ತಾ ।**
**ತೇ ಸವ್ವದುರಿಯಖಂಭಂ ಹಣಂತಿ ಚಾರಿತ್ತಖಗ್ಗೇಣ ॥೧೫೯॥**

**ಮೋಹಮದಗಾರವೈಃ ಚ ಮುಕ್ತಾಃ ಕರುಣಭಾವಸಂಯುಕ್ತಾಃ ।**
**ತೇ ಸರ್ವದುರಿತಸ್ತಂಭಂ ಘ್ನಂತಿ ಚಾರಿತ್ರಖಡ್ಗೇನ ॥೧೫೯॥**

ಅರ್ಥ :- ಯಾವ ಮುನಿಗಳು ಮೋಹ-ಮದ-ಗೌರವದಿಂದ ರಹಿತರಿದ್ದಾರೆ ಮತ್ತು ಕರುಣಾಭಾವಸಹಿತರಿದ್ದಾರೆ, ಅವರೇ ಚಾರಿತ್ರರೂಪದ ಖಡ್ಗದಿಂದ ಪಾಪರೂಪದ ಸ್ತಂಭವನ್ನು ಹೊಡೆಯುತ್ತಾರೆ ಎಂದರೆ ಮೂಲದಿಂದ ಕತ್ತರಿಸಿ ಹಾಕುತ್ತಾರೆ.

ಭಾವಾರ್ಥ :- ಪರದ್ರವ್ಯದಲ್ಲಿನ ಮಮತ್ವಭಾವವನ್ನು 'ಮೋಹ'ವೆಂದು ಹೇಳುತ್ತಾರೆ. ಜಾತಿ ಮೊದಲಾದ ಪರದ್ರವ್ಯದ ಸಂಬಂಧದಿಂದ ಗರ್ವವಾಗುವುದನ್ನು 'ಮದ'ವೆಂದು ಹೇಳುತ್ತಾರೆ. ಗೌರವವು ಋದ್ಧಿಗೌರವ ಸಾತಗೌರವ ಮತ್ತು ರಸಗೌರವವೆಂದು ಮೂರು ಪ್ರಕಾರದ್ದಿದೆ. ಸ್ವಲ್ಪ ತಪೋಬಲದಿಂದ ತನ್ನ ದೊಡ್ಡಸ್ತಿಕೆಯು ಲೋಕದಲ್ಲಾಗುವುದು ತನಗೆ ಅದರ ಮದ ಬರುವುದು, ಅದರಲ್ಲಿ ಹರ್ಷ ಮನ್ನಿಸುವುದು ಅದು 'ಋದ್ಧಿಗೌರವ'ವಿದೆ. ಒಂದು ವೇಳೆ ತನ್ನ ಶರೀರದಲ್ಲಿ ರೋಗಾದಿಗಳು ಉತ್ಪನ್ನವಾಗದಿದ್ದರೆ ಸುಖ ಮನ್ನಿಸುವುದು ಮತ್ತು ಪ್ರಮಾದಯುಕ್ತನಾಗಿ ತನ್ನ ದೊಡ್ಡಸ್ತಿಕೆಯನ್ನು ಮನ್ನಿಸುವುದು ಅದು 'ಸಾತಗೌರವ'ವಿದೆ. ಒಂದು ವೇಳೆ ಮಿಷ್ಟ-ಪುಷ್ಟ ರಸಯುಕ್ತ ಆಹಾರವು ದೊರಕಿದರೆ ಅದರ ನಿಮಿತ್ತದಿಂದ ಪ್ರಮತ್ತನಾಗಿ ಶಯನಾದಿಗಳನ್ನು ಮಾಡುವುದು ಅದು 'ರಸಗೌರವ'ವಿದೆ. ಮುನಿಗಳು ಈ ಪ್ರಕಾರದ ಗೌರವದಿಂದಂತೂ ರಹಿತರಿರುತ್ತಾರೆ ಮತ್ತು ಪರಜೀವಗಳ ಕರುಣೆಯಿಂದ ಸಹಿತರಿರುತ್ತಾರೆ, ಆದರೆ ಪರಜೀವಗಳಲ್ಲಿ ಮೋಹ-ಮಮತ್ವ ರಹಿತರಿರುವುದರಿಂದ ನಿರ್ದಯರಾಗಿ ಅವುಗಳನ್ನು ಹೊಡೆಯುತ್ತಾರೆಂಬುದಲ್ಲ, ಆದರೆ ಎಲ್ಲಿಯವರೆಗೆ ರಾಗಾಂಶವಿರುತ್ತದೆ ಅಲ್ಲಿಯವರೆಗೆ ಪರಜೀವಗಳಲ್ಲಿ ಕರುಣೆಯನ್ನೇ ಮಾಡುತ್ತಾರೆ, ಉಪಕಾರ ಬುದ್ಧಿಯಿರುತ್ತದೆ. ಈ ಪ್ರಕಾರ ಜ್ಞಾನಿಮುನಿಗಳು ಚಾರಿತ್ರದ ಬಲದಿಂದ ಪಾಪವಾದ ಆ ಅಶುಭಕರ್ಮದ ನಾಶಮಾಡುತ್ತಾರೆ. ॥೧೫೯॥

ಈ ಪ್ರಕಾರ ಮೂಲಗುಣಗಳಲ್ಲಿ ಮತ್ತು ಉತ್ತರ ಗುಣಗಳಲ್ಲಿ ಮಂಡಿತರಿರುವಂಥ ಮುನಿಗಳು ಜಿನಮತದಲ್ಲಿ ಶೋಭೆ ಪಡೆಯುತ್ತಾರೆಂದು ಈಗ ಹೇಳುತ್ತಾರೆ.-

**ಗುಣಗಣಮಣಿಮಾಲಾಏ ಜಿಣಮಯಗಯಣೇ ಣಿಸಾಯರಮುಣಿಂದೋ ।**
**ತಾರಾವಲಿಪರಿಯರಿಓ ಪುಣ್ಣಿಮಇಂದುವ್ವ ಪವಣಪಹೇ ॥೧೬೦॥**

---

ಯಾವನು ಮೋಹಮದಗಾರವಮುಕ್ತ ಮೇಣ್ಕರುಣಾಭಾವ ಸಂಯುಕ್ತನಿಹನು ।
ಅವನು ಸರ್ವಪಾಪರೂಪ ಸ್ತಂಭವನು ಚಾರಿತ್ರಖಡ್ಗದಿಂ ಛೇದಿಸುವನು ॥೧೫೯॥

ಹೇಗೆ ತಾರಾವಲಿವೇಷ್ಟಿತ ಪೂರ್ಣಿಮೆಯ ಚಂದ್ರನಾಗಸದಿ ಶೋಭಿಸುವನು ।
ಹಾಗೆ ಗುಣಗಣಮಣಿಮಾಲೆಯಿಂ ಮುನಿಚಂದ್ರ ಜಿನಮತಗಗನದಲಿ ॥೧೬೦॥

ಗುಣಗಣಮಣಿಮಾಲಯಾ ಜಿನಮತಗಗನೇ ನಿಶಾಕರಮುನೀಂದ್ರಃ ।
ತಾರಾವಲೀಪರಿಕರಿತಃ ಪೂರ್ಣಿಮೇಂದುರಿವ ಪವನಪಥೇ ॥೧೬೦॥

ಅರ್ಥ ಃ- ಯಾವ ಪ್ರಕಾರ ಪವನಪಥ(ಆಕಾಶ)ದಲ್ಲಿ ನಕ್ಷತ್ರಗಳ ಪಂಕ್ತಿಯ ಪರಿವಾರದಿಂದ ವೇಷ್ಟಿತನಾದ ಪೂರ್ಣಿಮೆಯ ಚಂದ್ರನು ಶೋಭೆ ಪಡೆಯುತ್ತಾನೆ, ಅದೇ ಪ್ರಕಾರ ಜಿನಮತರೂಪದ ಆಕಾಶದಲ್ಲಿ ಗುಣಗಳ ಸಮೂಹರೂಪದ ಮಣಿಗಳ ಮಾಲೆಯಿಂದ ಮುನೀಂದ್ರರೂಪದ ಚಂದ್ರನು ಶೋಭೆ ಪಡೆಯುತ್ತಾನೆ.

ಭಾವಾರ್ಥ ಃ- ಇಪ್ಪತ್ತೆಂಟು ಮೂಲಗುಣ, ದಶಲಕ್ಷಣ ಧರ್ಮ, ಮೂರು ಗುಪ್ತಿ ಮತ್ತು ಎಂಭತ್ತಾ್ನಲ್ಕು ಲಕ್ಷ ಉತ್ತರ ಗುಣಗಳ ಮಾಲೆಯೊಡನೆ ಮುನಿಯು ಜಿನಮತದಲ್ಲಿ ಚಂದ್ರನ ಸಮಾನನಾಗಿ ಶೋಭೆ ಪಡೆಯುತ್ತಾನೆ, ಇಂಥ ಮುನಿಗಳು ಅನ್ಯಮತದಲ್ಲಿ ಇಲ್ಲ. ॥೧೬೦॥

ಯಾರಲ್ಲಿ ಈ ಪ್ರಕಾರದ ವಿಶುದ್ಧಭಾವಗಳಿವೆ ಆ ಸತ್ಪುರುಷರು ತೀರ್ಥಂಕರ ಮೊದಲಾದ ಪದಗಳ ಸುಖಗಳನ್ನು ಪಡೆಯುತ್ತಾರೆಂದು ಈಗ ಹೇಳುತ್ತಾರೆ, -

ಚಕ್ಕಹರರಾಮಕೇಸವಸುರವರಜಿಣಗಣಹರಾಇಸೋಕ್ಖಾಇಂ ।
ಚಾರಣಮುಣಿರಿದ್ಧೀಓ ವಿಸುದ್ಧಭಾವಾ ಣರಾ ಪತ್ತಾ ॥೧೬೧॥

ಚಕ್ರಧರರಾಮಕೇಶವಸುರವರಜಿನಗಣಧರಾದಿಸೌಖ್ಯಾನಿ ।
ಚಾರಣಮುನ್ಯರ್ದ್ಧೀಃ ವಿಶುದ್ಧಭಾವಾ ನರಾಃ ಪ್ರಾಪ್ತಾಃ ॥೧೬೧॥

ಅರ್ಥ ಃ- ವಿಶುದ್ಧ ಭಾವವಿರುವಂಥ ನರ ಮುನಿಗಳಿದ್ದಾರೆ ಅವರು ಚಕ್ರಧರ (-ಚಕ್ರವರ್ತಿ, ಆರು ಖಂಡದ ಅಧಿಪತಿ), ರಾಮ (ಬಲಭದ್ರ), ಕೇಶವ (-ನಾರಾಯಣ, ಅರ್ಧಚಕ್ರಿ), ಸುರವರ (-ದೇವಗಳ ಇಂದ್ರ), ಜಿನ (ತೀರ್ಥಂಕರ ಪಂಚಕಲ್ಯಾಣಿಕ ಸಹಿತ, ಮೂರು ಲೋಕಕ್ಕೆ ಪೂಜ್ಯವಾದ ಪದ), ಗಣಧರ (-ನಾಲ್ಕು ಜ್ಞಾನ ಮತ್ತು ಸಪ್ತಋದ್ಧಿಯ ಧಾರಕನಾದ ಮುನಿ) ಇವರುಗಳ ಸುಖಗಳನ್ನು ಮತ್ತು ಚಾರಣ ಮುನಿಯ (ಅವರು ಆಕಾಶಗಾಮಿನಿ ಮೊದಲಾದ ಋದ್ಧಿಗಳನ್ನು ಪಡೆದುಕೊಂಡಿರುತ್ತಾರೆ) ಋದ್ಧಿಗಳಿಗೆ ಪ್ರಾಪ್ತರಾಗುವರು.

ಭಾವಾರ್ಥ ಃ- ಮೊದಲು ಈ ಪ್ರಕಾರದ ನಿರ್ಮಲಭಾವಗಳ ಧಾರಕರಾದವರು ಅವರು ಈ ಪ್ರಕಾರದ ಪದಗಳಸುಖಗಳನ್ನು ಪಡೆದರು, ಈಗ ಯಾರು ಹೀಗಾಗುವರು ಅವರೂ ಕೂಡ ಪಡೆಯುವರೆಂದು ತಿಳಿಯಬೇಕು. ॥೧೬೧॥

ಮೋಕ್ಷದ ಸುಖವನ್ನು ಕೂಡ ಹೀಗೆಯೇ ಪಡೆಯುತ್ತಾರೆಂದು ಈಗ ಹೇಳುತ್ತಾರೆ, -

---

ಸುರವರ ಚಕ್ರಧರರಾಮಕೇಶವ ಜಿನಗಣಧರಾದಿ ಸೌಖ್ಯವನು ।
ಚಾರಣಮುನೀಂದ್ರರ ಋದ್ಧಿಯನಾ ವಿಶುದ್ಧಭಾವದನರ ಪಡೆಯುವನು ॥೧೬೧॥

**ಸಿವಮಜರಾಮರಲಿಂಗಮಣೋವಮಮುತ್ತಮಂ ಪರಮವಿಮಲಮತುಲಂ ।**
**ಪತ್ತಾ ವರಸಿದ್ಧಿಸುಹಂ ಜಿಣಭಾವಣಭಾವಿಯಾ ಜೀವಾ ॥೧೬೨॥**

**ಶಿವಮಜರಾಮರಲಿಂಗಂ ಅನುಪಮಮುತ್ತಮಂ ಪರಮವಿಮಲಮತುಲಮ್ ।**
**ಪ್ರಾಪ್ತೋ ವರಸಿದ್ಧಿ ಸುಖಂ ಜಿನಭಾವನಾಭಾವಿತಾ ಜೀವಾಃ ॥೧೬೨॥**

ಅರ್ಥ ಃ- ಯಾರು ಜಿನಭಾವನೆಯಿಂದ ಭಾವಿತರಾದ ಜೀವರುಗಳಿದ್ದಾರೆ ಅವರೇ ಸಿದ್ಧಿ ಎಂದರೆ ಮೋಕ್ಷದ ಸುಖವನ್ನು ಪಡೆಯುತ್ತಾರೆ. ಆ ಸಿದ್ಧಿ ಸುಖವು 'ಶಿವ'ವಿದೆ, ಕಲ್ಯಾಣರೂಪವಿದೆ, ಯಾವುದೇ ಪ್ರಕಾರದ ಉಪದ್ರವ ಸಹಿತವಿಲ್ಲ, 'ಅಜರಾಮರಲಿಂಗ'ವಿದೆ ಎಂದರೆ ಅದರ ಚಿಹ್ನವು ವೃದ್ಧವಾಗುವುದು ಮತ್ತು ಸತ್ತು ಹೋಗುವುದು ಇವೆರಡರಿಂದ ರಹಿತವಿದೆ, 'ಅನುಪಮ'ವಿದೆ ಅದಕ್ಕೆ ಸಂಸಾರದ ಸುಖದ ಉಪಮೆ ಅನ್ವಯಿಸುವುದಿಲ್ಲ, 'ಉತ್ತಮ' (ಸರ್ವೋತ್ತಮ)ವಿದೆ, 'ಪರಮ' (ಸರ್ವೋತ್ಕೃಷ್ಟ)ವಿದೆ ಎಂದರೆ ಮಹಾನ್ ಅರ್ಘ್ಯ ಪೂಜ್ಯ ಪ್ರಶಂಸೆಗೆ ಯೋಗ್ಯವಿದೆ, 'ವಿಮಲ'ವಿದೆ ಕರ್ಮದ ಮಲ ಹಾಗೂ ರಾಗಾದಿಗಳ ಮಲದಿಂದ ರಹಿತವಿದೆ. 'ಅತುಲ'ವಿದೆ ಇದರ ಸರಿದೊರೆಯಾಗಿ ಸಂಸಾರದ ಸುಖವಿಲ್ಲ, ಇಂಥ ಸುಖವನ್ನು ಜಿನ-ಭಕ್ತನು ಪಡೆಯುತ್ತಾನೆ, ಅನ್ಯರ ಭಕ್ತನು ಪಡೆಯುವುದಿಲ್ಲ. ॥೧೬೨॥

ಇಂಥ ಸಿದ್ಧಸುಖಕ್ಕೆ ಪ್ರಾಪ್ತರಾದ ಸಿದ್ಧಭಗವಂತರು ಅವರು ನನಗೆ ಭಾವಗಳ ಶುದ್ಧಿಯನ್ನು ದಯಪಾಲಿಸಲೆಂದು ಈಗ ಆಚಾರ್ಯದೇವರು ಪ್ರಾರ್ಥನೆ ಮಾಡುತ್ತಾರೆ, -

**ತೇ ಮೇ ತಿಹುವಣಮಹಿಮಾ ಸಿದ್ಧಾ ಸುದ್ಧಾ ಣಿರಂಜಣಾ ಣಿಚ್ಚಾ ।**
**ದಿಂತು ವರಭಾವಸುದ್ಧಿಂ ದಂಸಣ ಣಾಣೇ ಚರಿತ್ತೇ ಯ ॥೧೬೩॥**

**ತೇ ಮೇ ತ್ರಿಭುವನಮಹಿತಾಃ ಸಿದ್ಧಾಃ ಸುದ್ಧಾಃ ನಿರಂಜನಾಃ ನಿತ್ಯಾಃ ।**
**ದದತು ವರಭಾವಶುದ್ಧಿಂ ದರ್ಶನೇ ಜ್ಞಾನೇ ಚಾರಿತ್ರೇ ಚ ॥೧೬೩॥**

ಅರ್ಥ ಃ- ಸಿದ್ಧ ಭಗವಂತರು ನನಗೆ ದರ್ಶನ ಜ್ಞಾನದಲ್ಲಿ ಮತ್ತು ಚಾರಿತ್ರದಲ್ಲಿ ಶ್ರೇಷ್ಠ ಉತ್ತಮ ಭಾವದ ಶುದ್ಧತೆಯನ್ನು ಕರುಣಿಸಲಿ. ಆ ಸಿದ್ಧಭಗವಂತರು ಮೂರು ಲೋಕಗಳಿಂದ ಪೂಜ್ಯರಿದ್ದಾರೆ ಎಂದರೆ ದ್ರವ್ಯ-ಕರ್ಮ ಮತ್ತು ನೋಕರ್ಮರೂಪದ ಮಲದಿಂದ ರಹಿತರಿದ್ದಾರೆ, ನಿರಂಜನರಿದ್ದಾರೆ ಎಂದರೆ ರಾಗಾದಿಗಳ ಕರ್ಮದಿಂದ ರಹಿತರಿದ್ದಾರೆ. ಅವರಿಗೆ ಕರ್ಮದ ಉತ್ಪತ್ತಿಯಿಲ್ಲ, ನಿತ್ಯರಿದ್ದಾರೆ-ಪ್ರಾಪ್ತಸ್ವಭಾವದ ನಾಶವೆಂದೂ ಆಗುವುದಿಲ್ಲ.

---

ಶಿವ ಅನುಪಮ ಉತ್ತಮ ಪೂರ್ಣವಿಮಲ ಅತುಲ ಅಜರಾಮರಲಿಂಗ ।
ಆ ವರಸಿದ್ಧಿಸುಖವನು ಜಿನಭಾವನಾಪರಿಣತ ಜೀವ ಪಡೆವನು ॥೧೬೨॥

ಮೂರುಲೋಕದಿಂದ ಪೂಜ್ಯ ಶುದ್ಧ ನಿರಂಜನ ನಿತ್ಯರಾದ ಶ್ರೀಸಿದ್ಧರೀಗೆಮಗೆ ।
ವರಭಾವಶುದ್ಧಿಯನು ಕರುಣಿಸಲಿ ದರ್ಶನ-ಜ್ಞಾನ-ಚಾರಿತ್ರಗಳಲಿ ॥೧೬೩॥

ಭಾವಾರ್ಥ :- ಶುದ್ಧಭಾವದ ಫಲವು ಸಿದ್ಧ ಅವಸ್ಥೆಯಿದೆ ಮತ್ತು ನಿಶ್ಚಯದಿಂದ ಈ ಫಲಕ್ಕೆ ಪ್ರಾಪ್ತರಾದವರು ಸಿದ್ಧರಿದ್ದಾರೆ, ಇವರುಗಳಿಂದ ತಮಗೆ ಶುದ್ಧಭಾವದ ಪೂರ್ಣತೆಯಾಗಲೆಂದೇ ಆಚಾರ್ಯದೇವರು ಪ್ರಾರ್ಥನೆ ಮಾಡಿದ್ದಾರೆ. ||೧೬೩||

ಈಗ ಭಾವದ ಕಥನದ ಸಂಕೋಚ ಮಾಡುತ್ತಾರೆ, -

**ಕಿಂ ಜಂಪಿಏಣ ಬಹುಣಾ ಅತ್ಥೋ ಧಮ್ಮೋ ಯ ಕಾಮಮೋಕ್ಖೋ ಯ ।**
**ಅಣ್ಣೇ ವಿ ಯ ವಾವಾರಾ ಭಾವಮ್ಮಿ ಪರಿಟ್ಠಿಯಾ ಸವ್ವೇ ||೧೬೪||**

**ಕಿಂ ಜಲ್ಪಿತೇನ ಬಹುನಾ ಅರ್ಥಃ ಧರ್ಮಃ ಚ ಕಾಮಮೋಕ್ಷಃ ಚ ।**
**ಅನ್ಯೇ ಅಪಿ ಚ ವ್ಯಾಪಾರಾಃ ಭಾವೇ ಪರಿಸ್ಥಿತಾಃ ಸರ್ವೇ ||೧೬೪||**

ಅರ್ಥ :- ಹೆಚ್ಚು ಹೇಳುವುದರಲ್ಲೇನಿದೆ ? ಧರ್ಮ, ಅರ್ಥ, ಕಾಮ, ಮೋಕ್ಷ ಮತ್ತು ಇತರ ಯಾವ ಒಂದಿಷ್ಟು ವ್ಯಾಪಾರವಿದೆ ಅದೆಲ್ಲವೂ ಶುದ್ಧಭಾವದಲ್ಲಿ ಸಮಸ್ತರೂಪದಿಂದ ಸ್ಥಿರವಿದೆ.

ಭಾವಾರ್ಥ :- ಪುರುಷನಿಗೆ ಧರ್ಮ, ಅರ್ಥ, ಕಾಮ, ಮೋಕ್ಷವೆಂಬ ನಾಲ್ಕು ಪ್ರಯೋಜನಗಳು ಮುಖ್ಯವಿವೆ. ಇತರವೂ ಆ ಮಂತ್ರಸಾಧನೆ ಮೊದಲಾದ ವ್ಯಾಪಾರಗಳಿವೆ. ಅವು ಆತ್ಮನ ಶುದ್ಧ ಚೈತನ್ಯ ಪರಿಣಾಮಸ್ವರೂಪವಾದ ಭಾವದಲ್ಲಿ ಸ್ಥಿರವಿವೆ. ಶುದ್ಧಭಾವದಿಂದ ಸಮಸ್ತ ಸಿದ್ಧಿಯಿದೆಯೆಂದು ಸಂಕ್ಷೇಪದಿಂದ ಹೇಳಿರುವುದನ್ನು ತಿಳಿಯಬೇಕು, ಹೆಚ್ಚಿಗೇನು ಹೇಳುವುದು ? ||೧೬೪||

ಈಗ ಭಾವಪಾಹುಡವನ್ನು ಪೂರ್ಣ ಮಾಡುತ್ತಾರೆ, ಇದನ್ನು ಓದುವುದರ, ಕೇಳುವುದರ ಮತ್ತು ಭಾವ ಮಾಡುವುದರ (ಚಿಂತನೆಯ) ಉಪದೇಶ ಮಾಡುತ್ತಾರೆ, -

**ಇಯ ಭಾವಪಾಹುಡಮಿಣಂ ಸವ್ವಂಬುದ್ಧೇಹಿ ದೇಸಿಯಂ ಸಮ್ಮಂ ।**
**ಜೋ ಪಢಇ ಸುಣಇ ಭಾವಇ ಸೋ ಪಾವಇ ಅವಿಚಲ ಠಾಣಂ ||೧೬೫||**

**ಇತಿ ಭಾವಪ್ರಾಭೃತಮಿದಂ ಸರ್ವಬುದ್ಧೈಃ ದೇಶಿತಂ ಸಮ್ಯಕ್ ।**
**ಯಃ ಪಠತಿ ಶೃಣೋತಿ ಭಾವಯತಿ ಸಃ ಪ್ರಾಪ್ನೋತಿ ಅವಿಚಲಂ ಸ್ಥಾನಮ್ ||೧೬೫||**

ಅರ್ಥ :- ಈ ಪ್ರಕಾರ ಸರ್ವಬುದ್ಧ-ಸರ್ವಜ್ಞದೇವರು ಈ ಭಾವಪಾಹುಡದ ಉಪದೇಶ ಮಾಡಿದ್ದಾರೆ, ಇದನ್ನು ಯಾವ ಭವ್ಯ ಜೀವರುಗಳು ಸಮ್ಯಕ್ ಪ್ರಕಾರದಿಂದ ಓದುತ್ತಾರೆ, ಕೇಳುತ್ತಾರೆ ಮತ್ತು ಇದರ ಚಿಂತನೆ ಮಾಡುತ್ತಾರೆ ಅವರು ಶಾಶ್ವತ ಸುಖದ ಸ್ಥಾನವಾದ ಆ ಮೋಕ್ಷವನ್ನು ಪಡೆಯುತ್ತಾರೆ.

---

**ಬಹು ಕಥನದಿಂದೇನಪ್ಪುದು ಧರ್ಮ ಅರ್ಥ ಮೇಣ್ಕಾಮಮೋಕ್ಷಮಲ್ಲದೆ ಬೇರೆ ।**
**ಬಹು ವ್ಯಾಪಾರಾದಿಗಳೆಲ್ಲವು ಶುದ್ಧಭಾವದೊಳಗೆ ಸ್ಥಿರವಾಗಿರುವವು ||೧೬೪||**

**ಇಂತು ಸರ್ವಜ್ಞಕಥಿತವಾದೀ ಭಾವಪಾಹುಡವನಾರು ಸಮ್ಯಕ್ಪ್ರಕಾರದಿಂ ।**
**ಚಿಂತಿಸುವರೋದುವರಾಲಿಸುವರವರು ಶಾಶ್ವತಸ್ಥಾನ ಪಡೆಯುವರು ||೧೬೫||**

ಭಾವಾರ್ಥ ಃ- ಈ ಭಾವಪಾಹುಡ ಗ್ರಂಥವನ್ನು ಸರ್ವಜ್ಞರ ಪರಂಪರೆಯಿಂದ ಅರ್ಥ ತಿಳಿದುಕೊಂಡು ಆಚಾರ್ಯದೇವರು ಹೇಳಿರುವುದರಿಂದ ಇದು ಸರ್ವಜ್ಞರ ಉಪದೇಶವೇ ಇದೆ, ಕೇವಲ ಛದ್ಮಸ್ಥರೇ ಹೇಳಿರುವುದು ಇಲ್ಲ, ಆದುದರಿಂದ ಆಚಾರ್ಯರು ತಮ್ಮ ಕರ್ತವ್ಯವನ್ನು ಮುಖ್ಯಮಾಡಿ ಹೇಳಿಲ್ಲ. ಇದನ್ನು ಓದುವುದರ ಕೇಳುವುದರ ಫಲವು ಮೋಕ್ಷವೆಂದು ಹೇಳಿರುವುದು ಅದು ಯುಕ್ತವೇ ಇದೆ. ಶುದ್ಧಭಾವದಿಂದ ಮೋಕ್ಷವಾಗುತ್ತದೆ ಮತ್ತು ಇದನ್ನು ಓದುವುದರಿಂದ ಶುದ್ಧಭಾವಗಳಾಗುತ್ತವೆ. (ನೋಟ ಃ- ಇಲ್ಲಿ ಸ್ವಾಶ್ರಯ ನಿಶ್ಚಯದಲ್ಲಿ ಶುದ್ಧತೆ ಮಾಡಿದರೆ ನಿಮಿತ್ತದಲ್ಲಿ ಶಾಸ್ತ್ರ ಓದುವುದು ಮೊದಲಾದುವನ್ನು ವ್ಯವಹಾರದಿಂದ ನಿಮಿತ್ತಕಾರಣ-ಪರಂಪರಾಕಾರಣವೆಂದು ಹೇಳಲಾಗುವುದು. ಅನುಪಚಾರ = ನಿಶ್ಚಯವಿಲ್ಲದ ಉಪಚಾರ = ವ್ಯವಹಾರ ಹೇಗಾಗುವುದು ?) ಈ ಪ್ರಕಾರ ಇದನ್ನು ಓದುವುದು, ಕೇಳುವುದು, ಧಾರಣಮಾಡುವುದು ಮತ್ತು ಭಾವನೆ ಮಾಡುವುದು ಪರಂಪರೆಯಿಂದ ಮೋಕ್ಷದ ಕಾರಣವಿದೆ. ಆದುದರಿಂದ ಎಲೈ ಜೀವರುಗಳೇ ! ಭಾವಪಾಹುಡವನ್ನು ಓದಿರಿ, ಕೇಳಿರಿ, ಕೇಳಿಸಿರಿ, ಭಾವಿಸಿರಿ ಮತ್ತು ನಿರಂತರ ಅಭ್ಯಾಸಮಾಡಿರಿ ! ಅದರಿಂದ ಭಾವ ಶುದ್ಧವಾಗುವವು ಮತ್ತು ಸಮ್ಯಗ್ದರ್ಶನ-ಜ್ಞಾನ-ಚಾರಿತ್ರದ ಪೂರ್ಣತೆಯನ್ನು ಪಡೆದು ಮೋಕ್ಷ ಪ್ರಾಪ್ತಮಾಡಿಕೊಳ್ಳಿರಿ ಮತ್ತು ಅಲ್ಲಿ ಪರಮಾನಂದರೂಪವಾದ ಶಾಶ್ವತ ಸುಖವನ್ನು ಭೋಗಿಸಿರಿ.

ಈ ಪ್ರಕಾರ ಭ. ಕುಂದಕುಂದಾಚಾರ್ಯದೇವರು ಭಾವಪಾಹುಡ ಗ್ರಂಥವನ್ನು ಪೂರ್ಣಮಾಡಿದರು.

ಇದರ ಸಂಕ್ಷೇಪವು ಹೀಗಿದೆ - ಜೀವನಾಮದ ವಸ್ತುವಿನದು ಒಂದು ಅಸಾಧಾರಣ ಶುದ್ಧ ಅವಿನಾಶಿಯಾದ ಚೇತನಾಸ್ವಭಾವವಿದೆ. ಶುದ್ಧ, ಅಶುದ್ಧವೆಂದು ಇದರ ಎರಡು ಪರಿಣತಿಗಳಿವೆ. ಶುದ್ಧದರ್ಶನ-ಜ್ಞಾನೋಪಯೋಗರೂಪವಾಗಿ ಪರಿಣಮಿಸುವುದು ಅದು 'ಶುದ್ಧಪರಿಣತಿ'ಯಿದೆ, ಇದನ್ನು ಶುದ್ಧ ಭಾವವೆಂದು ಹೇಳುತ್ತಾರೆ. ಕರ್ಮದ ನಿಮಿತ್ತದಿಂದ ರಾಗ-ದ್ವೇಷ-ಮೋಹಾದಿಗಳ ವಿಭಾವರೂಪವಾಗಿ ಪರಿಣಮಿಸುವುದು ಅದು 'ಅಶುದ್ಧ ಪರಿಣತಿ'ಯಿದೆ, ಇದನ್ನು ಅಶುದ್ಧಭಾವವೆಂದು ಹೇಳುತ್ತಾರೆ. ಕರ್ಮದ ನಿಮಿತ್ತವು ಅನಾದಿಯಿಂದ ಇರುವುದರಿಂದ ಅಶುದ್ಧಭಾವರೂಪವಾಗಿ ಅನಾದಿಯಿಂದ ಪರಿಣಮನ ಮಾಡುತ್ತಲಿದೆ. ಈ ಭಾವದಿಂದ ಶುಭ ಅಶುಭ ಕರ್ಮದ ಬಂಧವಾಗುತ್ತದೆ, ಈ ಬಂಧದ ಉದಯದಿಂದ ಮತ್ತೆ ಶುಭ ಅಥವಾ ಅಶುಭ ಭಾವರೂಪ (-ಅಶುದ್ಧ ಭಾವರೂಪ)ವಾಗಿ ಪರಿಣಮನ ಮಾಡುತ್ತದೆ, ಹೀಗೆ ಅನಾದಿ ಸಂತಾನವು ನಡೆದು ಬರುತ್ತದೆ. ಯಾವಾಗ ಇಷ್ಟ ದೇವತಾದಿಗಳ ಭಕ್ತಿ, ಜೀವದಯೆ, ಉಪಕಾರ ಮಂದಕಷಾಯರೂಪದ ಪರಿಣಮನ ಮಾಡುತ್ತದೆ ಆಗ ಶುಭ ಕರ್ಮದ ಬಂಧವಾಗುತ್ತದೆ. ಇದರ ನಿಮಿತ್ತದಿಂದ ದೇವಾದಿಕರ ಪರ್ಯಾಯ ಪಡೆದು ಸ್ವಲ್ಪ ಸುಖಿಯಾಗುತ್ತದೆ. ಯಾವಾಗ ವಿಷಯ-ಕಷಾಯಗಳ ತೀವ್ರ ಪರಿಣಾಮರೂಪದ ಪರಿಣಮನ ಮಾಡುತ್ತದೆ ಆಗ ಪಾಪದ ಬಂಧವಾಗುತ್ತದೆ, ಇದರ ಉದಯದಿಂದ ನರಕಾದಿಗಳ ಪರ್ಯಾಯ ಪಡೆದು ದುಃಖಿಯಾಗುತ್ತದೆ.

ಈ ಪ್ರಕಾರ ಈ ಜೀವನು ಸಂಸಾರದಲ್ಲಿ ಅಶುದ್ಧಭಾವದಿಂದ ಅನಾದಿಕಾಲದಿಂದ ಭ್ರಮಣ ಮಾಡುತ್ತಾನೆ. ಯಾವಾಗ ಪಕ್ವಾಲವು ಬಂದು ಇದರಲ್ಲಿ ಜಿನೇಶ್ವರದೇವ ವೀತರಾಗ ಸರ್ವಜ್ಞರ ಉಪದೇಶದ ಪ್ರಾಪ್ತಿಯಾಗುವುದು ಮತ್ತು ಅದರ ಶುದ್ಧ ರುಚಿ ಪ್ರತೀತಿ ಆಚರಣೆ ಮಾಡಿದಾಗ ಸ್ವ ಮತ್ತು ಪರದ ಭೇದಜ್ಞಾನಮಾಡಿ ಶುದ್ಧ-ಅಶುದ್ಧ ಭಾವದ ಸ್ವರೂಪ ತಿಳಿದುಕೊಂಡು ತನ್ನ ಹಿತ-ಅಹಿತದ ಶ್ರದ್ಧೆ ರುಚಿ ಪ್ರತೀತಿ ಆಚರಣೆ ಮಾಡಿದಾಗ ಶುದ್ಧದರ್ಶನ ಜ್ಞಾನಮಯವಾದ ಶುದ್ಧ ಚೇತನಾ ಪರಿಣಮನವನ್ನು 'ಹಿತ'ವೆಂದು ತಿಳಿದುಕೊಂಡರೆ ಇದರ ಫಲವು ಸಂಸಾರದ ನಿವೃತ್ತಿಯಿದೆಯೆಂದು ತಿಳಿದರೆ ಮತ್ತು ಅಶುದ್ಧಭಾವದ ಫಲವು ಸಂಸಾರವಿದೆಯೆಂದು ತಿಳಿದರೆ ಆಗ ಶುದ್ಧಭಾವದ ಗ್ರಹಣದ ಮತ್ತು ಅಶುದ್ಧಭಾವದ

ತ್ಯಾಗದ ಉಪಾಯಮಾಡುವನು. ಉಪಾಯದ ಸ್ವರೂಪವನ್ನು ಸರ್ವಜ್ಞ ವೀತರಾಗರ ಆಗಮದಲ್ಲಿ ಹೇಳಿರುವಂತೆ ಮಾಡಬೇಕು.

ಇದರ ಸ್ವರೂಪವನ್ನು ನಿಶ್ಚಯವ್ಯವಹಾರಾತ್ಮಕ ಸಮ್ಯಗ್ದರ್ಶನ-ಜ್ಞಾನ-ಚಾರಿತ್ರ ಸ್ವರೂಪ ಮೋಕ್ಷಮಾರ್ಗವೆಂದು ಹೇಳಿದೆ, ಶುದ್ಧಸ್ವರೂಪದ ಶ್ರದ್ಧೆ ಜ್ಞಾನ ಚಾರಿತ್ರಕ್ಕೆ 'ನಿಶ್ಚಯ'ವೆಂದು ಹೇಳಿದೆ ಮತ್ತು ಸರ್ವಜ್ಞ ವೀತರಾಗ ಜಿನದೇವರು ಹಾಗೂ ಅವರ ವಚನ ಮತ್ತು ಆ ವಚನಗಳಿಗೆ ಅನುಸರಿಸಿ ಪ್ರವರ್ತಿಸುವಂಥ ಮುನಿ ಶ್ರಾವಕರುಗಳ ಭಕ್ತಿ ವಿನಯ ವಂದನೆ ವೈಯಾವೃತ್ತ ಮಾಡುವುದು ಅದು 'ವ್ಯವಹಾರ'ವಿದೆ, ಏಕೆಂದರೆ ಮೋಕ್ಷಮಾರ್ಗದಲ್ಲಿ ಪ್ರವರ್ತಿಸುವವರಿಗೆ ಇದು ಉಪಕಾರಿಯಿದೆ. ಉಪಕಾರಿಯ ಉಪಕಾರ ಮನ್ನಿಸುವುದು ನ್ಯಾಯವಿದೆ, ಉಪಕಾರದ ಲೋಪಮಾಡುವುದು ಅನ್ಯಾಯವಿದೆ. ಸ್ವರೂಪದ ಸಾಧಕನು ಅಹಿಂಸೆ ಮೊದಲಾದ ಮಹಾವ್ರತ ಹಾಗೂ ರತ್ನತ್ರಯರೂಪದ ಪ್ರವೃತ್ತಿ, ಸಮಿತಿ, ಗುಪ್ತಿರೂಪವಾಗಿ ಪ್ರವರ್ತಿಸುವುದು ಮತ್ತು ಇವುಗಳಲ್ಲಿ ದೋಷತಗಲಿದ ಮೇಲೆ ತನ್ನ ನಿಂದೆ ಗರ್ಹಾದಿಗಳನ್ನು ಮಾಡುವುದು, ಗುರುಗಳು ಕೊಡಲ್ಪಡುವ ಪ್ರಾಯಶ್ಚಿತ್ತ ಮಾಡಿಕೊಳ್ಳುವುದು, ಶಕ್ತಿಗೆ ಅನುಸರಿಸಿ ತಪಸ್ಸು ಮಾಡುವುದು, ಪರೀಷಹ ಸಹಿಸುವುದು, ದಶಲಕ್ಷಣ ಧರ್ಮದಲ್ಲಿ ಪ್ರವರ್ತಿಸುವುದು ಇತ್ಯಾದಿ ಶುದ್ಧಾತ್ಮನಿಗೆ ಅನುಕೂಲ ಕ್ರಿಯಾರೂಪವಾಗಿ ಪ್ರವರ್ತಿಸುವುದು, ಇವುಗಳಲ್ಲಿ ಸ್ವಲ್ಪರಾಗದ ಅಂಶವಿರುವವರೆಗೆ ಶುಭಕರ್ಮದ ಬಂಧವಾಗುತ್ತಿದ್ದರೂ ಅದು ಮುಖ್ಯವಿಲ್ಲ, ಏಕೆಂದರೆ ಇವುಗಳಲ್ಲಿ ಪ್ರವರ್ತಿಸುವವರಿಗೆ ಶುಭಕರ್ಮದ ಫಲದ ಇಚ್ಛೆಯಿರುವುದಿಲ್ಲ, ಆದುದರಿಂದ ಅಬಂಧ ತುಲ್ಯವಿದೆ ಇತ್ಯಾದಿ ಪ್ರವೃತ್ತಿಗಳು ಆಗಮೋಕ್ತವಾದ 'ವ್ಯವಹಾರ ಮೋಕ್ಷಮಾರ್ಗ'ವಿದೆ. ಇದರಲ್ಲಿ ಪ್ರವೃತ್ತಿ ರೂಪದ ಪರಿಣಾಮಗಳಿದ್ದರೂ ನಿವೃತ್ತಿಪ್ರಧಾನವಿರುವುದರಿಂದ ನಿಶ್ಚಯ ಮೋಕ್ಷಮಾರ್ಗದಲ್ಲಿ ವಿರೋಧವಿಲ್ಲ.

ಈ ಪ್ರಕಾರ ನಿಶ್ಚಯ-ವ್ಯವಹಾರಸ್ವರೂಪ ಮೋಕ್ಷಮಾರ್ಗದ ಸಂಕ್ಷೇಪವಿದೆ. ಇದನ್ನೇ [೧]'ಶುದ್ಧಭಾವ'ವೆಂದು ಹೇಳಿದೆ. ಇದರಲ್ಲೂ ಸಮ್ಯಗ್ದರ್ಶನಕ್ಕೆ ಮುಖ್ಯವೆಂದು ಹೇಳಿದೆ, ಏಕೆಂದರೆ ಸಮ್ಯಗ್ದರ್ಶನವಿಲ್ಲದೆ ಎಲ್ಲ ವ್ಯವಹಾರವು ಮೋಕ್ಷದ ಕಾರಣವಾಗಿಲ್ಲ ಮತ್ತು ಸಮ್ಯಗ್ದರ್ಶನದ ವ್ಯವಹಾರದಲ್ಲಿ ಜಿನದೇವರ ಭಕ್ತಿಯು ಮುಖ್ಯವಿದೆ, ಅದು ಸಮ್ಯಗ್ದರ್ಶನವನ್ನು ತಿಳಿಸುವ ಸಲುವಾಗಿ ಮುಖ್ಯ ಚಿಹ್ನವಿದೆ, ಆದುದರಿಂದ ಜಿನಭಕ್ತಿಯನ್ನು ನಿರಂತರ ಮಾಡಬೇಕು ಮತ್ತು ಜಿನಾಜ್ಞೆಯನ್ನು ಆಗಮೋಕ್ತಮಾರ್ಗದಲ್ಲಿ ಪ್ರವರ್ತಿಸಬೇಕೆಂಬುದು ಶ್ರೀ ಗುರುಗಳ ಉಪದೇಶವಿದೆ. ಜಿನಾಜ್ಞೆಯ ಹೊರತಾಗಿ ಉಳಿದವುಗಳೆಲ್ಲವು ಕುಮಾರ್ಗಗಳಿವೆ, ಅವುಗಳ ಪ್ರಸಂಗವನ್ನು ಬಿಟ್ಟು ಬಿಡಬೇಕು, ಹೀಗೆ ಮಾಡುವುದರಿಂದ ಆತ್ಮ ಕಲ್ಯಾಣವಾಗುತ್ತದೆ.

ಬದ್ಧ ಶುಭಾಶುಭ ಕರ್ಮೋದಯದಿ ಸಂಸಾರದಲಿ ಭ್ರಮಿಪನು
ಅನಂತದುಃಖ ಪಡೆದು ಚತುರ್ಗತಿಗಳಲಿ ತಿರುಗುವನು

---

೧ 'ಶುದ್ಧ ಭಾವ'ದ ನಿರೂಪಣೆಯನ್ನು ಎರಡು ಪ್ರಕಾರದಿಂದ ಮಾಡಲಾಗಿದೆ, ಹೇಗೆ, 'ಮೋಕ್ಷಮಾರ್ಗಗಳು ಎರಡಿಲ್ಲ' ದಿದ್ದರೂ ಅದರ ನಿರೂಪಣೆಯು ಎರಡು ಪ್ರಕಾರದ್ದಿದೆ, ಅದೇ ಪ್ರಕಾರ ಶುದ್ಧಭಾವವನ್ನು ಎರಡು ಪ್ರಕಾರದ್ದಾಗಿ ಹೇಳಿರುವಲ್ಲಿ ನಿಶ್ಚಯದಿಂದ ಮತ್ತು ವ್ಯವಹಾರದಿಂದ ಹೇಳಿದೆಯೆಂದು ತಿಳಿಯಬೇಕು. ನಿಶ್ಚಯ ಸಮ್ಯಗ್ದರ್ಶನಾದಿಗಳಿರುವವನಿಗೇ ವ್ಯವಹಾರವು ಮಾನ್ಯವಿದೆ ಮತ್ತು ಅವನಿಗೇ ನಿರತಿಚಾರ ವ್ಯವಹಾರರತ್ನತ್ರಯಾದಿಗಳಲ್ಲಿ ವ್ಯವಹಾರದಿಂದ 'ಶುದ್ಧತ್ವ' ಅಥವಾ 'ಶುದ್ಧಸಂಪ್ರಯೋಗತ್ವ'ದ ಆರೋಪವು ಬರುತ್ತದೆ ಯಾವುದಕ್ಕೆ ವ್ಯವಹಾರದಲ್ಲಿ 'ಶುದ್ಧಭಾವ'ವೆಂದು ಹೇಳಿದೆ, ಅದಕ್ಕೇ ನಿಶ್ಚಯ ಅಪೇಕ್ಷೆಯಿಂದ ಅಶುದ್ಧವೆಂದು ಹೇಳಿದೆ-ವಿರುದ್ಧವಾಗಿ ಹೇಳಿದೆ, ಆದರೆ ವ್ಯವಹಾರದಿಂದ ವ್ಯವಹಾರವು ವಿರುದ್ಧವಿಲ್ಲ.

ಸರ್ವಜ್ಞರ ದೇಶನಾ ಪಡೆದು ಮಿಥ್ಯಾತ್ವಭಾವ ತ್ಯಜಿಸುವನು
ನಿಜಶುದ್ಧಭಾವಧರಿಸಿ ಕರ್ಮಕಿಡಿಸಿ ಮೋಕ್ಷ ಪಡೆವನು

ಮಂಗಲಮಯ ಪರಮಾತಮಾ ಶುದ್ಧಭಾವ ಅವಿಕಾರವಿದೆ
ಅದಕೆರಗಿ ಸ್ವಪದ ಪಡೆಯುವುದರದೇ ನಿರ್ಧಾರವಿದೆ

ಈ ಪ್ರಕಾರ ಭ. ಕುಂದಕುಂದಾಚಾರ್ಯದೇವವಿರಚಿತ ಅಷ್ಟಪಾಹುಡದಲ್ಲಿ ಐದನೆಯ ಭಾವಪಾಹುಡ ಮತ್ತು ಅದರ ಜಯಚಂದ ಛಾಬಡಾಕೃತ ದೇಶಭಾಷಾಮಯ ವಚನಿಕೆಯ ಕನ್ನಡ ಭಾಷಾನುವಾದವು ಸಮಾಪ್ತವಾಯಿತು.

೭

# ಮೋಕ್ಷಪಾಹುಡ

ಪ್ರಾರಂಭದಲ್ಲಿಯೇ ಮಂಗಲದ ಸಲುವಾಗಿ ಸಿದ್ಧರಿಗೆ ನಮಸ್ಕಾರ ಮಾಡುತ್ತಾರೆ, -

ಅಷ್ಟಕರ್ಮಗಳ ನಾಶಮಾಡಿ ಶುದ್ಧಾಷ್ಟಗುಣಗಳ ಪಡೆದು ।
ಸಿದ್ಧರಾದರು ನಿಜಧ್ಯಾನದಿಂ ಬಾಗಿ ಮೋಕ್ಷಸುಖಿಸಿಗಲೆಂದು ॥

ಈ ಪ್ರಕಾರ ಮಂಗಲದ ಸಲುವಾಗಿ ಸಿದ್ಧರಿಗೆ ನಮಸ್ಕಾರಮಾಡಿ ಭ. ಕುಂದಕುಂದಾಚಾರ್ಯದೇವಕೃತ 'ಮೋಕ್ಷಪಾಹುಡ' ಗ್ರಂಥವು ಪ್ರಾಕೃತ ಗಾಥಾಬದ್ಧವಿದೆ, ಅದರ ದೇಶಭಾಷಾಮಯ ವಚನಿಕೆಯನ್ನು ಬರೆಯುತ್ತೇವೆ. ಪ್ರಾರಂಭದಲ್ಲಿಯೇ ಆಚಾರ್ಯದೇವರು ಮಂಗಲದ ಸಲುವಾಗಿ ಪರಮಾತ್ಮನಿಗೆ ನಮಸ್ಕಾರ ಮಾಡುತ್ತಾರೆ, -

ಣಾಣಮಯಂ ಅಪ್ಪಾಣಂ ಉವಲದ್ಧಂ ಜೇಣ ಝಡಿಯಕಮ್ಮೇಣ ।
ಚಇಊಣ ಯ ಪರದವ್ವಂ ಣಮೋ ಣಮೋ ತಸ್ಸ ದೇವಸ್ಸ ॥೧॥

ಜ್ಞಾನಮಯ ಆತ್ಮಾ ಉಪಲಬ್ಧಃ ಯೇನ ಕ್ಷರಿತಕರ್ಮಣಾ ।
ತ್ಯಕ್ತ್ವಾ ಚ ಪರದ್ರವ್ಯಂ ನಮೋ ನಮಸ್ತಸ್ಮೈ ದೇವಾಯ ॥೧॥

ಅರ್ಥ ಃ- ಯಾರು ಪರದ್ರವ್ಯಗಳನ್ನು ಬಿಟ್ಟುಕೊಟ್ಟು ದ್ರವ್ಯಕರ್ಮ, ಭಾವಕರ್ಮ ಮತ್ತು ನೋಕರ್ಮಗಳನ್ನು ಕಳೆದುಕೊಂಡಂತವರಾಗಿ ನಿರ್ಮಲ ಜ್ಞಾನಮಯನಾದ ಆತ್ಮನನ್ನು ಪ್ರಾಪ್ತಮಾಡಿಕೊಂಡಿರುವಂಥ ದೇವರಿಗೆ ನಮಸ್ಕಾರವಿರಲಿ - ನಮಸ್ಕಾರವಿರಲಿ ! ಎರಡು ಬಾರಿ ಹೇಳುವಲ್ಲಿ ಅತ್ಯಂತ ಪ್ರೀತಿಯುಕ್ತವಾದ ಭಾವವನ್ನು ವ್ಯಕ್ತಪಡಿಸಿದ್ದಾರೆ.

ಭಾವಾರ್ಥ ಃ- ಇದು 'ಮೋಕ್ಷಪಾಹುಡ'ದ ಪ್ರಾರಂಭವಿದೆ. ಇಲ್ಲಿ ಯಾರು ಸಮಸ್ತ ಪರದ್ರವ್ಯಗಳನ್ನು ಬಿಟ್ಟುಕೊಟ್ಟು ಸಂಪೂರ್ಣ ಕರ್ಮದ ಅಭಾವಮಾಡಿ ಕೇವಲಜ್ಞಾನಾನಂದಸ್ವರೂಪವಾದ ಮೋಕ್ಷಪದವನ್ನು ಪ್ರಾಪ್ತ ಮಾಡಿಕೊಂಡಿದ್ದಾರೆ

---

ಜ್ಞಾನಮಯನಾದ ಆತ್ಮನನು ಪಡೆದು ಕರ್ಮಗಳನೆಲ್ಲ ಕ್ಷಪಣಮಾಡಿ ।
ಅನಿತು ಪರದ್ರವ್ಯಗಳ ತ್ಯಜಿಸಿದಾ ದೇವನಿಗೆ ನಮೋ ನಮನವಿದೆ ॥೧॥

ಆ ದೇವರಿಗೆ ಮಂಗಲದ ಸಲುವಾಗಿ ನಮಸ್ಕಾರ ಮಾಡಿರುವುದು ಯುಕ್ತವಿದೆ.ಎಲ್ಲಿ ಎಂಥ ಪ್ರಕರಣವಿದೆ ಅಲ್ಲಿ ಅಂಥ ಯೋಗ್ಯತೆಯಿರುತ್ತದೆ. ಇಲ್ಲಿ ಭಾವ-ಮೋಕ್ಷವಂತೂ ಅರಹಂತರಿಗಿದೆ ಮತ್ತು ದ್ರವ್ಯ - ಭಾವಗಳೆಂಬ ಎರಡೂ ಪ್ರಕಾರದ ಮೋಕ್ಷವು ಸಿದ್ಧಪರಮೇಷ್ಠಿಗಳಿಗಿರುವುದರಿಂದ ಈರ್ವರಿಗೂ ನಮಸ್ಕಾರವಿದೆಯೆಂದು ತಿಳಿಯಬೇಕು. ॥೧॥

ಈ ಪ್ರಕಾರ ನಮಸ್ಕಾರಮಾಡಿ ಈಗ ಗ್ರಂಥ ರಚಿಸುವ ಪ್ರತಿಜ್ಞೆ ಮಾಡುತ್ತಾರೆ, -

**ಣಮಿಊಣ ಯ ತಂ ದೇವಂ ಅಣಂತವರಣಾಣದಂಸಣಂ ಸುದ್ಧಂ ।**
**ವೋಚ್ಛ ಪರಮಪ್ಪಾಣಂ ಪರಮಪಯಂ ಪರಮಜೋಈಣಂ ॥೨॥**

**ನತ್ವಾ ಚ ತಂ ದೇವಂ ಅನಂತವರಜ್ಞಾನದರ್ಶನಂ ಶುದ್ಧಮ್ ।**
**ವಕ್ಷ್ಯೇ ಪರಮಾತ್ಮಾನಂ ಪರಮಪದಂ ಪರಮಯೋಗಿನಾಮ್ ॥೨॥**

ಅರ್ಥ :- ಆ ಪೂರ್ವೋಕ್ತ ದೇವರಿಗೆ ನಮಸ್ಕಾರ ಮಾಡಿ, ಪರಮಾತ್ಮ ಆ ಉತ್ಕೃಷ್ಟ ಶುದ್ಧ ಆತ್ಮನಿಗೆ ಪರಮಯೋಗೀಶ್ವರ ಆ ಉತ್ಕೃಷ್ಟ ಯೋಗ್ಯ ಧ್ಯಾನ ಮಾಡುವಂಥ ಮುನಿರಾಜರುಗಳ ಸಲುವಾಗಿ ಹೇಳುವೆನೆಂದು ಆಚಾರ್ಯದೇವರು ಹೇಳುತ್ತಾರೆ. ಆ ಪೂರ್ವೋಕ್ತದೇವರಿಗೆ ಅನಂತ ಮತ್ತು ಶ್ರೇಷ್ಠ ಜ್ಞಾನ-ದರ್ಶನಗಳು ಕಂಡುಬರುತ್ತವೆ, ಅವರು ವಿಶುದ್ಧರಿದ್ದಾರೆ-ಕರ್ಮಮಲದಿಂದ ರಹಿತರಿದ್ದಾರೆ, ಅವರ ಪದವು ಪರಮೋತ್ಕೃಷ್ಟವಿದೆ.

ಭಾವಾರ್ಥ :- ಈ ಗ್ರಂಥದಲ್ಲಿ ಮೋಕ್ಷವನ್ನು ಯಾವ ಕಾರಣದಿಂದ ಪಡೆಯಲಾಗುವುದು ಮತ್ತು ಮೋಕ್ಷಪದವು ಹೇಗಿದೆ ಹಾಗೆ ವರ್ಣನೆ ಮಾಡಲಾಗುವುದು, ಆದುದರಿಂದ ಆ ರೀತಿ ಅದರದೇ ಪ್ರತಿಜ್ಞೆ ಮಾಡಿದೆ. ಯೋಗೀಶ್ವರರುಗಳ ಸಲುವಾಗಿ ಹೇಳಲಾಗುವುದು. ಮೋಕ್ಷಪದವನ್ನು ಶುದ್ಧ ಪರಮಾತ್ಮನ ಧ್ಯಾನದ ಮುಖಾಂತರ ಪ್ರಾಪ್ತಮಾಡಿಕೊಳ್ಳುತ್ತಾರೆ, ಆ ಧ್ಯಾನದ ಯೋಗ್ಯತೆಯು ಯೋಗೀಶ್ವರರುಗಳಲ್ಲಿಯೇ ಮುಖ್ಯರೂಪದಿಂದ ಕಂಡು ಬರುತ್ತದೆ, ಗೃಹಸ್ಥರಿಗೆ ಈ ಧ್ಯಾನವು ಮುಖ್ಯವಿಲ್ಲವೆಂಬುದು ಇದರ ಆಶಯವಿದೆ. ॥೨॥

ಯಾವ ಪರಮಾತ್ಮನನ್ನು ಹೇಳುವ ಪ್ರತಿಜ್ಞೆ ಮಾಡಿದೆ ಅವನನ್ನು ಯೋಗಿ ಧ್ಯಾನಿಮುನಿಯೆಂದು ತಿಳಿದುಕೊಂಡು ಅವನ ಧ್ಯಾನಮಾಡಿ ಪರಮಪದವನ್ನು ಪ್ರಾಪ್ತ ಮಾಡಿಕೊಳ್ಳುತ್ತಾರೆಂದು ಈಗ ಹೇಳುತ್ತಾರೆ, -

**ಜಂ ಜಾಣಿಊಣ ಜೋಈ ಜೋಅತ್ಥೋ ಜೋಇಊಣ ಅಣವರಯಂ ।**
**ಅವ್ವಾಬಾಹಮಣಂತಂ ಅಣೋವಮಂ ಲಹಇ ಣಿವ್ವಾಣಂ ॥೩॥**

---

ಅನಂತವರಜ್ಞಾನದರ್ಶನ ಶುದ್ಧ ಪರಮಪದ ಪಡೆದಾ ದೇವನಿಗೆ ।
ವಿನಮಿಸಿ ನಿರೂಪಿಸುವೆ ಪರಮಾತ್ಮನಿಗೆ ಪರಮಯೋಗೀಶ್ವರನಿಗೆ ॥೨॥

ಅರಿತದಸುಯೋಗಿಯೋಗದಲಿ ಸ್ಥಿರನಿದ್ದು ಸತತದನು ನೋಡುವನು ।
ವಿರಹಿತ ಉಪಮೆ ಅನಂತ ಅವ್ಯಾಬಾಧ ಶಿವಸುಖವ ಪಡೆಯುವನು ॥೩॥

ಯತ್ ಜ್ಞಾತ್ವಾ ಯೋಗೀ ಯೋಗಸ್ಥಃ ದೃಷ್ಟ್ವಾ ಅನವರತಮ್ ।
ಅವ್ಯಾಬಾಧಮನಂತಂ ಅನುಪಮಂ ಲಭತೇ ನಿರ್ವಾಣಮ್ ॥೩॥

ಅರ್ಥ :- ಪರಮಾತ್ಮನನ್ನು ತಿಳಿದುಕೊಂಡು ಯೋಗಿ(ಮುನಿ) ಯೋಗ(ಧ್ಯಾನ)ದಲ್ಲಿ ಸ್ಥಿರರಾಗಿ ನಿರಂತರ ಆ ಪರಮಾತ್ಮನನ್ನು ಅನುಭವಗೋಚರ ಮಾಡಿಕೊಂಡು ನಿರ್ವಾಣಕ್ಕೆ ಪ್ರಾಪ್ತರಾಗುತ್ತಾರೆ. ಆ ನಿರ್ವಾಣವು 'ಅವ್ಯಾಬಾಧ'ವಿದೆ, ಅಲ್ಲಿ ಯಾವುದೇ ಪ್ರಕಾರದ ಬಾಧೆಯಿಲ್ಲ. 'ಅನಂತ'ವಿದೆ, ಅದರ ನಾಶವಾಗುವುದಿಲ್ಲ. 'ಅನುಪಮ'ವಿದೆ, ಅದಕ್ಕೆ ಯಾವುದರ ಉಪಮೆಯು ಅನ್ವಯಿಸುವುದಿಲ್ಲ.

ಭಾವಾರ್ಥ :- ಯಾರನ್ನು ಧ್ಯಾನದಲ್ಲಿ ಮುನಿಗಳು ನಿರಂತರ ಅನುಭವ ಮಾಡಿ ಕೇವಲಜ್ಞಾನ ಪಡೆದು ನಿರ್ವಾಣಕ್ಕೆ ಪ್ರಾಪ್ತರಾಗುತ್ತಾರೆ ಅಂಥ ಪರಮಾತ್ಮನನ್ನು ಮುಂದೆ ಹೇಳುವೆವೆಂದು ಆಚಾರ್ಯದೇವರು ಹೇಳುತ್ತಾರೆ. ಆ ಪರಮಾತ್ಮನ ಧ್ಯಾನದಿಂದ ಮೋಕ್ಷವಾಗುತ್ತದೆಯೆಂಬುದು ಇಲ್ಲಿನ ತಾತ್ಪರ್ಯವಿದೆ. ॥೩॥

ಪರಮಾತ್ಮನು ಹೇಗಿದ್ದಾನೆಂಬುದನ್ನು ತಿಳಿಸಿಕೊಡುವ ಸಲುವಾಗಿ ಆತ್ಮನನ್ನು ಮೂರು ಪ್ರಕಾರವಾಗಿ ತೋರಿಸಿಕೊಡುತ್ತಾರೆ, –

ತಿಪಯಾರೋ ಸೋ ಅಪ್ಪಾ ಪರಮಂತರಬಾಹಿರೋ [೧]ಹು ದೇಹೀಣಂ ।
ತತ್ಥ ಪರೋ ಝಾಇಜ್ಜಇ ಅಂತೋವಾಏಣ ಚಇವಿ ಬಹಿರಪ್ಪಾ ॥೪॥

ತ್ರಿಪ್ರಕಾರಃ ಸ ಆತ್ಮಾ ಪರಮಂತಃ ಬಹಿಃ ಸ್ಫುಟಂ ದೇಹಿನಾಮ್ ।
ತತ್ರ ಪರಂ ಧ್ಯಾಯತೇ ಅಂತರುಪಾಯೇನ ತ್ಯಜ ಬಹಿರಾತ್ಮಾನಮ್ ॥೪॥

ಅರ್ಥ :- ಆ ಪ್ರಾಣಿಗಳ ಆತ್ಮನು ಅಂತರಾತ್ಮ, ಬಹಿರಾತ್ಮ ಮತ್ತು ಪರಮಾತ್ಮನೆಂದು ಮೂರು ಪ್ರಕಾರದವನಿದ್ದಾನೆ. ಅಂತರಾತ್ಮನ ಉಪಾಯದ ಮುಖಾಂತರ ಬಹಿರಾತ್ಮತೆಯನ್ನು ಬಿಟ್ಟುಕೊಟ್ಟು ಪರಮಾತ್ಮನ ಧ್ಯಾನ ಮಾಡಬೇಕಾಗುವುದು.

ಭಾವಾರ್ಥ :- ಬಹಿರಾತ್ಮತನವನ್ನು ಬಿಟ್ಟುಕೊಟ್ಟು ಅಂತರಾತ್ಮರೂಪವಾಗಿ ಪರಮಾತ್ಮನ ಧ್ಯಾನ ಮಾಡಬೇಕು, ಇದರಿಂದ ಮೋಕ್ಷವು ಪ್ರಾಪ್ತವಾಗುತ್ತದೆ. ॥೪॥

ಈಗ ಮೂರು ಪ್ರಕಾರದ ಆತ್ಮನ ಸ್ವರೂಪ ತಿಳಿಸಿಕೊಡುತ್ತಾರೆ, –

ಅಕ್ಖಾಣಿ ಬಾಹಿರಪ್ಪಾ ಅಂತರಅಪ್ಪಾ ಹು ಅಪ್ಪಸಂಕಪ್ಪೋ ।
ಕಮ್ಮಕಲಂಕವಿಮುಕ್ಕೋ ಪರಮಪ್ಪಾ ಭಣ್ಣಏ ದೇವೋ ॥೫॥

---

ದೇಹಿಗಳ ಆತ್ಮ ಪರಮ ಅಂತರ ಬಹಿರವೆಂದು ಮೂರು ವಿಧವಿಹನು ।
ಬಹಿರಾತ್ಮತೆಯನೀಗಿ ಅಂತರಾತ್ಮನಿಂ ಪರಮಾತ್ಮನ ಧ್ಯಾನ ಮಾಡುವುದು ॥೪॥

ಇರುವನಕ್ಷದೀ ಬಹಿರಾತ್ಮ ಸ್ವಸಂವೇದನ ಸಂಕಲ್ಪವದು ಅಂತರಾತ್ಮ ।
ಪರಮಾತ್ಮಕರ್ಮಕಲಂಕ ವಿಮುಕ್ತನಿರುವವನೇ ದೇವನಿರುವನು ॥೫॥

---

೧ ಸಂಸ್ಕೃತ ಪ್ರತಿಯಲ್ಲಿ 'ಹು ಹೇಊಣಂ' ಎಂಬ ಪಾಠವಿದೆ. ಆದರ ಸಂಸ್ಕೃತವು 'ತು ಹಿತ್ವಾ' ಎಂದಿದೆ.

ಅಕ್ಷಾಣಿ ಬಹಿರಾತ್ಮಾ ಅಂತರಾತ್ಮಾ ಸ್ಫುಟಂ ಆತ್ಮಸಂಕಲ್ಪಃ ।
ಕರ್ಮಕಲಂಕವಿಮುಕ್ತಃ ಪರಮಾತ್ಮಾ ಭಣ್ಯತೇ ದೇವಃ ॥೫॥

ಭಾವಾರ್ಥ ಃ- ಅಕ್ಷ ಎಂದರೆ ಸ್ಪರ್ಶನ ಮೊದಲಾದ ಇಂದ್ರಿಯಗಳಂತೂ ಬಾಹ್ಯ ಆತ್ಮವಿವೆ, ಏಕೆಂದರೆ ಇಂದ್ರಿಯಗಳಿಂದ ಸ್ಪರ್ಶ ಮೊದಲಾದ ವಿಷಯಗಳ ಜ್ಞಾನವಾಗುತ್ತದೆ ಆಗ ಆ ಇಂದ್ರಿಯಗಳನ್ನೇ ಆತ್ಮನೆಂದು ಜನರು ಹೇಳುತ್ತಾರೆ, ಈ ಪ್ರಕಾರ ಇಂದ್ರಿಯಗಳಿಗೆ ಬಾಹ್ಯ ಆತ್ಮನೆಂದು ಹೇಳುತ್ತಾರೆ. ಅಂತರಾತ್ಮನಿದ್ದಾನೆ ಅದು ಅಂತರಂಗದಲ್ಲಿ ಆತ್ಮನ ಪ್ರಕಟ ಅನುಭವಗೋಚರ ಸಂಕಲ್ಪವಿದೆ, ಶರೀರ ಮತ್ತು ಇಂದ್ರಿಯಗಳಿಂದ ಭಿನ್ನವಾದ ಮನಸ್ಸಿನ ಮುಖಾಂತರ ನೋಡುವವನು, ತಿಳಿಯುವವನಿದ್ದಾನೆ ಅವನು ನಾನೇ ಇದ್ದೇನೆಂಬ ಸ್ವಸಂವೇದನಗೋಚರ ಸಂಕಲ್ಪವೇ ಅಂತರಾತ್ಮನಿದ್ದಾನೆ. ಪರಮಾತ್ಮನು ಆ ದ್ರವ್ಯಕರ್ಮ ಜ್ಞಾನಾವರಣಾದಿಗಳು ಹಾಗೂ ಭಾವಕರ್ಮ ಆ ರಾಗ-ದ್ವೇಷ-ಮೋಹಾದಿಗಳು ಮತ್ತು ನೋಕರ್ಮ ಆ ಶರೀರ ಮೊದಲಾದ ಕರ್ಮಕಲಂಕಮಲದಿಂದ ವಿಮುಕ್ತ-ರಹಿತ, ಅನಂತಜ್ಞಾನಾದಿಗುಣಸಹಿತನೇ ಪರಮಾತ್ಮನಿದ್ದಾನೆ, ಅವನೇ ದೇವನಿದ್ದಾನೆ, ಅನ್ಯರಿಗೆ ದೇವನೆಂದು ಹೇಳುವುದು ಅದು ಉಪಚಾರವಿದೆ.

ಭಾವಾರ್ಥ ಃ- ಇಂದ್ರಿಯಗಳನ್ನು ಬಾಹ್ಯ ಆತ್ಮನೆಂದು ಹೇಳಿದೆ ಮತ್ತು ದೇಹದಲ್ಲಿ ಸ್ಥಿರವಿರುವ ಮನಸ್ಸಿನ ಮುಖಾಂತರ ನೋಡುವ ತಿಳಿಯುವ ಕಂಡುಬರುವಂಥ ಸಂಕಲ್ಪವಿದೆ ಅವನು ಅಂತರಾತ್ಮನಿದ್ದಾನೆ, ಇನ್ನು ಕರ್ಮಕಲಂಕದಿಂದ ರಹಿತನಾದವನನ್ನು ಪರಮಾತ್ಮನೆಂದು ಹೇಳಿದೆ. ಈ ಜೀವನೇ ಎಲ್ಲಿಯವರೆಗೆ ಬಾಹ್ಯ ಶರೀರಾದಿಗಳನ್ನೇ ಆತ್ಮನೆಂದು ತಿಳಿಯುತ್ತಾನೆ ಅಲ್ಲಿಯವರೆಗಂತೂ ಬಹಿರಾತ್ಮನಿದ್ದಾನೆ, ಸಂಸಾರಿಯಿದ್ದಾನೆ, ಇದೇ ಜೀವನು ಯಾವಾಗ ಅಂತರಂಗದಲ್ಲಿ ಆತ್ಮನನ್ನು ತಿಳಿಯುತ್ತಾನೆ ಆಗ ಇವನು ಸಮ್ಯಗ್ದೃಷ್ಟಿಯಾಗುತ್ತಾನೆ, ಅಂತರಾತ್ಮನಾಗುತ್ತಾನೆ ಮತ್ತು ಈ ಜೀವನು ಯಾವಾಗ ಪರಮಾತ್ಮನ ಧ್ಯಾನದಿಂದ ಕರ್ಮಕಲಂಕದಿಂದ ರಹಿತನಾಗುತ್ತಾನೆ ಆಗ ಮೊದಲು ಕೇವಲಜ್ಞಾನ ಪಡೆದು ಅರಹಂತನಾಗುತ್ತಾನೆ, ನಂತರ ಸಿದ್ಧಪದವನ್ನು ಪ್ರಾಪ್ತಮಾಡಿಕೊಳ್ಳುತ್ತಾನೆ, ಇವರೀರ್ವರನ್ನು ಪರಮಾತ್ಮನೆಂದು ಹೇಳುತ್ತಾರೆ. ಅರಹಂತರಂತೂ ಭಾವಕಲಂಕದಿಂದ ರಹಿತರಿದ್ದಾರೆ ಮತ್ತು ಸಿದ್ಧರು ದ್ರವ್ಯ-ಭಾವರೂಪವೆಂದು ಎರಡೂ ಪ್ರಕಾರದ ಕಲಂಕದಿಂದ ರಹಿತರಿದ್ದಾರೆಂದು ತಿಳಿಯಬೇಕು. ॥೫॥

ಈಗ ವಿಶೇಷಣದ ಮುಖಾಂತರ ಆ ಪರಮಾತ್ಮನ ಸ್ವರೂಪ ಹೇಳುತ್ತಾರೆ, -

ಮಲರಹಿಓ ಕಲಚತ್ತೋ ಅಣಿಂದಿಓ ಕೇವಲೋ ವಿಸುದ್ಧಪ್ಪಾ ।
ಪರಮೇಟ್ಠಿ ಪರಮಜಿಣೋ ಸಿವಂಕರೋ ಸಾಸಓ ಸಿದ್ಧೋ ॥೬॥

ಮಲರಹಿತಃ ಕಲತ್ಯಕ್ತಃ ಅನಿಂದ್ರಿಯಃ ಕೇವಲಃ ವಿಶುದ್ಧಾತ್ಮಾ ।
ಪರಮೇಷ್ಠಿ ಪರಮಜಿನಃ ಶಿವಂಕರಃ ಶಾಶ್ವತಃ ಸಿದ್ಧಃ ॥೬॥

ಅರ್ಥ ಃ- ಪರಮಾತ್ಮನು ಮಲರಹಿತನಿದ್ದಾನೆ ಎಂದರೆ ದ್ರವ್ಯಕರ್ಮ ಭಾವಕರ್ಮರೂಪದ ಮಲದಿಂದ ರಹಿತನಿದ್ದಾನೆ, ಕಲತ್ಯಕ್ತ (-ಶರೀರರಹಿತ) ನಿದ್ದಾನೆ, ಅನಿಂದ್ರಿಯ (-ಇಂದ್ರಿಯರಹಿತ)ನಿದ್ದಾನೆ, ಅಥವಾ ಅನಿಂದಿತ

---

ಶರೀರಮುಕ್ತ ಮಲರಹಿತ ಅನಿಂದ್ರಿಯ ಕೇವಲ ವಿಶುದ್ಧಾತ್ಮರಿಹರು ।
ಪರಮೇಷ್ಠಿ ಪರಮಜಿನ ಶಿವಂಕರ ಶಾಶ್ವತರಾದ ಸಿದ್ಧರಿರುವರು ॥೬॥

ಎಂದರೆ ಯಾವುದೇ ಪ್ರಕಾರ ನಿಂದಾಯುಕ್ತನಿಲ್ಲ ಎಲ್ಲ ಪ್ರಕಾರದಿಂದ ಪ್ರಶಂಸಾಯೋಗ್ಯನಿದ್ದಾನೆ, ಕೇವಲ (-ಕೇವಲಜ್ಞಾನಮಯ)ನಿದ್ದಾನೆ, ವಿಶುದ್ಧಾತ್ಮನಿದ್ದಾನೆ- ಅವನ ಆತ್ಮನ ಸ್ವರೂಪವು ವಿಶೇಷರೂಪದಿಂದ ಶುದ್ಧವಿದೆ, ಜ್ಞಾನದಲ್ಲಿ ಜ್ಞೇಯಗಳ ಆಕಾರಗಳು ಹೊಳೆಯುತ್ತಿದ್ದರೂ ಅವುಗಳ ರೂಪವಾಗುವುದಿಲ್ಲ ಮತ್ತು ಅವರಲ್ಲಿ ರಾಗ-ದ್ವೇಷಗಳಿಲ್ಲ, ಪರಮೇಷ್ಠಿಯಿದ್ದಾರೆ ಪರಮಪದದಲ್ಲಿ ಸ್ಥಿರರಿದ್ದಾರೆ ಪರಮ ಜಿನರಿದ್ದಾರೆ, ಸಮಸ್ತ ಕರ್ಮಗಳನ್ನು ಜಯಿಸಿದ್ದಾರೆ, ಶಿವಂಕರರಿದ್ದಾರೆ- ಭವ್ಯಜೀವರುಗಳಿಗೆ ಪರಮ ಮಂಗಲ ಹಾಗೂ ಮೋಕ್ಷ ಮಾಡಿಸುತ್ತಾರೆ ಶಾಶ್ವತರಿದ್ದಾರೆ (ಅವಿನಾಶಿಯಿದ್ದಾರೆ), ಸಿದ್ಧರಿದ್ದಾರೆ-ತಮ್ಮ ಸ್ವರೂಪದ ಸಿದ್ಧಿಮಾಡಿಕೊಂಡು ನಿರ್ವಾಣ ಪದವಿಗೆ ಪ್ರಾಪ್ತರಾಗಿದ್ದಾರೆ.

ಭಾವಾರ್ಥ :- ಹೀಗೆ ಪರಮಾತ್ಮರಿದ್ದಾರೆ, ಯಾರು ಈ ಪ್ರಕಾರದ ಪರಮಾತ್ಮನ ಧ್ಯಾನ ಮಾಡುತ್ತಾರೆ ಅವರು ಹೀಗೆಯೇ ಆಗಿ ಹೋಗುತ್ತಾರೆ. ॥೬॥

ಮುಂದೆ ಕೂಡ ಇದೇ ಉಪದೇಶ ಮಾಡುತ್ತಾರೆ, -

ಆರುಹವಿ ಅಂತರಪ್ಪಾ ಬಾಹಿರಪ್ಪಾ ಛಂಡಿಊಣ ತಿವಿಹೇಣ ।
ಝಾಇಜ್ಜಇ ಪರಮಪ್ಪಾ ಉವಇಟ್ಠಂ ಜಿಣವರಿಂದೇಹಿಂ ॥೭॥

ಆರುಹ್ಯ ಅಂತರಾತ್ಮಾನಂ ಬಹಿರಾತ್ಮಾನಂ ತ್ಯಕ್ತ್ವಾ ತ್ರಿವಿಧೇನ ।
ಧ್ಯಾಯತೇ ಪರಮಾತ್ಮಾ ಉಪದಿಷ್ಟಂ ಜಿನವರೇಂದ್ರೈಃ ।.೭॥

ಅರ್ಥ :- ಮನ-ವಚನ-ಕಾಯಗಳಿಂದ ಬಹಿರಾತ್ಮತೆಯನ್ನು ಬಿಟ್ಟುಕೊಟ್ಟು ಅಂತರಾತ್ಮನ ಆಶ್ರಯ ಪಡೆದು ಪರಮಾತ್ಮನ ಧ್ಯಾನ ಮಾಡಿರೆಂಬುದು ಜಿನವರೇಂದ್ರ ತೀರ್ಥಂಕರ ಪರಮದೇವರು ಉಪದೇಶಮಾಡಿದ್ದಾರೆ.

ಭಾವಾರ್ಥ :- ಪರಮಾತ್ಮನ ಧ್ಯಾನ ಮಾಡುವ ಉಪದೇಶವನ್ನು ಮುಖ್ಯಮಾಡಿ ಹೇಳಿದೆ, ಇದರಿಂದಲೇ ಮೋಕ್ಷ ಪಡೆಯುತ್ತಾರೆ. ॥೭॥

ಈಗ ಬಹಿರಾತ್ಮನ ಪ್ರವೃತ್ತಿಯನ್ನು ಹೇಳುತ್ತಾರೆ, -

ಬಹಿರತ್ಥೇ ಫುರಿಯಮಣೋ ಇಂದಿಯದಾರೇಣ [೧]ಣಿಯಸರೂವಚುಓ ।
ಣಿಯದೇಹಂ ಅಪ್ಪಾಣಂ ಅಜ್ಝವಸದಿ ಮೂಢದಿಟ್ಠೀ ಓ ॥೮॥

---

ಮನ-ವಚನ-ಕಾಯದಿಂ ಬಹಿರಾತ್ಮತೆಯ ತ್ಯಜಿಸಿ ಅಂತರಾತ್ಮಾರೂಢರಾಗಿ ।
ಧ್ಯಾನಿಸಿರಿ ಪರಮಾತ್ಮನನೆಂದು ಜಿನವರದೇವ ಉಪದೇಶಿಸಿಹರು ॥೭॥
ನಿಜಸ್ವರೂಪಚ್ಯುತನಿಂದ್ರಿಯದ್ವಾರದಿಂ ಬಾಹ್ಯಾರ್ಥ ವಿಸ್ಫುರಿತ ಮನವಿದ್ದು ।
ನಿಜದೇಹವನೆ ಆತ್ಮನೆಂದಧ್ಯವಸಾನ ಮಾಡುವನು ಮೂಢ ದೃಷ್ಟಿಯಿಂದ ॥೮॥

---

೧ 'ಚಓ' ದ ಸ್ಥಾನದಲ್ಲಿ 'ಚುಏ' ಪಾಠಾಂತರವಿದೆ.

ಬಹಿರರ್ಥೇ ಸ್ಫುರಿತಮನಾಃ ಇಂದ್ರಿಯದ್ವಾರೇಣ ನಿಜಸ್ವರೂಪಚ್ಯುತಃ ।
ನಿಜದೇಹಂ ಆತ್ಮಾನಂ ಅಧ್ಯವಸ್ಯತಿ ಮೂಢದೃಷ್ಟಿಸ್ತು ।।೮।।

ಅರ್ಥ :- ಮೂಢದೃಷ್ಟಿ ಅಜ್ಞಾನಿ ಮೋಹಿ ಮಿಥ್ಯಾದೃಷ್ಟಿಯಿದ್ದಾನೆ ಅವನು ಬಾಹ್ಯಪದಾರ್ಥಗಳಾದ ಧನ, ಧಾನ್ಯ, ಕುಟುಂಬ ಮೊದಲಾದ ಇಷ್ಟಪದಾರ್ಥಗಳಲ್ಲಿ ಸ್ಫುರಿತ (ತತ್ಪರ) ಮನಸ್ಸುಳ್ಳವನಿದ್ದಾನೆ ಮತ್ತು ಇಂದ್ರಿಯಗಳ ದ್ವಾರದಿಂದ ತನ್ನ ಸ್ವರೂಪದಿಂದ ಚ್ಯುತನಿದ್ದಾನೆ ಹಾಗೂ ಇಂದ್ರಿಯಗಳನ್ನೇ ಆತ್ಮನೆಂದು ತಿಳಿಯುತ್ತಾನೆ ಹೀಗಾಗುತ್ತ ತನ್ನ ದೇಹವನ್ನೇ ಆತ್ಮನೆಂದು ತಿಳಿಯುತ್ತಾನೆ ನಿಶ್ಚಯಮಾಡುತ್ತಾನೆ, ಈ ಪ್ರಕಾರ ಮಿಥ್ಯಾದೃಷ್ಟಿಯು ಬಹಿರಾತ್ಮನಿದ್ದಾನೆ.

ಭಾವಾರ್ಥ :- ಹೀಗೆ ಬಹಿರಾತ್ಮ ಭಾವವಿದ್ದು ಅದನ್ನು ಬಿಟ್ಟುಕೊಡಬೇಕು. ।।೮।।

ಮಿಥ್ಯಾದೃಷ್ಟಿಯು ತನ್ನ ದೇಹದ ಸಮಾನ ಇತರರ ದೇಹವನ್ನು ನೋಡಿ ಅದನ್ನು ಇತರರ ಆತ್ಮನೆಂದು ಮನ್ನಿಸುತ್ತಾನೆಂಬುದನ್ನು ಈಗ ಹೇಳುತ್ತಾರೆ, –

ಣಿಯದೇಹಸರಿಚ್ಛಂ[1] ಪಿಚ್ಛಿಊಣ ಪರವಿಗ್ಗಹಂ ಪಯತ್ತೇಣ ।
ಅಚ್ಚೇಯಣಂ ಪಿ ಗಹಿಯಂ ಝಾಇಜ್ಜಇ ಪರಮಭಾವೇಣ ।।೯।।

ನಿಜದೇಹಸದೃಶಂ ದೃಷ್ಟ್ವಾ ಪರವಿಗ್ರಹಂ ಪ್ರಯತ್ನೇನ ।
ಅಚೇತನಂ ಅಪಿ ಗೃಹೀತಂ ಧ್ಯಾಯತೇ ಪರಮಭಾವೇನ ।।೯।।

ಅರ್ಥ :- ಮಿಥ್ಯಾದೃಷ್ಟಿ ಪುರುಷನು ತನ್ನ ದೇಹದ ಸಮಾನವಾಗಿ ಇತರರ ದೇಹವನ್ನು ನೋಡಿ ಈ ದೇಹವು ಅಚೇತನವಿದ್ದರೂ ಕೂಡ ಮಿಥ್ಯಾಭಾವದಿಂದ ಆತ್ಮಭಾವದ ಮುಖಾಂತರ ದೊಡ್ಡ ಯತ್ನಮಾಡಿ ಪರರ ಆತ್ಮವೆಂದು ಧ್ಯಾನಿಸುತ್ತಾನೆ ಎಂದರೆ ತಿಳಿಯುತ್ತಾನೆ.

ಭಾವಾರ್ಥ :- ಬಹಿರಾತ್ಮನು ಮಿಥ್ಯಾದೃಷ್ಟಿಯ ಮಿಥ್ಯಾತ್ವಕರ್ಮದ ಉದಯದಿಂದ (ಉದಯದ ವಶವಾಗುವುದರಿಂದ) ಮಿಥ್ಯಾಭಾವವಿರುವುದರಿಂದ ಅವನು ತನ್ನ ದೇಹವನ್ನು ಆತ್ಮನೆಂದು ತಿಳಿಯುತ್ತಾನೆ ಅದೇ ಪ್ರಕಾರ ಪರರ ದೇಹವು ಅಚೇತನವಿದ್ದರೂ ಕೂಡ ಅದನ್ನು ಪರರ ಆತ್ಮವೆಂದು ಮನ್ನಿಸುತ್ತಾನೆ (ಎಂದರೆ ಪರರನ್ನೂ ದೇಹಾತ್ಮಬುದ್ಧಿಯಿಂದ ಮನ್ನಿಸುತ್ತಿದ್ದಾನೆ ಮತ್ತು ಹೀಗೆ ಮಿಥ್ಯಾತ್ವಭಾವದೊಡನೆ ಧ್ಯಾನ ಮಾಡುತ್ತಾನೆ) ಮತ್ತು ಅದರಲ್ಲಿ ಅಧಿಕ ಯತ್ನ ಮಾಡುತ್ತಿರುವುದರಿಂದ ಇಂಥ ಭಾವವನ್ನು ಬಿಟ್ಟು ಕೊಡಬೇಕೆಂಬುದು ತಾತ್ಪರ್ಯವಿದೆ. ।।೯।।

ಇಂಥ ಮನ್ನಣೆಯಿಂದಲೇ ಬೇರೆ ಮನುಷ್ಯ ಮೊದಲಾದವರಲ್ಲಿ ಮೋಹದ ಪ್ರವೃತ್ತಿಯಾಗುತ್ತದೆಂಬುದನ್ನು ಈಗ ಹೇಳುತ್ತಾರೆ, –

---

ನಿಜದೇಹಸದೃಶ ಪರದೇಹವನು ನೋಡಿ ಮೂಢನಧಿಕ ಯತ್ನಮಾಡಿ ।
ನಿಜದಿಂದದು ಅಚೇತನವಿದ್ದರದನು ಆತ್ಮತನದಿಂ ಮನ್ನಿಸುವನು ।।೯।।

---

೧ 'ಸರಿತ್ಥಂ' ಪಾಠಾಂತರ 'ಸಹಿಸಂ' ಇದೆ.

ಸಪರಜ್ಝವಸಾಏಣಂ ದೇಹೇಸು ಯ ಅವಿದಿದತ್ಥಮಪ್ಪಾಣಂ ।
ಸುಯದಾರಾಈವಿಸಏ ಮಣುಯಾಣಂ ವಡ್ಢಏ ಮೋಹೋ ॥೧೦॥

ಸ್ವಪರಾಧ್ಯವಸಾಯೇನ ದೇಹೇಷು ಚ ಅವಿದಿತಾರ್ಥಮಾತ್ಮಾನಮ್ ।
ಸುತದಾರಾದಿವಿಷಯೇ ಮನುಜಾನಾಂ ವರ್ದ್ಧತೇ ಮೋಹಃ ॥೧೦॥

ಅರ್ಥ ಃ- ಈ ಪ್ರಕಾರ ದೇಹದಲ್ಲಿ ಸ್ವ-ಪರದ ಅಧ್ಯವಸಾಯ (ನಿಶ್ಚಯ)ದ ಮುಖಾಂತರ ಮನುಷ್ಯರು ಮಕ್ಕಳು ಪತ್ನೀ ಮೊದಲಾದ ಜೀವರುಗಳಲ್ಲಿ ಮೋಹದ ಪ್ರವೃತ್ತಿ ಮಾಡುತ್ತಾರೆ. ಆ ಮನುಷ್ಯರು ಪದಾರ್ಥದ ಸ್ವರೂಪವನ್ನು (ಎಂದರೆ ಆತ್ಮನನ್ನು) ತಿಳಿಯದಂಥವರಿದ್ದಾರೆ.

[ಅರ್ಥ ಃ- ಈ ಪ್ರಕಾರ ದೇಹದಲ್ಲಿ ಸ್ವ-ಪರದ ಅಧ್ಯವಸಾಯ (ನಿಶ್ಚಯ)ದ ಮುಖಾಂತರ ಆ ಮನುಷ್ಯರು ಪದಾರ್ಥದ ಸ್ವರೂಪವನ್ನು ತಿಳಿದಿಲ್ಲ, ಅವರಿಗೆ ಮಕ್ಕಳು ಪತ್ನಿ ಮೊದಲಾದ ಜೀವರುಗಳಲ್ಲಿ ಮೋಹದ ಪ್ರವೃತ್ತಿಯಾಗುತ್ತದೆ.] (ಭಾಷಾ ಪರಿವರ್ತನಕಾರರು ಈ ಅರ್ಥ ಬರೆದಿದ್ದಾರೆ.)

ಭಾವಾರ್ಥ ಃ- ಯಾವ ಮನುಷ್ಯರು ಜೀವ ಅಜೀವ ಪದಾರ್ಥದ ಯಥಾರ್ಥ ಸ್ವರೂಪವನ್ನು ತಿಳಿದಿಲ್ಲ ಅವರಿಗೆ ದೇಹದಲ್ಲಿ ಸ್ವಪರಾಧ್ಯವಸಾಯವಿದೆ. ಅವರು ತಮ್ಮ ದೇಹವನ್ನು ತಮ್ಮ ಆತ್ಮವೆಂದು ಮನ್ನಿಸುತ್ತಾರೆ ಮತ್ತು ಪರರ ದೇಹವನ್ನು ಪರರ ಆತ್ಮವೆಂದು ತಿಳಿಯುತ್ತಾರೆ, ಅವರಿಗೆ ಪುತ್ರ ಸ್ತ್ರೀ ಮೊದಲಾದ ಕುಟುಂಬದವರಲ್ಲಿ ಮೋಹ (ಮಮತ್ವ) ವಿರುತ್ತದೆ. ಅವರು ಜೀವ ಅಜೀವದ ಸ್ವರೂಪವನ್ನು ತಿಳಿದಾಗ ದೇಹವನ್ನು ಅಜೀವವೆಂದು ಮನ್ನಿಸುವರು, ಆತ್ಮನನ್ನು ಅಮೂರ್ತಿಕ ಚೈತನ್ಯವೆಂದು ತಿಳಿಯುವರು, ತಮ್ಮ ಆತ್ಮನನ್ನು ತಮ್ಮದೆಂದು ಮನ್ನಿಸುವರು, ಮತ್ತು ಪರರ ಆತ್ಮನನ್ನು ಪರವೆಂದು ತಿಳಿಯುವರು, ಆಗ ಪರದಲ್ಲಿ ಮಮತ್ವವಾಗುವುದಿಲ್ಲ. ಆದುದರಿಂದ ಜೀವ ಮೊದಲಾದ ಪದಾರ್ಥಗಳ ಸ್ವರೂಪವನ್ನು ಸರಿಯಾಗಿ ತಿಳಿದುಕೊಂಡು ಮೋಹ ಮಾಡಬಾರದೆಂದು ತಿಳಿಸಿಕೊಡಲಾಗಿದೆ. ॥೧೦॥

ಮೋಹಕರ್ಮದ ಉದಯದಿಂದ (-ಉದಯದಲ್ಲಿ ಯುಕ್ತವಾಗುವುದರಿಂದ) ಮಿಥ್ಯಾಜ್ಞಾನ ಮತ್ತು ಮಿಥ್ಯಾ ಭಾವಗಳಾಗುತ್ತವೆ ಅದರಿಂದ ಮುಂದಿನ ಭವದಲ್ಲೂ ಆ ಮನುಷ್ಯನು ದೇಹವನ್ನು ಅಪೇಕ್ಷಿಸುತ್ತಾನೆಂದು ಈಗ ಹೇಳುತ್ತಾರೆ,-

ಮಿಚ್ಛಾಣಾಣೇಸು ರಓ ಮಿಚ್ಛಾಭಾವೇಣ ಭಾವಿಓ ಸಂತೋ ।
ಮೋಹೋದಏಣ ಪುಣರವಿ ಅಂಗಂ [೧]ಸಂ ಮಣ್ಣಏ ಮಣುಓ ॥೧೧॥

---

ಪದಾರ್ಥಸ್ವರೂಪ ತಿಳಿಯದೆ ದೇಹದಲಿ ಸ್ವಪರಾಧ್ಯವಸಾಯ ಮಾಳ್ಪರು ।
ಸುದತಿಸುತರಾದಿಯಲಿ ಅಜ್ಞಾನಿಜನ ಮೋಹದ ಪ್ರವೃತ್ತಿ ಮಾಡುವರು ॥೧೦॥

ಆ ಮಿಥ್ಯಾಜ್ಞಾನದಲಿ ರತನಿದ್ದು ಮಿಥ್ಯಾಭಾವದಿಂದ ಪರಿಣತನಾಗಿ ಮತ್ತೆ ।
ತಾ ಮೋಹೋದಯದಿ ದೇಹವನು ಒಳಿತೆಂದು ಮರುಭವದಿ ಬಯಸುವನು ॥೧೧॥

---

೧ ಮುದ್ರಿತ ಸಂಸ್ಕೃತ ಪ್ರತಿಯಲ್ಲಿ 'ಸಂ ಮಣ್ಣಏ' ಎಂಬ ಪ್ರಾಕೃತ ಪಾಠವಿದೆ ಆದರ ಸಂಸ್ಕೃತವು 'ಸ್ವಂ ಮನ್ಯತೇ' ಎಂಬ ಪಾಠವಿದೆ.

**ಮಿಥ್ಯಾಜ್ಞಾನೇಷು ರತಃ ಮಿಥ್ಯಾಭಾವೇನ ಭಾವಿತಃ ಸನ್ ।**
**ಮೋಹೋದಯೇನ ಪುನರಪಿ ಅಂಗಂ ಮನ್ಯತೇ ಮನುಜಃ ॥೧೧॥**

ಅರ್ಥ ೞ– ಈ ಮನುಷ್ಯನು ಮೋಹಕರ್ಮದ ಉದಯದಿಂದ (ಉದಯದ ವಶನಾಗಿ) ಮಿಥ್ಯಾಜ್ಞಾನದ ಮುಖಾಂತರ ಮಿಥ್ಯಾಭಾವದಿಂದ ಭಾವಿಸಿ ಮತ್ತೆ ಮುಂದಿನ ಜನ್ಮದಲ್ಲಿ ಈ ಲಿಂಗ (ದೇಹ)ವನ್ನು ಒಳ್ಳೆಯದೆಂದು ತಿಳಿದುಕೊಂಡು ಅಪೇಕ್ಷಿಸುತ್ತಾನೆ.

ಭಾವಾರ್ಥ ೞ– ಮೋಹಕರ್ಮದ ಪ್ರಕೃತಿಯ ಮಿಥ್ಯಾತ್ವದ ಉದಯದಿಂದ (ಉದಯದವಶವಾಗುವುದರಿಂದ) ಜ್ಞಾನವು ಕೂಡ ಮಿಥ್ಯೆಯಾಗುತ್ತದೆ ಪರದ್ರವ್ಯವನ್ನು ತನ್ನದೆಂದು ತಿಳಿಯುತ್ತಾನೆ ಮತ್ತು ಮಿಥ್ಯಾತ್ವದಿಂದಲೇ ಮಿಥ್ಯಾಶ್ರದ್ಧೆಯಾಗುತ್ತದೆ ಆದರಿಂದ ಇದು ನನಗೆ ಸದಾ ಪ್ರಾಪ್ತವಾಗಲೆಂದು ನಿರಂತರ ಪರದ್ರವ್ಯದಲ್ಲಿ ಭಾವನೆಯಿರುತ್ತದೆ, ಆದರಿಂದಾಗಿ ಈ ಪ್ರಾಣಿಯು ಆ ಭವಿಷ್ಯದೇಹವನ್ನು ಒಳ್ಳೆಯದೆಂದು ತಿಳಿದುಕೊಂಡು ಅಪೇಕ್ಷಿಸುತ್ತಾನೆ. ॥೧೧॥

ಯಾವ ಮುನಿಯು ದೇಹದಲ್ಲಿ ನಿರಪೇಕ್ಷನಿದ್ದಾನೆ, ದೇಹವನ್ನು ಬಯಸುವುದಿಲ್ಲ, ಅದರಲ್ಲಿ ಮಮತೆ ಮಾಡುವುದಿಲ್ಲ ಅವನು ನಿರ್ವಾಣವನ್ನು ಪಡೆಯುತ್ತಾನೆಂದು ಈಗ ಹೇಳುತ್ತಾರೆ, –

**ಜೋ ದೇಹೇ ಣಿರವೇಕ್ಖೋ ಣಿದ್ದಂದೋ ಣಿಮ್ಮಮೋ ಣಿರಾರಂಭೋ ।**
**ಆದಸಹಾವೇ ಸುರಓ ಜೋಈ ಸೋ ಲಹಇ ಣಿವ್ವಾಣಂ ॥೧೨॥**

**ಯಃ ದೇಹೇ ನಿರಪೇಕ್ಷಃ ನಿರ್ದ್ವಂದಃ ನಿರ್ಮಮಃ ನಿರಾರಂಭಃ ।**
**ಆತ್ಮಸ್ವಭಾವೇ ಸುರತಃ ಯೋಗೀ ಸ ಲಭತೇ ನಿರ್ವಾಣಮ್ ॥೧೨॥**

ಅರ್ಥ ೞ– ಯಾವ ಯೋಗಿ ಧ್ಯಾನಿ ಮುನಿಯು ದೇಹದಲ್ಲಿ ನಿರಪೇಕ್ಷನಿದ್ದಾನೆ ಎಂದರೆ ದೇಹವನ್ನು ಇಚ್ಛಿಸುವುದಿಲ್ಲ ಉದಾಸೀನನಿದ್ದಾನೆ, ನಿರ್ದ್ವಂದ್ವನಿದ್ದಾನೆ–ರಾಗದ್ವೇಷರೂಪದ ಇಚ್ಛೆ ಅನಿತ್ಯ ಮನ್ನಣೆಯಿಂದ ರಹಿತನಿದ್ದಾನೆ, ನಿರ್ಮಮತ್ವನಿದ್ದಾನೆ–ದೇಹಾದಿಗಳಲ್ಲಿ 'ಇದು ನನ್ನ'ದೆಂಬ ಬುದ್ಧಿಯಿಂದ ರಹಿತನಿದ್ದಾನೆ, ನಿರಾರಂಭನಿದ್ದಾನೆ – ಈ ಶರೀರದ ಸಲುವಾಗಿ ಹಾಗೂ ಅನ್ಯಲೌಕಿಕ ಪ್ರಯೋಜನದ ಸಲುವಾಗಿ ಆರಂಭದಿಂದ ರಹಿತನಿದ್ದಾನೆ ಮತ್ತು ಆತ್ಮಸ್ವಭಾವದಲ್ಲಿ ಮಗ್ನನಿದ್ದಾನೆ, ಲೀನನಿದ್ದಾನೆ, ನಿರಂತರ ಸ್ವಭಾವದ ಭಾವನೆ ಸಹಿತನಿದ್ದಾನೆ ಆ ಮುನಿಯು ನಿರ್ವಾಣವನ್ನು ಪ್ರಾಪ್ತಮಾಡಿಕೊಳ್ಳುತ್ತಾನೆ.

ಭಾವಾರ್ಥ ೞ– ಯಾವನು ಬಹಿರಾತ್ಮನ ಭಾವನೆಯನ್ನು ಬಿಟ್ಟುಕೊಟ್ಟು ಅಂತರಾತ್ಮನಾಗಿ ಪರಮಾತ್ಮನಲ್ಲಿ ಲೀನನಾಗುತ್ತಾನೆ ಅವನು ಮೋಕ್ಷ ಪ್ರಾಪ್ತಮಾಡಿಕೊಳ್ಳುತ್ತಾನೆಂದು ಉಪದೇಶ ಮಾಡಲಾಗಿದೆ. ॥೧೨॥

ಈಗ ಬಂಧ ಮತ್ತು ಮೋಕ್ಷದ ಕಾರಣದ ಸಂಕ್ಷೇಪರೂಪ ಆಗಮದ ವಚನ ಹೇಳುತ್ತಾರೆ, –

---

ಯಾವನು ದೇಹದಲಿ ನಿರಪೇಕ್ಷ ನಿರ್ದ್ವಂದ್ವನಿರ್ಮಮ ಮೇಣ್ನಿರಾರಂಭನಿದ್ದು।
ಅವನಾತ್ಮಸ್ವಭಾವದೋಳ್ಸುರತನಿದ್ದರಾಯೋಗಿ ನಿರ್ವಾಣ ಪಡೆಯುವನು ॥೧೨॥

ಪರದವ್ವರಓ ಬಜ್ಝದಿ ವಿರಓ ಮುಚ್ಚೇಇ ವಿವಿಹಕಮ್ಮೇಹಿಂ ।
ಏಸೋ ಜಿಣಉವದೇಸೋ [೧]ಸಮಾಸದೋ ಬಂಧಮುಕ್ಖಸ್ಸ ॥೧೩॥

ಪರದ್ರವ್ಯರತಃ ಬಧ್ಯತೇ ವಿರತಃ ಮುಚ್ಯತೇ ವಿವಿಧಕರ್ಮಭಿಃ ।
ಏಷಃ ಜಿನೋಪದೇಶಃ ಸಮಾಸತಃಬಂಧಮೋಕ್ಷಸ್ಯ ॥೧೩॥

ಅರ್ಥ ಃ- ಯಾವ ಜೀವನು ಪರದ್ರವ್ಯದಲ್ಲಿ ಆಸಕ್ತನಿದ್ದಾನೆ, ರಾಗಿಯಿದ್ದಾನೆ ಅವನಂತೂ ಅನೇಕ ಪ್ರಕಾರದ ಕರ್ಮಗಳಿಂದ ಬದ್ಧನಾಗುತ್ತಾನೆ, ಕರ್ಮಗಳ ಬಂಧ ಮಾಡಿಕೊಳ್ಳುತ್ತಾನೆ ಮತ್ತು ಯಾವನು ಪರದ್ರವ್ಯಗಳಿಂದ ವಿರಕ್ತನಿದ್ದಾನೆ, ರಾಗಿಯಿಲ್ಲ ಅವನು ಅನೇಕ ಪ್ರಕಾರದ ಕರ್ಮಗಳಿಂದ ಬಿಡುಗಡೆಯಾಗುತ್ತಾನೆ. ಇದು ಜಿನದೇವರದು ಸಂಕ್ಷೇಪದಲ್ಲಿ ಬಂಧದ ಮತ್ತು ಮೋಕ್ಷದ ಉಪದೇಶವಿದೆ.

ಭಾವಾರ್ಥ ಃ- ಬಂಧ-ಮೋಕ್ಷದ ಕಾರಣದ ಕಥನವು ಅನೇಕ ಪ್ರಕಾರದಿಂದಿದೆ, ಆದರೆ ಪರದ್ರವ್ಯದಲ್ಲಿನ ರಾಗಭಾವವು ಬಂಧದ ಕಾರಣವಿದ್ದರೆ ವಿರಾಗಭಾವವು ಮೋಕ್ಷದ ಕಾರಣವಿದೆಯೆಂಬುದು ಅದರ ಸಂಕ್ಷೇಪವಿದೆ. ಈ ಪ್ರಕಾರ ಸಂಕ್ಷೇಪದಿಂದ ಜಿನೇಂದ್ರರ ಉಪದೇಶವಿದೆ. ॥೧೩॥

ಸ್ವದ್ರವ್ಯದಲ್ಲಿ ಆಸಕ್ತನಿರುವವನು ಸಮ್ಯಗ್ದೃಷ್ಟಿಯಾಗುತ್ತಾನೆ ಮತ್ತು ಕರ್ಮಗಳ ನಾಶಮಾಡುತ್ತಾನೆಂದು ಈಗ ಹೇಳುತ್ತಾರೆ, -

ಸದ್ದವ್ವರಓ ಸವಣೋ ಸಮ್ಮಾಇಟ್ಠೀ ಹವೇಇ ಣಿಯಮೇಣ[೨] ।
ಸಮ್ಮತ್ತಪರಿಣದೋ ಉಣ ಖವೇಇ [೩]ದುಟ್ಠಟ್ಠಕಮ್ಮಾಇಂ ॥೧೪॥

ಸ್ವದ್ರವ್ಯರತಃ ಶ್ರಮಣಃ ಸಮ್ಯಗ್ದೃಷ್ಟಿ ಭವತಿ ನಿಯಮೇನ[೪] ।
ಸಮ್ಯಕ್ತ್ವಪರಿಣತಃ ಪುನಃ [೫]ಕ್ಷಪಯತಿ ದುಷ್ಟಾಷ್ಟ ಕರ್ಮಾಣಿ ॥೧೪॥

ಅರ್ಥ ಃ- ಯಾವ ಮುನಿಯು ಸ್ವದ್ರವ್ಯದಲ್ಲಿ ಎಂದರೆ ತನ್ನ ಆತ್ಮನಲ್ಲಿ ಅನುರಕ್ತನಿದ್ದಾನೆ, ರುಚಿವಂತನಿದ್ದಾನೆ ಅವನು ನಿಯಮದಿಂದ ಸಮ್ಯಗ್ದೃಷ್ಟಿಯಿದ್ದಾನೆ ಮತ್ತು ಅವನೇ ಸಮ್ಯಕ್ತ್ವಭಾವರೂಪವಾಗಿ ಪರಿಣಮನ ಮಾಡುತ್ತ ದುಷ್ಟವಾದ ಅಷ್ಟಕರ್ಮಗಳನ್ನು ಕ್ಷಯ-ನಾಶ ಮಾಡುತ್ತಾನೆ.

---

ಪರದ್ರವ್ಯರತಬದ್ಧ ವಿರತಮುಕ್ತನಾಗುವವನು ವಿವಿಧ ಕರ್ಮಗಳಿಂ ।
ಅರಿವುದೀ ಬಂಧಮೋಕ್ಷದ ವಿಷಯದಲಿ ಸಂಕ್ಷೇಪ ಜಿನೋಪದೇಶವನು ॥೧೩॥

ಸಮ್ಯಗ್ದೃಷ್ಟಿಯಿರುವವನು ಸ್ವದ್ರವ್ಯರತನಾದ ಶ್ರಮಣನು ನಿಯಮದಿಂದ ।
ಸಮ್ಯಕ್ತ್ವಪರಿಣಮನ ಮಾಡುವವನು ದುಷ್ಟಾಷ್ಟಕರ್ಮಗಳ ಕ್ಷಯಿಪನು ॥೧೪॥

---

೧ 'ಸದೋ'ದ ಸ್ಥಾನದಲ್ಲಿ 'ಸಓ' ಎಂಬ ಪಾಠಾಂತರವಿದೆ. ೨. 'ಸೋ ಸಾಹು' ಎಂಬ ಪಾಠಾಂತರವಿದೆ.

೩ ಮುದ್ರಿತ ಸಂ. ಪ್ರತಿಯಲ್ಲಿ 'ದುಟ್ಠಟ್ಠಕಮ್ಮಾಣಿ' ಎಂಬ ಪಾಠಾಂತರವಿದೆ.

೪. 'ಸ ಸಾಧುಃ' ಎಂಬ ಪಾಠಾಂತರವಿದೆ.

೫. ಮುದ್ರಿತ ಸಂ. ಪ್ರತಿಯಲ್ಲಿ 'ಕ್ಷಿಪತೇ' ಎಂಬ ಪಾಠವಿದೆ.

ಭಾವಾರ್ಥ ಃ- ಇದು ಕೂಡ ಕರ್ಮ ನಾಶಮಾಡುವ ಕಾರಣದ ಸಂಕ್ಷೇಪ ಕಥನವಿದೆ. ಯಾರು ತಮ್ಮ ಸ್ವರೂಪದ ಶ್ರದ್ಧೆ, ರುಚಿ, ಪ್ರತೀತಿ, ಆಚರಣದಿಂದ ಯುಕ್ತರಿದ್ದಾರೆ ಅವರು ನಿಯಮದಿಂದ ಸಮ್ಯಗ್ದೃಷ್ಟಿಯಿದ್ದಾರೆ, ಈ ಸಮ್ಯಕ್ತ್ವಭಾವದಿಂದ ಪರಿಣಮನ ಮಾಡುತ್ತ ಎಂಟು ಕರ್ಮಗಳ ನಾಶಮಾಡಿ ನಿರ್ವಾಣವನ್ನು ಪ್ರಾಪ್ತ ಮಾಡಿಕೊಳ್ಳುತ್ತಾರೆ. ॥೧೪॥

ಯಾರು ಪರದ್ರವ್ಯಗಳಲ್ಲಿ ಆಸಕ್ತರಿದ್ದಾರೆ ಅವರು ಮಿಥ್ಯಾದೃಷ್ಟಿಗಳಾಗಿ ಕರ್ಮಗಳನ್ನು ಕಟ್ಟಿಕೊಳ್ಳುವರೆಂದು ಈಗ ಹೇಳುತ್ತಾರೆ,-

ಜೋ ಪುಣ ಪರದವ್ವರಓ ಮಿಚ್ಛಾದಿಟ್ಠೀ ಹವೇಇ ಸೋ ಸಾಹೂ ।
ಮಿಚ್ಛತ್ತಪರಿಣದೋ ಪುಣ ಬಜ್ಝದಿ ದುಟ್ಠಟ್ಠಕಮ್ಮೇಹಿಂ ॥೧೫॥

ಯಃ ಪುನಃ ಪರದ್ರವ್ಯರತಃ ಮಿಥ್ಯಾದೃಷ್ಟಿಃ ಭವತಿ ಸಃಸಾಧುಃ ।
ಮಿಥ್ಯಾತ್ವಪರಿಣತಃ ಪುನಃ ಬಧ್ಯತೇ ದುಷ್ಟಾಷ್ಟಕರ್ಮಭಿಃ ॥೧೫॥

ಅರ್ಥ ಃ- ಪುನಃ ಎಂದರೆ ಮತ್ತೆ ಯಾವ ಸಾಧುವು ಪರದ್ರವ್ಯದಲ್ಲಿ ಆಸಕ್ತನಿದ್ದಾನೆ, ರಾಗಿಯಿದ್ದಾನೆ ಅವನು ಮಿಥ್ಯಾದೃಷ್ಟಿಯಿರುತ್ತಾನೆ ಮತ್ತು ಅವನು ಮಿಥ್ಯಾತ್ವಭಾವರೂಪವಾಗಿ ಪರಿಣಮನ ಮಾಡುತ್ತ ದುಷ್ಟವಾದ ಅಷ್ಟ ಕರ್ಮಗಳಿಂದ ಬದ್ಧನಾಗುತ್ತಾನೆ.

ಭಾವಾರ್ಥ ಃ- ಇದು ಬಂಧದ ಕಾರಣದ ಸಂಕ್ಷೇಪವಿದೆ. ಇಲ್ಲಿ ಸಾಧುವೆಂದು ಹೇಳುವುದರಿಂದ ಅವನು ಬಾಹ್ಯ ಪರಿಗ್ರಹವನ್ನು ಬಿಟ್ಟುಕೊಟ್ಟು ನಿರ್ಗ್ರಂಥನಾಗಿ ಹೋಗಿದ್ದರೂ ಕೂಡ ಮಿಥ್ಯಾದೃಷ್ಟಿಯಾಗಿರುತ್ತ ಸಂಸಾರದ ದುಃಖ ಕೊಡುವಂಥ ಅಷ್ಟ ಕರ್ಮಗಳಿಂದ ಬದ್ಧನಾಗುತ್ತಾನೆಂದು ತಿಳಿಸಿಕೊಡಲಾಗಿದೆ. ॥೧೫॥

ಪರದ್ರವ್ಯದಿಂದಲೇ ದುರ್ಗತಿಯಾಗುತ್ತದೆ ಮತ್ತು ಸ್ವದ್ರವ್ಯದಿಂದಲೇ ಸುಗತಿಯಾಗುತ್ತದೆಂಬುದನ್ನು ಈಗ ಹೇಳುತ್ತಾರೆ, -

ಪರದವ್ವಾದೋ ದುಗ್ಗಈ ಸದ್ದವ್ವಾದೋ ಹು ಸುಗ್ಗಈ ಹೋಇ ।
ಇಯ ಣಾಊಣ ಸದವ್ವೇ ಕುಣಹ ರಈ ವಿರಇ ಇಯರಮ್ಮಿ ॥೧೬॥

ಪರದ್ರವ್ಯಾತ್ ದುರ್ಗತಿಃ ಸ್ವದ್ರವ್ಯಾತ್ ಸ್ಫುಟಂ ಸುಗತಿಃ ಭವತಿ ।
ಇತಿ ಜ್ಞಾತ್ವಾ ಸ್ವದ್ರವ್ಯೇ ಕುರುತ ರತಿಂ ವಿರತಿಂ ಇತರಸ್ಮಿನ್ ॥೧೬॥

---

ಮಿಥ್ಯಾದೃಷ್ಟಿಯಾಗುವನು ಪರದ್ರವ್ಯದಲಿ ಅನುರಕ್ತನಿರುವ ಶ್ರಮಣ ।
ಮಿಥ್ಯಾತ್ವಪರಿಣತನು ಮತ್ತೆ ದುಷ್ಟಾಷ್ಟಕರ್ಮಗಳಿಂದ ಬದ್ಧನಾಗುವನು ॥೧೫॥

ಪರದ್ರವ್ಯದಿಂದ ದುರ್ಗತಿ ಸ್ವದ್ರವ್ಯದಿಂದ ಸುಗತಿಯಾಗುವುದೆಂದರಿದು ।
ಪರದ್ರವ್ಯದಿಂದ ವಿರತರಾಗಿ ನಿಜದ್ರವ್ಯದಲಿ ರತಿಯ ಮಾಡುವುದು ॥೧೬॥

ಅರ್ಥ :- ಪರದ್ರವ್ಯದಿಂದ ದುರ್ಗತಿಯಾಗುತ್ತದೆ ಮತ್ತು ಸ್ವದ್ರವ್ಯದಿಂದ ಸುಗತಿಯಾಗುತ್ತದೆಯೆಂದು ಸ್ಪಷ್ಟವಾಗಿ ತಿಳಿಯಿರಿ, ಆದುದರಿಂದ ಎಲೈ ಭವ್ಯ ಜೀವರುಗಳೇ ! ನೀವು ಈ ಪ್ರಕಾರ ತಿಳಿದುಕೊಂಡು ಸ್ವದ್ರವ್ಯದಲ್ಲಿ ಪ್ರೀತಿಮಾಡಿರಿ ಮತ್ತು ಬೇರೆ ಯಾವ ಆ ಪರದ್ರವ್ಯಗಳಿವೆ ಅವುಗಳಿಂದ ವಿರಕ್ತರಾಗಿರಿ.

ಭಾವಾರ್ಥ :- ತನ್ನ ದ್ರವ್ಯದಲ್ಲಿ ಪ್ರೀತಿ ಮಾಡಿ ತನ್ನನ್ನು ಭೋಗಿಸುವವನಂತೂ ಸುಖಿ ಪಡೆಯುತ್ತಾನೆ, ಅವನ ಮೇಲೆ ಯಾವ ಆಪತ್ತಿ ಬರುವುದಿಲ್ಲ ಮತ್ತು ಪರದ್ರವ್ಯದಲ್ಲಿ ಪ್ರೀತಿಮಾಡಿ ಬೇಕಾದಂತೆ ತೆಗೆದುಕೊಂಡು ಭೋಗಿಸುವವನಿಗೆ ದುಃಖವಾಗುತ್ತದೆ, ಆಪತ್ತಿಯನ್ನೂ ಎದುರಿಸಬೇಕಾಗುತ್ತದೆಂಬುದು ಲೋಕದಲ್ಲಿ ಕೂಡ ರೀತಿಯಿದೆ, ಆದುದರಿಂದ ನಿಮ್ಮ ಆತ್ಮಸ್ವಭಾವದಲ್ಲಿ ಪ್ರೀತಿಮಾಡಿರಿ, ಇದರಿಂದ ಸುಗತಿಯಿದೆ, ಸ್ವರ್ಗಾದಿಗಳು ಕೂಡ ಇದರಿಂದಲೇ ದೊರಕುತ್ತವೆ ಮತ್ತು ಮೋಕ್ಷವೂ ಇದರಿಂದಲೇ ಆಗುತ್ತದೆ ಮತ್ತು ಪರದ್ರವ್ಯದಲ್ಲಿ ಪ್ರೀತಿ ಮಾಡಬೇಡಿರಿ ಇದರಿಂದ ದುರ್ಗತಿಯಿದೆ, ಸಂಸಾರದಲ್ಲಿ ಭ್ರಮಣ ಮಾಡಬೇಕಾಗುತ್ತದೆಯೆಂಬುದಾಗಿ ಸಂಕ್ಷೇಪದಲ್ಲಿ ಆಚಾರ್ಯದೇವರು ಉಪದೇಶ ಮಾಡಿದ್ದಾರೆ.

ಪ್ರಶ್ನೆ :- ಸ್ವದ್ರವ್ಯದಲ್ಲಿ ಲೀನವಾಗುವುದರಿಂದ ಮೋಕ್ಷವಾಗುತ್ತದೆ ಮತ್ತು ಸುಗತಿ-ದುರ್ಗತಿಗಳಂತೂ ಪರದ್ರವ್ಯದ ಪ್ರೀತಿಯಿಂದ ಆಗುತ್ತವೆಯಲ್ಲವೇ ?

ಉತ್ತರ :- ಇದು ಸತ್ಯವಿದೆ, ಆದರೆ ಇಲ್ಲಿ ಹೇಳಿರುವ ಆಶಯವೇನೆಂದರೆ ಪರದ್ರವ್ಯದಿಂದ ವಿರಕ್ತನಾಗಿ ಸ್ವದ್ರವ್ಯದಲ್ಲಿ ಲೀನವಾದಾಗ ವಿಶುದ್ಧತೆಯು ಅಧಿಕವಾಗುತ್ತದೆ, ಆ ವಿಶುದ್ಧತೆಯ ನಿಮಿತ್ತದಿಂದ ಶುಭಕರ್ಮಗಳೂ ಕಟ್ಟುತ್ತವೆ ಮತ್ತು ಅತ್ಯಂತ ವಿಶುದ್ಧತೆಯಾದಾಗ ಕರ್ಮಗಳ ನಿರ್ಜರೆಯಾಗಿ ಮೋಕ್ಷವಾಗುವುದರಿಂದ ಸುಗತಿ-ದುರ್ಗತಿ ಗಳಾಗುವುದನ್ನು ಹೇಳಿರುವುದು ಯುಕ್ತವಿದೆಯೆಂದು ತಿಳಿಯಬೇಕು. ॥೧೬॥

ಪರದ್ರವ್ಯಗಳು ಹೇಗಿವೆಯೆಂದು ಶಿಷ್ಯನು ಕೇಳಿದ ಪ್ರಶ್ನೆಗೆ ಉತ್ತರರೂಪವಾಗಿ ಈಗ ಆಚಾರ್ಯದೇವರು ಹೇಳುತ್ತಾರೆ, -

ಆದಸಹಾವಾದಣ್ಣಂ ಸಚ್ಚಿತ್ತಾಚಿತ್ತಮಿಸ್ಸಿಯಂ ಹವದಿ ।
ತಂ ಪರದವ್ವಂ ಭಣಿಯಂ ಅವಿತತ್ಥಂ ಸವ್ವದರಿಸೀಹಿಂ ॥೧೭॥

ಆತ್ಮಸ್ವಭಾವಾದನ್ಯತ್ ಸಚ್ಚಿತ್ತಾಚಿತ್ತಮಿಶ್ರಿತಂ ಭವತಿ ।
ತತ್ ಪರದ್ರವ್ಯಂ ಭಣಿತಂ ಅವಿತತ್ಥಂ ಸರ್ವದರ್ಶಿಭಿಃ ॥೧೭॥

ಅರ್ಥ :- ಆತ್ಮಸ್ವಭಾವದಿಂದ ಅನ್ಯವಾದ ಸಚಿತ್ತವಂತೂ ಸ್ತ್ರೀ-ಪುತ್ರಾದಿಕರು, ಜೀವಸಹಿತವಾದ ವಸ್ತುಗಳು ಹಾಗೂ ಅಚಿತ್ತಗಳು ಧನ, ಧಾನ್ಯ, ಚಿನ್ನ, ಬೆಳ್ಳಿ ಮೊದಲಾದ ಅಚೇತನ ವಸ್ತುಗಳು ಮತ್ತು ಮಿಶ್ರ ಆಭೂಷಣಾದಿಸಹಿತ ಮನುಷ್ಯ ಹಾಗೂ ಕುಟುಂಬಸಹಿತ ಮನೆ ಮೊದಲಾದುವೆಲ್ಲವೂ ಪರದ್ರವ್ಯಗಳಿವೆ. ಹೀಗೆ ಜೀವ ಮೊದಲಾದ ಪದಾರ್ಥಗಳ ಸ್ವರೂಪವನ್ನು ತಿಳಿಯದವನಿಗೆ ತಿಳಿಸಿಕೊಡುವ ಸಲುವಾಗಿ ಸರ್ವದರ್ಶಿ ಸರ್ವಜ್ಞ ಭಗವಂತರು ಹೇಳಿದ್ದಾರೆ ಅಥವಾ 'ಅವಿತತ್ಥಂ' ಎಂದರೆ ಸತ್ಯಾರ್ಥ ಹೇಳಿದ್ದಾರೆ.

---

ಆತ್ಮಸ್ವಭಾವದಿಂದನ್ಯವಾದ ಸಚಿತ್ತ ಅಚಿತ್ತ ಅದರಂತೆ ಮಿಶ್ರಗಳು ।
ಆತ್ಮನಿಂ ಭಿನ್ನ ಪರದ್ರವ್ಯಗಳೆಂದು ಸರ್ವದರ್ಶಿಪೇಳ್ವರು ಅವಿತಥದಿ ॥೧೭॥

ಭಾವಾರ್ಥ :- ತನ್ನ ಜ್ಞಾನಸ್ವರೂಪನಾದ ಆತ್ಮನನ್ನು ಹೊರತುಪಡಿಸಿ ಉಳಿದ ಚೇತನ ಅಚೇತನ ಮಿಶ್ರ ವಸ್ತುಗಳೆಲ್ಲವೂ ಪರದ್ರವ್ಯಗಳಿವೆಯೆಂಬುದನ್ನು ಅಜ್ಞಾನಿಗೆ ತಿಳಿಸಿಕೊಡುವ ಸಲುವಾಗಿ ಸರ್ವಜ್ಞದೇವರು ಹೇಳಿದ್ದಾರೆ. ||೧೭||

ಆತ್ಮ ಸ್ವಭಾವವನ್ನು ಸ್ವದ್ರವ್ಯವೆಂದು ಹೇಳಿದೆ ಅದು ಹೀಗಿದೆಯೆಂದು ಈಗ ಹೇಳುತ್ತಾರೆ, -

ದುಟ್ಠಟ್ಠಕಮ್ಮರಹಿಯಂ ಅಣೋವಮಂ ಣಾಣವಿಗ್ಗಹಂ ಣಿಚ್ಚಂ ।
ಸುದ್ಧಂ ಜಿಣೇಹಿಂ ಕಹಿಯಂ ಅಪ್ಪಾಣಂ ಹವದಿ ಸದ್ದವ್ವಂ ||೧೮||

ದುಷ್ಟಾಷ್ಟಕರ್ಮರಹಿತಂ ಅನುಪಮಂ ಜ್ಞಾನವಿಗ್ರಹಂ ನಿತ್ಯಮ್ ।
ಶುದ್ಧಂ ಜಿನೈಃ ಭಣಿತಂ ಆತ್ಮಾ ಭವತಿ ಸ್ವದ್ರವ್ಯಮ್ ||೧೮||

ಅರ್ಥ :- ಸಂಸಾರದ ದುಃಖ ಕೊಡುವಂಥ ಜ್ಞಾನಾವರಣ ಮೊದಲಾದ ದುಷ್ಟ ಅಷ್ಟ ಕರ್ಮಗಳಿಂದ ರಹಿತ ಮತ್ತು ಅವನಿಗೆ ಯಾವುದು ಉಪಮೆಯಿಲ್ಲದಂಥ ಅನುಪಮ, ಅವನಿಗೆ ಜ್ಞಾನವೇ ಶರೀರವಿದೆ ಮತ್ತು ಅವನು ನಾಶವಿಲ್ಲದಂಥ ಅವಿನಾಶಿ ನಿತ್ಯನಿದ್ದಾನೆ ಮತ್ತು ಶುದ್ಧ ಎಂದರೆ ವಿಕಾರರಹಿತ ಕೇವಲಜ್ಞಾನಮಯನಾದ ಆತ್ಮನನ್ನು ಸರ್ವಜ್ಞ ಜಿನಭಗವಂತರು ಹೇಳಿದ್ದಾರೆ ಅವನೇ ಸ್ವದ್ರವ್ಯನಿದ್ದಾನೆ.

ಭಾವಾರ್ಥ :- ಜ್ಞಾನಾನಂದಮಯ, ಅಮೂರ್ತಿಕ, ಜ್ಞಾನಮೂರ್ತಿಯಾದ ತನ್ನ ಆತ್ಮನಿದ್ದಾನೆ ಅವನೇ ಸ್ವದ್ರವ್ಯನಿದ್ದಾನೆ, ಉಳಿದ ಚೇತನ, ಅಚೇತನ, ಮಿಶ್ರಗಳೆಲ್ಲವು ಪರದ್ರವ್ಯಗಳಿವೆ. ||೧೮||

ಇಂಥ ನಿಜದ್ರವ್ಯದ ಧ್ಯಾನ ಮಾಡುವವರು ನಿರ್ವಾಣ ಪಡೆಯುತ್ತಾರೆಂದು ಈಗ ಹೇಳುತ್ತಾರೆ, -

ಜೇ ಝಾಯಂತಿ ಸದವ್ವಂ ಪರದವ್ವಪರಮ್ಮುಹಾ ದು ಸುಚರಿತ್ತಾ ।
ತೇ ಜಿಣವರಾಣ ಮಗ್ಗೇ ಅಣುಲಗ್ಗಾ ಲಹಹಿಂ ಣಿವ್ವಾಣಂ ||೧೯||

ಯೇ ಧ್ಯಾಯಂತಿ ಸ್ವದ್ರವ್ಯಂ ಪರದ್ರವ್ಯಪರಾಙ್ಮುಖಾಸ್ತು ಸುಚರಿತ್ರಾಃ ।
ತೇ ಜಿನವರಾಣಾಂ ಮಾರ್ಗೇ ಅನುಲಗ್ನಾಃ ಲಭತೇ ನಿರ್ವಾಣಮ್ ||೧೯||

ಅರ್ಥ :- ಯಾವ ಮುನಿಗಳು ಪರದ್ರವ್ಯದಿಂದ ಪರಾಙ್ಮುಖರಾಗಿ ಸ್ವದ್ರವ್ಯವಾದ ಆ ತಮ್ಮ ಆತ್ಮದ್ರವ್ಯದ ಧ್ಯಾನ ಮಾಡುತ್ತಾರೆ ಅವರು ಪ್ರಕಟ ಸುಚರಿತ್ರ ಎಂದರೆ ನಿರ್ದೋಷ ಚಾರಿತ್ರಯುಕ್ತರಾಗುತ್ತ ಜಿನವರ ತೀರ್ಥಂಕರರ ಮಾರ್ಗದ ಅನುಲಗ್ನ (-ಅನುಸಂಧಾನ, ಅನುಕರಣ) ಮಾಡುತ್ತ ನಿರ್ವಾಣವನ್ನು ಪಡೆದುಕೊಳ್ಳುತ್ತಾರೆ.

---

ಆ ದುಷ್ಟಾಷ್ಟಕರ್ಮವಿಹೀನ ಅನುಪಮ ಜ್ಞಾನವಿಗ್ರಹ ನಿತ್ಯಮದರಂತೆ ।
ಶುದ್ಧನಾದಾತ್ಮನನು ಜಿನವರದೇವರು ಸ್ವದ್ರವ್ಯವೆಂದು ಪೇಳಿರುವರು ||೧೮||

ಏವ ಪರದ್ರವ್ಯದಿಂ ವಿಮುಖನಾಗಿ ಸ್ವದ್ರವ್ಯ ಧ್ಯಾನಿಪನು ಸುಚರಿತ್ರದಿಂ
ಅವನು ಜಿನದೇವರ ಮಾರ್ಗದನುಲಗ್ನಮಾಡುತ ನಿರ್ವಾಣ ಪಡೆಯುವನು ||೧೯||

ಭಾವಾರ್ಥ ः- ಪರದ್ರವ್ಯದ ತ್ಯಾಗ ಮಾಡಿ ತಮ್ಮ ಸ್ವರೂಪದ ಧ್ಯಾನ ಮಾಡುತ್ತಾರೆ ಅವರುಗಳು ನಿಶ್ಚಯಚಾರಿತ್ರರೂಪರಾಗಿ ಜಿನಮಾರ್ಗದಲ್ಲಿ ತೊಡಗುತ್ತಾರೆ ಮತ್ತು ಅವರು ಮೋಕ್ಷವನ್ನು ಪ್ರಾಪ್ತಮಾಡಿಕೊಳ್ಳುತ್ತಾರೆ. ॥೧೯॥

ಜಿನಮಾರ್ಗದಲ್ಲಿ ತೊಡಗಿದ ಯೋಗಿಗಳು ಶುದ್ಧಾತ್ಮನ ಧ್ಯಾನಮಾಡಿ ಮೋಕ್ಷವನ್ನು ಪ್ರಾಪ್ತಮಾಡಿಕೊಳ್ಳುತ್ತಿದ್ದರೆ ಅವರಿಗೆ ಸ್ವರ್ಗಪ್ರಾಪ್ತಮಾಡಿಕೊಳ್ಳುವ ಸಾಧ್ಯತೆಯಿಲ್ಲವೇನು ? ಅವಶ್ಯ ಪ್ರಾಪ್ತಮಾಡಿಕೊಳ್ಳುತ್ತಾರೆಂಬುದನ್ನು ಈಗ ಹೇಳುತ್ತಾರೆ, -

**ಜಿಣವರಮಏಣ ಜೋಈ ಝಾಣೇ ಝಾಏಇ ಸುದ್ಧಮಪ್ಪಾಣಂ ।**
**ಜೇಣ ಲಹಇ ಣಿವ್ವಾಣಂ ಣ ಲಹಇ ಕಿಂ ತೇಣ ಸುರಲೋಯಂ ॥೨೦॥**

**ಜಿನವರಮತೇನ ಯೋಗೀ ಧ್ಯಾನೇ ಧ್ಯಾಯತಿ ಶುದ್ಧಮಾತ್ಮಾನಮ್ ।**
**ಯೇನ ಲಭತೇ ನಿರ್ವಾಣಂ ನ ಲಭತೇ ಕಿಂ ತೇನ ಸುರಲೋಕಂ ॥೨೦॥**

ಅರ್ಥ ः- ಯೋಗಿ ಧ್ಯಾನಿ ಮುನಿಯಿದ್ದಾನೆ ಅವನು ಜಿನೇಂದ್ರ ಭಗವಂತರ ಮತದಿಂದ ಶುದ್ಧ ಆತ್ಮನನ್ನು ಧ್ಯಾನದಲ್ಲಿ ಧ್ಯಾನಿಸುತ್ತಾನೆ ಅದರಿಂದ ನಿರ್ವಾಣವನ್ನು ಪ್ರಾಪ್ತಮಾಡಿಕೊಳ್ಳುತ್ತಿದ್ದರೆ ಅದರಿಂದ ಸ್ವರ್ಗ ಲೋಕವನ್ನು ಪ್ರಾಪ್ತಮಾಡಿಕೊಳ್ಳುವ ಸಾಧ್ಯತೆಯಿಲ್ಲವೇನು ? ಅವಶ್ಯವಾಗಿ ಪ್ರಾಪ್ತಮಾಡಿಕೊಳ್ಳುತ್ತಾನೆ.

ಭಾವಾರ್ಥ ः- ಜಿನಮಾರ್ಗದಲ್ಲಿ ತೊಡಗಿ ಆತ್ಮನ ಧ್ಯಾನ ಮಾಡುವವನು ಮೋಕ್ಷವನ್ನು ಪಡೆಯುತ್ತಾನೆ ಮತ್ತು ಅದರಿಂದ ಸ್ವರ್ಗವಂತೂ ಆಗುವುದಿಲ್ಲವೆಂದು ಯಾರಾದರೂ ತಿಳಿಯುತ್ತಿರಬೇಕು, ಆದರೆ ಜಿನಮಾರ್ಗದಲ್ಲಿ ಪ್ರವರ್ತಿಸುವಂಥವನು ಶುದ್ಧ ಆತ್ಮನ ಧ್ಯಾನಮಾಡಿ ಮೋಕ್ಷವನ್ನು ಪಡೆದೇ ಪಡೆಯುತ್ತಾನೆಂದರೆ ಅದರಿಂದ ಸ್ವರ್ಗಲೋಕವು ಕಠಿಣವಿದೆಯೇನು ? ಇದಂತೂ ಅದರ ಮಾರ್ಗದಲ್ಲಿಯೇ ಇದೆಯೆಂದು ಅವರಿಗೆ ಹೇಳಲಾಗಿದೆ. ॥೨೦॥

ಈಗ ಇದೇ ಅರ್ಥವನ್ನು ದೃಷ್ಟಾಂತದ ಮುಖಾಂತರ ದೃಢ ಮಾಡುತ್ತಾರೆ, -

**ಜೋ ಜಾಇ ಜೋಯಣಸಯಂ ದಿಯಹೇಣೇಕ್ಕೇಣ ಲೇವಿ ಗುರುಭಾರಂ ।**
**ಸೋ ಕಿಂ ಕೋಸದ್ಧಂ ಪಿ ಹು ಣ ಸಕ್ಕಏ ಜಾಉ ಭುವಣಯಲೇ ॥೨೧॥**

**ಯಃ ಯಾತಿ ಯೋಜನಶತಂ ದಿವಸೇನೈಕೇನ ಲಾತ್ವಾ ಗುರುಭಾರಮ್ ।**
**ಸ ಕಿಂ ಕ್ರೋಶಾರ್ದ್ಧಮಪಿ ಸ್ಫುಟಂ ನ ಶಕ್ನೋತಿ ಯಾತುಂ ಭುವನತಲೇ ॥೨೧॥**

---

ಜಿನವರ ಮತಾನುಸಾರ ಯೋಗಿ ಧ್ಯಾನದೊಳ್ಧ್ಯಾನಿಸಿದರೆ ಶುದ್ಧಾತ್ಮನನು ।
ಆ ನಿರ್ವಾಣ ಪಡೆವನೆಂದರೇನದರಿಂದ ಸುರಲೋಕವನು ಪಡೆಯನೆ ॥೨೦॥
ಯಾವನೊಂದು ದಿವಸಕೆ ಗುರುಭಾರಹೊತ್ತು ಶತಯೋಜನಗಮಿಸುವನು ।
ಅವನರ್ಧಕೋಶ ಗಮಿಸುವ ಸಾಧ್ಯತೆಯಿಲ್ಲವೇನು ಭುವನತಲದಲಿ ॥೨೧॥

ಅರ್ಥ :- ಯಾವ ಪುರುಷನು ದೊಡ್ಡ ಭಾರ ಹೊತ್ತುಕೊಂಡು ಒಂದು ದಿವಸದಲ್ಲಿ ನೂರು ಯೋಜನ ನಡೆಯುತ್ತಾನೆ ಅವನು ಈ ಭೂತಲದಲ್ಲಿ ಅರ್ಧ ಹರದಾರಿ ಹೋಗುವ ಸಾಧ್ಯತೆಯಿಲ್ಲವೇನು ? ಇದನ್ನು ಸ್ಪಷ್ಟ ತಿಳಿದುಕೊಳ್ಳಿರಿ.

ಭಾವಾರ್ಥ :- ಯಾವ ಪುರುಷನು ದೊಡ್ಡಭಾರ ಹೊತ್ತುಕೊಂಡು ಒಂದು ದಿವಸದಲ್ಲಿ ನೂರು ಯೋಜನ ನಡೆಯುತ್ತಾನೆ ಅವನಿಗೆ ಅರ್ಧ ಹರದಾರಿ ನಡೆಯುವುದಂತೂ ಅತ್ಯಂತ ಸುಲಭವಿದೆ. ಹೀಗೆಯೇ ಜಿನಮಾರ್ಗದಿಂದ ಮೋಕ್ಷಪಡೆದರೆ ಸ್ವರ್ಗ ಪಡೆಯುವುದಂತೂ ಅತ್ಯಂತ ಸುಲಭವಿದೆ. ॥೨೧॥

ಈಗ ಇದೇ ಅರ್ಥದ ಇನ್ನೊಂದು ದೃಷ್ಟಾಂತ ಹೇಳುತ್ತಾರೆ, -

**ಜೋ ಕೋಡಿಏ ಣ ಜಿಪ್ಪಇ ಸುಹಡೋ ಸಂಗಾಮಏಹಿಂ ಸವ್ವೇಹಿಂ ।**
**ಸೋ ಕಿಂ ಜಿಪ್ಪಇ ಇಕ್ಕಿಂ ಣರೇಣ ಸಂಗಾಮಏ ಸುಹಡೋ ॥೨೨॥**

**ಯಃ ಕೋಟ್ಯಾ ನ ಜೀಯತೇ ಸುಭಟಃ ಸಂಗ್ರಾಮಕೈಃ ಸರ್ವೈಃ ।**
**ಸ ಕಿಂ ಜೀಯತೇ ಏಕೇನ ನರೇಣ ಸಂಗ್ರಾಮೇ ಸುಭಟಃ ॥೨೨॥**

ಅರ್ಥ :- ಯಾವನೋ ಓರ್ವ ಸುಭಟನು ಸಂಗ್ರಾಮದಲ್ಲಿ ಎಲ್ಲ ಸಂಗ್ರಾಮಗಳನ್ನು ಮಾಡುವಂಥವರ ಜತೆ ಕೋಟಿ ಮನುಷ್ಯರನ್ನೂ ಸುಲಭದಿಂದ ಜಯಿಸುವನು ಆ ಸುಭಟನು ಒಬ್ಬ ಮನುಷ್ಯನನ್ನು ಜಯಿಸುವುದಿಲ್ಲವೇನು ? ಅವಶ್ಯವಾಗಿ ಜಯಿಸುತ್ತಾನೆ.

ಭಾವಾರ್ಥ :- ಯಾವನು ಜಿನಮಾರ್ಗದಲ್ಲಿ ಪ್ರವರ್ತಿಸುವನು ಅವನು ಕರ್ಮದ ನಾಶ ಮಾಡಿಯೇ ಮಾಡುತ್ತಾನೆಂದರೆ ಅವನು ಸ್ವರ್ಗ ತಡೆಯುವಂಥ ಒಂದು ಪಾಪಕರ್ಮದ ನಾಶಮಾಡುವುದಿಲ್ಲವೇನು ? ಅವಶ್ಯವಾಗಿ ಮಾಡುತ್ತಾನೆ. ॥೨೨॥

ಸ್ವರ್ಗವನ್ನಂತೂ ತಪಸ್ಸಿನಿಂದ (ಶುಭರಾಗರೂಪದ ತಪಸ್ಸಿನಿಂದ) ಎಲ್ಲರೂ ಪ್ರಾಪ್ತಮಾಡಿಕೊಳ್ಳುತ್ತಾರೆ, ಆದರೆ ಧ್ಯಾನದ ಯೋಗದಿಂದ ಸ್ವರ್ಗ ಪ್ರಾಪ್ತಮಾಡಿಕೊಳ್ಳುವವರು ಆ ಧ್ಯಾನದ ಯೋಗದಿಂದ ಮೋಕ್ಷವನ್ನು ಪ್ರಾಪ್ತಮಾಡಿಕೊಳ್ಳುತ್ತಾರೆಂದು ಈಗ ಹೇಳುತ್ತಾರೆ, -

**ಸಗ್ಗಂ ತವೇಣ ಸವ್ವೋ ವಿ ಪಾವಏ ತಹಿಂ ವಿ ಝಾಣಜೋಏಣ ।**
**ಜೋ ಪಾವಇ ಸೋ ಪಾವಇ ಪರಲೋಏ ಸಾಸಯಂ ಸೋಕ್ಖಂ ॥೨೩॥**

---

ಯಾವ ಸುಭಟ ಸಂಗ್ರಾಮದೊಳ್ಕೋಟಿ ಸೈನಿಕರನು ಸುಲಭ ಜಯಿಸುವನು ।
ಅವನೋರ್ವ ಮನುಷ್ಯನನು ಜಯಿಸುವ ಸಾಧ್ಯತೆಯಿಲ್ಲವೇನು ಸಂಗ್ರಾಮದಿ ॥೨೨॥
ಸ್ವರ್ಗವನೆಲ್ಲರು ತಪಸಿನಿಂದ ಪಡೆವರಾದರೆ ಧ್ಯಾನಯೋಗದಿಂದಾರು ।
ಸ್ವರ್ಗಪಡೆವರವರು ಪರಲೋಕದಲಿ ಶಾಶ್ವತ ಸೌಖ್ಯ ಪಡೆಯುವರು ॥೨೩॥

ಸ್ವರ್ಗಂ ತಪಸಾ ಸರ್ವಃ ಅಪಿ ಪ್ರಾಪ್ನೋತಿ ಕಿಂತು ಧ್ಯಾನಯೋಗೇನ ।
ಯಃ ಪ್ರಾಪ್ನೋತಿ ಸಃ ಪ್ರಾಪ್ನೋತಿ ಪರಲೋಕೇ ಶಾಶ್ವತಂ ಸೌಖ್ಯಮ್ ॥೨೩॥

ಅರ್ಥ ಃ- ಶುಭರಾಗರೂಪದ ತಪಸ್ಸಿನಿಂದ ಸ್ವರ್ಗವನ್ನಂತೂ ಎಲ್ಲರೂ ಪಡೆಯುತ್ತಾರೆ, ಆದರೆ ಯಾರು ಧ್ಯಾನದ ಯೋಗದಿಂದ ಸ್ವರ್ಗ ಪಡೆಯುತ್ತಾರೆ ಅವರೇ ಪರಲೋಕದಲ್ಲಿ ಶಾಶ್ವತವಾದ ಸುಖವನ್ನು ಪ್ರಾಪ್ತಮಾಡಿಕೊಳ್ಳುತ್ತಾರೆ.

ಭಾವಾರ್ಥ ಃ- ಕಾಯಕ್ಲೇಶ ಮೊದಲಾದ ತಪಸ್ಸನ್ನಂತೂ ಎಲ್ಲ ಮತದ ಧಾರಕರು ಮಾಡುತ್ತಾರೆ ಆ ತಪಸ್ವಿಗಳು ಮಂದಕಷಾಯದ ನಿಮಿತ್ತದಿಂದ ಎಲ್ಲರೂ ಸ್ವರ್ಗ ಪಡೆಯುತ್ತಾರೆ, ಆದರೆ ಯಾರು ಧ್ಯಾನದಿಂದ ಸ್ವರ್ಗ ಪ್ರಾಪ್ತಮಾಡಿಕೊಳ್ಳುತ್ತಾರೆ ಅವರು ಜಿನಮಾರ್ಗದಲ್ಲಿ ಹೇಳಿರುವ ಧ್ಯಾನದ ಯೋಗದಿಂದ ಪರಲೋಕದಲ್ಲಿ ಶಾಶ್ವತ ಸುಖವಿರುವಂಥ ನಿರ್ವಾಣವನ್ನು ಪ್ರಾಪ್ತಮಾಡಿಕೊಳ್ಳುತ್ತಾರೆ. ॥೨೩॥

ಧ್ಯಾನದ ಯೋಗದಿಂದ ಮೋಕ್ಷವನ್ನು ಪ್ರಾಪ್ತಮಾಡಿಕೊಳ್ಳುವವರನ್ನು ದೃಷ್ಟಾಂತ ದಾರ್ಷ್ಟಾಂತದ ಮುಖಾಂತರ ದೃಢಪಡಿಸುತ್ತಾರೆ, -

ಅಇಸೋಹಣಜೋಏಣಂ ಸುದ್ಧಂ ಹೇಮಂ ಹವೇಇ ಜಹ ತಹ ಯ ।
ಕಾಲಾಈಲದ್ಧೀಏ ಅಪ್ಪಾ ಪರಮಪ್ಪಓ ಹವದಿ ॥೨೪॥

ಅತಿಶೋಭನಯೋಗೇನಂ ಶುದ್ಧಂ ಹೇಮಂ ಭವತಿ ಯಥಾ ತಥಾ ಚ ।
ಕಾಲಾದಿಲಬ್ಧ್ಯಾ ಆತ್ಮಾ ಪರಮಾತ್ಮಾ ಭವತಿ ॥೨೪॥

ಅರ್ಥ ಃ- ಯಾವ ಪ್ರಕಾರ ಸುವರ್ಣ ಪಾಷಾಣವು ಶೋಧಿಸುವ ಸಾಮಗ್ರಿಯ ಸಂಬಂಧದಿಂದ ಶುದ್ಧ ಸುವರ್ಣವಾಗಿ ಹೋಗುತ್ತದೆ ಅದೇ ಪ್ರಕಾರ ಕಾಲ ಮೊದಲಾದ ಲಬ್ಧಿ ಆ ದ್ರವ್ಯ, ಕ್ಷೇತ್ರ, ಕಾಲ ಮತ್ತು ಭಾವರೂಪದ ಸಾಮಗ್ರಿಯ ಪ್ರಾಪ್ತಿಯಿಂದ ಈ ಆತ್ಮನು ಕರ್ಮದ ಸಂಯೋಗದಿಂದ ಅಶುದ್ಧನಿದ್ದಾನೆ ಅವನೇ ಪರಮಾತ್ಮನಾಗಿ ಬಿಡುತ್ತಾನೆ. ॥೨೪॥

ಸಂಸಾರದಲ್ಲಿ ವ್ರತ, ತಪಗಳಿಂದ ಸ್ವರ್ಗವಾಗುತ್ತದೆ ಆ ವ್ರತ, ತಪಸ್ಸುಗಳು ಒಳ್ಳೆಯವಿವೆ, ಆದರೆ ಅವ್ರತಾದಿಗಳಿಂದ ನರಕಾದಿ ಗತಿಗಳಾಗುತ್ತವೆ ಆ ಅವ್ರತಾದಿಗಳು ಶ್ರೇಷ್ಠವಿಲ್ಲವೆಂಬುದನ್ನು ಈಗ ಹೇಳುತ್ತಾರೆ, -

ವರ ವಯತವೇಹಿ ಸಗ್ಗೋ ಮಾ ದುಕ್ಖಂ ಹೋಉ ಣಿರಇ ಇಯರೇಹಿಂ ।
ಛಾಯಾತವಟ್ಠಿಯಾಣಂ ಪಡಿವಾಲಂತಾಣ ಗುರುಭೇಯಂ ॥೨೫॥

---

ಹೇಗೆ ಅಧಿಕಶೋಧನಯೋಗದಿಂದ ಸುವರ್ಣ ಶುದ್ಧತೆಯ ಪಡೆಯುವದು
ಹಾಗೆ ಕಾಲ ಮೊದಲಾದವುಗಳ ಲಬ್ಧಿಯಿಂದಾತ್ಮ ಪರಮಾತ್ಮನಾಗುವನು ॥೨೪॥

ವ್ರತತಪದಿಂ ಸ್ವರ್ಗವಿಹಿತ ಇತರದಿಂ ನರಕದುಃಖವಾಗದಿರಲಿ ।
ಆತಪಛಾಯಾಸ್ಥಿತರ ಪ್ರತಿಪಾಲಕ ಕಾರಣದಲಿ ದೊಡ್ಡ ಭೇದವಿದೆ ॥೨೫॥

ವರ ವ್ರತತಪೋಭಿಃ ಸ್ವರ್ಗಃ ಮಾ ದುಃಖಂ ಭವತು ನರಕೇ ಇತರೈಃ ।
ಛಾಯಾತಪಸ್ಥಿತಾನಾಂ ಪ್ರತಿಪಾಲಯತಾಂ ಗುರುಭೇದಃ ॥೨೫॥

ಅರ್ಥ :- ವ್ರತ ಮತ್ತು ತಪದಿಂದ ಸ್ವರ್ಗವಾಗುತ್ತದೆ ಅದು ಶ್ರೇಷ್ಠವಿದೆ, ಆದರೆ ಅವ್ರತ ಮತ್ತು ಆತಪದಿಂದ ಪ್ರಾಣಿಗಳಿಗೆ ನರಕಗತಿಯಲ್ಲಿ ದುಃಖವಾಗುತ್ತದೆ ಅದು ಆಗಬಾರದು, ಅದು ಶ್ರೇಷ್ಠವಿಲ್ಲ, ಛಾಯೆ ಮತ್ತು ಆತಪದಲ್ಲಿ ಕುಳಿತುಕೊಳ್ಳುವವರ ಪ್ರತಿಪಾಲಕ ಕಾರಣಗಳಲ್ಲಿ ದೊಡ್ಡ ಭೇದಗಳಿವೆ.

ಭಾವಾರ್ಥ :- ಯಾವ ಪ್ರಕಾರ ಛಾಯೆಯ ಕಾರಣವಂತೂ ವೃಕ್ಷಾದಿಗಳಿವೆ ಅವುಗಳ ಛಾಯೆಯಲ್ಲಿ ಕುಳಿತುಕೊಳ್ಳುವವನು ಸುಖ ಪಡೆಯುತ್ತಾನೆ ಮತ್ತು ಆತಪದ ಕಾರಣವಂತೂ ಸೂರ್ಯ, ಅಗ್ನಿ ಮೊದಲಾದವುಗಳಿದ್ದು ಇವುಗಳ ನಿಮಿತ್ತದಿಂದ ಆತಾಪವಾಗುತ್ತದೆ ಅದರಲ್ಲಿ ಕೂಡ್ರುವವನು ದುಃಖವನ್ನು ಪಡೆಯುತ್ತಾನೆ, ಹೀಗೆ ಇವುಗಳಲ್ಲಿ ದೊಡ್ಡ ಭೇದಗಳಿವೆ. ಅದೇ ಪ್ರಕಾರ ವ್ರತ, ಆಚರಣೆ ಮಾಡುವವನು ಸ್ವರ್ಗದ ಸುಖವನ್ನು ಪಡೆಯುತ್ತಾನೆ ಮತ್ತು ಇವುಗಳ ಆಚರಣೆಮಾಡದೆ ವಿಷಯ ಕಷಾಯಾದಿಗಳ ಸೇವನೆ ಮಾಡುವವನು ನರಕದ ದುಃಖವನ್ನು ಪ್ರಾಪ್ತಮಾಡಿಕೊಳ್ಳುತ್ತಾನೆ, ಹೀಗೆ ಇವುಗಳಲ್ಲಿ ದೊಡ್ಡ ಅಂತರವಿದೆ. ಆದುದರಿಂದ ಎಲ್ಲಿಯವರೆಗೆ ನಿರ್ವಾಣವಾಗುವುದಿಲ್ಲ ಅಲ್ಲಿಯವರೆಗೆ ವ್ರತ-ತಪಾದಿಗಳಲ್ಲಿ ಪ್ರವರ್ತಿಸುವುದು ಶ್ರೇಷ್ಠವಿದೆಯೆಂಬುದು ಇಲ್ಲಿಯ ಆಶಯವಿದೆ. ಇದರಿಂದ ಸಾಂಸಾರಿಕ ಸುಖದ ಪ್ರಾಪ್ತಿಯಿದೆ ಮತ್ತು ನಿರ್ವಾಣದ ಸಾಧನೆಯಲ್ಲೂ ಇವು ಸಹಕಾರಿಯಿವೆ. ವಿಷಯ ಕಷಾಯ ಮೊದಲಾದವುಗಳ ಪ್ರವೃತ್ತಿಯ ಫಲವಂತೂ ಕೇವಲ ನರಕಾದಿಗಳ ದುಃಖವಿದೆ, ಆ ದುಃಖದ ಕಾರಣಗಳ ಸೇವನೆ ಮಾಡುವುದಂತೂ ದೊಡ್ಡ ಅಪರಾಧವಿದೆಯೆಂದು ತಿಳಿದುಕೊಳ್ಳಬೇಕು. ॥೨೫॥

ಸಂಸಾರದಲ್ಲಿರುವವರೆಗೆ ವ್ರತ ತಪಗಳ ಪಾಲನೆಯು ಶ್ರೇಷ್ಠವೆಂದು ಹೇಳಿದೆ, ಆದರೆ ಸಂಸಾರದಿಂದ ಬಿಡುಗಡೆ ಹೊಂದಲಪೇಕ್ಷಿಸುವವನು ಆತ್ಮನ ಧ್ಯಾನ ಮಾಡಬೇಕೆಂದು ಈಗ ಹೇಳುತ್ತಾರೆ, -

ಜೋ ಇಚ್ಛಇ ಣಿಸ್ಸರಿದುಂ [೧]ಸಂಸಾರಮಹಣ್ಣವಾಉ ರುಂದ್ದಾಓ ।
ಕಮ್ಮಿಂಧಣಾಣ ಡಹಣಂ ಸೋ ಝಾಯಇ ಅಪ್ಪಯಂ ಸುದ್ಧಂ ॥೨೬॥

ಯಃ ಇಚ್ಛತಿ ನಿಸ್ಸರ್ತುಂ ಸಂಸಾರಮಹಾರ್ಣವಾತ್ ರುದ್ರಾತ್ ।
ಕರ್ಮೇಂಧನಾನಾಂ ದಹನಂ ಸಃ ಧ್ಯಾಯತಿ ಆತ್ಮಾನಂ ಶುದ್ಧಮ್ ॥೨೬॥

ಅರ್ಥ :- ಯಾವ ಜೀವನು ರುದ್ರ ಎಂದರೆ ಅತ್ಯಂತ ವಿಸ್ತಾರರೂಪ ಸಂಸಾರರೂಪದ ಸಮುದ್ರದಿಂದ ಹೊರಡಲು ಇಚ್ಛಿಸುತ್ತಾನೆ ಆ ಜೀವನು ಕರ್ಮರೂಪದ ಇಂಧನವನ್ನು ದಹನ ಮಾಡುವಂಥ ಶುದ್ಧ ಆತ್ಮನ ಧ್ಯಾನವನ್ನು ಮಾಡುತ್ತಾನೆ.

---

ಯಾವನಿಚ್ಛಿಸುವನು ಸಂಸಾರಮಹಾರುಂದ್ರಸಮುದ್ರದಿಂದ ಹೊರಬರಲು ।
ಅವನು ಕರ್ಮರೂಪದಿಂಧನವ ದಹಿಸುವಂಥಾತ್ಮನ ಧ್ಯಾನಮಾಡುವನು ।೨೬॥

---

೧ ಮುದ್ರಿತ ಸಂಸ್ಕೃತ ಪ್ರತಿಯಲ್ಲಿ 'ಸಂಸಾರಮಹಣ್ಣವಸ್ಸ ರುದ್ದಸ್ಸ' ಎಂಬ ಪಾಠವಿದ್ದು ಆದರ ಸಂಸ್ಕೃತವು 'ಸಂಸಾರ ಮಹಾರ್ಣವಸ್ಯ ರುದ್ರಸ್ಯ' ಎಂದಿದೆ.

ಭಾವಾರ್ಥ ಃ- ನಿರ್ವಾಣದ ಪ್ರಾಪ್ತಿಯು ಕರ್ಮನಾಶವಾದಾಗ ಆಗುತ್ತದೆ ಮತ್ತು ಕರ್ಮದ ನಾಶವು ಶುದ್ಧಾತ್ಮನ ಧ್ಯಾನದಿಂದ ಆಗುತ್ತದೆ, ಆದುದರಿಂದ ಸಂಸಾರದಿಂದ ಬಿಡುಗಡೆಹೊಂದಿ ಮೋಕ್ಷವನ್ನು ಪಡೆಯಲಪೇಕ್ಷಿಸುವವನು ಶುದ್ಧ ಆತ್ಮನ ಎಂದರೆ ಕರ್ಮಮಲದಿಂದ ರಹಿತನು ಅನಂತ ಚತುಷ್ಟಯ ಸಹಿತನಾದ (ನಿಜನಿಶ್ಚಯ) ಪರಮಾತ್ಮನಿದ್ದಾನೆ ಅವನ ಧ್ಯಾನ ಮಾಡುತ್ತಾನೆ. ಇದನ್ನು ಹೊರತುಪಡಿಸಿ ಮೋಕ್ಷದ ಉಪಾಯವು ಬೇರಾವುದು ಇಲ್ಲ. ॥೨೬॥

ಈಗ ಆತ್ಮನ ಧ್ಯಾನಮಾಡುವ ವಿಧಿಯನ್ನು ತಿಳಿಸಿಕೊಡುತ್ತಾರೆ, -

**ಸವ್ವೇ ಕಸಾಯ ಮೋತ್ತುಂ ಗಾರವಮಯರಾಯದೋಸವಾಮೋಹಂ ।**
**ಲೋಯವವಹಾರವಿರದೋ ಅಪ್ಪಾ ಝಾಏಹ ಝಾಣತ್ಥೋ ॥೨೭॥**

**ಸರ್ವಾನ್ ಕಷಾಯಾನ್ ಮುಕ್ತ್ವಾ ಗಾರವಮದರಾಗದೋಷವ್ಯಾಮೋಹಮ್ ।**
**ಲೋಕವ್ಯವಹಾರವಿರತಃ ಆತ್ಮಾನಂ ಧ್ಯಾಯತಿ ಧ್ಯಾನಸ್ಥಃ ॥೨೭॥**

ಅರ್ಥ ಃ- ಮುನಿಗಳು ಸಮಸ್ತ ಕಷಾಯಗಳನ್ನು ಬಿಟ್ಟುಕೊಟ್ಟು ಮತ್ತು ಗಾರವ, ಮದ, ರಾಗ, ದ್ವೇಷ ಹಾಗೂ ಮೋಹಗಳನ್ನು ಬಿಟ್ಟು ಕೊಟ್ಟು ಮತ್ತು ಲೋಕವ್ಯವಹಾರದಿಂದ ವಿರಕ್ತರಾಗಿ ಧ್ಯಾನದಲ್ಲಿ ಸ್ಥಿರರಾಗಿ ಆತ್ಮನ ಧ್ಯಾನಮಾಡುತ್ತಾರೆ.

ಭಾವಾರ್ಥ ಃ- ಮುನಿಗಳು ಆತ್ಮನ ಧ್ಯಾನ ಮಾಡಬೇಕಾದರೆ ಮೊದಲು ಕ್ರೋಧ, ಮಾನ, ಮಾಯೆ, ಲೋಭಗಳೆಂಬ ಸಮಸ್ತ ಕಷಾಯಗಳನ್ನು ಬಿಟ್ಟುಕೊಟ್ಟು ಗಾರವವನ್ನು ಬಿಟ್ಟು, ಮದಗಳು ಜಾತಿ ಮೊದಲಾದ ಭೇದದಿಂದ ಎಂಟು ಪ್ರಕಾರವಿದ್ದು ಅವನ್ನು ಬಿಟ್ಟು, ರಾಗ-ದ್ವೇಷಗಳನ್ನು ಬಿಟ್ಟು ಮತ್ತು ಲೋಕವ್ಯವಹಾರ ಎಂದರೆ ಸಂಘದೊಳಗಿರುವಲ್ಲಿ ಪರಸ್ಪರ ವಿನಯಾಚಾರ, ವೈಯಾವೃತ್ಯ, ಧರ್ಮೋಪದೇಶ, ಓದುವುದು, ಓದಿಸುವುದಿರುತ್ತವೆ ಅವೆಲ್ಲವನ್ನೂ ಬಿಟ್ಟುಕೊಟ್ಟು ಧ್ಯಾನದಲ್ಲಿ ಸ್ಥಿರವಾಗಿ ಹೋಗುವಂತೆ ಆತ್ಮನ ಧ್ಯಾನ ಮಾಡುತ್ತಾರೆ.

ಪ್ರಶ್ನೆ ಃ- ಎಲ್ಲ ಕಷಾಯಗಳನ್ನು ಬಿಡಲು ಹೇಳಿದೆ, ಅದರಲ್ಲಿ ಎಲ್ಲ ಗಾರವ, ಮದಾದಿಗಳು ಬಂದು ಬಿಡುತ್ತವೆ, ಆದಾಗ್ಯೂ ಇವನ್ನು ಭಿನ್ನ-ಭಿನ್ನವಾಗಿ ಏಕೆ ಹೇಳಿದೆ ?

ಉತ್ತರ ಃ- ಇವೆಲ್ಲವು ಕಷಾಯಗಳಲ್ಲಿ ಗರ್ಭಿತವಿದ್ದರೂ ಕೂಡ ವಿಶೇಷರೂಪದಿಂದ ತಿಳಿಸಿಕೊಡುವ ಸಲುವಾಗಿ ಬೇರೆ-ಬೇರೆಯಾಗಿ ಹೇಳಿದೆ. ಕಷಾಯದ ಪ್ರವೃತ್ತಿಯು ಹೇಗಿದೆಯೆಂದರೆ - ತನ್ನ ಸಲುವಾಗಿ ಅನಿಷ್ಟವಿರುವುದರಲ್ಲಿ ಕ್ರೋಧ ಮಾಡುವುದು, ಅನ್ಯರನ್ನು ಕೀಳೆಂದು ಮನ್ನಿಸಿ ಮಾನ ಮಾಡುವುದು, ಯಾವುದೇ ಕಾರ್ಯದ ನಿಮಿತ್ತವಾಗಿ ಕಪಟಮಾಡುವುದು, ಆಹಾರಾದಿಗಳಲ್ಲಿ ಲೋಭಮಾಡುವುದು. ಈ ಗಾರವವು ರಸ, ಋದ್ಧಿ ಮತ್ತು ಸಾತವೆಂದು ಮೂರು ಪ್ರಕಾರದ್ದಿದ್ದು, ಇವು ಮಾನ ಕಷಾಯದಲ್ಲಿ ಗರ್ಭಿತವಾಗಿದ್ದರೂ ಕೂಡ ಪ್ರಮಾದದ ಬಾಹುಳ್ಯತೆಯು ಇವುಗಳಲ್ಲಿರುವುದರಿಂದ ಭಿನ್ನರೂಪದಿಂದ ಹೇಳಿದ್ದಾರೆ.

---

ಸಕಲ ಕಷಾಯ ಗಾರವ ಮದರಾಗದೋಷ ವ್ಯಾಮೋಹಗಳನು ತ್ಯಜಿಸಿ ।
ಲೋಕವ್ಯವಹಾರವನು ಬಿಟ್ಟು ಧ್ಯಾನಸ್ಥನಾಗಿ ಆತ್ಮನ ಧ್ಯಾನ ಮಾಡುವನು ॥೨೭॥

ಮದಗಳು ಜಾತಿ, ಲಾಭ, ಕುಲ, ರೂಪ, ತಪ, ಬಲ, ವಿದ್ಯೆ, ಐಶ್ವರ್ಯಗಳ ಸಲುವಾಗಿ ಇದ್ದು ಅವನ್ನು ಮಾಡಬಾರದು. ರಾಗ-ದ್ವೇಷ, ಪ್ರೀತಿ ಅಪ್ರೀತಿಗಳನ್ನು ಹೇಳುತ್ತಾರೆ, ಒಂದರಲ್ಲಿ ಪ್ರೀತಿಮಾಡುವುದು ಇನ್ನೊಂದರಲ್ಲಿ ಅಪ್ರೀತಿ ಮಾಡುವುದು ಈ ಪ್ರಕಾರದ ಲಕ್ಷಣದ ಭೇದದಿಂದ ಭೇದಮಾಡಿ ಹೇಳಿದೆ. ಪರದಲ್ಲಿನ ಮಮತ್ವಭಾವದ ಹೆಸರು ಮೋಹವಿದೆ, ಸಂಸಾರದ ಮಮತ್ವವಂತೂ ಮುನಿಗೆ ಇಲ್ಲವೇ ಇಲ್ಲ, ಆದರೆ ಧರ್ಮಾನುರಾಗದಿಂದ ಶಿಷ್ಯ ಮೊದಲಾದವರಲ್ಲಿ ಮಮತೆಯ ವ್ಯವಹಾರವಿದೆ ಅದನ್ನು ಬಿಡಬೇಕು. ಹೀಗೆ ಭೇದವಿವಕ್ಷೆಯಿಂದ ಭಿನ್ನಭಿನ್ನವಾಗಿ ಹೇಳಿದ್ದಾರೆ, ಈ ಭಾವಗಳು ಧ್ಯಾನದಲ್ಲಿ ಘಾತಕವಾಗಿದ್ದು ಇವನ್ನು ಬಿಟ್ಟುಕೊಟ್ಟಲ್ಲದೆ ಧ್ಯಾನವಾಗುವುದಿಲ್ಲ, ಆದುದರಿಂದ ಧ್ಯಾನವಾಗುವ ಹಾಗೆ ಮಾಡಬೇಕು. ॥೨೭॥

ಈಗ ಇದನ್ನೇ ವಿಶೇಷರೂಪದಿಂದ ಹೇಳುತ್ತಾರೆ, -

**ಮಿಚ್ಛತ್ತಂ ಅಣ್ಣಾಣಂ ಪಾವಂ ಪುಣ್ಣಂ ಚಏವಿ ತಿವಿಹೇಣ ।**
**ಮೋಣವ್ವಏಣ ಜೋಈ ಜೋಯತ್ಥೋ ಜೋಯಏ ಅಪ್ಪಾ ॥೨೮॥**

**ಮಿಥ್ಯಾತ್ವಂ ಅಜ್ಞಾನಂ ಪಾಪಂ ಪುಣ್ಯಂ ತ್ಯಕ್ತ್ವಾ ತ್ರಿವಿಧೇನ ।**
**ಮೌನವ್ರತೇನ ಯೋಗೀ ಯೋಗಸ್ಥಃ ದ್ಯೋತಯತಿ ಆತ್ಮಾನಮ್ ॥೨೮॥**

ಅರ್ಥ :- ಯೋಗಿ, ಧ್ಯಾನಿ, ಮುನಿಯಿರುವವನು ಮಿಥ್ಯಾತ್ವ, ಅಜ್ಞಾನ, ಪಾಪ-ಪುಣ್ಯ ಇವುಗಳನ್ನು ಮನ-ವಚನ-ಕಾಯಗಳಿಂದ ಬಿಟ್ಟುಕೊಟ್ಟು ಮೌನವ್ರತದ ಮುಖಾಂತರ ಧ್ಯಾನದಲ್ಲಿ ಸ್ಥಿರನಾಗಿ ಆತ್ಮನ ಧ್ಯಾನ ಮಾಡುತ್ತಾನೆ.

ಭಾವಾರ್ಥ :- ಕೆಲವು ಅನ್ಯಮತದ ಯೋಗಿಗಳು ಧ್ಯಾನಿಯೆಂದು ಕರೆಯಿಸಿಕೊಳ್ಳುತ್ತಿರುವುದರಿಂದ ಜೈನ ಲಿಂಗಿಗಳೂ ಯಾವುದೇ ಒಂದು ದ್ರವ್ಯಲಿಂಗದ ಧಾರಣ ಮಾಡುವುದರಿಂದ ಧ್ಯಾನಿಯೆಂದು ಮನ್ನಿಸಿಕೊಂಡರೆ ಅದರ ನಿಷೇಧದ ನಿಮಿತ್ತವಾಗಿ ಮಿಥ್ಯಾತ್ವ ಮತ್ತು ಅಜ್ಞಾನವನ್ನು ಬಿಟ್ಟುಕೊಟ್ಟು ಆತ್ಮನ ಸ್ವರೂಪವನ್ನು ಯಥಾರ್ಥವಾಗಿ ತಿಳಿದುಕೊಂಡು ಸಮ್ಯಕ್ ಶ್ರದ್ಧೆ ಮಾಡದವನಿಗೆ ಮಿಥ್ಯಾತ್ವ ಅಜ್ಞಾನಗಳಂತೂ ತಗಲಿಕೊಂಡಿರುವಾಗ ಯಾರ ಧ್ಯಾನವಾಗುವುದು ಮತ್ತು ಪುಣ್ಯ-ಪಾಪಗಳೆರಡೂ ಬಂಧಸ್ವರೂಪವಿದ್ದು ಇವುಗಳಲ್ಲಿ ಪ್ರೀತಿ ಅಪ್ರೀತಿಗಳಿರುವವರೆಗೆ ಮೋಕ್ಷದ ಸ್ವರೂಪವನ್ನು ತಿಳಿಯದಿರುವಾಗ ಯಾರ ಧ್ಯಾನವಾಗುವುದು ಮತ್ತು (-ಸಮ್ಯಕ್ ಪ್ರಕಾರ ಸ್ವರೂಪ ಗುಪ್ತ ಸ್ವ ಅಸ್ತಿಯಲ್ಲಿ ಸ್ಥಿರವಾಗಿ) ಮನ ವಚನದ ಪ್ರವೃತ್ತಿಯನ್ನು ಬಿಟ್ಟುಕೊಟ್ಟು ಮೌನವಾಗದಿದ್ದರೆ ಏಕಾಗ್ರತೆ ಹೇಗಾಗುವುದು ? ಆದುದರಿಂದ ಮಿಥ್ಯಾತ್ವ, ಅಜ್ಞಾನ, ಪುಣ್ಯ, ಪಾಪ, ಮನ, ವಚನ, ಕಾಯದ ಪ್ರವೃತ್ತಿಯನ್ನು ಬಿಡುವುದೆಂದರೇನೇ ಧ್ಯಾನದಲ್ಲಿ ಯುಕ್ತರಾಗುವುದೆಂದು ಹೇಳಿದೆ. ಹೀಗೆ ಆತ್ಮನ ಧ್ಯಾನ ಮಾಡುವುದರಿಂದ ಮೋಕ್ಷವಾಗುತ್ತದೆ. ॥೨೮॥

ಧ್ಯಾನ ಮಾಡುವವನು ಮೌನ ಧಾರಣ ಮಾಡುತ್ತಾನೆ ಅವನು ಯಾವ ವಿಚಾರ ಮಾಡುತ್ತಿರುತ್ತಾನೆಂಬುದನ್ನು ಈಗ ಹೇಳುತ್ತಾರೆ, -

---

ಮನ-ವಚನ-ಕಾಯದಿಂ ಮಿಥ್ಯಾತ್ವ-ಅಜ್ಞಾನ-ಪಾಪ-ಪುಣ್ಯಗಳನು ವಿಸರ್ಜಿಸಿ
ಮೌನವ್ರತದಿಂ ಯೋಗಿ ಯೋಗದಲಿ ಸ್ಥಿರನಾಗಿ ಆತ್ಮನ ಧ್ಯಾನ ಮಾಡುವನು ॥೨೮॥

ಜಂ ಮಯಾ ದಿಸ್ಸದೇ ರೂವಂ ತಂ ಣ ಜಾಣಾದಿ ಸವ್ವಹಾ ।
ಜಾಣಗಂ ದಿಸ್ಸದೇ [೧]ಣೇವ ತಮ್ಹಾ ಜಂಪೇಮಿ ಕೇಣ ಹಂ ॥೨೯॥

ಯತ್ ಮಯಾ ದೃಶ್ಯತೇ ರೂಪಂ ತತ್ ನ ಜಾನಾತಿ ಸರ್ವಥಾ ।
ಜ್ಞಾಯಕಂ ದೃಶ್ಯತೇ ನ ತತ್ ತಸ್ಮಾತ್ ಜಲ್ಪಾಮಿ ಕೇನ ಅಹಮ್ ॥೨೯॥

ಅರ್ಥ ಃ- ಯಾವ ರೂಪವನ್ನು ನಾನು ನೋಡುತ್ತೇನೆ ಆ ರೂಪವು ಮೂರ್ತಿಕವಾದ ವಸ್ತುವಿದೆ, ಜಡವಿದೆ, ಅಚೇತನವಿದೆ ಎಲ್ಲ ಪ್ರಕಾರದಿಂದ ಏನನ್ನೂ ತಿಳಿಯುವುದಿಲ್ಲ, ಮತ್ತು ನಾನು ಜ್ಞಾಯಕನಿದ್ದೇನೆ, ಅಮೂರ್ತಿಕನಿದ್ದೇನೆ. ಇದಂತೂ ಜಡ ಅಚೇತನವಿದೆ ಎಲ್ಲ ಪ್ರಕಾರದಿಂದ ಏನನ್ನೂ ತಿಳಿಯುವುದಿಲ್ಲ, ಆದುದರಿಂದ ನಾನು ಯಾರೊಡನೆ ಮಾತನಾಡಲಿ ?

ಭಾವಾರ್ಥ ಃ- ಒಂದುವೇಳೆ ಬೇರೆ ಯಾರಾದರೂ ಪರಸ್ಪರ ಮಾತನಾಡುವವರಿದ್ದಾಗ ಪರಸ್ಪರದಲ್ಲಿ ಮಾತನಾಡುವ ಸಂಭವವಿದೆ, ಆದರೆ ಆತ್ಮನಂತೂ ಅಮೂರ್ತಿಕನಿದ್ದು ಅವನಿಗೆ ವಚನವುಚ್ಚರಣೆಯಿಲ್ಲ ಮತ್ತು ಆ ರೂಪಿ ಪುದ್ಗಲವಿದೆ ಅದು ಅಚೇತನವಿದೆ, ಯಾರನ್ನೂ ತಿಳಿಯುವುದಿಲ್ಲ ನೋಡುವುದಿಲ್ಲ. ಆದುದರಿಂದ ನಾನು ಯಾರೊಡನೆ ಮಾತನಾಡಲೆಂದು ಧ್ಯಾನ ಮಾಡುವವನು ಕೇಳುತ್ತಾನೆ. ಅದಕ್ಕಾಗಿಯೇ ನನ್ನದು ಮೌನವಿದೆ. ॥೨೯॥

ಈ ಪ್ರಕಾರ ಧ್ಯಾನ ಮಾಡುವುದರಿಂದ ಎಲ್ಲ ಕರ್ಮಗಳ ಆಸ್ರವದ ನಿರೋಧ ಮಾಡಿ ಸಂಚಿತ ಕರ್ಮಗಳ ನಾಶಮಾಡುತ್ತಾನೆಂದು ಈಗ ಹೇಳುತ್ತಾರೆ, -

ಸವ್ವಾಸವಣಿರೋಹೇಣ ಕಮ್ಮಂ ಖವದಿ ಸಂಚಿದಂ ।
ಜೋಯತ್ಥೋ ಜಾಣಏ ಜೋಈ ಜಿಣದೇವೇಣ ಭಾಸಿಯಂ ॥೩೦॥

ಸರ್ವಾಸ್ರವನಿರೋಧೇನ ಕರ್ಮ ಕ್ಷಪಯತಿ ಸಂಚಿತಮ್ ।
ಯೋಗಸ್ಥಃ ಜಾನಾತಿ ಯೋಗೀ ಜಿನದೇವೇನ ಭಾಷಿತಮ್ ॥೩೦॥

ಅರ್ಥ ಃ- ಯೋಗ ಧ್ಯಾನದಲ್ಲಿ ಸ್ಥಿರನಾದ ಯೋಗಿ ಮುನಿಯು ಎಲ್ಲ ಕರ್ಮಗಳ ಆಸ್ರವದ ನಿರೋಧ ಮಾಡಿ, ಸಂವರಯುಕ್ತನಾಗಿ ಮೊದಲು ಕಟ್ಟಿದ ಕರ್ಮಗಳ ಸಂಚಯರೂಪವಿದೆ ಅದರ ಕ್ಷಯಮಾಡುತ್ತಾನೆಂದು ಜಿನದೇವರು ಹೇಳಿದ್ದಾರೆ ಅದನ್ನು ತಿಳಿದುಕೊಳ್ಳಬೇಕು.

---

ನನಗಾವರೂಪು ತೋರುತಿದೆಯದು ಏನನು ತಿಳಿಯಲಾರದು ಸರ್ವಥಾ ।
ನಾನು ಜ್ಞಾಯಕ ಅಮೂರ್ತಿಕನಿರುವುದರಿಂದಾರೊಡನೆ ಮಾತನಾಡುವುದು ॥೨೯॥

ಯೋಗಿ ಸಕಲಾಸ್ರವ ನಿರೋಧದಿಂ ಸಂಚಿತ ಕರ್ಮಗಳ ನಾಶ ಮಾಡುವನು ।
ಯೋಗದಲಿ ಸ್ಥಿರವಿದ್ದುಕೊಂಡೆಂದು ಜಿನದೇವ ಪೇಳಿರುವುದನರಿವುದು ॥೩೦॥

---

೧ 'ಣಂ ತಂ, ಣಂತ' ಎಂಬ ಪಾಠಾಂತರವಿದೆ.

ಭಾವಾರ್ಥ :- ಧ್ಯಾನದಿಂದ ಕರ್ಮದ ಆಸ್ರವವು ತಡೆಯುವುದರಿಂದ ಭವಿಷ್ಯದ ಬಂಧವಾಗುವುದಿಲ್ಲ ಮತ್ತು ಪೂರ್ವಸಂಚಿತಕರ್ಮಗಳ ನಿರ್ಜರೆಯಾಗುತ್ತದೆ, ಆಗ ಕೇವಲಜ್ಞಾನವು ಉತ್ಪನ್ನವಾಗಿ ಮೋಕ್ಷವು ಪ್ರಾಪ್ತವಾಗುತ್ತದೆ. ಇದು ಆತ್ಮನ ಧ್ಯಾನದ ಮಾಹಾತ್ಮ್ಯವಿದೆ. ॥೩೦॥

ವ್ಯವಹಾರದಲ್ಲಿ ತತ್ಪರನಿರುವವನಿಗೆ ಈ ಧ್ಯಾನವಾಗುವುದಿಲ್ಲವೆಂದು ಈಗ ಹೇಳುತ್ತಾರೆ, –

ಜೋ ಸುತ್ತೋ ವವಹಾರೇ ಸೋ ಜೋಈ ಜಗ್ಗಏ ಸಕಜ್ಜಮ್ಮಿ ।
ಜೋ ಜಗ್ಗದಿ ವವಹಾರೇ ಸೋ ಸುತ್ತೋ ಅಪ್ಪಣೋ ಕಜ್ಜೇ ॥೩೧॥

ಯಃ ಸುಪ್ತಃ ವ್ಯವಹಾರೇ ಸಃ ಯೋಗೀ ಜಾಗರ್ತಿ ಸ್ವಕಾರ್ಯೇ ।
ಯಃ ಜಾಗರ್ತಿ ವ್ಯವಹಾರೇ ಸಃ ಸುಪ್ತಃ ಆತ್ಮನಃ ಕಾರ್ಯೇ ॥೩೧॥

ಅರ್ಥ :- ಯಾವ ಯೋಗಿ ಧ್ಯಾನಿ ಮುನಿಯು ವ್ಯವಹಾರದಲ್ಲಿ ನಿದ್ರಿಸುತ್ತಾನೆ ಅವನು ತನ್ನ ಸ್ವರೂಪದ ಕಾರ್ಯದಲ್ಲಿ ಜಾಗೃತನಿರುತ್ತಾನೆ ಮತ್ತು ಯಾವನು ವ್ಯವಹಾರದಲ್ಲಿ ಜಾಗೃತನಿರುತ್ತಾನೆ ಅವನು ಆತ್ಮನಕಾರ್ಯದಲ್ಲಿ ನಿದ್ರಿಸುತ್ತಾನೆ.

ಭಾವಾರ್ಥ :- ಮುನಿಗೆ ಸಂಸಾರದ ವ್ಯವಹಾರವಂತೂ ಸ್ವಲ್ಪವೂ ಇಲ್ಲ ಮತ್ತು ಒಂದುವೇಳೆ ಇದ್ದರೆ ಮುನಿಯೆಂಥವನು ? ಅವನಂತೂ ಪಾಖಂಡಿಯಿದ್ದಾನೆ. ಧರ್ಮದ ವ್ಯವಹಾರವಾದ ಸಂಘದಲ್ಲಿರುವುದು, ಮಹಾವ್ರತಾದಿಗಳನ್ನು ಪಾಲಿಸುವಂಥ ವ್ಯವಹಾರದಲ್ಲೂ ತತ್ಪರನಿಲ್ಲ, ಎಲ್ಲ ಪ್ರವೃತ್ತಿಗಳ ನಿವೃತ್ತಿಮಾಡಿ ಧ್ಯಾನಮಾಡುತ್ತಾನೆ ಅವನನ್ನು ವ್ಯವಹಾರದಲ್ಲಿ ನಿದ್ರಿಸುವವನೆಂದು ಹೇಳಲಾಗುತ್ತದೆ ಮತ್ತು ತನ್ನ ಆತ್ಮಸ್ವರೂಪದಲ್ಲಿ ಲೀನನಾಗಿ ನೋಡುತ್ತಾನೆ ತಿಳಿಯುತ್ತಾನೆ ಅವನು ತನ್ನ ಆತ್ಮಕಾರ್ಯದಲ್ಲಿ ಜಾಗೃತನಿರುತ್ತಾನೆ. ಆದರೆ ಯಾವನು ಈ ವ್ಯವಹಾರದಲ್ಲಿ ತತ್ಪರನಿದ್ದಾನೆ ಸಾವಧಾನನಿದ್ದಾನೆ, ಸ್ವರೂಪದ ದೃಷ್ಟಿಯಿಲ್ಲ ಅವನನ್ನು ವ್ಯವಹಾರದಲ್ಲಿ ಜಾಗೃತನಿರುವವನೆಂದು ಹೇಳಲಾಗುತ್ತದೆ. ॥೩೧॥

ಯೋಗಿಯು ಪೂರ್ವೋಕ್ತ ಕಥನವನ್ನು ತಿಳಿದುಕೊಂಡು ವ್ಯವಹಾರವನ್ನು ಬಿಟ್ಟುಕೊಟ್ಟು ಆತ್ಮಕಾರ್ಯ ಮಾಡುತ್ತಾನೆಂದು ಈಗ ಹೇಳುತ್ತಾರೆ, –

ಇಯ ಜಾಣಿಊಣ ಜೋಈ ವವಹಾರಂ ಚಯಇ ಸವ್ವಹಾ ಸವ್ವಂ ।
ಝಾಯಇ ಪರಮಪ್ಪಾಣಂ ಜಹ ಭಣಿಯಂ [1]ಜಿಣವರಿಂದೇಹಿಂ ॥೩೨॥

---

ವ್ಯವಹಾರದಲಿ ನಿದ್ರಿಸುವ ಯೋಗಿ ನಿಜಕಾರ್ಯದೊಳ್ಜಾಗೃತರಿರುವರು ।
ವ್ಯವಹಾರದಲಿ ಜಾಗೃತರಿರುವವರು ಆತ್ಮಕಾರ್ಯದಲಿ ನಿದ್ರಿಪರು ॥೩೦॥

ಈ ರೀತಿ ತಿಳಿದ ಯೋಗಿ ವ್ಯವಹಾರವೆಲ್ಲವನು ಸರ್ವಥಾ ತ್ಯಜಿಸುವನು ।
ಪರಮಾತ್ಮನ ಧ್ಯಾನ ಮಾಡುವನು ಜಿನದೇವರುಪದೇಶಿಸಿದ ತೆರದಿ ॥೩೨॥

---

೧ 'ಜಿಣವರಿಂದೇಣ' ಎಂಬ ಪಾಠಾಂತರವಿದೆ.

**ಇತಿ ಜ್ಞಾತ್ವಾ ಯೋಗೀ ವ್ಯವಹಾರಂ ತ್ಯಜತಿ ಸರ್ವಥಾ ಸರ್ವಮ್ ।**
**ಧ್ಯಾಯತಿ ಪರಮಾತ್ಮಾನಂ ಯಥಾ ಭಣಿತಂ [೧]ಜಿನವರೇಂದ್ರೈಃ ॥೩೨॥**

ಅರ್ಥ :- ಈ ಪ್ರಕಾರ ಪೂರ್ವೋಕ್ತ ಕಥನವನ್ನು ತಿಳಿದುಕೊಂಡು ಯೋಗಿ ಧ್ಯಾನಿ ಮುನಿಯಿದ್ದವನು ಎಲ್ಲ ವ್ಯವಹಾರವನ್ನು ಎಲ್ಲ ಪ್ರಕಾರದಿಂದ ಬಿಟ್ಟುಕೊಡುತ್ತಾನೆ ಮತ್ತು ಪರಮಾತ್ಮನ ಧ್ಯಾನ ಮಾಡುತ್ತಾನೆ. ಆ ಜಿನವರೇಂದ್ರ ತೀರ್ಥಂಕರ ಸರ್ವಜ್ಞದೇವರು ಹೇಳಿರುವಂತೆಯೇ ಪರಮಾತ್ಮನ ಧ್ಯಾನಮಾಡುತ್ತಾನೆ.

ಭಾವಾರ್ಥ :- ಸರ್ವಥಾ ಸರ್ವವ್ಯವಹಾರವನ್ನು ಬಿಡಲು ಹೇಳಿರುವುದರ ಆಶಯವು ಹೀಗಿದೆ - ಲೋಕ ವ್ಯವಹಾರ ಮತ್ತು ಧರ್ಮವ್ಯವಹಾರವೆಲ್ಲವನ್ನೂ ಬಿಟ್ಟಮೇಲೆ ಧ್ಯಾನವಾಗುವುದರಿಂದ ಜಿನದೇವರು ಹೇಳಿರುವ ಹಾಗೆಯೇ ಪರಮಾತ್ಮನ ಧ್ಯಾನಮಾಡಬೇಕು. ಅನ್ಯಮತದವರು ಪರಮಾತ್ಮನ ಸ್ವರೂಪವನ್ನು ಅನೇಕ ಪ್ರಕಾರದಿಂದ ಅನ್ಯಥಾ ಹೇಳುತ್ತಾರೆ ಅವರು ಧ್ಯಾನದ ಉಪದೇಶವನ್ನು ಅನ್ಯಥಾ ಮಾಡುತ್ತಾರೆ, ಅದರ ನಿಷೇಧಮಾಡಿದೆ. ಜಿನದೇವರು ಪರಮಾತ್ಮನ ಹಾಗೂ ಧ್ಯಾನದ ಸ್ವರೂಪ ಹೇಳಿದ್ದಾರೆ ಅದು ಸತ್ಯಾರ್ಥವಿದೆ, ಪ್ರಮಾಣಭೂತವಿದೆ, ಅದೇ ಪ್ರಕಾರ ಯಾವ ಯೋಗೀಶ್ವರರು ಮಾಡುತ್ತಾರೆ ಅವರೇ ನಿರ್ವಾಣವನ್ನು ಪ್ರಾಪ್ತಮಾಡಿಕೊಳ್ಳುತ್ತಾರೆ. ॥೩೨॥

ಈಗ ಜಿನದೇವರು ಧ್ಯಾನಾಧ್ಯಯನದ ಪ್ರವೃತ್ತಿಯನ್ನು ಹೇಳಿರುವಂತೆಯೇ ಉಪದೇಶ ಮಾಡುತ್ತಾರೆ, -

**ಪಂಚಮಹವ್ವಯಜುತ್ತೋ ಪಂಚಸು ಸಮಿದೀಸು ತೀಸು ಗುತ್ತೀಸು ।**
**ರಯಣತ್ತಯಸಂಜುತ್ತೋ ಝಾಣಜ್ಝಯಣಂ ಸಯಾ ಕುಣಹ ॥೩೩॥**

**ಪಂಚಮಹಾವ್ರತಯುಕ್ತಃ ಪಂಚಸು ಸಮಿತಿಷು ತಿಸೃಷು ಗುಪ್ತಿಷು ।**
**ರತ್ನತ್ರಯಸಂಯುಕ್ತಃ ಧ್ಯಾನಾಧ್ಯಯನಂ ಸದಾ ಕುರು ॥೩೩॥**

ಅರ್ಥ :- ಯಾರು ಐದು ಮಹಾವ್ರತಗಳಿಂದ ಯುಕ್ತರಿದ್ದಾರೆ, ಐದು ಸಮಿತಿ ಮತ್ತು ಮೂರು ಗುಪ್ತಿಗಳಿಂದ ಯುಕ್ತರಾಗಿದ್ದಾರೆ ಅಲ್ಲದೆ ಸಮ್ಯಗ್ದರ್ಶನಜ್ಞಾನಚಾರಿತ್ರರೂಪದ ರತ್ನತ್ರಯದ ಸಂಯುಕ್ತರಾಗಿದ್ದಾರೆ, ಹೀಗಾಗಿ ಎಲೈ ಮುನಿಜನರೇ ! ನೀವು ಧ್ಯಾನ ಮತ್ತು ಅಧ್ಯಯನ ಶಾಸ್ತ್ರದ ಅಭ್ಯಾಸವನ್ನು ಯಾವಾಗಲೂ ಮಾಡಿರಿ.

ಭಾವಾರ್ಥ :- ಅಹಿಂಸೆ, ಸತ್ಯ, ಅಸ್ತೇಯ, ಬ್ರಹ್ಮಚರ್ಯ, ಪರಿಗ್ರಹದ ತ್ಯಾಗ ಇವು ಐದು ಮಹಾವ್ರತಗಳಿವೆ; ಈರ್ಯಾ, ಭಾಷಾ, ಏಷಣಾ, ಆದಾನನಿಕ್ಷೇಪಣ, ಪ್ರತಿಷ್ಠಾಪನವೆಂದು ಇವು ಐದು ಸಮಿತಿಗಳು ಮತ್ತು ಮನ, ವಚನ, ಕಾಯದ ನಿಗ್ರಹರೂಪವಾಗಿ ಮೂರು ಗುಪ್ತಿಗಳು ಹೀಗೆ ಹದಿಮೂರುಪ್ರಕಾರದ ಚಾರಿತ್ರವನ್ನು ಜಿನದೇವರು ಹೇಳಿದ್ದಾರೆ ಅದರಿಂದ ಯುಕ್ತವಿರುವುದು ಮತ್ತು ನಿಶ್ಚಯ-ವ್ಯವಹಾರರೂಪದ ಸಮ್ಯಗ್ದರ್ಶನಜ್ಞಾನಚಾರಿತ್ರಗಳನ್ನು

---

ನೀನು ಪಂಚಮಹಾವ್ರತ ಪಂಚಸಮಿತಿ ತ್ರಿಗುಪ್ತಿಗಳಿಂದ ಸಂಯುಕ್ತನಾಗಿ ।
ಧ್ಯಾನಾಧ್ಯಯನವನು ನಿರಂತರ ಮಾಡು ರತ್ನತ್ರಯದಿಂದ ಸಂಯುಕ್ತನಾಗಿ ॥೩೩॥

---

೧ 'ಜಿನವರೇಂದ್ರೈಃ' ಎಂಬ ಪಾಠಾಂತರವಿದೆ.

ಹೇಳಿದೆ ಅವುಗಳಿಂದ ಯುಕ್ತವಾಗಿ ಧ್ಯಾನ ಮತ್ತು ಅಧ್ಯಯನ ಮಾಡುವ ಉಪದೇಶವಿದೆ. ಇವುಗಳಲ್ಲೂ ಮುಖ್ಯವಂತೂ ಧ್ಯಾನವೇ ಇದ್ದು ಒಂದು ವೇಳೆ ಇದರಲ್ಲಿ ಮನಸ್ಸು ಸ್ಥಿರವಾಗದಿದ್ದರೆ ಶಾಸ್ತ್ರದ ಅಭ್ಯಾಸದಲ್ಲಿ ಮನಸ್ಸನ್ನು ತೊಡಗಿಸಬೇಕು ಇದು ಕೂಡ ಧ್ಯಾನತುಲ್ಯವೇ ಇದೆ, ಏಕೆಂದರೆ ಶಾಸ್ತ್ರಗಳಲ್ಲಿ ಪರಮಾತ್ಮನ ಸ್ವರೂಪದ ನಿರ್ಣಯವಿದೆ ಅದು ಈ ಧ್ಯಾನದ ಅಂಗವೇ ಇದೆ. ॥೩೩॥

ರತ್ನತ್ರಯದ ಆರಾಧನೆ ಮಾಡುವಂಥ ಜೀವನು ಆರಾಧಕನೇ ಇದ್ದಾನೆಂದು ಈಗ ಹೇಳುತ್ತಾರೆ, –

**ರಯಣತ್ತಯಮಾರಾಹಂ ಜೀವೋ ಆರಾಹಓ ಮುಣೇಯವ್ವೋ ।**
**ಆರಾಹಣಾವಿಹಾಣಂ ತಸ್ಸ ಫಲಂ ಕೇವಲಂ ಣಾಣಂ ॥೩೪॥**

**ರತ್ನತ್ರಯಮಾರಾಧಯನ್ ಜೀವಃ ಆರಾಧಕಃ ಜ್ಞಾತವ್ಯಃ ।**
**ಆರಾಧನಾವಿಧಾನಂ ತಸ್ಯ ಫಲಂ ಕೇವಲಂ ಜ್ಞಾನಮ್ ॥೩೪॥**

ಅರ್ಥ ಃ– ರತ್ನತ್ರಯ ಸಮ್ಯಗ್ದರ್ಶನಜ್ಞಾನಚಾರಿತ್ರದ ಆರಾಧನೆ ಮಾಡುತ್ತಿರುವ ಜೀವನನ್ನು ಆರಾಧಕನೆಂದು ತಿಳಿಯಬೇಕು ಮತ್ತು ಆರಾಧನೆಯ ವಿಧಾನದ ಫಲವು ಕೇವಲಜ್ಞಾನವಿದೆ.

ಭಾವಾರ್ಥ ಃ– ಸಮ್ಯಗ್ದರ್ಶನ ಜ್ಞಾನ ಚಾರಿತ್ರದ ಆರಾಧನೆ ಮಾಡುವವನು ಕೇವಲಜ್ಞಾನವನ್ನು ಪ್ರಾಪ್ತಮಾಡಿಕೊಳ್ಳುತ್ತಾನೆಂಬುದು ಜಿನಮಾರ್ಗದಲ್ಲಿ ಪ್ರಸಿದ್ಧವಿದೆ. ॥೩೪॥

ಶುದ್ಧಾತ್ಮನೆಂದರೆ ಕೇವಲಜ್ಞಾನ ಮತ್ತು ಕೇವಲಜ್ಞಾನವೆಂದರೆ ಶುದ್ಧಾತ್ಮನೆಂಬುದನ್ನೀಗ ಹೇಳುತ್ತಾರೆ, –

**ಸಿದ್ಧೋ ಸುದ್ಧೋ ಆದಾ ಸವ್ವಣ್ಹೂ ಸವ್ವ ಲೋಯದರಿಸೀ ಯ ।**
**ಸೋ ಜಿಣವರೇಹಿಂ ಭಣಿಓ ಜಾಣ ತುಮಂ ಕೇವಲಂ ಣಾಣಂ ॥೩೫॥**

**ಸಿದ್ಧಃ ಶುದ್ಧಃ ಆತ್ಮಾ ಸರ್ವಜ್ಞಃ ಸರ್ವಲೋಕದರ್ಶೀ ಚ ।**
**ಸಃ ಜಿನವರೈಃ ಭಣಿತಃ ಜಾನೀಹಿ ತ್ವಂ ಕೇವಲಂ ಜ್ಞಾನಂ ॥೩೫॥**

ಅರ್ಥ ಃ– ಜಿನವರರಾದ ಸರ್ವಜ್ಞದೇವರು ಆತ್ಮನನ್ನು ಹೀಗೆ ಹೇಳಿದ್ದಾರೆ–ಸಿದ್ಧನಿದ್ದಾನೆ–ಯಾರಿಂದಲೂ ಉತ್ಪನ್ನವಾಗಿಲ್ಲ ಸ್ವಯಂ ಸಿದ್ಧನಿದ್ದಾನೆ, ಶುದ್ಧನಿದ್ದಾನೆ–ಕರ್ಮಮಲದಿಂದ ರಹಿತನಿದ್ದಾನೆ, ಸರ್ವಜ್ಞನಿದ್ದಾನೆ–ಸಮಸ್ತ ಲೋಕಾಲೋಕವನ್ನು ತಿಳಿಯುತ್ತಾನೆ ಮತ್ತು ಸರ್ವದರ್ಶಿಯಿದ್ದಾನೆ–ಸಮಸ್ತ ಲೋಕಾಲೋಕವನ್ನು ನೋಡುತ್ತಾನೆ, ಈ ಪ್ರಕಾರ ಆತ್ಮನಿದ್ದು ಎಲೈ ಮುನಿಯೇ ! ನೀನು ಅವನನ್ನೇ ಕೇವಲಜ್ಞಾನವೆಂದು ತಿಳಿ ಅಥವಾ ಆ ಕೇವಲಜ್ಞಾನವನ್ನೇ

---

ಆ ರತ್ನತ್ರಯದಾರಾಧನೆ ಮಾಳ್ಪ ಜೀವನನು ಆರಾಧಕನೆಂದರಿವುದು ।
ಆರಾಧನೆಯ ವಿಧಾನದ ಫಲವು ತಾನೆ ಕೇವಲಜ್ಞಾನವಾಗಿರುವುದು ॥೩೪॥

ಆತ್ಮನು ಸಿದ್ಧ ಶುದ್ಧನಾಗಿದ್ದು ಸರ್ವಜ್ಞಮೇಣ್ಸರ್ವಲೋಕದರ್ಶಿಯಿರುವನು ।
ಆತ್ಮ ಕೇವಲಜ್ಞಾನಿಯಿಹನೆಂದು ಜಿನವರರು ಪೇಳ್ದುದಂ ನೀನರಿವುದು ॥೩೫॥

ಆತ್ಮನೆಂದು ತಿಳಿ. ಆತ್ಮನಲ್ಲಿ ಮತ್ತು ಜ್ಞಾನದಲ್ಲಿ ಸ್ವಲ್ಪವೂ ಪ್ರದೇಶ ಭೇದವಿಲ್ಲ, ಗುಣ-ಗುಣಿಯ ಭೇದವಿದೆ ಅದು ಗೌಣವಿದೆ. ಈ ಆರಾಧನೆಯ ಫಲವನ್ನು ಮೊದಲು ಕೇವಲಜ್ಞಾನವೆಂದು ಹೇಳಿದೆ, ಅದೇ ಇದು ಇದೆ. ।।೩೫।।

ಯಾವ ಯೋಗಿಯು ಜಿನದೇವರ ಮತದಿಂದ ರತ್ನತ್ರಯದ ಆರಾಧನೆ ಮಾಡುತ್ತಾನೆ, ಅವನು ಆತ್ಮನ ಧ್ಯಾನ ಮಾಡುತ್ತಾನೆಂದು ಈಗ ಹೇಳುತ್ತಾರೆ, –

ರಯಣತ್ತಯಂ ಪಿ ಜೋಈ ಆರಾಹಇ ಜೋ ಹು ಜಿಣವರಮಏಣ ।
ಸೋ ಝಾಯದಿ ಅಪ್ಪಾಣಂ ಪರಿಹರಇ ಪರಂ ಣ ಸಂದೇಹೋ ।।೩೬।।

ರತ್ನತ್ರಯಮಪಿ ಯೋಗೀ ಆರಾಧಯತಿ ಯಃ ಸ್ಫುಟಂ ಜಿನವರಮತೇನ ।
ಸಃ ಧ್ಯಾಯತಿ ಆತ್ಮಾನಂ ಪರಿಹರತಿ ಪರಂ ನ ಸಂದೇಹಃ ।।೩೬।।

ಅರ್ಥ ಃ– ಯಾವ ಯೋಗಿ ಧ್ಯಾನಿ ಮುನಿಯು ಜಿನೇಶ್ವರದೇವರ ಮತದ ಆಜ್ಞೆಯಿಂದ ರತ್ನತ್ರಯ ಸಮ್ಯಗ್ದರ್ಶನ ಜ್ಞಾನ ಚಾರಿತ್ರದ ಆರಾಧನೆಯನ್ನು ನಿಶ್ಚಯದಿಂದ ಮಾಡುತ್ತಾನೆ ಅವನು ಪ್ರಕಟರೂಪದಿಂದ ಆತ್ಮನದೇ ಧ್ಯಾನ ಮಾಡುತ್ತಾನೆ, ಏಕೆಂದರೆ ರತ್ನತ್ರಯವು ಆತ್ಮನಗುಣವಿದ್ದು ಗುಣ-ಗುಣಿಯಲ್ಲಿ ಭೇದವಿಲ್ಲ, ರತ್ನತ್ರಯದ ಆರಾಧನೆಯು ಅದು ಆತ್ಮನದೇ ಆರಾಧನೆಯಿದೆ ಅದೇ ಪರದ್ರವ್ಯವನ್ನು ಬಿಡುತ್ತದೆಯೆಂಬುದರಲ್ಲಿ ಯಾವ ಸಂದೇಹವಿಲ್ಲ. ।।೩೬।।

ಆತ್ಮನಲ್ಲಿ ರತ್ನತ್ರಯವು ಹೇಗಿದೆಯೆಂದು ಮೊದಲು ಕೇಳಲಾಗಿತ್ತು ಅದರ ಉತ್ತರವನ್ನು ಈಗ ಆಚಾರ್ಯ ದೇವರು ಹೇಳುತ್ತಾರೆ, –

ಜಂ ಜಾಣಇ ತಂ ಣಾಣಂ ಜಂ ಪಿಚ್ಛಇ ತಂ ಚ ದಂಸಣಂ ಣೇಯಂ ।
ತಂ ಚಾರಿತ್ತಂ ಭಣಿಯಂ ಪರಿಹಾರೋ ಪುಣ್ಣಪಾವಾಣಂ ।।೨೭।।

ಯತ್ ಜಾನಾತಿ ತತ್ ಜ್ಞಾನಂ ಯತ್ಪಶ್ಯತಿ ತಚ್ಚ ದರ್ಶನಂ ಜ್ಞೇಯಮ್ ।
ತತ್ ಚಾರಿತ್ರಂ ಭಣಿತಂ ಪರಿಹಾರಃ ಪುಣ್ಯಪಾಪಾನಾಮ್ ।।೩೭।।

ಅರ್ಥ ಃ– ಯಾವುದು ತಿಳಿಯುವುದು ಅದು ಜ್ಞಾನವಿದೆ, ಯಾವುದು ನೋಡುವುದು ಅದು ದರ್ಶನವಿದೆ ಮತ್ತು ಯಾವುದು ಪುಣ್ಯ ಹಾಗೂ ಪಾಪದ ಪರಿಹಾರವಿದೆ ಅದು ಚಾರಿತ್ರವಿದೆಯೆಂದು ತಿಳಿಯಬೇಕು.

---

ಯಾವಯೋಗಿ ರತ್ನತ್ರಯವನಾರಾಧಿಪನು ಪ್ರಕಟ ಜಿನವರಮತದಿಂ ।
ಅವನಾತ್ಮನನುಧ್ಯಾನಿಪನು ಪರಪರಿಹರಿಪನಲ್ಲಿ ಸಂದೇಹವಿಲ್ಲ ।।೩೬।।

ಯಾವುದು ತಿಳಿವುದದು ಜ್ಞಾನವಿದ್ದಾವುದು ನೋಡುವುದದು ದರ್ಶನವಿದೆ ।
ಯಾವುದು ಪುಣ್ಯಮೇಣ್ಪಾಪವನು ಪರಿಹರಿಪುದದನು ಚಾರಿತ್ರವೆಂದಿದೆ ।।೩೭।।

ಭಾವಾರ್ಥ :- ಇಲ್ಲಿ ನೋಡುವಂಥ ಹಾಗೂ ತಿಳಿಯುವಂಥ ಮತ್ತು ತ್ಯಾಗ ಮಾಡುವಂಥ ದರ್ಶನ, ಜ್ಞಾನ, ಚಾರಿತ್ರಗಳನ್ನು ಹೇಳಿದೆ, ಇವಂತೂ ಗುಣಿಯ ಗುಣಗಳಿವೆ ಇವು ಕರ್ತೃವಾಗದಿರುವುದರಿಂದ ನೋಡುವ, ತಿಳಿಯುವ, ತ್ಯಾಗ ಮಾಡುವ ಕ್ರಿಯೆಯ ಕರ್ತೃ ಆತ್ಮನಿರುವುದರಿಂದ ಇವು ಮೂರು ಆತ್ಮ ಇದ್ದು, ಗುಣ-ಗುಣಿಯಲ್ಲಿಯಾವ ಪ್ರದೇಶ ಭೇದವಿರುವುದಿಲ್ಲ. ಈ ಪ್ರಕಾರ ರತ್ನತ್ರಯವೆಂದರೆ ಆತ್ಮನೇ ಇದ್ದಾನೆಂದು ತಿಳಿದುಕೊಳ್ಳಬೇಕು. ॥೩೭॥

ಇದೇ ಅರ್ಥವನ್ನು ಈಗ ಬೇರೆ ಪ್ರಕಾರದಿಂದ ಹೇಳುತ್ತಾರೆ,-

**ತಚ್ಚರುಈ ಸಮ್ಮತ್ತಂ ತಚ್ಚಗ್ಗಹಣಂ ಚ ಹವಇ ಸಣ್ಣಾಣಂ ।**
**ಚಾರಿತ್ತಂ ಪರಿಹಾರೋ ಪರೂವಿಯಂ ಜಿಣವರಿಂದೇಹಿಂ ॥೩೮॥**

**ತತ್ತ್ವರುಚಿಃ ಸಮ್ಯಕ್ತ್ವಂ ತತ್ತ್ವಗ್ರಹಣಂ ಚ ಭವತಿ ಸಂಜ್ಞಾನಮ್ ।**
**ಚಾರಿತ್ರಂ ಪರಿಹಾರಃ ಪ್ರಜಲ್ಪಿತಂ ಜಿನವರೇಂದ್ರೈಃ ॥೩೮॥**

ಅರ್ಥ :- ತತ್ತ್ವರುಚಿಯು ಸಮ್ಯಕ್ತ್ವವಿದೆ, ತತ್ತ್ವದ ಗ್ರಹಣವು ಸಮ್ಯಗ್ಜ್ಞಾನವಿದೆ, ಪರಿಹಾರವು ಚಾರಿತ್ರವಿದೆಯೆಂದು ಜಿನವರೇಂದ್ರ ತೀರ್ಥಂಕರ ಸರ್ವಜ್ಞ ದೇವರು ಹೇಳಿದ್ದಾರೆ,

ಭಾವಾರ್ಥ :- ಜೀವ, ಅಜೀವ, ಆಸ್ರವ, ಬಂಧ, ಸಂವರ, ನಿರ್ಜರೆ, ಮೋಕ್ಷವೆಂಬ ಈ ಏಳು ತತ್ತ್ವಗಳ ಶ್ರದ್ಧೆ ರುಚಿ ಪ್ರತೀತಿಯು ಸಮ್ಯಗ್ದರ್ಶನವಿದೆ, ಇವನ್ನು ತಿಳಿಯುವುದೇ ಸಮ್ಯಗ್ಜ್ಞಾನವಿದೆ ಮತ್ತು ಪರದ್ರವ್ಯದ ಪರಿಹಾರ ಸಂಬಂಧದ ಕ್ರಿಯೆಯ ನಿವೃತ್ತಿಯು ಅದು ಚಾರಿತ್ರವಿದೆಯೆಂದು ಜಿನೇಶ್ವರದೇವರು ಹೇಳಿದ್ದಾರೆ, ಇವನ್ನು ನಿಶ್ಚಯ-ವ್ಯವಹಾರನಯದಿಂದ ಆಗಮದ ಅನುಸಾರವಾಗಿ ಸಾಧಿಸಬೇಕು. ॥೩೮॥

ಈಗ ಸಮ್ಯಗ್ದರ್ಶನವನ್ನು ಮುಖ್ಯಮಾಡಿ ಹೇಳುತ್ತಾರೆ, -

**ದಂಸಣಸುದ್ಧೋ ಸುದ್ಧೋ ದಂಸಣಸುದ್ಧೋ ಲಹೇಇ ಣಿವ್ವಾಣಂ ।**
**ದಂಸಣವಿಹೀಣಪುರಿಸೋ ಣ ಲಹಇ ತಂ ಇಚ್ಛಿಯಂ ಲಾಹಂ ॥೩೯॥**

**ದರ್ಶನಶುದ್ಧಃ ಶುದ್ಧಃ ದರ್ಶನಶುದ್ಧಃ ಲಭತೇ ನಿರ್ವಾಣಮ್ ।**
**ದರ್ಶನವಿಹೀನಪುರುಷಃ ನ ಲಭತೇ ತಂ ಇಷ್ಟಂ ಲಾಭಮ್ ॥೩೯॥**

---

ಆ ತತ್ತ್ವರುಚಿ ಸಮ್ಯಕ್ತ್ವವಿದೆ ತತ್ತ್ವದಗ್ರಹಣವದು ಸಮ್ಯಗ್ಜ್ಞಾನವಿದೆ ।
ಜತೆಗೆ ಪರಿಹಾರ ಚಾರಿತ್ರವಿದೆಯೆಂದು ಜಿನವರೇಂದ್ರ ಪೇಳಿರುವರು ॥೩೮॥

ದರ್ಶನಶುದ್ಧನು ಶುದ್ಧನಿದ್ದು ದರ್ಶನಶುದ್ಧನು ನಿರ್ವಾಣಪಡೆಯುವನು ।
ದರ್ಶನವಿಹೀನ ಪುರುಷನವನು ಪಡೆಯಲಾರನು ಇಷ್ಟ ಲಾಭವನು ॥೩೯॥

ಅರ್ಥ :- ಯಾವ ಪುರುಷನು ದರ್ಶನದಿಂದ ಶುದ್ಧನಿದ್ದಾನೆ ಅವನೇ ಶುದ್ಧನಿದ್ದಾನೆ, ಏಕೆಂದರೆ ಯಾವನ ದರ್ಶನವು ಶುದ್ಧವಿದೆ ಅವನೇ ನಿರ್ವಾಣ ಪಡೆಯುತ್ತಾನೆ ಮತ್ತು ಯಾವ ಪುರುಷನು ಸಮ್ಯಗ್ದರ್ಶನದಿಂದ ರಹಿತನಿರುತ್ತಾನೆ ಆ ಪುರುಷನು ಈಪ್ಸಿತ ಲಾಭ ಎಂದರೆ ಮೋಕ್ಷವನ್ನು ಪ್ರಾಪ್ತಮಾಡಿಕೊಳ್ಳುವ ಸಾಧ್ಯತೆಯಿಲ್ಲ.

ಭಾವಾರ್ಥ :- ಓರ್ವ ಪುರುಷನು ಯಾವುದೇ ಒಂದು ವಸ್ತುವನ್ನು ಅಪೇಕ್ಷಿಸುವುದು ಮತ್ತು ಅದರ ರುಚಿ ಪ್ರತೀತಿ ಶ್ರದ್ಧೆಯಿಲ್ಲದಿದ್ದರೆ ಅದರ ಪ್ರಾಪ್ತಿಯಾಗುವುದಿಲ್ಲವೆಂಬುದು ಲೋಕದಲ್ಲಿ ಕೂಡ ಪ್ರಸಿದ್ಧವಿದೆ, ಆದುದರಿಂದ ಸಮ್ಯಗ್ದರ್ಶನವೇ ನಿರ್ವಾಣದ ಪ್ರಾಪ್ತಿಯಲ್ಲಿ ಮುಖ್ಯವಿದೆ. ।।೩೯।।

ಇಂಥ ಸಮ್ಯಗ್ದರ್ಶನವನ್ನು ಗ್ರಹಣಮಾಡುವ ಉಪದೇಶವು ಸಾರವಿದೆ, ಅದನ್ನು ಯಾವನು ಮನ್ನಿಸುತ್ತಾನೆ ಅವನು ಸಮ್ಯಕ್ತ್ವಿಯಿದ್ದಾನೆಂದು ಈಗ ಹೇಳುತ್ತಾರೆ,-

**ಇಯ ಉವಏಸಂ ಸಾರಂ ಜರಮರಣಹರಂ ಖು ಮಣ್ಣಏ ಜಂ ತು ।**
**ತಂ ಸಮ್ಮತ್ತಂ ಭಣಿಯಂ ಸವಣಾಣಂ ಸಾವಯಾಣಂ ಪಿ ।।೪೦।।**

**ಇತಿ ಉಪದೇಶಂ ಸಾರಂ ಜರಾಮರಣಹರಂ ಸ್ಫುಟಂ ಮನ್ಯತೇ ಯತ್ತು ।**
**ತತ್ ಸಮ್ಯಕ್ತ್ವಂ ಭಣಿತಂ ಶ್ರಮಣಾನಾಂ ಶ್ರಾವಕಾಣಾಮಪಿ ।।೪೦।।**

ಅರ್ಥ :- ಈ ಪ್ರಕಾರ ಸಮ್ಯಗ್ದರ್ಶನ ಜ್ಞಾನ ಚಾರಿತ್ರದ ಉಪದೇಶವು ಸಾರವಿದೆ, ಅದು ಜರಾ-ಮರಣಗಳನ್ನು ನಿವಾರಿಸುವಂಥದ್ದಿದೆ ಅದನ್ನು ಯಾವನು ಮನ್ನಿಸುತ್ತಾನೆ ಶ್ರದ್ಧೆ ಮಾಡುತ್ತಾನೆ ಅವನನ್ನೇ ಸಮ್ಯಕ್ತ್ವವೆಂದು ಹೇಳಿದೆ. ಅದನ್ನು ಮುನಿಗಳಿಗೆ ಹಾಗೂ ಶ್ರಾವಕರೆಲ್ಲರಿಗೂ ಹೇಳಿರುವುದರಿಂದ ಸಮ್ಯಕ್ತ್ವಪೂರ್ವಕವಾಗಿ ಜ್ಞಾನ ಚಾರಿತ್ರಗಳನ್ನು ಅಂಗೀಕಾರ ಮಾಡಬೇಕು.

ಭಾವಾರ್ಥ :- ಜೀವನಿಗೆ ಎಷ್ಟು ಭಾವಗಳಿವೆ ಅವುಗಳಲ್ಲಿ ಸಮ್ಯಗ್ದರ್ಶನ ಜ್ಞಾನ ಚಾರಿತ್ರಗಳು ಸಾರವಿವೆ, ಉತ್ತಮವಿವೆ, ಜೀವನಿಗೆ ಹಿತಕರವಿವೆ, ಮತ್ತು ಇವುಗಳಲ್ಲಿ ಕೂಡ ಸಮ್ಯಗ್ದರ್ಶನವು ಮುಖ್ಯವಿದೆ, ಏಕೆಂದರೆ ಇದರ ಹೊರತಾಗಿ ಜ್ಞಾನ, ಚಾರಿತ್ರಗಳು ಕೂಡ ಮಿಥ್ಯೆಯೆನಿಸಿಕೊಳ್ಳುವುದರಿಂದ ಸಮ್ಯಗ್ದರ್ಶನವನ್ನು ಮುಖ್ಯವೆಂದು ತಿಳಿದುಕೊಂಡು ಮೊದಲು ಅದನ್ನು ಅಂಗೀಕಾರ ಮಾಡಬೇಕೆಂಬ ಉಪದೇಶವು ಮುನಿ ಹಾಗೂ ಶ್ರಾವಕರೆಲ್ಲರಿಗೆ ಇದೆ. ।।೪೦।।

ಈಗ ಸಮ್ಯಗ್ಜ್ಞಾನದ ಸ್ವರೂಪವನ್ನು ಹೇಳುತ್ತಾರೆ, -

**ಜೀವಾಜೀವವಿಹತ್ತೀ ಜೋಈ ಜಾಣೇಇ ಜಿಣವರಮಏಣ ।**
**ತಂ ಸಣ್ಣಾಣಂ ಭಣಿಯಂ ಅವಿಯತ್ಥಂ ಸವ್ವದರಸೀಹಿಂ ।।೪೧।।**

---

ಯಾವನೀ ಜರಾಮರಣಹರ ಸಾರೋಪದೇಶವನು ಸ್ಪಷ್ಟಮನ್ನಿಸುವನು ।
ಅವನನು ಸಮ್ಯಕ್ತ್ವವೆಂದು ಹೇಳಿದೆ ಶ್ರಮಣನಿರಲಿ ಶ್ರಾವಕನಿರಲಿ ।।೪೦।।

ಯಾವ ಯೋಗಿ ಜೀವಾಜೀವದ ಭೇದ ತಿಳಿಯುವನು ಜಿನವರರ ಮತದಿಂದ
ಅವನನು ಸಮ್ಯಗ್ಜ್ಞಾನವೆಂದು ಪೇಳಿಹರು ಸರ್ವಜ್ಞದೇವರು ಸತ್ಯಾರ್ಥದಿಂದ ।೪೧।।

**ಜೀವಾಜೀವವಿಭಕ್ತಿಂ ಯೋಗೀ ಜ್ಞಾನಾತಿ ಜಿನವರಮತೇನ ।**
**ತತ್ ಸಂಜ್ಞಾನಂ ಭಣಿತಂ ಅವಿತಥಂ ಸರ್ವದರ್ಶಿಭಿಃ ॥೪೧॥**

ಅರ್ಥ ಃ– ಯಾವ ಯೋಗಿ ಮುನಿಯು ಜೀವ–ಅಜೀವ ಪದಾರ್ಥಗಳ ಭೇದವನ್ನು ಜಿನವರರ ಮತದಿಂದ ತಿಳಿಯುತ್ತಾನೆ ಅವನು ಸಮ್ಯಗ್ಜ್ಞಾನಿಯಾಗಿದ್ದಾನೆಂದು ಸರ್ವದರ್ಶಿ–ಎಲ್ಲವನ್ನು ನೋಡುವಂಥ ಸರ್ವಜ್ಞದೇವರು ಹೇಳಿದ್ದಾರೆ, ಆದುದರಿಂದ ಅದೇ ಸತ್ಯಾರ್ಥವಿದೆ, ಅನ್ಯ ಛದ್ಮಸ್ಥರು ಹೇಳಿರುವುದು ಸತ್ಯಾರ್ಥವಿಲ್ಲ ಅಸತ್ಯಾರ್ಥವಿದೆ, ಸರ್ವಜ್ಞರು ಹೇಳಿರುವುದೇ ಸತ್ಯಾರ್ಥವಿದೆ

ಭಾವಾರ್ಥ ಃ– ಸರ್ವಜ್ಞದೇವರು ಜೀವ, ಪುದ್ಗಲ, ಧರ್ಮ, ಅಧರ್ಮ, ಆಕಾಶ, ಕಾಲವೆಂದು ಜಾತಿ ಅಪೇಕ್ಷೆಯಿಂದ ಆರು ದ್ರವ್ಯಗಳನ್ನು ಹೇಳಿದ್ದಾರೆ. (ಸಂಖ್ಯೆಯ ಅಪೇಕ್ಷೆಯಿಂದ ಒಂದೊಂದು ಅಸಂಖ್ಯ ಮತ್ತು ಅನಂತಾನಂತವಿವೆ.) ಇವುಗಳಲ್ಲಿ ಜೀವವನ್ನು ದರ್ಶನ–ಜ್ಞಾನಮಯ ಚೇತನಾಸ್ವರೂಪವೆಂದು ಹೇಳಿದೆ. ಜೀವವು ಯಾವಾಗಲೂ ಅಮೂರ್ತಿಕವಿದೆ ಎಂದರೆ ಸ್ಪರ್ಶ, ರಸ, ಗಂಧ, ವರ್ಣದಿಂದ ರಹಿತವಿದೆ. ಪುದ್ಗಲ ಮೊದಲಾದ ಐದು ದ್ರವ್ಯಗಳನ್ನು ಅಜೀವವೆಂದು ಹೇಳಿದ್ದಾರೆ, ಇವು ಅಚೇತನವಿವೆ ಜಡವಿವೆ ಇವುಗಳಲ್ಲಿ ಪುದ್ಗಲವು ಸ್ಪರ್ಶ, ರಸ, ಗಂಧ, ವರ್ಣ, ಶಬ್ದಸಹಿತವಾಗಿ ಮೂರ್ತಿಕವಿದೆ–ರೂಪಿಯಿದೆ ಇಂದ್ರಿಯಗೋಚರವಿದೆ, ಉಳಿದವು ಅಮೂರ್ತಿಕವಿವೆ. ಆಕಾಶ ಮೊದಲಾದ ನಾಲ್ಕಂತೂ ಹೇಗಿವೆ ಹಾಗೆ ಇರುತ್ತವೆ. ಜೀವ ಮತ್ತು ಪುದ್ಗಲದಲ್ಲಿ ಅನಾದಿಸಂಬಂಧವಿದೆ. ಪುದ್ಗಲಸ್ಕಂಧಗಳು ಛದ್ಮಸ್ಥನಿಗೆ ಇಂದ್ರಿಯಗೋಚರವಿವೆ, ಇವನ್ನು ಗ್ರಹಣಮಾಡಿ ಜೀವನು ರಾಗ–ದ್ವೇಷ–ಮೋಹರೂಪವಾಗಿ ಪರಿಣಮನ ಮಾಡುತ್ತಾನೆ, ಶರೀರ ಮೊದಲಾದುವನ್ನು ತನ್ನವೆಂದು ಮನ್ನಿಸುತ್ತಾನೆ ಹಾಗೂ ಇಷ್ಟಾನಿಷ್ಟವಾಗಿ ಮನ್ನಿಸಿ ರಾಗ–ದ್ವೇಷ ರೂಪನಾಗುತ್ತಾನೆ, ಇದರಿಂದ ನವೀನ ಪುದ್ಗಲಗಳು ಕರ್ಮರೂಪವಾಗಿ ಬಂಧಕ್ಕೆ ಪ್ರಾಪ್ತವಾಗುತ್ತವೆ. ಇದು ನಿಮಿತ್ತ ನೈಮಿತ್ತಿಕ ಭಾವವಿದೆ, ಹೀಗೆ ಈ ಜೀವನು ಅಜ್ಞಾನಿಯಾಗುತ್ತ ಜೀವ–ಪುದ್ಗಲದ ಭೇದವನ್ನು ತಿಳಿದುಕೊಳ್ಳದೆ ಮಿಥ್ಯಾಜ್ಞಾನಿಯಾಗುತ್ತಾನೆ. ಆದುದರಿಂದ ಜಿನದೇವರ ಮತದಿಂದ ಜೀವ–ಅಜೀವದ ಭೇದವನ್ನು ತಿಳಿದುಕೊಂಡು ಸಮ್ಯಗ್ದರ್ಶನದ ಸ್ವರೂಪ ತಿಳಿದುಕೊಳ್ಳಬೇಕೆಂದು ಆಚಾರ್ಯದೇವರು ಹೇಳುತ್ತಾರೆ. ಈ ಪ್ರಕಾರ ಜಿನದೇವರು ಹೇಳಿರುವುದೇ ಸತ್ಯಾರ್ಥವಿದೆ, ಪ್ರಮಾಣನಯದ ಮುಖಾಂತರ ಹೀಗೆಯೇ ಸಿದ್ಧವಾಗುತ್ತಿರುವುದರಿಂದ ಸರ್ವಜ್ಞ ಜಿನದೇವರು ಸಮಸ್ತ ವಸ್ತುಗಳನ್ನು ಪ್ರತ್ಯಕ್ಷವಾಗಿ ನೋಡಿ ಹೇಳಿದ್ದಾರೆ.

ಅನ್ಯ ಮತದ ಛದ್ಮಸ್ಥರು ತಮ್ಮ ಬುದ್ಧಿಯಲ್ಲಿ ಬಂದ ಹಾಗೆಯೇ ಕಲ್ಪನೆ ಮಾಡಿ ಹೇಳಿದ್ದಾರೆ ಅದು ಪ್ರಮಾಣ ಸಿದ್ಧವಿಲ್ಲ ಇವರಲ್ಲಿ ಕೆಲವರು ವೇದಾಂತಿಗಳಂತೂ ಒಬ್ಬ ಬ್ರಹ್ಮಮಾತ್ರನನ್ನೇ ಹೇಳುತ್ತಾರೆ ಉಳಿದುವೆಲ್ಲವೂ ವಸ್ತುಭೂತವಿಲ್ಲ ಮಾಯಾರೂಪ ಅವಸ್ತುವಿವೆಯೆಂದು ಮನ್ನಿಸುತ್ತಾರೆ. ಕೆಲವರು ನೈಯಾಯಿಕ, ವೈಶೇಷಿಕರು ಜೀವವನ್ನು ಸರ್ವಥಾ ನಿತ್ಯ, ಸರ್ವಗತವೆಂದು ಹೇಳುತ್ತಾರೆ, ಜೀವಕ್ಕೆ ಮತ್ತು ಜ್ಞಾನಗುಣಕ್ಕೆ ಸರ್ವಥಾ ಭೇದ ಮನ್ನಿಸುತ್ತಾರೆ ಮತ್ತು ಅನ್ಯ ಕಾರ್ಯಮಾತ್ರವಿವೆ ಅವನ್ನು ಈಶ್ವರನು ಮಾಡುತ್ತಾನೆಂದು ಮನ್ನಿಸುತ್ತಾರೆ. ಕೆಲವು ಸಾಂಖ್ಯಮತಿಗಳು ಪುರುಷನನ್ನು ಉದಾಸೀನ ಚೈತನ್ಯಸ್ವರೂಪವೆಂದು ಮನ್ನಿಸಿ ಸರ್ವಥಾ ಅಕರ್ತೃವೆಂದು ಮನ್ನಿಸುತ್ತಾರೆ ಜ್ಞಾನವನ್ನು ಮುಖ್ಯ ಧರ್ಮವೆಂದು ಮನ್ನಿಸುತ್ತಾರೆ.

ಕೆಲವು ಬೌದ್ಧಮತಿಗಳು ಎಲ್ಲ ವಸ್ತುಗಳನ್ನು ಕ್ಷಣಿಕವೆಂದು ಮನ್ನಿಸುತ್ತಾರೆ, ಸರ್ವಥಾ ಅನಿತ್ಯವೆಂದು ಮನ್ನಿಸುತ್ತಾರೆ ಇವರಲ್ಲೂ ಅನೇಕ ಮತಭೇದಗಳಿವೆ. ಕೆಲವರು ವಿಜ್ಞಾನಮಾತ್ರ ತತ್ತ್ವವೆಂದು ಮನ್ನಿಸುತ್ತಾರೆ, ಕೆಲವರು ಸರ್ವಥಾ ಶೂನ್ಯವೆಂದು ಮನ್ನಿಸುತ್ತಾರೆ, ಕೆಲವರು ಅನ್ಯಪ್ರಕಾರ ಮನ್ನಿಸುತ್ತಾರೆ. ಮೀಮಾಂಸಕರು ಕರ್ಮಕಾಂಡಮಾತ್ರವೇ ತತ್ತ್ವವೆಂದು ಮನ್ನಿಸುತ್ತಾರೆ, ಜೀವವನ್ನು ಅಣುಮಾತ್ರವೆಂದು ಮನ್ನಿಸುತ್ತಾರೆ, ಆದಾಗ್ಯೂ ಯಾವ ಪರಮಾರ್ಥ ನಿತ್ಯವಸ್ತುವಿಲ್ಲ

ಇತ್ಯಾದಿಯಾಗಿ ಮನ್ನಿಸುತ್ತಾರೆ. ಚಾರ್ವಾಕಮತದವರು ಜೀವವು ತತ್ತ್ವವಿಲ್ಲವೆಂದು ಮನ್ನಿಸುತ್ತಾರೆ, ಪಂಚಭೂತಗಳಿಂದ ಜೀವದ ಉತ್ಪತ್ತಿಯನ್ನು ಮನ್ನಿಸುತ್ತಾರೆ.

ಇತ್ಯಾದಿ ಬುದ್ಧಿಕಲ್ಪಿತ ತತ್ತ್ವಗಳನ್ನು ಮನ್ನಿಸಿ ಪರಸ್ಪರದಲ್ಲಿ ವಿವಾದ ಮಾಡುತ್ತಾರೆ, ಅದು ಯುಕ್ತವೇ ಇದೆ. ವಸ್ತುವಿನ ಪೂರ್ಣರೂಪವು ಕಾಣದಿರುವಾಗ ಕುರುಡರು ಆನೆಯ ವಿವಾದ ಮಾಡುವಂತೆ ವಿವಾದವೇ ಆಗುತ್ತಿರುವುದರಿಂದ ಸರ್ವಜ್ಞ ಜಿನದೇವರೇ ವಸ್ತುವಿನ ಪೂರ್ಣರೂಪ ನೋಡಿದ್ದಾರೆ ಅದನ್ನೇ ಹೇಳಿದ್ದಾರೆ. ಇದು ಪ್ರಮಾಣ ಮತ್ತು ನಯಗಳ ಮುಖಾಂತರ ಅನೇಕಾಂತರೂಪವಾಗಿ ಸಿದ್ಧವಾಗುತ್ತದೆ. ಇವುಗಳ ಚರ್ಚೆಯು ಜೈನರ ಹೇತುವಾದದ ನ್ಯಾಯ-ಶಾಸ್ತ್ರಗಳಿಂದ ತಿಳಿದುಬರುತ್ತಿರುವುದರಿಂದ ಈ ಉಪದೇಶವಿದೆ. ಜಿನಮಾರ್ಗದಲ್ಲಿ ಜೀವಾಜೀವದ ಸ್ವರೂಪವನ್ನು ಸತ್ಯಾರ್ಥವಾಗಿ ಹೇಳಿದೆ ಅದನ್ನು ತಿಳಿಯುವುದು ಸಮ್ಯಗ್ಜ್ಞಾನವಿದೆಯೆಂದು ತಿಳಿದುಕೊಂಡು ಜಿನದೇವರ ಆಜ್ಞೆಯನ್ನು ಮನ್ನಿಸಿ ಸಮ್ಯಗ್ಜ್ಞಾನವನ್ನು ಅಂಗೀಕಾರ ಮಾಡಬೇಕು, ಇದರಿಂದಲೇ ಸಮ್ಯಕ್ಚಾರಿತ್ರದ ಪ್ರಾಪ್ತಿಯಾಗುತ್ತದೆಯೆಂದು ತಿಳಿಯಬೇಕು. ||೪೧||

ಈಗ ಸಮ್ಯಕ್ಚಾರಿತ್ರದ ಸ್ವರೂಪ ಹೇಳುತ್ತಾರೆ, -

**ಜಂ ಜಾಣಿಊಣ ಜೋಇ ಪರಿಹಾರಂ ಕುಣಇ ಪುಣ್ಣಪಾವಾಣಂ |**
**ತಂ ಚಾರಿತ್ತಂ ಭಣಿಯಂ ಅವಿಯಪ್ಪ ಕಮ್ಮರಹಿಏಹಿಂ ||೪೨||**

**ಯತ್ ಜ್ಞಾತ್ವಾ ಯೋಗೀ ಪರಿಹಾರಂ ಕರೋತಿ ಪುಣ್ಯಪಾಪಾನಾಮ್ |**
**ತತ್ ಚಾರಿತ್ರಂ ಭಣಿತಂ ಅವಿಕಲ್ಪಂ ಕರ್ಮರಹಿತೈಃ ||೪೨||**

ಅರ್ಥ :- ಯೋಗಿ ಧ್ಯಾನಿ ಮುನಿಯು ಆ ಪೂರ್ವೋಕ್ತ ಜೀವಾಜೀವದ ಭೇದರೂಪವಾದ ಸತ್ಯಾರ್ಥ ಸಮ್ಯಗ್ಜ್ಞಾನವನ್ನು ತಿಳಿದುಕೊಂಡು ಪುಣ್ಯ ಮತ್ತು ಪಾಪ ಇವೆರಡರ ಪರಿಹಾರ ಮಾಡುತ್ತಾನೆ, ತ್ಯಾಗ ಮಾಡುತ್ತಾನೆ ಅದು ಚಾರಿತ್ರವಿದೆ, ಅದು ನಿರ್ವಿಕಲ್ಪವಿದೆ ಎಂದರೆ ಪ್ರವೃತ್ತಿರೂಪಕ್ರಿಯೆಯ ವಿಕಲ್ಪಗಳಿಂದ ರಹಿತವಿದೆ. ಆ ಚಾರಿತ್ರವು ಘಾತಿಕರ್ಮದಿಂದ ರಹಿತವಿದೆಯೆಂದು ಸರ್ವಜ್ಞದೇವರು ಹೇಳಿದ್ದಾರೆ.

ಭಾವಾರ್ಥ :- ಚಾರಿತ್ರವು ನಿಶ್ಚಯ-ವ್ಯವಹಾರದ ಭೇದದಿಂದ ಎರಡು ಭೇದರೂಪವಿದೆ, ಮಹಾವ್ರತ ಸಮಿತಿ-ಗುಪ್ತಿಯ ಭೇದದಿಂದ ಹೇಳಿರುವುದು ಅದು ವ್ಯವಹಾರವಿದೆ. ಇದರಲ್ಲಿ ಪ್ರವೃತ್ತಿರೂಪದ ಕ್ರಿಯೆಯು ಶುಭಕರ್ಮರೂಪದ ಬಂಧ ಮಾಡುತ್ತದೆ ಮತ್ತು ಈ ಕ್ರಿಯೆಗಳಲ್ಲಿ ಎಷ್ಟು ಅಂಶ ನಿವೃತ್ತಿಯಿದೆ (ಎಂದರೆ ಅದೇ ಸಮಯದಲ್ಲಿ ಸ್ವಾಶ್ರಯರೂಪದ ಆಂಶಿಕ ನಿಶ್ಚಯ-ವೀತರಾಗ ಭಾವವಿದೆ) ಅದರ ಫಲವು ಬಂಧವಿಲ್ಲ, ಅದರ ಫಲವು ಕರ್ಮದ ಏಕದೇಶ ನಿರ್ಜರೆಯಿದೆ. ಎಲ್ಲ ಕರ್ಮಗಳಿಂದ ರಹಿತವಾಗಿ ತನ್ನ ಆತ್ಮಸ್ವರೂಪದಲ್ಲಿ ಲೀನವಾಗುವುದು ಅದು ನಿಶ್ಚಯ ಚಾರಿತ್ರವಿದೆ, ಇದರ ಫಲವು ಕರ್ಮದ ನಾಶವೇ ಇದೆ, ಇದು ಪುಣ್ಯ-ಪಾಪದ ಪರಿಹಾರರೂಪವಾಗಿ ನಿರ್ವಿಕಲ್ಪವಿದೆ, ಪಾಪದ ತ್ಯಾಗವಂತೂ ಮುನಿಗೆ ಇದ್ದೇ ಇರುತ್ತದೆ ಮತ್ತು ಪುಣ್ಯದ ತ್ಯಾಗವು ಹೀಗಿದೆ-

---

**ಅದನರಿತು ಯೋಗಿ ಪರಿಹಾರ ಮಾಡುವನು ಪುಣ್ಯಮಲ್ಲದೆ ಪಾಪವನು |**
**ಅದನು ಚಾರಿತ್ರವೆಂದು ಹೇಳಿದೆಯದು ನಿರ್ವಿಕಲ್ಪ ಕರ್ಮರಹಿತವಿದೆ ||೪೨||**

ಶುಭಕ್ರಿಯೆಯ ಫಲವು ಪುಣ್ಯಕರ್ಮದ ಬಂಧವಿದ್ದು ಅದರ ಇಚ್ಛೆಯಿರುವುದಿಲ್ಲ. ಬಂಧದ ನಾಶದ ಉಪಾಯವು ನಿರ್ವಿಕಲ್ಪ ನಿಶ್ಚಯ ಚಾರಿತ್ರದ ಮುಖ್ಯ ಉದ್ಯಮವಿದೆ. ಹೀಗೆ ಇಲ್ಲಿ ನಿರ್ವಿಕಲ್ಪ ಎಂದರೆ ಪುಣ್ಯ ಪಾಪದಿಂದ ರಹಿತವಾದಂಥ ನಿಶ್ಚಯ ಚಾರಿತ್ರವನ್ನು ಹೇಳಿದೆ. ಹದಿನಾಲ್ಕನೆಯ ಗುಣಸ್ಥಾನದ ಅಂತಿಮ ಸಮಯದಲ್ಲಿ ಪೂರ್ಣಚಾರಿತ್ರವಾಗುತ್ತದೆ, ಅದರೊಡನೆಯೇ ಮೋಕ್ಷವಾಗುತ್ತದೆಯೆಂದು ಸಿದ್ಧಾಂತವಿದೆ. ॥೪೨॥

ಹೀಗೆ ರತ್ನತ್ರಯಸಹಿತವಾಗಿ ತಪ ಸಂಯಮ ಸಮಿತಿಯನ್ನು ಪಾಲಿಸುತ್ತ ಶುದ್ಧಾತ್ಮನ ಧ್ಯಾನ ಮಾಡುವಂಥ ಮುನಿಯು ನಿರ್ವಾಣಕ್ಕೆ ಪ್ರಾಪ್ತನಾಗುತ್ತಾನೆಂದು ಈಗ ಹೇಳುತ್ತಾರೆ, –

ಜೋ ರಯಣತ್ತಯಜುತ್ತೋ ಕುಣಇ ತವಂ ಸಂಜದೋ ಸಸತ್ತೀಏ ।
ಸೋ ಪಾವಇ ಪರಮಪಯಂ ಝಾಯಂತೋ ಅಪ್ಪಯಂ ಸುದ್ಧಂ ॥೪೩॥

ಯಃ ರತ್ನತ್ರಯಯುಕ್ತಃ ಕರೋತಿ ತಪಃ ಸಂಯತಃ ಸ್ವಶಕ್ತ್ಯಾ ।
ಸಃ ಪ್ರಾಪ್ನೋತಿ ಪರಮಪದಂ ಧ್ಯಾಯನ್ ಆತ್ಮಾನಂ ಶುದ್ಧಮ್ ॥೪೩॥

ಅರ್ಥ :– ಯಾವ ಮುನಿಯು ರತ್ನತ್ರಯಸಂಯುಕ್ತನಾಗುತ್ತ ಸಂಯಮಿಯಾಗಿ ತನ್ನ ಶಕ್ತಿಗೆ ಅನುಸರಿಸಿ ತಪಸ್ಸು ಮಾಡುತ್ತಾನೆ ಅವನು ಶುದ್ಧ ಆತ್ಮನ ಧ್ಯಾನ ಮಾಡುತ್ತ ಪರಮಪದವಾದ ನಿರ್ವಾಣವನ್ನು ಪ್ರಾಪ್ತ ಮಾಡಿಕೊಳ್ಳುತ್ತಾನೆ,

ಭಾವಾರ್ಥ :– ಯಾವ ಸಂಯಮಿಯಾದ ಮುನಿಯು ಐದುಮಹಾವ್ರತ, ಐದು ಸಮಿತಿ, ಮೂರು ಗುಪ್ತಿಯೆಂದು ಈ ಹದಿಮೂರು ಪ್ರಕಾರದ ಚಾರಿತ್ರವೇ ಪ್ರವೃತ್ತಿರೂಪದ ವ್ಯವಹಾರ ಚಾರಿತ್ರ ಸಂಯಮವಿದ್ದು ಅದನ್ನು ಅಂಗೀಕಾರಮಾಡಿ ಮತ್ತು ಪೂರ್ವೋಕ್ತ ಪ್ರಕಾರ ನಿಶ್ಚಯ ಚಾರಿತ್ರದಿಂದ ಯುಕ್ತನಾಗಿ ತನ್ನ ಶಕ್ತಿಗೆ ಅನುಸರಿಸಿ ಉಪವಾಸ ಕಾಯಕ್ಲೇಶ ಮೊದಲಾದ ಬಾಹ್ಯ ತಪಸ್ಸು ಮಾಡುತ್ತಾನೆ ಆ ಮುನಿಯ ಅಂತರಂಗ ತಪಸ್ಸನ್ನು ಧ್ಯಾನ ಮುಖಾಂತರ ಏಕಾಗ್ರಚಿತ್ತನಾಗಿ ಶುದ್ಧ ಆತ್ಮನ ಧ್ಯಾನ ಮಾಡುತ್ತ ನಿರ್ವಾಣಕ್ಕೆ ಪ್ರಾಪ್ತನಾಗುತ್ತಾನೆ. ॥೪೩॥

[ನೋಟ – ಆ ಆರನೆಯ ಗುಣಸ್ಥಾನಕ್ಕೆ ಯೋಗ್ಯ ಸ್ವಾಶ್ರಯರೂಪದ ನಿಶ್ಚಯರತ್ನತ್ರಯಸಹಿತವಿರುವುದನ್ನು ವ್ಯವಹಾರ ಸಂಯಮ–ವ್ರತಾದಿಗಳನ್ನು ವ್ಯವಹಾರ ಚಾರಿತ್ರವೆಂದು ಮನ್ನಿಸಲಾಗಿದೆ.]

ಧ್ಯಾನಿ ಮುನಿಯು ಇಂಥವನಾಗಿ ಪರಮಾತ್ಮನ ಧ್ಯಾನ ಮಾಡುತ್ತಾನೆಂದು ಈಗ ಹೇಳುತ್ತಾರೆ, –

ತಿಹಿ ತಿಣ್ಣಿ ಧರವಿ ಣಿಚ್ಚಂ ತಿಯರಹಿಓ ತಹ ತಿಏಣ ಪರಿಯರಿಓ ।
ದೋದೋಸವಿಪ್ಪಮುಕ್ಕೋ ಪರಮಪ್ಪಾ ಝಾಯಏ ಜೋಈ ॥೪೪॥

---

ಯಾವ ಸಂಯಮಿ ರತ್ನತ್ರಯಯುಕ್ತನಾಗಿ ಶಕ್ತ್ಯಾನುಸಾರ ತಪ ಮಾಡುವನು ।
ಅವನು ನಿಜಶುದ್ಧಾತ್ಮನ ಧ್ಯಾನಮಾಡುತ್ತ ಪರಮಪದ ಪಡೆಯುವನು ॥೪೩॥

ತ್ರಿಕರಣದಿ ಮೂರ್ಧರಿಸಿ ನಿತ್ಯ ಮೂರ್‌ರಹಿತ ಮೇಣ್ಮೂರರಿಂ ಮಂಡಿತನಾಗಿ ।
ಸ್ವಕೀಯ ದ್ವಿದೋಷ ವಿಮುಕ್ತನಾಗಿ ಯೋಗಿ ಪರಮಾತ್ಮನ ಧ್ಯಾನಮಾಡುವನು ॥೪೪॥

ತ್ರಿಭಿಃ ತ್ರಿನ್ ಧೃತ್ವಾ ನಿತ್ಯಂ ತ್ರಿಕರಹಿತಃ ತಥಾ ತ್ರಿಕೇಣ ಪರಿಕರಿತಃ ।
ದ್ವಿದೋಷವಿಪ್ರಮುಕ್ತಃ ಪರಮಾತ್ಮಾನಂ ಧ್ಯಾಯತೇ ಯೋಗೀ ॥೪೪॥

ಅರ್ಥ ಃ– 'ತ್ರಿಭಿಃ' ಮನ ವಚನ ಕಾಯದಿಂದ 'ತ್ರಿನ್' ಮಳೆ, ಚಳಿ, ಬೇಸಿಗೆಯೆಂಬ ಮೂರು ಕಾಲಯೋಗಗಳನ್ನು ಧಾರಣಮಾಡಿ 'ತ್ರಿಕರಹಿತಃ' ಮಾಯೆ, ಮಿಥ್ಯೆ , ನಿದಾನವೆಂಬ ಮೂರು ಶಲ್ಯಗಳಿಂದ ರಹಿತನಾಗಿ 'ತ್ರಿಕೇಣ ಪರಿಕರಿತಃ' ದರ್ಶನ, ಜ್ಞಾನ, ಚಾರಿತ್ರದಿಂದ ಮಂಡಿತನಾಗಿ ಮತ್ತು 'ದ್ವಿದೋಷವಿಪ್ರಮುಕ್ತಃ' ಎರಡು ದೋಷ ಎಂದರೆ ರಾಗ–ದ್ವೇಷಗಳಿಂದ ರಹಿತನಾಗುತ್ತ ಯೋಗಿ ಧ್ಯಾನಿ ಮುನಿಯು ಪರಮಾತ್ಮ ಎಂದರೆ ಸಮಸ್ತ ಕರ್ಮಗಳಿಂದ ರಹಿತನಾದ ಶುದ್ಧ ಪರಮಾತ್ಮನ ಧ್ಯಾನ ಮಾಡುತ್ತಾನೆ.

ಭಾವಾರ್ಥ ಃ– ಮನ ವಚನ ಕಾಯದಿಂದ ಮೂರುಕಾಲದ ಯೋಗಗಳನ್ನು ಧಾರಣಮಾಡಿ ಪರಮಾತ್ಮನ ಧ್ಯಾನ ಮಾಡಿದರೆ ಕಷ್ಟದಲ್ಲಿ ದೃಢವಾಗಿ ಉಳಿದರೆ ಆಗ ಇವನಿಗೆ ಧ್ಯಾನದ ಸಿದ್ಧಿಯಿದೆಯೆಂದು ತಿಳಿದು ಬರುತ್ತದೆ, ಕಷ್ಟಬಂದಮೇಲೆ ಚಂಚಲವಾಗಿ ಹೋದರೆ ಆಗ ಧ್ಯಾನದ ಸಿದ್ಧಿಯೆಂಥದು ? ಚಿತ್ತದಲ್ಲಿ ಯಾವುದೇ ಪ್ರಕಾರದ ಶಲ್ಯವಿರುವುದರಿಂದ ಚಿತ್ತವು ಏಕಾಗ್ರವಾಗುವುದಿಲ್ಲ ಆಗ ಧ್ಯಾನ ಹೇಗಾಗುವುದು ? ಆದುದರಿಂದ ಶಲ್ಯರಹಿತವೆಂದು ಹೇಳಿದೆ. ಶ್ರದ್ಧೆ, ಜ್ಞಾನ, ಆಚರಣೆಗಳು ಯಥಾರ್ಥವಿಲ್ಲದಾಗ ಧ್ಯಾನವೆಂಥದು; ಆದುದರಿಂದ ದರ್ಶನ, ಜ್ಞಾನ, ಚಾರಿತ್ರಮಂಡಿತವೆಂದು ಹೇಳಿದೆ ಮತ್ತು ರಾಗ–ದ್ವೇಷ–ಇಷ್ಟ–ಅನಿಷ್ಟ ಬುದ್ಧಿಯಿದ್ದಾಗ ಧ್ಯಾನ ಹೇಗಾಗುವುದು ? ಆದುದರಿಂದ ಪರಮಾತ್ಮನ ಧ್ಯಾನ ಮಾಡುವವನು ಹೀಗೆ ಆಗಿ ಮಾಡಬೇಕೆಂಬುದು ತಾತ್ಪರ್ಯವಿದೆ. ॥೪೪॥

ಯಾವನು ಹೀಗಾಗುತ್ತಾನೆ ಅವನು ಉತ್ತಮ ಸುಖವನ್ನು ಪಡೆಯುತ್ತಾನೆಂದು ಈಗ ಹೇಳುತ್ತಾರೆ, –

ಮಯಮಾಯಕೋಹರಹಿಓ ಲೋಹೇಣ ವಿವಜ್ಜಿಓ ಯ ಜೋ ಜೀವೋ ।
ಣಿಮ್ಮಲಸಹಾವಜುತ್ತೋ ಸೋ ಪಾವಇ ಉತ್ತಮಂ ಸೋಕ್ಖಂ ॥೪೫॥

ಮದಮಾಯಾಕ್ರೋಧರಹಿತಃಲೋಭೇನ ವಿವರ್ಜಿತಶ್ಚ ಯಃ ಜೀವಃ ।
ನಿರ್ಮಲಸ್ವಭಾವಯುಕ್ತಃ ಸಃ ಪ್ರಾಪ್ನೋತಿ ಉತ್ತಮಂ ಸೌಖ್ಯಮ್ ॥೪೫॥

ಅರ್ಥ ಃ– ಯಾವ ಜೀವನು ಮದ, ಮಾಯೆ, ಕ್ರೋಧಗಳಿಂದ ರಹಿತನಾಗುವನು ಮತ್ತು ಲೋಭದಿಂದ ವಿಶೇಷರೂಪದಿಂದ ರಹಿತನಾಗುವನು ಆ ಜೀವನು ನಿರ್ಮಲ ವಿಶುದ್ಧ ಸ್ವಭಾವಯುಕ್ತನಾಗಿ ಉತ್ತಮ ಸುಖವನ್ನು ಪ್ರಾಪ್ತಮಾಡಿಕೊಳ್ಳುತ್ತಾನೆ.

ಭಾವಾರ್ಥ ಃ– ಯಾವನು ಮದ ಎಂದರೆ ಅತ್ಯಂತ ಮಾನ, ಮಾಯೆ ಎಂದರೆ ಕಪಟ ಮತ್ತು ಕ್ರೋಧಗಳಿಂದ ರಹಿತನಿರುವವನು ಮತ್ತು ಲೋಭದಿಂದ ವಿಶೇಷ ರಹಿತನಿರುವವನು ಅವನು ಸುಖ ಪಡೆಯುತ್ತಾನೆ, ತೀವ್ರ ಕಷಾಯವುಳ್ಳವನು ಅತ್ಯಂತ ಆಕುಲತಾಯುಕ್ತನಾಗಿ ನಿರಂತರ ದುಃಖಿಯಿರುತ್ತಾನೆಂಬುದು ಲೋಕದಲ್ಲೂ ಕಂಡು ಬರುತ್ತದೆ, ಆದುದರಿಂದ ಮೋಕ್ಷಮಾರ್ಗದಲ್ಲಿ ಕೂಡ ಇದೇ ರೀತಿಯಿದೆಯೆಂದು ತಿಳಿಯಬೇಕು. ಆ ಕ್ರೋಧ, ಮಾನ, ಮಾಯೆ,

---

ಯಾವ ಜೀವ ಮದ–ಮಾಯೆ–ಕ್ರೋಧಗಳ ತ್ಯಜಿಸಿ ಲೋಭವನು ಪರಿಹರಿಸಿ ।
ಅವನು ನಿರ್ಮಲಸ್ವಭಾವಯುಕ್ತನಾಗಿ ಉತ್ತಮ ಸುಖವ ಪಡೆಯುವನು ॥೪೫॥

ಲೋಭಗಳೆಂದು ನಾಲ್ಕು ಕಷಾಯಗಳಿಂದ ರಹಿತವಾದಾಗ ನಿರ್ಮಲಭಾವಗಳಾಗುತ್ತವೆ ಮತ್ತು ಆಗಲೇ ಯಥಾಖ್ಯಾತಚಾರಿತ್ರ ಪಡೆದು ಉತ್ತಮ ಸುಖವನ್ನು ಪ್ರಾಪ್ತಮಾಡಿಕೊಳ್ಳುತ್ತಾನೆ. ॥೪೫॥

ಯಾವನು ವಿಷಯ ಕಷಾಯಗಳಲ್ಲಿ ಆಸಕ್ತನಿದ್ದಾನೆ, ಪರಮಾತ್ಮನ ಭಾವನೆಯಿಂದ ರಹಿತನಿದ್ದಾನೆ, ರೌದ್ರ ಪರಿಣಾಮಿಯಿದ್ದಾನೆ ಅವನು ಜಿನಮತದಿಂದ ಪರಾಙ್ಮುಖನಿದ್ದಾನೆ, ಆದುದರಿಂದ ಅವನು ಮೋಕ್ಷದ ಸುಖಗಳನ್ನು ಪ್ರಾಪ್ತಮಾಡಿಕೊಳ್ಳುವ ಸಾಧ್ಯತೆಯಿಲ್ಲವೆಂಬುದನ್ನು ಈಗ ಹೇಳುತ್ತಾರೆ, –

ವಿಸಯಕಸಾಏಹಿ ಜುದೋ ರುದ್ದೋ ಪರಮಪ್ಪಭಾವರಹಿಯಮಣೋ ।
ಸೋ ಣ ಲಹಇ ಸಿದ್ಧಿಸುಹಂ ಜಿಣಮುದ್ದಪರಮ್ಮುಹೋ ಜೀವೋ ॥೪೬॥

ವಿಷಯಕಷಾಯೈಃ ಯುಕ್ತಃ ರುದ್ರಃ ಪರಮಾತ್ಮಭಾವರಹಿತಮನಾಃ ।
ಸಃ ನ ಲಭತೇ ಸಿದ್ಧಿಸುಖಂ ಜಿನಮುದ್ರಾಪರಾಙ್ಮುಖಃ ಜೀವಃ ॥೪೬॥

ಅರ್ಥ ಃ– ಯಾವ ಜೀವನು ವಿಷಯ–ಕಷಾಯಗಳಿಂದ ಯುಕ್ತನಿದ್ದಾನೆ, ರೌದ್ರಪರಿಣಾಮಿಯಿದ್ದಾನೆ, ಹಿಂಸೆ ಮೊದಲಾದ, ವಿಷಯ–ಕಷಾಯ ಮೊದಲಾದ ಪಾಪಗಳಲ್ಲಿ ಹರ್ಷಸಹಿತ ಪ್ರವೃತ್ತಿ ಮಾಡುತ್ತಾನೆ ಮತ್ತು ಯಾವನ ಚಿತ್ತವು ಪರಮಾತ್ಮನ ಭಾವನೆಯಿಂದ ರಹಿತವಿದೆ ಆ ಜೀವನು ಜಿನಮುದ್ರೆಯಿಂದ ಪರಾಙ್ಮುಖನಿದ್ದಾನೆ, ಅವನು ಇಂಥ ಸಿದ್ಧಿಸುಖ ಎಂದರೆ ಮೋಕ್ಷದ ಸುಖವನ್ನು ಪ್ರಾಪ್ತಮಾಡಿಕೊಳ್ಳುವ ಸಾಧ್ಯತೆಯಿಲ್ಲ.

ಭಾವಾರ್ಥ ಃ– ಜಿನಮತದಲ್ಲಿ ಹೀಗೆ ಉಪದೇಶವಿದೆ–ಯಾವನು ಹಿಂಸೆ ಮೊದಲಾದ ಪಾಪಗಳಿಂದ ವಿರಕ್ತನಿರುವನು, ವಿಷಯ–ಕಷಾಯಗಳಲ್ಲಿ ಆಸಕ್ತನಿರುವುದಿಲ್ಲ ಮತ್ತು ಪರಮಾತ್ಮನ ಸ್ವರೂಪ ತಿಳಿದುಕೊಂಡು ಅವನ ಭಾವನಾಸಹಿತ ಜೀವನಿರುತ್ತಾನೆ ಅವನು ಮೋಕ್ಷವನ್ನು ಪ್ರಾಪ್ತಮಾಡಿಕೊಳ್ಳುವ ಸಾಧ್ಯತೆಯಿದೆ, ಆದುದರಿಂದ ಜಿನಮತದ ಮುದ್ರೆಯಿಂದ ಪರಾಙ್ಮುಖನಿರುವವನಿಗೆ ಮೋಕ್ಷ ಹೇಗಾಗುವುದು ? ಅವನಂತೂ ಸಂಸಾರದಲ್ಲಿಯೇ ಭ್ರಮಣ ಮಾಡುತ್ತಾನೆ. ಇಲ್ಲಿ ರೌದ್ರದ ವಿಶೇಷಣ ಕೊಟ್ಟಿರುವುದರ ಆಶಯವೆಂದರೆ ಹನ್ನೊಂದು ರುದ್ರರಾಗುತ್ತಾರೆ ಅವರು ವಿಷಯ–ಕಷಾಯಗಳಲ್ಲಿ ಆಸಕ್ತರಾಗಿ ಜಿನಮುದ್ರೆಯಿಂದ ಭ್ರಷ್ಟರಾಗುತ್ತಾರೆ, ಅವರಿಗೆ ಮೋಕ್ಷವಾಗುವುದಿಲ್ಲ. ಇವರ ಕಥೆಯನ್ನು ಪುರಾಣಗಳಿಂದ ತಿಳಿದುಕೊಳ್ಳಬೇಕು. ॥೪೬॥

ಜಿನಮುದ್ರೆಯಿಂದ ಮೋಕ್ಷವಾಗುತ್ತದೆ, ಆದರೆ ಈ ಮುದ್ರೆಯು ಯಾವ ಜೀವರುಗಳಿಗೆ ರುಚಿಸುವುದಿಲ್ಲ ಅವರು ಸಂಸಾರದಲ್ಲಿಯೇ ಉಳಿಯುತ್ತಾರೆಂದು ಈಗ ಹೇಳುತ್ತಾರೆ, –

ಜಿಣಮುದ್ದಂ ಸಿದ್ಧಿಸುಹಂ ಹವೇಇ ಣಿಯಮೇಣ ಜಿಣವರುದ್ದಿಟ್ಠಂ ।
ಸಿವಿಣೇ ವಿ ಣ ರುಚ್ಚಇ ಪುಣ ಜೀವಾ ಅಚ್ಛಂತಿ ಭವಗಹಣೇ ॥೪೭॥

---

ಆ ವಿಷಯಕಷಾಯಯುಕ್ತ ರೌದ್ರ ಪರಮಾತ್ಮಭಾವನಾರಹಿತಚಿತ್ತನು ।
ಅವನು ಜಿನಮುದ್ರಾಪರಾಙ್ಮುಖನಾಗಿ ಸಿದ್ಧಿಸುಖವ ಪಡೆಯಲಾರನು ॥೪೬॥

ಜಿನಮುದ್ರೆಯಿಂ ಸಿದ್ಧಿಸುಖ ನಿಯಮದಿಂದಪ್ಪುದೆಂದು ಜಿನವರ ಪೇಳ್ದರು ।
ಕನಸಿನಲಿಕೂಡ ಇದು ರುಚಿಸದ ಜೀವ ಭವವನದಲುಳಿವನು ॥೪೭॥

ಜಿನಮುದ್ರಾ ಸಿದ್ಧಿ ಸುಖಂ ಭವತಿ ನಿಯಮೇನ ಜಿನವರೋದ್ದಿಷ್ಟಾ।
ಸ್ವಪ್ನೇऽಪಿ ನ ರೋಚತೇ ಪುನಃ ಜೀವಾಃ ತಿಷ್ಠಂತಿ ಭವಗಹನೇ ॥೪೭॥

ಅರ್ಥ ಃ- ಜಿನ ಭಗವಂತರ ಮುಖಾಂತರ ಹೇಳಲಾದ ಜಿನಮುದ್ರೆಯಿದೆ ಅದೇ ಸಿದ್ಧಿಸುಖವಿದೆ ಮುಕ್ತಿ ಸುಖವೇ ಇದೆ, ಇದು ಕಾರಣದಲ್ಲಿ ಕಾರ್ಯದ ಉಪಚಾರವಿದೆಯೆಂದು ತಿಳಿಯಬೇಕು, ಜಿನಮುದ್ರೆಯು ಮೋಕ್ಷದ ಕಾರಣವಿದೆ ಮೋಕ್ಷ ಸುಖವು ಅದರ ಕಾರ್ಯವಿದೆ. ಇಂಥ ಜಿನಮುದ್ರೆಯು ಜಿನಭಗವಂತರು ಹೇಳಿರುವಂತೆಯೇ ಇದೆ. ಆದರೆ ಇಂಥ ಜಿನಮುದ್ರೆಯು ಪ್ರತ್ಯಕ್ಷವಂತೂ ದೂರವೇ ಇರಲಿ, ಸ್ವಪ್ನದಲ್ಲಿ ಕೂಡ ಎಂದೂ ರುಚಿಸುವುದಿಲ್ಲ ಅದರ ಸ್ವಪ್ನ ಬೀಳುತ್ತಿದ್ದರೂ ಕೂಡ ಅವಜ್ಞೆಯುಂಟಾಗುತ್ತದೆ ಆ ಜೀವನು ಸಂಸಾರರೂಪದ ಗಹನ ವನದಲ್ಲಿ ಉಳಿಯುತ್ತಾನೆ ಮೋಕ್ಷದ ಸುಖವನ್ನು ಪ್ರಾಪ್ತಮಾಡಿಕೊಳ್ಳುವ ಸಾಧ್ಯತೆಯಿಲ್ಲ.

ಭಾವಾರ್ಥ ಃ- ಜಿನದೇವ ಭಾಷಿತ ಜಿನಮುದ್ರೆಯು ಮೋಕ್ಷದ ಕಾರಣವಿದೆ ಅದು ಮೋಕ್ಷರೂಪವೇ ಇದೆ, ಏಕೆಂದರೆ ಜಿನಮುದ್ರೆಯ ಧಾರಕರು ವರ್ತಮಾನದಲ್ಲಿ ಕೂಡ ಸ್ವಾಧೀನ ಸುಖವನ್ನು ಭೋಗಿಸುತ್ತಾರೆ ಮತ್ತು ನಂತರ ಮೋಕ್ಷ ಸುಖವನ್ನು ಪ್ರಾಪ್ತಮಾಡಿಕೊಳ್ಳುತ್ತಾರೆ. ಇದು ಯಾವ ಜೀವನಿಗೆ ರುಚಿಸುವುದಿಲ್ಲ ಅವನು ಮೋಕ್ಷವನ್ನು ಪ್ರಾಪ್ತಮಾಡಿಕೊಳ್ಳುವ ಸಾಧ್ಯತೆಯಿಲ್ಲ, ಸಂಸಾರದಲ್ಲಿಯೇ ಉಳಿಯುತ್ತಾನೆ. ॥೪೭॥

ಪರಮಾತ್ಮನ ಧ್ಯಾನ ಮಾಡುವಂಥ ಯೋಗಿಯು ಲೋಭರಹಿತನಾಗಿ ಅವನು ನವೀನ ಕರ್ಮದ ಆಸ್ರವ ಮಾಡಿಕೊಳ್ಳುವುದಿಲ್ಲವೆಂದು ಈಗ ಹೇಳುತ್ತಾರೆ, –

ಪರಮಪ್ಪಯ ಝಾಯಂತೋ ಜೋಈ ಮುಚ್ಚೇಇ ಮಲದಲೋಹೇಣ।
ಣಾದಿಯದಿ ಣವಂ ಕಮ್ಮಂ ಣಿದ್ದಿಟ್ಠಂ ಜಿಣವರಿಂದೇಹಿಂ ॥೪೮॥

ಪರಮಾತ್ಮಾನಂ ಧ್ಯಾಯನ್ ಯೋಗೀ ಮುಚ್ಯತೇ ಮಲದಲೋಭೇನ .
ನಾದ್ರಿಯತೇ ನವಂ ಕರ್ಮ ನಿರ್ದಿಷ್ಟಂ ಜಿನವರೇಂದ್ರೈಃ ॥೪೮॥

ಅರ್ಥ ಃ- ಯಾವ ಯೋಗಿ ಧ್ಯಾನಿಯು ಪರಮಾತ್ಮನ ಧ್ಯಾನ ಮಾಡುತ್ತಿರುತ್ತಾನೆ ಅವನು ಮಲಕೊಡುವಂಥ ಲೋಭಕಷಾಯದಿಂದ ಬಿಡುಗಡೆಯಾಗುತ್ತಾನೆ ಅವನಿಗೆ ಲೋಭ ಮಲವು ತಗಲುವುದಿಲ್ಲ ಅದರಿಂದಲೇ ಅವನಿಗೆ ಅನೇಕ ಕರ್ಮದ ಆಸ್ರವವಾಗುವುದಿಲ್ಲವೆಂದು ಜಿನವರೇಂದ್ರ ತೀರ್ಥಂಕರ ಸರ್ವಜ್ಞದೇವರು ಹೇಳಿದ್ದಾರೆ.

ಭಾವಾರ್ಥ ಃ- ಮುನಿಯಿದ್ದೂ ಪರಜನ್ಮಸಂಬಂಧದ ಪ್ರಾಪ್ತಿಯ ಲೋಭಿಯಾಗಿ ನಿದಾನ ಮಾಡಿದರೆ ಅವನಿಗೆ ಪರಮಾತ್ಮನ ಧ್ಯಾನವಾಗುವುದಿಲ್ಲ, ಆದುದರಿಂದ ಪರಮಾತ್ಮನ ಧ್ಯಾನ ಮಾಡುವವನಿಗೆ ಈ ಲೋಕ ಪರಲೋಕ ಸಂಬಂಧದ ಯಾವುದೇ ಪರದ್ರವ್ಯದ ಲೋಭವಿಲ್ಲದಿರುವುದರಿಂದ ಅವನಿಗೆ ನವೀನ ಕರ್ಮದ ಆಸ್ರವವಾಗುವುದಿಲ್ಲವೆಂದು ಜಿನದೇವರು ಹೇಳಿದ್ದಾರೆ. ಈ ಲೋಭ ಕಷಾಯವು ಹತ್ತನೆಯ ಗುಣಸ್ಥಾನದವರೆಗೆ ತಲುಪಿದರೂ ಕೂಡ ಅವ್ಯಕ್ತವಾಗಿ ಆತ್ಮನಿಗೆ ದೋಷ

---

ಯತಿಪರಮಾತ್ಮನ ಧ್ಯಾನಿಸುತ ಮಲಜನ್ಯ ಲೋಭದಿಂದ ಮುಕ್ತನಾಗುವನು।
ನೂತನ ಕರ್ಮದಾಸ್ರವವಿಲ್ಲವೆಂದು ಜಿನದೇವರು ನಿರ್ದೇಶಿಸಿರುವರು ॥೪೮॥

ತಗಲಿಸುತ್ತದೆ. ಆದುದರಿಂದ ಇದನ್ನು ಕತ್ತರಿಸಿ ಹಾಕುವುದೇ ಯುಕ್ತವಿದೆ ಅಥವಾ ಎಲ್ಲಿಯವರೆಗೆ ಮೋಕ್ಷದ ಅಪೇಕ್ಷೆಯರೂಪದ ಲೋಭವಿರುತ್ತದೆ ಅಲ್ಲಿಯವರೆಗೆ ಮೋಕ್ಷವಾಗುವುದಿಲ್ಲ. ಅದಕ್ಕಾಗಿಯೇ ಲೋಭದ ಅತ್ಯಂತ ನಿಷೇಧ ಮಾಡಿದೆ. ।।೪೮।।

ಯಾವನು ಹೀಗೆ ನಿರ್ಲೋಭಿಯಾಗಿ ದೃಢ ಸಮ್ಯಕ್ತ್ವ ಜ್ಞಾನ ಚಾರಿತ್ರವುಳ್ಳವನಾಗಿ ಪರಮಾತ್ಮನ ಧ್ಯಾನ ಮಾಡುತ್ತಾನೆ ಅವನು ಪರಮಪದವನ್ನು ಪ್ರಾಪ್ತಮಾಡಿಕೊಳ್ಳುತ್ತಾನೆಂದು ಈಗ ಹೇಳುತ್ತಾರೆ, –

ಹೋಊಣ ದಿಢಚರಿತ್ತೋ ದಿಢಸಮ್ಮತ್ತೇಣ ಭಾವಿಯಮಈಓ ।
ಝಾಯಂತೋ ಅಪ್ಪಾಣಂ ಪರಮಪಯಂ ಪಾವಏ ಜೋಇ ।।೪೯।।

ಭೂತ್ವಾ ದೃಢಚರಿತ್ರಃ ದೃಢಸಮ್ಯಕ್ತ್ವೇನ ಭಾವಿತಮತಿಃ ।
ಧ್ಯಾಯನ್ನಾತ್ಮಾನಂ ಪರಮಪದಂ ಪ್ರಾಪ್ನೋತಿ ಯೋಗೀ ।।೪೯।।

ಅರ್ಥ ಃ– ಪೂರ್ವೋಕ್ತ ಪ್ರಕಾರ ಯಾವನ ಬುದ್ಧಿಯು ದೃಢ ಸಮ್ಯಕ್ತ್ವದಿಂದ ಭಾವಿತವಿದೆ ಅಂಥ ಯೋಗಿ, ಧ್ಯಾನಿ ಮುನಿಯು ದೃಢಚಾರಿತ್ರವಂತನಾಗಿ ಆತ್ಮನ ಧ್ಯಾನ ಮಾಡುತ್ತ ಪರಮಪದ ಎಂದರೆ ಪರಮಾತ್ಮಪದವನ್ನು ಪ್ರಾಪ್ತಮಾಡಿಕೊಳ್ಳುತ್ತಾನೆ.

ಭಾವಾರ್ಥ ಃ– ಸಮ್ಯಗ್ದರ್ಶನ, ಜ್ಞಾನ, ಚಾರಿತ್ರರೂಪದಿಂದ ದೃಢವಾಗಿದ್ದು ಪರೀಷಹಗಳುಂಟಾದರೂ ಕೂಡ ಕಿಂಚಿತ್ತೂ ಚಂಚಲವಾಗದೆ ಆತ್ಮನ ಧ್ಯಾನ ಮಾಡುವವನು ಪರಮಪದವನ್ನು ಪ್ರಾಪ್ತಮಾಡಿಕೊಳ್ಳುತ್ತಾನೆಂಬುದು ತಾತ್ಪರ್ಯವಿದೆ. ।।೪೯।।

ದರ್ಶನ, ಜ್ಞಾನ, ಚಾರಿತ್ರದಿಂದ ನಿರ್ವಾಣವಾಗುತ್ತದೆಯೆಂದು ಹೇಳುತ್ತ ಬಂದಿರುವ ಆ ದರ್ಶನ, ಜ್ಞಾನಗಳಂತೂ ಜೀವದ ಸ್ವರೂಪವಿವೆಯೆಂಬುದು ತಿಳಿಯಿತು, ಆದರೆ ಚಾರಿತ್ರವೆಂದರೇನೆಂಬ ಆಶಂಕೆಯ ಉತ್ತರವಾಗಿ ಈಗ ಹೇಳುತ್ತಾರೆ,–

ಚರಣಂ ಹವಇ ಸಧಮ್ಮೋ ಧಮ್ಮೋ ಸೋ ಹವಇ ಅಪ್ಪಸಮಭಾವೋ ।
ಸೋ ರಾಗರೋಸರಹಿಓ ಜೀವಸ್ಸ ಅಣಣ್ಣಪರಿಣಾಮೋ ।।೫೦।।

ಚರಣಂ ಭವತಿ ಸ್ವಧರ್ಮಃ ಧರ್ಮಃ ಸಃ ಭವತಿ ಆತ್ಮ ಸಮಭಾವಃ .
ಸಃ ರಾಗರೋಷರಹಿತಃ ಜೀವಸ್ಯ ಅನನ್ಯಪರಿಣಾಮಃ ।।೫೦।।

---

ನಿಜದಿ ದೃಢಸಮ್ಯಕ್ತ್ವರೂಪ ಭಾವಿತಮತಿ ದೃಢಚಾರಿತ್ರಯುಕ್ತನಾಗಿ ।
ನಿಜ ಪರಮಾತ್ಮನ ಧ್ಯಾನ ಮಾಡುತ್ತ ಪರಮಪದ ಪಡೆಯುವನಾ ಯೋಗಿ ।೪೯।।

ಚಾರಿತ್ರವದು ನಿಜಧರ್ಮವಿದ್ದು ಧರ್ಮವದು ಆತ್ಮನ ಸಮಭಾವವಿದೆ ।
ಆ ರಾಗದೋಷರಹಿತವದು ಜೀವದ ಅನನ್ಯಮಯ ಪರಿಣಾಮವಿದೆ ।।೫೦।।

ಅರ್ಥ :- ಸ್ವಧರ್ಮ ಎಂದರೆ ಆತ್ಮನ ಧರ್ಮವಿದೆ ಅದು ಚರಣ ಎಂದರೆ ಚಾರಿತ್ರವಿದೆ. ಧರ್ಮವಿದೆ ಅದು ಆತ್ಮನ ಸ್ವಭಾವವಿದ್ದು ಅದು ಎಲ್ಲ ಜೀವಗಳಲ್ಲಿ ಸಮಾನಭಾವವಿದೆ ಯಾವುದು ತನ್ನ ಧರ್ಮವಿದೆ ಅದೇ ಎಲ್ಲ ಜೀವಗಳಲ್ಲಿ ಇದೆ ಅಥವಾ ಎಲ್ಲ ಜೀವಗಳನ್ನು ತನ್ನ ಸಮಾನವೆಂದು ಮನ್ನಿಸುವುದಿದೆ ಮತ್ತು ಅದು ಆತ್ಮಸ್ವಭಾವದಿಂದಲೇ (ಸ್ವಾಶ್ರಯ ಮುಖಾಂತರ)ರಾಗದ್ವೇಷರಹಿತವಿದೆ, ಯಾವುದರಲ್ಲೂ ಇಷ್ಟ-ಅನಿಷ್ಟ ಬುದ್ಧಿಯಿಲ್ಲದಂಥದು ಚಾರಿತ್ರವಿದೆ ಅದು ಜೀವಕ್ಕೆ ದರ್ಶನ-ಜ್ಞಾನಗಳಿರುವಂತೆಯೇ ಅನನ್ಯ ಪರಿಣಾಮವಿದೆ, ಜೀವದ ಭಾವವೇ ಇದೆ.

ಭಾವಾರ್ಥ :- ಚಾರಿತ್ರವಿದೆ ಅದು ಜ್ಞಾನದಲ್ಲಿ ರಾಗ-ದ್ವೇಷಗಳಿಲ್ಲದ ನಿರಾಕುಲತೆಯ ರೂಪವಾದ ಸ್ಥಿರತೆಯ ಭಾವವಿದೆ ಅದು ಜೀವದ್ದೇ ಅಭೇದರೂಪವಾದ ಪರಿಣಾಮವಿದೆ, ಅದೇನು ಅನ್ಯ ವಸ್ತುವಲ್ಲ. ॥೫೦॥

ಈಗ ಜೀವದ ಪರಿಣಾಮದ ಸ್ವಚ್ಛತೆಯನ್ನು ದೃಷ್ಟಾಂತದೊಡನೆ ತಿಳಿಸಿ ಕೊಡುತ್ತಾರೆ, -

**ಜಹ ಫಲಿಹಮಣಿ ವಿಸುದ್ಧೋ ಪರದವ್ವಜುದೋ ಹವೇಇ ಅಣ್ಣಂ ಸೋ ।**
**ತಹ ರಾಗಾದಿವಿಜುತ್ತೋ ಜೀವೋ ಹವದಿ ಹು ಅಣಣ್ಣವಿಹೋ ॥೫೧॥**

**ಯಥಾ ಸ್ಫಟಿಕಮಣಿಃ ವಿಶುದ್ಧಃ ಪರದ್ರವ್ಯಯುತಃ ಭವತ್ಯನ್ಯಃ ಸಃ ।**
**ತಥಾ ರಾಗಾದಿವಿಯುಕ್ತಃ ಜೀವಃ ಭವತಿ ಸ್ಫುಟಮನ್ಯಾನ್ಯವಿಧಃ ॥೫೧॥**

ಅರ್ಥ :- ಯಾವ ಪ್ರಕಾರ ಸ್ಫಟಿಕಮಣಿಯು ವಿಶುದ್ಧವಿದೆ, ನಿರ್ಮಲವಿದೆ, ಉಜ್ವಲವಿದೆ ಅದು ಪರದ್ರವ್ಯಗಳಾದ ಕೆಂಪು-ಹಸಿರು-ಹಳದಿ ಪುಷ್ಪಾದಿಗಳಿಂದ ಯುಕ್ತವಾದ ಮೇಲೆ ಬೇರೆಯಾಗಿ ಕಂಡುಬರುತ್ತದೆ, ಹಳದೀ ಮೊದಲಾದ ವರ್ಣಮಯವಾಗಿ ಗೋಚರಿಸುತ್ತದೆ ಅದೇ ಪ್ರಕಾರ ಜೀವವು ವಿಶುದ್ಧವಿದೆ, ಸ್ವಚ್ಛಸ್ವಭಾವವಿದೆ, ಆದರೆ ಈ (ಅನಿತ್ಯ ಪರ್ಯಾಯದಲ್ಲಿ ತನ್ನ ಅಪರಾಧದಿಂದ ಸ್ವದಿಂದ ಚ್ಯುತವಾದರೆ) ರಾಗ-ದ್ವೇಷ ಮೊದಲಾದ ಭಾವಗಳಿಂದ ಯುಕ್ತವಾದ ಮೇಲೆ ಬೇರೆ ಬೇರೆ ಪ್ರಕಾರವಾಗಿ ಕಂಡುಬರುತ್ತಿರುವುದು ಸ್ಪಷ್ಟವಿದೆ.

ಭಾವಾರ್ಥ :- ರಾಗ ಮೊದಲಾದ ವಿಕಾರಗಳು ಪುದ್ಗಲವಿದ್ದು ಅವು ಜೀವದ ಜ್ಞಾನದಲ್ಲಿ ಬಂದು ಹೊಳೆದಾಗ ಅವುಗಳಿಂದ ಉಪಯುಕ್ತನಾಗಿ ಇವು ನನ್ನ ಭಾವಗಳೇ ಇವೆಯೆಂದು ತಿಳಿಯುತ್ತಾನೆ, ಆದರೆ ಎಲ್ಲಿಯವರೆಗೆ ಭೇದಜ್ಞಾನವಾಗುವುದಿಲ್ಲ ಅಲ್ಲಿಯವರೆಗೆ ಜೀವನು ಬೇರೆ ಬೇರೆ ಪ್ರಕಾರರೂಪದಿಂದ ಅನುಭವದಲ್ಲಿ ಬರುತ್ತಾನೆಂದು ತಿಳಿಯಬೇಕು. ಇಲ್ಲಿ ಸ್ಫಟಿಕಮಣಿಯ ದೃಷ್ಟಾಂತವಿದೆ ಅದಕ್ಕೆ ಪುಷ್ಪ ಮೊದಲಾದ ಅನ್ಯ ದ್ರವ್ಯದ ಡಾಕು ತಗಲುತ್ತದೆ ಆಗ ಬೇರೆಯಾಗಿ ತೋರುತ್ತದೆ. ಇದೇ ಪ್ರಕಾರ ಜೀವದ ಸ್ವಚ್ಛಸ್ವಭಾವದ ವಿಚಿತ್ರತೆಯಿದೆಯೆಂದು ತಿಳಿಯಬೇಕು. ॥೫೧॥

ಆದುದರಿಂದ ಎಲ್ಲಿಯವರೆಗೆ ಮುನಿಗೆ (ಕೇವಲ ಚಾರಿತ್ರದ ದೋಷದಲ್ಲಿ) ರಾಗ-ದ್ವೇಷಗಳ ಅಂಶವಿರುತ್ತದೆ ಅಲ್ಲಿಯವರೆಗೆ ಸಮ್ಯಗ್ದರ್ಶನವನ್ನು ಧಾರಣ ಮಾಡುತ್ತಿದ್ದರೂ ಕೂಡ ಹೀಗಾಗುತ್ತದೆಯೆಂದು ಹೇಳುತ್ತಾರೆ, -

---

ಹೇಗೆ ವಿಶುದ್ಧ ಸ್ಫಟಿಕಮಣಿ ಪರದ್ರವ್ಯಸಂಗದಿಂದನ್ಯರೂಪಾಗುವುದು ।
ಹಾಗೆ ರಾಗಾದಿವಿಮುಕ್ತಜೀವ ಬೇರೆ ಬೇರೆ ವಿಧ ಕಾಣುವುದು ಸ್ಪಷ್ಟವಿದೆ ॥೫೦॥

**ದೇವಗುರುಮ್ಮಿ ಯ ಭತ್ತೋ ಸಾಹಮ್ಮಿಯಸಂಜದೇಸು ಅಣುರತ್ತೋ ।**
**ಸಮ್ಮತ್ತಮುವ್ವಹಂತೋ ಝಾಣರವೋ ಹೋದಿ ಜೋಈ ಸೋ ॥೫೨॥**

**ದೇವೇ ಗುರೌ ಚ ಭಕ್ತಃ ಸಾಧರ್ಮಿಕೇ ಚ ಸಂಯತೇಷು ಅನುರಕ್ತಃ ।**
**ಸಮ್ಯಕ್ತ್ವಮುದ್ವಹನ್ ಧ್ಯಾನರತಃ ಭವತಿ ಯೋಗೀ ಸಃ ॥೫೨॥**

ಅರ್ಥ ಃ– ಯಾವ ಯೋಗಿ ಧ್ಯಾನಿ ಮುನಿಯು ಸಮ್ಯಕ್ತ್ವವನ್ನು ಧಾರಣ ಮಾಡುತ್ತಾನೆ ಮತ್ತು ಎಲ್ಲಿಯವರೆಗೆ ಯಥಾಖ್ಯಾತ ಚಾರಿತ್ರವನ್ನು ಪ್ರಾಪ್ತ ಮಾಡಿಕೊಳ್ಳುವುದಿಲ್ಲ ಅಲ್ಲಿಯವರೆಗೆ ಅರಹಂತ ಸಿದ್ಧದೇವರಲ್ಲಿ ಮತ್ತು ದೀಕ್ಷೆ ಶಿಕ್ಷೆ ಕೊಡುವಂಥ ಗುರುಗಳಲ್ಲಂತೂ ಭಕ್ತಿಯುಕ್ತನಾಗಿರುತ್ತಾನೆ, ಇವರ ಭಕ್ತಿಯು ವಿನಯಸಹಿತವಾಗಿರುತ್ತದೆ ಮತ್ತು ಅನ್ಯ ಸಂಯಮಿ ಮುನಿಗಳು ತಮ್ಮ ಸಮಾನ ಧರ್ಮಸಹಿತರಿರುವವರಲ್ಲೂ ಅನುರಕ್ತನಿರುತ್ತಾನೆ, ಅದೇ ಮುನಿಯು ಧ್ಯಾನದಲ್ಲಿ ಪ್ರೀತಿವಂತನಿರುತ್ತಾನೆ ಮತ್ತು ಮುನಿಯಾಗಿಯೂ ಕೂಡ ದೇವ–ಗುರು–ಸಾಧರ್ಮಿಗಳಲ್ಲಿ ಭಕ್ತಿ ಹಾಗೂ ಅನುರಾಗವಿಲ್ಲದವರಿಗೆ ಧ್ಯಾನದಲ್ಲಿ ರುಚಿಯುಳ್ಳವರೆಂದು ಹೇಳುವುದಿಲ್ಲ, ಏಕೆಂದರೆ ಧ್ಯಾನವುಳ್ಳವನಿಗೆ ಧ್ಯಾನ ವುಳ್ಳವರಲ್ಲಿ ರುಚಿ ಪ್ರೀತಿಯಿರುತ್ತದೆ, ಧ್ಯಾನವುಳ್ಳವನು ರುಚಿಸದಿದ್ದರೆ ಇವನಿಗೆ ಧ್ಯಾನಕೂಡ ರುಚಿಸುವುದಿಲ್ಲ ವೆಂಬುದು ತಿಳಿದುಬರುತ್ತದೆಯೆಂದು ತಿಳಿದು ಕೊಳ್ಳಬೇಕು. ॥೫೨॥

ಧ್ಯಾನವು ಸಮ್ಯಗ್ಜ್ಞಾನಿಗೆ ಆಗುತ್ತದೆ ಮತ್ತು ಅವನೇ ತಪಸ್ಸು ಮಾಡಿ ಕರ್ಮದ ಕ್ಷಯಮಾಡುತ್ತಾನೆಂದು ಈಗ ಹೇಳುತ್ತಾರೆ, –

**ಉಗ್ಗತವೇಣಣ್ಣಾಣೀ ಜಂ ಕಮ್ಮಂ ಖವದಿ ಭವಹಿ ಬಹುಏಹಿಂ ।**
**ತಂ ಣಾಣೀ ತಿಹಿ ಗುತ್ತೋ ಖವೇಇ ಅಂತೋಮುಹುತ್ತೇಣ ॥೫೩॥**

**ಉಗ್ರತಪಸಾಽಜ್ಞಾನೀ ಯತ್ ಕರ್ಮ ಕ್ಷಪಯತಿ ಭವೈರ್ಬಹುಕೈಃ ।**
**ತಜ್ಜ್ಞಾನೀ ತ್ರಿಭಿಃ ಗುಪ್ತಃ ಕ್ಷಪಯತಿ ಅಂತರ್ಮುಹೂರ್ತೇನ ॥೫೩॥**

ಅರ್ಥ ಃ– ಅಜ್ಞಾನಿಯು ತೀವ್ರತಪಸ್ಸಿನ ಮುಖಾಂತರ ಅಧಿಕ ಭವಗಳಲ್ಲಿ ಎಷ್ಟು ಕರ್ಮಗಳ ಕ್ಷಯಃ ಮಾಡುತ್ತಾನೆ ಅಷ್ಟು ಕರ್ಮಗಳನ್ನು ಜ್ಞಾನಿ ಮುನಿಯು ಮೂರು ಗುಪ್ತಿ ಸಹಿತನಾಗಿ ಅಂತಮುಹೂರ್ತದಲ್ಲಿಯೇ ಕ್ಷಯ ಮಾಡಿ ಬಿಡುತ್ತಾನೆ.

ಭಾವಾರ್ಥ ಃ– ತೀವ್ರ ತಪಸ್ಸಿನ ಸಾಮರ್ಥ್ಯಕ್ಕಿಂತಲೂ ಜ್ಞಾನದ ಸಾಮರ್ಥ್ಯವು ಅಧಿಕವಿದೆ. ಏಕೆಂದರೆ ಅಜ್ಞಾನಿಯು ಅನೇಕ ಕಷ್ಟಗಳನ್ನು ಸಹಿಸಿ ತೀವ್ರ ತಪಸ್ಸು ಮಾಡುತ್ತ ಕೋಟ್ಯಂತರ ಭವಗಳಲ್ಲಿ ಎಷ್ಟು ಕರ್ಮಗಳ ಕ್ಷಯ ಮಾಡುತ್ತಾನೆ ಅಷ್ಟು

---

ದೇವ ಗುರುಗಳಲಿ ಭಕ್ತಿ ಸಾಧರ್ಮಿಮುನಿಯಲನುರಕ್ತನಿರುವ ಯೋಗಿ ।
ಅವನು ಸಮ್ಯಕ್ತ್ವಧಾರಕನಿದ್ದು ಧ್ಯಾನದಲಿ ಅನುರಕ್ತನಾಗಿರುವನು ॥೫೨॥

ಅಜ್ಞಾನಿ ಉಗ್ರತಪದಿಂದೆಷ್ಟು ಕರ್ಮಕ್ಷಯಿಸುವನು ಬಹುಭವಗಳಲಿ ।
ಆ ಜ್ಞಾನಿ ತ್ರಿಗುಪ್ತಿಯುತನಾಗಿ ಕ್ಷಯಿಪನಷ್ಟುಕರ್ಮ ಅಂತರ್ಮುಹೂರ್ತದಲಿ ॥೫೩॥

ಕರ್ಮಗಳ ಕ್ಷಯವನ್ನು ಆತ್ಮಭಾವನೆಯಿಂದ ಕೂಡಿದ ಜ್ಞಾನಿ ಮುನಿಯು ಅಂತರ್ಮುಹೂರ್ತದಲ್ಲಿ ಮಾಡಿಬಿಡುತ್ತಾನೆ, ಇದು ಜ್ಞಾನದ ಸಾಮರ್ಥ್ಯವಿದೆ. ||೫೩||

ಇಷ್ಟ ವಸ್ತುಗಳ ಸಂಬಂಧವಾಗಿ ಪರದ್ರವ್ಯಗಳಲ್ಲಿ ರಾಗ-ದ್ವೇಷ ಮಾಡುವವನು ಆ ಭಾವದಿಂದ ಅಜ್ಞಾನಿಯಾಗುತ್ತಾನೆ, ಜ್ಞಾನಿಯು ಇವನ ವಿರುದ್ಧವಿರುತ್ತಾನೆಂದು ಈಗ ಹೇಳುತ್ತಾರೆ,-

**ಸುಹಜೋಏಣ ಸುಭಾವಂ ಪರದವ್ವೇ ಕುಣಇ ರಾಗದೋ ಸಾಹೂ |**
**ಸೋ ತೇಣ ದು ಅಣ್ಣಾಣೀ ಣಾಣೀ ಏತ್ತೋ ದು ವಿವರೀಓ ||೫೪||**

**ಶುಭಯೋಗೇನ ಸುಭಾವಂ ಪರದ್ರವ್ಯೇ ಕರೋತಿ ರಾಗತಃಸಾಧುಃ |**
**ಸಃ ತೇನ ತು ಅಜ್ಞಾನೀ ಜ್ಞಾನೀ ಏತಸ್ಮಾತ್ತು ವಿಪರೀತಃ ||೫೪||**

ಅರ್ಥ :- ಶುಭಯೋಗ ಎಂದರೆ ತನ್ನ ಇಷ್ಟ ವಸ್ತುವಿನ ಸಂಬಂಧದಿಂದ ಪರದ್ರವ್ಯದಲ್ಲಿ ಸುಭಾವ ಎಂದರೆ ಪ್ರೀತಿಯ ಭಾವ ಮಾಡುತ್ತಾನೆ ಅದು ಸ್ಪಷ್ಟ ರಾಗ-ದ್ವೇಷವಿದೆ, ಇಷ್ಟದಲ್ಲಿ ರಾಗವಾದಾಗ ಅನಿಷ್ಟ ವಸ್ತುವಿನಲ್ಲಿ ದ್ವೇಷಭಾವವು ಆಗೇ ಆಗುತ್ತದೆ, ಹೀಗೆ ರಾಗ-ದ್ವೇಷ ಮಾಡುವವನು ಆ ಕಾರಣದಿಂದ ರಾಗಿ ದ್ವೇಷಿ ಅಜ್ಞಾನಿಯಿದ್ದಾನೆ ಮತ್ತು ಇವನಿಂದ ವಿರುದ್ಧ ಎಂದರೆ ಪರದ್ರವ್ಯಗಳಲ್ಲಿ ರಾಗ-ದ್ವೇಷ ಮಾಡದವನು ಜ್ಞಾನಿಯಿದ್ದಾನೆ.

ಭಾವಾರ್ಥ :- ಜ್ಞಾನಿ ಸಮ್ಯಗ್ದೃಷ್ಟಿ ಮುನಿಗೆ ಪರದ್ರವ್ಯದಲ್ಲಿ ರಾಗ-ದ್ವೇಷಗಳಿರುವುದಿಲ್ಲ, ಏಕೆಂದರೆ ಪರದ್ರವ್ಯವನ್ನು ಸರ್ವಥಾ ಇಷ್ಟವೆಂದು ಮನ್ನಿಸಿ ರಾಗ ಮಾಡುವುದು ಅದರಂತೆ ಅನಿಷ್ಟವೆಂದು ಮನ್ನಿಸಿ ದ್ವೇಷ ಮಾಡುವುದನ್ನು ರಾಗವೆಂದು ಹೇಳುತ್ತಾರೆ, ಆದರೆ ಸಮ್ಯಗ್ಜ್ಞಾನಿಯು ಪರದ್ರವ್ಯದಲ್ಲಿ ಇಷ್ಟಾನಿಷ್ಟದ ಕಲ್ಪನೆಯನ್ನೇ ಮಾಡುವುದಿಲ್ಲವೆಂದಮೇಲೆ ರಾಗ-ದ್ವೇಷಗಳು ಹೇಗಾಗುತ್ತವೆ ? ಚಾರಿತ್ರಮೋಹದ ಉದಯದ ವಶವಾಗುವುದರಿಂದ ಸ್ವಲ್ಪ ಧರ್ಮರಾಗವಾಗುತ್ತದೆ ಅದನ್ನು ರೋಗವೆಂದು ತಿಳಿಯುತ್ತಾನೆ ಒಳ್ಳೆಯದೆಂದು ತಿಳಿಯುವುದಿಲ್ಲವೆಂದಮೇಲೆ ಅನ್ಯದಲ್ಲಿ ರಾಗ ಹೇಗಾಗುವುದು ? ಪರದ್ರವ್ಯಗಳಲ್ಲಿ ರಾಗ-ದ್ವೇಷ ಮಾಡುವವನಂತೂ ಅಜ್ಞಾನಿಯಿದ್ದಾನೆಂದು ತಿಳಿಯಬೇಕು. ||೫೪||

ಪರದ್ರವ್ಯಗಳಲ್ಲಿ ರಾಗಭಾವವಾಗುವಂತೆ ಮೋಕ್ಷದ ನಿಮಿತ್ತದಲ್ಲೂ ರಾಗಭಾವವಾದರೆ ಆ ರಾಗವು ಕೂಡ ಆಸ್ರವದ ಕಾರಣವಿದ್ದು ಜ್ಞಾನಿಯು ಅದನ್ನು ಮಾಡುವುದಿಲ್ಲವೆಂದು ಈಗ ಹೇಳುತ್ತಾರೆ, -

**ಆಸವಹೇದೂ ಯ ತಹಾ ಭಾವಂ ಮೋಕ್ಖಸ್ಸ ಕಾರಣಂ ಹವದಿ |**
**ಸೋ ತೇಣ ದು ಅಣ್ಣಾಣೀ ಆದಸಹಾವಾ ದು ವಿವರೀದು ||೫೫||**

---

ಯಾವ ಮುನಿ ಶುಭಯೋಗದಿಂದ ಪರದ್ರವ್ಯದಲಿ ರತಿಭಾವ ಮಾಡುವನು |
ಅವನಜ್ಞಾನಿಯಿದ್ದದರಿಂದ ವಿಪರೀತನಿದ್ದವನು ಜ್ಞಾನಿಯಿರುವನು ||೫೪||

ಅದರಂತಾಸ್ರವಹೇತುಭಾವ ಶಿವಹೇತುವಾಗುವುದವನ ಮತದಲಿ |
ಅದರಿಂದವನು ಅಜ್ಞಾನಿಯಿದ್ದು ಆತ್ಮಸ್ವಭಾವದಿಂದ ವಿಪರೀತನಿಹನು ||೫೫||

ಆಸ್ರವಹೇತುಶ್ಚ ತಥಾ ಭಾವಃ ಮೋಕ್ಷಸ್ಯ ಕಾರಣಂ ಭವತಿ ।
ಸಃ ತೇನ ತು ಅಜ್ಞಾನೀ ಆತ್ಮಸ್ವಭಾವಾತ್ತು ವಿಪರೀತಃ ॥೫೫॥

ಅರ್ಥ :– ಮೊದಲು ಯಾವ ಪ್ರಕಾರ ಪರದ್ರವ್ಯದಲ್ಲಿನ ರಾಗವನ್ನು ಕರ್ಮಬಂಧದ ಕಾರಣವೆಂದು ಹೇಳಿದೆ ಅದೇ ಪ್ರಕಾರ ಒಂದುವೇಳೆ ರಾಗಭಾವವು ಮೋಕ್ಷದ ನಿಮಿತ್ತವಾಗಿದ್ದರೂ ಕೂಡ ಅದು ಆಸ್ರವದ ಕಾರಣವೇ ಇದೆ, ಕರ್ಮದ ಬಂಧವನ್ನೇ ಮಾಡುತ್ತದೆ ; ಆದುದರಿಂದ ಪರದ್ರವ್ಯದ ಹಾಗೆ ಮೋಕ್ಷವನ್ನು ಇಷ್ಟವೆಂದು ಮನ್ನಿಸಿ ರಾಗಭಾವ ಮಾಡುತ್ತಿದ್ದರೆ ಆ ಜೀವನು ಮುನಿಯಿದ್ದರೂ ಅಜ್ಞಾನಿಯಿದ್ದಾನೆ, ಏಕೆಂದರೆ ಅವನು ಆತ್ಮಸ್ವಭಾವದಿಂದ ವಿಪರೀತನಿದ್ದಾನೆ, ಅವನು ಆತ್ಮಸ್ವಭಾವವನ್ನು ತಿಳಿಯುವುದಿಲ್ಲ.

ಭಾವಾರ್ಥ :– ಸಮಸ್ತ ಕರ್ಮಗಳಿಂದ ರಹಿತವಾದ ತನ್ನ ಸ್ವಭಾವವೇ ಮೋಕ್ಷವಿದೆ, ತನಗೆ ಸಮಸ್ತ ಕರ್ಮಗಳಿಂದ ರಹಿತವಾಗುವುದಿದೆಯೆಂಬ ರಾಗಭಾವವೂ ಜ್ಞಾನಿಗೆ ಇರುವುದಿಲ್ಲ, ಒಂದುವೇಳೆ ಚಾರಿತ್ರಮೋಹದ ಉದಯರೂಪವಾದ ರಾಗವಿದ್ದರೆ ಆ ರಾಗವನ್ನೂ ಬಂಧದ ಕಾರಣವೆಂದು ತಿಳಿದುಕೊಂಡರೆ ರೋಗದ ಸಮಾನ ಬಿಡಲು ಅಪೇಕ್ಷಿಸಿದರೆ ಅವನು ಜ್ಞಾನಿಯೇ ಇದ್ದಾನೆ ಮತ್ತು ಆ ರಾಗಭಾವವನ್ನು ಒಳ್ಳೆಯದೆಂದು ತಿಳಿದುಕೊಂಡು ತಾನು ಮಾಡುತ್ತಿದ್ದರೆ ಅಜ್ಞಾನಿಯಿದ್ದಾನೆ. ಆತ್ಮನ ಸ್ವಭಾವವು ಸಮಸ್ತ ರಾಗಾದಿಗಳಿಂದ ರಹಿತವಿರುವುದನ್ನು ಇವನು ತಿಳಿದಿಲ್ಲ ಆದುದರಿಂದ ರಾಗಭಾವವನ್ನು ಮೋಕ್ಷದ ಕಾರಣ ಮತ್ತು ಒಳ್ಳೆಯದೆಂದು ತಿಳಿದುಕೊಂಡು ಮಾಡುವುದರ ನಿಷೇಧವಿದೆ. ॥೫೫॥

ಕರ್ಮ ಮಾತ್ರದಿಂದಲೇ ಸಿದ್ಧಿಯಾಗುತ್ತದೆಂದು ಮನ್ನಿಸುವವನು ಆತ್ಮಸ್ವಭಾವವನ್ನು ತಿಳಿದಿಲ್ಲ ಅವನು ಅಜ್ಞಾನಿಯಿದ್ದಾನೆ ಜಿನಮತದಿಂದ ಪ್ರತಿಕೂಲನಿದ್ದಾನೆಂದು ಈಗ ಹೇಳುತ್ತಾರೆ, –

ಜೋ ಕಮ್ಮಜಾದಮಇಓ ಸಹಾವಣಾಣಸ್ಸ ಖಂಡದೂಸಯರೋ ।
ಸೋ ತೇಣ ದು ಅಣ್ಣಾಣೀ ಜಿಣಸಾಸಣದೂಸಗೋ ಭಣಿದೋ ॥೫೬॥

ಯಃ ಕರ್ಮಜಾತಮತಿಕಸ್ವಭಾವಜ್ಞಾನಸ್ಯ ಖಂಡದೂಷಣಕರಃ ।
ಸಃ ತೇನ ತು ಅಜ್ಞಾನೀ ಜಿನಶಾಸನದೂಷಕಃ ಭಣಿತಃ ॥೫೬॥

ಅರ್ಥ :– ಯಾವನ ಬುದ್ಧಿಯು ಕರ್ಮದಲ್ಲಿಯೇ ಉತ್ಪನ್ನವಾಗುತ್ತದೆ ಅಂಥ ಪುರುಷನು ಸ್ವಭಾವ ಜ್ಞಾನವನ್ನು ಆ ಕೇವಲಜ್ಞಾನವನ್ನು ಖಂಡರೂಪ ದೂಷಣ ಮಾಡುವವನಿದ್ದಾನೆ, ಇಂದ್ರಿಯಜ್ಞಾನವು ಖಂಡ ಖಂಡರೂಪವಿದೆ, ತನ್ನ ತನ್ನ ವಿಷಯವನ್ನು ತಿಳಿಯುತ್ತದೆ, ಜ್ಞಾನವನ್ನು ಇಷ್ಟು ಮಾತ್ರವೆಂದೇ ಮನ್ನಿಸುವಂಥ ಜೀವನು ಈ ಕಾರಣದಿಂದ ಅಜ್ಞಾನಿಯಿದ್ದಾನೆ, ಜಿನಮತವನ್ನು ದೂಷಿತಗೊಳಿಸುತ್ತಾನೆ. (ತನ್ನಲ್ಲಿ ಮಹಾ ದೋಷವನ್ನು ಉತ್ಪನ್ನ ಮಾಡುತ್ತಾನೆ.)

ಭಾವಾರ್ಥ :– ಮೀಮಾಂಸಕ ಮತಿಯು ಕರ್ಮವಾದಿಯಿದ್ದಾನೆ, ಅವನು ಸರ್ವಜ್ಞನನ್ನು ಮನ್ನಿಸುವುದಿಲ್ಲ, ಜ್ಞಾನವನ್ನು ಇಂದ್ರಿಯಜ್ಞಾನವೆಂದೇ ಮನ್ನಿಸುತ್ತಾನೆ, ಕೇವಲಜ್ಞಾನವನ್ನು ಮನ್ನಿಸುವುದಿಲ್ಲ, ಇಲ್ಲಿ ಇದರ ನಿಷೇಧ ಮಾಡಿದೆ,

---

ಯಾವ ಕರ್ಮಜನ್ಯಮತಿಕ ಸ್ವಭಾವ ಜ್ಞಾನದಲಿ ಖಂಡದೂಷಣ ಮಾಳ್ಪನು ।
ಅವನದರಿಂದಜ್ಞಾನಿಯಿದ್ದು ಜಿನಶಾಸನದ ದೂಷಕನಾಗಿರುವನು ॥೫೬॥

ಏಕೆಂದರೆ ಜಿನಮತದಲ್ಲಿ ಆತ್ಮನ ಸ್ವಭಾವವು ಎಲ್ಲವನ್ನು ತಿಳಿಯುವಂಥ ಕೇವಲಜ್ಞಾನ ಸ್ವರೂಪವೆಂದು ಹೇಳಿದೆ ಆದರೆ ಅದು ಕರ್ಮದ ನಿಮಿತ್ತದಿಂದ ಆಚ್ಛಾದಿತವಾಗಿ ಇಂದ್ರಿಯಗಳ ಮುಖಾಂತರ ಕ್ಷಯೋಪಶಮದ ನಿಮಿತ್ತದಿಂದ ಖಂಡರೂಪವಾಗಿ ವಿಷಯಗಳನ್ನು ಖಂಡಖಂಡವಾಗಿ ತಿಳಿಯುತ್ತದೆ, (ತನ್ನ ಸಾಮರ್ಥ್ಯದಿಂದ) ಕರ್ಮಗಳು ನಾಶವಾಗಿ ಹೋದ ಮೇಲೆ ಕೇವಲಜ್ಞಾನವು ಪ್ರಕಟವಾಗುತ್ತದೆ, ಆಗ ಆತ್ಮನು ಸರ್ವಜ್ಞನಾಗುತ್ತಾನೆ. ಹೀಗೆ ಮೀಮಾಂಸಕ ಮತಿಯು ಮನ್ನಿಸುವುದಿಲ್ಲ ಅದಕ್ಕಾಗಿ ಅವನು ಅಜ್ಞಾನಿಯಿದ್ದಾನೆ, ಜಿನಮತಕ್ಕೆ ಪ್ರತಿಕೂಲನಿದ್ದಾನೆ, ಅವನ ಬುದ್ಧಿಯು ಕರ್ಮಮಾತ್ರದಲ್ಲಿಯೇ ಕಳೆದುಹೋಗುತ್ತಲಿದೆ, ಮತ್ತೆ ಯಾರಾದರೂ ಹೀಗೆ ಮನ್ನಿಸುತ್ತಿದ್ದರೆ ಅವರನ್ನೂ ಹೀಗೆಯೇ ತಿಳಿಯಬೇಕು. ॥೫೮॥

ಜ್ಞಾನವು ಚಾರಿತ್ರರಹಿತವಿದ್ದರೆ ಮತ್ತು ತಪಸ್ಸು ಸಮ್ಯಕ್ತ್ವರಹಿತವಿದ್ದರೆ ಅಲ್ಲದೆ ಇತರ ಕ್ರಿಯೆಗಳೂ ಭಾವಪೂರ್ವಕವಿಲ್ಲದಿದ್ದರೆ ಕೇವಲ ಲಿಂಗದಿಂದ ವೇಷಮಾತ್ರದಿಂದ ಯಾವ ಸುಖವಿದೆ ? ಎಂದರೆ ಯಾವುದೂ ಇಲ್ಲವೆಂಬುದನ್ನು ಈಗ ಹೇಳುತ್ತಾರೆ, –

ಣಾಣಂ ಚರಿತ್ತಹೀಣಂ ದಂಸಣಹೀಣಂ ತವೇಹಿಂ ಸಂಜುತ್ತಂ ।
ಅಣ್ಣೇಸು ಭಾವರಹಿಯಂ ಲಿಂಗಗ್ಗಹಣೇಣ ಕಿಂ ಸೋಕ್ಖಂ ॥೫೮॥

ಜ್ಞಾನಂ ಚಾರಿತ್ರಹೀನಂ ದರ್ಶನಹೀನಂ ತಪೋಭಿಃ ಸಂಯುಕ್ತಮ್ ।
ಅನ್ಯೇಷು ಭಾವರಹಿತಂ ಲಿಂಗಗ್ರಹಣೇನ ಕಿಂ ಸೌಖ್ಯಮ್ ॥೫೮॥

ಅರ್ಥ ಃ– ಜ್ಞಾನವಂತೂ ಚಾರಿತ್ರರಹಿತವಿದೆ, ತಪಯುಕ್ತವಿದ್ದರೂ ಕೂಡ ಅದು ದರ್ಶನ ಎಂದರೆ ಸಮ್ಯಕ್ತ್ವದಿಂದ ರಹಿತವಿದೆ, ಇತರ ಆವಶ್ಯಕ ಮೊದಲಾದ ಕ್ರಿಯೆಗಳಿದ್ದರೂ ಅವುಗಳಲ್ಲೂ ಶುದ್ಧ ಭಾವವಿಲ್ಲದಿದ್ದರೆ ಇಂಥ ಲಿಂಗ–ವೇಷ ಗ್ರಹಣಮಾಡುವಲ್ಲಿ ಯಾವ ಸುಖವಿದೆ ?

ಭಾವಾರ್ಥ ಃ– ಯಾವನೋ ಓರ್ವ ಮುನಿಯು ವೇಷ ಮಾತ್ರದಿಂದ ಮುನಿಯಾಗಿ ಶಾಸ್ತ್ರಗಳನ್ನು ಓದುತ್ತಾನೆ, ಆದರೆ ಶಾಸ್ತ್ರ ಓದಿ ಜ್ಞಾನ ಮಾಡಿಕೊಂಡರೂ ನಿಶ್ಚಯ ಚಾರಿತ್ರ ಆ ಶುದ್ಧ ಆತ್ಮನ ಅನುಭವರೂಪ ಚಾರಿತ್ರ ಹಾಗೂ ಬಾಹ್ಯಚಾರಿತ್ರ ನಿರ್ದೋಷ ಮಾಡಲಿಲ್ಲ, ತಪಸ್ಸಿನ ಕ್ಲೇಶ ಬಹಳಷ್ಟು ಸಹಿಸಿದರೂ ಸಮ್ಯಕ್ತ್ವ ಭಾವನೆಯಾಗಲಿಲ್ಲ ಮತ್ತು ಆವಶ್ಯಕ ಮೊದಲಾದ ಬಾಹ್ಯ ಕ್ರಿಯೆಗಳನ್ನು ಮಾಡಿದರೂ ಭಾವಶುದ್ಧವಾಗದಿದ್ದರೆ ಇಂಥ ಬಾಹ್ಯ ವೇಷಮಾತ್ರದಿಂದ ಕ್ಲೇಶವೇ ಆಯಿತು, ಯಾವ ಶಾಂತಭಾವರೂಪವಾದ ಸುಖವಾಗಲಿಲ್ಲ ಮತ್ತು ಈ ವೇಷವು ಪರಲೋಕದ ಸುಖದಲ್ಲೂ ಕಾರಣವಾಗಲಿಲ್ಲ, ಆದುದರಿಂದ ಸಮ್ಯಕ್ತ್ವಪೂರ್ವಕವಾಗಿ ವೇಷ (ಜಿನಲಿಂಗ)ವನ್ನು ಧಾರಣ ಮಾಡುವುದು ಶ್ರೇಷ್ಠವಿದೆ. ॥೫೮॥

ಈಗ ಸಾಂಖ್ಯಮತಿ ಮೊದಲಾದವರ ಆಶಯದ ನಿಷೇಧ ಮಾಡುತ್ತಾರೆ, –

---

ಚಾರಿತ್ರರಹಿತ ಜ್ಞಾನವಿದೆ ದರ್ಶನರಹಿತ ತಪಸಂಯುಕ್ತತೆಯಿದೆ ।
ಬೇರೆ ಭಾವರಹಿತ ಕಾರ್ಯಗಳಿದ್ದಾಲಿಂಗಗ್ರಹಣದಿಂದೇನು ಸುಖವಿದೆ ॥೫೮॥

ಅಚ್ಚೇಯಣಂ ಪಿ ಚೇದಾ ಜೋ ಮಣ್ಣಇ ಸೋ ಹವೇಇ ಅಣ್ಣಾಣೀ ।
ಸೋ ಪುಣ ಣಾಣೀ ಭಣಿಓ ಜೋ ಮಣ್ಣ ಇ ಚೇಯಣೇ ಚೇದಾ ।।೫೮।।

ಅಚೇತನೇಽಪಿ ಚೇತನಂ ಯಃಮನ್ಯತೇ ಸಃ ಭವತಿ ಅಜ್ಞಾನೀ ।
ಸಃ ಪುನಃ ಜ್ಞಾನೀ ಭಣಿತಃ ಯಃ ಮನ್ಯತೇ ಚೇತನೇ ಚೇತನಮ್ ।।೫೮।।

ಅರ್ಥ ಃ- ಅಚೇತನದಲ್ಲಿ ಚೇತನವನ್ನು ಮನ್ನಿಸುವವನು ಅಜ್ಞಾನಿಯಿದ್ದಾನೆ ಮತ್ತು ಚೇತನದಲ್ಲಿಯೇ ಚೇತನವನ್ನು ಮನ್ನಿಸುವವನನ್ನು ಜ್ಞಾನಿಯೆಂದು ಹೇಳಿದೆ.

ಭಾವಾರ್ಥ ಃ- ಪುರುಷನಂತೂ ಉದಾಸೀನ ಚೇತನಾಸ್ವರೂಪ ನಿತ್ಯನಿದ್ದಾನೆ ಮತ್ತು ಈ ಜ್ಞಾನವು ಮುಖ್ಯಧರ್ಮವಿದೆಯೆಂದು ಸಾಂಖ್ಯಮತಿಗಳು ಹೇಳುತ್ತಾರೆ. ಆದರೆ ಇವರ ಮತದಲ್ಲಿ ಪುರುಷನನ್ನು ಉದಾಸೀನ ಚೇತನಾಸ್ವರೂಪವೆಂದು ಮನ್ನಿಸಿರುವುದರಿಂದ ಜ್ಞಾನವಿಲ್ಲದೆಯಂತೂ ಅದು ಜಡವೇ ಆಯಿತು ; ಜ್ಞಾನವಿಲ್ಲದ ಚೇತನವೆಂಥದು ? ಜ್ಞಾನವನ್ನು ಮುಖ್ಯಧರ್ಮವೆಂದು ಮನ್ನಿಸಿದೆ ಮತ್ತು ಮುಖ್ಯವನ್ನು ಜಡವೆಂದು ಮನ್ನಿಸಿದಾಗ ಅಚೇತನದಲ್ಲಿ ಚೇತನವನ್ನು ಮನ್ನಿಸಿದರೆ ಅಜ್ಞಾನಿಯೇ ಆದನು.

ನೈಯಾಯಿಕ, ವೈಶೇಷಿಕ ಮತದವರು ಸರ್ವಥಾ ಗುಣ-ಗುಣಿಯ ಭೇದ ಮನ್ನಿಸುತ್ತಾರೆ, ಅವರು ಚೇತನಾಗುಣವನ್ನು ಜೀವದಿಂದ ಭಿನ್ನವಾಗಿ ಮನ್ನಿಸಿದಾಗ ಜೀವವಂತೂ ಅಚೇತನವಾಗೇ ಉಳಿಯಿತು. ಹೀಗೆ ಅಚೇತನದಲ್ಲಿ ಚೇತನಾತನ ಮನ್ನಿಸಿದೆ. ಭೂತವಾದಿ ಚಾರ್ವಾಕರು ಭೂತ ಪೃಥ್ವೀ ಮೊದಲಾದವುಗಳಿಂದ ಚೇತನಾದ ಉತ್ಪತ್ತಿ ಮನ್ನಿಸುತ್ತಾರೆ, ಭೂತವಂತೂ ಜಡವಿದೆ ಅದರಲ್ಲಿ ಚೇತನಾದ ಉತ್ಪತ್ತಿ ಹೇಗೆ ? ಇವೇ ಮೊದಲಾಗಿ ಮನ್ನಿಸುವವರೆಲ್ಲರೂ ಅಜ್ಞಾನಿಗಳಿರುವುದರಿಂದ ಚೇತನಾದಲ್ಲಿಯೇ ಚೇತನವನ್ನು ಮನ್ನಿಸುವವನು ಜ್ಞಾನಿಯಿದ್ದಾನೆ, ಇದು ಜಿನಮತವಿದೆ. ।।೫೮।।

ತಪಸ್ಸಿಲ್ಲದ ಜ್ಞಾನ ಮತ್ತು ಜ್ಞಾನವಿಲ್ಲದ ತಪಸ್ಸು ಇವೆರಡೂ ಕಾರ್ಯಕಾರಿಯಿಲ್ಲ, ಎರಡೂ ಸಂಯುಕ್ತ-ವಾಗುವುದರಿಂದಲೇ ನಿರ್ವಾಣವಾಗುತ್ತದೆಯೆಂದು ಈಗ ಹೇಳುತ್ತಾರೆ, -

ತವರಹಿಯಂ ಜಂ ಣಾಣಂ ಣಾಣವಿಜುತ್ತೋ ತವ್ರೋ ವಿ ಅಕಯತ್ಥೋ ।
ತಮ್ಹಾ ಣಾಣತವೇಣಂ ಸಂಜುತ್ತೋ ಲಹಇ ಣಿವ್ವಾಣಂ ।।೫೯।।

ತಪೋರಹಿತಂ ಯತ್ ಜ್ಞಾನಂ ಜ್ಞಾನವಿಮುಕ್ತಂ ತಪಃ ಅಪಿ ಅಕೃತಾರ್ಥಮ್ ।
ತಸ್ಮಾತ್ ಜ್ಞಾನತಪಸಾ ಸಂಯುಕ್ತಃ ಲಭತೇ ನಿರ್ವಾಣಮ್ ।।೫೯।।

---

ಯಾವನಚೇತನದಲಿ ಚೇತನಮನ್ನಿಸುವನವನಜ್ಞಾನಿಯಿಹನು ।
ಯಾವನು ಚೇತನದಲಿ ಚೇತನಮನ್ನಿಸುವನವನು ಜ್ಞಾನಿಯಿಹನು ।।೫೮।।

ತಪರಹಿತಜ್ಞಾನ ಜ್ಞಾನರಹಿತ ತಪವಿದ್ದರದು ಅಕೃತಾರ್ಥವಿದೆ ।
ತಪಸಿ ಜ್ಞಾನ ತಪ ಸಂಯುಕ್ತನಿದ್ದರವನು ಶಿವಪದವ ಪಡೆವನು ।।೫೯।।

ಅರ್ಥ :- ತಪಸ್ಸು ಇಲ್ಲದ ಜ್ಞಾನ ಮತ್ತು ಜ್ಞಾನವಿಲ್ಲದ ತಪಸ್ಸು ಇವೆರಡೂ ಕಾರ್ಯಕಾರಿಯಿಲ್ಲ, ಆದುದರಿಂದ ಜ್ಞಾನವು ತಪಸ್ಸಿನೊಡನೆ ಸಂಯುಕ್ತವಾಗಿದ್ದರೇನೇ ನಿರ್ವಾಣಕ್ಕೆ ಪ್ರಾಪ್ತನಾಗುತ್ತಾನೆ.

ಭಾವಾರ್ಥ :- ಸಾಂಖ್ಯ ಮೊದಲಾದ ಅನ್ಯಮತದವರು ಜ್ಞಾನದ ಚರ್ಚೆಯನ್ನು ಅಧಿಕವಾಗಿ ಮಾಡುತ್ತಾರೆ ಮತ್ತು ಜ್ಞಾನದಿಂದಲೇ ಮುಕ್ತಿಯಿದೆಯೆಂದು ಹೇಳುತ್ತಾರೆ, ಆದರೆ ತಪಸ್ಸು ಮಾಡುವುದಿಲ್ಲ, ವಿಷಯ-ಕಷಾಯಗಳನ್ನು ಮುಖ್ಯ ಧರ್ಮವೆಂದು ಮನ್ನಿಸಿ ಸ್ವಚ್ಛಂದವಾಗಿ ಪ್ರವರ್ತಿಸುತ್ತಾರೆ. ಕೆಲವರು ಜ್ಞಾನವನ್ನು ನಿಷ್ಫಲವೆಂದು ಮನ್ನಿಸಿ ಅದನ್ನು ಯಥಾರ್ಥವಾಗಿ ತಿಳಿದುಕೊಳ್ಳುವುದಿಲ್ಲ ಮತ್ತು ತಪಸ್ಸು ಕ್ಲೇಶಾದಿಗಳಿಂದಲೇ ಸಿದ್ಧಿಯಿದೆಯೆಂದು ಮನ್ನಿಸಿ ಅದನ್ನು ಮಾಡುವಲ್ಲಿ ತತ್ಪರರಿರುತ್ತಾರೆ. ಆದರೆ ಇವರೀರ್ವರೂ ಅಜ್ಞಾನಿಗಳಿದ್ದು ಜ್ಞಾನಸಹಿತ ತಪಸ್ಸು ಮಾಡುವವರೇ ಜ್ಞಾನಿಗಳಿದ್ದಾರೆ, ಅವರೇ ಮೋಕ್ಷವನ್ನು ಪ್ರಾಪ್ತಮಾಡಿಕೊಳ್ಳುತ್ತಾರೆಂದು ಆಚಾರ್ಯದೇವರು ಹೇಳುತ್ತಾರೆ. ಇದು ಅನೇಕಾಂತಸ್ವರೂಪವಾದ ಜಿನಮತದ ಉಪದೇಶವಿದೆ. ||೫೯||

ಈಗ ಇದೇ ಅರ್ಥವನ್ನು ಉದಾಹರಣೆಯಿಂದ ದೃಢಪಡಿಸುತ್ತಾರೆ, -

ಧುವಸಿದ್ಧೀ ತಿತ್ಥಯರೋ ಚಉಣಾಣಜುದೋ ಕರೇಇ ತವಯರಣಂ |
ಣಾಊಣ ಧುವಂ ಕುಜ್ಜಾ ತವಯರಣಂ ಣಾಣಜುತ್ತೋ ವಿ ||೬೦||

ಧ್ರುವಸಿದ್ಧಿಸ್ತೀರ್ಥಂಕರಃ ಚತುರ್ಜ್ಞಾನಯುತಃ ಕರೋತಿ ತಪಶ್ಚರಣಮ್ |
ಜ್ಞಾತ್ವಾಧ್ರುವಂ ಕುರ್ಯಾತ್ ತಪಶ್ಚರಣಂ ಜ್ಞಾನಯುಕ್ತಃ ಅಪಿ ||೬೦||

ಅರ್ಥ :- ನೋಡಿರಿ, ಯಾರಿಗೆ ನಿಯಮದಿಂದ ಮೋಕ್ಷವಾಗುವುದಿದೆ ಮತ್ತು ಅವರು ಮತಿ, ಶ್ರುತ ಅವಧಿ ಹಾಗೂ ಮನಃಪರ್ಯಯವೆಂಬ ನಾಲ್ಕು ಜ್ಞಾನಗಳಿಂದ ಯುಕ್ತರಿದ್ದಾರೆ, ಅಂಥ ತೀರ್ಥಂಕರರು ಕೂಡ ತಪಶ್ಚರ್ಯ ಮಾಡುತ್ತಾರೆಂಬುದನ್ನು ನಿಶ್ಚಯದಿಂದ ತಿಳಿದುಕೊಂಡು ಜ್ಞಾನಯುಕ್ತನಿದ್ದರೂ ಕೂಡ ತಪಸ್ಸು ಮಾಡುವುದು ಯೋಗ್ಯವಿದೆಯೆಂದು ಆಚಾರ್ಯದೇವರು ಹೇಳುತ್ತಾರೆ, (ತಪ-ಮುನಿತ್ವ; ಸಮ್ಯಗ್ದರ್ಶನ-ಜ್ಞಾನ-ಚಾರಿತ್ರದ ಏಕತೆಗೆ ತಪವೆಂದು ಹೇಳಿದೆ.)

ಭಾವಾರ್ಥ :- ತೀರ್ಥಂಕರರು ಮತಿ, ಶ್ರುತ, ಅವಧಿ ಈ ಮೂರು ಜ್ಞಾನಸಹಿತ ಜನ್ಮವೆತ್ತುತ್ತಾರೆ ಮತ್ತು ದೀಕ್ಷೆ ಸ್ವೀಕರಿಸುತ್ತಿದ್ದಂತೆಯೇ ಮನಃಪರ್ಯಯಜ್ಞಾನವು ಉತ್ಪನ್ನವಾಗುತ್ತದೆ, ಅವರಿಗೆ ನಿಯಮದಿಂದ ಮೋಕ್ಷವಾಗುವುದಿದ್ದರೂ ಕೂಡ ತಪಸ್ಸು ಮಾಡುತ್ತಾರೆಂಬುದನ್ನು ತಿಳಿದುಕೊಂಡು ಜ್ಞಾನವಾಗುತ್ತಿದ್ದಂತೆಯೇ ತಪಸ್ಸು ಮಾಡುವಲ್ಲಿ ತತ್ಪರರಾಗಬೇಕು. ಜ್ಞಾನಮಾತ್ರದಿಂದಲೇ ಮುಕ್ತಿಯಾಗುತ್ತದೆಯೆಂದು ಮನ್ನಿಸಬಾರದು. ||೬೦||

ಬಾಹ್ಯಲಿಂಗಸಹಿತ ಮತ್ತು ಅಭ್ಯಂತರಲಿಂಗರಹಿತನಿರುವವನು ಸ್ವರೂಪಾಚರಣ ಚಾರಿತ್ರದಿಂದ ಭ್ರಷ್ಟವಾಗಿ ಮೋಕ್ಷಮಾರ್ಗವನ್ನು ವಿನಾಶಮಾಡುವಂಥವನಿದ್ದಾನೆಂದು ಈಗ ಸಾಮಾನ್ಯರೂಪದಿಂದ ಹೇಳುತ್ತಾರೆ, -

---

ಧ್ರುವಸಿದ್ಧಿಯಪ್ಪ ತೀರ್ಥಂಕರ ಚತುರ್ಜ್ಞಾನಯುತರಿದ್ದು ತಪ ಮಾಡುವರು |
ಧ್ರುವದಿಂದಿದನು ತಿಳಿದು ಜ್ಞಾನಯುಕ್ತವಿದ್ದರು ತಪಸು ಮಾಡುವುದು ||೬೦||

**ಬಾಹಿರಲಿಂಗೇಣ ಜುದೋ ಅಬ್ಭಂತರಲಿಂಗರಹಿಯಪರಿಯಮ್ಮೋ ।**
**ಸೋ ಸಗಚರಿತ್ತಭಟ್ಠೋ ಮೋಕ್ಖಪಹವಿಣಾಸಗೋ ಸಾಹೂ ॥೬೧॥**

**ಬಾಹ್ಯಲಿಂಗೇನ ಯುತಃ ಅಭ್ಯಂತರಲಿಂಗರಹಿತಪರಿಕರ್ಮಾ ।**
**ಸಃ ಸ್ವಕಚಾರಿತ್ರಭ್ರಷ್ಟಃ ಮೋಕ್ಷಪಥವಿನಾಶಕಃ ಸಾಧುಃ ॥೬೧॥**

ಅರ್ಥ ಃ- ಯಾವ ಜೀವನು ಬಾಹ್ಯಲಿಂಗ-ವೇಷಸಹಿತನಿದ್ದಾನೆ ಮತ್ತು ಅಭ್ಯಂತರಲಿಂಗದಿಂದ ಎಂದರೆ ಪರದ್ರವ್ಯಗಳಲ್ಲಿನ ಸಮಸ್ತ ರಾಗಾದಿ ಮಮತ್ವಭಾವದಿಂದ ರಹಿತವಾದಂಥ ಆತ್ಮಾನುಭವದಿಂದ ರಹಿತನಿದ್ದಾನೆ ಅವನು ಸ್ವ-ಚಾರಿತ್ರ ಎಂದರೆ ತನ್ನ ಆತ್ಮಸ್ವರೂಪದ ಆಚರಣದಿಂದ-ಚಾರಿತ್ರದಿಂದ ಭ್ರಷ್ಟನಿದ್ದಾನೆ, ಪರಿಕರ್ಮ ಎಂದರೆ ಬಾಹ್ಯದಲ್ಲಿ ನಗ್ನತೆ, ಬ್ರಹ್ಮಚರ್ಯ ಮೊದಲಾದ ಶರೀರ ಸಂಸ್ಕಾರದಿಂದ ಪರಿವರ್ತನವುಳ್ಳ ದ್ರವ್ಯಲಿಂಗಿಯಿದ್ದರೂ ಕೂಡ ಅವನು ಸ್ವ-ಚಾರಿತ್ರದಿಂದ ಭ್ರಷ್ಟನಿರುವುದರಿಂದ ಮೋಕ್ಷಮಾರ್ಗದ ವಿನಾಶ ಮಾಡುವವನಿದ್ದಾನೆ. [ಆದುದರಿಂದಮುನಿಯು-ಸಾಧುವು ಶುದ್ಧಭಾವವನ್ನು ತಿಳಿದುಕೊಂಡು ತನ್ನ ಶುದ್ಧ ಬುದ್ಧ ಏಕಸ್ವಭಾವಿಯಾದ ಆತ್ಮತತ್ತ್ವದಲ್ಲಿ ನಿತ್ಯಭಾವನೆ (ಏಕಾಗ್ರತೆ) ಮಾಡಬೇಕು.] (ಶ್ರುತಸಾಗರ ಟೀಕೆಯಿಂದ)

ಭಾವಾರ್ಥ ಃ- ಯಾವನು ಬಾಹ್ಯಲಿಂಗದಿಂದ ಸಂಯುಕ್ತನಿದ್ದಾನೆ ಮತ್ತು ಅಭ್ಯಂತರ ಎಂದರೆ ಭಾವಲಿಂಗದಿಂದ ರಹಿತನಿದ್ದಾನೆ ಅವನು ಸ್ವರೂಪಾಚರಣ ಚಾರಿತ್ರದಿಂದ ಭ್ರಷ್ಟನಾಗಿ ಮೋಕ್ಷಮಾರ್ಗದ ನಾಶ ಮಾಡುವವನಿದ್ದಾನೆಂದು ಸಂಕ್ಷೇಪದಿಂದ ಹೇಳಿರುವುದನ್ನು ತಿಳಿದುಕೊಳ್ಳಬೇಕು. ॥೬೧॥

ಸುಖದಿಂದ ಭಾವಿಸಲ್ಪಟ್ಟ ಜ್ಞಾನವು ಅದು ದುಃಖ ಬಂದ ಮೇಲೆ ನಷ್ಟವಾಗುವುದರಿಂದ ತಪಶ್ಚರ್ಯದಿಂದ ಯುಕ್ತವಾದ ಜ್ಞಾನವನ್ನು ಭಾವಿಸಬೇಕೆಂದು ಈಗ ಹೇಳುತ್ತಾರೆ, -

**ಸುಹೇಣ ಭಾವಿದಂ ಣಾಣಂ ದುಹೇ ಜಾದೇ ವಿಣಸ್ಸದಿ ।**
**ತಮ್ಹಾ ಜಹಾಬಲಂ ಜೋಈ ಅಪ್ಪಾ ದುಕ್ಖೇಹಿ ಭಾವಏ ॥೬೨॥**

**ಸುಖೇನ ಭಾವಿತಂ ಜ್ಞಾನಂ ದುಃಖೇ ಜಾತೇ ವಿನಶ್ಯತಿ ।**
**ತಸ್ಮಾತ್ ಯಥಾಬಲಂ ಯೋಗೀ ಆತ್ಮಾನಂ ದುಃಖೈಃ ಭಾವಯೇತ್ ॥೬೨॥**

ಅರ್ಥ ಃ- ಸುಖದಿಂದ ಭಾವಿಸಲ್ಪಟ್ಟ ಜ್ಞಾನವು ಅದು ಉಪಸರ್ಗ-ಪರೀಷಹಾದಿಗಳಿಂದ ದುಃಖವು ಉತ್ಪನ್ನವಾಗುತ್ತಿದ್ದಂತೆಯೇ ನಷ್ಟವಾಗಿ ಹೋಗುತ್ತದೆ, ಆದುದರಿಂದ ಯೋಗಿ ಧ್ಯಾನಿ ಮುನಿಯು ತಪಶ್ಚರಣಾದಿಗಳ ಕಷ್ಟ(ದುಃಖ) ಸಹಿತವಾಗಿ ಆತ್ಮನನ್ನು ಭಾವಿಸಬೇಕೆಂಬ ಉಪದೇಶವಿದೆ, [ಎಂದರೆ ಬಾಹ್ಯದಲ್ಲಿ ಸ್ವಲ್ಪ ಕೂಡ ಅನುಕೂಲ- ಪ್ರತಿಕೂಲತೆಯನ್ನು

---

ಯಾವನು ಬಾಹ್ಯಲಿಂಗದಿಂ ಯುಕ್ತ ಅಭ್ಯಂತರಲಿಂಗರಹಿತ ಕ್ರಿಯೆ ಮಾಡುವನು ।
ಅವನು ಸ್ವಕಚಾರಿತ್ರಭ್ರಷ್ಟ ಮೋಕ್ಷಮಾರ್ಗವಿನಾಶಕ ಸಾಧುವಿರುವನು ॥೬೧॥

ಮುದದಿಂ ಭಾವಿತ ಜ್ಞಾನವದು ದುಃಖಕಾಲದಲಿ ನಷ್ಟವಾಗಿ ಹೋಗುವುದು ।
ಅದರಿಂ ಯೋಗಿಗಳು ಯಥಾಬಲದುಃಖಸಹಿತ ಆತ್ಮನನು ಭಾವಿಸಿರಿ ॥೬೨॥

ಮನ್ನಿಸದೆ ನಿಜಾತ್ಮನಲ್ಲಿಯೇ ಏಕಾಗ್ರತಾರೂಪದ ಭಾವನೆಯನ್ನು ಭಾವಿಸಬೇಕು ಅದರಿಂದ ಆತ್ಮಶಕ್ತಿ ಮತ್ತು ಆತ್ಮಿಕ ಆನಂದದ ಪ್ರಚುರ ಸಂವೇದನವು ವೃದ್ಧಿಸುತ್ತಲೇ ಹೋಗುತ್ತದೆ.]

ಭಾವಾರ್ಥ :- ತಪಶ್ಚರ್ಯದ ಕಷ್ಟವನ್ನು ಅಂಗೀಕಾರ ಮಾಡಿ ಜ್ಞಾನವನ್ನು ಭಾವಿಸಿದರೆ ಪರೀಷಹಗಳುಂಟಾದರೂ ಜ್ಞಾನ ಭಾವನೆಯಿಂದ ಚ್ಯುತವಾಗದಿರುವುದರಿಂದ ಶಕ್ತಿಗೆ ಅನುಸರಿಸಿ ದುಃಖಸಹಿತ ಜ್ಞಾನವನ್ನು ಭಾವಿಸಬೇಕು, ಸುಖದಲ್ಲಿಯೇ ಭಾವಿಸಿದರೆ ದುಃಖ ಬಂದ ಮೇಲೆ ವ್ಯಾಕುಲತೆಯಾಗುವುದು, ಆಗ ಜ್ಞಾನ ಭಾವನೆಯು ಉಳಿಯುವುದಿಲ್ಲ, ಅದಕ್ಕಾಗಿಯೇ ಈ ಉಪದೇಶವಿದೆ. ||೬೨||

ಆಹಾರ, ಆಸನ, ನಿದ್ರೆ ಇವನ್ನು ಜಯಿಸಿ, ಆತ್ಮನ ಧ್ಯಾನ ಮಾಡಬೇಕೆಂಬುದನ್ನು ಈಗ ಹೇಳುತ್ತಾರೆ, -

**ಆಹಾರಾಸಣಣಿದ್ದಾಜಯಂ ಚ ಕಾಊಣ ಜಿಣವರಮಏಣ ।**
**ಝಾಯವ್ವೋ ಣಿಯಅಪ್ಪಾ ಣಾಊಣಂ ಗುರುಪಸಾಏಣ ||೬೩||**

**ಆಹಾರಾಸನನಿದ್ರಾಜಯಂ ಚ ಕೃತ್ವಾ ಜಿನವರಮತೇನ ।**
**ಧ್ಯಾತವ್ಯಃ ನಿಜಾತ್ಮಾ ಜ್ಞಾತ್ವಾ ಗುರುಪ್ರಸಾದೇನ ||೬೩||**

ಅರ್ಥ :- ಆಹಾರ, ಆಸನ, ನಿದ್ರೆ ಇವುಗಳನ್ನು ಜಯಿಸಿ, ಜನವರರ ಮತದಿಂದ ಮತ್ತು ಗುರುಗಳ ಪ್ರಸಾದದಿಂದ ತಿಳಿದುಕೊಂಡು ನಿಜಾತ್ಮನ ಧ್ಯಾನ ಮಾಡಬೇಕು.

ಭಾವಾರ್ಥ :- ಆಹಾರ, ಆಸನ, ನಿದ್ರೆಗಳನ್ನು ಜಯಿಸಿ, ಆತ್ಮನ ಧ್ಯಾನ ಮಾಡಬೇಕೆಂಬುದನ್ನು ಅನ್ಯ ಮತದವರೂ ಹೇಳುತ್ತಾರೆ, ಆದರೆ ಅವರ ವಿಧಾನವು ಯಥಾರ್ಥವಿಲ್ಲದಿರುವುದರಿಂದ ಜಿನಮತದಲ್ಲಿ ಯಾವ ಪ್ರಕಾರ ಹೇಳಿದೆ ಆ ವಿಧಾನವನ್ನು ಗುರುಗಳ ಪ್ರಸಾದದಿಂದ ತಿಳಿದುಕೊಂಡು ಧ್ಯಾನ ಮಾಡುವುದು ಸಫಲವಿದೆಯೆಂದು ಆಚಾರ್ಯರು ಹೇಳುತ್ತಾರೆ. ಜೈನ ಸಿದ್ಧಾಂತದಲ್ಲಿ ಹೇಗೆ ಆತ್ಮನ ಸ್ವರೂಪ ಹಾಗೂ ಧ್ಯಾನದ ಸ್ವರೂಪ ಮತ್ತು ಆಹಾರ, ಆಸನ, ನಿದ್ರೆ ಇವನ್ನು ಜಯಿಸುವ ಸಾಧನ ಹೇಳಿದೆ ಹಾಗೆ ತಿಳಿದುಕೊಂಡು ಇವುಗಳಲ್ಲಿ ಪ್ರವರ್ತಿಸಬೇಕು. ||೬೩||

ಆತ್ಮನ ಧ್ಯಾನ ಮಾಡಬೇಕಾದರೆ ಆ ಆತ್ಮನು ಹೇಗಿದ್ದಾನೆಂಬುದನ್ನು ಈಗ ಹೇಳುತ್ತಾರೆ, -

**ಅಪ್ಪಾ ಚರಿತ್ತವಂತೋ ದಂಸಣಣಾಣೇಣ ಸಂಜುದೋ ಅಪ್ಪಾ ।**
**ಸೋ ಝಾಯವ್ವೋ ಣಿಚ್ಚಂ ಣಾಊಣಂ ಗುರುಪಸಾಏಣ ||೬೪||**

---

ಜಿನವರರ ಮತದಿಂದ ಆಹಾರ ಆಸನ ನಿದ್ರೆಗಳನೆಲ್ಲ ಜಯಿಸಿ ।
ಧ್ಯಾನಿಸುವುದು ನಿಜಾತ್ಮನನು ಶ್ರೀಗುರುಗಳ ಪ್ರಸಾದದಿಂ ತಿಳಿದುಕೊಂಡು ||೬೩||

ಆತ್ಮನು ಚಾರಿತ್ರವುಳ್ಳವನಿದ್ದು ದರ್ಶನ-ಜ್ಞಾನ ಸಂಯುಕ್ತನಾಗಿರುವನು ।
ಆತ್ಮನನು ನಿತ್ಯ ಧ್ಯಾನಿಸುವುದು ಗುರುಗಳ ಪ್ರಸಾದದಿಂ ತಿಳಿದುಕೊಂಡು ||೬೪||

ಆತ್ಮಾ ಚಾರಿತ್ರವಾನ್ ದರ್ಶನಜ್ಞಾನೇನ ಸಂಯುತಃ ಆತ್ಮಾ ।
ಸಃ ಧ್ಯಾತವ್ಯಃನಿತ್ಯಂ ಜ್ಞಾತ್ವಾ ಗುರುಪ್ರಸಾದೇನ ॥೬೪॥

ಅರ್ಥ ಃ- ಆತ್ಮನು ಚಾರಿತ್ರವಂತನಿದ್ದಾನೆ ಮತ್ತು ದರ್ಶನ-ಜ್ಞಾನ-ಸಹಿತನಿದ್ದಾನೆಂಬುದನ್ನು ಗುರುಗಳ ಪ್ರಸಾದದಿಂದ ತಿಳಿದುಕೊಂಡು ನಿತ್ಯ ಆತ್ಮನ ಧ್ಯಾನ ಮಾಡಬೇಕು.

ಭಾವಾರ್ಥ ಃ- ಆತ್ಮನ ರೂಪು ದರ್ಶನ-ಜ್ಞಾನ-ಚಾರಿತ್ರಮಯವಿದೆ, ಇವನ ರೂಪು ಜೈನ ಗುರುಗಳ ಪ್ರಸಾದದಿಂದ ತಿಳಿದುಬರುತ್ತದೆ. ಅನ್ಯಮತದವರು ತಮ್ಮ ಕಾಲ್ಪನಿಕ ಬುದ್ಧಿಯಿಂದ ಹಾಗೆ ಹೀಗೆ ಮನ್ನಿಸಿ ಧ್ಯಾನ ಮಾಡುತ್ತಾರೆ ಅವರಿಗೆ ಯಥಾರ್ಥ ಸಿದ್ಧಿಯಾಗುವುದಿಲ್ಲ, ಅದಕ್ಕಾಗಿ ಜೈನಮತದ ಅನುಸಾರವಾಗಿ ಧ್ಯಾನ ಮಾಡಬೇಕೆಂಬ ಉಪದೇಶವಿದೆ. ॥೬೪॥

ಆತ್ಮನನ್ನು ತಿಳಿಯುವುದು, ಭಾವಿಸುವುದು ಮತ್ತು ವಿಷಯಗಳಿಂದ ವಿರಕ್ತವಾಗುವುದು ಇವು ಉತ್ತರೋತ್ತರ ದುರ್ಲಭವಿರುವುದರಿಂದ ದುಃಖದಿಂದ (-ದೃಢವಾದ ಪುರುಷಾರ್ಥದಿಂದ) ಪ್ರಾಪ್ತವಾಗುತ್ತವೆಂದು ಈಗ ಹೇಳುತ್ತಾರೆ,-

ದುಕ್ಖೇ ಣಜ್ಜಇ ಅಪ್ಪಾ ಅಪ್ಪಾ ಣಾಊಣ ಭಾವಣಾ ದುಕ್ಖಂ ।
ಭಾವಿಯಸಹಾವಪುರಿಸೋ ವಿಸಯೇಸು ವಿರಚ್ಚಏ ದುಕ್ಖಂ ॥೬೫॥

ದುಃಖೇನ ಜ್ಞಾಯತೇ ಆತ್ಮಾ ಆತ್ಮಾನಂ ಜ್ಞಾತ್ವಾ ಭಾವನಾ ದುಃಖಮ್ ।
ಭಾವಿತಸ್ವಭಾವ ಪುರುಷಃ ವಿಷಯೇಷು ವಿರಜ್ಯತಿ ದುಃಖಮ್ ॥೬೫॥

ಅರ್ಥ ಃ- ಮೊದಲಂತೂ ಆತ್ಮನನ್ನು ತಿಳಿಯುತ್ತಾರೆ ಅವನು ದುಃಖದಿಂದ ತಿಳಿದುಬರುತ್ತಾನೆ, ಪುನಃ ಆತ್ಮನನ್ನು ತಿಳಿದುಕೊಂಡರೂ ಭಾವನೆ ಮಾಡುವುದು, ಮತ್ತೆ ಮತ್ತೆ ಇವನ ಅನುಭವ ಮಾಡುವುದು ದುಃಖದಿಂದ (ಉಗ್ರ ಪುರುಷಾರ್ಥದಿಂದ) ಆಗುತ್ತದೆ, ಒಮ್ಮೊಮ್ಮೆ ಭಾವನೆ ಕೂಡ ಯಾವುದೇ ಪ್ರಕಾರ ಆಗಿ ಹೋದರೆ ಯಾವನು ಜಿನಭಾವನೆಯನ್ನು ಭಾವಿಸಿದ್ದಾನೆ ಅಂಥ ಪುರುಷನು ಅತ್ಯಂತ ದುಃಖದಿಂದ (ಅಪೂರ್ವ ಪುರುಷಾರ್ಥದಿಂದ) ವಿಷಯಗಳಿಂದ ವಿರಕ್ತನಾಗುತ್ತಾನೆ.

ಭಾವಾರ್ಥ ಃ- ಆತ್ಮನನ್ನು ತಿಳಿಯುವುದು, ಭಾವಿಸುವುದು, ವಿಷಯಗಳಿಂದ ವಿರಕ್ತವಾಗುವುದು ಈ ಯೋಗಗಳು ದೊರಕುವುದೆಲ್ಲವು ಉತ್ತರೋತ್ತರ ಅತ್ಯಂತ ದುರ್ಲಭವಿರುವುದರಿಂದ ಇಂಥ ಸುಯೋಗಗಳು ಕೂಡಿ ಬಂದಮೇಲೆ ಪ್ರಮಾದಿಗಳಾಗಬಾರದೆಂಬ ಉಪದೇಶವಿದೆ. ॥೬೫॥

ಎಲ್ಲಿಯವರೆಗೆ ಈ ಮನುಷ್ಯನು ವಿಷಯಗಳಲ್ಲಿ ಪ್ರವರ್ತಿಸುತ್ತಾನೆ ಅಲ್ಲಿಯವರೆಗೆ ಆತ್ಮಜ್ಞಾನವಾಗುವುದಿಲ್ಲ ವೆಂಬುದನ್ನು ಈಗ ಹೇಳುತ್ತಾರೆ, -

---

ಜೀವ ಮೊದಲು ದುಃಖದಿಂ ತಿಳಿವನು ಮತ್ತೆ ಭಾವನೆ ದುಃಖದಿಂದಾಗುವುದು ।
ಭಾವಿತಸ್ವಭಾವ ಪುರುಷನು ದುಃಖದಿಂ ವಿಷಯ ವಿರಕ್ತನಾಗುವನು ॥೬೫॥

ತಾಮ ಣ ಣಜ್ಜಇ ಅಪ್ಪಾ ವಿಸಏಸು ಣರೋ ಪವಟ್ಟಏ ಜಾಮ ।
ವಿಸಏ ವಿರತ್ತಚಿತ್ತೋ ಜೋಈ ಜಾಣೇಇ ಅಪ್ಪಾಣಂ ॥೬೬॥

ತಾವನ್ನ ಜ್ಞಾಯತೇ ಆತ್ಮಾ ವಿಷಯೇಷು ನರಃ ಪ್ರವರ್ತತೇ ಯಾವತ್ ।
ವಿಷಯೇ ವಿರಕ್ತಚಿತ್ತಃ ಯೋಗೀ ಜಾನಾತಿ ಆತ್ಮಾನಮ್ ॥೬೬॥

ಅರ್ಥ :- ಎಲ್ಲಿಯವರೆಗೆ ಈ ಮನುಷ್ಯನು ವಿಷಯಗಳಲ್ಲಿ ಪ್ರವರ್ತಿಸುತ್ತಾನೆ ಅಲ್ಲಿಯವರೆಗೆ ಆತ್ಮನನ್ನು ತಿಳಿಯುವುದಿಲ್ಲ, ಅದಕ್ಕಾಗಿ ಯೋಗಿ ಧ್ಯಾನಿ ಮುನಿಯೇ ವಿಷಯಗಳಿಂದ ವಿರಕ್ತಚಿತ್ತನಾಗುತ್ತ ಆತ್ಮನನ್ನು ತಿಳಿಯುತ್ತಾನೆ.

ಭಾವಾರ್ಥ :- ಯಾವ ಜ್ಞೇಯ ಪದಾರ್ಥಗಳಲ್ಲಿ ಉಪಯುಕ್ತವಾಗುತ್ತದೆ ಹಾಗೆಯೇ ಆಗಿಹೋಗುವುದು ಜೀವಸ್ವಭಾವದ ಉಪಯೋಗದ ಸ್ವಚ್ಛತೆಯಿದೆ, ಅದಕ್ಕಾಗಿ ಎಲ್ಲಿಯವರೆಗೆ ವಿಷಯಗಳಲ್ಲಿ ಚಿತ್ತವಿರುತ್ತದೆ ಅಲ್ಲಿಯವರೆಗೆ ಅವುಗಳ ರೂಪವಿರುತ್ತದೆ, ಆತ್ಮನ ಅನುಭವವಾಗುವುದಿಲ್ಲ, ಆದುದರಿಂದ ಯೋಗಿ ಮುನಿಗಳು ಹೀಗೆ ವಿಚಾರಮಾಡಿ ವಿಷಯಗಳಿಂದ ವಿರಕ್ತರಾಗಿ ಆತ್ಮನಲ್ಲಿ ಉಪಯೋಗ ತೊಡಗಿಸಬೇಕು, ಆಗ ಆತ್ಮನನ್ನು ತಿಳಿದುಕೊಂಡು ಅನುಭವ ಮಾಡುವುದರಿಂದ ವಿಷಯಗಳಿಂದ ವಿರಕ್ತವಾಗುವುದೆಂಬ ಉಪದೇಶವಿದೆ. ॥೬೬॥

ಆತ್ಮನನ್ನು ತಿಳಿದುಕೊಂಡರೂ ಭಾವನೆಯಿಲ್ಲದೆ ಸಂಸಾರದಲ್ಲಿಯೇ ಉಳಿಯುತ್ತಾನೆಂದು ಇದೇ ಅರ್ಥವನ್ನು ದೃಢಪಡಿಸುತ್ತ ಈಗ ಹೇಳುತ್ತಾರೆ, –

ಅಪ್ಪಾ ಣಾಊಣ ಣರಾ ಕೇಈ ಸಬ್ಭಾವಭಾವಪಬ್ಭಟ್ಠಾ ।
ಹಿಂಡಂತಿ ಚಾಉರಂಗಂ ವಿಸಏಸು ವಿಮೋಹಿಯಾ ಮೂಢಾ ॥೬೭॥

ಆತ್ಮಾನಂ ಜ್ಞಾತ್ವಾ ನರಾಃ ಕೇಚಿತ್ ಸದ್ಭಾವಭಾವಪ್ರಭ್ರಷ್ಟಾಃ ।
ಹಿಂಡಂತೇ ಚಾತುರಂಗಂ ವಿಷಯೇಷು ವಿಮೋಹಿತಾಃ ಮೂಢಾಃ ॥೬೭॥

ಅರ್ಥ :- ಕೆಲವು ಜನರು ಆತ್ಮನನ್ನು ತಿಳಿದುಕೊಂಡು ಕೂಡ ತಮ್ಮ ಸ್ವಭಾವದ ಭಾವನೆಯಿಂದ ಅತ್ಯಂತ ಭ್ರಷ್ಟರಾಗಿ ವಿಷಯಗಳಲ್ಲಿ ಮೋಹಿತರಾಗಿ ಅಜ್ಞಾನಿಗಳು ಮೂರ್ಖರು ಚತುರ್ಗತಿರೂಪವಾದ ಸಂಸಾರದಲ್ಲಿಯೇ ಭ್ರಮಣ ಮಾಡುತ್ತಾರೆ.

ಭಾವಾರ್ಥ :- ಆತ್ಮನನ್ನು ತಿಳಿಯುವುದು, ಭಾವಿಸುವುದು, ವಿಷಯಗಳಿಂದ ವಿರಕ್ತವಾಗುವುದು ಇವು ಉತ್ತರೋತ್ತರ ದುರ್ಲಭವಾಗಿ ಕಂಡು ಬರುತ್ತಿದ್ದು, ವಿಷಯಗಳಲ್ಲಿ ತೊಡಗಿದವನು ಆತ್ಮನನ್ನು ತಿಳಿಯುವುದಿಲ್ಲವೆಂದು

---

ವಿಷಯಗಳಲೆನ್ನೆವರ ಪ್ರವರ್ತಿಪನನ್ನೆವರೆಗಾತ್ಮನನರಿಯನು ।
ವಿಷಯಗಳಿಂದ ವಿರಕ್ತಚಿತ್ತನಾದಯೋಗಿ ಆತ್ಮನನು ತಿಳಿಯುವನು ॥೬೬॥

ನರನೋರ್ವನು ಆತ್ಮನನು ತಿಳಿದು ಸ್ವಭಾವಭಾವನೆಯಿಂ ಪ್ರಭ್ರಷ್ಟನಾಗಿ ।
ತಿರುಗುವನು ಚತುರ್ಗತಿಗಳಲಿ ವಿಷಯವಿಮೋಹಿತನಾಗಿ ಮೂಢನು ॥೬೭॥

ಮೊದಲು ಹೇಳಿತ್ತು, ಈಗ ಆತ್ಮನನ್ನು ತಿಳಿದುಕೊಂಡರೂ ವಿಷಯಗಳ ವಶೀಭೂತನಾಗಿ ಭಾವನೆ ಮಾಡದಿದ್ದರೆ ಸಂಸಾರದಲ್ಲಿಯೇ ಭ್ರಮಣ ಮಾಡುತ್ತಾನೆಂದು ಹೇಳಿದೆ, ಆದುದರಿಂದ ಆತ್ಮನನ್ನು ತಿಳಿದುಕೊಂಡು ವಿಷಯಗಳಿಂದ ವಿರಕ್ತರಾಗಬೇಕೆಂಬ ಉಪದೇಶವಿದೆ. ||೬೭||

ವಿಷಯಗಳಿಂದ ವಿರಕ್ತರಾಗಿ ಆತ್ಮನನ್ನು ತಿಳಿದುಕೊಂಡು ಭಾವಿಸುವವರು ಸಂಸಾರವನ್ನು ಬಿಟ್ಟುಕೊಡುತ್ತಾರೆಂದು ಈಗ ಹೇಳುತ್ತಾರೆ, –

ಜೇ ಪುಣ ವಿಸಯವಿರತ್ತಾ ಅಪ್ಪಾ ಣಾಊಣ ಭಾವಣಾಸಹಿಯಾ ।
ಛಂಡಂತಿ ಚಾಉರಂಗಂ ತವಗುಣಜುತ್ತಾ ಣ ಸಂದೇಹೋ ||೬೮||

ಯೇ ಪುನಃ ವಿಷಯವಿರಕ್ತಾಃ ಆತ್ಮಾನಂ ಜ್ಞಾತ್ವಾ ಭಾವನಾಸಹಿತಾಃ ।
ತ್ಯಜಂತಿ ಚಾತುರಂಗಂ ತಪೋಗುಣಯುಕ್ತಾಃ ನ ಸಂದೇಹಃ ||೬೮||

ಅರ್ಥ ಃ– ಮತ್ತೆ ಆ ಪುರುಷ ಮುನಿಗಳು ವಿಷಯಗಳಿಂದ ವಿರಕ್ತರಾಗಿ ಆತ್ಮನನ್ನು ತಿಳಿದುಕೊಂಡು ಭಾವಿಸುತ್ತಾರೆ ಪುನಃ ಪುನಃ ಭಾವನೆಯ ಮುಖಾಂತರ ಅನುಭವ ಪಡೆಯುತ್ತಾರೆ ಅವರು ತಪ ಎಂದರೆ ಹನ್ನೆರಡು ಪ್ರಕಾರದ ತಪಸ್ಸು ಮತ್ತು ಮೂಲಗುಣ ಉತ್ತರಗುಣಗಳಿಂದ ಯುಕ್ತರಾಗಿ ಸಂಸಾರವನ್ನು ಬಿಟ್ಟುಕೊಡುತ್ತಾರೆ, ಮೋಕ್ಷ ಪಡೆಯುತ್ತಾರೆ.

ಭಾವಾರ್ಥ ಃ– ವಿಷಯಗಳಿಂದ ವಿರಕ್ತರಾಗಿ ಆತ್ಮನನ್ನು ತಿಳಿದುಕೊಂಡು ಭಾವನೆಯನ್ನು ಭಾವಿಸಿ ಇದರಿಂದ ಸಂಸಾರದಿಂದ ಬಿಡುಗಡೆ ಹೊಂದಿ ಮೋಕ್ಷ ಪಡೆದುಕೊಳ್ಳಿರೆಂಬ ಉಪದೇಶವಿದೆ. ||೬೮||

ಒಂದು ವೇಳೆ ಪರದ್ರವ್ಯದಲ್ಲಿ ಸ್ವಲ್ಪಮಾತ್ರವಾದರೂ ರಾಗವಿದ್ದರೆ ಆ ಪುರುಷನು ಅಜ್ಞಾನಿಯಿದ್ದಾನೆ, ಅವನು ತನ್ನ ಸ್ವರೂಪವನ್ನು ತಿಳಿದುಕೊಂಡಿಲ್ಲವೆಂಬುದನ್ನು ಈಗ ಹೇಳುತ್ತಾರೆ, –

ಪರಮಾಣುಪಮಾಣಂ ವಾ ಪರದವ್ವೇ ರದಿ ಹವೇದಿ ಮೋಹಾದೋ ।
ಸೋ ಮೂಢೋ ಅಣ್ಣಾಣೀ ಆದಸಹಾವಸ್ಸ ವಿವರೀಓ||೬೯||

ಪರಮಾಣುಪ್ರಮಾಣಂ ವಾ ಪರದ್ರವ್ಯೇ ರತಿರ್ಭವತಿ ಮೋಹಾತ್ ।
ಸಃ ಮೂಢಃ ಅಜ್ಞಾನೀ ಆತ್ಮಸ್ವಭಾವಾತ್ ವಿಪರೀತಃ ||೬೯||

---

ಯಾರು ಮತ್ತೆ ವಿಷಯವಿರಕ್ತರಾಗಿ ಆತ್ಮನನು ತಿಳಿದು ಭಾವನಾಸಹಿತ ।
ತೊರೆವರು ಚತುರ್ಗತಿಗಳನು ತಪೋಗುಣಯುಕ್ತರಾಗಿ ನಿಸ್ಸಂದೇಹದಿ ||೬೮||

ಯಾವನಿಗೆ ಪರದ್ರವ್ಯದಲಿ ಪರಮಾಣುಪ್ರಮಾಣ ಪ್ರೀತಿಯಿದೆ ಮೋಹದಿಂ ।
ಅವನು ಮೂಢಮೇಣಜ್ಞಾನಿಯಿದ್ದು ಆತ್ಮಸ್ವಭಾವದಿಂ ವಿಪರೀತನಿಹನು ||೬೯||

ಅರ್ಥ :- ಯಾವ ಪುರುಷನದು ಪರದ್ರವ್ಯದಲ್ಲಿ ಪರಮಾಣುಪ್ರಮಾಣ ಕೂಡ ಲೇಶಮಾತ್ರ ಮೋಹದಿಂದ ರತಿ ಎಂದರೆ ರಾಗ-ಪ್ರೀತಿಯಿದ್ದರೆ ಆ ಪುರುಷನು ಮೂಢನಿದ್ದಾನೆ, ಅಜ್ಞಾನಿಯಿದ್ದಾನೆ, ಆತ್ಮಸ್ವಭಾವದಿಂದ ವಿಪರೀತನಿದ್ದಾನೆ.

ಭಾವಾರ್ಥ :- ಭೇದವಿಜ್ಞಾನವಾದ ನಂತರ ಜೀವ-ಅಜೀವಗಳನ್ನು ಭಿನ್ನವಾಗಿ ತಿಳಿದುಕೊಂಡಾಗ ಪರದ್ರವ್ಯವನ್ನು ತನ್ನದೆಂದು ತಿಳಿಯದಿದ್ದಾಗ ಅದರಲ್ಲಿ (ಕರ್ತವ್ಯದ ಬುದ್ಧಿಯಿಂದ-ಸ್ವಾಮಿತ್ವದ ಭಾವನೆಯಿಂದ) ರಾಗ ಕೂಡ ಆಗುವುದಿಲ್ಲ, ಒಂದುವೇಳೆ (ಹೀಗೆ) ಆದರೆ ಇವನಿಗೆ ಸ್ವ-ಪರದ ಭೇದಜ್ಞಾನವಿಲ್ಲ, ಅಜ್ಞಾನಿಯಿದ್ದಾನೆ, ಆತ್ಮಸ್ವಭಾವದಿಂದ ' ಪ್ರತಿಕೂಲನಿದ್ದಾನೆಂದು ತಿಳಿಯಬೇಕು ಮತ್ತು ಜ್ಞಾನಿಯಾದನಂತರ ಚಾರಿತ್ರಮೋಹದ ಉದಯವಿರುವವರೆಗೆ ಸ್ವಲ್ಪ ರಾಗವಿರುತ್ತದೆ ಅದನ್ನು ಕರ್ಮಜನ್ಯ ಅಪರಾಧವೆಂದು ಮನ್ನಿಸುತ್ತಾನೆ, ಆ ರಾಗದಿಂದ ರಾಗವಿಲ್ಲದಿರುವುದರಿಂದ ವಿರಕ್ತನೇ ಇದ್ದಾನೆ, ಅದಕ್ಕಾಗಿ ಜ್ಞಾನಿಯನ್ನು ಪರದ್ರವ್ಯದಲ್ಲಿ ರಾಗವಿಲ್ಲದವನೆಂದು ಹೇಳಲಾಗುತ್ತದೆಂದು ತಿಳಿಯಬೇಕು. ||೬೯||

ಈಗ ಇದೇ ಅರ್ಥವನ್ನು ಸಂಕ್ಷೇಪದಿಂದ ಹೇಳುತ್ತಾರೆ, -

**ಅಪ್ಪಾ ಝಾಯಂತಾಣಂ ದಂಸಣಸುದ್ಧೀಣ ದಿಢಚರಿತ್ತಾಣಂ ।**
**ಹೋದಿ ಧುವಂ ಣಿವ್ವಾಣಂ ವಿಸಏಸು ವಿರತ್ತಚಿತ್ತಾಣಂ ||೭೦||**

**ಆತ್ಮಾನಂ ಧ್ಯಾಯತಾಂ ದರ್ಶನಶುದ್ಧೀನಾಂ ದೃಢಚಾರಿತ್ರಾಣಾಮ್ ।**
**ಭವತಿ ಧ್ರುವಂ ನಿರ್ವಾಣಂ ವಿಷಯೇಷು ವಿರಕ್ತಚಿತ್ತಾನಾಮ್ ||೭೦||**

ಅರ್ಥ :- ಪೂರ್ವೋಕ್ತ ಪ್ರಕಾರದಿಂದ ಯಾರಚಿತ್ತವು ವಿಷಯಗಳಿಂದ ವಿರಕ್ತವಿದೆ,ಯಾರು ಆತ್ಮನ ಧ್ಯಾನ ಮಾಡುತ್ತಿರುತ್ತಾರೆ, ಯಾರಿಗೆ ಬಾಹ್ಯಾಭ್ಯಂತರ ದರ್ಶನದ ಶುದ್ಧತೆಯಿದೆ ಮತ್ತು ಯಾರಲ್ಲಿ ದೃಢ ಚಾರಿತ್ರವಿದೆ ಅವರಿಗೆ ನಿಶ್ಚಯದಿಂದ ನಿರ್ವಾಣವಾಗುತ್ತದೆ.

ಭಾವಾರ್ಥ :- ವಿಷಯಗಳಿಂದ ವಿರಕ್ತರಾಗಿ ಆತ್ಮನ ಸ್ವರೂಪವನ್ನು ತಿಳಿದುಕೊಂಡು ಆತ್ಮನ ಭಾವನೆ ಮಾಡುವವರು ಸಂಸಾರದಿಂದ ಬಿಡುಗಡೆ ಹೊಂದುತ್ತಾರೆಂದು ಮೊದಲು ಹೇಳಿದೆ. ಈಗ ಇದೇ ಅರ್ಥವನ್ನು ಇಂದ್ರಿಯ ವಿಷಯಗಳಿಂದ ವಿರಕ್ತರಾಗಿ ಬಾಹ್ಯಾಭ್ಯಂತರ ದರ್ಶನದ ಶುದ್ಧತೆಯಿಂದ ಚಾರಿತ್ರದ ಪಾಲನೆ ಮಾಡುವವರಿಗೆ ನಿಯಮದಿಂದ ನಿರ್ವಾಣದ ಪ್ರಾಪ್ತಿಯಾಗುತ್ತದೆಂದು ಸಂಕ್ಷೇಪದಿಂದ ಹೇಳಿದೆ. ಇಂದ್ರಿಯ ವಿಷಯಗಳಲ್ಲಿನ ಆಸಕ್ತಿಯು ಸಮಸ್ತ ಅನರ್ಥಗಳ ಮೂಲವಿರುವುದರಿಂದ ಇವುಗಳಿಂದ ವಿರಕ್ತವಾದ ಮೇಲೆ ಉಪಯೋಗವು ಆತ್ಮನಲ್ಲಿ ತೊಡಗಿದಾಗ ಕಾರ್ಯದ ಸಿದ್ಧಿಯಾಗುತ್ತದೆ. ||೭೦||

ಪರದ್ರವ್ಯದಲ್ಲಿರುವ ರಾಗವು ಸಂಸಾರದ ಕಾರಣವಿರುವುದರಿಂದ ಯೋಗೀಶ್ವರರು ಆತ್ಮನ ಭಾವನೆ ಮಾಡುತ್ತಾರೆಂದು ಈಗ ಹೇಳುತ್ತಾರೆ, -

---

**ಯಾವನಿಗೆ ಆತ್ಮನ ಧ್ಯಾನ-ದರ್ಶನ-ಶುದ್ಧತೆ-ದೃಢ ಚಾರಿತ್ರವಿರುವುದು ।**
**ಅವನಿಗೆ ನಿಶ್ಚಿತ ನಿರ್ವಾಣವಾಗುವುದು ವಿಷಯವಿರಕ್ತಚಿತ್ತನಿಗೆ ||೭೦||**

**ಜೇಣ ರಾಗೋ ಪರೇ ದವ್ವೇ ಸಂಸಾರಸ್ಸ ಹಿ ಕಾರಣಂ ।**
**ತೇಣಾವಿ ಜೋಇಣೋ ಣಿಚ್ಚಂ ಕುಜ್ಜಾ ಅಪ್ಪೇ ಸಭಾವಣಂ ॥೭೧॥**

**ಯೇನ ರಾಗಃ ಪರೇ ದ್ರವ್ಯೇ ಸಂಸಾರಸ್ಯ ಹಿ ಕಾರಣಮ್ ।**
**ತೇನಾಪಿ ಯೋಗೀ ನಿತ್ಯಂ ಕುರ್ಯಾತ್ ಆತ್ಮನಿ ಸ್ವಭಾವನಾಮ್ ॥೭೧॥**

ಅರ್ಥ ః- ಯಾವ ಕಾರಣದಿಂದ ಪರದ್ರವ್ಯದಲ್ಲಿ ರಾಗವಿದೆ ಅದು ಸಂಸಾರಕ್ಕೇನೇ ಕಾರಣವಿದೆ, ಆ ಕಾರಣದಿಂದಲೇ ಯೋಗೀಶ್ವರ ಮುನಿಗಳು ನಿತ್ಯ ಆತ್ಮನಲ್ಲಿಯೇ ಭಾವನೆ ಮಾಡುತ್ತಾರೆ.

ಭಾವಾರ್ಥ ః- ಪರದ್ರವ್ಯದಲ್ಲಿ ರಾಗ ಮಾಡುವುದರಿಂದ ಏನಾಗುತ್ತದೆಯೆಂದು ಕೆಲವರು ಆಶಂಕೆ ಮಾಡುತ್ತಾರೆ. ಆದರೆ ಪರದ್ರವ್ಯವು ಅದು ಪರವೇ ಇದೆ, ತನ್ನ ರಾಗವು ಯಾವ ಕಾಲದಲ್ಲಾಗುವುದು ಆ ಕಾಲದಲ್ಲಿದೆ ನಂತರ ಹೊರಟು ಹೋಗುವುದೆನ್ನುವವರಿಗೆ ಹೀಗೆ ಹೇಳುತ್ತಾರೆ-ಪರದ್ರವ್ಯದಲ್ಲಿ ರಾಗ ಮಾಡಿದ ಮೇಲೆ ಪರದ್ರವ್ಯವು ತನ್ನ ಜತೆ ತಗಲುತ್ತದೆಂಬುದು ಪ್ರಸಿದ್ಧವಿದೆ ಮತ್ತು ತನಗೆ ರಾಗದ ಸಂಸ್ಕಾರವು ದೃಢವಾದಾಗ ಪರಲೋಕದವರೆಗೂ ನಡೆದು ಬರುತ್ತದೆಂಬುದು ಯುಕ್ತಿ ಸಿದ್ಧವಿದೆ ಮತ್ತು ಜಿನಾಗಮದಲ್ಲಿ ರಾಗದಿಂದ ಕರ್ಮದ ಬಂಧ ಹೇಳಿದೆ, ಇದರ ಉದಯವು ಅನ್ಯಜನ್ಮದ ಕಾರಣವಿದೆ. ಈ ಪ್ರಕಾರ ಪರದ್ರವ್ಯದಲ್ಲಿನ ರಾಗದಿಂದ ಸಂಸಾರವಾಗುತ್ತದೆ, ಅದಕ್ಕಾಗಿ ಯೋಗೀಶ್ವರ ಮುನಿಗಳು ಪರದ್ರವ್ಯದಲ್ಲಿನ ರಾಗವನ್ನು ಬಿಟ್ಟುಕೊಟ್ಟು ನಿರಂತರ ಆತ್ಮನ ಭಾವನೆ ಮಾಡುತ್ತಾರೆ. ॥೭೧॥

ಇಂಥ ಸಮಭಾವನೆಯಿಂದ ಚಾರಿತ್ರವಾಗುತ್ತದೆಯೆಂದು ಈಗ ಹೇಳುತ್ತಾರೆ, -

**ಣಿಂದಾಏ ಯ ಪಸಂಸಾಏ ದುಕ್ಖೇ ಯ ಸುಹಏಸು ಯ ।**
**ಸತ್ತೂಣಂ ಚೇವ ಬಂಧೂಣಂ ಚಾರಿತ್ತಂ ಸಮಭಾವದೋ ॥೭೨॥**

**ನಿಂದಾಯಾಂ ಚ ಪ್ರಶಂಸಾಯಾಂ ದುಃಖೇ ಚ ಸುಖೇಷು ಚ ।**
**ಶತ್ರೂಣಾಂ ಚೈವ ಬಂಧೂನಾಂ ಚಾರಿತ್ರಂ ಸಮಭಾವತಃ ॥೭೨॥**

ಅರ್ಥ ః- ನಿಂದೆ-ಪ್ರಶಂಸೆಯಲ್ಲಿ, ಸುಖ-ದುಃಖದಲ್ಲಿ ಮತ್ತು ಶತ್ರು-ಬಂಧು-ಮಿತ್ರರಲ್ಲಿ ಸಮಭಾವ ಆ ಸಮತಾ ಪರಿಣಾಮದಿಂದ, ರಾಗ-ದ್ವೇಷಗಳಿಂದ ರಹಿತವಾದಂಥ ಭಾವದಿಂದ ಚಾರಿತ್ರವಾಗುತ್ತದೆ.

ಭಾವಾರ್ಥ ః- ಆತ್ಮನ ಸ್ವಭಾವವು ಅದು ಕರ್ಮದ ನಿಮಿತ್ತದಿಂದ ಜ್ಞಾನದಲ್ಲಿ ಪರದ್ರವ್ಯಗಳಿಂದ ಇಷ್ಟಾನಿಷ್ಟ ಬುದ್ಧಿಯಾಗುತ್ತದೆ, ಈ ಇಷ್ಟಾನಿಷ್ಟ ಬುದ್ಧಿಯ ಅಭಾವದಿಂದ ಉಪಯೋಗವು ಜ್ಞಾನದಲ್ಲಿಯೇ ತೊಡಗಿದರೆ ಅದನ್ನು

---

**ಪರದ್ರವ್ಯದಲಿರುವ ರಾಗವದು ಸಂಸಾರದ ಕಾರಣವಾಗಿರುವುದಾ ।**
**ಕಾರಣದಿ ಯೋಗೀಶ್ವರರು ಸತತ ಆತ್ಮನಲ್ಲಿಯೇ ಭಾವನೆ ಮಾಡುವರು ॥೭೧॥**

**ನಿಂದೆ-ಪ್ರಶಂಸೆಗಳಲಿ ಶತ್ರು-ಮಿತ್ರರುಗಳಲಿ ಮೇಣ್ದುಃಖ-ಸುಖಗಳಲಿ ।**
**ಒಂದೆ ವಿಧವಾದ ಸಮತಾಭಾವವಿದ್ದರದು ತಾನೆ ಚಾರಿತ್ರವಾಗುವುದು ॥೭೨॥**

ಶುದ್ಧೋಪಯೋಗವೆಂದು ಹೇಳುತ್ತಾರೆ ಅದೇ ಚಾರಿತ್ರವಿದೆ, ಇದು ಇರುವಲ್ಲಿ ನಿಂದೆ-ಪ್ರಶಂಸೆ, ದುಃಖ-ಸುಖ, ಶತ್ರು-ಮಿತ್ರರಲ್ಲಿ ಸಮಾನ ಬುದ್ಧಿಯಾಗುತ್ತದೆ, ನಿಂದೆ-ಪ್ರಶಂಸೆಗಳ ದ್ವಿಧಾಭಾವವು ಮೋಹಕರ್ಮದ ಉದಯಜನ್ಯವಿದೆ, ಇದರ ಅಭಾವವೇ ಶುದ್ಧೋಪಯೋಗರೂಪವಾದ ಚಾರಿತ್ರವಿದೆ. ॥೭೨॥

ಈಗ ಪಂಚಮಕಾಲವಿದ್ದು ಇದು ಆತ್ಮಧ್ಯಾನದ ಕಾಲವಲ್ಲವೆಂದು ಕೆಲವು ಮೂರ್ಖರು ಹೇಳುತ್ತಾರೆ, ಈಗ ಅದರ ನಿಷೇಧ ಮಾಡುತ್ತಾರೆ, -

ಚರಿಯಾವರಿಯಾ ವದಸಮಿದಿವಜ್ಜಿಯಾ ಸುದ್ಧಭಾವಪಬ್ಭಟ್ಠಾ ॥
ಕೇಈ ಜಂಪಂತಿ ಣರಾ ಣ ಹು ಕಾಲೋ ಝಾಣಜೋಯಸ್ಸ ॥೭೩॥

ಚರ್ಯಾವೃತಾಃ ವ್ರತಸಮಿತಿವರ್ಜಿತಾಃ ಶುದ್ಧಭಾವಪ್ರಭ್ರಷ್ಟಾಃ ।
ಕೇಚಿತ್ ಜಲ್ಪಂತಿ ನರಾಃ ನ ಸ್ಫುಟಂ ಕಾಲಃ ಧ್ಯಾನಯೋಗಸ್ಯ ॥೭೩॥

ಅರ್ಥ ಃ- ಕೆಲವು ಮನುಷ್ಯರು ಚರ್ಯೆ ಎಂದರೆ ಆಚಾರ ಕ್ರಿಯೆಯಿಂದ ಆವೃತರಿದ್ದಾರೆ, ಚಾರಿತ್ರ-ಮೋಹದ ಉದಯವು ಪ್ರಬಲವಿರುವುದರಿಂದ ಚರ್ಯೆಯು ಪ್ರಕಟವಾಗಿಲ್ಲವಾದ್ದರಿಂದ ವ್ರತಸಮಿತಿಯಿಂದ ರಹಿತರಿದ್ದಾರೆ ಮತ್ತು ಮಿಥ್ಯಾ ಅಭಿಪ್ರಾಯದ ಕಾರಣ ಶುದ್ಧಭಾವದಿಂದ ಅತ್ಯಂತ ಭ್ರಷ್ಟರಿದ್ದಾರೆ, ಅವರು ಈಗ ಪಂಚಮಕಾಲವಿದೆ ಈ ಕಾಲದಲ್ಲಿ ಧ್ಯಾನಯೋಗದ ಪ್ರಕಟತೆಯಿಲ್ಲವೆಂದು ಹೇಳುತ್ತಾರೆ. ॥೭೩॥

ಆ ಪ್ರಾಣಿಗಳು ಹೇಗಿದ್ದಾರೆಂಬುದನ್ನು ಈಗ ಹೇಳುತ್ತಾರೆ, -

ಸಮ್ಮತ್ತಣಾಣರಹಿಓ ಅಭವ್ವಜೀವೋ ಹು ಮೋಕ್ಖಪರಿಮುಕ್ಕೋ ।
ಸಂಸಾರಸುಹೇ ಸುರದೋ ಣ ಹು ಕಾಲೋ ಭಣಇ ಝಾಣಸ್ಸ ॥೭೪॥

ಸಮ್ಯಕ್ತ್ವ ಜ್ಞಾನರಹಿತಃ ಅಭವ್ಯಜೀವಃ ಸ್ಫುಟಂ ಮೋಕ್ಷಪರಿಮುಕ್ತಃ ।
ಸಂಸಾರಸುಖೇ ಸುರತಃ ನ ಸ್ಫುಟಂ ಕಾಲಃ ಭಣತಿ ಧ್ಯಾನಸ್ಯ ॥೭೪॥

ಅರ್ಥ ಃ- ಪೂರ್ವೋಕ್ತ ಧ್ಯಾನದ ಅಭಾವ ಹೇಳುವಂಥ ಜೀವನು ಸಮ್ಯಕ್ತ್ವ ಮತ್ತು ಜ್ಞಾನದಿಂದ ರಹಿತನಿದ್ದಾನೆ ಅಭವ್ಯನಿದ್ದಾನೆ ಇದರಿಂದಲೇ ಮೋಕ್ಷರಹಿತನಿದ್ದಾನೆ ಮತ್ತು ಸಂಸಾರದ ಇಂದ್ರಿಯ ಸುಖಗಳನ್ನು ಒಳ್ಳೆಯವೆಂದು ತಿಳಿದುಕೊಂಡು ಅವುಗಳಲ್ಲಿ ಮಗ್ನನಿದ್ದಾನೆ, ಆಸಕ್ತನಿದ್ದಾನೆ, ಅದಕ್ಕಾಗಿ ಈಗ ಧ್ಯಾನದ ಕಾಲವಿಲ್ಲವೆಂದು ಹೇಳುತ್ತಾನೆ.

---

ವ್ರತ ಸಮಿತಿವರ್ಜಿತ ಶುದ್ಧಭಾವದಿಂ ಪ್ರಭ್ರಷ್ಟಮೇಣಾಚಾರಕ್ರಿಯಾವೃತ ।
ಮಿತಜನರು ಹೇಳುವರು ಇದು ಪ್ರಕಟಧ್ಯಾನಯೋಗದಕಾಲವಲ್ಲೆಂದು ॥೭೩॥

ಅಭವ್ಯ ಜೀವ ಪ್ರಕಟ ಮೋಕ್ಷಪರಿಮುಕ್ತ ಸಮ್ಯಕ್ತ ಜ್ಞಾನರಹಿತನಿದ್ದು ।
ಆ ಭವಸುಖದಲಿ ಸುರತನಾಗೀಗ ಧ್ಯಾನದ ಕಾಲವಿಲ್ಲವೆನ್ನುವನು ॥೭೪॥

ಭಾವಾರ್ಥ ः- ಯಾರಿಗೆ ಇಂದ್ರಿಯಗಳ ಸುಖವೇ ಪ್ರಿಯವೆನಿಸುತ್ತದೆ ಮತ್ತು ಜೀವಾಜೀವ ಪದಾರ್ಥದ ಶ್ರದ್ಧೆ, ಜ್ಞಾನದಿಂದ ರಹಿತರಿದ್ದಾರೆ ಅವರು ಈಗ ಧ್ಯಾನದ ಕಾಲವಿಲ್ಲವೆಂದು ಹೇಳುತ್ತಾರೆ. ಇದರಿಂದ ಹೀಗೆ ಹೇಳುವವರು ಅಭವ್ಯರಿದ್ದಾರೆ ಇವರಿಗೆ ಮೋಕ್ಷವಾಗುವುದಿಲ್ಲವೆಂಬುದು ತಿಳಿದುಬರುತ್ತದೆ. ।।೭೪।।

ಈಗ ಧ್ಯಾನದ ಕಾಲವಿಲ್ಲವೆಂದು ಮನ್ನಿಸುವವನು ಐದುಮಹಾವ್ರತ, ಐದುಸಮಿತಿ, ಮೂರು ಗುಪ್ತಿಯ ಸ್ವರೂಪವನ್ನು ತಿಳಿದಿಲ್ಲವೆಂಬುದನ್ನು ಈಗ ಹೇಳುತ್ತಾರೆ, -

**ಪಂಚಸು ಮಹವ್ವದೇಸು ಯ ಪಂಚಸು ಸಮಿದೀಸು ತೀಸು ಗುತ್ತೀಸು ।**
**ಜೋ ಮೂಢೋ ಅಣ್ಣಾಣೀ ಣ ಹು ಕಾಲೋ ಭಣಇ ಝಾಣಸ್ಸ ।।೭೫।।**

**ಪಂಚಸು ಮಹಾವ್ರತೇಷು ಚ ಪಂಚಸು ಸಮಿತಿಷು ತಿಸೃಷು ಗುಪ್ತಿಷು ।**
**ಯಃ ಮೂಢಃ ಅಜ್ಞಾನೀ ನ ಸ್ಫುಟಂ ಕಾಲಃ ಭಣತಿ ಧ್ಯಾನಸ್ಯ ।।೭೫।।**

ಅರ್ಥ ः- ಯಾವನು ಐದು ಮಹಾವ್ರತ, ಐದು ಸಮಿತಿ ಮತ್ತು ಮೂರು ಗುಪ್ತಿಗಳಲ್ಲಿ ಮೂಢನಿದ್ದಾನೆ, ಅಜ್ಞಾನಿಯಿದ್ದಾನೆ ಎಂದರೆ ಇವುಗಳ ಸ್ವರೂಪ ತಿಳಿಯುವುದಿಲ್ಲ ಮತ್ತು ಚಾರಿತ್ರಮೋಹದ ತೀವ್ರ ಉದಯದಿಂದ ಇವನ್ನು ಪಾಲಿಸುವ ಸಾಧ್ಯತೆಯಿಲ್ಲದವನು ಈಗ ಧ್ಯಾನದ ಕಾಲವಿಲ್ಲವೆಂದು ಹೇಳುತ್ತಾನೆ. ।।೭೫।।

ಈಗಲೂ ಈ ಪಂಚಮಕಾಲದಲ್ಲಿ ಧರ್ಮಧ್ಯಾನವಾಗುತ್ತದೆಂಬುದನ್ನು ಮನ್ನಿಸದವನು ಅಜ್ಞಾನಿಯಿದ್ದಾನೆಂದು ಈಗ ಹೇಳುತ್ತಾರೆ, -

**ಭರಹೇ ದುಸ್ಸಮಕಾಲೇ ಧಮ್ಮಜ್ಝಾಣಂ ಹವೇಇ ಸಾಹುಸ್ಸ ।**
**ತಂ ಅಪ್ಪಸಹಾವಠಿದೇ ಣ ಹು ಮಣ್ಣ ಇ ಸೋ ವಿ ಅಣ್ಣಾಣೀ ।।೭೬।।**

**ಭರತೇ ದುಃಷಮಕಾಲೇ ಧರ್ಮಧ್ಯಾನಂ ಭವತಿ ಸಾಧೋಃ ।**
**ತದಾತ್ಮಸ್ವಭಾವಸ್ಥಿತೇ ನ ಹಿ ಮನ್ಯತೇ ಸೋಽಪಿ ಅಜ್ಞಾನೀ ।।೭೬।।**

ಅರ್ಥ ः- ಈ ಭರತಕ್ಷೇತ್ರದೊಳಗೆ ದುಃಷಮಕಾಲದಲ್ಲಿ-ಪಂಚಮಕಾಲದಲ್ಲಿ ಸಾಧು ಮುನಿಗೆ ಧರ್ಮ ಧ್ಯಾನವಾಗುತ್ತದೆ, ಈ ಧರ್ಮಧ್ಯಾನವು ಆತ್ಮಸ್ವಭಾವದಲ್ಲಿ ಸ್ಥಿರವಿರುವ ಮುನಿಗೆ ಆಗುತ್ತದೆ,ಇದನ್ನು ಮನ್ನಿಸದವನು ಅಜ್ಞಾನಿಯಿದ್ದಾನೆ,ಅವನಿಗೆ ಧರ್ಮಧ್ಯಾನದ ಸ್ವರೂಪದ ಜ್ಞಾನವಿಲ್ಲ.

---

**ಮೂರು ಗುಪ್ತಿ ಐದು ಸಮಿತಿ ಐದು ಮಹಾವ್ರತಗಳಲಿ ಮೂಢನಾಗಿರುವಾ ।**
**ಮರುಳ ಅಜ್ಞಾನಿ ಹೇಳುವನು ಇದು ಪ್ರಕಟಧ್ಯಾನದ ಕಾಲವಿಲ್ಲವೆಂದು ।।೭೫।।**

**ಭರತಕ್ಷೇತ್ರದಿ ದುಃಷಮಕಾಲದಲಿ ಧರ್ಮಧ್ಯಾನವಾಗುವುದು ಮುನಿಗೆ ।**
**ಸ್ವರೂಪಸ್ಥಿತರಿಗಾಗುವುದಿದನು ಮನ್ನಿಸದವನಜ್ಞಾನಿಯಿರುವನು ।।೭೬।।**

ಭಾವಾರ್ಥ ಃ- ಜಿನಸೂತ್ರದೊಳಗೆ ಈ ಭರತಕ್ಷೇತ್ರದಲ್ಲಿ ಪಂಚಮಕಾಲದೊಳಗೆ ಆತ್ಮಭಾವನೆಯಲ್ಲಿ ಸ್ಥಿರವಿರುವ ಮುನಿಗೆ ಧರ್ಮಧ್ಯಾನ ಹೇಳಿದೆ, ಆದರೆ ಇದನ್ನು ಮನ್ನಿಸದವನು ಅಜ್ಞಾನಿಯಿದ್ದಾನೆ, ಅವನಿಗೆ ಧರ್ಮಧ್ಯಾನದ ಸ್ವರೂಪದ ಜ್ಞಾನವೇ ಇಲ್ಲ. ॥೭೬॥

ಈ ಕಾಲದಲ್ಲೂ ರತ್ನತ್ರಯದ ಧಾರಕನಾದ ಮುನಿಯಾಗುತ್ತಾನೆ ಅವನು ಸ್ವರ್ಗ ಲೋಕದಲ್ಲಿ ಲೋಕಾಂತಿಕ ಪದ ಇಂದ್ರ ಪದವನ್ನು ಪ್ರಾಪ್ತಮಾಡಿಕೊಂಡು ಅಲ್ಲಿಂದ ಚ್ಯುತನಾಗಿ ಮೋಕ್ಷಕ್ಕೆ ಹೋಗುತ್ತಾನೆಂಬುದನ್ನು ಜಿನಸೂತ್ರದಲ್ಲಿ ಹೇಳಿದೆಯೆಂದು ಈಗ ಹೇಳುತ್ತಾರೆ,-

**ಅಜ್ಜ ವಿ ತಿರಯಣಸುದ್ಧಾ ಅಪ್ಪಾ ಝಾಏವಿ ಲಹಹಿಂ ಇಂದತ್ತಂ ।**
**ಲೋಯಂತಿಯದೇವತ್ತಂ ತತ್ಥ ಚುಆ ಣಿವ್ವುದಿಂ ಜಂತಿ ॥೭೭॥**

**ಅದ್ಯ ಅಪಿ ತ್ರಿರತ್ನಶುದ್ಧಾ ಆತ್ಮಾನಂ ಧ್ಯಾತ್ವಾ ಲಭಂತೇ ಇಂದ್ರತ್ವಮ್ ।**
**ಲೌಕಾಂತಿಕದೇವತ್ವಂ ತತಃ ಚ್ಯುತ್ವಾ ನಿರ್ವೃತಿಂ ಯಾಂತಿ ॥೭೭॥**

ಅರ್ಥ ಃ- ಈಗ ಈ ಪಂಚಮಕಾಲದಲ್ಲಿ ಕೂಡ ಯಾವ ಮುನಿಗಳು ಸಮ್ಯಗ್ದರ್ಶನ-ಜ್ಞಾನ-ಚಾರಿತ್ರದ ಶುದ್ಧತೆಯಿಂದ ಯುಕ್ತರಿರುತ್ತಾರೆ ಅವರು ಆತ್ಮನ ಧ್ಯಾನ ಮಾಡಿ ಇಂದ್ರಪದವಿ ಅಥವಾ ಲೋಕಾಂತಿಕದೇವ ಪದವಿಯನ್ನು ಪ್ರಾಪ್ತಮಾಡಿಕೊಳ್ಳುತ್ತಾರೆ ಮತ್ತು ಅಲ್ಲಿಂದ ಚ್ಯುತರಾಗಿ ನಿರ್ವಾಣವನ್ನು ಪ್ರಾಪ್ತಮಾಡಿಕೊಳ್ಳುತ್ತಾರೆ.

ಭಾವಾರ್ಥ ಃ- ಈಗ ಈ ಪಂಚಮಕಾಲದಲ್ಲಿ ಮೋಕ್ಷವಾಗುತ್ತದೆಯೆಂದು ಜಿನಸೂತ್ರದಲ್ಲಿ ಹೇಳಿಲ್ಲ,ಆದುದರಿಂದ ಧ್ಯಾನ ಮಾಡುವುದು ನಿಷ್ಫಲ ಖೇದವಿದೆಯೆಂದು ಕೆಲವರು ಹೇಳುತ್ತಾರೆ. ಆದರೆ ಸೋದರನೇ ! ಮೋಕ್ಷಕ್ಕೆ ಹೋಗುವುದರ ನಿಷೇಧ ಮಾಡಿದೆ ಮತ್ತು ಶುಕ್ಲಧ್ಯಾನದ ನಿಷೇಧ ಮಾಡಿದೆ, ಆದರೆ ಧರ್ಮಧ್ಯಾನದ ನಿಷೇಧವನ್ನಂತೂ ಮಾಡಿಲ್ಲ,ಈಗಲೂ ಯಾವ ಮುನಿಗಳು ರತ್ನತ್ರಯದಿಂದ ಶುದ್ಧರಾಗಿ ಧರ್ಮಧ್ಯಾನದಲ್ಲಿ ಲೀನರಾಗುತ್ತ ಆತ್ಮನ ಧ್ಯಾನ ಮಾಡುತ್ತಾರೆ ಆ ಮುನಿಗಳು ಸ್ವರ್ಗದಲ್ಲಿ ಇಂದ್ರಪದವನ್ನು ಪ್ರಾಪ್ತಮಾಡಿಕೊಳ್ಳುತ್ತಾರೆ ಅಥವಾ ಏಕಭವಾವತಾರಿಯಾದ ಲೋಕಾಂತಿಕದೇವರಿದ್ದಾರೆ ಅವರಲ್ಲಿ ಹೋಗಿ ಉತ್ಪನ್ನರಾಗುತ್ತಾರೆ. ನಂತರ ಅಲ್ಲಿಂದ ಹೊರಟು ಮನುಷ್ಯರಾಗಿ ಮೋಕ್ಷವನ್ನು ಪ್ರಾಪ್ತಮಾಡಿಕೊಳ್ಳುತ್ತಾರೆ. ಹೀಗೆ ಧರ್ಮ ಧ್ಯಾನದಿಂದ ಪರಂಪರೆಯಿಂದ ಮೋಕ್ಷವಾಗುತ್ತಿದ್ದರೂ ನೀವು ಸರ್ವಥಾ ನಿಷೇಧವನ್ನೇಕೆ ಮಾಡುವಿರಿ ? ನಿಷೇಧ ಮಾಡುವವರು ಅಜ್ಞಾನಿಗಳಾದ ಮಿಥ್ಯಾದೃಷ್ಟಿಯಿದ್ದಾರೆ, ಅವರಿಗೆ ವಿಷಯ ಕಷಾಯಗಳಲ್ಲಿ ಸ್ವಚ್ಛಂದವಾಗಿ ಇರುವುದಿದೆಯದರಿಂದ ಈ ಪ್ರಕಾರ ಹೇಳುತ್ತಾರೆ, ॥೭೭॥

ಈ ಕಾಲದಲ್ಲಿ ಧ್ಯಾನದ ಅಭಾವ ಮನ್ನಿಸುತ್ತಾರೆ ಮತ್ತು ಮೊದಲು ಮುನಿಲಿಂಗಗ್ರಹಣ ಮಾಡಿದ್ದಾರೆ ಈಗ ಅದನ್ನು ಗೌಣಮಾಡಿ ಪಾಪದಲ್ಲಿ ಪ್ರವೃತ್ತಿ ಮಾಡುತ್ತಾರೆ ಅವರು ಮೋಕ್ಷಮಾರ್ಗದಿಂದ ಚ್ಯುತರಿದ್ದಾರೆಂದು ಈಗ ಹೇಳುತ್ತಾರೆ,-

---

**ಈಗಲು ತ್ರಿರತ್ನಶುದ್ಧಿಯಿಂದಾತ್ಮನ ಧ್ಯಾನಿಸಿದರೆ ಇಂದ್ರತ್ವ ಪಡೆವರು ।**
**ಮಿಗೆ ಲೋಕಾಂತಿಕ ದೇವರಾಗಲ್ಲಿಂದ ಚ್ಯುತರಾಗಿ ನಿರ್ವಾಣ ಪಡೆಯುವರು ॥೭೭॥**

ಜೇ ಪಾವಮೋಹಿಯಮಈ ಲಿಂಗಂ ಘೇತ್ತೂಣ ಜಿಣವರಿಂದಾಣಂ ।
ಪಾವಂ ಕುಣಂತಿ ಪಾವಾ ತೇ ಚತ್ತಾ ಮೋಕ್ಖಮಗ್ಗಮ್ಮಿ ॥೭೮॥

ಯೇ ಪಾಪಮೋಹಿತಮತಯಃ ಲಿಂಗಂ ಗೃಹೀತ್ವಾ ಜಿನವರೇಂದ್ರಾಣಾಮ್ ।
ಪಾಪಂ ಕುರ್ವಂತಿ ಪಾಪಾಃ ತೇ ತ್ಯಕ್ತ್ವಾ ಮೋಕ್ಷಮಾರ್ಗೇ ॥೭೮॥

ಅರ್ಥ ಃ- ಯಾರ ಬುದ್ಧಿಯು ಪಾಪ ಕಾರ್ಯದಲ್ಲಿ ಮೋಹಿತವಿದೆ ಅವರು ಜಿನವರೇಂದ್ರ ತೀರ್ಥಂಕರ ಲಿಂಗವನ್ನು ಗ್ರಹಣ ಮಾಡಿದರೂ ಕೂಡ ಪಾಪ ಮಾಡುತ್ತಾರೆ ಆ ಪಾಪಿಗಳು ಮೋಕ್ಷಮಾರ್ಗದಿಂದ ಚ್ಯುತರಿದ್ದಾರೆ.

ಭಾವಾರ್ಥ ಃ- ಯಾರು ಮೊದಲು ನಿರ್ಗ್ರಂಥ ಲಿಂಗವನ್ನು ಧಾರಣ ಮಾಡಿದ್ದಾರೆ ಮತ್ತು ನಂತರ ಈಗಂತೂ ಧ್ಯಾನದಕಾಲವಿಲ್ಲ, ಆದುದರಿಂದ ವ್ಯರ್ಥವೇಕೆ ಪ್ರಯಾಸ ಮಾಡಬೇಕೆಂದು ವಿಚಾರ ಮಾಡಿ ಪಾಪದಲ್ಲಿ ಪ್ರವೃತ್ತಿ ಮಾಡತೊಡಗುತ್ತಾರೆ ಅವರು ಪಾಪಿಗಳಿದ್ದಾರೆ, ಅವರಿಗೆ ಮೋಕ್ಷಮಾರ್ಗವಿಲ್ಲ. ॥೭೮॥

['ಈ ಕಾಲದಲ್ಲಿ ಧರ್ಮಧ್ಯಾನವು ಯಾರಿಗೂ ಆಗುವುದಿಲ್ಲ', ಆದರೆ ಭದ್ರಧ್ಯಾನವು (ವ್ರತ, ಭಕ್ತಿ, ದಾನ, ಪೂಜಾದಿಗಳ ಶುಭಭಾವವು) ಆಗುತ್ತದೆ. ಇದರಿಂದಲೇ ನಿರ್ಜರೆ ಮತ್ತು ಪರಂಪರೆಯಿಂದ ಮೋಕ್ಷ ಮನ್ನಿಸಿದ್ದಾರೆ ಮತ್ತು ಈ ಪ್ರಕಾರ ಏಳನೇ ಗುಣಸ್ಥಾನದವರೆಗೆ ಭದ್ರಧ್ಯಾನ ಮತ್ತು ನಂತರವೇ ಧರ್ಮಧ್ಯಾನ ಮನ್ನಿಸುವವರು ಕೂಡ ಶ್ರೀ ದೇವಸೇನಾಚಾರ್ಯಕೃತ 'ಆರಾಧನಾಸಾರ'ವೆಂಬ ಹೆಸರಿತ್ತು ಒಂದು ಝೂಲೀಗ್ರಂಥ ರಚಿಸಿದ್ದಾರೆ ಆದರ ಉತ್ತರವನ್ನು ಕೇಕಡೀ ನಿವಾಸಿ ಶ್ರೀ ಮಿಲಾಪಚಂದ ಕಟಾರಿಯವರು 'ಜೈನ ನಿಬಂಧ ರತ್ನಮಾಲೆ'ಯಲ್ಲಿ ಪುಟ ೪೭ ರಿಂದ ೬೦ ರ ವರೆಗೆ ಕೊಟ್ಟಿದ್ದಾರೆ-ಈ ಕಾಲದಲ್ಲಿ ಧರ್ಮಧ್ಯಾನವನ್ನು ನಾಲ್ಕನೆಯ ಗುಣಸ್ಥಾನದಿಂದ ಏಳನೇ ಗುಣಸ್ಥಾನದವರೆಗೆ ಆಗಮದಲ್ಲಿ ಹೇಳಿದೆ. ಆಧಾರ ಶ್ರೀ ರಾಜವಾರ್ತಿಕ, ಶ್ಲೋಕವಾರ್ತಿಕ ಸರ್ವಾರ್ಥ ಸಿದ್ಧಿ ಮೊದಲಾದವುಗಳ ಸೂತ್ರದ ಟೀಕೆಗಳು].

ಮೋಕ್ಷಮಾರ್ಗದಿಂದ ಚ್ಯುತರಾದವರು ಹೇಗಿರುತ್ತಾರೆಂಬುದನ್ನು ಈಗ ಹೇಳುತ್ತಾರೆ, -

ಜೇ ಪಂಚಚೇಲಸತ್ತಾ ಗಂಥಗ್ಗಾಹೀ ಯ ಜಾಯಣಾಸೀಲಾ ।
ಆಧಾಕಮ್ಮಮ್ಮಿ ರಯಾ ತೇ ಚತ್ತಾ ಮೋಕ್ಖಮಗ್ಗಮ್ಮಿ ॥೭೯॥

ಯೇ ಪಂಚಚೇಲಸಕ್ತಾಃ ಗ್ರಂಥಗ್ರಾಹಿಣಃ ಯಾಚನಾಶೀಲಾಃ ।
ಅಧಃ ಕರ್ಮಣಿ ರತಾಃ ತೇ ತ್ಯಕ್ತಾಃ ಮೋಕ್ಷಮಾರ್ಗೇ ॥೭೯॥

---

ಪಾಪಮೋಹಿತಮತಿಗಳು ಗ್ರಹಿಸುವರು ಜಿನವರೇಂದ್ರರ ಲಿಂಗವನು ।
ಪಾಪವನೆ ಮಾಡುವರಾ ಪಾಪಿಗಳು ಮೋಕ್ಷಮಾರ್ಗದಿಂ ಚ್ಯುತರಿರುವರು ॥೭೮॥

ಆ ಪಂಚಚೇಲಾಸಕ್ತ ಪರಿಗ್ರಹಧಾರಿ ಮೇಣ್ಯಾಚನಾಶೀಲರಿರುವವರು ।
ಪಾಪ ಕಾರ್ಯಗಳಲಿ ಆಸಕ್ತರಿದ್ದವರು ಮೋಕ್ಷಮಾರ್ಗದಿಂ ತ್ಯಕ್ತರಿಹರು ॥೭೯॥

ಅರ್ಥ :- ಐದು ಮೊದಲಾದ ಪ್ರಕಾರ ಚೇಲ ಎಂದರೆ ವಸ್ತ್ರಗಳಲ್ಲಿ ಆಸಕ್ತರಿದ್ದಾರೆ, ಅಂಡಜ, ಕರ್ಪಾಸಜ, ವಲ್ಕಲ, ಚರ್ಮಜ ಮತ್ತು ರೋಮಜವೆಂಬ ವಸ್ತ್ರಗಳೊಳಗೆ ಯಾವುದೇ ಒಂದು ವಸ್ತ್ರವನ್ನು ಗ್ರಹಣ ಮಾಡುತ್ತಾರೆ, ಗ್ರಂಥಗ್ರಾಹಿ ಎಂದರೆ ಪರಿಗ್ರಹವನ್ನು ಗ್ರಹಣ ಮಾಡುವವರಿದ್ದಾರೆ, ಯಾಚನಾಶೀಲ ಎಂದರೆ ಅವರದು ಬೇಡುವ ಸ್ವಭಾವವೇ ಇದೆ ಮತ್ತು ಅಧಃಕರ್ಮ ಎಂದರೆ ಪಾಪಕಾರ್ಯದಲ್ಲಿ ಮಗ್ನರಿದ್ದಾರೆ, ಸದೋಷ ಆಹಾರ ಮಾಡುತ್ತಾರೆ ಅವರು ಮೋಕ್ಷಮಾರ್ಗದಿಂದ ಚ್ಯುತರಿದ್ದಾರೆ.

ಭಾವಾರ್ಥ :- ಮೊದಲಂತೂ ನಿರ್ಗ್ರಂಥ ದಿಗಂಬರ ಮುನಿಯಾಗಿದ್ದರು ನಂತರ ಕಾಲದೋಷದ ವಿಚಾರ ಮಾಡಿ ಚಾರಿತ್ರ ಪಾಲನೆಯಲ್ಲಿ ಅಸಮರ್ಥರಾಗಿ ನಿರ್ಗ್ರಂಥ ಲಿಂಗದಿಂದ ಭ್ರಷ್ಟರಾಗಿ ವಸ್ತ್ರಾದಿಗಳನ್ನು ಅಂಗೀಕಾರ ಮಾಡಿದರು ಪರಿಗ್ರಹವಿಟ್ಟುಕೊಳ್ಳಲಾರಂಭಿಸಿದರು, ಯಾಚನೆ ಮಾಡಲಾರಂಭಿಸಿದರು,ಅಧಃಕರ್ಮ ಉದ್ದೇಶಿತ ಆಹಾರ ಮಾಡಲಾರಂಭಿಸಿದರು, ಅವರ ನಿಷೇಧವಿದೆ, ಅವರು ಮೋಕ್ಷಮಾರ್ಗದಿಂದ ಚ್ಯುತರಿದ್ದಾರೆ. ಮೊದಲಂತೂ ಭದ್ರಬಾಹುಸ್ವಾಮಿಗಳವರೆಗೆ ನಿರ್ಗ್ರಂಥರಿದ್ದರು. ಅನಂತರ ದುರ್ಭಿಕ್ಷೆಯ ಕಾಲದಲ್ಲಿ ಭ್ರಷ್ಟರಾಗಿ ಅವರು ಅರ್ಧ ಫಾಲಕರೆನಿಸಿಕೊಳ್ಳತೊಡಗಿದರು, ಅದರೊಳಗಿಂದ ಶ್ವೇತಾಂಬರರಾದರು, ಅವರು ಈ ವೇಷವನ್ನು ಪುಷ್ಟಮಾಡುವ ಸಲುವಾಗಿ ಸೂತ್ರ ರಚಿಸಿದರು, ಅವುಗಳಲ್ಲಿ ಕೆಲವು ಕಾಲ್ಪನಿಕ ಆಚರಣೆ ಹಾಗೂ ಅದರ ಸಾಧಕವಾದ ಕಥೆಗಳನ್ನು ಬರೆದರು. ಇವರ ಹೊರತಾಗಿ ಇತರ ಕೆಲವರು ವೇಷ ಬದಲಿಸಿದರು. ಈ ಪ್ರಕಾರ ಕಾಲದೋಷದಿಂದ ಭ್ರಷ್ಟ ಜನರ ಸಂಪ್ರದಾಯವು ನಡೆಯುತ್ತಲಿದೆ, ಇದು ಮೋಕ್ಷಮಾರ್ಗವಲ್ಲವೆಂದು ತಿಳಿಸಿಕೊಡಲಾಗಿದೆ. ಆದುದರಿಂದ ಈ ಭ್ರಷ್ಟ ಜನರನ್ನು ನೋಡಿ ಹೀಗೆ ಕೂಡ ಮೋಕ್ಷಮಾರ್ಗವಿದೆಯೆಂದು ಶ್ರದ್ಧೆ ಮಾಡಬಾರದು. ॥೭೯॥

ಮೋಕ್ಷಮಾರ್ಗಿಗಳಂತೂ ಇಂಥ ಮುನಿಗಳಿದ್ದಾರೆಂಬುದನ್ನು ಈಗ ಹೇಳುತ್ತಾರೆ, –

**ಣಿಗ್ಗಂಥಮೋಹಮುಕ್ಕಾ ಬಾವೀಸಪರೀಸಹಾ ಜಿಯಕಸಾಯಾ ।**
**ಪಾವಾರಂಭವಿಮುಕ್ಕಾ ತೇ ಗಹಿಯಾ ಮೋಕ್ಖಮಗ್ಗಮ್ಮಿ ॥೮೦॥**

**ನಿರ್ಗ್ರಂಥಾಃ ಮೋಹಮುಕ್ತಾಃ ದ್ವಾವಿಂಶತಿಪರೀಷಹಾಃ ಜಿತಕಷಾಯಾಃ ।**
**ಪಾಪಾರಂಭವಿಮುಕ್ತಾಃ ತೇ ಗೃಹೀತಾಃ ಮೋಕ್ಷಮಾರ್ಗೇ ॥೮೦॥**

ಅರ್ಥ :- ಯಾವ ಮುನಿಗಳು ನಿರ್ಗ್ರಂಥರಿದ್ದಾರೆ, ಪರಿಗ್ರಹದಿಂದ ರಹಿತರಿದ್ದಾರೆ, ಮೋಹರಹಿತರಿದ್ದಾರೆ, ಅವರಿಗೆ ಯಾವುದೇ ಪರದ್ರವ್ಯದಲ್ಲಿ ಮಮತ್ವಭಾವವಿಲ್ಲ, ಅವರು ಇಪ್ಪತ್ತೆರಡು ಪರೀಷಹಗಳನ್ನು ಸಹಿಸುತ್ತಾರೆ, ಅವರು ಕ್ರೋಧಾದಿ ಕಷಾಯಗಳನ್ನು ಜಯಿಸಿದ್ದಾರೆ ಮತ್ತು ಪಾಪಾರಂಭದಿಂದ ರಹಿತರಿದ್ದಾರೆ, ಗೃಹಸ್ಥರು ಮಾಡಲು ಯೋಗ್ಯವಾದ ಆರಂಭಾದಿ ಕಾರ್ಯಗಳಲ್ಲಿ ಪ್ರವರ್ತಿಸುವುದಿಲ್ಲ ಇಂಥ ಮುನಿಗಳನ್ನು ಮೋಕ್ಷಮಾರ್ಗದಲ್ಲಿ ಗ್ರಹಣ ಮಾಡಿದೆ ಎಂದರೆ ಮನ್ನಿಸಿದ್ದಾರೆ, ರತ್ನಕರಂಡಶ್ರಾವಕಾಚಾರದಲ್ಲಿ ಸ್ವಾಮಿ ಸಮಂತಭದ್ರಾಚಾರ್ಯದೇವರು 'ವಿಷಯಾಶಾವಶಾತೀತೋ ನಿರಾರಂಭೋ ಪರಿಗ್ರಹಃ । ಜ್ಞಾನಧ್ಯಾನತಪೋರಕ್ತಸ್ತಪಸ್ವೀ ಸ ಪ್ರಶಸ್ತತೇ ॥ – ಎಂದು ಹೇಳಿದ್ದಾರೆ.

---

**ಅಪಗತಮೋಹ ದ್ವಾವಿಂಶತಿ ಪರೀಷಹಜಯಿ ನಿರ್ಗ್ರಂಥ ಜಿತಕಷಾಯಿ ।**
**ಪಾಪಾರಂಭ ವಿಮುಕ್ತರಾದವರನು ಗ್ರಹಿಸಲಾಗಿದೆ ಮೋಕ್ಷಮಾರ್ಗದಲಿ ॥೮೦॥**

ಭಾವಾರ್ಥ ಃ- ಮುನಿಗಳು ಲೌಕಿಕ ಕಷ್ಟ ಮತ್ತುಕಾರ್ಯಗಳಿಂದ ರಹಿತರಿದ್ದಾರೆ.ಜಿನೇಶ್ವರರು ಮೋಕ್ಷ ಮಾರ್ಗವನ್ನು ಹೇಗೆ ಬಾಹ್ಯಾಭ್ಯಂತರ ಪರಿಗ್ರಹದಿಂದ ರಹಿತ ನಗ್ನ ದಿಗಂಬರರೂಪವೆಂದು ಹೇಳಿದ್ದಾರೆ ಹಾಗೆಯೇ ಪ್ರವರ್ತಿಸುವವರು ಮೋಕ್ಷಮಾರ್ಗಿಗಳಿದ್ದಾರೆ, ಇತರರು ಮೋಕ್ಷಮಾರ್ಗಿಗಳಿಲ್ಲ. ॥೮೦॥

ಈಗ ಮತ್ತೆ ಮೋಕ್ಷಮಾರ್ಗದ ಪ್ರವೃತ್ತಿಯನ್ನು ಹೇಳುತ್ತಾರೆ, -

**ಉದ್ಧದ್ಧಮಜ್ಝ ಲೋಯೇ ಕೇಈ ಮಜ್ಝಂ ಣ ಅಹಯಮೇಗಾಗೀ ।**
**ಇಯ ಭಾವಣಾಏ ಜೋಈ ಪಾವಂತಿ ಹು ಸಾಸಯಂ ಸೋಕ್ಖಂ ॥೮೧॥**

**ಊರ್ಧ್ವಾಧೋಮಧ್ಯಲೋಕೇ ಕೇಚಿತ್ ಮಮ ನ ಅಹಕಮೇಕಾಕೀ ।**
**ಇತಿ ಭಾವನಯಾ ಯೋಗಿನಃ ಪ್ರಾಪ್ನುವಂತಿ ಸ್ಫುಟಂ ಶಾಶ್ವತಂ ಸೌಖ್ಯಮ್ ॥೮೧॥**

ಅರ್ಥ ಃ- ಊರ್ಧ್ವಲೋಕ, ಮಧ್ಯಲೋಕ, ಅಧೋಲೋಕ ಈ ಮೂರೂ ಲೋಕಗಳಲ್ಲಿ ನನ್ನದು ಯಾವುದೂ ಇಲ್ಲ, ನಾನು ಏಕಾಕಿ ಆತ್ಮನಿದ್ದೇನೆಂದು ಮುನಿಗಳು ಭಾವನೆ ಮಾಡುವರು, ಇಂಥ ಭಾವನೆಯಿಂದ ಯೋಗಿಮುನಿಗಳು ಪ್ರಕಟರೂಪದಿಂದ ಶಾಶ್ವತ ಸುಖವನ್ನು ಪ್ರಾಪ್ತಮಾಡಿಕೊಳ್ಳುತ್ತಾರೆ.

ಭಾವಾರ್ಥ ಃ- ಈ ಮೂರು ಲೋಕದಲ್ಲಿ ಜೀವನು ಏಕಾಕಿಯಿದ್ದಾನೆ, ಇವನ ಸಂಬಂಧಿಗಳು ಬೇರೆ-ಯಾರೂ ಇಲ್ಲವೆಂದು ಮುನಿಗಳು ಭಾವನೆ ಮಾಡುವರು, ಇದು ಪರಮಾರ್ಥರೂಪದ ಏಕತ್ವ ಭಾವನೆಯಿದೆ, ಇಂಥ ಭಾವನೆಯು ನಿರಂತರವಾಗಿರುವಂಥ ಮುನಿಯೇ ಮೋಕ್ಷಮಾರ್ಗಿಯಾಗಿದ್ದಾನೆ, ಮೋಕ್ಷಧಾರಣ ಮಾಡಿ ಕೂಡ ಲೌಕಿಕ ಜನರಿಂದ ಲಾಲನೆ-ಪಾಲನೆಯ ಭಾವವನ್ನಿಡುವವನು ಮೋಕ್ಷಮಾರ್ಗಿಯಿಲ್ಲ. ॥೮೦॥

ಈಗ ಮತ್ತೆ ಹೇಳುತ್ತಾರೆ, -

**ದೇವಗುರೂಣಾಂ ಭತ್ತಾ ಣಿವ್ವೇಯಪರಂಪರಾ ವಿಚಿಂತಿಂತಾ ।**
**ಝಾಣರಯಾ ಸುಚರಿತ್ತಾ ತೇ ಗಹಿಯಾ ಮೋಕ್ಖಮಗ್ಗಮ್ಮಿ ॥೮೨॥**

**ದೇವಗುರೂಣಾಂ ಭಕ್ತಾಃ ನಿರ್ವೇದಪರಂಪರಾಂ ವಿಚಿಂತಯಂತಃ ।**
**ಧ್ಯಾನರತಾಃ ಸುಚರಿತ್ರಾಃ ತೇ ಗೃಹೀತಾಃ ಮೋಕ್ಷಮಾರ್ಗೇ ॥೮೨॥**

ಅರ್ಥ ಃ- ಯಾವ ಮುನಿಗಳು ದೇವಗುರುಗಳ ಭಕ್ತರಿದ್ದಾರೆ, ನಿರ್ವೇದ ಎಂದರೆ ಸಂಸಾರ-ದೇಹ-ಭೋಗಗಳಿಂದ ವಿರಾಗತೆಯ ಪರಂಪರೆಯ ಚಿಂತನೆ ಮಾಡುತ್ತಾರೆ, ಧ್ಯಾನದಲ್ಲಿ ಮಗ್ನರಿದ್ದಾರೆ, ಆಸಕ್ತರಿದ್ದಾರೆ, ತತ್ಪರರಿದ್ದಾರೆ ಮತ್ತು ಅವರಿಗೆ ಉತ್ತಮ ಚಾರಿತ್ರವಿದೆ ಅವರನ್ನು ಮೋಕ್ಷಮಾರ್ಗದಲ್ಲಿ ಗ್ರಹಣ ಮಾಡಿದ್ದಾರೆ.

---

ಭುವನತ್ರಯದೊಳಗೆ ನನ್ನವರಾರಿಲ್ಲನಾನೇಕಾಕಿಯಾಗಿರುವೆನೆಂಬ ।
ಭಾವನೆಯಿಂದ ಪಡೆಯುವರು ಯೋಗಿಗಳು ಸ್ಪಷ್ಟಶಾಶ್ವತ ಸುಖವನು ॥೮೧॥

ಆ ನಿರ್ವೇದ ಪರಂಪರೆಯ ಚಿಂತನೆಮಾಳ್ಪರನು ದೇವಗುರು ಭಕ್ತರನು ।
ಧ್ಯಾನ ತತ್ಪರ ಮೇಣ್ಸುಚರಿತ್ರರನು ಗ್ರಹಣಮಾಡಿದೆ ಮೋಕ್ಷಮಾರ್ಗದಲಿ ॥೮೨॥

ಭಾವಾರ್ಥ :- ಮೋಕ್ಷಮಾರ್ಗವನ್ನು ಪ್ರಾಪ್ತಮಾಡಿಕೊಂಡಿರುವಂಥ ಅರಹಂತ ಸರ್ವಜ್ಞ ವೀತರಾಗ ದೇವರು ಮತ್ತು ಅವರ ಅನುಸರಣೆ ಮಾಡುವಂಥ ದೊಡ್ಡ ಮುನಿಗಳು ದೀಕ್ಷೆ-ಶಿಕ್ಷೆ ಕೊಡುವಂಥ ಗುರುಗಳಲ್ಲಿ ಭಕ್ತಿಯುಕ್ತರಿದ್ದಾರೆ, ಸಂಸಾರ-ದೇಹ-ಭೋಗಗಳಿಂದ ವಿರಕ್ತರಾಗಿ ಮುನಿಗಳಾಗಿದ್ದಾರೆ ಅದೇ ಪ್ರಕಾರ ವೈರಾಗ್ಯ ಭಾವನೆಯಿದೆ, ಆತ್ಮಾನುಭವರೂಪ ಶುದ್ಧ ಉಪಯೋಗರೂಪ ಏಕಾಗ್ರತಾರೂಪದ ಧ್ಯಾನದಲ್ಲಿ ತತ್ಪರರಿದ್ದಾರೆ ಮತ್ತು ಅವರಿಗೆ ವ್ರತ, ಸಮಿತಿ, ಗುಪ್ತಿರೂಪ ನಿಶ್ಚಯವ್ಯವಹಾರಾತ್ಮಕವಾದ ಸಮ್ಯಕ್ಚಾರಿತ್ರವಿರುತ್ತದೆ ಅದೇ ಮುನಿಗಳು ಮೋಕ್ಷ ಮಾರ್ಗಿಗಳಿದ್ದಾರೆ, ಇತರ ವೇಷಧಾರಿಗಳು ಮೋಕ್ಷಮಾರ್ಗಿಗಳಿಲ್ಲ. ||೮೨||

ನಿಶ್ಚಯನಯದಿಂದ ಧ್ಯಾನವು ಈ ಪ್ರಕಾರವಿದೆಯೆಂದು ಈಗ ಹೇಳುತ್ತಾರೆ, -

**ಣಿಚ್ಛಯಣಯಸ್ಸ ಏವಂ ಅಪ್ಪಾ ಅಪ್ಪಮ್ಮಿ ಅಪ್ಪಣೇ ಸುರದೋ ।**
**ಸೋ ಹೋದಿ ಹು ಸುಚರಿತ್ತೋ ಜೋಈ ಸೋ ಲಹಇ ಣಿವ್ವಾಣಂ ||೮೩||**

**ನಿಶ್ಚಯನಯಸ್ಯ ಏವಂ ಆತ್ಮಾ ಆತ್ಮನಿ ಆತ್ಮನೇ ಸುರತಃ ।**
**ಸಃ ಭವತಿ ಸ್ಫುಟಂ ಸುಚರಿತ್ರಃ ಯೋಗೀ ಸಃ ಲಭತೇ ನಿರ್ವಾಣಮ್ ||೮೩||**

ಅರ್ಥ :- ಯಾವ ಆತ್ಮನು ಆತ್ಮನಲ್ಲಿಯೇ ತನ್ನ ಸಲುವಾಗಿಯೇ ಒಳ್ಳೆಯ ಪ್ರಕಾರದಿಂದ ಅನುರಕ್ತನಾಗಿ ಹೋಗುವವನು ಆ ಯೋಗಿ ಧ್ಯಾನಿ ಮುನಿಯು ಸಮ್ಯಕ್ಚಾರಿತ್ರವುಳ್ಳವನಾಗುತ್ತ ನಿರ್ವಾಣಕ್ಕೆ ಪ್ರಾಪ್ತನಾಗುತ್ತಾನೆಂಬುದು ನಿಶ್ಚಯನಯದ ಅಭಿಪ್ರಾಯವಿದೆಯೆಂದು ಆಚಾರ್ಯದೇವರು ಹೇಳುತ್ತಾರೆ.

ಭಾವಾರ್ಥ :- ಒಂದು ದ್ರವ್ಯದ ಅವಸ್ಥೆಯು ಹೇಗಾಗುವುದು ಅದನ್ನೇ ನಿಶ್ಚಯನಯದ ಸ್ವರೂಪವೆಂದು ಹೇಳಿದೆ. ಅಜ್ಞಾನ ಅವಸ್ಥೆ ಮತ್ತು ಜ್ಞಾನ ಅವಸ್ಥೆಯೆಂದು ಆತ್ಮನ ಅವಸ್ಥೆಗಳು ಎರಡು ಇವೆ. ಎಲ್ಲಿಯವರೆಗೆ ಅಜ್ಞಾನ ಅವಸ್ಥೆಯಿರುತ್ತದೆ ಅಲ್ಲಿಯವರೆಗೆ ನಾನು ಮನುಷ್ಯನಿದ್ದೇನೆ, ನಾನು ಪಶುವಿದ್ದೇನೆ, ನಾನು ಕ್ರೋಧಿಯಿದ್ದೇನೆ, ನಾನು ಮಾನಿಯಿದ್ದೇನೆ, ನಾನು ಮಾಯಾವಿಯಿದ್ದೇನೆ, ನಾನು ಪುಣ್ಯವಂತ ಧನಿಕನಿದ್ದೇನೆ, ನಾನು ನಿರ್ಧನ ದರಿದ್ರಿಯಿದ್ದೇನೆ, ನಾನು ರಾಜನಿದ್ದೇನೆ, ನಾನು ರಂಕನಿದ್ದೇನೆ, ನಾನು ಮುನಿಯಿದ್ದೇನೆ, ನಾನು ಶ್ರಾವಕನಿದ್ದೇನೆಂದು ಇವೇ ಮೊದಲಾದ ಪರ್ಯಾಯಗಳಲ್ಲಿ ಆತ್ಮನನ್ನು ಮನ್ನಿಸುತ್ತಾನೆ, ಈ ಪರ್ಯಾಯಗಳಲ್ಲಿ ಲೀನನಾಗುತ್ತಾನೆ ಆಗ ಮಿಥ್ಯಾದೃಷ್ಟಿಯಿದ್ದಾನೆ, ಅಜ್ಞಾನಿಯಿದ್ದಾನೆ, ಅದರ ಫಲವು ಸಂಸಾರವಿದ್ದು ಅದನ್ನು ಭೋಗಿಸುತ್ತಾನೆ.

ಜಿನಮತದ ಪ್ರಸಾದದಿಂದ ಜೀವ-ಅಜೀವ ಪದಾರ್ಥಗಳ ಜ್ಞಾನವಾದಾಗ ಸ್ವ-ಪರದ ಭೇದ ತಿಳಿದುಕೊಂಡು ಜ್ಞಾನಿಯಾಗುತ್ತಾನೆ, ಆಗ ನಾನು ಶುದ್ಧಜ್ಞಾನದರ್ಶನಮಯನಾದ ಚೇತನಾಸ್ವರೂಪನಿದ್ದೇನೆ, ಬೇರೆ ಯಾವುದೂ ನನ್ನದಿಲ್ಲವೆಂದು ತಿಳಿಯುತ್ತಾನೆ. ಭಾವಲಿಂಗಿ ನಿರ್ಗ್ರಂಥ ಮುನಿಪದದ ಪ್ರಾಪ್ತಿಮಾಡಿಕೊಂಡಾಗ ಈ ಆತ್ಮನು ಜ್ಞಾನದಲ್ಲಿಯೇ ತನ್ನ ಮುಖಾಂತರವೇ ತನ್ನ ಸಲುವಾಗಿಯೇ ವಿಶೇಷ ಲೀನನಾದಾಗ ನಿಶ್ಚಯ ಸಮ್ಯಕ್ಚಾರಿತ್ರ ಸ್ವರೂಪನಾಗಿ ತನ್ನದೇ ಧ್ಯಾನ ಮಾಡುತ್ತಾನೆ, (ಪ್ರತ್ಯಕ್ಷ ಮೋಕ್ಷಮಾರ್ಗದಲ್ಲಿ ಆರೂಢನಾಗಿ) ಸಮ್ಯಗ್ಜ್ಞಾನಿಯಾಗುತ್ತಾನೆ, ಇದರ ಫಲವು ನಿರ್ವಾಣವಿದೆಯೆಂದು ತಿಳಿಯಬೇಕಾಗುವುದು. ||೮೩||

---

ಯಾವಾತ್ಮ ಆತ್ಮಾರ್ಥದಿಂದಾತ್ಮನಲಿ ಸುರತನಿಹನು ನಿಶ್ಚಯನಯದಿಂದ ।
ಅವನಿಹನು ಸುಚರಿತ್ರನಾದ ಯೋಗಿ ಅವನು ನಿರ್ವಾಣ ಪಡೆಯುವನು ||೮೩||

[ನೋಟ-ಪ್ರವಚನಸಾರದ ೨೪೧-೨೪೨ನೇ ಗಾಥೆಯಲ್ಲಿ ೭ನೇ ಗುಣಸ್ಥಾನದಲ್ಲಿ ಆಗಮಜ್ಞಾನ ತತ್ತ್ವಾರ್ಥ ಶ್ರದ್ಧೆ ಸಂಯತತ್ತ್ವ ಮತ್ತು ನಿಶ್ಚಯ ಆತ್ಮಜ್ಞಾನದಲ್ಲಿ ಯುಗಪತ್ ಆರೂಢವನ್ನು ಆತ್ಮಜ್ಞಾನವೆಂದು ಹೇಳಿದೆ,ಅದು ಇಲ್ಲಿ ಕಥನದ ಅಪೇಕ್ಷೆಯಿಂದ ] (ಗೌಣ-ಮುಖ್ಯವೆಂದು ತಿಳಿದುಕೊಳ್ಳಬೇಕು)

ಈಗ ಇದೇ ಅರ್ಥವನ್ನು ದೃಢಪಡಿಸುತ್ತ ಹೇಳುತ್ತಾರೆ, -

**ಪುರಿಸಾಯಾರೋ ಅಪ್ಪಾ ಜೋಈ ವರಣಾಣದಂಸಣಸಮಗ್ಗೋ ।**
**ಜೋ ಝಾಯದಿ ಸೋ ಜೋಈ ಪಾವಹರೋ ಹವದಿ ಣಿದ್ದಂದೋ ॥೮೪॥**

**ಪುರುಷಾಕಾರ ಆತ್ಮಾ ಯೋಗೀ ವರಜ್ಞಾನದರ್ಶನಸಮಗ್ರಃ ।**
**ಯಃ ಧ್ಯಾಯತಿ ಸಃ ಯೋಗೀ ಪಾಪಹರಃ ಭವತಿ ನಿರ್ದ್ವಂದ್ವಃ ॥೮೪॥**

ಅರ್ಥ ೞ- ಈ ಆತ್ಮನು ಧ್ಯಾನಯೋಗ್ಯ ಹೇಗಿದ್ದಾನೆಂದರೆ -ಪುರುಷಾಕಾರನಿದ್ದಾನೆ, ಯೋಗಿಯಿದ್ದಾನೆ, ಅವನಿಗೆ ಮನ, ವಚನ,ಕಾಯ ಯೋಗಗಳ ನಿರೋಧವಿದೆ, ಸರ್ವಾಂಗ ಸುನಿಶ್ಚಲವಿದೆ ಮತ್ತು ವರ ಎಂದರೆ ಶ್ರೇಷ್ಠ ಸಮ್ಯಕ್‌ರೂಪ ಜ್ಞಾನ ಹಾಗೂ ದರ್ಶನದಿಂದ ಸಮಗ್ರನಿದ್ದಾನೆ, ಪರಿಪೂರ್ಣನಿದ್ದಾನೆ, ಅವನಿಗೆ ಕೇವಲ ಜ್ಞಾನ ದರ್ಶನಗಳು ಪ್ರಾಪ್ತವಿವೆ, ಈ ಪ್ರಕಾರದ ಆತ್ಮನ ಧ್ಯಾನ ಮಾಡುವಂಥ ಯೋಗಿ ಧ್ಯಾನಿ ಮುನಿಯು ಪಾಪವನ್ನು ನಿವಾರಿಸುವಂಥವನಿದ್ದಾನೆ ಮತ್ತು ನಿರ್ದ್ವಂದ್ವನಿದ್ದಾನೆ-ರಾಗ-ದ್ವೇಷ ಮೊದಲಾದ ವಿಕಲ್ಪಗಳಿಂದ ರಹಿತನಿದ್ದಾನೆ.

ಭಾವಾರ್ಥ ೞ- ಯಾವನು ಅರಹಂತರೂಪದ ಶುದ್ಧಾತ್ಮನ ಧ್ಯಾನ ಮಾಡುತ್ತಾನೆ ಅವನ ಪೂರ್ವ ಕರ್ಮಗಳು ನಾಶವಾಗುತ್ತವೆ ಮತ್ತು ವರ್ತಮಾನದಲ್ಲಿ ರಾಗ-ದ್ವೇಷ ರಹಿತನಾಗುತ್ತಾನೆ ಆಗ ಭವಿಷ್ಯ ಕರ್ಮಗಳನ್ನು ಕಟ್ಟಿಕೊಳ್ಳುವುದಿಲ್ಲ. ॥೮೪॥

ಹೀಗೆ ಮುನಿಗಳಿಗೆ ಪ್ರವರ್ತಿಸುವುದಕ್ಕೆ ಹೇಳಿ ಈಗ ಶ್ರಾವಕನಿಗೆ ಪ್ರವರ್ತಿಸುವ ಸಲುವಾಗಿ ಹೇಳುತ್ತಾರೆ, -

**ಏವಂ ಜಿಣೇಹಿಂ ಕಹಿಯಂ ಸವಣಾಣಂ ಸಾವಯಾಣ ಪುಣ ಸುಣಸು ।**
**ಸಂಸಾರವಿಣಾಸಯರಂ ಸಿದ್ಧಿಯರಂ ಕಾರಣಂ ಪರಮಂ ॥೮೫॥**

**ಏವಂ ಜಿನೈಃ ಕಥಿತಂ ಶ್ರಮಣಾನಾಂ ಶ್ರಾವಕಾಣಾಂ ಪುನಃ ಶೃಣುತ ।**
**ಸಂಸಾರವಿನಾಶಕರಂ ಸಿದ್ಧಿ ಕರಂ ಕಾರಣಂ ಪರಮಂ ॥೮೫॥**

---

ಮುನಿ ಪುರುಷಾಕಾರ ಆತ್ಮ ವರಜ್ಞಾನದರ್ಶನ ಪರಿಪೂರ್ಣನಿರುವನು ।
ಧ್ಯಾನಿಸುವನವನು ಯೋಗಿ ಪಾಪನಾಶಕ ದ್ವಂದ್ವವಿರಹಿತನಿರುವನು ॥೮೪॥

ಈ ವಿಧ ಜಿನರುಪದೇಶಿಸಿ ಶ್ರಮಣರಿಗೀಗ ಪೇಳ್ವರು ಶ್ರಾವಕರಿಗೆ ।
ಭವವಿನಾಶಕರ ಸಿದ್ಧಿಕರವಾದ ಪರಮ ಕಾರಣವ ಕೇಳುವುದು ॥೮೫॥

ಅರ್ಥ :- ಏವಂ ಎಂದರೆ ಪೂರ್ವೋಕ್ತ ಪ್ರಕಾರದ ಉಪದೇಶವನ್ನಂತೂ ಜಿನದೇವರು ಶ್ರಮಣ ಮುನಿಗಳಿಗೆ ಹೇಳಿದ್ದಾರೆ. ಈಗ ಸಂಸಾರದ ವಿನಾಶಮಾಡುವಂಥ ಮತ್ತು ಸಿದ್ಧಿ ಎಂದರೆ ಮೋಕ್ಷ ಮಾಡಿಸಲು ಉತ್ಕೃಷ್ಟ ಕಾರಣವಾದಂಥ ಉಪದೇಶವನ್ನು ಶ್ರಾವಕರಿಗೆ ಹೇಳುತ್ತಾರೆ ಅದನ್ನು ಕೇಳಿರಿ.

ಭಾವಾರ್ಥ :- ಮೊದಲು ಹೇಳಿರುವುದಂತೂ ಮುನಿಗಳಿಗೆ ಹೇಳಿದೆ ಮತ್ತು ಈಗ ಹೇಳುತ್ತಿರುವುದು ಶ್ರಾವಕರಿಗೆ ಹೇಳುತ್ತೇವೆಂದು ಹೇಳುತ್ತಾರೆ, ಇದರಿಂದ ಸಂಸಾರದ ವಿನಾಶವಾಗುವುದು ಮತ್ತು ಮೋಕ್ಷದ ಪ್ರಾಪ್ತಿಯಾಗುವುದು. ||೮೫||

ಮೊದಲು ಶ್ರಾವಕರು ಏನು ಮಾಡಬೇಕೆಂಬುದನ್ನು ಈಗ ಹೇಳುತ್ತಾರೆ, -

**ಗಹಿಂಊಣ ಯ ಸಮ್ಮತ್ತಂ ಸುಣಿಮ್ಮಲಂ ಸುರಗಿರೀವ ಣಿಕ್ಕಂಪಂ ।**
**ತಂ ಝಾಣೇ ಝಾಇಜ್ಜಇ ಸಾವಯ ದುಕ್ಖ ಕ್ಖಯಟ್ಠಾಏ ||೮೬||**

**ಗೃಹೀತ್ವಾ ಚ ಸಮ್ಯಕ್ತ್ವಂ ಸುನಿರ್ಮಲಂ ಸುರಗಿರೇರಿವ ನಿಷ್ಕಂಪಮ್ ।**
**ತತ್ ಧ್ಯಾನೇ ಧ್ಯಾಯತೇ ಶ್ರಾವಕ ! ದುಃಖಕ್ಷಯಾರ್ಥೇ ||೮೬||**

ಅರ್ಥ :- ಮೊದಲಂತೂ ಶ್ರಾವಕರು ಸುನಿರ್ಮಲ ಎಂದರೆ ಒಳ್ಳೆಯ ಪ್ರಕಾರದಿಂದ ನಿರ್ಮಲ ಮತ್ತು ಮೇರುವಿನಂತೆ ನಿಷ್ಕಂಪ ಅಚಲ ಹಾಗೂ ಚಲ ಮಲಿನ ಆಗಾಢ ದೂಷಣದಿಂದ ರಹಿತ ಅತ್ಯಂತ ನಿಶ್ಚಲವಾದಂಥ ಸಮ್ಯಕ್ತ್ವವನ್ನು ಗ್ರಹಣಮಾಡಿ ದುಃಖದ ಕ್ಷಯಮಾಡುವ ಸಲುವಾಗಿ ಅದನ್ನು ಎಂದರೆ ಸಮ್ಯಗ್ದರ್ಶನವನ್ನು (ಸಮ್ಯಗ್ದರ್ಶನದ ವಿಷಯವನ್ನು) ಧ್ಯಾನದಲ್ಲಿ ಧ್ಯಾನ ಮಾಡಬೇಕಾಗುವುದು.

ಭಾವಾರ್ಥ :- ಮೊದಲಂತೂ ಶ್ರಾವಕರು ನಿರತಿಚಾರ ನಿಶ್ಚಲಸಮ್ಯಕ್ತ್ವವನ್ನು ಗ್ರಹಣ ಮಾಡಿ ಅದರಧ್ಯಾನ ಮಾಡಬೇಕು, ಈ ಸಮ್ಯಕ್ತ್ವದ ಭಾವನೆಯಿಂದ ಗೃಹಸ್ಥರಿಗೆ ಗೃಹಕಾರ್ಯ ಸಂಬಂಧದ ಆಕುಲತೆ, ಕ್ಷೋಭೆ, ದುಃಖಗಳು ಹೇಯವಿದ್ದು ಅವು ದೂರವಾಗುತ್ತವೆ, ಕಾರ್ಯವನ್ನು ಕೆಡಿಸುವಲ್ಲಿ ಸುಧಾರಿಸುವಲ್ಲಿ ವಸ್ತುಸ್ವರೂಪದ ವಿಚಾರ ಬಂದಾಗ ದುಃಖವು ದೂರವಾಗುತ್ತದೆ. ವಸ್ತುಸ್ವರೂಪವನ್ನು ಸರ್ವಜ್ಞರು ಹೇಗೆ ತಿಳಿದಿದ್ದಾರೆ ಹಾಗೆ ನಿರಂತರ ಪರಿಣಮಿಸುತ್ತದೆ ಅದೇ ಆಗುತ್ತದೆ, ಇಷ್ಟಾನಿಷ್ಟವೆಂದು ಮನ್ನಿಸಿ ಸುಖಿದುಃಖಿಯಾಗುವುದು ನಿಷ್ಫಲವಿದೆಯೆಂಬ ವಿಚಾರವು ಸಮ್ಯಗ್ದೃಷ್ಟಿಗೆ ಇರುತ್ತದೆ. ಹೀಗೆ ವಿಚಾರ ಮಾಡುವುದರಿಂದ ದುಃಖವು ದೂರವಾಗುತ್ತಿರುವುದು ಪ್ರತ್ಯಕ್ಷ ಅನುಭವ ಗೋಚರವಿದೆ, ಅದಕ್ಕಾಗಿ ಸಮ್ಯಕ್ತ್ವದ ಧ್ಯಾನಮಾಡಲು ಹೇಳಲಾಗಿದೆ. ||೮೬||

ಈಗ ಸಮ್ಯಕ್ತ್ವದ ಧ್ಯಾನದ ಮಹಿಮೆಯನ್ನೇ ಹೇಳುತ್ತಾರೆ, -

---

ಸುನಿರ್ಮಲ ಮೇಣ್ಸುರಗಿರಿಸಮ ನಿಷ್ಕಂಪವಾದ ಸಮ್ಯಕ್ತ್ವವನು ಗ್ರಹಿಸಿ ।
ಧ್ಯಾನದಲಿಧ್ಯಾನಿಸುವುದದನೆಲೆ ಶ್ರಾವಕ ! ದುಃಖಕ್ಷಯಾರ್ಥವಾಗಿ ತಾವು ||೮೬||

**ಸಮ್ಮತ್ತಂ ಜೋ ಝಾಯಇ ಸಮ್ಮಾಇಟ್ಠೀ ಹವೇಇ ಸೋ ಜೀವೋ ।**
**ಸಮ್ಮತ್ತಪರಿಣದೋ ಉಣ ಖವೇಇ ದುಟ್ಠಟ್ಠಕಮ್ಮಾಣಿ ।।೮೭।।**

**ಸಮ್ಯಕ್ತ್ವಂ ಯಃ ಧ್ಯಾಯತಿ ಸಮ್ಯಗ್ದೃಷ್ಟಿಃ ಭವತಿ ಸಃ ಜೀವಃ ।**
**ಸಮ್ಯಕ್ತ್ವಪರಿಣತಃ ಪುನಃ ಕ್ಷಪಯತಿ ದುಷ್ಟಾಷ್ಟಕರ್ಮಾಣಿ ।।೮೭।।**

ಅರ್ಥ ಃ- ಯಾವ ಶ್ರಾವಕನು ಸಮ್ಯಕ್ತ್ವದ ಧ್ಯಾನ ಮಾಡುತ್ತಾನೆ ಆ ಜೀವನು ಸಮ್ಯಗ್ದೃಷ್ಟಿಯಿದ್ದಾನೆ ಮತ್ತು ಸಮ್ಯಕ್ತ್ವರೂಪವಾಗಿ ಪರಿಣಮಿಸುತ್ತ ದುಷ್ಟವಾದ ಅಷ್ಟಕರ್ಮಗಳನ್ನು ಕ್ಷಯಮಾಡುತ್ತಾನೆ.

ಭಾವಾರ್ಥ ಃ- ಸಮ್ಯಕ್ತ್ವದ ಧ್ಯಾನವು ಹೇಗಿದೆಯೆಂದರೆ ಮೊದಲು ಸಮ್ಯಕ್ತ್ವವಾಗಿರದಿದ್ದರೂ ಕೂಡ ಅದರ ಸ್ವರೂಪ ತಿಳಿದುಕೊಂಡು ಅದರ ಧ್ಯಾನ ಮಾಡಿದರೆ ಸಮ್ಯಗ್ದೃಷ್ಟಿಯಾಗಿ ಬಿಡುತ್ತಾನೆ. ಸಮ್ಯಕ್ತ್ವವಾದ ಮೇಲೆ ಅವನ ಪರಿಣಾಮದಿಂದ ಸಂಸಾರಕ್ಕೆ ಕಾರಣವಾದ ಆ ದುಷ್ಟ ಅಷ್ಟಕರ್ಮಗಳ ಕ್ಷಯವಾಗುತ್ತದೆ. ಸಮ್ಯಕ್ತ್ವವಾಗುತ್ತಿದ್ದಂತೆಯೇ ಕರ್ಮಗಳ ಗುಣಶ್ರೇಣಿ ನಿರ್ಜರೆಯಾಗಲಾರಂಭಿಸುತ್ತದೆ, ಅನುಕ್ರಮದಿಂದ ಮುನಿಯಾದ ನಂತರ ಚಾರಿತ್ರ ಮತ್ತು ಶುಕ್ಲಧ್ಯಾನಗಳು ಸಹಕಾರಿಯಾಗಿ ಬಿಡುತ್ತವೆ, ಆಗ ಸಮಸ್ತ ಕರ್ಮಗಳ ನಾಶವಾಗಿ ಹೋಗುತ್ತದೆ. ।।೮೭।।

ಈಗ ಇದನ್ನು ಸಂಕ್ಷೇಪದಿಂದ ಹೇಳುತ್ತಾರೆ,-

**ಕಿಂ ಬಹುಣಾ ಭಣಿಏಣಂ ಜೇ ಸಿದ್ಧಾ ಣರವರಾ ಗಏ ಕಾಲೇ ।**
**ಸಿಜ್ಝಿಹಹಿ ಜೇ ವಿ ಭವಿಯಾ ತಂ ಜಾಣಹ ಸಮ್ಮಮಾಹಪ್ಪಂ ।।೮೮।।**

**ಕಿಂ ಬಹುಣಾ ಭಣಿತೇನ ಯೇ ಸಿದ್ಧಾಃ ನರವರಾಃ ಗತೇ ಕಾಲೇ ।**
**ಸೇತ್ಸ್ಯಂತಿ ಯೇಽಪಿ ಭವ್ಯಾಃ ತಂಜಾನೀತ ಸಮ್ಯಕ್ತ್ವಮಾಹಾತ್ಮ್ಯಮ್ ।।೮೮।।**

ಅರ್ಥ ಃ- ಹೆಚ್ಚು ಹೇಳುವುದರಿಂದೇನು ಸಾಧ್ಯವಿದೆ, ಯಾವ ನರಪ್ರಧಾನರು ಅತೀತ ಕಾಲದಲ್ಲಿ ಸಿದ್ಧರಾಗಿದ್ದಾರೆ ಮತ್ತು ಭವಿಷ್ಯಕಾಲದಲ್ಲಿ ಸಿದ್ಧರಾಗಲಿದ್ದಾರೆ. ಅದು ಸಮ್ಯಕ್ತ್ವದ ಮಾಹಾತ್ಮ್ಯವೆಂದು ತಿಳಿಯಬೇಕು.

ಭಾವಾರ್ಥ ಃ- ಈ ಸಮ್ಯಕ್ತ್ವದ ಮಾಹಾತ್ಮ್ಯದಿಂದ ಅತೀತಕಾಲದಲ್ಲಿ ಅಷ್ಟಕರ್ಮಗಳನ್ನು ನಾಶಮಾಡಿ ಮುಕ್ತಿಗೆ ಪ್ರಾಪ್ತರಾಗಿದ್ದಾರೆ ಮತ್ತು ಭವಿಷ್ಯಕಾಲದಲ್ಲಿ ಆಗುವವರು ಈ ಸಮ್ಯಕ್ತ್ವದಿಂದಲೇ ಆಗಲಿದ್ದಾರೆ, ಆದುದರಿಂದ ಹೆಚ್ಚಿಗೆ ಹೇಳುವುದರಿಂದೇನು ? ಮುಕ್ತಿಯ ಮುಖ್ಯ ಕಾರಣವು ಈ ಸಮ್ಯಕ್ತ್ವವೇ ಇದೆಯೆಂದು ಸಂಕ್ಷೇಪದಲ್ಲಿ

---

ಸಮ್ಯಕ್ತ್ವದ ಧ್ಯಾನಮಾಡುವ ಜೀವನವನು ತಾನೆ ಸಮ್ಯಗ್ದೃಷ್ಟಿಯಾಗುವನು ।
ಸಮ್ಯಕ್ತ್ವರೂಪದಿಂಪರಿಣಮಿಸಿ ದುಷ್ಟಾಷ್ಟಕರ್ಮಗಳ ನಾಶ ಮಾಡುವನು ।।೮೭।।

ಅಧಿಕೇನು ಪೇಳ್ವುದಾವನರವರರು ಭೂತಕಾಲದಲಿ ಸಿದ್ಧರಾದರು ।
ಸಾಧಿಸಲಿಹರೀಗಾವಭವ್ಯರದೆಲ್ಲಸಮ್ಯಕ್ತ್ವದ ಮೈಮೆಯೆಂದರಿವುದು ।।೮೮।।

ಹೇಳಿರುವುದನ್ನು ತಿಳಿಯಿರಿ. ಗೃಹಸ್ಥರಿಗೇನು ಧರ್ಮವಿದೆಯೆಂದು ತಿಳಿಯಬಾರದು, ಈ ಸಮ್ಯಕ್ತ್ವಧರ್ಮವು ಧರ್ಮದ ಎಲ್ಲ ಅಂಗಗಳನ್ನು ಸಾರ್ಥಕ ಮಾಡುತ್ತದೆಂದು ತಿಳಿಯಬೇಕು. ॥೮೮॥

ನಿರಂತರ ಸಮ್ಯಕ್ತ್ವದ ಪಾಲನೆ ಮಾಡುವವರು ಧನ್ಯರಿದ್ದಾರೆಂದು ಈಗ ಹೇಳುತ್ತಾರೆ, –

ತೇ ಧಣ್ಣಾ ಸುಕಯತ್ಥಾ ತೇ ಸೂರಾ ತೇ ವಿ ಪಂಡಿಯಾ ಮಣುಯಾ ।
ಸಮ್ಮತ್ತಂ ಸಿದ್ಧಿಯರಂ ಸಿವಿಣೇ ವಿ ಣ ಮಇಲಿಯಂ ಜೇಹಿಂ ॥೮೯॥

ತೇ ಧನ್ಯಾಃ ಸುಕೃತಾರ್ಥಾಃ ತೇ ಶೂರಾಃ ತೇಽಪಿ ಪಂಡಿತಾ ಮನುಜಾಃ ।
ಸಮ್ಯಕ್ತ್ವಂ ಸಿದ್ಧಿಕರಂ ಸ್ವಪ್ನೇಽಪಿ ನ ಮಲಿನಿತಂ ಯೈಃ ॥೮೯॥

ಅರ್ಥ ಃ– ಯಾವ ಪುರುಷರು ಮುಕ್ತಿಯನ್ನುಂಟು ಮಾಡುವಂಥ ಸಮ್ಯಕ್ತ್ವವನ್ನು ಸ್ವಪ್ನದಲ್ಲಿ ಕೂಡ ಮಲಿನ ಮಾಡಿಲ್ಲ, ಅತಿಚಾರ ತಗಲಿಸಿಲ್ಲ ಆ ಪುರುಷರು ಧನ್ಯರಿದ್ದಾರೆ, ಅವರೇ ಮನುಷ್ಯರಿದ್ದಾರೆ, ಅವರೇ ಒಳ್ಳೆಯ ಕೃತಾರ್ಥರಿದ್ದಾರೆ, ಅವರೇ ಶೂರವೀರರಿದ್ದಾರೆ, ಅವರೇ ಪಂಡಿತರಿದ್ದಾರೆ.

ಭಾವಾರ್ಥ ಃ– ಲೋಕದಲ್ಲಿ ಸ್ವಲ್ಪ ದಾನಾದಿಗಳನ್ನು ಮಾಡಿದವರನ್ನು ಧನ್ಯರೆಂದು ಹೇಳುತ್ತಾರೆ ಮತ್ತು ವಿವಾಹಾದಿಗಳನ್ನು–ಯಜ್ಞಾದಿಗಳನ್ನು ಮಾಡುವವರನ್ನು ಕೃತಾರ್ಥರೆಂದು ಹೇಳುತ್ತಾರೆ, ಯುದ್ಧದಲ್ಲಿ ಹಿಂದೆ ಹೊರಳದವರನ್ನು ಶೂರವೀರರೆಂದು ಹೇಳುತ್ತಾರೆ, ಹೆಚ್ಚು ಶಾಸ್ತ್ರಗಳನ್ನೋದಿದವರನ್ನು ಪಂಡಿತರೆಂದು ಹೇಳುತ್ತಾರೆ. ಇವರೆಲ್ಲರೂ ಹೇಳುವುದಕ್ಕೆ ಇದ್ದಾರೆ, ಆದರೆ ಮೋಕ್ಷದ ಕಾರಣವಾದ ಸಮ್ಯಕ್ತ್ವವನ್ನು ಮಲಿನ ಮಾಡದವರನ್ನು ನಿರತಿಚಾರ ಪಾಲಿಸುವವರನ್ನು ಧನ್ಯರೆಂದು ಹೇಳಿದೆ, ಅವರೇ ಕೃತಾರ್ಥರಿದ್ದಾರೆ, ಅವರೇ ಪಂಡಿತರಿದ್ದಾರೆ, ಅವರೇ ಮನುಷ್ಯರಿದ್ದಾರೆ, ಸಮ್ಯಕ್ತ್ವವಿಲ್ಲದ ಮನುಷ್ಯನು ಪಶು ಸಮಾನನಿದ್ದಾನೆಂದು ಸಮ್ಯಕ್ತ್ವದ ಮಾಹಾತ್ಮ್ಯವನ್ನು ಹೇಳಲಾಗಿದೆ. ॥೮೯॥

ಸಮ್ಯಕ್ತ್ವವು ಹೇಗಿದೆಯೆಂದು ಕೇಳಿದ ಶಿಷ್ಯನ ಪ್ರಶ್ನೆಗೆ ಉತ್ತರರೂಪವಾಗಿ ಈಗ ಆ ಸಮ್ಯಕ್ತ್ವದ ಬಾಹ್ಯ ಚಿಹ್ನಗಳನ್ನು ತಿಳಿಸಿಕೊಡುತ್ತಾರೆ, –

ಹಿಂಸಾರಹಿಏ ಧಮ್ಮೇ ಅಟ್ಠಾರಹದೋಸವಜ್ಜಿಏ ದೇವೇ ।
ಣಿಗ್ಗಂಥೇ ಪವ್ವಯಣೇ ಸದ್ದಹಣಂ ಹೋಇ ಸಮ್ಮತ್ತಂ ॥೯೦॥

---

ಅವರೆ ಧನ್ಯರು ಸುಕೃತಾರ್ಥರು ಶೂರವೀರರು ಮೇಣ್ಪಂಡಿತ ಮನುಜರು ।
ಯಾವನರ ಸ್ವಪ್ನದಲಿ ಕೂಡ ಮಲಿನ ಮಾಡರು ಸಿದ್ಧಿಕರ ಸಮ್ಯಕ್ತ್ವಮಂ ॥೮೯॥

ಪರಮ ಅಹಿಂಸಾಧರ್ಮ ಹದಿನೆಂಟು ದೋಷಗಳಿಂದ ರಹಿತನಾದ ದೇವ ।
ನಿರಗ್ರಂಥ ಪ್ರವಚನದಲಿ ಶ್ರದ್ಧೆಯಾದರೆ ತಾನೆ ಸಮ್ಯಕ್ತ್ವವಾಗುವುದು ॥೯೦॥

ಹಿಂಸಾರಹಿತೇ ಧರ್ಮೇ ಅಷ್ಟಾದಶದೋಷವರ್ಜಿತೇ ದೇವೇ ।
ನಿರ್ಗ್ರಂಥೇ ಪ್ರವಚನೇ ಶ್ರದ್ಧಾನಂ ಭವತಿ ಸಮ್ಯಕ್ತ್ವಮ್ ॥೯೦॥

ಅರ್ಥ ಃ- ಹಿಂಸಾರಹಿತವಾದ ಧರ್ಮ, ಹದಿನೆಂಟು ದೋಷಗಳಿಂದ ರಹಿತನಾದ ದೇವ, ನಿರ್ಗ್ರಂಥ ಪ್ರವಚನ ಎಂದರೆ ಮೋಕ್ಷದ ಮಾರ್ಗ ಹಾಗೂ ಗುರು ಇವರಲ್ಲಿ ಶ್ರದ್ಧೆಯಿದ್ದಮೇಲೆ ಸಮ್ಯಕ್ತ್ವವಾಗುತ್ತದೆ.

ಭಾವಾರ್ಥ ಃ- ಲೌಕಿಕ ಜನರು ಹಾಗೂ ಅನ್ಯಮತದವರು ಜೀವಗಳ ಹಿಂಸೆಯಿಂದ ಧರ್ಮವನ್ನು ಮನ್ನಿಸುತ್ತಾರೆ ಮತ್ತು ಜಿನಮತದಲ್ಲಿ ಅಹಿಂಸೆಯನ್ನು ಧರ್ಮವೆಂದು ಹೇಳಿದೆ, ಅದರದೇ ಶ್ರದ್ಧೆ ಮಾಡಿ ಅನ್ಯದ ಶ್ರದ್ಧೆ ಮಾಡದವನು ಸಮ್ಯಗ್ದೃಷ್ಟಿಯಿದ್ದಾನೆ. ಲೌಕಿಕ ಅನ್ಯಮತದವರು ಮನ್ನಿಸುವಂಥ ದೇವರುಗಳೆಲ್ಲರೂ ಕ್ಷುಧಾದಿ ಹಾಗೂ ರಾಗಾದಿ ದೋಷಗಳಿಂದ ಸಂಯುಕ್ತರಿರುವುದರಿಂದ ವೀತರಾಗ ಸರ್ವಜ್ಞ ಅರಹಂತದೇವರು ಎಲ್ಲ ದೋಷಗಳಿಂದ ರಹಿತರಿದ್ದಾರೆ ಅವರನ್ನು ದೇವರೆಂದು ಮನ್ನಿಸಿ ಶ್ರದ್ಧೆ ಮಾಡುವವನೇ ಸಮ್ಯಗ್ದೃಷ್ಟಿಯಿದ್ದಾನೆಂದು ತಿಳಿಯಬೇಕು.

ಇಲ್ಲಿ ಹದಿನೆಂಟು ದೋಷಗಳನ್ನು ಹೇಳಿರುವುದು ಅದು ಮುಖ್ಯತೆಯ ಅಪೇಕ್ಷೆಯಿಂದ ಹೇಳಿದ್ದಾರೆ ಇವನ್ನು ಉಪಲಕ್ಷಣರೂಪವೆಂದು ತಿಳಿಯುವುದು, ಇದರಂತೆ ಉಳಿದುವನ್ನು ತಿಳಿದುಕೊಳ್ಳಬೇಕು. ನಿರ್ಗ್ರಂಥ ಪ್ರವಚನ ಎಂದರೆ ಮೋಕ್ಷಮಾರ್ಗವೇ ಮೋಕ್ಷಮಾರ್ಗವಿದೆ, ಅನ್ಯಲಿಂಗದಿಂದ ಅನ್ಯಮತವುಳ್ಳ ಶ್ವೇತಾಂಬರ ಮೊದಲಾದ ಜೈನಾಭಾಸಿಗಳು ಮೋಕ್ಷ ಮನ್ನಿಸುತ್ತಾರೆ ಅದು ಮೋಕ್ಷಮಾರ್ಗವಿಲ್ಲ. ಈ ಪ್ರಕಾರ ಶ್ರದ್ಧೆ ಮಾಡುವವನು ಸಮ್ಯಗ್ದೃಷ್ಟಿಯಿದ್ದಾನೆಂದು ತಿಳಿದುಕೊಳ್ಳಬೇಕು. ॥೯೦॥

ಈಗ ಮತ್ತೆ ಇದೇ ಅರ್ಥವನ್ನು ದೃಢಪಡಿಸುತ್ತ ಹೇಳುತ್ತಾರೆ, -

ಜಯಜಾಯರೂವರೂವಂ ಸುಸಂಜಯಂ ಸವ್ವಸಂಗಪರಿಚತ್ತಂ ।
ಲಿಂಗಂ ಣ ಪರಾವೇಕ್ಖಂ ಜೋ ಮಣ್ಣಇ ತಸ್ಸ ಸಮ್ಮತ್ತಂ ॥೯೧॥

ಯಥಾಜಾತರೂಪರೂಪಂ ಸುಸಂಯತಂ ಸರ್ವಸಂಗಪರಿತ್ಯಕ್ತಮ್ ।
ಲಿಂಗಂ ನ ಪರಾಪೇಕ್ಷಂ ಯಃ ಮನ್ಯತೇ ತಸ್ಯ ಸಮ್ಯಕ್ತ್ವಮ್ ॥೯೦॥

ಅರ್ಥ ಃ- ಯಥಾಜಾತರೂಪವಂತೂ ಮೋಕ್ಷಮಾರ್ಗದ ರೂಪವಿದೆ, ಅದರಲ್ಲಿ ವಸ್ತ್ರಾದಿ ಬಾಹ್ಯ ಪರಿಗ್ರಹವು ಸ್ವಲ್ಪ ಮಾತ್ರವೂ ಇಲ್ಲ, ಸುಸಂಯತ ಎಂದರೆ ಸಮ್ಯಕ್ ಪ್ರಕಾರ ಇಂದ್ರಿಯಗಳ ನಿಗ್ರಹ ಮತ್ತು ಜೀವಗಳ ದಯೆಯು ಅದರಲ್ಲಿ ಕಂಡು ಬರುವಂಥ ಸಂಯಮವಿದೆ, ಸರ್ವಸಂಗ ಎಂದರೆ ಸಮಸ್ತ ಪರಿಗ್ರಹ ಹಾಗೂ ಎಲ್ಲ ಲೌಕಿಕ ಜನರ ಸಂಗತಿಯಿಂದ ರಹಿತವಿದೆ ಮತ್ತು ಅದರಲ್ಲಿ ಪರದ ಅಪೇಕ್ಷೆಯು ಸ್ವಲ್ಪವೂ ಇಲ್ಲ, ಮೋಕ್ಷದ ಪ್ರಯೋಜನದ ಹೊರತಾಗಿ ಅನ್ಯ ಪ್ರಯೋಜನದ ಅಪೇಕ್ಷೆಯಿಲ್ಲ. ಈ ಪ್ರಕಾರ ಮೋಕ್ಷಮಾರ್ಗದ ಲಿಂಗವನ್ನು ಮನ್ನಿಸಿದರೆ-ಶ್ರದ್ಧೆ ಮಾಡಿದರೆ ಆ ಜೀವನಿಗೆ ಸಮ್ಯಕ್ತ್ವವಾಗುತ್ತದೆ.

---

ಯಾರು ಯಥಾಜಾತರೂಪದರೂಪ ಸುಸಂಯಮ ಮೇಣ್ಸರ್ವಸಂಗಪರಿತ್ಯಕ್ತ ।
ಪರಾಪೇಕ್ಷೆಯಿಲ್ಲದ ಲಿಂಗವನು ಮನ್ನಿಪರವರ್ಗೆ ಸಮ್ಯಕ್ತ್ವವಾಗುವುದು ॥೯೧॥

ಭಾವಾರ್ಥ :- ಮೋಕ್ಷಮಾರ್ಗದಲ್ಲಿ ಇಂಥದೇ ಲಿಂಗವಿದೆ, ಅನ್ಯ ಅನೇಕ ವೇಷಗಳಿವೆ ಅವು ಮೋಕ್ಷ ಮಾರ್ಗದಲ್ಲಿ ಇಲ್ಲವೆಂದು ಶ್ರದ್ಧೆ ಮಾಡುವವನಿಗೆ ಸಮ್ಯಕ್ತ್ವವಾಗುತ್ತದೆ, ಇಲ್ಲಿ ಪರಾಪೇಕ್ಷೆಯಿಲ್ಲವೆಂದು ಹೇಳುವುದರಿಂದ ತಿಳಿಸಿರುವುದೇನೆಂದರೆ ಇಂಥ ನಿರ್ಗ್ರಂಥರೂಪವನ್ನು ಯಾವನಾದರೂ ಬೇರೆ ಆಶಯದಿಂದ ಧಾರಣ ಮಾಡಿದರೆ ಆ ವೇಷವು ಮೋಕ್ಷಮಾರ್ಗವಲ್ಲ, ಆದರಲ್ಲಿ ಕೇವಲ ಮೋಕ್ಷದ ಅಪೇಕ್ಷೆಯೇ ಇರುವುದನ್ನು ಮನ್ನಿಸುವವನು ಸಮ್ಯಗ್ದೃಷ್ಟಿಯಿದ್ದಾನೆಂದು ತಿಳಿಯಬೇಕು. ॥೯೧॥

ಈಗ ಮಿಥ್ಯಾದೃಷ್ಟಿಯ ಚಿಹ್ನಗಳನ್ನು ಹೇಳುತ್ತಾರೆ, -

**ಕುಚ್ಛಿಯದೇವಂ ಧಮ್ಮಂ ಕುಚ್ಛಿಯಲಿಂಗಂ ಚ ವಂದಏ ಜೋ ದು ।**
**ಲಜ್ಜಾಭಯಗಾರವದೋ ಮಿಚ್ಛಾದಿಟ್ಠೀ ಹವೇ ಸೋ ಹು ॥೯೨॥**

**ಕುತ್ಸಿತದೇವಂ ಧರ್ಮಂ ಕುತ್ಸಿತಲಿಂಗಂ ಚ ವಂದತೇ ಯಃ ತು ।**
**ಲಜ್ಜಾಭಯಗಾರವತಃ ಮಿಥ್ಯಾದೃಷ್ಟಿಃ ಭವೇತ್ ಸಃ ಸ್ಫುಟಮ್ ॥೯೨॥**

ಅರ್ಥ :- ಕ್ಷುಧಾದಿಗಳಿಂದ ಮತ್ತು ರಾಗ-ದ್ವೇಷಾದಿ ದೋಷಗಳಿಂದ ದೂಷಿತನಿರುವವನು ಕುತ್ಸಿತ ದೇವನಿದ್ದಾನೆ, ಹಿಂಸಾದಿ ದೋಷಗಳಿಂದ ಸಹಿತವಾಗಿರುವುದು ಅದು ಕುತ್ಸಿತ ಧರ್ಮವಿದೆ, ಪರಿಗ್ರಹಾದಿಗಳಿಂದ ಕೂಡಿರುವುದು ಅದು ಕುತ್ಸಿತ ಲಿಂಗವಿದೆ. ಇವುಗಳಿಗೆ ವಂದನೆ ಮಾಡುವವನು, ಪೂಜೆ ಮಾಡುವವನು ಸ್ಪಷ್ಟ ಮಿಥ್ಯಾದೃಷ್ಟಿಯಿದ್ದಾನೆ, ಈಗ ಇಲ್ಲಿ ವಿಶೇಷ ಹೇಳುವುದೇನೆಂದರೆ ಯಾವನು ಇವನ್ನು ಒಳ್ಳೆಯವೆಂದು-ಹಿತಮಾಡುವಂಥವುಗಳೆಂದು ಮನ್ನಿಸಿ ವಂದನೆ ಮಾಡುತ್ತಾನೆ, ಪೂಜೆ ಮಾಡುತ್ತಾನೆ ಅವನಂತೂ ಸ್ಪಷ್ಟ ಮಿಥ್ಯಾದೃಷ್ಟಿಯಿದ್ದಾನೆ, ಆದರೆ ಯಾವನು ಲಜ್ಜೆ, ಭಯ, ದೊಡ್ಡಸ್ತಿಕೆಗಳ ಕಾರಣಗಳಿಂದ ಕೂಡ ವಂದನೆ ಮಾಡುತ್ತಾನೆ ಪೂಜೆ ಮಾಡುತ್ತಾನೆ ಅವನು ಕೂಡ ಸ್ಪಷ್ಟವಾಗಿ ಮಿಥ್ಯಾದೃಷ್ಟಿಯಿದ್ದಾನೆ. ಲಜ್ಜೆ ಎಂದರೆ ಜನರು ಇವರ ವಂದನೆ ಮಾಡುತ್ತಾರೆ, ಪೂಜೆ ಮಾಡುತ್ತಾರೆ, ನಾವು ಪೂಜಿಸದಿದ್ದರೆ ಜನರು ನಮಗೇನೆಂದಾರು ? ಈ ಲೋಕದಲ್ಲಿ ನಮ್ಮ ಪ್ರತಿಷ್ಠೆಯು ಹೊರಟುಹೋಗಬಹುದೆಂಬ ಲಜ್ಜೆಯಿಂದ ವಂದನೆ ಮತ್ತು ಪೂಜೆ ಮಾಡುವುದು. ಭಯ ಎಂದರೆ ಇವರನ್ನು ರಾಜಾದಿಕರು ಮನ್ನಿಸುತ್ತಾರೆ ನಾವು ಮನ್ನಿಸದಿದ್ದರೆ ನಮ್ಮ ಮೇಲೆ ಏನಾದರೂ ಉಪದ್ರವವಾಗಬಹುದೆಂಬ ಭಯದಿಂದ ವಂದನೆ ಮತ್ತು ಪೂಜೆ ಮಾಡುವುದು. ಗಾರವ ಎಂದರೆ ನಾವು ದೊಡ್ಡವರಿದ್ದೇವೆ, ಮಹಾ ಪುರುಷರಿದ್ದೇವೆ, ಎಲ್ಲರ ಸನ್ಮಾನ ಮಾಡುತ್ತೇವೆ ಈ ಕಾರ್ಯಗಳಿಂದ ನಮ್ಮದು ದೊಡ್ಡಸ್ತಿಕೆಯಿದೆಯೆಂಬ ಗಾರವದಿಂದ ವಂದನೆ ಮತ್ತು ಪೂಜೆಯಾಗುತ್ತದೆ. ಈ ಪ್ರಕಾರ ಮಿಥ್ಯಾದೃಷ್ಟಿಯ ಚಿಹ್ನಗಳನ್ನು ಹೇಳಿದೆ. ॥೯೨॥

ಈಗ ಇದೇ ಅರ್ಥವನ್ನು ದೃಢಪಡಿಸುತ್ತ ಹೀಗೆ ಹೇಳುತ್ತಾರೆ, -

**ಸಪರಾವೇಕ್ಖಂ ಲಿಂಗ ರಾಈ ದೇವಂ ಅಸಂಜಯಂ ವಂದೇ ।**
**ಮಣ್ಣಇ ಮಿಚ್ಛಾದಿಟ್ಠೀ ಣ ಹು ಮಣ್ಣಇ ಸುದ್ಧಸಮ್ಮತ್ತೋ ॥೯೩॥**

---

**ಯಾರು ಕುತ್ಸಿತದೇವ ಕುತ್ಸಿತಧರ್ಮ ಕುತ್ಸಿತಲಿಂಗಿಗಳಿಗೆ ನಮಿಪರು ।**
**ಗಾರವ ಲಜ್ಜೆ ಭಯಗಳಿಂದವರು ತಾವೆ ಸ್ಪಷ್ಟ ಮಿಥ್ಯಾದೃಷ್ಟಿಯಿರುವರು ॥೯೨॥**
**ಸ್ವಪರಾಪೇಕ್ಷಲಿಂಗ ಸರಾಗಿದೇವ ಅಸಂಯಮಿಯ ವಂದನೆಮನ್ನಣೆಯಿಂ ।**
**ಉಪೇತನಿರ್ಪವನು ಮಿಥ್ಯಾದೃಷ್ಟಿಯಿದ್ದು ಮನ್ನಿಸದವ ಶುದ್ಧಸಮ್ಯಕ್ತ್ವಿಯು ॥೯೩॥**

**ಸ್ವಪರಾಪೇಕ್ಷಂ ಲಿಂಗಂ ರಾಗಿಣಂ ದೇವಂ ಅಸಂಯತಂ ವಂದೇ ।**
**ಮಾನಯತಿ ಮಿಥ್ಯಾದೃಷ್ಟಿಃ ನ ಸ್ಫುಟಂ ಮಾನಯತಿ ಶುದ್ಧಸಮ್ಯಕ್ತ್ವೀ ॥೯೩॥**

ಅರ್ಥ ಃ- ಸ್ವಪರಾಪೇಕ್ಷ ಲಿಂಗ ಎಂದರೆ ತಾವು ಯಾವುದಾದರೂ ಲೌಕಿಕ ಪ್ರಯೋಜನವನ್ನು ಮನಸ್ಸಿನಲ್ಲಿ ಧಾರಣ ಮಾಡಿ ವೇಷ ತೆಗೆದುಕೊಳ್ಳುವುದು ಅದು ಸ್ವಾಪೇಕ್ಷವಿದೆ ಮತ್ತು ಯಾರೋ ಪರರ ಅಪೇಕ್ಷೆಯಿಂದ ಧಾರಣಮಾಡಿದರೆ ಯಾರದೋ ಆಗ್ರಹ ಹಾಗೂ ರಾಜಾದಿಕರ ಭಯದಿಂದ ಧಾರಣ ಮಾಡಿದರೆ ಅದು ಪರಾಪೇಕ್ಷವಿದೆ. ರಾಗೀ ದೇವ (ಯಾರಿಗೆ ಸ್ತ್ರೀ ಮೊದಲಾದವರ ರಾಗವು ಕಂಡು ಬರುತ್ತದೆ) ಮತ್ತು ಸಂಯಮ ರಹಿತನಿಗೆ ನಾನು ವಂದನೆ ಮಾಡುತ್ತೇನೆ ಮತ್ತು ಇವರನ್ನು ಮನ್ನಿಸುತ್ತೇನೆ, ಶ್ರದ್ಧೆ ಮಾಡುತ್ತೇನೆಂದು ಹೇಳುವವನು ಮಿಥ್ಯಾ-ದೃಷ್ಟಿಯಿದ್ದಾನೆ ಶುದ್ಧ ಸಮ್ಯಕ್ತ್ವವಾದನಂತರ ಇವರನ್ನು ಮನ್ನಿಸುವುದಿಲ್ಲ, ಇವರ ಶ್ರದ್ಧೆ ಮಾಡುವುದಿಲ್ಲ ಮತ್ತು ಇವರ ವಂದನೆ ಹಾಗೂ ಪೂಜೆಯನ್ನು ಮಾಡುವುದಿಲ್ಲ.

ಭಾವಾರ್ಥ ಃ- ಈ ಮೇಲೆ ಹೇಳಿದವರಲ್ಲಿ ಮಿಥ್ಯಾದೃಷ್ಟಿಯ ಪ್ರೀತಿ ಭಕ್ತಿ ಉತ್ಪನ್ನವಾಗುತ್ತದೆ, ನಿರತಿಚಾರ ಸಮ್ಯಕ್ತ್ವವುಳ್ಳವನು ಇವರನ್ನು ಮನ್ನಿಸುವುದಿಲ್ಲ. ॥೯೩॥

ಈಗ ಸಮ್ಯಗ್ದೃಷ್ಟಿ ಮಿಥ್ಯಾದೃಷ್ಟಿಯ ವ್ಯಾಖ್ಯೆ ಹೇಳುತ್ತಾರೆ, -

**ಸಮ್ಮಾಇಟ್ಠೀ ಸಾವಯ ಧಮ್ಮಂ ಜಿಣದೇವದೇಸಿಯಂ ಕುಣದಿ ।**
**ವಿವರೀಯಂ ಕುವ್ವಂತೋ ಮಿಚ್ಛಾದಿಟ್ಠೀ ಮುಣೇಯವ್ವೋ ॥೯೪॥**

**ಸಮ್ಯಗ್ದೃಷ್ಟಿಃ ಶ್ರಾವಕಃ ಧರ್ಮಂ ಜಿನದೇವದೇಶಿತಂ ಕರೋತಿ ।**
**ವಿಪರೀತಂ ಕುರ್ವನ್ ಮಿಥ್ಯಾದೃಷ್ಟಿಃ ಜ್ಞಾತವ್ಯಃ ॥೯೪॥**

ಅರ್ಥ ಃ- ಜಿನದೇವರಿಂದ ಉಪದೇಶಿಸಲ್ಪಟ್ಟ ಧರ್ಮದ ಪಾಲನೆ ಮಾಡುವವನು ಸಮ್ಯಗ್ದೃಷ್ಟಿ ಶ್ರಾವಕನಿದ್ದಾನೆ ಮತ್ತು ಅನ್ಯಮತವು ಉಪದೇಶಿಸಲ್ಪಟ್ಟ ಧರ್ಮದ ಪಾಲನೆ ಮಾಡುವವನು ಮಿಥ್ಯಾದೃಷ್ಟಿಯೆಂದು ತಿಳಿಯುವುದು.

ಭಾವಾರ್ಥ ಃ- ಹೀಗೆ ಹೇಳುವುದರಿಂದ ಕೆಲವರು ಹೀಗೆ ತರ್ಕ ಮಾಡುತ್ತಾರೆ-ಇದಂತೂ ನಿಮ್ಮ ಮತ ಪುಷ್ಟ ಮಾಡುವ ಪಕ್ಷಪಾತಮಾತ್ರವಾದ ವಾರ್ತೆಯಿದೆ. ಅದರ ಉತ್ತರ ಕೊಡುತ್ತಾರೆ-ಹೀಗೆ ಇಲ್ಲ, ಯಾವುದರಿಂದ ಸಮಸ್ತ ಜೀವಗಳ ಹಿತವಾಗುವುದು ಅದು ಧರ್ಮವಿದೆ, ಇಂಥ ಅಹಿಂಸಾರೂಪ ಧರ್ಮದ ಪ್ರರೂಪಣೆಯನ್ನು ಜಿನದೇವರೇ ಮಾಡಿದ್ದಾರೆ. ಅನ್ಯಮತದಲಿ ಇಂಥ ಧರ್ಮದ ನಿರೂಪಣೆಯಿಲ್ಲವೆಂದು ತಿಳಿದುಕೊಳ್ಳಬೇಕು. ॥೯೪॥

ಮಿಥ್ಯಾದೃಷ್ಟಿ ಜೀವನು ಸಂಸಾರದಲ್ಲಿ ದುಃಖಸಹಿತ ಭ್ರಮಣ ಮಾಡುತ್ತಾನೆಂದು ಈಗ ಹೇಳುತ್ತಾರೆ, -

---

**ಜಿನೋಪದೇಶಿತ ಧರ್ಮ ಮಾಡುವವನು ಸಮ್ಯಗ್ದೃಷ್ಟಿ ಶ್ರಾವಕನಿರುವನು ।**
**ತಾನಿದಕೆ ವಿಪರೀತ ಮಾಡುವವನು ಮಿಥ್ಯಾದೃಷ್ಟಿಯೆಂದು ತಿಳಿಯುವುದು ॥೯೪॥**

ಮಿಚ್ಛಾದಿಟ್ಠೀ ಜೋ ಸೋ ಸಂಸಾರೇ ಸಂಸರೇಇ ಸುಹರಹಿಓ ।
ಜಮ್ಮಜರಮರಣಪಉರೇ ದುಃಖಸಹಸ್ಸಾಉಲೇ ಜೀವೋ ॥೯೫॥

ಮಿಥ್ಯಾದೃಷ್ಟಿಃ ಯಃ ಸಃ ಸಂಸಾರೇ ಸಂಸರತಿ ಸುಖರಹಿತಃ ।
ಜನ್ಮಜರಾಮರಣಪ್ರಚುರೇ ದುಃಖಸಹಸ್ರಾಕುಲಃಜೀವಃ ॥೯೫॥

ಅರ್ಥ ಃ– ಮಿಥ್ಯಾದೃಷ್ಟಿ ಜೀವನು ಜನ್ಮ ಜರಾ ಮರಣದಿಂದ ಪ್ರಚುರ ಮತ್ತು ಸಹಸ್ರಾರು ದುಃಖಗಳಿಂದ ವ್ಯಾಪ್ತವಾದ ಈ ಸಂಸಾರದಲ್ಲಿ ಸುಖವಿಲ್ಲದೆ ದುಃಖಿಯಾಗಿ ಭ್ರಮಣ ಮಾಡುತ್ತಾನೆ.

ಭಾವಾರ್ಥ ಃ– ಮಿಥ್ಯಾಭಾವದ ಫಲವು ಸಂಸಾರದಲ್ಲಿ ಭ್ರಮಣ ಮಾಡುವುದೇ ಇದೆ, ಈ ಸಂಸಾರವು ಜನ್ಮ, ಜರಾ, ಮರಣ ಮೊದಲಾದ ಸಾವಿರಾರು ದುಃಖಗಳಿಂದ ತುಂಬಿಕೊಂಡಿದೆ, ಈ ದುಃಖಗಳನ್ನು ಮಿಥ್ಯಾದೃಷ್ಟಿಯು ಈ ಸಂಸಾರದಲ್ಲಿ ಭ್ರಮಣ ಮಾಡುತ್ತ ಭೋಗಿಸುತ್ತಾನೆ. ಸಂಸಾರದಲ್ಲಿ ದುಃಖವಂತೂ ಅನಂತವಿದೆ ಸಾವಿರಾರೆಂದು ಹೇಳುವುದರಿಂದ ಪ್ರಸಿದ್ಧ ಅಪೇಕ್ಷೆಯಿಂದ ವಿಪುಲತೆಯನ್ನು ತಿಳಿಸಲಾಗಿದೆ. ॥೯೫॥

ಈಗ ಸಮ್ಯಕ್ತ್ವ ಮಿಥ್ಯಾತ್ವಭಾವದ ಕಥನದ ಸಂಕೋಚ ಮಾಡುತ್ತಾರೆ, –

ಸಮ್ಮ ಗುಣ ಮಿಚ್ಛ ದೋಸೋ ಮಣೇಣ ಪರಿಭಾವಿಊಣ ತಂ ಕುಣಸು ।
ಜಂ ತೇ ಮಣಸ್ಸ ರುಚ್ಚಇ ಕಿಂ ಬಹುಣಾ ಪಲವಿಏಣಂ ತು ॥೯೬॥

ಸಮ್ಯಕ್ತ್ವೇ ಗುಣ ಮಿಥ್ಯಾತ್ವೇ ದೋಷಃ ಮನಸಾ ಪರಿಭಾವ್ಯ ತತ್ ಕುರು ।
ಯತ್ತೇ ಮನಸೇ ರೋಚತೇ ಕಿಂ ಬಹುನಾ ಪ್ರಲಪಿತೇನ ತು ॥೯೬॥

ಅರ್ಥ ಃ– ಎಲೈ ಭವ್ಯನೇ ! ಹೀಗೆ ಪೂರ್ವೋಕ್ತ ಪ್ರಕಾರ ಸಮ್ಯಕ್ತ್ವದ ಗುಣ ಮತ್ತು ಮಿಥ್ಯಾತ್ವದ ದೋಷಗಳ ಭಾವನೆಯನ್ನು ನಿನ್ನ ಮನಸ್ಸಿನಲ್ಲಿ ಮಾಡು, ಮತ್ತು ನಿನ್ನ ಮನಸ್ಸಿಗೆ ಯಾವುದು ರುಚಿಸುವುದು ಪ್ರಿಯವೆನಿಸುವುದು ಅದನ್ನು ಮಾಡು, ಹೆಚ್ಚು ಪ್ರಳಾಪರೂಪವಾಗಿ ಹೇಳುವುದರಿಂದೇನು ಸಾಧ್ಯವಿದೆಯೆಂದು ಆಚಾರ್ಯದೇವರು ಉಪದೇಶ ಮಾಡಿದ್ದಾರೆ.

ಭಾವಾರ್ಥ ಃ– ಹೆಚ್ಚು ಹೇಳುವುದರಿಂದೇನು ಪ್ರಯೋಜನವಿದೆ ? ಸಮ್ಯಕ್ತ್ವ-ಮಿಥ್ಯಾತ್ವದ ಗುಣ ದೋಷಗಳನ್ನು ಪೂರ್ವೋಕ್ತ ಪ್ರಕಾರ ತಿಳಿದುಕೊಂಡು ಮನಸ್ಸಿಗೆ ರುಚಿಸಿದುದನ್ನು ಮಾಡಬೇಕು ಇಲ್ಲಿ ಮಿಥ್ಯಾತ್ವವನ್ನು

---

ಆ ಮಿಥ್ಯಾದೃಷ್ಟಿ ಜೀವ ಸುಖರಹಿತ ಸಂಸಾರದಲಿ ಭ್ರಮಣ ಮಾಡುವನು ।
ಅಮಿತ ಜನ್ಮಜರಾಮರಣಗಳಿಂ ಪ್ರಚುರ ದುಃಖ ಸಹಸ್ರಾಕುಲದಲಿ ॥೯೫॥

ನೀನು ಸಮ್ಯಕ್ತ್ವದ ಗುಣ ಮಿಥ್ಯಾತ್ವದ ದೋಷ ಮನಸಿನಲಿ ಪರಿಭಾವಿಸು ।
ಮನಸಿಗೆ ರುಚಿಸಿದುದಂ ಮಾಡು ಅಧಿಕ ಕಥನದಿಂದೇನು ಸಾಧ್ಯವಿದೆ ॥೯೬॥

ಬಿಟ್ಟುಕೊಟ್ಟು ಸಮ್ಯಕ್ತ್ವವನ್ನು ಗ್ರಹಣ ಮಾಡುವುದರಿಂದ ಸಂಸಾರದ ದುಃಖವು ದೂರವಾಗಿ ಮೋಕ್ಷವು ಪ್ರಾಪ್ತವಾಗುವುದೆಂಬ ಆಶಯದ ಉಪದೇಶವಿದೆ. ॥೯೬॥

ಮಿಥ್ಯಾತ್ವಭಾವವನ್ನು ಬಿಡದಿದ್ದರೆ ಬಾಹ್ಯವೇಷದಿಂದೇನೂ ಲಾಭವಿಲ್ಲವೆಂದು ಈಗ ಹೇಳುತ್ತಾರೆ,-

ಬಾಹಿರಸಂಗವಿಮುಕ್ಕೋ ಣ ವಿ ಮುಕ್ಕೋ ಮಿಚ್ಛಭಾವ ಣಿಗ್ಗಂಥೋ ।
ಕಿಂ ತಸ್ಸ ಠಾಣಮಉಣ ಣ ವಿ ಜಾಣದಿ [1]ಅಪ್ಪಸಮಭಾವಂ ॥೯೭॥

ಬಹಿಃ ಸಂಗವಿಮುಕ್ತಃ ನಾಪಿ ಮುಕ್ತಃ ಮಿಥ್ಯಾಭಾವೇನ ನಿರ್ಗ್ರಂಥಃ ।
ಕಿಂ ತಸ್ಯ ಸ್ಥಾನಮೌನಂ ನ ಅಪಿ ಜಾನಾತಿ [2]ಆತ್ಮಸಮಭಾವಂ ॥೯೭॥

ಅರ್ಥ ಃ- ಯಾವನು ಬಾಹ್ಯಪರಿಗ್ರಹದಿಂದ ರಹಿತ ಮತ್ತು ಮಿಥ್ಯಾತ್ವಸಹಿತ ನಿರ್ಗ್ರಂಥ ವೇಷವನ್ನು ಧಾರಣ ಮಾಡಿದ್ದಾನೆ ಅವನು ಪರಿಗ್ರಹರಹಿತನಿಲ್ಲ, ಅವನಿಗೆ ಠಾಣ ಎಂದರೆ ಎದ್ದುನಿಂತು ಕಾಯೋತ್ಸರ್ಗ ಮಾಡುವುದರಿಂದ ಏನು ಸಾಧ್ಯವಿದೆ ? ಮತ್ತು ಮೌನಧಾರಣ ಮಾಡುವುದರಿಂದೇನು ಸಾಧ್ಯವಿದೆ ? ಏಕೆಂದರೆ ಆತ್ಮನ ಸಮಭಾವವಾದ ಆ ವೀತರಾಗ ಪರಿಣಾಮವನ್ನು ತಿಳಿಯುವುದಿಲ್ಲ.

ಭಾವಾರ್ಥ ಃ- ಆತ್ಮನ ಶುದ್ಧ ಸ್ವಭಾವವನ್ನು ತಿಳಿದುಕೊಂಡು ಸಮ್ಯಗ್ದೃಷ್ಟಿಯಾಗುತ್ತಾನೆ. ಮತ್ತು ಯಾವನು ಮಿಥ್ಯಾಭಾವಸಹಿತ ಪರಿಗ್ರಹಬಿಟ್ಟು ನಿರ್ಗ್ರಂಥನೂ ಆಗಿದ್ದಾನೆ, ಕಾಯೋತ್ಸರ್ಗ ಮಾಡುವುದು, ಮೌನಧಾರಣ ಮಾಡುವುದು ಇತ್ಯಾದಿ ಬಾಹ್ಯಕ್ರಿಯೆಗಳನ್ನು ಮಾಡುತ್ತಿದ್ದರೂ ಅವನ ಕ್ರಿಯೆಗಳು ಮೋಕ್ಷ ಮಾರ್ಗದಲ್ಲಿ ಪ್ರಶಂಸೆಗೆ ಯೋಗ್ಯವಾಗಿಲ್ಲ, ಏಕೆಂದರೆ ಸಮ್ಯಕ್ತ್ವವಿಲ್ಲದೆ ಬಾಹ್ಯಕ್ರಿಯೆಗಳ ಫಲವು ಸಂಸಾರವೇ ಇದೆ. ॥೯೭॥

ಸಮ್ಯಕ್ತ್ವವಿಲ್ಲದೆ ಬಾಹ್ಯಲಿಂಗವನ್ನು ನಿಷ್ಫಲವೆಂದು ಹೇಳಿದೆ, ಆ ಬಾಹ್ಯಲಿಂಗ ಮೂಲಗುಣಗಳು ಕೆಟ್ಟರೆ ಅವನಿಗೆ ಸಮ್ಯಕ್ತ್ವವು ಉಳಿಯುತ್ತದೆಯೋ ಅಥವಾ ಇಲ್ಲವೋ ? ಎಂಬ ಆಶಂಕೆಯ ಉತ್ತರರೂಪವಾಗಿ ಈಗ ಹೇಳುತ್ತಾರೆ,-

ಮೂಲಗುಣಂ ಛಿತ್ತೂಣ ಯ ಬಾಹಿರಕಮ್ಮಂ ಕರೇಇ ಜೋ ಸಾಹೂ ।
ಸೋ ಣ ಲಹಇ ಸಿದ್ಧಿಸುಹಂ ಜಿಣಲಿಂಗವಿರಾಹಗೋ ಣಿಯದಂ ॥೯೮॥

---

ಮಿಥ್ಯಾಭಾವಸಹಿತ ಮೇಣ್ಬಾಹ್ಯ ಪರಿಗ್ರಹರಹಿತವಾದಾ ನಿರ್ಗ್ರಂಥದಿಂದ ।
ಪಥ್ಯವೇನಾ ಸ್ಥಾನಮೌನದಿಂದ ಆತ್ಮನ ಸಮಭಾವ ತಿಳಿಯದವನಿಗೆ ॥೯೭॥

ಯಾವ ಸಾಧು ಮೂಲಗುಣಗಳ ಛೇದಿಸಿ ಬಾಹ್ಯಕ್ರಿಯೆಗಳನು ಮಾಡುವನು ।
ಅವನು ಸಿದ್ಧಿಸುಖ ಪಡೆಯನು ನಿಶ್ಚಯದಿ ಜಿನಲಿಂಗ ವಿರಾಧಕನು ॥೯೮॥

---

೧ 'ಅಪ್ಪಸಬ್ಭಾವಂ' ಎಂಬ ಪಾಠಾಂತರವಿದೆ. ೨ 'ಆತ್ಮಸ್ವಭಾವಂ' ಎಂಬ ಪಾಠಾಂತರವಿದೆ.

ಮೂಲಗುಣಂ ಛಿತ್ವಾ ಚ ಬಾಹ್ಯ ಕರ್ಮಂ ಕರೋತಿ ಯಃ ಸಾಧುಃ ।
ಸಃ ನ ಲಭತೇ ಸಿದ್ಧಿಸುಖಂ ಜಿನಲಿಂಗವಿರಾಧಕಃ ನಿಯತಂ ॥೯೮॥

ಅರ್ಥ ಃ– ಯಾವ ಮುನಿಯು ನಿರ್ಗ್ರಂಥನಾಗಿ ಮೂಲಗುಣಗಳನ್ನು ಧಾರಣ ಮಾಡಿದರೂ ಅವನ್ನು ಮುರಿದು ಕೆಡಿಸಿ ಕೇವಲ ಬಾಹ್ಯಕ್ರಿಯಾಕರ್ಮ ಮಾಡುತ್ತಾನೆ ಅವನು ಸಿದ್ಧಿ ಎಂದರೆ ಮೋಕ್ಷ ಸುಖವನ್ನು ಪ್ರಾಪ್ತ ಮಾಡಿಕೊಳ್ಳುವ ಸಾಧ್ಯತೆಯಿಲ್ಲ, ಏಕೆಂದರೆ ಇಂಥ ಮುನಿಯು ನಿಶ್ಚಯದಿಂದ ಜಿನಲಿಂಗದ ವಿರಾಧಕನಿದ್ದಾನೆ.

ಭಾವಾರ್ಥ ಃ– ಸಮ್ಯಕ್ತ್ವ ಸಹಿತ ಮೂಲಗುಣಗಳನ್ನು ಧಾರಣಮಾಡಿ ಸಾಧುಕ್ರಿಯೆಗಳನ್ನು ಮಾಡುವವರು ಧನ್ಯರಿದ್ದಾರೆ. ಐದು ಮಹಾವ್ರತ, ಐದು ಸಮಿತಿ, ಐದು ಇಂದ್ರಿಯಗಳ ನಿರೋಧ, ಆರು ಆವಶ್ಯಕ, ಭೂಮಿಶಯನ, ಸ್ನಾನದತ್ಯಾಗ, ವಸ್ತ್ರದತ್ಯಾಗ, ಕೇಶಲೋಚ, ಒಂದು ಬಾರಿ ಭೋಜನ, ಎದ್ದು ನಿಂತು ಭೋಜನ, ದಂತಧಾವನದ ತ್ಯಾಗವೆಂದು ಇಪ್ಪತ್ತೆಂಟು ಮೂಲಗುಣಗಳಿವೆ ಇವುಗಳ ವಿರಾಧನೆ ಮಾಡಿ ಕಾಯೋತ್ಸರ್ಗ, ಮೌನ, ತಪ, ಧ್ಯಾನ, ಅಧ್ಯಯನ ಮಾಡುತ್ತಿದ್ದರೂ ಈ ಕ್ರಿಯೆಗಳಿಂದ ಮುಕ್ತಿಯಾಗುವುದಿಲ್ಲ. ನಮಗೆ ಸಮ್ಯಕ್ತ್ವವಂತೂ ಇದೆ, ಬಾಹ್ಯಮೂಲಗುಣಗಳು ಕೆಟ್ಟರೆ ಕೆಡಲಿ ನಾವಂತೂ ಮೋಕ್ಷಮಾರ್ಗಿಗಳೇ ಇದ್ದೇವೆಂಬ ಶ್ರದ್ಧೆಯಿಂದ ಜಿನಾಜ್ಞೆಯನ್ನು ಭಂಗಮಾಡುವುದರಿಂದ ಸಮ್ಯಕ್ತ್ವವೂ ಭಂಗವಾಗುತ್ತದೆ, ಆಗ ಮೋಕ್ಷ ಹೇಗಾಗುವುದು ; ಮತ್ತು (ತೀವ್ರ ಕಷಾಯವುಳ್ಳವನಾಗಿ ಬಿಟ್ಟರೆ) ಕರ್ಮದ ಪ್ರಬಲ ಉದಯದಿಂದ ಚಾರಿತ್ರ ಭ್ರಷ್ಟವಾಗುವುದು. ಮತ್ತು ಒಂದುವೇಳೆ ಜಿನಾಜ್ಞೆಗೆ ಅನುಸರಿಸಿ ಶ್ರದ್ಧೆಯಿದ್ದರೆ ಸಮ್ಯಕ್ತ್ವವು ಉಳಿಯುತ್ತದೆ, ಆದರೆ ಮೂಲ ಗುಣಗಳಿಲ್ಲದೆ ಕೇವಲ ಸಮ್ಯಕ್ತ್ವದಿಂದಲೇ ಮುಕ್ತಿಯಾಗುವುದಿಲ್ಲ ಮತ್ತು ಸಮ್ಯಕ್ತ್ವವಿಲ್ಲದೆ ಕೇವಲ ಕ್ರಿಯೆಗಳಿಂದಲೇ ಮುಕ್ತಿಯಾಗುವುದಿಲ್ಲವೆಂದು ತಿಳಿಯಬೇಕು.

ಪ್ರಶ್ನೆ ಃ– ಮುನಿಗೆ ಸ್ನಾನದ ನಿಷೇಧ ಹೇಳಿದೆ ಮತ್ತು ಚಾಂಡಾಲ ಮೊದಲಾದವರ ಸ್ಪರ್ಶವಾದರೆ ದಂಡ ಸ್ನಾನ ಮಾಡುತ್ತಾನೆಂಬುದನ್ನು ನಾವು ಕೇಳುತ್ತೇವೆ.

ಉತ್ತರ ಃ– ಹೇಗೆ ಗೃಹಸ್ಥರು ಸ್ನಾನ ಮಾಡುತ್ತಾರೆ ಹಾಗೆ ಸ್ನಾನ ಮಾಡುವುದರ ತ್ಯಾಗವಿದೆ, ಏಕೆಂದರೆ ಅದರಲ್ಲಿ ಹಿಂಸೆಯ ಅಧಿಕತೆಯಿದೆ, ಮುನಿಯ ಸ್ನಾನವು ಕಮಂಡಲದಲ್ಲಿ ಪ್ರಾಸುಕ ಜಲವಿರುತ್ತದೆ ಅದರಿಂದ ಮಂತ್ರ ಹೇಳಿ ತಲೆಯ ಮೇಲೆ ಧಾರೆ ಬಿಡುತ್ತಾರೆ ಮತ್ತು ಅಂದು ಉಪವಾಸ ಮಾಡುತ್ತಾರೆ. ಇಂಥ ಸ್ನಾನವಂತೂ ನಾಮಮಾತ್ರ ಸ್ನಾನವಿದೆ, ಇಲ್ಲಿ ಮಂತ್ರ ಮತ್ತು ತಪಸ್ನಾನವು ಮುಖ್ಯವಿದೆ, ಜಲಸ್ನಾನವು ಮುಖ್ಯವಿಲ್ಲವೆಂದು ತಿಳಿಯಬೇಕು. ॥೯೮॥

ಆತ್ಮಸ್ವಭಾವದಿಂದ ವಿಪರೀತವಾದ ಬಾಹ್ಯ ಕ್ರಿಯಾಕರ್ಮಗಳನ್ನೇನು ಮಾಡುವುದು ? ಮೋಕ್ಷ ಮಾರ್ಗದಲ್ಲಂತೂ ಯಾವ ಕಾರ್ಯ ಮಾಡುವುದಿಲ್ಲವೆಂಬುದನ್ನು ಈಗ ಹೇಳುತ್ತಾರೆ, –

ಕಿಂ ಕಾಹಿದಿ ಬಹಿಕಮ್ಮಂ ಕಿಂ ಕಾಹಿದಿ ಬಹುವಿಹಂ ಚ ಖವಣಂ ತು ।
ಕಿಂ ಕಾಹಿದಿ ಆದಾವಂ ಆದಸಹಾವಸ್ಸ ವಿವರೀದೋ ॥೯೯॥

---

ಏನು ಮಾಡುವುದು ಬಾಹ್ಯಕರ್ಮ ಏನು ಮಾಡುವುದು ಬಹುವಿಧದುಪವಾಸ ।
ಏನು ಮಾಡುವುದು ಆತಾಪನಯೋಗ ಆತ್ಮಸ್ವಭಾವದಿಂ ವಿಪರೀತವಾಗಿ ॥೯೯॥

ಕಿಂ ಕರಿಷ್ಯತಿ ಬಹಿಃಕರ್ಮ ಕಿಂ ಕರಿಷ್ಯತಿ ಬಹುವಿಧಂ ಚ ಕ್ಷಮಣಂ ತು ।
ಕಿಂ ಕರಿಷ್ಯತಿ ಆತಾಪಃ ಆತ್ಮಸ್ವಭಾವಾತ್ ವಿಪರೀತಃ ॥೯೯॥

ಅರ್ಥ :- ಆತ್ಮಸ್ವಭಾವದಿಂದ ವಿಪರೀತವಾದ ಪ್ರತಿಕೂಲವಾದ ಬಾಹ್ಯಕರ್ಮ ಆ ಕ್ರಿಯಾಕಾಂಡಗಳೇನು ಮಾಡುವುದು ? ಅವು ಮೋಕ್ಷದ ಕಾರ್ಯವನ್ನು ಸ್ವಲ್ಪ ಮಾತ್ರವೂ ಮಾಡುವುದಿಲ್ಲ, ಬಹಳಷ್ಟು ಅನೇಕ ಪ್ರಕಾರದ ಕ್ಷಮಣ ಎಂದರೆ ಉಪವಾಸ ಮೊದಲಾದ ಬಾಹ್ಯ ತಪಗಳೂ ಏನು ಮಾಡುವವು ? ಏನನ್ನೂ ಮಾಡುವುದಿಲ್ಲ, ಆತಾಪನಯೋಗ ಮೊದಲಾದ ಕಾಯಕ್ಲೇಶಗಳೂ ಏನು ಮಾಡುವವು ? ಏನನ್ನೂ ಮಾಡಲಾರವು.

ಭಾವಾರ್ಥ :- ಬಾಹ್ಯಕ್ರಿಯಾಕರ್ಮಗಳು ಶರೀರಾಶ್ರಿತವಿದ್ದು ಶರೀರವು ಜಡವಿದೆ ಆತ್ಮನು ಚೇತನನಿದ್ದಾನೆ, ಜಡದ ಕ್ರಿಯೆಯು ಚೇತನಕ್ಕೇನೂ ಫಲ ಕೊಡುವುದಿಲ್ಲ, ಚೇತನದ ಭಾವವು ಕ್ರಿಯೆಯಲ್ಲಿ ಎಷ್ಟು ದೊರಕುತ್ತದೆ ಅಷ್ಟು ಫಲವು ಚೇತನಕ್ಕೆ ತಗಲುತ್ತದೆ, ಚೇತನಕ್ಕೆ ಅಶುಭ ಉಪಯೋಗ ದೊರೆತಾಗ ಅಶುಭಕರ್ಮ ಕಟ್ಟುವುದು ಮತ್ತು ಶುಭ ಉಪಯೋಗ ದೊರೆತಾಗ ಶುಭಕರ್ಮ ಕಟ್ಟುವುದು ಮತ್ತು ಉಪಯೋಗವು ಶುಭಾಶುಭವೆರಡರಿಂದ ರಹಿತವಾದಾಗ ಕರ್ಮ ಕಟ್ಟುವುದಿಲ್ಲ, ಮೊದಲು ಕಟ್ಟಿದ ಕರ್ಮಗಳ ನಿರ್ಜರೆ ಮಾಡಿ ಮೋಕ್ಷಮಾಡುತ್ತದೆ. ಹೀಗೆ ಚೇತನವು ಉಪಯೋಗದ ಅನುಸಾರ ಫಲಿಸುವುದರಿಂದ ಬಾಹ್ಯಕ್ರಿಯಾಕರ್ಮದಿಂದಂತೂ ಯಾವ ಮೋಕ್ಷವಾಗುವುದಿಲ್ಲ, ಶುದ್ಧ ಉಪಯೋಗವಾದಮೇಲೆ ಮೋಕ್ಷವಾಗುತ್ತದೆಯೆಂದು ಹೇಳಿದೆ. ಆದುದರಿಂದ ದರ್ಶನ ಜ್ಞಾನ ಉಪಯೋಗಗಳ ವಿಕಾರವನ್ನು ದೂರಮಾಡಿ ಶುದ್ಧ ಜ್ಞಾನ ಚೇತನದ ಅಭ್ಯಾಸ ಮಾಡುವುದು ಅದು ನಿಜವಾಗಿ ಮೋಕ್ಷದ ಉಪಾಯವಿದೆ. ॥೯೯॥

ಈಗ ಇದೇ ಅರ್ಥವನ್ನು ಪುನಃ ವಿಶೇಷರೂಪದಿಂದ ಹೇಳುತ್ತಾರೆ, -

ಜದಿ ಪಢದಿ ಬಹು ಸುದಾಣಿ ಯ ಜದಿ ಕಾಹಿದಿ ಬಹುವಿಹಂ ಚ ಚಾರಿತ್ತಂ ।
ತಂ ಬಾಲಸುದಂ ಚರಣಂ ಹವೇಇ ಅಪ್ಪಸ್ಸ ವಿವರೀದಂ ॥೧೦೦॥

ಯದಿ ಪಠತಿ ಬಹುಶ್ರುತಾನಿ ಚ ಯದಿ ಕರಿಷ್ಯತಿ ಬಹುವಿಧ ಚ ಚಾರಿತ್ರಂ ।
ತತ್ ಬಾಲಶ್ರುತಂ ಚರಣಂ ಭವತಿ ಆತ್ಮನಃ ವಿಪರೀತಮ್ ॥೧೦೦॥

ಅರ್ಥ :- ಆತ್ಮ ಸ್ವಭಾವದಿಂದ ವಿಪರೀತವಾಗಿ ಬಾಹ್ಯದಲ್ಲಿ ಬಹಳಷ್ಟು ಶಾಸ್ತ್ರಗಳನ್ನು ಓದಿದರೆ ಮತ್ತು ಬಹಳಷ್ಟು ಪ್ರಕಾರದ ಚಾರಿತ್ರದ ಆಚರಣೆ ಮಾಡಿದರೆ ಅದೆಲ್ಲವೂ ಬಾಲಶ್ರುತ ಮತ್ತು ಬಾಲಚಾರಿತ್ರವಾಗುವುದು. ಆತ್ಮಸ್ವಭಾವದಿಂದ ವಿಪರೀತವಾಗಿ ಶಾಸ್ತ್ರಗಳನ್ನೋದುವುದು ಮತ್ತು ಚಾರಿತ್ರದ ಆಚರಣೆ ಮಾಡುವುದು ಇದೆಲ್ಲವೂ ಬಾಲಶ್ರುತ ಮತ್ತು ಬಾಲಚಾರಿತ್ರವಿದೆ ಅಜ್ಞಾನಿಯ ಕ್ರಿಯೆಯಿದೆ, ಏಕೆಂದರೆ ಹನ್ನೊಂದು ಅಂಗ ಮತ್ತು ಒಂಭತ್ತು ಪೂರ್ವಗಳವರೆಗಂತೂ ಅಭವ್ಯ ಜೀವನೂ ಓದುತ್ತಾನೆ, ಮತ್ತು ಬಾಹ್ಯ ಮೂಲಗುಣರೂಪವಾದ ಚಾರಿತ್ರವನ್ನು ಪಾಲಿಸುತ್ತಾನೆ, ಆದಾಗ್ಯೂ ಮೋಕ್ಷಕ್ಕೆ ಯೋಗ್ಯವಿಲ್ಲವೆಂಬುದನ್ನು ತಿಳಿದುಕೊಳ್ಳಬೇಕು. ॥೧೦೦॥

---

ಹಲವು ಶಾಸ್ತ್ರಗಳನೋದಿದರು ಬಹುವಿಧ ಚಾರಿತ್ರವಾಚರಿಸಿದರು ।
ಬಾಲಶ್ರುತ ಬಾಲತಪವಿದೆಯದು ಆತ್ಮಸ್ವಭಾವದಿಂ ವಿಪರೀತವಾಗಿ ॥೧೦೦॥

ಇಂಥ ಸಾಧು ಮೋಕ್ಷ ಪಡೆಯುತ್ತಾನೆಂದು ಈಗ ಹೇಳುತ್ತಾರೆ,-

ವೇರಗ್ಗಪರೋ ಸಾಹೂ ಪರದವ್ವಪರಮ್ಮುಹೋ ಯ ಜೋ ಹೋದಿ ।
ಸಂಸಾರಸುಹವಿರತ್ತೋ ಸಗಸುದ್ಧಸುಹೇಸು ಅಣುರತ್ತೋ ॥೧೦೧॥

ಗುಣಗಣವಿಹೂಸಿಯಂಗೋ ಹೇಯೋಪಾದೇಯಣಿಚ್ಛಿದೋ ಸಾಹೂ ।
ಝಾಣಜ್ಝಯಣೇ ಸುರದೋ ಸೋ ಪಾವಇ ಉತ್ತಮಂ ಠಾಣಂ ॥೧೦೨॥

ವೈರಾಗ್ಯಪರಃ ಸಾಧುಃ ಪರದ್ರವ್ಯಪರಾಙ್ಮುಖಶ್ಚ ಯಃ ಭವತಿ ।
ಸಂಸಾರಸುಖವಿರಕ್ತಃ ಸ್ವಕಶುದ್ಧಸುಖೇಷು ಅನುರಕ್ತಃ ॥೧೦೧॥

ಗುಣಗಣವಿಭೂಷಿತಾಂಗಃ ಹೇಯೋಪಾದೇಯ ನಿಶ್ಚಿತಃ ಸಾಧುಃ ।
ಧ್ಯಾನಾಧ್ಯಯನೇ ಸುರತಃ ಸಃ ಪ್ರಾಪ್ನೋತಿ ಉತ್ತಮಂ ಸ್ಥಾನಮ್ ॥೧೦೨॥

ಅರ್ಥ ಃ- ಇಂಥ ಸಾಧುವು ಉತ್ತಮವಾದ ಸ್ಥಾನವಾದ ಆ ಮೋಕ್ಷದ ಪ್ರಾಪ್ತಿ ಮಾಡಿಕೊಳ್ಳುತ್ತಾನೆ ಎಂದರೆ ಆ ಸಾಧುವು ವೈರಾಗ್ಯದಲ್ಲಿ ತತ್ಪರನಾಗಿ ಮೊದಲು ಸಂಸಾರ-ದೇಹ-ಭೋಗಗಳಿಂದ ವಿರಕ್ತನಾಗಿ ಮುನಿಯಾದನು, ಅದೇ ಭಾವನಾಯುಕ್ತನಾದನು, ಪರದ್ರವ್ಯದಿಂದ ಪರಾಙ್ಮುಖನಾದನು, ಹೇಗೆ ವೈರಾಗ್ಯವಾಯಿತು ಹಾಗೆಯೇ ಪರದ್ರವ್ಯದ ತ್ಯಾಗಮಾಡಿ ಅದರಿಂದ ಪರಾಙ್ಮುಖನಾಗಿ ಉಳಿದನು, ಸಂಸಾರ ಸಂಬಂಧವಾಗಿ ಇಂದ್ರಿಯಗಳ ಮುಖಾಂತರ ವಿಷಯಗಳಿಂದ ಸುಖವಾಗುತ್ತಿತ್ತು ಅದರಿಂದ ವಿರಕ್ತನಾದನು, ತನ್ನ ಆತ್ಮಿಕ ಶುದ್ಧ ಎಂದರೆ ಕಷಾಯಗಳ ಕ್ಷೋಭದಿಂದ ರಹಿತವಾದ ನಿರಾಕುಲ, ಶಾಂತಭಾವರೂಪವಾದ ಆನಂದದಲ್ಲಿ ಅನುರಕ್ತನಾದನು, ಲೀನನಾದನು, ಮತ್ತೆ ಮತ್ತೆ ಅದರದೇ ಭಾವನೆ ಉಳಿಯಿತು.

ಯಾವನ ಆತ್ಮಪ್ರದೇಶರೂಪದ ಅಂಗವು ಗುಣಗಳ ಗಣದಿಂದ ವಿಭೂಷಿತವಿದೆ, ಯಾವನು ಮೂಲಗುಣ-ಉತ್ತರಗುಣಗಳಿಂದ ಆತ್ಮನನ್ನು ಅಲಂಕೃತ ಶೋಭಾಯಮಾನ ಮಾಡಿದ್ದಾನೆ, ಯಾವನಿಗೆ ಹೇಯ-ಉಪಾದೇಯ ತತ್ತ್ವದ ನಿಶ್ಚಯವಾಗಿದೆ ನಿಜಾತ್ಮದ್ರವ್ಯವೇ ಉಪಾದೇಯವಿದೆ ಮತ್ತು ಇತರ ಪರದ್ರವ್ಯದ ನಿಮಿತ್ತದಿಂದಾದ ತನ್ನ ವಿಕಾರಭಾವನೆಗಳೆಲ್ಲವೂ ಅತ್ಯಂತ ಹೇಯವಿವೆಯೆಂದು ನಿಶ್ಚಯವಾಗಿದೆ. ಸಾಧುವಾಗಿ ಆತ್ಮಸ್ವಭಾವದ ಸಾಧನೆಯಲ್ಲಿ ಚನ್ನಾಗಿ ತತ್ಪರನಿದ್ದಾನೆ, ಧರ್ಮ-ಶುಕ್ಲ ಧ್ಯಾನ ಮತ್ತು ಅಧ್ಯಾತ್ಮ ಶಾಸ್ತ್ರಗಳನ್ನು ಓದಿ ಜ್ಞಾನದ ಭಾವನೆಯಲ್ಲಿ ತತ್ಪರನಿರುವನು, ಸುರತನಿರುವನು, ಒಳ್ಳೆಯ ಪ್ರಕಾರದಿಂದ ಲೀನನಿರುವಂಥ ಸಾಧುವು ಉತ್ತಮ ಸ್ಥಾನ ಎಂದರೆ ಲೋಕಶಿಖರದ ಮೇಲೆ ಸಿದ್ಧಕ್ಷೇತ್ರ ಹಾಗೂ ಮಿಥ್ಯಾತ್ವ ಮೊದಲಾದ ಹದಿನಾಲ್ಕು ಗುಣಸ್ಥಾನಗಳಿಂದ ಭಿನ್ನವಾದ ಶುದ್ಧಸ್ವಭಾವರೂಪದ ಮೋಕ್ಷಸ್ಥಾನವನ್ನು ಪಡೆಯುತ್ತಾನೆ.

---

ಯಾವ ಸಾಧು ವೈರಾಗ್ಯಪರ ಮೇಣ್ಪರದ್ರವ್ಯಗಳಿಂದ ವಿಮುಖನಿರುವನು ।
ಭವಸುಖದಲಿ ವಿರಕ್ತಿ ಸ್ವಕೀಯ ಶುದ್ಧಸುಖದಲನುರಕ್ತನಿಹನು ॥೧೦೧॥

ಗುಣಗಣವಿಭೂಷಿತಾಂಗನು ಹೇಯೋಪಾದೇಯದಲಿ ನಿಶ್ಚಿತನಾದಸಾಧು ।
ಧ್ಯಾನಾಧ್ಯಯನದಲಿ ಸುರತನಿದ್ದವನು ಉತ್ತಮಸ್ಥಾನ ಪಡೆಯುವನು ॥೧೦೨॥

ಭಾವಾರ್ಥ ಃ- ಇವು ಮೋಕ್ಷಸಾಧನೆಯ ಉಪಾಯಗಳಿವೆ ಬೇರೇನೂ ಇಲ್ಲ. ||೧೦೧-೧೦೨||

ಎಲ್ಲವುಗಳಿಂದ ಉತ್ತಮವಾದ ಪದಾರ್ಥವು ಶುದ್ಧಾತ್ಮನಿದ್ದು ಅವನು ಈ ದೇಹದಲ್ಲಿಯೇ ವಾಸಿಸುತ್ತಾನೆ ಅವನನ್ನು ತಿಳಿದುಕೊಳ್ಳಿರೆಂದು ಆಚಾರ್ಯದೇವರು ಈಗ ಹೇಳುತ್ತಾರೆ, -

ಣವಿಏಹಿಂ ಜಂ ಣವಿಜ್ಜಇ ಝಾಇಜ್ಜಇ ಝಾಇಏಹಿಂ ಅಣವರಯಂ ।
ಥುವ್ವಂತೇಹಿಂ ಥುಣಿಜ್ಜಇ ದೇಹತ್ಥಂ ಕಿಂ ಪಿ ತಂ ಮುಣಹ ||೧೦೩||

ನತೈಃ ಯತ್ ನಮ್ಯತೇ ಧ್ಯಾಯತೇ ಧ್ಯಾತೈಃ ಅನವರತಮ್ ।
ಸ್ತೂಯಮಾನೈಃ ಸ್ತೂಯತೇ ದೇಹಸ್ಥಂ ಕಿಮಪಿ ತತ್ ಜಾನೀತ ||೧೦೩||

ಅರ್ಥ ಃ- ಎಲೈ ಭವ್ಯ ಜೀವರುಗಳೇ ! ನೀವು ಈ ದೇಹದಲ್ಲಿ ಸ್ಥಿರವಿರುವಂಥದೇನಿದೆ, ಏಕಿದೆಯೆಂಬುದನ್ನು ತಿಳಿಯಿರಿ, ಅದು ಲೋಕದಲ್ಲಿ ನಮಸ್ಕಾರ ಮಾಡಲು ಯೋಗ್ಯರು ಇಂದ್ರಾದಿಕರಿದ್ದಾರೆ, ಅವರಿಂದಲೂ ನಮಸ್ಕಾರ ಮಾಡಲು ಯೋಗ್ಯರು, ಧ್ಯಾನ ಮಾಡಲು ಯೋಗ್ಯರು ಮತ್ತು ಸ್ತುತಿ ಮಾಡಲು ಯೋಗ್ಯರಾದ ಆ ತೀಥಂಕರರಿದ್ದಾರೆ, ಅವರಿಂದಲೂ ಕೂಡ ಸ್ತುತಿ ಮಾಡಲು ಯೋಗ್ಯವಿರುವಂಥದೇನಿದೆ ಅದು ಈ ದೇಹದಲ್ಲಿಯೇ ಸ್ಥಿರವಿದೆ ಅದನ್ನು ಯಥಾರ್ಥವಾಗಿ ತಿಳಿದುಕೊಳ್ಳಿರಿ.

ಭಾವಾರ್ಥ ಃ- ಶುದ್ಧ ಪರಮಾತ್ಮನಿದ್ದಾನೆ ಅವನು ಕರ್ಮದಿಂದ ಆಚ್ಛಾದಿತನಿದ್ದರೂ ಕೂಡ ಭೇದ ಜ್ಞಾನಿಗಳು ಈ ದೇಹದಲ್ಲಿಯೇ ಸ್ಥಿರವಿರುವಂಥವನ ಧ್ಯಾನಮಾಡಿ ತೀರ್ಥಂಕರ ಮೊದಲಾದವರು ಮೋಕ್ಷಪ್ರಾಪ್ತ ಮಾಡಿ ಕೊಳ್ಳುತ್ತಾರೆ, ಆದುದರಿಂದ ಲೋಕದಲ್ಲಿ ನಮಸ್ಕರಿಸಲು ಯೋಗ್ಯರು ಇಂದ್ರಾದಿಕರಿದ್ದಾರೆ ಮತ್ತು ಧ್ಯಾನ ಮಾಡಲು ಯೋಗ್ಯರಾದವರು ತೀರ್ಥಂಕರ ಮೊದಲಾದವರಿದ್ದಾರೆ ಹಾಗೂ ಸ್ತುತಿ ಮಾಡಲು ಯೋಗ್ಯರು ತೀರ್ಥಂಕರಾದಿಕರೇ ಇದ್ದಾರೆ, ಅವರು ಕೂಡ ಯಾರಿಗೆ ನಮಸ್ಕಾರ ಮಾಡುತ್ತಾರೆ, ಯಾರ ಧ್ಯಾನ ಮಾಡುತ್ತಾರೆ, ಸ್ತುತಿ ಮಾಡುತ್ತಾರೆ ಅಂಥವರು ವಚನ ಅಗೋಚರ ಭೇದಜ್ಞಾನಿಗಳ ಅನುಭವಗೋಚರನಾದ ಪರಮಾತ್ಮ ವಸ್ತುವಿದ್ದಾನೆ ಅವನ ಸ್ವರೂಪ ತಿಳಿದುಕೊಳ್ಳಿರಿ, ಅವನಿಗೆ ನಮಸ್ಕಾರ ಮಾಡಿರಿ, ಅವನ ಧ್ಯಾನ ಮಾಡಿರಿ, ಬಾಹ್ಯದಲ್ಲಿ ಏತಕ್ಕಾಗಿ ಅರಸುತ್ತಿರುವಿರೆಂಬ ಉಪದೇಶವಿದೆ. ||೧೦೩||

ಅರಹಂತ ಮೊದಲಾದ ಪಂಚಪರಮೇಷ್ಠಿಗಳಿದ್ದಾರೆ ಅವರು ಕೂಡ ಆತ್ಮನಲ್ಲಿಯೇ ಇರುವುದರಿಂದ ಆತ್ಮನೇ ಆಶ್ರಯದಾತನಿದ್ದಾನೆಂಬುದನ್ನು ಆಚಾರ್ಯದೇವರು ಈಗ ಹೇಳುತ್ತಾರೆ, -

ಅರುಹಾ ಸಿದ್ಧಾಯರಿಯಾ ಉಜ್ಝಾಯಾ ಸಾಹು ಪಂಚ ಪರಮೇಟ್ಠೀ ।
ತೇ ವಿ ಹು ಚಿಟ್ಠಹಿ ಆದೇ ತಮ್ಹಾ ಆದಾ ಹು ಮೇ ಸರಣಂ ||೧೦೪||

---

ಧ್ಯಾತ ಜನಧ್ಯಾನಿಸುವ ನಮಿತ ಜನನಮಿಸುವರಾರನು ನಿರಂತರ ।
ಸ್ತುತಿಪ್ರಾಪ್ತಜನಸ್ತುತಿಸುವಾದೇಹಸ್ಥಿತ ತತ್ತ್ವವನು ಅರಿತುಕೋ ನೀನು ||೧೦೩||

ಅರಹಂತಸಿದ್ಧಾಚಾರ್ಯೋಪಾಧ್ಯಾಯ ಮೇಣ್ಸಾಧುವೆಂಬೀ ಪಂಚಪರಮೇಷ್ಠಿ ಸಹ ।
ಇರುವರಾತ್ಮನಲಿ ಪ್ರಯತ್ನದಿಂದದ ರಿಂದೆನ್ನಾತ್ಮನೇ ಶರಣೆರುವನು ||೧೦೪||

**ಅರ್ಹಂತಃ ಸಿದ್ಧಾ ಆಚಾರ್ಯಾ ಉಪಾಧ್ಯಾಯಾಃ ಸಾಧವಃ ಪಂಚ ಪರಮೇಷ್ಠಿನಃ ।**
**ತೇ ಅಪಿ ಸ್ಫುಟಂ ತಿಷ್ಠಂತಿ ಆತ್ಮನಿ ತಸ್ಮಾದಾತ್ಮಾ ಸ್ಫುಟಂ ಮೇ ಶರಣಂ ॥೧೦೪॥**

ಅರ್ಥ ಃ- ಅರಹಂತ, ಸಿದ್ಧ, ಆಚಾರ್ಯ, ಉಪಾಧ್ಯಾಯ ಮತ್ತು ಸಾಧು ಇವರು ಪಂಚಪರಮೇಷ್ಠಿಗಳಿದ್ದು ಇವರೂ ಆತ್ಮನಲ್ಲಿಯೇ ಪ್ರಯತ್ನಶೀಲರಿದ್ದಾರೆ, ಇವು ಆತ್ಮನ ಅವಸ್ಥೆಗಳಿರುವುದರಿಂದ ನನಗೆ ಆತ್ಮನದೇ ಆಶ್ರಯ-ವಿದೆಯೆಂದು ಆಚಾರ್ಯದೇವರು ಅಭೇದನಯವನ್ನು ಮುಖ್ಯಮಾಡಿ ಹೇಳಿದ್ದಾರೆ.

ಭಾವಾರ್ಥ ಃ- ಇವು ಐದೂ ಪದಗಳು ಆತ್ಮನವೇ ಇವೆ,ಯಾವಾಗ ಈ ಆತ್ಮನು ಘಾತಿಕರ್ಮಗಳ ನಾಶ ಮಾಡುತ್ತಾನೆ ಆಗ ಅರಹಂತ ಪದವಾಗುತ್ತದೆ, ಅದೇ ಆತ್ಮನು ಅಘಾತಿಕರ್ಮಗಳ ನಾಶಮಾಡಿ ನಿರ್ವಾಣಕ್ಕೆ ಪ್ರಾಪ್ತನಾಗುತ್ತಾನೆ, ಆಗ ಸಿದ್ಧಪದವೆನ್ನುತ್ತಾರೆ, ದೀಕ್ಷೆ-ಶಿಕ್ಷೆಕೊಡುವಂಥ ಮುನಿಯಿರುವಾಗ ಆಚಾರ್ಯನೆನಿಸುತ್ತಾನೆ, ಪಠನ-ಪಾಠನದಲ್ಲಿ ತತ್ಪರನಾದ ಮುನಿಯಿರುವಾಗ ಉಪಾಧ್ಯಾಯನೆನಿಸಿಕೊಳ್ಳುತ್ತಾನೆ ಮತ್ತು ಕೇವಲ ರತ್ನತ್ರಯರೂಪವಾದ ಮೋಕ್ಷಮಾರ್ಗವನ್ನು ಸಾಧಿಸುತ್ತಿರುವಾಗ ಸಾಧುವೆನಿಸಿಕೊಳ್ಳುತ್ತಾನೆ, ಹೀಗೆ ಐದೂ ಪದಗಳು ಆತ್ಮನಲ್ಲಿಯೇ ಇವೆ. ಆದುದರಿಂದ ಈ ದೇಹದಲ್ಲಿ ಸ್ಥಿರನಿರುವಂಥ ಆತ್ಮನು (ಸ್ವಯಂ) ಕರ್ಮಗಳಿಂದ ಆಚ್ಛಾದಿತನಿದ್ದರೂ ಕೂಡ ಐದೂ ಪದಗಳಿಗೆ ಯೋಗ್ಯನಿದ್ದಾನೆ, ಇವನದೇ ಶುದ್ಧಸ್ವರೂಪದ ಧ್ಯಾನಮಾಡುವುದು ಅದು ಐದೂ ಪದಗಳ ಧ್ಯಾನವಿರುವುದರಿಂದ ನನಗೆ ಈ ಆತ್ಮನದೇ ಆಶ್ರಯವಿದೆಯೆಂಬ ಭಾವನೆಮಾಡಿದೆ ಮತ್ತು ಪಂಚಪರಮೇಷ್ಠಿಗಳ ಧ್ಯಾನರೂಪವಾದ ಅಂತ್ಯಮಂಗಲವನ್ನು ತಿಳಿಸಿಕೊಡಲಾಗಿದೆ. ॥೧೦೪॥

ಕೊನೆಯ ಸಮಾಧಿ ಮರಣದಲ್ಲಿ ನಾಲ್ಕು ಆರಾಧನೆಯ ಆರಾಧನೆ ಹೇಳಿದೆ ಅದು ಕೂಡ ಆತ್ಮನದೇ ಪ್ರಯತ್ನ ವಿರುವುದರಿಂದ ನನಗೆ ಆತ್ಮನೇ ಶರಣಿದ್ದಾನೆಂದು ಈಗ ಹೇಳುತ್ತಾರೆ, -

**ಸಮ್ಮತ್ತಂ ಸಣ್ಣಾಣಂ ಸಚ್ಚಾರಿತ್ತಂ ಹಿ ಸತ್ತವಂ ಚೇವ ।**
**ಚಉರೋ ಚಿಟ್ಠಹಿ ಆದೇ ತಮ್ಹಾ ಆದಾ ಹು ಮೇ ಸರಣಂ ॥೧೦೫॥**

**ಸಮ್ಯಕ್ತ್ವಂ ಸಜ್ಜ್ಞಾನಂ ಸಚ್ಚಾರಿತ್ರಂ ಹಿ ಸತ್ತಪಃ ಚೈವ ।**
**ಚತ್ವಾರಃ ತಿಷ್ಠಂತಿ ಆತ್ಮನಿ ತಸ್ಮಾದಾತ್ಮಾ ಸ್ಫುಟಂ ಮೇ ಶರಣಂ ॥೧೦೫॥**

ಅರ್ಥ ಃ- ಸಮ್ಯಗ್ದರ್ಶನ, ಸಮ್ಯಗ್ಜ್ಞಾನ, ಸಮ್ಯಕ್ಚಾರಿತ್ರ ಮತ್ತು ಸಮ್ಯಕ್ ತಪ ಇವು ನಾಲ್ಕು ಆರಾಧನೆಗಳಿದ್ದು ಇವೂ ಕೂಡ ಆತ್ಮನಲ್ಲಿಯೇ ಪ್ರಯತ್ನರೂಪವಿವೆ,ಇವು ನಾಲ್ಕೂ ಆತ್ಮನ ಅವಸ್ಥೆಗಳೇ ಇವೆ, ಆದುದರಿಂದ ನನಗೆ ಆತ್ಮನದೇ ಆಶ್ರಯವಿದೆಯೆಂದು ಆಚಾರ್ಯದೇವರು ಹೇಳುತ್ತಾರೆ. (ಭಗವತೀ ಆರಾಧನೆ ಗಾಥೆ ಎರಡು.)

ಭಾವಾರ್ಥ ಃ- ನಿಶ್ಚಯ-ವ್ಯವಹಾರಾತ್ಮಕವಾದ ತತ್ತ್ವಾರ್ಥಶ್ರದ್ಧಾನರೂಪದ ಆತ್ಮನ ಪರಿಣಾಮವು ಅದು ಸಮ್ಯಗ್ದರ್ಶನವಿದೆ, ಸಂಶಯ ವಿಮೋಹ ವಿಭ್ರಮದಿಂದರಹಿತ ಮತ್ತು ನಿಶ್ಚಯವ್ಯವಹಾರದಿಂದ ನಿಜಸ್ವರೂಪವನ್ನು ಯಥಾರ್ಥವಾಗಿ ತಿಳಿಯುವುದು ಸಮ್ಯಗ್ಜ್ಞಾನವಿದೆ, ಸಮ್ಯಗ್ಜ್ಞಾನದಿಂದ ತತ್ತ್ವಾರ್ಥಗಳನ್ನು ತಿಳಿದುಕೊಂಡು

---

ಸಮ್ಯಕ್ತ್ವ-ಸಮ್ಯಗ್ದರ್ಶನ-ಸಮ್ಯಗ್ಜ್ಞಾನ ಮೇಣ್ಸಮ್ಯಕ್ಚಾರಿತ್ರವೆಂಬೀ ನಾಲ್ಕು ಸಹ ।
ಸಾಮ್ಯದಿಂದಾತ್ಮನಲ್ಲಿಯೆಯಿರುವುದರಿಂದೆನ್ನಾತ್ಮನೇ ಶರಣೆರುವನು ॥೧೦೫॥

ರಾಗದ್ವೇಷಗಳಿಂದ ರಹಿತವಾದ ಪರಿಣಾಮವಿರುವುದು ಸಮ್ಯಕ್ಚಾರಿತ್ರವಿದೆ, ತನ್ನ ಶಕ್ತಿಗೆ ಅನುಸರಿಸಿ ಸಮ್ಯಗ್ಜ್ಞಾನಪೂರ್ವಕ ಕಷ್ಟದ ಆದರ ಮಾಡಿ ಸ್ವರೂಪದ ಸಾಧನೆಯು ಅದು ಸಮ್ಯಕ್ ತಪವಿದೆ.ಹೀಗೆ ಇವು ನಾಲ್ಕೂ ಪರಿಣಾಮಗಳು ಆತ್ಮನವೇ ಇರುವುದರಿಂದ ನನಗೆ ಆತ್ಮನದೇ ಶರಣಿದೆಯೆಂದು ಆಚಾರ್ಯದೇವರು ಹೇಳುತ್ತಾರೆ, ಆತ್ಮನ ಭಾವನೆಯಲ್ಲಿಯೇ ನಾಲ್ಕೂ ಬಂದು ಬಿಡುತ್ತವೆ.

ಅಂತ್ಯ ಸಲ್ಲೇಖನದಲ್ಲಿ ನಾಲ್ಕು ಆರಾಧನೆಯ ಆರಾಧನೆ ಹೇಳಿದೆ, ಸಮ್ಯಗ್ದರ್ಶನ-ಜ್ಞಾನ-ಚಾರಿತ್ರ-ತಪ ಈ ನಾಲ್ಕರ ಉದ್ಯೋತ, ಉದ್ಯವನ, ನಿರ್ವಹಣ, ಸಾಧನ ಮತ್ತು ವಿಸ್ತರಣವೆಂದು ಐದು ಪ್ರಕಾರದ ಆರಾಧನೆಗಳನ್ನು ಹೇಳಿದೆ, ಅವು ಆತ್ಮನ ಭಾವನೆಯಲ್ಲಿ (-ಆತ್ಮನ ಭಾವನೆ-ಏಕಾಗ್ರತೆ ಮಾಡುವಲ್ಲಿ) ನಾಲ್ಕೂ ಬಂದು ಬಿಟ್ಟವು. ಹೀಗೆ ಅಂತ್ಯಸಲ್ಲೇಖನದ ಭಾವನೆಯು ಇದರಲ್ಲಿಯೇ ಬಂದುಬಿಟ್ಟಿತೆಂದು ತಿಳಿಯುವುದು ಮತ್ತು ಆತ್ಮನೇ ಪರಮಮಂಗಲ ರೂಪನಿದ್ದಾನೆಂದೂ ತಿಳಿಸಿಕೊಡಲಾಗಿದೆ. ||೧೦೫||

ಈಗ ಮೋಕ್ಷಪಾಹುಡ ಗ್ರಂಥವನ್ನು ಪೂರ್ಣ ಮಾಡುತ್ತ ಇದನ್ನು ಓದುವ, ಕೇಳುವ, ಭಾವಿಸುವ ಫಲವನ್ನು ಹೇಳುತ್ತಾರೆ, -

**ಏವಂ ಜಿಣಪಣ್ಣತ್ತಂ ಮೋಕ್ಖಸ್ಸ ಯ [೧]ಪಾಹುಡಂ ಸುಭತ್ತೀಏ ।**
**ಜೋ ಪಢಇ ಸುಣಇ ಭಾವಇ ಸೋ ಪಾವಇ ಸಾಸಯಂ ಸೋಕ್ಖಂ ||೧೦೬||**

**ಏವಂ ಜಿನಪ್ರಜ್ಞಪ್ತಂ ಮೋಕ್ಷಸ್ಯ ಚ ಪ್ರಾಭೃತಂ ಸುಭಕ್ತ್ಯಾ ।**
**ಯಃ ಪಠತಿ ಶೃಣೋತಿ ಭಾವಯತಿ ಸಃ ಪ್ರಾಪ್ನೋತಿ ಶಾಶ್ವತಂ ಸೌಖ್ಯಂ ||೧೦೬||**

ಅರ್ಥ :- ಪೂರ್ವೋಕ್ತ ಪ್ರಕಾರ ಜಿನದೇವರು ಹೇಳಿರುವ ಈ ಮೋಕ್ಷಪಾಹುಡ ಗ್ರಂಥವನ್ನು ಯಾವ ಜೀವರುಗಳು ಭಕ್ತಿಭಾವದಿಂದ ಓದುತ್ತಾರೆ, ಮತ್ತೆ ಮತ್ತೆ ಇದರ ಚಿಂತನರೂಪವಾದ ಭಾವನೆ ಮಾಡುತ್ತಾರೆ ಹಾಗೂ ಕೇಳುತ್ತಾರೆ ಆ ಜೀವರುಗಳು ಶಾಶ್ವತ ಸುಖ, ನಿತ್ಯ ಅತೀಂದ್ರಿಯ ಆನಂದಮಯವಾದ ಸುಖವನ್ನು ಪಡೆಯುತ್ತಾರೆ.

ಭಾವಾರ್ಥ :- ಮೋಕ್ಷಪಾಹುಡದಲ್ಲಿ ಮೋಕ್ಷ ಮತ್ತು ಮೋಕ್ಷದ ಕಾರಣದ ಸ್ವರೂಪ ಹೇಳಿದೆ ಅದರಂತೆ ಮೋಕ್ಷದ ಕಾರಣದ ಸ್ವರೂಪವನ್ನು ಅನ್ಯಪ್ರಕಾರದಿಂದ ಮನ್ನಿಸುವವರ ನಿಷೇಧ ಮಾಡಿರುವುದರಿಂದ ಈ ಗ್ರಂಥವನ್ನು ಓದುವುದರಿಂದ ಕೇಳುವುದರಿಂದ ಅದರ ಯಥಾರ್ಥ ಸ್ವರೂಪದ ಜ್ಞಾನ ಶ್ರದ್ಧೆ ಆಚರಣೆಯಾಗುತ್ತದೆ ಆ ಧ್ಯಾನದಿಂದ ಕರ್ಮದ ನಾಶವಾಗುತ್ತದೆ ಮತ್ತು ಇದನ್ನೇ ಪುನಃ ಪುನಃ ಭಾವಿಸುವುದರಿಂದ ಅದರಲ್ಲಿ ದೃಢವಾಗಿ ಏಕಾಗ್ರಧ್ಯಾನದ ಸಾಮರ್ಥ್ಯವಾಗುತ್ತದೆ, ಆ ಧ್ಯಾನದಿಂದ ಕರ್ಮದ ನಾಶವಾಗಿ ಶಾಶ್ವತ ಸುಖರೂಪಮೋಕ್ಷದ ಪ್ರಾಪ್ತಿಯಾಗುತ್ತದೆ. ಆದುದರಿಂದ ಈ ಗ್ರಂಥವನ್ನು ಓದಿ, ಕೇಳಿ ನಿರಂತರ ಭಾವನೆಯಿಡಬೇಕೆಂಬ ಆಶಯವಿದೆ. ||೧೦೬||

---

**ಈ ರೀತಿ ಶ್ರೀಜಿನೋಪದೇಶಿತ ಮೋಕ್ಷಪಾಹುಡ ಶಾಸ್ತ್ರವನು ಸುಭಕ್ತಿಯಿಂದ ।**
**ಯಾರು ಕೇಳುವರೋದುವರ್ಭಾವಿಪರವರು ಶಾಶ್ವತ ಸೌಖ್ಯ ಪಡೆಯುವರು ||೧೦೬||**

---

೧ 'ಪಾಹುಡ'ದ ಪಾಠಾಂತರವು 'ಕಾರಣಂ' ಇದೆ, ಸಂ. ಛಾಯೆಯಲ್ಲೂ ತಿಳಿಯಬೇಕು.

ಈ ಪ್ರಕಾರ ಭ. ಕುಂದಕುಂದಾಚಾರ್ಯದೇವರು ಈ ಮೋಕ್ಷಪಾಹುಡ ಗ್ರಂಥವನ್ನು ಪೂರ್ಣ ಮಾಡಿದರು. ಇದರ ಸಂಕ್ಷೇಪವು ಹೀಗಿದೆ-ಈ ಜೀವನು ಶುದ್ಧ ದರ್ಶನ-ಜ್ಞಾನಮಯ ಚೇತನಾಸ್ವರೂಪನಿದ್ದರೂ ಕೂಡ ಅನಾದಿಯಿಂದಲೇ ಪುದ್ಗಲಕರ್ಮಗಳ ಸಂಯೋಗದಿಂದ ಅಜ್ಞಾನ ಮಿಥ್ಯಾತ್ವ ರಾಗ-ದ್ವೇಷಾದಿಗಳ ವಿಭಾವ ರೂಪವಾಗಿ ಪರಿಣಮಿಸುತ್ತಿರುವುದರಿಂದ ನವೀನ ಕರ್ಮಬಂಧದ ಪರಂಪರೆಯಿಂದ ಸಂಸಾರದಲ್ಲಿ ಭ್ರಮಣ ಮಾಡುತ್ತಾನೆ, ಜೀವದ ಪ್ರವೃತ್ತಿಯನ್ನು ಸಿದ್ಧಾಂತದಲ್ಲಿ ಸಾಮಾನ್ಯರೂಪದಿಂದ ಹದಿನಾಲ್ಕು ಗುಣಸ್ಥಾನಗಳಾಗಿ ನಿರೂಪಣೆ ಮಾಡಿದ್ದಾರೆ, ಅವುಗಳಲ್ಲಿ ಮಿಥ್ಯಾತ್ವದ ಉದಯದಿಂದ ಮಿಥ್ಯಾತ್ವ ಗುಣಸ್ಥಾನವಿರುತ್ತದೆ, ಮಿಥ್ಯಾತ್ವದ ಸಹಕಾರಿಣಿಯಾಗಿ ಅನಂತಾನುಬಂಧಿ ಕಷಾಯಗಳಿವೆ, ಕೇವಲ ಅದರ ಉದಯದಿಂದ ಸಾಸಾದನಗುಣಸ್ಥಾನವಿರುತ್ತದೆ ಮತ್ತು ಸಮ್ಯಕ್ತ್ವ ಮಿಥ್ಯಾತ್ವ ಇವೆರಡರ ಸೇರಿಕೆಯರೂಪದ ಮಿಶ್ರಪ್ರಕೃತಿಯ ಉದಯದಿಂದ ಮಿಶ್ರ ಗುಣಸ್ಥಾನವಿರುತ್ತದೆ. ಈ ಮೂರು ಗುಣಸ್ಥಾನಗಳಲ್ಲಂತೂ ಆತ್ಮಭಾವನೆಯ ಅಭಾವವೇ ಇದೆ.

ಯಾವಾಗ ಕಾಲಲಬ್ಧಿಯ ನಿಮಿತ್ತದಿಂದ ಜೀವಾಜೀವ ಪದಾರ್ಥಗಳ ಜ್ಞಾನಶ್ರದ್ಧೆಯಾದ ಮೇಲೆ ಸಮ್ಯಕ್ತ್ವವಾಗುತ್ತದೆ, ಆಗ ಈ ಜೀವನಿಗೆ ತನ್ನ ಮತ್ತು ಇತರರ ಹಾಗೂ ಹಿತ-ಅಹಿತದ, ಹೇಯ-ಉಪಾದೇಯದ ತಿಳಿಯುವುದಾಗುತ್ತದೆ ಆಗ ಆತ್ಮನ ಭಾವನೆಯಾಗುತ್ತದೆ ಮತ್ತು ಅವಿರತನಾಮದ ನಾಲ್ಕನೆಯ ಗುಣಸ್ಥಾನವಾಗುತ್ತದೆ. ಪರದ್ರವ್ಯದಿಂದ ಏಕದೇಶ ನಿವೃತ್ತಿಯ ಪರಿಣಾಮವಾದಾಗ ಆ ಏಕದೇಶ ಚಾರಿತ್ರರೂಪದ ಐದನೆಯ ಗುಣಸ್ಥಾನವಾಗುತ್ತದೆ ಅದನ್ನು ಶ್ರಾವಕಪದವೆಂದು ಹೇಳುತ್ತಾರೆ. ಪರದ್ರವ್ಯದಿಂದ ಸರ್ವದೇಶ ನಿವೃತ್ತಿರೂಪದ ಪರಿಣಾಮವಾದಾಗ ಸಕಲಚಾರಿತ್ರರೂಪದ ಆರನೆಯ ಗುಣಸ್ಥಾನವಾಗುತ್ತದೆ, ಇದರಲ್ಲಿ ಒಂದಿಷ್ಟು ಸಂಜ್ವಲನ ಚಾರಿತ್ರಮೋಹದ ತೀವ್ರ ಉದಯದಿಂದ ಸ್ವರೂಪದ ಸಾಧನೆಯಲ್ಲಿ ಪ್ರಮಾದವಾಗುತ್ತಿರುವುದರಿಂದ ಇದರ ಹೆಸರು ಪ್ರಮತ್ತವಿದೆ, ಇಲ್ಲಿಂದ ಹಿಡಿದು ಮೇಲಿನ ಗುಣಸ್ಥಾನವುಳ್ಳವರನ್ನು ಸಾಧುಗಳೆಂದು ಹೇಳುತ್ತಾರೆ.

[ಸ್ವಸನ್ಮುಖತೆಯರೂಪದ ನಿಜ-ಪರಮಾತ್ಮನ ಪ್ರಾಪ್ತಿಯ ಹೆಸರೇ ಉಪಾದಾನರೂಪದ ನಿಶ್ಚಯ ಕಾಲಲಬ್ಧಿಯಿದೆ ಅದು ಇದ್ದರೆ ಆ ಸಮಯದಲ್ಲಿ ಬಾಹ್ಯ ದ್ರವ್ಯ-ಕ್ಷೇತ್ರ-ಕಾಲಾದಿ ಉಚಿತ ಸಾಮಗ್ರಿಗಳು ನಿಮಿತ್ತವಿವೆ-ಉಪಚಾರ ಕಾರಣವಿವೆ, ಅನ್ಯಥಾ ಉಪಚಾರ ಕೂಡ ಇಲ್ಲ.]

ಸಂಜ್ವಲನ ಚಾರಿತ್ರಮೋಹದ ಮಂದ ಉದಯವಾದಾಗ ಪ್ರಮಾದದ ಅಭಾವವಾಗಿ ಸ್ವರೂಪದ ಸಾಧನೆಯಲ್ಲಿ ದೊಡ್ಡ ಉದ್ಯಮವಾಗುತ್ತದೆ, ಆಗ ಅದರ ಹೆಸರು ಅಪ್ರಮತ್ತವೆಂಬ ಏಳನೆಯ ಗುಣಸ್ಥಾನವಿದೆ, ಇದರಲ್ಲಿ ಧರ್ಮಧ್ಯಾನದ ಪೂರ್ಣತೆಯಿದೆ. ಈ ಗುಣಸ್ಥಾನದಲ್ಲಿ ಸ್ವರೂಪದೊಳಗೆ ಲೀನವಾದಾಗ ಸಾತಿಶಯ ಅಪ್ರಮತ್ತವಿರುತ್ತದೆ, ಶ್ರೇಣಿಯ ಪ್ರಾರಂಭ ಮಾಡುತ್ತಾನೆ ಆಗ ಇದರಿಂದ ಮೇಲೆ ಚಾರಿತ್ರಮೋಹದ ಅವ್ಯಕ್ತ ಉದಯರೂಪದ ಅಪೂರ್ವಕರಣ, ಅನಿವೃತ್ತಿಕರಣ, ಸೂಕ್ಷ್ಮಸಾಂಪರಾಯನಾಮ ಧಾರಕಗಳಾದ ಈ ಮೂರು ಗುಣಸ್ಥಾನಗಳಿರುತ್ತವೆ. ನಾಲ್ಕರಿಂದ ಹಿಡಿದು ಹತ್ತನೆಯ ಸೂಕ್ಷ್ಮಸಾಂಪರಾಯದವರೆಗೆ ಕರ್ಮದ ನಿರ್ಜರೆಯು ವಿಶೇಷರೂಪದಿಂದ ಗುಣಶ್ರೇಣೀರೂಪವಾಗಿರುತ್ತದೆ.

ಇದರಿಂದ ಮೇಲೆ ಮೋಹಕರ್ಮದ ಅಭಾವರೂಪವಾದ ಹನ್ನೊಂದನೆಯ ಹನ್ನೆರಡನೆಯ ಉಪಶಾಂತ ಕಷಾಯ ಕ್ಷೀಣಕಷಾಯ ಗುಣಸ್ಥಾನಗಳಿರುತ್ತವೆ. ಇದರ ನಂತರ ಉಳಿದ ಮೂರು ಘಾತಿಕರ್ಮಗಳ ನಾಶ ಮಾಡಿ ಅನಂತಚತುಷ್ಟಯ ಪ್ರಕಟವಾಗಿ ಅರಹಂತನಾಗುತ್ತಾನೆ ಇದು ಸಯೋಗಿ ಜಿನನಾಮದ ಗುಣಸ್ಥಾನವಿದೆ, ಇಲ್ಲಿ ಯೋಗದ ಪ್ರವೃತ್ತಿಯಿದೆ, ಯೋಗಗಳ ನಿರೋಧ ಮಾಡಿ ಅಯೋಗೀ ಜಿನನಾಮದ ಹದಿನಾಲ್ಕನೆಯ ಗುಣಸ್ಥಾನವಾಗುತ್ತದೆ, ಇಲ್ಲಿ ಅಘಾತಿಕರ್ಮಗಳದ್ದೂ ನಾಶಮಾಡಿಕೊಂಡರೆ ಅನಂತರ ಸಮಯದಲ್ಲಿ ನಿರ್ವಾಣಪದಕ್ಕೆ ಪ್ರಾಪ್ತನಾಗುತ್ತಾನೆ, ಇಲ್ಲಿ ಸಂಸಾರದ ಅಭಾವವಾಗುವುದರಿಂದ ಮೋಕ್ಷವೆಂಬ ಹೆಸರನ್ನು ಪಡೆಯುತ್ತಾನೆ.

ಈ ಪ್ರಕಾರ ಸಮಸ್ತ ಕರ್ಮಗಳ ಅಭಾವರೂಪವಾಗಿ ಮೋಕ್ಷವಿರುತ್ತದೆ, ಇದಕ್ಕೆ ಸಮ್ಯಗ್ದರ್ಶನ-ಜ್ಞಾನ-ಚಾರಿತ್ರಗಳನ್ನು ಕಾರಣವೆಂದು ಹೇಳಿದೆ, ಇವುಗಳ ಪ್ರವೃತ್ತಿಯು ನಾಲ್ಕನೆಯ ಗುಣಸ್ಥಾನದಿಂದ ಸಮ್ಯಕ್ತ್ವವು ಪ್ರಕಟವಾದಮೇಲೆ ಏಕದೇಶವಿರುತ್ತದೆ, ಇಲ್ಲಿಂದ ಹಿಡಿದು ಮುಂದೆ ಹೇಗೆ ಹೇಗೆ ಕರ್ಮದ ಅಭಾವವಾಗುತ್ತದೆ ಹಾಗೆ ಹಾಗೆ ಸಮ್ಯಗ್ದರ್ಶನ ಮೊದಲಾದವುಗಳ ಪ್ರವೃತ್ತಿಯು ವೃದ್ಧಿಸುತ್ತ ಹೋಗುತ್ತದೆ ಮತ್ತು ಹೇಗೆ ಹೇಗೆ ಇವುಗಳ ಪ್ರವೃತ್ತಿಯು ವೃದ್ಧಿಸುತ್ತ ಹೋಗುತ್ತದೆ ಹಾಗೆ ಹಾಗೆ ಕರ್ಮದ ಅಭಾವವಾಗುತ್ತ ಹೋಗುತ್ತದೆ. ಘಾತಿಕರ್ಮಗಳ ಅಭಾವವಾದಾಗ ಹದಿಮೂರನೆಯ ಗುಣಸ್ಥಾನದಲ್ಲಿ ಅರಹಂತರಾಗಿ ಜೀವನ್ಮುಕ್ತರೆನಿಸಿಕೊಳ್ಳುತ್ತಾರೆ ಮತ್ತು ಹದಿನಾಲ್ಕನೆಯ ಗುಣಸ್ಥಾನದ ಕೊನೆಯಲ್ಲಿ ರತ್ನತ್ರಯದ ಪೂರ್ಣತೆಯಾಗುವುದರಿಂದ ಅಘಾತಿ ಕರ್ಮಗಳದ್ದೂ ನಾಶವಾಗಿ ಅಭಾವವಾಗುತ್ತದೆ ಆಗ ಪ್ರತ್ಯಕ್ಷ ಮೋಕ್ಷವಾಗಿ ಸಿದ್ಧರೆಂದು ಕರೆಯಿಸಿಕೊಳ್ಳುತ್ತಾರೆ.

ಈ ಪ್ರಕಾರ ಜಿನಾಗಮದಿಂದ ಮೋಕ್ಷದ ಮತ್ತು ಮೋಕ್ಷದ ಕಾರಣದ ಸ್ವರೂಪವನ್ನು ತಿಳಿದುಕೊಂಡು ಮತ್ತು ಸಮ್ಯಗ್ದರ್ಶನ-ಜ್ಞಾನ-ಚಾರಿತ್ರಗಳನ್ನು ಮೋಕ್ಷದ ಕಾರಣವೆಂದು ಹೇಳಿದ್ದಾರೆ ಇವನ್ನು ನಿಶ್ಚಯ ವ್ಯವಹಾರರೂಪದಿಂದ ಯಥಾರ್ಥವಾಗಿ ತಿಳಿದುಕೊಂಡು ಸೇವನೆ ಮಾಡಬೇಕು. ತಪಸ್ಸುಕೂಡ ಮೋಕ್ಷದ ಕಾರಣವಿದ್ದು ಅದನ್ನೂ ಚಾರಿತ್ರದಲ್ಲಿ ಅಂತರ್ಭೂತಮಾಡಿ ತ್ರಯಾತ್ಮಕವೆಂದೇ ಹೇಳಿದೆ. ಹೀಗೆ ಈ ಕಾರಣಗಳಿಂದ ಮೊದಲಂತೂ ತದ್ಭವಮೋಕ್ಷವೇ ಆಗುತ್ತದೆ. ಕಾರಣದ ಪೂರ್ಣತೆಯಾಗದ ಮೊದಲೇ ಒಮ್ಮೊಮ್ಮೆ ಆಯು ಕರ್ಮದ ಪೂರ್ಣತೆಯಾಗಿ ಹೋದರೆ ಸ್ವರ್ಗದಲ್ಲಿ ದೇವನಾಗುತ್ತಾನೆ, ಅಲ್ಲಿ ಕೂಡ ಇದೇ ಇಚ್ಛೆ ಇರುತ್ತದೆ ಇದು ಶುಭೋಪಯೋಗದ ಅಪರಾಧವಿದೆ ಇಲ್ಲಿಂದ ಚ್ಯುತನಾಗಿ ಮನುಷ್ಯನಾಗುವೆನು, ಆಗ ಸಮ್ಯಗ್ದರ್ಶನಾದಿ ಮೋಕ್ಷ ಮಾರ್ಗದ ಸೇವನೆ ಮಾಡಿ ಮೋಕ್ಷ ಪ್ರಾಪ್ತಮಾಡಿಕೊಳ್ಳುವೆನೆಂಬ ಭಾವನೆಯಿರುತ್ತದೆ ಅದರಿಂದ ಅಲ್ಲಿಂದ ಚ್ಯುತನಾಗಿ ಮೋಕ್ಷ ಪಡೆಯುತ್ತಾನೆ. ['ರತ್ನತ್ರಯರೂಪದ ಧರ್ಮವು ಅದು ನಿರ್ವಾಣದ ಕಾರಣವಿದೆ ಮತ್ತು ಆ ಸಮಯದಲ್ಲಿ ಪುಣ್ಯದ ಆಸ್ರವವಾಗುತ್ತದೆ ಆ ಅಪರಾಧವು ಶುಭೋಪಯೋಗದ್ದಿದೆ' - ಪುರುಷಾರ್ಥ ಸಿದ್ಧ್ಯುಪಾಯ ಶ್ಲೋಕ-೨೨೦]

ಈಗ ಈ ಪಂಚಮ ಕಾಲದಲ್ಲಿ ದ್ರವ್ಯ, ಕ್ಷೇತ್ರ, ಕಾಲ, ಭಾವದ ಸಾಮಗ್ರಿಯ ನಿಮಿತ್ತವಿಲ್ಲದಿರುವುದರಿಂದ ತದ್ಭವ ಮೋಕ್ಷವಿಲ್ಲ, ಆದಾಗ್ಯೂ ಶುದ್ಧತೆಯೊಡನೆ ಆ ರತ್ನತ್ರಯದ ಪಾಲನೆ ಮಾಡಿದರೆ ಇಲ್ಲಿಂದ ದೇವಪರ್ಯಾಯ ಪಡೆದು ನಂತರ ಮನುಷ್ಯನಾಗಿ ಮೋಕ್ಷಪಡೆಯುತ್ತಾನೆ. ಆದುದರಿಂದ ಹೇಗೆ ಸಾಧ್ಯವಿದೆ ಹಾಗೆ ರತ್ನತ್ರಯದ ಪ್ರಾಪ್ತಿಯ ಉಪಾಯ ಮಾಡಬೇಕೆಂಬ ಉಪದೇಶವಿದೆ. ಅದರಲ್ಲೂ ಸಮ್ಯಗ್ದರ್ಶನವು ಮುಖ್ಯವಿದ್ದು ಅದರ ಉಪಾಯವಂತೂ ಅವಶ್ಯವಾಗಿ ಬೇಕು. ಅದಕ್ಕಾಗಿ ಜಿನಾಗಮವನ್ನು ಸರಿಯಾಗಿ ತಿಳಿದುಕೊಂಡು ಸಮ್ಯಕ್ತ್ವದ ಉಪಾಯವನ್ನು ಅವಶ್ಯವಾಗಿ ಮಾಡುವುದು ಯೋಗ್ಯವಿದೆಯೆಂಬುದು ಈ ಗ್ರಂಥದ ಸಂಕ್ಷೇಪವಿದೆಯೆಂದು ತಿಳಿಯಬೇಕು.

ಪ್ರಶ್ನೆ :- ಗ್ರಂಥಗಳಲ್ಲಿ ಅಲ್ಲಲ್ಲಿ ಪಂಚ ಣಮೋಕಾರದ ಮಹಿಮೆಯನ್ನು ಅಧಿಕವಾಗಿ ಹೇಳಿದ್ದಾರೆ, ಮಂಗಲ ಕಾರ್ಯದಲ್ಲಿ ವಿಘ್ನವನ್ನು ದೂರಮಾಡುವ ಸಲುವಾಗಿ ಇದನ್ನೇ ಮುಖ್ಯವಾಗಿ ಹೇಳಿದ್ದಾರೆ ಮತ್ತು ಇದರಲ್ಲಿ ಪಂಚಪರಮೇಷ್ಠಿಗೆ ನಮಸ್ಕಾರವಿದೆ ಅದು ಪಂಚಪರಮೇಷ್ಠಿಯ ಮುಖ್ಯತೆಯಾಯಿತು, ಪಂಚಪರಮೇಷ್ಠಿಗೆ ಪರಮ ಗುರುವೆಂದು ಹೇಳಿರುವಲ್ಲಿ ಇದೇ ಮಂತ್ರದ ಮಹಿಮೆ, ಮಂಗಲರೂಪತೆ ಮತ್ತು ಇದರಿಂದ ವಿಘ್ನದ ನಿವಾರಣೆ, ಪಂಚಪರಮೇಷ್ಠಿಯ ಮುಖ್ಯತೆ, ಗುರುತನ ಮತ್ತು ನಮಸ್ಕಾರ ಮಾಡಲು ಯೋಗ್ಯತೆ ಹೇಗಿದೆ ಅದನ್ನು ಹೇಳಿರಿ ?

ಉತ್ತರ :- ಮೊದಲಂತೂ ಪಂಚಣಮೋಕಾರ ಮಂತ್ರದಲ್ಲಿ ಮೂವತ್ತೈದು ಅಕ್ಷರಗಳಿದ್ದು ಇವು ಮಂತ್ರದ ಬೀಜಾಕ್ಷರಗಳಿವೆ ಮತ್ತು ಇವುಗಳ ಯೋಗವು ಎಲ್ಲ ಮಂತ್ರಗಳಲ್ಲಿ ಮುಖ್ಯವಿದೆ, ಗುರುಪರಂಪರೆಯಿಂದ ಈ ಅಕ್ಷರಗಳ ಶುದ್ಧ ಉಚ್ಚರಣವಿದ್ದರೆ ಹಾಗೂ ಸಾಧನವು ಯಥಾರ್ಥವಿದ್ದಾಗ ಈ ಅಕ್ಷರಗಳು ಕಾರ್ಯದಲ್ಲಿನ ವಿಘ್ನವನ್ನು

ದೂರಮಾಡುವುದರಲ್ಲಿ ಕಾರಣವಿರುವುದರಿಂದ ಮಂಗಲರೂಪವಿವೆ. 'ಮ' ಎಂದರೆ ಪಾಪವನ್ನು ಗಾಳಿಸುವುದನ್ನು ಮಂಗಲವೆಂದು ಹೇಳುತ್ತಾರೆ ಮತ್ತು 'ಮಂಗ' ಎಂದರೆ ಸುಖವನ್ನು ತರುವಂಥದನ್ನು ಕೊಡುವಂಥದನ್ನು ಮಂಗಲವೆಂದು ಹೇಳುತ್ತಾರೆ, ಇದರಿಂದ ಎರಡೂ ಕಾರ್ಯಗಳಾಗುತ್ತವೆ. ಉಚ್ಚರಿಸುವುದರಿಂದ ವಿಘ್ನವು ದೂರವಾಗುತ್ತದೆ ಅರ್ಥದ ವಿಚಾರ ಮಾಡಿದಮೇಲೆ ಸುಖವಾಗುತ್ತದೆ, ಇದರಿಂದಲೇ ಇದನ್ನು ಮಂತ್ರಗಳಲ್ಲಿ ಮುಖ್ಯವೆಂದು ಹೇಳಿದೆ, ಹೀಗಂತೂ ಮಂತ್ರದ ಆಶ್ರಯದ ಮಹಿಮೆಯಿದೆ.

ಇದರಲ್ಲಿ ಪಂಚಪರಮೇಷ್ಠಿಗಳಿಗೆ ನಮಸ್ಕಾರವಿದೆ. ಅರಹಂತ, ಸಿದ್ಧ, ಆಚಾರ್ಯ, ಉಪಾಧ್ಯಾಯ ಮತ್ತು ಸಾಧುಗಳು ಪಂಚಪರಮೇಷ್ಠಿಗಳಿದ್ದಾರೆ. ಇವರ ಸ್ವರೂಪವು ಗ್ರಂಥಗಳಲ್ಲಿ ಪ್ರಸಿದ್ಧವಿದೆ, ಆದರೂ ಇಲ್ಲಿ ಸ್ವಲ್ಪ ಹೇಳುತ್ತೇವೆ. ಈ ಅನಾದಿನಿಧನ ಅಕೃತ್ರಿಮ ಸರ್ವಜ್ಞರ ಪರಂಪರೆಯಿಂದ ಸಿದ್ಧ ಆಗಮದಲ್ಲಿ ಹೇಳಿರುವಂತೆ ಷಡ್‌ದ್ರವ್ಯಸ್ವರೂಪವಾದ ಲೋಕವಿದೆ. ಇದರಲ್ಲಿ ಜೀವದ್ರವ್ಯಗಳು ಅನಂತಾನಂತವಿವೆ ಮತ್ತು ಪುದ್ಗಲದ್ರವ್ಯಗಳು ಅವುಗಳಿಂದ ಅನಂತಾನಂತಗುಣಿತವಿವೆ, ಒಂದೊಂದು ಧರ್ಮ ದ್ರವ್ಯ, ಅಧರ್ಮ ದ್ರವ್ಯ, ಆಕಾಶದ್ರವ್ಯಗಳಿವೆ ಮತ್ತು ಕಾಲದ್ರವ್ಯವು ಅಸಂಖ್ಯಾತದ್ರವ್ಯವಿದೆ, ಜೀವವಂತೂ ದರ್ಶನ ಜ್ಞಾನಮಯ ಚೇತನಾಸ್ವರೂಪವಿದೆ, ಅಜೀವಗಳು ಐದು ಇದ್ದು ಇವು ಚೇತನಾರಹಿತ ಜಡವಿವೆ.ಧರ್ಮ, ಅಧರ್ಮ,ಆಕಾಶ ಮತ್ತು ಕಾಲವೆಂದು ಈ ನಾಲ್ಕು ದ್ರವ್ಯಗಳು ಇದಕ್ಕಿದ್ದಂತೆಯೇ ಇರುತ್ತವೆ ಇವಕ್ಕೆ ವಿಕಾರ ಪರಿಣತಿಯಿಲ್ಲ. ಜೀವ-ಪುದ್ಗಲ ದ್ರವ್ಯಕ್ಕೆ ಪರಸ್ಪರ ನಿಮಿತ್ತ-ನೈಮಿತ್ತಿಕ ಭಾವದಿಂದ ವಿಭಾವ ಪರಿಣತಿಯಿದೆ, ಇವುಗಳಲ್ಲೂ ಪುದ್ಗಲವು ಜಡವಿದೆ, ಇದಕ್ಕೆ ವಿಭಾವ ಪರಿಣತಿಯ ಸುಖ-ದುಃಖದ ಸಂವೇದನವಿಲ್ಲ ಮತ್ತು ಜೀವವು ಚೇತನವಿದ್ದು ಇದಕ್ಕೆ ಸುಖ-ದುಃಖದ ಸಂವೇದನವಿದೆ.

ಜೀವಗಳು ಅನಂತಾನಂತವಿದ್ದು ಅವುಗಳಲ್ಲಿ ಕೆಲವಂತೂ ಸಂಸಾರಿಯಿವೆ,ಕೆಲವು ಸಂಸಾರದಿಂದ ನಿವೃತ್ತವಾಗಿ ಸಿದ್ಧವಾಗಿ ಹೋಗಿವೆ. ಸಂಸಾರಿ ಜೀವಗಳಲ್ಲಿ ಕೆಲವಂತೂ ಅಭವ್ಯವಿವೆ ಹಾಗೂ ಅಭವ್ಯದ ಸಮಾನವಿವೆ, ಇವೆರಡೂ ಜಾತಿಯವು ಸಂಸಾರದಿಂದ ಎಂದೂ ನಿವೃತ್ತವಾಗುವುದಿಲ್ಲ, ಅವಕ್ಕೆ ಸಂಸಾರವು ಅನಾದಿ ನಿಧನವಿದೆ. ಕೆಲವು ಭವ್ಯವಿವೆ ಇವು ಸಂಸಾರದಿಂದ ನಿವೃತ್ತವಾಗಿ ಸಿದ್ಧವಾಗುತ್ತವೆ. ಈ ಪ್ರಕಾರ ಜೀವಗಳ ಅವಸ್ಥೆಯಿದೆ. 'ಈಗ ಇವಕ್ಕೆ ಸಂಸಾರದ ಉತ್ಪತ್ತಿಯು ಹೇಗಿದೆಯೆಂಬುದನ್ನು ಹೇಳುತ್ತಾರೆ.

ಜೀವಗಳಿಗೆ ಜ್ಞಾನಾವರಣ ಮೊದಲಾದ ಎಂಟು ಕರ್ಮಗಳ ಅನಾದಿಬಂಧರೂಪ ಪರ್ಯಾಯಗಳಿದ್ದು, ಆ ಬಂಧದ ಉದಯದ ನಿಮಿತ್ತದಿಂದ ಜೀವವು ರಾಗದ್ವೇಷಮೋಹಾದಿ ವಿಭಾವಪರಿಣತಿರೂಪವಾಗಿ ಪರಿಣಮಿಸುತ್ತದೆ,ಈ ವಿಭಾವಪರಿಣತಿಯ ನಿಮಿತ್ತದಿಂದ ನವೀನ ಕರ್ಮಬಂಧವಾಗುತ್ತದೆ, ಮತ್ತು ಅವುಗಳ ಸಂತತಿ ಪರಂಪರೆಯಿಂದ ಜೀವಕ್ಕೆ ಚತುರ್ಗತಿರೂಪ ಸಂಸಾರದ ಪ್ರವೃತ್ತಿಯಾಗುತ್ತದೆ, ಈ ಸಂಸಾರದಲ್ಲಿ ಚತುರ್ಗತಿಗಳೊಳಗೆ ಅನೇಕ ಪ್ರಕಾರದ ಸುಖ-ದುಃಖದ ರೂಪವಾಗುತ್ತ ಭ್ರಮಣ ಮಾಡುತ್ತದೆ, ಮುಂದೆ ಮುಕ್ತವಾಗುವ ಕಾಲವು ಸಮೀಪಿಸಿದಾಗ ಸರ್ವಜ್ಞರ ಉಪದೇಶದ ನಿಮಿತ್ತಪಡೆದು ತನ್ನ ಸ್ವರೂಪವನ್ನು ಮತ್ತು ಕರ್ಮಬಂಧದ ಸ್ವರೂಪವನ್ನು ತನ್ನೊಳಗಿನ ವಿಭಾವದ ಸ್ವರೂಪವನ್ನು ತಿಳಿದು ಅವುಗಳ ಭೇದಜ್ಞಾನವಾದಾಗ ಪರದ್ರವ್ಯಗಳನ್ನು ಸಂಸಾರದ ನಿಮಿತ್ತವೆಂದು ತಿಳಿದುಕೊಂಡು ಅವುಗಳಿಂದ ವಿರಕ್ತನಾಗುವನು, ತನ್ನ ಸ್ವರೂಪದ ಅನುಭವದ ಸಾಧನೆ ಮಾಡುವನು-ದರ್ಶನ ಜ್ಞಾನರೂಪವಾದ ಸ್ವಭಾವದಲ್ಲಿ ಸ್ಥಿರವಾಗುವ ಸಾಧನೆ ಮಾಡಿದಾಗ ಇವನು ಬಾಹ್ಯಸಾಧನ ಹಿಂಸೆ ಮೊದಲಾದ ಪಂಚಪಾಪಗಳ ತ್ಯಾಗರೂಪದ ನಿರ್ಗ್ರಂಥ ಪದವನ್ನು ಸಮಸ್ತ ಪರಿಗ್ರಹದ ತ್ಯಾಗರೂಪವಾದ ನಿರ್ಗ್ರಂಥ ದಿಗಂಬರ ಮುದ್ರೆಯನ್ನು ಧಾರಣ ಮಾಡುವನು, ಐದು ಮಹಾವ್ರತ, ಐದು ಸಮಿತಿ, ಮೂರು ಗುಪ್ತಿರೂಪವಾಗಿ ಪ್ರವರ್ತಿಸಿದಾಗ ಸಮಸ್ತ ಜೀವಗಳ ಮೇಲೆ ದಯೆ ಮಾಡುವಂಥ ಸಾಧುವೆನಿಸಿಕೊಳ್ಳುತ್ತಾನೆ.

ಇದರಲ್ಲಿ ಮೂರು ಪದಗಳಿವೆ. ಸ್ವಯಂ ಸಾಧುವಾಗಿ ಇತರರಿಗೆ ಸಾಧುಪದದ ದೀಕ್ಷೆ-ಶಿಕ್ಷೆ ಕೊಡುವವನು ಆಚಾರ್ಯನೆನಿಸಿಕೊಳ್ಳುತ್ತಾನೆ, ತಾನು ಸಾಧುವಾಗಿ ಜಿನಸೂತ್ರಗಳನ್ನು ಓದುವವನು-ಓದಿಸುವವನು ಉಪಾಧ್ಯಾಯನೆನಿಸಿಕೊಳ್ಳುತ್ತಾನೆ ಮತ್ತು ತನ್ನ ಸ್ವರೂಪದ ಸಾಧನೆಯಲ್ಲಿರುವವನು ಸಾಧುವೆನಿಸಿಕೊಳ್ಳುತ್ತಾನೆ, ಯಾವನು ಸಾಧುವಾಗಿ ತನ್ನ ಸ್ವರೂಪದ ಸಾಧನೆಯ ಧ್ಯಾನದ ಬಲದಿಂದ ನಾಲ್ಕು ಘಾತಿಕರ್ಮಗಳನ್ನೂ ನಾಶ ಮಾಡಿ ಕೇವಲಜ್ಞಾನ, ಕೇವಲದರ್ಶನ, ಅನಂತಸುಖ ಮತ್ತು ಅನಂತವೀರ್ಯವನ್ನು ಪ್ರಾಪ್ತಮಾಡಿಕೊಳ್ಳುತ್ತಾನೆ ಅವನು ಅರಹಂತನೆನಿಸಿ ಕೊಳ್ಳುತ್ತಾನೆ. ಆಗ ತೀರ್ಥಂಕರ ಹಾಗೂ ಸಾಮಾನ್ಯ ಕೇವಲೀ ಜಿನರು ಇಂದ್ರಾದಿಕರಿಂದ ಪೂಜ್ಯರಾಗುತ್ತಾರೆ, ಇವರ ವಾಣಿ ಹೊರಡುತ್ತದೆ ಅದರಿಂದ ಸಮಸ್ತ ಜೀವಗಳಿಗೆ ಉಪಕಾರವಾಗುತ್ತದೆ, ಅಹಿಂಸಾ ಧರ್ಮದ ಉಪದೇಶವಾಗುತ್ತದೆ, ಎಲ್ಲ ಜೀವಗಳ ರಕ್ಷಣೆ ಮಾಡಿಸುತ್ತಾರೆ ಯಥಾರ್ಥ ಪದಾರ್ಥಗಳ ಸ್ವರೂಪ ತಿಳಿಸಿ ಮೋಕ್ಷಮಾರ್ಗವನ್ನು ತೋರಿಸುತ್ತಾರೆ. ಹೀಗೆ ಅರಹಂತ ಪದವಿರುತ್ತದೆ ಮತ್ತು ಇವರು ನಾಲ್ಕು ಅಘಾತಿ ಕರ್ಮಗಳನ್ನು ನಾಶಮಾಡಿ ಎಲ್ಲ ಕರ್ಮಗಳಿಂದ ರಹಿತರಾಗಿ ಹೋಗುತ್ತಾರೆ, ಆಗ ಅವರನ್ನು ಸಿದ್ಧರೆಂದು ಕರೆಯಲಾಗುತ್ತದೆ.

ಹೀಗೆ ಇವು ಪಂಚಪದಗಳಿದ್ದು ಇವರು ಉಳಿದ ಎಲ್ಲ ಜೀವಗಳಿಂದ ಮಹಾನರಿರುವುದರಿಂದ ಪಂಚ ಪರಮೇಷ್ಠಿಗಳೆನಿಸಿಕೊಳ್ಳುತ್ತಾರೆ. ಇವರ ನಾಮ ಹಾಗೂ ಸ್ವರೂಪದ ದರ್ಶನ, ಸ್ಮರಣ, ಧ್ಯಾನ, ಪೂಜನ, ನಮಸ್ಕಾರದಿಂದ ಇತರ ಜೀವರುಗಳಿಗೆ ಶುಭಪರಿಣಾಮಗಳಾಗುವುದರಿಂದ ಪಾಪದ ನಾಶವಾಗುತ್ತದೆ, ವರ್ತಮಾನ ವಿಘ್ನದ ವಿಲಯವಾಗುತ್ತದೆ, ಭವಿಷ್ಯ ಪುಣ್ಯದ ಬಂಧವಾಗುವುದರಿಂದ ಸ್ವರ್ಗ ಮೊದಲಾದ ಶುಭಗತಿಗಳನ್ನು ಪಡೆಯುತ್ತಾರೆ. ಇವರುಗಳ ಆಜ್ಞಾನುಸಾರವಾಗಿ ಪ್ರವರ್ತಿಸುವುದರಿಂದ ಪರಂಪರೆಯಿಂದ ಸಂಸಾರದಿಂದ ನಿವೃತ್ತಿಯೂ ಆಗುವುದರಿಂದ ಈ ಪಂಚಪರಮೇಷ್ಠಿಗಳು ಎಲ್ಲ ಜೀವರುಗಳಿಗೆ ಉಪಕಾರಿಯಾದ ಪರಮಗುರುಗಳಿದ್ದಾರೆ, ಸಮಸ್ತ ಸಂಸಾರಿ ಜೀವರುಗಳಿಂದ ಪೂಜ್ಯರಿದ್ದಾರೆ ಅವರನ್ನು ಹೊರತುಪಡಿಸಿ ಉಳಿದ ಸಂಸಾರಿ ಜೀವರುಗಳು ರಾಗ-ದ್ವೇಷ-ಮೋಹ ಮೊದಲಾದ ವಿಕಾರಗಳಿಂದ ಮಲಿನರಿದ್ದಾರೆ, ಅವರು ಪೂಜ್ಯರಿಲ್ಲ, ಅವರಿಗೆ ಮಹಾನತೆ, ಗುರುತನ, ಪೂಜ್ಯತೆಗಳಿಲ್ಲ, ಸ್ವಯಂ ಕರ್ಮಗಳ ವಶದಿಂದ ಮಲಿನರಿರುವವರು ಅನ್ಯರ ಪಾಪವನ್ನು ಹೇಗೆ ಕತ್ತರಿಸುವರು ?

ಹೀಗೆ ಜಿನಾಗಮದಲ್ಲಿ ಈ ಪಂಚಪರಮೇಷ್ಠಿಗಳ ಮಹಾನತೆಯು ಪ್ರಸಿದ್ಧವಿದೆ ಮತ್ತು ನ್ಯಾಯದ ಬಲದಿಂದ ಕೂಡ ಹೀಗೆ ಸಿದ್ಧವಾಗುತ್ತದೆ, ಏಕೆಂದರೆ ಸಂಸಾರದ ಭ್ರಮಣದಿಂದ ರಹಿತರಾಗಿರುವವರೇ ಅನ್ಯರ ಸಂಸಾರದ ಭ್ರಮಣವನ್ನು ನಾಶಮಾಡುವುದಕ್ಕೆ ಕಾರಣರಾಗುತ್ತಾರೆ. ಧನಾದಿವಸ್ತುಗಳಿದ್ದವನೇ ಅನ್ಯರಿಗೆ ಧನಾದಿಗಳನ್ನು ಕೊಡುವನು ಮತ್ತು ತಾನೇ ದರಿದ್ರನಿದ್ದವನು ಅನ್ಯರ ದರಿದ್ರತೆಯನ್ನು ಹೇಗೆ ದೂರ ಮಾಡುವನೆಂದು ತಿಳಿಯಬೇಕು. ಯಾರಿಗೆ ಸಂಸಾರದ ದುಃಖವನ್ನು ದೂರಮಾಡುವುದಿದೆ ಮತ್ತು ಸಂಸಾರ ಭ್ರಮಣದ ದುಃಖರೂಪವಾದ ಜನ್ಮ-ಮರಣಗಳಿಂದ ರಹಿತವಾಗುವುದಿದೆ ಅವರು ಅರಹಂತ ಮೊದಲಾದ ಪಂಚಪರಮೇಷ್ಠಿಗಳ ನಾಮ ಮಂತ್ರದ ಜಪಮಾಡಬೇಕು, ಅವರ ಸ್ವರೂಪದ ದರ್ಶನ, ಸ್ಮರಣ, ಧ್ಯಾನಮಾಡಬೇಕು. ಇದರಿಂದ ಶುಭ ಪರಿಣಾಮಗಳಾಗಿ ಪಾಪದ ನಾಶವಾಗುತ್ತದೆ. ಎಲ್ಲ ವಿಘ್ನಗಳು ದೂರವಾಗುತ್ತವೆ, ಪರಂಪರೆಯಿಂದ ಸಂಸಾರದ ಭ್ರಮಣವು ಪರಿಹಾರವಾಗುತ್ತದೆ, ಕರ್ಮಗಳ ನಾಶವಾಗಿ ಮುಕ್ತಿಯ ಪ್ರಾಪ್ತಿಯಾಗುತ್ತದೆಯೆಂದು ಜಿನಮತದ ಉಪದೇಶವಿದೆ ; ಆದುದರಿಂದ ಭವ್ಯ ಜೀವರುಗಳಿಗೆ ಅಂಗೀಕಾರ ಮಾಡಲು ಯೋಗ್ಯವಾಗಿದೆ.

ಪ್ರಶ್ನೆ ಃ- ಅನ್ಯಮತದಲ್ಲಿ ಬ್ರಹ್ಮ, ವಿಷ್ಣು, ಶಿವ ಮೊದಲಾದವರನ್ನು ಇಷ್ಟದೇವರೆಂದು ಮನ್ನಿಸುತ್ತಾರೆ ಅವರ ವಿಘ್ನಗಳೂ ದೂರವಾಗುತ್ತಿರುವುದು ಕಂಡಬರುತ್ತದೆ ಮತ್ತು ಅವರ ಮತದಲ್ಲಿ ರಾಜ ಮೊದಲಾದ ದೊಡ್ಡ ದೊಡ್ಡ ಪುರುಷರು ಕಂಡುಬರುತ್ತಾರೆ ಅವರ ವಿಘ್ನಗಳನ್ನು ಅವರು ದೂರಮಾಡುತ್ತಾರೆ ಹಾಗೆಯೇ ನಿಮ್ಮದೂ ಹೇಳುತ್ತಿರುವಿರಿ, ಆದರೆ ಆ ಪಂಚಪರಮೇಷ್ಠಿಗಳೇ ಮುಖ್ಯರಿದ್ದಾರೆ ಅನ್ಯರಿಲ್ಲವೆಂದೇಕೆ ಹೇಳುತ್ತಿರುವಿರಿ ?

ಉತ್ತರ :– ಎಲೈ ಸೋದರನೇ ! ಜೀವರುಗಳ ದುಃಖವಂತೂ ಸಂಸಾರಭ್ರಮಣದ್ದಿದೆ ಮತ್ತು ಸಂಸಾರ ಭ್ರಮಣದ ಕಾರಣವು ರಾಗ ದ್ವೇಷ ಮೋಹಾದಿ ಪರಿಣಾಮಗಳಿವೆ ಅಲ್ಲದೆ ರಾಗಾದಿಗಳು ವರ್ತಮಾನದಲ್ಲಿ ಆಕುಲತಾಮಯ ದುಃಖರೂಪವಿರುವುದರಿಂದ ಆ ಬ್ರಹ್ಮ ಮೊದಲಾದವರು ಇಷ್ಟದೇವರೆಂದು ಹೇಳಿರುವಿರಿ ಅವರಂತೂ ರಾಗಾದಿಗಳಿಂದ ಮತ್ತು ಕಾಮ–ಕ್ರೋಧಾದಿಗಳಿಂದ ಯುಕ್ತರಿದ್ದಾರೆ, ಅಜ್ಞಾನ ತಪಸ್ಸಿನ ಫಲದಿಂದ ಅದೆಷ್ಟೋ ಜೀವರುಗಳು ಲೋಕದಲ್ಲಿ ಚಮತ್ಕಾರದೊಡನೆ ರಾಜ ಮೊದಲಾದ ದೊಡ್ಡ ಪದಗಳನ್ನು ಪಡೆಯುತ್ತಾರೆ, ಅವರನ್ನು ಜನರು ದೊಡ್ಡವರೆಂದು ಮನ್ನಿಸಿ ಬ್ರಹ್ಮಾದಿಗಳನ್ನು ಭಗವಂತರೆಂದು ಹೇಳಲಾರಂಭಿಸುತ್ತಾರೆ ಮತ್ತು ಈ ಪರಮೇಶ್ವರನು ಬ್ರಹ್ಮನ ಅವತಾರವೆಂದು ಮನ್ನಿಸುವುದರಿಂದೇನು ಮೋಕ್ಷಮಾರ್ಗಿ ಹಾಗೂ ಮೋಕ್ಷದ ರೂಪನಾಗುವುದಿಲ್ಲ, ಸಂಸಾರಿಯಾಗಿಯೇ ಉಳಿಯುತ್ತಾನೆ.

ಇದೇ ರೀತಿ ಸಮಸ್ತ ಪದವುಳ್ಳ ಅನ್ಯದೇವರನ್ನು ತಿಳಿಯುವುದು. ಅವರು ತಾವೇ ರಾಗಾದಿಗಳಿಂದ ದುಃಖ ರೂಪರಿದ್ದಾರೆ, ಜನ್ಮ–ಮರಣ ಸಹಿತರಿದ್ದಾರೆ, ಅವರು ಇತರರ ಸಂಸಾರದ ದುಃಖವನ್ನು ಹೇಗೆ ನಾಶಮಾಡುವರು ? ಅವರ ಮತದಲ್ಲಿ ವಿಘ್ನದ ನಾಶಮಾಡುವುದು ಮತ್ತು ರಾಜಾದಿ ಮಹಾಪುರುಷರಿರುವುದನ್ನು ಹೇಳುತ್ತಾರೆ, ಅಲ್ಲಿ ಆ ಜೀವಗಳಿಗೆ ಮೊದಲು ಒಂದಿಷ್ಟು ಶುಭಕರ್ಮ ಬಂಧಿಸಿರುವುದರ ಫಲವಿದೆ. ಪೂರ್ವಜನ್ಮದಲ್ಲಿ ಸ್ವಲ್ಪ ಶುಭ ಪರಿಣಾಮ ಮಾಡಿರುವುದರಿಂದ ಪುಣ್ಯಕರ್ಮ ಬಂಧಿಸಿತ್ತು, ಅದರ ಉದಯದಿಂದ ಒಂದಿಷ್ಟು ವಿಘ್ನಗಳು ದೂರವಾಗುತ್ತವೆ ಮತ್ತು ರಾಜ ಮೊದಲಾದ ಪದಗಳನ್ನು ಪಡೆಯುತ್ತಾರೆ, ಇದು ಮೊದಲು ಸ್ವಲ್ಪ ಅಜ್ಞಾನ ತಪಸ್ಸು ಮಾಡಿದುದರ ಫಲವಿದೆ, ಇದಂತೂ ಪುಣ್ಯಪಾಪರೂಪದ ಸಂಸಾರದ ಚೇಷ್ಟೆಯಿದೆ, ಇದರಲ್ಲೇನು ದೊಡ್ಡಸ್ತಿಕೆಯಿಲ್ಲ, ದೊಡ್ಡಸ್ತಿಕೆಯಂತೂ ಯಾವುದರಿಂದ ಸಂಸಾರದ ಭ್ರಮಣವು ದೂರವಾಗುವುದು ಅದರಲ್ಲಿದೆ. ಅದು ವೀತರಾಗ ವಿಜ್ಞಾನದ ಭಾವಗಳಿಂದಲೇ ದೂರವಾಗುವುದು, ಈ ವೀತರಾಗವಿಜ್ಞಾನಭಾವಯುಕ್ತರಾಗಿ ಪಂಚಪರಮೇಷ್ಠಿಗಳಿದ್ದಾರೆ, ಇವರೇ ಸಂಸಾರ ಭ್ರಮಣದ ದುಃಖವನ್ನು ನಾಶಮಾಡುವಲ್ಲಿ ಕಾರಣರಿದ್ದಾರೆ.

ವರ್ತಮಾನದಲ್ಲಿ ಒಂದಿಷ್ಟು ಮೊದಲಿನ ಶುಭಕರ್ಮದ ಉದಯದಿಂದ ಪುಣ್ಯದ ಚಮತ್ಕಾರವನ್ನು ನೋಡಿ ಮತ್ತು ಪಾಪದ ದುಃಖವನ್ನು ನೋಡಿ ಭ್ರಾಂತಿವಶರಾಗಬಾರದು, ಪುಣ್ಯ ಪಾಪಗಳೆರಡೂ ಸಂಸಾರವಿದ್ದು ಇವುಗಳಿಂದ ರಹಿತವಾದುದು ಮೋಕ್ಷವಿದೆ. ಆದುದರಿಂದ ಸಂಸಾರದಿಂದ ಬಿಡುಗಡೆ ಹೊಂದಿ ಮೋಕ್ಷವಾಗುವಂಥ ಉಪಾಯವನ್ನು ಮಾಡಬೇಕು. ವರ್ತಮಾನದಲ್ಲಿನ ವಿಘ್ನಗಳು ಕೂಡ ಹೇಗೆ ಪಂಚಪರಮೇಷ್ಠಿಗಳ ನಾಮ, ಮಂತ್ರ,ದರ್ಶನ, ಸ್ಮರಣಗಳಿಂದ ದೂರವಾಗುವವು ಹಾಗೆ ಅನ್ಯರ ನಾಮಾದಿಗಳಿಂದ ದೂರವಾಗುವುದಿಲ್ಲ. ಏಕೆಂದರೆ ಈ ಪಂಚಪರಮೇಷ್ಠಿಗಳೇ ಶಾಂತರೂಪರಿದ್ದಾರೆ ಕೇವಲ ಶುಭ ಪರಿಣಾಮಗಳ ಕಾರಣರೇ ಇದ್ದಾರೆ. ಇತರ ಇಷ್ಟರ ರೂಪಗಳಂತೂ ರೌದ್ರರೂಪಗಳಿದ್ದು ಇವರ ದರ್ಶನ ಸ್ಮರಣಗಳು ರಾಗಾದಿಗಳಿಗೆ ಹಾಗೂ ಭಯಾದಿಗಳಿಗೆ ಕಾರಣವಿವೆ, ಇವರಿಂದ ಶುಭ ಪರಿಣಾಮ–ಗಳಾಗುತ್ತಿರುವುದು ಕಂಡು ಬರುವುದಿಲ್ಲ. ಯಾರಿಗಾದರೂ ಎಂದಾದರೊಮ್ಮೆ ಒಂದಿಷ್ಟು ಧರ್ಮಾನುರಾಗದ ವಶದಿಂದ ಶುಭ ಪರಿಣಾಮಗಳಾದರೂ ಅವನ್ನು ಅವರಿಂದ ಆದುವೆಂದು ಹೇಳುವುದಿಲ್ಲ, ಆ ಪ್ರಾಣಿಗೆ ಸ್ವಾಭಾವಿಕವಾದ ಧರ್ಮಾನುರಾಗದ ವಶದಿಂದ ಆಗುತ್ತವೆ. ಆದುದರಿಂದ ಅತಿಶಯವುಳ್ಳ ಶುಭಪರಿಣಾಮದ ಕಾರಣವಂತೂ ಶಾಂತರೂಪ ಪಂಚಪರಮೇಷ್ಠಿಗಳ ರೂಪವಿದೆ. ಅದಕ್ಕಾಗಿ ಇವರದೇ ಆರಾಧನೆ ಮಾಡಬೇಕು, ವ್ಯರ್ಥವಾಗಿ ಸುಳ್ಳು ಯುಕ್ತಿಗಳನ್ನು ಕೇಳಿ ಭ್ರಾಂತಿಯಲ್ಲಿ ಬೀಳಬಾರದೆಂದು ತಿಳಿದುಕೊಳ್ಳಬೇಕು.

ಈ ಪ್ರಕಾರ ಭ. ಕುಂದಕುಂದಾಚಾರ್ಯದೇವವಿರಚಿತ ಅಷ್ಟಪಾಹುಡದಲ್ಲಿ ಆರನೆಯ ಮೋಕ್ಷಪಾಹುಡ
ಮತ್ತು ಅದರ ಜಯಚಂದ ಛಾಬಡಾಕೃತ ದೇಶಭಾಷಾಮಯ ವಚನಿಕೆಯ
ಕನ್ನಡ ಭಾಷಾನುವಾದವು ಸಮಾಪ್ತವಾಯಿತು.

೭

# ಲಿಂಗಪಾಹುಡ

ಜಿನಮುದ್ರೆ ಧರಿಸಿದ ಮುನಿ ಧ್ಯಾನಿಸಿ ನಿಜಸ್ವರೂಪವನು ।
ಕರ್ಮಕಿಡಿಸಿ ಶಿವಸುಖ ಪಡೆದವರ ಪಾದಕೆರಗುವೆನು ॥

ಈ ಪ್ರಕಾರ ಮಂಗಲದ ಸಲುವಾಗಿ ಯಾವ ಮುನಿಗಳು ಶಿವಸುಖವನ್ನು ಪ್ರಾಪ್ತಮಾಡಿಕೊಂಡಿದ್ದಾರೆ ಅವರಿಗೆ ನಮಸ್ಕಾರಮಾಡಿ ಭ.ಕುಂದಕುಂದಾಚಾರ್ಯದೇವ ಕೃತ ಪ್ರಾಕೃತಗಾಥಾಬಂಧ ಲಿಂಗಪಾಹುಡನಾಮದ ಗ್ರಂಥದ ದೇಶಭಾಷಾಮಯ ವಚನಿಕೆಯ ಅನುವಾದ ಬರೆಯಲಾಗುತ್ತದೆ. ಮೊದಲು ಆಚಾರ್ಯದೇವರು ಮಂಗಲದ ಸಲುವಾಗಿ ಇಷ್ಟರಿಗೆ ನಮಸ್ಕಾರಮಾಡಿ ಗ್ರಂಥ ರಚನೆಯ ಪ್ರತಿಜ್ಞೆ ಮಾಡುತ್ತಾರೆ, –

ಕಾಊಣ ಣಮೋಕಾರಂ ಅರಹಂತಾಣಂ ತಹೇವ ಸಿದ್ಧಾಣಂ ।
ವೋಚ್ಛಾಮಿ ಸಮಣಲಿಂಗಂ ಪಾಹುಡಸತ್ಥಂ ಸಮಾಸೇಣ ॥೧॥

ಕೃತ್ವಾ ನಮಸ್ಕಾರಂ ಅರ್ಹತಾಂ ತಥೈವ ಸಿದ್ಧಾನಾಮ್ ।
ವಕ್ಷ್ಯಾಮಿ ಶ್ರಮಣಲಿಂಗಂ ಪ್ರಾಭೃತಶಾಸ್ತ್ರಂ ಸಮಾಸೇನ ॥೧॥

ಅರ್ಥ ಃ– ನಾನು ಅರಹಂತರಿಗೆ ನಮಸ್ಕಾರಮಾಡಿ ಮತ್ತು ಅದೇ ಪ್ರಕಾರ ಸಿದ್ಧರಿಗೆ ನಮಸ್ಕಾರ ಮಾಡಿ, ಶ್ರಮಣಲಿಂಗದ ನಿರೂಪಣೆಯನ್ನೊಳಗೊಂಡ ಈ ಪಾಹುಡಶಾಸ್ತ್ರವನ್ನು ಹೇಳುತ್ತೇನೆಂದು ಆಚಾರ್ಯ ಭಗವಂತರು ಹೇಳುತ್ತಾರೆ.

ಭಾವಾರ್ಥ ಃ– ಜಿನದೇವರು ಹೇಳಿರುವ ಮುನಿಲಿಂಗದೊಳಗೆ ಈ ಕಾಲದಲ್ಲಿ ವ್ಯತ್ಯಾಸವಾಗಿದೆ ಅದರ ನಿಷೇಧ ಮಾಡುವ ಸಲುವಾಗಿ ಈ ಲಿಂಗನಿರೂಪಣ ಶಾಸ್ತ್ರವನ್ನು ಆಚಾರ್ಯದೇವರು ರಚಿಸಿದ್ದಾರೆ. ಇದರ ಪ್ರಾರಂಭದಲ್ಲಿ ಘಾತಿಕರ್ಮಗಳನ್ನು ನಾಶಮಾಡಿ ಅನಂತ ಚತುಷ್ಟಯ ಪ್ರಾಪ್ತಮಾಡಿಕೊಂಡ ಅರಹಂತರುಗಳು ಯಥಾರ್ಥರೂಪದಿಂದ ಶ್ರಮಣದ ಮಾರ್ಗ ಪ್ರವರ್ತಿಸಿದರು ಮತ್ತು ಆ ಲಿಂಗವನ್ನು ಸಾಧಿಸಿ ಸಿದ್ಧರಾದರು. ಈ ಪ್ರಕಾರ ಅರಹಂತ ಸಿದ್ಧರಿಗೆ ನಮಸ್ಕಾರಮಾಡಿ ಗ್ರಂಥ ರಚಿಸುವ ಪ್ರತಿಜ್ಞೆ ಮಾಡಿದ್ದಾರೆ. ॥೧॥

---

ಶಿರಬಾಗಿ ನಮಸ್ಕಾರ ಮಾಡಿ ಅರಹಂತರಿಗೆ ಅದರಂತೆ ಸಿದ್ಧರಿಗೆ ।
ನಿರೂಪಿಸುವೆನಾನೀ ಶ್ರಮಣಲಿಂಗ ಪಾಹುಡಶಾಸ್ತ್ರವನು ಸಂಕ್ಷೇಪದಿಂದ ॥೧॥

ಆ ಲಿಂಗವು ಬಾಹ್ಯವೇಷವು ಅದು ಅಂತರಂಗಧರ್ಮಸಹಿತ ಕಾರ್ಯಕಾರಿಯಿದೆಯೆಂದು ಈಗ ಹೇಳುತ್ತಾರೆ,-

ಧಮ್ಮೇಣ ಹೋಇ ಲಿಂಗಂ ಣ ಲಿಂಗಮತ್ತೇಣ ಧಮ್ಮಸಂಪತ್ತೀ ।
ಜಾಣೇಹಿ ಭಾವಧಮ್ಮಂ ಕಿಂ ತೇ ಲಿಂಗೇಣ ಕಾಯವ್ವೋ ॥೨॥

ಧರ್ಮೇಣ ಭವತಿ ಲಿಂಗಂ ನ ಲಿಂಗಮಾತ್ರೇಣ ಧರ್ಮಸಂಪ್ರಾಪ್ತಿಃ ।
ಜಾನೀಹಿ ಭಾವಧರ್ಮಂ ಕಿಂ ತೇ ಲಿಂಗೇನ ಕರ್ತವ್ಯಮ್ ॥೨॥

ಅರ್ಥ :- ಲಿಂಗವಂತೂ ಧರ್ಮಸಹಿತವಿರುತ್ತದೆ, ಆದರೆ ಲಿಂಗಮಾತ್ರದಿಂದ ಧರ್ಮದ ಪ್ರಾಪ್ತಿಯಾಗುವುದಿಲ್ಲ, ಆದುದರಿಂದ ಎಲೈ ಭವ್ಯಜೀವನೇ ! ನೀನು ಭಾವರೂಪವಾದ ಧರ್ಮವನ್ನು ತಿಳಿ ಮತ್ತು ಕೇವಲ ಲಿಂಗದಿಂದ ನಿನ್ನದು ಯಾವ ಕಾರ್ಯವಾಗುತ್ತದೆ ಎಂದರೆ ಯಾವುದೂ ಆಗುವುದಿಲ್ಲ.

ಭಾವಾರ್ಥ :- ಲಿಂಗವೆಂದು ಚಿಹ್ನದ ಹೆಸರು ಇದೆ, ಆ ಬಾಹ್ಯವೇಷಧಾರಣ ಮಾಡುವುದು ಮುನಿಯ ಚಿಹ್ನವಿದೆ. ಇಂಥ ಚಿಹ್ನವು ಒಂದು ವೇಳೆ ಅಂತರಗಂದಲ್ಲಿ ವೀತರಾಗ ಸ್ವರೂಪ ಧರ್ಮವಿದ್ದರೆ ಅದರಸಹಿತವಾದ ಈ ಚಿಹ್ನವು ಸತ್ಯಾರ್ಥವಾಗುತ್ತದೆ ಮತ್ತು ಈ ವೀತರಾಗಸ್ವರೂಪ ಆತ್ಮನ ಧರ್ಮವಿಲ್ಲದೆ ಆ ಲಿಂಗವು ಬಾಹ್ಯವೇಷ ಮಾತ್ರದಿಂದ ಧರ್ಮದ ಸಂಪತ್ತಿ-ಸಮ್ಯಕ್ ಪ್ರಾಪ್ತಿಯಿಲ್ಲ. ಆದುದರಿಂದ ಅಂತರಂಗ ಭಾವಧರ್ಮ ರಾಗದ್ವೇಷಗಳಿಲ್ಲದ ಆತ್ಮನ ಶುದ್ಧ ಜ್ಞಾನದರ್ಶನರೂಪದ ಸ್ವಭಾವವು ಧರ್ಮವಿದೆಯೆಂದು ಉಪದೇಶ ಕೊಟ್ಟಿದೆ, ಎಲೈ ಭವ್ಯನೇ ! ನೀನು ಅದನ್ನು ತಿಳಿ, ಆ ಬಾಹ್ಯಲಿಂಗ ವೇಷಮಾತ್ರದಿಂದೇನು ಕೆಲಸವಿದೆ ? ಏನೂ ಇಲ್ಲ. ಜಿನಮತದಲ್ಲಿ ಒಂದು ಮುನಿಯ ಯಥಾಜಾತ ದಿಗಂಬರಲಿಂಗ, ಇನ್ನೊಂದು ಉತ್ಕೃಷ್ಟ ಶ್ರಾವಕನದು, ಮತ್ತೊಂದು ಆರ್ಯಿಕೆಯದು ಹೀಗೆ ಮೂರು ಲಿಂಗಗಳನ್ನು ಹೇಳಿದ್ದಾರೆಂದು ತಿಳಿಯಬೇಕು. ಈ ಮೂರೂ ಲಿಂಗಗಳನ್ನು ಧಾರಣ ಮಾಡಿ ಭ್ರಷ್ಟರಾಗಿ ಕುಕ್ರಿಯೆ ಮಾಡುವವರ ನಿಷೇಧವಿದೆ. ಅನ್ಯಮತದ ಅದೆಷ್ಟೋ ವೇಷಗಳದ್ದು ಅವನ್ನು ಧಾರಣ ಮಾಡಿ ಯಾರು ಕುಕ್ರಿಯೆ ಮಾಡುತ್ತಾರೆ ಅವರೂ ನಿಂದೆಗೆ ಗುರಿಯಾಗುತ್ತಾರೆ. ಆದುದರಿಂದ ವೇಷವನ್ನು ಧಾರಣ ಮಾಡಿ ಕುಕ್ರಿಯೆಗಳನ್ನು ಮಾಡಬಾರದೆಂದು ತಿಳಿಸಿ ಕೊಡಲಾಗಿದೆ. ॥೨॥

ಯಾರು ಜಿನಲಿಂಗ ನಿರ್ಗ್ರಂಥ ದಿಗಂಬರರೂಪವನ್ನು ಗ್ರಹಣ ಮಾಡಿ, ಕುಕ್ರಿಯೆಗಳನ್ನು ಮಾಡಿ ಪರಿಹಾಸಕ್ಕೊಳಗಾಗುತ್ತಾರೆ ಆ ಜೀವರುಗಳು ಪಾಪಬುದ್ಧಿಯವರಿದ್ದಾರೆಂಬುದನ್ನು ಈಗ ಹೇಳುತ್ತಾರೆ, -

ಜೋ ಪಾವಮೋಹಿದಮದೀ ಲಿಂಗಂ ಘೇತ್ತೂಣ ಜಿಣವರಿಂದಾಣಂ ।
ಉವಹಸದಿ ಲಿಂಗಿಭಾವಂ [೧]ಲಿಂಗಿಮ್ಮಿಯ ಣಾರದೋ ಲಿಂಗೀ ॥೩॥

---

ಧರ್ಮದಿಂ ಲಿಂಗವಾಗುವುದು ಲಿಂಗಮಾತ್ರದಿಂ ಧರ್ಮದ ಪ್ರಾಪ್ತಿಯಾಗಲಾರದು ।
ಧರ್ಮವನ್ನು ಭಾವರೂಪೆಂದು ತಿಳಿ ಲಿಂಗದಿಂದೇನು ನಿನ್ನ ಕಾರ್ಯವಾಗುವುದು ॥೨॥

ಪಾಪಮೋಹಿತಮತಿಯು ಜಿನವರಲಿಂಗವನು ಧರಿಸಿ ಲಿಂಗಿತ್ವವನು ।
ಉಪಹಸಿತ ಮಾಡುವನು ವಿಘಾತಿಸುವನವ ಲಿಂಗಿಗಳ ಲಿಂಗವನು ॥೩॥

---

೧ 'ಲಿಂಗಿಮ್ಮಿಯ ಣಾರದೋ ಲಿಂಗಿ' ಯ ಸ್ಥಾನದಲ್ಲಿ 'ಲಿಂಗಣಾಸೇದಿ ಲಿಂಗೀಣ'ವೆಂಬ ಪಾಠಾಂತರವಿದೆ.

ಯಃ ಪಾಪಮೋಹಿತಮತಿಃ ಲಿಂಗಂ ಗೃಹೀತ್ವಾ ಜಿನವರೇಂದ್ರಾಣಾಮ್ ।
ಉಪಹಸತಿ ಲಿಂಗಿಭಾವಂ ಲಿಂಗಿಷು ನಾರದಃ ಲಿಂಗೀ ॥೩॥

ಅರ್ಥ :- ಯಾವನು ಜಿನವರೇಂದ್ರ ಎಂದರೆ ತೀರ್ಥಂಕರದೇವರ ಲಿಂಗ ನಗ್ನ ದಿಗಂಬರರೂಪವನ್ನು ಗ್ರಹಣ ಮಾಡಿ ಲಿಂಗೀತನದ ಭಾವವನ್ನು ಪರಿಹಾಸಮಾತ್ರವೆಂದು ತಿಳಿಯುತ್ತಾನೆ ಆ ಲಿಂಗಿಯ ಎಂದರೆ ವೇಷಧಾರಿಯ ಬುದ್ಧಿಯು ಪಾಪದಿಂದ ಮೋಹಿತವಿದೆ ಅವನು ನಾರದನಂತಿದ್ದಾನೆ ಅಥವಾ ಈ ಗಾಥೆಯಲ್ಲಿ ನಾಲ್ಕನೆಯ ಪಾದದ ಪಾಠಾಂತರವು 'ಲಿಂಗ ಣಾಸೇದಿ ಲಿಂಗೀಣಂ' ಎಂದಿದ್ದು ಇದರ ಅರ್ಥವು ಈ ಲಿಂಗಿಯು ಅನ್ಯ ಕೆಲವು ಲಿಂಗಧಾರಕರಿದ್ದಾರೆ ಅವರ ಲಿಂಗವನ್ನು ನಷ್ಟಮಾಡುತ್ತಾನೆ, ಲಿಂಗಿಗಳೆಲ್ಲರೂ ಹೀಗೆಯೇ ಇದ್ದಾರೆಂದು ತಿಳಿಸಿ ಕೊಡುತ್ತಾನೆ.

ಭಾವಾರ್ಥ :- ಲಿಂಗಧಾರಿಯಾಗಿ ಕೂಡ ಪಾಪಬುದ್ಧಿಯಿಂದ ಒಂದಿಷ್ಟು ಕುಕ್ರಿಯೆ ಮಾಡಿದರೆ ಅವನು ಲಿಂಗೀತನವನ್ನು ಹಾಸ್ಯಮಾತ್ರವಾಗಿ ತಿಳಿದಿದ್ದಾನೆ, ಯಾವ ಕಾರ್ಯಕಾರಿಯಾಗಿ ತಿಳಿದಿಲ್ಲ ಲಿಂಗೀತನವಂತೂ ಭಾವಶುದ್ಧಿಯಿಂದ ಶೋಭೆ ಪಡೆಯುತ್ತದೆ. ಭಾವವು ಕೆಟ್ಟುಹೋಗಿ ಬಾಹ್ಯ ಕುಕ್ರಿಯೆಗಳನ್ನು ಮಾಡತೊಡಗಿದಾಗ ಅವನು ಆ ಲಿಂಗವನ್ನು ನಾಚಿಸುವನು ಮತ್ತು ಅನ್ಯಲಿಂಗಗಳ ಲಿಂಗಕ್ಕೂ ಕಲಂಕ ತಗಲಿಸುವನು. ಲಿಂಗಿಗಳು ಹೀಗೆಯೇ ಇರುತ್ತಾರೆಂದು ಜನರು ಹೇಳಲಾರಂಭಿಸುವರು ಅಥವಾ ನಾರದನಂಥ ವೇಷದಲ್ಲಿ ಅವನು ತನ್ನ ಇಚ್ಛಾನುಸಾರ ಪ್ರವರ್ತಿಸುವಂತೆಯೇ ಇವನೂ ಆಗುವುದರಿಂದ ಜಿನೇಂದ್ರರ ವೇಷವನ್ನು ಪರಿಹಾಸ ಮಾಡುವುದು ಯೋಗ್ಯವಲ್ಲವೆಂದು ಆಚಾರ್ಯರು ಹೇಳಿದ್ದಾರೆ. ॥೩॥

ಈಗ ಲಿಂಗಧಾರಣಮಾಡಿ ಕುಕ್ರಿಯೆ ಮಾಡುವವನನ್ನು ಪ್ರಕಟ ಪಡಿಸುತ್ತಾರೆ, -

ಣಚ್ಚದಿ ಗಾಯದಿ ತಾವಂ ವಾಯಂ ವಾಏದಿ ಲಿಂಗರೂವೇಣ ।
ಸೋ ಪಾವಮೋಹಿದಮದೀ ತಿರಕ್ಖಜೋಣೀ ಣ ಸೋ ಸಮಣೋ ॥೪॥

ನೃತ್ಯತಿ ಗಾಯತಿ ತಾವತ್ ವಾದ್ಯಂ ವಾದಯತಿ ಲಿಂಗರೂಪೇಣ ।
ಸಃ ಪಾಪಮೋಹಿತಮತಿಃ ತಿರ್ಯಗ್ಯೋನಿಃ ನ ಸಃ ಶ್ರಮಣಃ ॥೪॥

ಅರ್ಥ :- ಯಾವನು ಲಿಂಗರೂಪಮಾಡಿ ನೃತ್ಯ ಮಾಡುತ್ತಾನೆ, ಹಾಡುತ್ತಾನೆ, ವಾದ್ಯ ಬಾರಿಸುತ್ತಾನೆ ಅವನು ಪಾಪದಿಂದ ಮೋಹಿತವಾದ ಬುದ್ಧಿಯುಳ್ಳವನಿದ್ದಾನೆ, ತಿರ್ಯಂಚಯೋನಿಯಿದ್ದಾನೆ, ಪಶುವಿದ್ದಾನೆ, ಶ್ರಮಣನಿಲ್ಲ.

ಭಾವಾರ್ಥ :- ಲಿಂಗಧಾರಣಮಾಡಿ ಭಾವ ಕೆಡಿಸಿಕೊಂಡು ನರ್ತಿಸುವುದು, ಹಾಡುವುದು, ಬಾರಿಸುವುದು ಇತ್ಯಾದಿ ಕ್ರಿಯೆಗಳನ್ನು ಮಾಡುವವನು ಪಾಪಬುದ್ಧಿಯಿದ್ದಾನೆ, ಪಶುವಿದ್ದಾನೆ, ಅಜ್ಞಾನಿಯಿದ್ದಾನೆ, ಮನುಷ್ಯನಿಲ್ಲ, ಮನುಷ್ಯನಿದ್ದರೆ ಶ್ರಮಣತೆಯನ್ನು ಕಾಯ್ದುಕೊಳ್ಳುತ್ತಿದ್ದನು. ಹೇಗೆ ನಾರದ ವೇಷಧಾರಿಯು ನರ್ತಿಸುತ್ತಾನೆ, ಹಾಡುತ್ತಾನೆ, ಬಾರಿಸುತ್ತಾನೆ ಹಾಗೆ ಇದೂ ವೇಷವಾಯಿತು. ಇವನು ಉತ್ತಮ ವೇಷವನ್ನು ಪರಿಹಾಸ ಮಾಡಿದನು. ಆದುದರಿಂದ ಲಿಂಗಧಾರಣ ಮಾಡಿ ಹೀಗಾಗುವುದು ಯುಕ್ತವಲ್ಲ. ॥೪॥

---

ಯಾವನು ಲಿಂಗರೂಪತಾಳಿ ನೃತ್ಯಗಾಯನ ವಾದ್ಯವಾದನವ ಮಾಡುವನು ।
ಅವನು ಪಾಪಮೋಹಿತಮತಿಯಿದ್ದು ತಿರ್ಯಂಚಯೋನಿಯಿಹ ಶ್ರಮಣನಿಲ್ಲ ॥೪॥

ಈಗ ಮತ್ತೆ ಹೇಳುತ್ತಾರೆ, -

**ಸಮ್ಮೂಹದಿ ರಕ್ಖೇದಿ ಯ ಅಟ್ಟಂ ಝಾಏದಿ ಬಹುಪಯತ್ತೇಣ ।**
**ಸೋ ಪಾವಮೋಹಿದಮದೀ ತಿರಕ್ಖಜೋಣಿ ಣ ಸೋ ಸಮಣೋ ॥೫॥**

**ಸಮೂಹಯತಿ ರಕ್ಷತಿ ಚ ಆರ್ತಂ ಧ್ಯಾಯತಿ ಬಹುಪ್ರಯತ್ನೇನ ।**
**ಸಃ ಪಾಪಮೋಹಿತಮತಿಃ ತಿರ್ಯಗ್ಯೋನಿಃ ನ ಸಃ ಶ್ರಮಣ ॥೫॥**

ಅರ್ಥ ಃ- ಯಾವನು ನಿರ್ಗ್ರಂಥ ಲಿಂಗವನ್ನು ಧಾರಣಮಾಡಿ ಪರಿಗ್ರಹವನ್ನು ಸಂಗ್ರಹರೂಪ ಮಾಡುತ್ತಾನೆ ಅಥವಾ ಅದರ ಇಚ್ಛೆ ಚಿಂತನೆ ಮಮತೆ ಮಾಡುತ್ತಾನೆ ಮತ್ತು ಆ ಪರಿಗ್ರಹದ ರಕ್ಷಣೆ ಮಾಡುತ್ತಾನೆ ಅದರ ಕುರಿತು ತುಂಬ ಯತ್ನ ಮಾಡುತ್ತಾನೆ, ಅದರ ಸಲುವಾಗಿ ನಿರಂತರ ಆರ್ತಧ್ಯಾನ ಮಾಡುತ್ತಾನೆ ಅವನು ಪಾಪದಿಂದ ಮೋಹಿತವಾದ ಬುದ್ಧಿಯುಳ್ಳವನಾಗಿದ್ದಾನೆ, ತಿರ್ಯಂಚಯೋನಿಯಿದ್ದಾನೆ, ಪಶುವಿದ್ದಾನೆ, ಅಜ್ಞಾನಿಯಿದ್ದಾನೆ ಶ್ರಮಣನಂತೂ ಇಲ್ಲ, ಶ್ರಮಣತೆಯನ್ನು ಕೆಡಿಸುತ್ತಾನೆಂದು ತಿಳಿಯಬೇಕು. ॥೫॥

ಈಗ ಮತ್ತೆ ಹೇಳುತ್ತಾರೆ, -

**ಕಲಹಂ ವಾದಂ ಜೂವಾ ಣಿಚ್ಚಂ ಬಹುಮಾಣಗವ್ವಿಓ ಲಿಂಗೀ ।**
**[೧]ವಚ್ಚದಿ ಣರಯಂ ಪಾಓ ಕರಮಾಣೋ ಲಿಂಗಿರೂವೇಣ ॥೬॥**

**ಕಲಹಂ ವಾದಂ ದ್ಯೂತಂ ನಿತ್ಯಂ ಬಹುಮಾನಗರ್ವಿತಃ ಲಿಂಗೀ ।**
**ವ್ರಜತಿ ನರಕಂ ಪಾಪಃ ಕುರ್ವಾಣಃ ಲಿಂಗಿರೂಪೇಣ ॥೬॥**

ಅರ್ಥ ಃ- ಯಾವ ಲಿಂಗಿಯು ಅಧಿಕ ಮಾನಕಷಾಯದಿಂದ ಗರ್ವವುಳ್ಳವನಾಗಿ ನಿರಂತರ ಕಲಹ ಮಾಡುತ್ತಾನೆ, ಪಾಪ ಮಾಡುತ್ತಾನೆ, ದ್ಯೂತಕ್ರೀಡೆಯಾಡುತ್ತಾನೆ, ಆ ಪಾಪಿಯು ನರಕಕ್ಕೆ ಪ್ರಾಪ್ತನಾಗುತ್ತಾನೆ ಮತ್ತು ಪಾಪದಿಂದ ಹೀಗೆಯೇ ಮಾಡುತ್ತಿರುತ್ತಾನೆ.

ಭಾವಾರ್ಥ ಃ- ಗೃಹಸ್ಥರೂಪಮಾಡಿ ಇಂಥ ಕ್ರಿಯೆ ಮಾಡುವವನಿಗಂತೂ ಈ ನಿಂದೆಯಿಲ್ಲ, ಏಕೆಂದರೆ ಒಮ್ಮೊಮ್ಮೆ ಗೃಹಸ್ಥನಂತೂ ಉಪದೇಶಾದಿಗಳ ನಿಮಿತ್ತ ಪಡೆದು ಕುಕ್ರಿಯೆಗಳನ್ನು ಮಾಡುತ್ತ ಉಳಿದುಕೊಂಡರೆ ಅವನು

---

ಯಾವನು ಸಂಗ್ರಹಿಪನು ರಕ್ಷಿಪನು ಬಹುಪ್ರಯತ್ನದಿಂದಾರ್ತಧ್ಯಾನ ಮಾಳ್ಪನು ।
ಅವನು ಪಾಪವಿಮೋಹಿತಮತಿಯಿದ್ದುತಿರ್ಯಂಚಯೋನಿಯಿಹ ಶ್ರಮಣನಿಲ್ಲ ॥೫

ಲಿಂಗಿ ಅತಿಮಾನಗರ್ವದಿಂ ಜೂಜು-ಕಲಹ-ವಾದಗಳ ನಿತ್ಯ ಮಾಡುವವನು ।
ಲಿಂಗರೂಪದಿಂದೀತೆರದಿ ಮಾಡುತ್ತ ಪಾಪಿ ತಾ ನರಕಗಾಮಿಯಾಗುವನು ॥೬॥

---

೧ 'ವಚ್ಚ' ಕ್ಕೆ ಪ್ರತಿಯಾಗಿ 'ವಜ್ಜ' ವೆಂಬ ಪಾಠಾಂತರವಿದೆ.

ನರಕಕ್ಕೆ ಹೋಗುವುದಿಲ್ಲ, ಆದರೆ ಲಿಂಗಧಾರಣ ಮಾಡಿ ಆ ರೂಪದಿಂದ ಕುಕ್ರಿಯೆ ಮಾಡುತ್ತಿದ್ದರೆ ಅವನಿಗೆ ಉಪದೇಶ ಕೂಡ ಮನಮುಟ್ಟುವುದಿಲ್ಲ, ಅದರಿಂದಾಗಿ ನರಕಕ್ಕೇನೇ ಪಾತ್ರನಾಗುತ್ತಾನೆ. ॥೬॥

ಈಗ ಮತ್ತೆ ಹೇಳುತ್ತಾರೆ, -

ಪಾಓಪಹದಂಭಾವೋ ಸೇವದಿ ಯ ಅಬಂಭು ಲಿಂಗಿರೂವೇಣ ।
ಸೋ ಪಾವಮೋಹಿದಮದೀ ಹಿಂಡದಿ ಸಂಸಾರಕಂತಾರೇ ॥೭॥

ಪಾಪೋಪಹತಭಾವಃ ಸೇವತೇ ಚ ಅಬ್ರಹ್ಮ ಲಿಂಗಿರೂಪೇಣ ।
ಸಃ ಪಾಪಮೋಹಿತಮತಿಃ ಹಿಂಡತೇ ಸಂಸಾರಕಾಂತಾರೇ ॥೭॥

ಅರ್ಥ ಃ- ಪಾಪದಿಂದ ಉಪಹತ ಎಂದರೆ ಘಾತ ಮಾಡಲ್ಪಟ್ಟ ಆತ್ಮಭಾವವುಳ್ಳವನಾಗುತ್ತ ಆ ಲಿಂಗಿಯ ರೂಪಮಾಡಿ ಅಬ್ರಹ್ಮದ ಸೇವನೆ ಮಾಡುತ್ತಾನೆ ಆ ಪಾಪದಿಂದ ಮೋಹಿತ ಬುದ್ಧಿಯುಳ್ಳ ಲಿಂಗಿಯು ಸಂಸಾರ ರೂಪದ ಕಾಂತಾರದಲ್ಲಿ-ವನದಲ್ಲಿ ಭ್ರಮಣ ಮಾಡುತ್ತಾನೆ.

ಭಾವಾರ್ಥ ಃ- ಮೊದಲು ಲಿಂಗಧಾರಣ ಮಾಡಿ ಅನಂತರ ವ್ಯಭಿಚಾರ ಸೇವನೆ ಮಾಡಲಾರಂಭಿಸುವಂಥ ಪಾಪ ಪರಿಣಾಮವಾದರೆ ಅವನ ಪಾಪದ ಬುದ್ಧಿಯದೇನು ಹೇಳುವುದು ? ಅವನದು ಸಂಸಾರದಲ್ಲಿ ಭ್ರಮಣವೇಕಾಗಬಾರದು ? ಅಮೃತವು ಕೂಡ ವಿಷರೂಪವಾಗಿ ಪರಿಣಮಿಸುವವನಿಗೆ ರೋಗ ಪರಿಹಾರದ ಆಶೆಯೇನು ? ಹಾಗೆಯೇ ಇದಾಯಿತು, ಇಂಥವನ ಸಂಸಾರ ಕತ್ತರಿಸುವುದು ಕಠಿಣವಿದೆ.

ಈಗ ಮತ್ತೆ ಹೇಳುತ್ತಾರೆ, -

ದಂಸಣಣಾಣಚರಿತ್ತೇ ಉವಹಾಣೇ ಜಇ ಣ ಲಿಂಗರೂವೇಣ ।
ಅಟ್ಟಂ ಝಾಯದಿ ಝಾಣಂ ಅಣಂತಸಂಸಾರಿಓ ಹೋದಿ ॥೮॥

ದರ್ಶನಜ್ಞಾನಚಾರಿತ್ರಾಣಿ ಉಪಧಾನಾನಿ ಯದಿ ನ ಲಿಂಗರೂಪೇಣ ।
ಆರ್ತಂ ಧ್ಯಾಯತಿ ಧ್ಯಾನಂ ಅನಂತಸಂಸಾರಿಕಃ ಭವತಿ ॥೮॥

ಅರ್ಥ ಃ- ಒಂದುವೇಳೆ ಲಿಂಗರೂಪಮಾಡಿ ದರ್ಶನ ಜ್ಞಾನ ಚಾರಿತ್ರಗಳನ್ನು ಉಪಧಾನರೂಪ ಮಾಡುವುದಿಲ್ಲ (-ಧಾರಣ ಮಾಡುವುದಿಲ್ಲ) ಮತ್ತು ಆರ್ತಧ್ಯಾನವನ್ನು ಧ್ಯಾನಿಸುತ್ತಿರುವಂಥ ಲಿಂಗಿಯು ಅನಂತ ಸಂಸಾರಿಯಾಗುತ್ತಾನೆ.

---

ಪಾಪದಿಂದುಪಹತಭಾವನಾಗಿ ಲಿಂಗರೂಪದಿಂದಬ್ರಹ್ಮವಂ ಸೇವಿಸುವಾ ।
ಪಾಪಮೋಹಿತಮತಿಯು ಭ್ರಮಣ ಮಾಡುವನು ಸಂಸಾರಕಾಂತಾರದೊಳಗೆ ॥೭॥

ಲಿಂಗರೂಪ ತಾಳಿ ದರ್ಶನ-ಜ್ಞಾನ-ಚಾರಿತ್ರಗಳನ್ನು ಧಾರಣ ಮಾಡಿದರೆ ।
ಲಿಂಗಿಯವನು ಆರ್ತಧ್ಯಾನವನು ಧ್ಯಾನಿಸಿ ಅನಂತಸಂಸಾರಿಯಾಗುವನು ॥೮॥

ಭಾವಾರ್ಥ :- ಲಿಂಗಧಾರಣ ಮಾಡಿ ದರ್ಶನ-ಜ್ಞಾನ-ಚಾರಿತ್ರಗಳ ಸೇವನೆ ಮಾಡಬೇಕಿತ್ತು ಅದನ್ನಂತೂ ಮಾಡಲಿಲ್ಲ ಮತ್ತು ಪರಿಗ್ರಹ ಕುಟುಂಬ ಮೊದಲಾದ ವಿಷಯಗಳ ಪರಿಗ್ರಹಬಿಟ್ಟು ಪುನಃ ಅದರ ಚಿಂತೆಮಾಡಿ ಆರ್ತಧ್ಯಾನ ಧ್ಯಾನಿಸತೊಡಗಿದಾಗ ಅನಂತ ಸಂಸಾರಿಯೇಕಾಗಬಾರದು ? ಮೊದಲು ಸಮ್ಯಗ್ದರ್ಶನಾದಿರೂಪದ ಭಾವಗಳಾಗಲಿಲ್ಲ ಮತ್ತು ಯಾವುದೇ ಕಾರಣ ಪಡೆದು ಲಿಂಗಧಾರಣ ಮಾಡಿದನು, ಆದರೆ ಅದರ ಅವಧಿಯೆಷ್ಟು ? ಮೊದಲು ಭಾವ ಶುದ್ಧಮಾಡಿ ಲಿಂಗಧಾರಣ ಮಾಡುವುದು ಯುಕ್ತವಿದೆಯೆಂಬುದು ಇದರ ತಾತ್ಪರ್ಯವಿದೆ. ||೮||

ಒಂದು ವೇಳೆ ಭಾವಶುದ್ಧಿಯಿಲ್ಲದೆ ಗೃಹಸ್ಥಪದವನ್ನು ಬಿಟ್ಟುಕೊಟ್ಟರೆ ಈ ಪ್ರವೃತ್ತಿಯಾಗುತ್ತದೆಯೆಂದು ಈಗ ಹೇಳುತ್ತಾರೆ, -

**ಜೋ ಜೋಡೇದಿ ವಿವಾಹಂ ಕಿಸಿಕಮ್ಮವಣಿಜ್ಜಜೀವಘಾದಂ ಚ |**
**ವಚ್ಚದಿ ಣರಯಂ ಪಾಓ ಕರಮಾಣೋ ಲಿಂಗಿರೂವೇಣ ||೯||**

**ಯಃ ಯೋಜಯತಿ ವಿವಾಹಂ ಕೃಷಿಕರ್ಮವಾಣಿಜ್ಯಜೀವಘಾತಂ ಚ |**
**ವ್ರಜತಿ ನರಕಂ ಪಾಪಃ ಕುರ್ವಾಣಃ ಲಿಂಗಿರೂಪೇಣ ||೯||**

ಅರ್ಥ :- ಯಾವನು ಗೃಹಸ್ಥರಲ್ಲಿ ಪರಸ್ಪರ ವಿವಾಹ ಜೋಡಿಸುತ್ತಾನೆ ಸಂಬಂಧ ಮಾಡಿಸುತ್ತಾನೆ, ಕೃಷಿ ಕರ್ಮ ನೆಲ ಉಳುವ ಒಕ್ಕಲಿಗನ ಕಾರ್ಯ, ವಾಣಿಜ್ಯ ವ್ಯಾಪಾರ ಎಂದರೆ ವೈಶ್ಯನ ಕಾರ್ಯ ಮತ್ತು ಜೀವಘಾತ ಎಂದರೆ ವೈದ್ಯಕರ್ಮದ ಸಲುವಾಗಿ ಜೀವಘಾತಮಾಡುವುದು ಅಥವಾ ಬೆಸ್ತರಾದಿಕರ ಕಾರ್ಯ ಈ ಕಾರ್ಯಗಳನ್ನು ಮಾಡುತ್ತಾನೆ ಅವನು ಲಿಂಗರೂಪಧಾರಣ ಮಾಡಿ ಇಂಥ ಪಾಪಕಾರ್ಯಮಾಡುತ್ತ ಪಾಪಿಯಾಗಿ ನರಕವನ್ನು ಪ್ರಾಪ್ತಮಾಡಿಕೊಳ್ಳುತ್ತಾನೆ.

ಭಾವಾರ್ಥ :- ಗೃಹಸ್ಥಪದವನ್ನು ಬಿಟ್ಟುಕೊಟ್ಟು ಶುಭಭಾವವಿಲ್ಲದೆ ಲಿಂಗಿಯಾದರೂ ಇವನಿಗೆ ಭಾವದ ವಾಸನೆ ಅಳಿಸಲಿಲ್ಲ, ಆಗ ಲಿಂಗಿಯರೂಪು ಧಾರಣ ಮಾಡಿ ಕೂಡ ಗೃಹಸ್ಥರ ಕಾರ್ಯ ಮಾಡಲಾರಂಭಿಸುವನು. ತಾನು ವಿವಾಹ ಮಾಡಿಕೊಳ್ಳದಿದ್ದರೂ ಗೃಹಸ್ಥರ ಸಂಬಂಧ ಮಾಡಿಸಿ ವಿವಾಹ ಮಾಡಿಸುತ್ತಾನೆ ಮತ್ತು ಒಕ್ಕಲುತನ ವ್ಯಾಪಾರದ ಜೀವಹಿಂಸೆ ತಾನು ಮಾಡುತ್ತಾನೆ ಹಾಗೂ ಗೃಹಸ್ಥರಿಗೆ ಮಾಡಿಸುತ್ತಾನೆ, ಇದರಿಂದ ಪಾಪಿಯಾಗಿ ನರಕಕ್ಕಿಳಿಯುತ್ತಾನೆ. ಇಂಥ ವೇಷ ಧರಿಸುವುದಕ್ಕಿಂತ ಗೃಹಸ್ಥತನವೇ ಒಳ್ಳೆಯದಿತ್ತು, ಪದದ ಪಾಪವಾದರೂ ತಗಲುತ್ತಿರಲಿಲ್ಲ, ಆದಕ್ಕಾಗಿ ಇಂಥ ವೇಷಧಾರಣ ಮಾಡುವುದು ಉಚಿತವಲ್ಲವೆಂದು ಉಪದೇಶವಿದೆ. ||೯||

ಈಗ ಮತ್ತೆ ಹೇಳುತ್ತಾರೆ, -

---

**ಯಾವನು ವಿವಾಹ ಕೂಡಿಸಿ ಕೃಷಿಕರ್ಮವಾಣಿಜ್ಯ ಜೀವಘಾತ ಮಾಡುವನು |**
**ಅವನುಲಿಂಗರೂಪದಿಂದೀತೆರಮಾಡಿ ಪಾಪಿ ನರಕಗಾಮಿಯಾಗುವನು ||೯||**

ಚೋರಾಣ [೧]ಲಾಉರಾಣ ಯ ಜುದ್ಧ ವಿವಾದಂ ಚ ತಿವ್ವಕಮ್ಮೇಹಿಂ ।
ಜಂತೇಣ ದಿವ್ವಮಾಣೋ ಗಚ್ಛದಿ ಲಿಂಗೀ ಣರಯವಾಸಂ ॥೧೦॥

ಚೌರಾಣಾಂ ಲಾಪರಾಣಾಂ ಚ ಯುದ್ಧಂ ವಿವಾದಂ ಚ ತೀವ್ರಕರ್ಮಭಿಃ ।
ಯಂತ್ರೇಣ ದೀವ್ಯಮಾನಃ ಗಚ್ಛತಿ ಲಿಂಗೀ ನರಕವಾಸಂ ॥೧೦॥

ಅರ್ಥ ಃ- ಹೀಗೆ ಪ್ರವರ್ತಿಸುವಂಥ ಲಿಂಗಿಯು ನರಕವಾಸಕ್ಕೆ ಪ್ರಾಪ್ತನಾಗುತ್ತಾನೆ. ಅವನು ಚೋರರ ಹಾಗೂ ಲಾಪರ ಎಂದರೆ ಅಸತ್ಯ ನುಡಿಯುವವರೊಡನೆ ಯುದ್ಧ ಹಾಗೂ ವಿವಾದ ಮಾಡಿಸುತ್ತಾನೆ ಮತ್ತು ತೀವ್ರಕರ್ಮ ಎಂದರೆ ಅಧಿಕಪಾಪವು ಉತ್ಪನ್ನವಾಗುವಂಥ ತೀವ್ರ ಕಷಾಯ ಕಾರ್ಯಗಳಲ್ಲಿ ಮತ್ತು ಯಂತ್ರ ಎಂದರೆ ಪಗಡೆ, ಚದುರಂಗ, ಲೆತ್ತ, ಉಯ್ಯಾಲೆ ಮೊದಲಾದವುಗಳಿಂದ ಕ್ರೀಡೆ ಮಾಡುತ್ತಿರುತ್ತಾನೆ ಅವನು ನರಕಕ್ಕೆ ಹೋಗುತ್ತಾನೆ. ಇಲ್ಲಿ 'ಲಾಉರಾಣಂ'ದ ಪಾಠಾಂತರವು 'ರಾಉಲಾಣಂ' ಎಂದಿದ್ದು ಇದರ ಅರ್ಥವು ರಾವಲ ಎಂದರೆ ರಾಜಕಾರ್ಯ ಮಾಡುವವರಲ್ಲಿ ಯುದ್ಧ ವಿವಾದ ಮಾಡಿಸುತ್ತಾನೆಂದು ತಿಳಿಯಬೇಕು.

ಭಾವಾರ್ಥ ಃ- ಲಿಂಗಧಾರಣ ಮಾಡಿ ಇಂಥಕಾರ್ಯ ಮಾಡುವವನಂತೂ ನರಕವನ್ನೇ ಪಡೆಯುತ್ತಾನೆಂಬುದರಲ್ಲಿ ಯಾವ ಸಂದೇಹವಿಲ್ಲ. ॥೧೦॥

ಯಾವನು ಲಿಂಗಧಾರಣ ಮಾಡಿ ಲಿಂಗಯೋಗ್ಯ ಕಾರ್ಯಮಾಡುತ್ತ ದುಃಖಿಯಾಗಿರುತ್ತಾನೆ ಆ ಕಾರ್ಯಗಳ ಆದರ ಮಾಡುವುದಿಲ್ಲ ಅವನು ಕೂಡ ನರಕಕ್ಕೆ ಹೋಗುತ್ತಾನೆಂದು ಈಗ ಹೇಳುತ್ತಾರೆ, -

ದಂಸಣಣಾಣಚರಿತ್ತೇ ತವಸಂಜಮಣಿಯಮಣಿಚ್ಚಕಮ್ಮಮ್ಮಿ ।
ಪೀಡಯದಿ ವಟ್ಟಮಾಣೋ ಪಾವದಿ ಲಿಂಗೀ ಣರಯವಾಸಂ ॥೧೧॥

ದರ್ಶನಜ್ಞಾನಚಾರಿತ್ರೇಷು ತಪಃ ಸಂಯಮನಿಯಮನಿತ್ಯಕರ್ಮಸು ।
ಪೀಡ್ಯತೇ ವರ್ತಮಾನಃ ಪ್ರಾಪ್ನೋತಿ ಲಿಂಗೀ ನರಕವಾಸಮ್ ॥೧೧॥

ಅರ್ಥ ಃ- ಯಾವನು ಲಿಂಗಧಾರಣ ಮಾಡಿ ಈ ಕ್ರಿಯೆಗಳನ್ನು ಮಾಡುತ್ತ ಬಂಧಿಸಲ್ಪಟ್ಟವನಾಗಿ ಪೀಡಿತನಾಗುತ್ತಾನೆ ಅವನು ನರಕವಾಸವನ್ನು ಪಡೆಯುತ್ತಾನೆ. ಆ ಕ್ರಿಯೆಗಳೆಂದರೆ ಮೊದಲಂತೂ ದರ್ಶನ ಜ್ಞಾನ ಚಾರಿತ್ರಗಳಲ್ಲಿ ನಿಶ್ಚಯ ವ್ಯವಹಾರರೂಪ ಧಾರಣ ಮಾಡುವುದು, ತಪ-ಅನಶನ ಮೊದಲಾದ ಹನ್ನೆರಡು

---

ಲಾಪರ-ಕಳ್ಳರಲಿ ಯುದ್ಧ ವಿವಾದ ಮಾಡಿಸುತ ತೀವ್ರ ಪರಿಣಾಮಮಾಳ್ಪ ।
ಆ ಪಗಡೆ ಮೊದಲಾದುವಲ್ಲಿ ಕ್ರೀಡಿಸುವಲಿಂಗಿ ನರಕಗಾಮಿಯಿಹನು ॥೧೦॥

ನಿತ್ಯಕರ್ಮತಪನಿಯಮ ಸಂಯಮ ಮೇಣ್ದರ್ಶನ ಜ್ಞಾನಚಾರಿತ್ರಗಳಲಿ ।
ನಿತ್ಯ ಪ್ರವರ್ತಿಸುತ ಬಾಧೆಪಡೆದರಾ ಲಿಂಗಿ ನರಕಗಾಮಿಯಾಗುವನು ॥೧೧॥

---

೧ ಸಟೀಕ ಸಂ. ಪ್ರತಿಯಲ್ಲಿ 'ಸಮಾಏಣ'ವೆಂಬ ಪಾಠವಿದ್ದು ಆದರ ಛಾಯೆಯಲ್ಲಿ 'ಮಿಥ್ಯಾತ್ವಾದಿನಾಂ' ಎಂಬುದಾಗಿದೆ.

ಪ್ರಕಾರದವುಗಳನ್ನು ಶಕ್ತಿಗೆ ಅನುಸರಿಸಿ ಮಾಡುವುದು, ಸಂಯಮ-ಇಂದ್ರಿಯಗಳನ್ನು ಮತ್ತು ಮನಸ್ಸನ್ನು ವಶದಲ್ಲಿಟ್ಟುಕೊಳ್ಳುವುದು ಹಾಗೂ ಜೀವಗಳ ರಕ್ಷಣೆ ಮಾಡುವುದು, ನಿಯಮ ಎಂದರೆ ನಿತ್ಯ ಏನನ್ನಾದರೂ ತ್ಯಾಗ ಮಾಡುವುದು ಮತ್ತು ನಿತ್ಯಕರ್ಮ ಎಂದರೆ ಆವಶ್ಯಕ ಮೊದಲಾದ ಕ್ರಿಯೆಗಳನ್ನು ನಿಶ್ಚಿತ ಸಮಯದಲ್ಲಿ ನಿತ್ಯ ಮಾಡುವುದು, ಇವು ಲಿಂಗಯೋಗ್ಯ ಕ್ರಿಯೆಗಳಿದ್ದು ಈ ಕ್ರಿಯೆಗಳನ್ನು ಮಾಡುವಾಗ ದುಃಖಿಯಾಗುವವನು ನರಕಕ್ಕಿಳಿಯುತ್ತಾನೆ. ['ವಿರತಿ ನಿಜಪರ ಭೇದಜ್ಞಾನವು । ಇರಲು ಆತ್ಮನ ಹಿತಕೆ ಕಾರಣ । ಪರಿಯ ತಿಳಿಯದೇ ಕಷ್ಟವೆನ್ನುವನವುವೆ ಆತ್ಮನಿಗೆ ॥' ಮುನಿಪದ-ಮೋಕ್ಷಮಾರ್ಗ ಅದನ್ನಂತೂ ಅವನು ಕಷ್ಟ ಕೊಡುವಂಥದ್ದೆಂದು ಮನ್ನಿಸುವುದರಿಂದ ಅವನು ಮಿಥ್ಯಾರುಚಿಯುಳ್ಳವನಿದ್ದಾನೆ.]

ಭಾವಾರ್ಥ :- ಲಿಂಗಧಾರಣ ಮಾಡಿ ಈ ಕಾರ್ಯಗಳನ್ನು ಮಾಡಬೇಕಿತ್ತು, ಆದರೆ ಇವುಗಳ ನಿರಾದರ ಮಾಡಿ, ಪ್ರಮಾದವಶನಾದರೆ, ಲಿಂಗಯೋಗ್ಯ ಕಾರ್ಯ ಮಾಡುತ್ತ ದುಃಖಿಯಾದರೆ ಇವನಿಗೆ ಭಾವಶುದ್ಧಿ-ಯೊಡನೆ ಲಿಂಗಗ್ರಹಣವಾಗಿಲ್ಲವೆಂದು ತಿಳಿಯಬೇಕು ಮತ್ತು ಭಾವ ಕೆಡುವುದರ ಫಲವಂತೂ ನರಕವೇ ಇದೆಯೆಂದು ತಿಳಿಯಬೇಕು. ॥೧೧॥

ಭೋಜನದಲ್ಲಿಯೂ ರಸಗಳ ಲೋಲುಪಿಯಿರುವವನು ಲಿಂಗವನ್ನು ನಿಂದೆಗೆ ಗುರಿಮಾಡಿಸುತ್ತಾನೆಂದು ಈಗ ಹೇಳುತ್ತಾರೆ, -

**ಕಂದಪ್ಪಾಇಯ ವಟ್ಟಇ ಕರಮಾಣೋ ಭೋಯಣೇಸು ರಸಗಿದ್ಧಿಂ ।**
**ಮಾಯೀ ಲಿಂಗವಿವಾಈ ತಿರಿಕ್ಖಜೋಣೀ ಣ ಸೋ ಸಮಣೋ ॥೧೨॥**

**ಕಂದರ್ಪಾದಿಷು ವರ್ತತೇ ಕುರ್ವಾಣಃ ಭೋಜನೇಷು ರಸಗೃದ್ಧಿಮ್ ।**
**ಮಾಯಾವೀ ಲಿಂಗವ್ಯವಾಯೀ ತಿರ್ಯಗ್ಯೋನಿಃ ನ ಸಃ ಶ್ರಮಣಃ ॥೧೨॥**

ಅರ್ಥ :- ಯಾವನು ಲಿಂಗಧಾರಣಮಾಡಿ ಭೋಜನಗಳಲ್ಲಿ ಕೂಡ ರಸದ ಗೃದ್ಧಿ ಎಂದರೆ ಅತ್ಯಾಸಕ್ತತೆಯನ್ನು ಮಾಡುತ್ತಿರುತ್ತಾನೆ ಅವನು ಕಂದರ್ಪ ಮೊದಲಾದುವಲ್ಲಿ ವರ್ತಿಸುತ್ತಾನೆ, ಅವನಿಗೆ ಕಾಮಸೇವನೆಯ ಇಚ್ಛೆ ಹಾಗೂ ಪ್ರಮಾದ ನಿದ್ರಾದಿಗಳು ಅಧಿಕ ಪ್ರಮಾಣದಲ್ಲಿ ವೃದ್ಧಿಸುತ್ತವೆ, ಆಗ 'ಲಿಂಗವ್ಯವಾಯೀ' ಎಂದರೆ ವ್ಯಭಿಚಾರಿಯಾಗುತ್ತಾನೆ, ಮಾಯಾವಿ ಎಂದರೆ ಕಾಮ ಸೇವನೆಯ ಸಲುವಾಗಿ ಅನೇಕ ಕುತಂತ್ರಗಳ ವಿಚಾರ ಮಾಡುತ್ತಾನೆ, ಹೀಗಾಗುವವನು ತಿರ್ಯಂಚ ಯೋನಿಯಿದ್ದಾನೆ, ಪಶುತುಲ್ಯನಿದ್ದಾನೆ, ಮನುಷ್ಯನಿಲ್ಲದಿರುವುದರಿಂದ ಶ್ರಮಣನೂ ಇಲ್ಲ.

ಭಾವಾರ್ಥ :- ಗೃಹಸ್ಥಾವಸ್ಥೆಯನ್ನು ಬಿಟ್ಟುಕೊಟ್ಟು ಆಹಾರದಲ್ಲಿ ಲೋಲುಪತೆ ಮಾಡತೊಡಗಿದರೆ ಗೃಹಸ್ಥ ಪದದಲ್ಲಿ ಅನೇಕ ರಸಯುಕ್ತ ಭೋಜನ ದೊರಕುತ್ತಿತ್ತು ಅದನ್ನೇಕೆ ಬಿಟ್ಟುಕೊಟ್ಟೆ ? ಇದರಿಂದ ಆತ್ಮ ಭಾವನೆಯ ರಸವನ್ನು ಗುರುತಿಸಿಯೇ ಇಲ್ಲವೆಂದು ತಿಳಿದುಬರುತ್ತದೆ, ಆದಕ್ಕಾಗಿ ವಿಷಯ ಸುಖದ ಇಚ್ಛೆಯೇ ಉಳಿದುಕೊಂಡು ಭೋಜನ ರಸದೊಡನೆ ಅನ್ಯ ವಿಷಯಗಳದ್ದೂ ಇಚ್ಛೆಯುಳಿದಾಗ ವ್ಯಭಿಚಾರ ಮೊದಲಾದುವಲ್ಲಿ ಪ್ರವರ್ತಿಸಿ ಲಿಂಗವನ್ನು

---

**ಕಾಮಾದಿಗಳಲಿ ವರ್ತಿಸುತ ಭೋಜನದಲಿ ರಸಗೃದ್ಧಿಯನು ಮಾಡುವ ।**
**ಆ ಮಾಯಾವಿ ಲಿಂಗವಿನಾಶಿಯಿದ್ದು ತಿರ್ಯಂಚಯೋನಿಯಿಹನು ಶ್ರಮಣನಿಲ್ಲ ॥೧೨॥**

ಪರಿಹಾಸಕ್ಕೆ ಗುರಿಮಾಡುತ್ತಾನೆ, ಇಂಥ ಲಿಂಗಕ್ಕಿಂತ ಗೃಹಸ್ಥ ಪದವೇ ಶ್ರೇಷ್ಠವಿದೆಯೆಂದು ತಿಳಿಯಬೇಕು. ।।೧೨।।

ಮತ್ತೆ ಇದನ್ನೇ ವಿಶೇಷರೂಪದಿಂದ ಹೇಳುತ್ತಾರೆ, -

ಧಾವದಿ ಪಿಂಡಣಿಮಿತ್ತಂ ಕಲಹಂ ಕಾಊಣ ಭುಂಜದೇ ಪಿಂಡಂ ।
ಅವರಪರೂಈ ಸಂತೋ ಜಿಣಮಗ್ಗಿ ಣ ಹೋಇ ಸೋ ಸಮಣೋ ।।೧೩।।

ಧಾವತಿ ಪಿಂಡನಿಮಿತ್ತಂ ಕಲಹಂ ಕೃತ್ವಾ ಭುಂಕ್ತೇ ಪಿಂಡಮ್ ।
ಅಪರಪ್ರರೂಪೀ ಸನ್ ಜಿನಮಾರ್ಗೀ ನಭವತಿ ಸಃ ಶ್ರಮಣಃ ।।೧೩।।

ಅರ್ಥ ಃ- ಆ ಲಿಂಗಧಾರಿಯು ಪಿಂಡ ಎಂದರೆ ಆಹಾರದ ನಿಮಿತ್ತವಾಗಿ ಧಾವಿಸುತ್ತಾನೆ, ಆಹಾರದ ನಿಮಿತ್ತ ಕಲಹಮಾಡಿ ಆಹಾರವನ್ನು ಭೋಗಿಸುತ್ತಾನೆ, ತಿನ್ನುತ್ತಾನೆ ಮತ್ತು ಅದರ ನಿಮಿತ್ತ ಅನ್ಯರಲ್ಲಿ ಪರಸ್ಪರ ಈರ್ಷೆ ಮಾಡುತ್ತಾನೆ ಆ ಶ್ರಮಣನು ಜಿನಮಾರ್ಗಿಯಿಲ್ಲ.

ಭಾವಾರ್ಥ ಃ- ಈ ಕಾಲದಲ್ಲಿ ಜಿನಲಿಂಗದಿಂದ ಭ್ರಷ್ಟರಾಗಿ ಮೊದಲು ಅರ್ದ್ಧಫಾಲಕರಾದರು, ನಂತರ ಅವರಲ್ಲಿ ಶ್ವೇತಾಂಬರ ಮೊದಲಾದ ಸಂಘಗಳಾದವು, ಅವರು ಶಿಥಿಲಾಚಾರದ ಪುಷ್ಟಿಮಾಡಿ ಲಿಂಗದ ಪ್ರವೃತ್ತಿ ಕೆಡಿಸಿದರು, ಇದು ಅವರ ನಿಷೇಧವಿದೆ. ಇವರಲ್ಲಿ ಈಗಲೂ ಆಹಾರದ ಸಲುವಾಗಿ ಶೀಘ್ರ ಧಾವಿಸುವವರು ಕಂಡು ಬರುತ್ತಾರೆ, ಈರ್ಯಾಪಥದ ಪ್ರಜ್ಞೆಯಿಲ್ಲ ಮತ್ತು ಗೃಹಸ್ಥರ ಮನೆಯಿಂದ ಆಹಾರ ತಂದು ಮೂವರು ನಾಲ್ವರು ಸೇರಿ ಕುಳಿತುಕೊಂಡು ತಿನ್ನುತ್ತಾರೆ, ಅಲ್ಲಿ ಬಠವಡೆಯಲ್ಲಿ (ಹಂಚಿಕೊಳ್ಳುವಲ್ಲಿ ) ಸರಸ-ನೀರಸವುಂಟಾದಾಗ ಪರಸ್ಪರ ಕಲಹ ಮಾಡುತ್ತಾರೆ ಮತ್ತು ಅದರ ನಿಮಿತ್ತ ಪರಸ್ಪರರಲ್ಲಿ ಈರ್ಷೆ ಮಾಡುತ್ತಾರೆ. ಇಂಥ ಪ್ರವೃತ್ತಿ ಮಾಡಿದರೆ ಶ್ರಮಣರು ಹೇಗಾಗುವರು ? ಅವರಂತೂ ಜಿನಮಾರ್ಗಿಗಳಿಲ್ಲ, ಕಲಿಕಾಲದ ವೇಷಧಾರಿಗಳಿದ್ದಾರೆ. ಇವರನ್ನು ಸಾಧುಗಳೆಂದು ಮನ್ನಿಸುವವರು ಕೂಡ ಅಜ್ಞಾನಿಗಳಿದ್ದಾರೆ. ।।೧೩।।

ಈಗ ಮತ್ತೆ ಹೇಳುತ್ತಾರೆ, -

ಗಿಣ್ಹದಿ ಅದತ್ತದಾಣಂ ಪರಣಿಂದಾ ವಿ ಯ ಪರೋಕ್ಖದೂಸೇಹಿಂ ।
ಜಿಣಲಿಂಗಂ ಧಾರಂತೋ ಚೋರೇಣ ವ ಹೋಇ ಸೋ ಸಮಣೋ ।।೧೪।।

ಗೃಹ್ಣಾತಿ ಅದತ್ತದಾನಂ ಪರನಿಂದಾಮಪಿ ಚ ಪರೋಕ್ಷದೂಷಣೈಃ ।
ಜಿನಲಿಂಗಂ ಧಾರಯನ್ ಚೌರೇಣೇವ ಭವತಿ ಸಃ ಶ್ರಮಣಃ ।.೧೪।।

---

ಧಾವಿಸುವನು ಪಿಂಡನಿಮಿತ್ತ ಕಲಹಮಾಡಿ ಭುಂಜಿಸುವನು ಪಿಂಡವನು ।
ಅವನನ್ಯರಲಿ ಈರ್ಷೆಮಾಡುವನದರಿಂದಾ ಶ್ರಮಣ ಜಿನಮಾರ್ಗಿಯಿಲ್ಲ ।।೧೩।।

ದಾನವೀಯದೆ ಗ್ರಹಿಸುವನು ಪರೋಕ್ಷದಿಂದ ಪರನಿಂದೆಯನು ಮಾಡುವನು ।
ಜಿನಲಿಂಗವನು ಧರಿಸಿದರು ಕೂಡವನು ಚೋರಸಮಾನನಿರುವನು ।।೧೪।।

ಅರ್ಥ ಃ- ಯಾವನು ಕೊಡದೆ ದಾನ ತೆಗೆದುಕೊಳ್ಳುತ್ತಾನೆ ಮತ್ತು ಪರೋಕ್ಷ ಪರರ ದೂಷಣಗಳಿಂದ ಇತರರ ನಿಂದೆ ಮಾಡುತ್ತಾನೆ ಅವನು ಜಿನಲಿಂಗವನ್ನು ಧಾರಣ ಮಾಡಿದರೂ ಕೂಡ ಚೋರರ ಸಮಾನ ಶ್ರಮಣನಿದ್ದಾನೆ.

ಭಾವಾರ್ಥ ಃ- ಯಾವನು ಜಿನಲಿಂಗವನ್ನು ಧಾರಣ ಮಾಡಿ ಕೊಡದೆ ಆಹಾರ ಮೊದಲಾದುವನ್ನು ಗ್ರಹಣ ಮಾಡುತ್ತಾನೆ, ಪರರಿಗೆ ಕೊಡುವ ಇಚ್ಛೆಯಿಲ್ಲದಿದ್ದರೂ ಭಯಾದಿಗಳನ್ನು ಉತ್ಪನ್ನಮಾಡಿ ತೆಗೆದುಕೊಳ್ಳುವುದು ಮತ್ತು ನಿರಾದರದಿಂದ ಸ್ವೀಕರಿಸುವುದು, ಗುಪ್ತವಾಗಿ ಕಾರ್ಯ ಮಾಡುವುದೆಲ್ಲವು ಕಳ್ಳರ ಕಾರ್ಯಗಳಿವೆ. ಈ ವೇಷ ಧಾರಣಮಾಡಿ ಹೀಗೆ ಮಾಡಲಾರಂಭಿಸಿದರೆ ಕಳ್ಳನೆಂದೇ ನಿಶ್ಚಯವಾಗುವುದರಿಂದ ಹೀಗೆ ವೇಷಧಾರಿಗಳಾಗುವುದು ಯೋಗ್ಯವಿಲ್ಲ. ||೧೪||

ಲಿಂಗಧಾರಣ ಮಾಡಿ ಹೀಗೆ ಪ್ರವರ್ತಿಸುವವರು ಶ್ರಮಣರಲ್ಲವೆಂದು ಈಗ ಹೇಳುತ್ತಾರೆ, -

ಉಪ್ಪಡದಿ ಪಡದಿ ಧಾವದಿ ಪುಢವೀಓ ಖಣದಿ ಲಿಂಗರೂವೇಣ |
ಇರಿಯಾವಹ ಧಾರಂತೋ ತಿರಿಕ್ಖಜೋಣೀ ಣ ಸೋ ಸಮಣೋ ||೧೫||

ಉತ್ಪತತಿ ಪತತಿ ಧಾವತಿ ಪೃಥಿವೀಂ ಖನತಿ ಲಿಂಗರೂಪೇಣ |
ಈರ್ಯಾಪಥಂ ಧಾರಯನ್ ತಿರ್ಯಗ್ಯೋನಿಃ ನ ಸಃ ಶ್ರಮಣಃ |.೧೫||

ಅರ್ಥ ಃ- ಲಿಂಗಧಾರಣ ಮಾಡಿ ಈರ್ಯಾಪಥ ಶೋಧಿಸಿ ನಡೆಯಬೇಕಿತ್ತು ಅದರಲ್ಲಿ ಶೋಧಿಸಿ ನಡೆಯುವುದಿಲ್ಲ, ಧಾವಿಸಿ ನಡೆಯುತ್ತ ಜಿಗಿಯುವುದು, ಹೊರಳಿ ಬೀಳುವುದು, ಮತ್ತೆ ಎದ್ದು ಧಾವಿಸುವುದು, ಪೃಥ್ವಿಯನ್ನು ಅಗೆಯುವುದು, ನಡೆಯುವಾಗ ಕಾಲ ಅಪ್ಪಳಿಸುತ್ತ ನೆಲ ಎದ್ದು ಬೀಳುವಂತೆ ನಡೆಯುವವನು ತಿರ್ಯಂಚ ಯೋನಿಯಿದ್ದಾನೆ, ಪಶುವಿದ್ದಾನೆ, ಅಜ್ಞಾನಿಯಿದ್ದಾನೆ, ಮನುಷ್ಯನಿಲ್ಲ. ||೧೫||

ಆ ವನಸ್ಪತಿ ಮೊದಲಾದ ಸ್ಥಾವರ ಜೀವಗಳ ಹಿಂಸೆಯಿಂದ ಕರ್ಮಬಂಧವಾಗುತ್ತದೆ, ಆದರೆ ಅದನ್ನು ಗಣನೆಗೆ ತಂದುಕೊಳ್ಳದೆ ಸ್ವಚ್ಛಂದವಾಗಿ ಪ್ರವರ್ತಿಸುವವನು ಶ್ರಮಣನಲ್ಲವೆಂದು ಈಗ ಹೇಳುತ್ತಾರೆ, -

ಬಂಧೋ ಣಿರಓ ಸಂತೋ ಸಸ್ಸಂ ಖಂಡೇದಿ ತಹ ಯ ವಸುಹಂ ಪಿ |
ಛಿಂದದಿ ತರುಗಣ ಬಹುಸೋ ತಿರಿಕ್ಖಜೋಣೀ ಣ ಸೋ ಸಮಣೋ ||೧೬||

ಬಂಧಂ ನೀರಜಾಃ ಸನ್ ಸಸ್ಯಂ ಖಂಡಯತಿ ತಥಾ ಚ ವಸುಧಾಮಪಿ |
ಛಿನತ್ತಿ ತರುಗಣಂ ಬಹುಶಃ ತಿರ್ಯಗ್ಯೋನಿಃ ನ ಸಃ ಶ್ರಮಣಃ ||೧೬||

---

ಈರಿಯಾಸಮಿತಿಧಾರಕನಿದ್ದಾಲಿಂಗಿ ಶೀಘ್ರನಡೆಯುತ್ತ ನೆಗೆಯುವುದು |
ಹೊರಳಿ ಬೀಳ್ವ ನೆಲ ಅಗೆವವನು ತಿರ್ಯಂಚಯೋನಿಯಿದ್ದು ಶ್ರಮಣವಿಲ್ಲ ||೧೫||

ಯಾವನು ಬಂಧವನು ಗಣಿಸದೆ ಧಾನ್ಯ ಕುಟ್ಟಿದರೆ ನೆಲವನಗೆದರೆ |
ಅವನು ಬಹುವೃಕ್ಷ ಛೇದಿಸಿದರೆ ತಿರ್ಯಂಚ ಯೋನಿಯಿದ್ದು ಶ್ರಮಣನಿಲ್ಲ||೧೬||

ಅರ್ಥ ಃ- ಆ ಲಿಂಗ ಧಾರಣ ಮಾಡಿ ವನಸ್ಪತಿ ಮೊದಲಾದವುಗಳ ಹಿಂಸೆಯಿಂದ ಬಂಧವಾಗುತ್ತಿದ್ದರೂ ಅದನ್ನು ದೋಷವೆಂದು ಮನ್ನಿಸದೆ ಬಂಧವನ್ನು ಗಣನೆಗೆ ತಂದುಕೊಳ್ಳದೆ ಸಸ್ಯ ಎಂದರೆ ಧಾನ್ಯವನ್ನು ಕುಟ್ಟುತ್ತಾನೆ ಮತ್ತು ಅದರಂತೆ ವಸುಧೆ ಎಂದರೆ ಪೃಥ್ವಿಯನ್ನು ಅಗೆಯುತ್ತಾನೆ ಹಾಗೂ ಪುನಃ ಪುನಃ ತರುಗಣ ಎಂದರೆ ವೃಕ್ಷಗಳ ಸಮೂಹವನ್ನು ಕತ್ತರಿಸುತ್ತಾನೆ, ಇಂಥ ಲಿಂಗಿಯು ತಿರ್ಯಂಚ ಯೋನಿಯಿದ್ದಾನೆ, ಪಶುವಿದ್ದಾನೆ, ಅಜ್ಞಾನಿಯಿದ್ದಾನೆ, ಶ್ರಮಣನಿಲ್ಲ.

ಭಾವಾರ್ಥ ಃ- ಜಿನಸೂತ್ರದಲ್ಲಿ ವನಸ್ಪತಿ ಮೊದಲಾದ ಸ್ಥಾವರ ಜೀವಗಳನ್ನು ಹೇಳಿದ್ದಾರೆ ಮತ್ತು ಅವುಗಳ ಹಿಂಸೆಯಿಂದ ಕರ್ಮಬಂಧವಾಗುವುದನ್ನು ಹೇಳಿದ್ದರೂ ಅದನ್ನು ನಿರ್ದೋಷವೆಂದು ತಿಳಿಯುತ್ತ ಇದರಲ್ಲೇನು ದೋಷವಿದೆ,ಯಾವ ಬಂಧವಿದೆಯೆಂದು ಹೇಳುತ್ತಾನೆ. ಹೀಗೆ ಮನ್ನಿಸುತ್ತ ವೈದ್ಯಕರ್ಮಾದಿಗಳ ನಿಮಿತ್ತವಾಗಿ ಔಷಧಾದಿಗಳನ್ನು, ಧಾನ್ಯಗಳನ್ನು ಪೃಥ್ವಿಯನ್ನು ಹಾಗೂ ವೃಕ್ಷಗಳನ್ನು ಖಂಡಿಸುತ್ತಾನೆ, ಅಗೆಯುತ್ತಾನೆ, ಛೇದಿಸುತ್ತಾನೆ ಅವನು ಅಜ್ಞಾನಿ ಪಶುವಿದ್ದಾನೆ, ಲಿಂಗಧಾರಣೆ ಮಾಡಿ ಶ್ರಮಣನೆನಿಸಿಕೊಳ್ಳುತ್ತಾನೆ, ಆದರೆ ಅವನು ಶ್ರಮಣನಿಲ್ಲ. ||೧೬||

ಲಿಂಗಧಾರಣ ಮಾಡಿ ಸ್ತ್ರೀಯರುಗಳಲ್ಲಿ ರಾಗ ಮಾಡುವವನು ಮತ್ತು ಇತರರನ್ನು ದೂಷಿಸುವವನು ಶ್ರಮಣನಿಲ್ಲವೆಂದು ಈಗ ಹೇಳುತ್ತಾರೆ, -

**ರಾಗಂ ಕರೇದಿ ಣಿಚ್ಚಂ ಮಹಿಲಾವಗ್ಗಂ ಪರಂ ಚ ದೂಸೇದಿ ।**
**ದಂಸಣಣಾಣವಿಹೀಣೋ ತಿರಿಕ್ಖಜೋಣೀ ಣ ಸೋ ಸಮಣೋ ||೧೭||**

**ರಾಗಂ ಕರೋತಿ ನಿತ್ಯಂ ಮಹಿಲಾವರ್ಗಂ ಪರಂ ಚ ದೂಷಯತಿ ।**
**ದರ್ಶನಜ್ಞಾನವಿಹೀನಃ ತಿರ್ಯಗ್ಯೋನಿಃ ನ ಸಃ ಶ್ರಮಣಃ ||೧೭||**

ಅರ್ಥ ಃ- ಯಾವನು ಲಿಂಗಧಾರಣ ಮಾಡಿ ಸ್ತ್ರೀ ಸಮೂಹದ ಕುರಿತು ನಿರಂತರ ರಾಗ-ಪ್ರೀತಿ ಮಾಡುತ್ತಾನೆ ಮತ್ತು ಪರ ಎಂದರೆ ಇತರ ನಿರ್ದೋಷಿಗಳಿಗೆ ದೋಷ ತಗಲಿಸುತ್ತಾನೆ ಅವನು ದರ್ಶನ ಜ್ಞಾನಗಳಿಂದ ರಹಿತನಿದ್ದಾನೆ, ಇಂಥ ಲಿಂಗಿಯು ತಿರ್ಯಂಚ ಯೋನಿಯಿದ್ದಾನೆ, ಪಶು ಸಮಾನನಿದ್ದಾನೆ, ಅಜ್ಞಾನಿಯಿದ್ದಾನೆ, ಶ್ರಮಣನಿಲ್ಲ.

ಭಾವಾರ್ಥ ಃ- ಲಿಂಗಧಾರಣ ಮಾಡುವವನಿಗೆ ಸಮ್ಯಗ್ದರ್ಶನ ಜ್ಞಾನಗಳಿರುತ್ತವೆ ಮತ್ತು ಪರದ್ರವ್ಯಗಳಲ್ಲಿ ರಾಗ-ದ್ವೇಷ ಮಾಡದಂಥ ಚಾರಿತ್ರವಿರುತ್ತದೆ. ಆದರೆ ಯಾವನು ಸ್ತ್ರೀ ಸಮೂಹದಲ್ಲಿ ರಾಗ-ಪ್ರೀತಿ ಮಾಡುತ್ತಾನೆ ಮತ್ತು ಅನ್ಯರಿಗೆ ದೋಷ ತಗಲಿಸಿ ದ್ವೇಷ ಮಾಡುತ್ತಾನೆ ವ್ಯಭಿಚಾರಿಯಂಥ ಸ್ವಭಾವವಿದೆ ಅವನಿಗೆಂಥ ದರ್ಶನ ಜ್ಞಾನ ? ಮತ್ತು ಎಂಥ ಚಾರಿತ್ರ ? ಲಿಂಗಧಾರಣ ಮಾಡಿ ಲಿಂಗಯೋಗ್ಯ ಆಚರಣೆ ಮಾಡಬೇಕಿತ್ತು ಇದನ್ನು ಮಾಡದಿದ್ದರೆ ಅಜ್ಞಾನಿ ಪಶು ಸಮಾನನೇ ಇದ್ದಾನೆ, ಶ್ರಮಣನೆನಿಸಿಕೊಳ್ಳುತ್ತಾನೆ, ಆದರೆ ಸ್ವಯಂ ಮಿಥ್ಯಾದೃಷ್ಟಿಯಿದ್ದಾನೆ ಮತ್ತು ಅನ್ಯರನ್ನೂ ಮಿಥ್ಯಾದೃಷ್ಟಿ ಮಾಡುವಂಥವನಿದ್ದಾನೆ, ಇಂಥವರ ಪ್ರಸಂಗ ಕೂಡ ಯುಕ್ತವಿಲ್ಲ. ||೧೭||

---

**ಸ್ತ್ರೀವರ್ಗದ ಮೇಲೆ ನಿತ್ಯರಾಗ ಮಾಡುವನು ದೋಷಕೊಡುವನು ಅನ್ಯರಿಗೆ ।**
**ಅವನು ದರ್ಶನ-ಜ್ಞಾನವಿರಹಿತ ತಿರ್ಯಂಚಯೋನಿಯಿದ್ದು ಶ್ರಮಣನಿಲ್ಲ ||೧೭||**

ಈಗ ಮತ್ತೆ ಹೇಳುತ್ತಾರೆ, -

**ಪವ್ವಜ್ಜಹೀಣಗಹಿಣಂ ಣೇಹಂ ಸೀಸಮ್ಮಿ ವಟ್ಟದೇ ಬಹುಸೋ ।**
**ಆಯಾರವಿಣಯಹೀಣೋ ತಿರಿಕ್ಖಜೋಣೀ ಣ ಸೋ ಸಮಣೋ ॥೧೮॥**

**ಪ್ರವ್ರಜ್ಯಾಹೀನಗೃಹಿಣಿ ಸ್ನೇಹಂ ಶಿಷ್ಯೇ ವರ್ತತೇ ಬಹುಶಃ ।**
**ಆಚಾರವಿನಯಹೀನಃ ತಿರ್ಯಗ್ಯೋನಿಃ ನ ಸಃ ಶ್ರಮಣಃ ॥೧೮॥**

ಅರ್ಥ ಃ- ಯಾವ ಲಿಂಗಿಯು 'ಪ್ರವ್ರಜ್ಯಾಹೀನ' ಎಂದರೆ ದೀಕ್ಷಾರಹಿತವಾದ ಗೃಹಸ್ಥರಲ್ಲಿ ಮತ್ತು ಶಿಷ್ಯರುಗಳಲ್ಲಿ ಅಧಿಕ ಸ್ನೇಹವನ್ನಿಡುತ್ತಾನೆ ಮತ್ತು ಆಚಾರ ಎಂದರೆ ಮುನಿಗಳ ಕ್ರಿಯೆ ಮತ್ತು ಗುರುಗಳ ವಿನಯದಿಂದ ರಹಿತನಿರುತ್ತಾನೆ ಅವನು ತಿರ್ಯಂಚಯೋನಿಯಿದ್ದಾನೆ, ಪಶುವಿದ್ದಾನೆ, ಅಜ್ಞಾನಿಯಿದ್ದಾನೆ, ಶ್ರಮಣನಿಲ್ಲ.

ಭಾವಾರ್ಥ ಃ- ಗೃಹಸ್ಥರಲ್ಲಿ ಪುನಃ ಪುನಃ ಪ್ರೀತಿಭಾವವಿಡುವುದು ಮತ್ತು ಶಿಷ್ಯರಲ್ಲಿ ಅತ್ಯಂತ ಸ್ನೇಹವಿರಿಸುವುದು ಹಾಗೂ ಮುನಿಯ ಆವಶ್ಯಕಾದಿ ಪ್ರವೃತ್ತಿಗಳನ್ನು ಸ್ವಲ್ಪವೂ ಮಾಡದಿರುವುದು, ಗುರುಗಳಿಗೆ ಪ್ರತಿಕೂಲವಾಗಿರುವುದು, ವಿನಯಾದಿಗಳನ್ನು ಮಾಡದಂಥ ಲಿಂಗಿಯು ಪಶುಸಮಾನನಿದ್ದಾನೆ, ಅವನಿಗೆ ಸಾಧುವೆಂದು ಹೇಳುವುದಿಲ್ಲ. ॥೧೮॥

ಲಿಂಗಧಾರಣ ಮಾಡಿ ಪೂರ್ವೋಕ್ತ ಪ್ರಕಾರದಿಂದ ಪ್ರವರ್ತಿಸುವವನು ಶ್ರಮಣನಿಲ್ಲವೆಂಬುದನ್ನು ಈಗ ಸಂಕ್ಷೇಪದಿಂದ ಹೇಳುತ್ತಾರೆ, -

**ಏವಂ ಸಹಿಓ ಮುಣಿವರ ಸಂಜದಮಜ್ಝಮ್ಮಿ ವಟ್ಟದೇ ಣಿಚ್ಚಂ ।**
**ಬಹುಲಂ ಪಿ ಜಾಣಮಾಣೋ ಭಾವವಿಣಟ್ಠೋ ಣ ಸೋ ಸಮಣೋ ॥೧೯॥**

**ಏವಂ ಸಹಿತಃ ಮುನಿವರ ! ಸಂಯತಮಧ್ಯೇ ವರ್ತತೇ ನಿತ್ಯಮ್ ।**
**ಬಹುಲಮಪಿ ಜಾನನ್ ಭಾವವಿನಷ್ಟಃ ನ ಸಃ ಶ್ರಮಣಃ ॥೧೯॥**

ಅರ್ಥ ಃ- ಏವಂ ಎಂದರೆ ಪೂರ್ವೋಕ್ತ ಪ್ರಕಾರದ ಪ್ರವೃತ್ತಿಯೊಡನೆ ವರ್ತಿಸುವಂಥ ಎಲೈ ಮುನಿವರನೇ ! ಇಂಥ ಲಿಂಗಧಾರಿಯು ನಿರಂತರ ಸಂಯಮಿ ಮುನಿಗಳ ಮಧ್ಯದಲ್ಲಿರುತ್ತಿದ್ದರೂ ಮತ್ತು ಬಹಳಷ್ಟು ಶಾಸ್ತ್ರಗಳನ್ನು ತಿಳಿಯುತ್ತಿದ್ದರೂ ಕೂಡ ಭಾವಗಳಿಂದ ನಷ್ಟನಿದ್ದಾನೆ, ಶ್ರಮಣನಿಲ್ಲ.

---

ಸನ್ಯಾಸಹೀನ ಗೃಹಸ್ಥರಲಿ ಮೇಣ್ಶಿಷ್ಯರಲಿ ಬಹು ಸ್ನೇಹವಿಡುವವನು ।
ವಿನಯಾಚಾರವಿಹೀನನಿದ್ದವನು ತಿರ್ಯಂಚಯೋನಿಯಿದ್ದುಶ್ರಮಣನಿಲ್ಲ ॥೧೮॥

ಈ ವಿಧ ವರ್ತಿಸುವವನು ನಿತ್ಯ ಸಂಯಮಿಗಳ ಮಧ್ಯದಲಿದ್ದರು ಸಹ ।
ಅವನು ಬಹುಶಾಸ್ತ್ರತಿಳಿದರು ಭಾವವಿನಷ್ಟನಿಹನು ಶ್ರಮಣನಿಲ್ಲ ॥೧೯॥

ಭಾವಾರ್ಥ :- ಇಂಥ ಪೂರ್ವೋಕ್ತ ಪ್ರಕಾರದ ಲಿಂಗಿಯು ಯಾವಾಗಲೂ ಮುನಿಗಳಲ್ಲಿರುತ್ತಾನೆ ಮತ್ತು ಬಹಳಷ್ಟು ಶಾಸ್ತ್ರಗಳನ್ನು ತಿಳಿಯುತ್ತಿದ್ದರೂ ಭಾವ ಎಂದರೆ ಶುದ್ಧ ದರ್ಶನ ಜ್ಞಾನ ಚಾರಿತ್ರರೂಪದ ಪರಿಣಾಮದಿಂದ ರಹಿತನಿರುವುದರಿಂದ ಮುನಿಯಿಲ್ಲ, ಭ್ರಷ್ಟನಿದ್ದಾನೆ, ಅನ್ಯ ಮುನಿಗಳ ಭಾವ ಕೆಡಿಸುವವನಿದ್ದಾನೆ. ।।೧೯।।

ಸ್ತ್ರೀಯರ ಸಂಸರ್ಗವನ್ನು ಅಧಿಕವಾಗಿ ಇಟ್ಟುಕೊಳ್ಳುವವನು ಕೂಡ ಮುನಿಯಿಲ್ಲವೆಂದು ಈಗ ಹೇಳುತ್ತಾರೆ,-

ದಂಸಣಣಾಣಚರಿತ್ತೇ ಮಹಿಲಾವಗ್ಗಮ್ಮಿ ದೇದಿ ವೀಸಟ್ಠೋ ।
ಪಾಸತ್ಥ ವಿ ಹು ಣಿಯಟ್ಠೋ ಭಾವವಿಣಟ್ಠೋ ಣ ಸೋ ಸಮಣೋ ।।೨೦।।

ದರ್ಶನಜ್ಞಾನಚಾರಿತ್ರಾಣಿ ಮಹಿಲಾವರ್ಗೇ ದದಾತಿ ವಿಶ್ವಸ್ತಃ ।
ಪಾರ್ಶ್ವಸ್ಥಾದಪಿ ಸ್ಫುಟಂ ವಿನಷ್ಟಃ ಭಾವವಿನಷ್ಟಃ ನ ಸಃ ಶ್ರವಣಃ ।।೨೦।।

ಅರ್ಥ :- ಆ ಲಿಂಗಧಾರಣ ಮಾಡಿ ಸ್ತ್ರೀಯರ ಸಮೂಹದಲ್ಲಿ ಅವರ ವಿಶ್ವಾಸ ಗಳಿಸಿ ಮತ್ತು ಅವರಿಗೆ ವಿಶ್ವಾಸವನ್ನುತ್ಪನ್ನಮಾಡಿಸಿ ದರ್ಶನ-ಜ್ಞಾನ-ಚಾರಿತ್ರಗಳನ್ನು ಕೊಡುತ್ತಾನೆ ಅವರಿಗೆ ಸಮ್ಯಕ್ತ್ವವನ್ನು ತಿಳಿಸುತ್ತಾನೆ, ಓದುವುದು, ಓದಿಸುವುದು, ಜ್ಞಾನ ಕೊಡುತ್ತಾನೆ, ದೀಕ್ಷೆ ಕೊಡುತ್ತಾನೆ, ಪ್ರವೃತ್ತಿ ಕಲಿಸುತ್ತಾನೆ, ಹೀಗೆ ವಿಶ್ವಾಸವನ್ನು ಉತ್ಪನ್ನ ಮಾಡಿಸಿ ಅವರಲ್ಲಿ ಪ್ರವರ್ತಿಸುವಂಥ ಲಿಂಗಿಯು ಪಾರ್ಶ್ವಸ್ಥರಿಂದಲೂ ನಿಕೃಷ್ಟನಿದ್ದಾನೆ, ಶ್ರಮಣನಿಲ್ಲ.

ಭಾವಾರ್ಥ :- ಲಿಂಗಧಾರಣ ಮಾಡಿ ಸ್ತ್ರೀಯರಿಗೆ ವಿಶ್ವಾಸವನ್ನುತ್ಪನ್ನಮಾಡಿಸಿ, ಅವರನ್ನು ನಿರಂತರ ಓದುವುದು, ಓದಿಸುವುದು, ಪ್ರೀತಿಭಾವವಿಡುವವನ ಭಾವವು ದೂಷಿತವಿದೆಯೆಂದು ತಿಳಿಯಬೇಕು. ಭ್ರಷ್ಟ ಮುನಿಗೆ ಪಾರ್ಶ್ವಸ್ಥನೆಂದು ಹೇಳುತ್ತಾರೆ ಅವನಿಗಿಂತಲೂ ಇವನು ನಿಕೃಷ್ಟನಿದ್ದಾನೆ, ಇಂಥವರನ್ನು ಸಾಧುವೆಂದು ಹೇಳುವುದಿಲ್ಲ. ।।೨೦।।

ಈಗ ಮತ್ತೆ ಹೇಳುತ್ತಾರೆ,-

ಪುಂಚ್ಛಲಿಘರಿ ಜೋ ಭುಂಜಇ ಣಿಚ್ಚಂ ಸಂಥುಣದಿ ಪೋಸವಿ ಪಿಂಡಂ ।
ಪಾವದಿ ಬಾಲಸಹಾವಂ ಭಾವವಿಣಟ್ಠೋ ಣ ಸೋ ಸಮಣೋ ।।೨೧।।

ಪುಂಶ್ಚಲೀಗೃಹೇ ಯಃ ಭುಂಕ್ತೇ ನಿತ್ಯಂ ಸಂಸ್ತೌತಿ ಪುಷ್ಣಾತಿ ಪಿಂಡಂ ।
ಪ್ರಾಪ್ನೋತಿ ಬಾಲಸ್ವಭಾವಂ ಭಾವವಿನಷ್ಟಃ ನ ಸಃ ಶ್ರಮಣಃ ।।೨೧।।

---

ದರ್ಶನ-ಜ್ಞಾನ-ಚಾರಿತ್ರವಿತ್ತು ಸ್ತ್ರೀವರ್ಗದಲಿ ವಿಶ್ವಾಸವುಂಟು ಮಾಳ್ಪವನು ।
ಪಾರ್ಶ್ವಸ್ಥದಿಂಕೂಡ ಹೀನ ಪ್ರಕಟಭಾವದಿಂದ ವಿನಷ್ಟನಿದ್ದು ಶ್ರಮಣನಿಲ್ಲ ।।೨೦।।

ಯಾವನು ಪುಂಶ್ಚಲಿಗೃಹದಲುಂಡು ನಿತ್ಯವಳ ಸ್ತುತಿಸಿ ಪಿಂಡಪೋಷಿಪನು ।
ಅವನು ಬಾಲಸ್ವಭಾವ ಪಡೆದು ಭಾವವಿನಷ್ಟನಿಹನು ಶ್ರಮಣನಿಲ್ಲ ।।೨೧।।

ಅರ್ಥ :- ಆ ಲಿಂಗಧಾರಿಯು ಪುಂಶ್ಚಲೀ ಎಂದರೆ ವ್ಯಭಿಚಾರಿಣಿ ಸ್ತ್ರೀಯ ಮನೆಯಲ್ಲಿ ಭೋಜನ ಸ್ವೀಕರಿಸುತ್ತಾನೆ, ಆಹಾರ ಮಾಡುತ್ತಾನೆ ಮತ್ತು ಇವಳು ದೊಡ್ಡ ಧರ್ಮಾತ್ಮಳಿದ್ದಾಳೆ ಇವಳಿಗೆ ಸಾಧುಗಳಲ್ಲಿ ಅತಿಶಯ ಭಕ್ತಿಯಿದೆಯೆಂದು ನಿತ್ಯ ಅವಳ ಸ್ತುತಿ ಮಾಡುತ್ತಾನೆ ಪ್ರಶಂಸೆ ಮಾಡುತ್ತಾನೆ ಈ ಪ್ರಕಾರ ಪಿಂಡವನ್ನು (ಶರೀರವನ್ನು) ಪೋಷಿಸುವಂಥ ಆ ಲಿಂಗಿಯು ಬಾಲಸ್ವಭಾವಕ್ಕೆ ಪ್ರಾಪ್ತನಾಗುತ್ತಾನೆ, ಅಜ್ಞಾನಿಯಿದ್ದಾನೆ, ಭಾವದಿಂದ ವಿನಷ್ಟನಿದ್ದಾನೆ, ಅವನು ಶ್ರಮಣನಿಲ್ಲ.

ಭಾವಾರ್ಥ :- ಆ ಲಿಂಗಧಾರಣ ಮಾಡಿ ವ್ಯಭಿಚಾರಿಣಿಯ ಆಹಾರ ತಿಂದು ಪಿಂಡ ಪೋಷಿಸುತ್ತಾನೆ, ನಿತ್ಯ ಅವಳ ಪ್ರಶಂಸೆ ಮಾಡುತ್ತಿದ್ದರೆ ಅವನು ಕೂಡ ವ್ಯಭಿಚಾರಿಯಿದ್ದಾನೆ, ಅಜ್ಞಾನಿಯಿದ್ದಾನೆಂದು ತಿಳಿಯಬೇಕು, ಅವನಿಗೆ ಲಜ್ಜೆ ಕೂಡ ಬರುವುದಿಲ್ಲ, ಹೀಗೆ ಅವನು ಭಾವದಿಂದ ವಿನಷ್ಟನಿದ್ದಾನೆ, ಮುನಿತನದ ಭಾವಗಳಿಲ್ಲವೆಂದಮೇಲೆ ಅವನು ಮುನಿಯೆಂಥವನು ? ॥೨೧॥

ಈಗ ಈ ಲಿಂಗಪಾಹುಡವನ್ನು ಮುಕ್ತಾಯ ಮಾಡುತ್ತ ಯಥಾರ್ಥರೂಪದಿಂದ ಧರ್ಮದ ಪಾಲನೆ ಮಾಡುತ್ತಾನೆ ಅವನು ಉತ್ತಮ ಸುಖವನ್ನು ಪಡೆಯುತ್ತಾನೆಂದು ಹೇಳುತ್ತಾರೆ, –

**ಇಯ ಲಿಂಗಪಾಹುಡಮಿಣಂ ಸವ್ವಂಬುದ್ಧೇಹಿಂ ದೇಸಿಯಂ ಧಮ್ಮಂ ।**
**ಪಾಲೇಇ ಕಟ್ಠಸಹಿಯಂ ಸೋ ಗಾಹದಿ ಉತ್ತಮಂ ಠಾಣಂ ॥೨೨॥**

**ಇತಿ ಲಿಂಗಪ್ರಾಭೃತಮಿದಂ ಸರ್ವಂ ಬುದ್ಧೈಃ ದೇಶಿತಂ ಧರ್ಮಮ್ ।**
**ಪಾಲಯತಿ ಕಷ್ಟಸಹಿತಂ ಸಃ ಗಾಹತೇ ಉತ್ತಮಂ ಸ್ಥಾನಮ್ ॥೨೨॥**

ಅರ್ಥ :- ಈ ಪ್ರಕಾರ ಈ ಲಿಂಗಪಾಹುಡ ಶಾಸ್ತ್ರವನ್ನು – ಸರ್ವಬುದ್ಧ ಆ ಜ್ಞಾನೀ ಗಣಧರ ಮೊದಲಾದವರು ಉಪದೇಶಿಸಿರುವುದನ್ನು ತಿಳಿದುಕೊಂಡು ಯಾವ ಮುನಿಯು ಧರ್ಮವನ್ನು ಕಷ್ಟಸಹಿತ ಅಧಿಕ ಪ್ರಯತ್ನದಿಂದ ಪಾಲಿಸುತ್ತಾನೆ, ರಕ್ಷಣೆ ಮಾಡುತ್ತಾನೆ ಅವನು ಉತ್ತಮ ಸ್ಥಾನವಾದ ಆ ಮೋಕ್ಷವನ್ನು ಪಡೆಯುತ್ತಾನೆ.

ಭಾವಾರ್ಥ :- ಇದು ಮುನಿಯ ಲಿಂಗವಿದ್ದು ಅದು ಮಹಾನ ಪುಣ್ಯದ ಉದಯದಿಂದ ಪ್ರಾಪ್ತವಾಗುತ್ತದೆ, ಅದನ್ನು ಪ್ರಾಪ್ತಮಾಡಿಕೊಂಡು ಕೂಡ ಪುನಃ ದುಷ್ಟಕಾರಣಗಳನ್ನು ಬೆರಸಿ ಅದನ್ನು ಕೆಡಿಸುತ್ತಿದ್ದರೆ ಇವನು ಅತ್ಯಂತ ಭಾಗ್ಯಹೀನನಿದ್ದಾನೆಂದು ತಿಳಿಯಬೇಕು. ಚಿಂತಾಮಣಿ ರತ್ನವನ್ನು ಪಡೆದು ಕವಡೆಗೆ ಪ್ರತಿಯಾಗಿ ನಷ್ಟ ಮಾಡುತ್ತಾನೆ, ಆದುದರಿಂದ ಇಂಥ ಪದವನ್ನು ಪಡೆದು ಇದನ್ನು ತುಂಬ ಯತ್ನದಿಂದ ರಕ್ಷಣೆ ಮಾಡಬೇಕು. ಕುಸಂಗತಿ ಮಾಡಿ ಕೆಡಿಸಿಕೊಂಡರೆ ಮೊದಲು ಹೇಗೆ ಸಂಸಾರ ಭ್ರಮಣವಿತ್ತು ಹಾಗೆಯೇ ಪುನಃ ಸಂಸಾರದಲ್ಲಿ ಅನಂತಕಾಲ ಭ್ರಮಣ ಮಾಡಬೇಕಾಗುವುದು ಮತ್ತು ಯತ್ನಪೂರ್ವಕ ಮುನಿತನದ ಪಾಲನೆ ಮಾಡಿದರೆ ಶೀಘ್ರವಾಗಿ ಮೋಕ್ಷ ಪ್ರಾಪ್ತಮಾಡಿಕೊಳ್ಳಬಹುದು. ಆದುದರಿಂದ ಮೋಕ್ಷ ಬೇಕಾದವರು ಮುನಿಧರ್ಮವನ್ನು ಪ್ರಾಪ್ತಮಾಡಿಕೊಂಡು ಯತ್ನಸಹಿತ ಪಾಲನೆ ಮಾಡಬೇಕು. ಪರೀಷಹದ, ಉಪಸರ್ಗದ ಉಪದ್ರವವುಂಟಾದರೂ ಚಂಚಲರಾಗಬಾರದೆಂಬುದೇ ಶ್ರೀ ಸರ್ವಜ್ಞ ದೇವರ ಉಪದೇಶವಿದೆ. ॥೨೨॥

---

**ಈ ರೀತಿ ಸರ್ವಜ್ಞೋಪದೇಶಿತವಾದೀ ಲಿಂಗಪಾಹುಡವನು ತಿಳಿದುಕೊಂಡು ।**
**ಯಾರು ಕಷ್ಟಸಹಧರ್ಮಪಾಲಿಪರವರು ಉತ್ತಮಸ್ಥಾನ ಪಡೆಯುವರು ॥೨೨॥**

ಹೀಗೆ ಈ ಲಿಂಗಪಾಹುಡ ಗ್ರಂಥವನ್ನು ಪೂರ್ಣಮಾಡಲಾಯಿತು. ಇದರ ಸಂಕ್ಷೇಪವೇನೆಂದರೆ ಈ ಪಂಚಮಕಾಲದಲ್ಲಿ ಜಿನಲಿಂಗ ಧಾರಣಮಾಡಿ ಪುನಃ ದುರ್ಭಿಕ್ಷದ ನಿಮಿತ್ತದಿಂದ ಭ್ರಷ್ಟರಾಗಿ ಮೋಕ್ಷಕೆಡಿಸಿಕೊಂಡವರು ಅರ್ಧಫಾಲಕರೆನಿಸಿಕೊಂಡರು, ಇವರಲ್ಲಿ ಪುನಃ ಶ್ವೇತಾಂಬರರಾದರು, ಇವರಲ್ಲೂ ಮತ್ತೆ ಯಾಪನೀಯರಾದರು, ಇವೇ ಮೊದಲಾದವರಾಗಿ ಶಿಥಿಲಾಚಾರವನ್ನು ಪುಷ್ಟೀಕರಿಸುವ ಶಾಸ್ತ್ರಗಳನ್ನು ರಚಿಸಿ ಸ್ವಚ್ಛಂದರಾಗಿ ಹೋದರು. ಇವರಲ್ಲಿ ಕೆಲವರು ಅತ್ಯಂತ-ತೀರ ನಿಂದ್ಯ ಪ್ರವೃತ್ತಿಮಾಡತೊಡಗಿದರು. ಇವರ ನಿಷೇಧ ಮಾಡುವ ಸಲುವಾಗಿ ಹಾಗೂ ಎಲ್ಲರಿಗೂ ಸತ್ಯ ಉಪದೇಶ ಕೊಡುವ ಸಲುವಾಗಿ ಈ ಗ್ರಂಥವಿದೆ, ಇದನ್ನು ತಿಳಿದುಕೊಂಡು ಶ್ರದ್ಧೆ ಮಾಡಬೇಕು. ಈ ಪ್ರಕಾರ ನಿಂದ್ಯ ಆಚರಣವುಳ್ಳವರನ್ನು ಸಾಧುಗಳೆಂದು – ಮೋಕ್ಷ ಮಾರ್ಗಿಗಳೆಂದು ಮನ್ನಿಸಬಾರದು, ಇವರ ವಂದನೆ ಹಾಗೂ ಪೂಜೆ ಮಾಡಬಾರದೆಂಬ ಉಪದೇಶವಿದೆ.

ಧರಿಸುವರು ಬಾಹ್ಯಾಭ್ಯಂತರ ಶುದ್ಧವಾದ ಜಿನಮುದ್ರೆಯನು
ಅವರು ಆನಂದಮಯ ಸಿದ್ಧರಾದರವರ್ಗೆ ವಂದಿಸುವೆನು

ಈ ಪ್ರಕಾರ ಭ. ಕುಂದಕುಂದಾಚಾರ್ಯದೇವವಿರಚಿತ ಅಷ್ಟಪಾಹುಡದಲ್ಲಿ ಏಳನೆಯ ಲಿಂಗಪಾಹುಡ
ಮತ್ತು ಅದರ ಜಯಚಂದ ಛಾಬಡಾಕೃತ ದೇಶಭಾಷಾಮಯ ವಚನಿಕೆಯ
ಕನ್ನಡ ಭಾಷಾನುವಾದವು ಸಮಾಪ್ತವಾಯಿತು.

## ೮

# ಶೀಲಪಾಹುಡ

ಭವಪ್ರಕೃತಿ ನಿವಾರಿಸಿ ನಿಜಭಾವ ಪ್ರಕಟ ಮಾಡಿರುವ ।
ಶ್ರೀ ಅರಹಂತ ಸಿದ್ಧರಿಗೆ ಅನುರಾಗದಿಂದೀಗ ವಂದಿಸುವೆ ॥

ಈ ಪ್ರಕಾರ ಇಷ್ಟರಿಗೆ ನಮಸ್ಕಾರರೂಪದ ಮಂಗಲಮಾಡಿ ಶೀಲಪಾಹುಡಗ್ರಂಥ ಭ. ಕುಂದಕುಂದಾಚಾರ್ಯದೇವವಿರಚಿತ ಪ್ರಾಕೃತ ಗಾಥಾಬಂಧದ ದೇಶಭಾಷಾಮಯ ವಚನಿಕೆಯ ಕನ್ನಡ ಭಾಷಾನುವಾದ ಮಾಡುತ್ತೇವೆ. ಪ್ರಾರಂಭದಲ್ಲಿ ಭ. ಕುಂದಕುಂದಾಚಾರ್ಯದೇವರು ಗ್ರಂಥದ ಆದಿಯಲ್ಲಿ ಇಷ್ಟರಿಗೆ ನಮಸ್ಕಾರ ರೂಪದ ಮಂಗಲಮಾಡಿ ಗ್ರಂಥ ರಚಿಸುವ ಪ್ರತಿಜ್ಞೆ ಮಾಡುತ್ತಾರೆ,-

ವೀರಂ ವಿಸಾಲಣಯಣಂ ರತ್ತುಪ್ಪಲಕೋಮಲಸ್ಸಮಪ್ಪಾಯಂ ।
ತಿವಿಹೇಣ ಪಣಮಿಊಣಂ ಸೀಲಗುಣಾಣಂ ಣಿಸಾಮೇಹ ॥೧॥

ವೀರಂ ವಿಶಾಲನಯನಂ ರಕ್ತೋತ್ಪಲಕೋಮಲಸಮಪಾದಮ್ ।
ತ್ರಿವಿಧೇನ ಪ್ರಣಮ್ಯ ಶೀಲಗುಣಾನ್ ನಿಶಾಮ್ಯಾಮಿ ॥೧॥

ಅರ್ಥ :- ನಾನು ವೀರ ಎಂದರೆ ಅಂತಿಮ ತೀರ್ಥಂಕರ ಶ್ರೀ ವರ್ಧಮಾನಸ್ವಾಮಿ ಪರಮಭಟ್ಟಾರಕರಿಗೆ ಮನ-ವಚನ-ಕಾಯದಿಂದ ನಮಸ್ಕಾರ ಮಾಡಿ ಶೀಲ ಎಂದರೆ ನಿಜಭಾವರೂಪ ಪ್ರಕೃತಿಯ ಗುಣಗಳನ್ನು ಅಥವಾ ಶೀಲ ಮತ್ತು ಸಮ್ಯಗ್ದರ್ಶನ ಮೊದಲಾದ ಗುಣಗಳನ್ನು ಹೇಳುವೆನೆಂದು ಆಚಾರ್ಯದೇವರು ಹೇಳುತ್ತಾರೆ. ಆ ವರ್ಧಮಾನಸ್ವಾಮಿಗಳು ವಿಶಾಲನಯನರಿದ್ದಾರೆ, ಅವರಿಗೆ ಬಾಹ್ಯದಲ್ಲಿ ಪದಾರ್ಥಗಳನ್ನು ನೋಡುವುದಕ್ಕೆ ನೇತ್ರಗಳು ವಿಶಾಲವಿವೆ, ವಿಸ್ತೀರ್ಣವಿವೆ, ಸುಂದರವಿವೆ ಮತ್ತು ಅಂತರಂಗದಲ್ಲಿ ಕೇವಲದರ್ಶನ,ಕೇವಲಜ್ಞಾನರೂಪದ ನೇತ್ರಗಳು ಸಮಸ್ತ ಪದಾರ್ಥಗಳನ್ನು ನೋಡುವಂಥವುಗಳಿವೆ. ಮತ್ತು ಅವರು 'ರಕ್ತೋತ್ಪಲ ಕೋಮಲ ಸಮಪಾದಂ' ಎಂದರೆ ಅವರ ಚರಣಗಳು ರಕ್ತಕಮಲದ ಸಮಾನ ಕೋಮಲವಿವೆ, ಇಂಥವು ಅನ್ಯರಿಗೆ ಇಲ್ಲದಿರುವುದರಿಂದ ಎಲ್ಲರಿಂದ ಪ್ರಶಂಸೆ

---

ಆ ವಿಶಾಲನಯನ ರಕ್ತಕಮಲಸಮಮೃದುಪಾದದ ಶ್ರೀ ವೀರನಿಗೆ ।
ತ್ರಿವಿಧದಿ ನಮನವನು ಮಾಡಿ ವರ್ಣಿಸುವೆನೀಗ ಶೀಲಗುಣಗಳನು ॥೧॥

ಮಾಡಲು ಯೋಗ್ಯವಿವೆ, ಪೂಜಿಸಲು ಯೋಗ್ಯವಿವೆ. ಇದರ ಎರಡನೇ ಅರ್ಥವು ಹೀಗೂ ಆಗುತ್ತದೆ-ರಕ್ತ ಎಂದರೆ ರಾಗರೂಪ ಆತ್ಮನ ಭಾವ, ಉತ್ಪಲ ಎಂದರೆ ದೂರಮಾಡುವಲ್ಲಿ ಕೋಮಲ ಎಂದರೆ ಕಠೋರತಾದಿ ದೋಷಗಳಿಲ್ಲದ ಮತ್ತು ಸಮ ಎಂದರೆ ರಾಗ-ದ್ವೇಷಗಳಿಲ್ಲದ, ಪಾದ ಎಂದರೆ ಅವರ ವಾಣಿಯ ಪದಗಳಿವೆ, ಅವರ ವಚನವು ಕೋಮಲ ಹಿತವಾದ ಮಧುರ ರಾಗ-ದ್ವೇಷಗಳಿಲ್ಲದೆ ಪ್ರವರ್ತಿಸುತ್ತದೆ, ಆದರಿಂದ ಎಲ್ಲರ ಕಲ್ಯಾಣವಾಗುತ್ತದೆ.

ಭಾವಾರ್ಥ ಃ- ಈ ಪ್ರಕಾರ ವರ್ಧಮಾನಸ್ವಾಮಿಗೆ ನಮಸ್ಕಾರರೂಪದ ಮಂಗಲ ಮಾಡಿ ಆಚಾರ್ಯದೇವರು ಶೀಲಪಾಹುಡಗ್ರಂಥ ರಚಿಸುವ ಪ್ರತಿಜ್ಞೆ ಮಾಡಿದ್ದಾರೆ. ॥೧॥

ಈಗ ಶೀಲದರೂಪ ಹಾಗೂ ಇದರಿಂದ (ಜ್ಞಾನ) ಗುಣವಾಗುತ್ತದೆಂಬುದನ್ನು ಹೇಳುತ್ತಾರೆ, -

ಸೀಲಸ್ಸ ಯ ಣಾಣಸ್ಸ ಯ ಣತ್ಥಿ ವಿರೋಹೋ ಬುಧೇಹಿಂ ಣಿದ್ದಿಟ್ಠೋ ।
ಣವರಿ ಯ ಸೀಲೇಣ ವಿಣಾ ವಿಸಯಾ ಣಾಣಂ ವಿಣಾಸಂತಿ ॥೨॥

ಶೀಲಸ್ಯ ಚ ಜ್ಞಾನಸ್ಯ ಚ ನಾಸ್ತಿ ವಿರೋಧೋ ಬುಧೈಃ ನಿರ್ದಿಷ್ಟಃ ।
ಕೇವಲಂ ಚ ಶೀಲೇನ ವಿನಾ ವಿಷಯಾಃ ಜ್ಞಾನಂ ವಿನಾಶಯಂತಿ ॥೨॥

ಅರ್ಥ ಃ- ಜ್ಞಾನಿಗಳು ಶೀಲದಲ್ಲಿ ಮತ್ತು ಜ್ಞಾನದಲ್ಲಿ ವಿರೋಧವನ್ನು ಹೇಳಿಲ್ಲ. ಎಲ್ಲಿ ಶೀಲವಿದೆ ಅಲ್ಲಿ ಜ್ಞಾನವಿಲ್ಲ ಮತ್ತು ಎಲ್ಲಿ ಜ್ಞಾನವಿದೆ ಇಲ್ಲಿ ಶೀಲವಿಲ್ಲವೆಂಬುದಾಗಿಲ್ಲ. ಇಲ್ಲಿ ಣವರಿ ಎಂದರೆ ವಿಶೇಷವಿರುವುದನ್ನು ಹೇಳುತ್ತಾರೆ - ಶೀಲವಿಲ್ಲದೆ ವಿಷಯ ಎಂದರೆ ಇಂದ್ರಿಯ ವಿಷಯಗಳಿವೆ ಅವು ಜ್ಞಾನವನ್ನು ನಷ್ಟಮಾಡುತ್ತವೆ-ಜ್ಞಾನವನ್ನು ಮಿಥ್ಯಾತ್ವ ರಾಗ-ದ್ವೇಷಮಯವಾಗಿ ಅಜ್ಞಾನರೂಪವಾಗಿ ಮಾಡುತ್ತವೆ.

ಶೀಲವೆಂಬ ಹೆಸರು ಸ್ವಭಾವದ್ದಿದೆ-ಪ್ರಕೃತಿಯದ್ದಿದೆಯೆಂಬುದು ಪ್ರಸಿದ್ಧವಿದೆ, ಸಾಮಾನ್ಯರೂಪದಿಂದ ಜ್ಞಾನವು ಆತ್ಮನ ಸ್ವಭಾವವಿದೆಯೆಂದು ತಿಳಿಯಬೇಕು. ಈ ಜ್ಞಾನಸ್ವಭಾವದಲ್ಲಿ ಅನಾದಿ ಕರ್ಮಸಂಯೋಗದಿಂದ (ಪರಸಂಗ ಮಾಡುವ ಪ್ರವೃತ್ತಿಯಿಂದ) ಮಿಥ್ಯಾತ್ವ ರಾಗ-ದ್ವೇಷರೂಪದ ಪರಿಣಾಮಗಳಾಗುತ್ತವೆ ಆದರಿಂದಾಗಿ ಈ ಜ್ಞಾನದ ಪ್ರವೃತ್ತಿಯು ಕುಶೀಲನಾಮಕ್ಕೆ ಪ್ರಾಪ್ತವಾಗುತ್ತದೆ, ಇದರಿಂದ ಸಂಸಾರವು ಸಮೃದ್ಧವಾಗುವುದರಿಂದ ಇದನ್ನು ಸಂಸಾರ ಪ್ರಕೃತಿಯೆಂದು ಹೇಳುತ್ತಾರೆ, ಈ ಪ್ರಕೃತಿಯನ್ನು ಅಜ್ಞಾನರೂಪವೆಂದು ಹೇಳುತ್ತಾರೆ, ಈ ಕುಶೀಲ-ಪ್ರಕೃತಿಯಿಂದ ಸಂಸಾರದ ಪರ್ಯಾಯದಲ್ಲಿ ತನ್ನತನವನ್ನು ಮನ್ನಿಸುತ್ತಾನೆ ಮತ್ತು ಪರದ್ರವ್ಯಗಳಲ್ಲಿ ಇಷ್ಟಾನಿಷ್ಟಬುದ್ಧಿ ಮಾಡುತ್ತಾನೆ.

ಈ ಪ್ರಕೃತಿಯು ಬದಲಾವಣೆಯಾದಾಗ ಮಿಥ್ಯಾತ್ವದ ಅಭಾವವಾಯಿತೆಂದು ಹೇಳಲಾಗುವುದು, ಆಗ ಪುನಃ ಸಂಸಾರದ ಪರ್ಯಾಯದಲ್ಲಿ ತನ್ನತನವನ್ನು ಮನ್ನಿಸುವುದಿಲ್ಲ, ಪರದ್ರವ್ಯಗಳಲ್ಲಿ ಇಷ್ಟಾನಿಷ್ಟದ ಬುದ್ಧಿಯಾಗುವುದಿಲ್ಲ ಮತ್ತು (ಪದದ ಅನುಸಾರ ಎಂದರೆ) ಈ ಭಾವದ ಪೂರ್ಣತೆಯಾಗದವರೆಗೆ ಚಾರಿತ್ರಮೋಹದ ಉದಯದಿಂದ (-ಉದಯದಲ್ಲಿ ಯುಕ್ತವಿರುವುದರಿಂದ) ಒಂದಿಷ್ಟು ರಾಗದ್ವೇಷರೂಪದ ಕಷಾಯ ಪರಿಣಾಮಗಳು ಉತ್ಪನ್ನವಾಗುತ್ತವೆ ಅವನ್ನು ಕರ್ಮದ ಉದಯವೆಂದು ತಿಳಿದುಕೊಂಡು, ಆ ಭಾವಗಳನ್ನು ತ್ಯಾಗಮಾಡಲು ಯೋಗ್ಯವಾದವುಗಳೆಂದು ತಿಳಿದುಕೊಂಡು

---

ಶೀಲದಲಿ ಅಂತೆ ಜ್ಞಾನದಲಿ ವಿರೋಧವಿಲ್ಲೆಂದು ಬುಧರು ಪೇಳಿರುವರು ।
ಶೀಲವಿಲ್ಲದ ಕೇವಲ ವಿಷಯಗಳು ಜ್ಞಾನವನು ವಿನಾಶಮಾಡುವವು ॥೨॥

ತ್ಯಾಗಮಾಡಲಪೇಕ್ಷಿಸುವಂಥ ಪ್ರಕೃತಿಯಾದಾಗ ಸಮ್ಯಗ್ದರ್ಶನರೂಪದ ಭಾವಗಳೆಂದು ಹೇಳುತ್ತಾರೆ, ಈ ಸಮ್ಯಗ್ದರ್ಶನ ಭಾವದಿಂದ ಜ್ಞಾನಕೂಡ ಸಮ್ಯಕ್‌ನಾಮ ಪಡೆಯುತ್ತದೆ ಮತ್ತು ಪದದ ಅನುಸಾರ ಚಾರಿತ್ರದ ಪ್ರವೃತ್ತಿಯಾಗುತ್ತದೆ ಎಷ್ಟು ಅಂಶದಲ್ಲಿ ರಾಗದ್ವೇಷಗಳು ಕಡಿಮೆಯಾಗುತ್ತವೆ ಅಷ್ಟು ಅಂಶ ಚಾರಿತ್ರವೆಂದು ಹೇಳುತ್ತಾರೆ ಮತ್ತು ಇಂಥ ಪ್ರಕೃತಿಯನ್ನು ಸುಶೀಲವೆಂದು ಹೇಳುತ್ತಾರೆ. ಹೀಗೆ ಕುಶೀಲ-ಸುಶೀಲ ಶಬ್ದದ ಸಾಮಾನ್ಯ ಅರ್ಥವಿದೆ,

ಸಾಮಾನ್ಯರೂಪದಿಂದ ವಿಚಾರ ಮಾಡದರೆ ಜ್ಞಾನವೇ ಕುಶೀಲವಿದೆ ಮತ್ತು ಜ್ಞಾನವೇ ಸುಶೀಲವಿರುವುದರಿಂದ ಜ್ಞಾನದಲ್ಲಿ ಮತ್ತು ಶೀಲದಲ್ಲಿ ವಿರೋಧವಿಲ್ಲವೆಂದು ಹೇಳುತ್ತಾರೆ. ಯಾವಾಗ ಸಂಸಾರದ ಪ್ರಕೃತಿಯು ಬದಲಾವಣೆಯಾಗಿ ಮೋಕ್ಷಸನ್ಮುಖ ಪ್ರಕೃತಿಯಾಗುತ್ತದೆ ಆಗ ಸುಶೀಲವೆಂದು ಹೇಳುತ್ತಾರೆ, ಆದಕ್ಕಾಗಿ ಜ್ಞಾನದಲ್ಲಿ ಶೀಲದಲ್ಲಿ ವ್ಯತ್ಯಾಸ ಹೇಳಿಲ್ಲ, ಒಂದು ವೇಳೆ ಜ್ಞಾನದಲ್ಲಿ ಸುಶೀಲವು ಬಾರದಿದ್ದರೆ ಜ್ಞಾನವನ್ನು ಇಂದ್ರಿಯ ವಿಷಯಗಳು ನಷ್ಟಮಾಡುತ್ತವೆ ಜ್ಞಾನವನ್ನು ಅಜ್ಞಾನ ಮಾಡುತ್ತವೆ ಆಗ ಅದು ಕುಶೀಲವೆಂಬ ಹೆಸರನ್ನು ಪಡೆಯುತ್ತದೆ.

ಪ್ರಶ್ನೆ :- ಗಾಥೆಯಲ್ಲಿ ಜ್ಞಾನ-ಅಜ್ಞಾನದ ಹಾಗೂ ಕುಶೀಲ-ಸುಶೀಲದ ಹೆಸರನ್ನಂತೂ ಹೇಳಿಲ್ಲ, ಜ್ಞಾನ ಮತ್ತು ಶೀಲವೆಂದಿಷ್ಟೇ ಹೇಳಿರುವರಲ್ಲ ?

ಉತ್ತರ :- ಗಾಥೆಯಲ್ಲಿ ಮೊದಲು ನಾನು ಶೀಲದ ಗುಣಗಳನ್ನು ಹೇಳುವೆನೆಂದು ಪ್ರತಿಜ್ಞೆ ಮಾಡಿರುವುದರಿಂದ ಆಚಾರ್ಯರ ಆಶಯದಲ್ಲಿ ಸುಶೀಲವನ್ನೇ ಹೇಳುವ ಪ್ರಯೋಜನವಿದೆಯೆಂಬುದು ತಿಳಿದುಬರುತ್ತದೆ. ಅವರು ಸುಶೀಲವನ್ನು ಶೀಲದ ಹೆಸರಿನಿಂದ ಹೇಳುತ್ತಾರೆ ಮತ್ತು ಶೀಲವಿಲ್ಲದುದನ್ನು ಕುಶೀಲವೆಂದು ಹೇಳುತ್ತಾರೆ.

ಇಲ್ಲಿ ಗುಣ ಶಬ್ದವನ್ನು ಉಪಕಾರ ವಾಚಕವಾಗಿ ಸ್ವೀಕರಿಸಬೇಕು ಮತ್ತು ವಿಶೇಷ ವಾಚಕವಾಗಿ ಸ್ವೀಕರಿಸಬೇಕು ಶೀಲದಿಂದ ಉಪಕಾರವಾಗುತ್ತದೆ ಮತ್ತು ಶೀಲಕ್ಕೆ ವಿಶೇಷ ಗುಣಗಳಿವೆ ಅವನ್ನು ಹೇಳಲಾಗುವುದು. ಈ ಪ್ರಕಾರ ಜ್ಞಾನದಲ್ಲಿ ಆ ಶೀಲವು ಬಾರದೆ ಹೋದರೆ ಅದು ಕುಶೀಲವಾಗುತ್ತದೆ, ಇಂದ್ರಿಯ ವಿಷಯಗಳಲ್ಲಿ ಆಸಕ್ತಿಯಾಗುತ್ತದೆ ಆಗ ಅದು ಜ್ಞಾನವೆಂಬ ಹೆಸರನ್ನು ಪ್ರಾಪ್ತಮಾಡಿಕೊಳ್ಳುವುದಿಲ್ಲವೆಂದು ತಿಳಿದುಕೊಳ್ಳಬೇಕಾಗುವುದು. ವ್ಯವಹಾರದಲ್ಲಿ ಶೀಲದ ಅರ್ಥವು ಸ್ತ್ರೀ ಸಂಸರ್ಗವನ್ನು ವರ್ಜನಮಾಡುವುದೆಂದು ಕೂಡ ಇದೆ, ಆದಕ್ಕಾಗಿ ವಿಷಯ-ಸೇವನೆಯದೂ ನಿಷೇಧವಿದೆ, ಪರದ್ರವ್ಯಮಾತ್ರದ ಸಂಸರ್ಗವನ್ನು ಬಿಡುವುದು, ಆತ್ಮನಲ್ಲಿ ಮಗ್ನವಾಗುವುದು ಅದು ಶ್ರೇಷ್ಠ ಬ್ರಹ್ಮಚರ್ಯವಿದೆ, ಈ ಪ್ರಕಾರ ಇವನ್ನು ಶೀಲದ ನಾಮಾಂತರಗಳೆಂದೇ ತಿಳಿಯಬೇಕು. ॥೨॥

ಜ್ಞಾನವಾದ ನಂತರ ಕೂಡ ಜ್ಞಾನದ ಭಾವನೆ ಮಾಡುವುದು ಮತ್ತು ವಿಷಯಗಳಿಂದ ವಿರಕ್ತವಾಗುವುದು ಕಠಿಣವಿದೆ (ದುರ್ಲಭವಿದೆ)ಯೆಂದು ಈಗ ಹೇಳುತ್ತಾರೆ, -

[೧]ದುಕ್ಖೇ ಣಜ್ಜದಿ ಣಾಣಂ ಣಾಣಂ ಣಾಊಣ ಭಾವಣಾ ದುಕ್ಖಂ ।
ಭಾವಿಯಮಈ ವ ಜೀವೋ ವಿಸಯೇಸು ವಿರಜ್ಜಏ ದುಕ್ಖಂ ॥೩॥

---

ಜ್ಞಾನವನು ದುಃಖದಿಂ ತಿಳಿಯುವನು ಮತ್ತೆ ಭಾವನೆ ದುಃಖದಿಂದಾಗುವುದು ।
ಅನಂತರ ಭಾವನಾಯುಕ್ತಜೀವ ದುಃಖದಿಂ ವಿಷಯವಿರಕ್ತನಾಗುವನು ॥೩॥

---

೧ 'ದುಃಖೇ ಣ್ಣಜ್ಜದಿ' ಎಂಬ ಪಾಠಾಂತರವಿದೆ.

[1]ದುಃಖೇನೇಯತೇ ಜ್ಞಾನಂ ಜ್ಞಾನಂ ಜ್ಞಾತ್ವಾ ಭಾವನಾ ದುಃಖಮ್ ।
ಭಾವಿತಮತಿಶ್ಚ ಜೀವಃ ವಿಷಯೇಷು ವಿರಜ್ಯತಿ ದುಃಖಮ್ ॥೩॥

ಅರ್ಥ ಃ- ಮೊದಲಂತೂ ಜ್ಞಾನವು ದುಃಖದಿಂದಲೇ ಪ್ರಾಪ್ತವಾಗುತ್ತದೆ, ಎಂದಾದರೊಮ್ಮೆ ಜ್ಞಾನವನ್ನು ಪ್ರಾಪ್ತಮಾಡಿಕೊಂಡರೂ ಅದನ್ನು ತಿಳಿದುಕೊಂಡು ಅದರ ಭಾವನೆ ಮಾಡುವುದು, ಪುನಃಪುನಃ ಅನುಭವ ಮಾಡುವುದು ದುಃಖದಿಂದ (-ದೃಢವಾದ ಸಮ್ಯಕ್ ಪುರುಷಾರ್ಥದಿಂದ) ಆಗುತ್ತದೆ ಮತ್ತು ಎಂದಾದರೊಮ್ಮೆ ಜೀವನು ಜ್ಞಾನದ ಭಾವನಾಸಹಿತನಾಗಿ ಹೋದರೂ ಕೂಡ ವಿಷಯಗಳನ್ನು ದುಃಖದಿಂದ ತ್ಯಾಗಮಾಡುತ್ತಾನೆ.

ಭಾವಾರ್ಥ ಃ- ಜ್ಞಾನದ ಪ್ರಾಪ್ತಿಮಾಡಿಕೊಳ್ಳುವುದು, ಪುನಃ ಅದರ ಭಾವನೆ ಮಾಡುವುದು, ಪುನಃ ವಿಷಯಗಳ ತ್ಯಾಗಮಾಡುವುದು ಇವೆಲ್ಲವು ಉತ್ತರೋತ್ತರ ದುರ್ಲಭವಿವೆ ಮತ್ತು ವಿಷಯಗಳ ತ್ಯಾಗಮಾಡಿದಲ್ಲದೆ ಪ್ರಕೃತಿಯು ಬದಲಾಗಿ ಹೋಗುವುದಿಲ್ಲ. ಆದುದರಿಂದ ವಿಷಯಗಳು ಜ್ಞಾನವನ್ನು ಕೆಡಿಸುತ್ತಿರುವುದರಿಂದ ಮೊದಲು ವಿಷಯಗಳ ತ್ಯಾಗಮಾಡುವುದೇ ಸುಶೀಲವಿದೆಯೆಂದು ಹೇಳಿದೆ. ॥೩॥

ಈ ಜೀವನು ಎಲ್ಲಿಯವರೆಗೆ ವಿಷಯಗಳಲ್ಲಿ ಪ್ರವರ್ತಿಸುತ್ತಾನೆ ಅಲ್ಲಿಯವರೆಗೆ ಜ್ಞಾನವನ್ನು ತಿಳಿಯುವುದಿಲ್ಲ ಮತ್ತು ಜ್ಞಾನವನ್ನು ತಿಳಿದುಕೊಂಡಲ್ಲದೆ ವಿಷಯಗಳಿಂದ ವಿರಕ್ತನಾದರೂ ಕೂಡ ಕರ್ಮಗಳ ಕ್ಷಯ ಮಾಡುವುದಿಲ್ಲ-ವೆಂಬುದನ್ನು ಈಗ ಹೇಳುತ್ತಾರೆ, -

ತಾವ ಣ ಜಾಣದಿ ಣಾಣಂ ವಿಸಯಬಲೋ ಜಾವ ವಟ್ಟಏ ಜೀವೋ ।
ವಿಸಏ ವಿರತ್ತಮೇತ್ತೋ ಣ ಖವೇಇ ಪುರಾಇಯಂ ಕಮ್ಮಂ ॥೪॥

ತಾವತ್ ನ ಜಾನಾತಿ ಜ್ಞಾನಂ ವಿಷಯಬಲಃ ಯಾವತ್ ವರ್ತತೇ ಜೀವಃ ।
ವಿಷಯೇ ವಿರಕ್ತಮಾತ್ರಃ ನ ಕ್ಷಿಪತೇ ಪುರಾತನಂ ಕರ್ಮಂ ॥೪॥

ಅರ್ಥ ಃ- ಎಲ್ಲಿಯವರೆಗೆ ಈ ಜೀವನು ವಿಷಯಬಲ ಎಂದರೆ ವಿಷಯಗಳ ವಶೀಭೂತನಾಗಿರುತ್ತಾನೆ ಅಲ್ಲಿವರೆಗೆ ಜ್ಞಾನವನ್ನು ತಿಳಿಯುವುದಿಲ್ಲ ಮತ್ತು ಜ್ಞಾನವನ್ನು ತಿಳಿದುಕೊಂಡಲ್ಲದೆ ಕೇವಲ ವಿಷಯಗಳಲ್ಲಿ ವಿರಕ್ತನಾಗುವ ಮಾತ್ರದಿಂದ ಮೊದಲು ಕಟ್ಟಿದ ಕರ್ಮಗಳ ಕ್ಷಯ ಮಾಡುವುದಿಲ್ಲ.

ಭಾವಾರ್ಥ ಃ- ಜೀವದ ಉಪಯೋಗವು ಕ್ರಮವರ್ತಿಯಿದೆ ಮತ್ತು ಸ್ವಸ್ಥ (ಸ್ವಚ್ಛತ್ವ) ಸ್ವಭಾವವಿದೆ, ಆದುದರಿಂದ ಜ್ಞೇಯವನ್ನು ತಿಳಿಯುವ ಸಮಯದಲ್ಲಿ ಅದರೊಳಗೆ ತನ್ಮಯನಾಗಿ ವರ್ತಿಸುತ್ತಾನೆ, ಅದಕ್ಕಾಗಿ ಎಲ್ಲಿಯವರೆಗೆ ವಿಷಯಗಳಲ್ಲಿ ಆಸಕ್ತನಾಗಿ ವರ್ತಿಸುತ್ತಾನೆ ಅಲ್ಲಿಯವರೆಗೆ ಜ್ಞಾನದ ಅನುಭವವಾಗುವುದಿಲ್ಲ, ಇಷ್ಟಾ ನಿಷ್ಟ ಭಾವಗಳೇ ಉಳಿಯುತ್ತವೆ ಮತ್ತು ಜ್ಞಾನದ ಅನುಭವವಾದಲ್ಲದೆ ಎಂದಾದರೊಮ್ಮೆ ವಿಷಯಗಳನ್ನು ತ್ಯಾಗ ಮಾಡಿದರೂ ವರ್ತಮಾನದ ವಿಷಯಗಳನ್ನು ಬಿಟ್ಟುಕೊಟ್ಟರೂ ಜ್ಞಾನದ ಅನುಭವವಾದಲ್ಲದೆ ಮೊದಲು ಕಟ್ಟಿದ ಕರ್ಮಗಳ

---

ಜೀವನೆನ್ನೆವರ ವಿಷಯವಶನಿಹನನ್ನೆವರ ಜ್ಞಾನವನು ತಿಳಿಯನು ।
ಕೇವಲ ವಿಷಯವಿರಕ್ತಿಯಿಂ ಪುರಾತನ ಕರ್ಮದ ಕ್ಷಯ ಮಾಡಲಾರನು ॥೪॥

---

೧ 'ದುಃಖೇನ ಜ್ಞಾಯತೇ' ಎಂಬ ಪಾಠಾಂತರವಿದೆ.

ಕ್ಷಯವಾಗುವುದಿಲ್ಲ. ಮೊದಲು ಕಟ್ಟಿದ ಕರ್ಮದ ಕ್ಷಯಮಾಡುವಲ್ಲಿ (ಸ್ವಸನ್ಮುಖವಾದ) ಜ್ಞಾನದ್ದೇ ಸಾಮರ್ಥ್ಯವಿರುವುದರಿಂದ ಜ್ಞಾನಸಹಿತವಾಗಿ ವಿಷಯಗಳ ತ್ಯಾಗ ಮಾಡುವುದು ಶ್ರೇಷ್ಠವಿದೆ, ವಿಷಯಗಳನ್ನು ತ್ಯಾಗಮಾಡಿ ಜ್ಞಾನದ ಭಾವನೆ ಮಾಡುವುದೇ ಸುಶೀಲವಿದೆ. ।।೪।।

ಈಗ ಜ್ಞಾನದ, ಲಿಂಗಗ್ರಹಣದ ಹಾಗೂ ತಪಸ್ಸಿನ ಅನುಕ್ರಮವನ್ನು ಹೇಳುತ್ತಾರೆ, -

ಣಾಣಂ ಚರಿತ್ತಹೀಣಂ ಲಿಂಗಗ್ಗಹಣಂ ಚ ದಂಸಣವಿಹೂಣಂ ।
ಸಂಜಮಹೀಣೋ ಯ ತವೋ ಜಇ ಚರಇ ಣಿರತ್ಥಯಂ ಸವ್ವ ।।೫।।

ಜ್ಞಾನಂ ಚಾರಿತ್ರಹೀನಂ ಲಿಂಗಗ್ರಹಣಂ ಚ ದರ್ಶನವಿಹೀನಂ ।
ಸಂಯಮಹೀನಂ ಚ ತಪಃ ಯದಿ ಚರತಿ ನಿರರ್ಥಕಂ ಸರ್ವಮ್ ।।೫।।

ಅರ್ಥ ಃ- ಒಂದುವೇಳೆ ಜ್ಞಾನವು ಚಾರಿತ್ರರಹಿತವಿದ್ದರೆ ಅದು ನಿರರ್ಥಕವಿದೆ ಮತ್ತು ಲಿಂಗದ ಗ್ರಹಣವು ದರ್ಶನರಹಿತವಿದ್ದರೆ ಅದು ಕೂಡ ನಿರರ್ಥಕವಿದೆ ಅದರಂತೆ ಸಂಯಮರಹಿತವಾದ ತಪಸ್ಸು ಕೂಡ ನಿರರ್ಥಕವಿದೆ. ಹೀಗೆ ಇವುಗಳ ಆಚರಣೆ ಮಾಡಿದರೆ ಎಲ್ಲವೂ ನಿರರ್ಥಕವಿದೆ.

ಭಾವಾರ್ಥ ಃ- ಹೇಯ-ಉಪಾದೇಯದ ಜ್ಞಾನವಿದ್ದು ತ್ಯಾಗ-ಗ್ರಹಣಮಾಡದಿದ್ದರೆ ಆ ಜ್ಞಾನವು ನಿಷ್ಫಲವಿದೆ, ಯಥಾರ್ಥ ಶ್ರದ್ಧೆಯಿಲ್ಲದೆ ವೇಷ ಸ್ವೀಕರಿಸಿದರೆ ಅದು ಕೂಡ ನಿಷ್ಫಲವಿದೆ, (ಸ್ವಾತ್ಮಾನುಭೂತಿಯ ಬಲದಿಂದ) ಇಂದ್ರಿಯಗಳನ್ನು ವಶದಲ್ಲಿಟ್ಟುಕೊಳ್ಳುವುದು, ಜೀವಗಳ ಮೇಲೆ ದಯೆಮಾಡುವುದು ಅದು ಸಂಯಮವಿದೆ ಇದಿಲ್ಲದೆ ಒಂದಿಷ್ಟು ತಪಸ್ಸು ಮಾಡಿದರೆ ಅಹಿಂಸಾದಿಗಳ ವಿಪರ್ಯಾಯವಾದಾಗ ತಪಸ್ಸುಕೂಡ ನಿಷ್ಫಲವಾಗುವುದು. ಈ ಪ್ರಕಾರದಿಂದ ಇವುಗಳ ಆಚರಣೆಯು ನಿಷ್ಫಲವಾಗುತ್ತದೆ.

ಆದುದರಿಂದ ಹೀಗೆ ಮಾಡಿ ಸ್ವಲ್ಪಾದರೂ ಮಾಡಿದರೆ ದೊಡ್ಡ ಫಲವಿರುತ್ತದೆಯೆಂದು ಈಗ ಹೇಳುತ್ತಾರೆ,-

ಣಾಣಂ ಚರಿತ್ತಸುದ್ಧಂ ಲಿಂಗಗ್ಗಹಣಂ ಚ ದಂಸಣವಿಸುದ್ಧಂ ।
ಸಂಜಮಸಹಿದೋ ಯ ತವೋ ಥೋಓ ವಿ ಮಹಾಫಲೋ ಹೋಇ ।।೬।।

ಜ್ಞಾನಂ ಚಾರಿತ್ರಶುದ್ಧಂ ಲಿಂಗಗ್ರಹಣಂ ಚ ದರ್ಶನವಿಶುದ್ಧಮ್ ।
ಸಂಯಮಸಹಿತಂ ಚ ತಪಃ ಸ್ತೋಕಮಪಿ ಮಹಾಫಲಂ ಭವತಿ ।।೬।।

---

ಚಾರಿತ್ರವಿಲ್ಲದ ಜ್ಞಾನ ಅದರಂತೆ ದರ್ಶನವಿಲ್ಲದ ಲಿಂಗಗ್ರಹಣವು ।
ನಿರರ್ಥಕವಿವೆ ಸಂಯಮವಿಲ್ಲದ ತಪಶ್ಚರಣ ಮೊದಲಾದುವೆಲ್ಲವು ।।೫।।

ಜ್ಞಾನವದು ಚಾರಿತ್ರದಿಂ ಶುದ್ಧ ಲಿಂಗಗ್ರಹಣವದು ದರ್ಶನದಿಂ ವಿಶುದ್ಧ ।
ತೇನ ಸಂಯಮಸಹತಪಸಲ್ಪವಿದ್ದರದು ಮಹಾಫಲಸಹಿತವಿದೆ ।।೬।।

ಅರ್ಥ ೞ- ಜ್ಞಾನವು ಚಾರಿತ್ರದಿಂದ ಶುದ್ಧ ಮತ್ತು ಲಿಂಗದ ಗ್ರಹಣವು ದರ್ಶನದಿಂದ ಶುದ್ಧ ಹಾಗೂ ಸಂಯಮ ಸಹಿತವಾದ ತಪಸ್ಸು ಹೀಗೆ ಸ್ವಲ್ಪ ಆಚರಣೆ ಮಾಡಿದರೂ ಕೂಡ ಮಹಾಫಲರೂಪವಿರುತ್ತದೆ.

ಭಾವಾರ್ಥ ೞ- ಜ್ಞಾನವು ಸ್ವಲ್ಪ ಇದ್ದರೂ ಕೂಡ ಶುದ್ಧ ಆಚರಣೆ ಮಾಡಿದರೆ ದೊಡ್ಡ ಫಲ ಸಿಗುವುದು ಮತ್ತು ಯಥಾರ್ಥ ಶ್ರದ್ಧೆಯೊಡನೆ ವೇಷ ಸ್ವೀಕರಿಸಿದರೆ ದೊಡ್ಡ ಫಲ ಸಿಗುವುದು. ಹೇಗೆಂದರೆ ಸಮ್ಯಗ್ದರ್ಶನ ಸಹಿತ ಶ್ರಾವಕನಿದ್ದರೂ ಕೂಡ ಶ್ರೇಷ್ಠವಿದೆ ಮತ್ತು ಅದಿಲ್ಲದೆ ಮುನಿಯ ವೇಷ ಕೂಡ ಶ್ರೇಷ್ಠವಿಲ್ಲ, ಇಂದ್ರಿಯ ಸಂಯಮ ಪ್ರಾಣಿ ಸಂಯಮ ಸಹಿತವಾಗಿ ಉಪವಾಸ ಮೊದಲಾದ ತಪಸ್ಸು ಅಲ್ಪ ಮಾಡಿದರೂ ದೊಡ್ಡ ಫಲವು ಸಿಗುತ್ತದೆ ಮತ್ತು ವಿಷಯಾಭಿಲಾಷೆ ಹಾಗೂ ದಯೆಯಿಲ್ಲದೆ ಅಧಿಕ ಕಷ್ಟದಿಂದ ಕೂಡಿದ ತಪಸ್ಸು ಮಾಡಿದರೂ ಕೂಡ ಯಾವ ಫಲವು ಸಿಗುವುದಿಲ್ಲವೆಂದು ತಿಳಿದುಕೊಳ್ಳಬೇಕು. ||೬||

ಒಂದುವೇಳೆ ಯಾರಾದರೂ ಜ್ಞಾನವನ್ನು ತಿಳಿದುಕೊಂಡು ಕೂಡ ವಿಷಯಾಸಕ್ತರಾಗಿರುತ್ತಿದ್ದರೆ ಅವರು ಸಂಸಾರದಲ್ಲಿಯೇ ಭ್ರಮಣ ಮಾಡುತ್ತಾರೆಂದು ಈಗ ಹೇಳುತ್ತಾರೆ, –

ಣಾಣಂ ಣಾಊಣ ಣರಾ ಕೇಇ ವಿಸಯಾಇಭಾವಸಂಸತ್ತಾ ।
ಹಿಂಡಂತಿ ಚಾದುರಗದಿಂ ವಿಸಏಸು ವಿಮೋಹಿಯಾ ಮೂಢಾ ||೭||

ಜ್ಞಾನಂ ಜ್ಞಾತ್ವಾನರಾಃ ಕೇಚಿತ್ ವಿಷಯಾದಿಭಾವಸಂಸಕ್ತಾಃ ।
ಹಿಂಡಂತೇ ಚತುರ್ಗತಿಂ ವಿಷಯೇಷು ವಿಮೋಹಿತಾ ಮೂಢಾಃ ||೭||

ಅರ್ಥ ೞ- ಅದೆಷ್ಟೋ ಮೂಢ ಮೋಹೀ ಪುರುಷರು ಜ್ಞಾನವನ್ನು ತಿಳಿದುಕೊಂಡು ಕೂಡ ವಿಷಯದ ರೂಪವಾದ ಭಾವಗಳಲ್ಲಿ ಆಸಕ್ತರಾಗುತ್ತ ಚತುರ್ಗತಿರೂಪವಾದ ಸಂಸಾರದಲ್ಲಿ ಭ್ರಮಣ ಮಾಡುತ್ತಾರೆ, ಏಕೆಂದರೆ ವಿಷಯಗಳಿಂದ ವಿಮೋಹಿತರಾದ ಮೇಲೆ ಅವರು ಪುನಃ ಜಗತ್ತಿನಲ್ಲಿಯೇ ಪ್ರಾಪ್ತರಾಗುತ್ತಾರೆ ಇದರಲ್ಲಿಯೂ ವಿಷಯ–ಕಷಾಯಗಳದ್ದೇ ಸಂಸ್ಕಾರವಿದೆ.

ಭಾವಾರ್ಥ ೞ- ಜ್ಞಾನ ಪ್ರಾಪ್ತ ಮಾಡಿಕೊಂಡು ವಿಷಯ–ಕಷಾಯಗಳನ್ನು ಬಿಟ್ಟುಕೊಡುವುದು ಒಳ್ಳೆಯದಿದೆ, ಇಲ್ಲದಿದ್ದರೆ ಜ್ಞಾನವು ಕೂಡ ಅಜ್ಞಾನ ತುಲ್ಯವೇ ಇದೆ. ||೭||

ಜ್ಞಾನ ಪ್ರಾಪ್ತಿಮಾಡಿಕೊಂಡು ಹೀಗೆ ಮಾಡಿದಾಗಲೇ ಸಂಸಾರವು ನಷ್ಟವಾಗಿ ಹೋಗುವುದೆಂದು ಈಗ ಹೇಳುತ್ತಾರೆ, –

ಜೇ ಪುಣ ವಿಸಯವಿರತ್ತಾ ಣಾಣಂ ಣಾಊಣ ಭಾವಣಾಸಹಿದಾ ।
ಛಿಂದಂತಿ ಚಾದುರಗದಿಂ ತವಗಣಜುತ್ತಾ ಣ ಸಂದೇಹೋ ||೮||

---

ಜ್ಞಾನವನು ತಿಳಿದೋರ್ವನರ ವಿಷಯಾದಿ ಭಾವಗಳಲಿ ಆಸಕ್ತನಾಗಿ ।
ಆ ನಾಲ್ಗತಿಗಳಲಿ ತಿರುಗುವನು ವಿಷಯಗಳಿಂ ವಿಮೋಹಿತಮೂಢನು ||೭||

ಆದರಾ ವಿಷಯವಿರಕ್ತ ಜ್ಞಾನವನು ತಿಳಿದು ಭಾವನಾಸಹಿತನಾಗಿ ।
ಛೇದಿಪನು ಚತುರ್ಗತಿಗಳನು ತಪೋಗುಣಯುಕ್ತನಾಗಿ ನಿಸ್ಸಂದೇಹದಿಂ ||೮||

**ಯೇ ಪುನಃ ವಿಷಯವಿರಕ್ತಾಃ ಜ್ಞಾನಂ ಜ್ಞಾತ್ವಾ ಭಾವನಾಸಹಿತಾಃ ।**
**ಛಿಂದಂತಿ ಚತುರ್ಗತಿಂ ತಪೋಗುಣಯುಕ್ತಾಃ ನ ಸಂದೇಹಃ ॥೮॥**

ಅರ್ಥ ಃ- ಯಾರು ಜ್ಞಾನವನ್ನು ತಿಳಿದುಕೊಂಡು ಮತ್ತು ವಿಷಯಗಳಿಂದ ವಿರಕ್ತರಾಗಿ ಪುನಃ ಪುನಃ ಆ ಜ್ಞಾನದ ಅನುಭವರೂಪವಾದ ಭಾವನೆಯೊಡನೆ ಇರುತ್ತಾರೆ ಅವರು ತಪಸ್ಸು ಮತ್ತು ಗುಣ ಎಂದರೆ ಮೂಲಗುಣ ಉತ್ತರ ಗುಣಗಳಿಂದ ಯುಕ್ತರಾಗಿ ಚತುರ್ಗತಿರೂಪವಾದ ಸಂಸಾರವನ್ನು ಛೇದಿಸುತ್ತಾರೆ, ಕತ್ತರಿಸಿ ಹಾಕುತ್ತಾರೆಂಬುದರಲ್ಲಿ ಯಾವ ಸಂದೇಹವಿಲ್ಲ.

ಭಾವಾರ್ಥ ಃ- ಜ್ಞಾನ ಪ್ರಾಪ್ತಮಾಡಿಕೊಂಡು ವಿಷಯ-ಕಷಾಯಗಳನ್ನು ಬಿಟ್ಟುಕೊಟ್ಟು ಜ್ಞಾನದ ಭಾವನೆ ಮಾಡಿದರೆ, ಮೂಲಗುಣ ಉತ್ತರ ಗುಣಗಳನ್ನು ಗ್ರಹಣ ಮಾಡಿ ತಪಸ್ಸು ಮಾಡಿದರೆ ಅವನು ಸಂಸಾರದ ಅಭಾವ ಮಾಡಿ ಮುಕ್ತಿರೂಪದ ನಿರ್ಮಲದಶೆಯನ್ನು ಪ್ರಾಪ್ತಮಾಡಿಕೊಳ್ಳುತ್ತಾನೆ. ಇದು ಶೀಲಸಹಿತವಾದ ಜ್ಞಾನರೂಪ ಮಾರ್ಗವಿದೆ. ॥೮॥

ಹೀಗೆ ಶೀಲಸಹಿತವಾದ ಜ್ಞಾನದಿಂದ ಜೀವನು ಶುದ್ಧನಾಗುತ್ತಾನೆಂಬುದರ ದೃಷ್ಟಾಂತವನ್ನೀಗ ಹೇಳುತ್ತಾರೆ,-

**ಜಹ ಕಂಚಣಂ ವಿಸುದ್ಧಂ ಧಮ್ಮಇಯಂ ಖಡಿಯಲವಣಲೇವೇಣ ।**
**ತಹ ಜೀವೋ ವಿ ವಿಸುದ್ಧಂ ಣಾಣವಿಸಲಿಲೇಣ ವಿಮಲೇಣ ॥೯॥**

**ಯಥಾ ಕಾಂಚನಂ ವಿಶುದ್ಧಂ ಧಮತ್ ಖಟಿಕಾಲಧಣಲೇಪೇನ ।**
**ತಥಾ ಜೀವೋಽಪಿ ವಿಶುದ್ಧಃ ಜ್ಞಾನವಿಸಲಿಲೇನ ವಿಮಲೇನ ॥೯॥**

ಅರ್ಥ ಃ- ಯಾವ ಪ್ರಕಾರ ಕಾಂಚನ ಎಂದರೆ ಚಿನ್ನವು ಖಡಿಯ ಎಂದರೆ ಟಂಕಣಕಾರ ಮತ್ತು ಲವಣದ ಲೇಪದಿಂದ ವಿಶುದ್ಧ ನಿರ್ಮಲ ಕಾಂತಿಯುಕ್ತವಾಗುತ್ತದೆ ಅದೇ ಪ್ರಕಾರ ಜೀವನು ಕೂಡ ವಿಷಯ-ಕಷಾಯಗಳ ಮಲದಿಂದ ರಹಿತವಾದ ನಿರ್ಮಲ ಜ್ಞಾನರೂಪದ ಜಲದಿಂದ ಪ್ರಕ್ಷಾಲಿತನಾಗಿ ಕರ್ಮರಹಿತನಾಗುತ್ತಾನೆ, ವಿಶುದ್ಧ ನಾಗುತ್ತಾನೆ.

ಭಾವಾರ್ಥ ಃ- ಜ್ಞಾನವು ಆತ್ಮನ ಮುಖ್ಯಗುಣವಿದ್ದರೂ ಅದು ಮಿಥ್ಯಾತ್ವ ವಿಷಯಗಳಿಂದ ಮಲಿನವಾಗಿ ರುವುದರಿಂದ ಆ ಮಿಥ್ಯಾತ್ವ ವಿಷಯರೂಪವಾದ ಮಲವನ್ನು ದೂರ ಮಾಡಿ ಅದರ ಭಾವನೆ ಮಾಡಿದರೆ ಏಕಾಗ್ರತೆಯಿಂದ ಅದರ ಧ್ಯಾನ ಮಾಡಿದರೆ ಕರ್ಮಗಳ ನಾಶ ಮಾಡಿದರೆ ಅನಂತ ಚತುಷ್ಟಯಗಳನ್ನು ಪ್ರಾಪ್ತಮಾಡಿಕೊಂಡು ಮುಕ್ತನಾಗುತ್ತಾನೆ, ಶುದ್ಧಾತ್ಮನಾಗುತ್ತಾನೆ. ಇಲ್ಲಿ ಚಿನ್ನದ ದೃಷ್ಟಾಂತವಿದೆ ಅದನ್ನು ತಿಳಿದುಕೊಳ್ಳಬೇಕು. ॥೯॥

ಜ್ಞಾನ ಪ್ರಾಪ್ತಮಾಡಿಕೊಂಡು ವಿಷಯಾಸಕ್ತವಾಗುವುದು ಅದು ಜ್ಞಾನದ ದೋಷವಿಲ್ಲ, ಆದರೆ ಅದು ಕುಪುರುಷನ ದೋಷವಿದೆಯೆಂಬುದನ್ನು ಈಗ ಹೇಳುತ್ತಾರೆ, -

---

ಹೇಗೆ ಕನಕ ಖಟಿಕಲವಣಲೇಪದಿಂದುಜ್ಜಿದರೆ ವಿಶುದ್ಧವಾಗುವುದು ।
ಹಾಗೆ ಜೀವಕೂಡ ನಿರ್ಮಲಜ್ಞಾನರೂಪ ಸಲಿಲದಿಂ ವಿಶುದ್ಧನಾಗುವನು ॥೯॥

ಣಾಣಸ್ಸ ಣತ್ಥಿ ದೋಸೋ ಕುಪ್ಪುರಿಸಾಣಂ ವಿ ಮಂದಬುದ್ಧೀಣಂ ।
ಜೇ ಣಾಣಗವ್ವಿದಾ ಹೋಊಣಂ ವಿಸಏಸು ರಜ್ಜಂತಿ ॥೧೦॥

ಜ್ಞಾನಸ್ಯ ನಾಸ್ತಿ ದೋಷಃ ಕಾಪುರುಷಸ್ಯಾಪಿ ಮಂದಬುದ್ಧೇಃ ।
ಯೇ ಜ್ಞಾನಗರ್ವಿತಾಃ ಭೂತ್ವಾ ವಿಷಯೇಷು ರಜ್ಜಂತಿ ॥೧೦॥

ಅರ್ಥ ಃ- ಯಾವ ಪುರುಷರು ಜ್ಞಾನದಿಂದ ಗರ್ವಿತರಾಗಿ ಜ್ಞಾನಮದದಿಂದ ವಿಷಯಗಳಲ್ಲಿ ಆಸಕ್ತರಾಗುತ್ತಾರೆ ಅದು ಈ ಜ್ಞಾನದ ದೋಷವಲ್ಲ, ಆದರೆ ಅವರು ಮಂದಬುದ್ಧಿಯ ಕುಪುರುಷರಿದ್ದಾರೆ ಅವರ ದೋಷವಿದೆ.

ಭಾವಾರ್ಥ ಃ- ಜ್ಞಾನದಿಂದ ಬಹಳಷ್ಟು ಪದಾರ್ಥಗಳನ್ನು ತಿಳಿದುಕೊಂಡಾಗ ವಿಷಯಗಳಲ್ಲಿ ಆಸಕ್ತಿ ಯಾಗುತ್ತದೆ ಅದು ಈ ಜ್ಞಾನದ ದೋಷವಿದೆಯೆಂದು ಕೆಲವರು ತಿಳಿದುಕೊಂಡಿದ್ದಾರೆ, ಆದರೆ ಇಲ್ಲಿ ಆಚಾರ್ಯದೇವರು ಹಾಗೆ ತಿಳಿದುಕೊಳ್ಳಬೇಡಿರೆಂದು ಹೇಳಿದ್ದಾರೆ. ಜ್ಞಾನ ಪ್ರಾಪ್ತಮಾಡಿಕೊಂಡ ಮೇಲೆ ವಿಷಯಗಳಲ್ಲಿ ಆಸಕ್ತಿಯಾಗುತ್ತಿರುವುದು ಅದು ಈ ಜ್ಞಾನದ ದೋಷವಲ್ಲ, ಈ ಪುರುಷನು ಮಂದಬುದ್ಧಿಯವನಿದ್ದಾನೆ ಮತ್ತು ಕುಪುರುಷನಿದ್ದಾನೆ ಅವನ ದೋಷವಿದೆ. ಪುರುಷನ ಅದೃಷ್ಟವು ದುಷ್ಟವಿರುವಾಗ ಬುದ್ಧಿಯು ಕೆಟ್ಟುಹೋಗುತ್ತದೆ, ಆದುದರಿಂದ ಜ್ಞಾನವನ್ನು ಪ್ರಾಪ್ತಮಾಡಿಕೊಂಡರೂ ಅದರ ಮದದಲ್ಲಿ ಮತ್ತನಾಗಿ ವಿಷಯ-ಕಷಾಯಗಳಲ್ಲಿ ಆಸಕ್ತನಾಗಿ ಹೋಗುತ್ತಿದ್ದರೆ ಆ ದೋಷವು ಅಪರಾಧವು ಪುರುಷನದಿದೆ, ಜ್ಞಾನದ್ದಿಲ್ಲ-ವಸ್ತುವು ಹೇಗಿದೆ ಹಾಗೆ ತಿಳಿಸಿ ಕೊಡುವುದೇ ಜ್ಞಾನದ ಕಾರ್ಯವಿದೆ ಅನಂತರ ಪ್ರವರ್ತನೆ ಮಾಡುವುದು ಪುರುಷನ ಕಾರ್ಯವಿದೆಯೆಂಬುದನ್ನು ತಿಳಿದುಕೊಳ್ಳಬೇಕು. ॥೧೦॥

ಪುರುಷನಿಗೆ ಈ ಪ್ರಕಾರ ನಿರ್ವಾಣವಾಗುತ್ತದೆಯೆಂದು ಈಗ ಹೇಳುತ್ತಾರೆ,

ಣಾಣೇಣ ದಂಸಣೇಣ ಯ ತವೇಣ ಚರಿಏಣ ಸಮ್ಮಸಹಿಏಣ ।
ಹೋಹದಿ ಪರಿಣಿವ್ವಾಣಂ ಜೀವಾಣ ಚರಿತ್ತಸುದ್ಧಾಣಂ ॥೧೧॥

ಜ್ಞಾನೇನ ದರ್ಶನೇನ ಚ ತಪಸಾ ಚಾರಿತ್ರೇಣ ಸಮ್ಯಕ್ತ್ವ ಸಹಿತೇನ ।
ಭವಿಷ್ಯತಿ ಪರಿನಿರ್ವಾಣಂ ಜೀವಾನಾಂ ಚಾರಿತ್ರಶುದ್ಧಾನಾಮ್ ॥೧೧॥

ಅರ್ಥ ಃ- ಸಮ್ಯಕ್ತ್ವಭಾವಸಹಿತ ಜ್ಞಾನ ದರ್ಶನ ತಪಸ್ಸುಗಳ ಆಚರಣೆಯಾದಾಗ ಚಾರಿತ್ರದಿಂದ ಶುದ್ಧ ಜೀವರುಗಳಿಗೆ ನಿರ್ವಾಣದ ಪ್ರಾಪ್ತಿಯಾಗುತ್ತದೆ.

---

ಜ್ಞಾನದಿಂದ ಗರ್ವಿತರಾಗಿ ಜನರು ವಿಷಯಗಳೊಳಗೆ ರಂಜಿಸುವರು ।
ಜ್ಞಾನದ ದೋಷವಿಲ್ಲದು ಕಾಪುರುಷರ ಮೇಣ್ಮಂದಬುದ್ಧಿಗಳ ದೋಷವಿದೆ ॥೧೦॥

ಸಮಕಿತಸಹಿತವಾದ ಜ್ಞಾನ ದರ್ಶನ ತಪಮಲ್ಲದೆ ಚಾರಿತ್ರದಿಂದ ।
ಸಮನಿಸುವುದು ಪರಿನಿರ್ವಾಣ ಚಾರಿತ್ರಶುದ್ಧರಾದ ಜೀವರುಗಳಿಗೆ ॥೧೧॥

ಭಾವಾರ್ಥ ಃ- ಸಮ್ಯಕ್ತ್ವ ಸಹಿತವಾಗಿ ಜ್ಞಾನ ತಪಸ್ಸುಗಳ ಆಚರಣೆ ಮಾಡಿದರೆ ಚಾರಿತ್ರವು ಶುದ್ಧವಾಗಿ ರಾಗ-ದ್ವೇಷದ ಭಾವಗಳು ಅಳಿಸಿಹೋಗುತ್ತವೆ, ಆಗ ಜೀವನು ನಿರ್ವಾಣ ಪಡೆಯುತ್ತಾನೆ; ಇದು ಮಾರ್ಗವಿದೆ. ॥೧೧॥ [ತಪ = ಶುದ್ಧೋಪಯೋಗರೂಪದ ಮುನಿತನ, ಇದು ಇದ್ದರೆ ಇಪ್ಪತ್ತೆರಡು ಪ್ರಕಾರದ ವ್ಯವಹಾರ ಭೇದಗಳಿವೆ.]

ಶೀಲದ ಮುಖ್ಯತೆಯ ಮುಖಾಂತರ ನಿಯಮದಿಂದ ಇವನಿಗೇ ನಿರ್ವಾಣವಾಗುತ್ತದೆಯೆಂಬುದನ್ನೀಗ ಹೇಳುತ್ತಾರೆ, -

ಸೀಲಂ ರಕ್ಖಂತಾಣಂ ದಂಸಣಸುದ್ಧಾಣ ದಿಢಚರಿತ್ತಾಣಂ ।
ಅತ್ಥಿ ಧುವಂ ಣಿವ್ವಾಣಂ ವಿಸಏಸು ವಿರತ್ತಚಿತ್ತಾಣಂ ॥೧೨॥

ಶೀಲಂ ರಕ್ಷತಾಂ ದರ್ಶನಶುದ್ಧಾನಾಂ ದೃಢಚಾರಿತ್ರಾಣಾಮ್ ।
ಅಸ್ತಿ ಧ್ರುವಂ ನಿರ್ವಾಣಂ ವಿಷಯೇಷು ವಿರಕ್ತಚಿತ್ತಾನಾಮ್ ॥೧೨॥

ಅರ್ಥ ಃ- ಯಾವ ಪುರುಷರ ಚಿತ್ತವು ವಿಷಯಗಳಿಂದ ವಿರಕ್ತವಿದೆ, ಶೀಲದ ರಕ್ಷಣೆ ಮಾಡುತ್ತಾರೆ, ದರ್ಶನದಿಂದ ಶುದ್ಧರಿದ್ದಾರೆ ಮತ್ತು ಯಾರ ಚಾರಿತ್ರವು ದೃಢವಿದೆ ಅಂಥ ಪುರುಷರಿಗೆ ಧ್ರುವ ಎಂದರೆ ನಿಯಮದಿಂದ - ನಿಶ್ಚಯದಿಂದ ನಿರ್ವಾಣವಾಗುತ್ತದೆ.

ಭಾವಾರ್ಥ ಃ- ವಿಷಯಗಳಿಂದ ವಿರಕ್ತವಾಗುವುದೇ ಶೀಲದ ರಕ್ಷಣೆಯಿದೆ, ಈ ಪ್ರಕಾರ ಯಾರು ಶೀಲದ ರಕ್ಷಣೆ ಮಾಡುತ್ತಾರೆ ಅವರ ಸಮ್ಯಗ್ದರ್ಶನವೇ ಶುದ್ಧವಿರುತ್ತದೆ ಮತ್ತು ಚಾರಿತ್ರವು ಅತಿಚಾರವಿಲ್ಲದೆ ಶುದ್ಧ-ದೃಢವಾಗಿರುವಂಥ ಪುರುಷರಿಗೆ ನಿಯಮದಿಂದ ನಿರ್ವಾಣವಾಗುತ್ತದೆ. ವಿಷಯಗಳಲ್ಲಿ ಆಸಕ್ತರಿರುವವರ ಶೀಲವು ಕೆಡುವುದರಿಂದ ದರ್ಶನವು ಶುದ್ಧವಾಗದೆ ಚಾರಿತ್ರವು ಶಿಥಿಲವಾಗಿ ಬಿಡುತ್ತದೆ. ಆಗ ನಿರ್ವಾಣವು ಕೂಡ ಆಗುವುದಿಲ್ಲ. ಈ ಪ್ರಕಾರ ನಿರ್ವಾಣದಲ್ಲಿ ಶೀಲವೇ ಮುಖ್ಯವಿದೆ. ॥೧೨॥

ಇನ್ನೂ ವಿಷಯಗಳಿಂದ ವಿರಕ್ತನಾಗದವನು 'ಮಾರ್ಗ'ವು ವಿಷಯಗಳಿಂದ ವಿರಕ್ತವಾಗುವರೂಪವೇ ಇದೆಯೆಂದು ಹೇಳುತ್ತಾನೆ ಅವನಿಗೆ ಮಾರ್ಗದ ಪ್ರಾಪ್ತಿ ಕೂಡ ಆಗುತ್ತದೆ, ಆದರೆ ವಿಷಯಸೇವನೆಯೇ 'ಮಾರ್ಗ'ವಿದೆಯೆಂದು ಹೇಳುವವನ ಜ್ಞಾನ ಕೂಡ ನಿರರ್ಥಕವಿದೆಯೆಂದು ಈಗ ಹೇಳುತ್ತಾರೆ, -

ವಿಸಏಸು ಮೋಹಿದಾಣಂ ಕಹಿಯಂ ಮಗ್ಗಂ ಪಿ ಇಟ್ಠದರಿಸೀಣಂ ।
ಉಮ್ಮಗ್ಗಂ ದರಿಸೀಣಂ ಣಾಣಂ ಪಿ ಣಿರತ್ಥಯಂ ತೇಸಿಂ ॥೧೩॥

---

ಯಾರು ಶೀಲರಕ್ಷಿಪರು ಯಾರ ದರ್ಶನಶುದ್ಧವಿದ್ದು ದೃಢಚಾರಿತ್ರವಿದೆ ।
ಯಾರು ವಿಷಯವಿರಕ್ತಚಿತ್ತರಿಹರವರ್ಗೆ ನಿಶ್ಚಿತ ನಿರ್ವಾಣಮಪ್ಪುದು ॥೧೨॥

ಇಷ್ಟದರ್ಶಿಗಳು ಮಾರ್ಗದಲಿಹರು ವಿಷಯದಲಿ ಮೋಹಿತರಿದ್ದು ಸಹ ।
ಸ್ಪಷ್ಟ ಉನ್ಮಾರ್ಗದರ್ಶಿಸುವವರಿಗೆ ಜ್ಞಾನಪ್ರಾಪ್ತಿಕೂಡ ನಿರರ್ಥಕವಿದೆ ॥೧೩॥

ವಿಷಯೇಷು ಮೋಹಿತಾನಾಂ ಕಥಿತೋ ಮಾರ್ಗೋಽಪಿ ಇಷ್ಟದರ್ಶಿನಾಂ ।
ಉನ್ಮಾರ್ಗಂ ದರ್ಶಿನಾಂ ಜ್ಞಾನಮಪಿ ನಿರರ್ಥಕಂ ತೇಷಾಮ್ ॥೧೩॥

ಅರ್ಥ :- ಇಷ್ಟ ಮಾರ್ಗವನ್ನು ತೋರಿಸಿಕೊಡುವಂಥ ಜ್ಞಾನೀ ಪುರುಷರು ವಿಷಯಗಳಿಂದ ವಿಮೋಹಿತ ರಾಗಿದ್ದರೂ ಕೂಡ ಅವರಿಗೆ ಮಾರ್ಗದ ಪ್ರಾಪ್ತಿಯನ್ನು ಹೇಳಿದೆ, ಆದರೆ ಉನ್ಮಾರ್ಗವನ್ನು ತೋರಿಸಿಕೊಡುವಂಥವರಿಗೆ ಜ್ಞಾನದ ಪ್ರಾಪ್ತಿಯು ಕೂಡ ನಿರರ್ಥಕವಿದೆ.

ಭಾವಾರ್ಥ :- ಜ್ಞಾನದಲ್ಲಿ ಮತ್ತು ಶೀಲದಲ್ಲಿ ವಿರೋಧವಿಲ್ಲವೆಂದು ಮೊದಲು ಹೇಳಿದೆ ಈಗ ಜ್ಞಾನವಿದೆ ಮತ್ತು ವಿಷಯಾಸಕ್ತವಾಗಿ ಜ್ಞಾನವು ಕೆಟ್ಟುಹೋದಾಗ ಶೀಲವಿಲ್ಲವೆಂಬುದು ವಿಶೇಷವಿದೆ. ಈಗ ಇಲ್ಲಿ ಹೇಳಿರುವುದೇನೆಂದರೆ ಜ್ಞಾನವನ್ನು ಪ್ರಾಪ್ತಮಾಡಿಕೊಂಡು ಎಂದಾದರೊಮ್ಮೆ ಚಾರಿತ್ರಮೋಹದ ಉದಯದಿಂದ (ಉದಯವಶದಿಂದ) ವಿಷಯಗಳು ಬಿಟ್ಟುಹೋಗದವರೆಗೆ ಅವುಗಳಲ್ಲಿ ವಿಮೋಹಿತವಾಗಿರುವುದು ಮತ್ತು ಮಾರ್ಗದ ಪ್ರರೂಪಣೆಯನ್ನು ವಿಷಯಗಳ ತ್ಯಾಗರೂಪವಾಗಿಯೇ ಮಾಡುವವನಿಗೆ ಮಾರ್ಗದ ಪ್ರಾಪ್ತಿ ಕೂಡ ಆಗುತ್ತದೆ, ಆದರೆ ಮಾರ್ಗವನ್ನೇ ಕುಮಾರ್ಗರೂಪವಾಗಿ ಪ್ರರೂಪಣೆ ಮಾಡುವವನಿಗೆ ವಿಷಯ ಸೇವನೆಯನ್ನೇ ಸುಮಾರ್ಗವೆಂದು ತಿಳಿಸಿಕೊಡುವವನಿಗೆ ಜ್ಞಾನದ ಪ್ರಾಪ್ತಿ ಕೂಡ ನಿರರ್ಥಕವೇ ಇದೆ, ಜ್ಞಾನ ಪ್ರಾಪ್ತ ಮಾಡಿಕೊಂಡು ಕೂಡ ಮಿಥ್ಯಾಮಾರ್ಗವನ್ನು ಪ್ರರೂಪಿಸುವಂಥವನ ಜ್ಞಾನವೆಂಥದು ? ಅವನ ಜ್ಞಾನವು ಮಿಥ್ಯಾಜ್ಞಾನವಿದೆ.

ಇಲ್ಲಿ ಸೂಚಿಸಲ್ಪಡುವ ಆಶಯವೇನೆಂದರೆ - ಸಮ್ಯಕ್ತ್ವ ಸಹಿತನಾದ ಅವಿರತ ಸಮ್ಯಗ್ದೃಷ್ಟಿಯು ಒಳ್ಳೆಯನಿದ್ದಾನೆ ಏಕೆಂದರೆ ಸಮ್ಯಗ್ದೃಷ್ಟಿಯು ಕುಮಾರ್ಗದ ಪ್ರರೂಪಣೆ ಮಾಡುವುದಿಲ್ಲ. ತನಗೆ (ಚಾರಿತ್ರದ ದೋಷದಿಂದ) ಚಾರಿತ್ರಮೋಹದ ಉದಯವು ಪ್ರಬಲವಿರುವವರೆಗೆ ವಿಷಯಗಳು ಬಿಡದಿರುವುದರಿಂದ ಅವಿರತನಿದ್ದಾನೆ. ಆದರೆ ಯಾವನು ಸಮ್ಯಗ್ದೃಷ್ಟಿಯಿಲ್ಲ ಮತ್ತು ಜ್ಞಾನವೂ ವಿಶಾಲವಿದ್ದು ಸ್ವಲ್ಪ ಆಚರಣೆಯನ್ನು ಮಾಡುವನು, ವಿಷಯಗಳನ್ನೂ ಬಿಟ್ಟಿರುವನು ಮತ್ತು ಕುಮಾರ್ಗದ ಪ್ರರೂಪಣೆ ಮಾಡುತ್ತಿದ್ದರೆ ಅವನು ಒಳ್ಳೆಯವನಿಲ್ಲ, ಅವನ ಜ್ಞಾನ ಮತ್ತು ವಿಷಯಗಳನ್ನು ಬಿಡುವಿಕೆಯು ನಿರರ್ಥಕವಿದೆಯೆಂದು ತಿಳಿದುಕೊಳ್ಳಬೇಕು. ॥೧೩॥

ಉನ್ಮಾರ್ಗದ ಪ್ರರೂಪಣೆ ಮಾಡುವಂಥವರು ಕುಮತ ಕುಶಾಸ್ತ್ರಗಳ ಪ್ರಶಂಸೆಮಾಡುತ್ತಾರೆ, ಅವರು ಬಹಳಷ್ಟು ಶಾಸ್ತ್ರಗಳನ್ನು ತಿಳಿಯುತ್ತಿದ್ದರೂ ಕೂಡ ಶೀಲವ್ರತಜ್ಞಾನದಿಂದ ರಹಿತರಿದ್ದಾರೆ, ಅವರಿಗೆ ಆರಾಧನೆಯಿಲ್ಲವೆಂದು ಈಗ ಹೇಳುತ್ತಾರೆ, -

ಕುಮಯಕುಸುದಪಸಂಸಾ ಜಾಣಂತಾ ಬಹುವಿಹಾಇಂ ಸತ್ಥಾಇಂ ।
ಸೀಲವದಣಾಣರಹಿದಾ ಣ ಹು ತೇ ಆರಾಧಯಾ ಹೋಂತಿ ॥೧೪॥

ಕುಮತಕುಶ್ರುತಪ್ರಶಂಸಕಾಃ ಜಾನಂತೋ ಬಹುವಿಧಾನಿ ಶಾಸ್ತ್ರಾಣಿ ।
ಶೀಲವ್ರತಜ್ಞಾನರಹಿತಾ ನ ಸ್ಫುಟಂ ತೇ ಆರಾಧಕಾ ಭವಂತಿ ॥೧೪॥

---

ಹಲವಿಧದ ಶಾಸ್ತ್ರಗಳ ತಿಳಿದರು ಕುಮತ-ಕುಶ್ರುತ ಪ್ರಶಂಸಕರು।
ಶೀಲವ್ರತಜ್ಞಾನರಹಿತರಿದ್ದವರು ತಾವೇ ನಿಜದಿ ಆರಾಧಕರಿಲ್ಲ ॥೧೪॥

ಅರ್ಥ ಃ- ಯಾರು ಹಲವು ಪ್ರಕಾರದ ಶಾಸ್ತ್ರಗಳನ್ನು ತಿಳಿಯುತ್ತಾರೆ ಮತ್ತು ಕುಮತ ಕುಶಾಸ್ತ್ರಗಳ ಪ್ರಶಂಸೆ ಮಾಡುವಂಥವರಿದ್ದಾರೆ ಅವರು ಶೀಲವ್ರತದಿಂದ ಮತ್ತು ಜ್ಞಾನದಿಂದ ರಹಿತರಿದ್ದಾರೆ ಅವರು ಇವುಗಳ ಆರಾಧಕರಿಲ್ಲ.

ಭಾವಾರ್ಥ ಃ- ಯಾರು ಬಹಳಷ್ಟು ಶಾಸ್ತ್ರಗಳನ್ನು ತಿಳಿದುಕೊಂಡು ಬಹಳಷ್ಟು ಜ್ಞಾನವನ್ನು ತಿಳಿಯುತ್ತಾರೆ ಮತ್ತು ಕುಮತ ಕುಶಾಸ್ತ್ರಗಳ ಪ್ರಶಂಸೆ ಮಾಡುತ್ತಿದ್ದರೆ ಅವರಿಗೆ ಕುಮತದಲ್ಲಿ ಮತ್ತು ಕುಶಾಸ್ತ್ರಗಳಲ್ಲಿ ರಾಗವಿದೆ, ಪ್ರೀತಿಯಿದೆ, ಆದರಿಂದ ಅವುಗಳ ಪ್ರಶಂಸೆ ಮಾಡುತ್ತಾರೆಂದು ತಿಳಿಯಬೇಕು, ಮತ್ತು ಇವಂತೂ ಮಿಥ್ಯಾತ್ವದ ಚಿಹ್ನೆಗಳಿದ್ದು ಎಲ್ಲಿ ಮಿಥ್ಯಾತ್ವವಿದೆ ಅಲ್ಲಿ ಜ್ಞಾನ ಕೂಡ ಮಿಥ್ಯೆಯಿದೆ ಮತ್ತು ವಿಷಯ-ಕಷಾಯಗಳಿಂದ ರಹಿತವಾಗಿರುವುದಕ್ಕೆ ಶೀಲವೆಂದು ಹೇಳುತ್ತಾರೆ ಅದೂ ಅವರಿಗಿಲ್ಲ, ವ್ರತಗಳೂ ಅವರಿಗಿಲ್ಲ, ಎಂದಾದರೊಮ್ಮೆ ಯಾವುದಾದರೊಂದು ವ್ರತಾಚರಣೆ ಮಾಡಿದರೂ ಕೂಡ ಅದು ಮಿಥ್ಯಾಚಾರಿತ್ರರೂಪವಿರುವುದರಿಂದ ದರ್ಶನ ಜ್ಞಾನ ಚಾರಿತ್ರದ ಆರಾಧನೆಯುಳ್ಳವರಿಲ್ಲ, ಮಿಥ್ಯಾದೃಷ್ಟಿಯಿದ್ದಾರೆ.

ಒಂದು ವೇಳೆ ಸುಂದರರೂಪು ಮೊದಲಾದ ಸಾಮಗ್ರಿಗಳನ್ನು ಪ್ರಾಪ್ತಮಾಡಿಕೊಂಡಿದ್ದರೂ ಶೀಲರಹಿತನಾಗಿದ್ದರೆ ಅವನ ಮನುಷ್ಯ ಜನ್ಮವು ನಿರರ್ಥಕವಿದೆಯೆಂದು ಈಗ ಹೇಳುತ್ತಾರೆ, -

**ರೂವಸಿರಿಗವ್ವಿದಾಣಂ ಜುವ್ವಣಲಾವಣ್ಣಕಂತಿಕಲಿದಾಣಂ ।**
**ಸೀಲಗುಣವಜ್ಜಿದಾಣಂ ಣಿರತ್ಥಯಂ ಮಾಣುಸಂ ಜಮ್ಮ ।।೧೫।।**

**ರೂಪಶ್ರೀಗರ್ವಿತಾನಾಂ ಯೌವನಲಾವಣ್ಯಕಾಂತಿಕಲಿತಾನಾಮ್ ।**
**ಶೀಲಗುಣವರ್ಜಿತಾನಾಂ ನಿರರ್ಥಕಂ ಮಾನುಷಂ ಜನ್ಮ ।।೧೫।।**

ಅರ್ಥ ಃ- ಯಾವ ಪುರುಷರು ಯೌವನಾವಸ್ಥೆಯಿಂದ ಕೂಡಿದ್ದಾರೆ ಮತ್ತು ಹಲವರಿಗೆ ಪ್ರಿಯವೆನಿಸಿರುವಂಥ ಲಾವಣ್ಯಸಹಿತರಿದ್ದಾರೆ, ಶರೀರದ ಕಾಂತಿಯಿಂದ-ಪ್ರಭೆಯಿಂದ ಮಂಡಿತರಿದ್ದಾರೆ ಮತ್ತು ಸುಂದರರೂಪು ಲಕ್ಷ್ಮೀ ಸಂಪತ್ತಿನಿಂದ ಗರ್ವಿತರಿದ್ದಾರೆ, ಮದೋನ್ಮತ್ತರಿದ್ದಾರೆ, ಆದರೆ ಅವರು ಶೀಲ ಮತ್ತು ಗುಣಗಳಿಂದ ರಹಿತರಾಗಿದ್ದಾರೆ ಅವರುಗಳ ಮನುಷ್ಯಜನ್ಮವು ನಿರರ್ಥಕವಿದೆ.

ಭಾವಾರ್ಥ ಃ- ಯಾರು ಮನುಷ್ಯ ಜನ್ಮವನ್ನು ಪ್ರಾಪ್ತಮಾಡಿಕೊಂಡು ಶೀಲದಿಂದ ರಹಿತರಿದ್ದಾರೆ, ವಿಷಯಗಳಲ್ಲಿ ಆಸಕ್ತರಿದ್ದಾರೆ, ಸಮ್ಯಗ್ದರ್ಶನ-ಜ್ಞಾನ-ಚಾರಿತ್ರ ಗುಣಗಳಿಂದ ರಹಿತರಿದ್ದಾರೆ ಮತ್ತು ಯೌವನಾವಸ್ಥೆಯಲ್ಲಿ ಶರೀರದ ಲಾವಣ್ಯತೆ ಕಾಂತಿರೂಪವಾದ ಸೌಂದರ್ಯ ಧನ-ಸಂಪತ್ತುಗಳನ್ನು ಪ್ರಾಪ್ತಮಾಡಿಕೊಂಡು ಅವುಗಳ ಗರ್ವದಿಂದ ಮದೋನ್ಮತ್ತರಾಗಿರುತ್ತಿದ್ದರೆ ಅವರು ಮನುಷ್ಯ ಜನ್ಮವನ್ನು ನಿಷ್ಫಲವಾಗಿ ಕಳೆದುಕೊಂಡರು. ಮನುಷ್ಯ ಜನ್ಮದಲ್ಲಿ ಸಮ್ಯಗ್ದರ್ಶನಾದಿಗಳನ್ನು ಅಂಗೀಕಾರ ಮಾಡುವುದು ಮತ್ತು ಶೀಲ-ಸಂಮಯಗಳನ್ನು ಪಾಲಿಸುವುದು ಯೋಗ್ಯವಿತ್ತು ಆದನ್ನಂತೂ ಅಂಗೀಕಾರ ಮಾಡಲಿಲ್ಲವೆಂದಮೇಲೆ ನಿಷ್ಫಲವಾಗಿಯೇ ಹೋಯಿತು.

---

**ಆ ಲಾವಣ್ಯ ಕಾಂತಿ ಯೌವನಯುತರು ರೂಪು ಸಂಪತ್ತುಗಳಿಂದ ಗರ್ವಿತರು ।**
**ಶೀಲಗುಣಗಳಿಂ ವರ್ಜಿತರಿದ್ದರೆ ನಿರರ್ಥಕವಿದೆ ಮಾನವ ಜನ್ಮ ।।೧೫।।**

ಈ ಮೊದಲಿನ ಗಾಥೆಯಲ್ಲಿ ಕುಮತ-ಕುಶಾಸ್ತ್ರಗಳ ಪ್ರಶಂಸೆ ಮಾಡುವಂಥವನ ಜ್ಞಾನವು ನಿರರ್ಥಕ-ವೆಂದು ಹೇಳಿದೆ ಅದರಂತೆಯೇ ಇಲ್ಲಿ ರೂಪು ಮೊದಲಾದವುಗಳ ಗರ್ವಮಾಡುವುದು ಕೂಡ ಮಿಥ್ಯಾತ್ವದ ಚಿಹ್ನಗಳಿವೆಯೆಂದು ತಿಳಿಸಿಕೊಡಲಾಗಿದೆ. ಗರ್ವ ಮಾಡುವವನನ್ನು ಮಿಥ್ಯಾದೃಷ್ಟಿಯೆಂದೇ ತಿಳಿಯಬೇಕು ಅದರಂತೆ ಲಕ್ಷ್ಮೀ ರೂಪು ಯೌವನ ಕಾಂತಿಯಿಂದ ಮಂಡಿತನಾಗಿದ್ದು ಶೀಲರಹಿತನಾಗಿ ವ್ಯಭಿಚಾರಿಯಾಗಿದ್ದರೆ ಲೋಕದಲ್ಲಿ ಅವನ ನಿಂದೆಯೇ ಆಗುತ್ತದೆ. ॥೧೫॥

ಬಹಳಷ್ಟು ಶಾಸ್ತ್ರಗಳ ಜ್ಞಾನವಿದ್ದರೂ ಕೂಡ ಶೀಲವೇ ಉತ್ತಮವಿದೆಯೆಂಬುದನ್ನೀಗ ಹೇಳುತ್ತಾರೆ, -

**ವಾಯರಣಛಂದವಇಸೇಸಿಯವವಹಾರಣಾಯಸತ್ಥೇಸು ।**
**ವೇದೇಊಣ ಸುದೇಸು ಯ ತೇಸು ಸುಯಂ ಉತ್ತಮಂ ಸೀಲಂ ॥೧೬॥**

**ವ್ಯಾಕರಣಛಂದೋವೈಶೇಷಿಕವ್ಯವಹಾರನ್ಯಾಯಶಾಸ್ತ್ರೇಷು ।**
**ವಿದಿತ್ವಾ ಶ್ರುತೇಷು ಚ ತೇಷು ಶ್ರುತಂ ಉತ್ತಮಂ ಶೀಲಮ್ ॥೧೬॥**

ಅರ್ಥ :- ವ್ಯಾಕರಣ ಛಂದ ವೈಶೇಷಿಕ ವ್ಯವಹಾರ ನ್ಯಾಯಶಾಸ್ತ್ರ ಈ ಶಾಸ್ತ್ರಗಳನ್ನು ಮತ್ತು ಶ್ರುತ ಎಂದರೆ ಜಿನಾಗಮಗಳಲ್ಲಿ ಆ ವ್ಯಾಕರಣ ಮೊದಲಾದುವನ್ನು ಮತ್ತು ಶ್ರುತ ಎಂದರೆ ಜಿನಾಗಮವನ್ನು ತಿಳಿದುಕೊಂಡು ಕೂಡ ಇವುಗಳಲ್ಲಿ ಶೀಲವಿರುವುದೇ ಉತ್ತಮವಿದೆ.

ಭಾವಾರ್ಥ :- ವ್ಯಾಕರಣ ಮೊದಲಾದ ಶಾಸ್ತ್ರಗಳನ್ನು ಮತ್ತು ಜಿನಾಗಮವನ್ನು ತಿಳಿದುಕೊಂಡು ಕೂಡ ಅವುಗಳಲ್ಲಿ ಶೀಲವೇ ಉತ್ತಮವಿದೆ. ಶಾಸ್ತ್ರಗಳನ್ನು ತಿಳಿದುಕೊಂಡರೂ ಕೂಡ ವಿಷಯಗಳಲ್ಲಿಯೇ ಆಸಕ್ತವಾಗಿದ್ದರೆ ಆ ಶಾಸ್ತ್ರಗಳನ್ನು ತಿಳಿದುಕೊಳ್ಳುವುದು ವ್ಯರ್ಥವಿದೆ, ಉತ್ತಮವಿಲ್ಲ. ॥೧೬॥

ಶೀಲಗುಣದಿಂದ ಮಂಡಿತರಾಗಿರುವವರು ದೇವಗಳಿಗೂ ವಲ್ಲಭರಿದ್ದಾರೆಂಬುದನ್ನು ಈಗ ಹೇಳುತ್ತಾರೆ, -

**ಸೀಲಗುಣಮಂಡಿದಾಣಂ ದೇವಾ ಭವಿಯಾಣ ವಲ್ಲಹಾ ಹೋಂತಿ ।**
**ಸುದಪಾರಯಪಉರಾ ಣಂ ದುಸ್ಸೀಲಾ ಅಪ್ಪಿಲಾ ಲೋಏ ॥೧೭॥**

**ಶೀಲಗುಣಮಂಡಿತಾನಾಂ ದೇವಾ ಭವ್ಯಾನಾಂ ವಲ್ಲಭಾ ಭವಂತಿ ।**
**ಶ್ರುತಪಾರಗಪ್ರಚುರಾಃ ಣಂ ದುಃಶೀಲಾ ಅಲ್ಪಕಾಃ ಲೋಕೇ ॥೧೭॥**

ಅರ್ಥ :- ಯಾವ ಭವ್ಯಪ್ರಾಣಿಗಳು ಶೀಲ ಮತ್ತು ಸಮ್ಯಗ್ದರ್ಶನ ಮೊದಲಾದ ಗುಣಗಳಿಂದ ಅಥವಾ ಶೀಲ ಗುಣದಿಂದಲೇ ಮಂಡಿತರಿದ್ದಾರೆ ಅವರು ದೇವರಿಗೂ ವಲ್ಲಭರಾಗುತ್ತಾರೆ, ಅವರ ಸೇವೆ ಮಾಡುವಂಥ

---

ವ್ಯಾಕರಣ ಛಂದಸ್ಸು ನ್ಯಾಯ ವೈಶೇಷಿಕ ವ್ಯವಹಾರ ಮೇಣ್ಶ್ರುತ ಮೊದಲಾದ ।
ಸಕಲ ಶಾಸ್ತ್ರಗಳ ಜ್ಞಾನವಿದ್ದರು ಕೂಡ ಶೀಲವೇ ಉತ್ತಮವಿರುವುದು ॥೧೬॥

ಆ ಶೀಲಗುಣಮಂಡಿತರಾದ ಭವ್ಯರಿಗೆ ದೇವ ಸಹಾಯಕರಾಗುವರು ।
ಕುಶೀಲರು ಲೋಕದಲಿ ತುಚ್ಛರಿಹರು ಶ್ರುತಪಾರಂಗತರಿದ್ದರವರು ॥೧೭॥

ಸಹಾಯಕರಾಗುತ್ತಾರೆ, ಯಾರು ಶ್ರುತಪಾರಗ ಎಂದರೆ ಶಾಸ್ತ್ರಗಳ ಕೊನೆ ತಲುಪಿದ್ದಾರೆ ಹನ್ನೊಂದು ಅಂಗಗಳವರೆಗೆ ಓದಿದಂಥವರು ಹಲವರಿದ್ದಾರೆ ಮತ್ತು ಅವರಲ್ಲಿ ಕೆಲವರು ಶೀಲಗುಣದಿಂದ ರಹಿತರಿದ್ದಾರೆ, ದುಃಶೀಲರಿದ್ದಾರೆ, ವಿಷಯ-ಕಷಾಯಗಳಲ್ಲಿ ಆಸಕ್ತರಿದ್ದಾರೆ ಅವರು ಲೋಕದಲ್ಲಿ 'ಅಲ್ಪಕಾ' ಎಂದರೆ ನ್ಯೂನರಿದ್ದಾರೆ, ಅವರು ಮನುಷ್ಯರಿಗೆ ಕೂಡ ಪ್ರಿಯರಿಲ್ಲವೆಂದ ಮೇಲೆ ದೇವತೆಗಳೆಲ್ಲಿಂದ ಸಹಾಯಕರಾಗುವರು ?

ಭಾವಾರ್ಥ :- ಬಹಳಷ್ಟು ಶಾಸ್ತ್ರಗಳನ್ನು ತಿಳಿದುಕೊಂಡು ವಿಷಯಾಸಕ್ತನಿದ್ದರೆ ಅವನಿಗೆ ಯಾರೂ ಸಹಾಯಕರಿರುವುದಿಲ್ಲ, ಕಳ್ಳ ಮತ್ತು ಅನ್ಯಾಯಿಗಳಿಗೆ ಲೋಕದಲ್ಲಿ ಯಾರೂ ಸಹಾಯ ಮಾಡುವುದಿಲ್ಲ, ಆದರೆ ಶೀಲಗುಣದಿಂದ ಮಂಡಿತನಿದ್ದರೆ ಮತ್ತು ಜ್ಞಾನವು ಅಲ್ಪವಾಗಿದ್ದರೂ ಕೂಡ ಅವನಿಗೆ ದೇವತೆಗಳು ಕೂಡ ಉಪಕಾರಿಯಾಗುತ್ತಾರೆ. ಸಹಾಯಕರಾಗುತ್ತಾರೆಂದ ಮೇಲೆ ಮನುಷ್ಯರಂತೂ ಸಹಾಯಕರಾಗಿಯೇ ಆಗುತ್ತಾರೆ. ಶೀಲಗುಣವುಳ್ಳವನು ಎಲ್ಲರಿಗೂ ಪ್ರಿಯನಾಗಿರುತ್ತಾನೆ. ।।೧೭।।

ಶೀಲವುಳ್ಳವರು ಸುಶೀಲವುಳ್ಳವರು ಮನುಷ್ಯಭವದಲ್ಲಿ ಜೀವಿಸಿರುವುದು ಸಾರ್ಥಕವಿದೆ, ಒಳ್ಳೆಯದಿದೆಯೆಂದು ಈಗ ಹೇಳುತ್ತಾರೆ, -

**ಸವ್ವೇ ವಿ ಯ ಪರಿಹೀಣಾ ರೂವವಿರೂವಾ ವಿ ಪಡಿದಸುವಯಾ ವಿ ।**
**ಸೀಲಂ ಜೇಸು ಸುಸೀಲಂ ಸುಜೀವಿದಂ ಮಾಣುಸಂ ತೇಸಿಂ ।।೧೮।।**

**ಸರ್ವೇಽಪಿ ಚ ಪರಿಹೀನಾಃ ರೂಪವಿರೂಪಾ ಅಪಿ ಪತಿತಸುವಯಸೋಽಪಿ ।**
**ಶೀಲಂ ಯೇಷು ಸುಶೀಲಂ ಸುಜೀವಿದಂ ಮಾನುಷ್ಯಂ ತೇಷಾಮ್ ।।೧೮।।**

ಅರ್ಥ :- ಯಾರು ಎಲ್ಲ ಪ್ರಾಣಿಗಳಲ್ಲಿ ಹೀನರಿದ್ದಾರೆ,ಕುಲಾದಿಗಳಿಂದ ನ್ಯೂನರಿದ್ದಾರೆ ಮತ್ತು ರೂಪ ವಿರೂಪರಿದ್ದಾರೆ ಸುಂದರರಿಲ್ಲ, 'ಪತಿತಸುವಯಸಃ' ಎಂದರೆ ಅವಸ್ಥೆಯಿಂದ ಸುಂದರರಿಲ್ಲ, ವೃದ್ಧರಾಗಿ ಹೋಗಿದ್ದಾರೆ, ಆದರೆ ಅವರಲ್ಲಿ ಶೀಲ, ಸುಶೀಲವಿದೆ,ಸ್ವಭಾವದಿಂದ ಉತ್ತಮರಿದ್ದಾರೆ, ಕಷಾಯ ಮೊದಲಾದವುಗಳ ತೀವ್ರ ಆಸಕ್ತತೆಯಿಲ್ಲ ಅವರ ಮನುಷ್ಯತನವು ಸುಜೀವಿತವಿದೆ, ಬದುಕುವುದು ಒಳ್ಳೆಯದಿದೆ.

ಭಾವಾರ್ಥ :- ಯಾರು ಲೋಕದಲ್ಲಿ ಸಮಸ್ತ ಸಾಮಗ್ರಿಗಳಿಂದ ನ್ಯೂನರಿದ್ದಾರೆ, ಆದರೆ ಅವರ ಸ್ವಭಾವವು ಉತ್ತಮವಿದೆ, ವಿಷಯ-ಕಷಾಯಗಳಲ್ಲಿ ಆಸಕ್ತರಿಲ್ಲದಿದ್ದರೆ ಅವರು ಉತ್ತಮರೇ ಇದ್ದಾರೆ, ಅವರ ಮನುಷ್ಯ ಭವವು ಸಾರ್ಥಕವಿದೆ, ಅವರ ಜೀವನವು ಪ್ರಶಂಸೆಗೆ ಯೋಗ್ಯವಿದೆ. ।।೧೮।।

ಎಷ್ಟು ಒಳ್ಳೆಯ ಕಾರ್ಯಗಳಿವೆ ಅವೆಲ್ಲವೂ ಶೀಲದ ಪರಿವಾರವಾಗಿವೆಯೆಂಬುದನ್ನು ಈಗ ಹೇಳುತ್ತಾರೆ, -

**ಜೀವದಯಾ ದಮ ಸಚ್ಚಂ ಅಚೋರಿಯಂ ಬಂಭಚೇರಸಂತೋಸೇ ।**
**ಸಮ್ಮದ್ದಂಸಣ ಣಾಣಂ ತಓ ಯ ಸೀಲಸ್ಸ ಪರಿವಾರೋ ।।೧೯।।**

---

ಪರಿಹೀನರೆಲ್ಲರಲಿ ರೂಪವಿರೂಪಮೇಣ್ಪತಿತಪ್ರಾಯವಿದ್ದರು ಸಹ ।
ಯಾರ ಶೀಲ ಸುಶೀಲವಿದೆಯವರ ಮನುಷ್ಯತನವು ಸುಜೀವಿತವಿದೆ ।।೧೮।।

ಜೀವದಯೆ ಇಂದ್ರಿಯಗಳ ದಮನ ಸತ್ಯ ಅಸ್ತೇಯ ಬ್ರಹ್ಮಚರ್ಯ ಸಂತೋಷ ।
ಇವಲ್ಲದೆ ಸಮ್ಯಗ್ದರ್ಶನ ಜ್ಞಾನ ತಪಗಳು ಶೀಲದ ಪರಿವಾರವಿವೆ ।।೧೯।।

ಜೀವದಯಾ ದಮಃ ಸತ್ಯಂ ಅಚೌರ್ಯಂ ಬ್ರಹ್ಮಚರ್ಯಸಂತೋಷೌ ।
ಸಮ್ಯಗ್ದರ್ಶನಂ ಜ್ಞಾನಂ ತಪಶ್ಚ ಶೀಲಸ್ಯ ಪರಿವಾರಃ ॥೧೯॥

ಅರ್ಥ ಃ- ಜೀವದಯೆ, ಇಂದ್ರಿಯಗಳ ನಿಗ್ರಹ, ಸತ್ಯ, ಅಚೌರ್ಯ, ಬ್ರಹ್ಮಚರ್ಯ, ಸಂತೋಷ, ಸಮ್ಯಗ್ದರ್ಶನ, ಜ್ಞಾನ, ತಪಸ್ಸು ಮೊದಲಾದವುಗಳೆಲ್ಲವು ಶೀಲದ ಪರಿವಾರವಿವೆ.

ಭಾವಾರ್ಥ ಃ- ಶೀಲವು ಸ್ವಭಾವದ ಹಾಗೂ ಪ್ರಕೃತಿಯ ಹೆಸರಿದೆಯೆಂಬುದು ಪ್ರಸಿದ್ಧವಿದೆ. ಮಿಥ್ಯಾತ್ವಸಹಿತ ಕಷಾಯರೂಪವಾದ ಜ್ಞಾನದ ಪರಿಣತಿಯು ಅದು ದುಃಶೀಲವಿದೆ, ಇದನ್ನು ಸಂಸಾರ ಪ್ರಕೃತಿಯೆಂದು ಹೇಳುತ್ತಾರೆ, ಈ ಪ್ರಕೃತಿಯು ಬದಲಾಗುವುದು ಮತ್ತು ಸಮ್ಯಕ್ ಪ್ರಕೃತಿಯಾಗುವುದು ಅದು ಸುಶೀಲವಿದೆ, ಇದನ್ನು ಮೋಕ್ಷ ಸನ್ಮುಖ ಪ್ರಕೃತಿಯೆಂದು ಹೇಳುತ್ತಾರೆ. ಹೀಗೆ ಜೀವದಯೆ ಮೊದಲಾದುವನ್ನು ಗಾಥೆಯಲ್ಲಿ ಹೇಳಿದ್ದಾರೆ ಅವೆಲ್ಲವೂ ಸುಶೀಲದ ಪರಿವಾರವಿವೆ, ಏಕೆಂದರೆ ಸಂಸಾರ ಪ್ರಕೃತಿಯು ಬದಲಾದಾಗ ಸಂಸಾರ ದೇಹದಿಂದ ವೈರಾಗ್ಯವಾಗುವುದು ಮತ್ತು ಮೋಕ್ಷದಲ್ಲಿ ಅನುರಾಗವಾದಾಗಲೇ ಸಮ್ಯಗ್ದರ್ಶನ ಮೊದಲಾದ ಪರಿಣಾಮಗಳಾಗುವವು, ಪುನಃ ಎಷ್ಟು ಪ್ರಕೃತಿಗಳಾಗುವವು ಅವೆಲ್ಲವೂ ಮೋಕ್ಷದ ಸನ್ಮುಖವಾಗುವವು, ಇದೇ ಸುಶೀಲವಿದೆ. ಸಂಸಾರದ ಕೊನೆ ಬಂದವರಿಗೆ ಈ ಪ್ರಕೃತಿಯಾಗುತ್ತದೆ ಮತ್ತು ಈ ಪ್ರಕೃತಿಯಾಗದವರೆಗೆ ಸಂಸಾರದ ಭ್ರಮಣವೇ ಇದೆಯೆಂದು ತಿಳಿದುಕೊಳ್ಳಬೇಕು. ॥೧೯॥

ಶೀಲವೇ ತಪಸ್ಸು ಮೊದಲಾದುವಿವೆಯೆಂದು ಈಗ ಶೀಲದ ಮಹಿಮೆಯನ್ನು ಹೇಳುತ್ತಾರೆ, -

ಸೀಲಂ ತವೋವಿಸುದ್ಧಂ ದಂಸಣಸುದ್ಧೀ ಯ ಣಾಣಸುದ್ಧೀ ಯ ।
ಸೀಲಂ ವಿಸಯಾಣ ಅರೀ ಸೀಲಂ ಮೋಕ್ಖಸ್ಸ ಸೋವಾಣಂ ॥೨೦॥

ಶೀಲಂ ತಪಃ ವಿಶುದ್ಧಂ ದರ್ಶನಶುದ್ಧಿಶ್ಚ ಜ್ಞಾನಶುದ್ಧಿಶ್ಚ ।
ಶೀಲಂ ವಿಷಯಾಣಾಮರಿಃ ಶೀಲಂ ಮೋಕ್ಷಸ್ಯ ಸೋಪಾನಮ್ ॥೨೦॥

ಅರ್ಥ ಃ- ಶೀಲವೇ ವಿಶುದ್ಧವಾದ ನಿರ್ಮಲ ತಪಸ್ಸು ಇದೆ, ಶೀಲವೇ ದರ್ಶನದ ಶುದ್ಧತೆಯಿದೆ, ಶೀಲವೇ ಜ್ಞಾನದ ಶುದ್ಧತೆಯಿದೆ, ಶೀಲವೇ ವಿಷಯಗಳ ಶತ್ರುವಿದೆ ಮತ್ತು ಶೀಲವೇ ಮೋಕ್ಷದ ಸೋಪಾನವಿದೆ.

ಭಾವಾರ್ಥ ಃ- ಜೀವ ಅಜೀವ ಪದಾರ್ಥಗಳ ಜ್ಞಾನ ಮಾಡಿಕೊಂಡು ಅದರೊಳಗಿಂದ ಮಿಥ್ಯಾತ್ವ ಮತ್ತು ಕಷಾಯಗಳ ಅಭಾವ ಮಾಡುವುದು ಅದು ಸುಶೀಲವಿದೆ, ಅದು ಆತ್ಮನ ಜ್ಞಾನಸ್ವಭಾವವಿದೆ, ಆ ಸಂಸಾರ ಪ್ರಕೃತಿಯು ನಾಶಗೊಂಡು ಮೋಕ್ಷಸನ್ಮುಖ ಪ್ರಕೃತಿಯಾದಾಗ ಈ ಶೀಲಕ್ಕೇನೇ ತಪಸ್ಸು ಮೊದಲಾದ ಎಲ್ಲ ಹೆಸರುಗಳಿವೆ. ನಿರ್ಮಲ ತಪಸ್ಸು, ಶುದ್ಧ ದರ್ಶನ-ಜ್ಞಾನ, ವಿಷಯ-ಕಷಾಯಗಳನ್ನು ಕಿಡಿಸುವುದು, ಮೋಕ್ಷದ ಮೆಟ್ಟಿಲು ಇವೆಲ್ಲವು ಶೀಲನಾಮದ ಅರ್ಥಗಳಿವೆ. ಹೀಗೆ ಶೀಲದ ಮಾಹಾತ್ಮ್ಯಯ ವರ್ಣನೆ ಮಾಡಿದೆ ಮತ್ತು ಇದು ಕೇವಲ ಮಹಿಮೆಯೇ ಇಲ್ಲ, ಈ ಎಲ್ಲ ಭಾವಗಳ ಅವಿನಾಭಾವೀತನವನ್ನು ತಿಳಿಸಿಕೊಡಲಾಗಿದೆ. ॥೨೦॥

---

ಶೀಲವು ವಿಶುದ್ಧತಪಸ್ಸು ದರ್ಶನದ ಶುದ್ಧತೆ ಜ್ಞಾನದ ಶುದ್ಧತೆಯಿದೆ।
ಶೀಲವು ವಿಷಯಗಳ ಶತ್ರುವಿದ್ದು ಶೀಲವು ಮೋಕ್ಷದ ಸೋಪಾನವಿಹುದು ॥೨೦॥

ವಿಷಯರೂಪದ ವಿಷವು ಅತ್ಯಂತ ಪ್ರಬಲವಿದೆಯೆಂಬುದನ್ನು ಈಗ ಹೇಳುತ್ತಾರೆ, -

**ಜಹ ವಿಸಯಲುದ್ಧ ವಿಸದೋ ತಹ ಥಾವರಜಂಗಮಾಣ ಘೋರಾಣಂ ।**
**ಸವ್ವೇಸಿಂ ಪಿ ವಿಣಾಸದಿ ವಿಸಯವಿಸಂ ದಾರುಣಂ ಹೋಈ ॥೨೧॥**

**ಯಥಾ ವಿಷಯಲುಬ್ಧಃ ವಿಷದಃ ತಥಾ ಸ್ಥಾವರಜಂಗಮಾನ್ ಘೋರಾನ್ ।**
**ಸರ್ವಾನ್ ಅಪಿ ವಿನಾಶಯತಿ ವಿಷಯವಿಷಂ ದಾರುಣಂ ಭವತಿ ॥೨೧॥**

ಅರ್ಥ :- ಯಾವ ಪ್ರಕಾರ ವಿಷಯ ಸೇವನೆರೂಪದ ವಿಷವು ವಿಷಯಲುಬ್ಧ ಜೀವರುಗಳಿಗೆ ವಿಷ ಕೊಡುವಂಥದ್ದಿದೆ ಅದೇ ಪ್ರಕಾರ ಘೋರ ತೀವ್ರ ಸ್ಥಾವರ ಜಂಗಮ ವಿಷವೆಲ್ಲವೂ ಪ್ರಾಣಿಗಳ ವಿನಾಶಮಾಡುತ್ತಲಿದ್ದರೂ ಕೂಡ ಈ ಎಲ್ಲ ವಿಷಗಳಲ್ಲಿ ವಿಷಯಗಳ ವಿಷವು ಉತ್ಕೃಷ್ಟವಿದೆ ತೀವ್ರವಿದೆ.

ಭಾವಾರ್ಥ :- ಯಾವ ಪ್ರಕಾರ ಆನೆ, ಮತ್ಸ್ಯ, ಭ್ರಮರ, ಪತಂಗ ಮೊದಲಾದ ಜೀವಗಳು ವಿಷಯಗಳಲ್ಲಿ ಲುಬ್ಧವಾಗಿ ವಿಷಯಗಳ ವಶವಾಗಿ ನಷ್ಟವಾಗುತ್ತವೆ ಅದೇ ಪ್ರಕಾರ ಸ್ಥಾವರದ ವಿಷವಾದ ಚದುರಂಗದ ಕಾಯಿ ಸೋಮಲ ಮೊದಲಾದವುಗಳ ಮತ್ತು ಜಂಗಮದ ವಿಷವಾದ ಸರ್ಪ ಘೋಹರಾ ಮೊದಲಾದವುಗಳ ವಿಷಗಳಿಂದಲೂ ಪ್ರಾಣಿಗಳು ಸತ್ತುಹೋಗುತ್ತವೆ, ಆದರೆ ಎಲ್ಲ ವಿಷಯಗಳಲ್ಲಿ ವಿಷಯಗಳ ವಿಷವು ಅತ್ಯಂತ ತೀವ್ರವಿದೆ. ॥೨೧॥

ಈಗ ಇದರದೇ ಸಮರ್ಥನೆ ಮಾಡುವ ಸಲುವಾಗಿ ವಿಷದ ವೇದನೆಯಿಂದಂತೂ ಒಂದುಬಾರಿ ಸಾಯುತ್ತದೆ ಮತ್ತು ವಿಷಯಗಳಿಂದ ಸಂಸಾರದಲ್ಲಿ ಭ್ರಮಣ ಮಾಡುತ್ತಾನೆಂದು ವಿಷಯಗಳ ವಿಷದ ತೀವ್ರತೆಯನ್ನು ಹೇಳುತ್ತಾರೆ,-

**ವಾರಿ ಏಕ್ಕಮ್ಮಿ ಯ ಜಮ್ಮೇ ಮರಿಜ್ಜ ವಿಸವೇಯಣಾಹದೋ ಜೀವೋ ।**
**ವಿಸಯವಿಸಪರಿಹಯಾ ಣಂ ಭಮಂತಿ ಸಂಸಾರಕಂತಾರೇ ॥೨೨॥**

**ವಾರೇ ಏಕಸ್ಮಿನ್ ಚ ಜನ್ಮನಿ ಗಚ್ಛೇತ್ ವಿಷವೇದನಾಹತಃ ಜೀವಃ ।**
**ವಿಷಯವಿಷಪರಿಹತಾ ಭ್ರಮಂತಿ ಸಂಸಾರಕಾಂತಾರೇ ॥೨೨॥**

ಅರ್ಥ :- ವಿಷದ ವೇದನೆಯಿಂದ ನಷ್ಟವಾದ ಜೀವವಂತೂ ಒಂದು ಜನ್ಮದಲ್ಲಿಯೇ ಸಾಯುತ್ತದೆ, ಆದರೆ ವಿಷಯರೂಪದ ವಿಷದಿಂದ ನಷ್ಟವಾದ ಜೀವವು ಅತಿಶಯವಾಗಿ, ಪುನಃ ಪುನಃ ಸಂಸಾರರೂಪದ ವನದಲ್ಲಿ ಭ್ರಮಣ ಮಾಡುತ್ತದೆ. (ಪುಣ್ಯದ ಮತ್ತು ರಾಗದ ಅಭಿರುಚಿಯೇ ವಿಷಯ ಬುದ್ಧಿಯಿದೆ.)

---

ಸ್ಥಾವರ ಜಂಗಮಗಳ ಘೋರ ವಿಷವು ನಷ್ಟಮಾಡುವುದು ಸಕಲರನು ।
ಆ ವಿಷಯಲುಬ್ಧತೆ ವಿಘಾತಕವಿದ್ದು ವಿಷಯವಿಷ ಅತಿರೌದ್ರವಿದೆ ॥೨೧॥

ವಿಷವೇದನದಿಂದ ಹತನಾದ ಜೀವನೊಂದೆ ಬಾರಿ ಮರಣಹೊಂದಿದರೆ ।
ವಿಷಯವಿಷದಿಂ ಹತನಾದ ಜೀವ ಸಂಸಾರಕಾಂತಾರದಲಿ ಸುತ್ತುವನು ॥೨೨॥

ಭಾವಾರ್ಥ ಃ- ಅನ್ಯ ಸರ್ಪ ಮೊದಲಾದವುಗಳ ವಿಷಕ್ಕಿಂತ ವಿಷಯಗಳ ವಿಷವು ಪ್ರಬಲವಿದೆ.ಇವುಗಳ ಆಸಕ್ತಿಯಿಂದ ಬಹಳಷ್ಟು ಜನ್ಮ-ಮರಣಗಳಾಗುವಂಥ ಕರ್ಮಬಂಧವಾಗುತ್ತದೆ. ॥೨೨॥

ವಿಷಯಗಳ ಆಸಕ್ತಿಯಿಂದ ಚತುರ್ಗತಿಗಳಲ್ಲಿ ದುಃಖವನ್ನೇ ಪಡೆಯುತ್ತಾರೆಂದು ಈಗ ಹೇಳುತ್ತಾರೆ, -

**ಣರಏಸು ವೇಯಣಾಓ ತಿರಿಕ್ಖಏ ಮಾಣವೇಸು ದುಕ್ಖಾಇಂ ।**
**ದೇವೇಸು ಏ ದೋಹಗ್ಗಂ ಲಹಂತಿ ವಿಸಯಾಸಿಯಾ ಜೀವಾ ॥೨೩॥**

**ನರಕೇಷು ವೇದನಾಃ ತಿರ್ಯಕ್ಷು ಮಾನುಷೇಷು ದುಃಖಾನಿ ।**
**ದೇವೇಷು ಅಪಿ ದೌರ್ಭಾಗ್ಯಂ ಲಭಂತೇ ವಿಷಯಾಸಕ್ತಾ ಜೀವಾಃ ॥೨೩॥**

ಅರ್ಥ ಃ- ವಿಷಯಗಳಲ್ಲಿ ಆಸಕ್ತರಾದ ಜೀವರುಗಳು ನರಕದಲ್ಲಿ ಅತ್ಯಂತ ವೇದನೆಯನ್ನು ಪಡೆಯುತ್ತಾರೆ, ತಿರ್ಯಂಚಗಳಲ್ಲಿ ಹಾಗೂ ಮನುಷ್ಯರಲ್ಲಿ ದುಃಖಗಳನ್ನೇ ಪಡೆಯುತ್ತಾರೆ ಮತ್ತು ದೇವಗಳಲ್ಲಿ ಉತ್ಪನ್ನವಾದರೆ ಅಲ್ಲಿ ಕೂಡ ದುರ್ಭಾಗ್ಯತೆಯನ್ನು ಪಡೆಯುತ್ತಾರೆ ನೀಚದೇವರಾಗುತ್ತಾರೆ. ಹೀಗೆ ನಾಲ್ಕೂ ಗತಿಗಳಲ್ಲಿ ದುಃಖವನ್ನೇ ಪಡೆಯುತ್ತಾರೆ.

ಭಾವಾರ್ಥ ಃ- ವಿಷಯಾಸಕ್ತರಾದ ಜೀವರುಗಳಿಗೆ ಎಲ್ಲಿಯೂ ಸುಖವಿಲ್ಲ, ಪರಲೋಕದಲ್ಲಂತೂ ನರಕ ಮೊದಲಾದವುಗಳ ದುಃಖವನ್ನೇ ಪಡೆಯುತ್ತಾರೆ, ಆದರೆ ಈ ಲೋಕದಲ್ಲಿಯೂ ಇವುಗಳ ಸೇವನೆ ಮಾಡುವಲ್ಲಿ ಆಪತ್ತಿ ಹಾಗೂ ಕಷ್ಟಗಳು ಬಂದೇ ಬರುತ್ತವೆ ಮತ್ತು ಸೇವನೆಯಿಂದ ಆಕುಲತೆಯ ದುಃಖವೇ ಇದೆ, ಈ ಜೀವನು ಭ್ರಾಂತಿಯಿಂದ ಸುಖವೆಂದು ಮನ್ನಿಸುತ್ತಾನೆ, ನಿಜವಾದ ಜ್ಞಾನಿಯಂತೂ ವಿರಕ್ತನೇ ಆಗುತ್ತಾನೆ. ॥೨೩॥

ವಿಷಯಗಳನ್ನು ಬಿಟ್ಟುಕೊಡುವಲ್ಲಿ ಯಾವ ಹಾನಿಯೂ ಇಲ್ಲವೆಂದು ಈಗ ಹೇಳುತ್ತಾರೆ, -

**ತುಸಧಮ್ಮಂತಬಲೇಣ ಯ ಜಹ ದವ್ವಂ ಣ ಹಿ ಣರಾಣ ಗಚ್ಛೇದಿ ।**
**ತವಸೀಲಮಂತ ಕುಸಲೀ ಖವಂತಿ ವಿಸಯಂ ವಿಸ ವ ಖಲಂ ॥೨೪॥**

**ತುಷಧಮದ್ಬಲೇನ ಚ ಯಥಾ ದ್ರವ್ಯಂ ನ ಹಿ ನರಾಣಾಂ ಗಚ್ಛತಿ ।**
**ತಪಃ ಶೀಲಮಂತಃ ಕುಶಲಾಃ ಕ್ಷಿಪಂತೇ ವಿಷಯಂ ವಿಷಮಿವ ಖಲಂ ॥೨೪॥**

ಅರ್ಥ ಃ- ಯಾವ ಪ್ರಕಾರ ಹೊಟ್ಟನ್ನು ಹೋಗಲಾಡಿಸುವುದರಿಂದ, ಹಾರಿಸುವುದರಿಂದ ಮನುಷ್ಯನ ಯಾವ ದ್ರವ್ಯವು ಹೋಗುವುದಿಲ್ಲ ಅದೇ ಪ್ರಕಾರ ತಪಸ್ವಿಗಳು ಮತ್ತು ಶೀಲವಂತ ಪುರುಷರು ವಿಷಯಗಳನ್ನು ನೀಚತೆಯ ಹಾಗೆ ಎಸೆಯುತ್ತಾರೆ ದೂರ ಬಿಸಾಕಿ ಬಿಡುತ್ತಾರೆ.

---

**ನರಕದಲಧಿಕ ವೇದನೆ ತಿರ್ಯಂಚದಲಿ ಮನುಷ್ಯರಲಿ ದುಃಖಗಳು ।**
**ದೊರಕುವುದು ದೇವದಲಿ ದುರ್ಭಾಗ್ಯತೆ ವಿಷಯಾಸಕ್ತ ಜೀವರುಗಳಿಗೆ ॥೨೩॥**

**ಹೇಗೆ ತುಷಹಾರಿಸುವುದರಿಂದ ಮನುಷ್ಯನ ದ್ರವ್ಯವೇನು ಹೋಗುವುದಿಲ್ಲ।**
**ಹಾಗೆ ತಪಶೀಲವಂತ ಕುಶಲ ವಿಷಯವಿಷ ತೊರೆವನು ಖಲನಂತೆ ॥೨೪॥**

ಭಾವಾರ್ಥ ಃ- ಶೀಲ ತಪಸ್ಸು ಸಹಿತರಾದ ಜ್ಞಾನಿಗಳಿಗೆ ಇಂದ್ರಿಯ ವಿಷಯಗಳು ನೀಚರ ಹಾಗಿವೆ, ಯಾವ ಪ್ರಕಾರ ರಸವನ್ನು ತೆಗೆದ ನಂತರ ಕಬ್ಬಿನ ಸಿಪ್ಪೆಯನ್ನು ಚೀಪಿದರೆ ನೀರಸವಾಗಿ ಬಿಡುತ್ತವೆ, ಆಗ ಅವು ಎಸೆದು ಬಿಡಲು ಯೋಗ್ಯವಾಗಿವೆ, ಅದೇ ಪ್ರಕಾರ ವಿಷಯಗಳನ್ನು ತಿಳಿಯಬೇಕು. ರಸವಿರುವುದನ್ನಂತೂ ಜ್ಞಾನಿಗಳು ತಿಳಿದುಕೊಂಡಾಗ ವಿಷಯಗಳಂತೂ ನೀಚರ ಸಮಾನವಾಗಿ ಉಳಿದವು ಅವನ್ನು ತ್ಯಜಿಸುವಲ್ಲಿ ಹಾನಿಯೇನಿದೆ ? ಎಂದರೆ ಏನೂ ಇಲ್ಲ. ವಿಷಯಗಳನ್ನು ಜ್ಞೇಯಮಾತ್ರವೆಂದು ತಿಳಿದುಕೊಂಡು ಆಸಕ್ತರಾಗದಂಥ ಆ ಜ್ಞಾನಿಗಳು ಧನ್ಯರಿದ್ದಾರೆ. !

ಆಸಕ್ತರಾಗುವವರಂತೂ ಅಜ್ಞಾನಿಗಳೇ ಇದ್ದಾರೆ. ಏಕೆಂದರೆ ವಿಷಯಗಳಂತೂ ಜಡಪದಾರ್ಥಗಳಿದ್ದು ಸುಖವಂತೂ ಅವನ್ನು ತಿಳಿದುಕೊಳ್ಳುವುದರಿಂದ ಜ್ಞಾನದಲ್ಲಿಯೇ ಇದೆ, ಅಜ್ಞಾನಿಗಳು ಆಸಕ್ತರಾಗಿ ವಿಷಯಗಳಲ್ಲಿ ಸುಖವನ್ನು ಮನ್ನಿಸಿದ್ದಾರೆ. ಯಾವ ಪ್ರಕಾರ ಶ್ವಾನವು ಒಣಮೂಳೆಯನ್ನು ಮೆಲ್ಲುತ್ತಿರುವಾಗ ಮೂಳೆಯ ಮೊನೆಯು ದವಡೆಗೆ ಚುಚ್ಚಿ ಒಸಡು ಹರಿದು ಹೋಗುತ್ತದೆ ಮತ್ತು ಅದರೊಳಗಿಂದ ರಕ್ತವು ಸ್ರವಿಸಲಾರಂಭಿಸಿದಾಗ ಆ ಅಜ್ಞಾನಿಯಾದ ಶ್ವಾನವು ಈ ರಸವು ಮೂಳೆಯಿಂದಲೇ ಹೊರಡುತ್ತಿದೆಯೆಂದು ತಿಳಿಯುತ್ತದೆ ಮತ್ತು ಆ ಮೂಳೆಯನ್ನು ಮತ್ತೆ ಮತ್ತೆ ಮೆಲ್ಲುತ್ತ ಸುಖವನ್ನು ಮನ್ನಿಸುತ್ತದೆ, ಅದೇ ಪ್ರಕಾರ ಅಜ್ಞಾನಿಗಳು ವಿಷಯಗಳಲ್ಲಿ ಸುಖವಿದೆಯೆಂದು ಮನ್ನಿಸಿ ಪುನಃಪುನಃ ಭೋಗಿಸುತ್ತಾರೆ ; ಆದರೆ ಜ್ಞಾನಿಗಳು ತಮ್ಮ ಜ್ಞಾನದಲ್ಲಿಯೇ ಸುಖವಿದೆಯೆಂದು ತಿಳಿದುಕೊಂಡಿದ್ದಾರೆ, ಅವರಿಗೆ ವಿಷಯಗಳನ್ನು ತ್ಯಾಗಮಾಡುವಲ್ಲಿ ದುಃಖವಿಲ್ಲವೆಂದು ತಿಳಿಯಬೇಕು. ॥೨೪॥

ಕೆಲವು ಪ್ರಾಣಿಗಳು ಶರೀರದ ಎಲ್ಲ ಅವಯವಗಳನ್ನು ಸುಂದರವಾಗಿ ಪ್ರಾಪ್ತಮಾಡಿಕೊಂಡಿದ್ದರೂ ಎಲ್ಲ ಅವಯವಗಳಲ್ಲಿ ಶೀಲವೇ ಉತ್ತಮವಿದೆಯೆಂಬುದನ್ನೀಗ ಹೇಳುತ್ತಾರೆ, -

ವಟ್ಟೇಸು ಯ ಖಂಡೇಸು ಯ ಭದ್ದೇಸು ಯ ವಿಸಾಲೇಸು ಅಂಗೇಸು ।
ಅಂಗೇಸು ಯ ಪಪ್ಪೇಸು ಯ ಸವ್ವೇಸು ಯ ಉತ್ತಮಂ ಸೀಲಂ ॥೨೫॥

ವೃತ್ತೇಷು ಚ ಖಂಡೇಷು ಚ ಭದ್ರೇಷು ಚ ವಿಶಾಲೇಷು ಅಂಗೇಷು ।
ಅಂಗೇಷು ಚ ಪ್ರಾಪ್ತೇಷು ಚ ಸರ್ವೇಷು ಚ ಉತ್ತಮಂ ಶೀಲಂ ॥೨೫॥

ಅರ್ಥ ಃ- ಪ್ರಾಣಿಯ ದೇಹದಲ್ಲಿ ಕೆಲವು ಅಂಗಗಳಂತೂ ವೃತ್ತ ಎಂದರೆ ದುಂಡು ಸುಂದರ ಪ್ರಶಂಸಾ ಯೋಗ್ಯವಾಗಿರುತ್ತವೆ ಕೆಲವು ಅಂಗಗಳು ಖಂಡ ಎಂದರೆ ಅರ್ಧ ವೃತ್ತಾಕಾರಗಳಾಗಿದ್ದು ಪ್ರಶಂಸಾಯೋಗ್ಯವಾಗಿರುತ್ತವೆ, ಕೆಲವು ಅಂಗಗಳು ಭದ್ರ ಎಂದರೆ ಸರಳ ನೇರವಾಗಿದ್ದು ಪ್ರಶಂಸಾಯೋಗ್ಯವಾಗಿರುತ್ತವೆ. ಮತ್ತು ಕೆಲವು ಅಂಗಗಳು ವಿಶಾಲ ಎಂದರೆ ವಿಸ್ತೀರ್ಣ ಅಗಲವಾಗಿದ್ದು ಪ್ರಶಂಸಾಯೋಗ್ಯವಾಗಿರುತ್ತವೆ. ಈ ಪ್ರಕಾರ ಎಲ್ಲ ಅವಯವಗಳು ಯಥಾಸ್ಥಾನದಲ್ಲಿ ಸುಂದರತೆಯನ್ನು ಪಡೆದಿದ್ದರೂ ಕೂಡ ಎಲ್ಲ ಅಂಗಗಳಲ್ಲಿ ಈ ಶೀಲವೆಂಬ ಹೆಸರಿನ ಅಂಗವೇ ಉತ್ತಮವಿದೆ, ಅದು ಇಲ್ಲದಿದ್ದರೆ ಎಲ್ಲ ಅಂಗಗಳು ನಿಜವಾಗಿ ಶೋಭೆ ಪಡೆಯುವುದಿಲ್ಲವೆಂಬುದು ಪ್ರಸಿದ್ಧವಿದೆ.

---

ಅಂಗಗಳು ವೃತ್ತ ಭದ್ರ ವಿಶಾಲ ಮೇಣ್ಖಂಡಾತ್ಮಕವಿಹವು ಶರೀರದಲಿ ।
ಅಂಗಗಳಲ್ಲಿ ಸುಪ್ರಾಪ್ತವಿದ್ದರವೆಲ್ಲವುಗಳಲಿ ಶೀಲ ಉತ್ತಮವಿದೆ ॥೨೫॥

ಭಾವಾರ್ಥ ಃ- ಲೋಕದಲ್ಲಿ ಪ್ರಾಣಿಯು ಸರ್ವಾಂಗ ಸುಂದರವಿದ್ದರೂ ದುಃಶೀಲವಾಗಿದ್ದರೆ ಸಂಪೂರ್ಣ ಲೋಕದಿಂದ ನಿಂದೆ ಮಾಡಲು ಯೋಗ್ಯವಾಗಿರುತ್ತದೆ, ಈ ಪ್ರಕಾರ ಲೋಕದಲ್ಲಿ ಕೂಡ ಶೀಲದ್ದೇ ಶೋಭೆಯಿದೆಯೆಂದ ಮೇಲೆ ಮೋಕ್ಷದಲ್ಲಿ ಕೂಡ ಶೀಲವನ್ನೇ ಮುಖ್ಯವೆಂದು ಹೇಳಿದೆ, ಸಮ್ಯಗ್ದರ್ಶನ ಮೊದಲಾದವು ಎಷ್ಟು ಮೋಕ್ಷದ ಅಂಗಗಳಿವೆ ಅವೆಲ್ಲವು ಶೀಲದ ಪರಿವಾರವಿವೆಯೆಂದು ಈ ಮೊದಲೇ ಹೇಳಲಾಗಿದೆ. ॥೨೫॥

ಕುಬುದ್ಧಿಯಿಂದ ಮೂಢರಾಗಿ ಹೋದವರು ವಿಷಯಗಳಲ್ಲಿ ಆಸಕ್ತರಿದ್ದಾರೆ, ಕುಶೀಲರಿದ್ದಾರೆ ಅವರು ಸಂಸಾರದಲ್ಲಿ ಭ್ರಮಣಮಾಡುತ್ತಾರೆಂದು ಈಗ ಹೇಳುತ್ತಾರೆ,

**ಪುರಿಸೇಣ ವಿ ಸಹಿಯಾಏ ಕುಸಮಯಮೂಢೇಹಿ ವಿಸಯಲೋಲೇಹಿಂ ।**
**ಸಂಸಾರೇ ಭಮಿದವ್ವಂ ಅರಯಘರಟ್ಟಂ ವ ಭೂದೇಹಿಂ ॥೨೬॥**

**ಪುರಿಷೇಣಾಪಿ ಸಹಿತೇನ ಕುಸಮಯಮೂಢೈಃ ವಿಷಯಲೋಲೈಃ ।**
**ಸಂಸಾರೇ ಭ್ರಮಿತವ್ಯಂ ಅರಹಟಘರಟ್ಟಂ ಇವ ಭೂತೈಃ ॥೨೬॥**

ಅರ್ಥ ಃ- ಯಾರು ಕುಸಮಯ ಎಂದರೆ ಕುಮತದಿಂದ ಮೂಢರಿದ್ದಾರೆ ಅವರೇ ಅಜ್ಞಾನಿಗಳಿದ್ದಾರೆ ಮತ್ತು ಅವರೇ ವಿಷಯಗಳಲ್ಲಿ ಲೋಲುಪ್ತರಿದ್ದಾರೆ, ಆಸಕ್ತರಿದ್ದಾರೆ. ಅವರು ಅರಹಟದ ಚಕ್ರವು ಹೇಗೆ ತಿರುಗುತ್ತದೆ ಹಾಗೆಯೇ ಸಂಸಾರದಲ್ಲಿ ಭ್ರಮಣ ಮಾಡುತ್ತಾರೆ, ಅವರೊಡನೆ ಅನ್ಯಪುರುಷರು ಕೂಡ ಸಂಸಾರದಲ್ಲಿ ದುಃಖಸಹಿತ ಭ್ರಮಣ ಮಾಡುತ್ತಾರೆ.

ಭಾವಾರ್ಥ ಃ- ಕುಮತಿಗಳಾದ ವಿಷಯಾಸಕ್ತ ಮಿಥ್ಯಾದೃಷ್ಟಿಗಳು ತಾವಂತೂ ವಿಷಯಗಳನ್ನು ಒಳ್ಳೆಯವೆಂದು ಮನ್ನಿಸಿ ಸೇವನೆ ಮಾಡುತ್ತಾರೆ. ಸುಂದರ ವಿಷಯಗಳ ಸೇವನೆ ಮಾಡುವುದರಿಂದ ಬ್ರಹ್ಮನು ಪ್ರಸನ್ನನಾಗುತ್ತಾನೆ, (ಇದಂತೂ ಬ್ರಹ್ಮಾನಂದವಿದೆ) ಇದು ಪರಮೇಶ್ವರನ ಮಹಾನ ಭಕ್ತಿಯಿದೆಯೆಂದು ಹೇಳಿ ಅತ್ಯಂತ ಆಸಕ್ತರಾಗಿ ಸೇವನೆ ಮಾಡುವಂಥವರು ಅದೆಷ್ಟೋ ಕುಮತಿಗಳಿದ್ದಾರೆ, ಅವರು ಇತರರಿಗೆ ಇಂಥ ಉಪದೇಶವನ್ನೇ ನೀಡಿ ವಿಷಯಗಳಲ್ಲಿ ತೊಡಗಿಸುತ್ತಾರೆ. ಅವರು ತಾವಂತೂ ಅರಹಟದ ಚಕ್ರದ ಹಾಗೆ ಸಂಸಾರದಲ್ಲಿ ಭ್ರಮಣ ಮಾಡುತ್ತಾರೆ ಅನೇಕ ಪ್ರಕಾರದ ದುಃಖ ಭೋಗಿಸುತ್ತಾರೆ ಆದರೆ ಇತರ ಪುರುಷರನ್ನು ಅವುಗಳಲ್ಲಿ ತೊಡಗಿಸಿ ಭ್ರಮಣ ಮಾಡಿಸುತ್ತಾರೆ, ಆದುದರಿಂದ ಈ ವಿಷಯ ಸೇವನೆಯು ದುಃಖದ ಸಲುವಾಗಿಯೇ ಇದ್ದು ದುಃಖದ ಕಾರಣವೇ ಇದೆಯೆಂದು ತಿಳಿದುಕೊಂಡು ಕುಮತಿಗಳ ಸಂಬಂಧ ಮಾಡಬಾರದು, ವಿಷಯಾಸಕ್ತತೆಯನ್ನು ಬಿಟ್ಟು ಕೊಡಬೇಕು. ಇದರಿಂದ ಸುಶೀಲತೆಯಾಗುತ್ತದೆ. ॥೧೬॥

ವಿಷಯಸೇವನೆ ಮಾಡಿ ತಾವೇ ಕಟ್ಟಿಕೊಂಡಿರುವ ಕರ್ಮದ ಗ್ರಂಥಿಗಳನ್ನು ಸತ್ಪುರುಷರು ತಪಶ್ಚರಣಾದಿಗಳನ್ನು ಮಾಡಿ ತಾವೇ ಕತ್ತರಿಸಿ ಹಾಕುತ್ತಾರೆಂಬುದನ್ನು ಈಗ ಹೇಳುತ್ತಾರೆ, –

---

ಕುಮತವಿಮೋಹಿತ ವಿಷಯಲುಬ್ಧ ಜನರು ಅನ್ಯಜನರ ಜತೆಯಲಿ ।
ಭ್ರಮಿಸುವವರು ಸಂಸಾರದಲ್ಲಿ ಅರಘಟ್ಟಿಕೆಯ ಚಕ್ರದ ಸಮಾನವಾಗಿ ॥೨೬॥

**ಆದೇಹಿ ಕಮ್ಮಗಂಠೀ ಜಾ ಬದ್ಧಾ [1]ವಿಷಯರಾಗರಂಗೇಹಿಂ ।**
**ತಂ ಛಿಂದಂತಿ ಕಯತ್ಥಾ ತವಸಂಜಮಸೀಲಯಗುಣೇಣ ॥೨೭॥**

**ಆತ್ಮನಿ ಕರ್ಮಗ್ರಂಥಿಃ ಯಾ ಬದ್ಧಾ ವಿಷಯರಾಗರಾಗೈಃ ।**
**ತಾಂ ಛಿಂದಂತಿ ಕೃತಾರ್ಥಾಃ ತಪಃ ಸಂಯಮಶೀಲಗುಣೇನ ॥೨೭॥**

ಅರ್ಥ ಃ- ವಿಷಯಗಳ ರಾಗರಂಗ ಮಾಡಿ ತಾವೇ ಕಟ್ಟಿಕೊಂಡಿರುವ ಕರ್ಮದ ಗ್ರಂಥಿಗಳನ್ನು ಕೃತಾರ್ಥ ಪುರುಷರು (-ಉತ್ತಮ ಪುರುಷರು) ತಪಸ್ಸು, ಸಂಯಮ, ಶೀಲಗಳ ಮುಖಾಂತರ ಪ್ರಾಪ್ತವಾದ ಆ ಗುಣಗಳಿಂದ ಕತ್ತರಿಸಿ ಹಾಕುತ್ತಾರೆ, ಬಿಡಿಸುತ್ತಾರೆ.

ಭಾವಾರ್ಥ ಃ- ತಾವೇ ದ್ರವಿಸಿ ಕಟ್ಟಿಕೊಂಡಿರುವುದರ ಬಿಡಿಸುವ ವಿಧಾನಗಳನ್ನು ತಾವೇ ತಿಳಿಯುತ್ತಾರೆ, ಯಾವ ಪ್ರಕಾರ ಅಕ್ಕಸಾಲಿಗ ಮೊದಲಾದ ಕಲೆಗಾರರು ಆಭೂಷಣಾದಿಗಳ ಸಂಧಿಯ ಬೆಸುಗೆಯನ್ನು ಅದು ಕಂಡುಬಾರದ ಹಾಗೆ ಮಾಡಿರುತ್ತಾರೆ ಮುಂದೆ ಆ ಸಂಧಿಯ ಬೆಸುಗೆಯನ್ನು ಅದನ್ನು ಹಾಕುವವನೇ ಗುರುತಿಸಿ ಬಿಡಿಸುತ್ತಾನೆ, ಅದೇ ಪ್ರಕಾರ ಆತ್ಮನು ತಾನೇ ರಾಗಾದಿಗಳ ಭಾವಗಳಿಂದ ಕಟ್ಟಿಕೊಂಡಿರುವ ಕರ್ಮದ ಗ್ರಂಥಿಗಳನ್ನು ತಾನೇ ಭೇದವಿಜ್ಞಾನ ಮಾಡಿ ರಾಗಾದಿಗಳ ಹಾಗೂ ತನ್ನಲ್ಲಿ ಭೇದದ ಸಂಧಿಯನ್ನು ಗಮನಿಸಿ ತಪ-ಸಂಯಮ-ಶೀಲರೂಪ ಭಾವರೂಪದ ಶಸ್ತ್ರಗಳ ಮುಖಾಂತರ ಆ ಕರ್ಮದ ಕಟ್ಟನ್ನು ಕತ್ತರಿಸಿ ಹಾಕುತ್ತಾನೆಂದು ತಿಳಿದುಕೊಂಡು ಕೃತಾರ್ಥ ಪುರುಷರು ತಮ್ಮ ಪ್ರಯೋಜನ ಮಾಡಿಕೊಳ್ಳುವಂಥವರು ಈ ಶೀಲಗುಣವನ್ನು ಅಂಗೀಕಾರ ಮಾಡಿ ಆತ್ಮನನ್ನು ಕರ್ಮದಿಂದ ಭಿನ್ನ ಮಾಡುತ್ತಾರೆ. ಈ ಪುರುಷಾರ್ಥವು ಪುರುಷರ ಕಾರ್ಯವಿದೆ. ॥೨೭॥

ಶೀಲದಿಂದ ಆತ್ಮನು ಶೋಭೆ ಪಡೆಯುತ್ತಾನೆಂಬುದನ್ನು ಈಗ ದೃಷ್ಟಾಂತದ ಮುಖಾಂತರ ತಿಳಿಸಿ ಕೊಡುತ್ತಾರೆ,-

**ಉದಧೀ ವ ರದಣಭರಿದೋ ತವವಿಣಯಂಸೀಲದಾಣರಯಣಾಣಂ ।**
**ಸೋಹೇಂತೋ ಯ ಸಸೀಲೋ ಣಿವ್ವಾಣಮಣುತ್ತರಂ ಪತ್ತೋ ॥೨೮॥**

**ಉದಧಿರಿವ ರತ್ನಭೃತಃ ತಪೋವಿನಯಶೀಲದಾನ ರತ್ನಾನಾಮ್ ।**
**ಶೋಭತೇ ಚ ಸಶೀಲಃ ನಿರ್ವಾಣಮನುತ್ತರಂ ಪ್ರಾಪ್ತಃ ॥೨೮॥**

ಅರ್ಥ ಃ- ಯಾವ ಪ್ರಕಾರ ಸಮುದ್ರವು ರತ್ನಗಳಿಂದ ತುಂಬಿಕೊಂಡಿದ್ದರೂ ಅದು ಜಲ ಸಹಿತವಾಗಿ ಶೋಭೆ ಪಡೆಯುತ್ತದೆ ಅದೇ ಪ್ರಕಾರ ಈ ಆತ್ಮನು ತಪಸ್ಸು, ವಿನಯ, ಶೀಲ, ದಾನ ಈ ರತ್ನಗಳಲ್ಲಿ ಶೀಲಸಹಿತನಾಗಿದ್ದರೆ ಶೋಭೆ

---

**ಯಾವ ಕರ್ಮಗ್ರಂಥಿಗಳು ಬದ್ಧವಾಗಿವೆ ಆತ್ಮನಿಗೆ ವಿಷಯರಾಗದಿಂದ ।**
**ಅವನು ತಪಶೀಲ ಸಂಯಮಗುಣಗಳಿಂದ ಸುಕೃತಾರ್ಥ ಭೇದಿಸುವನು ॥೨೭॥**

**ಆ ರತ್ನಭರಿತ ಉದಧಿಯಂತೆ ತಪ ವಿನಯ ದಾನ ಶೀಲರತ್ನಗಳಿಂ ।**
**ಮೆರೆಯುವ ಸಶೀಲ ಜೀವನು ಅನುತ್ತರ ನಿರ್ವಾಣ ಪದವ ಪಡೆದನು ॥೨೮॥**

---

೧ ಸಂಸ್ಕೃತ ಪ್ರತಿಯಲ್ಲಿ 'ವಿಷಯರಾಯಮೋಹೇಹಿಂ' ಎಂಬ ಪಾಠವಿದೆ ಛಾಯೆಯಲ್ಲಿ 'ವಿಷಯರಾಗ ಮೋಹೈಃ' ಎಂದಿದೆ.

ಪಡೆಯುತ್ತಾನೆ, ಏಕೆಂದರೆ ಶೀಲಸಹಿತನಾಗಿರುವವನು ಅನುತ್ತರ ಎಂದರೆ ಅದರ ಮುಂದೆ ಬೇರಾವುದೂ ಇಲ್ಲದಂಥ ನಿರ್ವಾಣ ಪದವನ್ನು ಪ್ರಾಪ್ತಮಾಡಿಕೊಳ್ಳುತ್ತಾನೆ.

ಭಾವಾರ್ಥ :- ಯಾವ ಪ್ರಕಾರ ಸಮುದ್ರದಲ್ಲಿ ಬಹಳಷ್ಟು ರತ್ನಗಳಿದ್ದರೂ ಕೂಡ ಅದು ಜಲದಿಂದಲೇ 'ಸಮುದ್ರ'ವೆಂಬ ಹೆಸರನ್ನು ಪಡೆಯುತ್ತದೆ ಅದೇ ಪ್ರಕಾರ ಆತ್ಮನು ಅನ್ಯಗುಣಸಹಿತನಾಗಿದ್ದರೂ ಕೂಡ ಅವನು ಶೀಲದಿಂದಲೇ ನಿರ್ವಾಣ ಪದವನ್ನು ಪ್ರಾಪ್ತಮಾಡಿಕೊಳ್ಳುತ್ತಾನೆಂದು ತಿಳಿಯಬೇಕು. ॥೨೮॥

ಶೀಲವುಳ್ಳ ಪುರುಷರೇ ಮೋಕ್ಷವನ್ನು ಪ್ರಾಪ್ತಮಾಡಿಕೊಳ್ಳುತ್ತಾರೆಂಬುದನ್ನು ಪ್ರಸಿದ್ಧಪಡಿಸಿ ತಿಳಿಸಿ ಕೊಡುತ್ತಾರೆ, -

**ಸುಣಹಾಣ ಗದ್ದಹಾಣ ಯ ಗೋವಸುಮಹಿಲಾಣ ದೀಸದೇ ಮೋಕ್ಖೋ ।**
**ಜೇ ಸೋಧಂತಿ ಚಉತ್ಥಂ ಪಿಚ್ಛಿ ಜಂತಾ ಜಣೇಹಿ ಸವ್ವೇಹಿಂ ॥೨೯॥**

**ಶುನಾಂ ಗರ್ದಭಾನಾಂ ಚ ಗೋಪಶುಮಹಿಲಾನಾಂ ದೃಶ್ಯತೇ ಮೋಕ್ಷಃ ।**
**ಯೇ ಶೋಧಯಂತಿ ಚತುರ್ಥಂ ದೃಶ್ಯತಾಂ ಜನೈಃ ಸರ್ವೈಃ ॥೨೯॥**

ಅರ್ಥ :- ಶ್ವಾನ, ಗರ್ದಭಗಳಲ್ಲಿ ಹಾಗೂ ಗೋವು ಮೊದಲಾದ ಪಶುಗಳಲ್ಲಿ ಮತ್ತು ಸ್ತ್ರೀಯರುಗಳಲ್ಲಿ ಯಾರಿಗಾದರೂ ಮೋಕ್ಷವಾಗುತ್ತಿರುವುದು ಕಂಡು ಬರುತ್ತದೆಯೇನು ? ಎಲ್ಲ ಜನರು ಕಣ್ಣು ಬಿಟ್ಟು ನೋಡಿ, ಅದಂತೂ ಕಂಡು ಬರುವುದಿಲ್ಲ. ಮೋಕ್ಷವು ಅದು ನಾಲ್ಕನೆಯ ಪುರುಷಾರ್ಥವಿರುವುದರಿಂದ ಆ ಚತುರ್ಥ ಪುರುಷಾರ್ಥವನ್ನು ಶೋಧಿಸುವವರಿಗೆ ಮಾತ್ರ ಮೋಕ್ಷವಾಗುತ್ತಿರುವುದು ಕಂಡು ಬರುತ್ತದೆ.

ಭಾವಾರ್ಥ :- ಧರ್ಮ, ಅರ್ಥ, ಕಾಮ ಮೋಕ್ಷವೆಂಬೀ ನಾಲ್ಕನ್ನು ಪುರುಷರಿಗೆ ಪ್ರಯೋಜನವಿವೆಯೆಂದು ಹೇಳಿರುವುದು ಸ್ಪಷ್ಟವಿದೆ, ಇದರಿಂದಲೇ ಇವುಗಳ ಹೆಸರು ಪುರುಷಾರ್ಥವೆಂದು ಪ್ರಸಿದ್ಧವಿದೆ. ಇವುಗಳಲ್ಲಿ ನಾಲ್ಕನೆಯ ಪುರುಷಾರ್ಥವು ಮೋಕ್ಷವಿದ್ದು ಅದನ್ನು ಪುರುಷರೇ ಶೋಧಿಸುತ್ತಾರೆ ಮತ್ತು ಅದನ್ನು ಪುರುಷರೇ ಪರೀಕ್ಷಿಸುತ್ತಾರೆ ಅದರ ಸಿದ್ಧಿ ಮಾಡಿಕೊಳ್ಳುತ್ತಾರೆ. ಉಳಿದ ಶ್ವಾನ, ಗರ್ದಭ, ಎತ್ತು, ಪಶು, ಸ್ತ್ರೀಯರುಗಳು ಮೋಕ್ಷದ ಶೋಧ ಮಾಡುತ್ತಾರೆಂಬುದು ಪ್ರಸಿದ್ಧವಿಲ್ಲ, ಹಾಗಿದ್ದರೆ ಮೋಕ್ಷದ ಹೆಸರು ಪುರುಷಾರ್ಥವೆಂದೇಕೆ ಇರುವುದು. ಇಲ್ಲಿ ಮೋಕ್ಷವು ಶೀಲದಿಂದ ಆಗುತ್ತದೆಯೆಂಬ ಆಶಯವಿದೆ. ಆ ಶ್ವಾನ, ಗರ್ದಭ ಮೊದಲಾದವುಗಳಂತೂ ಅಜ್ಞಾನಿಯಾಗಿದ್ದು ಕುಶೀಲವಿವೆ, ಅವುಗಳ ಪ್ರಕೃತಿ ಸ್ವಭಾವವೇ ಬದಲಾಗಿ ಮೋಕ್ಷವಾಗಲು ಯೋಗ್ಯ ಹಾಗೂ ಅದರ ಶೋಧ ಮಾಡಲು ಯೋಗ್ಯವಿಲ್ಲ, ಅದಕ್ಕಾಗಿ ಪುರುಷನು ಮೋಕ್ಷದ ಸಾಧನವಾದ ಶೀಲವನ್ನು ತಿಳಿದುಕೊಂಡು ಅಂಗೀಕಾರ ಮಾಡಬೇಕು, ಸಮ್ಯಗ್ದರ್ಶನ ಮೊದಲಾದವು ಶೀಲದ ಪರಿವಾರಗಳೇ ಇವೆಯೆಂಬುದನ್ನು ಈ ಮೊದಲೇ ಹೇಳಿದೆಯೆಂದು ತಿಳಿದುಕೊಳ್ಳಬೇಕು. ॥೨೯॥

ಶೀಲವಿಲ್ಲದೆ ಜ್ಞಾನದಿಂದಲೇ ಮೋಕ್ಷವಾಗುವುದಿಲ್ಲವೆಂಬುದನ್ನು ಈಗ ಉದಾಹರಣೆಯೊಡನೆ ಹೇಳುತ್ತಾರೆ, -

---

**ಶ್ವಾನ-ಗರ್ದಭ-ಹಸು-ಪಶು-ಸ್ತ್ರೀಯರಿಗೆ ಮೋಕ್ಷವಾಗುವುದು ತೋರುವುದೇನು ।**
**ಆ ನಾಲ್ಕನೆಯದನು ಶೋಧಿಪರು ಮೋಕ್ಷಪಡೆವುದನೆಲ್ಲರು ನೋಡುವರು ॥೨೯॥**

ಜಇ ವಿಸಯಲೋಲಏಹಿಂ ಣಾಣೀಹಿ ಹವಿಜ್ಜ ಸಾಹಿದೋ ಮೋಕ್ಖೋ ।
ತೋ ಸೋ ಸಚ್ಚಇಪುತ್ತೋ ದಸಪುವ್ವೀಓ ವಿ ಕಿಂ ಗದೋ ಣರಯಂ ॥೩೦॥

ಯದಿ ವಿಷಯಲೋಲೈಃ ಜ್ಞಾನಿಭಿಃ ಭವೇತ್ ಸಾಧಿತಃ ಮೋಕ್ಷಃ ।
ತರ್ಹಿ ಸಃ ಸಾತ್ಯಕಿಪುತ್ರಃ ದಶಪೂರ್ವಿಕಃ ಕಿಂ ಗತಃ ನರಕಂ ॥೩೦॥

ಅರ್ಥ :– ವಿಷಯಗಳಲ್ಲಿ ಲೋಲ ಎಂದರೆ ಲೋಲುಪ ಆಸಕ್ತ ಮತ್ತು ಜ್ಞಾನಸಹಿತರಾದಂಥ ಜ್ಞಾನಿಗಳು ಮೋಕ್ಷ ಸಾಧಿಸಿದ್ದರೆ ದಶಪೂರ್ವಗಳನ್ನು ತಿಳಿದುಕೊಳ್ಳುವಂಥ ರುದ್ರನು ನರಕಕ್ಕೇಕೆ ಹೋದನು ?

ಭಾವಾರ್ಥ :– ಯಾರಾದರೂ ಶುಷ್ಕ ಬರಡು ಜ್ಞಾನದಿಂದಲೇ ಮೋಕ್ಷಸಾಧಿಸಿದ್ದಾರೆಂದು ಹೇಳಿದರೆ ದಶಪೂರ್ವಗಳ ಪಾಠಿಯಾದ ರುದ್ರನೇಕೆ ನರಕಕ್ಕೆ ಹೋದನು ? ಆದುದರಿಂದ ಶೀಲವಿಲ್ಲದೆ ಕೇವಲ ಜ್ಞಾನದಿಂದಲೇ ಮೋಕ್ಷವಿಲ್ಲ, ರುದ್ರನು ಕುಶೀಲ ಸೇವನೆ ಮಾಡುವಂಥವನಾಗಿ ಮುನಿಪದದಿಂದ ಭ್ರಷ್ಟನಾಗಿ ಕುಶೀಲದ ಸೇವನೆ ಮಾಡುವುದರಿಂದ ನರಕದಲ್ಲಿ ಹೋದನೆಂಬ ಕಥೆಯು ಪುರಾಣಗಳಲ್ಲಿ ಪ್ರಸಿದ್ಧವಿದೆ. ॥೩೦॥

ಶೀಲವಿಲ್ಲದೆ ಜ್ಞಾನದಿಂದಲೇ ಭಾವದ ಶುದ್ಧಿಯಾಗುವುದಿಲ್ಲವೆಂಬುದನ್ನು ಈಗ ಹೇಳುತ್ತಾರೆ, –

ಜಇ ಣಾಣೇಣ ವಿಸೋಹೋ ಸೀಲೇಣ ವಿಣಾ ಬುಹೇಹಿಂ ಣಿದ್ದಿಟ್ಠೋ ।
ದಸಪುವ್ವಿಯಸ್ಸ ಭಾವೋ ಯ ಣ ಕಿಂ ಪುಣು ಣಿಮ್ಮಲೋ ಜಾದೋ ॥೩೧॥

ಯದಿ ಜ್ಞಾನೇನ ವಿಶುದ್ಧಃ ಶೀಲೇನ ವಿನಾ ಬುಧೈರ್ನಿರ್ದಿಷ್ಟಃ ।
ದಶಪೂರ್ವಿಕಸ್ಯ ಭಾವಃ ಚ ನ ಕಿಂ ಪುನಃ ನಿರ್ಮಲಃ ಜಾತಃ ॥೩೧॥

ಅರ್ಥ :– ಪಂಡಿತರುಗಳು ಶೀಲವಿಲ್ಲದೆ ಜ್ಞಾನದಿಂದಲೇ ವಿಸೋಹ ಎಂದರೆ ವಿಶುದ್ಧಭಾವವಾಗುತ್ತದೆ ಯೆಂದು ಹೇಳಿದ್ದರೆ ದಶಪೂರ್ವಗಳನ್ನು ತಿಳಿದುಕೊಳ್ಳುವಂಥ ಆ ರುದ್ರನ ಭಾವವೇಕೆ ನಿರ್ಮಲವಾಗಲಿಲ್ಲ, ಆದುದರಿಂದ ಭಾವವು ಶೀಲದಿಂದಲೇ ನಿರ್ಮಲವಾಗುತ್ತದೆಯೆಂಬುದು ತಿಳಿದು ಬರುತ್ತದೆ.

ಭಾವಾರ್ಥ :– ಶುಷ್ಕ ಜ್ಞಾನವು ಜ್ಞೇಯವನ್ನೇ ತಿಳಿಸಿಕೊಡುತ್ತಿರುವುದರಿಂದ ಅದು ಮಿಥ್ಯಾತ್ವ ಕಷಾಯವಿದ್ದ ಮೇಲೆ ವಿಪರ್ಯಯವಾಗಿ ಬಿಡುವುದರಿಂದ ಮಿಥ್ಯಾತ್ವ ಕಷಾಯದ ನಾಶಮಾಡುವುದೇ ಶೀಲವಿದೆ. ಹೀಗೆ ಶೀಲವಿಲ್ಲದೆ ಜ್ಞಾನದಿಂದಲೇ ಮೋಕ್ಷದ ಸಿದ್ಧಿಯಾಗುವುದಿಲ್ಲ. ಶೀಲವಿಲ್ಲದೆ ಮುನಿ ಕೂಡ ಆಗಿಹೋದರೂ ಅವನು ಭ್ರಷ್ಟನಾಗಿ ಹೋಗುತ್ತಾನೆ. ಆದುದರಿಂದ ಶೀಲವನ್ನು ಮುಖ್ಯವೆಂದು ತಿಳಿದುಕೊಳ್ಳಬೇಕು. ॥೩೧॥

---

ಒಂದುವೇಳೆ ವಿಷಯವಿಲುಬ್ಧ ಜ್ಞಾನಧರನು ಮೋಕ್ಷವನು ಸಾಧಿಸಿದ್ದರೆ ।
ಸಂದ ಸಾತ್ಯಕಿಪುತ್ರ ದಶಪೂರ್ವಧರನಿದ್ದರು ನರಕಕೇಕಿಳಿದನು ॥೩೦॥

ಆ ಶೀಲವಿಲ್ಲದೆ ವಿಶುದ್ಧಿಯನು ಜ್ಞಾನಿಗಳು ಜ್ಞಾನಮಾತ್ರದಿಂ ಹೇಳಿದ್ದರೆ ।
ದಶಪೂರ್ವಗಳನರಿವವನ ಭಾವವೇಕೆ ತಾನೆ ನಿರ್ಮಲವಾಗಲಿಲ್ಲ ॥೩೧॥

ಒಂದುವೇಳೆ ನರಕದಲ್ಲಿ ಕೂಡ ಶೀಲವುಂಟಾದರೆ ಮತ್ತು ವಿಷಯಗಳಿಂದ ವಿರಕ್ತವಾಗಿ ಹೋದರೆ ಅಲ್ಲಿಂದ ಹೊರಹೊರಟು ತೀರ್ಥಂಕರ ಪದವನ್ನು ಪ್ರಾಪ್ತಮಾಡಿಕೊಳ್ಳುತ್ತಾನೆಂದು ಈಗ ಹೇಳುತ್ತಾರೆ, –

ಜಾಏ ವಿಸಯವಿರತ್ತೋ ಸೋ ಗಮಯದಿ ಣರಯವೇಯಣಾ ಪಉರಾ ।
ತಾ ಲೇಹದಿ ಅರುಹಪಯಂ ಭಣಿಯಂ ಜಿಣವಡ್ಢಮಾಣೇಣ ॥೩೨॥

ಯಃ ವಿಷಯವಿರಕ್ತಃ ಸಃ ಗಮಯತಿ ನರಕವೇದನಾಃ ಪ್ರಚುರಾಃ ।
ತತ್ ಲಭತೇ ಅರ್ಹತ್ಪದಂ ಭಣಿತಂ ಜಿನವರ್ಧಮಾನೇನ ॥೩೨॥

ಅರ್ಥ ಃ– ವಿಷಯಗಳಿಂದ ವಿರಕ್ತನಿರುವಂಥ ಜೀವನು ನರಕದ ಬಹಳಷ್ಟು ವೇದನೆಯನ್ನೂ ಮರೆಯುತ್ತಾನೆ ಅಲ್ಲಿ ಕೂಡ ಅತ್ಯಂತ ದುಃಖಿಯಾಗುವುದಿಲ್ಲ ಮತ್ತು ಅಲ್ಲಿಂದ ಹೊರಬಂದು ತೀರ್ಥಂಕರನಾಗುತ್ತಾನೆಂದು ಶ್ರೀ ವರ್ಧಮಾನ ಜಿನಭಗವಂತರು ಹೇಳಿದ್ದಾರೆ.

ಭಾವಾರ್ಥ ಃ– ಮೂರನೆಯ ಪೃಥ್ವಿಯಿಂದ ಹೊರ ಬಂದು ತೀರ್ಥಂಕರನಾಗುವುದು ಕೂಡ ಶೀಲದ ಮಾಹಾತ್ಮ್ಯವೇ ಇದೆಯೆಂದು ಜಿನಸಿದ್ಧಾಂತದಲ್ಲಿ ಹೇಳಿದೆ. ಅಲ್ಲಿ ಸಮ್ಯಕ್ತ್ವಸಹಿತನಾಗಿ ವಿಷಯಗಳಿಂದ ವಿರಕ್ತನಾಗಿ ಒಳ್ಳೆಯ ಭಾವನೆಯನ್ನು ಭಾವಿಸಿದಾಗ ನರಕದ ವೇದನೆಯು ಕೂಡ ಅಲ್ಪವಾಗಿ ಹೋಗುತ್ತದೆ ಮತ್ತು ಅಲ್ಲಿಂದ ಹೊರ ಹೊರಟು ಅರಹಂತ ಪದವನ್ನು ಪ್ರಾಪ್ತಮಾಡಿಕೊಂಡು ಮೋಕ್ಷ ಪಡೆಯುತ್ತಾನೆ. ಹೀಗೆ ವಿಷಯಗಳಿಂದ ವಿರಕ್ತಭಾವವಾಗುವುದು ಅದು ಶೀಲದ ಮಾಹಾತ್ಮ್ಯವೇ ಇದೆಯೆಂದು ತಿಳಿಯಬೇಕು. ಸಮ್ಯಗ್ದೃಷ್ಟಿಗೆ ಜ್ಞಾನ ಮತ್ತು ವೈರಾಗ್ಯದ ಶಕ್ತಿಯು ನಿಯಮದಿಂದ ಇರುತ್ತದೆಯೆಂದು ಸಿದ್ಧಾಂತದಲ್ಲಿ ಹೇಳಿದೆ. ಆ ವೈರಾಗ್ಯದ ಶಕ್ತಿಯೇ ಶೀಲದ ಏಕದೇಶವಿದೆಯೆಂದು ತಿಳಿದುಕೊಳ್ಳಬೇಕು. ॥೩೨॥

ಈಗ ಈ ಕಥನದ ಸಂಕೋಚ ಮಾಡುತ್ತಾರೆ, –

ಏವಂ ಬಹುಪ್ಪಯಾರಂ ಜಿಣೇಹಿ ಪಚ್ಚಕ್ಖಣಾಣದರಸೀಹಿಂ ।
ಸೀಲೇಣ ಯ ಮೋಕ್ಖಪಯಂ ಅಕ್ಖಾತೀದಂ ಯ ಲೋಯಣಾಣೇಹಿಂ ॥೩೩॥

ಏವಂ ಬಹುಪ್ರಕಾರಂ ಜಿನೈಃ ಪ್ರತ್ಯಕ್ಷಜ್ಞಾನದರ್ಶಿಭಿಃ ।
ಶೀಲೇನ ಚ ಮೋಕ್ಷಪದಂ ಅಕ್ಷಾತೀತಂ ಚ ಲೋಕಜ್ಞಾನೈಃ ॥೩೩॥

ಅರ್ಥ ಃ– ಏವಂ ಎಂದರೆ ಪೂರ್ವೋಕ್ತ ಪ್ರಕಾರದಿಂದ ಹಾಗೂ ಬೇರೆ (ಬಹಳಷ್ಟು) ಪ್ರಕಾರಗಳಿಂದ ಯಾರಲ್ಲಿ ಪ್ರತ್ಯಕ್ಷ ಜ್ಞಾನದರ್ಶನಗಳು ಕಂಡು ಬರುತ್ತವೆ ಮತ್ತು ಯಾರಿಗೆ ಲೋಕ–ಅಲೋಕದ ಜ್ಞಾನವಿದೆ ಅಂಥ ಜಿನದೇವರು

---

ಆ ವಿಷಯವಿರಕ್ತ ಜೀವ ಪ್ರಚುರ ನರಕವೇದನೆಯ ಕಳೆಯುವನು ।
ಅವನರಹಂತಪದ ಪಡೆವನೆಂದು ಜಿನವರ್ಧಮಾನ ಪೇಳಿರುವರು ॥೩೨॥

ಪ್ರತ್ಯಕ್ಷಮೋಕ್ಷಪದದ ಪ್ರಾಪ್ತಿ ಶೀಲದಿಂದಾಗುವುದೆಂದು ಬಹುಪ್ರಕಾರದಿಂ ।
ಪ್ರತ್ಯಕ್ಷ ಜ್ಞಾನದರ್ಶನಧರರಾದ ಲೋಕಜ್ಞ ಜಿನದೇವರು ಪೇಳಿಹರು ॥೩೩॥

ಶೀಲದಿಂದ-ಅಕ್ಷಾತೀತ ಎಂದರೆ ಇಂದ್ರಿಯಗಳಿಂದ ರಹಿತವಾದ ಅತೀಂದ್ರಿಯ ಜ್ಞಾನ ಸುಖಗಳಿರುವಂಥ ಮೋಕ್ಷಪದವಾಗುತ್ತದೆಯೆಂದು ಹೇಳಿದ್ದಾರೆ.

ಭಾವಾರ್ಥ ಃ- ಶೀಲದಿಂದ ಅತೀಂದ್ರಿಯ ಜ್ಞಾನ ಸುಖರೂಪವಾದ ಮೋಕ್ಷಪದದ ಪ್ರಾಪ್ತಿಯಾಗುತ್ತದೆ-ಯೆಂದು ಸರ್ವಜ್ಞದೇವರು ಹೇಳಿದ್ದಾರೆ, ಭವ್ಯಜೀವರುಗಳು ಆ ಶೀಲವನ್ನು ಅಂಗೀಕಾರ ಮಾಡಬೇಕೆಂಬುದು ಈ ಉಪದೇಶದ ಆಶಯವು ಸೂಚಿತವಾಗುತ್ತದೆ. ಹೆಚ್ಚೆಂದು ಎಲ್ಲಿಯವರೆಗೆ ಹೇಳುವುದು ಇಷ್ಟನ್ನೇ ಹಲವು ಪ್ರಕಾರದಿಂದ ಹೇಳಿರುವುದನ್ನು ತಿಳಿದುಕೊಳ್ಳಬೇಕು. ।।೩೩।।

ಈ ಶೀಲದಿಂದ ನಿರ್ವಾಣವಾಗುತ್ತದೆ ಅದರ ವರ್ಣನೆಯು ಹಲವು ಪ್ರಕಾರದಿಂದಿದೆ ಅದು ಹೇಗೆಂಬುದನ್ನು ಈಗ ಹೇಳುತ್ತಾರೆ, -

**ಸಮತ್ತಣಾಣದಂಸಣತವವೀರಿಯಪಂಚಯಾರಮಪ್ಪಾಣಂ ।**
**ಜಲಣೋ ವಿ ಪವಣಸಹಿದೋ ಡಹಂತಿ ಪೋರಾಯಣಂ ಕಮ್ಮಂ ।।೩೪।।**

**ಸಮ್ಯಕ್ತ ಜ್ಞಾನದರ್ಶನತಪೋವೀರ್ಯಪಂಚಾಚಾರಾಃ ಆತ್ಮಾನಾಮ್ ।**
**ಜ್ವಲನೋಽಪಿ ಪವನಸಹಿತಃ ದಹಂತಿ ಪುರಾತನಂ ಕರ್ಮಂ ।।೩೪।।**

ಅರ್ಥ ಃ- ಸಮ್ಯಕ್ತ್ವ, ಜ್ಞಾನ, ದರ್ಶನ, ತಪ, ವೀರ್ಯ ಇವು ಪಂಚಾಚಾರಗಳಿದ್ದು ಇವು ಆತ್ಮನ ಆಶ್ರಯಪಡೆದು ಪುರಾತನ ಕರ್ಮಗಳನ್ನು ಗಾಳಿಯಿಂದ ಕೂಡಿದ ಅಗ್ನಿಯ ಹಳೆಯ ಒಣಗಿದ ಸೌದೆಯನ್ನು ದಗ್ಧ ಮಾಡಿ ಬಿಡುವಂತೆ ಸುಟ್ಟುಹಾಕುತ್ತವೆ.

ಭಾವಾರ್ಥ ಃ- ಇಲ್ಲಿ ಸಮ್ಯಕ್ತ್ವ ಮೊದಲಾದ ಪಂಚಾಚಾರಗಳಂತೂ ಅಗ್ನಿಯ ಸ್ಥಾನದಲ್ಲಿವೆ ಮತ್ತು ಆತ್ಮನ ತ್ರೈಕಾಲಿಕ ಶುದ್ಧಭಾವವನ್ನು ಶೀಲವೆಂದು ಹೇಳುತ್ತಾರೆ, ಈ ಆತ್ಮನ ಸ್ವಭಾವವು ಪವನದ ಸ್ಥಾನದಲ್ಲಿದೆ ಆ ಪಂಚಾಚಾರರೂಪದ ಅಗ್ನಿ ಮತ್ತು ಶೀಲರೂಪದ ಗಾಳಿಯ ಸಹಾಯ ಪಡೆದು ಪುರಾತನ ಕರ್ಮಬಂಧನವನ್ನು ದಗ್ಧಮಾಡಿ ಆತ್ಮನನ್ನು ಶುದ್ಧಮಾಡುತ್ತದೆ, ಈ ಪ್ರಕಾರ ಶೀಲವೇ ಮುಖ್ಯವಿದೆ. ಪಂಚಾಚಾರಗಳಲ್ಲಿ ಚಾರಿತ್ರವನ್ನು ಹೇಳಿದೆ ಮತ್ತು ಇಲ್ಲಿ ಸಮ್ಯಕ್ತ್ವವೆಂದು ಹೇಳಿರುವಲ್ಲಿ ಚಾರಿತ್ರವೆಂದೇ ತಿಳಿಯಬೇಕು, ವಿರೋಧ ತಿಳಿಯಬಾರದು. ।।೩೪।।

ಹೀಗೆ ಅಷ್ಟಕರ್ಮಗಳನ್ನು ನಷ್ಟಮಾಡಿದವರು ಸಿದ್ಧರಾಗಿದ್ದಾರೆಂದು ಈಗ ಹೇಳುತ್ತಾರೆ, -

**ಣಿದ್ದಡ್ಡಅಟ್ಠಕಮ್ಮಾ ವಿಸಯವಿರತ್ತಾ ಜಿದಿಂದಿಯಾ ಧೀರಾ ।**
**ತವವಿಣಯಸೀಲಸಹಿದಾ ಸಿದ್ಧಾ ಸಿದ್ಧಿಂ ಗದಿಂ ಪತ್ತಾ ।।೩೫।।**

---

ಆ ಸಮ್ಯಕ್ತ್ವ ಜ್ಞಾನ-ದರ್ಶನ ತಪ ವೀರ್ಯಾಚರಣ ಆತ್ಮನಾಶ್ರಯ ಪಡೆದು ।
ಬೀಸುವ ಪವನಸಹಿತಗ್ನಿಯಂತೆ ಸುಡುವವು ಪುರಾತನ ಕರ್ಮಗಳ ।।೩೪।।

ಜಿತೇಂದ್ರಿಯ ವಿಷಯವಿರಕ್ತರಾದಾಧೀರರು ಅಷ್ಟಕರ್ಮಗಳ ಕಿಡಿಸಿ ।
ಆ ತಪ ವಿನಯ ಶೀಲ ಸಹ ಸಿದ್ಧಗತಿ ಪಡೆದು ಸಿದ್ಧಪ್ರಭುವಾದರು ।।೩೫।।

ನಿರ್ದಗ್ಧಾಷ್ಟಕರ್ಮಾಣಃ ವಿಷಯವಿರಕ್ತಾ ಜಿತೇಂದ್ರಿಯಾ ಧೀರಾ ಃ
ತಪೋವಿನಯಶೀಲಸಹಿತಾಃ ಸಿದ್ಧಾಃ ಸಿದ್ಧಿಂ ಗತಿಂ ಪ್ರಾಪ್ತಾಃ ॥೩೫॥

ಅರ್ಥ ಃ- ಯಾವ ಪುರುಷರು ಇಂದ್ರಿಯಗಳನ್ನು ಜಯಿಸಿರುವುದರಿಂದಲೇ ವಿಷಯಗಳಿಂದ ವಿರಕ್ತರಾಗಿ ಹೋಗಿದ್ದಾರೆ, ಮತ್ತು ಧೀರರಿದ್ದಾರೆ, ಪರೀಷಹ ಮೊದಲಾದ ಉಪಸರ್ಗಗಳುಂಟಾದರೂ ಚಂಚಲರಾಗುವುದಿಲ್ಲ ಮತ್ತು ತಪಸ್ಸು-ವಿನಯ-ಶೀಲಸಹಿತರಿದ್ದಾರೆ ಅವರು ಅಷ್ಟಕರ್ಮಗಳನ್ನು ನಷ್ಟಮಾಡಿ ಸಿದ್ಧಗತಿ ಆ ಮೋಕ್ಷಕ್ಕೆ ಪ್ರಾಪ್ತರಾಗಿದ್ದಾರೆ ಅವರು ಸಿದ್ಧರೆಂದು ಕರೆಯಿಸಿಕೊಳ್ಳುತ್ತಾರೆ.

ಭಾವಾರ್ಥ ಃ- ಇಲ್ಲಿ ಕೂಡ ಜಿತೇಂದ್ರಿಯ ಮತ್ತು ವಿಷಯವಿರಕ್ತತೆಯೆಂಬ ವಿಶೇಷಣಗಳು ಶೀಲದ ಮುಖ್ಯತೆಯನ್ನು ತೋರಿಸಿಕೊಡುತ್ತವೆ. ॥೩೫॥

ಲಾವಣ್ಯ ಮತ್ತು ಶೀಲಯುಕ್ತರಾಗಿರುವಂಥ ಮುನಿಗಳು ಪ್ರಶಂಸೆಗೆ ಯೋಗ್ಯರಾಗಿರುತ್ತಾರೆಂಬುದನ್ನು ಈಗ ಹೇಳುತ್ತಾರೆ, -

ಲಾವಣ್ಣಸೀಲಕುಸಲೋ ಜಮ್ಮಮಹೀರುಹೋ ಜಸ್ಸ ಸವಣಸ್ಸ ।
ಸೋ ಸೀಲೋ ಸ ಮಹಪ್ಪಾ ಭಮಿಜ್ಜ ಗುಣವಿತ್ಥರಂ ಭವಿಏ ॥೩೬॥

ಲಾವಣ್ಯಶೀಲಕುಶಲಃ ಜನ್ಮಮಹೀರುಹಃ ಯಸ್ಯ ಶ್ರಮಣಸ್ಯ ।
ಸಃ ಶೀಲಃ ಸ ಮಹಾತ್ಮಾ ಭ್ರಮೇತ್ ಗುಣವಿಸ್ತಾರಃ ಭವ್ಯೇ ॥೩೬॥

ಅರ್ಥ ಃ- ಯಾವ ಮುನಿಯ ಜನ್ಮರೂಪದ ವೃಕ್ಷವು ಲಾವಣ್ಯ ಎಂದರೆ ಅನ್ಯರಿಗೆ ಪ್ರಿಯವೆನಿಸುವಂತೆ ಸರ್ವಾಂಗ ಸುಂದರವಿದೆ ಮತ್ತು ಮನ-ವಚನ-ಕಾಯದ ಚೇಷ್ಟೆಯು ಸುಂದರವಿದೆ ಹಾಗೂ ಶೀಲ ಎಂದರೆ ಅಂತರಂಗವು ಮಿಥ್ಯಾತ್ವ ವಿಷಯಗಳಿಂದ ರಹಿತ ಪರೋಪಕಾರಿ ಸ್ವಭಾವ ಇವೆರಡರಲ್ಲಿ ನಿಪುಣನಿರುವಂಥ ಮುನಿಯು ಶೀಲವಂತನಿದ್ದಾನೆ ಮಹಾತ್ಮನಿದ್ದಾನೆ ಅವನ ಗುಣಗಳ ವಿಸ್ತಾರವು ಲೋಕದಲ್ಲಿ ಸಂಚರಿಸುತ್ತದೆ, ಹರಡುತ್ತದೆ.

ಭಾವಾರ್ಥ ಃ- ಹೀಗೆ ಮುನಿಯ ಗುಣಗಳು ಲೋಕದಲ್ಲಿ ವಿಸ್ತಾರಕ್ಕೆ ಪ್ರಾಪ್ತವಾಗುತ್ತವೆ, ಸಮಸ್ತ ಲೋಕದ ಪ್ರಶಂಸೆಗೆ ಯೋಗ್ಯವಾಗುತ್ತವೆ, ಇಲ್ಲಿ ಕೂಡ ಶೀಲದ ಮಹಿಮೆಯನ್ನೇ ತಿಳಿಯಬೇಕು ಮತ್ತು ವೃಕ್ಷದ ಸ್ವರೂಪ ಹೇಳಿದೆ. ಯಾವ ಪ್ರಕಾರ ವೃಕ್ಷದ ಶಾಖೆ, ಪತ್ರ, ಪುಷ್ಪ, ಫಲಗಳು ಸುಂದರವಿದ್ದು ನೆರಳು ನೀಡಿ ರಾಗದ್ವೇಷಗಳಿಲ್ಲದೆ ಸಮಸ್ತ ಲೋಕಕ್ಕೆ ಸಮಾನ ಉಪಕಾರ ಮಾಡಿದರೆ ಆ ವೃಕ್ಷದ ಮಹಿಮೆಯನ್ನು ಎಲ್ಲ ಜನರು ಮಾಡುತ್ತಾರೆ, ಅದೇ ಪ್ರಕಾರ ಮುನಿಯು ಕೂಡ ಇಂಥವನಿದ್ದರೆ ಎಲ್ಲರಿಂದ ಮಹಿಮೆ ಮಾಡಿಸಿಕೊಳ್ಳಲು ಯೋಗ್ಯನಾಗುತ್ತಾನೆ. ॥೩೬॥

ಇಂಥವನು ಜಿನಮಾರ್ಗದಲ್ಲಿ ರತ್ನತ್ರಯದ ಪ್ರಾಪ್ತಿರೂಪವಾದ ಬೋಧಿಯನ್ನು ಪಡೆಯುತ್ತಾನೆಂಬುದನ್ನು ಈಗ ಹೇಳುತ್ತಾರೆ, -

---

ಯಾವ ಶ್ರಮಣನ ಜನ್ಮರೂಪ ವೃಕ್ಷ ಲಾವಣ್ಯಮಯ ಶೀಲಸಮೃದ್ಧವಿದೆ ।
ಅವನು ಶೀಲವಂತ ಮಹಾತ್ಮನಿದ್ದವನ ಗುಣ ಲೋಕದೊಳ್ಹರಡುವವು ॥೩೬॥

**ಣಾಣಂ ಝಾಣಂ ಜೋಗೋ ದಂಸಣಸುದ್ಧೀಯ [೧]ವೀರಿಯಾಯತ್ತಂ ।**
**ಸಮ್ಮತ್ತದಂಣಣೇಣ ಯ ಲಹಂತಿ ಜಿಣಸಾಸಣೇ ಬೋಹಿಂ ॥೩೭॥**

ಜ್ಞಾನಂ ಧ್ಯಾನಂ ಯೋಗಃ ದರ್ಶನಶುದ್ಧಿಶ್ಚ ವೀರ್ಯಾಯತ್ತಾಃ ।
ಸಮ್ಯಕ್ತ್ವದರ್ಶನೇನ ಚ ಲಭಂತೇ ಜಿನಶಾಸನೇ ಬೋಧಿಂ ॥೩೭॥

ಅರ್ಥ :- ಜ್ಞಾನ, ಧ್ಯಾನ, ಯೋಗ ದರ್ಶನದ ಶುದ್ಧತೆಗಳಂತೂ ವೀರ್ಯದ ಆಧೀನವಿವೆ ಮತ್ತು ಸಮ್ಯಗ್ದರ್ಶನದಿಂದ ಜಿನಶಾಸನದಲ್ಲಿ ಬೋಧಿಯನ್ನು ಪ್ರಾಪ್ತಮಾಡಿಕೊಳ್ಳುತ್ತಾರೆ, ಈ ರತ್ನತ್ರಯದ ಪ್ರಾಪ್ತಿಯಾಗುತ್ತದೆ.

ಭಾವಾರ್ಥ :- ಜ್ಞಾನ ಎಂದರೆ ಪದಾರ್ಥಗಳನ್ನು ವಿಶೇಷರೂಪದಿಂದ ತಿಳಿದುಕೊಳ್ಳುವುದು, ಧ್ಯಾನ ಎಂದರೆ ಸ್ವರೂಪದಲ್ಲಿ ಏಕಾಗ್ರಚಿತ್ತವಾಗುವುದು, ಯೋಗ ಎಂದರೆ ಸಮಾಧಿ ಹಚ್ಚುವುದು, ಸಮ್ಯಗ್ದರ್ಶನವನ್ನು ನಿರತಿಚಾರ ಶುದ್ಧಮಾಡುವುದು ಇವಂತೂ ತಮ್ಮ ವೀರ್ಯದ (ಶಕ್ತಿಯ) ಆಧೀನವಿದೆ, ಮಾಡಿದಷ್ಟು ಆಗುವುದು, ಆದರೆ ಸಮ್ಯಗ್ದರ್ಶನದಿಂದ ಬೋಧಿ ಎಂದರೆ ರತ್ನತ್ರಯದ ಪ್ರಾಪ್ತಿಯಾಗುತ್ತದೆ, ಇದರ ಉಪಸ್ಥಿತಿಯಲ್ಲಿ ವಿಶೇಷ ಧ್ಯಾನಾದಿಗಳೂ ಯಥಾ ಶಕ್ತಿಯಾಗಿ ಆಗೇ ಆಗುತ್ತವೆ ಮತ್ತು ಇದರಿಂದ ಶಕ್ತಿಯೂ ವೃದ್ಧಿಸುತ್ತದೆ. ಹೀಗೆ ಹೇಳುವಲ್ಲಿ ಕೂಡ ಶೀಲದ್ದೇ ಮಾಹಾತ್ಮ್ಯವಿದೆಯೆಂದು ತಿಳಿಯಬೇಕು. ರತ್ನತ್ರಯವೇ ಆತ್ಮನ ಸ್ವಭಾವವಿದ್ದು ಅದನ್ನು ಶೀಲವೆಂದೂ ಹೇಳುತ್ತಾರೆ. ॥೩೭॥

ಇದರ ಪ್ರಾಪ್ತಿಯು ಜಿನವಚನದಿಂದ ಆಗುತ್ತದೆಯೆಂಬುದನ್ನು ಈಗ ಹೇಳುತ್ತಾರೆ, -

**ಜಿಣವಯಣಗಹಿದಸಾರಾ ವಿಸಯವಿರತ್ತಾ ತಾವೋಧಣಾ ಧೀರಾ ।**
**ಸೀಲಸಲಿಲೇಣ ಣ್ಹಾದಾ ತೇ ಸಿದ್ಧಾಲಯಸುಹಂ ಜಂತಿ ॥೩೮॥**

ಜಿನವಚನಗೃಹೀತಸಾರಾ ವಿಷಯವಿರಕ್ತಾಃ ತಪೋಧನಾ ಧೀರಾಃ ।
ಶೀಲಸಲಿಲೇನ ಸ್ನಾತಾಃ ತೇ ಸಿದ್ಧಾಲಯಸುಖಂ ಯಾಂತಿ ॥೩೮॥

ಅರ್ಥ :- ಯಾರು ಜಿನವಚನಗಳಿಂದ ಸಾರವನ್ನು ಗ್ರಹಣ ಮಾಡಿಕೊಂಡಿದ್ದಾರೆ ಮತ್ತು ವಿಷಯ-ಗಳಿಂದ ವಿರಕ್ತರಾಗಿ ಹೋಗಿದ್ದಾರೆ, ಯಾರಿಗೆ ತಪಸ್ಸೇ ಧನವಿದೆ ಮತ್ತು ಧೀರರಾಗಿರುವಂಥ ಮುನಿಗಳು ಶೀಲರೂಪದ

---

ಜ್ಞಾನಧ್ಯಾನಯೋಗದರ್ಶನವಿಶುದ್ಧಿಗಳೆಲ್ಲ ವೀರ್ಯದಾಧೀನವಿರುವವು ।
ಜಿನಶಾಸನದೊಳಗೆ ಬೋಧಿಯನು ಪಡೆಯುವರು ಸಮ್ಯಗ್ದರ್ಶನದಿಂದ ॥೩೭॥

ಜಿನವಚನದಿಂ ಸಾರಗ್ರಹಿಸಿ ವಿಷಯವಿರಕ್ತಧೀರ ತಪೋಧನರು ।
ಸ್ನಾನಮಾಡಿ ಶೀಲಸಲಿಲದಿಂ ಸಿದ್ಧಾಲಯದ ಸುಖಕೆ ಪ್ರಾಪ್ತರಾಗುವರು ॥೩೮॥

---

೧ ಸಂ. ಪ್ರತಿಯಲ್ಲಿ 'ವೀರಿಯಾವತ್ತಂ' ಎಂಬ ಪಾಠಾಂತರವಿದ್ದು ಅದರ ಛಾಯೆಯಲ್ಲಿ 'ವೀರ್ಯತ್ವ' ವಿದೆ.

ಜಲದಿಂದ ಸ್ನಾನಮಾಡಿ ಶುದ್ಧರಾಗಿದ್ದಾರೆ ಅವರು ಸಿದ್ಧಾಲಯ ಎಂದರೆ ಸಿದ್ಧರಿರುವ ಸ್ಥಾನದ ಸುಖಗಳನ್ನು ಪ್ರಾಪ್ತಮಾಡಿಕೊಳ್ಳುತ್ತಾರೆ.

ಭಾವಾರ್ಥ :- ಜಿನವಚನಗಳಿಂದ ವಸ್ತುವಿನ ಯಥಾರ್ಥ ಸ್ವರೂಪವನ್ನು ತಿಳಿದುಕೊಂಡು ಅದರ ಸಾರರೂಪವಾದ ತನ್ನ ಶುದ್ಧಸ್ವರೂಪದ ಪ್ರಾಪ್ತಿ ಮಾಡಿಕೊಂಡು ಅದನ್ನು ಗ್ರಹಣ ಮಾಡುವವರು ಇಂದ್ರಿಯವಿಷಯಗಳಿಂದ ವಿಮುಕ್ತರಾಗಿ ತಪಸ್ಸನ್ನಂಗೀಕಾರ ಮಾಡುತ್ತಾರೆ-ಮುನಿಯಾಗುತ್ತಾರೆ. ಅವರು ಪರೀಷಹ ಉಪಸರ್ಗಗಳುಂಟಾದರೂ ಕೂಡ ಚಂಚಲರಾಗುವುದಿಲ್ಲ, ಆಗ ಸ್ವರೂಪದ ಪ್ರಾಪ್ತಿಯ ಪೂರ್ಣತೆಯರೂಪವೂ, ಎಂಭತ್ತಾನ್ಲಕ್ಕು ಲಕ್ಷ ಉತ್ತರಗುಣಗಳ ಪೂರ್ಣತೆಯೂ ಆದ ಆ ಶೀಲವೆಂಬ ನಿರ್ಮಲ ಜಲದಿಂದ ಸ್ನಾನಮಾಡಿ ಎಲ್ಲ ಕರ್ಮಮಲವನ್ನು ತೊಳೆದು ಹಾಕಿ ಸಿದ್ಧರಾದರು, ಅವರು ಮೋಕ್ಷಮಂದಿರದಲ್ಲಿದ್ದುಕೊಂಡು ಅಲ್ಲಿ ಪರಮಾನಂದ ಅವಿನಾಶೀ ಅತೀಂದ್ರಿಯ ಅವ್ಯಾಬಾಧ ಸುಖವನ್ನು ಭೋಗಿಸುತ್ತಾರೆ, ಇದೆಲ್ಲವೂ ಶೀಲದ ಮಾಹಾತ್ಮ್ಯವಿದೆ. ಇಂಥ ಶೀಲವು ಜಿನವಚನದಿಂದ ಪ್ರಾಪ್ತವಾಗುತ್ತದೆ, ಅದಕ್ಕಾಗಿ ನಿರಂತರ ಜಿನಾಗಮದ ಅಭ್ಯಾಸವನ್ನು ಮಾಡುವುದು ಉತ್ತಮವಿದೆ. ॥೩೮॥

ಕೊನೆಯ ಸಮಯದಲ್ಲಿ ಸಲ್ಲೇಖನ ಹೇಳಿದ್ದಾರೆ, ಅದರಲ್ಲಿ ದರ್ಶನ-ಜ್ಞಾನ-ಚಾರಿತ್ರ-ತಪ ಈ ನಾಲ್ಕು ಆರಾಧನೆಗಳ ಉಪದೇಶವಿದೆ ಇವೂ ಶೀಲದಿಂದಲೇ ಪ್ರಕಟವಾಗುತ್ತವೆಂಬುದನ್ನು ಈಗ ಆಚಾರ್ಯದೇವರು ಸ್ಪಷ್ಟ ಮಾಡಿ ಹೇಳುತ್ತಾರೆ, -

ಸವ್ವಗುಣಖೀಣಕಮ್ಮಾ ಸುಹದುಕ್ಖವಿವಜ್ಜಿದಾ ಮಣವಿಸುದ್ಧಾ ।
ಪಪ್ಫೋಡಿಯಕಮ್ಮರಯಾ ಹವಂತಿ ಆರಾಹಣಾಪಯಡಾ ॥೩೯॥

ಸರ್ವಗುಣಕ್ಷೀಣಕರ್ಮಾಣಃ ಸುಖದುಃಖವಿವರ್ಜಿತಾಃ ಮನೋವಿಶುದ್ಧಾಃ ।
ಪ್ರಸ್ಫೋಟಿತಕರ್ಮರಜಸಃ ಭವಂತಿ ಆರಾಧನಾಪ್ರಕಟಾಃ ॥೩೯॥

ಅರ್ಥ :- ಸರ್ವಗುಣ ಎಂದರೆ ಮೂಲಗುಣ ಉತ್ತರಗುಣಗಳಿಂದ ಯಾವುದರಲ್ಲಿ ಕರ್ಮಗಳು ಕ್ಷೀಣವಾಗಿ ಹೋಗಿವೆ, ಯಾವುದು ಸುಖ-ದುಃಖಗಳಿಂದ ರಹಿತವಿದೆ, ಯಾವುದರಲ್ಲಿ ಮನಸ್ಸು ವಿಶುದ್ಧವಿದೆ ಮತ್ತು ಯಾವುದರಲ್ಲಿ ಕರ್ಮರಜವನ್ನು ಹಾರಿಸಿ ಬಿಡಲಾಗಿದೆ ಅಂಥ ಆರಾಧನೆಯು ಪ್ರಕಟವಾಗುತ್ತದೆ.

ಭಾವಾರ್ಥ :- ಮೊದಲಂತೂ ಸಮ್ಯಗ್ದರ್ಶನಸಹಿತವಾಗಿ ಮೂಲಗುಣ ಉತ್ತರಗುಣಗಳ ಮುಖಾಂತರ ಕರ್ಮಗಳ ನಿರ್ಜರೆ ಮಾಡುವುದರಿಂದ ಕರ್ಮದ ಸ್ಥಿತಿ ಅನುಭಾಗಗಳು ಕ್ಷೀಣವಾಗುತ್ತವೆ, ನಂತರ ವಿಷಯಗಳಿಂದ ಸ್ವಲ್ಪ ಸುಖ-ದುಃಖವಾಗುತ್ತಿತ್ತು ಅದರಿಂದ ರಹಿತವಾಗುತ್ತದೆ, ಅನಂತರ ಧ್ಯಾನದಲ್ಲಿ ಸ್ಥಿರವಾಗಿ ಶ್ರೇಣಿ ಹತ್ತಿದಾಗ ಉಪಯೋಗವು ವಿಶುದ್ಧವಾಗುವುದು, ಕಷಾಯಗಳ ಉದಯವು ಅವ್ಯಕ್ತವಾದಾಗ ಸುಖ-ದುಃಖದ ವೇದನೆಯು ದೂರವಾಗುವುದು, ಅನಂತರ ಮನಸ್ಸು ವಿಶುದ್ಧವಾಗಿ ಕ್ಷಯೋಪಶಮಜ್ಞಾನದ ಮುಖಾಂತರ ಜ್ಞೇಯದಿಂದ ಜ್ಞೇಯಾಂತರವಾಗುವ ವಿಕಲ್ಪವಾಗುತ್ತದೆ ಅದು ಅಳಿಸಿ ಏಕತ್ವವಿತರ್ಕ ಅವಿಚಾರವೆಂಬ ಹೆಸರಿನ ಶುಕ್ಲಧ್ಯಾನವು ಹನ್ನೆರಡನೆಯ ಗುಣಸ್ಥಾನದ ಕೊನೆಯಲ್ಲಿ ಆಗುತ್ತದೆ, ಇದು ಮನಸ್ಸಿನ ವಿಕಲ್ಪವನ್ನು ದೂರಮಾಡಿ ವಿಶುದ್ಧವಾಗುವುದಿದೆ.

---

ಸಕಲಗುಣದಿಂ ಕರ್ಮಕ್ಷೀಣ ಸುಖದುಃಖವಿವರ್ಜಿತ ಮನೋವಿಶುದ್ಧಿಯಿಂ ।
ಆ ಕರ್ಮರಜ ಹಾರಿಸಿಯೊಗೆದಂಥ ಆರಾಧನೆ ಪ್ರಕಟವಾಗುವುದು ॥೩೯॥

ಅನಂತರ ಘಾತಿಕರ್ಮಗಳು ನಾಶವಾಗಿ ಅನಂತ ಚತುಷ್ಟಯಗಳು ಪ್ರಾಪ್ತವಾಗುತ್ತವೆ. ಇದು ಕರ್ಮ ರಜವನ್ನು ಹಾರಿಸುವುದಿದೆ, ಹೀಗೆ ಆರಾಧನೆಯ ಸಂಪೂರ್ಣತೆಯು ಪ್ರಕಟವಾಗುವುದಿದೆ. ಚರಮಶರೀರಿಯಿದ್ದವರಿಗಂತೂ ಈ ಪ್ರಕಾರದ ಆರಾಧನೆಯು ಪ್ರಕಟವಾಗಿ ಮುಕ್ತಿಯ ಪ್ರಾಪ್ತಿಯಾಗುತ್ತದೆ. ಅನ್ಯರಿಗೆ ಆರಾಧನೆಯ ಏಕದೇಶವಿರುತ್ತದೆ ಕೊನೆಯಲ್ಲಿ ಅದರ ಆರಾಧನೆ ಮಾಡಿ ಸ್ವರ್ಗ ಪ್ರಾಪ್ತಮಾಡಿಕೊಳ್ಳುತ್ತಾರೆ, ಅಲ್ಲಿ ಸಾಗರೋಪಮಗಳವರೆಗೆ ಸುಖವನ್ನನುಭವಿಸಿ ಅಲ್ಲಿಂದ ಚ್ಯುತರಾಗಿ ಮನುಷ್ಯರಾಗಿ ಇಲ್ಲಿ ಬಂದು ಆರಾಧನೆಯನ್ನು ಸಂಪೂರ್ಣಮಾಡಿ ಮೋಕ್ಷಪ್ರಾಪ್ತ ಮಾಡಿಕೊಳ್ಳುತ್ತಾರೆಂದು ತಿಳಿಯಬೇಕು. ಇದು ಜಿನವಚನದ ಮತ್ತು ಶೀಲದ ಮಾಹಾತ್ಮ್ಯವಿದೆ. ॥೩೯॥

ಜ್ಞಾನದಿಂದ ಸರ್ವಸಿದ್ಧಿಯಿದೆಯೆಂಬುದು ಸರ್ವಜನ ಪ್ರಸಿದ್ಧವಿದೆ, ಆ ಜ್ಞಾನವು ಹೇಗಿರುತ್ತದೆಂಬುದನ್ನು ಹೇಳಿ ಈಗ ಗ್ರಂಥವನ್ನು ಪರಿಸಮಾಪ್ತ ಮಾಡುತ್ತಾರೆ, -

**ಅರಹಂತೇ ಸುಹಭತ್ತೀ ಸಮ್ಮತ್ತಂ ದಂಸಣೇಣ ಸುವಿಸುದ್ಧಂ ।**
**ಸೀಲಂ ವಿಸಯವಿರಾಗೋ ಣಾಣಂ ಪುಣ ಕೇರಿಸಂ ಭಣಿಯಿಂ ॥೪೦॥**

**ಅರ್ಹತಿ ಶುಭಭಕ್ತಿಃ ಸಮ್ಯಕ್ತ್ವಂ ದರ್ಶನೇನ ಸುವಿಶುದ್ಧಂ ।**
**ಶೀಲಂ ವಿಷಯವಿರಾಗಃ ಜ್ಞಾನಂ ಪುನಃ ಕೀದೃಶಂ ಭಣಿತಂ ॥೪೦॥**

ಅರ್ಥ :- ಅರಹಂತರಲ್ಲಿ ಶುಭ ಭಕ್ತಿಯಿರುವುದು ಸಮ್ಯಕ್ತ್ವವಿದೆ, ಅದು ಸಮ್ಯಗ್ದರ್ಶನದಿಂದ ವಿಶುದ್ಧವಿದೆ ತತ್ತ್ವಾರ್ಥಗಳ ನಿಶ್ಚಯ ವ್ಯವಹಾರಸ್ವರೂಪದ ಶ್ರದ್ಧೆ ಮತ್ತು ಬಾಹ್ಯದಲ್ಲಿ ಜಿನಮುದ್ರೆ ನಗ್ನದಿಗಂಬರರೂಪದ ಧಾರಣ ಹಾಗೂ ಅದರ ಶ್ರದ್ಧೆ ಇಂಥ ದರ್ಶನದಿಂದ ವಿಶುದ್ಧ ಅತಿಚಾರವಿಲ್ಲದೆ ನಿರ್ಮಲವಿರುವುದಂತೂ ಅರಹಂತ ಭಕ್ತಿರೂಪದ ಸಮ್ಯಕ್ತ್ವವಿದೆ, ವಿಷಯಗಳಿಂದ ವಿರಕ್ತವಾಗುವುದು ಶೀಲವಿದೆ ಮತ್ತು ಜ್ಞಾನ ಕೂಡ ಇದೇ ಇದೆ, ಇದರಿಂದ ಭಿನ್ನವಾಗಿ ಜ್ಞಾನವನ್ನು ಹೇಗೆ ಹೇಳಿದೆ ? ಸಮ್ಯಕ್ತ್ವ ಶೀಲವಿಲ್ಲದೆಯಂತೂ ಜ್ಞಾನವು ಮಿಥ್ಯಾಜ್ಞಾನರೂಪದ ಅಜ್ಞಾನವಿದೆ.

ಭಾವಾರ್ಥ :- ಜ್ಞಾನದಿಂದ ಸರ್ವಸಿದ್ಧಿಯಿದೆ ಮತ್ತು ಜ್ಞಾನವು ಶಾಸ್ತ್ರಗಳಿಂದ ಆಗುತ್ತದೆಯೆಂಬುದು ಎಲ್ಲ ಮತಗಳಲ್ಲಿ ಪ್ರಸಿದ್ಧವಿದೆ. ಆದರೆ ನಾವಂತೂ ಸಮ್ಯಕ್ತ್ವ ಮತ್ತು ಶೀಲಸಹಿತವಿರುವುದನ್ನು ಜ್ಞಾನವೆಂದು ಹೇಳುತ್ತೇವೆಂದು ಆಚಾರ್ಯದೇವರು ಹೇಳುತ್ತಾರೆ, ಹೀಗೆ ಜಿನಾಗಮದಲ್ಲೂ ಹೇಳಿದೆ, ಜ್ಞಾನವು ಇದರಿಂದ ಭಿನ್ನ ಹೇಗಿರುತ್ತದೆ ? ಇದರಿಂದ ಭಿನ್ನವಾದ ಜ್ಞಾನವನ್ನಂತೂ ನಾವು ಜ್ಞಾನವೆಂದು ಹೇಳುವುದಿಲ್ಲ, ಇವುಗಳ ಹೊರತಾಗಿರುವುದಂತೂ ಅದು ಅಜ್ಞಾನವೇ ಇದೆ ಮತ್ತು ಸಮ್ಯಕ್ತ್ವ ಹಾಗೂ ಶೀಲಗಳು ಜಿನಾಗಮದಿಂದ ಆಗುತ್ತವೆ. ಅಲ್ಲಿ ಯಾರ ಮುಖಾಂತರ ಸಮ್ಯಕ್ತ್ವ ಶೀಲಗಳಾದವು ಅವರ ಭಕ್ತಿಯಿಲ್ಲದಿದ್ದರೆ ಸಮ್ಯಕ್ತ್ವವೆಂದು ಹೇಗೆ ಹೇಳಲಾಗುವುದು, ಯಾರ ವಚನಗಳಿಂದ ಇವನ್ನು ಪ್ರಾಪ್ತಮಾಡಿಕೊಳ್ಳಲಾಗುತ್ತದೆ ಅವರ ಭಕ್ತಿಯಿದ್ದಾಗ ಇವನಿಗೆ ಶ್ರದ್ಧೆಯಾಗಿದೆಯೆಂದು ತಿಳಿಯಬೇಕು ಮತ್ತು ಸಮ್ಯಕ್ತ್ವವಾದಾಗ ವಿಷಯಗಳಿಂದ ವಿರಕ್ತವಾಗೇ ಆಗುವುದು, ಒಂದುವೇಳೆ ವಿರಕ್ತನಾಗದಿದ್ದರೆ ಸಂಸಾರ ಮತ್ತು ಮೋಕ್ಷದ ಸ್ವರೂಪವನ್ನೇನು ತಿಳಿದನು ? ಈ ಪ್ರಕಾರ ಸಮ್ಯಕ್ತ್ವ ಶೀಲವಾದ ಮೇಲೆ ಜ್ಞಾನವು ಸಮ್ಯಗ್ಜ್ಞಾನವೆಂಬ ಹೆಸರನ್ನು ಪಡೆಯುತ್ತದೆ. ಹೀಗೆ ಆ ಸಮ್ಯಕ್ತ್ವ ಶೀಲಗಳ ಸಂಬಂಧದಿಂದ ಜ್ಞಾನದ ಹಾಗೂ ಶಾಸ್ತ್ರದ ಮಹಿಮೆಯಿದೆ !

---

**ಅರಹಂತರಲಿ ಶುಭಭಕ್ತಿ ದರ್ಶನದಿಂ ವಿಶುದ್ಧವಾದ ಸಮ್ಯಕ್ತ್ವವಿದೆ ।**
**ಇರೆ ವಿಷಯವಿರಕ್ತತೆ ಶೀಲ ಇದರಿಂ ಭಿನ್ನಜ್ಞಾನವೆಂಥದಿರುವುದು ॥೪೦॥**

ಹೀಗೆ ಈ ಜಿನಾಗಮವಿದ್ದು ಅದು ಸಂಸಾರದಿಂದ ನಿವೃತ್ತಮಾಡಿ ಮೋಕ್ಷಪ್ರಾಪ್ತಮಾಡಿಸುವಂಥದ್ದಿದೆ, ಅದು ಜಯವಂತವಾಗಿರಲಿ. ಇದು ಸಮ್ಯಕ್ತ್ವ ಸಹಿತವಾದ ಜ್ಞಾನದ ಮಹಿಮೆಯಿದೆ. ಇದೇ ಅಂತ್ಯಮಂಗಲವೆಂದು ತಿಳಿದುಕೊಳ್ಳಬೇಕು. ॥೪೦॥

ಈ ಪ್ರಕಾರ ಭ. ಕುಂದಕುಂದಾಚಾರ್ಯದೇವ ವಿರಚಿತ ಅಷ್ಟಪಾಹುಡ ಗ್ರಂಥವು ಸಮಾಪ್ತವಾಯಿತು.

ಶೀಲವೆಂಬ ಹೆಸರು ಸ್ವಭಾವದ್ದಿದೆಯೆಂದು ಇದರ ಸಂಕ್ಷೇಪವನ್ನು ಹೇಳುತ್ತಲೇ ಬಂದಿದೆ. ಆತ್ಮನ ಸ್ವಭಾವವು ಶುದ್ಧ ಜ್ಞಾನದರ್ಶನಮಯ ಚೇತನಾಸ್ವರೂಪವಿದೆ, ಅದು ಅನಾದಿ ಕರ್ಮದ ಸಂಯೋಗದಿಂದ ವಿಭಾವ ರೂಪವಾಗಿ ಪರಿಣಮಿಸುತ್ತದೆ. ಇದರ ವಿಶೇಷಗಳು ಮಿಥ್ಯಾತ್ವ ಕಷಾಯ ಮೊದಲಾದ ಅನೇಕವಿವೆ, ಇವನ್ನು ರಾಗ-ದ್ವೇಷ-ಮೋಹಗಳೆಂದೂ ಹೇಳುತ್ತಾರೆ, ಸಂಕ್ಷೇಪದಿಂದ ಇವುಗಳ ಭೇದ ಎಂಭತ್ತಾನ್ಲುಕ್ಕು ಲಕ್ಷ ಮಾಡಿದೆ, ವಿಸ್ತಾರದಿಂದ ಅಸಂಖ್ಯಾತ ಅನಂತಗಳಾಗುತ್ತವೆ ಅವನ್ನು ಕುಶೀಲವೆಂದು ಹೇಳುತ್ತಾರೆ. ಇವುಗಳ ಅಭಾವ ರೂಪವಾಗಿ ಸಂಕ್ಷೇಪದಿಂದ ಎಂಭತ್ತಾನ್ಲುಕ್ಕು ಲಕ್ಷ ಉತ್ತರಗುಣಗಳಿವೆ, ಇವನ್ನು ಶೀಲವೆಂದು ಹೇಳುತ್ತಾರೆ, ಇದಂತೂ ಸಾಮಾನ್ಯವಾಗಿ ಪರದ್ರವ್ಯದ ಸಂಬಂಧದ ಅಪೇಕ್ಷೆಯಿಂದ ಶೀಲ-ಕುಶೀಲದ ಅರ್ಥವಿದೆ ಮತ್ತು ಪ್ರಸಿದ್ಧ ವ್ಯವಹಾರದ ಅಪೇಕ್ಷೆಯಿಂದ ಸ್ತ್ರೀಯ ಸಂಗದ ಅಪೇಕ್ಷೆಯಿಂದ ಕುಶೀಲದಲ್ಲಿ ಹದಿನೆಂಟು ಸಾವಿರ ಭೇದಗಳನ್ನು ಹೇಳಿದ್ದಾರೆ, ಇವುಗಳ ಅಭಾವರೂಪವಾಗಿ ಶೀಲದಲ್ಲಿ ಹದಿನೆಂಟು ಸಾವಿರ ಭೇದಗಳಿವೆ, ಇವನ್ನು ಜಿನಾಗಮದಿಂದ ತಿಳಿದುಕೊಂಡು ಪಾಲಿಸಬೇಕು. ಲೋಕದಲ್ಲಿ ಕೂಡ ಶೀಲದ ಮಹಿಮೆಯು ಪ್ರಸಿದ್ಧವಿದೆ. ಯಾರು ಪಾಲಿಸುತ್ತಾರೆ ಅವರು ಸ್ವರ್ಗ-ಮೋಕ್ಷಗಳ ಸುಖವನ್ನು ಪಡೆಯುತ್ತಾರೆ. ಅವರಿಗೆ ನಮ್ಮ ನಮಸ್ಕಾರವಿದೆ. ಅವರು ನಮಗೂ ಶೀಲದ ಪ್ರಾಪ್ತಿ ಮಾಡಲೆಂಬ ಪ್ರಾರ್ಥನೆಯಿದೆ.

ಬ್ರಹ್ಮಮಯ ಮಂಗಲರೂಪವಾದ ಪಂಚಪದಕೆರಗುವೆನು
ಶ್ರೇಷ್ಠ ಶರಣ ಸದಾ ಲಭಿಸಿ ಮತ್ತೆ ಭವಕೂಪಕಿಳಿಯೆನು

ಈ ಪ್ರಕಾರ ಭ. ಕುಂದಕುಂದಾಚಾರ್ಯದೇವವಿರಚಿತ ಅಷ್ಟಪಾಹುಡದಲ್ಲಿ ಎಂಟನೆಯ ಶೀಲಪಾಹುಡ
ಮತ್ತು ಅದರ ಮೇಲೆ ಜಯಪುರ ನಿವಾಸಿ ಪಂ. ಜಯಚಂದ ಛಾಬಡಾಕೃತ ದೇಶಭಾಷಾಮಯ
ವಚನಿಕೆಯ ಶ್ರೀ ಎಂ. ಬಿ.ಪಾಟೀಲರು ಮಾಡಿದ ಕನ್ನಡ ಭಾಷಾನುವಾದವು
ಸಮಾಪ್ತವಾಯಿತು.

# ವಚನಿಕಾಕಾರನ ಪ್ರಶಸ್ತಿ

ಈ ಪ್ರಕಾರ ಭ. ಕುಂದಕುಂದಾಚಾರ್ಯದೇವಕೃತ ಗಾಥಾಬಂಧ ಪಾಹುಡ ಗ್ರಂಥವಿದೆ, ಇದರಲ್ಲಿ ಈ ಪಾಹುಡಗಳಿದ್ದು ಇವುಗಳ ಈ ದೇಶಭಾಷಾಮಯ ವಚನಿಕೆ ಬರೆಯಲಾಗಿದೆ. ಆರು ಪಾಹುಡಗಳದ್ದಂತೂ ಟೀಕೆ ಟಿಪ್ಪಣಿಯಿದೆ. ಇವುಗಳಲ್ಲಿ ಟೀಕೆಯಂತೂ ಶ್ರೀ ಶ್ರುತಸಾಗರ ಕೃತವಿದ್ದು ಟಿಪ್ಪಣಿಯನ್ನು ಬೇರಾರೋ ಬರೆದಿದ್ದಾರೆ ಇವುಗಳಲ್ಲಿ ಕೆಲವು ಗಾಥೆ ಹಾಗೂ ಅರ್ಥ ಅನ್ಯಪ್ರಕಾರವಿದೆ, ಅವು ನನ್ನ ವಿಚಾರದಲ್ಲಿ ಬಂದು ಅವುಗಳ ಆಶ್ರಯವನ್ನೂ ಪಡೆದಿದ್ದೇನೆ ಮತ್ತು ನನಗೆ ಅರ್ಥವು ಪ್ರತಿಭಾಸಿತವಾದಂತೆ ಬರೆದಿದ್ದೇನೆ. ಲಿಂಗಪಾಹುಡ ಮತ್ತು ಶೀಲಪಾಹುಡ ಇವೆರಡು ಪಾಹುಡಗಳ ಟೀಕೆ-ಟಿಪ್ಪಣಿಗಳು ದೊರಕದಿರುವುದರಿಂದ ಗಾಥೆಯ ಅರ್ಥವು ಪ್ರತಿಭಾಸದಲ್ಲಿ ಬಂದ ಹಾಗೆ ಬರೆದಿದ್ದೇನೆ.

ಶ್ರೀ ಶ್ರುತಸಾಗರಕೃತ ಷಟ್‌ಪಾಹುಡದ ಟೀಕೆಯಿದ್ದು ಅದರಲ್ಲಿ ಗ್ರಂಥಾಂತರದ ಸಾಕ್ಷಿ ಮೊದಲಾದ ಕಥನವು ಅಧಿಕವಿದ್ದು ಇದು ಆ ಟೀಕೆಯ ವಚನಿಕೆಯಲ್ಲ, ಗಾಥೆಯ ಅರ್ಥ ಮಾತ್ರ ವಚನಿಕೆ ಮಾಡಿ ಭಾವಾರ್ಥದಲ್ಲಿ ನನ್ನ ಪ್ರತಿಭಾಸದಲ್ಲಿ ಬಂದುದರ ಅನುಸಾರ ಅರ್ಥ ಬರೆದಿದ್ದೇನೆ. ನನ್ನಲ್ಲಿ ಪ್ರಾಕೃತ ವ್ಯಾಕರಣ ಮೊದಲಾದವುಗಳ ವಿಶೇಷ ಜ್ಞಾನವಿಲ್ಲದಿರುವುದರಿಂದ ಎಲ್ಲಿಯಾದರೂ ವ್ಯಾಕರಣ ಹಾಗೂ ಆಗಮದಿಂದ ಶಬ್ದ ಮತ್ತು ಅರ್ಥದಲ್ಲಿ ಅಪಭ್ರಂಶವಾಗಿದ್ದರೆ ಬುದ್ಧಿವಂತ ಪಂಡಿತರು ಮೂಲಗ್ರಂಥದ ವಿಚಾರ ಮಾಡಿ ಶುದ್ಧ ಮಾಡಿಕೊಂಡು ಓದಬೇಕು. ನನ್ನನ್ನು ಅಲ್ಪ ಬುದ್ಧಿಯವನೆಂದು ತಿಳಿದುಕೊಂಡು ಹಾಸ್ಯ ಮಾಡದೆ ಕ್ಷಮೆ ಮಾಡಬೇಕು, ಸತ್ಪುರುಷರ ಸ್ವಭಾವವು ಉತ್ತಮವಾಗಿರುತ್ತದೆ ಅವರು ದೋಷ ನೋಡಿ ಕ್ಷಮೆಯನ್ನೇ ಮಾಡುತ್ತಾರೆ.

ಪ್ರಶ್ನೆ :- ನೀವು ಅಲ್ಪಬುದ್ಧಿಯವರಿದ್ದರೆ ಇಂಥ ಮಹಾನ ಗ್ರಂಥದ ವಚನಿಕೆಯನ್ನೇಕೆ ಬರೆದಿರುವಿರಿ ?

ಉತ್ತರ :- ಈ ಕಾಲದಲ್ಲಿ ನನಗಿಂತಲೂ ಮಂದಬುದ್ಧಿಯುಳ್ಳವರು ಅಧಿಕರಿದ್ದು ಅವರುಗಳಿಗೆ ತಿಳಿಯುವ ಸಲುವಾಗಿ ಬರೆಯಲಾಗಿದೆ. ಇದರಲ್ಲಿ ಮುಖ್ಯರೂಪದಿಂದ ಸಮ್ಯಗ್ದರ್ಶನವನ್ನು ದೃಢಪಡಿಸುವ ವರ್ಣನೆಯಿರುವುದರಿಂದ ಅಲ್ಪ ಬುದ್ಧಿಯವರು ಕೂಡ ಓದಿ ಪಠಿಸಿ ಅರ್ಥದ ಧಾರಣೆ ಮಾಡಿದರೆ ಅವರಲ್ಲಿ ಜಿನಮತದ ಶ್ರದ್ಧೆಯು ದೃಢವಾಗುವುದು. ಈ ಪ್ರಯೋಜನವನ್ನು ತಿಳಿದುಕೊಂಡು ಪ್ರತಿಭಾಸದಲ್ಲಿ ಬಂದಹಾಗೆ ಅರ್ಥ ಬರೆದಿದ್ದೇನೆ ಮತ್ತು ವಿಶೇಷ ಬುದ್ಧಿಯುಳ್ಳವರು ಮೂಲಗ್ರಂಥವನ್ನು ಓದಿಯೇ ತಮ್ಮ ಶ್ರದ್ಧೆಯನ್ನು ದೃಢಪಡಿಸಿಕೊಳ್ಳುವುದು. ನನಗಂತೂ ಯಾವುದೇ ಖ್ಯಾತಿ ಲಾಭ ಪೂಜೆಯ ಪ್ರಯೋಜನವಿಲ್ಲ. ಕೇವಲ ಧರ್ಮಾನುರಾಗದಿಂದ ಈ ವಚನಿಕೆಯನ್ನು ಬರೆದಿದ್ದೇನೆ. ಆದುದರಿಂದ ಬುದ್ಧಿಯುಳ್ಳವರು ಕ್ಷಮೆಯನ್ನೇ ಮಾಡುವುದು ಯೋಗ್ಯವಿದೆ.

ಈ ಗ್ರಂಥದಲ್ಲಿ ಗಾಥೆಗಳ ಸಂಖ್ಯೆಯು ಹೀಗಿದೆ – ಮೊದಲನೆಯ ದರ್ಶನ ಪಾಹುಡದ ಗಾಥೆ ೩೬, ಸೂತ್ರ ಪಾಹುಡದ ಗಾಥೆ ೨೭, ಚಾರಿತ್ರಪಾಹುಡದ ಗಾಥೆ ೪೫, ಬೋಧಪಾಹುಡದ ಗಾಥೆ ೬೨, ಭಾವಪಾಹುಡದ ಗಾಥೆ ೧೬೫, ಮೋಕ್ಷಪಾಹುಡದ ಗಾಥೆ ೧೦೬, ಲಿಂಗಪಾಹುಡದ ಗಾಥೆ ೨೨ ಮತ್ತು ಶೀಲಪಾಹುಡದ ಗಾಥೆ ೪೦, ಹೀಗೆ ಅಷ್ಟಪಾಹುಡಗಳ ಒಟ್ಟು ಗಾಥೆಯ ಸಂಖ್ಯೆ ೫೦೩ ಇದೆ.

# ಶಾಸ್ತ್ರಗಳ ಅರ್ಥಮಾಡುವ ಪದ್ಧತಿ

ವ್ಯವಹಾರನಯವು ಸ್ವದ್ರವ್ಯವನ್ನು-ಪರದ್ರವ್ಯವನ್ನು ಹಾಗೂ ಅವುಗಳ ಭಾವಗಳನ್ನು ಮತ್ತು ಕಾರಣ ಕಾರ್ಯಾದಿಗಳನ್ನು ಯಾವುದಾದರೊಂದನ್ನು ಇನ್ನಾವುದಾದರೊಂದರಲ್ಲಿ ಸೇರಿಸಿ ನಿರೂಪಣೆ ಮಾಡುತ್ತದೆ. ಇಂಥದರ ಶ್ರದ್ಧೆಯಿಂದಲೇ ಮಿಥ್ಯಾತ್ವವಿದೆ ; ಆದುದರಿಂದ ಅದರ ತ್ಯಾಗ ಮಾಡಬೇಕು ಮತ್ತು ನಿಶ್ಚಯನಯವು ಅವುಗಳನ್ನು ಯಥಾಪ್ರಕಾರ ನಿರೂಪಣೆ ಮಾಡುತ್ತದೆ ಯಾವುದಾದರೊಂದನ್ನು ಇನ್ನಾವುದಾದರೊಂದರಲ್ಲಿ ಸೇರಿಸುವುದಿಲ್ಲ, ಆದುದರಿಂದ ಇಂಥ ಶ್ರದ್ಧೆಯಿಂದಲೇ ಸಮ್ಯಕ್ತ್ವವಾಗುತ್ತದೆ ; ಅದಕ್ಕಾಗಿ ಅದರ ಶ್ರದ್ಧೆ ಮಾಡಬೇಕು.

ಪ್ರಶ್ನೆ :- ಹೀಗಿದ್ದರೆ ಜಿನಮಾರ್ಗದಲ್ಲಿ ಎರಡೂ ನಯಗಳನ್ನು ಗ್ರಹಣ ಮಾಡುವುದಕ್ಕೆ ಹೇಳಿದ್ದಾರೆ, ಅದು ಹೇಗೆ ?

ಉತ್ತರ :- ಜಿನಮಾರ್ಗದಲ್ಲಿ ಕೆಲವೆಡೆಯಂತೂ ನಿಶ್ಚಯನಯದ ಮುಖ್ಯತೆಯಿಂದ ವ್ಯಾಖ್ಯಾನವಿದೆ, ಅದನ್ನಂತೂ 'ಸತ್ಯಾರ್ಥವು ಹೀಗೆಯೇ ಇದೆ'ಯೆಂದು ತಿಳಿಯಬೇಕು. ಮತ್ತು ಕೆಲವೆಡೆ ವ್ಯವಹಾರ ನಯದ ಮುಖ್ಯತೆಯಿಂದ ವ್ಯಾಖ್ಯಾನವಿದೆ, ಅದನ್ನು 'ಹೀಗೆ ಇಲ್ಲ, ಆದರೆ ನಿಮಿತ್ತದ ಅಪೇಕ್ಷೆಯಿಂದ ಉಪಚಾರ ಮಾಡಲಾಗಿದೆ'ಯೆಂದು ತಿಳಿಯಬೇಕು. ಈ ಪ್ರಕಾರ ತಿಳಿದುಕೊಳ್ಳುವುದರ ಹೆಸರೇ ಎರಡೂ ನಯಗಳ ಗ್ರಹಣವಿದೆ ಮತ್ತು ಎರಡೂ ನಯಗಳ ವ್ಯಾಖ್ಯಾನವನ್ನು ಸಮಾನ ಸತ್ಯಾರ್ಥವೆಂದು ತಿಳಿದುಕೊಂಡು 'ಹೀಗೂ ಇದೆ, ಮತ್ತು ಹೀಗೂ ಇದೆ'ಯೆಂದು ಭ್ರಮರೂಪವಾಗಿ ಪ್ರವರ್ತಿಸುವುದರಿಂದಂತೂ ಎರಡೂ ನಯಗಳ ಗ್ರಹಣ ಮಾಡಲು ಹೇಳಿಲ್ಲ.

ಪ್ರಶ್ನೆ :- ಒಂದುವೇಳೆ ವ್ಯವಹಾರನಯವು ಅಸತ್ಯಾರ್ಥವಿದ್ದರೆ ಜಿನಮಾರ್ಗದಲ್ಲಿ ಅದರ ಉಪದೇಶವನ್ನು ಏತಕ್ಕಾಗಿ ಕೊಡಲಾಗಿದೆ ? ಒಂದು ನಿಶ್ಚಯನಯದ ನಿರೂಪಣೆಯನ್ನೇ ಮಾಡಬೇಕಿತ್ತು ?

ಉತ್ತರ :- ಸಮಯಸಾರದಲ್ಲಿ ಇಂಥದೇ ತರ್ಕವನ್ನು ಉಪಸ್ಥಿತ ಮಾಡಿ ಅಲ್ಲಿ ಹೀಗೆ ಉತ್ತರ ಕೊಡಲಾಗಿದೆ ಯಾವ ಪ್ರಕಾರ ಅನಾರ್ಯ ಎಂದರೆ ಮ್ಲೇಚ್ಛನಿಗೆ ಮ್ಲೇಚ್ಛಭಾಷೆಯಲ್ಲದೆ ಅರ್ಥ ಗ್ರಹಣ ಮಾಡಿಸುವಲ್ಲಿ ಯಾರೂ ಸಮರ್ಥರಿಲ್ಲ ; ಅದೇ ಪ್ರಕಾರ ವ್ಯವಹಾರವಿಲ್ಲದೆ ಪರಮಾರ್ಥದ ಉಪದೇಶವು ಅಶಕ್ಯವಿದೆ ; ಅದಕ್ಕಾಗಿ ವ್ಯವಹಾರದ ಉಪದೇಶವಿದೆ.

ಅಲ್ಲಿ ಇನ್ನೂ ಮುಂದುವರೆದು ಹೀಗೆ ಹೇಳಿದ್ದಾರೆ – ಈ ನಿಶ್ಚಯವನ್ನು ಅಂಗೀಕಾರ ಮಾಡುವುದಕ್ಕಾಗಿ ವ್ಯವಹಾರದ ಮುಖಾಂತರ ಉಪದೇಶ ಕೊಡಬೇಕಾಗುವುದು ; ಆದರೆ ವ್ಯವಹಾರನಯವಿದೆ ಅದು ಅಂಗೀಕಾರ ಮಾಡಲು ಯೋಗ್ಯವಾಗಿಲ್ಲ.

–ಮೋಕ್ಷಮಾರ್ಗಪ್ರಕಾಶಕ

## ಗಾಥೆಗಳ ವರ್ಣಾನುಕ್ರಮ ಸೂಚಿ


| ಗಾಥೆ | ಪುಟ |
|---|---|
| ಅ | |
| ಅಇಸೋಹಣಜೋಏಣಂ | ೨೭೧ |
| ಅಣ್ಣಾಣಿ ಬಹಿರಪ್ಪಾ | ೨೫೯ |
| ★ಅಂಗಾಇಂ ದಸ ಯ ದುಣ್ಣಿ ಯ | ೧೭೬ |
| ಅಚ್ಚೇಯಣಂ ಪಿ ಚೇದಾ | ೨೯೪ |
| ಅಜ್ಜವಿ ತಿರಿಯಣಸುದ್ಧಾ | ೩೦೫ |
| ಅಣ್ಣಾಣಂ ಮಿಚ್ಛತ್ತಂ | ೭೪ |
| ಅಣ್ಣಂ ಚ ವಸಿಟ್ಠಮುಣೀ | ೧೭೦ |
| ಅಣ್ಣೇ ಕುಮರಣಮರಣಂ | ೧೫೯ |
| ಅಪರಿಗ್ಗಹ ಸಮಣುಣ್ಣೇಸು | ೮೮ |
| ಅಪ್ಪಾ ಅಪ್ಪಮ್ಮಿ ರಓ | ೧೫೮ |
| ಅಪ್ಪಾ ಅಪ್ಪಮ್ಮಿ ರಓ | ೧೯೭ |
| ಅಪ್ಪಾ ಚರಿತ್ತವಂತೋ | ೨೯೭ |
| ಅಪ್ಪಾ ಝಾಯಂತಾಣಂ | ೩೦೧ |
| ಅಪ್ಪಾ ಣಾಊಣ ಣರಾ | ೨೯೯ |
| ಅಮಣುಣ್ಣೇ ಯ ಮಣುಣ್ಣೇ | ೮೪ |
| ಅಮರಾಣ ವಂದಿಯಾಣಂ | ೨೮ |
| ಅಯಸಾಣ ಭಾಯಣೇಣಯ | ೧೮೭ |
| ಅರಸಮರೂವಮಗಂಧಂ | ೧೮೩ |
| ಅರಹಂತಭಾಸಿಯತ್ಥಂ | ೩೭ |
| ಅರಹಂತೇಣ ಸುದಿಟ್ಠಂ | ೯೬ |
| ಅರಹಂತೇ ಸುಹಭತ್ತೀ | ೩೭೧ |
| ಅರುಹಾ ಸಿದ್ಧಾಯರಿಯಾ | ೩೨೨ |
| ಅವರೋ ವಿ ದವ್ವಸವಣೋ | ೧೭೪ |
| ಅವಸೇಸಾ ಜೇ ಲಿಂಗೀ | ೫೩ |
| ಅಸಿಯಸಯ ಕಿರಿಯವಾಈ | ೨೩೪ |
| ಅಸುಈಬೀಹತ್ಥೇಹಿ ಯ | ೧೫೧ |
| ಅಸ್ಸಂಜದಂ ಣ ವಂದೇ | ೨೮ |
| ಅಹ ಪುಣಾ ಅಪ್ಪಾ ಣಿಚ್ಛದಿ | ೫೪ |
| ಅಹ ಪುಣಾ ಅಪ್ಪಾ ಣಿಚ್ಛದಿ | ೧೯೭ |
| ಆ | |
| ಆಗಂತುಕ ಮಾಣಸಿಯಂ | ೧೪೭ |
| ಆದಸಹಾವಾದಣ್ಣಂ | ೨೬೭ |
| ಆದಾ ಖು ಮಜ್ಝ ಣಾಣೇ | ೧೮೦ |
| ಆದೇಹಿ ಕಮ್ಮಗಂಠೀ | ೩೬೩ |
| ಆಯದಣಂ ಚೇದಿಹರಂ | ೯೬ |
| ಆರುಹವಿ ಅಂತರಪ್ಪಾ | ೨೬೧ |
| ಆಹಾರಭಯಪರಿಗ್ಗಹ | ೨೧೪ |
| ಆಹಾರಸಣಣಿದ್ದಾಜಯಂ | ೨೯೭ |
| ಆಹಾರೋ ಯ ಸರೀರೋ | ೧೧೭ |
| ಆಸವಹೇದೂ ಯ ತಹಾ | ೨೯೧ |
| ಇ | |
| ಇಚ್ಛಾಯಾರ ಮಹತ್ಥಂ | ೫೩ |
| ಇಡ್ಢಿಮತುಲಂ ವಿಉವ್ವಿಯ | ೨೩೦ |
| ಇಯ ಘಾಇಕಮ್ಮಮುಕ್ಕೋ | ೨೪೫ |
| ಇಯ ಉವಏಸಂ ಸಾರಂ | ೨೮೧ |
| ಇಯ ಜಾಣಿಊಣ ಜೋಈ | ೨೭೬ |
| ಇಯ ಣಾಉಂ ಗುಣದೋಸಂ | ೨೪೦ |
| ಇಯ ಣಾಊಣ ಖಮಾಗುಣ | ೨೧೨ |
| ಇಯ ತಿರಿಯಮಣುಯಜಮ್ಮೇ | ೧೫೬ |
| ಇಯ ಭಾವಪಾಹುಡಮಿಣಂ | ೨೫೩ |
| ಇಯ ಮಿಚ್ಛತ್ತಾ ವಾಸೇ | ೨೩೭ |
| ಇಯ ಲಿಂಗಪಾಹುಡಮಿಣಂ | ೩೪೩ |
| ಇರಿಯಾಭಾಸಾಏಸಣ | ೮೮ |
| ಉ | |
| ಉಕ್ಕಿಟ್ಠಸೀಹ ಚರಿಯಂ | ೫೦ |
| ಉಗ್ಗತವೇಣಣ್ಣಾಣೀ | ೨೯೦ |
| ಉಚ್ಛಾಹಭಾವಣಾ | ೭೩ |
| ಉಚ್ಛಾಹಭಾವಣಾ | ೭೪ |

## ಗಾಥೆಗಳ ವರ್ಣಾನುಕ್ರಮ ಸೂಚಿ


| ಗಾಥೆ | ಪುಟ | ಗಾಥೆ | ಪುಟ |
|---|---|---|---|
| ಉತ್ತಮಮಜ್ಝಿಮಗೇಹೆ | ೧೨೭ | ಕಾಊಣ ಣಮುಕ್ಕಾರಂ | ೨ |
| ಉತ್ಥರಇ ಜಾಣ ಜರಓ | ೨೩೧ | ಕಾಊಣ ಣಮೋಕಾರಂ | ೩೨೫ |
| ಉದ್ಧದ್ಧಮಜ್ಝಲೋಯೇ | ೩೦೮ | ಕಾಲಮಣಂತಂ ಜೀವೋ | ೧೬೨ |
| ಉದಧೀ ವ ರದಣಭರಿದೋ | ೩೬೩ | ಕಿಂ ಕಾಹಿದಿ ಬಹಿಕಮ್ಮ | ೩೧೯ |
| ಉಪ್ಪಡದಿ ಪಡದಿ ಧಾವದಿ | ೩೩೯ | ಕಿಂ ಜಂಪಿಏಣ ಬಹುಣಾ | ೨೫೩ |
| ಉವಸಗ್ಗ ಪರಿಸಹಸಹಾ | ೧೩೧ | ಕಿಂ ಪುಣ ಗಚ್ಛಇ ಮೋಹಂ | ೨೩೦ |
| ಉವಸಮಖಮದಮಜುತ್ತಾ | ೧೨೯ | ಕಿಂ ಬಹುಣಾ ಭಣಿಏಣಂ | ೩೧೨ |
| ಏ | | ಕುಚ್ಛಿಯದೇವಂ ಧಮ್ಮಂ | ೩೧೫ |
| ಏಏಣ ಕಾರಣೇಣ ಯ | ೫೪ | ಕುಚ್ಛಿಯಧಮ್ಮಮ್ಮಿ ರಓ | ೨೩೬ |
| ಏಏಣ ಕಾರಣೇಣ ಯ | ೧೯೮ | ಕುಮಯಕುಸುದಪಸಂಸಾ | ೩೫೪ |
| ಏಏ ತಿಣ್ಣಿ ವಿ ಭಾವಾ | ೬೬ | ಕೇವಲಿ ಜಿಣಪಣ್ಣತ್ತಂ | ೧೭೬ |
| ಏಏ ತಿಣ್ಣಿ ವಿ ಭಾವಾ | ೭೭ | ಕೋಹಭಯಹಾಸಲೋಹಾ | ೮೬ |
| ಏಏಹಿಂ ಲಕ್ಖಣೇಹಿಂ ಯ | ೭೨ | ಕಂದಪ್ಪಮಾಇಯಾಓ | ೧೪೮ |
| ಏಕ್ಕೇಕ್ಕಂಗುಲಿವಾಹೀ | ೧೬೫ | ಕಂದಪ್ಪಾ ಇಯ ವಟ್ಟಇ | ೩೩೭ |
| ಏಗೋ ಮೇ ಸಸ್ಸದೋ ಅಪ್ಪಾ | ೧೮೦ | ಕಂದಂ ಮೂಲಂ ವೀಯಂ | ೨೦೮ |
| ಏಗಂ ಜಿಣಸ್ಸರೂವಂ | ೨೩ | ಖ | |
| ಏರಿಸಗುಣೇಹಿಂ ಸವ್ವಂ | ೧೧೯ | ಖಣಣುತ್ತಾವಣವಾಲಣ | ೧೪೬ |
| ಏವಂ ಆಯತ್ತಣಗುಣ | ೧೩೩ | ಖಯರಾಮರಮಣುಯಕರಂ | ೧೯೦ |
| ಏವಂ ಚಿಯ ಣಾಊಣ ಯ | ೬೭ | | |
| ಏವಂ ಜಿಣಪಣ್ಣತ್ತಂ | ೨೫ | ಗ | |
| ಏವಂ ಜಿಣಪಣ್ಣತ್ತಂ | ೩೨೪ | ಗಇ ಇಂದಿಯಂ ಚ ಕಾಯೇ | ೧೧೬ |
| ಏವಂ ಜಿಣೇಹಿಂ ಕಹಿಯಂ | ೩೧೦ | ಗಸಿಯಾಇಂ ಪುಗ್ಗಲಾಇಂ | ೧೫೪ |
| ಏವಂ ಬಹುಪ್ಪಯಾರಂ | ೩೬೬ | ಗಹಿಉಜ್ಝಿಯಾಇಂ ಮುಣಿವರ | ೧೫೫ |
| ಏವಂ ಸಹಿಓ ಮುಣಿವರ | ೩೪೧ | ಗಹಿಊಣ ಯ ಸಮ್ಮತ್ತಂ | ೩೧೧ |
| ಏವಂ ಸಾವಯಧಮ್ಮಂ | ೮೩ | ಗಾಹೇಣ ಅಪ್ಪಗಾಹಾ | ೬೨ |
| ಏವಂ ಸಂಖೇವೇಣ ಯ | ೯೩ | ಗಿಣ್ಹದಿ ಅದತ್ತದಾಣಂ | ೩೩೮ |
| ಕ | | ಗಿಹಗಂಥಮೋಹಮುಕ್ಕಾ | ೧೨೫ |
| ಕತ್ತಾ ಭೋಇ ಅಮುತ್ತೋ | ೨೪೧ | ಗುಣಗಣಮಣಿಮಾಲಾಏ | ೨೫೦ |
| ಕಲಹಂ ವಾದಂ ಜೂವಾ | ೩೩೩ | ಗುಣಗಣವಿಹೂಸಿಯಂಗೋ | ೩೨೧ |
| ಕಲ್ಲಾಣ ಪರಂಪರಯಾ | ೩೩ | ಗುಣಠಾಣಮಗ್ಗಣೇಹಿಂ | ೧೧೫ |

| ಗಾಥೆ | ಪುಟ | ಗಾಥೆ | ಪುಟ |
|---|---|---|---|
| ಚ | | ಜಹ ತಾರಾಯಣಸಹಿಯಂ | ೨೪೦ |
| ಚಉವಿಹವಿಕಹಾಸತ್ತೋ | ೧೫೦ | ಜಹ ದಿವೋ ಗಬ್ಭಹರೇ | ೨೨೫ |
| ಚಉಸಟ್ಠಿಚಮರಸಹಿಓ | ೩೧ | ಜಹ ಪತ್ಥರೋ ಣ ಭಿಜ್ಜಇ | ೨೦೩ |
| ಚಕ್ಕಹರರಾಮಕೇಸವ | ೨೫೧ | ಜಹ ಫಣಿರಾಓ ಸೋಹಇ | ೨೩೯ |
| ಚರಣಂ ಹವಇ ಸಧಮ್ಮೋ | ೨೮೮ | ಜಹ ಫಲಿಹಮಣಿ ವಿಸುದ್ಧೋ | ೨೮೯ |
| ಚರಿಯಾವರಿಯಾ ವದಸಮಿದಿ | ೩೦೩ | ಜಹ ಫುಲ್ಲಂ ಗಂಧಮಯಂ | ೧೦೪ |
| ಚಾರಿತ್ತಸಮಾರೂಢೋ | ೯೨ | ಜಹ ಮೂಲಮ್ಮಿ ವಿಣಟ್ಠೇ | ೧೭ |
| ಚಿತ್ತಾಸೋಹಿ ಣ ತೇಸಿಂ | ೬೨ | ಜಹ ಮೂಲಾಓ ಖಂಧೋ | ೧೮ |
| ಚೇಇಯ ಬಂಧಂ ಮೋಕ್ಖಂ | ೧೦೦ | ಜಹ ರಯಣಾಣಂ ಪವರಂ | ೧೯೫ |
| ಚೋರಾಣ ಲಾಉರಾಣ ಯ | ೩೩೬ | ಜಹ ವಿಸಯಲುದ್ಧ ವಿಸದೋ | ೩೫೯ |
| ಛ | | ಜಹ ಬೀಯಮ್ಮಿ ಯ ದಡ್ಢೇ | ೨೨೭ |
| ಛಜ್ಜೀವ ಛಡಾಯದಣಂ | ೨೩೧ | ಜಹ ಸಲಿಲೇಣ ಣ ಲಿಪ್ಪಇ | ೨೪೭ |
| ಛತ್ತೀಸಂ ತಿಣ್ಣಿ ಸಯಾ | ೧೫೭ | ಜಾಏ ವಿಸಯ ವಿರತ್ತೋ | ೩೬೬ |
| ಛಹ ದವ್ವ ಣವ ಪಯತ್ಥಾ | ೨೪ | ಜಾಣಹಿ ಭಾವಂ ಪಢಮಂ | ೧೪೪ |
| ಛಾಯಾಲದೋಸದೂಸಿಯ | ೨೦೭ | ಜಾವ ಣ ಭಾವಇ ತಚ್ಚಂ | ೨೧೭ |
| ಜ | | ಜಿಣಣಾಣದಿಟ್ಠಿಸುದ್ಧಂ | ೬೬ |
| ಜಇ ಣಾಣೇಣ ವಿಸೋಹೋ | ೩೬೫ | ಜಿಣಬಿಂಬಂ ಣಾಣಮಯಂ | ೧೦೪ |
| ಜಇ ದಂಸಣೇಣ ಸುದ್ಧಾ | ೬೧ | ಜಿಣಮಗ್ಗೇ ಪವ್ವಜ್ಜಾ | ೧೩೦ |
| ಜಇ ವಿಸಯಲೋಲಏಹಿ | ೩೬೫ | ಜಿಣಮುದ್ದಂ ಸಿದ್ಧಿಸುಹಂ | ೨೮೬ |
| ಜರವಾಹಿ ಜಮ್ಮಮರಣಂ | ೧೧೪ | ಜಿಣವಯಣ ಮೋಸಹಮಿಣಂ | ೨೩ |
| ಜರವಾಹಿ ದುಕ್ಖರಹಿಯಂ | ೧೧೯ | ಜಿಣವಯಣಗಹಿದಸಾರಾ | ೩೬೯ |
| ಜಲಥಲಸಿಹಿಪವಣಂಬರ | ೧೫೩ | ಜಿಣವರ ಚರಣಂಬುರುಹಂ | ೨೪೬ |
| ಜಸ್ಸ ಪರಿಗ್ಗಹಗಹಣಂ | ೫೮ | ಜಿಣವರಮಏಣ ಜೋಈ | ೨೬೯ |
| ಜದಿ ಪಢದಿ ಬಹು | ೩೨೦ | ಜೀವವಿಮುಕ್ಕೋ ಸಬಓ | ೨೩೮ |
| ಜಹ ಕಂಚಣಂ ವಿಸುದ್ಧಂ | ೩೫೧ | ಜೀವಾಜೀವವಿಭತ್ತೀ | ೯೦ |
| ಜಹಜಾಯರೂವರೂವಂ | ೩೧೪ | ಜೀವಾಜೀವವಿಹತ್ತೀ | ೨೮೧ |
| ಜಹ ಜಾಯರೂವಸರಿಸಾ | ೧೨೯ | ಜೀವಾಣಮಭಯದಾಣಂ | ೨೩೩ |
| ಜಹ ಜಾಯರೂವಸರಿಸೋ | ೫೬ | ಜೀವಾದೀಸದ್ದಹಣಂ | ೨೫ |
| ಜಹ ಣ ವಿ ಲಹದಿ ಹು ಲಕ್ಖಂ | ೧೦೭ | ಜೀವೋ ಜಿಣಪಣ್ಣತ್ತೋ | ೧೮೨ |
| ಜಹ ತಾರಯಾಣ ಚಂದೋ | ೨೩೯ | ಜೀವದಯಾ ದಮ ಸಚ್ಚಂ | ೩೫೭ |

## ಗಾಥೆಗಳ ವರ್ಣಾನುಕ್ರಮ ಸೂಚಿ


| ಗಾಥೆ | ಪುಟ | ಗಾಥೆ | ಪುಟ |
|---|---|---|---|
| ಜೇ ಕೇ ವಿ ದವ್ವಸವಣಾ | ೨೨೫ | ಜಂ ಜಾಣಿಊಣ ಜೋಈ | ೨೫೮ |
| ಜೇ ಝಾಯಂತಿ ಸದವ್ವಂ | ೨೬೮ | ಜಂ ಜಾಣಿಊಣ ಜೋಈ | ೨೮೩ |
| ಜೇಣ ರಾಗೋ ಪರೇ ದವ್ವೇ | ೩೦೨ | ಜಂ ಣಿಮ್ಮಲಂ ಸುದ್ಧಮ್ಮಂ | ೧೧೧ |
| ಜೇ ದಂಸಣೇಸು ಭಟ್ಟಾ ಣಾಣೇ | ೧೬ | ಜಂ ಮಯಾ ದಿಸ್ಸದೇ ರೂವಂ | ೨೭೫ |
| ಜೇ ದಂಸಣೇಸು ಭಟ್ಟಾ ಪಾಏ | ೧೯ | ಜಂ ಸಕ್ಕಇ ತಂ ಕೀರಇ | ೨೬ |
| ಜೇ ಪಾವಮೋಹಿಯಮಈ | ೩೦೬ | ಜಂ ಸುತ್ತಂ ಜಿಣಉತ್ತಂ | ೪೫ |
| ಜೇ ವಿ ಪಡಂತಿ ಯ ತೇಸಿಂ | ೨೦ | ಝ | |
| ಜೇ ಪುಣ ವಿಸಯವಿರತ್ತಾ | ೩೦೦ | ಝಾಯಹಿ ಧಮ್ಮಂ ಸುಕ್ಕಂ | ೨೨೪ |
| ಜೇ ಪುಣ ವಿಸಯವಿರತ್ತಾ | ೩೫೦ | ಝಾಯಹಿ ಪಂಚ ವಿ ಗುರವೇ | ೨೨೬ |
| ಜೇ ಪಂಚಚೇಲಸತ್ತಾ | ೩೦೬ | ಣ | |
| ಜೇ ರಾಯಸಂಗಜುತ್ತಾ | ೧೮೮ | ಣಗ್ಗತ್ತಣಂ ಅಕಜ್ಜಂ | ೧೭೮ |
| ಜೇ ಬಾವೀಸಪರೀಸಹ | ೫೨ | ಣಗ್ಗೋ ಪಾವಇ ದುಕ್ಖಂ | ೧೮೬ |
| ಜೇಸಿಂ ಜೀವಸಹಾವೋ | ೧೮೩ | ಣಚ್ಚದಿ ಗಾಯದಿ ತಾವಂ | ೩೩೨ |
| ಜೋ ಇಚ್ಛಇ ಣಿಸ್ಸರಿಹುಂ | ೨೭೨ | ಣಮಿಊಣ ಜಿಣವರಿಂದೇ | ೧೪೦ |
| ಜೋ ಕಮ್ಮಜಾದಮಇಓ | ೨೯೨ | ಣಮಿಊಣ ಯ ತಂ ದೇವಂ | ೨೫೮ |
| ಜೋ ಕೋಡಿಏ ಣ ಜಿಪ್ಪಇ | ೨೭೦ | ಣ ಮುಯಇ ಪಯಡಿ ಅಭವ್ವೋ | ೨೩೫ |
| ಜೋ ಕೋ ವಿ ಧಮ್ಮಸೀಲೋ | ೧೭ | ಣರಏಸು ವೇಯಣಾಓ | ೩೬೦ |
| ಜೋ ಜಾಣಇ ಜೋಯಣಸಯಂ | ೨೬೯ | ಣವಣೋಕಸಾಯವಗ್ಗಂ | ೨೦೧ |
| ಜೋ ಜೀವೋ ಭಾವಂತೋ | ೧೮೧ | ಣವವಿಹ ಬಂಭಂ ಪಯಡಹಿ | ೨೦೫ |
| ಜೋ ಜೋಡೇದಿ ವಿವಾಹಂ | ೩೩೫ | ಣವಿಏಹಿಂ ಜಂ ಣವಿಜ್ಜಇ | ೩೨೨ |
| ಜೋ ದೇಹೇ ಣಿರವೇಕ್ಖೋ | ೨೬೪ | ಣವಿ ದೇಹೋ ವಂದಿಜ್ಜಇ | ೨೯ |
| ಜೋ ಪಾವಮೋಹಿದಮದೀ | ೩೩೧ | ಣ ವಿ ಸಿಜ್ಝದಿ ವತ್ಥಧರೋ | ೬೦ |
| ಜೋ ಪುಣ ಪರದವ್ವರಓ | ೨೬೬ | ಣಾಣಗುಣೇಹಿಂ ವಿಹೀಣಾ | ೯೨ |
| ಜೋ ರಯಣತ್ತಯಜುತ್ತೋ | ೨೮೪ | ಣಾಣಮಯ ವಿಮಲಸೀಯಲ | ೨೨೭ |
| ಜೋ ಸುತ್ತೋ ವವಹಾರೇ | ೨೭೬ | ಣಾಣಮಯಂ ಅಪ್ಪಾಣಂ | ೨೫೭ |
| ಜೋ ಸಂಜಮೇಸು ಸಹಿಓ | ೫೨ | ಣಾಣಮ್ಮಿ ದಂಸಣಮ್ಮಿ ಯ | ೩೩ |
| ಜಂ ಕಿಂಚಿ ಕಯಂ ದೋಸಂ | ೨೧೦ | ಣಾಣಸ್ಸ ಣತ್ಥಿ ದೋಸೋ | ೩೫೨ |
| ಜಂ ಚರದಿ ಸುದ್ಧಂ ಚರಣಂ | ೧೦೧ | ಣಾಣಾವರಣಾದೀಹಿಂ | ೨೨೦ |
| ಜಂ ಜಾಣಇ ತಂ ಣಾಣಂ | ೬೫ | ಣಾಣೇ ಸಿವಪರಮೇಟ್ಠೀ | ೨೪೪ |
| ಜಂ ಜಾಣಇ ತಂ ಣಾಣ | ೨೭೯ | | |

| ಗಾಥೆ | ಪುಟ |
|---|---|
| ಣಾಣೇಣ ದಂಸಣೇಣ ಯ | ೩೨ |
| ಣಾಣೇಣ ದಂಸಣೇಣ ಯ | ೩೫೨ |
| ಣಾಣಂ ಚರಿತ್ತಸುದ್ಧಂ | ೩೪೯ |
| ಣಾಣಂ ಚರಿತ್ತಹೀಣ | ೨೯೩ |
| ಣಾಣಂ ಚರಿತ್ತಹೀಣಂ | ೩೪೯ |
| ಣಾಣಂ ಝಾಣಾಂ ಜೋಗೋ | ೩೬೯ |
| ಣಾಣಂ ಣರಸ್ಸ ಸಾರೋ | ೩೨ |
| ಣಾಣಂ ಣಾಊಣ ಣರಾ | ೩೫೦ |
| ಣಾಣಂ ದಂಸಣ ಸಮ್ಮಂ | ೬೪ |
| ಣಾಣಂ ಪುರಿಸಸ್ಸ ಹವದಿ | ೧೦೮ |
| ಣಾಮೇ ಠವಣೇ ಹಿ ಯ ಸಂದವ್ವೇ | ೧೧೨ |
| ಣಿಗ್ಗಂಥ ಮೋಹಮುಕ್ಕಾ | ೩೦೭ |
| ಣಿಗ್ಗಂಥಾ ಣಿಸ್ಸಂಗಾ | ೧೨೭ |
| ಣಿಚ್ಚೇಲ ಪಾಣಿಪತ್ತಂ | ೫೧ |
| ಣಿಚ್ಛಯಣಯಸ್ಸ ಏವಂ | ೩೦೯ |
| ಣಿಣ್ಣೇಹಾ ಣಿಲ್ಲೋಹಾ | ೧೨೮ |
| ಣಿಂದಾಏ ಯ ಪಸಂಸಾಏ | ೩೦೨ |
| ಣಿಯದೇಹಸರಿಚ್ಛಂ | ೨೬೨ |
| ಣಿಯಸತ್ತೀ ಏ ಮಹಾಜಸ | ೨೧೦ |
| ಣಿರುವಮಮಚಲಮಖೋವಾ | ೧೦೨ |
| ಣಿಸ್ಸಂಕಿಯ ಣಿಕ್ಕಂಖಿಯ | ೬೯ |
| ಣಿದ್ದಡ್ಢಅಟ್ಠಕಮ್ಮಾ | ೩೬೭ |
| ತ | |
| ತಚ್ಚರುಈ ಸಮ್ಮತ್ತಂ | ೨೮೦ |
| ತವರಹಿಯಂ ಜ ಣಾಣಂ | ೨೯೪ |
| ತವವಯಗುಣೇಹಿಂ ಸುದ್ಧೋ | ೧೦೫ |
| ತವವಯಗುಣೇಹಿಂ ಸುದ್ಧಾ | ೧೩೩ |
| ತವ್ವಿವರಿಓ ಬಂಧಇ | ೨೧೯ |
| ತಸ್ಸ ಯ ಕರಹ ಪಣಾಮಂ | ೧೦೫ |
| ತಾಮ ಣ ಣಜ್ಜಇ ಅಪ್ಪಾ | ೨೯೯ |
| ತಾವ ಣ ಜಾಣದಿ ಣಾಣಂ | ೩೪೮ |
| ತಿತ್ಥಯರಗಣಹರಾಇಂ | ೨೨೯ |
| ತಿತ್ಥಯರಭಾಸಿಯತ್ಥಂ | ೨೦೧ |
| ತಿಪಯಾರೋ ಸೋ ಅಪ್ಪಾ | ೨೫೯ |
| ತಿಲತುಸಮತ್ತಣಿಮಿತ್ತಸಮ | ೧೩೧ |
| ತಿಹಿತಿಣ್ಣಿ ಧರವಿ ಣಿಚ್ಚಂ | ೨೮೪ |
| ತಿಹುಯಣಸಲಿಲಂ ಸಯಲಂ | ೧೫೪ |
| ತುಸಮಾಸಂ ಘೋಸಂತೋ | ೧೭೬ |
| ತುಸ ಧಮ್ಮಂತ ಬಲೇಣ ಯ | ೩೬೦ |
| ತುಹ ಮರಣೇ ದುಕ್ಖೇಣ | ೧೫೨ |
| ತೇ ಧಣ್ಣಾ ತಾಣ ಣಮೋ | ೨೨೯ |
| ತೇ ಧಣ್ಣಾ ಸುಕಯತ್ಥಾ | ೩೧೩ |
| ತೇ ಧೀರವೀರ ಪುರಿಸಾ | ೨೪೮ |
| ತೇ ಮೇ ತಿಹುವಣಮಹಿಯಾ | ೨೫೨ |
| ತೇಯಾಲಾ ತಿಣ್ಣಿ ಸಯಾ | ೧೬೪ |
| ತೇರಹಮೇ ಗುಣಠಾಣೇ | ೧೧೫ |
| ತೇ ರೋಯಾ ವಿ ಯ ಸಯಲಾ | ೧೬೫ |
| ತೇ ಚ್ಚಿಯ ಭಣಾಮಿ ಹಂ ಜೇ | ೨೪೭ |
| ತಂ ಚೇವ ಗುಣ ವಿಸುದ್ಧಂ | ೭೦ |
| ಥ | |
| ಥೂಲೇ ತಸಕಾಯವಹೇ | ೮೧ |
| ದ | |
| ದಢಸಂಜಯಮುದ್ದಾಏ | ೧೦೬ |
| ದವ್ವೇಣ ಸಯಲ ಣಗ್ಗಾ | ೧೮೫ |
| ದಸ ದಸ ದೋ ಸುಪರೀಸಹ | ೨೦೩ |
| ದಸ ಪಾಣಾ ಪಜ್ಜತ್ತೀ | ೧೧೯ |
| ದಸವಿಹಪಾಣಾಹಾರೋ | ೨೩೨ |
| ದಿಕ್ಖಾಕಾಲಾಈಯಂ | ೨೧೩ |

## ಗಾಥೆಗಳ ವರ್ಣಾನುಕ್ರಮ ಸೂಚಿ


| ಗಾಥೆ | ಪುಟ |
|---|---|
| ದಿಯಸಂಗಟ್ಠಿಯಮಸಣಂ | ೧೬೬ |
| ದಿಸಿವಿದಿಸಿಮಾಣಪಢಮಂ | ೮೧ |
| ದುಇಯಂ ಚ ಉತ್ತ ಲಿಂಗಂ | ೫೯ |
| ದುಕ್ಖೇ ಣಜ್ಜ ಇ ಅಪ್ಪಾ | ೨೯೮ |
| ದುಕ್ಖೇಣಜ್ಜದಿ ಣಾಣಂ | ೩೪೭ |
| ದುಜ್ಜಣವಯಣ ಚಡಕ್ಕಂ | ೨೧೧ |
| ದುಟ್ಠಟ್ಠಕಮ್ಮರಹಿಯಂ | ೨೬೮ |
| ದುವಿಹಂ ಪಿ ಗಂಥಚಾಯಂ | ೨೧ |
| ದುವಿಹಂ ಸಂಜಮಚರಣಂ | ೭೮ |
| ದೇವ ಗುರುಮ್ಮಿ ಯ ಭತ್ತೋ | ೨೯೦ |
| ದೇವಗುರೂಣಂ ಭತ್ತಾ | ೩೦೮ |
| ದೇವಾಣಗುಣಾವಿಹೂಈ | ೧೫೦ |
| ದೇಹಾದಿಚತ್ತಸಂಗೋ | ೧೬೮ |
| ದೇಹಾದಿಸಂಗರಹಿಓ | ೧೭೮ |
| ದಂಡಯಣಯರಂ ಸಯಲಂ | ೧೭೩ |
| ದಂಸಣಅಣಂತಣಾಣಂ | ೧೦೨ |
| ದಂಸಣಅಣಂತಣಾಣೇ | ೧೧೩ |
| ದಂಸಣಣಾಣಚರಿತ್ತೇ | ೨೭ |
| ದಂಸಣಣಾಣಚರಿತ್ತೇ | ೩೩೪ |
| ದಂಸಣಣಾಣಚರಿತ್ತೇ | ೩೩೬ |
| ದಂಸಣಣಾಣಚರಿತ್ತೇ | ೩೪೨ |
| ದಂಸಣಣಾಣಚರಿತ್ತಂ | ೯೦ |
| ದಂಸಣಣಾಣಾವರಣಂ | ೨೪೩ |
| ದಂಸಣಭಟ್ಟಾಭಟ್ಟಾ | ೧೩ |
| ದಂಸಣಮೂಲೋ ಧಮ್ಮೋ | ೩ |
| ದಂಸಣವಯಸಾಮಾಇಯ | ೭೯ |
| ದಂಸಣಸುದ್ಧೋ ಸುದ್ಧೋ | ೨೮೦ |
| ದಂಸೇಇ ಮೋಕ್ಖಮಗ್ಗಂ | ೧೦೩ |

| ಗಾಥೆ | ಪುಟ |
|---|---|
| ಧ | |
| ಧಣಧಣ್ಣವತ್ಥದಾಣಂ | ೧೨೫ |
| ಧಣ್ಣಾತೇ ಭಯವಂತಾ | ೨೪೯ |
| ಧಮ್ಮಮ್ಮಿ ಣಿಪ್ಪವಾಸೋ | ೧೮೮ |
| ಧಮ್ಮೇಣ ಹೋಇ ಲಿಂಗಂ | ೩೩೧ |
| ಧಮ್ಮೋ ದಯಾವಿಸುದ್ಧೋ | ೧೧೦ |
| ಧಾವದಿ ಪಿಂಡ ಣಿಮಿತ್ತಂ | ೩೩೮ |
| ಧುವಸಿದ್ಧೀ ತಿತ್ಥಯರೋ | ೨೯೫ |
| ಪ | |
| ಪಡಿದೇಸಸಮಯಪುಗ್ಗಲ | ೧೬೩ |
| ಪಢಿಏಣ ವಿ ಕಿಂ ಕೀರಇ | ೧೮೫ |
| ಪಯಡಹಿಂ ಜಿಣವರಲಿಂಗಂ | ೧೮೭ |
| ಪಯಲಿಯಮಾಣಕಸಾಓ | ೧೯೧ |
| ಪರದವ್ವರಓ ಬಜ್ಝದಿ | ೨೬೫ |
| ಪರದವ್ವಾದೋ ದುಗ್ಗಇಂ | ೨೬೬ |
| ಪರಮಪ್ಪಯ ಝಾಯಂತೋ | ೨೮೭ |
| ಪರಮಾಣುಪಮಾಣಂ ವಾ | ೩೦೦ |
| ಪರಿಣಾಮಮ್ಮಿ ಅಸುದ್ಧೇ | ೧೪೪ |
| ಪವ್ವಜ್ಜ ಸಂಗಚಾಏ | ೭೫ |
| ಪವ್ವಜ್ಜಹೀಣಗಹಿಣಂ | ೩೪೧ |
| ಪಸುಮಹಿಲಸಂಢಸಂಗಂ | ೧೩೨ |
| ಪಾಊಣಣಾಣ ಸಲಿಲಂ | ೯೧ |
| ಪೀಊಣ ಣಾಣಸಲಿಲಂ | ೨೦೨ |
| ಪಾಓಪಹದಂಭಾವೋ | ೩೩೪ |
| ಪಾಣಿವಹೇಹಿ ಮಹಾಜಸ | ೨೩೩ |
| ಪಾವಂ ಖವಇ ಅಸೇಸಂ | ೨೧೧ |
| ಪಾವಂತಿ ಭಾವಸವಣಾ | ೨೦೬ |
| ಪಾವಂ ಹವಇ ಅಸೇಸಂ | ೨೧೮ |
| ಪಾಸತ್ಥಭಾವಣಾಓ | ೧೪೯ |
| ಪಾಸಂಡೀ ತಿಣ್ಣಿ ಸಯಾ | ೨೩೭ |

## ಗಾಥೆಗಳ ವರ್ಣಾನುಕ್ರಮ ಸೂಚಿ


| ಗಾಥೆ | ಪುಟ |
|---|---|
| ಪಿತ್ತಂತಮುತ್ತಫೇಪಸ | ೧೬೫ |
| ಪೀಓಸಿ ಥಣಚ್ಛೀರಂ | ೧೫೨ |
| ಪುಂಛಲಿಘರಿ ಜೋ ಭುಂಜಇ | ೩೪೨ |
| ಪುರಿಸಾಯರೋ ಅಪ್ಪಾ | ೩೧೦ |
| ಪುರಿಸೇಣ ವಿ ಸಹಿಯಾಏ | ೩೬೨ |
| ಪುರಿಸೋವಿ ಜೋ ಸಸುತ್ತೋ | ೪೪ |
| ಪೂಯಾದಿಸು ವಯಸಹಿಯ | ೧೯೫ |
| ಪಂಚಮಹವ್ವಯಜುತ್ತಾ | ೧೨೪ |
| ಪಂಚಮಹವ್ವಯ ಜುತ್ತೋ | ೫೮ |
| ಪಂಚಮಹವ್ವಯಜುತ್ತೋ | ೨೭೭ |
| ಪಂಚವಿಹಚೇಲಚಾಯಂ | ೧೯೪ |
| ಪಂಚ ವಿ ಇಂದಿಯಪಾಣಾ | ೧೧೮ |
| ಪಂಚಸು ಮಹವ್ವದೇಸು ಯ | ೩೦೪ |
| ಪಂಚೇಂದಿಯಸವರಣಂ | ೮೩ |
| ಪಂಚೇವ ಣುವ್ವಯಾಇಂ | ೭೯ |
| ಬ | |
| ಬಲಸೋಕ್ಖಣಾಣದಂಸಣ | ೨೪೩ |
| ಬಹಿರತ್ಥೇಫುರಿಯಮಣೋ | ೨೬೧ |
| ಬಹುಸತ್ಥ ಅತ್ಥಜಾಣೇ | ೯೫ |
| ಬಾರಸವಿಹತವಯರಣಂ | ೧೯೩ |
| ಬಾರಸ ಅಂಗವಿಯಾಣಂ | ೧೩೮ |
| ಬಾರಸವಿಹತವಜುತ್ತಾ | ೩೫ |
| ಬಾಲಗ್ಗಕೋಡಿಮೇತ್ತಂ | ೫೫ |
| ಬಾಹಿರಸಂಗಚ್ಚಾಓ | ೨೦೦ |
| ಬಾಹಿರಲಿಂಗೇಣ ಜುದೋ | ೨೯೬ |
| ಬಾಹಿರಸಯಣತ್ತಾವಣ | ೨೧೫ |
| ಬಾಹಿರಸಂಗವಿಮುಕ್ಕೋ | ೩೧೮ |
| ಬುದ್ಧಂ ಜಂ ಬೋಹಂತೋ | ೯೯ |
| ಬಂಧೋ ಣಿರಓ ಸಂತೋ | ೩೩೯ |

| ಗಾಥೆ | ಪುಟ |
|---|---|
| ಭ | |
| ಭರಹೇ ದುಸ್ಸಮಕಾಲೇ | ೩೦೪ |
| ಭವ್ವಜಣಬೋಹಣತ್ಥಂ | ೮೯ |
| ಭವಸಾಯರೇ ಅಣಂತೇ | ೧೫೩ |
| ಭಾವರಹಿಏಣ ಸಪುರಿಸ | ೧೪೫ |
| ಭಾವರಹಿಓ ಣ ಸಿಜ್ಝಇ | ೧೪೩ |
| ಭಾವವಿಮುತ್ತೋ ಮುತ್ತೋ | ೧೬೮ |
| ಭಾವವಿಸುದ್ಧಿಣಿಮಿತ್ತಂ | ೧೪೩ |
| ಭಾವಸಮಣೋ ಯ ಧೀರೋ | ೧೭೫ |
| ಭಾವಸವಣೋ ವಿ ಪಾವಇ | ೨೨೮ |
| ಭಾವಸಹಿದೋ ಯ ಮುಣಿಣೋ | ೨೦೬ |
| ಭಾವಹಿ ಅಣುವೇಕ್ಖಾಓ | ೨೦೪ |
| ಭಾವಹಿ ಪಢಮಂ ತಚ್ಚಂ | ೨೧೫ |
| ಭಾವಹಿ ಪಂಚಪಯಾರಂ | ೧೮೪ |
| ಭಾವೇಣ ಹೋಇ ಣಗ್ಗೋ | ೧೭೭ |
| ಭಾವೇಣ ಹೋಇ ಣಗ್ಗೋ | ೧೮೯ |
| ಭಾವೇಣ ಹೋಇ ಲಿಂಗೀ | ೧೭೨ |
| ಭಾವೇಹ ಭಾವಸುದ್ಧಂ | ೯೩ |
| ಭಾವೇಹ ಭಾವಸುದ್ಧಂ | ೧೮೧ |
| ಭಾವೋ ವಿ ದಿವ್ವಸಿವಸುಕ್ಖ | ೧೯೦ |
| ಭಾವೋ ಹಿ ಪಢಮಲಿಂಗ | ೧೪೧ |
| ಭಾವ ತಿವಿಹಪಯಾರಂ | ೧೯೧ |
| ಭೀಸಣಣರಯಗಈಏ | ೧೪೫ |
| ಭಂಜಸು ಇಂದಿಯಸೇಣಂ | ೨೦೦ |
| ಮ | |
| ಮಇಧಣುಹಂ ಜಸ್ಸ ಥಿರಂ | ೧೦೮ |
| ಮಚ್ಛೋ ವಿ ಸಾಲಿಸಿತ್ಥೋ | ೧೯೯ |
| ಮಣವಯಣಕಾಯದವ್ವಾ | ೯೭ |
| ಮಣುಯಭವೇ ಪಂಚಿಂದಿಯ | ೧೧೮ |

## ಗಾಥೆಗಳ ವರ್ಣಾನುಕ್ರಮ ಸೂಚಿ


| ಗಾಥೆ | ಪುಟ | ಗಾಥೆ | ಪುಟ |
|---|---|---|---|
| ಮಮತ್তಿಂ ಪರಿವಜ್ಜಾಮಿ | ೧೭೯ | ವ | |
| ಮಯಮಾಯಕೋಹರಹಿಯೋ | ೨೮೫ | ವಚ್ಛಲ್ಲಂ ವಿಣಏಣ | ೭೨ |
| ಮಯ ರಾಯ ದೋಸ ಮೋಹೋ | ೯೮ | ವಟ್ಟೇಸು ಯ ಖಂಡೇಸು ಯ | ೩೬೧ |
| ಮಯರಾಯ ದೋಸರಹಿಯೋ | ೧೨೦ | ವಂದಮಿ ತವಸಾವಣ್ಣಾ | ೩೦ |
| ಮಲರಹಿಓ ಕಲಚತ್ತೋ | ೨೬೦ | ವಯಗುತ್ತೀ ಮಣಗುತ್ತೀ | ೮೫ |
| ಮಹಿಲಾಲೋಯಣಪುವ್ವರ | ೮೭ | ವಯಸಮ್ಮತ್ತವಿಸುದ್ಧೇ | ೧೧೦ |
| ಮಹುಪಿಂಗೋ ಣಾಮ ಮುಣೀ | ೧೬೯ | ವರ ವಯತವೇಹಿ ಸಗ್ಗೋ | ೨೭೧ |
| ಮಾಯಾವೇಲ್ಲಿ ಅಸೇಸಾ | ೨೪೯ | ವಾಯರಣಛಂದವಇಸೇ | ೩೫೬ |
| ಮಿಚ್ಛತ್ತ ಛಣ್ಣದಿಟ್ಠೀ | ೨೩೬ | ವಾರಿ ಏಕ್ಕಮ್ಮಿ ಯ ಜಮ್ಮೇ | ೩೫೯ |
| ಮಿಚ್ಛತ್ತ ತಹ ಕಸಾಯಾ | ೨೧೮ | ವಿಣಯಂ ಪಂಚಪಯಾರಂ | ೨೦೯ |
| ಮಿಚ್ಛತ್ತಂ ಅಣ್ಣಾಣಂ | ೨೭೪ | ವಿಸಏಸು ಮೋಹಿದಾಣಂ | ೩೫೩ |
| ಮಿಚ್ಛಾದಿಟ್ಠೀ ಜೋ ಸೋ | ೩೧೭ | ವಿಹರದಿ ಜಾವ ಜಿಣಿಂದೋ | ೩೪ |
| ಮಿಚ್ಛಾಣಾಣೇಸುರಓ | ೨೬೩ | ವಿವರೀಯಮೂಢಭಾವಾ | ೧೩೦ |
| ಮಿಚ್ಛಾದಂಸಣಮಗ್ಗೇ | ೭೫ | ವಿಸವೇಯಣರತ್ತಕ್ಖಯ | ೧೫೫ |
| ಮೂಲಗುಣಂ ಛಿತ್ತೂಣ ಯ | ೩೧೮ | ವಿಯಲಿಂದಏ ಅಸೀದಿ | ೧೫೭ |
| ಮೋಹಮಯಗಾರವೇಹಿಂ | ೨೫೦ | ವಿಸಯವಿರತ್ತೋ ಸಮಣೋ | ೧೯೨ |
| ಮಂಸಟ್ಠಿಸುಕ್ಕಸೋಣಿಯ | ೧೬೭ | ವಿಸಯಕಸಾಏಹಿ ಜುದೋ | ೨೮೬ |
| ರ | | ವೀರಂ ವಿಸಾಲಣಯಣಂ | ೩೪೫ |
| ರಯಣತ್ತಯೇ ಅಲದ್ಧೇ | ೧೫೮ | ವೇರಗ್ಗಪರೋ ಸಾಹೂ | ೩೨೧ |
| ರಯಣತ್ತಯ ಮಾರಾಹಂ | ೨೭೮ | ಸ | |
| ರಯಣತ್ತಯಂ ಪಿ ಜೋಈ | ೨೭೯ | ಸಚ್ಚಿತ್ತ ಭತ್ತ ಪಾಣಂ | ೨೦೮ |
| ರಾಗಂ ಕರೇದಿ ಣಿಚ್ಚಂ | ೩೪೦ | ಸತ್ತಸು ಣರಯಾವಾಸೇ | ೧೪೬ |
| ರೂವಸಿರಿಗವ್ವಿದಾಣಂ | ೩೫೫ | ಸತ್ತೂ ಮತ್ತೇ ಯ ಸಮಾ | ೧೨೬ |
| ರೂವತ್ಥಂ ಸುದ್ಧತ್ಥ | ೧೩೪ | ಸದ್ದವ್ವರಓ ಸವಣೋ | ೨೬೫ |
| ಲ | | ಸದ್ದವಿಯಾರೋ ಹೂಓ | ೧೩೭ |
| ಲದ್ಧೂಣ ಯ ಮಣುಯತ್ತಂ | ೩೪ | ಸದ್ದಹದಿ ಯ ಪತ್ತೇದಿ ಯ | ೧೯೬ |
| ಲಾವಣ್ಣಸೀಲಕುಸಲೋ | ೩೬೮ | ಸಪರಜ್ಝವಸಾಏಣಂ | ೨೬೩ |
| ಲಿಂಗಂ ಇತ್ಥೀಣ ಹವದಿ | ೫೯ | ಸಪರಾ ಜಂಗಮ ದೇಹಾ | ೧೦೦ |
| ಲಿಂಗಮ್ಮಿ ಯ ಇತ್ಥೀಣಂ | ೬೦ | ಸಪರಾವೇಕ್ಖಂ ಲಿಂಗಂ | ೩೧೫ |
| | | ಸಮ್ಮ ಗುಣಮಿಚ್ಛದೋಸೋ | ೩೧೭ |

| ಗಾಥೆ | ಪುಟ |
| --- | --- |
| ಸಮ್ಮತ್ತಚರಣಭಟ್ಠಾ | ೭೧ |
| ಸಮ್ಮತ್ತಚರಣ ಸುದ್ಧಾ | ೭೧ |
| ಸಮ್ಮತ್ತಣಾಣದಂಸಣ | ೧೫ |
| ಸಮ್ಮತ್ತಣಾಣದಂಸಣ | ೩೬೭ |
| ಸಮ್ಮತ್ತಣಾಣರಹಿಓ | ೩೦೩ |
| ಸಮ್ಮತ್ತರಯಣ ಭಟ್ಠಾ | ೧೪ |
| ಸಮ್ಮತ್ತವಿರಹಿಯಾ ಣಂ | ೧೪ |
| ಸಮ್ಮತ್ತಸಲಿಲಪವಹೋ | ೧೫ |
| ಸಮ್ಮತ್ತಾದೋ ಣಾಣಂ | ೨೧ |
| ಸಮ್ಮತ್ತ ಜೋ ಝಾಯಇ | ೩೧೨ |
| ಸಮ್ಮತ್ತಂ ಸಣ್ಣಾಣಂ | ೩೨೩ |
| ಸಮ್ಮದ್ದಂಸಣ ಪಸ್ಸದಿ | ೭೬ |
| ಸಮ್ಮದ್ದಂಸಣಿ ಪಸ್ಸದಿ | ೧೨೧ |
| ಸಮ್ಮಾಇಟ್ಠೀ ಸಾವಯ | ೩೧೬ |
| ಸಮ್ಮೂಹದಿ ರಕ್ಖೇದಿ ಯ | ೩೩೩ |
| ಸಯಲಜಿಣಬೋಹಣತ್ಥಂ | ೯೫ |
| ಸವ್ವಗುಣಖೀಯಕಮ್ಮಾ | ೩೭೦ |
| ಸವ್ವಣ್ಹು ಸವ್ವದಂಸೀ | ೬೪ |
| ಸವ್ವವಿರಓ ವಿ ಭಾವಹಿ | ೨೦೪ |
| ಸವಸಾ ಸತ್ತಂ ತಿತ್ಥಂ | ೧೨೩ |
| ಸವ್ವಾಸವಣಿರೋಹೇಣ | ೨೭೫ |
| ಸವ್ವೇ ಕಸಾಯ ಮೋತ್ತಂ | ೨೭೩ |
| ಸವ್ವೇ ವಿ ಯ ಪರಿಹೀಣಾ | ೩೫೭ |
| ಸಹಜುಪ್ಪಣ್ಣಂ ರೂವಂ | ೨೭ |
| ಸಾಮಾಇಯಂ ಚ ಪಢಮಂ | ೮೨ |
| ಸಾಹಂತಿ ಜಂ ಮಹಲ್ಲಾ | ೮೫ |
| ಸಿದ್ಧೋ ಸುದ್ಧೋ ಆದಾ | ೨೭೮ |
| ಸಿದ್ಧಂ ಜಸ್ಸಸದತ್ಥಂ | ೯೮ |
| ಸಿವಮಜರಾಮರಲಿಂಗಂ | ೨೫೨ |
| ಸಿಸುಕಾಲೇ ಯ ಅಯಾಣೇ | ೧೬೬ |
| ಸೀಲಗುಣಮಂಡಿದಾಣಂ | ೩೫೬ |
| ಸೀಲಸ್ಸಯ ಣಾಣಸ್ಸಯ | ೩೪೬ |
| ಸೀಲಸಹಸ್ಸಟ್ಠಾರಸ | ೨೨೦ |
| ಸೀಲಂ ತವೋ ವಿಸುದ್ಧಂ | ೩೫೮ |
| ಸೀಲಂ ರಕ್ಖಂತಾಣಂ | ೩೫೩ |
| ಸುಣ್ಣಹರೇ ತರುಹಿಟ್ಠೇ | ೧೨೩ |
| ಸುದ್ಧಂ ಸುದ್ಧಸಹಾವಂ | ೧೯೧ |
| ಸುಣಹಾಣ ಗದ್ದಹಾಣ ಯ | ೩೬೪ |
| ಸುಣ್ಣಾಯಾರ ಣಿವಾಸೋ | ೮೭ |
| ಸುತ್ತಂ ಹಿ ಜಾಣಮಾಣೋ | ೪೩ |
| ಸುತ್ತಮ್ಮಿ ಜಂ ಸುದಿಟ್ಠಂ | ೩೮ |
| ಸುರಣಿಲಯೇಸುಸುರಚ್ಛರ | ೧೪೮ |
| ಸುಹಜೋಏಣ ಸುಭಾವಂ | ೨೯೧ |
| ಸುಹೇಣ ಭಾವಿದಂ ಣಾಣಂ | ೨೯೬ |
| ಸೂತತ್ಥಪಯವಿಣಟ್ಠೋ | ೪೯ |
| ಸೂತತ್ಥಂ ಜಿಣಭಣಿಯಂ | ೪೪ |
| ಸೇಯಾಸೇಯವಿದಣ್ಹೂ | ೨೨ |
| ಸೇವಹಿ ಚಉವಿಹಲಿಂಗಂ | ೨೧೩ |
| ಸೋ ಣತ್ಥಿ ತಪ್ಪಏಸೋ | ೧೭೨ |
| ಸೋ ಣತ್ಥಿ ದವ್ವಸವಣೋ | ೧೬೨ |
| ಸೋ ದೇವೋ ಜೋ ಅತ್ಥಂ | ೧೦೯ |
| ಸಂಖಿಜ್ಜಮಸಂಖಿಜ್ಜಗುಣಂ | ೭೮ |
| ಸಗ್ಗಂ ತವೇಣ ಸವ್ವೋ | ೨೭೦ |
| ಸಂಜಮ ಸಂಜುತ್ತಸ್ಸಯ | ೧೦೭ |
| ಹ | |
| ಹರಿಹರತುಲ್ಲೋ ವಿ ಣರೋ | ೫೦ |
| ಹಿಮಜಲಣಸಲಿಲಗುರುಯರ | ೧೫೫ |
| ಹಿಂಸಾರಹಿಏ ಧಮ್ಮೇ | ೩೧೩ |
| ಹಿಂಸಾವಿರಇ ಅಹಿಂಸಾ | ೮೪ |
| ಹೋಊಣ ದಿಢಚರಿತ್ತೋ | ೨೮೮ |